ಮೈಸೂರು ವಿಧಾನಸಭೆಯ ನಡೆವಳಿಕೆಗಳು

MYSORE LEGISLATIVE ASSEMBLY DEBATES

ಅಧಿಕೃತ ವರದಿ

OFFICIAL REPORT

ನಾಲ್ಕನೆಯ ವಿಧಾನಸಭೆಯ ಐದನೆಯ ಅಧಿವೇಶನ

FIFTH SESSION OF THE FOURTH LEGISLATIVE ASSEMBLY

೫ನೇ ಬುಧವಾರ, ಮಾರ್ಚ್ ೧೯೬೯ [ಫಾಲ್ಗುಣ ೧೪, ೧೮೯೦ (ಶಕ)]

WEDNESDAY, 5TH MARCH 1969 [PHALGUNA 14, 1890 (SAKA)]

ಸಂಪುಟ ೧೭—ಕ್ರಮಾಂಕ ೧

Vol. XVII—No. 1

(B)

ಮೈಸೂರು ವಿಧಾನಮಂಡಲದ ಕಾರ್ಯಾಲಯ, ಬೆಂಗಳೂರು

Mysore Legislature Secretariat, Bangalore

ಬೆಲೆ: ೨೫ ಪೈಸೆ

Price: 25 Paise

Karnataka State Archives
(Departmental Library)
ಕರ್ನಾಟಕ ರಾಜ್ಯ ಪತ್ರಾಗಾರ
(ಇಲಾಖಾ ಗ್ರಂಥಾಲಯ)
ಪ್ರಾಪ್ತಿ ಕ್ರಮಾಂಕ Accession No......
ದಿನಾಂಕ Date......

ಮೈಸೂರು ವಿಧಾನಸಭೆಯ ನಡವಳಿಕೆಗಳು
MYSORE LEGISLATIVE ASSEMBLY DEBATES

ಅಧಿಕೃತ ವರದಿ
OFFICIAL REPORT

ನಾಲ್ಕನೆಯ ವಿಧಾನಸಭೆಯ ಐದನೆಯ ಅಧಿವೇಶನ
FIFTH SESSION OF THE FOURTH LEGISLATIVE ASSEMBLY

೬ನೇ ಗುರುವಾರ, ಮಾರ್ಚ್ ೧೯೬೯ [ಫಾಲ್ಗುಣ ೧೫, ೧೮೯೦ (ಶಕ)]
THURSDAY, 6TH MARCH 1969 [PHALGUNA 15, 1890 SAKA)]

ಸಂಪುಟ ೧೭—ಕ್ರಮಾಂಕ ೨
Vol. XVII—No. 2

ಮೈಸೂರು ವಿಧಾನಮಂಡಲದ ಕಾರ್ಯಾಲಯ, ಬೆಂಗಳೂರು
Mysore Legislature Secretariat, Bangalore

ಬೆಲೆ : ೨೫ ಪೈಸೆ
Price : 25 Paise

Karnataka State Archives
(Departmental Library)
ಕರ್ನಾಟಕ ರಾಜ್ಯ ಪತ್ರಾಗಾರ
(ಇಲಾಖಾ ಗ್ರಂಥಾಲಯ)
ಪ್ರವೇಶ ಕ್ರಮಾಂಕ Accession No.............
(B) 4862

ಮೈಸೂರು ವಿಧಾನಸಭೆಯ ನಡವಳಿಕೆಗಳು

MYSORE LEGISLATIVE ASSEMBLY DEBATES

ಅಧಿಕೃತ ವರದಿ

OFFICIAL REPORT

ನಾಲ್ಕನೆಯ ವಿಧಾನಸಭೆಯ ಐದನೆಯ ಅಧಿವೇಶನ

FIFTH SESSION OF THE FOURTH LEGISLATIVE ASSEMBLY

ಷನೇ ಶುಕ್ರವಾರ, ಮಾರ್ಚ್ ೧೯೬೯ [ಫಾಲ್ಗುಣ ೧೬, ೧೮೯೦ (ಶಕ)]

FRIDAY, 7TH MARCH 1969 [PHALGUNA 16, 1890 (SAKA)]

ಸಂಪುಟ ೧೭—ಕ್ರಮಾಂಕ ೩

Vol. XVII—No. 3

ಮೈಸೂರು ವಿಧಾನಮಂಡಲದ ಕಾರ್ಯಾಲಯ, ಬೆಂಗಳೂರು

Mysore Legislature Secretariat, Bangalore

ಬೆಲೆ : ೨೫ ಪೈಸೆ

Price : 25 Paise

ಮೈಸೂರು ವಿಧಾನಸಭೆಯ ನಡೆವಳಿಕೆಗಳು

MYSORE LEGISLATIVE ASSEMBLY DEBATES

ಅಧಿಕೃತ ವರದಿ

OFFICIAL REPORT

ನಾಲ್ಕನೆಯ ವಿಧಾನಸಭೆಯ ಐದನೆಯ ಅಧಿವೇಶನ

FIFTH SESSION OF THE FOURTH LEGISLATIVE ASSEMBLY

ಂ೧ನೇ ಸೋಮವಾರ, ಮಾರ್ಚಿ ೧೯೬೯ [ಫಾಲ್ಗುಣ ೧೯, ೧೮೯೦ (ಶಕ)]

MONDAY, 10TH MARCH 1969 [PHALGUNA 19, 1890 (SAKA)]

ಸಂಪುಟ ೧೭—ಕ್ರಮಾಂಕ ೪

Vol. XVII—No. 4

ಮೈಸೂರು ವಿಧಾನಮಂಡಲದ ಕಾರ್ಯಾಲಯ, ಬೆಂಗಳೂರು

Mysore Legislature Secretariat, Bangalore

ಬೆಲೆ : ೨೫ ಪೈಸೆ

Price : 25 Paise

CONTENTS

PAGES

1 (i) Starred Questions and Answers ... 1—34

(ii) Short Notice Questions and Answers ... 34—40

(iii) Question for Answer on the day (but not taken up) ... 40

2 Complaint *re*: alleged scant respect by Ministers for accepted invitations ... ... 40—46

3 Calling Attention to a matter of urgent Public Importance—

(i) *re*: Lockout in the K. R. Mills, Ltd., Mysore ... 47—48

(ii) *re*: Assault on two College boys in Coondapur ... 48

4 Non-Official Motion to recommend the Government to earmark Rs. 30 Crores during 1969-70 for the Krishna and the Cauvery Basins ... 49—50

5 Budget Estimates for 1969-70—Demand for Grants—

Demand No. 6	13 Other Taxes and Duties	49—87
Demand No. 29	43 I.N.E. & D. Works (Commercial)	
Demand No 30	44 I.N.E. & D. Works (non-Commercial).	
Demand No. 30A	45 Electricity Schemes.	
Demand No. 30B	48 Capital outlay on I.N.E. & D. Works.	
Demand No. 31	50 Public Works.	
Demand No. 31A	52 Capital Outlay on Public Works.	
Demand No. 32	53 Ports and Pilotage	
Demand No. 43	94 Capital Outlay on Improvement of Public Health.	
Demand No. 45	99 Capital Outlay on I.N.E. & D. Works (Commercial).	
Demand No. 46	100 Capital Outlay on I.N.E. & D. Works (Non-Commerical).	
Demand No. 47	101 Capital Outlay on Electricity Schemes	
Demand No. 48	103 Capital Outlay on Public Works.	
Demand No. 50	110 Capital Outlay on Ports ...	

(Debate not Concluded)

Karnataka State Archives
(Departm...
(... ಗ್ರಂಥಾಲಯ)
ಪ್ರತಿ ಕ್ರಮಾಂಕ Accession No.... 4862

CONTENTS

		PAGES
1	(i) Starred Questions and Answers ...	89—115
	(ii) Questions for Answers on the day (but not taken up)	115—118
	(iii) Furnishing the correct replies to a Question ...	118—126
	(iv) Damages to the Rajbhavan under Construction ...	126—127
	(v) Election of President, etc of the Harihar Town Municipality ...	127—129
	(vi) Mahajan Commission Reports—Adoption of ...	130—133
2	Calling Attention to matters of Urgent Public Importance *re*:	
	(i) Collection Land Revenue and Water Tax in Mandya District ...	133—136
	(ii) Communal disturbances in Someswarpur in Mysore District ...	135—136
3	Ninth Report of the Committee on Private Members' Bills and Resolution—(Presentation) ...	137
4	Discussion on a Matter of Public Importance for Short Duration *re*: Facilities and Expenditure met by the Government on the Congress Exhibition during 1969—(Debate concluded) ...	137—168
5	Budget Estimates for 1969-70—Demands for Grants—	

Demand No.	Major Head		
6—13	Other taxes and Duties ...		168—187
29—43	I.N.E. & Works (Commercial) ...		
30—44	I.N.E. & Works (Non-Commercial) ...		
30A—45	Electricity Schems ...		
30B—48	Capital Outlay on I.N.E. & D. Works ...		
31—50	Public Works ...		
31A—52	Capital Outlay on Public Works ...		
32—53	Ports & Pilotage ...		
42—94	Capital Outlay on Improvement of Public Health ...		
43—99	Do	On I.N.E. & D. Works (Commercial) ...	
45—100	Do	On I.N.E. & D. Works (Non-Commercial	
47—101	Do	On Electricity Schemes	
48—103	Do	On Public Works ...	
50—110	Do	On Ports ...	
		...(Debate not concluded) ...	

CONTENTS

		Pages
1	Budget Estimates for 1969-70—Demands for Grants—	
	Demand No. — Major Head	
	6—13 Other taxes and Duties ...	189—225
	29—43 I.N.E. & D. Works (Commercial) ...	
	30—44 I.N.E. & D. Works (Non-Commercial) ...	
	30A—45 Electricity Schemes ...	
	30B—48 Capital Outlay on I.N.E. & D Works ...	
	31—50 Public Works ...	
	31A—52 Capital Outlay on Public Works ...	
	32—53 Ports & Pilotage ...	
	43—94 Capital Outlay on Improvement of Public Health ...	
	45—99 Do on I.N.E. & D. Works (Commercial) ...	
	46—100 Do on I.N.E. & D. Works (Non-Commercial)	
	47—101 Do on Electricity Schemes	
	48—103 Do on Public Works ...	
	50—110 Do on Ports —(Voted)	
2	Obituary Reference *re*: the Demise of Sri Sydney A. Thomas, Ex-Member, Representative Assembly	225
3	(i) Starred Questions and Answers ...	226—241
	(ii) Questions for Answers on the day (but not taken up)	242—243
	(iii) Newspaper Publication *re*: a letter of Sri S. K. Patil to the Chief Minister ...	242—243
4	Calling Attention to matters of Urgent Public Importance—	
	(i) *re*: Rules of Remission of Land Revenue in Srinivaspur Taluk ...	243—244
	(ii) *re*: Collapse of a Hall in Raj Bhavan under construction in Bangalore ...	244—246
5	Business of the House ...	246—264
6	Motion to consider the appointment of the Tribunals to resolve the Krishna-Godavari Waters Disputes —(Debate concluded) ...	264—289
7	Private Members' Bills and Introduction— ...	
	(i) Mysore Public Men Inquiries Bill, 1969—(Introduced) ...	290
	(ii) Mysore Agricultural Produce Market Committees (Amendment) Bill, 1969—(Introduced) ...	290

CONTENTS

		Pages
1	Starred Questions and Answers ...	291—312
2	Notice of adjournment *re*: Communal disturbances in Hubli—(Consent withheld) ...	313—322
3	Statement of the Chief Minister *re* : the Mahajan Commission Report on Border Issues ...	322—325
4	Calling Attention to a matter of urgent Public Importance :—	
	re : Return of Pay Bills of Teachers of Aided and T.D.B. Schools by D.T.O., Raichur ...	326
5	Papers laid on the Table—	
	Notifications issued under the Mysore Motor Vehicles Taxation Act, 1957, Motor Vehicles Act, 1939 and the Mysore Land Revenue Act, 1964 ...	326—327
6	Budget Estimates for 1969-70—Demands for Grants—	
	Demand No. 17—(28) Education ...	
	Demand No. 27—(68) Stationery and Printing... —(Debate not concluded)...	327—359
7	Discussion on Matters of urgent Public Importance for Short Duration *re* : Postponement of Elections of President and Vice-President of Harihar Town Municipality ...	359—379

ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Wednesday, 5th March 1969.

The House met in the Assembly Chamber, Vidhana Soudha, Bangalore at One of the Clock.

MR. SPEAKER (SRI S. D. KOTHAVALE) in the Chair.

STARRED QUESTIONS

(to which oral answers were given)

SRI M. NAGAPPA.—Before questions are taken up, Sir, I request the Chair to extend the question Hour by ten minutes since the Speaker came late by ten minutes as otherwise the question hour will be cut short.

MR. SPEAKER.—I beg the excuse of the House for coming late. There is some justification for it. I was consulting the Leaders on both sides as to what should be done with regard to a motion relating to the business of the House. In that way the time of the House was utilized. There is therefore sufficient excuse for the delay in my coming here. Any way the Question hour will be extended by ten minutes.

Tours of Ministers during Taluk Board Elections

142. SRI SADASHIVAPPA PATIL (Deodurg).—

Will the Chief Minister be pleased to state;

(*a*) the number of Ministers, State Ministers and Deputy Ministers who have toured in their own districts during the recent elections to Taluk Board;

(*b*) whether they were on official tour or un-official tour, and the amount each Minister, State Minister, Deputy Minister has drawn towards T. A. and D. A.?

Sri VEERENDRA PATIL (Chief Minister).—

(*a*) Ministers	...	8
State Ministers	...	5
Deputy Ministers	...	10

(*b*) These tours were not official.
No. T. A. and D. A. was drawn.

ತಾಲ್ಲೂಕು ಮಂಡಲಿಗಳ ಚುನಾವಣಾ ಸಮಯದಲ್ಲಿ ತಮ್ಮ ತಮ್ಮ ಜಿಲ್ಲೆಗಳಲ್ಲಿ ಪ್ರವಾಸ ಕೈಕೊಂಡವರು ಮಂತ್ರಿಗಳು 8 ಜನ, ರಾಜ್ಯ ಮಂತ್ರಿಗಳು 5 ಜನ, ಉಪಮಂತ್ರಿಗಳು 10 ಜನ ಎಂದು ಉತ್ತರ ಅಚ್ಚಾಗಿದೆ. ಇವು ಅಫಿಷಿಯಲ್ ಟೂರ್ಸ್ ಅಲ್ಲ. ಅಫಿಷಿಯಲ್ ಟೂರ್ 3 ಜನ ಮಂತ್ರಿಗಳು ಮತ್ತು ಒಬ್ಬ ಉಪಮಂತ್ರಿಗಳು ಮಾಡಿದ್ದಾರೆ.

ಶ್ರೀ ಸದಾಶಿವಪ್ಪ ಪಾಟೀಲ್.—ಈಗ 3 ಜನ ಮಂತ್ರಿಗಳು ಮತ್ತು ಒಬ್ಬರು ಉಪಮಂತ್ರಿಗಳು ಅಫಿಷಿಯಲ್ ಟೂರ್ ಮಾಡಿದರೆಂದು ಮುಖ್ಯ ಮಂತ್ರಿಗಳು ಹೇಳಿದರು. ಉಳಿದ ಮಂತ್ರಿಗಳು, ಉಪಮಂತ್ರಿಗಳು ಅನ್‌ಅಫಿಷಿಯಲ್ ಟೂರ್ ಮಾಡುವಾಗ ಪ್ರೋಗ್ರಾಂ ಕಳಿಸಬಹುದೇ ಅಥವಾ ಕಳಿಸಬಾರದೇ? ಯಾರಾದರೂ ಕಳಿಸಿದ್ದರೇ ?

ಶ್ರೀ ವೀರೇಂದ್ರ ಪಾಟೀಲ್.—ಅನ್‌ಅಫಿಷಿಯಲ್ ಟೂರ್ ಮಾಡುವಾಗ ಅಧಿಕಾರಿಗಳಿಗೆ ತಿಳಿದಿರಬಹುದು. ಆದರೆ ಅದು ಅಫಿಷಿಯಲ್ ಟೂರ್ ಅಲ್ಲ. ಆಗ ಟಿ. ಎ. ಮತ್ತು ಡಿ. ಎ. ಕ್ಲೇಂ ಮಾಡಿಲ್ಲ. ಆಗ ಆಫೀಸ್ ಕೆಲಸ ಮಾಡಿರುವಂತೆ ಕಾಣಲಿಲ್ಲ.

ಶ್ರೀ ಬಿ. ಪಿ. ಗಂಗಾಧರ್.—ತಾಲ್ಲೂಕು ಬೋರ್ಡ್ ಚುನಾವಣೆ ನಡೆಯುವಾಗ ಫ್ಯಾಮಿನ್ ರಿಲೀಫ್ ಕೆಲಸವನ್ನು ಇನ್‌ಸ್ಪೆಕ್ಟ್ ಮಾಡುವ ನೆಪದಲ್ಲಿ ಟೂರ್ ಮಾಡಿ ಚುನಾವಣೆ ಕೆಲಸದಲ್ಲಿ ಭಾಗ ವಹಿಸಿ ಕೆಲವರು ಮಂತ್ರಿಗಳು ಟಿ. ಎ. ತೆಗೆದುಕೊಂಡಿಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್.—ಅದಕ್ಕೇ ನಾನು ಹೇಳಿದೆ, 8 ಜನ ಮಿನಿಸ್ಟರ್ಸ್ 5 ಜನ ಸ್ಟೇಟ್ ಮಿನಿಸ್ಟರ್ಸ್, 10 ಜನ ಡೆಪ್ಯೂಟಿ ಮಿನಿಸ್ಟರ್ಸ್ ಚುನಾವಣಾ ಸಮಯದಲ್ಲಿ ತಮ್ಮ ತಮ್ಮ ಜಿಲ್ಲೆಯಲ್ಲಿ ಟೂರ್ ಮಾಡಿದ್ದಾರೆ ಅದಕ್ಕೆ ಟಿ. ಎ. ಮತ್ತು ಡಿ. ಎ. ಕ್ಲೇಂ ಮಾಡಿಲ್ಲ ಎಂದು.

Sri D. B. KALMANKAR.—May I know whether it is a fact that when these Ministers were on tour at the time of the Taluk Board elections, the police were also informed to attend on them and follow them ?

Sri VEERENDRA PATIL.—I do not think so. But whatever they find there is likelihood of any trouble or disturbance, it is the duty of the police to take precautionary measures and go there and it is not because Ministers or Deputy Ministers go there.

ಶ್ರೀ ಎಂ. ಎಸ್. ಕೃಷ್ಣನ್.—ತಾಲ್ಲೂಕು ಬೋರ್ಡು ಚುನಾವಣೆಗಳು ನಡೆಯುತ್ತಾ ಇರುವ ಸಂದರ್ಭದಲ್ಲಿ 3 ಜನ ಮಂತ್ರಿಗಳು ಮತ್ತು ಒಬ್ಬ ಡೆಪ್ಯೂಟಿ ಮಿನಿಸ್ಟರು ಪ್ರಚಾರ ನಡೆಸಿರುವುದರಿಂದ, ಆ ಸಂದರ್ಭದಲ್ಲಿ ಅವರು ಟೂರ್ ಆಗಿರುವುದರಿಂದ ಅವರು ಚುನಾವಣಾ ಪ್ರಚಾರಕ್ಕಾಗಿ ಹೋಗಿದ್ದರು ಎಂಬ ಶಂಕೆ ಬಂದಿದೆಯಲ್ಲವೇ ಮತ್ತು ಅದರಿಂದಾಗಿ ಆ ತಪ್ಪನ್ನು ತಾವು ತಿದ್ದಿಕೊಳ್ಳುವುದಕ್ಕೆ ತಯಾರಾಗಿದ್ದೀರಾ ?

ಶ್ರೀ ವೀರೇಂದ್ರ ಪಾಟೀಲ್.—ಆ ಮೂರು ಜನ ಮಂತ್ರಿಗಳು ಆಫಿಶಿಯಲ್ ಟೂರ್ ಹೋಗಿದ್ದರು. ಉದಾಹರಣೆಗೆ ಇಂಡಸ್ಟ್ರೀಸ್ ಮಿನಿಸ್ಟರು ಮೈಸೂರು ಜಿಲ್ಲೆಯಲ್ಲಿ ಮಾಹದೇಶ್ವರ ಬೆಟ್ಟದಲ್ಲಿ ಒಂದು ಸಮಾರಂಭ ಇತ್ತು, ಅದಕ್ಕೆ ಹೋಗಿದ್ದರು. ಈ ಪ್ರಶ್ನೆ ಕೇಳಿದಾಗ ಈ ತರಹದ ಒಂದು ಸಂಶಯ ಬಂತು, ಅದಕ್ಕೇ ಉತ್ತರವನ್ನು ತಿದ್ದುಪಡಿ ಮಾಡಿದ್ದೇನೆ. Three Ministers and one Deputy Minister had official tour. ಎಲೆಕ್ಷನ್ ಸಮಯದಲ್ಲಿ ಟೂರ್ ಮಾಡುವುದು ಬೇರೆ ಇರುತ್ತದೆ, ಇತರ ಸಂದರ್ಭಗಳಲ್ಲಿ ಟೂರ್ ಮಾಡುವುದು ಬೇರೆ.

Sri SIDDIAH KASHIMATH.—May I know whether the Chief Minister had toured in Gulbarga District at the time of Taluk Board elections ?

Sri VEERENDRA PATIL.—In these three Ministers, the Chief Minister is also included.

Mr. SPEAKER.—I wish to inform the hon. Members that in order to finish all the 20 questions, three or four supplementaries will be allowed on questions which are treated as important and one or two supplementaries will be allowed on questions of local nature.

ಶ್ರೀ ಎಸ್. ಶಿವಪ್ಪ.—ಈಗ ಮಾನ್ಯ ಮಂತ್ರಿಗಳು ಹೇಳಿದಹಾಗೆ ತಾಲ್ಲೂಕು ಬೋರ್ಡು ಚುನಾವಣಾ ಕಾಲದಲ್ಲಿ ಮಂತ್ರಿಗಳು ಅಲ್ಲಿ ಟೂರ್ ಮಾಡಿರತಕ್ಕದ್ದು ಅಫಿಷಿಯಲ್ ಕ್ಯಪ್ಯಾಸಿಟಿಯಲ್ಲಿ ಅಲ್ಲ ಚುನಾವಣೆಗೆ ಕಾಂಗ್ರೆಸ್‌ನವರಾಗಿ ಹೋಗಿದ್ದರು ಎಂದು ಹೇಳಿದರು. ಮಾನ್ಯ ಮಂತ್ರಿಗಳಿಗೆ ಎರಡು ಕ್ಯಪ್ಯಾಸಿಟಿ ಇದೆಯೆ ? ಅವರು ಮಿನಿಸ್ಟರುಗಳಾಗಿರುವ ತನಕ ಅಫಿಷಿಯಲ್ಲು ನಾನ್ ಅಫಿಷಿಯಲ್ಲು ಅಂತ ಅನ್ನುವುದನ್ನು ಹೇಗೆ ಡಿಸ್ಟಿಂಗ್‌ವಿಷ್ ಮಾಡುತ್ತೀರಿ? ಅವರು ನಾನ್ ಅಫಿಷಿಯಲ್ ಟೂರ್ ಅಂತ ಹೋದಾಗ ಸರ್ಕಾರಿ ಕಾರು, ಅದರ ಮೇಲೆ ಒಂದು ಗೂಟ, ಅದಕ್ಕೆ ಒಂದು ಬಾವುಟ ಹಾರಿಸಿಕೊಂಡು ಹೋಗುತ್ತಾರೆಯಲ್ಲಾ ಅದು ಅಫಿಷಿಯಲ್ ಟೂರೇ ? ಅಥವ ನಾನ್ ಅಫಿಷಿಯಲ್ ಟೂರೇ ? ಮತ್ತು ಅವರು ಹೋದಾಗ ಅಧಿಕಾರಿಗಳು ಅವರು ಬರುತ್ತಾರೆ ಎಂದು ಕಾದುಕೊಂಡು ಇದ್ದು ಅವರ ಜೊತೆಯಲ್ಲಿ ಹೋಗುತ್ತಾರೆ, ಅದು ನಾನ್ ಅಫಿಷಿಯಲ್ ಟೂರ್ ಆದರೆ ಅಧಿಕಾರಿಗಳಿಗೆ ಆಗಿರತಕ್ಕ ಖರ್ಚನ್ನು ಯಾರು ತುಂಬಿ ಕೊಡುತ್ತಾರೆ ಎಂಬುದನ್ನು ತಿಳಿಸಬೇಕು.

ಶ್ರೀ ವೀರೇಂದ್ರ ಪಾಟೀಲ್.—ಇವತ್ತು ಈ ನಾನ್ ಅಫಿಷಿಯಲ್ ಟೂರು ಅನ್ನುವಂತಹುದು ಹೊಸದಲ್ಲ. 1952ರಿಂದ ಚುನಾವಣೆಗಳು ನಡೆಯುತ್ತಾ ಇವೆ. ಚುನಾವಣೆಗಳಲ್ಲಿ ಎಲ್ಲಾ ಮಂತ್ರಿಗಳೂ ಭಾಗವಹಿಸಿದ್ದಾರೆ, ಮುಖ್ಯ ಮಂತ್ರಿಗಳು ಭಾಗವಹಿಸಿದ್ದಾರೆ, ಪ್ರಧಾನ ಮಂತ್ರಿಗಳು ಭಾಗವಹಿಸಿದ್ದಾರೆ. ಚುನಾವಣೆಯ ಸಮಯದಲ್ಲಿ ಯಾವ ರೀತಿಯಿಂದ ಭಾಗವಹಿಸಬೇಕೆನ್ನುವಂತಹುದು ನಮಗೆ ಗೊತ್ತಿದೆ. ಆ ರೀತಿಯಿಂದ ಭಾಗವಹಿಸುತ್ತಾರೆ. ಸರ್ಕಾರದ ಬೊಕ್ಕಸಕ್ಕೆ ಯಾವ ತರಹದ ಖರ್ಚು ಬರಲಾರದಂತೆ ಚುನಾವಣಾ ಪ್ರಚಾರದಲ್ಲಿ ಭಾಗವಹಿಸುತ್ತಾರೆ. ಕಾಂಗ್ರೆಸ್ ಸರ್ಕಾರ ಇರಲಿ ಅಥವಾ ಇವತ್ತು ನಾನ್ ಕಾಂಗ್ರೆಸ್ ಸರ್ಕಾರಗಳು ಅನೇಕ ಕಡೆ ಇವೆ. ಮೊನ್ನೆ ಮದರಾಸಿನಲ್ಲಿ ನಾಗರಕೊಯಿಲ್‌ನಲ್ಲಿ ನಡೆದ ಚುನಾವಣೆಯಲ್ಲಿ ಅಲ್ಲಿನ ಮಂತ್ರಿಗಳು ಪ್ರಚಾರ ಮಾಡಿದ್ದಾರೆ. ಆದ್ದರಿಂದ ಇದು ಹೊಸದೇನೂ ಅಲ್ಲ. ಅನೇಕ ವರ್ಷಗಳಿಂದ ನಡೆಯುತ್ತಾ ಇದೆ.

ಶ್ರೀ ಎಂ. ನಾಗಪ್ಪ.—ನಾನ್ ಅಫಿಷಿಯಲ್ ಅನ್ನುವುದು ಎಲ್ಲಿವರೆಗೆ? ಜಿಲ್ಲೆಯಿಂದ ಕ್ಯಾಪಿಟಲ್ ಸಿಟಿವರೆಗೆ ಮಾತ್ರವೆ ಅಫಿಷಿಯಲ್ ಆಗಿರುತ್ತದೆ. ಬೆಂಗಳೂರಿನಿಂದ ಹೊರಟು ರಾಯಚೂರು ಮುಟ್ಟುವವರೆಗೂ ಟಿ. ಎ. ಮತ್ತು ಡಿ. ಎ. ಕ್ಲೇಂ ಮಾಡುತ್ತಾ ಇದ್ದಾರೆ ಅಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್.—ಟಿ. ಎ. ಹಾಗೂ ಡಿ.ಎ. ಕ್ಲೇಂ ಮಾಡಿಲ್ಲ ಎಂದು ಸ್ಪಷ್ಟವಾಗಿ ಆಗಲೇ ಹೇಳಿದೆ.

ಶ್ರೀ ಎಚ್. ಬಿ. ಜ್ವಾಲನಯ್ಯ.—ಮಂತ್ರಿಗಳಾಗಿದ್ದವರು ಖಾಸಗಿಯಾಗಿ ಚುನಾವಣೆಗೆ ಹೋಗಿದ್ದಂಥ ಕಾಲದಲ್ಲಿ ಅವರು ಮುಖ್ಯ ಮಂತ್ರಿಗಳಿಗೆ ರಜಾ ಚೀಟಿಯನ್ನು ಕೊಟ್ಟು ಹೋಗಿದ್ದರೆ ? ಹಾಗೆ ಕೊಟ್ಟಿದ್ದರೆ ಪರ್ಮಿಷನ್ ಕೊಡಲಾಗಿತ್ತೆ ?

ಶ್ರೀ ವೀರೇಂದ್ರ ಪಾಟೀಲ್.—ಮಂತ್ರಿಗಳಾಗಿದ್ದರೂ ಅವರು ತಮ್ಮ ತಮ್ಮ ಚುನಾವಣಾ ಕ್ಷೇತ್ರಗಳಿಗೆ ಹೋಗಬೇಕೆಂದರೆ ಅದಕ್ಕೆ ಬೇಡ ಎಂದು ಹೇಳುವುದಕ್ಕಾಗುವುದಿಲ್ಲ. ನಾವೆಲ್ಲರೂ ಒಂದು ಸಂಸ್ಥೆಯಲ್ಲಿ ಸೇರಿ ಕೆಲಸ ಮಾಡುತ್ತಿರಬಹುದು. ಅದರಿಂದ ಅವರು ಚುನಾವಣೆಗಳಲ್ಲಿ ಭಾಗವಹಿಸಬಾರದೆಂದು ಹೇಳುವುದಕ್ಕಾಗುವುದಿಲ್ಲ.

Railway lines in the State

163. **Sri H. N. NAJE GOWDA** (Arkalgud).—

Will the Minister for Public Works be pleased to state :—

(*a*) whether Government have made any proposals to the Central Government for laying of new railway lines in the State for inclusion

(SRI H. N. NANJE GOWDA)

in the Fourth Five Year Plan, if so, the names of such lines and the estimated cost of each one of them and the outlay for each one of them ;

(b) whether Government have also made any proposals suggesting improvement in the existing railway lines such as converting Narrow Gauge into Metre Gauge and Metre Gauge to Broad Gauge; if so, the proposals made ?

Sri K. LAKKAPPA (Minister for Public Works).—

(a) Yes.

1. Broadgauging the Hubli-Hospet Line.
2. A new Board Gauge line from Karwar Port to Hubli.
3. Kottur-Harihar line.
4. Harihar-Moodabidri line to run through Shimoga, Bhadravathi and Chickmagalur.
5. Talguppa-Honavar line.
6. Gadag-Wadi line.
7. Chamarajanagar-Satyamangalam line.
   Details about the estimated cost, etc., are not available.

(b) Yes, the following lines were recommended :—

1. Broad-gauging the Bangalore-Guntakal line.
2. Boadgauging the Hospet Hubli and Hubli-Miraj lines to be undertaken simultaneously with Hospet-Guntakal line.
3. Broadgauging the new Metre Gauge line between Kottur and Harihar.
4. Construction of Mangalore-Hassan line so as to facilitate its being converted into boardgauge line at any time.

Sri H. N. NANJE GOWDA.—It is stated that for laying new lines, proposals have been sent and also for the existing lines. May I know what is the reaction of the Union Government in the matter ?

Sri K. LAKKAPPA.—The Central Government is agreeable to make a priliminary economic and other surveys, traffic potential, etc. After all this is done they want to consider all these cases at the time of finalisation of the Fourth Plan.

ಶ್ರೀ ಎಸ್. ಎಂ. ಗುರೆಡ್ಡಿ.—ರಾಜ್ಯ ಸರ್ಕಾರದವರು ಕೇಂದ್ರಕ್ಕೆ ಒಟ್ಟಿಗೆ 6–7 ಕೆಲಸಗಳಾಗಬೇಕು ಎಂದು ಕೇಳಿದ್ದಾರೆ. ಅದರಲ್ಲಿ ಮೀಟರ್ ಗೇಜನ್ನು ಬ್ರಾಡ್‌ಗೇಜ್ ಮಾಡುವುದೂ ಕೂಡ ಸೇರಿದೆ. ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ ಬೆಂಗಳೂರು-ಗುಂತಕಲ್ಲು ರೈಲನ್ನಾದರೂ ಪೂರ್ತಿ ಬ್ರಾಡ್‌ಗೇಜಾಗಿ ಪರಿವರ್ತನೆ ಮಾಡುವುದಕ್ಕೆ ಶಿಫಾರ್ಸ್ ಮಾಡಿದ್ದೀರಾ ! ಅದರಿಂದ ಡೆಲ್ಲಿಗೆ ಬೆಂಗಳೂರಿಂದ ಹೋಗತಕ್ಕವರಿಗೆ ಅನುಕೂಲವಾಗುತ್ತದೆ, ಅದಕ್ಕೆ ಏನು ಉತ್ತರ ಬಂದಿದೆ ?

ಶ್ರೀ ಕೆ. ಲಕ್ಕಪ್ಪ.—ಈಗ ಇರತಕ್ಕ ಕೇಂದ್ರ ಸರ್ಕಾರದವರ ಪ್ರೋಗ್ರಾಂ ಪ್ರಕಾರ ಪರ್ಕಿಂಗ್ ಪ್ರಪೋಜಲ್ ಪ್ರಕಾರ ಗುಂತಕಲ್ಲಿನಿಂದ-ಧರ್ಮಾವರಂವರೆಗೂ ಒಂದು ಪ್ಯಾರಲಲ್ ಲೈನನ್ನು ಎಳೆಯುವುದು ಮತ್ತು ಧರ್ಮಾವರಂನಿಂದ ಬೆಂಗಳೂರುವರೆಗಿರತಕ್ಕ ಲೈನನ್ನು ಬ್ರಾಡ್‌ಗೇಜ್ ಮಾಡುವುದು ಎಂದಿದೆ ಆ ಪ್ರಕಾರ ಸರ್ವೆ ಕೆಲಸಗಳು ನಡೆಯುತ್ತಿವೆ. ಅದಾದನಂತರ ಅವರು ತೀರ್ಮಾನ ಕೊಡುತ್ತಾರೆ.

Sri C. K. RAJAIAH SETTY.—You have given about six or eight proposals. Have you given the order of priority and if so, what is the order of priority ?

Sri K. LAKKAPPA.—The order of priority has been mentioned in the answer. It stands like this :

(1) Broadgauging the Hubli-Hospet line.

(2) A new Broad Gauge line from Karwar Port to Hubli.

(3) Kottur Harihar line.

(4) Harihar-Moodabidri line to run through Shimoga, Bhadravati and Chickmagalur.

(5) Talaguppa Honavar line.

(6) Gadag Wadi line.

(7) Chamarajanagar Satyamangalam line.

After this, our Government have been pressing for some more lines-Hubli Karwar line, Kottur and Harihar line and Talaguppa Honavar line.

Sri RAJA PID NAIK.—May I know whether any survey has been made regarding Wadi–Gadag line and if so, what is the cost ?

ಶ್ರೀ ಕೆ. ಲಕ್ಕಪ್ಪ.—ಆ ವಾಡಿ ಗದಗ್ ಲೈನ್ ಬಗ್ಗೆ ಇನ್ನೂ ಸರ್ವೆ ಆಗಿದ್ದ ಹಾಗೆ ಕಾಣುವುದಿಲ್ಲ. ಅದನ್ನೂ ಅವರು ಮುಂದಕ್ಕೆ ಸರ್ವೆ ಮಾಡಿಸಬಹುದು.

ಶ್ರೀ ಎಚ್. ಬಿ. ಜ್ವಾಲನಯ್ಯ.—ಹಾಸನ ಮಂಗಳೂರು ರೈಲ್ವೆ ಲೈನನ್ನು ಬ್ರಾಡ್‌ಗೇಜಿಗೆ ಯಾವಾಗ ಬೇಕಾದರೂ ಪರಿವರ್ತನೆ ಮಾಡುವಂತೆ ಅನುಕೂಲವಾಗಲು ಅಲ್ಲಲ್ಲೆ ಸೇತುವೆಗಳನ್ನೂ ಮತ್ತು ಟನಲ್‌ಗಳನ್ನೂ ಮಾಡಲಾಗಿದೆ. ಆದ್ದರಿಂದ ಈಗಲೇ ಅದನ್ನು ಬ್ರಾಡ್‌ಗೇಜಾಗಿ ಮಾಡಿ ಎಂದು ಒತ್ತಾಯ ಮಾಡುವುದಕ್ಕಾಗುವುದಿಲ್ಲವೇ ?

ಶ್ರೀ ಕೆ. ಲಕ್ಕಪ್ಪ.—ಹಾಗೆ ಒತ್ತಾಯ ಮಾಡತಕ್ಕ ಪ್ರಮೇಯ ಇರುವುದಿಲ್ಲ. ಟ್ರಾಫಿಕ್ ಹೆಚ್ಚಾದ ಕೂಡಲೆ ಅದನ್ನು ಆಟೋಮ್ಯಾಟಿಕ್ಕಾಗಿ ಮಾಡಲಾಗುತ್ತದೆ.

ಶ್ರೀ ಕೆ. ಎಂ. ಪುಟ್ಟಸ್ವಾಮಿ.—ಬೆಂಗಳೂರು-ಬಂಗಾರು ಪೇಟೆ ಮಾರ್ಗ ನ್ಯಾರೋಗೇಜ್ ಇದೆ. ಇದನ್ನು ಕೇಂದ್ರ ಸರ್ಕಾರದವರು ತೆಗೆದುಹಾಕಬೇಕೆಂದು ಎಷ್ಟೋ ಸಾರಿ ಪ್ರಯತ್ನ ಮಾಡುತ್ತಿದ್ದಾರೆ. ಆದ್ದರಿಂದ ಇದನ್ನು ಬ್ರಾಡ್‌ಗೇಜ್ ಮಾಡುವುದಕ್ಕೆ ಕೇಂದ್ರ ಸರ್ಕಾರಕ್ಕೆ ಏನಾದರೂ ಬರೆದು ಕಳುಹಿಸಿದ್ದೀರಾ ?

Sri K. LAKKAPPA.—I want notice for this.

ಶ್ರೀ ಕೆ. ಎಂ. ತಮ್ಮಯ್ಯ.—ಬೆಂಗಳೂರು–ಗುಂತಕಲ್ ಮಾರ್ಗವನ್ನು ಬ್ರಾಡ್‌ಗೇಜನ್ನಾಗಿ ಪರಿವರ್ತಿಸಬೇಕೆಂದು ಶಿಫಾರಸುಮಾಡಿದ್ದೀರಿ. ಹಾಗೆಯೇ ಬೆಂಗಳೂರು–ಪೂನಾ ಮಾರ್ಗವನ್ನು ಬ್ರಾಡ್‌ಗೇಜ್‌ಮಾಡುತ್ತೇವೆಂದು ಶಿಫಾರಸು ಮಾಡಿದ್ದೀರಾ ? ಒಂದು ವೇಳೆ ಆ ರೀತಿ ಮಾಡದಿದ್ದರೆ ಅದನ್ನು ಈಗಲಾದರೂ ಮಾಡುತ್ತೀರಾ ?

ಶ್ರೀ ಕೆ. ಲಕ್ಕಪ್ಪ.—ಬೆಂಗಳೂರು–ಪೂನಾ ಮಾರ್ಗವನ್ನು ಬ್ರಾಡ್‌ಗೇಜ್ ಮಾಡಬೇಕೆಂದು ಕೇಳಿದ್ದೇವೆ. ಅದರ ಬಗ್ಗೆ ಯಾವುದೇ ಕಮಿಟ್‌ಮೆಂಟ್ ಇದುವರೆಗೂ ಕೇಂದ್ರ ಸರ್ಕಾರದಿಂದ ಬಂದಿಲ್ಲ.

ಶ್ರೀ ಎಂ. ಎನ್. ರಾಮಣ್ಣ.—ನಿನ್ನೆಯ ದಿವಸ ಪ್ರಶ್ನೋತ್ತರಕಾಲದಲ್ಲಿ ಚಾಮರಾಜನಗರ–ಸತ್ಯಮಂಗಲ ರೈಲುಮಾರ್ಗವನ್ನು 90 ವರ್ಷಗಳ ಹಿಂದೆಯೇ ಪ್ರೈಯಾರಿಟಿ ಕೊಟ್ಟು ಮಾಡ ಬೇಕೆಂದಿದ್ದರು ಎಂಬುದಾಗಿ ಹೇಳಿದರು. ಇದನ್ನು ಮಾಡುವುದರಿಂದ ನಮ್ಮ ಪ್ರಾಂತದ ಜನಗಳಿಗೆ ಅನುಕೂಲವಾಗುತ್ತದಲ್ಲವೆ ?

ಶ್ರೀ ಕೆ. ಲಕ್ಕಪ್ಪ.—ಅಜಿಟೇಷನ್ 1891 ರಿಂದಲೂ ಇತ್ತು. ಈ ರೈಲ್ವೆ ಲೈನಿಗೆ ಪ್ರೈಯಾರಿಟಿ ಕೊಡುವುದು ಸೂಕ್ತವೆಂದು ಎಲ್ಲರೂ ಮನಗಂಡು ಆ ರೀತಿಯಾಗಿ ಇದನ್ನು ಪ್ರೈಯಾರಿಟಿ ಲಿಸ್ಟ್‌ನಲ್ಲಿ ಸೇರಿಸುವಂತೆ ಏರ್ಪಾಡುಮಾಡಿದ್ದೇವೆ.

ಶ್ರೀ ಡಿ. ಎಸ್. ನಾಡಕರ್ಣಿ.—ಕಾರವಾರ ಬಂದರಿನಿಂದ ಹುಬ್ಬಳ್ಳಿಯವರೆಗೆ ಇರತಕ್ಕ ಲೈನ್ ಯಾವ್ಯಾವ ಊರುಗಳಿಂದ ಹಾದುಹೋಗುತ್ತದೆ ? ಹಿಂದಿನ ಸಾರಿ ಸರ್ವೆಮಾಡಿದ್ದರು ಎಂಬುದಾಗಿ ಹೇಳಿದ್ದಾರೆ, ಆದ್ದರಿಂದ ಇದನ್ನು ಯಾವ ರೀತಿ ಪ್ರಪೋಸ್ ಮಾಡಿದ್ದೀರಾ ?

Sri K. LAKKAPPA.—I want notice since there are no details available.

ಶ್ರೀಮತಿ ನಾಗರತ್ನಮ್ಮ ಹಿರೇಮಠ್.—ಬೆಂಗಳೂರು–ಮೈಸೂರು ರೈಲ್ವೆ ಲೈನನ್ನು ಎಲೆಕ್ಟ್ರಿಕ್ ಟ್ರೈನ್ ಆಗಿ ಮಾಡಬೇಕೆಂದು ಸರ್ ಮಿರ್ಜಾ ಸಾಹೇಬರ ಕಾಲದಿಂದಲೂ ಇತ್ತು. ಅದಕ್ಕೋಸ್ಕರ ಒಂದು ಸರ್ವೆ ರಿಪೋರ್ಟ್ ಸಹ ಇಟ್ಟುಕೊಂಡಿದ್ದೀರಿ. ಅಂದಮೇಲೆ ಅದನ್ನು ಎಷ್ಟು ದೂರ ಮಾಡ ಬೇಕೆಂದಿದ್ದೀರಿ ?

ಶ್ರೀ ಕೆ. ಲಕ್ಕಪ್ಪ.—ಸದ್ಯಕ್ಕೆ ಅದಕ್ಕೆ ಪ್ರಾಧಾನ್ಯತೆ ಸಿಕ್ಕಿದ ಹಾಗೆ ಕಾಣಲಿಲ್ಲ. ಬೆಂಗಳೂರು–ಮೈಸೂರು ಮಧ್ಯೆ ಎಲೆಕ್ಟ್ರಿಕ್ ಬಸಸ್ ಓಡಿಸುತ್ತೇವೆಂದು ಹೇಳುತ್ತಿದ್ದಾರೆ.

ಶ್ರೀ ಎಂ. ಆರ್. ಪಾಟೀಲ್.—1962ರಿಂದ ಇದುವರೆಗೆ ಈ ಮಧ್ಯೆ ಇದರ ಬಗ್ಗೆ ಈ ಸರ್ಕಾರ ಮಾಡಿದ ಪ್ರಯತ್ನಗಳು ಏನು ? ರೈಲ್ವೆ ಲೈನನ್ನು ಬ್ರಾಡ್‌ಗೇಜ್ ಮಾಡುವುದರಲ್ಲಿ ಸರ್ಕಾರದವರು ಎಷ್ಟರಮಟ್ಟಿಗೆ ಯಶಸ್ವಿಯಾಗಿದ್ದಾರೆ ?

ಶ್ರೀ ಕೆ. ಲಕ್ಕಪ್ಪ.—ಅನೇಕ ರೈಲ್ವೆ ಮಾರ್ಗಗಳನ್ನು ಸರ್ವೆ ಮಾಡುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಹುಬ್ಬಳ್ಳಿ—ಕಾರವಾರ ಲೈನ್, ಮತ್ತು ತಾಳಗುಪ್ಪ—ಹೊನ್ನಾವರ ಲೈನ್‌ಗಳ ಬಗ್ಗೆ ಸರ್ವೆ ನಡೆಸುತ್ತಿದ್ದೇವೆಂದು ಹೇಳಿದ್ದೇವೆ.

Hanumanahalla Project

309. Sri M. MALLAPPA (Birur).—

Will the Chief Minister be pleased to state :—

(*a*) whether the public of Chickmagalur District are urging to take up Hanumanahalla Project for irrigation purpose in Chickmagalur and Kadur Taluks;

(*b*) whether the Government has taken up the investigation of the said project ?

(*c*) the estimated cost of the said project ?

Sri D. PARAMESWARAPPA (Deputy Minister for Major Irrigation).—

(*a*) Yes.

(*b*) Yes.

(*c*) The Scheme is under investigation.

ಶ್ರೀ ಎಂ. ಮಲ್ಲಪ್ಪ.—(ಸಿ) ಪ್ರಶ್ನೆಗೆ ಉತ್ತರವಾಗಿ ಈ ಯೋಜನೆಯನ್ನು ಪರಿಶೀಲಿಸಲಾಗುತ್ತಿದೆಯೆಂದು ಹೇಳಿದ್ದೀರಿ. ಇದರ ಬಗ್ಗೆ ಅಂದಾಜು ತಯಾರಾಗುವುದಕ್ಕೆ ಇನ್ನೆಷ್ಟು ಕಾಲ ಬೇಕು, ಅದನ್ನು ಕಾರ್ಯಗತ ಮಾಡುವುದು ಯಾವಾಗ ?

Sri D. PARAMESWARAPPA.—Preliminary surveys have been conducted by the Executive Engineer, Major Irrigation Investigation Division, Hassan. We cannot give the estimated cost of the project because it is not finally investigated. According to the preliminary investigation, the approximate cost will be Rs. 40 lakhs.

ಶ್ರೀ ಹಂಜಿ ಶಿವಣ್ಣ.—ಮಾನ್ಯ ಮಂತ್ರಿಗಳು ಕನ್ನಡದಲ್ಲಿ ಉತ್ತರ ಹೇಳಬೇಕೆಂದು ನಾನು ಹೇಳುತ್ತೇನೆ. ಏಕೆಂದರೆ ಅವರಿಗೆ ಕನ್ನಡ ಚೆನ್ನಾಗಿ ಬರುತ್ತದೆ.

ಶ್ರೀ ಎಂ. ಮಲ್ಲಪ್ಪ.—ಅಂದಾಜು 40 ಲಕ್ಷವೆಂದು ಹೇಳಿದ್ದೀರಿ. ಮಾನ್ಯ ಶ್ರೀ ರಾಜಶೇಖರ ಮೂರ್ತಿಯವರು ಚಿಕ್ಕಮಗಳೂರಿಗೆ ಬಂದಾಗ್ಗೆ ಅಲ್ಲಿನ ಅಭಾವ ಪರಿಹಾರ ಕಾಮಗಾರಿಗಳಿಗಾಗಿ 50 ಲಕ್ಷ ರೂಪಾಯಿಗಳನ್ನು ಕೊಡುತ್ತೇವೆಂದು ಭರವಸೆ ಕೊಟ್ಟಿದ್ದರು. ಅವರು ಕೊಟ್ಟ ಭರವಸೆ ಪ್ರಕಾರ 4ನೇ ಪಂಚವಾರ್ಷಿಕ ಯೋಜನೆಯಲ್ಲಾದರೂ ಈ ಕಾಮಗಾರಿಯನ್ನು ಸೇರಿಸಿ ಜಾಗ್ರತೆ ಕೆಲಸಮಾಡಿಸಿಕೊಡುತ್ತೀರಾ ?

ಶ್ರೀ ಹಂಜಿ ಶಿವಣ್ಣ.—ಮಂತ್ರಿಗಳು ಕನ್ನಡದಲ್ಲಿ ಮಾತನಾಡಬೇಕು.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಸದಸ್ಯರು ಹೇಳಿದ್ದು ಸರಿ. ಅವರಿಗೆ ಕನ್ನಡ ಬರುವುದಿಲ್ಲವೆಂದು ಹೇಳಿದರೆ ನಾನು ಒಪ್ಪುವುದಿಲ್ಲ. ಉತ್ತರವನ್ನು ಕನ್ನಡದಲ್ಲಿಯೇ ಹೇಳಲಿ.

Sri D. PARAMESWARAPPA.—That is why I said in the beginning itself that it is not possible to give the precise cost of the project since it is not finally investigated. It may be Rs. 50 lakhs or more than Rs. 50 lakhs after it is finally investigated. I do not know whether the Hon. Minister for Industries has given any assurance. If he has given an assurance, it will be kept up.

Construction of Byalad Tank

326. Sri N. HUTCHMASTY GOWDA (Huliyurdurga).—

Will the Minister of State for Minor Irrigation be pleased to state :-

(*a*) when the estimates about Byalad tank in Kunigal Taluka was prepared ;

(*b*) the officers and the Ministers, who went to inspect the two sites for this tank ;

(*c*) whether construction work of this tank has been included in the present year's programme list ;

(*d*) whether it is a fact that the Deputy Minister for Sericulture is raising an objection even though the concerned Minister of State has decided taking up this work during this year only as per the opinion of Chief Engineer.

(*e*) At what stage the matter stands at present ?

Sri D. PARAMESWARAPPA (Deputy Minister for Major Irrigation) [On behalf of Sri A. J. DODDAMETI (Minister of State for Minor Irrigation)].—

(*a*) During the year 1959.

(*b*) The Executive Engineer, Tumkur Division, Executive Engineer—Investigation Division, Bangalore, the Chief Engineer (General) inspected the said tank site on 29th July 1961, 27th October 1961, 4th October 1961 and the Hon'ble Minister of State for Minor Irrigation, Government of Mysore inspected in August, 1968 respectively.

(*c*) Yes (1968–69).

(*d*) Their proposal is also being considered.

(*e*) It is under reconsideration.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಚೀಫ್ ಇಂಜಿನಿಯರ್ ಕೊಟ್ಟಿರತಕ್ಕ ಅಭಿಪ್ರಾಯ ಏನು ? ಆ ಅಭಿಪ್ರಾಯಕ್ಕೆ ಮನ್ನಣೆ ಕೊಡುವುದಕ್ಕೆ, ಸರ್ಕಾರದವರು ಒಪ್ಪಿಕೊಂಡಿದ್ದಾರೆಯೇ ?

† **Sri D. PARAMESHWARAPPA.**—The Chief Engineer has given his opinion.

ಶ್ರೀ ವಾಟಾಳ್ ನಾಗರಾಜ್.—ಸ್ವಾಮಿ, ಕನ್ನಡದಲ್ಲಿ ಪ್ರಶ್ನೆ ಕೇಳಿದರೂ ತಾವು ಇಂಗ್ಲೀಷ್‌ನಲ್ಲಿ ಉತ್ತರ ಕೊಡುತ್ತಿದ್ದೀರಿ. ತಾವು ಕನ್ನಡದಲ್ಲೇ ಉತ್ತರ ಕೊಡಬೇಕು.

ಶ್ರೀ ಡಿ. ಪರಮೇಶ್ವರಪ್ಪ.—ಕನ್ನಡದಲ್ಲಿ ಉತ್ತರ ಹೇಳಬಾರದು ಎಂದು ಏನೂ ಇಲ್ಲ. ಇದರಲ್ಲಿ ಕೆಲವು ಟೆಕ್ನಿಕಲ್ ಟರ್ಮ್ಸ್ ಇರುವುದರಿಂದ ಇಂಗ್ಲೀಷ್‌ನಲ್ಲಿ ಹೇಳಲು ಅನುಕೂಲ ಅಷ್ಟೆ. ಈಗ ಚೀಫ್ ಇಂಜಿನಿಯರ್ ಅಭಿಪ್ರಾಯದ ಪ್ರಕಾರ ಈಗಿನ ಲೋಯರ್ ಸೈಟಿನಲ್ಲಿ ಟ್ಯಾಂಕ್ ಕಟ್ಟಿದರೆ "it is more economical" ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ಅಭಿಪ್ರಾಯಕ್ಕೆ ಮನ್ನಣೆ ಕೊಡತಕ್ಕಂತ ತತ್ವವನ್ನು ಒಪ್ಪಿಕೊಂಡಿದ್ದೀರಾ ?

ಶ್ರೀ ಡಿ. ಪರಮೇಶ್ವರಪ್ಪ.—ಇಂಥ ಸಂದರ್ಭದಲ್ಲಿ ಸರ್ಕಾರ ಸಾಮಾನ್ಯವಾಗಿ ತಜ್ಞರ ಅಭಿಪ್ರಾಯಕ್ಕೆ ಮನ್ನಣೆ ಕೊಡುವುದು ಸೂಕ್ತವೆಂದು ತಿಳಿದುಕೊಂಡಿದ್ದೇನೆ. ಅದರ ಪ್ರಕಾರ ತಜ್ಞರ ಅಭಿಪ್ರಾಯಕ್ಕೆ ಮನ್ನಣೆ ಸಿಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇದಕ್ಕೆ ಸಂಬಂಧಪಟ್ಟ ರಾಜ್ಯ ಸಚಿವರು ಒಪ್ಪಿಗೆ ಕೊಟ್ಟಿದ್ದಾರೆ. ಅದನ್ನು ಸಮರ್ಥನೆ ಮಾಡಿ ಹೇಳುವುದಕ್ಕೆ ಸಾಧ್ಯವಿಲ್ಲವೇ ?

ಶ್ರೀ ಡಿ. ಪರಮೇಶ್ವರಪ್ಪ.—ಈ ಸಂದರ್ಭದಲ್ಲಿ ಎರಡು ಅಭಿಪ್ರಾಯಗಳು ಬಂದಿವೆ. ಕೆಳಗಡೆ ಕಟ್ಟಿದರೆ ಪ್ರಾಜೆಕ್ಟ್ ಒಳ್ಳೇದು ಇರುತ್ತದೆ ಎಂದು ಒಂದು ಅಭಿಪ್ರಾಯ. ಇನ್ನೊಂದು ಅಭಿಪ್ರಾಯ ಮೇಲ್ಗಡೆ ಕಟ್ಟಿದರೆ, ಅನುಕೂಲವಾಗುತ್ತದೆಂದು, ಕೆಳಗಡೆ ಸೈಟಿನಲ್ಲಿ ಕಟ್ಟಿದರೆ ಒಳ್ಳೆಯದಾಗುತ್ತದೆ ಎಂದು ಅಭಿಪ್ರಾಯಪಟ್ಟ ತಜ್ಞರು ಈಗ ಇಲ್ಲ, ಅವರ ಬದಲು ಬೇರೆಯವರು ಬಂದಿದ್ದಾರೆ. ಅದನ್ನೆಲ್ಲಾ ಪುನರ್‌ವಿಮರ್ಶೆ ಮಾಡಬೇಕೆಂದು ಚೀಫ್ ಇಂಜಿನಿಯರಿಗೆ ಆದೇಶ ಕೊಟ್ಟಿದ್ದೇವೆ. ಅವರು ರಿಪೋರ್ಟ್ ಕಳಿಸಿದ ನಂತರ, ಚೀಫ್ ಇಂಜಿನಿಯರ್ ಅಭಿಪ್ರಾಯದಂತೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಜಿ. ಟಿ. ಗೋವಿಂದ ರೆಡ್ಡಿ.—ಈಗ ಬ್ಯಾಲದ ಕೆರೆಯನ್ನು ಎಷ್ಟು ಚೀಫ್ ಇಂಜಿನಿಯರ್ಸ್ ಪರಿಶೀಲನೆ ಮಾಡಿದ್ದಾರೆ ? ಅವರ ಅಭಿಪ್ರಾಯವೇನು ?

ಶ್ರೀ ಡಿ. ಪರಮೇಶ್ವರಪ್ಪ.—1964 ನೇ ಇಸವಿಯಲ್ಲಿ ಶ್ರೀ ಬಾಳೆಕುಂದ್ರಿಯವರು ಪರಿಶೀಲನೆ ಮಾಡಿದ್ದಾರೆ. ಅವರ ಅಭಿಪ್ರಾಯದ ಪ್ರಕಾರ ಕೆಳಗಡೆ ಸೈಟಿನಲ್ಲಿ ಕಟ್ಟಿದರೆ ಅನುಕೂಲವಾಗುತ್ತದೆಂದು ಅಭಿಪ್ರಾಯ ಪಟ್ಟಿದ್ದಾರೆ. ಈ ಅಭಿಪ್ರಾಯವನ್ನು ಸಮರ್ಥನೆ ಮಾಡುವುದಕ್ಕೆ ಮತ್ತೊಮ್ಮೆ

† Indicates that the speeches or remarks have not been revised by the member concerned.

ಸರಿಯಾದ ಮಾಹಿತಿಗಳನ್ನು ತೆಗೆದುಕೊಳ್ಳುವುದಕ್ಕೆ ಈಗಿರತಕ್ಕಂತ ಚೀಫ್ ಇಂಜಿನಿಯರ್ ಪರಿಶೀಲನೆ ಮಾಡಿ ರಿಪೋರ್ಟು ಕಳಿಸಬೇಕೆಂದು ಆದೇಶ ಕೊಟ್ಟಿದ್ದೇವೆ. ಅದು ಇನ್ನೂ ಸರ್ಕಾರಕ್ಕೆ ಬಂದಿಲ್ಲ.

1-30 P.M.

ಶ್ರೀ ಎಸ್. ಶಿವಪ್ಪ.—ಒಬ್ಬ ಚೀಫ್ ಇಂಜಿನಿಯರು, ತಜ್ಞರು ಕೊಟ್ಟ ಅಭಿಪ್ರಾಯಕ್ಕೆ ಸರ್ಕಾರ ಪ್ರಶಸ್ತಿ ಕೊಡುವ ಬದಲು ಅದು ಬೇಡ ಬೇರೆ ಕಡೆ ಕೆರೆಯನ್ನು ಕಟ್ಟಬೇಕು ಎಂದು ರಾಜಕೀಯ ಒತ್ತಾಯದ ಹಿನ್ನಲೆಯಲ್ಲಿ ಹೋಗತಕ್ಕದ್ದು ಸರಿಯೇ ?

ಶ್ರೀ ಡಿ. ಪರಮೇಶ್ವರಪ್ಪ.—ಅದರಲ್ಲಿ ರಾಜಕೀಯ ಒತ್ತಾಯ ಎಳ್ಳಷ್ಟೂ ಇಲ್ಲ. ಪ್ರಜಾ ಪ್ರಭುತ್ವ ಸರ್ಕಾರದಲ್ಲಿ ಅಭಿಪ್ರಾಯವನ್ನು ಸೂಚನೆ ಮಾಡುವುದಕ್ಕೆ ಎಲ್ಲರಿಗೂ ಹಕ್ಕು ಇರುತ್ತದೆ. ಅದರಂತೆ ಅವರೂ ಸೂಚನೆ ಮಾಡಿದ್ದಾರೆ. ಈ ಸ್ಥಳ ಬಿಟ್ಟು ಬೇರೆ ಸ್ಥಳದಲ್ಲಿ ಕೆರೆ ಕಟ್ಟಿದರೆ ಅದರಿಂದ ಹೆಚ್ಚಿಗೆ ಅನುಕೂಲವಾಗುತ್ತದೆ ಎಂದು ಕೆಲವರು ಸೂಚನೆ ಮಾಡಿರುವುದರಿಂದ ಎರಡನೆಯ ಕಡೆ ಸ್ಥಳವನ್ನು ಪರಿಶೀಲನೆ ಮಾಡುತ್ತಿದ್ದಾರೆ.

ಶ್ರೀ ಎಂ. ಎನ್. ರಾಮಣ್ಣ.—ಹಿಂದೆ ಪಿ. ಡಬ್ಲ್ಯು. ಡಿ. ಮಂತ್ರಿಗಳಾಗಿದ್ದಂತಹ ಒಬ್ಬರು ಮಂತ್ರಿಗಳು ಜನತಾಭಿಪ್ರಾಯ ಮತ್ತು ಅಲ್ಲಿರುವ ಎಂ. ಎಲ್. ಎ. ಗಳು ಮತ್ತು ತಾಲ್ಲೂಕು ಬೋರ್ಡಿನ ಪ್ರೆಸಿಡೆಂಟರ ಅಭಿಪ್ರಾಯವನ್ನು ತೆಗೆದುಕೊಳ್ಳಬೇಕು ಎಂದು ಆಜ್ಞೆ ಮಾಡಿ ಕಳುಹಿಸಿದ್ದು ನಿಜವೇ ? ಈ ಪ್ರಶ್ನೆಯನ್ನು ಕಳುಹಿಸಿರತಕ್ಕ ಮಾನ್ಯ ಸದಸ್ಯರು ಕಾಗದ ಬರೆದು ಈ ಬಗ್ಗೆ ಜನಾಭಿಪ್ರಾಯ ತೆಗೆದುಕೊಳ್ಳಬಾರದು ಎಂದು ಟೆಲಿಗ್ರಾಂ ಕಳುಹಿಸಿದ ಮೇಲೆ ಜನಾಭಿಪ್ರಾಯವನು ತೆಗದುಕೊಳ್ಳದೇ ಇರುವುದು ನಿಜವೇ ?

ಶ್ರೀ ಡಿ. ಪರಮೇಶ್ವರಪ್ಪ.—ಈ ವಿಷಯದಲ್ಲಿ ಜನಾಭಿಪ್ರಾಯ ತೆಗೆದುಕೊಳ್ಳುತ್ತೇವೆ. ಅದರ ಜೊತೆಗೆ ತಜ್ಞರ ಅಭಿಪ್ರಾಯವನ್ನೂ ಪರಿಶೀಲನೆ ಮಾಡುತ್ತೇವೆ.

ಶ್ರೀ ಎಂ. ಎನ್. ರಾಮಣ್ಣ.—ಸರ್ಕಾರದವರು ಜನಾಭಿಪ್ರಾಯವನ್ನು ತೆಗೆದುಕೊಳ್ಳಬಾರದು ಎಂದು ಈ ಪ್ರಶ್ನೆಯನ್ನು ಕಳುಹಿಸಿರತಕ್ಕ ಸದಸ್ಯರು ಟೆಲಿಗ್ರಾಮ್ ಕಳುಹಿಸಿರುವುದು ನಿಜವೇ ?

Sri D. PARAMESWARAPPA.—There is no such thing on record.

ಶ್ರೀ ಎಚ್. ಎನ್. ನಂಜೇಗೌಡ.—1964 ನೇ ಇಸವಿಯಲ್ಲಿ ಶ್ರೀಮಾನ್ ಬಾಳೆಕುಂದ್ರಿಯವರು ಕೆಳಗಡೆ ಸ್ಪೈಟಿನಲ್ಲಿ ಕೆರೆಯನ್ನು ಕಟ್ಟಬೇಕು ಎಂದು ತೀರ್ಮಾನವನ್ನು ಕೊಟ್ಟಿದ್ದಾರೆ ಎಂದು ಮಾನ್ಯ ಮಂತ್ರಿಗಳು ಹೇಳಿದರು ಶ್ರೀಮಾನ್ ಬಾಳೆಕುಂದ್ರಿಯವರು ಕೊಟ್ಟ ಅಭಿಪ್ರಾಯದ ಬಗ್ಗೆ ಅವರ ದಕ್ಷತೆಯ ಬಗ್ಗೆ, ಅವರ ಪ್ರಾಮಾಣಿಕತೆಯ ಬಗ್ಗೆ ಶಂಕೆಪಟ್ಟು ಆ ಕೆರೆಯನ್ನು ಕಟ್ಟುವ ಬಗ್ಗೆ ಬೇರೆ ಚೀಫ್ ಇಂಜಿನಿಯರು ಅಭಿಪ್ರಾಯ ಕೊಡಬೇಕೆಂದು ಕೇಳಿದ್ದೀರಾ ?

ಶ್ರೀ ಡಿ. ಪರಮೇಶ್ವರಪ್ಪ.—ಯಾವ ಶಂಕೆಪಡುವುದಕ್ಕೂ ಅವಕಾಶವಿಲ್ಲ. ಶ್ರೀಮಾನ್ ಬಾಳೆಕುಂದ್ರಿಯವರ ಬಗ್ಗೆ ಶಂಕೆಪಡುವುದಕ್ಕೆ ಅವಕಾಶವಿಲ್ಲ. ಆದರೆ ಇನ್ನೊಂದು ಕಡೆಯ ಅಭಿಪ್ರಾಯ ಬಂದಿರುವುದರಿಂದ ಅದನ್ನೂ ಕೂಡ ಪರಿಶೀಲನೆ ಮಾಡುವ ಪ್ರಸಂಗ ಬಂದಿರುವುದರಿಂದ ಸ್ವಲ್ಪ ಅದು ವಿಳಂಬವಾಗಿದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಆ ಬಗ್ಗೆ ಚೀಫ್ ಇಂಜಿನಿಯರು ಅಭಿಪ್ರಾಯ ಕೊಟ್ಟಮೇಲೆ ನಮ್ಮ ಜಿಲ್ಲೆಯಿಂದ ಬಂದಿರತಕ್ಕ ಉಪಸಚಿವರು ಮುಖ್ಯ ಮಂತ್ರಿಗಳಿಗೆ ಕಾಗದ ಬರೆದು ಆ ಫೈಲು ತರಿಸಿಕೊಂಡು ಆ ಒಂದು ತೀರ್ಮಾನವನ್ನು ವಾಪಸ್ಸು ಕಳುಹಿಸಿ ಎಂದು ಹೇಳಿದಮೇಲೆ ಮುಖ್ಯ ಮಂತ್ರಿಗಳು ಉಪಸಚಿವರ ಒತ್ತಾಯಕ್ಕೆ ಒಳಗಾಗಿ ಬೇರೆ ಚೀಫ್ ಇಂಜಿನಿಯರನ್ನು ಕಳುಹಿಸಿ ಹಿಂದಿನ ಅಭಿಪ್ರಾಯವನ್ನು ಬದಲಾವಣೆ ಮಾಡುವ ಕ್ರಮ ಸರಿಯೇ ?

ಶ್ರೀ ಜಿ. ತಮ್ಮಣ್ಣ (ರೇಷ್ಮೆ ಶಾಖೆಯ ಉಪಮಂತ್ರಿಗಳು).—ಈ ವಿಚಾರದಲ್ಲಿ ನಾನು ಮುಖ್ಯ ಮಂತ್ರಿಗಳ ಜೊತೆಯಲ್ಲಿ ಮಾತನಾಡಿಲ್ಲ. ನಾನು ಮಂತ್ರಿಯಾಗುವುದಕ್ಕೆ ಮುಂಚೆಯೇ ಈ ಫೈಲು ವರ್ಕ್‌ಔಟ್ ಆಗಿದೆ.

(*Interruptions*)

Sri H. N. NANJE GOWDA.—Does the hon. Minister mean to say that technical opinion is subordinate to political opinion ? How can there be two technical opinions ? If the Chief Engineer is an inefficient man, Government must take action against him.

ಶ್ರೀ ಡಿ. ಪರಮೇಶ್ವರಪ್ಪ.—ಇಲ್ಲಿ ಎರಡು ಕಡೆ ಕೆರೆಯನ್ನು ಕಟ್ಟಬೇಕೆಂದು ಎರಡು ಅಭಿಪ್ರಾಯಗಳು ಬಂದಿವೆಯೆಂದು ಈಗಾಗಲೇ ಮಾನ್ಯ ಸದಸ್ಯರಿಗೆ ಹೇಳಿದೆ. ಒಂದನೇ ಅಭಿಪ್ರಾಯದ ಪ್ರಕಾರ ಕೆಳಗಡೆ ಕಟ್ಟಬೇಕೆಂದು ಇದೆ. ಈ ರೀತಿ ಕೆಳಗೆ ಕೆರೆ ಕಟ್ಟಿದರೆ ಬಹಳ ಅನಾನುಕೂಲವಾಗುತ್ತದೆ, ಮೇಲ್ಗಡೆ ಕಟ್ಟಬೇಕು ಎಂದು ಇನ್ನೊಂದು ಅಭಿಪ್ರಾಯ ಇದೆ. ಈ ಎರಡು ಅಭಿಪ್ರಾಯಗಳನ್ನು ಪರಿಶೀಲನೆ ಮಾಡಬೇಕಾಗಿದೆ. ಸಲಹೆ ಮಾಡಿದ್ದಾರೆಂದು ಮನ್ನಣೆ ಕೊಡುವುದಕ್ಕಾಗುವುದಿಲ್ಲ. ಯಾವ ಭಾಗದಲ್ಲಿ ಕಟ್ಟಿದರ ಹೆಚ್ಚು ಉಪಯೋಗವಾಗುತ್ತದೆ ಎಂಬುದನ್ನು......

ಶ್ರೀ ಎನ್. ಹುಚ್ಚಮಾಸ್ತಿಗೌಡ.—ತಜ್ಞರು ಪರಿಶೀಲನೆ ಮಾಡದೆ ಅಭಿಪ್ರಾಯ ಕೊಟ್ಟಿದ್ದಾರೆಯೇ ?

ಶ್ರೀ ಡಿ. ಪರಮೇಶ್ವರಪ್ಪ.—1961ರಲ್ಲಿ ಬಾಳೆಕುಂದ್ರಿಯವರು ಈ ಬಗ್ಗೆ ತಮ್ಮ ಅಭಿಪ್ರಾಯ ಕೊಟ್ಟಿದ್ದಾರೆ.

Sri M. N. RAMANNA.—On a point of order...........

ಅಧ್ಯಕ್ಷರು.—ಪಾಯಿಂಟ್ ಆಫ್ ಆರ್ಡರ್ ಆಗಲೀ ಕ್ಲಾರಿಫಿಕೇಷನ್ ಆಗಲಿ ಪ್ರಶ್ನೋತ್ತರ ಕಾಲದಲ್ಲಿ ಕೇಳುವ ಹಾಗಿಲ್ಲ. ಪ್ರಶ್ನೋತ್ತರ ಕಾಲವಾದಮೇಲೆ ಬೇಕಾದರೆ ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡಬಹುದು.

ಶ್ರೀ ಡಿ. ಪರಮೇಶ್ವರಪ್ಪ.—1964ರಲ್ಲಿ ಬಾಳೆಕುಂದ್ರಿಯವರು ಕೆಳಭಾಗದಲ್ಲಿ ಕೆರೆಯನ್ನು ಕಟ್ಟಬೇಕೆಂದು ಅಭಿಪ್ರಾಯ ಕೊಟ್ಟಿದ್ದರು. ಈಗ ಮೇಲ್ಭಾಗದಲ್ಲಿ ಕಟ್ಟಬೇಕೆಂದು ಜನರಿಂದ ಮನವಿಗಳು ಬಂದಿವೆ. ಈ ಬಗ್ಗೆ ಪರಿಶೀಲನೆ ಮಾಡಿ, ಎಲ್ಲಿ ಕೆರೆ ಕಟ್ಟಿದರೆ ಅನುಕೂಲ ಎಂಬುದನ್ನು ತಜ್ಞರ ಮೂಲಕ ತಿಳಿದುಕೊಂಡು, ಅವರ ಅಭಿಪ್ರಾಯಕ್ಕೆ ಮನ್ನಣೆ ಕೊಡುತ್ತೇವೆ.

Abolition of Octroi Tax

362. **Sri M. NAGAPPA** (Raichur).—

Will the Minister of State for Municipal Administration be pleased to state :—

(*a*) whether there is any proposal before Government to abolish the Octroi Tax ;

(*b*) if so, in how many years it will be abolished ;

(*c*) whether they are proposing any substitute income to the Local Bodies ?

Sri B. M. PATIL (Minister of State for Municipal Administration).—

(*a*) Yes.

(*b*) and (*c*) The matter is under consideration of Government.

ಶ್ರೀ ಎಂ. ನಾಗಪ್ಪ.—ಅಕ್ಟ್ರಾಯಿ ರದ್ದು ಮಾಡುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿರುವುದು ಸ್ವಾಗತಾರ್ಹವಾಗಿದೆ. ಆದರೆ ಅಕ್ಟ್ರಾಯನ್ನು ಸೇಲ್ಸ್ ಟ್ಯಾಕ್ಸ್‌ನಲ್ಲಿ ಸೇರಿಸುತ್ತಾರೆಂದು ಕೇಳಿದ್ದೀನಿ, ಈ ಬಗ್ಗೆ ತಮ್ಮ ಅಭಿಪ್ರಾಯ ಏನಿದೆ ?

† ಶ್ರೀ ಬಿ. ಎಂ. ಪಾಟೀಲ್.—ಅಕ್ರಾಯಿಯನ್ನು ತೆಗೆದುಹಾಕಬೇಕೇ ಅಥವಾ ಬಿಡಬೇಕೇ ಎಂಬ ಬಗ್ಗೆ ಕೊನೆಯ ನಿರ್ಧಾರವನ್ನು ಕೈಗೊಂಡಿಲ್ಲ. ಇದು ಸರ್ಕಾರದ ಪರಿಶೀಲನೆಯಲ್ಲಿ ಇದೆ. ಆದಕಾರಣ ಅಕ್ರಾಯಿಯನ್ನು ಸೇಲ್ಸ್ ಟ್ಯಾಕ್ಸ್‌ನಲ್ಲಿ ಸೇರಿಸಬೇಕೇ ಅಥವಾ ಬಿಡಬೇಕೇ ಎಂಬ ಪ್ರಶ್ನೆ ಉದ್ಭವಿಸುವುದಿಲ್ಲ.

(7–8 ಜನ ಸದಸ್ಯರುಗಳು ಪ್ರಶ್ನೆ ಕೇಳಲು ಎದ್ದು ನಿಂತರು)

Mr. SPEAKER.—Next question.

Sri M. NAGAPPA.—I rise on a point of order, Sir.

Mr. SPEAKER.—Point of order can be raised after the questio Hour.

Sri M. NAGAPPA.—I have put only one supplementry and I must be allowed to put two more supplementaries.

Mr. SPEAKER.—I have called the next question and I cannot allow any more supplementaries.

Sri M. NAGAPPA.—I can quote instances where in the past even after calling the next question supplementaries have been allowed. I therefore request that I may be allowed to put two more Supplementries.

Mr. SPEAKER.—I call upon Sri Venkatagiriappa to put the next question.

(Some Hon. Members stood up to put supplementaries)

Sri M. NAGAPPA.—Please excuse me, Sir. I may be permitted to put one or two supplementaries.

ಅಧ್ಯಕ್ಷರು.—ಪ್ರಶ್ನೆಗಳು ಹೆಚ್ಚಾಗಿವೆ. ಈಗ ಬೇಡಿ ತಮಗೆ ಬೇಕಾದರೆ ಅರ್ಧ ಗಂಟೆ ಕಾಲದ ಡಿಸ್‌ಕಷನ್‌ಗೆ ಅವಕಾಶ ಕೊಡುತ್ತೇನೆ.

Sri M. NAGAPPA.—I do not want to take half-an-hour more on this.

Mr. SPEAKER.—I do not go back upon my decision ದಯವಿಟ್ಟು ಸದ್ಯಕ್ಕೆ ಕೂಡ್ರಿ.

ಸದಾಶಿವಪ್ಪ ಪಾಟೀಲ್.—ಇದು ಲೋಕಲ್ ಪ್ರಶ್ನೆಯೋ ಅಲ್ಲವೋ ತಾವೇ ಹೇಳಿ. ಇದರ ಬಗ್ಗೆ ಹಿಂದೆ ಒಮ್ಮೆ ಹೇಳಿದ್ದೀರಿ.

(Interruptions)

Mr. SPEAKER.—I have called the the next Question. I had stated that for question of local importance I would permit one or two supplementaries. I had permitted one.

ಶ್ರೀ ವಾಟಾಳ್ ನಾಗರಾಜ್.—ಮತ್ತೊಂದು ಸಪ್ಲಿಮೆಂಟರಿ ಕೇಳಲು ಇಲ್ಲಿ ಮಾನ್ಯ ಸದಸ್ಯರಾದ ಶ್ರೀ ನಾಗಪ್ಪನವರಿಗೆ ಅವಕಾಶ ಕೊಟ್ಟಿದ್ದರೆ ಸರಿಯಾಗುತ್ತಿತ್ತು. ಇಲ್ಲಿ ಒಂದೊಂದು ಪ್ರಶ್ನೆಗೆ 20 ನಿಮಿಷಗಳವರೆಗೆ ತಾವು ಆಗಲೇ ಅವಕಾಶ ಕೊಟ್ಟಿದ್ದೀರಿ. ಒಂದೇ ಒಂದು ಸಪ್ಲಿಮೆಂಟರಿ ಎಂದರೆ ಅದು ಆಗುವುದೇ ಇಲ್ಲ.

Mr. SPEAKER.—The House should accept the decision of the Chair. Otherwise, it is impossible to finish all the questions in the list.

ಶ್ರೀ ಸದಾಶಿವಪ್ಪ ಪಾಟೀಲ್.—ಇದು ಲೋಕಲ್ ಪ್ರಶ್ನೆಯಲ್ಲ. ಬಹಳ ಮುಖ್ಯವಾದ ಪ್ರಶ್ನೆ.

ಅಧ್ಯಕ್ಷರು.—ಸದಸ್ಯರು ದಯವಿಟ್ಟು ಕೂತುಕೊಳ್ಳಬೇಕು. I do not want to give any explanation now.

Sri M. NAGAPPA.—Sir, I am following the rules and regulations. I am sorry. Allowing only one supplementary is a disgrace ; I take it as a disgrace. I should be given one or two chances.

Mr. SPEAKER.—What does the hon. the Leader of the Opposition say.

Sri S. SIVAPPA.—Sir, they say that it is a very important question. You can give chance for one or two more supplementaries.

Mr. SPEAKER.—I shall permit one supplementary to Sri Nagappa. But, this should not be taken as a precedent.

ಶ್ರೀ ಎಂ. ನಾಗಪ್ಪ.—ಆಕ್ಷಾಯಿ ತೆಗೆಯಲು ಬೇರೆ ಪ್ರಪೋಸಲ್‌ಗಳು ಬಂದಿವೆ ಎಂದು ಮಾನ್ಯ ಮಂತ್ರಿಗಳು ಇಲ್ಲಿ ಹೇಳಿದರು. ಇವನ್ನೆಲ್ಲಾ ಪೂರ್ತಿಯಾಗಿ ಪರಿಶೀಲನೆ ಮಾಡುವುದಕ್ಕೆ ಇನ್ನೆಷ್ಟು ದಿವಸಗಳು ಆಗಬಹುದು ? ಇದರ ಬಗ್ಗೆ ಆದಷ್ಟು ತೀವ್ರವಾಗಿ ನಿರ್ಣಯ ತೆಗೆದು ಕೊಳ್ಳುತ್ತೀರಾ ಹೇಗೆ ?

ಶ್ರೀ ಬಿ. ಎಂ. ಪಾಟೀಲ್.—ಇಷ್ಟೇ ದಿವಸದಲ್ಲಿ ನಿರ್ಧಾರ ತೆಗೆದುಕೊಳ್ಳಬೇಕು ಎಂದು ಹೇಳ ಲಿಕ್ಕೆ ಆಗುವುದಿಲ್ಲ ? ಇದರ ಅಂದಾಜುಗಳು ಯಾವ ಯಾವುವು ಬಂದಿವೆ ಇವನ್ನು ಸರಕಾರ ಪರಿ ಶೀಲನೆ ಮಾಡಿ ಸೂಕ್ತವಾದ ನಿರ್ಧಾರವನ್ನು ಸರಕಾರ ತೆಗೆದುಕೊಳ್ಳಬೇಕು ಎಂದು ಇದೆ. ಇಷ್ಟೇ ದಿವಸದಲ್ಲಿ ಆಗುತ್ತದೆ ಎಂದು ಈಗ ಹೇಳುವುದಕ್ಕೆ ಆಗುವುದಿಲ್ಲ.

Water Supply Schemes in Kolar District

379. Sri P. VENKATAGIRIYAPPA (Kolar).—

Will the Minister for Development be pleased to state :—

(a) the number of National Rural Water Supply Schemes taken up in Kolar District and the amount spent on the schemes;

(b) the stage of each of the incompleted works and the amount spent on them and the reasons for incompletion ;

(c) the steps taken by the Government to complete all these works and to put them into service ?

Sri P. M. NADGOUDA (Minister for Development).—

(*a*) Amount spent up to the end of November ... Rs. 13,90,798.

(*b*)—

	Name of the Scheme	Amount spent up to the end of November, 1968 (in Rupees)	The stage of scheme and the reasons for incompletion
	1	2	3
		Rs.	
1	Narasapura	30,607	Work completed. Panchayat has to execute Muchalika with M.S.E.B. for electrical service.
2	Hongenahally and Shivarapatna	37,960	At Hongenahally works are completed but not yet serviced. At Shivarapatna installation of machineries is to be done. Hongenahally and Shivarapatna form parts of single work.
3	Nembihally	24,556	Civil works completed. Service is held up for want of conversion to 50 Cycle power from 25 Cycles.
4	Holur	26,940	All works are completed except supply of power. The Village is not having power supply. The D.C., Kolar and M.S.E.B. have been addressed for arranging early power supply.
5	Peddapally	40,759	All works are completed except supply of power. The Village Panchayat is not in a position to take power supply by paying 2 MMD charges to M.S.E.B. and to make an agreement for commissioning the scheme. The D.C., Kolar has been addressed in the matter to direct V. P. for getting early supply of power.

(SRI P. M. NADGOUDA)

	1	2	3	
6	Hogalgere	11,154	Bore well is completed. Fresh agency is fixed. Work is under progress.	
7	Hampasandra	41,363	Open well is nearing completion; other works are completed. Pumping machinery is being procured.	
8	Idagur	37,172	Raising main is completed. R.C.C. Tank work and other works are under progress by fresh agency.	
9	Kurudamale	36,902	The work is completed.	
10	Madikere	13,688	The work is under progress.	Work started recently.
11	Battalahally	18,696	The work is under progress.	

(c) All efforts are being made to complete the works early.

ಶ್ರೀ ಪಿ. ವೆಂಕಟಗಿರಿಯಪ್ಪ.—ಸ್ವಾಮಿ, ಈ ರೂರಲ್ ವಾಟರ್ ಸಪ್ಲೈ ಸ್ಕೀಂಗೆ ಇದುವರೆಗೆ 13,90,798 ರೂಪಾಯಿಗಳು ಖರ್ಚುಮಾಡಿದ್ದೇವೆ ಎಂದು ಹೇಳಿದ್ದೀರಿ. ಆದರೆ ಇದುವರೆಗೆ ಕೋಲಾರ ಜಿಲ್ಲೆಯ ಎಷ್ಟು ಹಳ್ಳಿಗಳಲ್ಲಿ ಈ ವಾಟರ್ ಸಪ್ಲೈ ಸ್ಕೀಂ ಕೆಲಸ ನಡೆಯುತ್ತಾ ಇದೆ ?

† ಶ್ರೀ ಬಿ. ಎಲ್. ಗೌಡ.—ಕೋಲಾರ ಜಿಲ್ಲೆಯ ಗ್ರಾಮಾಂತರ ಪ್ರದೇಶಗಳಲ್ಲಿ 38 ಸಾವಿರ ರೂಪಾಯಿ ಮಂಜೂರಾಗಿದೆ. ಅದರಲ್ಲಿ 24 ಪ್ರಾರಂಭವಾಗಿದೆ ಮತ್ತು 3 ರೆಡಿ ಆಗಿದೆ. ಇನ್ನು ಕೆಲವೇ ದಿವಸದಲ್ಲಿ ಅವುಗಳನ್ನು ಗ್ರಾಮಪಂಚಾಯಿತಿಯವರೇ ವಹಿಸಿಕೊಳ್ಳುತ್ತಾರೆ. ಇನ್ನು ಬಡ್ಜೆಟ್‌ನಲ್ಲಿ ಕೊಟ್ಟಿರುವ ಹಾಗೆ ಬಾಕಿ ಕೆಲಸಗಳು ಹಂತಹಂತವಾಗಿ ಮುಂದುವರಿಯುತ್ತದೆ.

ಶ್ರೀ ಪಿ. ವೆಂಕಟಗಿರಿಯಪ್ಪ.—ಸುಮಾರು 5–6 ವರ್ಷದಿಂದಲೂ ಕೆಲಸ ನಡೆಯುತ್ತಾ ಇದೆ. ಇದು ನಿಧಾನವಾಗಿ ಆಗುವುದಕ್ಕೆ ಕಾರಣ ಏನು ? ಇದಕ್ಕೆ ಕಂಟ್ರಾಕ್ಟರ್ ಕಾರಣವೇ ಅಥವಾ ಸರ್ಕಾರ ಕಾರಣವೇ ?

ಶ್ರೀ ಬಿ. ಎಲ್. ಗೌಡ.—ಗ್ರಾಮಪಂಚಾಯಿತಿಯವರು ವಿದ್ಯುಚ್ಛಕ್ತಿ ಮಂಡಲಿಗೆ ಹಣ ಕಟ್ಟಿಲ್ಲ. ಅದರಿಂದ ನಿಂತುಹೋಗಿದೆ. ಕಂಟ್ರಾಕ್ಟರ್ ದೆಸೆಯಿಂದ ಎರಡು ನಿಂತುಹೋಗಿದೆ.

ಶ್ರೀ ಎ. ಮುನಿಯಪ್ಪ.—ಹಂಪಸಂದ್ರ ಗ್ರಾಮಕ್ಕೆ 41,367 ರೂಪಾಯಿಯನ್ನು ಬಾವಿ ತೋಡುವುದಕ್ಕೆ ಖರ್ಚುಮಾಡಿದ್ದೀರಿ. ನನ್ನ ತಾಲ್ಲೂಕಿನಲ್ಲಿ ಎರಡು ಇವೆ. ಅದರಲ್ಲಿ ಯಾವುದು ಸ್ವಾಮಿ ?

ಶ್ರೀ ಬಿ. ಎಲ್. ಗೌಡ.—ಯಾವ ತಾಲ್ಲೂಕಿನಲ್ಲಿ ಎನ್ನುವ ವಿವರ ಇಲ್ಲ.

ಶ್ರೀ ಎ. ಮುನಿಯಪ್ಪ.—ಹಂಪಸಂದ್ರದಲ್ಲಿ ನೀರೆತ್ತುವ ಯಂತ್ರಗಳನ್ನು ತರಿಸಿಕೊಳ್ಳುತ್ತಿದ್ದಾರೆ. 2–3 ವರ್ಷದಿಂದಲೂ ಕೆಟ್ಟು ಹೋಗಿರುವ ಯಂತ್ರ ಅಲ್ಲೇ ಇದೆ. ಅದನ್ನು ಸರಿಮಾಡಿಸದೇ ಹೊಸದಾಗಿ ತರಿಸಿಕೊಳ್ಳುವುದಕ್ಕೆ ಕಾರಣ ಏನು ಸ್ವಾಮಿ ?

ಶ್ರೀ ಬಿ. ಎಲ್. ಗೌಡ.—ಅದರ ವಿವರಗಳು ಇಲ್ಲ.

Development of Minor Ports

464. Sri P. V. AITHALA (Suratkal).—

Will the Minister of State for Fisheries and Ports be pleased to state :—

(*a*) when the feasibility report for the development of the minor Ports in Mysore State was submitted to Government by the Indo-Pol and Yugoslav Expert Committees ;

(*b*) the main features of these feasibility reports ;

(*c*) the action taken by the Government thereon ?

Sri H. C. LINGA REDDY (Minister of State for Fisheries and Ports).—

(*a*) The feasibility report for Mangalore, Malpe, Coondapur, Karwar, Honavar and Tadri was presented by M/s. Indopol Limited on 3rd October 1968.

The preliminary project report on Malpe to be developed as a Fishing Harbour was furnished by M/s. Invest-Import of Yugoslavia in July 1967.

(*b*) The Report recommends development of Mangalore, Malpe, Honavar and Tadri as Fishing Harbours and Coondapur and Karwar as Fishing-*cum*-Cargo Harbours at a total estimated cost of Rs. 121.7 crores.

The preliminary project report on Malpe given by the Yugoslav Firm envisages the development of Malpe as a Fishing Harbour at an estimated cost of Rs. 9.37 crores.

(*c*) A Committee to review the feasibility report presented by M/s. Indopol constituted by Government is examining the report.

In regard to the Yagoslov report on Malpe, the Government got the alternatives suggested in the report model tested at the Engineering Research Station, K. R. Sagar and came to the decision that the first solution was acceptable. The decision was communicated to the Government of India and discussions were held with officials of the Ministries of Food and Agriculture and Transport. Details of the Project as required by the Government of India have been worked out and are being forwarded to the Government of India.

Sri P. V. AITHALA.—Sir, I want to know whether the Centre has given administrative sanction for the development of these ports ?

† Sri H. C. LINGA REDDY.—The State Government has decided, on the advice given by the Expert Committee, that we should go ahead with Malpe and Honavar projects. We have provided moneys and we have asked for Central assistance. They dave to provide funds the Centrally sponsored schemes.

Sri P. V. AITHALA.—Sir, I wanted to know whether the Centre has given administrative sanction for these works ?

Sri H. C. LINGA REDDY.—It is not necessary that we should obtain the administrative sanction of the Central Government before we take up the work in the Minor Ports Department here.

Sri P. V. AITHALA.—May I know whether foundation stone has been laid for any port other than Malpe port ?

Sri H. C. LINGA REDDY.—Yes, Sir. Mangalore National Harbour and for Honnavar.

ಶ್ರೀ ಎಂ. ಎಂ. ಜಾಲಿಸಟ್ಗಿ.—ಸ್ವಾಮಿ, ಹೊನ್ನಾವರ ಮಲ್ಪೆ ಪೋರ್ಟ್ ಕೆಲಸ ಯಾವಾಗ ಶುರುವಾಗುತ್ತದೆ ?

ಶ್ರೀ ಹೆಚ್. ಸಿ. ಲಿಂಗಾರೆಡ್ಡಿ.—ಅದರ ಕೆಲಸ ಈಗಾಗಲೇ ಶುರುವಾಗಿದೆ. ಬೋರಿಂಗ್ ಡ್ರಿಲ್ಲಿಂಗ್ ಕೆಲಸವನ್ನು ಕೆಲಸಗಾರರು ಪ್ರಾರಂಭಿಸಿದ್ದಾರೆ.

ಶ್ರೀ ಡಿ. ಎಸ್. ನಾಡಕರ್ಣಿ.—ಇದಕ್ಕೆ ತಜ್ಞರ ಕಮಿಟಿ ಒಂದನ್ನು ನೇಮಿಸಿದ್ದೇವೆ ಎಂದು ತಾವು ಹೇಳಿದಿರಿ. ಆ ತಜ್ಞರ ಕಮಿಟಿ ಮೆಂಬರುಗಳು ಯಾರು ಯಾರು ಸ್ವಾಮಿ ?

ಶ್ರೀ ಹೆಚ್. ಸಿ. ಲಿಂಗಾರೆಡ್ಡಿ.—ತಜ್ಞರ ಸಮಿತಿಯಲ್ಲಿರುವವರ ಹೆಸರು ಇಲ್ಲಿಲ್ಲ. ಎಕ್ಸ್‌ಚೀಫ್ ಇಂಜನಿಯರ್ ಆಫ್ ರೈಲ್ವೇಸ್, ಸೆಕ್ರಟರಿ, ಪಿ.ಡಬ್ಲ್ಯು.ಡಿ., ಆಗ್ರಿಕಲ್‌ಚರ್ ಅಂಡ್ ಫಾರೆಸ್ಟ್ ಇನ್ನೂ ಇತರ ಸೆಕ್ರಟರಿಗಳು, ಆಫೀಸರ್ಸ್ ಇದ್ದಾರೆ.

ಶ್ರೀ ಎಸ್. ವಿ. ಅಗ್ನಿಹೋತ್ರಿ.—ತಜ್ಞರ ಸಮಿತಿಯಲ್ಲಿ ಎಂ. ಎಲ್. ಎ. ಗಳ ಹೆಸರು ಕಂಡು ಬಂದಿಲ್ಲ. ಅದರಲ್ಲಿ ಎಂ. ಎಲ್. ಎ. ಗಳು ಇದ್ದಾರೆಯೇ ಸ್ವಾಮಿ ?

ಶ್ರೀ ಹೆಚ್. ಸಿ. ಲಿಂಗಾರೆಡ್ಡಿ.—ಅದರಲ್ಲಿ ಆಫೀಸರ್ಸ್ ಎಕ್ಸ್‌ಪರ್ಟ್ಸ್ ಇದ್ದಾರೆ. ನಾನ್ ಅಫಿಷಿಯಲ್ಸ್ ಯಾರೂ ಇಲ್ಲ.

Smt. WINNIFRED F. FERNANDES.—In answer to (*b*) it is stated that the Report recommends development of Coondapur as fishing-*cum*-Cargo Harbour. Has this work been taken up and if so, at what stage it is ?

Sri H. C. LINGA REDDY.—They have given the feasibility report and we have entrusted the examination of the report to a Sub-Committee. The Expert Committee has suggested that we may take up Malpe and Honnavar Fishing projects in the first instance. We have to find money before we take the other harbours, fishery or cargo.

ಶ್ರೀ ಬಿ. ಎಂ. ಇದಿನಬ್ಬ.—ಸ್ವಾಮಿ, ಹೊನ್ನಾವರ ಮಲ್ಪೆ ಬಂದರುಗಳ ಶಂಕುಸ್ಥಾಪನೆ ಆಗಿದೆ. ಅವು ಕಾರ್ಯರೂಪಕ್ಕೆ ಬರಲು ಎಷ್ಟು ಸಮಯ ಬೇಕಾಗುತ್ತದೆ ?

ಶ್ರೀ ಹೆಚ್. ಸಿ. ಲಿಂಗಾರೆಡ್ಡಿ.—ಮಳೆಗಾಲ ಪ್ರಾರಂಭವಾಗುವ ಮೊದಲು ಡ್ರಿಲ್ಲಿಂಗ್ ಮತ್ತು ಬೋರಿಂಗ್ ಇವೆರಡೂ ಮುಗಿಸಿದ ಮೇಲೆ ಬಹುಶಃ ಇನ್ನು ಎರಡು ವರ್ಷದಲ್ಲಿ ಮುಗಿಸಬೇಕು ಎನ್ನುವ ಒಂದು ಅಂದಾಜು ಇದೆ.

Scarcity Relief Works.

508. Sri K. H. PATIL (Gadag).—

Will the Minister for Revenue be pleased to state :—

(a) the number of scarcity relief works undertaken in Gadag Taluk and the progress at which they stand today ;

(b) the expenditure involved in each of the above works ?

Sri H. V. KOUJALGI (Minister for Revenue).—

(a) and (b). The required information is furnished in the Statement appended.

(SRI H. V. KOUJALGI)

APPENDIX

Sl. No.	Name of the Work undertaken	Name of the Agency	Estimated cost of work	Whether completed	Whether still in progress and if so, present stage	Total expenditure incurred on the work
1	2	3	4	5	6	7
			Rs.			Rs.
1	Construction of road from Anthur Bantur to Kurthkoti to be extended to Harti.	P.W.D.	56,250	Completed except murum casing	No	38,830
2	Construction of road from Huilgol to Gujamagadi.	do	56,900	do	do	27,635
3	Construction of road from Kanavi-Hosur to join Beladhadi Sortur Road.	do	8,124	do	do	5,964
4	Construction of road from Lakkundi to Kanaginhal.	do	61,350	do	do	30,590
5	Construction of road from Asundi to join Hubli-Gadag road.	do	6,993	do	do	3,482
6	Construction of road from Halligudi to Timmapur.	do	19,500	do	do	6,383
7	Construction of road from Kotamuchagi to Harlapur.	do	1,11,313	do	do	54,162

8	Construction of road from Chikkahandigol to join K. B. Road *via* Shyagoti-Dundur.	P.W.D.	60,000	Work stopped due to land problem.	No	4,687
9	Construction of road from Huilgol to Hombal.	do	1,06,282	Completed except murum casing.	do	39,061
10	Construction of road from Gadag to Balaganur.	do	1,52,333	do	do	59,982
11	Construction of road from Kiratageri to join Huilgol road near Hirekoppa.	do	15,615	do	do	5,183
12	Construction of road from Shyagoti to Hulkoti Railway Station	do	25,245	Work completed	do	9,045
13	Construction of road from Kotamuchagi to Timmapur.	do	1,13,300	Completed except murum casing.	do	32,921
14	Construction of road from Sortur to Mahalingapur.	do	37,460	Work completed	do	20,951
15	Construction of road from Baladhadi to Nabhapur to be extended up to Kabulayatkatti.	do	79,000	do	do	5,405
16	Construction of road from Hulkoti to Harti.	do	88,700	Work completed only 7 K.Ms. and further work is held up for want of lands.	do	14,505

(Sri H. V. Koujalgi)

1	2	3	4	5	6	7
			Rs.			Rs.
17	Construction of road from Antur Bentur to Chinchali *via* Neelagund.	P,W.D	71,478	Further work stopped due to land problem	No	7,029
18	Construction of road from Narasapur to Nagasamudra Road.	do	19,129	Work completed except murum casing.	do	8,595
19	Construction of road from Shirahatti to Yelishirur Road.	do	18,000	do	do	13,482
20	Construction of road from Madaganur to Tuppadakurahatti Road.	do	30,000	do	do	3,975
21	Construction of road from Balahod to Madaganur Road.	do	40,000	do	do	927-50
22	Improvements to Lingadhal to Datnal Road.	do	24,515	do	do	2,843
23	Construction of Gadag Sambhapur Road.	do	28,791	Earth work completed murum casing is in progress.	Murum casing is in progress.	4,868
24	Construction of road from Advisomapur to its Lamani Tanda.	do	38,034	do	do	3,469
25	Construction of road from Kalasapur to Nagavi Road.	do	18,500	Earth work completed.	Murum casing is in progress.	4,582

26	Construction of road from Sortur to Attikatti.	P.W.D.	7,837	do	Murum casing is in progress	7,247
27	Construction of road from Malasamudra to Asundi Road.	do	6,760	do		4,383
28	Construction of road from Gadag-Hombal Road.	do	49,361	do	do	14,378
29	Construction of road from Hombal-Lingadhal road.	do	37,157	do	do	868
30	Construction of road from 9/3 of Gadag-Badami road join Neeralagi.	do	16,360	do	do	3,553
31	Construction of road Lingadhal to Balaganur road.	do	28,384	do	do	5,861
32	Construction of road Balaganur to Gawarwad Road.	do	24,000	do	do	5,140

Grant-in-aid to Local Bodies for Relief Works :

1	Desilting of tank at Lakkundi	T. D. B. Gadag	9,920	Completed	...	9,480–85
2	Desilting of tank at Timmapur	do	6,580	do	...	6,448–75
3	Desilting of tank at Hombal R.S. No. 2	do	2,998	do	...	2,980–00
4	Desilting of tank at Kotamuchagi	do	8,167	do	...	7,783–00
5	Desilting of tank at Lakkundi (further deepening).	do	8,750	do	...	8,320–65

(Sri H. V. Koujalgi)

1	2	3	4	5	6	7
		T .D. B.	Rs.			Rs.
6	Desilting of tank at Hombal R.S. No. 326	Gadag	8,600	completed	...	8,230-00
7	Desilting of tank at Balaganur	do	9,260	do	...	8,830-00
8	Desilting of tank at Lingadhal	do	8,144	do	...	4,577-00
9	Desilting of tank at Balhoda	do	9,830	do	...	9,374-00
10	Desilting of tank at Hatalgeri	do	2,981	do	...	2,911-77
11	Desilting of tank at Hulkoti (I Stage)	do	9,800	do	...	9,775-00
12	Desilting of tank at Binkadakatti (I Stage)	do	9,990	do	...	9,975-00
13	Desilting of tank at Hulkoti (II Stage)	do	9,720	do	...	9,500-00
14	Desilting of tank at Lingadhal (II layer)	do	9,720	do	...	9,262-00
15	Desilting of tank at Binkadakatti (II layer)	do	10,000	do	...	2,722-84
16	Desilting of tank at Huilgol	do	8,262	do	...	7,400-00 Rs. 3,800 has already been spent and an amount of Rs. 3,600 is to be paid.
17	Desilting of tank at Neeralgi	do	9,385	do	...	7,810-00
	Grand Total	...	13,42,158			5,75,367-37

Sri K. H. PATIL.—May I know whether the Hon. Minister is aware of the fact that the reply furnished in the appended statement in answer to my question does not contain correct information? For instance, in my own village Hulkoti the tank work has been half-done but in the reply it is stated that it has been completed. Will the hon. Minister assure this House to enquire into the matter and submit the correct information and also see that the works that are pending are completed?

Sri H. V. KOUJALGI.—Sir, on more than one occasion, it has been stated on the floor of this House that the works that are incomplete will be brought up to some stage and especially the tank works will be completed as far as possible and importance would be given to irrigation tanks.

Sri K. H. PATIL.—Sir, in regard to the tank work at Hulkoti which is incomplete and for which the concerned officers have been instructed to complete the work, will the Government see that work is completed early?

Sri H. V. KOUJALGI.—Which work should be taken up in that particular are a is left to the discretion of the Deputy Commissioner and the local committees of the district concerned. I have already said that as far as possible, all tank works will be completed.

Sugar Factories in the State

514. Sri THIRUMALADEVARAYA (Gangavathi).—

Will the Minister for Industries, Information and Publicity be pleased to state :—

(a) whether Government are aware that three Sugar Factories in the State—two in Bellary District and one in Raichur District—are placed under different zones and received Rs. 145 per quintal of sugar whereas other factories in the State are realising Rs. 161 per quintal;

(b) if so, the reason for the same;

(c) whether the State Government has recommended to the Union Government to equalise the sale of price of sugar in all the factories in the State?

Sri M. RAJASEKARA MURTHY (Minister for Industries, Information and Publicity).—

(a) Yes. These are all in Zone I. Levy price for sugar in Zone I is Rs. 139-02 and in Zone II Rs. 153-85 with effect from 1st August 1968. The rates mentioned in the question were prevailing before 1st August 1968.

(b) These prices are fixed by the Government of India according to the schedules of the Sugar Enquiry Commission.

(SRI M. RAJASEKARA MURTHY)

(c) In respect of the two sugar factories in Bellary District and one in Raichur District, the Government addressed the Government of India to rise the price of levy sugar. But the Government of India have not agreed to the proposals.

Sri THIRUMALADEVARAYA.—I want to know the basis on which the Sugar Enquiry Commission has fixed the prices ?

Sri M. RAJASEKHRA MURTHY.—The Sugar Enquiry Commission has taken into consideration the recovery of the sugar and the duration of the crushing period.

Sri THIRUMALADEVARAYA.—May I know, whether there is any difference in the quality of sugar produced by different zones ?

Sri M. RAJASEKHARA MURTHY.—Yes.

ಶ್ರೀ ಎನ್. ಎ. ಚನ್ನೇಗೌಡ.—ನವಂಬರ್ ಒಂದನೇ ತಾರೀಖಿನಿಂದ ಬೇರೆ ದರಗಳು ಜಾರಿಗೆ ಬಂದಿವೆ. ತಾವು ಕೊಟ್ಟಿರತಕ್ಕ ಬೆಲೆ 30 (ಡಿ) ಗೋ ಅಥವಾ (ಇ) ಗೋ ಎನ್ನುವುದನ್ನು ತಿಳಿಸುತ್ತೀರಾ ?

ಶ್ರೀ ಎಂ. ರಾಜಶೇಖರ ಮೂರ್ತಿ.—ನವಂಬರ್ ಒಂದರಿಂದ ರಿವೈಸ್ ಆಗಿದೆ. ಮೊದಲನೇ ಜೋನ್‌ನಲ್ಲಿ 142.66 ರೂಪಾಯಿ ಮತ್ತು ಎರಡನೇ ಜೋನ್‌ನಲ್ಲಿ 158.27 ರೂಪಾಯಿ. ಈ ದರಗಳು 30 (ಡಿ) ಗೆ ಅನ್ವಯವಾಗುತ್ತವೆ.

ಶ್ರೀ ಸದಾಶಿವಪ್ಪ ಪಾಟೀಲ್.—ಎರಡೂ ವಲಯಗಳಿಗೆ ದರಗಳಲ್ಲಿ ವ್ಯತ್ಯಾಸ ಇರಲು ಕಾರಣವೇನು ?

ಶ್ರೀ ಎಂ. ರಾಜಶೇಖರ ಮೂರ್ತಿ.—ನಾನು ಮೊದಲೇ ಹೇಳಿದಹಾಗೆ ಕೇಂದ್ರ ಸರ್ಕಾರದವರು ಸಕ್ಕರೆಯ ಬೆಲೆಯನ್ನು ನಿಗದಿ ಮಾಡುವಾಗ ಷುಗರ್ ರಿಕವರಿ ಎಷ್ಟಿದೆ, ಎಷ್ಟು ಕಾಲ ಕಾರ್ಖಾನೆ ನಡೆದಿದೆ ಎನ್ನುವುದನ್ನು ಗಮನದಲ್ಲಿಟ್ಟುಕೊಂಡು ಬೆಲೆ ನಿಗದಿ ಮಾಡುತ್ತಾರೆ. ಷುಗರ್ ಎನ್‌ಕ್ವೈರಿ ಕಮಿಷನ್ ಕೇಂದ್ರಕ್ಕೆ ಸಿಫಾರಸು ಮಾಡುವ ಕಾಲದಲ್ಲಿ ಷುಗರ್ ಟ್ರೇಡಿಂಗ್ ಇನ್‌ಸ್ಟಿಟ್ಯೂಟ್ ಕೊಯಮತ್ತೂರು ಅವರು ಮಾಡಿರುವ ಪ್ರಕಾರ 15 ಡಿಗ್ರಿ ಲ್ಯಾಟಿಟ್ಯೂಡ್‌ಗೆ ಉತ್ತರದಲ್ಲಿರುವುದು ಒಂದು ಜೋನ್ ಮತ್ತು ಅದಕ್ಕೆ ದಕ್ಷಿಣದಲ್ಲಿರುವುದು ಒಂದು ಜೋನ್ ಎಂದೂ ಮತ್ತು ಅಗ್ರೋ ಇಂಡಸ್ಟ್ರೀಸ್ ಕ್ಲೈಮ್ಯಾಟಿಕ್ ಕಂಡೀಷನ್ ಇಟ್ಟುಕೊಂಡು ಮಾಡಿದ್ದಾರೆ.

Sri R. NAGAN GOUDA.—The difference in the prices is almost 11 per cent and the differences in recovery is not as much as that of the differences in prices. The Government of Mysore which made an attempt, at one time, to induce the Government of India to equalise the prices which has not been agreed to by them. Will the Government have the matter re-examined and urge upon the Government of India to equalise the levy prices of sugar in respect of the two sugar factories in Bellary District and Raichur District respectively ?

Sri M. RAJASEKHARA MURTHY.—Government of Mysore wrote a letter to the Government of India to equalise the prices, but the Government of India has not agreed to it.

Special Taccavi Loan

535. Sri J. P. SARWESH (Serum).—

Will the Minister for Revenue be pleased to state :—

(a) whether special taccavi loan is allotted to develop the lands under the Kadlapur New Tank in Sedam Taluk, Gulbarga District;

(b) the number of persons and the amount granted under the said tank;

(c) whether some residents of Bannur, Gopanpalli were sanctioned Taccavi Loan and the same was not disbursed to them on the ground that lands were not yet transferred in their name;

(d) whether any applications have been received by Government on 27th September 1968 for the transfer of the lands;

(e) whether the local M. L. A. has made a complaint to the Tahsildar, Sedam on 3rd January 1969 that it was on account of the Patwari the transfer patta of the said land is held up;

(f) the reasons for delay in effecting the mutation of the said land?

Sri H. V. KOUJALGI (Minister for Revenue).—

(a) Yes.

(b) A sum of Rs. 26,000 has been sanctioned to 56 applicants.

(c) Yes, taccavi loans were sanctioned to the cultivators of Bannur, Gopanpalli along with the cultivators of other village under the said tank and in case of one Shri Ashappa of Bannur (G) the loan sanctioned was not disbursed as the formalities under Rule 4 (2) of the Mysore Land Improvement Loans Rules, 1966, were not completed.

(d) Yes.

(e) Yes. A spot enquiry was conducted and necessary orders were passed by the Tahsildar.

(f) On receipt of the application in the Tahsil office, the Revenue Inspector concerned was directed to effect the mutation as per rules. No delay has been observed.

Sri J. P. SARWESH.—In reply to (e) you have stated that spot enquiry was conducted and necessary orders were passed by the Tahsildar. I would like to know what are the orders?

Sri H. V. KOUJALGI.—Sir, I do not have the copy of the letter the hon'ble Member has submitted to the Tahsildar. But from the records, I can say, that Sri Ashappa of Bannur could not get the loan because his name was not on the record of rights. Therefore, mutation entries had to be made and after that was done orders were issued.

Sri J. P. SARWESH.—I have myself seen the file. The patwari is demanding about 200 rupees which Mr. Ashappa is not able to give and the mutation entry has been done in such a manner which is not at all beneficial to the applicant. How can the loan be sanctioned when there is no name on the record of rights, Sir ?

Sri H. V. KOUJALGI.—Sir, on the strength of the application presented by the hon'ble Member, an spot enquiry was conducted and mutation was done according to law and necessary orders were passed by the Tahsildar.

Allocation of Funds for Small Scale Industries

539. Sri H. B. JWALANAIAH (Hassan).—

Will the Minister for Industries, Information and Publicity be pleased to state :—

the total outlay for Small Scale Industries in IV Five Year Plan and the programme drawn up in that behalf ?

Sri A. P. APPANNA (Deputy Minister for Industries):—

A total plan outlay of Rs. 375.00 lakhs has been provided to the Small Scale Industries schemes under the IV Five Year Plan. Programmes drawn up are as follows :

(1) Model Carpentry and Smithy Centre.

(2) Leather Common Facility Centres.

(3) Strengthening the staff of Joint Director's Office and Statistical Section.

(4) Small Scale Industries in the C. D. and N. E. S. Areas.

(5) Pottery Centre, Madikebeedu.

(6) Craft Co-operative Societies.

(7) Loan to Small Scale industries (Block Loans).

(8) Grant-in-aid to Mysore Small Industries Corporation.

(9) Common Facility Centres in Industrial Estates.

(10) Quality Marking Scheme.

(11) Manufacture of Roofing Tiles, Bagepalli.

(12) Setting up of Testing Laboratory Tool Room for Small Scale Industries (Electronic and Electric Testing Laboratory).

(13) General Purpose workshop.

(14) Mechanised Briek Plant.

ಶ್ರೀ ಎಚ್. ಬಿ. ಜ್ವಾಲನಯ್ಯ.—ಮುಖ್ಯ ಮಂತ್ರಿಗಳು ಮೈಸೂರು ಇಂಡಸ್ಟ್ರಿಯಲ್ ಕೋಆಪರೇಟೀವ್ ಬ್ಯಾಂಕಿನ ಒಂದು ಸಭೆಯಲ್ಲಿ ಸುಮಾರು 14 ಕೋಟಿ ರೂಪಾಯಿಗಳನ್ನು ಸಣ್ಣ ಕೈಗಾರಿಕೆಗಳಿಗೆ ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಕೊಡುವುದಾಗಿ ಹೇಳಿದ್ದರು. ಈಗ ಅವರು ಹೇಳಿದ್ದರಲ್ಲಿ ಮುಕ್ಕಾಲು ಪರ್ಸೆಂಟಿಗಿಂತ ಕಡಮೆ ಹಣ ಒದಗಿಸಿರುವುದರಿಂದ ಇದನ್ನು ಪರಿಶೀಲಿಸುತ್ತೀರಾ ?

† ಶ್ರೀ ಎ. ಪಿ. ಅಪ್ಪಣ್ಣ.—14 ಕೋಟಿಯನ್ನು ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್, ವಿಲೇಜ್ ಇಂಡಸ್ಟ್ರೀಸ್ ಹ್ಯಾಂಡಿಕ್ರಾಫ್ಟ್ಸ್‌ಗೆ ಕೊಟ್ಟಿರುವುದು ನಿಜ.

ಶ್ರೀ ಎಚ್. ಬಿ. ಜ್ವಾಲನಯ್ಯ.—ಇಲ್ಲಿ 14 ಐಟಂ ಇವೆ. 375 ಲಕ್ಷ ರೂಪಾಯಿಗಳನ್ನು ಯಾವ ರೀತಿ ಹಂಚಲಾಗುವುದು ? ದೊಡ್ಡ ಕೈಗಾರಿಕೆಗಳಿಗೆ ಹೆಚ್ಚು ಸಹಾಯ ಮಾಡುವುದಕ್ಕಿಂತ ಸಣ್ಣ ಕೈಗಾರಿಕೆಗಳಿಗೆ ಹೆಚ್ಚು ಸಹಾಯ ಮಾಡುವುದು ಸೂಕ್ತವಲ್ಲವೇ ?

ಶ್ರೀ ಎ. ಪಿ. ಅಪ್ಪಣ್ಣ.—375 ಲಕ್ಷದಲ್ಲಿ ಸುಮಾರು 125 ಲಕ್ಷ ಸಾಲ ಮತ್ತು ಕೆಲವು ಭಾಗ ಗ್ರಾಂಟ್ ಇನ್ ಏಡ್ ಇವೆ. ಕಾರ್ಪೆಂಟ್ರಿ, ಸ್ಮಿತಿ ಮತ್ತು ಟ್ರೈನಿಂಗ್ ಪ್ರೋಗ್ರಾಂಗೆ ನಾಲ್ಕನೆಯ ಯೋಜನೆಯಲ್ಲಿ ಕಡಮೆ ಒದಗಿಸಿದೆ.

ಶ್ರೀ ಎಂ. ಎಸ್. ಕೃಷ್ಣನ್.—ನಾಲ್ಕನೆಯ ಪಂಚವಾರ್ಷಿಕ ಯೋಜನೆಯ ಒಟ್ಟು ವೆಚ್ಚ 375 ಲಕ್ಷ ಎಂದು ಹೇಳಿದೆ. ಈಗ ಪ್ರತಿ ವರ್ಷ ಒಂದು ಯೋಜನೆ ಮಾಡುತ್ತಿರುವುದರಿಂದ ಇದರಲ್ಲಿ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಸ್ಥಾನವೇನು ? ಇದಕ್ಕೆ ಎಷ್ಟು ಔಟ್‌ಲೇ ಮಾಡಿರುವುದು ?

ಶ್ರೀ ಎ. ಪಿ. ಅಪ್ಪಣ್ಣ.—1969-70 ರಲ್ಲಿ 90 ಲಕ್ಷ ಕೊಟ್ಟಿದೆ.

Restoration of Doddakere Tank

544. Sri K. P. CHIKKEGOWDA (Sakaleshpur).—

Will the Minister of State for Minor Irrigation be pleased to state :—

(*a*) the date and the amount of estimated cost of restoration of Doddakere of Gangara (Major tank) of Kundur Hobli, Alur Taluk (Hassan District) ;

(*b*) the circumstances that led for its delay in execution ?

Sri D. PARAMESHWARAPPA (Deputy Minister for Major Irrigation) [On behalf of SRI A. J. DODDAMETI (Minister of State for Minor Irrigation)].—

(*a*) An estimate amounting to Rs. 25,000 is prepared now.

(*b*) Does not arise *vide* reply to (*a*).

2-00 P.M.

ಶ್ರೀ ಕೆ. ಪಿ. ಚಿಕ್ಕೇಗೌಡ.—ಅಂದಾಜನ್ನು ತಯಾರು ಮಾಡುವುದಕ್ಕೆ ಎರಡು ವರ್ಷಗಳ ಕಾಲ ಆಯಿತು ಇನ್ನು ಮಂಜೂರು ಮಾಡುವುದಕ್ಕೆ ಎಷ್ಟು ವರ್ಷಕಾಲ ಬೇಕಾಗುತ್ತದೆ ?

† ಶ್ರೀ ಡಿ. ಪರಮೇಶ್ವರಪ್ಪ.—ಅಂದಾಜು ತಯಾರು ಮಾಡುವುದಕ್ಕೆ ಎರಡು ವರ್ಷ ಹಿಡಿದಿದೆ ಎಂದು ನಾವೇನೂ ಹೇಳಿಲ್ಲ. ಇತ್ತೀಚೆಗೆ ಇನ್‌ವೆಸ್ಟಿಗೇಷನ್ ಆಗಿ ಆ ಅಂದಾಜು ಪರಿಶೀಲನೆಯಲ್ಲಿ ಇದೆ ಎಂಬುದನ್ನು ಹೇಳಿದ್ದೇವೆ, ಅದನ್ನು ತೆಗೆದುಕೊಳ್ಳುವುದಕ್ಕೆ ಸರ್ಕಾರದಲ್ಲಿರತಕ್ಕ ಆರ್ಥಿಕ ಪರಿಸ್ಥಿತಿಯ ಮೇಲೆ ಅದು ಅನ್ವಯವಾಗುತ್ತದೆ. ಇದು ಮುಖ್ಯವಾದ ಕೆರೆ ಎಂದು ಹೇಳುತ್ತಾ ಇದ್ದಾರೆ, ಜಾಗ್ರತೆ ತೆಗೆದುಕೊಳ್ಳುವುದಕ್ಕೆ ತಕ್ಕ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ಪಿ. ಚಿಕ್ಕೇಗೌಡ.- ಅದಷ್ಟು ಜಾಗ್ರತೆ ತೆಗೆದುಕೊಳ್ಳುತ್ತೇವೆ ಎಂದು ಭರವಸೆ ಕೊಡುತ್ತೀರಾ ?

ಶ್ರೀ ಡಿ. ಪರಮೇಶ್ವರಪ್ಪ.—ಹಾಗೆ ಭರವಸೆ ಕೊಡುವುದಕ್ಕಾಗುವುದಿಲ್ಲ. ಹಣ ಒದಗಿದಂತೆ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಪಡುತ್ತೇವೆ.

Installation of I.P. sets

582. Sri C. R. RANGE GOWDA (Magadi).—

Will the Chief Minister be pleased to state :—

(*a*) the number of Irrigation Pump sets installed in the village of Hosadoddi, Madbal Hobli of Magadi Taluk;

(*b*) whether the completion certificate in respect of those Irrigation Pump sets has been issued ;

(*c*) if so, when ;

(*d*) what are the bottlenecks to give power line to that village ?

Sri D. PARAMESHWARAPPA (Deputy Minister for Major Irrigation) [On behalf of SRI VEERENDRA PATIL (Chief Minister)].—

(*a*) 4.

(*b*) Completion reports have been received from the parties.

(*c*) On 10th November 1968.

(*d*) The completion reports received were found to be wrong as interior wiring was not actually completed. Besides, the parties have not carried out the departmental formalities like execution of agreement, etc.

ಶ್ರೀ ಸಿ. ಆರ್. ರಂಗೇಗೌಡ.—ಮಾಗಡಿ ತಾಲ್ಲೂಕಿನ ಹೊಸ ದೊಡ್ಡಿಗೆ ಎಲೆಕ್ಟ್ರಿಕ್ ಲೈನ್ ಕೊಡುವ ಬಗ್ಗೆ ಸ್ಥಳೀಯ ವಿದ್ಯುಚ್ಛಕ್ತಿ ಇಲಾಖೆಯ ಅಧಿಕಾರಿಯ ನೇತೃತ್ವದಲ್ಲಿ ಪ್ರತಿಯೊಂದು ಕೆಲಸವನ್ನು ಮಾಡಿದರೂ ಕೂಡ ಅವರಿಗೆ ಮನದಟ್ಟು ಆದರೂ ಕೂಡ ಇನ್ನರ್ ವೈರಿಂಗ್ ಮಾಡಿಲ್ಲ ಮತ್ತು ಅಗ್ರಿಮೆಂಟ್ ಎಕ್ಸಿಕ್ಯೂಟ್ ಮಾಡಿಲ್ಲ ಎಂದು ಹೇಳಿ ತಕರಾರು ಹಾಕಿದ್ದಾರೆ. ಆದ್ದರಿಂದ ಸ್ಥಳ ಪರಿಶೀಲನೆ ಮಾಡಿ ಜಾಗ್ರತೆ ಎಲೆಕ್ಟ್ರಿಕ್ ಲೈನ್ ಕೊಡಿಸುವುದಕ್ಕೆ ತಿಳಿಸುತ್ತೀರಾ ?

† ಶ್ರೀ ಡಿ. ಪರಮೇಶ್ವರಪ್ಪ.—ಇದುವರೆಗೂ ಅಂತಹ ದೂರು ಬಂದಿಲ್ಲ, ಬಹುಶಃ ಆಫೀಸರುಗಳ ನ್ಯೂನತೆಯಿಂದ ಹೀಗೆ ಆಗುತ್ತದೆ ಎಂಬುದು ಗೊತ್ತಿರಲಿಲ್ಲ, ಮಾನ್ಯ ಸದಸ್ಯರು ಈಗ ಹೇಳುತ್ತಾ ಇದ್ದಾರೆ, ಅದಷ್ಟು ಜಾಗ್ರತೆ ಸ್ಥಳ ಪರಿಶೀಲನೆ ಮಾಡಿ ಅವರು ಹೇಳುವುದು ನಿಜವೇ ಎಂಬುದನ್ನು ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಸಿ. ಆರ್. ರಂಗೇಗೌಡ—ಎಲೆಕ್ಟ್ರಿಕ್ ಪಂಪ್ ಸೆಟ್‌ನ್ನು ಕಮ್ಯೂನಿಟಿ ಡೆವಲಪ್‌ಮೆಂಟ್‌ನವರು ಕೊಟ್ಟು ಐದು ವರ್ಷವಾಯಿತು ಯಾವ ಕೆಲಸವೂ ಆಗಿಲ್ಲ. ಅವರು ಹಣ ವಾಪಸು ಪಾವತಿ ಮಾಡಬೇಕೆಂದು ಕೇಳುತ್ತಾ ಇದ್ದಾರೆ, ಉತ್ಪನ್ನ ಇಲ್ಲದೇ ಕೊಡುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಜಾಗ್ರತೆ ಅಲ್ಲಿ ಸ್ಥಳ ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಡಿ. ಪರಮೇಶ್ವರಪ್ಪ.—ಡಿಪಾರ್ಟ್‌ಮೆಂಟಿನವರು ವಿದ್ಯುತ್‌ನ್ನು ಸಪ್ಲೈ ಮಾಡುವುದಕ್ಕೆ ಮುಂಚೆ ಪಾರ್ಟಿಸ್ ಕಂಪ್ಲೀಷನ್ ರಿಪೋರ್ಟ್ ಕೊಡಬೇಕು ಮತ್ತು ಅಗ್ರಿಮೆಂಟ್ ಕೂಡ ಬರೆದು ಕೊಡಬೇಕೆಂದು ನಿಯಮಗಳು ಇವೆ. ಕಂಪ್ಲೀಷನ್ ರಿಪೋರ್ಟ್ ಕೊಟ್ಟಿದ್ದೇವೆ ಅಂದಮೇಲೆ ಇನ್ನರ್

ವೈರಿಂಗ್ ಆಗಿಲ್ಲ ಮತ್ತು ಮುಚ್ಚಳಿಕೆ ಬರೆದು ಕೊಟ್ಟಿಲ್ಲ ಎಂದು ವರದಿ ಬಂದಿದೆ. ಆ ರೀತಿ ತಮ್ಮ ಭಾಗದ ಕೆಲಸ ಕಂಪ್ಲೀಷನ್ ರಿಪೋರ್ಟ್ ಮತ್ತು ಮುಚ್ಚಳಿಕೆ ಬರೆದು ಕೊಟ್ಟು ವಿದ್ಯುತ್ ಸರಬರಾಯಿ ಇಲ್ಲದೇ ಹೋದ ಪಕ್ಷದಲ್ಲಿ ಬಹುಶಃ ತಕ್ಷಣ ಏರ್ಪಾಡು ಮಾಡಬಹುದು.

Missing of an Idol in a Temple

610. Sri K. M. THAMMAIAH (Kadur).—

Will the Minister for Revenue be pleased to state :—

(*a*) whether it has come to the notice of the Government that an idol is missing from the Temple of Sri Channakeshavaswamy in Banavar of Arasikere Taluk in Hassan District since one and a half years :

(*b*) if so, the action taken to trace the idol and restore it to the temple ;

(*c*) the action taken to replace the idol by a new one if the Old one is not traced or traceable ?

Sri H. V. KOUJALGI (Minister for Revenue).—

(*a*) No.

(*b*) and (*c*) Will be considred on receipt of a report from the Endowment Commissioner, which has been called for.

ಶ್ರೀ ಕೆ. ಎಂ. ತಮ್ಮಯ್ಯ.—ಕೆಳಗಿನ ಅಧಿಕಾರಿಗಳಿಂದ ಮಾಹಿತಿ ಬಂದಿಲ್ಲ ಎಂದು ಹೇಳಿದ್ದೀರಿ, ಪರಿಶೀಲಿಸಲಾಗುತ್ತದೆ ಎಂದು ಹೇಳಿದ್ದೀರಿ. ಪರಿಶೀಲನೆ ಮಾಡಿ ವಿಗ್ರಹ ಪತ್ತೆ ಹಚ್ಚುವುದಕ್ಕೆ ಅಗ್ಗವೇ ಇರುವುದರಿಂದ ಸದ್ಯಕ್ಕೆ ಒಂದು ಹೊಸ ಪ್ರತಿಮೆಯನ್ನು ಅಲ್ಲಿ ಪ್ರತಿಷ್ಠೆ ಮಾಡಿ. ಈ ಬಗ್ಗೆ ಅಲ್ಲಿನ ಸ್ಥಳೀಯ ಅಧಿಕಾರಿಯು ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಚ್. ವಿ. ಕೌಜಲಗಿ.—ಮಾನ್ಯ ಸದಸ್ಯರು ಈ ಪ್ರಶ್ನೆಯನ್ನು ಹಾಕಿದ್ದಾರೆ. ಅಲ್ಲಿ ವಿಗ್ರಹ ಕಳೆದು ಹೋಗಿದೆ ಎಂಬ ಮಾತು ಇವತ್ತಿನವರೆಗೂ ಗೊತ್ತಿರಲಿಲ್ಲ. ಈ ಪ್ರಶ್ನೆ ಹಾಕಿದನಂತರ ನಮ್ಮ ಅಧಿಕಾರಿಗಳಿಗೆ ಪುನಃ ಚೌಕಸಿ ಮಾಡುವುದಕ್ಕೆ ವಹಿಸಿದ್ದೇವೆ, ಅದು ಹೋಗಿದೆ ಅಂತ ಕಂಡುಬಂದರೆ ಪುನಃ ಪರಿಶೀಲನೆ ಮಾಡುತ್ತೇವೆ.

New Syllabus for the Secondary Education

638. Sri L. SRIKANTAIAH (Nanjangud).—

Will the Minister for Education be pleased to state :—

(*a*) whether Government is introducing a new syllabus of studies for the Secondary Schools of the State and if so, from which year ;

(*b*) whether this syllabus differs from existing scheme of studies (copy of the existing scheme of studies and the and the new syllabus may be placed on the Table of the House) ;

(*c*) the duration of study in the Secondary Schools under this new syllabus ;

(SRI L. SIRKANTAIAH)

(*d*) the extent to which this new syllabus is an extension and continuation of the curricula of studies followed in standards 1 to 7;

(*e*) whether the new syllabus is applicable to the demonstration Multipurpose High Schools started by the Central Government?

SRI N. M. KOTRABASAIAH SOGI (Deputy Minister for Education).—

(*a*) Yes; from the academic year 1969-70.

(*b*) Yes; the study of elective subjects has been removed in Standards IX and X. Work experience has been introduced in place of crafts. Copy of syllabi old and new placed on the Table of the House.***

(*c*) Three years.

(*d*) General subjects *i.e.*, Mother tongue, II language English, III language Hindi, Mathematics, Science and Social studies have been continued in the High School standards also.

(*e*) No.

ಶ್ರೀ ಎಲ್. ಶ್ರೀಕಂಠಯ್ಯ.—ಇಲ್ಲಿ ತಮ್ಮ ಉತ್ತರದಲ್ಲಿ ಹೇಳಿದ್ದಾರೆ 9 ಮತ್ತು 10 ನೇ ತರಗತಿಗಳಿಗೆ ಐಚ್ಛಿಕ ವಿಷಯಗಳ ಅಭ್ಯಾಸವನ್ನು ತೆಗೆದುಹಾಕಲಾಗಿದೆ. ಹೊಸ ಪಠ್ಯಕ್ರಮಗಳನ್ನು ಸಭೆಯ ಮುಂದಿಡಲಾಗಿದೆ ಎಂದು ಹೇಳಿದ್ದಾರೆ. ಹೊಸದಾಗಿ ಇಂಟ್ರಡ್ಯೂಸ್ ಮಾಡಿರತಕ್ಕ ಸಬ್‌ಜೆಕ್ಟ್‌ಗಳು ಬರುವುದಕ್ಕೆ ಮುಂಚೆ ಜಾರಿಯಲ್ಲಿದ್ದ ಸಬ್‌ಜೆಕ್ಟ್‌ಗಳ್ಯಾವುವು?

ಶ್ರೀ ಎಸ್. ಎಂ. ಕೊಟ್ರಬಸಯ್ಯ ಸೋಗಿ.—ಹಿಂದೆ ಫಿಜಿಕ್ಸ್, ಕೆಮಿಸ್ಟ್ರಿ ಮತ್ತು ಮ್ಯಾಥ ಮ್ಯಾಟಿಕ್ಸ್ ಈ ಸಬ್‌ಜೆಕ್ಟ್‌ಗಳಲ್ಲಿ ಮತ್ತು ಹುಮ್ಯಾನಿಟೀಸ್‌ನಲ್ಲಿ—ಪಾಲಿಟಿಕ್ಸ್, ಎಕನಾಮಿಕ್ಸ್ ಇತ್ಯಾದಿ ಸಬ್‌ಜೆಕ್ಟ್‌ಗಳಲ್ಲಿ ಕೆಲವು ಭಾಗವನ್ನು ಎಲೆಕ್ಟೀವ್ಸ್ ಎಂದು ಮಾಡಲಾಗಿತ್ತು. ಈಗ ಅದನ್ನೆಲ್ಲಾ ತಪ್ಪಿಸಿ ಎಲ್ಲವನ್ನೂ ಕಾಮನ್ ಸಬ್‌ಜೆಕ್ಟ್‌ಗಳನ್ನಾಗಿ ಪರಿವರ್ತಿಸಿ ಎಲ್ಲವನ್ನೂ ಬೋಧಿಸ ಬೇಕೆಂದು ಹೇಳಿದ್ದೇವೆ.

ಶ್ರೀ ಎಲ್. ಶ್ರೀಕಂಠಯ್ಯ.—ವಿಷಯ ಗೊತ್ತಿದ್ದರೆ ಹೇಳಿ, ಇಲ್ಲದಿದ್ದರೆ ಗೊತ್ತಿಲ್ಲ ಅಂತ ಹೇಳಿ. ನಾನು ಕೇಳುತ್ತಿರುವುದು ಹಿಂದೆ ಇದ್ದ ಸಬ್‌ಜೆಕ್ಟ್‌ಗಳು ಯಾವುವು ಎಂದು?

ಶ್ರೀ ಎಸ್. ಎಂ. ಕೊಟ್ರಬಸಯ್ಯ ಸೋಗಿ.—ಹಿಂದೆ ಇದ್ದವುಗಳೇ ಈಗಲೂ ಇವೆ. 1969 ರಿಂದ ಹೊಸ ಸ್ಕೀಮನ್ನು ಜಾರಿಗೆ ತರಬೇಕೆಂದು ಮಾಡಿದ್ದೇನೆ. ಈಗ ಸದ್ಯಕ್ಕೆ ಯಾವುದೂ ಬದಲಾವಣೆ ಆಗಿಲ್ಲ, ಹಿಂದಿದ್ದವುಗಳೇ ಇನ್ನೂ ಇವೆ.

ಶ್ರೀ ಎಲ್. ಶ್ರೀಕಂಠಯ್ಯ.—ಆ ಸಬ್‌ಜೆಕ್ಟ್‌ಗಳು ಯಾವುವು?

ಶ್ರೀ ಎಸ್. ಎಂ. ಕೊಟ್ರಬಸಯ್ಯ ಸೋಗಿ.—ಅವು 1969 ನಂತರ ಹೊಸ ಸಬ್‌ಜೆಕ್ಟ್‌ಗಳು ಜಾರಿಗೆ ಬರುತ್ತವೆ.

ಶ್ರೀ ಎಲ್. ಶ್ರೀಕಂಠಯ್ಯ.—ಅವು ಯಾವುವು? ಹಳೆಯವು ಯಾವುವು?

SRI K. V. SHANKARA GOWDA (Minister for Education).—Study of science and mathematics will be strengthened.

*** Copy placed in the Mysore Legislature Library *vide* No....

V-31 N69
N69-171-4
(B) 4862

Police Range office and Police Quarters

655. Sri S. PUTTASWAMY (Chamarajanagar).—

Will the Chief Minister be pleased to state :—

(*a*) whether there is any proposal to construct Police Range Office and Police Quarters at Ramasamudra in Chamarajanagar taluk ;

(*b*) whether the Government have prepared the plan and estimate for such construction of Buildings ;

(*c*) if so, the estimated cost of Range Police Station and Police Quarters ;

(*d*) when it is proposed to start the construction of Police Station buildings and official quarters ?

Sri K. PUTTASWAMY (Minister for Law, Labour and Parliamentary Affairs) [On behalf of SRI VEERENDRA PATIL (Chief Minister)].—

(*a*) Yes.

(*b*) Plans are ready, but Estimates will be got prepared after the land required becomes available.

(*c*) Does not arise in view of reply to clause (*b*).

(*d*) As and when funds are available.

ಶ್ರೀ ಎಸ್. ಪುಟ್ಟಸ್ವಾಮಿ.—ಯೋಜನೆಗಳು ತಯಾರಾಗಿವೆ ಎಂದು ಉತ್ತರದಲ್ಲಿ ಹೇಳಿದ್ದಾರೆ. ಆ ಜಮೀನನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳಲಾಗಿದೆ. ಅದರ ಬಗ್ಗೆ ಕರಾರನ್ನೂ ಕೂಡ ಬರೆಸಿಕೊಂಡಿದ್ದಾರೆ. ಜಮೀನು ಜಿಲ್ಲಾ ಸೂಪರಿಂಟೆಂಡರ ಸುಪರ್ದಿನಲ್ಲಿದೆ. ಅದನ್ನು ಈ ವರ್ಷ ಕೈಗೊಳ್ಳುತ್ತೀರಾ ?

Sri K. PUTTASWAMY.—In consultation with the Law Department, action is being taken to take possession of that land.

Lockout in Krishnarajendra Mills, Mysore

677. Sri M. S. KRISHNAN (Malleswaram).—

Will the Minister for Law, Labour and Parliamentary Affairs be pleased to state :—

(*a*) whether the Management of Krishnarajendra Mills at Mysore have locked out the Mills from 1st February 1969 ;

(*b*) if so, the reasons for the lockout ;

(*c*) the steps the Government have taken or are contemplating to take, to resolve the disputes between the workmen and Management of the Mills and to end the lockout ?

Sri K. PUTTASWAMY (Minister for Law, Labour and Parliamentary Affairs).—

(*a*) Yes ; but from 4th February 1969.

(*b*) The workers went on a strike on 1st February 1969 demanding the implementation of clause (6) of the settlement dated 16th January 1967 which provided the restoration of D.A. in terms of the earlier settlement dated 1st July 1963. The strike continued on 3rd February 1969 also and as a consequence the management declared a lock-out with effect from 4th February 1969.

(*c*) The Assistant Labour Commissioner held conciliation proceedings but no agreement could be arrived at and on 21st February 1969 a meeting of the representatives of the management and labour was held in the Chambers of the Minister for Labour and a Settlement was arrived at. As per this agreement the lock-out has been lifted from the first shift of 22nd February 1969.

ಶ್ರೀ ಎಂ. ಎಸ್. ಕೃಷ್ಣನ್.—ಇಲ್ಲಿ ಉತ್ತರದಲ್ಲಿ 1963 ರಿಂದ ಮತ್ತೆ ತುಟ್ಟಿಭತ್ಯ ಕೊಡಬೇಕು ಎಂದು ತೀರ್ಮಾನವಾಗಿದೆ ಎಂದು ಹೇಳಿರತಕ್ಕದ್ದು ಯಾವ ತಾರೀಖಿನಿಂದ ಎಷ್ಟು ಕೊಡಬೇಕೆಂದು ತೀರ್ಮಾನವಾಗಿದೆ ?

Sri K. PUTTASWAMY.—I want to know whether the hon. Member is referring to 16th January 1967 agreement.

Sri M. S. KRISHNAN.—It is 1st July 1963.

Sri K. PUTTASWAMY.—At the rate of 20 paise per point over 327 points.

ಶ್ರೀ ಎಂ. ಎಸ್. ಕೃಷ್ಣನ್.— ಈಗ ಹೊಸ ಸೆಟಲ್‌ಮೆಂಟ್ ಪ್ರಕಾರ ಎಷ್ಟು ತುಟ್ಟಿಭತ್ಯವನ್ನು ಕೊಡಬೇಕೆಂದು ತೀರ್ಮಾನವಾಗಿದೆ ?

Sri K. PUTTASWAMY.—This is an interim settlement for Rs. 105.

ಶ್ರೀ ಎಂ. ಎಸ್. ಕೃಷ್ಣನ್.—ಲೇಬರ್ ಕಮಿಷನರ್ ಮತ್ತು ಮಾಲೀಕರ ಮಧ್ಯೆ ಆಗಿದ್ದ ಒಪ್ಪಂದದ ಪ್ರಕಾರ ಲೇಬರ್ ಕಮಿಷನರ್ 110 ರೂಪಾಯಿಗಳ ತುಟ್ಟಿಭತ್ಯ ಕೊಡಬೇಕೆಂದು ಅವರ ವರದಿಯಲ್ಲಿ ಸೂಚಿಸಿಲ್ಲವೇ ?

Sri K. PUTTASWAMY.—That is not a fact.

Allocation of Krishna-Godavari Waters

683. Sri D. M. SIDDAIAH (Biligere).—

Will the Chief Minister be pleased to state :—

(*a*) the present stage of the question of sharing of waters of Krishna and Godavari rivers between our and neighbouring States ;

(*b*) whether this is going to be settled by one or more commission ;

(*c*) whether the proposed construction of Upper Krishna Project will be pursued or kept by till the question of allocation of water is settled ;

(*d*) whether the proposed Commission will also go into the question of considering the deversion of Godavari river water to Krishna river in order to make up the loss of water consequent on the giving of more water to Andhra from Krishna river;

(*e*) whether Government have any alternative proposal in this behalf?

Sri VEERENDRA PATIL (Chief Minister).—

(*a*) The Government of India have agreed to refer this question to a tribunal.

(*b*) Setting up of a single commission has been insisted upon. Final decision in the matter by the Government of India is still not known.

(*c*) Upper-Krishna Project Stage-I has been approved by the Government of India in 1963 and the Project is under construction.

(*d*) The question of diversion of Godavari waters to Krishna in the lower Krishna basin has to be looked into by the Commission. This fact has been impressed to the Government of India.

(*e*) The question is not clear.

ಶ್ರೀ ಎಸ್. ಎಂ. ಗುರೆಡ್ಡಿ.—ಕೇಂದ್ರ ಸರ್ಕಾರದವರು ಆ ನದೀ ನೀರಿನ ಆಯೋಗದ ನೇಮಕದ ವಿಚಾರದಲ್ಲಿ ಕೃಷ್ಣಾನದಿ ನೀರಿಗೇ ಒಂದು ಗೋದಾವರಿ ನೀರಿಗೇ ಒಂದು ಎಂದು ಹೇಳಿರ ತಕ್ಕದ್ದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

† ಶ್ರೀ ವೀರೇಂದ್ರ ಪಾಟೀಲ್.—ಆ ವಿಚಾರ ಲಿಖಿತಮೂಲಕವಾಗಿನ್ನೂ ನಮಗೆ ಬಂದಿಲ್ಲ. ಪತ್ರಿಕೆಗಳಲ್ಲೇನೋ ಆ ಪಾರ್ಲಿಯಮೆಂಟಿನಲ್ಲಿ ಆ ವಿಷಯ ಚರ್ಚೆ ಆಯಿತು ಎಂಬುದನ್ನು ಮಾತ್ರ ಕೇಳಿದ್ದೇನೆ.

ಶ್ರೀ ಸದಾಶಿವಪ್ಪ ಪಾಟೀಲ್.—ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ತೆಗೆದುಕೊಳ್ಳಬೇಕೆಂದು 1963ರಲ್ಲಿಯೇ ನಿರ್ಣಯವಾಗಿದೆ. ಇದು ಟೆಕ್ನಿಕಲ್ ಅವರ ಅಭಿಪ್ರಾಯವೋ ಅಥವಾ ಪೊಲಿಟಿಕಲ್ ಅವರ ಅಭಿಪ್ರಾಯವೋ?

ಶ್ರೀ ವೀರೇಂದ್ರ ಪಾಟೀಲ್.—ಅಪ್ಪರ್ ಕೃಷ್ಣಾ ಸ್ಟೇಜ್ ಒಂದನ್ನು ಕೇಂದ್ರ ಸರ್ಕಾರದವರು 1963ರಲ್ಲಿ ಮಂಜೂರು ಮಾಡಿದ್ದಾರೆ. ಸ್ಟೇಜ್ ಒಂದು ಏನಿದೆಯೆಂಬುದನ್ನು ಪೂರ್ತಿ ನೋಡದೆ ಈಗ ಹೇಳುವುದಕ್ಕಾಗುವುದಿಲ್ಲ.

Murder Cases in Kudligi and Sandur Taluks

750. Sri M. M. J. SADYOJATHA (Kudligi).—

Will the Chief Minister be pleased to state:—

(*a*) the number of murders that took place during the period from June 1968 to January 1969 in Kudligi Taluk and Chornur Firka in Sandur taluk;

(*b*) the number of the cases detected;

(*c*) the number of them charge-sheeted;

(*d*) the number of cases investigated by the regular police;

(*e*) the number of cases investigated and detected by the C. I. D.?

Sri VEERENDRA PATIL (Chief Minister).—

(*a*) Three.

(*b*) Two.

(*c*) One.

(*d*) Two.

(*e*) One.

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಕೂಡ್ಲಿಗಿ ತಾಲ್ಲೂಕಿನಲ್ಲಿ ಉಂಟಾದ ಕೊಲೆಗಳ ಸಂಬಂಧದಲ್ಲಿ ಏನು ಕ್ರಮ ತೆಗೆದುಕೊಂಡಿದ್ದೀರಿ ?

† ಶ್ರೀ ವೀರೇಂದ್ರ ಪಾಟೀಲ್.—ಮೂರು ಕೊಲೆಗಳು ಆಗಿವೆಯೆಂದು ವರದಿಯಾಗಿದೆ. ಎಷ್ಟು ಕೊಲೆಗಳು ಆಗಿವೆಯೋ ಅವುಗಳ ಬಗ್ಗೆ ಪೋಲೀಸಿನವರು ಸಾಧ್ಯವಾದಷ್ಟು ಕ್ರಮವನ್ನು ತೆಗೆದುಕೊಂಡು ಯಾರು ಕೊಲೆ ಮಾಡಿದ್ದಾರೋ ಅವರನ್ನು ಪತ್ತೆ ಹಚ್ಚುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ.

ಶ್ರೀ ಎಚ್. ಎನ್. ನಂಜೇಗೌಡ.—ಇಷ್ಟು ಕೇಸುಗಳ ಪೈಕಿ ಯಾವುದಾದರೂ ಬಳ್ಳಾರಿ ಸೆಷನ್ಸ್ ಜಡ್ಜ್ ಕೋರ್ಟಿನಲ್ಲಿ ಡಿಸ್‌ಚಾರ್ಜ್ ಆಗಿದೆಯೋ ? ಅಥವಾ ಯಾವುವಾದರೂ ಕನ್‌ವಿಕ್ಷನ್ ಆಗಿದೆಯೋ ?

ಶ್ರೀ ವೀರೇಂದ್ರ ಪಾಟೀಲ್.—ಈ ಮೂರು ಕೇಸುಗಳ ಪೈಕಿ ಬಹುಶಃ ಒಂದು ಕೇಸು ಬಳ್ಳಾರಿ ಸೆಷನ್ಸ್ ಜಡ್ಜ್ ಕೋರ್ಟಿನಲ್ಲಿ ನಡೆದು ಅಕ್ವಿಟ್ ಆಗಿದೆಯೆಂದು ನನಗೆ ಗೊತ್ತಾಗಿದೆ.

Mr. SPEAKER.—Question hour is over. Now Short Notice Question No. 40 may be taken up.

SHORT NOTICE QUESTION AND ANSWER

Rehabilitation of Ceylonese in the State

40. **Sri VATAL NAGARAJ** (Chickpet).—

Will the Chief Minister be pleased to state :—

(*a*) whether the Minister of State for Food and Civil Supplies has stated recently that ten thousand people coming from Ceylon will be rehabilitated in Mysore State in Mangalore District;

(*b*) if so, whether the Government have visualised the difficulties to be faced by the people of this State in that behalf ?

Sri VEERENDRA PATIL (Chief Minister).—

(*a*) No.

(*b*) Does not arise.

ಶ್ರೀ ವಾಟಾಳ್ ನಾಗರಾಜ್.—(ಅ) ಪ್ರಶ್ನೆಗೆ ಉತ್ತರವಾಗಿ 'ಇಲ್ಲ' ವೆಂದು ಹೇಳಿದೆ. ಒಂದು ಪತ್ರಿಕೆಯಲ್ಲಿ ಆ ರೀತಿ ವರದಿ ಬಂದಿರುವುದು ನಿಜವಲ್ಲವೇ ? ಯಾರೂ ಬರುವುದಿಲ್ಲವೆಂದು ನೀವು ಹೇಳುತ್ತೀರಿ. ಅವರು ಬರುವ ಉದ್ದೇಶವಾದರೂ ಇದೆಯೋ ?

†ಶ್ರೀ ವೀರೇಂದ್ರ ಪಾಟೀಲ್.—ಪ್ರಶ್ನೆ ಕೇಳಿದ್ದಕ್ಕೆ ಉತ್ತರ ಕೊಟ್ಟಿದ್ದಾರೆ. 10 ಸಾವಿರ ಜನ ಬರುತ್ತಾರೆಂದು ಹೇಳಿದರೆ ಅವರಿಗೆ ಪುನರ್ವಸತಿ ಎಲ್ಲಿ ಕೊಡುವುದು ? ಅದು ಕಷ್ಟ. ಕೆಲವು ಕುಟುಂಬದವರು ಇಲ್ಲಿಗೆ ಬರುತ್ತಾರೆಂಬ ಮಾತನ್ನು ಅವರು ಹೇಳಿದ್ದಾರೆ.

ಶ್ರೀ ಪಾಟೀಲ್ ನಾಗರಾಜ್.—10 ಸಾವಿರ ಜನರು ಬಾರದಿದ್ದರೆ, ಇನ್ನೆಷ್ಟು ಸಾವಿರ ಜನ ಬರಬಹುದು, ಯಾವ ಉದ್ದೇಶ, ಕಾರಣಗಳಿಂದ ಬರುತ್ತಾರೆ ? ಇದರಿಂದ ಇಲ್ಲಿರುವ ಕನ್ನಡಿಗರಿಗೆ ನಿರುದ್ಯೋಗ ಸಮಸ್ಯೆ ಬರುತ್ತದೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಒಂದು ವಿಚಾರವನ್ನು ತಿಳಿದುಕೊಳ್ಳಬೇಕು. ನಮ್ಮ ರಾಷ್ಟ್ರದವರು ಮತ್ತು ಸಿಲೋನ್ ರಾಷ್ಟ್ರದವರು ಒಂದು ಕರಾರಿಗೆ ಬಂದಿದ್ದೇವೆ. ಆ ಅಗ್ರಿಮೆಂಟ್ ಪ್ರಕಾರ 5ಲಕ್ಷ 25ಸಾವಿರ ಜನರು ಅಲ್ಲಿಂದ ಬರುತ್ತಾರೆ. ಇಂಡೋ-ಸಿಲೋನ್ ಅಗ್ರಿಮೆಂಟ್ 1954ರಲ್ಲಿ ಆಯಿತು. ಜೂನ್ 1969ರಿಂದ ಅವರು ಬರುವುದಕ್ಕೆ ಪ್ರಾರಂಭವಾಗುತ್ತದೆ. ಕೇಂದ್ರಸರ್ಕಾರದವರು ಎಲ್ಲೆಲ್ಲಿ ಅವರು ನೆಲೆಗೊಳ್ಳುವುದಕ್ಕೆ ಸಾಧ್ಯವಿದೆಯೋ ಅಲ್ಲೆಲ್ಲಾ ನೆಲೆಗೊಳ್ಳಲಿ ಎಂದು ಇತರ ರಾಜ್ಯ ಸರ್ಕಾರಗಳಿಗೂ ಬರೆದಿದ್ದಾರೆ. ಎಲ್ಲರೂ ಒಪ್ಪಿದ್ದಾರೆ. ನಮ್ಮ ಸ್ಟೇಟಿನವರು ಸುಮಾರು ಒಂದು ಸಾವಿರ ಕುಟುಂಬದವರಿಗೆ ಇಲ್ಲಿ ರಿಹ್ಯಾಬಿಲಿಟೇಟ್ ಮಾಡಬೇಕೆಂದಿದ್ದಾರೆ. ಅವರೆಲ್ಲರೂ ಪ್ಲಾಂಟೇಷನ್ ಏರಿಯಾದಿಂದ ಬಂದಿದ್ದಾರೆ. ಇಲ್ಲಿ ಪ್ಲಾಂಟೇಷನ್ ಏರಿಯಾ ಬಹಳವಾಗಿ ಇರುವುದರಿಂದ ಅದನ್ನು ಅಭಿವೃದ್ಧಿ ಮಾಡುವ ಉದ್ದೇಶದಿಂದ ಅವರನ್ನು ಕರೆಸುವುದಕ್ಕೆ ನಮ್ಮ ಸರ್ಕಾರ ಒಪ್ಪಿಕೊಂಡಿದೆ.

ಶ್ರೀ ಎಂ. ನಾಗಪ್ಪ.—ಆ ಒಂದು ಸಾವಿರ ಕುಟುಂಬದವರಿಗೆ ಇಲ್ಲಿ ಇರಲಿಕ್ಕೆ ಸ್ಥಳವನ್ನು ನೀವೇ ಕೊಡುತ್ತೀರೋ ಅಥವಾ ಬೇರೆಬೇರೆ ಸ್ಥಳಗಳಲ್ಲಿಡುವುದಕ್ಕೆ ಕೇಂದ್ರ ಸರ್ಕಾರದಿಂದ ನಿಮಗೆ ಸಹಾಯ ದೊರಕುತ್ತದೊ ?

ಶ್ರೀ ವೀರೇಂದ್ರ ಪಾಟೀಲ್.—ಅದಕ್ಕೆ ನಾನು ಹೇಳಿದೆ, ಸುಳ್ಯದಲ್ಲಿ ರಬ್ಬರ್ ಪ್ಲಾಂಟೇಶನ್ ಇದೆ. ಈಗಾಗಲೇ ಸ್ವಲ್ಪ ಅಭಿವೃದ್ಧಿ ಮಾಡಿದ್ದಾರೆ. ಇನ್ನೂ 8 ಸಾವಿರ ಎಕರೆ ಅಭಿವೃದ್ಧಿ ಮಾಡಬೇಕೆಂದು ಇದೆ. ಅದಕ್ಕೆ ಅಲ್ಲಿ ಅವರನ್ನು ರಿಹ್ಯಾಬಿಲಿಟೇಟ್ ಮಾಡಬೇಕೆಂದು ಇದೆ. ಕೇಂದ್ರ ಸರ್ಕಾರದಿಂದ ಇದಕ್ಕೆ ಎರಡು ಕೋಟಿ 75ಲಕ್ಷ ರೂಪಾಯಿ ಸ್ಯಾಂಕ್ಷನ್ ಮಾಡಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಸಿಂಹಳದಿಂದ ಬರತಕ್ಕ ಒಂದು ಸಾವಿರ ಜನಕ್ಕೆ ಇಲ್ಲಿ ರಿಹ್ಯಾಬಿಲಿಟೇಟ್ ಮಾಡುತ್ತೀರಿ ಎಂದು ಹೇಳುತ್ತೀರಿ. ನಮ್ಮ ದೇಶದಲ್ಲಿ ಇಪತ್ತು ಸಾವಿರಾರು ಕುಟುಂಬಗಳು, ಉಳಲಿಕ್ಕೆ ಭೂಮಿ ಇಲ್ಲದೆ, ಇರುವುದಕ್ಕೆ ಮನೆ ಇಲ್ಲದೆ ಇವೆ. ಅವರಿಗೆ ಮೊದಲು ಭೂಮಿ ಕೊಟ್ಟು ವಸತಿ ಸೌಕರ್ಯ ಕೊಡುವುದಕ್ಕೆ ಏರ್ಪಾಟು ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಹೇಳಿದ ಹಾಗೆ ನಮ್ಮ ರಾಜ್ಯದಲ್ಲಿರತಕ್ಕಂತಹ ಎರಡುವರೆ ಕೋಟಿ ಜನರಿಗೆ ಎಲ್ಲಾ ಸೌಕರ್ಯ ಒದಗಿಸಿ, ಇವರಿಗೆ ಪುನರ್ವಸತಿ ಮಾಡುವುದೆಂದರೆ, ಬಹುಶಃ ಇನ್ನೂ 50 ವರ್ಷದ ಮೇಲೆ ಹೋಗಬಹುದು. ಆದ್ದರಿಂದ ಅದನ್ನು ಒಪ್ಪುವುದಕ್ಕಾಗುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಈಗಾಗಲೇ ನಮ್ಮ ರಾಜ್ಯದಲ್ಲಿ ಟಿಬೇಟಿಯನ್ ರಿಫ್ಯೂಜೀಸ್ ಇದ್ದಾರೆ. ಇದಲ್ಲದೆ, ಬೇರೆ ಇನ್ನೂ ಸಿಲೋನಿನಿಂದ ಬಂದವರನ್ನೂ ತೆಗೆದುಕೊಳ್ಳಬೇಕೆಂದು ಯೋಚನೆ ಮಾಡುತ್ತಿದ್ದೀರಿ. ಇವರು ಇರುವಾಗಲೇ ಈಗ ಬಹಳ ತೊಂದರೆಯಾಗುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ? ಮತ್ತು ಇವರನ್ನು ತಮಿಳ್‌ನಾಡಿನವರೂ ರಿಹ್ಯಾಬಿಲಿಟೇಟ್ ಮಾಡುವುದಕ್ಕೆ ಸಾಧ್ಯವಿಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್.—5ಲಕ್ಷ 25ಸಾವಿರ ಜನರನ್ನೂ ಒಂದು ರಾಜ್ಯದಲ್ಲಿ ರಿಹ್ಯಾಬಿಲಿಟೇಟ್ ಮಾಡುವುದಕ್ಕೆ ಸಾಧ್ಯವಿಲ್ಲ. ಇಲ್ಲಿಗೆ ಬರುವವರು ಪ್ಲಾಂಟೇಶನ್‌ನಲ್ಲಿರುವ ಸ್ಕಿಲ್ಡ್ ಕೆಲಸಗಾರರು. ಅವರಿಗೆ ಮಾತ್ರ ಇಲ್ಲಿ ಅವಕಾಶ ಮಾಡಿಕೊಡುತ್ತೇವೆ. ಅವರಿಗೆ ಪುನರ್ವಸತಿ ಕಲ್ಪಿಸುವುದಕ್ಕೋಸ್ಕರ ಕೇಂದ್ರ ಸರ್ಕಾರದವರು ಎಲ್ಲಾ ರಾಜ್ಯ ಸರ್ಕಾರದವರ ಒಪ್ಪಿಗೆಯನ್ನು ಕೇಳಿದ್ದಾರೆ. ಎಲ್ಲರೂ ವಹಿಸಿಕೊಂಡಂತೆ ನಾವೂ ವಹಿಸಿಕೊಂಡಿದ್ದೇವೆ.

ಶ್ರೀ ಕೆ. ಎಚ್. ರಂಗನಾಥ್.—ಬರುವಂತವರು ಎಲ್ಲರೂ ಬರೇ ರಬ್ಬರ್ ಪ್ಲಾಂಟೇಶನ್‌ನಲ್ಲಿ ಕೆಲಸ ಮಾಡುತ್ತಾರೋ, ಅಥವಾ ಕಾಫಿ, ಟೀ ಪ್ಲಾಂಟೇಶನಿನಲ್ಲೂ ಕೆಲಸ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತೀರಾ ?

Sri G. CHANDRAKANTH.—Sir, is there any proposal before our Government to give some amount to the victims of the recent Bombay Shiva Sena atrocities ?

Sri VEERENDRA PATIL.—It is too early for me to say anything with regard to that proposal, because I want to know to what extent the Government of India and the Maharashtra Government are going to provide relief for those who have suffered. Then I think, it is a matter for us to consider.

ಶ್ರೀ ಎಸ್. ಎಂ. ಗುರೆಡ್ಡಿ.—ಆಂಟಿ ನ್ಯಾಷನಲ್ ಸಂಘದಂತಹ ಶಿವಸೇನೆ ದೇಶದಲ್ಲಿ ಹುಟ್ಟಿಕೊಂಡಿವೆ. ಅವುಗಳನ್ನು ಬ್ಯಾನ್‌ಮಾಡಿ ಅವು ಎಗ್ಜಿಸ್ಟೆನ್ಸ್‌ನಲ್ಲಿ ಇಲ್ಲದ ಹಾಗೆ ತಾವು ದೆಹಲಿಗೆ ಹೋದಾಗ ಕೇಂದ್ರದ ಗೃಹಮಂತ್ರಿಗಳ ಜೊತೆಯಲ್ಲಿ ವಿಚಾರ ವಿನಿಮಯಮಾಡಿ ಶಿವಸೇನೆ ಎಗ್ಜಿಸ್ಟೆನ್ಸ್‌ನಲ್ಲಿ ಇಲ್ಲದ ಹಾಗೆ ಏನಾದರೂ ಪ್ರಯತ್ನ ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಶಿವಸೇನೆಯಂತಹ ಸೇನೆಗಳು ನಮ್ಮ ರಾಷ್ಟ್ರದಲ್ಲಿ ಇರಬಾರದು, ಅವುಗಳನ್ನು ನಿಷೇಧಿಸಬೇಕು ಎಂದು ನಾನು ಈಗಾಗಲೇ ಪ್ರಧಾನ ಮಂತ್ರಿಗಳಿಗೆ ಬರೆದಿದ್ದೇನೆ. ಮತ್ತು ಅನೇಕ ಸಲ ಅವಕಾಶ ಸಿಕ್ಕಿದಾಗಲೆಲ್ಲಾ ಈ ಮಾತನ್ನು ಅವರಿಗೆ ಹೇಳಿದ್ದೇನೆ. ಮತ್ತೆ ನಾನು ದೆಹಲಿಗೆ ಹೋದಾಗ ಅವರಿಗೆ ಹೇಳುವುದಕ್ಕೆ ನಾನು ಸಿದ್ಧನಾಗಿದ್ದೇನೆ.

ಶ್ರೀ ಎಂ. ಜಿ. ಬಣಕಾರ್.—ಶಿವಸೇನೆಯ ದುಷ್ಕೃತ್ಯದಿಂದ ನಮ್ಮ ಕನ್ನಡದ ಜನರು ಕಂಗಾಲಾಗಿದ್ದಾರೆ. ಈ ಜನರ ರಕ್ಷಣೆ ಮಾಡುವುದಕ್ಕೆ ಪೋಲೀಸರಿಗೆ ತಿಳಿಸಲಾಗಿದೆಯೆಂದು ಮಹಾರಾಷ್ಟ್ರದ ಮುಖ್ಯಮಂತ್ರಿಗಳು ಹೇಳಿದ್ದಾರೆ. ತಾವು ಈ ಮಾತನ್ನು ಖಂಡಿತ ನಂಬಬಾರದು. ಏಕೆಂದರೆ ಅಲ್ಲಿಯ ಪೋಲೀಸರು ಶಿವಸೇನೆಯವರಿಗೆ ಸಹಾಯ ಮಾಡುತ್ತಿದ್ದಾರೆ. ಕನ್ನಡಿಗರ ಮೇಲೆ ದಬ್ಬಾಳಿಕೆ ನಡೆಸುವುದಕ್ಕೆ ಅಲ್ಲಿಯ ಪೋಲೀಸರು ಹಿಂದಿನಿಂದ ಸಹಾಯ ಮಾಡುತ್ತಿದ್ದಾರೆ. ಈ ಬಗ್ಗೆ ನನ್ನ ಸ್ನೇಹಿತರುಗಳು ನನಗೆ ಕಾಗದ ಬರೆದಿದ್ದಾರೆ. ಆ ಕಾಗದ ಬೇಕಾದರೆ ತಮಗೆ ಕಳಿಸುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್.—ಆದ ಕಾರಣದಿಂದಲೇ ನಾನು ಕೇವಲ ಮಹಾರಾಷ್ಟ್ರ ಮುಖ್ಯಮಂತ್ರಿಗಳಲ್ಲಿ ಮಾತ್ರ ಪತ್ರವ್ಯವಹಾರ ಮಾಡುತ್ತಿಲ್ಲ, ಕೇಂದ್ರದಲ್ಲಿರುವ ಪ್ರಧಾನ ಮಂತ್ರಿಗಳ ಜೊತೆಯಲ್ಲಿಯೂ ಸಹ ಪತ್ರವ್ಯವಹಾರ ಮಾಡುತ್ತಿದ್ದೇನೆ.

ಶ್ರೀ ಎಸ್. ವಿ. ಅಗ್ನಿಹೋತ್ರಿ.—ಬೆಳಗಾಂ ಮುನಿಸಿಪಾಲಿಟಿಯವರು ಒಂದು ಠರಾವ್ ಪಾಸ್ ಮಾಡಿ ಈ ಶಿವಸೇನೆ ಕೈಗೊಂಡ ಕಾರ್ಯಕ್ರಮಕ್ಕೆ ಉತ್ತೇಜನ ಕೊಟ್ಟಿರುವುದಲ್ಲದೆ ಧನ್ಯವಾದಗಳನ್ನು ಸಹ ಅರ್ಪಿಸಿದ್ದಾರೆ. ಅವರು ನಮ್ಮ ರಾಜ್ಯದಲ್ಲಿದ್ದು ಆ ಪ್ರಕಾರ ಮಾಡಬಹುದೋ ಹೇಗೆ, ಈ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ಮತ್ತು ಈಗ ತಾವು ಮಹಾರಾಷ್ಟ್ರ ಮುಖ್ಯಮಂತ್ರಿಗಳನ್ನು ಸಮಕ್ಷಮ ಭೇಟಿಯಾಗಿ ಚರ್ಚೆ ಮಾಡುತ್ತೇನೆಂದು ಹೇಳಿದಿರಿ, ಆ ಚರ್ಚೆ ಮಾಡುವ ಕಾಲಕ್ಕೆ ಈ ನಾಲ್ಕು ಜನ ಮಹಾರಾಷ್ಟ್ರದ ಸದಸ್ಯರುಗಳನ್ನು ಆ ರಾಜ್ಯಕ್ಕೆ ವರ್ಗಮಾಡಿ ಅಲ್ಲಿಯ ನಾಲ್ಕು ಜನ ಕನ್ನಡದ ಸದಸ್ಯರುಗಳನ್ನು ಇಲ್ಲಿಗೆ ಬರಮಾಡಿಕೊಳ್ಳುವ ಬಗ್ಗೆ ಕೇಳುತ್ತೀರಾ ?

Sri B. B. SAYANAK.—I want to correct you Mr. Agni Hotri, we are five not four.

Sri AGNIHOTRI.—We want to see that you are transferred there.

Sri B. B. SAYANAK.—We are ready.

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಹೇಳಿದ ಮೊದಲನೆಯ ವಿಷಯವನ್ನು ಪತ್ರಿಕೆಯಲ್ಲಿ ಓದಿದ್ದೇನೆ. ಬೆಳಗಾಂ ಮುನಿಸಿಪಾಲಿಟಿಯವರು ಶಿವಸೇನೆಯವರ ಬಗ್ಗೆ ಮಾಡಿರುವ ಠರಾವಿನ ಬಗ್ಗೆ ಏನು ಕ್ರಮ ತೆಗೆದುಕೊಳ್ಳಬೇಕೆಂಬುದನ್ನು ನನ್ನ ಮಿತ್ರರಾದ ಶ್ರೀ ಬಿ. ಎಂ. ಪಾಟೀಲರು ಪರಿಶೀಲನೆ ಮಾಡುತ್ತಿದ್ದಾರೆ. ಆ ಬಗ್ಗೆ ನಾನು ಈಗ ಹೇಳುವುದಕ್ಕೆ ಹೋಗುವುದಿಲ್ಲ. ಸದಸ್ಯರುಗಳನ್ನು ಆ ಕಡೆಯಿಂದ ಈ ಕಡೆಗೆ ವರ್ಗಾ ಮಾಡಿಸಬೇಕೆಂದು ಏನು ಅವರು ಹೇಳಿದರು ಅದು ಬಹುಶಃ ಈಗ ಉದ್ಭವವಾಗುವುದಿಲ್ಲ.

ಶ್ರೀ ಎಸ್. ಶಿವಪ್ಪ.—ಮುಂಬೈ ನಗರದಲ್ಲಿ ನಡೆದ ದುರ್ಘಟನೆಯಲ್ಲಿ ಎಷ್ಟು ನಷ್ಟವಾಗಿದೆ ಎನ್ನುವ ವಿವರಗಳನ್ನು ಕೇಂದ್ರ ಸರ್ಕಾರದವರು ಆಗಲೀ ಮಹಾರಾಷ್ಟ್ರ ಸರ್ಕಾರದವರು ಆಗಲೀ ನಮಗೆ ತಿಳಿಸಿಲ್ಲ. ಈ ಮಧ್ಯೆ ನನ್ನ ಒಂದು ಸಲಹೆ ಏನೆಂದರೆ ತಾವು ದೆಹಲಿಗೆ ಹೋಗುವಾಗ ಮತ್ತು ಬರುವಾಗ ಮುಂಬೈ ನಗರದಲ್ಲಿ ಇಳಿದು ತಾವೇ ಖುದ್ದಾಗಿ ಪರಿಶೀಲನೆ ಮಾಡಿ ಆ ಸರ್ಕಾರದ ಜೊತೆ ಮಾತನಾಡಿ, ಎಷ್ಟು ನಷ್ಟವಾಗಿದೆ ಎಂಬುದನ್ನು ತಿಳಿದುಕೊಂಡು ಅಲ್ಲಿರುವ ನಮ್ಮ ಮೈಸೂರಿನ ಕನ್ನಡದ ಜನರಿಗೆ ಧೈರ್ಯ ಹೇಳುವ ಕೆಲಸವನ್ನು ಏತಕ್ಕೆ ಮಾಡಬಾರದು ?

ಶ್ರೀ ವೀರೇಂದ್ರ ಪಾಟೀಲ್.—ಮಹಾರಾಷ್ಟ್ರದ ರಾಜಧಾನಿಯಾದ ಮುಂಬೈಗೆ ನಾನು ಹೋಗಬೇಕಾದರೆ ಆ ರಾಜ್ಯಕ್ಕೆ ಮೊದಲೇ ಪತ್ರ ಬರೆಯಬೇಕಾಗುತ್ತದೆ. ಒಂದು ರಾಜ್ಯದವರು ಮತ್ತೊಂದು ರಾಜ್ಯದವರ ಹತ್ತಿರ ಯಾವ ರೀತಿ ಸಂಬಂಧ ಇಟ್ಟುಕೊಳ್ಳಬೇಕೆಂಬ ಪ್ರಶ್ನೆ ಇಲ್ಲಿ ಬರುತ್ತದೆ. ಮಹಾರಾಷ್ಟ್ರದ ಮುಖ್ಯಮಂತ್ರಿಗಳ ಹತ್ತಿರ ನಾನು ಮಾತನಾಡಬೇಕೆಂಬುದು ವಿರೋಧ ಪಕ್ಷದ ನಾಯಕರ ಉದ್ದೇಶವಾದರೆ, ನಾನು ದೆಹಲಿಯಲ್ಲಿ ಅವರನ್ನು ಭೇಟಿ ಮಾಡುತ್ತೇನೆ. ನಾನು ಯಾವ ಕಮಿಟಿ ಕೆಲಸಕ್ಕೆ ಹೋಗುತ್ತಿದ್ದೇನೋ ಅವರೂ ಸಹ ಅದೇ ಕಮಿಟಿ ಕೆಲಸಕ್ಕೆ ಬರುತ್ತಿದ್ದಾರೆ. ಈ ವಿಷಯದಲ್ಲಿ ಚರ್ಚೆ ಮಾಡುವುದಕ್ಕೆ ನನಗೆ ಸಾಕಷ್ಟು ಅವಕಾಶ ಅಲ್ಲಿ ಸಿಗುತ್ತದೆ. ಚರ್ಚೆ ಮಾಡುತ್ತೇನೆ.

ಶ್ರೀ ಕೆ. ಎಂ. ಪುಟ್ಟಸ್ವಾಮಿ.— ಮಹಾರಾಷ್ಟ್ರದಲ್ಲಿ ಶಿವಸೇನೆಯವರು ನಮ್ಮ ಕನ್ನಡ ಜನಕ್ಕೆ ಎಷ್ಟೊಂದು ಅನ್ಯಾಯ ಮಾಡಿದ್ದಾರೆ, ಎನ್ನುವುದನ್ನು ಹೇಳುವುದಕ್ಕಾಗುತ್ತಿಲ್ಲ. ಆದ್ದರಿಂದ ಇಲ್ಲಿರತಕ್ಕಂಥ ಮಹಾರಾಷ್ಟ್ರದ ಜನರನ್ನು ಅಲ್ಲಿಗೆ ಕಳಿಸಿ ಮಹಾರಾಷ್ಟ್ರದಲ್ಲಿರುವ ಕನ್ನಡ ಜನರನ್ನು ಏತಕ್ಕೆ ನಮ್ಮ ದೇಶಕ್ಕೆ ಕರೆದುಕೊಳ್ಳಬಾರದು, ಈ ಬಗ್ಗೆ ಮುಖ್ಯಮಂತ್ರಿಗಳು ತಿಳಿಸಬೇಕು.

(ಉತ್ತರವಿಲ್ಲ)

2-30 P.M.

ಶ್ರೀ ಎಸ್. ಗೋಪಾಲಗೌಡ.—ಅಖಿಲ ಭಾರತ ಕಾಂಗ್ರೆಸ್ಸಿನ ಅಧ್ಯಕ್ಷರಾಗಿರುವ ಶ್ರೀ ನಿಜಲಿಂಗಪ್ಪನವರು ಶಿವಸೇನೆಯಿಂದ ನಡೆದ ಘಟನೆಗಳ ಬಗ್ಗೆ ನ್ಯಾಯಾಂಗ ವಿಚಾರಣೆ ನಡೆಸಬೇಕು ಎಂದು ಒಂದು ಹೇಳಿಕೆಯನ್ನು ಕೊಟ್ಟಿದ್ದರು. ಅವರು ಕಾಂಗ್ರೆಸ್ಸು ಪಕ್ಷದ ಅಧ್ಯಕ್ಷರಾಗಿದ್ದು, ಕೇಂದ್ರದಲ್ಲೂ ಕಾಂಗ್ರೆಸ್ಸು ಸರಕಾರದ್ದೇ ಇದ್ದು ಅಲ್ಲಿನ ಗೃಹ ಮಂತ್ರಿಗಳೂ ಕಾಂಗ್ರೆಸ್ಸಿನವರೇ ಇದ್ದು ಮತ್ತು ಮುಂಬಯಿಯಲ್ಲೂ ಕೂಡ ಕಾಂಗ್ರೆಸ್ಸು ಸರಕಾರ ಇದ್ದು ಅವರ ಹೇಳಿಕೆಯನ್ನು ತೃಣೀಕರಿಸುವುದಕ್ಕೆ ಇದ್ದಂತಹ ಕಾರಣಗಳೇನು ಮತ್ತು ತಾವಾದರೂ ಅಲ್ಲಿ ನ್ಯಾಯಾಂಗ ವಿಚಾರಣೆಯಾಗಬೇಕು ಎಂದು ಒತ್ತಾಯಪಡಿಸುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಕಾಂಗ್ರೆಸ್ಸು ಅಧ್ಯಕ್ಷರು ನ್ಯಾಯಾಂಗ ವಿಚಾರಣೆ ಆಗಬೇಕು ಎನ್ನುವ ಅಭಿಪ್ರಾಯವನ್ನು ವ್ಯಕ್ತ ಮಾಡಿದ್ದಾರೆ. ಇದರ ಅರ್ಥ ಮೈಸೂರು ಸರಕಾರಕ್ಕಲ್ಲ. ಅದರ ಮುಂಬಯಿ ಸರಕಾರ ನ್ಯಾಯಾಂಗ ವಿಚಾರಣೆ ಮಾಡಬೇಕು ಎಂದು ನಾನು ಎಲ್ಲೂ ಹೇಳಿಲ್ಲ. ಏಕೆಂದರೆ ಇದು ಎರಡನೇ ರಾಜ್ಯದ ಆಡಳಿತದಲ್ಲಿ ಹಸ್ತಕ್ಷೇಪ ಮಾಡಿದಂತಾಗುತ್ತದೆ. ಇದಕ್ಕಾಗಿ ನಾನಾಗಿ ಬೇಡಿಲ್ಲ. ನ್ಯಾಯಾಂಗ ವಿಚಾರಣೆ ಏರ್ಪಾಡು ಮಾಡಬೇಕು ಎಂದು ಕಾಂಗ್ರೆಸ್ ಸಂಸ್ಥೆಯವರು ಹೇಳಿರುವುದು. ಆದರೆ ಇಲ್ಲೂ ಕಾಂಗ್ರೆಸ್ಸು ಸರಕಾರ ಇದೆ ಅಲ್ಲೂ ಇದೆ ಎಂದು ನಾನು ಇದರ ಬಗ್ಗೆ ಹೇಳುವುದು ಕಷ್ಟ. ಇದರ ಬಗ್ಗೆ ಅವರನ್ನು ನಾನು ಪ್ರಶ್ನೆ ಮಾಡುವಹಾಗಿಲ್ಲ.

ಶ್ರೀ ಕೆ. ಹೆಚ್. ಪಾಟೀಲ್.—ಮುಖ್ಯ ಮಂತ್ರಿಗಳು 7 ನೇ ತಾರೀಖು ದೆಹಲಿಯಲ್ಲಿ ಹೋದಾಗ ಶಿವಸೇನೆ ವಿಚಾರದಲ್ಲಿ ಮಹಾರಾಷ್ಟ್ರದ ಮುಖ್ಯ ಮಂತ್ರಿಗಳೊಂದಿಗೆ ವಿಚಾರ ಮಾಡುವಾಗ ಮೈಸೂರು ಹಾಗೂ ಮಹಾರಾಷ್ಟ್ರದ ಗಡಿ ವಿಚಾರಗಳೂ ಚರ್ಚೆಗೆ ಬರಬಹುದು ಎಂದು ನಮಗನಿಸುತ್ತದೆ. ಇಂತಹ ಪ್ರಶ್ನೆ ಬಂದಲ್ಲಿ ಈಗಾಗಲೇ ಈ ಹೌಸಿನಲ್ಲಿ ತಾಳಿದ ನಿಲುವೆಯಂತೆ ನಮ್ಮ ಸರಕಾರದ ಧೋರಣೆ ತಿಳಿಸುತ್ತೀರಾ ಇಲ್ಲವೇ ಸರಕಾರದ ಧೋರಣೆಯಲ್ಲಿ ಏನಾದರೂ ಮಾರ್ಪಾಡಾಗಿದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರಾದ ಶ್ರೀಮಾನ್ ಕೆ. ಹೆಚ್. ಪಾಟೀಲ್‌ರವರು ಗಡಿ ಪ್ರಶ್ನೆಯ ಬಗ್ಗೆ ನಮ್ಮ ನಿಲುವೆ ಏನು ಎಂದು ಕೇಳಿದ್ದಾರೆ ಗಡಿ ಪ್ರಶ್ನೆಯ ಬಗ್ಗೆ ನಮ್ಮ ನಿಲುವೆ ಏನು ಎನ್ನುವುದನ್ನು ಅನೇಕ ಸಾರಿ ವ್ಯಕ್ತ ಮಾಡಿದ್ದೇನೆ. ಮಹಜನ್ ವರದಿಯ ಬಗ್ಗೆ ನಮ್ಮ ನಿಲುವೆ ಏನು ಎನ್ನುವುದನ್ನೂ ಹೇಳಿದ್ದೇವೆ. ಇವೊತ್ತು ನಿಲುವೆ ಬಿಟ್ಟು ಬೇರಾವ ಪ್ರಶ್ನೆಯೂ ಇಲ್ಲ, ಮತ್ತು ನಮ್ಮ ನಿಲುವೆ ಬಿಟ್ಟು ಬೇರೆ ವಿಚಾರಗಳಾವುವೂ ಇನ್ನು ಬಂದಿಲ್ಲ.

Mr. SPEAKER.—Short Notice question time is over.

Sri B. B. SAYANAK.—The Chair has not allowed me to put a question. In protest I will walk out.

Mr. SPEAKER.—The Member cannot protest against the Chair.

(Sri B. B. Sayanak withdrew)

QUESTION FOR ANSWER ON THE DAY

(but not taken up)

Jeeps and Residential Telephone Facilities to the Deputy Directors of Public Instruction.

607. Sri S. BHIMANNA (Bhalki).—

Will the Minister for Education be pleased to state:—

(*a*) whether the Government has allotted jeeps and residential telephones to each District Education Officer in the State;

(*b*) whether the Deputy Directors of Public Instruction of the Divisions are also allotted Jeeps likewise, if not, the reasons;

(*c*) whether it has come to the notice of the Government that for want of Jeeps and residential telephones the Deputy Directors of Public Instruction are not able to supervise and control the Educational Institutions and Schools in time effectively and properly;

(*d*) whether any representation has been made in this regard by the Deputy Directors of Public Instruction;

(*e*) if so, the action taken by Government in this regard?

Sri K. V. SHANKARA GOWDA (Minister for Education).—

(*a*) Yes. Jeeps have been provided. No phones have been given.

(*b*) No.

(*c*) No.

(*d*) No.

(*e*) Does not arise.

Complaint *re*: alleged scant respect by Ministers for accepted invitations.

ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಸ್ವಾಮೀ, 5ನೇ ತಾರೀಖು ಎಂದರೆ ಇವೊತ್ತು ಮಾಗಡಿ ತಾಲ್ಲೂಕಿನಲ್ಲ ಒಂದು ಜಾತ್ರೆ ಸುಗ್ಗನಹಳ್ಳಿ ಜಾತ್ರೆ ಎಂದು ನಡೆಯುತ್ತದೆ. ಇಲ್ಲನ ಜಾನುವಾರುಗಳಿಗೆ ಬಹುಮಾನ ವಿನಿಯೋಗ ಮಾಡುವುದಕ್ಕಾಗಿ ಈ ಸರಕಾರದ ಇಬ್ಬರು ಮಂತ್ರಿ

ಗಳನ್ನು ಆಹ್ವಾನ ಮಾಡಿದಾಗ ಅವರು ಒಪ್ಪಿಕೊಂಡಿದ್ದರು. ಅವರು ಎಂದರೆ ರೆವೆನ್ಯೂ ಮಂತ್ರಿಗಳಾದ ಶ್ರೀಮಾನ್ ಕೌಜಲಗಿಯವರು ಮತ್ತು ಶ್ರೀಮಾನ್ ಶಂಕರರಾಯರು, ಇದನ್ನು ಪ್ರಿಂಟು ಕೂಡ ಮಾಡಿದ್ದರು. ಆದರೆ ಇಲ್ಲಿ ಪಿ.ಎಸ್.ಪಿ. ಗೆ ಸೇರಿದ ಶ್ರೀಮಾನ್ ಕೆ. ಲಕ್ಕಪ್ಪನವರು ಎಂ.ಪಿ. ಅಧ್ಯಕ್ಷತೆ ವಹಿಸುತ್ತಾರೆ ಎಂದು ಇರುವುದರಿಂದ ಈಗ ಅಲ್ಲಿಗೆ ಹೋಗಕೂಡದು ಎಂದೂ ಈಗ ಶ್ರೀ ಶಂಕರರಾಯರು ಬರುವುದಿಲ್ಲವೆಂದು ಹೇಳಿದ್ದಾರೆಂದು ಕೇಳುತ್ತೇವೆ. ನಾನು ಇಲ್ಲಿ ತಮ್ಮ ಮೂಲಕ ಕೇಳುತ್ತಿರುವುದು ಸರಕಾರದ ಮಂತ್ರಿಗಳಾಗಿರುವವರು ಬರೀ ಕಾಂಗ್ರೆಸು ಪಕ್ಷದ ಮಂತ್ರಿಗಳಾಗಿದ್ದಾರೆ ಎಂದು ಭಾವಿಸಬೇಕೋ ಇಲ್ಲ ದೇಶಕ್ಕೆಲ್ಲಾ ಸೇರಿದ ಮಂತ್ರಿಗಳು ಎಂದು ಭಾವಿಸಬೇಕೋ ತಿಳಿಯದಾಗಿದೆ. ಈ ದೇಶದಲ್ಲಿ ಕಾಂಗ್ರೆಸ್ಸು ಪಕ್ಷದವರಿಗಾಗಿ ಕಾಂಗ್ರೆಸ್ಸು ಮಂತ್ರಿಗಳಿದ್ದಾರೆ ವೆನ್ನುವುದು ಇದ್ದರೆ ಅದು ಸಮಂಜಸವಾಗುವುದಿಲ್ಲ. ಹಾಗಿದ್ದರೆ ನಾವು ಬೇರೆ ಪಕ್ಷದವರೆಲ್ಲಾ ಸೇರಿಕೊಂಡು ಎಲ್ಲ ತೆರಿಗೆಗಳ ವಸೂಲಿ ಇತ್ಯಾದಿಗಳನ್ನು ನಾವೇ ವಸೂಲುಮಾಡಿಕೊಂಡು ಪ್ರತಿ ಸರಕಾರವನ್ನು ಮಾಡಬೇಕೆಂದು ಇದ್ದರೆ ನಾವು ಮಾಡಿಕೊಳ್ಳುತ್ತೇವೆ.

ಈಗ ಜನ ಮಂತ್ರಿಗಳನ್ನು ಕಾಂಗ್ರೆಸ್ಸಿನ ಮಂತ್ರಿಗಳಲ್ಲ ದೇಶದ ಮಂತ್ರಿಗಳು ಎನ್ನುವ ಅಭಿಪ್ರಾಯದಿಂದ ಸಭೆಗೆ ಕರೆಯುತ್ತಾರೆ. ಇವರು ಒಂದು ದಿಟ್ಟತನವನ್ನು ತೋರಿಸಿದ್ದಾರೆ. ಈಗ ಇರತಕ್ಕಂಥ ಮಂತ್ರಿಗಳು ಕಾಂಗ್ರೆಸ್ಸಿನವರು ಒತ್ತಾಯಮಾಡಿದಂಥ ಸಭೆಗೆ ಬರುವುದಾದರೆ ಇವರು ಕಾಂಗ್ರೆಸ್ ಪಾರ್ಟಿಯವರಿಗೆ ಮಾತ್ರ ಮಂತ್ರಿಗಳೇ ಅಥವಾ ಅವರು ದೇಶದ ಮಂತ್ರಿಗಳೇ ಎನ್ನುವುದನ್ನು ಸಭೆಗೆ ಹೇಳಬೇಕು. ಇದಕ್ಕೆ ಸರ್ಕಾರ ಉತ್ತರ ಹೇಳುತ್ತಾರೆಂದು ನಾನು ತಿಳಿದುಕೊಂಡಿದ್ದೇವೆ.

ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಸ್ವಾಮಿ, ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ್ದು ನಿಜ ಇದ್ದ ಪಕ್ಷದಲ್ಲಿ ಕಾಂಗ್ರೆಸ್ ಆಡಳಿತದ ವೈಖರಿ ನೋಡಿ ಬಹಳ ವ್ಯಥೆಯಾಗುತ್ತದೆ. ಈರೀತಿ ಪಕ್ಷಪಾತ ದೃಷ್ಟಿಯಿಂದ ವರ್ತಿಸುವುದಾದರೆ ಕಾಂಗ್ರೆಸ್ಸೇತರರೂ ಬಂದಿರುವ ಕ್ಷೇತ್ರದಲ್ಲೂ ಕೂಡ ಕೆಲವರು ಕಾಂಗ್ರೆಸ್ಸಿಗೆ ಓಟು ಕೊಟ್ಟಿದ್ದಾರೆ. ಆ ಕ್ಷೇತ್ರದಲ್ಲಿ ಓಟು ತೆಗೆದುಕೊಂಡು ಆರಿಸಿಕೊಂಡು ಬಂದಂಥ ಜನ ಇದ್ದಾರೆ. ಈಗ ನನ್ನ ಕ್ಷೇತ್ರಕ್ಕೆ ಎಂ ಎಲ್. ಎ. ಕ್ಷೇತ್ರಕ್ಕೆ ಈ ಮಂತ್ರಿಗಳು ದಯಮಾಡಿಸುತ್ತಾರೆಯೇ? ಅಥವಾ ಬರುವುದಕ್ಕೆ ಮುಂಚೆ ಎಂ.ಎಲ್.ಎ. ಅವರನ್ನು ಮೊದಲು ಕೇಳುವ ಸಂಪ್ರದಾಯ ಇಟ್ಟುಕೊಳ್ಳುತ್ತಾರೆಯೇ? ಅಥವಾ ಇನ್‌ವೈಟ್ ಮಾಡುವುದಕ್ಕೆ ಶಾಸ್ತ್ರ ಏನಾದರೂ ಮಾಡಿಸ್ಬೇಣವೇ? ಇದನ್ನು ಮುಖ್ಯಮಂತ್ರಿಗಳು ವಿಚಾರಣೆ ಮಾಡಿ ಈ ಸಂದರ್ಭದಲ್ಲಿ ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಮಾನ್ಯ ಶಿವಪ್ಪನವರು ಹೇಳಿದಹಾಗೆ ನಡೆದಿದ್ದೇ ಆಗಿದ್ದರೆ ಅದು ತಪ್ಪು. ಹಿಂದೆಯೂ ಸಹ ಹೇಳಿಕೆ ಕೊಟ್ಟಿದ್ದಾರೆ. ಯಾರು ಕೇಳಿದರೂ ಹೋಗಬೇಕು ಎಂದು ಹೇಳಿದ್ದಾರೆ. ಇದಕ್ಕೆ ಏನು ಹೇಳುತ್ತೀರಾ?

ಶ್ರೀ ವಾಟಾಳ್ ನಾಗರಾಜ್ (ಚಿಕ್ಕಪೇಟೆ).—ನೀವು ತಾರತಮ್ಯ ಮಾಡಬೇಡಿ. ಬಹಳ ಪ್ರಾಮುಖ್ಯವಾದ ವಿಷಯ. ಮಾನ್ಯ ಶಿವಪ್ಪನವರು ಈ ವಿಚಾರವನ್ನು ತಂದಿದ್ದಾರೆ. ಈ ವಿಷಯಕ್ಕೆ ಉತ್ತರ ಹೇಳಬೇಕು. ಒಂದು ವಿಚಾರ ಹೇಳುವುದಾದರೆ ಮಲ್ಲೇಶ್ವರಂನಲ್ಲಿ ಒಬ್ಬರು ಶೀಮೆಯೆಣ್ಣೆ ವ್ಯಾಪಾರ ಮಾಡತಕ್ಕಂಥವರು ಒಬ್ಬರು ಇದ್ದಾರೆ. ಅವರ ಮನೆಗೆ ಅನೇಕ ಸಲ ಮಂತ್ರಿಗಳು ಹೋಗುತ್ತಿದ್ದಾರೆ. ಕರೆಯದೇ ಇದ್ದರೂ ಕೂಡ ಹೋಗುತ್ತಾರೆ.. ಹೀಗಿರುವಾಗ ಒಬ್ಬ ಲೋಕಸಭಾ ಸದಸ್ಯರು ಬರಬೇಕು ಎಂದು ಕರೆದಾಗ ಅವರ ವಿರೋಧ ಪಕ್ಷಕ್ಕೆ ಸೇರಿದವರು ಹೋಗಬಾರದು ಎಂದು ತಾರತಮ್ಯ ತೋರಿಸುವುದು ಸರಿಯೇ? ಈ ರೀತಿ ಮಾಡಬಾರದು. ಅದು ತಪ್ಪಾಗುತ್ತದೆ. ಅವರು ದೇಶದಲ್ಲಿ ಕಾಂಗ್ರೆಸ್ಸಿನ ಪಕ್ಷಕ್ಕೆ ಮಾತ್ರ ಮಂತ್ರಿಗಳೇ ಅಥವಾ ದೇಶಕ್ಕೆ ಮಂತ್ರಿಗಳೇ ಎನ್ನುವುದನ್ನು ತಿಳಿಸಬೇಕು. ಹಿಂದೆ ಅನೇಕ ಸಲ ತಾರತಮ್ಯ ತೋರಿಸಿದ್ದೀರಿ. ಅದು ತಪ್ಪು ಎಂದು ತಮ್ಮ ಮೂಲಕ ಹೇಳುತ್ತೇನೆ.

ಶ್ರೀ ಎಂ. ಎನ್. ರಾಮಣ್ಣ (ತುರುವೇಕೆರೆ).—ಮಂತ್ರಿಗಳು ಯಾರ ಮನೆಗೂ ಹೋಗಬಾರದು ಎನ್ನುವುದು ಏನೂ ಇಲ್ಲ. ಯಾರು ಮಂತ್ರಿಗಳು ಆದರೂ ಕೂಡ ನಮ್ಮ ಹಾಗೆ ಅವರೂ ಕೂಡ ಎನ್ನುವುದನ್ನು ತಿಳಿಯಬೇಕು. ಮಂತ್ರಿಗಳನ್ನು ಯಾರ ಮನೆಗೂ ಹೋಗಬೇಡಿ ಎಂದು ಈ ಮನೆಯಲ್ಲಿ ಹೇಳುವುದು ಸರಿಯಲ್ಲ.

ಶ್ರೀ ಬಾಪೂಗೌಡ (ಷಹಪೂರ).—ಸ್ವಾಮಿ, ಅಜೀಜ್ ಸೇಟರು ಮತ್ತು ವಾಟಾಳ್ ನಾಗರಾಜ್ ಅವರುಗಳು ಮಧ್ಯೆ ಮಧ್ಯೆ ಕೂತುಕೊಂಡು, ನಿಂತುಕೊಂಡು ಯಾವಾಗಲೂ ಗಲಾಟೆ ಮಾಡುತ್ತಾರೆ, ಅದು ಸರಿಯೇ?

ಶ್ರೀ ವಾಟಾಳ್ ನಾಗರಾಜ್.—ಈ ರೀತಿ ಹೇಳುವುದಕ್ಕೆ ಅವರು ಯಾರು ಸ್ವಾಮಿ, ನನಗೆ ಅರ್ಥವಾಗುವುದಿಲ್ಲ. ಅವರು ಹೇಳುವುದಾದರೆ ತಮಗೆ ಹೇಳಬೇಕು. ನೀವು ಹೇಳಿದರೆ ಕೇಳುತ್ತೇವೆ. ಅವರಿಗೆ ಹೀಗೆ ಹೇಳುವ ಅಧಿಕಾರ ಇಲ್ಲ. ಏನಿದ್ದರೂ ತಮ್ಮ ಮೂಲಕ ಹೇಳಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

†ಶ್ರೀ ವೀರೇಂದ್ರ ಪಾಟೀಲ್ (ಮುಖ್ಯಮಂತ್ರಿಗಳು).—ಅಧ್ಯಕ್ಷರೇ, ಈಗ ವಿರೋಧ ಪಕ್ಷದ ನಾಯಕರು ಯಾವುದೋ ಆಮಂತ್ರಣ ಪತ್ರಿಕೆಯನ್ನು ತೋರಿಸಿ ಅದರಲ್ಲಿ ಇಬ್ಬರು ಮಂತ್ರಿಗಳು ಜಾತ್ರೆಗೆ ಬರುವುದಕ್ಕೆ ಒಪ್ಪಿಕೊಂಡು ಕೊನೇ ಘಳಿಗೆಯಲ್ಲಿ ಕ್ಯಾನ್ಸಲ್ ಮಾಡಿದ್ದಾರೆಂದು ಹೇಳಿದ್ದಾರೆ. ಅದೇನಿದೆ ಎನ್ನುವುದು ನನಗೆ ಗೊತ್ತಿಲ್ಲ. ಸ್ವಲ್ಪ ಮೊದಲೇ ನನಗೆ ತಿಳಿಸಿದ್ದರೆ, ಸಂಬಂಧಪಟ್ಟ ಮಂತ್ರಿಗಳ ಜೊತೆಯಲ್ಲಿ ನಾನು ವಿಚಾರ ತಿಳಿದುಕೊಂಡು ಸಭೆಗೆ ಹೇಳುವಂಥ ಪರಿಸ್ಥಿತಿಯಲ್ಲಿರುತ್ತಿದ್ದೆ.

ಅವರು ಒಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಮಂತ್ರಿಗಳು ಕೇವಲ ಕಾಂಗ್ರೆಸ್ಸಿನವರಿಗೆ ಮಂತ್ರಿಗಳೋ ಅಥವಾ ನಮ್ಮ ದೇಶದ ಜನತೆಗಾಗಿ ಇದ್ದಾರೆಯೋ ಎಂದು. ಆ ವಿಚಾರವಾಗಿ ಅನೇಕ ಸಲ ವ್ಯಕ್ತ ಮಾಡಿದ್ದೇನೆ. ಈವೊತ್ತು ಕಾಂಗ್ರೆಸ್ ಮಂತ್ರಿಮಂಡಲವಿರಬಹುದು. ಕಾಂಗ್ರೆಸ್ಸಿಗೆ ಬಹುಮತ ಬಂದು ಅದರ ಮುಖಂಡರು ಸರ್ಕಾರದ ಆಡಳಿತಸೂತ್ರವನ್ನು ಹಿಡಿಯಬೇಕು ಎಂದು ನಿರ್ಣಯ ಮಾಡಿರಬಹುದು. ಆದರೆ ನಾವು ಮುಖ್ಯಮಂತ್ರಿಯಾಗಿರಲಿ, ಮಂತ್ರಿಗಳಾಗಿರಲಿ ಇಡೀ ಎರಡೂವರೆ ಕೋಟಿ ಜನರ ಪ್ರತಿನಿಧಿಗಳಾಗಿ ಕೆಲಸ ಮಾಡುತ್ತೇವೆ, ಅವರ ಒಲವು ಯಾವ ಪಕ್ಷಕ್ಕೇ ಇರಲಿ ಅವರ ಸಮಸ್ಯೆಗಳನ್ನು ಪರಿಹಾರ ಮಾಡುವುದಿದ್ದರೆ ಅದನ್ನು ನಡೆಸುವಂಥದ್ದು ನಮ್ಮ ಕರ್ತವ್ಯವಾಗಿದೆ. ನಮ್ಮ ಜವಾಬ್ದಾರಿಯಾಗಿದೆ. ಚುನಾವಣೆ ಕಾಲದಲ್ಲಿ ಕಾಂಗ್ರೆಸ್ಸಿಗೆ ಮತ ಕೊಟ್ಟವರನ್ನು ಮಾತ್ರ ಪ್ರತಿನಿಧಿಸುತ್ತೇವೆ ಎಂದು ತಿಳಿದುಕೊಂಡು ಆ ರೀತಿಯಿಂದ ನಡೆದುಕೊಂಡಿಲ್ಲ. ಮಾನ್ಯ ಸಭೆಯ ಅನೇಕ ಸದಸ್ಯರಿಗೆ ಗೊತ್ತು, ಅವರವರ ಮತ ಕ್ಷೇತ್ರಗಳಲ್ಲಿ ನಾವು ಕಾರ್ಯಕ್ರಮ ಹಾಕಿಕೊಂಡು ಹೋಗಿದ್ದೇವೆ. ಶ್ರೀಮಾನ್ ವಾಟಾಳ್ ನಾಗರಾಜ್ ಅವರು ನವಂಬರ್ ಒಂದನೇ ತಾರೀಕು ಕರ್ನಾಟಕ ರಾಜ್ಯೋತ್ಸವವನ್ನು ಮಾಡಿದಾಗ ಅವರು ಕರೆದರು. ನಾನು ಹೋಗಿದ್ದೇನೆ. ಅನೇಕ ಮಂತ್ರಿಗಳೂ ಹೋಗಿದ್ದಾರೆ. ಅದೇ ರೀತಿಯಿಂದ ಮಾನ್ಯ ಬಂಗಾರಪ್ಪನವರ ಕ್ಷೇತ್ರವಾದ ಸೊರಬ ತಾಲ್ಲೂಕಿಗೂ ಹೋಗಿ ಕಾರ್ಯಕ್ರಮ ಮಾಡಿಕೊಂಡು ಬಂದಿದ್ದೇನೆ. ಈವೊತ್ತಿನಿಂದ ಡಿಮಾಂಡ್ಸ್ ಪ್ರಾರಂಭವಾಗುತ್ತದೆ. ಅದಕ್ಕಾಗಿ ನಾನು ಎಲ್ಲರಿಗೂ ಅರಿಕೆ ಮಾಡಿಕೊಂಡಿದ್ದೇನೆ, ಡಿಮಾಂಡ್‌ಗಳು ಮುಗಿಯುವ ಮುಂಚೆ ಯಾರೂ ಮಂತ್ರಿಗಳು ಪ್ರವಾಸ ಹೋಗಬಾರದು ಎಂದು. ಅದೇ ರೀತಿ ಎಲ್ಲ ಸದಸ್ಯರೂ ಸಭೆಯಲ್ಲಿ ಹಾಜರಾಗಿರಬೇಕು ಎಂದು ಕೂಡ ಹೇಳಿದ್ದೇನೆ. ಅದನ್ನು ಗಮನಕ್ಕೆ ತಂದುಕೊಂಡು ಏನಾದರೂ ಕ್ಯಾನ್ಸಲ್ ಮಾಡಿದ್ದಾರೋ ಏನೋ ಗೊತ್ತಿಲ್ಲ. ಅದರ ಬಗ್ಗೆ ಪರಿಶೀಲನೆ ಮಾಡುತ್ತೇನೆ ಎಂದು ಮಾತ್ರ ಹೇಳುತ್ತೇನೆ.

ಶ್ರೀ ಎಸ್. ಗೋಪಾಲಗೌಡ.—ವಿರೋಧ ಪಕ್ಷದ ಶಾಸನ ಸಭಾ ಸದಸ್ಯರ ಕ್ಷೇತ್ರಕ್ಕೆ ಹೋಗುವಾಗ ಅವರಿಗೆ ಯಾವ ಸ್ಥಾನಮಾನವಿದೆ? ಅಲ್ಲಿಗೆ ಹೋಗುವಾಗ ಅವರನ್ನು ಕೇಳಿ ಹೋಗಬೇಕೋ, ಕೇಳದೆ ಹೋಗಬಹುದೋ, ಸೋತವನ ಜೊತೆಯಲ್ಲಿ ಹೋಗಿ ಅವರ ಜೊತೆಯಲ್ಲಿ ಕಾರ್ಯಕ್ರಮ ಮಾಡಬಹುದೋ? ಇದೆಲ್ಲವನ್ನೂ ಸ್ವಲ್ಪ ಕಾನೂನು ರೀತಿಯಿಂದ ಅಥವಾ ರೂಲ್ಸ್‌ನಲ್ಲಿ ತಂದರೆ ಒಳ್ಳೆಯದು. ಹೋದ ಸಲ ಗುಲ್ಬರ್ಗದಲ್ಲಿ ಆದದ್ದು ಗೊತ್ತಿರಬಹುದು. ಅಲ್ಲಿ ಹೊಡೆದಾಟವಾದಂತೆ ಬೇರೆ ಕಡೆಯೂ ಆಗಬೇಕೋ? ಇದನ್ನು ಸ್ವಲ್ಪ ಹೇಳುವುದಕ್ಕಾಗುತ್ತದೆಯೇ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಹೇಳುವ ರೀತಿಯಲ್ಲಿ ನಡೆದಂತೆ ಕಾಣಿಸಲಿಲ್ಲ. ಅವರು ಯಾವಾಗ ನಡೆದುದನ್ನು ಹೇಳುತ್ತಿದ್ದಾರೆಯೋ ನನಗೆ ಗೊತ್ತಿಲ್ಲ. ಈಗ ಹೇಳಿದ ಹಾಗೆ ಅನೇಕ ಕಡೆ ಅಫಿಷಿಯಲ್ ಕಾರ್ಯಕ್ರಮ ಹಾಕಿಕೊಂಡು ನಾವು ಹೋಗುತ್ತೇವೆ. ಒಂದು ಕಡೆ ಹೋಗುವ ಮುಂಚೆ ನಮಗೆ ಸಾಧ್ಯವಾಗುವಂತೆ ಜಿಲ್ಲೆಯಲ್ಲಿ ಅನೇಕ ಭಾಗಗಳಲ್ಲಿ ಸಂಚಾರ ಮಾಡಿಕೊಂಡು ಬರುವಂಥದ್ದಿರುತ್ತದೆ. ಅಲ್ಲಿ ಅಫಿಷಿಯಲ್ ಕಾರ್ಯಕ್ರಮ ಹಾಕಿಕೊಂಡು ಹೋಗುವುದಕ್ಕೆ ಮುಂಚೆ ಅಲ್ಲಿನ ಎಂ.ಎಲ್.ಎ. ಅವರಿಗೆ ತಿಳಿಸಿ ಅವರು ಬಾ ಎಂದರೆ ಹೋಗುವುದು, ಬೇಡ ಎಂದರೆ ಬಿಡುವುದು ಹೀಗೆ ಮಾಡಲು ನಮ್ಮ ಕಾರ್ಯಕ್ರಮವನ್ನು ಮುಂಚಿತವಾಗಿ ನೋಟೀಫೈ ಮಾಡಿ ಅದಕ್ಕೆ ಆಕ್ಷೇಪಣೆಗಳನ್ನು ಕರೆದು, ಅದರಂತೆ ಮಾಡುವುದಕ್ಕಾಗುವುದಿಲ್ಲ. ಆದರೆ ಇಷ್ಟು ಮಾತ್ರ ಮಾಡುತ್ತೇವೆ. ಎಲ್ಲಿ ಹೋದರೂ ಅಸೆಂಬ್ಲಿ ಸದಸ್ಯರು ಆ ಕ್ಷೇತ್ರವನ್ನು ಪ್ರತಿನಿಧಿಸುವುದರಿಂದ ಅವರಿಗೆ ಸ್ಥಾನಮಾನಗಳನ್ನು ಕೊಡುತ್ತೇವೆ, ಅವರನ್ನು ಜೊತೆಯಲ್ಲಿ ಕರೆದುಕೊಂಡು ಹೋಗು

ತ್ತೇವೆ. ಎಲ್ಲಿಯಾದರೂ ಕಾರ್ಯಕ್ರಮವಾಗುತ್ತಿದ್ದರೆ ವೇದಿಕೆಯ ಮೇಲೆ ಕೂಡುವುದಕ್ಕೆ, ಏನಾದರೂ ಅವಕಾಶವಿದ್ದರೆ ತಮ್ಮ ಕ್ಷೇತ್ರದ ಸಮಸ್ಯೆಗಳನ್ನು ಹೇಳುವುದಕ್ಕೆ ಅವಕಾಶ ಕೊಡುತ್ತೇವೆ. ಆದರೆ, ಇದಕ್ಕೆಲ್ಲ ಕಾನೂನು ಮಾಡುವಂಥದ್ದು ಸರಿ ಕಾಣುವುದಿಲ್ಲ. ಯಾವ ರೀತಿ ನಡೆದುಕೊಳ್ಳಬೇಕು ಎಂದು ನಮ್ಮಷ್ಟಕ್ಕೆ ನಾವೇ ಒಂದು ಕೋಡ್ ಆಫ್ ಕಾಂಡಕ್ಟ್ ಹಾಕಿಕೊಳ್ಳಬೇಕಾಗುತ್ತದೆ. ಯಾವುದೇ ಕಾನೂನು, ರೂಲ್ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಎಚ್. ಬಿ. ಜ್ವಾಲನಯ್ಯ (ಹಾಸನ).—ಹೇಮಾವತಿ ಅಣೆಕಟ್ಟಿಗೆ ಶಂಕುಸ್ಥಾಪನೆ ಮಾಡುವ ದಿವಸ ಸಂಬಂಧಪಟ್ಟ ಎಂ. ಪಿ. ಯನ್ನೂ ಕೂಡ ಕರೆಸಿರಲಿಲ್ಲ, ಯಾರೋ ಕಾಂಗ್ರೆಸ್ ಸದಸ್ಯರು ಮತ್ತು ಇತರರು ಇದ್ದರು.

ಶ್ರೀ ವೀರೇಂದ್ರ ಪಾಟೀಲ್.—ಅವರು ಹೇಳುತ್ತಿರುವುದು ಸಮಾರಂಭ ನಮ್ಮದಲ್ಲ, ಕಂಟ್ರಾಕ್ಟರದು. ಊರಿನವರ ಸಮಾರಂಭಕ್ಕೆ ಹೋದಾಗ ಅಲ್ಲಿ ನಮಗೆ ಬೇಕಾದವರನ್ನು ಇಂಥ ಕಡೆ ಕೂಡಿಸಿ ಎಂದು ನಾವು ಹೇಳುವುದಕ್ಕಾಗುವುದಿಲ್ಲ. ಎರಡನೆಯವರ ಮನೆಗೆ ಊಟಕ್ಕೆ ಹೋದಾಗ ನಮಗೆ ಬೇಕಾದವರನ್ನು ಇಂಥ ಕಡೆ ಕೂಡಿಸಿ ಎಂದು ನಾವು ಹೇಳುವುದು ಸರಿಯಲ್ಲ. ಮಾನ್ಯ ಸದಸ್ಯರು ಕೆಳಗೆ ಕುಳಿತಿರುವುದನ್ನು ನೋಡಿದಮೇಲೆ ಹೇಳುವಷ್ಟರಲ್ಲಿ ಬಹುಶಃ ಅವರು ಹೊರಟು ಹೋಗಿದ್ದರೆಂದು ಕಾಣುತ್ತದೆ.

ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಮುಖ್ಯ ಮಂತ್ರಿಗಳು ನನ್ನ ಕ್ಷೇತ್ರಕ್ಕೆ ಬಂದಿದ್ದರು....

ಅಧ್ಯಕ್ಷರು.—ಅದನ್ನು ಮುಖ್ಯ ಮಂತ್ರಿಗಳ ಛೇಂಬರಿನಲ್ಲಿ ಕೇಳಿ.

ಶ್ರೀ ಎಸ್. ಬಂಗಾರಪ್ಪ.—ಎರಡು ನಿಮಿಷ ಅವಕಾಶ ಕೊಟ್ಟರೆ ವಿಷಯ ಹೇಳುತ್ತೇನೆ.

Mr. SPEAKER.—I do not permit the Hon. Member now. He may meet me in my Chambers. I am asking his party Leader whether he wants this interruption to continue or other items on the List of Business should be taken up ? I also want an assurance from Sri Gopala Gowda whether Sri Bangarappa would be the last Member to seek clarification.

Sri AZIZ SAIT (Narasimaraja).—I have an appeal to make.

Sri B. P. GANGADAR (Tumkur).—I wish to make a brief statement.

Mr. SPEAKER.—I want to know from the Leader of the Opposition whether so many Members could raise and interrupt.

Sri S. SIVAPPA.—Sri Bangarappa may be permitted.

ಶ್ರೀ ಎ. ಮುನಿಯಪ್ಪ (ಬಾಗೇಪಲ್ಲಿ).—298 ನೆಯ ರೂಲ್ ಪ್ರಕಾರ ಅಧ್ಯಕ್ಷರು ಎದ್ದಾಗ ಯಾರೂ ಏಳಬಾರದು ಎಂದಿದೆ. ಎಲ್ಲರಿಗೂ ಈ ರೀತಿ ಇತರರಂತೆ ಏಳಲು ಅವಕಾಶವಿದೆಯೇ ? ಈ ಬಗ್ಗೆ ಕ್ಲಾರಿಫಿಕೇಷನ್ ಬೇಕು.

Mr. SPEAKER.—All that is going on now is irregular and not according to the rules.

ಶ್ರೀ ಬಿ. ಪಿ. ಗಂಗಾಧರ್.—ಮಂತ್ರಿಗಳು ಪ್ರವಾಸಕ್ಕೆ ಹೋದಾಗ ಯಾವುದಾದರೂ ಸಮಾರಂಭ ಇರುತ್ತದೆ, ಕೆಲವರು ಅದನ್ನು ಉದ್ಘಾಟಿಸುತ್ತಾರೆ, ಕೆಲವರು ಅಲ್ಲಿ ಪ್ರಿಸೈಡ್ ಮಾಡುತ್ತಾರೆ. ತುಮಕೂರಿನಲ್ಲಿ ಒಂದು ಮೀಟಿಂಗ್ ಆಯಿತು ಒಬ್ಬ ಮಿನಿಸ್ಟರು ಪ್ರಿಸೈಡ್ ಮಾಡಿದ್ದರು, ಇನ್ನೊಬ್ಬ ಮಿನಿಸ್ಟರು ಉದ್ಘಾಟನೆ ಮಾಡಿದರು. ಆ ಮೀಟಿಂಗ್‌ನಲ್ಲಿ ನಮ್ಮನ್ನು ಯಾರೂ ಕೇಳುವವರೇ ಇರಲಿಲ್ಲ. ಅಧಿಕಾರಿಗಳಿಗೂ ಕೂಡ ಕುಳಿತುಕೊಳ್ಳುವುದಕ್ಕೆ ಸ್ಥಳ ಸಿಕ್ಕಲಿಲ್ಲ. ಅಂತಹ ಸನ್ನಿವೇಶ ಬಂತು. ಅದೇ ಕೊನೇ ಮೀಟಿಂಗ್ ನಾನು ಅಟೆಂಡ್ ಮಾಡಿದ್ದು, ಅದಾದಮೇಲೆ ಯಾವ ಮೀಟಿಂಗಿಗೂ ಕೂಡ ಹೋಗಕೂಡದು ಎಂದು ನಿರ್ಧಾರ ಮಾಡಿಬಿಟ್ಟೆ. ಏಕೆಂದರೆ ಅಲ್ಲಿಗೆ ಹೋಗುವವರಿಗೆ ಮಾನ ಮರ್ಯಾದೆ ಇದ್ದರೆ ಖಂಡಿತ ಹೋಗಕೂಡದು ಎಂಬ ಭಾವನೆ ಬರುತ್ತದೆ. ಅದು ಕಾಂಗ್ರೆಸ್‌ನವರಿಗೆ ಮಾತ್ರ ಮಾಡಿಕೊಳ್ಳತಕ್ಕ ಮೀಟಿಂಗು ಬೇರೆಯವರಿಗೆ ಅಲ್ಲಿ ಸ್ಥಳ ಇಲ್ಲ ಎಂಬ ಅಭಿಪ್ರಾಯ ಜನಗಳಲ್ಲಿ ಬಂದಿದೆ. ಇವತ್ತಿನವರೆಗೂ ಕೂಡ ಯಾವ ಮಂತ್ರಿ ಪ್ರಿಸೈಡ್ ಮಾಡಲಿ,

(ಶ್ರೀ ಬಿ. ಪಿ. ಗಂಗಾಧರ್)

ಯಾವ ಮಂತ್ರಿ ಉದ್ಘಾಟನೆ ಮಾಡಲಿ ಅಂತಹ ಯಾವ ಮೀಟಿಂಗಿಗೂ ಕೂಡ ನಾನು ಹೋಗುತ್ತಾ ಇಲ್ಲ. ತುಮಕೂರಿನಲ್ಲಿ ಸಾವಿತ್ರಮ್ಮ ಕಲ್ಯಾಣ ಮಂದಿರ ಅಂತ ಇದೆ. ಅಲ್ಲಿ ಒಂದು ಮೀಟಿಂಗ್ ಆಯಿತು, ಒಬ್ಬ ಮಿನಿಸ್ಟರು ಪ್ರಿಸೈಡ್ ಮಾಡಿದ್ದರು, ನಮ್ಮ ಆಫೀಸಿಗೆ 20 ಗಜದ ದೂರದಲ್ಲಿ ಅದು ಇದೆ, ನೀವು ಹೋಗುವುದಿಲ್ಲವೇ ಎಂದು ಜನ ಕೇಳಿದವರು ನಾನು ಹೋಗುವುದಿಲ್ಲ ಎಂದು ಹೇಳಿದೆ. ಆದ್ದರಿಂದ ಮಾನ್ಯ ಛೀಫ್ ಮಿನಿಸ್ಟರು ಒಂದು ಸೆಂಟಿಮೆಂಟ್ ಬಹಳ ಒಳ್ಳೆಯದು ಅವರು ಆ ರೀತಿ ಒಂದು ಕೋಡ್ ಆಫ್ ಕಾಂಡಕ್ಟ್ ಹಾಕಿಕೊಂಡು ಲೋಕಲ್ ಎಂ. ಎಲ್. ಎ. ಗಳು ಯಾರಿದ್ದಾರೆ ಅವರಿಗೆ ಸಾಕಾದಷ್ಟು ಪ್ರಾಮಿನೆನ್ಸ್ ಕೊಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ಆ ರೀತಿ ಮಾಡಿದರೆ ಇಂಡಸ್ಟ್ರೀಸ್ ಮಿನಿಸ್ಟರಾಗಲಿ, ರೆವಿನ್ಯೂ ಮಿನಿಸ್ಟರಾಗಲಿ ಅಲ್ಲಿನ ಕಷ್ಟ ಸುಖಗಳನ್ನು ತಿಳಿದುಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ಆ ರೀತಿ ಮಾಡಬೇಕು ಮತ್ತು ಅದನ್ನು ಸ್ಟ್ರಿಂಜೆಂಟ್ ಆಗಿ ಎನ್‌ಫೋರ್ಸ್ ಮಾಡಬೇಕೆಂದು ಅಲ್ಲಿನ ಅಧಿಕಾರಿಗಳಿಗೂ ಕೂಡ ಸೂಚನೆ ಕೊಡಬೇಕೆಂದು ಸಲಹೆ ಮಾಡುತ್ತೇನೆ.

ಶ್ರೀ ಹೆಚ್. ಬಿ. ಜ್ವಾಲನಯ್ಯ.—ಹೇಮಾವತಿ ಅಣೆಕಟ್ಟಿನ ಶಂಕುಸ್ಥಾಪನೆಯ ಉತ್ಸವಕ್ಕೆ ಇನ್‌ವಿಟೇಷನ್ ಬಂದದ್ದು ಚೀಫ್ ಇಂಜಿನಿಯರಿಂದ, ಕಂಟ್ರಾಕ್ಟರಿಂದ ಅಲ್ಲ. ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದು ಸತ್ಯಕ್ಕೆ ದೂರವಾದ ಮಾತು ಎಂದು ಹೇಳುತ್ತೇನೆ.

† ಶ್ರೀ ಎಸ್. ಬಂಗಾರಪ್ಪ.—ಸ್ವಾಮಿ, ಅಧ್ಯಕ್ಷರೇ ರಾಜ್ಯದ ಮಂತ್ರಿಮಂಡಲದಲ್ಲಿರತಕ್ಕ ಮಂತ್ರಿಗಳು ಯಾವುದೇ ರಾಜ್ಯದಲ್ಲಿನತಕ್ಕ ಒಂದು ಭಾಗಕ್ಕೆ ಹೋಗಲಿ, ಅಲ್ಲಿ ಆಯಾಯ ಕ್ಷೇತ್ರಗಳಿಗೆ ಸಂಬಂಧಪಟ್ಟ ಶಾಸನ ಸಭೆಯ ಸದಸ್ಯರನ್ನು ಬರಮಾಡಿಕೊಂಡು, ಸದರಿ ಮಂತ್ರಿಗಳು ದೇಶದಲ್ಲಿರತಕ್ಕ ಎಲ್ಲ ಜನರ ಪ್ರತಿನಿಧಿಗಳೆಂದು ತಿಳಿದು ಅದರಂತೆ ಅವರು ಆ ಜನರನ್ನು ಗೌರವದಿಂದ ಕಾಣಬೇಕಾದುದು ನ್ಯಾಯವಾದದ್ದು. ಅದೇ ವಿಚಾರದಲ್ಲಿ ಈಗ ಸಭೆಯ ಮುಂದೆ ಚರ್ಚೆ ನಡೆಯುತ್ತಿದೆ. ಮೊನ್ನೆತಾನೆ 10–12 ದಿನಗಳ ಹಿಂದೆ ನನ್ನ ಕ್ಷೇತ್ರವಾದ ಸೊರಬಾ ತಾಲ್ಲೂಕಿಗೆ ನಮ್ಮ ರಾಜ್ಯದ ಮುಖ್ಯಮಂತ್ರಿಗಳು ಅಲ್ಲಿ ವರದಾ ನದಿಗೆ ಅಡ್ಡಲಾಗಿ ಕಟ್ಟಿರತಕ್ಕ ಸೇತುವೆಯ ಉದ್ಘಾಟನೆಯ ಬಗ್ಗೆ ಬಂದಿದ್ದರು. ಅವರು ಆ ದಿವಸ ಅಲ್ಲಿಗೆ ಬಂದಿದ್ದಾಗ್ಗೆ ತೋರಿಸಿದ ವರ್ತನೆಯನ್ನು ನೋಡಿ ಎಲ್ಲ ಜನರಲ್ಲೂ ಅವರಷ್ಟು ಅಚ್ಚುಮೆಚ್ಚಾಗಿ ಮಿಳಿತವಾಗುತ್ತಿದ್ದರೆಂಬುದನ್ನು ನೋಡಿ ನಾನು ಬಹಳವಾಗಿ ಮೆಚ್ಚಿಕೊಂಡೆ. ಜನರ ಪ್ರತಿನಿಧಿಗಳಾಗಿ ಜನರ ಮಧ್ಯೆ ಯಾವ ರೀತಿ ತಾವು ವರ್ತಿಸಬೇಕು, ಯಾವ ರೀತಿ ತಾವು ಅವರಲ್ಲಿ ನಡೆದುಕೊಳ್ಳಬೇಕು ಅನ್ನುವಂಥ ಪ್ರಜ್ಞೆ ಅವರಲ್ಲಿ ಇದೆ. ಅವರಲ್ಲಿ ಆ ರಾಜಕೀಯ ಪರಿಜ್ಞಾನ ಇದೆ ಎಂಬುದನ್ನು ನಾನು ಅರಿತುಕೊಂಡೆನು. ಆದರೆ ನಮ್ಮ ಮಂತ್ರಿಗಳು ಹಾಕತಕ್ಕ ಟೂರುಗಳಲ್ಲಿ ಕೆಲವು ಕಾಲವನ್ನು ಮೀರಿ ಬಂದಿರುವುದೂ ಉಂಟು. ತಾರೀಖನ್ನು ಬದಲಾಯಿಸಿ ಬಂದಿರುವುದೂ ಉಂಟು ಆದರೆ ನನಗೆ ನಮ್ಮ ಕ್ಷೇತ್ರದಲ್ಲಿ ಉದ್ಘಾಟನೆಯಾಗಲಿದ್ದ ಸೇತುವೆಯ ಇನ್‌ವಿಟೇಷನ್ ನನಗೆ ಯಾವಾಗ ಬಂದಿತು ಎಂದರೆ ಆ ಕಾರ್ಯ ಪೂರೈಸಿದ ಮಾರನೆಯ ದಿನ ಬಂತು. ಆದಾಗ್ಯೂ ನನ್ನ ಕ್ಷೇತ್ರಕ್ಕೆ ಮುಖ್ಯಮಂತ್ರಿಗಳು ಬರುತ್ತಾರಲ್ಲ ಅವರಿಗೆ ನಮ್ಮ ಗೌರವ ಕೊಡಬೇಕಾದುದು ನಮ್ಮ ಕರ್ತವ್ಯ, ಇನ್‌ವಿಟೇಷನ್ ಬರಲಿ ಬಾರದಿರಲಿ ಎಂದು ನಾನು ಅಲ್ಲಿಗೆ ಹೋಗಿದ್ದೆ. ಆ ವೇಳೆಯಲ್ಲಿ ನಮ್ಮ ಮುಖ್ಯಮಂತ್ರಿಗಳು ಅಲ್ಲಿ ನಡೆದುಕೊಂಡಿದ್ದನ್ನು ನಾನು ನೋಡಿ ಅವರನ್ನು ಬಹಳವಾಗಿ ಮೆಚ್ಚಿಕೊಂಡೆನು. ಇದು ಮುಖ್ಯ ಮಂತ್ರಿಗಳ ಬಗ್ಗೆ ಆಯಿತು. ಇನ್ನು ನಮ್ಮ ಜಿಲ್ಲೆಯ ಮಂತ್ರಿಗಳು ಎಂದರೆ ಶ್ರೀಮಾನ್ ಡಿ. ಪರಮೇಶ್ವರಪ್ಪನವರು. ಅವರೂ ಕೂಡ ಬಹಳ ಮರ್ಯಾದೆಯಿಂದ ಜನರಲ್ಲಿ ವರ್ತಿಸುತ್ತಿದ್ದಾರೆ. ಅದ್ದರಿಂದ ಅವರೂ ಪರವಾ ಇಲ್ಲ.

ಆದರೆ ಆ ದಿವಸ ಅಲ್ಲಿ ನೆರವೇರಬೇಕಾಗಿದ್ದ ಸೇತುವೆಯ ಉದ್ಘಾಟನೆಯ ಕಾರ್ಯವನ್ನು ಯಾರು ನೆರವೇರಿಸಬೇಕು, ಯಾರು ಅದರ ಅಧ್ಯಕ್ಷತೆ ವಹಿಸಬೇಕು ಎನ್ನುವುದು ಬಹಳ ಚರ್ಚೆಗೆ ಬಂದು ಕಡೆಗೆ ಆ ಸಮಾರಂಭದ ಅಧ್ಯಕ್ಷತೆಯನ್ನು ಡೆಪ್ಯುಟಿಮಿನಿಸ್ಟರ್ ಫಾರ್ ಹೆಲ್ತ್ ಆದ ಶ್ರೀ ಬಸವಣ್ಣಪ್ಪನವರು ವಹಿಸಬೇಕೆಂದು ತೀರ್ಮಾನವಾಯಿತಂತೆ. ಇದು ಎಷ್ಟರಮಟ್ಟಿಗೆ ಸಮಂಜಸವಾಗಿದೆ? ಇದರಷ್ಟು ಅಪ್ರಕೃತ ಅಸಂಬದ್ಧ ಅಭಾಸದ ಪ್ರಸಂಗವನ್ನು ನಾನು ಎಂದೂ ನೋಡಿಲ್ಲ—ಕೇಳಿಯೂ ಇಲ್ಲ. ಚೀಫ್‌ಇಂಜಿನಿಯರಿಗೆ ಅಷ್ಟು ಗೊತ್ತಾಗದಿದ್ದರೆ ನನ್ನ ಕೇಳಿದ್ದರೂ ಹೇಳುತ್ತಿದ್ದೆ. ಅವರಿಗೆ ಈ ರೀತಿ ಒಂದು ಸಲಹೇನ ಯಾರು ಕೊಟ್ಟರೋ ಗೊತ್ತಿಲ್ಲ. ಅಂಥ ಒಂದು ಸಮಾರಂಭದ ಅಧ್ಯಕ್ಷತೆ ವಹಿಸತಕ್ಕವರಿಗೆ ಆ ಬಾಬಿನ ಎ.ಬಿ.ಸಿ.ಡಿ. ಗೊತ್ತಿಲ್ಲ. ಹಾಗೆ ಆ ಪಿ.ಡಬ್ಲ್ಯು.ಡಿ. ಬಗ್ಗೆ ಏನೂ ಗೊತ್ತಿಲ್ಲದ ವ್ಯಕ್ತಿಯನ್ನು ಅಧ್ಯಕ್ಷರನ್ನಾಗಿ ಮಾಡಿ ಅದರ ಉದ್ಘಾಟನೆಯನ್ನು ಮುಖ್ಯಮಂತ್ರಿಗಳಿಂದ

ಮಾಡಿಸಿದ್ದು ತೀರಾ ಅಭಾಸದ ಕೆಲಸ. ಏಕೆ ಶ್ರೀ ಕೆ. ಲಕ್ಕಪ್ಪನವರು ಇರಲಿಲ್ಲವೇ? ಅಥವಾ ಶ್ರೀ ಬಸರಾಜಮುಗಾವಿಯವರು ಇರಲಿಲ್ಲವೇ! ಆದರೆ ಅಲ್ಲಿ ಯಾರೋ ಸೇರಿ ಏನೋ ಒಂದು ಕಾಂಗ್ರೆಸ್ ಮಾಡಿಬಿಟ್ಟರು. ನಮ್ಮ ಜಿಲ್ಲೆಯಲ್ಲಿ ಶ್ರೀ ಬಸವಣ್ಣಪ್ಪನವರ ಉಪಟಳ ಬಹಳ ಜಾಸ್ತಿಯಾಗಿದೆ. ಅಲ್ಲಿಗೆ ಅವರು ಪ್ರತಿ ತಿಂಗಳೂ ನೂರಾರು ಟೂರುಗಳನ್ನು ಹಾಕಿಕೊಂಡು ಅಲ್ಲಿ ಇವರ ಆರ್ಭಟವನ್ನು ಹೇಳುವುದಕ್ಕಾಗುವುದಿಲ್ಲ. ಮಿತಸಂತಾನದ ಒಬ್ಬ ಉಪಮಂತ್ರಿಯನ್ನು ಪಿ.ಡಬ್ಲ್ಯು.ಡಿ. ಖಾತೆಯ ಬಗ್ಗೆ ಏನೂ ಅದರ ಪರಿಚಯವಿಲ್ಲದಿದ್ದರೂ ಅವರನ್ನು ಅಧ್ಯಕ್ಷರನ್ನಾಗಿ ಮಾಡಿದ್ದು ನಾಚಿಕೆಗೇಡಿನ ಬದುಕು. ಏಕೆ ನನಗೆ ಅಂಥಾ ಅಧ್ಯಕ್ಷತೆ ವಹಿಸುವುದಕ್ಕೆ ಬರುವುದಿಲ್ಲವೇನು? ಅದಕ್ಕೋಸ್ಕರ ನಾನು ದಯವಿಟ್ಟು ಮಾನ್ಯ ಮುಖ್ಯ ಮಂತ್ರಿಗಳಿಗೆ ಮನವಿ ಮಾಡುತ್ತೇನೆ. ಅವರು ಹಾಕಿರತಕ್ಕ ಪದ್ಧತಿ ಒಳ್ಳೆಯದು. ಅದು ಪ್ರಜಾಸತ್ತಾತ್ಮಕ ರೀತಿ. ನಿಮ್ಮ ಮಂತ್ರಿಮಂಡಲದಲ್ಲಿರತಕ್ಕ ಸದಸ್ಯರು ಕೆಲವರು ನಿಮ್ಮ ಹಾಗೆ ನಡೆಯುತ್ತಾ ಇಲ್ಲ. ಕೆಟ್ಟ ಕಣ್ಣಿನಿಂದ ನಮ್ಮ ಕ್ಷೇತ್ರಕ್ಕೆ ಬರುತ್ತಾರೆ. ಅದು ನಮ್ಮ ಕ್ಷೇತ್ರಕ್ಕೆ ಒಂದು ನಮೂನೆ ಮಾರಿ ಬರುತ್ತಾ ಇದೆಯೆಂಬಂತೆ ಇರುತ್ತದೆ. ಆ ರೀತಿ ಅವರು ಬರುವುದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಅವಕಾಶಕೊಡಬಾರದು. ಅದು ಮಾರಮ್ಮನ ಕಣ್ಣು ಹೋತನಮೇಲೆ ಎಂದು ಹೇಳುವ ಹಾಗೆ ಆಗುತ್ತದೆ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಸರ್ಕಾರದ ಒಂದು ಆದೇಶ ಮೂಲಕ ಪ್ರಜಾಪ್ರತಿನಿಧಿಗಳಿಗೆ ಕೊಡುವ ಗೌರವ, ಮರ್ಯಾದೆ ಬಗ್ಗೆ ಕುಂದಕ ಬಾರದೇ ಇರುವ ಹಾಗೆ ಪ್ರತಿಯೊಂದು ಕ್ಷೇತ್ರದ ಕೆಲಸಕಾರ್ಯಗಳನ್ನು ಸಮರಸಭಾವನೆಯಿಂದ ನೋಡಬೇಕು ಎಂಬುದಾಗಿ ಮಂತ್ರಿಮಂಡಲದ ಸದಸ್ಯರಿಗೆ ನಿರ್ದೇಶನಗಳನ್ನು ಬಹಳ ಸ್ಪಷ್ಟವಾಗಿ ಕೊಟ್ಟಿದ್ದಾರೆ. ಆದ್ದರಿಂದ ಮಾನ್ಯ ಮುಖ್ಯ ಮಂತ್ರಿಗಳು ಇದರ ಬಗ್ಗೆ ಹಾಕಿರತಕ್ಕ ರೀತಿನೀತಿಗೆ ಮೆಚ್ಚುಗೆ ಕೊಡುತ್ತೇನೆ.

3-00 P.M.

ಶ್ರೀಮತಿ ಕೆ. ಲೀಲಾವತಿ ರೈ.—ನಮ್ಮ ಮಾನ್ಯ ಸದಸ್ಯರು ಬಹುಮಂದಿ ಇವತ್ತು ಅವರವರ ಕ್ಷೇತ್ರದಲ್ಲಿ ಮುಖ್ಯಮಂತ್ರಿಗಳೇ ಆಗಲೀ ಅಥವಾ ಇತರ ಯಾವ ಮಂತ್ರಿಗಳೇ ಆಗಲೀ ಹೋದಾಗ ಅವರಿಗೆ ಸರಿಯಾದ ಸ್ಥಾನಮಾನ ಕೊಡಲಿಲ್ಲವೆಂಬ ಚರ್ಚೆ ಮಾಡಿದ್ದಾರೆ. ಇದರ ಬಗ್ಗೆ ಒಂದು ಕ್ಲಾರಿಫಿಕೇಷನ್ ಬೇಕು. ಅವರವರ ಕ್ಷೇತ್ರದಲ್ಲಿ ಅವರವರಿಗೆ ಸ್ಥಾನಮಾನ ಕೊಡಲಿಕ್ಕೆ ಅವರವರ ಕ್ಷೇತ್ರದ ಜನತೆ ಕೊಡುವುದೋ ಅಥವಾ ಇಲ್ಲಿಂದ ಕರೆಸಲ್ಪಟ್ಟ ಮಾನ್ಯ ಮಂತ್ರಿಗಳು ಕೊಡುವುದೋ? ಈ ಸ್ಥಾನಮಾನ ಕೊಡಬೇಕಾದರೆ, ಆಯಾ ಊರಿನಲ್ಲಿ ಅವರ ಜನತೆ ಅವರನ್ನು ಕರೆದು ಇವತ್ತು ಮಂತ್ರಿಗಳು ಇಂತಹ ಸಮಾರಂಭಕ್ಕೆ ಬರುತ್ತಾರೆ, ಎಂ.ಎಲ್.ಎ.ಗಳು ಬರಬೇಕು ಎಂಬುದಾಗಿ ಆ ಕ್ಷೇತ್ರದ ಜನತೆ ಕೊಡಬೇಕು. ಆಗ ಮುಖ್ಯ ಮಂತ್ರಿಗಳೇ ಆಗಲೀ ಅಥವಾ ಯಾವ ಮಂತ್ರಿಗಳೇ ಆಗಲೀ ಅವರು ತಮ್ಮ ಸಹಕಾರ ಕೊಡುವುದು ಅವರ ಕರ್ತವ್ಯವಾಗಿದೆ. ಆದ್ದರಿಂದ ಮಾನ್ಯ ಸದಸ್ಯರು ಏನು ಹೇಳುತ್ತಾರೋ ನನಗೆ ಗೊತ್ತಿಲ್ಲ. ಅಲ್ಲಿ ಇವರಿಗೆ ಸರಿಯಾದ ಸ್ಥಾನ ಕೊಡುವುದಿಲ್ಲ. ಕೂತುಕೊಳ್ಳುವುದಕ್ಕೆ ಬಿಡುವುದಿಲ್ಲವೆಂದು ಹೇಳಿದರೆ, ಇದಕ್ಕೇನು ಅರ್ಥವಾಗುತ್ತದೆಂಬುದಕ್ಕೆ ಮಾನ್ಯ ಸದಸ್ಯರು ನನಗೆ ಒಂದು ಕ್ಲಾರಿಫಿಕೇಷನ್ ಕೊಡಬೇಕು.

(Many Opposition members stood up)

Mr. SPEAKER.—Do members want to spend the time in this way?

† ಶ್ರೀ ಎಸ್. ಗೋಪಾಲಗೌಡ.—ಅಧ್ಯಕ್ಷರೇ, ಮೊದಲು ಕ್ಷಮಿಸಬೇಕು. ನಾವು ಡಿಮ್ಯಾಂಡುಗಳ ಮೇಲೆ ಮಾತನಾಡುವುದಕ್ಕೆ ಬಹಳ ಕಾತುರರಾಗಿದ್ದೇವೆ. ಆದರೆ, ಇದು ಹಿಂದಿನಿಂದಲೂ ಕಾಂಗ್ರೆಸ್‌ನಲ್ಲಿ ಬಂದಂತಹ ಒಂದು ಪರಂಪರೆಯಾಗಿದೆ. ಅಲ್ಲಿ ಮಂತ್ರಿಯವರು ಟೂರ್ ಹೋದರೆ, ಕಾಂಗ್ರೆಸ್ ಆಫೀಸಿಗೂ ಹೋಗುತ್ತಾರೆ. ಇದು ಇಲ್ಲಿರತಕ್ಕ ಎಲ್ಲಾ ಸದಸ್ಯರಿಗೂ ಅನುಭವ ಇದೆ. ನಾನು, ನಮ್ಮನ್ನು ಕೇಳಿ ಬರಬೇಕೆಂದು ಹೇಳುತ್ತಿಲ್ಲ. ಅಲ್ಲಿ ಇವರು ಬರುವುದು ರಾಜಕೀಯ ಮಾಡುವುದಕ್ಕಲ್ಲ. ಅಲ್ಲಿ ರಾಜಕೀಯಕ್ಕೆ ಬಂದು, ಅದನ್ನು ಸರ್ಕಾರಿ ಕಾರ್ಯಕ್ರಮ ಎಂದಾಗ ಅದು ತಪ್ಪಾಗುತ್ತದೆ; ಇದನ್ನು ಸ್ವಲ್ಪ ವಿಚಾರ ಮಾಡಿ. ಆದರೆ ಇವರ ಪ್ರವಾಸ ಬಗ್ಗೆ, ಒಂದು ನಿಯಂತ್ರಣ ಮಾಡುವವರು ಯಾರು, ಕಾರ್ಯಕ್ರಮ ಹಾಕುವವರು ಯಾರು? ಕಾಂಗ್ರೆಸ್ ಆಫೀಸಿಗೆ ಯಾವಾಗ ಹೋಗಬೇಕು, ಡೆಪ್ಯೂಟಿ ಕಮೀಷನರು, ಎಲ್ಲಿ, ಯಾರು ನಿಂತಿರಬೇಕು, ಅದಕ್ಕೆ ಏನಾದರೂ ಬೇಡವೇ? ಮಾನ್ಯ ನಿಜಲಿಂಗಪ್ಪನವರು ಪಾಟ್ನಾದಲ್ಲಿ ಹೋದಾಗ ಕಲ್ಲಿಂದ ಹೊಡೆದರು. ಅದು ತಪ್ಪು ಎಂದು ನಾನು ಖಂಡಿಸಿದ್ದೇನೆ. ಇವರು ನಾವೆಲ್ಲಾ ಎರಡೂವರೆ ಕೋಟಿ ಜನಗಳ ಪ್ರತಿನಿಧಿ

(ಶ್ರೀ ಎಸ್. ಗೋಪಾಲಗೌಡ)

ಗಳೆಂದು ಹೇಳುತ್ತಿದ್ದಾರೆ. ಇವರು ಹೇಗೆ ಪ್ರತಿನಿಧಿಗಳು ಎಂದು ಕರೆಯಿಸಿಕೊಳ್ಳುತ್ತಾರೆ? ಹಾಗೆ ಈ ವಿಷಯದಲ್ಲಿ ಈ ಮಾನ್ಯ ಸಭೆಯ ಕಾಲವನ್ನು ಹಾಳು ಮಾಡಬೇಕೆಂದು ನಮಗೇನೂ ಇಲ್ಲ. ಇದು ಮಿತಿಮೀರಿ ಹೋಗಿದೆ. ಕೆಲವು ಮಂತ್ರಿಗಳ ವರ್ತನೆ, ನಾಚಿಕೆಪಡುವುದಕ್ಕಿಂತಲೂ ಮಿತಿಮೀರಿ ಹೋಗಿದೆ. ಅವರು ನಮ್ಮ ರಾಜ್ಯದ ಮಂತ್ರಿಗಳು ಎಂದು ಹೇಳುವುದಕ್ಕೆ ನಮಗೆ ನಾಚಿಕೆಯಾಗುತ್ತದೆ. ನೀವು ನಮ್ಮನ್ನು ಕೇಳಬೇಡಿ, ಏನು ಗೋಪಾಲಗೌಡರೇ, ತೀರ್ಥಹಳ್ಳಿಗೆ ಬರಬೇಕಾ, ಎಂದು, ನೀವು ಬಂದರೂ ನನಗೆ ಪುರಸೊತ್ತು ಇಲ್ಲ ಅನ್ನಿ. ಯಾರು ಯಾವ ರೀತಿ ಆಮಂತ್ರಣ ಕೊಡಬೇಕು, ಯಾರ ಜೊತೆಯಲ್ಲಿ ಸಮಾಲೋಚನೆ ಮಾಡಬೇಕು, ಯಾರು ಯಾರಿಗೆ ಎಲ್ಲಿ ಕೂರಿಸಬೇಕು, ಗೌರವ ಕೊಡಬೇಕು, ಇದನ್ನೆಲ್ಲಾ ಮಾಡುವುದು, ಇದು ಪ್ರಜಾಪ್ರಭುತ್ವದ ಮೂಲಪಾಠ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಯವರು ಈ ಪ್ರಶ್ನೆಯನ್ನು ಸಮಾಲೋಚನೆ ಮಾಡಲಿ. ಆಮಂತ್ರಣವನ್ನು ಒಪ್ಪಿಕೊಂಡಮೇಲೆ ಹೋಗಬೇಕು. ಇಲ್ಲದಿದ್ದರೆ, ಒಪ್ಪಿಕೊಳ್ಳುವಾಗಲೇ, ನಾಲ್ಕುಸಲ ಯೋಚನೆ ಮಾಡಿ. ಅಲ್ಲಿ ಕಲ್ಲು ಬೀಳಲಿ, ಏನಾದರೂ ಬೀಳಲಿ. ಆದರೆ ರಾಜಕೀಯ ಮಾಡುವುದಕ್ಕೆ ಸರ್ಕಾರದ ಕಾರು, ಸರ್ಕಾರೀ ಭತ್ಯ, ಸರ್ಕಾರದ ಸಿಬ್ಬಂದಿವರ್ಗ, ಪೋಲೀಸ್ ಎಲ್ಲಾ ತೆಗೆದುಕೊಂಡು ಕಾಂಗ್ರೆಸ್ ಪ್ರಚಾರಕ್ಕೆ ಇನ್ನುಮೇಲೆ ಹೊರಡಬೇಡಿ; ಅದು ನಿಮ್ಮ ಪ್ರಾಣಕ್ಕೆ ಅಪಾಯ ತರುತ್ತದೆ. ಇಷ್ಟು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಜಿ. ದುಗ್ಗಪ್ಪ (ಧರ್ಮಸಾಗರ).—ನಾನು ಒಂದು ವಿಚಾರ ಹೇಳುತ್ತೇನೆ. ದಯವಿಟ್ಟು ಕೇಳಬೇಕು. ಮಾನ್ಯ ಮುಖ್ಯಮಂತ್ರಿಯವರು ಉತ್ತರ ಕೊಡುತ್ತಾರೆ. ನಾನು ಮಾತನಾಡಬಾರದು ಎಂದು ಇದ್ದೆ. ಆದರೆ ಗೋಪಾಲಗೌಡರು ಮಾತನಾಡಿದಮೇಲೆ ನಾನೂ ಅನಿವಾರ್ಯವಾಗಿ ಒಂದು ಮಾತನ್ನು ಹೇಳಬೇಕಾಗಿದೆ.

ಯಾವ ಖಾಸಗೀ ಫಂಕ್ಷನ್ ಆಗಲೀ ಅದಕ್ಕೆ ಶ್ರೀಮಾನ್ ವೀರೇಂದ್ರ ಪಾಟೀಲರಾಗಲೀ, ಅಥವಾ ಶ್ರೀಮಾನ್ ಪುಟ್ಟಸ್ವಾಮಿಯವರಾಗಲೀ ಹೋಗುವಾಗ ಅವರು ವೈಯಕ್ತಿಕವಾಗಿ ಹೋಗುವುದಿಲ್ಲ. ಅವರು ಮಂತ್ರಿಗಳಾಗಿ ಆ ಫಂಕ್ಷನ್ನಿಗೆ ಹೋಗುತ್ತಾರೆ ಎನಿಸುತ್ತದೆ. ಮುಖ್ಯ ಮಂತ್ರಿಗಳು ಫಂಕ್ಷನ್ನಿಗೆ ಇಡೀ ರಾಜ್ಯದ ಪ್ರತಿನಿಧಿಗಳಾಗಿ ಹೋಗುತ್ತಾರೆ. ಅವರು ಹಾಗೆ ಹೋಗುವಾಗ ಒಂದು ದರ್ಜೆ, ಗೌರವ ಘನತೆಯನ್ನು ಕಾಪಾಡಬೇಕು. ಮೊನ್ನೆ ದಾವಣಗೆರೆಯಲ್ಲಿ, ಹರಿಹರದಲ್ಲಿ ಒಬ್ಬರು ಒಂದು ಸಂಸ್ಥೆಯ ಪ್ರವೇಶೋತ್ಸವಕ್ಕಾಗಿ ಮುಖ್ಯಮಂತ್ರಿಗಳನ್ನು ಮತ್ತು ಕೈಗಾರಿಕಾ ಮಂತ್ರಿಗಳನ್ನೂ ಆಹ್ವಾನ ಮಾಡಿದ್ದರು. ನನಗೆ ಆಹ್ವಾನಪತ್ರಿಕೆ ಬಂದಿತ್ತು. ಅದರಲ್ಲಿ ಮುಖ್ಯ ಅತಿಥಿಗಳು ಯಾರು ಯಾರೋ ಬರುತ್ತಾರೆ ಎಂದು ಇತ್ತು. ಆದರೆ ಅವೊತ್ತಿನ ದಿವಸ ಚಿತ್ರದುರ್ಗದಲ್ಲಿ ನನಗೆ ಗೊತ್ತಾಯಿತು ಮುಖ್ಯಮಂತ್ರಿಗಳು ಅಲ್ಲಿಗೆ ಬರುತ್ತಾರೆ ಎಂದು. ಆದ್ದರಿಂದ ಅಲ್ಲಿಗೆ ನಾನೂ ಹೋಗಬೇಕೆಂದು ಇದ್ದೆ. ಆದರೆ ನನಗೆ ಬಂದಿದ್ದಂತಹ ಆಹ್ವಾನಪತ್ರಿಕೆಯನ್ನು ನೋಡಿದರೆ ಅದರಲ್ಲಿ ಮುಖ್ಯಮಂತ್ರಿಗಳ ಹೆಸರೇ ಇರಲಿಲ್ಲ. ಏನೋ ಮೊಗುಮ್ಮಾಗಿ ಮುಖ್ಯ ಅತಿಥಿಗಳು ಆ ಫಂಕ್ಷನ್ನಿಗೆ ಬರುತ್ತಾರೆ ಎಂದು ಅಚ್ಚು ಹಾಕಿಸಿದ್ದಾರೆ. ಆ ಸಂಸ್ಥೆಯವರು ಲಕ್ಷಾಧೀಶ್ವರರು ಇರಬಹುದು, ಅಥವಾ ಕೋಟ್ಯಾಧೀಶ್ವರರು ಇರಬಹುದು. ಅದು ಬೇರೆ ಮಾತು. ಆದರೆ ರಾಜ್ಯಕ್ಕೆ ಸಂಬಂಧಪಟ್ಟ ಹಾಗೆ ಹೇಳುವುದಾದರೆ ನಮ್ಮ ಸಂಸ್ಥಾನದ ಘನತೆ, ಗೌರವವನ್ನು ಉಳಿಸಿಕೊಂಡು ಬರತಕ್ಕದ್ದು ನಮ್ಮ ಪ್ರತಿನಿಧಿಗಳಿಗೆ ಇರಬೇಕು. ನನಗಂತೂ ಅದನ್ನೂ ನೋಡಿ ಬೇಜಾರು ಆಯಿತು. ಆ ಫಂಕ್ಷನ್ನಿನ ವೈಖರಿಯೇ ಒಂದು ರೀತಿಯಾಗಿತ್ತು. ತಾಲ್ಲೂಕಿನ ಪ್ರತಿನಿಧಿಗಳು ಅಲ್ಲಿಗೆ ಬಂದಿರಲಿಲ್ಲ. ಅಲ್ಲಿಗೆ ಮುಖ್ಯ ಮಂತ್ರಿಗಳು ಮತ್ತು ಕೈಗಾರಿಕಾ ಮಂತ್ರಿಗಳು ಬರುತ್ತಾರೆಂದು ಕೇಳಿ ಶ್ರೀಮಾನ್ ಸಿದ್ದವೀರಪ್ಪನವರೂ ಅಲ್ಲಿಗೆ ಹೋಗಿದ್ದರು ಅವರಿಗೆ ಏನು ಮಾಡಿದರು ಎ ಬುದು ಗೊತ್ತಿಲ್ಲ. ಈ ಬಗ್ಗೆ ಇನ್ನು ನಾನು ಹೆಚ್ಚಿಗೆ ಹೇಳುವುದಿಲ್ಲ. ಮುಖ್ಯಮಂತ್ರಿಗಳು ತರುಣರು. ಅವರು ಇದನ್ನು ಗಮನದಲ್ಲಿಟ್ಟುಕೊಳ್ಳಬೇಕು ಎಂದು ನಾನು ಇಷ್ಟುಮಾತ್ರ ಹೇಳುತ್ತೇನೆ.

†ಶ್ರೀ ಎಸ್. ಶಿವಪ್ಪ.—ಸ್ವಾಮಿ, ಇನ್ನು ಈ ಚರ್ಚೆ ಇಲ್ಲಿಗೆ ಸಾಕು. ಮಂತ್ರಿಗಳು ಪ್ರವಾಸ ಹೋದಾಗ ಆಯಾ ಸ್ಥಳೀಯ ಅನೇಕ ಸಣ್ಣ ಸಣ್ಣ ರಾಜಕೀಯಕ್ಕೆ ಒಳಗಾಗಿ ಅನೇಕ ತರಹ ಕೆಲಸ ಮಾಡತಕ್ಕದ್ದು ನಮಗೆ ಗೊತ್ತಿದೆ. ಆದ್ದರಿಂದ ಮಂತ್ರಿಗಳು ಪ್ರವಾಸ ಹೋದಾಗ ಯಾವ ರೀತಿ ನಡೆದುಕೊಳ್ಳಬೇಕು ಎನ್ನುವ ಬಗ್ಗೆ ಪುನರ್ ವಿಮರ್ಶೆ ಮಾಡತಕ್ಕ ಕಾಲ ಬಂದಿದೆ. ಈ ದೃಷ್ಟಿಯಿಂದ ಮಂತ್ರಿಗಳು ಯಾವ ರೀತಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು, ಇತ್ಯಾದಿ ವಿಷಯಗಳ ಬಗ್ಗೆ ಮುಖ್ಯ ಮಂತ್ರಿಗಳು ವಿರೋಧಪಕ್ಷದವರೊಡನೆ ಸಮಾಲೋಚಿಸಿ ಕೆಲವು ವಿಷಯಗಳನ್ನು ರೂಪಿಸಿಕೊಳ್ಳಬೇಕು. ಇನ್ನು ಪ್ರಸ್ತಾಪವನ್ನು ಇಲ್ಲಿಗೆ ನಿಲ್ಲಿಸಿ ಮುಂದಿನ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ಸೂಚನೆ ಮಾಡುತ್ತೇನೆ.

Calling attention to matters of urgent Public Importance
(*i*) *Re* : Lock-out in the K. R. Mills Ltd., Mysore

Sri L. SRIKANTAIAH (Nanjangud).-Sir, I beg to call the attention of the hon. Minister for Law, Labour and Parliamentary Affairs to the lockout in the Krishnarajendra Mills Limited, Mysore.

Sri K. PUTTASWAMY (Minister for Law, Labour and Parliamentary Affairs).—Sir, the hon. member has given notice to call my attention to the lock-out in the Krishnarajendra Mills Ltd., Mysore.

The present unrest in Krishnarajendra Mills Ltd., Mysore is due to the non-implementation of the terms of the settlement dated 16th January 1967. As per this settlement the management were requested to pay Dearness Allowance from 1st January 1969 as per the previous system enumerated in the agreement dated 1st July 1963. As per the previous system, D. A. was required to be paid at the rate of 20 paise per point for every point rise above 327 points. In September 1966 the management and the workers represented by all the five Unions agreed to freeze D. A. at Rs. 110 per month for four months from September 1966 to December 1966, as the Mill was facing serious financial difficulties. As per this Agreement, the D. A was to be restored to the previous system from January 1967. However, in January 1967 the Mills were still facing financial difficulties and therefore they entered into a settlement, during conciliation proceedings, with the K. R. Mills Labour Association and K. R. Mills Staff Association, which are recognised Unions under the Code of Discipline. The K. R. Mills Staff Union which is an unrecognised Union also signed the Agreement. As per this settlement dated 16th January 1967, the workers were to get D A. at a flat and fixed rate of Rs. 90 per month. From January 1969 onwards the D. A. was to be restored to the previous system as per agreement dated 1st July 1963.

When the management did not restore the D. A. to the previous system from 1st January 1969, the workers became agitated and resorted to a strike from 1st February 1969. As a consequence of this strike, the management declared a lock-out with effect from 4th February 1969. The Assistant Labour Commissioner, Mysore, undertook conciliation of the dispute on 28th January 1969, but his efforts failed. The Commissioner of Labour visited Mysore on the 8th February 1969 and discussed the situation with the representatives of the management and the Five Trade Unions of K. R. Mills, in an effort to secure an agreement. He again held discussion with the representatives of the management and workers on 11th February 1969, but no agreement could be arrived at. I also met the workers' representatives on 17th February 1969 and, thereafter, the representatives of the managament, and advised the parties to come to an amicable settlement. Finally, on the 21st February 1969, a joint meeting of the representatives of the management and the workers was held in my

(SRI K. PUTTASWAMY)

chambers. I am happy to inform the hon. members of this House that an amicable settlement was arrived at during the meeting. As per this settlement, the management have lifted the lock-out from 22nd February 1969 and the workers have resumed work. Both the management and the workers' representatives have agreed for a voluntary reference of the demands to adjudication.

(ii) *Re* : assualt on Two College Boys in Coondapur.

MR. SPEAKER.—Next is the call attention notice given notice of by Sriyuths: B. M. Iddinabba, S. V. Agnihotri and K. Chidananda.

ಶ್ರೀ ಬಿ. ಎಂ. ಇದಿನಬ್ಬಾ (ಮಂಗಳೂರು-2).—ಜರೂರಾದ ಸಾರ್ವಜನಿಕ ಪ್ರಾಮುಖ್ಯತೆಯ ವಿಚಾರವೊಂದನ್ನು, ಎಂದರೆ, ದಕ್ಷಿಣ ಕನ್ನಡ ಜಿಲ್ಲೆಯ, ಕುಂದಾಪುರ ಟೌನಿನಲ್ಲಿ ಇಬ್ಬರು ಕಾಲೇಜು ಬಾಲಕರ ಮೇಲೆ ಕೈಮಾಡಿರುವ ವಿಚಾರವನ್ನು ಮುಖ್ಯಮಂತ್ರಿಗಳ ಗಮನಕೆ ತರುತ್ತೇನೆ.

SRI P. V. AITHAL (Suratkal).—Sir, I want to know whether hon. Members Sri K. Chidananda has signed the call attention notice, as to my knowledge, he has not signed the notice.

MR. SPEAKER.—It does not matter. Anyhow, I shall find out. Now, the hon. Chief Minister may reply to the call attention notice.

SRI VEERENDRA PATIL (Chief Minister).—Sir, there was no complaint about any incident in Coondapur Town on 5th February 1969. However, on 10th February 1969 intimation was received in the Police Station from the Government Hospital that 7 persons, who had sustained injuries as a result of an alleged assault had been treated in the Hospital. The local Police thereupon registered a case in Crime No. 36/69 under Sections 147, 341, 324 and 34 IPC and took up investigation. During the investigation of this case, it was alleged that there was incident of assault on Shri Sripathy Rao, son of Sri Halsnad Subba Rao, M.L.A. on 5th February 1969. This was not reported to the police. However, one Shri Rattadi Balakrishna Shetty, a student of Coondapur stated that on 5th February 1969 at about 5 p.m. there was an altercation between himself and Shri Sripathy Rao. According to him, again at about 9 p.m. Sri Sripathy Rao, his brother and others came in a car and beat him, Sri Rattadi Balakrishna Shetty and his friend Sri Karunakara Shetty near Shivaprasad Hotel. As no cognisable offence was made out, no case has been registered.

MR. SPEAKER.—There is the third name. It looks like Chidanand. I shall find out whethar it looks like that. There is nothing wrong about it. Now we will take up Financial Business—discussion and voting on Demands for Grants.

Budget Estimates for 1969-70—Demands for Grants

DEMAND NO. 6

Sri K. LAKKAPPA (Minister for Public Works).—Sir, on the recommendation of the Governor. I beg to move :

> "That a sum not exceeding Rs. 14,89,000 be granted to the Government to defray the charges which will come in course of payment during the financial year for the period ending 31st day of March 1970, in respect of 'Other Taxes and Duties'."

Mr. SPEAKER.—Motion moved :

> "That a sum not exceeding Rs. 14,89,000 be granted to the Government to defray the charges which will come in course of payment during the financial year for the period ending 31st day of March 1970, in respect of 'Other Taxes and Duties'."

Along with this Demand, Demand Nos. 29, 30, 30A, 30B, 31, 31-A, 32, 43, 45, 46, 47, 48, 49 and 50 are deemed to have been moved, and are open to discussion.

Sri M. NAGAPPA (Raichur).—There is no such demand as Demand No. 49 and no amount is provided and no estimates have been placed on the Table of the House.

Mr. SPEAKER.—I shall find out if Demand No. 49 is wrongly typed. The discussion may proceed on all the demands except Demand No. 49.

There is a notice of motion given under Rule 147. I shall indicate the correct position at the beginning and then permit it to be moved. Rule 148 (vii) says :

> "It shall not anticipate discussion of a matter which is likely to be discussed in the same session."

Ordinarily this motion would have been disallowed under this rule. But today somehow or other, by coincidence, the matter to be discussed under the Demand and the subject matter of the motion are the same. In consultation with the Leaders of both the sides, I have decided to admit it. But this should not be taken as a precedent. It is admitted on condition that this motion will be considered along with the present Demands of today. The Hon. Member may move now the motion.

Sri H. N. NANJE GOWDA.—I beg to move the following motion :

> "That this House recommends to Government to earmark Rs. 20 crores for Krishna basin and Rs. 10 crores for Cauvery

(SRI H. N. NANJE GOWDA)

basin thus a total of Rs. 30 crores in 1969-70 Budget for the development of irrigation in the respective Basins."

Sri K. PUTTASWAMY.—I do not know what to say on this matter.

Mr. SPEAKER.—Before I made up my mind on this matter, I had consultation with the Leader of the Opposition and the Hon. Leader of the House. Though strictly speaking this motion is not admissible under the Rules, I have said that this should not be cited as a precedent. Because the subject-matter of the two motions coincide and since no separate time is allowed, I have allowed the motion on the condition that this motion should be debated along with the Demands. I have also said that this should not be taken as a precedent.

Sri K. PUTTASWAMY.—I am in a highly embarrassing position. I wish the Speaker had allowed some time for me to say whether such a motion can be admitted at all and whether it would not set up a very wrong precedent. Now I cannot say anything more. I had the benefit of consultation with the Leader of the House and the Leader of the House informs me that he has no objection for such a matter contained in the notice being discussed.

Mr. SPEAKER.—I have already said that under Rule 175 no matter other than the Demands can be taken up and therefore it should not be taken to be a precedent. Since the subject matter is the same, I have permitted it.

Sri K. PUTTASWAMY.—I should not be understood as saying anything against the opinion expressed by the Hon. Speaker. It was open to the Hon. Member to have opposed the motion. It was open to the Hon. Member to have suggested increased allotment. But now what happens is that when you have permitted this motion to be moved, it presupposes that the opinion of this House will have to be taken on the motion.

Mr. SPEAKER.—Yes, that will have to be taken.

Sri K. PUTTASWAMY.—I do dot think such a thing could be permitted. They could have tabled a cut motion and raised a discussion on that. I do not want to say anything more. I would only request the Hon Speaker to forgive me for making this submission.

Mr. SPEAKER.—Motion moved:

"That this House recommends to Government to earmark Rs. 20 crores for Krishna Basin and Rs. 10 Crores for Cauvery Basin thus a total of Rs. 30 Crores in 1969-70 Budget for the development of irrigation in the respective Basins."

ಪ್ರಾಪ್ತಿ ಕ್ರಮಾಂಕ Accession No.... 4862
ದಿನಾಂಕ Date..........................

3-30 P.M.

† ಶ್ರೀ ಎಸ್. ಶಿವಪ್ಪ. – ಸಭಾಪತಿಗಳೇ, ಲೋಕೋಪಯೋಗಿ ಇಲಾಖೆಯ ಸಚಿವರು ಮಂಡಿಸಿರತಕ್ಕ ಸುಮಾರು 90ರಿಂದ 100 ಕೋಟಿ ರೂಪಾಯಿಗಳನ್ನು ಒಳಗೊಂಡಂಥ ಬೇಡಿಕೆಗಳನ್ನು ವಿರೋಧಿಸುತ್ತಾ ಕೆಲವು ಮಾತುಗಳನ್ನು ಮಾತ್ರ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಈ ಬೇಡಿಕೆಗೆ ಸಂಬಂಧಪಟ್ಟಿರತಕ್ಕ ಇಲಾಖೆಗಳು ಮೈಸೂರು ದೇಶದ ನೀರಾವರಿ ಯೋಜನೆಗಳು, ಲೋಕೋಪಯೋಗಿ ಸೇರಿ ಇತರ ಸಣ್ಣಪುಟ್ಟ ಕೆಲಸಗಳು ಮತ್ತು ವಿದ್ಯುಚ್ಛಕ್ತಿ ಕಾಮಗಾರಿ ಹೀಗೆ ನಾಲ್ಕಾಗು ದೊಡ್ಡ ವಿಷಯಗಳಿಗೆ ಸಂಬಂಧಪಟ್ಟ ವಿಚಾರವಾಗಿದೆ. ನಾನು ಈ ಸಂದರ್ಭದಲ್ಲಿ ಒಂದು ವಿಚಾರವನ್ನು ಸಭೆಯ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಮುಖ್ಯ ಮಂತ್ರಿಯವರು ಈ ದೇಶದ ದೊಡ್ಡ ನೀರಾವರಿ ಮತ್ತು ವಿದ್ಯುಚ್ಛಕ್ತಿಯ ಜವಾಬ್ದಾರಿಯನ್ನು ಹೊತ್ತಿದ್ದಾರೆ. ದೇಶದಲ್ಲಿ ನೀರಾವರಿ ಯೋಜನೆಗಳ ಬಗ್ಗೆ ಈ ಸರ್ಕಾರ ಕಳೆದ ಇಪ್ಪತ್ತು ವರ್ಷಗಳಿಂದ ತಳೆದಿರತಕ್ಕ ನೀತಿಯಿಂದ ಮೈಸೂರು ದೇಶ ನೀರಾವರಿ ಕ್ಷೇತ್ರದಲ್ಲಿ ಏನು ಸಾಧನೆ ಮಾಡಬೇಕಾಗಿತ್ತೋ ಅಂಥ ಸಾಧನೆಯಲ್ಲಿ ಅವರೇ ಹಾಕಿರತಕ್ಕ ಗುರಿಯನ್ನು ಮುಟ್ಟತಕ್ಕ ಪರಿಸ್ಥಿತಿಗೆ ಬಂದಿಲ್ಲ. ಇದರಿಂದ ಮೈಸೂರು ದೇಶದ ನೀರಾವರಿ ಕಾಮಗಾರಿಗಳನ್ನು ಪೂರೈಸತಕ್ಕ ಕೆಲಸದಲ್ಲಿ ಸಂಪೂರ್ಣ ವಿಫಲರಾಗಿದ್ದಾರೆ. ಮೂರು ಯೋಜನೆಗಳಲ್ಲಿ ಗುರಿ ಸಾಧನೆ ಮಾಡುವುದಕ್ಕೆ ಏನು ಅಂದಾಜು ಮಾಡಿ ಹಣವನ್ನು ಒದಗಿಸಿಕೊಂಡಿದ್ದರೋ ಆ ಹಣದಲ್ಲಿ ಎಷ್ಟು ಖರ್ಚು ಮಾಡಬಹುದೋ ಅದನ್ನು ಕೂಡ ಖರ್ಚು ಮಾಡತಕ್ಕ ಶಕ್ತಿ ಸರ್ಕಾರಕ್ಕೆ ಇಲ್ಲದೆ ಹೋಗಿ ನೀರಾವರಿ ಯೋಜನೆಗಳು ಕೆಲವು ಅರ್ಧಮರ್ಧವಾಗಿವೆ, ಇನ್ನು ಕೆಲವು ಪ್ರಾರಂಭವಾಗದೆ ಅಡಿಗಲ್ಲು ಹಾಗೆಯೇ ನಿಂತು ಹೋಗಿದೆ. ಈ ನೀರಾವರಿ ಯೋಜನೆಗಳಿಂದ ಏನು ಪ್ರಯೋಜನ ಬರಬಹುದಾಗಿತ್ತೋ ಅದು ಬಾರದೆ ನಮ್ಮ ಹಣಕಾಸಿನ ಪರಿಸ್ಥಿತಿಯ ಮೇಲೆ ದೊಡ್ಡ ಭಾರವಾಗಿ ಇಟ್ಟಿದ್ದಾರೆ. ನೀರಾವರಿ ಯೋಜನೆಗಳಿಗೋಸ್ಕರ ಅಪಾರವಾದ ಸಾಲ ಮಾಡಿದ್ದೇವೆ ಮತ್ತು ನೀರು ಹಂಚಿಕೆಯಲ್ಲಿ ಕೇಂದ್ರ ಸರ್ಕಾರದ ಅನುಮತಿ ಪಡೆಯತಕ್ಕ ಕಾರ್ಯದಲ್ಲಿ ಕೂಡ ವಿಫಲರಾಗಿದ್ದಾರೆ. ಕೃಷ್ಣ, ಗೋದಾವರಿ, ಕಾವೇರಿ ನದಿ ನೀರಿಗೆ ಸಂಬಂಧಪಟ್ಟ ಕೆಲವು ಸಮಸ್ಯೆಗಳೇನೋ ಇವೆ. ಕಾವೇರಿ ನೀರಿನ ಹಂಚಿಕೆ 1974ರೊಳಗೆ ಪೂರೈಕೆಯಾಗಬೇಕಾಗಿದೆ. 1974ರೊಳಗೆ ಆ ಯೋಜನೆಗಳನ್ನು ಕಾರ್ಯಗತ ಮಾಡದೆ ಹೋದರೆ ಮೈಸೂರು ದೇಶ ಕಾವೇರಿ ನೀರಿನ ಮೇಲಿನ ಹಕ್ಕನ್ನು ಕಳೆದುಕೊಳ್ಳುವ ಪರಿಸ್ಥಿತಿಗೆ ಬಂದಿದ್ದೇವೆ. ಕಾವೇರಿ ಕಣಿವೆಯಲ್ಲಿ ಹೇಮಾವತಿ ಯೋಜನೆ, ಹಾರಂಗಿ ಇತ್ಯಾದಿ ಯೋಜನೆಗಳನ್ನು ಕಾರ್ಯಗತ ಮಾಡತಕ್ಕ, ಅಂದಾಜುಗಳನ್ನು ತಯಾರು ಮಾಡಿ ಕೇಂದ್ರ ಸರ್ಕಾರದ ಅನುಮತಿಗಾಗಿ ಕಾಯುತ್ತಿದ್ದೇವೆಂದು ಮೇಲಿಂದ ಮೇಲೆ ಹೇಳುತ್ತಿದ್ದಾರೆ. ಈವೊತ್ತಿನವರೆಗೂ ಕೇಂದ್ರ ಸರ್ಕಾರದವರು ಈ ಸರ್ಕಾರ ಮಾಡಿರತಕ್ಕ ಯಾವುದೇ ಅಂದಾಜಿರಲಿ, ಕೇಳಿಕೆ ಇರಲಿ, ಬೇಡಿಕೆ ಇರಲಿ ಯಾವುದಕ್ಕೂ ಲವಲೇಶವೂ ಗಮನ ಕೊಟ್ಟಿಲ್ಲ. ಶ್ರೀ ಕೆ. ಎಲ್. ರಾವ್ ಅವರು ಕೇಂದ್ರದಲ್ಲಿ ಇರುವತನಕ ಕೃಷ್ಣ ಗೋದಾವರಿ ನೀರು ಹಂಚಿಕೆ ವಿಷಯದಲ್ಲಿ ನಮಗೆ ಏನು ನೀರು ದೊರೆಯಬೇಕು ಎಂದು ಹೇಳುತ್ತಿದ್ದೇವೆ ಅದು ದೊರೆಯುವುದಕ್ಕೆ ಅವರು ದೊಡ್ಡ ಆತಂಕವಾಗಿ ನಿಂತಿದ್ದಾರೆ. ಅವರು ಈಗಾಗಲೇ ಕೃಷ್ಣ ನದಿಗೆ ಒಂದು ಕಮಿಷನ್, ಗೋದಾವರಿ ನದಿಗೆ ಒಂದು ಕಮಿಷನ್ ಹೀಗೆ ಎರಡು ಕಮಿಷನ್ ಮಾಡುತ್ತೇವೆಂದು ಪಾರ್ಲಿಮೆಂಟ್‌ನಲ್ಲಿ ಹೇಳಿದ್ದಾರೆ. ಅವರು ಪಾರ್ಲಿಮೆಂಟಿನಲ್ಲಿ ಹೇಳಿರತಕ್ಕುದು ನಮಗೆ ಆಖೈರಾಗಿ ಲಿಖಿತ ಮೂಲಕವಾಗಿ, ಅಧಿಕೃತವಾಗಿ ಏನೂ ಬಂದಿಲ್ಲ ಎಂದು ಮಾನ್ಯ ಮುಖ್ಯ ಮಂತ್ರಿಯವರು ಹೇಳುತ್ತಾರೆ. ಹೀಗೆ ಹೇಳಿದರೆ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುವುದಕ್ಕೆ ಸಾಧ್ಯವೇ? ಶ್ರೀ ಕೆ. ಎಲ್. ರಾವ್ ಅವರು ಪಾರ್ಲಿಮೆಂಟಿನಲ್ಲಿ ಹೇಳಿಕೆ ಕೊಟ್ಟಿದ್ದಾರೆಂದರೆ ಅದಕ್ಕೆ ಅಧಿಕೃತವಾಗಿ ಮುದ್ರೆ ಒತ್ತುವುದಕ್ಕೆ ಪ್ರಯತ್ನ ಮಾಡಬೇಕೇ ಎಂದು ಯೋಚನೆ ಮಾಡಬೇಕಾಗಿದೆ. ಈ ಸಂದರ್ಭದಲ್ಲಿ ಮೈಸೂರು ಸರ್ಕಾರದ ನಿಲುವು ಏನಿರಬೇಕು ಎಂದು ಚರ್ಚೆಯಾಗಿದೆ. ಕೃಷ್ಣ ಮತ್ತು ಗೋದಾವರಿ ನೀರು ಹಂಚಿಕೆ ಸಂಬಂಧದಲ್ಲಿ ಎರಡು ಕಮಿಷನ್ ಮಾಡಬೇಕು ಎಂದು ಕೇಂದ್ರದಲ್ಲಿ ನಿರ್ಧಾರ ಮಾಡಿದ್ದಾರೆ, ಅದು ಆಗತಕ್ಕ ಸಂದರ್ಭವಿದೆ. ಹೀಗಿರುವಾಗ ಸರ್ಕಾರ ಏನು ಅಂತಿಮ ಪ್ರಯತ್ನ ಮಾಡುತ್ತದೆ ಎನ್ನುವ ಉತ್ತರ ಸರ್ಕಾರದಿಂದ ಬರಬೇಕಾಗಿದೆ. ಈವೊತ್ತು ಕೇಂದ್ರದಲ್ಲಿ ನಮ್ಮ ಬೇಡಿಕೆಗಳನ್ನು ಇತ್ಯರ್ಥ ಮಾಡತಕ್ಕ ಶಕ್ತಿ ಇಲ್ಲ, ಪ್ರಭಾವವಿಲ್ಲ. ಆರೀತಿಯ ಪ್ರಭಾವವಿಲ್ಲದೆ ಇರುವ ಕಾಲದಲ್ಲಿ ನಾವು ಏನು ಸಾಧನೆ ಮಾಡುವುದಕ್ಕಾಗುತ್ತದೆ! ಮೂರು ಪಂಚವಾರ್ಷಿಕ ಯೋಜನೆಗಳಲ್ಲಿ ಕೇಂದ್ರ ಸರ್ಕಾರ ಮಲತಾಯಿ ಧೋರಣೆಯನ್ನು ತಾಳಿ ಕೈಗಾರಿಕೆಯಲ್ಲಾಗಲೀ ನೀರಾವರಿಯಲ್ಲಾಗಲೀ, ಯಾವುದೇ ದೊಡ್ಡ ಯೋಜನೆಯಲ್ಲಾಗಲೀ ಅದಕ್ಕೆ ಬೇಕಾಗುವ ಹಣವನ್ನು ಕೊಡತಕ್ಕ ವಿಷಯದಲ್ಲಿ ಅನ್ಯಾಯ ಮಾಡಿದ್ದಾರೆ. ಇಂಥ ಅನ್ಯಾಯ, ತಾರತಮ್ಯ ನಡೆಯುತ್ತಿರು

(ಶ್ರೀ ಎಸ್. ಶಿವಪ್ಪ)

ವಾಗ ಮೈಸೂರು ದೇಶ ತನಗೆ ಬರಬೇಕಾಗಿರತಕ್ಕ ನೀರಿನ ಹಂಚಿಕೆಯಲ್ಲಾಗಲೀ, ಕೇಂದ್ರದಿಂದ ಬರತಕ್ಕ ಹಣದ ಸಹಾಯದಲ್ಲಾಗಲೀ ಸಾಕಷ್ಟು ಅನುಕೂಲವಾಗುವುದಿಲ್ಲ ಎನ್ನುವ ಶಂಕೆಯನ್ನು ಮುಖ್ಯ ಸಚಿವರು ಮತ್ತು ಹಣಕಾಸಿನ ಸಚಿವರು ಈಗಾಗಲೇ ಹೇಳಿದ್ದಾರೆ.

ರಾಜ್ಯದಲ್ಲಿ ಆಗಬೇಕಾಗಿರುವ ಕಾರ್ಯಗಳಿಗೆ ದುಡ್ಡು ಬೇಕಾಗಿದೆ. ಅದಕ್ಕಾಗಿ ಮೈಸೂರು ರಾಜ್ಯದಲ್ಲಿ ವ್ಯವಸಾಯ ಕ್ಷೇತ್ರದಲ್ಲಿರುವ ಜನಗಳ ಹತ್ತಿರ ಅಪಾರವಾದ ಹಣವಿದೆ, ಆ ಹಣದ ಮೇಲೆ ತೆರಿಗೆಯನ್ನು ಹಾಕಬೇಕೆಂದು ಡೆಸ್ಪರೇಟ್ ಆಗಿ, 'ಮಾರಿ ಕಣ್ಣು ಹೋತನ ಮೇಲೆ' ಎನ್ನುವ ಹಾಗೆ ರೈತರ ಮೇಲೆ ತೆರಿಗೆ ಹಾಕುವ ಸೂಚನೆಯನ್ನು ಮಾಡಿದ್ದಾರೆ. ಪಾಪ, ಬಡಪಾಯಿಗಳು, ಅವರಿಗೆ ಸಂಘಟನೆ ಮಾಡತಕ್ಕ ಶಕ್ತಿ ಇಲ್ಲ. ಈ ಸರ್ಕಾರ ಮಾಡತಕ್ಕ ತೆರಿಗೆಯ ನೀತಿಯನ್ನು ವಿರೋಧ ಮಾಡತಕ್ಕ ಶಕ್ತಿ ಇಲ್ಲದೆ ಇರುವ ಕಾಲದಲ್ಲಿ ಅಂಥ ರೈತರ ಮೇಲೆ ತೆರಿಗೆ ಹಾಕಬೇಕೆಂದು ಕಣ್ಣು ಪ್ರಸಾರ ಮಾಡಿದ್ದಾರೆ; ಅವರ ಮೇಲೆ ತೆರಿಗೆ ಹಾಕಿ ವರಮಾನ ತೆಗೆದುಕೊಳ್ಳತಕ್ಕ ಹಂತದಲ್ಲಿ ಸರ್ಕಾರವಿದೆ. ಕಾಂಗ್ರೆಸ್ ಪಕ್ಷದಲ್ಲಿಯೂ ರೈತರ ಪ್ರತಿನಿಧಿಗಳಾಗಿ ಬಂದಿರುವ ಅನೇಕ ಜನರಿದ್ದಾರೆ. ಆದರೆ ಧೈರ್ಯವಾಗಿ ಹೇಳತಕ್ಕ ಶಕ್ತಿ ಇಲ್ಲ. ರೈತರ ಮೇಲೆ ತೆರಿಗೆಯನ್ನು ಹಾಕತಕ್ಕ ತೀರ್ಮಾನವನ್ನು ಸರ್ಕಾರದವರೇನಾದರೂ ತೆಗೆದುಕೊಂಡಿದ್ದೇ ಆದರೆ ರೈತರ ಸಮಾಧಿಯನ್ನು ಮಾಡುವುದಕ್ಕೆ ಹೊರಟಿದ್ದಾರೆ, ರೈತರ ಬೆನ್ನುಮೂಳೆ ಮುರಿಯುವುದಕ್ಕೆ ಕಾರ್ಯಕ್ರಮ ಹಾಕಿಕೊಂಡಿದ್ದಾರೆ. ಈ ಸಂದರ್ಭದಲ್ಲಿ ಸರ್ಕಾರಕ್ಕೆ ಒಂದು ಎಚ್ಚರಿಕೆಯನ್ನು ಕೊಡುತ್ತೇನೆ. ರೈತನ ಬೆನ್ನುಮೂಳೆ ಮುರಿಯುವುದಕ್ಕೆ ಪ್ರಯತ್ನ ಮಾಡಿದರೆ ಅವನು ಎಚ್ಚೆತ್ತು, ದಂಗೆ ಎದ್ದು ಸರ್ಕಾರದ ಬೆನ್ನುಮೂಳೆ ಮುರಿಯುತ್ತಾನೆ ಎನ್ನುವ ಎಚ್ಚರಿಕೆಯ ಮಾತನ್ನು ಸರ್ಕಾರಕ್ಕೆ ಹೇಳಲು ಇಚ್ಛಿಸುತ್ತೇನೆ. ರೈತನು ಈ ದೇಶಕ್ಕೆ ಅಪಾರವಾದ ಹಣವನ್ನು ಕೊಟ್ಟಿದ್ದಾನೆ, ನೂರಾರು ಕೋಟಿ ರೂಪಾಯಿಗಳನ್ನು ಸರ್ಕಾರದ ಬೊಕ್ಕಸಕ್ಕೆ ತುಂಬಿದ್ದಾನೆ. 22 ವರ್ಷ ಕಾಲ ಕಾಲಹರಣ ಮಾಡಿ ಅನ್ಯಥಾ ವ್ಯಯ ಮಾಡಿ ದುಂದಾವರ್ತಿಯಿಂದ ಬಡ ರೈತರ ಮೇಲೆ ಹೆಚ್ಚು ತೆರಿಗೆಯನ್ನು ಹಾಕುವಂಥ ಪ್ರಯತ್ನ ಮಾಡುತ್ತಿರುವುದು ಶುದ್ಧ ಮೂರ್ಖತನ ಎಂದು ಮಾತ್ರ ಹೇಳುತ್ತೇನೆ.

ನಮ್ಮ ದೇಶದಲ್ಲಿ ನೀರಾವರಿ ಯೋಜನೆಗಳು ಆಗಬೇಕು. ಈ ನೀರಾವರಿ ಯೋಜನೆಗಳನ್ನು ಕಾರ್ಯಗತ ಮಾಡತಕ್ಕ ಜವಾಬ್ದಾರಿ ಹೊತ್ತಿರತಕ್ಕ ಸರ್ಕಾರ ಈ ದೇಶದಲ್ಲಿ ಹಣವಿಲ್ಲ ಎನ್ನುವ ಹೇಡಿತನದ ಮನೋಭಾವಕ್ಕೆ ಒಂದಿದ್ದಾರೆ. ನಗರಗಳಲ್ಲಿ ಕೋಟ್ಯಾಧೀಶರಿದ್ದಾರೆ, ಲಕ್ಷಾಧೀಶರಿದ್ದಾರೆ, ಶ್ರೀಮಂತರಿದ್ದಾರೆ. ಅಂಥವರನ್ನು ಮುಟ್ಟತಕ್ಕ ಧೈರ್ಯವಿಲ್ಲದೆ ಇರುವ ಸರ್ಕಾರ ಹಣ ಎಲ್ಲಿದೆ ತೋರಿಸಿ ಎಂದು ನಮ್ಮನ್ನು ಕೇಳುತ್ತಿದ್ದಾರೆ. ಇಂಥ ಧೈರ್ಯವಿಲ್ಲದೆ ಇರತಕ್ಕ ಸರ್ಕಾರಕ್ಕೆ, ಚೈತನ್ಯವಿಲ್ಲದೆ ಇರತಕ್ಕ ಸರ್ಕಾರಕ್ಕೆ ನಾನಾದರೂ ಏನು ಸಲಹೆಯನ್ನು ಕೊಟ್ಟೇನು; ಕೊಟ್ಟೂ ಪ್ರಯೋಜನವೇನು? ನಿಮಗೆ ಶ್ರೀಮಂತರನ್ನು ಮುಟ್ಟತಕ್ಕ ಧೈರ್ಯವಿದೆಯೇ? ಬಡಪಾಯಿಗಳು, ಸಂಘಟನೆ ಮಾಡತಕ್ಕ ಶಕ್ತಿ ಇಲ್ಲ ಅಂಥ ರೈತರ ಕಡೆ ಹೋಗುತ್ತೀರಿ. ಮೊರಾರ್ಜಿ ದೇಸಾಯಿ ಅವರು ಮಾಡುವ ಕೆಲಸ ಇದು. ಏಕೆಂದರೆ ಅವರು ಗುಜರಾತಿಗಳು. ಗುಜರಾತಿನಲ್ಲಿ ವ್ಯಾಪಾರಸ್ಥರಿದ್ದಾರೆ. ಅವರ ಮನೋಭಾವ ವ್ಯಾಪಾರಸ್ಥರಿಗೆ ಅನುಕೂಲ ಮಾಡಿಕೊಡುವುದು ಅವರ ಕೆಲಸ ಅದು. ಆದರೆ ರೈತರ ಪ್ರತಿನಿಧಿಗಳು ಎಂದು ಹೇಳತಕ್ಕ ನೀವು ಅವರ ಮಾರ್ಗದಲ್ಲಿ ಹೋಗುವುದು ಸರಿಯಲ್ಲ ಎಂದು ಸಭಾಪತಿಗಳ ಮೂಲಕ ಹೇಳುವುದಕ್ಕೆ ಇಚ್ಛಪಡುತ್ತೇನೆ.

ಇಂದು ಈ ಬೇಡಿಕೆ 5 ಜನ ಮಂತ್ರಿಗಳಿಗೆ ಸಂಬಂಧಪಟ್ಟಿದೆ, ಲೋಕೋಪಯೋಗಿ ಇಲಾಖೆಯಲ್ಲಿ ಮೇಜರ್ ಇರಿಗೇಷನ್ನಿಗೆ ಒಬ್ಬರು, ಮೈನರ್ ಇರಿಗೇಷನ್ ಇಲಾಖೆಗೆ ಒಬ್ಬರು ಮಂತ್ರಿಗಳಿದ್ದಾರೆ, ಲೋಕೋಪಯೋಗಿ ಜನರಲ್ ಎಂದು ಒಂದು ವಿಭಾಗ ಬೇರೆ ಮಾಡಿದ್ದಾರೆ, ಅದಕ್ಕೆ ಸಂಬಂಧಪಟ್ಟವರ ಕೈಕೆಳಗೆ ಇಬ್ಬರು ಉಪ ಸಚಿವರಿದ್ದಾರೆ, ಹೀಗಾಗಿ ಈ ಬೇಡಿಕೆಗಳಿಗೆ 5 ಜನ ಮಂತ್ರಿಗಳಿದ್ದಂತಾಯಿತು. ಅವರಿಗೆ ಕಾರ್ಯದರ್ಶಿ ಮಾತ್ರ ಒಬ್ಬರೇ ಇದ್ದಾರೆ, ಅವರು 5 ಜನ ಮಂತ್ರಿಗಳ ಫೈಲುಗಳನ್ನೂ ನೋಡಿಕೊಳ್ಳಬೇಕು. ಹೀಗಾದರೆ ಸರಿಯಾಗಿ ಕೆಲಸ ನಡೆಯಲು ಸಾಧ್ಯವೇ? ಇಂದು ಈ ಇಲಾಖೆಯಿಂದ ಅನೇಕ ಉಪಯುಕ್ತವಾದ ಕೆಲಸಗಳು ಆಗಬೇಕಾಗಿವೆ. ಆದುದರಿಂದ ಸರಿಯಾದ ಸೆಕ್ರೆಟರಿಗಳಿರಬೇಕು. ಇಲ್ಲದಿದ್ದರೆ ಏನು ತಾನೆ ಸಾಧಿಸುವುದಕ್ಕೆ ಸಾಧ್ಯ? ಇಂದು ಮೂಗಿಗಿಂತ ಮೂಗುತಿ ಭಾರ, ತಲೆ ಶಿರೋಭಾರ ಎಂಬಂತೆ ಕೆಲವು ಇಲಾಖೆಗಳಲ್ಲಿ ಬೇಕಾದಷ್ಟು ಸಿಬ್ಬಂದಿ ಇದೆ, ಕೆಲಸ ಸಾಕಾದಷ್ಟಿಲ್ಲ. ಒಂದು ಪ್ರಾಜೆಕ್ಟ್ ಮಾಡಲು ಹಣವಿಲ್ಲದೆ ಎಂಜಿನಿಯರು ಅದಕ್ಕೆ ಸಂಬಂಧಪಟ್ಟವರು ಕೆಲಸವಿಲ್ಲದೆ ಇಸ್ಪೀಟನ್ನು ಆಡುತ್ತಿದ್ದುದು ಕಂಡು ಬಂತು, ಕೆಲಸವಿದ್ದರೆ ಮಾಡುವುದಕ್ಕೆ ಅವರು ಸಿದ್ಧವಾಗಿದ್ದಾರೆ. ಆದರೆ ಕೆಲಸವಿಲ್ಲ. ಆದುದರಿಂದ ಅಧಿಕಾರಿಗಳನ್ನು

ಆಕ್ಷೇಪಿಸುವುದಕ್ಕೆ ಅವಕಾಶವಿಲ್ಲ, ಅದಕ್ಕಾಗಿ ಅವರು ಮನರಂಜನೆಯಲ್ಲಿ ತೊಡಗಿದ್ದಾರೆ. ಅವರಿಗೆ ಕೈತುಂಬ ಕೆಲಸವಿದ್ದರೆ ಹಾಗೆ ಮಾಡುತ್ತಿರಲಿಲ್ಲ. ನೀರಾವರಿ ಯೋಜನೆಗಳನ್ನು ಕಾರ್ಯಗತ ಮಾಡುವುದಕ್ಕೆ ಸರಕಾರದವರು ಧೈರ್ಯದಿಂದ ಮುಂದುವರೆಯುತ್ತಿಲ್ಲ. ಹಣವಿಲ್ಲವೆಂದು ನೆಪ ಹೇಳುತ್ತಾರೆ. ಇಂದು ಕೃಷ್ಣ, ಹೇಮಾವತಿ, ಹಾರಂಗಿ ಮುಂತಾದವುಗಳಿಗೆ ಸಂಬಂಧಪಟ್ಟ ಯೋಜನೆಗಳನ್ನು ಮಾಡಬೇಕು ಎಂದು ಹೇಳುವಾಗ ಹಣವೆಲ್ಲಿದೆ ಎಂದು ಕೇಳುತ್ತಿದ್ದಾರೆ. 2 ವರ್ಷಗಳಿಂದಲೂ ಕೂಡ ಇದನ್ನೇ ಹೇಳುತ್ತಿದ್ದಾರೆ. ಹೇಳಿದರೆ ದುಡ್ಡು ಕೊಡಿ ಎಂದು ಕೇಳುತ್ತಾರೆ. ದುಡ್ಡಿಲ್ಲವೇ ? ಕೆಲವು ನಿರರ್ಥಕ ಯೋಜನೆಗಳಿಗೆ ಹಣವನ್ನು ಪೋಲು ಮಾಡುತ್ತಿದ್ದಾರೆ. ಮಂಗಳೂರು ಬಂದರಾಗಿಲ್ಲ. ಆದರೆ ಅಲ್ಲಿ ಒಂದು ಆಫೀಸಿಗೆ ಕಟ್ಟಡ ಮಾಡಿದ್ದಾರೆ. ಏಕೆ ಯಾರ ಸಹಾಯಕ್ಕೆ ಅದನ್ನು ಕಟ್ಟಿರುವುದು ? ಅದರಿಂದೇನು ಪ್ರಯೋಜನ ? ಈಗ ಅಡ್ಮಿನಿಸ್ಟ್ರೇಟಿವ್ ಆಫೀಸಿನಲ್ಲಿ ದೆವ್ವಗಳ ಕೂಟಕ್ಕೆ ಅವಕಾಶವಾಗಿದೆ. ಮಂಗಳೂರಿನಲ್ಲಿ ಗೊಬ್ಬರದ ಕಾರ್ಖಾನೆಯಾಗುವುದು ತೀರ್ಮಾನವಾಗಿಲ್ಲ. ಮಗು ಹುಟ್ಟುವುದಕ್ಕೆ ಮುಂಚೆ ಕುಲಾವಿ ಹೊಲಿಸುವಂತೆ ಕೆಲಸ ನಡೆಯುತ್ತಿದೆ. ವಿಶೇಷ ನೀರಾವರಿ ಯೋಜನೆಗಳ ಆವಶ್ಯಕತೆ ಬಹಳವಾಗಿರುವಾಗ 3 ಕೋಟಿ ರೂಪಾಯಿಗಳ ಕೆಲಸಕ್ಕೆ ಟೆಂಡರು ಕರೆಯ ಯಾರೋ ಒಬ್ಬರು ಬೇಕಾದವರಿಗೆ ಕಂಟ್ರಾಕ್ಟ್ ಕೊಟ್ಟಿದ್ದಾರೆ. ಗೊಬ್ಬರದ ಕಾರ್ಖಾನೆ ವಿಚಾರ ಏನಾಯಿತೋ ಗೊತ್ತಿಲ್ಲ.

[CHAIRMAN (SMT. K. LEELAVATHI RAI) in the Chair.]

ನೀರು ಕುಡಿಯುವುದಕ್ಕೆ ಒದಗಿಸಲು ತಯಾರಿಸಿರುವ ಯೋಜನೆಗಳಿಗೆ ಇಂದು ಹಣವಿಲ್ಲ, ಖಜಾನೆ ಖಾಲಿಯಾಗಿದೆ. ಸರಕಾರದ ನೀತಿ ದಿಕ್ಕಾಪಾಲಾಗಿಹೋಗಿದೆ. ಈ ದೇಶದಲ್ಲಿ ಅಗತ್ಯವಾಗಿ ಆಗಬೇಕಾಗಿರುವ ಯೋಜನೆಗಳನ್ನು ಪೂರ್ಣಮಾಡಲು ಸಾರ್ಥಕವಾದ ಕೆಲಸ ಮಾಡಲು ಸರಕಾರಕ್ಕೆ ಸಾಧ್ಯವಾಗಿಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ. ಈಗಿರುವ ಯೋಜನೆಗಳು ಎಂಥಾದ್ದು ಎಂದು ನೋಡಿದರೆ ಅರ್ಧ ರಾಜಕೀಯಕ್ಕೆ ಸಂಬಂಧಪಟ್ಟ ಯೋಜನೆಗಳಾಗಿವೆ. ಬೆಳಿಗ್ಗೆ ಒಂದು ಪ್ರಶ್ನೆಗೆ ಉತ್ತರ ಹೇಳುವಾಗ ಉಪಸಚಿವರು ಒಂದು ಮಾತನ್ನು ಹೇಳಿದರು. ಕುಣಿಗಲು ತಾಲ್ಲೂಕಿನಲ್ಲಿ ಚೀಫ್ ಎಂಜಿನಿಯರು ಒಂದು ಯೋಜನೆ ಬಗ್ಗೆ ತೀರ್ಮಾನ ಮಾಡಿದರು, ರಾಜಕೀಯ ಒತ್ತಡದಿಂದ ಆ ತೀರ್ಮಾನ ಬದಲಾಗಿ ಬೇರೆ ಜಾಗದಲ್ಲಿ ಮಾಡಬೇಕಾಯಿತು. ಹತ್ತು ವರ್ಷದಿಂದಲೂ ಜಾಗ ಇತ್ಯರ್ಥ ಮಾಡಲಿಲ್ಲ. ಇದೇ ರೀತಿ ಅನೇಕ ಯೋಜನೆಗಳ ವಿಚಾರದಲ್ಲೂ ಆಗುತ್ತಿದೆ. ರಾಮನಗರ ತಾಲ್ಲೂಕು ಮಂಚನಬೆಲೆ ಅಣೆಕಟ್ಟನ್ನು ಯಾವ ಜಾಗದಲ್ಲಿ ಕಟ್ಟಬೇಕು ಎಂಬ ವಿಚಾರದಲ್ಲಿ ಇದುವರೆಗೂ ಜಗಳವಾಗುತ್ತಲೇ ಇದೆ. ಕೃಷ್ಣ ಯೋಜನೆ ನಾರಾಯಣಪುರದಲ್ಲಿ ಮಾಡಲು ಸಿದ್ಧತೆಯಾಗಿ ಹತ್ತಾರು ವರ್ಷವಾಗಿದೆ, ಈ ವಿಚಾರದಲ್ಲಿ ಭಾರಿ ಜಗಳವಾಗಿದೆ, ಸಿದ್ದಾಪುರದಲ್ಲಿ ಕಟ್ಟಬೇಕೇ ನಾರಾಯಣಪುರದಲ್ಲಿ ಕಟ್ಟಬೇಕೇ ಎಂಬ ವಿಚಾರದಲ್ಲಿ ಬಹಳ ಜಗಳವಾಗಿದೆ. ಹಾರಂಗಿ, ಕಂಬದಕಡ ಯೋಜನೆಗಳ ಬಗ್ಗೆ ಎಷ್ಟು ಅಡಿ ಎತ್ತರಕ್ಕೆ ಕಟ್ಟೆ ಕಟ್ಟಬೇಕು, 80 ಅಡಿ ಇರಬೇಕೇ, 120 ಅಡಿ ಇರಬೇಕೇ ಎಂದು ಜಗಳವಾಗಿದೆ. ಈ ನೀರಾವರಿ ಯೋಜನೆಗಳಿಗೆ ಹಣವಿಲ್ಲ ಎಂದು ಹೇಳಿ ಅದನ್ನು ಬೇರೆ ಕಡೆಗೆ ಸಾಗಿಸುತ್ತಿದ್ದಾರೆ. ಶರಾವತಿಗೆ ಹಣವೆಲ್ಲಾ ಹೋಯಿತು. ಮೂರನೆಯ ಪಂಚವಾರ್ಷಿಕ ಯೋಜನೆ ಹಣವೆಲ್ಲಾ ಶರಾವತಿಗೆ ಹೋಯಿತು. ಅದರಿಂದ ಬರುವ ವಿದ್ಯುಚ್ಛಕ್ತಿಯನ್ನು ಉಪಯೋಗಿಸಲು ಶಕ್ತಿಯಿಲ್ಲ. ವಿದ್ಯುಚ್ಛಕ್ತಿಯನ್ನು ಮದ್ರಾಸು, ಮುಂಬಯಿ, ಆಂಧ್ರ ಸರಕಾರಗಳಿಗೆ ಮಾರುವ ಪರಿಸ್ಥಿತಿ ಇದೆ. ನಮ್ಮ ವಿದ್ಯುತ್ತನ್ನು ಉಪಯೋಗಿಸುವ ಶಕ್ತಿ ನಮಗಿಲ್ಲ, ಕೇಳುವವರಿಗೆ ನೀರನ್ನು ಕೊಡುವ ಶಕ್ತಿಯಿಲ್ಲ, ಹೀಗೆ ಎಷ್ಟು ಅವಿವೇಕವಿದೆ ಎಂಬುದನ್ನು ಹೇಳಿದ್ದೇನೆ.

ಇಂದು ದೊಡ್ಡ ನೀರಾವರಿ ಕೆಲಸವಿರಲಿ, ಸರಕಾರ ಸಣ್ಣಪುಟ್ಟ ಜಗಳಗಳಲ್ಲಿ ಕೈಹಾಕಿದೆ. ನಮ್ಮ ತಾಲ್ಲೂಕಿನಲ್ಲಿ ನಡೆದಿರುವುದನ್ನು ಮೊನ್ನೆ ಸಚಿವರಿಗೆ ಮತ್ತು ಸೆಕ್ರೆಟರಿಗಳಿಗೆ ಹೇಳಿದೆ, ನಮ್ಮ ತಾಲ್ಲೂಕಿನಲ್ಲಿ ಒಂದು ಸಣ್ಣ ಕೆರೆಯಿದೆ, ಅದರ ಹಿಂದೆ ನಾಲೆ ನೀರು ಹೋಗುತ್ತದೆ. ಅದಕ್ಕೆ ಅಡ್ಡಗಟ್ಟೆ ಹಾಕಿ ಖದೀಮ ಒಬ್ಬ ತನ್ನ ಸ್ವಂತ ಜಮೀನಿಗೆ ನೀರನ್ನು ತಿರುಗಿಸಿಕೊಂಡಿದ್ದಾನೆ, ಆತ ಅಚ್ಚುಕಟ್ಟುದಾರನಲ್ಲ ಕೆರೆ ಅಚ್ಚುಕಟ್ಟುದಾರರಿಗೇ ನೀರಿಲ್ಲದಿರುವಾಗ ಊರ ಪಕ್ಕದಲ್ಲಿ ಒಬ್ಬ ತನ್ನ ಜಮೀನಿಗೆ ಕಾಂಗ್ರೆಸ್ಸಿನಲ್ಲಿ ಮತ್ತು ಮಂತ್ರಿಗಳಲ್ಲಿ ಅವ್ಯವಹಾರ ಇರುವುದರಿಂದ ಅಕ್ರಮವಾಗಿ ನೀರನ್ನು ಉಪಯೋಗಿಸಿಕೊಳ್ಳುತ್ತಿದ್ದಾನೆ. ಇದನ್ನು ಪರೀಕ್ಷೆ ಮಾಡಿ ಎಂದು ಹೇಳಿದರೆ ಯಾರಿಗೋ ಫೋನ್ ಮಾಡಿದ್ದಾರಂತೆ. ಯಾರು ಏನು ಮಾಡಿದ್ದಾರೋ ಏನೋ. ಪಿ.ಡಬ್ಲ್ಯು. ಮಂತ್ರಿಗಳು ಅದೇ ತಾಲ್ಲೂಕಿನವರು, ಅವರಿಗೆ ನೀರನ್ನು ಉಪಯೋಗ ಮಾಡಿಕೊಂಡಿರುವ ವ್ಯಕ್ತಿ ಹೇಳಿರಬಹುದು, ನಾನಿದ್ದೇನೆ, ಪರವಾಗಿಲ್ಲ ಎಂದು ಮಂತ್ರಿಗಳು ಹೇಳಿರಬಹುದು. ಹೀಗಾದರೆ ಎಂಜಿನಿಯರು ಏನು ಮಾಡಲು ಸಾಧ್ಯ ? ಇಂಥ ವಿಚಾರ

(ಶ್ರೀ ಎಸ್. ಶಿವಪ್ಪ)

ಗಳಿಗೆ ಗಮನ ಕೊಡದೆ ಮಂತ್ರಿಗಳು ಇವುಗಳಲ್ಲಿ ಕೈ ಹಾಕಿದರೆ ಏನು ತಾನೆ ಒಳ್ಳೆಯದಾದೀತು ಎಂಬುದನ್ನು ಯೋಚನೆ ಮಾಡಬೇಕು. ಇಂಥ ಸಣ್ಣ ಕೆಲಸಗಳನ್ನೇ ಮಾಡಲು ಸಾಧ್ಯವಿಲ್ಲದಿದ್ದರೆ ದೊಡ್ಡ ಕೆಲಸಗಳನ್ನು ಮಾಡಲು ಹೇಗೆ ಸಾಧ್ಯ! ನೀರಾವರಿ ಯೋಜನೆಗಳನ್ನು ಮಾಡುವುದಕ್ಕೆ ಸರಕಾರದವರಿಗೆ ಸಾಧ್ಯವಾಗುವುದಿಲ್ಲ ಎಂದು ಬಹಳ ವಿಷಾದದಿಂದ ಹೇಳುತ್ತೇನೆ.

ಕೊನೆಯದಾಗಿ ಒಂದು ವಿಷಯವನ್ನು ಇವತ್ತು ಯೋಚನೆ ಮಾಡಬೇಕಾಗಿದೆ. ಭಾರತ ದೇಶದಲ್ಲೂ ಕೂಡ ಈ ಭಾಷೆ ಮತ್ತು ರಾಜ್ಯ ರಾಜ್ಯಗಳ ನಡುವೆ ಘರ್ಷಣೆಯಾಗತಕ್ಕ ಸಂದರ್ಭ ಇದೆ. ಅದರಿಂದಾಗಿ ರಾಜ್ಯಗಳ ರೀಜನಲ್ ಇಂಬ್ಯಾಲೆನ್ಸ್—ಪ್ರದೇಶ ಪ್ರದೇಶಗಳಿಗೆ ವ್ಯತ್ಯಾಸ ಇರಬಾರದು ಎಂಬ ಒಂದು ತತ್ವವನ್ನು ಇವತ್ತು ಒಪ್ಪಿಕೊಳ್ಳಬೇಕಾಗಿದೆ. ಹೈದರಾಬಾದು ತೆಲಂಗಾಣದಲ್ಲಿ ಒಂದು ದೊಡ್ಡ ಹೋರಾಟವೇ ನಡೆದಿದೆ. ಒಂದು ಯುದ್ಧದ ರೂಪದಲ್ಲಿ ಕೂಡ ಜಗಳ ಮಾಡುತ್ತಾ ಇದ್ದಾರೆ. ನಮ್ಮ ಪ್ರದೇಶವನ್ನು ಸರಿಯಾಗಿ ನೋಡಿಕೊಳ್ಳುತ್ತಿಲ್ಲ ಇತರ ಪ್ರದೇಶ ಗಳಿಗೆ ಹೆಚ್ಚಿನ ಪ್ರೋತ್ಸಾಹವನ್ನು ಕೊಡುತ್ತಾ ಇದ್ದೀರಿ ಎಂಬ ಮಾತನ್ನು ಹೈದರಾಬಾದಿನಲ್ಲಿ ಕೇಳುತ್ತಾ ಇದ್ದೇವೆ. ಮೈಸೂರು ರಾಜ್ಯದಲ್ಲೂ ಕೂಡ ಅಂತಹ ಮಾತು ಆಗಲೇ ಹೊರಡುವುದಕ್ಕೆ ಪ್ರಾರಂಭವಾಗಿದೆ. ಇವತ್ತಿನ ಬಡ್ಜೆಟ್‌ನಲ್ಲೂ ಕೂಡ ಅದನ್ನು ತೋರಿಸಿ ಹೇಳುತ್ತಾ ಇದ್ದಾರೆ. ಹಣವನ್ನು ಅಳವಡ ಮಾಡತಕ್ಕ ಕಾಲದಲ್ಲಿ, ಯೋಜನೆಗಳನ್ನು ತೆಗೆದುಕೊಳ್ಳತಕ್ಕ ಕಾಲದಲ್ಲಿ ವ್ಯತ್ಯಾಸ ಇದೆ ಎಂಬುದನ್ನು ಇವತ್ತು ಅಂಕಿಅಂಶಗಳಿಂದಲೂ ಕೂಡ ನಾವು ನೋಡಬಹುದಾಗಿದೆ. ಇಂತಹ ಒಂದು ರೀಜನಲ್ ಇಂಬ್ಯಾಲೆನ್ಸ್‌ಗೆ ಅವಕಾಶ ಕೊಡದೆ ಎಲ್ಲರಿಗೂ ಸಮಾನವಾದ ಒಂದು ನೀತಿ ಯನ್ನು ಸರ್ಕಾರ ಅನುಸರಿಸಬೇಕು ಮತ್ತು ತಮ್ಮ ಕಾರ್ಯಚಟುವಟಿಕೆಗಳನ್ನು ತೋರಿಸಿ ಕೊಡಬೇಕು. ಅಂತಹ ಕಾರ್ಯವನ್ನು ಮಾಡದಿದ್ದರೆ ಬಹುಶಃ ಇಲ್ಲೂ ಕೂಡ ಬೇರೆ ರಾಜ್ಯಗಳಲ್ಲಿರತಕ್ಕ ಜಗಳ ಏನಿದೆ ಅದು ಉದ್ಭವವಾಗಬಹುದು. ಅದಕ್ಕೆ ಅವಕಾಶ ಕೊಡಬಾರದು. ಆ ರೀತಿ ಆಗುವುದಾದರೆ ಅದಕ್ಕೆ ಸರ್ಕಾರವೇ ನೇರವಾಗಿ ಹೊಣೆಯಾಗುತ್ತದೆ, ಅಂತಹ ಕೆಲಸವನ್ನು ಸರ್ಕಾರ ಮಾಡದೇ ಇರಲಿ, ಒಳ್ಳೆಯ ಬುದ್ಧಿ ಅವರಿಗೆ ಉಂಟಾಗಿ ಆಗಿರತಕ್ಕ ಹಣವನ್ನು ಸರಿಯಾಗಿ ಹಂಚತಕ್ಕ ಕಾರ್ಯವನ್ನು ಮಾಡಬೇಕೆಂದು ಹೇಳುತ್ತೇನೆ. ನಾಳೆ ಮುಖ್ಯಮಂತ್ರಿಗಳು ದೆಹಲಿಗೆ ಹೋಗುತ್ತಾ ಇದ್ದಾರೆ ಕಾವೇರಿ ಕಣಿವೆಯಲ್ಲಿರತಕ್ಕ ಹೇಮಾವತಿ ಪ್ರಾಜೆಕ್ಟಿಗೆ ಟೆಕ್ನಿಕಲ್ ಕ್ಲಿಯರೆನ್ಸ್ ಕೊಡತಕ್ಕ ವಿಚಾರದಲ್ಲಿ, ಕೃಷ್ಣಾ ಗೋದಾವರಿ ನದಿ ನೀರಿನ ಹಂಚಿಕೆ ವಿಚಾರದಲ್ಲಿ ಕಮಿಷನ್ ಏರ್ಪಾಡು ಮಾಡತಕ್ಕ ವಿಚಾರ ದಲ್ಲಿ ಅವರು ಧೈರ್ಯವಾಗಿ ಶ್ರೀ ಕೆ. ಎಲ್. ರಾವ್ ಅವರಿಗೆ ಹೇಳಬೇಕು. ಶ್ರೀ ಕೆ. ಎಲ್. ರಾವ್ ರವರು ಇರುವ ತನಕ ಮೈಸೂರು ರಾಜ್ಯಕ್ಕೆ ಏನೂ ನ್ಯಾಯ ದೊರಕುವುದಿಲ್ಲ ಎಂಬ ಮಾತನ್ನು ಧೈರ್ಯವಾಗಿ ವೀರೇಂದ್ರ ಪಾಟೀಲರವರು ಇಂದಿರಾಗಾಂಧಿಯವರಿಗೆ ಹೇಳಿ ಎರಡು ಕಮಿಷನ್ ಏರ್ಪಾಡು ಮಾಡುವುದಾದರೆ ಮೈಸೂರು ಅದರಲ್ಲಿ ಭಾಗವಹಿಸುವುದಿಲ್ಲ, ಖಚಿತವಾದ ತೀರ್ಮಾನಕ್ಕೆ ಬರುವುದಿಲ್ಲ ಎಂಬುದನ್ನು ಘಂಟಾಘೋಷವಾಗಿ ಹೇಳಬೇಕು ಮತ್ತು ಹೇಮಾವತಿಗೆ ಟೆಕ್ನಿಕಲ್ ಕ್ಲಿಯರೆನ್ಸ್ ತೆಗೆದುಕೊಂಡು ಬರಬೇಕೆಂದು ಒತ್ತಾಯಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸೀಪುರ).—ಸಭಾಪತಿಗಳೇ, ಲೋಕೋಪಯೋಗಿ ಇಲಾಖೆಗೆ ಸಂಬಂಧಪಟ್ಟ ಹಲವಾರು ಬೇಡಿಕೆಗಳಿಗಾಗಿ ಸುಮಾರು 98 ಕೋಟಿ 74 ಲಕ್ಷ 27 ಸಾವಿರ ರೂಪಾಯಿಗಳ ಈ ಬೇಡಿಕೆಯನ್ನು ಬೆಂಬಲಿಸತಕ್ಕ ಕಾಲದಲ್ಲಿ ಈ ಇಲಾಖೆಯ ವೆಚ್ಚ ನಮಗೆ ಯಾವ ರೀತಿ ಉಪಯುಕ್ತವಾಗಬೇಕು ಮತ್ತು ಸಾಧಿಸಬೇಕಾಗಿರತಕ್ಕ ಸಮಸ್ಯೆಗಳು ಮತ್ತು ಕೆಲಸಗಳು ಏನಿವೆ ಎಂಬುದರ ಬಗ್ಗೆ ನಮ್ಮ ಅರಿವು ಏನಿರಬೇಕೆಂಬ ಕೆಲವು ವಿಷಯಗಳನ್ನು ನಾನು ಈ ಸಂದರ್ಭ ದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ಶ್ರೀಮಾನ್ ಶಿವಪ್ಪನವರು ಹಳ್ಳಿಗಾಡಿನ ರೈತರ ಆರ್ಥಿಕ ಸಮಸ್ಯೆ ಸಾಧನೆಯಾಗಬೇಕಾದರೆ ಪ್ರಾಯಶಃ ಈ ಒಂದು ಇಲಾಖೆಯ ಒಂದು ಪ್ರಗತಿ ಯಿಂದ ಮಾತ್ರ ಸಾಧ್ಯ ಎಂಬ ಮಾತನ್ನು ಹೇಳಿದರು, ಅದನ್ನು ನಾವೆಲ್ಲ ಒಪ್ಪಿಕೊಳ್ಳುವುದಕ್ಕೆ ಸಿದ್ಧವಾಗಿದ್ದೇವೆ. ಇವತ್ತು ಒಂದೊಂದು ಹಂತವಾಗಿ ಈ ವಿಷಯವನ್ನು ಸ್ವಲ್ಪ ಸವಿಸ್ತಾರವಾಗಿ ಚರ್ಚೆ ಮಾಡಬೇಕೆಂಬ ಆಶೆಯನ್ನು ನಾನು ಇಟ್ಟುಕೊಂಡಿದ್ದೇನೆ. ಪಿ.ಡಬ್ಲ್ಯು.ಡಿ. ಇಲಾಖೆಯ ರೀ ಆರ್ಗನೈಸೇಷನ್ ಮಾಡಬೇಕೆಂದು ಮೈಸೂರು ರಾಜ್ಯ ಸರ್ಕಾರದವರು ತಜ್ಞರಾದ ಶ್ರೀಮಾನ್ ಮಿತ್ರಾರವರನ್ನು ಕರೆಸಿ ಅವರಿಂದ ಒಂದು ವರದಿಯನ್ನು ತಯಾರುಮಾಡಿಸಿದರು. ನನಗೆ ತಿಳಿದಿರುವ ಹಾಗೆ ಅವರ ಶಿಫಾರಸುಗಳು ಸರ್ಕಾರದವರಿಗೆ ಗೊತ್ತಿದೆ ಎಂದು ತಿಳಿದಿದ್ದೇನೆ. ಅವುಗಳನ್ನು ರಾಜ್ಯ ಸರ್ಕಾರದವರು ಅಂಗೀಕಾರ ಮಾಡಿದ್ದಾರೆಯೋ ಇಲ್ಲವೋ ಎಂಬ ಬಗ್ಗೆ ನನಗೆ ಸಂಶಯ ಇದೆ. ನಾನು ತಿಳಿದಿದ್ದರಲ್ಲಿ ಅವರ ಶಿಫಾರಸನ್ನು ಪೇ ಕಮಿಷನ್‌ಗೆ ಒದಗಿಸಿ ಅವರು ಅದರ ಬಗ್ಗೆ ಕೊಟ್ಟಂಥ

ಅಭಿಪ್ರಾಯದ ಮೇಲೆ ರಾಜ್ಯ ಸರ್ಕಾರ ತನ್ನ ನಿರ್ಣಯವನ್ನು ತೆಗೆದುಕೊಳ್ಳುವುದರ ಬಗ್ಗೆ ಆಲೋಚನೆ ಮಾಡುತ್ತಾ ಇದೆ ಎಂದು ಕೇಳಿದ್ದೇನೆ. ಮುಖ್ಯ ಮಂತ್ರಿಗಳು ಈ ವಿಷಯದಲ್ಲಿ ಉತ್ತರ ಕೊಡತಕ್ಕ ಕಾಲದಲ್ಲಿ ಇದರ ಬಗ್ಗೆ ತಮ್ಮ ಅಭಿಪ್ರಾಯ ಏನೆಂಬುದನ್ನು ತಿಳಿಸಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಈ ಇಲಾಖೆಯಲ್ಲಿ ಡೂಪ್ಲಿಕೇಷನ್ ಆಫ್ ವರ್ಕ್ ಇದೆ ಅದು ಆಗಬಾರದು ಎಂಬುದರ ಬಗ್ಗೆ ಕಳೆದ ಏಳು ವರ್ಷಗಳಿಂದಲೂ ಅನೇಕ ಸಾರಿ ಸಲಹೆಗಳನ್ನು ಕೊಟ್ಟಿದ್ದೇನೆ. ಅದನ್ನು ಕಾರ್ಯಗತ ಮಾಡುವುದರ ಬಗ್ಗೆ ಏನು ಆತಂಕ ಇದೆ ಎನ್ನುವುದು ಅರ್ಥವಾಗಿಲ್ಲ. ಉದಾಹರಣೆಗೆ, ಮೇಜರ್ ಪ್ರಾಜೆಕ್ಟ್‌ಗಳಿಗಾಗಿ ಒಬ್ಬ ಚೀಫ್ ಇಂಜನಿಯರನ್ನು ಇಟ್ಟುಕೊಂಡಿದ್ದಾರೆ. ಈ ಸಭೆಯಲ್ಲಿ ಹಲವಾರು ಸಾರಿ ಹೇಳಿದ್ದೇನೆ, ಆ ಚೀಫ್ ಇಂಜನಿಯರು ಇನ್‌ವೆಸ್ಟಿಗೇಷನ್ ಮಾಡುತ್ತಾರೆ, ಅವರೇ ಡಿಸೈನ್ ಪ್ಲಾನ್ ಮುಂತಾದುವುಗಳನ್ನೆಲ್ಲಾ ಸರ್ಕಾರದವರಿಗೆ ಕೊಡುತ್ತಾರೆ. ಅದನ್ನು ಇಂಪ್ಲಿಮೆಂಟ್ ಮಾಡುವುದರ ಬಗ್ಗೆ ಬೇರೊಬ್ಬ ಚೀಫ್ ಇಂಜನಿಯರು ಇದ್ದಾರೆ. ಅವರು ಅದನ್ನು Execution ಮಾಡತಕ್ಕ ಕಾಲದಲ್ಲಿ ಅಲ್ಲಿರತಕ್ಕ ಸನ್ನಿವೇಶಕ್ಕೆ ಅನುಗುಣವಾಗಿ ಇವರು Execution ಮಾಡತಕ್ಕ ಪ್ರಾಜೆಕ್ಟ್ ಏನಿರುತ್ತದೆ ಅದರ ಬಗ್ಗೆ ರಿಪೋರ್ಟ್ ಕೊಟ್ಟು ಅದನ್ನು ಬದಲಾವಣೆ ಮಾಡುತ್ತಾ ಹೋಗುತ್ತಾರೆ. ಈ ರೀತಿ ಮಾಡುವುದು ಸ್ವಾಭಾವಿಕ. ಆದ್ದರಿಂದ ಈ ಒಂದು ಹುದ್ದೆಯ ಅವಶ್ಯಕತೆ ಇದೆಯೇ ? ಇದಕ್ಕೆ ಸರಿಯಾದಂತಹ ಕಾರಣಗಳು ಇವೆಯೇ ಎಂಬುದನ್ನು ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಅದಕ್ಕೆ ಸರ್ಕಾರದವರು ನಾವು ಪ್ರಾಜೆಕ್ಟ್‌ಗಳನ್ನೆಲ್ಲಾ ತಯಾರುಮಾಡಿ ಕೊಂಡು ಇಟ್ಟುಕೊಂಡಿದ್ದರೆ ಕೇಂದ್ರದವರನ್ನು ಹಣ ಕೇಳುವುದಕ್ಕೆ ಉಪಯುಕ್ತವಾಗುತ್ತದೆ ಎಂಬ ಅಭಿಪ್ರಾಯದಿಂದ ಇನ್‌ವೆಸ್ಟಿಗೇಷನ್ ಚೀಫ್ ಇಂಜನಿಯರಿಂಗ್ ಜೋನನ್ನು ಇಟ್ಟುಕೊಂಡಿದ್ದೇವೆ ಎಂದು ಹೇಳುತ್ತಾರೆ. ನಾನು ಹೇಳುವುದೇನೆಂದರೆ ಎರಡು ಜೋನುಗಳನ್ನು ಕಿತ್ತುಹಾಕಿ ಒಂದೇ ಒಂದು ಕನ್‌ಸ್ಟ್ರಕ್ಷನ್‌ಜೋನನ್ನು ಇಟ್ಟು, ಇನ್‌ವೆಸ್ಟಿಗೇಷನ್ ಜೋನಿನ ಸೂಪರಿಂಟೆಂಡಿಗ್ ಇಂಜನಿಯರ್ (ಇನ್‌ವೆಸ್ಟಿಗೇಷನ್), ಅಂತ ಯಾರಿದ್ದಾರೆ ಅವರ ಜೊತೆಗೆ ಏಕೆ ಟ್ಯಾಗ್ ಆನ್ ಮಾಡಬಾರದು? ಆ ರೀತಿ ಮಾಡುವುದರಿಂದ ಕನ್‌ಸ್ಟ್ರಕ್ಷನ್‌ಗೆ ಸಂಬಂಧಪಟ್ಟ ಅಧಿಕಾರಿಯೇ ಪ್ಲಾನ್ ಅಂಡ್ ಇನ್‌ವೆಸ್ಟಿಗೇಷನ್ ಮಾಡಿ ಅಂತಿಮವಾದ ನಿರ್ಣಯ ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ, ಆ ರೀತಿ ಮಾಡುವುದು ಸೂಕ್ತ ಎಂಬುದನ್ನು ತಿಳಿಸುವುದಕ್ಕೆ ಇಚ್ಛೆ ಪಡುತ್ತೇನೆ. ಮತ್ತೆ ಮಿತ್ರಾ ಕಮಿಷನ್‌ನವರು ಟೆಕ್ನಿಕಲ್ ಅನುಭವ ಪಡೆದಿರುವವನ್ನು ಸೆಕ್ರೆಟರಿ ಆಗಿ ಇಡಬೇಕೆಂದು ಹೇಳಿದ್ದಾರೆ, ಅದನ್ನು ಪೇ ಕಮಿಷನ್‌ನವರು ಸಮರ್ಥನೆ ಮಾಡಿದ್ದಾರೆ. ಇದು ಬಹಳ ಅವಶ್ಯಕ. ಇವತ್ತು ಇರತಕ್ಕ ಸೆಕ್ರೆಟೆರಿಯವರಿಗೆ ಅಡ್ಮಿನಿಸ್ಟ್ರೇಷನ್ ಸೈಡ್‌ನಲ್ಲಿ ಅನುಭವ ಇರುತ್ತದೆಯೇ ಹೊರತು ಟೆಕ್ನಿಕಲ್ ಸೈಡ್‌ನಲ್ಲಿ ನಿರ್ಣಯ ತೆಗೆದುಕೊಳ್ಳತಕ್ಕ ಕಾಲದಲ್ಲಿ ಅವರಿಗೆ ಅಷ್ಟು ಅನುಭವ ಇರುವುದಿಲ್ಲ, ಆದ್ದರಿಂದ ಅಡೀಷನಲ್ ಸೆಕ್ರೆಟೆರಿ ಅಂತ ಆದರೂ ಕರೆಯಿರಿ ಅಥವಾ ಜಾಯಿಂಟ್ ಸೆಕ್ರೆಟೆರಿ ಅಂತ ಆದರೂ ಕರೆಯಿರಿ ಅಂಥ ಒಂದು ಹುದ್ದೆಯನ್ನು ಇಡುವುದು ಸೂಕ್ತ ಎಂಬುದನ್ನು ಈ ಸಂದರ್ಭದಲ್ಲಿ ತಿಳಿಸುತ್ತಾ ಇದ್ದೇನೆ. ಪ್ರಜಾಪ್ರಭುತ್ವದಲ್ಲಿ ತಜ್ಞರಾಗಿರತಕ್ಕವರು ಈ ಇಲಾಖೆಯ ಮಂತ್ರಿಗಳಾಗುವುದಕ್ಕೆ ಸಾಧ್ಯವಿಲ್ಲ. ಅಂತಹ ಸಂದರ್ಭದಲ್ಲಿ ತಾಂತ್ರಿಕವಾಗಿ ಸರ್ಕಾರದ ನಿರ್ಣಯವನ್ನು ತೆಗೆದುಕೊಳ್ಳತಕ್ಕ ಕಾಲದಲ್ಲಿ ಈ ಒಂದು ಹುದ್ದೆ ಇರಬೇಕಾದ್ದು ಅವಶ್ಯಕ ಎಂಬುದನ್ನು ಸಮರ್ಥನೆ ಮಾಡುತ್ತಾ ಇದ್ದೇನೆ.

ಇನ್ನು ವಿಜಿಲೆನ್ಸ್ ಡಿಪಾರ್ಟ್‌ಮೆಂಟಿನಲ್ಲಿ ಒಬ್ಬ ಸೂಪರಿಂಟೆಂಡಿಂಗ್ ಇಂಜನಿಯರನ್ನು ಟೆಕ್ನಿಕಲ್ ಸೈಡ್‌ನಲ್ಲಿ ಇಟ್ಟಿದ್ದೀರಿ, ಆತ ರಿಪೋರ್ಟ್ ಕೊಡುತ್ತಾನೆ ಅದನ್ನು ಟೆಕ್ನಿಕಲ್ ಆಗಿ ಎಕ್ಸಾಮಿನ್ ಮಾಡತಕ್ಕದ್ದರ ಬಗ್ಗೆ ಸಂಬಂಧಪಟ್ಟ ಚೀಫ್ ಇಂಜನಿಯರಿಗೆ ಕಳುಹಿಸುತ್ತಾರೆ. ಒಬ್ಬ ಚೀಫ್ ಇಂಜನಿಯರು ತಪ್ಪು ಮಾಡಿದ್ದರೆ ವಿಜಿಲೆನ್ಸ್ ಡಿಪಾರ್ಟ್‌ಮೆಂಟಿನಲ್ಲಿರತಕ್ಕ ಸೂಪರಿಂಟೆಂಡಿಗ್ ಇಂಜನಿಯರು ಯಾರು ಇದ್ದಾರೋ ಆತ ಸವಿಸ್ತಾರವಾಗಿ ತನ್ನ ರಿಪೋರ್ಟ್‌ನ್ನು ಆಯಾ ಜೋನಿನ ಚೀಫ್ ಇಂಜನಿಯರಿಗೆ ಕಳುಹಿಸಿಕೊಟ್ಟ ಮೇಲೆ ಆ ಚೀಫ್ ಇಂಜನಿಯರ್ ಅದನ್ನು ಸಮರ್ಥನೆ ಮಾಡು ವುದಕ್ಕೆ ಪ್ರಯತ್ನ ಮಾಡುತ್ತಾರೆ. ಟೆಕ್ನಿಕಲ್ ಆಡಿಟ್ ಸೆಲ್‌ಗೆ ಸಂಬಂಧಪಟ್ಟ ಹಾಗೆ ವಿಜಿಲೆನ್ಸ್ ಡಿಪಾರ್ಟ್‌ಮೆಂಟಿಗೆ ಅವರನ್ನು ಅಟ್ಯಾಚ್ ಮಾಡಿದ್ದಾರೆ. ಈ ಹುದ್ದೆಯನ್ನು ಅಪ್‌ಗ್ರೇಡ್ ಮಾಡಿ ಲೋಪದೋಷಗಳ ಬಗ್ಗೆ ಏನು ತನಿಖೆ ನಡೆಸುತ್ತಾರೆ ಅದರ ಬಗ್ಗೆ ತಾಂತ್ರಿಕವಾಗಿ ಕೊಡತಕ್ಕ ನಿರ್ಣಯ ಏನಿದೆ ಅದು ಅಂತಿಮವಾಗಬೇಕು. ಸರ್ಕಾರ ಒಂದು ನಿರ್ಣಯ ತೆಗೆದುಕೊಳ್ಳತಕ್ಕ ಕಾಲದಲ್ಲಿ ಆತನ ಅಭಿಪ್ರಾಯವೇ ಕೊನೇ ಅಭಿಪ್ರಾಯವಾಗಬೇಕೆನ್ನುವುದನ್ನು ಈ ಸಂದರ್ಭದಲ್ಲಿ ತಿಳಿಸುತ್ತೇನೆ. ಸೆಂಟ್ರಲ್ ವಿಜಿಲೆನ್ಸ್ ಡಿಪಾರ್ಟ್‌ಮೆಂಟಿನಲ್ಲೂ ಕೂಡ ಇಂತಹ ಒಂದು ಹುದ್ದೆಯನ್ನು ಚೀಫ್ ಇಂಜನಿಯರುಗಳಿಗೆ ಸಂಬಂಧಪಟ್ಟ ಹಾಗೆ ಇಟ್ಟಿದ್ದಾರೆ ಎಂದು ಕೇಳಿದ್ದೇನೆ. ಆದ್ದರಿಂದ ಟೆಕ್ನಿಕಲ್ ಆಡಿಟ್ ಸೆಲ್‌ನಲ್ಲಿರತಕ್ಕ ಹುದ್ದೆ ಏನಿದೆ ಅದು ಚೀಫ್ ಇಂಜನಿಯರ ಹುದ್ದೆಯಾಗಿರ ಬೇಕು, ಆತ ಕೊಡತಕ್ಕ ಅಭಿಪ್ರಾಯವೇ ಕೊನೆಯದಾಗಬೇಕೆಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ.

(ಶ್ರೀ ಹೆಚ್. ಡಿ. ದೇವೇಗೌಡ)

ನಾನಿನ್ನು ಈ ವಿಚಾರದಲ್ಲಿ ಒಂದು ಮಾತನ್ನು ಹೇಳಿ ಅನಂತರ ಮೇಜರ್ ಮತ್ತು ಮೈನರ್ ಇರಿಗೇಷನ್ ಬಾಬುಗಳಿಗೆ ಬರುತ್ತೇನೆ. ಸರ್ಕಾರದವರು ಈ ಬಾಬಿಗೆ ರಾಜ್ಯದ ವರಮಾನದಲ್ಲಿ ಶೇಕಡ 50 ರಷ್ಟನ್ನು ಅಂದರೆ ಬಹಳ ಹಣವನ್ನು ಖರ್ಚು ಮಾಡುತ್ತಿದ್ದಾಗ್ಯೂ ಅನೇಕ ಸದಸ್ಯರು ಇಲ್ಲಿ ಸರ್ಕಾರದ ಲೋಪದೋಷಗಳನ್ನೆತ್ತಿ ಮಾತನಾಡಿದ್ದಾರೆ, ಮತ್ತು ಮಾತನಾಡುತ್ತಿದ್ದಾರೆ. ಅದಕ್ಕಾಗಿ ನಾನು ಸರ್ಕಾರಕ್ಕೆ ಮಾಡತಕ್ಕ ಒಂದು ಸಲಹೆ ಏನೆಂದರೆ—ಒಂದು ಪರ್‌ಫಾರ್ಮೆನ್ಸ್ ಆಡಿಟ್ ಸೆಲ್ ಎಂತ ಮಾಡಲಿ, ಆ ಸೆಲ್‌ನವರು ನಾವು ಖರ್ಚುಮಾಡತಕ್ಕ ಹಣಕ್ಕೆಷ್ಟು ನ್ಯಾಯವಾಗಿ ನಮಗೆ ರಿಟರ್ನ್—ಪ್ರತಿಫಲ ಬರಬೇಕೋ ಅಷ್ಟು ದೊರೆಯದಿದ್ದರೆ ಅಥವಾ ಅಲ್ಲೇನಾದರೂ ದುರುಪಯೋಗವಾಗಿದ್ದರೆ ಅಂದರೆ ಇನ್‌ಫ್ರುಕ್ಚುಯಸ್ ಎಕ್ಸ್‌ಪೆಂಡಿಚರ್ ಆಗಿದ್ದರೆ ಆ ಪರ್‌ಫಾರ್ಮೆನ್ಸ್ ಸೆಲ್‌ನವರು ಅಲ್ಲಿ ಟೆಕ್ನಿಕಲ್ ಆಡಿಟ್‌ಮಾಡಿ ಅದನ್ನು ಕ್ರಮಪಡಿಸುವುದಕ್ಕೆ ಸಾಧ್ಯವಾಗುತ್ತದೆ. ಅಂಥ ಒಂದು ಸೆಲ್ಲನ್ನು ಕ್ರಿಯೇಟ್‌ಮಾಡುವುದು ಸೂಕ್ತ ಎಂದು ಸಲಹೆ ಮಾಡುತ್ತೇನೆ.

4-00 P.M.

ಸಭೆಯಲ್ಲಿ ವಿರೋಧ ಪಕ್ಷದ ನಾಯಕರಾದ ಶ್ರೀ ಶಿವಪ್ಪನವರಿಲ್ಲ. ನಾನು ಈಗ ಈ ಮೇಜರ್ ಮತ್ತು ಮೈನರ್ ಇರಿಗೇಷನ್ ಬಗ್ಗೆ ಚರ್ಚೆಮಾಡುತ್ತಿದ್ದೇನೆ. ಶ್ರೀ ಶಿವಪ್ಪನವರು ಒಂದು ಮಾತನ್ನು ಹೇಳಿದ್ದಾರೆ—ಸರ್ಕಾರದವರಿಗೆ ಈ ಸಭೆಯವರು ಒಪ್ಪಿಕೊಡತಕ್ಕ ಹಣದಲ್ಲಿ ಬಹು ಭಾಗವನ್ನು ಸರ್ಕಾರದವರು ಸಿಕ್ಕಾಪಟ್ಟೆ ಖರ್ಚುಮಾಡುತ್ತಿದ್ದಾರೆ, ಅದಕ್ಕಾಗಿ ನಾವು ಅವರಿಗೆ ಈ ಬಾಬಿನಲ್ಲಿ ಜನರ ಮೇಲೆ ಹೆಚ್ಚಿನ ತೆರಿಗೆಗಳನ್ನು ಹಾಕುವುದಕ್ಕೆ ಒಪ್ಪುತ್ತಿಲ್ಲ ಎಂದು ಹೇಳಿದರು. ಹಾಗೆ ಅಕ್ರಮವಾದ ಖರ್ಚುವೆಚ್ಚಗಳನ್ನು ಮಾಡಿದ್ದರೆ ಅವರು ಟೀಕೆ ಮಾಡಲಿ ಅದನ್ನು ಖಂಡಿಸಲಿ ನಾನು ಬೇಡವೆನ್ನುವುದಿಲ್ಲ. ಆದರೆ ಅವರು ಸರ್ಕಾರ ರೈತನಮೇಲೆ ಏನಾದರೂ ಇದರ ಬಗ್ಗೆ ಹೊಸ ತೆರಿಗೆಯನ್ನು ವಿಧಿಸಿದ್ದೇ ಆದರೆ ಅದನ್ನು ಅವರು ಉಗ್ರವಾಗಿ ಪ್ರತಿಭಟನೆ ಮಾಡುತ್ತೇವೆಂದು ಹೇಳಿದ್ದು ಮಾತ್ರ ಅಷ್ಟು ಸಾಧುವಾದ್ದಲ್ಲ. ನಮ್ಮ ರೈತರು ತಾವಾಗೇ ಮುಂದೆ ಬಂದು ನೀರಾವರಿ ಬಗ್ಗೆ ತಗಲತಕ್ಕ ಖರ್ಚನ್ನು ಕೊಡಿ ಎಂದರೆ ಕೊಡುವುದಕ್ಕೆ ತಯಾರಾಗಿದ್ದಾರೆ. ಇಲ್ಲಿ ನಾವು ಪ್ರಾಮುಖ್ಯವಾಗಿ ಯೋಚಿಸಬೇಕಾಗಿರುವುದು ಏನೆಂದರೆ ಸರ್ಕಾರದವರು ರೈತರಮೇಲೆ ಹಾಕಬೇಕೆಂದಿರುವ ತೆರಿಗೆಯನ್ನು ಉಗ್ರವಾಗಿ ವಿರೋಧಿಸಬೇಕಾದ್ದು ಮುಖ್ಯವೋ ಅಥವಾ ನಮ್ಮ ನದಿಗಳ ನೀರಿನಲ್ಲಿ ನಮಗಿದ್ದ ಭಾಗವನ್ನು ನಾವು ಉಪಯೋಗಮಾಡಿಕೊಳ್ಳದೆ ನಮ್ಮ ಹಕ್ಕನ್ನು ನಾವು ಹಾಳುಮಾಡಿಕೊಳ್ಳುವುದು ಮುಖ್ಯವೋ ಈ ಎರಡನ್ನೂ ಆಲೋಚಿಸಿದರೆ ನಾವು ರೈತರ ಬಗ್ಗೆ ಹೊಸ ತೆರಿಗೆ ಬಿದ್ದರೂ ಚಿಂತೆಯಿಲ್ಲ ನಾವು ನಮ್ಮ ನೀರಿನ ಪಾಲನ್ನು ಎಂದಿಗೂ ಹಾಳು ಮಾಡಿಕೊಳ್ಳುವುದಕ್ಕೆ ಅವಕಾಶಕೊಡಬಾರದು ಎಂಬುದನ್ನು ಖಂಡತುಂಡವಾಗಿ ನಾನು ಹೇಳುತ್ತಿದ್ದೇನೆ. ಆದರೆ ಇದೇ ಸಂದರ್ಭದಲ್ಲಿ ನಾನು ಬಹಳ ನೊಂದ ಮನಸ್ಸಿನಿಂದ ಕೆಲವು ವಿಷಯಗಳನ್ನು ಪ್ರಸ್ತಾಪಮಾಡಬೇಕಾಗಿದೆ, ಅದು ಅನಿವಾರ್ಯ. ನಾವು ನಮಗೆ ಈ ಕೃಷ್ಣಾ ಮತ್ತು ಕಾವೇರಿ ನದಿಗಳ ನೀರಿನಲ್ಲಿ ನಮ್ಮ ರಾಜ್ಯದ ಪಾಲೆಷ್ಟು ಎಂಬುದನ್ನು ನಿರ್ಧರಮಾಡಲು ಒಂದು ಎಕ್ಸ್‌ಪರ್ಟ್ ಕಮಿಟಿಗೆ ವಹಿಸತಕ್ಕ ಅವಶ್ಯಕತೆ ಇಷ್ಟಾಗಿರಲಿಲ್ಲ. ಅದನ್ನು ರಾಷ್ಟ್ರಮಟ್ಟದಲ್ಲಿ ಕೇಂದ್ರದ ನೀರಾವರಿ ಮಂತ್ರಿಗಳೇ ನ್ಯಾಯವಾಗಿ ತೀರ್ಮಾನ ಮಾಡುತ್ತಾರೆ....ಮಾಡಲಿ ಅನ್ನಬಹುದಾಗಿತ್ತು. ಆದರೆ ದುರ್ದೈವದಿಂದ ಅದು ಸಾಧ್ಯವಾಗಲಿಲ್ಲ. ಆಗ ನಾವು ಇದನ್ನು ಒಂದು ಎಕ್ಸ್‌ಪರ್ಟ್ ಕಮಿಟಿಗೆ ಒಪ್ಪಿಸಬೇಕೆಂದು ಹಿಂದೆಯೇ ಪ್ರಯತ್ನಗಳನ್ನುನಡೆಸಿದ್ದಾಗ್ಯೂ ಆ ಕೇಂದ್ರ ನೀರಾವರಿ ಮಂತ್ರಿಗಳು ಅದಕ್ಕೆ ಏನೇನೋ ಕಾರಣಗಳನ್ನೊಡ್ಡಿ ಅದನ್ನು ಎರಡುಮೂರಾವರ್ತಿ ಮುಂದೂಡುತ್ತಲೇ ಬಂದಿದ್ದಾರೆ, ಅವರನ್ನು ನಾವಿನ್ನೂ ಅಲ್ಲೇ ಇರುವುದಕ್ಕೆ ಅವಕಾಶ ಕೊಟ್ಟಿದ್ದೇ ನಮಗೊಂದು ದುರ್ದೈವವಾಗಿದೆ. ಹಾಲಿ ಸಭೆಯಲ್ಲೀಗ ನಮ್ಮ ಮುಖ್ಯಮಂತ್ರಿಗಳೂ ಇಲ್ಲ. ಅವರಿಗೆ ನಾನು ತಿಳಿಸಬಯಸುವುದೇನೆಂದರೆ ಎಲ್ಲಿಯತನಕ ಆ ಕೆ. ಎಲ್. ರಾವ್ ಅವರು ಕೇಂದ್ರದಲ್ಲಿ ನೀರಾವರಿ ಮಂತ್ರಿಗಳಾಗಿರುತ್ತಾರೋ ಅಲ್ಲಿಯವರೆಗೂ ನಮ್ಮ ರಾಜ್ಯಕ್ಕೆ ಕ್ಷೇಮವಿಲ್ಲ ಎಂದು ನಾನು ಘಂಟಾಘೋಷವಾಗಿ ಹೇಳುತ್ತೇನೆ. ಪಾರ್ಲಿಮೆಂಟಿನಲ್ಲಿರತಕ್ಕ ನಮ್ಮ ರಾಜ್ಯದ ಸದಸ್ಯರು ಅವರನ್ನು ಆ ಸ್ಥಾನದಿಂದ ಕಿತ್ತುಹಾಕುವುದಕ್ಕೆ ಇನ್ನೂ ಏಕೆ ಪ್ರಯತ್ನಗಳನ್ನು ಮಾಡಿಲ್ಲವೋ ಗೊತ್ತಾಗುವುದಿಲ್ಲ. ನಾನು ಹಿಂದೆ ಅವರನ್ನು ನನ್ನ ಖಾಸಗೀ ಕೆಲಸದ ಸಲುವಾಗಿ ಎರಡಾವರ್ತಿ ಭೇಟಿ ಮಾಡಿದ್ದೆ. ನನಗೆ ಅವರು ಎರಡು ಪತ್ರಗಳನ್ನೂ ಕೂಡ ಬರೆದಿದ್ದಾರೆ. ಆದರೆ ಅವರಿಗೆ ಅವರ ಬರವಣಿಗೆಯ ಮೇಲೂ ಕೂಡ ಪ್ರಜ್ಞೆ ಇದ್ದಹಾಗೆ ಕಾಣುತ್ತಿಲ್ಲ. ಆ ಲೋಕಸಭೆಯಲ್ಲಿ ನಮ್ಮ ಸದಸ್ಯರು ಕೇಂದ್ರದ ಸಿ. ಪಿ.

ಡಬ್ಲ್ಯು ಡಿನಲ್ಲಿ ಮೈಸೂರಿನ ಪರವಾಗಿ ಯಾರೂ ಪ್ರತಿನಿಧಿಗಳು ಇಲ್ಲವಲ್ಲ ಏಕೆ ಎಂದು ಕೇಳಿದ್ದಕ್ಕೆ ಮೈಸೂರು ರಾಜ್ಯದಲ್ಲಿರತಕ್ಕ ಇಂಜಿನಿಯರುಗಳು ಆ ಕಮಿಷನ್ನಿನಲ್ಲಿರತಕ್ಕ ಯೋಗ್ಯತೆಯನ್ನು ಕಳೆದುಕೊಂಡಿದ್ದಾರೆಂದು ಹೇಳಿದ್ದು ಆ ಕೆ. ಎಲ್. ರಾವ್‌ರವರ ತಿಳಿಗೇಡಿತನವಲ್ಲದೆ ಬೇರೇನೂ ಇಲ್ಲ. ಮೈಸೂರು ಇಂಜನಿಯರ್ಸ್ ಲೋಕಪ್ರಸಿದ್ಧಿಯಾದವರು ಎಂಬ ಖ್ಯಾತಿಯನ್ನು ಗಳಿಸಿದ್ದರೂ ಅವರು ಹೀಗೆ ಕೇಳಿರತಕದ್ದು ತೀರಾ ಅವರ ದರ್ಜೆಗೆ ಒಪ್ಪತಕ್ಕ ಮಾತಲ್ಲ. ಅವರು ಅಷ್ಟು ಅಲಾಘವಾಗಿ ಮಾತನಾಡಬಾರದಾಗಿತ್ತು. ಕೇಂದ್ರದಲ್ಲಿ ನೀರಾವರಿ ಸಚಿವರಾಗಿ ಕೆ. ಎಲ್. ರಾವ್ ಇರತಕದ್ದು ಒಂದು ನಮ್ಮ ರಾಜ್ಯದ ದುರ್ಧೈವವಾದರೆ, ಆ ಕೇಂದ್ರ ವಾಟರ್ ಪವರ್ ಕಮೀಷನ್ನಿನಲ್ಲಿ ನಮ್ಮ ರಾಜ್ಯದ ಪ್ರತಿನಿಧಿಗಳು ಇಲ್ಲದಿರುವುದು ಇದು ಎರಡನೆಯ ದುರ್ಧೈವ. ನಮ್ಮ ಭಾಗಕ್ಕೆ ಎಷ್ಟು ನೀರು ಬರಬೇಕೋ ಅಷ್ಟನ್ನೂ ಪಡೆಯಲು ನಮ್ಮ ಸರ್ಕಾರ ತನ್ನ ಹೋರಾಟವನ್ನು ನಡೆಸಲೇಬೇಕು; ಸಾಧ್ಯವಾದ ಎಲ್ಲ ಪ್ರಯತ್ನಗಳನ್ನೂ ಪೂರ್ಣಮಾಡಬೇಕು. ಆದರೆ ನಮಗೀಗ ಪ್ರಾಮುಖ್ಯವಾಗಿ ಬೇಕಾಗಿರತಕ್ಕ ಹಣವನ್ನು ಹೇಗೆ ಒದಗಿಸಿಕೊಳ್ಳಬೇಕು ಎನ್ನತಕ್ಕ ಬಗ್ಗೆ ನಾನು ಕಳೆದ ನಾಲ್ಕು ವರ್ಷಗಳಿಂದಲೂ ವ್ಯಾಲಿಪ್ರೈಜ್ ಕಾರ್ಪೊರೇಷನ್ ಮಾಡಬೇಕೆಂದು ಒತ್ತಾಯ ಮಾಡುತ್ತಾ ಬಂದಿದ್ದೇನೆ, ಅದನ್ನೇ ಈಗಲೂ ಒತ್ತಾಯ ಮಾಡುತ್ತೇನೆ. ಆದರೆ ಹಿಂದೆ ಶ್ರೀಮಾನ್ ದೇವರಾಜ ಅರಸಿನವರು ಹಾಗೆ ಕಾರ್ಪೊರೇಷನ್ ಮಾಡಿದರೆ ಅದರಿಂದ ಎಕನಾಮಿಕ್ ಪ್ರಾಬ್ಲೆಂಗಳು ತಲೆದೋರಬಹುದೆಂದು ಹೇಳಿದ್ದರು. ಇನ್ನು ಮುಂದಕ್ಕೆ ನಾವು ನಮ್ಮ ಯೋಜನೆಗಳನ್ನು ನೋ ಪ್ರಾಫಿಟ್—ನೋ ಲಾಸಸ್ ಬೇಸಿಸ್ ಮೇಲೆ ಮಾಡಿದರೆ ಅವುಗಳ ಪೂರ್ಣ ವೆಚ್ಚವೆಲ್ಲಾ ಆ ಯೋಜನೆಗಳ ಅಚ್ಚುಕಟ್ಟುದಾರರ ಮೇಲೆ ಬೀಳುತ್ತದೆ; ಆದ್ದರಿಂದ ಅದು ಅಷ್ಟು ಆಶಾದಾಯಕವಾದುದಲ್ಲ ಎಂಬುದಾಗಿ ಶ್ರೀಮಾನ್ ಅರಸರವರು ಹೇಳಿದರು. ಅದಕ್ಕೆ ನನ್ನ ಉತ್ತರವಿಷ್ಟೆ: ನಾವೀಗ ನಮ್ಮ ರೂರಲ್ ಎಲೆಕ್ಟ್ರಿಫಿಕೇಷನ್ ಬಗ್ಗೆ 40 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ಅದರ ಬಗ್ಗೆ ನಮಗೆ ಬರುತ್ತಿರುವ ರಿಟರ್ನ್ಸ್ ಎಷ್ಟು ಎಂದರೆ ಕೇವಲ ನಾಲ್ಕು ಪರ್ಸೆಂಟ್ ಮಾತ್ರ. ಆ ಪ್ರತಿಫಲ ನಾವು ಹಾಕಿರತಕ್ಕ ಬಂಡವಾಳಕ್ಕೆ ಏನೇನೂ ಸಾಲದು. ನಮ್ಮ ಬಂಡವಾಳಕ್ಕೆ ತಕ್ಕ ಪ್ರತಿಫಲ ಸಿಕ್ಕಲೇಬೇಕು ಎನ್ನುವುದಾದರೆ ಅದಕ್ಕೆ ಶೇಕಡ 17ರಂತೆ ರಿಟರ್ನ್ಸ್ ಬಂದರೆ ಆಗ ಸರಿಹೋಗಬಹುದು. ಹಾಗೆ ಈ ಬಹಳ ಕಡಮೆ ರಿಟರ್ನ್ಸ್ ಅಂದರೆ ಶೇಕಡ ನಾಲ್ಕು ರಿಟರ್ನ್ಸ್ ಬಂದಾಗ್ಯೂ ಅಲ್ಲಿ ಕಡಿಮೆ ಬೀಳತಕ್ಕದನ್ನು ಸರ್ಕಾರದವರು ಸಬ್‌ಸಿಡೈಜ್ ಮಾಡುತ್ತಿದ್ದಾರೆ. ಅದೇ ರೀತಿ ಈ ದಿವಸ ಸರ್ಕಾರದವರು ಹೆಚ್ಚಿನ ಬಡ್ಡಿದರದಲ್ಲಿ ಹಣವನ್ನು ಸಾಲ ಎತ್ತಿ ಹರಿಜನರಿಗೆ ಅನುಕೂಲ ಮಾಡಲು ಕಡಮೆ ಬಡ್ಡಿಗೆ ಹಣವನ್ನು ಒದಗಿಸಿ ಅದರಲ್ಲಿ ಎಷ್ಟು ಲುಕ್ಸಾನಾಗುತ್ತದೋ ಅದನ್ನು ಸರ್ಕಾರದಿಂದ ಸಬ್‌ಸಿಡೈಜ್ ಮಾಡಲಾಗುತ್ತಿದೆ. ಅದೇ ರೀತಿ ಸರ್ಕಾರದವರು ಸಮಾಜದಲ್ಲಿರತಕ್ಕ ಎಲ್ಲ ಪಂಗಡಗಳವರಿಗೂ ಮತ್ತು ಎಲ್ಲ ದರ್ಜೆಗಳವರಿಗೂ ಈ ಒಂದು ಅನುಕೂಲವನ್ನು ಒದಗಿಸಲು ಹಣವನ್ನು ಹಾಕಿ ಈ ಸಮಸ್ಯೆಯನ್ನು ಬಗೆಹರಿಸಬೇಕು. ಇದಕ್ಕಾಗಿ ಒಂದು ಕಾರ್ಪೊರೇಷನನ್ನು ಸ್ಥಾಪನೆ ಮಾಡಿ ಅದಕ್ಕೆ ಡಿಬೆಂಚರುಗಳನ್ನು ಎತ್ತುವುದರ ಮೂಲಕ ಅವಕಾಶ ಮಾಡಿಕೊಟ್ಟರೆ ಇದು ಸಾಧ್ಯವಾಗಬಹುದು. ಆಗ ಇದರಿಂದ ಬರತಕ್ಕ ರಿಟರ್ನ್ಸ್ ಶೇಕಡ ಒಂದೂವರೆ ಅಥವಾ ಎರಡಿದ್ದರೆ ಹೆಚ್ಚಾಯಿತು. ಆಗ ಅಲ್ಲಿ ಕಡಮೆ ಬೀಳತಕ್ಕ ಹಣವನ್ನು ಸರ್ಕಾರದವರು ಸಬ್‌ಸಿಡೈಜ್ ಮಾಡಬೇಕು. ಹೀಗೆ ಏನಾದರೂ ಒಂದು ವ್ಯವಸ್ಥೆಯನ್ನು ನಾವು ಕಂಡುಕೊಳ್ಳದಿದ್ದರೆ ನಾವು 1974 ರೊಳಗೆ ಆ ಕಾವೇರಿ ನೀರನ್ನಾಗಲೀ ಅಥವಾ 1976 ರೊಳಗೆ ಕೃಷ್ಣಾನದಿಯ ನೀರನ್ನಾಗಲೀ ಉಪಯೋಗ ಮಾಡಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ.

ಇನ್ನು ನಾನು ಈ ದಿವಸ ನಮ್ಮ ಮುಖ್ಯ ಮಂತ್ರಿಗಳ ಗಮನಕ್ಕೆ ತರಬೇಕಾಗಿರತಕ್ಕ ಒಂದು ವಿಷಯ ಏನೆಂದರೆ ನಾವು ಆ ಆಂಧ್ರದವರು ನಾಗಾರ್ಜುನಸಾಗರಕ್ಕೆ ಆ ಕ್ರೆಸ್ಟ್‌ಗೇಟುಗಳನ್ನು ಇಡುವುದಕ್ಕೆ ಪ್ರಾರಂಭ ಮಾಡಿದಾಗಿನಿಂದಲೂ ನಾವು ಆ ಕೃಷ್ಣಾ ನೀರಿನಲ್ಲಿ ನಮಗಿರತಕ್ಕ ಪಾಲನ್ನು ನಿರ್ಧರಿಸಲು ಒಂದು ಕಮಿಷನ್ನನ್ನು ರಚನೆಮಾಡಬೇಕೆಂದು ಕೇಂದ್ರಕ್ಕೆ ಒತ್ತಾಯ ಮಾಡುತ್ತಿದ್ದರೂ ಅದು ಇಲ್ಲಿಯವರೆಗೂ ಇನ್ನೂ ಸಾಧ್ಯವಾಗಿಲ್ಲ. ನನಗೊಂದು ಸಂಶಯವೇನು ಬಂದಿದೆ ಎಂದರೆ ಆ ಗೋದಾವರಿ ನೀರನ್ನು ಕೃಷ್ಣಾಕ್ಕೆ ಡೈವರ್ಟ್ ಮಾಡಲು ಇರುವ ಯೋಜನೆಯನ್ನು ಬದಿಗೊತ್ತಲು ಕೇಂದ್ರದ ನೀರಾವರಿ ಮಂತ್ರಿ ಆಗಿರತಕ್ಕ ಕೆ. ಎಲ್. ರಾವ್ ಅವರು ಬಹಳ ಪ್ರಯತ್ನ ಮಾಡುತ್ತಿರುವಂತೆ ಕಾಣುತ್ತದೆ. ಈ ಒಂದು ಕುತಂತ್ರದ ಕಾರಣಕ್ಕಾಗಿ ನಾವು ಕೇಳುತ್ತಿರುವ ಕಮಿಷನ್ನನ್ನು ನೇಮಕ ಮಾಡಲು ಅದನ್ನು ಹಿಂದಕ್ಕೆ ತಳ್ಳಲಾಗುತ್ತಿದೆ ಎಂದು ಕಂಡು ಬರುತ್ತಿದೆ. ನಾನು ಇನ್ನೂ ಉಚಾಯಿಸಿ ಹೇಳುವುದೆಂದರೆ ಈ ವಿಧಾನಕ್ಕೆಲ್ಲಾ ಮೂಲ ಕಾರಣ ಆ ಮಂತ್ರಿಯ ಹಿಪಾಕ್ರೆಸಿಯೇ ವಿನಾ ಬೇರೇನೂ ಇಲ್ಲ.

(ಶ್ರೀ ಹೆಚ್. ಡಿ. ದೇವೇಗೌಡ)

ಇನ್ನು ನಮ್ಮಲ್ಲಿ ಮೀಡಿಯಂ ಮತ್ತು ಮೈನರ್ ಇರಿಗೇಷನ್ ಬಾಬುಗಳಿಂದ ಸುಮಾರು 8-10 ಲಕ್ಷ ಎಕರೆಗಳಷ್ಟು ಜಮೀನು ನೀರಾವರಿಗೆ ಬರುವುದರಿಂದ ಸರ್ಕಾರದವರು ಈ ದಿವಸ ಆ ಬಾಬಿಗೆ ಒದಗಿಸುತ್ತಿರುವ ಹಣ ಸಾಲದು ಎಂದು ಹೇಳಬೇಕು. ಈ ಹಣವನ್ನು ನಾವು ಹೇಗೆ ಭರ್ತಿ ಮಾಡಿಕೊಳ್ಳಬೇಕು ಎಂಬ ಬಗ್ಗೆ ಈಗಾಗಲೇ ಶ್ರೀಮಾನ್ ನಂಜೇಗೌಡರು ಸೂಚನೆ ಮಾಡಿರತಕ್ಕ ಮಾದರಿಯಲ್ಲೇ ನಾನೂ ಕೂಡ ಒಂದು ಖಾಸಗೀ ನಿರ್ಣಯವನ್ನು ಇದೇ ಸಭೆಯಲ್ಲಿ ಚರ್ಚೆಮಾಡಲು ಕಳುಹಿಸಿದ್ದೇನೆ. ಆದರೆ ಅದೇನು ರೀತಿಯಾಗುತ್ತದೊ ಇಲ್ಲವೋ ಕಾಣೆ. ನಾವು ಏನೇ ಆಗಲಿ ಹಾಗೆ ಒಂದು ಕಾರ್ಪೊರೇಷನ್ ಮಾಡಿಕೊಳ್ಳದಿದ್ದರೆ ರಾಜ್ಯ ಬೊಕ್ಕಸದಿಂದ 30—40 ಕೋಟಿ ರೂಪಾಯಿಗಳನ್ನು ಒದಗಿಸುವುದಕ್ಕೆ ಬಹಳ ಕಷ್ಟವಾಗುತ್ತದೆಂದು ಹೇಳುತ್ತೇನೆ. ಆದುದರಿಂದ ನಾನು ಹೇಳಿದಂತೆ ಮಾಡಿದರೆ ಬಹಳ ಒಳ್ಳೆಯದು. ಮೇಜರ್ ಇರ್ರಿಗೇಷನ್ 19 ಜಿಲ್ಲೆಗಳಿಗೂ ಆಗುವುದಿಲ್ಲವಾದುದರಿಂದ ದಯವಿಟ್ಟು ಅದರ ಬಗ್ಗೆ ಚರ್ಚೆ ಮಾಡುವುದು ಬೇಡ. ಎರಡು ಕಾರ್ಪೋರೇಷನ್‌ಗಳನ್ನು ಮಾಡಬೇಕು. ಮೈನರ್ ಇರ್ರಿಗೇಷನ್ ಬಗ್ಗೆ ಎರಡು ಪ್ಲಾನುಗಳಲ್ಲಿ ಎಂಟು ಲಕ್ಷ ಎಕರೆ ನೀರಾವರಿಯಾಗುತ್ತದೆಂದು ಇಂಜನಿಯರುಗಳು ಒಂದು ರಿಪೋರ್ಟ್ ಕೊಟ್ಟಿದ್ದಾರೆ. ಈ ಎರಡು ಪ್ಲಾನುಗಳಲ್ಲಿ 30 ಕೋಟಿ ರೂಪಾಯಿಗಳನ್ನು ಖರ್ಚುಮಾಡಿ 8 ಲಕ್ಷ ಅಥವಾ 10 ಲಕ್ಷ ಎಕರೆ ನೀರಾವರಿ ತರಬಹುದೆಂದು ಹೇಳಬಹುದು. ವರ್ಷಂ ಪ್ರತಿ 12 ಕೋಟಿ ರೂಪಾಯಿಗಳು ಸ್ಪಿಲ್ವೋವರ್ ವರ್ಕ್ಸ್‌ಗೆ ಖರ್ಚುಮಾಡ ಬೇಕಾಗುತ್ತದೆ.

ಇನ್ನು ಲಿಫ್ಟ್ ಇರ್ರಿಗೇಷನ್ ಬಗ್ಗೆ ರಾಜ್ಯಾದ್ಯಂತ ಹೆಚ್ಚಿನ ಬೇಡಿಕೆಗಳು ಇವೆ. ಅವು ಬಹಳ ಅವಶ್ಯಕ. ಬಹಳ ಕಡಿಮೆ ಕಾಲದಲ್ಲಿ ಹೆಚ್ಚಿನ ಫಲವನ್ನು ಕೊಡತಕ್ಕ ಯೋಜನೆಗಳನ್ನು ಎಲ್ಲಾ ವೇಳೆಯಲ್ಲಿಯೂ ಕಾರ್ಯಗತ ಮಾಡುವುದಕ್ಕೆ ರಾಜ್ಯ ಸರ್ಕಾರ ಹೆಚ್ಚಿನ ಹಣವನ್ನು ಒದಗಿಸಬೇಕು. ಅದಕ್ಕಾಗಿ ಸರ್ಕಾರದವರು ಹಣದ ಕೊರತೆ ಇದೆಯೆಂದು ಯಾವಾಗಲೂ ಹೇಳಬಾರದು.

ಇನ್ನು ರಿಸೋರ್ಸಸ್ ಬಗ್ಗೆ ಎಗ್ಜಿಸ್ಟಿಂಗ್ ಆಕ್ಟ್‌ನಲ್ಲಿ ಒಂದು ಲ್ಯಾಕೂನ ಇದೆ. ಲಿಫ್ಟ್ ಇರ್ರಿಗೇಷನ್ ಆಗತಕ್ಕ ನೀರಾವರಿ ಭೂಮಿ ಮೇಲೆ ಬೆಟರ್‌ಮೆಂಟ್ ಲೆವಿ ಹಾಕುವ ಬಗ್ಗೆ ಎಗ್ಜಿಸ್ಟಿಂಗ್ ಆಕ್ಟ್‌ನಲ್ಲಿ ಸೂಕ್ತ ತಿದ್ದುಪಡಿ ಇಲ್ಲ. ಅದನ್ನು ಮಾಡಬೇಕು.

ಇನ್ನು ವಾಟರ್ ಯುಟಿಲಿಟಿ ಬಗ್ಗೆ ಹೇಳಬೇಕಾದರೆ, ನಮ್ಮಲ್ಲಿ ಒಂದು ಕಾನೂನೂ ಇಲ್ಲ. ಮನಸ್ಸಿಗೆ ಬಂದಹಾಗೆ ನೀರನ್ನು ವೇಸ್ಟ್ ಮಾಡುತ್ತಿದ್ದಾರೆಂದರೆ ಅದೇನೂ ತಪ್ಪಾಗಲಾರದು. ಏಕೆಂದರೆ, ರೈತ ತನ್ನ ಸ್ವಾರ್ಥಕ್ಕೋಸ್ಕರವಾಗಿ ನೀರನ್ನು ಉಪಯೋಗಿಸುತ್ತಿದ್ದಾನೆ. ಅಧಿಕಾರಿಗಳನ್ನೇನೋ ನೀವು ನೇಮಕ ಮಾಡುತ್ತೀರಿ. ಕಾನೂನು ಶಕ್ತಿ ಇಲ್ಲ. ಪ್ರಾಜೆಕ್ಟ್ ಮಾಡಿದ ಮಾರನೇ ದಿವಸವೇ ಅವರ ಮೇಲೆ ಜವಾಬ್ದಾರಿ ಹಾಕುತ್ತೀರಿ. ರೆವಿನ್ಯೂ ಇಲಾಖೆಯವರು ಮೇಲ್ವಿಚಾರಣೆ ಮಾಡುವುದು ಸರಿಯಲ್ಲ. ಮಹಾರಾಷ್ಟ್ರದಲ್ಲಿ ನೀರನ್ನು ಉಪಯೋಗ ಮಾಡುವ ಬಗ್ಗೆ ಪಿ. ಡಬ್ಲ್ಯು. ಡಿ.ಗೆ ಪೂರ್ಣ ಅಧಿಕಾರ ಕೊಟ್ಟು ಕಾನೂನು ಬಿಗಿಯಾಗಿ ಉಪಯೋಗಿಸುತ್ತಾರೆ. ಕಾನೂನುಗಳು ಉಪಯುಕ್ತವಾಗಿ ಇರುವಂತೆ ವ್ಯವಸ್ಥೆ ಮಾಡುತ್ತಾರೆ. ಇವತ್ತು ಏನು ನೀರಾವರಿಯಾಗುತ್ತದೋ ಅದರ ಒಂದೂವರೆಯಷ್ಟು ನೀರಾವರಿಯನ್ನು ಮಾಡಬೇಕು. ಇದಕ್ಕೆ ಪಿ. ಡಬ್ಲ್ಯು.ಡಿ.ಯವರು ಹೆಚ್ಚಿನ ಪ್ರಾಶಸ್ತ್ಯ ಕೊಡಬೇಕು. ವಾಟರ್ ಮೇಂಟನೆನ್ಸ್ ಅಂಡ್ ಯುಟಿಲೈಜೇಷನ್ ಬಹಳ ಮುಖ್ಯ ಅವನ್ನು ಬಹಳ ಚೆನ್ನಾಗಿ ನೋಡಿಕೊಳ್ಳಬೇಕು. ಬಹು ಮುಖ್ಯವಾಗಿ ಇರ್ರಿಗೇಷನ್ ಆಕ್ಟ್‌ನಲ್ಲಿ ಇದರ ಬಗ್ಗೆ ಸೂಕ್ತ ತಿದ್ದುಪಡಿಯನ್ನು ತರಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಪುಟ್ಟಸ್ವಾಮಿ (ಚಾಮರಾಜನಗರ).—ಸಭಾಪತಿಗಳೇ, ಸರ್ಕಾರದ ಪತಿಯಿಂದ ಇಲ್ಲಿ ಇಟ್ಟಿರತಕ್ಕ 14 ಬೇಡಿಕೆಗಳ ಮೂಲಕ 1969-70ನೇ ಸಾಲಿನಲ್ಲಿ ಮಂಡಿಸಿರತಕ್ಕ ಆಯವ್ಯಯದ ಅಂದಾಜಿನಲ್ಲಿರತಕ್ಕ ಸುಮಾರು 100 ಕೋಟಿ ರೂಪಾಯಿಗಳನ್ನು ಖರ್ಚುಮಾಡಬೇಕೆಂದು ಕೇಳಿದ್ದಾರೆ. ಇದನ್ನು ನಾನು ವಿರೋಧಿಸುತ್ತಾ ಕೆಲವು ವಿಷಯಗಳನ್ನು ಪ್ರಸ್ತಾಪಮಾಡಲು ಇಚ್ಛೆಪಡುತ್ತೇನೆ. ಈಗಾಗಲೇ ಈ ಡಿಮ್ಯಾಂಡುಗಳ ಬಗ್ಗೆ ಮಾತನಾಡಿದಂಥಾ ವಿರೋಧಪಕ್ಷದ ನಾಯಕರಾದಂತ ಮಾನ್ಯ ಶ್ರೀ ಶಿವಪ್ಪನವರು ಮತ್ತು ಕಾಂಗ್ರೆಸ್ ಪಕ್ಷದ ಸದಸ್ಯರಾದಂಥ ಮಾನ್ಯ ಶ್ರೀ ದೇವೇಗೌಡ ಅವರು ಮಾತನಾಡಿದಂಥ ವಿಷಯಗಳನ್ನು ಮತ್ತೆ ಪ್ರಸ್ತಾಪಮಾಡುವುದಕ್ಕೆ ಇಚ್ಛೆಪಡುವುದಿಲ್ಲ. ಆದರೆ ನಮ್ಮಲ್ಲಿ ಭಾರೀ ನೀರಾವರಿಗಳಿಗೆ ಸಂಬಂಧಪಟ್ಟ ಹಾಗೆ ಎರಡು ಮುಖ್ಯವಾದ ಸಮಸ್ಯೆಗಳಿವೆ. ಒಂದು ಕೃಷ್ಣಾ ಬೇಸಿನ್‌ನಲ್ಲಿ ನಾವು ಕಟ್ಟಬೇಕಾಗಿರತಕ್ಕ ಪ್ರಾಜೆಕ್ಟ್‌ಗಳು, ಇನ್ನೊಂದು ಕಾವೇರಿ ಬೇಸಿನ್‌ನಲ್ಲಿ ಕಟ್ಟತಕ್ಕ ಪ್ರಾಜೆಕ್ಟ್‌ಗಳು. ಈ ಎರಡು ಬೇಸಿನ್‌ನಲ್ಲಿ ಕಟ್ಟತಕ್ಕ ಪ್ರಾಜೆಕ್ಟ್‌ಗಳಿಗೆ

ಮತ್ತು ಆ ಪ್ರಾಜೆಕ್ಟ್‌ಗಳನ್ನು ತಯಾರುಮಾಡುವುದಕ್ಕೆ ನಮ್ಮಲ್ಲಿ ಸಾಕಷ್ಟು ತಜ್ಞರು ಇದ್ದಾರೆ. ಸರ್ಕಾರ ಅದರ ಬಗ್ಗೆ ಸಾಕಾದಷ್ಟು ಕೆಲಸಮಾಡಿದೆ, ಇಂದು ಅದನ್ನು ಕಾರ್ಯಗತ ಮಾಡುವುದಕ್ಕೆ ಯಾವ ಹಂತ ಮುಟ್ಟಬೇಕೋ ಅದನ್ನು ಸರ್ಕಾರ ಮುಟ್ಟುವುದಕ್ಕೆ ತಕ್ಕ ಸಾಧ್ಯತೆ ಮಾಡಿಕೊಂಡಿಲ್ಲ. ನಾವು ಹಿಂದೆ ಮೈಸೂರು ಸರ್ಕಾರ ಮತ್ತು ಮದ್ರಾಸ್ ಸರ್ಕಾರಗಳ ನಡುವೆ ಆದಂಥ ಒಪ್ಪಂದವನ್ನು ಗಮನದಲ್ಲಿಟ್ಟುಕೊಂಡು 1974ನೇ ಇಸವಿಯೊಳಗೆ ಈ ಎರಡು ಬೇಸಿನ್ನುಗಳಲ್ಲಿರತಕ್ಕ ನೀರನ್ನು ಉಪಯೋಗಮಾಡಿಕೊಳ್ಳುವುದಕ್ಕೆ ಹಾಗೂ ಕಾರ್ಯಗತಮಾಡುವುದಕ್ಕೆ ಸಿದ್ಧರಾಗಬೇಕಾದಾಗ ಈ ಎಲ್ಲಾ ಪ್ರಾಜೆಕ್ಟ್‌ಗಳಿಗೆ ಬೇಕಾದಷ್ಟು ಹಣವನ್ನು ಯಾವರೀತಿ ಒದಗಿಸಬೇಕೆಂಬುದು ಬೃಹದಾಕಾರವಾದ ಸಮಸ್ಯೆಯಾಗಿ ಇದೆ. ಕೃಷ್ಣಾ ಬೇಸಿನ್‌ನಲ್ಲಿರತಕ್ಕ ಮತ್ತು ಅಲ್ಲಿ ಕಟ್ಟಬೇಕೆಂಬ ಪ್ರಾಜೆಕ್ಟ್‌ಗಳ ಬಗ್ಗೆ ಸಾಕಾದಷ್ಟು ಹಣವನ್ನು ಒದಗಿಸುವುದರಲ್ಲಿ ನಮ್ಮ ಅಭ್ಯಂತರವಿಲ್ಲ. ಆದರೆ ಕಾವೇರಿ ಬೇಸಿನ್‌ನಲ್ಲಿ 1974 ನಂತರ ನೀರನ್ನು ಉಪಯೋಗಿಸುವುದಕ್ಕೆ ಬರುವ ಅಡ್ಡಿ ಆತಂಕಗಳನ್ನು ಗಮನದಲ್ಲಿಟ್ಟುಕೊಂಡು, ಈಗ ತಯಾರಾಗಿರತಕ್ಕ ಪ್ರಾಜೆಕ್ಟ್‌ಗಳು ಮತ್ತು ಇನ್ನೂ ಪ್ರಾರಂಭವಾಗಬೇಕಾದ ಪ್ರಾಜೆಕ್ಟ್‌ಗಳ ಬಗ್ಗೆ ಸುಮಾರು ಒಂದು ನೂರು ಕೋಟಿ ರೂಪಾಯಿಗಳನ್ನು ಖರ್ಚುಮಾಡಬೇಕಾಗಿದೆ. ಈ ಎಲ್ಲಾ ಪ್ರಾಜೆಕ್ಟ್‌ಗಳಿಗೆ ಅಂದರೆ ಹೇಮಾವತಿ, ಹಾರಂಗಿ ಕಂಬದಕಡ ಮತ್ತು ಕಪಿನಿ ಪ್ರಾಜೆಕ್ಟ್‌ಗಳಿಗೆ ಹಾಗೂ ಮಧ್ಯಮವರ್ಗದ ನೀರಾವರಿಯೋಜನೆಗಳಿಗೆ, ನಾವು ಆ ರೀತಿಯಾಗಿ ಖರ್ಚುಮಾಡಿದರೆ ಬಹುಶಃ 1974ನೇ ಇಸವಿಯೊಳಗೆ ನೀರನ್ನು ಉಪಯೋಗಿಸಿಕೊಂಡು ಆ ಪ್ರಾಜೆಕ್ಟ್‌ಗಳನ್ನು ಕಟ್ಟಬಹುದೆಂದು ಸರ್ಕಾರದವರು ತಿಳಿದುಕೊಂಡಿದ್ದಾರೆ. 4ನೇ ಪಂಚವಾರ್ಷಿಕ ಯೋಜನೆಯ ಅವಧಿಯೊಳಗೆ ಸರ್ಕಾರದವರು ದೊಡ್ಡಮನಸ್ಸುಮಾಡಿ ಒಂದು ವರ್ಷಕ್ಕೆ ಕಾವೇರಿ ಬೇಸಿನ್ನಿಗಾಗಿ 20 ಕೋಟಿ ರೂಪಾಯಿಗಳನ್ನು ಇಯರ್‌ಮಾರ್ಕ್‌ಮಾಡಿ ಆ ಬೇಸಿನ್‌ನಲ್ಲಿರತಕ್ಕ ಎಲ್ಲಾ ಪ್ರಾಜೆಕ್ಟ್‌ಗಳನ್ನು ಪ್ರಾರಂಭಮಾಡಿ ಮುಗಿಸುವುದಕ್ಕೆ ಅದರಲ್ಲೂ ಕಂಬದಕಡ, ಹಾರಂಗಿ, ಕಬಿನಿ, ಹೇಮಾವತಿ ಈ ನಾಲ್ಕು ದೊಡ್ಡ ಯೋಜನೆಗಳು ನಾನ್ ಷೆಡ್ಯೂಲ್ಡ್ ರಿವರ್ಸ್ ಬಗ್ಗೆ ತಯಾರುಮಾಡಿರತಕ್ಕ 9 ಮಧ್ಯಮ ತರಗತಿಯ ಯೋಜನೆಗಳಿಗೆ 12 ಕೋಟಿ ರೂಪಾಯಿಗಳವರೆಗೂ ಖರ್ಚಾಗುತ್ತದೆಂದು ಹೇಳಿರುವ ಕೆಲಸಗಳು. ಮೈಸೂರು ಜಿಲ್ಲಾ ಅಭಿವೃದ್ಧಿ ಸಮಿತಿಯವರು ಮಾಡಿದಂಥ ಮೀಟಿಂಗ್‌ನಲ್ಲಿ ಒಂದು ನಿರ್ಣಯಮಾಡಿ ಸರ್ಕಾರಕ್ಕೆ ಕಳುಹಿಸಿದ್ದಾರೆ ಎಲ್ಲದಕ್ಕೂ ಒಂದು ನೂರು ಕೋಟಿ ರೂಪಾಯಿಗಳನ್ನು ಪ್ರತಿವರ್ಷ 20 ಕೋಟಿ ರೂಪಾಯಿಗಳಂತೆ 5 ವರ್ಷಗಳಲ್ಲಿ ಖರ್ಚಾಗುತ್ತದೆ. ಈ ರೀತಿ ಮಾಡಿದರೆ ಕಾವೇರಿ ಬೇಸಿನ್ ಪ್ರಾಜೆಕ್ಟ್‌ಗಳನ್ನು ಮುಗಿಸಿ ನಮ್ಮ ಹಕ್ಕನ್ನು ಉಳಿಸಿಕೊಳ್ಳಬಹುದೆಂದು ಹೇಳುತ್ತೇನೆ. ಸರ್ಕಾರದವರು ಈಗಾಗಲೇ ಮಧ್ಯಮ ತರಗತಿಯ ದೊಡ್ಡ ನೀರಾವರಿ ಯೋಜನೆಗಳನ್ನು ಕೈಗೊಂಡಿರುವುದರ ಜೊತೆಗೆ ರಾಜ್ಯದಲ್ಲಿರುವ 174 ತಾಲ್ಲೂಕುಗಳಲ್ಲೂ ಸಣ್ಣ ನೀರಾವರಿ ಯೋಜನೆಗಳಿಗಾಗಿ ಕಳೆದ 10 ವರ್ಷಗಳಿಂದ ಒಂದು ಮಾಸ್ಟರ್ ಪ್ಲಾನ್ ತಯಾರುಮಾಡಿ ಪ್ರತಿವರ್ಷವೂ ಅನೇಕ ಯೋಜನೆಗಳನ್ನು ತೆಗೆದುಕೊಂಡು ಪ್ರಾರಂಭಮಾಡಿದ್ದಾರೆ ಕೆಲವು ಕೆಲಸಗಳನ್ನು ಮುಗಿಸಿದ್ದಾರೆ. ಅದಕ್ಕಾಗಿ ನಾನು ಸಂತೋಷವನ್ನು ವ್ಯಕ್ತಪಡಿಸುತ್ತೇನೆ ಆದರೆ ಪರಿಸ್ಥಿತಿ ಏನಾಗಿದೆಯೆಂದರೆ, ಸಣ್ಣ ನೀರಾವರಿ ಯೋಜನೆಗಳನ್ನು ತೆಗೆದುಕೊಂಡು ಅದಕ್ಕೆ ಕೇವಲ 2–3–5–10 ಲಕ್ಷ ರೂಪಾಯಿಗಳನ್ನು ಮಾತ್ರ ಖರ್ಚುಮಾಡಿ ಕೇವಲ ನಿಯಮಿತ ಕಾಲದಲ್ಲಿ ಅಂದರೆ 1–2–5 ವರ್ಷಗಳಲ್ಲಿ ಮುಗಿಸಬೇಕೆಂದು ಹೇಳಿದ್ದಾರೆ. ಅದಕ್ಕಾಗಿ ಟೆಂಡರುಗಳನ್ನು ಕರೆದು ಕೆಲಸ ಪ್ರಾರಂಭ ಮಾಡಿದ್ದಾರೆ. ನಮ್ಮ ತಾಲ್ಲೂಕಾದ ಚಾಮರಾಜನಗರದಲ್ಲಿ 1963ನೇ ಇಸವಿಯಿಂದ ಎರಡು ಸಣ್ಣ ನೀರಾವರಿ ಯೋಜನೆಗಳನ್ನು ಪ್ರಾರಂಭಮಾಡಿದ್ದಾರೆ. ಒಂದು ಏಡಿಯೂರು ಅಡ್ಡಹಳ್ಳ ಪ್ರಾಜೆಕ್ಟ್, ಇನ್ನೊಂದು ಬೆಲ್ಲತ್ತ ಪ್ರಾಜೆಕ್ಟ್. ಇವೆರಡಕ್ಕೂ 5 ಮತ್ತು 10 ಲಕ್ಷ ರೂಪಾಯಿಗಳು ಮಂಜೂರಾಗಿದೆ. 1963ರಲ್ಲಿ ಇವುಗಳ ಕೆಲಸ ಪ್ರಾರಂಭವಾಯಿತು. ಈಗಾಗಲೇ 5 ವರ್ಷಗಳು ಮುಗಿದು 6ನೇ ವರ್ಷಕ್ಕೆ ಬಂದಿದ್ದೇವೆ. ಸೇಕಡ 30 ರಷ್ಟು ಕೆಲಸಮಾಡಿ, ಆ ಕೆಲಸ ಒಂದು ವರ್ಷದಿಂದ ಹಾಗೆಯೇ ನಿಂತಿದೆ. ಕೆಲಸ ಮಾತ್ರ ನಡೆದಿರುವುದಕ್ಕೆ ನನಗೆ ಸಮಜಾಯಿಸಿಕೊಡತಕ್ಕ ಉತ್ತರವನ್ನು ಇಲಾಖೆಯವರು ಕೊಟ್ಟಿಲ್ಲ. ಈ ಬಗ್ಗೆ ಒಂದು ಪ್ರಶ್ನೆಯನ್ನು ಕೂಡ ಕಳಿಸಿದ್ದೆ. ಅದಕ್ಕೂ ಉತ್ತರ ಬಂದಿಲ್ಲ. ಕಳೆದ ಆರು ವರ್ಷದಿಂದ ಮಂಜೂರಾಗಿ ನಿಂತಿರುವ 15 ಲಕ್ಷ ರೂಪಾಯಿಯ ಯೋಜನೆಗಳ ಬಗ್ಗೆ ಸರ್ಕಾರದವರು ತೀವ್ರವಾಗಿ ರಿಪೋರ್ಟನ್ನು ತರಿಸಿ ಇನ್ನು ಒಂದೆರಡು ವರ್ಷಗಳಲ್ಲಿಯೇ ಮುಗಿಸುವುದಕ್ಕೆ ತಕ್ಕ ಆಜ್ಞೆಯನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಕೊಡಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ. ಚಾಮರಾಜನಗರದಲ್ಲಿ ಎರಡು ಕ್ಷೇತ್ರಗಳಿವೆ ಒಂದು ರಾಚಯ್ಯನವರು ಬಂದಿರುವ ಕ್ಷೇತ್ರ, ಇನ್ನೊಂದು ನನ್ನ ಕ್ಷೇತ್ರ. ಎರಡು ಕ್ಷೇತ್ರಕ್ಕೂ 5 ಸಣ್ಣ ನೀರಾವರಿ ಯೋಜನೆಗಳನ್ನು ಮಾಡಬೇಕೆಂದಿದ್ದಾರೆ. ಅದಕ್ಕೆ ನಾಲ್ಕು ಲಕ್ಷ, ಮೂರು ಲಕ್ಷ, ಎರಡು ಲಕ್ಷ ರೂಪಾಯಿ ಎಂದು ಮಂಜೂರು ಮಾಡಿ ಇನ್ನೂ ಮೂರು ಯೋಜನೆಗಳಿಗೆ ಅಂತಿಮ ಅಂದಾಜು ತಯಾರಾಗಿ ಇನ್ನೂ ಟೆಕ್ನಿಕಲ್ ಸ್ಯಾಂಕ್ಷನ್ ದೊರೆತಿಲ್ಲವೆಂದು

(ಶ್ರೀ ಹೆಚ್. ಡಿ. ದೇವೇಗೌಡ)

ಅಲ್ಲಿನ ಎಕ್ಸಿಕ್ಯೂಟಿವ್ ಇಂಜನಿಯರ್ ತಿಳಿಸುತ್ತಾರೆ. ಇದಕ್ಕೆ ಸಂಬಂಧಪಟ್ಟ ಕೊನೆಯ ಅಂದಾಜು ತಯಾರು ಮಾಡಿಸಿ ಸರ್ಕಾರಿ ಮಟ್ಟದಲ್ಲಿ ಸ್ಯಾಂಕ್ಷನ್ ಪಡೆಯದೆ ಈ ಕೆಲಸವನ್ನು ಏಕೆ ಸೇರಿಸಿದ್ದಾರೆ ಎಂಬುದರಲ್ಲಿ ಅನುಮಾನ ಬಂದಿದೆ. 1968–69ನೇ ಬಜೆಟಿನಲ್ಲಿ ಸೇರಿಸಿರತಕ್ಕಂತಹ 5 ಕೆಲಸಗಳಿಗೆ ಟೆಕ್ನಿಕಲ್ ಸ್ಯಾಂಕ್ಷನ್ ಕೊಟ್ಟು ಕೆಲಸ ಮಾಡುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ತ್ವರಿತವಾದ ರೀತಿಯಲ್ಲಿ ಅಜ್ಞೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ವರ್ಷದ ಬಜೆಟನ್ನು ನೋಡುವಾಗ ಬಹಳ ವಿಷಾದವಾಗುತ್ತದೆ. ನನ್ನ ಕ್ಷೇತ್ರದ 5 ಯೋಜನೆಗಳಿಗೆ ಅಂದಾಜು ಮತ್ತು ಪ್ಲಾನ್ ತಯಾರು ಮಾಡಿದ್ದಾರೆ ಈ ಬಗ್ಗೆ ನಾನು ಮುಖ್ಯ ಮಂತ್ರಿಯವರಿಗೂ, ಸಂಬಂಧಪಟ್ಟ ಮಂತ್ರಿಯವರಿಗೂ ಕಾಗದ ಬರೆದಿದ್ದೇನೆ ಆದರೆ, ನನ್ನ ಕಾಗದಕ್ಕೆ ಯಾವ ರೀತಿಯ ಬೆಲೆಯೂ ಸಿಕ್ಕಿಲ್ಲ. ಈಗಲಾದರೂ ದಯವಿಟ್ಟು ಆ ಕೆಲಸಗಳ ಬಗ್ಗೆ ಅಂದಾಜು ತರಿಸಿಕೊಂಡು ಸರ್ಕಾರಿ ಮಟ್ಟದಲ್ಲಿ ಮಂಜೂರು ಮಾಡಿ, ಬರಗಾಲಕ್ಕೆ ತುತ್ತಾಗತಕ್ಕ ಪ್ರದೇಶಕ್ಕೆ ಪರಿಹಾರ ಒದಗುವಂತೆ ಮಾಡಬೇಕೆಂದು ಸೂಚನೆ ಮಾಡುತ್ತೇನೆ. ಈ ವರ್ಷದ ಅಂದರೆ 1969–70ನೇ ಸಾಲಿನಲ್ಲಿ ಕೊಟ್ಟಿರತಕ್ಕಂತಹ ಬಡ್ಜೆಟ್ ನೋಡಿದರೆ, ಬಹುಶಃ ನಮ್ಮ ಚಾಮರಾಜನಗರದಲ್ಲಿ ಬ್ರಿಡ್ಜ್ ಕಟ್ಟಬೇಕಾಗಿರುವ ಯಾವ ವಿಚಾರವೂ ಇಲ್ಲ. ಅಲ್ಲಿ ರಸ್ತೆಯೇ ಇಲ್ಲವೋ, ಅಥವಾ ಬಸ್ಸುಗಳು ಓಡಾಡುವ ರಸ್ತೆಗಳು ಇಲ್ಲವೋ ಎಂಬ ರೀತಿಯಲ್ಲಿ ಯಾವುದನ್ನೂ ನಮೂದು ಮಾಡಿಲ್ಲ. ಬಹುಶಃ ಕೆಲವೇ ತಾಲ್ಲೂಕಿನ ಸದಸ್ಯರಿಗೆ ಮಾತ್ರ ನಮ್ಮ ರಾಜ್ಯದ ಹಣ ಸೀಮಿತವಾಗಿದೆ ಎಂದು ನಮಗೆ ಅನುಮಾನ ಬರುತ್ತದೆ. ಆದರೆ, ದಯವಿಟ್ಟು ಆ ರೀತಿ ಮಾಡಬೇಡಿ, ಆ ಸೇತುವೆಯ ಕೆಲಸವನ್ನು ತೆಗೆದುಕೊಳ್ಳಬೇಕೆಂದು ಕಾಗದವೂ ಬರೆದಿದ್ದೇನೆ. ಮಾನ್ಯ ಮುಖ್ಯಮಂತ್ರಿಯವರಲ್ಲಿ ಮತ್ತು ಮಾನ್ಯ ಸಂಬಂದಪಟ್ಟ ಮಂತ್ರಿಯವರಲ್ಲಿ ವಿನಂತಿಮಾಡಿಕೊಳ್ಳುವುದೇನೆಂದರೆ, ಇದನ್ನು ಅದಷ್ಟು ಬೇಗ ತೆಗೆದುಕೊಳ್ಳಬೇಕು.

[MR. SPEAKER in the Chair]

ಮತ್ತು ನಮ್ಮಲ್ಲಿ ಶರಾವತಿಯಲ್ಲಿ ಇಲೆಕ್ಟ್ರಿಸಿಟಿಯ ಉತ್ಪನ್ನ ಮಾಡತಕ್ಕ ದೊಡ್ಡ ಯೋಜನೆಗಳನ್ನು ಕೈಗೊಂಡು, ಈಗಾಗಲೇ ನಾಲ್ಕು ಯುನಿಟ್ಟುಗಳನ್ನು ಕಮಿಶನ್ ಮಾಡಿ, ಇನ್ನೂ ಹಲವಾರು ಯೂನಿಟ್ಟುಗಳನ್ನು ಕಮಿಶನ್ ಮಾಡುವುದಕ್ಕೆ ಕೆಲಸ ನಡೆಸುತ್ತಿದ್ದಾರೆಂದು ತಿಳಿದು ಬಂದಿದೆ. ನಾವು ಇವತ್ತು ಎಲೆಕ್ಟ್ರಿಸಿಟಿ ಉತ್ಪನ್ನ ಮಾಡುತ್ತಿದ್ದೇವೆ. ಉತ್ಪನ್ನ ಮಾಡಿ, ಮಹಾರಾಷ್ಟ್ರಕ್ಕೆ, ಮದ್ರಾಸ್ ರಾಜ್ಯಕ್ಕೆ ಮತ್ತು ಇತರ ರಾಜ್ಯಗಳಿಗೆ ಕೊಡುವುದಕ್ಕೆ ಸರ್ಕಾರದವರು ತೀರ್ಮಾನ ಮಾಡಿದ್ದಾರೆ. ಅದರ ರೇಟ್ ಬಗ್ಗೆ ನಾನು ಏನೂ ಪ್ರಸ್ತಾಪಮಾಡುತ್ತಿಲ್ಲ. ಆದರ ನಾವು ಉತ್ಪನ್ನ ಮಾಡಿದಂತಹ ವಿದ್ಯುಚ್ಛಕ್ತಿಯನ್ನು ನಾವು ನಮ್ಮ ನೆರೆಹೊರೆಯ ನಾಡಿನವರಿಗೆ ಏಕೆ ಕೊಡಬೇಕು ? ಮತ್ತು ಅವರಿಗೆ ಅದನ್ನು ತೆಗೆದುಕೊಂಡು ಹೋಗಿ ಪೂರೈಕೆ ಮಾಡುವಾಗ ಆಗತಕ್ಕ ಕನ್‌ಸ್ಟ್ರಕ್ಷನ್ ಚಾರ್ಜನ್ನು ಯಾರು ಹೊರುತ್ತಾರೆ, ರಾಜ್ಯ ಸರ್ಕಾರದವರೇ ಅದನ್ನೆಲ್ಲಾ ಹಾಕಿ ಕಡಿಮೆ ದರದಲ್ಲಿ ಒದಗಿಸುವುದಕ್ಕೆ ಏಕೆ ಒಪ್ಪಬೇಕು ಎಂದು ನಾನು ಕೇಳುತ್ತೇನೆ. ಇಷ್ಟು ವಿದ್ಯುಚ್ಛಕ್ತಿ ಉತ್ಪಾದನೆ ಮಾಡಿದರೂ ಕೂಡ ನಮ್ಮ ರಾಜ್ಯದಲ್ಲಿ ಬಾವಿಗಳಿಗೆ ವಿದ್ಯುಚ್ಛಕ್ತಿ ಬೇಕೆಂದು ಕೇಳಿದರೆ, ಅದನ್ನು ಟಾರ್ಜೆಟ್ ಪ್ರಕಾರ ಕೊಡುತ್ತೇವೆಂದು ಹೇಳುತ್ತಿರುವ ವಾದವನ್ನು ಕೇಳುತ್ತಿದ್ದೇವೆ. 1968–69 ನೇ ಸಾಲಿಗೆ ನಮ್ಮ ಚಾಮರಾಜನಗರ ತಾಲ್ಲೂಕಿಗೆ 270 ಬಾವಿಗಳಿಗೆ ಸರ್ವಿಸ್ ಮಾಡುತ್ತೇವೆಂದು ಟಾರ್ಜೆಟ್ ಫಿಕ್ಸ್ ಮಾಡಿದ್ದರು. ಇದನ್ನು ವಿದ್ಯುಚ್ಛಕ್ತಿಯ ಮಂಡಲಿಯ ಅಧ್ಯಕ್ಷರಿಗಾಗಲಿ ಚೀಫ್ ಇಂಜಿನಿಯರಿಗಾಗಲಿ ತಿಳಿಸಿದರೆ, ಪೋಲು ಇಲ್ಲ, ಇನ್‌ಸುಲೇಟರ್ಸ್ ಇಲ್ಲ, ವೈಯರ್ಸ್ ಇಲ್ಲವೆಂದು ಹೇಳುತ್ತಿದ್ದಾರೆ. ಆದರಿಂದ ಇಂಥ ಸಾಮುಗ್ರಿಗಳನ್ನು ಅಲ್ಲಿಗೆ ತೀವ್ರವಾಗಿ ಒದಗಿಸುವುದಕ್ಕೆ ಸಂಬಂದಪಟ್ಟವರು ಆದೇಶ ನೀಡಬೇಕೆಂದು ಕೇಳಿಕೊಳ್ಳುತ್ತೇನೆ. ನೀರಿಗೂ ಬಹಳ ಕಷ್ಟವಾಗಿದೆ. ಇದನ್ನು ಮಾರ್ಚ್ 25 ರೊಳಗೆ ಒದಗಿಸಿಕೊಡಬೇಕೆಂದು ಸಂಬಂದಪಟ್ಟ ಮಂತ್ರಿಯವರಿಗೆ ಹೇಳುತ್ತೇನೆ.

ಇನ್ನು ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳ ಬಗ್ಗೆ ಒಂದು ಮಾತು ಹೇಳುತ್ತೇನೆ. ನಮ್ಮ ತಾಲ್ಲೂಕಿನಲ್ಲಿ ಒಂದು ಡಿವಿಜನ್ ಆಫೀಸು ಇದೆ. ಅದಕ್ಕೆ ಸಂಬಂದಪಟ್ಟ ಒಬ್ಬ ಎಕ್ಸಿಕ್ಯುಟಿವ್ ಇಂಜಿನಿಯರ್ ಸಹ ಇದ್ದಾರೆ. ಅದಕ್ಕೆ ನಾಲ್ಕು ಸಬ್ ಡಿವಿಜನ್ಸ್‌ಗಳು ಇವೆ. ಅದರಲ್ಲಿ ನಮಗೆ ಸೇರಿದ ಒಂದು ಸಬ್ ಡಿವಿಜನ್ ಇದೆ. ಅಲ್ಲಿ ಒಬ್ಬ ಅಸಿಸ್ಟೆಂಟ್ ಇಂಜಿನಿಯರ್ ಇದ್ದಾರೆ. ಅವರ ಬಗ್ಗೆ ಅನೇಕ ದೂರುಗಳು ಇವೆ. ಅವರಲ್ಲಿ ಲಂಚಕೋರತನ ತಾಂಡವವಾಡುತ್ತದೆ. ಅವರೇ ಹೊರಗಿನಿಂದ ನಾಲ್ಕು ಜನ ಕಂಟ್ರಾಕ್ಟರುದಾರರನ್ನು ಕರೆಕೊಂಡು ಬಂದು ಅವರೇ ಎಲ್ಲಾ ಕೆಲಸ ಮಾಡುತ್ತಿದ್ದಾರೆ.

ಅಂಥ ಕಡೆಗಳಲ್ಲಿ ಮಾತ್ರ ಕೆಲಸವನ್ನು ಮಂಜೂರು ಮಾಡುತ್ತಿದ್ದಾರೆ. ಮತ್ತು ನಮ್ಮ ಸರ್ಕಾರದ ಹಣವನ್ನು ಪೋಲುಮಾಡುವುದಲ್ಲದೆ ಲಾಭಕೂಡ ಸಂಪಾದನೆ ಮಾಡುತ್ತಿದ್ದಾರೆ. ಪ್ರಜಾಪ್ರತಿನಿಧಿಗಳು ಏನು ಹೇಳಿದರೂ ಗಮನ ಕೊಡುತ್ತಾ ಇಲ್ಲ. ಅವರನ್ನು ದಯವಿಟ್ಟು ವರ್ಗ ಮಾಡಿ ಎಂದು ಕೇಳಿದರೆ' ಸಂಬಂಧಪಟ್ಟ ಮಂತ್ರಿಯವರು, ಅಧಿಕಾರಿಗಳು ಅವರನ್ನು ವರ್ಗಮಾಡುತ್ತಾ ಇಲ್ಲ. ಆದರೆ ಚೆನ್ನಾಗಿ ಕೆಲಸ ಮಾಡತಕ್ಕಂತಹ ಒಬ್ಬ ಎಕ್ಸೆಕ್ಯುಟಿವ್ ಇಂಜಿನಿಯರನ್ನು ಎರಡು ವರ್ಷ ತುಂಬದೆ ಹೋದರೂ ವರ್ಗ ಮಾಡಿದ ಪ್ರಸಂಗ ಬಂದಿದೆ. ಈ ಅಸಿಸ್ಟೆಂಟ್ ಇಂಜಿನಿಯರು, ಅವರೇ ಎಕ್ಸಕ್ಯುಟಿವ್ ಇಂಜಿನಿಯರ್' ಹಾಗೆ ವರ್ತನೆ ಮಾಡುತ್ತಿದ್ದಾರೆ. ಇವರು ಎಕ್ಸೆಕ್ಯುಟಿವ್ ಇಂಜಿನಿಯರೇ ಎಂದು ಅನುಮಾನ ಬರುವ ರೀತಿಯಲ್ಲಿ ನೆಡೆದುಕೊಳ್ಳುತ್ತಿದ್ದಾರೆ. ಇದು ಬಹಳ ವಿಷಾದಕರವಾದ ವಿಷಯ. ಇದನ್ನು ಗಮನಕ್ಕೆ ತೆಗೆದುಕೊಂಡು ಈ ಇಂಜಿನಿಯರನ್ನು ಬೇರೆ ಕಡೆಗೆ ವರ್ಗ ಮಾಡಬೇಕೆಂದು ಕೇಳಿಕೊಂಡು ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

4-30 P. M.

† ಶ್ರೀ ಎಸ್. ಎಂ. ಗುರೆಡ್ಡಿ (ಮುದ್ದೇಬಿಹಾಳ್).—ಮಾನ್ಯ ಸಭಾಧ್ಯಕ್ಷರೇ, ಈ ಸಭೆಯ ಮುಂದಿರತಕ್ಕ ಬೇಡಿಕೆಗಳನ್ನು ಸಮರ್ಥಿಸುತ್ತಾ ನಾನು ಒಂದೆರಡು ವಿಚಾರಗಳನ್ನು ಹೇಳಬಯಸುತ್ತೇನೆ. ಇವೊತ್ತಿನ ದಿವಸ ನಮ್ಮ ರಾಜ್ಯದಲ್ಲಿ ನೀರಾವರಿ ಹೆಚ್ಚು ಅಭಿವೃದ್ಧಿಯಾಗಬೇಕು ಎನ್ನುವಂಥಾ ಮಾತು ಈ ಸಭೆಯಲ್ಲಿ ಮೇಲಿಂದ ಮೇಲೆ ಕೇಳಿ ಬರುತ್ತದೆ. ಸರ್ಕಾರದವರೂ ಕೂಡ ಕೇಂದ್ರ ಸರ್ಕಾರದವರನ್ನು ಒತ್ತಾಯ ಮಾಡುತ್ತಿದ್ದಾರೆ. ಇವೊತ್ತಿನದಿವಸ ನಮ್ಮ ರಾಜ್ಯದ ಪರಿಸ್ಥಿತಿ ಅಷ್ಟೇ ಅಲ್ಲ, ಇತರ ದೇಶಗಳ ಪರಿಸ್ಥಿತಿಯೂ ಕೂಡ ನೀರಿನ ಮೇಲೆ ನಿಂತಿದೆ, ಎಲ್ಲಿಯವರೆಗೆ ತಮ್ಮ ನೀರಾವರಿ ಪ್ರದೇಶಗಳನ್ನು ಹೆಚ್ಚು ಮಾಡುವುದಿಲ್ಲವೋ ಅಲ್ಲಿಯವರೆಗೂ ಯಾವ ರಾಜ್ಯವೂ ಕೂಡ ತಮ್ಮ ಆರ್ಥಿಕ ಪರಿಸ್ಥಿತಿಯನ್ನು ಭದ್ರವಾಗಿ ಇಟ್ಟುಕೊಳ್ಳುವುದಕ್ಕೆ ಸಾಧ್ಯವಿಲ್ಲ ಎಂದು ನಿನ್ನೆ ಮಾನ್ಯ ಅರ್ಥ ಸಚಿವರು ಹೇಳಿದ್ದಾರೆ. ಆದರೆ ಇವೊತ್ತಿನದಿವಸ ನಮ್ಮ ಮುಂದೆ ಇಟ್ಟಿರುವ ಬೇಡಿಕೆಗಳನ್ನು ನೋಡಿದರೆ ನನಗೆ ಅನಿಸುತ್ತದೆ. ಇನ್ನು ಒಂದು ನೂರು ವರ್ಷಗಳು ಕಳೆದರೂ ನಾವು ಕೈಗೊಂಡಿರುವಂಥಾ ಯೋಜನೆಗಳು ಪೂರ್ತಿಯಾಗಲಿಕ್ಕೆ ಸಾಧ್ಯವಿಲ್ಲ ಎಂದು ಕಾಣುತ್ತದೆ. ಇದಕ್ಕೆ ನಾನಾ ಕಾರಣಗಳು ಇವೆ. ಆದರೆ ಇದನ್ನು ಬಗೆಹರಿಸಿಕೊಳ್ಳುವುದು ಹೇಗೆ ಎಂಬುದನ್ನು ವಿಚಾರ ಮಾಡಬೇಕಾಗಿದೆ. ದೊಡ್ಡ ದೊಡ್ಡ ನೀರಾವರಿ ಯೋಜನೆಗಳಿಗೆ ಆದ್ಯತೆ ಕೊಡುವುದು ಕೇವಲ ರಾಜ್ಯ ಸರ್ಕಾರಕ್ಕೆ ಸೀಮಿತವಾಗಿಲ್ಲ. ದೊಡ್ಡ ದೊಡ್ಡ ಪ್ರಾಜೆಕ್ಟುಗಳನ್ನು ನ್ಯಾಷನಲ್ ಪ್ರಾಜೆಕ್ಟ್ ಎಂದು ರಾಷ್ಟ್ರೀಯ ಮಟ್ಟದಲ್ಲಿ ಅವುಗಳನ್ನು ಕಟ್ಟುವಂತೆ ಒಂದು ನಿರ್ಣಯ ಮಾಡಿ, ಕೇಂದ್ರ ಸರ್ಕಾರದವರು ದೊಡ್ಡ ದೊಡ್ಡ ನೀರಾವರಿ ಯೋಜನೆಗಳನ್ನು ತಯಾರು ಮಾಡಿ ಅದಕ್ಕೆ ಅವರು ಹಣವನ್ನು ಒದಗಿಸುತ್ತಿದ್ದರೆ ಈ ಪ್ರಶ್ನೆ ಬರುತ್ತಾ ಇರಲಿಲ್ಲ. ಕೇಂದ್ರ ಸರ್ಕಾರದವರಿಗೂ ಕೂಡ ಪ್ರಾಂತೀಯ ಮನೋಭಾವನೆ ಬೆಳೆಯುತ್ತಿದೆಯೋ ಏನೋ ಎಂದು ಭಾವನೆಯಾಗುತ್ತಿದೆ. ಇವೊತ್ತು ಮೈಸೂರು ರಾಜ್ಯ ನೀರಾವರಿಯಲ್ಲಿ ಎಲ್ಲಾ ರಾಜ್ಯಗಳಿಗಿಂತ ಹಿಂದುಳಿದ ಪ್ರದೇಶ. ಇಲ್ಲಿ 100ಕ್ಕೆ 9ರಷ್ಟು ನೀರಾವರಿ ಇದೆ. ಆಂಧ್ರದಲ್ಲಿ 27 ಪರ್ಸೆಂಟ್ ಇದೆ. ಮದ್ರಾಸ್ ರಾಜ್ಯದಲ್ಲಿ ನಮ್ಮ ರಾಜ್ಯಕ್ಕಿಂತಲೂ ಹೆಚ್ಚು ನೀರಾವರಿ ಇದೆ. ಹೀಗಿರುವಾಗ ನಮ್ಮ ರಾಜ್ಯದಲ್ಲಿ ಕೇವಲ 9 ಪರ್ಸೆಂಟ್' ಮಾತ್ರ ನಿರಾವರಿ ಇದೆ ಎಂಬುದನ್ನು ಕೇಂದ್ರ ಸರ್ಕಾರದವರು ವಿಚಾರ ಮಾಡಬೇಕು. ಇವೊತ್ತಿನ ದಿವಸ ಈ ನೀರಾವರಿ ಪ್ರಶ್ನೆ ಬಗೆಹರಿಯದೇ ಇರುವುದಕ್ಕೆ ಕೇಂದ್ರ ಸರ್ಕಾರವೇ ಜವಾಬ್ದಾರಿ ಎಂದು ನಾನು ತಿಳಿದು ಕೊಂಡಿದ್ದೇನೆ ಯಾವ ಪ್ರದೇಶದಲ್ಲಿ ಇವೊತ್ತು ಅಣೆಕಟ್ಟನ್ನು ಕಟ್ಟುವುದಕ್ಕೆ ಸಾಧ್ಯವಿದೆ, ಯಾವ ಪ್ರದೇಶ ನೀರಾವರಿಯಲ್ಲಿ ಹಿಂದುಳಿದಿದೆ ಅವುಗಳ ಕಡೆ ಕೇಂದ್ರ ಸರ್ಕಾರದವರು ತಮ್ಮ ಗಮನವನ್ನು ಹರಿಸಿ ನೀರಾವರಿ ಯೋಜನೆಗಳನ್ನು ಕೈಗೊಳ್ಳಬೇಕಾದ್ದು ಅವರ ಕರ್ತವ್ಯ. ಕೃಷ್ಣಾ ಪ್ರಾಜೆಕ್ಟನ್ನು ಅವರು ಕೈಗೊಂಡಿದ್ದರೆ ಈ ಪ್ರಶ್ನೆ ಉದ್ಭವಿಸುತ್ತಾ ಇರಲಿಲ್ಲ. ಮಹಾರಾಷ್ಟ್ರದಲ್ಲಿ ಕೊಯಿನ ಪ್ರಾಜೆಕ್ಟನ್ನು ಕೇಂದ್ರ ಸರ್ಕಾರದವರೇ ಕೈಗೊಂಡಿದ್ದಾರೆ. ಕೊಯಿನಾ ಅಣೆ ಕಟ್ಟಿನ ನೀರನ್ನು ಸಮುದ್ರಕ್ಕೆ ಸಾಗಿಸುವ ಕಾಲಕ್ಕೆ ನಮ್ಮ ರಾಜ್ಯಕ್ಕೆ ಭೂಮಿಗೆ ನೀರನ್ನು ಕೊಡುವುದು ಮುಖ್ಯವಲ್ಲವೇ ಎಂಬುದನ್ನು ಯೋಚನೆ ಮಾಡಬೇಕು. ವಿದ್ಯುಚ್ಛಕ್ತಿಯನ್ನು ಒಂದು ಮೂಲೆಯಿಂದ ಇನ್ನೊಂದು ಮೂಲೆಗೆ ತಂತಿಯ ಮುಖಾಂತರ ಕಳುಹಿಸಬಹುದು. ಆದರೆ ನೀರನ್ನು ಒಂದು ಮೂಲೆಯಿಂದ ಇನ್ನೊಂದು ಮೂಲೆಗೆ ಕಳುಹಿಸುವುದಕ್ಕೆ ಸಾಧ್ಯವಿಲ್ಲ. ಕೇಂದ್ರ ಸರ್ಕಾರದವರು ಈ ಒಂದು ಕೃಷ್ಣಾ ಮುಂತಾದ ದೊಡ್ಡ ದೊಡ್ಡ ಪ್ರಾಜೆಕ್ಟು ಬಗ್ಗೆ ರಾಷ್ಟ್ರೀಯ ನೀತಿಯನ್ನು ಉಳಿಸಿಕೊಂಡು ಅವರೇ ಅವುಗಳನ್ನು ಕೈಗೊಂಡಿದ್ದರೆ ನಮ್ಮ ದೇಶಕ್ಕೆ ತೊಂದರೆ ತಪ್ಪುತ್ತಿತ್ತು. ಈಗ ಹೇಗಾದರೂ ಮಾಡಿ ನಮ್ಮ ರಾಜ್ಯದ ನೀರಾವರಿ ಪ್ರದೇಶವನ್ನು ಹೆಚ್ಚು

(ಶ್ರೀ ಎಸ್. ಎಂ. ಗುರೆಡ್ಡಿ)

ಮಾಡಲೇಬೇಕಾಗಿದೆ. ಇವೊತ್ತಿನ ದಿವಸ ಶ್ರೀಮಾನ್ ಎಚ್. ಡಿ. ದೇವೇಗೌಡರು ಹೇಳಿದಹಾಗೆ ಮೈಸೂರಿಗೆ ಇದ್ದಂಥಾದ್ದು 2 ವ್ಯಾಲಿಗಳು. ಒಂದು ಕೃಷ್ಣಾವ್ಯಾಲಿ, ಇನ್ನೊಂದು ಕಾವೇರಿವ್ಯಾಲಿ. ಈ ಎರಡು ವ್ಯಾಲಿಗಳಲ್ಲಿಯೂ ಡೆವಲಪ್‌ಮೆಂಟ್ ಆಗತಕ್ಕ ಪ್ರದೇಶ, ನೀರಾವರಿ ಆಗತಕ್ಕ ಪ್ರದೇಶ ಬಹಳ ಇದೆ. ಅದನ್ನು ಸಾಧಿಸುವುದಕ್ಕೆ ಕೃಷ್ಣಾ ಮತ್ತು ಕಾವೇರಿ ವ್ಯಾಲಿಗಳಿಗಾಗಿ ಕಾರ್ಪೊರೇಷನ್ ಮಾಡಬೇಕೇ ವಿನಾ ಬೇರೆಗತ್ಯಂತರವಿಲ್ಲ ಎಂದು ಮಾನ್ಯ ಮುಖ್ಯ ಮಂತ್ರಿಗಳು ಕೂಡ ಹೇಳಿದ್ದಾರೆ. ಮೊನ್ನೆ ಕೇಂದ್ರ ಸರ್ಕಾರಕ್ಕೆ ಒಂದು ನಿರ್ಣಯವನ್ನು ಕೂಡ ಮಾಡಿ ಕಳುಹಿಸಿ 10 ಕೋಟಿ ರೂಪಾಯಿಗಳಿಗೆ ಮೇಲ್ಪಟ್ಟ ಪ್ರಾಜೆಕ್ಟುಗಳನ್ನು ಕೇಂದ್ರ ಸರ್ಕಾರದವರೇ ವಹಿಸಿಕೊಳ್ಳಬೇಕು ಮತ್ತು ಅವುಗಳಿಗೆ ಹಣ ಸಹಾಯವನ್ನು ಮಾಡಬೇಕೆಂದು ಕೇಳಿಕೊಂಡಿದ್ದರೂ ಸಹ ಇದುವರೆಗೆ ಅದಕ್ಕೆ ಕೇಂದ್ರದಿಂದ ಉತ್ತರ ಬರಲಿಲ್ಲ. ಇದನ್ನು ನೋಡಿದರೆ ಏನು ಎನಿಸುತ್ತದೆ ಎಂದರೆ ಅವರು ಈ ಬಗ್ಗೆ ಯಾವ ಮನಸ್ಸನ್ನು ಮಾಡಿಲ್ಲ ಎಂದು ತೋರುತ್ತದೆ. ನಮ್ಮ ಕಾಲಮೇಲೆ ನಾವು ನಿಲ್ಲಬೇಕು. ಈ ಯೋಜನೆಗಳಿಗೆ ಕಾರ್ಪೊರೇಷನ್ ಮಾಡದೆ ಬೇರೆ ಗತ್ಯಂತರವಿಲ್ಲ. ದಿವಸಗಳು ಕಳೆಯುತ್ತಾ ಹೋದ ಹಾಗೆಲ್ಲಾ ಪ್ರಾಜೆಕ್ಟುಗಳ ಕಾಸ್ಟ್ ಹೆಚ್ಚಾಗುತ್ತದೆ ರಾಜ್ಯಕ್ಕೆ ಬರತಕ್ಕಂಥ ಉತ್ಪತ್ತಿ ಕಡಿಮೆಯಾಗುತ್ತದೆ. ಆದ್ದರಿಂದ ಈ ಸಂದರ್ಭದಲ್ಲಿ ನಾನು ಹೇಳುವುದು ಇಷ್ಟು, ಈ ಎಲ್ಲಾ ಯೋಜನೆಗಳಿಗೂ ಯಾವ ರೀತಿಯಿಂದ ಹಣವನ್ನು ಕೂಡಿಸಬೇಕು ಎಂಬುದನ್ನು ಯೋಚನೆ ಮಾಡಬೇಕಾಗಿದೆ. ನನ್ನ ಮಟ್ಟಿಗೆ ಹೇಳುವುದಾದರೆ ಈ ಬಗ್ಗೆ ಆಳುವ ಪಕ್ಷದವರು ಮಾತ್ರವಲ್ಲ ಎಲ್ಲರೂ ಇದಕ್ಕೆ ಸಹಕರಿಸಿ ಕೆಲಸ ಮಾಡಬೇಕು. ಈ ನೀರಾವರಿ ಯೋಜನೆಗಳನ್ನು ಮಾಡುವುದಕ್ಕೆ ಹಳ್ಳಿಗಳಿಗೆ ಹೋಗಿ ಜನಗಳಿಂದ ಕಾಂಟ್ರಿಬ್ಯೂಷನ್ ವಸೂಲು ಮಾಡುವುದಕ್ಕೆ ಪ್ರಾರಂಭ ಮಾಡಿದರೆ ಎಷ್ಟೋ ಹಣ ವಸೂಲಾಗುತ್ತದೆ ಗ್ರಾಮಾಂತರ ಪ್ರದೇಶಗಳಲ್ಲಿ ಜನಗಳು ಗುಡಿ ಗುಂಡಾರಗಳನ್ನು ಕಟ್ಟುವುದಕ್ಕೆ ಮಸೀದಿಗಳನ್ನು ಕಟ್ಟುವುದಕ್ಕೆ ಎಷ್ಟೋ ಕಾಂಟ್ರಿಬ್ಯೂಷನ್ ಕೊಟ್ಟಿದ್ದಾರೆ ಇದೇ ರೀತಿ ಕೃಷ್ಣಾ ಪ್ರಾಜೆಕ್ಟನ್ನು ಕಟ್ಟುತ್ತೇವೆ ಕಾಂಟ್ರಿಬ್ಯೂಷನ್ ಕೊಡಿ ಎಂದು ಜನತೆಯ ಮನೆ ಮನೆಗೂ ಹೋಗಿ ಹಣವನ್ನು ಸಂಗ್ರಹಿಸಿ ಈ ಕಾರ್ಯವನ್ನು ಸಾಧಿಸುವುದಕ್ಕೆ ಸಾಧ್ಯವಿದೆ. ಜನಗಳ ಮೇಲೆ ತೆರಿಗೆಯನ್ನು ಹಾಕುವುದಕ್ಕೆ ಹೋದರೆ ಅವರು ಬೇಜಾರುಪಟ್ಟುಕೊಳ್ಳುತ್ತಾರೆ. ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಹಾಕಿದರೆ ಚಳುವಳಿಯಾಗುತ್ತದೆ ಈ ತೆರಿಗೆಯನ್ನು ಹಾಕುವುದಾದರೆ ವ್ಯವಸಾಯ ಉತ್ಪನ್ನ ಹೆಚ್ಚಾಗುವುದಕ್ಕೆ ಅವಕಾಶವಾಗುವುದಿಲ್ಲ. ಇದರಿಂದ ರೈತರಿಗೆ ಹೆರಾಸ್‌ಮೆಂಟ್ ಆಗುತ್ತದೆ ಎನ್ನುವ ಭಾವನೆ ಇದೆ. ಹಾಗೂ ಒಂದು ವೇಳೆ ಜನತೆಯ ಮೇಲೆ ಈ ತೆರಿಗೆಯನ್ನ ವಿಧಿಸುವುದಾದರೆ ಹೇಗೆ ಶ್ರೀಮಾನ್ ವಾಟಾಳ್ ನಾಗರಾಜ್ ಅವರು ಕನ್ನಡ ಚಳುವಳಿಯನ್ನು ನಡೆಸುತ್ತಾರೆಯೋ ಆ ರೀತಿ ಜನತೆ ಈ ತೆರಿಗೆಯ ಬಗ್ಗೆ ಚಳುವಳಿಯನ್ನು ನಡೆಸುತ್ತಾರೆ. ಈ ಯೋಜನೆಯ ಬಗ್ಗೆ ವಂತಿಕೆಯನ್ನು ಎತ್ತುವುದಾದರೆ ಜನ ಮುಂದೆ ಬರುತ್ತಾರೆ. ವಂತಿಕೆಯನ್ನು ಕೊಡತಕ್ಕಂಥ ಶಕ್ತರು ಶ್ರೀಮಂತರು ಇದ್ದಾರೆ. ಅಂಥವರಿಂದ ವಂತಿಕೆಯನ್ನು ವಸೂಲು ಮಾಡುವುದು ಒಳ್ಳೆಯದು. ಇದರಿಂದ ಈ ನೀರಾವರಿ ಕಾಮಗಾರಿಯನ್ನು ಮುಗಿಸಬಹುದು. ಕೆಲವು ಮಾನ್ಯ ಸದಸ್ಯರು ಹೇಳಿದ ಹಾಗೆ ನಮ್ಮ ಸರ್ಕಾರದವರು ನೀರಿನ ಸಮಸ್ಯೆಯನ್ನು ಬಗೆಹರಿಸಿಲ್ಲ. ಕೃಷ್ಣಾ ನದಿಯಲ್ಲಿ ನಮಗೆ ಬರಬೇಕಾದಂಥ 600 ಟಿ.ಎಂ.ಸಿ.ಎಫ್ ಟಿ. ನೀರನ್ನು ಉಪಯೋಗ ಮಾಡಿಕೊಳ್ಳದೇ ಹೋದರೆ ಮುಂದೆ ಯಾರನ್ನು ಕೇಳುತ್ತೀರಿ ? ಕೃಷ್ಣಾ ನದಿಯಿಂದ ನಮಗೆ ಬರಬೇಕಾದಂತಹ ನೀರನ್ನು ಉಪಯೋಗ ಮಾಡಿಕೊಳ್ಳುವ ದೃಷ್ಟಿಯಿಂದ ಈ ಯೋಜನೆಗೆ 1963ರಲ್ಲೇ ಕ್ಲಿಯರೆನ್ಸ್ ಕೊಟ್ಟರೂ ಇನ್ನೂ ಅದನ್ನು ಏತಕ್ಕೆ ಉಪಯೋಗ ಮಾಡಿಕೊಳ್ಳಲಿಲ್ಲ ಎಂದು ಕೇಂದ್ರದವರು ಕೇಳಬಹುದು. ಅದಕ್ಕಾಗಿ ನಮ್ಮ ಸರ್ಕಾರದವರು ತಮ್ಮ ಕರ್ತವ್ಯದಲ್ಲಿ ಹಿಂದೆ ಬಿದ್ದಿಲ್ಲ. ನಮ್ಮ ರಾಜ್ಯಕ್ಕೆ ಬರಬೇಕಾದಂಥ ನೀರಿನ ಪಾಲನ್ನು ದೊರಕಿಸಿ ಕೊಂಡೇತೀರುತ್ತಾರೆ ಎನ್ನುವ ದೃಷ್ಟಿಯಿಂದ ಆ ಪ್ರಾಜೆಕ್ಟುಗಳ ಕೆಲಸವನ್ನು ಕೈಗೊಳ್ಳಲು ಯಾವ ರೀತಿ ಹಣವನ್ನು ಕೂಡಿಸ ಬೇಕು ಎಂಬುದು ಬಹಳ ಮಹತ್ವದ್ದು. ಆದಕಾರಣ ಪ್ರಾಜೆಕ್ಟ್‌ಗಳನ್ನು ಕಟ್ಟುವ ಸಲುವಾಗಿ ಹಣ ಕೊಡುವಾಗ ಎಲ್ಲರೂ ಸಹಕಾರ ನೀಡಬೇಕು. ಒಂದು ಕಾಲಕ್ಕೆ ಮೈಸೂರು ರಾಜ್ಯ ಸುಖಮಯವಾದ ರಾಜ್ಯವಾಗಿತ್ತು. ಬಹಳ ಚೆಂದದಿಂದ ಕೂಡಿತ್ತು. ಹಿಂದಿನ ದಿವಾನರೂ ಕೂಡ ಬಹಳ ಕಾಂಟ್ರಿಬ್ಯೂಷನ್ ಮಾಡಿದ್ದಾರೆ. ಮೈಸೂರು ದೇಶವನ್ನು ಕಟ್ಟುವುದಕ್ಕೆ ಬಹಳ ಪ್ರಯತ್ನಪಟ್ಟಿದ್ದಾರೆ. ಅದೇ ರೀತಿ ನಾವು ಈ ಕೆಲಸವನ್ನು ಮಾಡಬೇಕಾಗಿದೆ. ಜನರಿಂದ ಹಣ ಎತ್ತಲಿಕ್ಕೆ ಸಾಧ್ಯವಿದೆ. ಆದ್ದರಿಂದ ಆ ಕೆಲಸವನ್ನು ಮಾಡಬೇಕೆಂದು ಹೇಳುತ್ತಿದ್ದೇನೆ. ಇತ್ತೀಚೆಗೆ ಪೋಲೀಸರು ನಮ್ಮ ಕಡೆ ಬೆನವಲೆಂಟ್ ಫಂಡ್ ಎಂಬುದಾಗಿ ಜನರಿಂದ ಎತ್ತಿದರು. ಪ್ರತಿಯೊಂದು ಗ್ರಾಮದವರು 500 ರಿಂದ 600 ರೂಪಾಯಿಗಳವರೆಗೆ ಕೊಟ್ಟರು. ಪೋಲೀಸರಿಗೆ ಹಣ ಕೊಟ್ಟು ಜನ, ನಿಮ್ಮ ಅನುಕೂಲಕ್ಕಾಗಿ ಯೋಜನೆಗಳನ್ನು ಕಟ್ಟು

ತ್ತೇವೆಂದು ಹೇಳಿದರೆ ಅವರು ಹಣವನ್ನು ಕೊಡಲಿಕ್ಕೆ ಮುಂದೆ ಬರುತ್ತಾರೆ. ಅವರಿಗೆ ಕೊಡು ವಂತಹ ಮನಸ್ಸು ಬರುವಂತೆ ನಾವು ಹೇಳಬೇಕಾಗಿದೆಯೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಬಾಪೂಗೌಡ (ಷಾಹಪೂರ).—ನಿಮ್ಮ ಜಿಲ್ಲೆಯಲ್ಲಿ ಎಷ್ಟು ಕೊಡಿಸುತ್ತೀರಾ ?

ಶ್ರೀ ಎಸ್. ಎಂ. ಗುರೆಡ್ಡಿ.—ನೀವು ಜೋಳಿಗೆ ಹಾಕಿ, ಜನರು ಹಣ ಕೊಡುತ್ತಾರೆ. ಇನ್ನು ಪವರ್ ಪ್ರಾಜೆಕ್ಟ್ ಬಗ್ಗೆ ಹೇಳುತ್ತೇನೆ ಶರಾವತಿಯಲ್ಲಿ ಬಹಳಷ್ಟು ವಿದ್ಯುಚ್ಛಕ್ತಿ ತಯಾರಾಗುತ್ತಿದ್ದರೂ ಸಹ ಇನ್ನು 2–3 ವರ್ಷಗಳಲ್ಲಿ ಅದೂ ಸಹ ಸಾಲದಾಗಿ ನಮಗೆ ಕೊರತೆ ಬೀಳಬಹುದು. ಆದ ಕಾರಣ ನಾವು ಕಾಳಿನದಿ ಯೋಜನೆಯನ್ನು ಕೈಗೊಳ್ಳಬೇಕಾಗಿದೆ. ನಾವು ಕಾಳಿನದಿ ಯೋಜನೆಯನ್ನು ಕೈಗೊಳ್ಳುವಾಗ ಒಂದು ಮಾತನ್ನು ನೆನಪಿನಲ್ಲಿ ಇಟ್ಟುಕೊಳ್ಳಬೇಕಾಗುತ್ತದೆ. ಈ ಯೋಜನೆಯನ್ನು ಕಾರ್ಯಗತ ಮಾಡುವ ಬಗ್ಗೆ ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಹಣ ಒದಗಿಸಿದ್ದರೂ ಕೂಡ, ಈ ಯೋಜನೆ ಮತ್ತು ಕೃಷ್ಣಾ ಯೋಜನೆ ಬಹಳ ಮಹತ್ವದ ಯೋಜನೆಗಳಾಗಿರುವುದರಿಂದ, ಈ ಯೋಜನೆಗಳನ್ನು ಪ್ಲಾನ್ ಒಳಗೆ ಸೇರಿಸದೆ ಪ್ರತ್ಯೇಕ ಯೋಜನೆಗಳೆಂದು ಮಾಡಿ, ಈ ಯೋಜನೆಗಳಿಗೆ ಪ್ರತ್ಯೇಕವಾಗಿ ಸಹಾಯ ಮಾಡಬೇಕೆಂದು ಕೇಂದ್ರಕ್ಕೆ ಕೇಳಿಕೊಳ್ಳಬೇಕು. ಈ ರೀತಿ ಮಾಡಿದರೆ ನಮಗೆ ಬೇರೆ ಬಾಬುಗಳಿಗೆ ಹಣ ಉಳಿತಾಯವಾಗುವುದಲ್ಲದೆ ಈ ಮಹತ್ವದ ಯೋಜನೆಗಳನ್ನು ಜಾಗ್ರತೆ ಮುಗಿಸುವುದಕ್ಕೆ ಅವಕಾಶವಾಗುತ್ತದೆ. ಈ ಯೋಜನೆಯಿಂದ ಆಂಧ್ರ ಮತ್ತು ಮಹಾರಾಷ್ಟ್ರ ರಾಜ್ಯಗಳಿಗೆ ಅನುಕೂಲವಾಗುವುದರಿಂದ ಅವರಿಂದಲೂ ಸಹ ಹಣವನ್ನು ಎತ್ತಬೇಕು. ಮತ್ತು ಈ ಬಗ್ಗೆ ಕ್ರಮ ಕೈಗೊಳ್ಳಬೇಕು.

ಇನ್ನು ರಸ್ತೆಗಳ ವಿಚಾರ. ಈ ಬಗ್ಗೆ ಹೆಚ್ಚು ಹೇಳುವುದಿಲ್ಲ. ನಮ್ಮ ರಾಜ್ಯದಲ್ಲಿ ರಸ್ತೆಗಳು ಬಹಳ ಬೆಳೆದಿವೆಯೆಂದು ಸರ್ಕಾರದವರು ಹೇಳಿದ್ದಾರೆ. ಅದನ್ನು ನಾನು ಒಪ್ಪುತ್ತೇನೆ. ಈಗ 28500 ಮೈಲಿಗಳಷ್ಟು ರಸ್ತೆಗಳನ್ನು ಮಾಡಿಸಿದ್ದಾರೆ. ಈ ರೀತಿ ನಿರ್ಮಿಸಿದಂಥ ರಸ್ತೆಗಳ ಸ್ಥಿತಿ ಯಾವ ರೀತಿ ಇದೆ ಎಂಬುವನ್ನು ಸ್ವಲ್ಪ ಪರಿಶೀಲನೆ ಮಾಡಬೇಕಾಗಿದೆ. ನಾನು ಎಲ್ಲಾ ರಸ್ತೆಗಳ ವಿಚಾರವಾಗಿ ಹೇಳುವುದಿಲ್ಲ. ಈ ಮನೆಯಲ್ಲಿ ನಮ್ಮ ಜಿಲ್ಲೆಯ ಬಗ್ಗೆ ಒಂದು ಮಾತನ್ನು ಹೇಳಬಯಸುತ್ತೇನೆ. ಏಕೆಂದರೆ ನಮ್ಮ ಬಿಜಾಪುರ ಜಿಲ್ಲೆಯಲ್ಲಿ ಯಾರಾದರೂ ಪ್ರವಾಸ ಕೈಗೊಂಡರೆ ಅಲ್ಲಿಯ ರಸ್ತೆಗಳ ಅನುಭವವಾಗುತ್ತದೆ. ಮಳೆಗಾಲದಲ್ಲಿ ಮೂರು ತಿಂಗಳವರೆಗೆ ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ಹೋಗುವುದಕ್ಕಾಗುವುದಿಲ್ಲ. ಅಲ್ಲಿಯ ರಸ್ತೆಗಳಿಗೆ ಟಾರ್ ಹಾಕಿಸಿಲ್ಲ. ಸರಿಯಾದ ಬ್ರಿಡ್ಜ್ ಗಳು ಇಲ್ಲ. ಆರೋಗ್ಯ ಮಂತ್ರಿಗಳಾದ ಶ್ರೀ ವೈ. ರಾಮಕೃಷ್ಣ ಅವರಿಗೆ ಮತ್ತು ಈಗಿನ ಲೋಕೋಪಯೋಗಿ ಮಂತ್ರಿಗಳಿಗೆ ಈ ಬಗ್ಗೆ ಕಾಗದ ಬರೆದು ತಿಳಿಸಿದ್ದೇವೆ. ನಮ್ಮ ಭಾಗದಲ್ಲಿ ಕೆಲವು ರಸ್ತೆಗಳನ್ನು ತೆಗೆದುಕೊಳ್ಳಬೇಕೆಂಬ ವಿಚಾರ ಬಂದಾಗ ಮಾನ್ಯ ಆರ್ಥಿಕ ಮಂತ್ರಿಗಳು ಹಣ ಇಲ್ಲವೆಂದು ಡೆಫರ್ ಮಾಡಿದರು. ಡೆಫರ್ ಮಾಡುವ ಮುನ್ನ ಸ್ವಲ್ಪ ಯೋಚನೆ ಮಾಡಬೇಕಾಗಿತ್ತು. ಈಗ ಎಷ್ಟೋ ಕೆಲಸಗಳನ್ನು ಮಾಡಿಸಲು ಟೆಂಡರ್ ಕರೆದಿದ್ದಾರೆ. ಹಣ ಇಲ್ಲದಿದ್ದರೆ ಆ ಕೆಲಸಗಳನ್ನು ಸಹ ಡೆಫರ್ ಮಾಡಬಹುದಾಗಿತ್ತು. ಕೆಲಸಗಳನ್ನು ಎಲ್ಲಾ ಕಡೆಯಲ್ಲಿಯೂ ಸಮನಾಗಿ ಮಾಡಿಸಬೇಕು, ಇಲ್ಲದಿದ್ದರೆ ಎಲ್ಲಾ ಕೆಲಸಗಳನ್ನು ಬಂದ್ ಮಾಡಬೇಕು. ವಿರೋಧಪಕ್ಷದ ನಾಯಕರಾದ ಶ್ರೀ ಶಿವಪ್ಪನವರು ಹೇಳಿದಂತೆ ರೀಜನಲ್ ಇಂಬ್ಯಾಲೆನ್ಸ್ ಹೋಗಬೇಕೆಂದು ಭಾಷಣ ಮಾಡಿದರೆ ಹೋಗುವುದಿಲ್ಲ. ಅದು ಕಾರ್ಯರೂಪಕ್ಕೆ ಬರಬೇಕು. ಮೈಸೂರು ಡಿವಿಜನ್, ಬೆಳಗಾಂ ಡಿವಿಜನ್ ಗುಲ್ಬರ್ಗ ಡಿವಿಜನ್‌ಗಳಲ್ಲಿ ಒಳ್ಳೆಯ ಟಾರ್ ರಸ್ತೆಗಳು ಇವೆ. ಆದರೆ ನಮ್ಮ ಬಿಜಾಪುರ ಜಿಲ್ಲೆಯಲ್ಲಿ ಮಾತ್ರ ಮಡ್ ರಸ್ತೆಗಳು ಇವೆ. ಚಳಿಗಾಲ ಮತ್ತು ಬಿಸಿಲು ಕಾಲಗಳಲ್ಲಿ ಆ ಭಾಗಗಳಲ್ಲಿ ಪ್ರವಾಸ ಮಾಡಿದ ಜನರನ್ನು ನೋಡಿದರೆ ಅವರ ಮುಖಗಳು ಸ್ಮಶಾನದ ಹೆಣಗಳ ಮುಖದಂತೆ ಇರುತ್ತದೆ. ಅವರ ಬಟ್ಟೆಗಳ ಮೇಲೆ ಧೂಳು ತುಂಬಿಕೊಂಡಿರುತ್ತದೆ. ಈ ಭಾಗದಲ್ಲಿ ಹೆಚ್ಚಾಗಿ ಪ್ರವಾಸ ಮಾಡುತ್ತಿರುವವರು ಇವತ್ತಿನ ದಿವಸ ಟಿ. ಬಿ. ಯಿಂದ ನರಳುತ್ತಿದ್ದಾರೆ. ನೀರಾವರಿ ಯೋಜನೆಗಳನ್ನು ಮಾಡಿಸುತ್ತಿರುವುದರಿಂದ ರಸ್ತೆಗಳನ್ನು ಮಾಡಿಸಲು ಹಣ ಎಲ್ಲದೆ ಎಂದು ತಾವು ಕೇಳಬಹುದು. ಆದರೆ ಯಾವ ಪ್ರದೇಶ ಹಿಂದುಳಿದಿದೆಯೋ ಆ ಪ್ರದೇಶಕ್ಕೆ ಮೊದಲು ಸಹಾಯ ಮಾಡುವುದಾದರೆ ಮಾಡಿ, ಇಲ್ಲವಾದರೆ ಎಲ್ಲಾ ಕಡೆಗಳಲ್ಲಿಯೂ ಸಹ ರಸ್ತೆಗಳ ಕೆಲಸಗಳನ್ನು ನಿಲ್ಲಿಸಿಬಿಡಿ. ಗುಲ್ಬರ್ಗ ಜಿಲ್ಲೆಯಿಂದ ಬಸ್‌ನಲ್ಲಿ ಹೊರಟರೆ ಆ ಜಿಲ್ಲೆ ಕೊನೆಯಾಗುವವರೆಗೂ ಟಾರ್ ರಸ್ತೆ ಇದೆ. ನಮ್ಮ ಜಿಲ್ಲೆ ಪ್ರಾರಂಭವಾದ ತಕ್ಷಣ ಮಡ್ ರೋಡ್ ಪ್ರಾರಂಭವಾಗುತ್ತದೆ. ನಾನು ಅನೇಕ ಸಾರಿ ಬಸ್ ಪ್ರವಾಸ ಮಾಡಿರುವುದರಿಂದ ಈ ಅನುಭವವನ್ನು ಹೇಳುತ್ತಿದ್ದೇನೆ. ಆದಕಾರಣ ಸರ್ಕಾರದವರು ರೀಜನಲ್ ಇಂಬ್ಯಾಲೆನ್ಸ್‌ನ್ನು ತೆಗೆಯಬೇಕಾದರೆ, ಕಮ್ಯೂನಿಕೇಷನ್ ದೃಷ್ಟಿಯಿಂದ ಯಾವ ರಸ್ತೆಗಳನ್ನು ಇಂಪ್ರೂವ್ ಮಾಡುವ ಅವಶ್ಯಕತೆ ಇದೆಯೋ ಅಂತಹ ರಸ್ತೆಗಳನ್ನು ಸರ್ಕಾರದವರು ಕೂಡಲೇ ಮಾಡಿಸಬೇಕು. ಇಲ್ಲವಾದರೆ ಜನರಿಗೆ ಒಂದು ತರಹದ ಭಾವನೆ ಬರುತ್ತದೆ. ಆದಕಾರಣ ಈ ಸಮಯದಲ್ಲಿ ನಾನು

(ಶ್ರೀ ಎಸ್ ಎಂ. ಗುರೆಡ್ಡಿ)

ಕೇಳಿಕೊಳ್ಳುವುದು ಇಷ್ಟೆ, ಸರ್ಕಾರದವರು ಯಾವುದಾದರೂ ಒಂದು ಕಾರ್ಯವನ್ನು ಕೈಗೊಳ್ಳ ಬೇಕಾದರೆ, ಸ್ಥಳೀಯ ಅಧಿಕಾರಿಗಳು ಕಳಿಸಿದಂತಹ ಬಡ್ಜೆಟ್ಟಿನ ಎಸ್ಟಿಮೇಟನ್ನು ಲಕ್ಷದಲ್ಲಿ ಇಟ್ಟು ಕೊಂಡು ಅದಕ್ಕೆ ಮೊದಲು ಲಕ್ಷ ಕೊಡಬೇಕು ಹಣ ಇಲ್ಲವೆಂದು ಕೆಲಸಗಳನ್ನು ಮಾಡಿಸದಿದ್ದರೆ ಆಗುವು ದಿಲ್ಲ. ಹಿಂದುಳಿದಿರುವ ಪ್ರದೇಶಗಳನ್ನು, ಮುಂದಿರುವ ಪ್ರದೇಶಗಳ ಸ್ಥಾನಕ್ಕೆ ತರುವಹಾಗೆ ನೋಡಿ ಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಂಡು, ಇಷ್ಟು ಕಾಲ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

SRI D. B. KALMANKAR (Aland).—Mr. Deputy Speaker, Sir, just now the Hon'ble Member Sri Gureddi was referring to the conditions of roads in Bijapur District. Probably he is under the wrong impression that in Gulbarga District from where the present Cheif Minister hails...

ಶ್ರೀ ಎಸ್. ಎಂ. ಗುರೆಡ್ಡಿ.—ನಾನು ಆ ರೀತಿ ಹೇಳಲಿಲ್ಲ. ಗುಲ್ಬರ್ಗದಿಂದ ಬಿಜಾಪುರಕ್ಕೆ ಬಸ್‌ನಲ್ಲಿ ಬಂದರೆ, ಗುಲ್ಬರ್ಗ ಜಿಲ್ಲೆಯ ಬಾರ್ಡರ್ ಮುಗಿದ ಕೂಡಲೇ ಟಾರ್ ರೋಡ್ ಬಂದ್ ಆಗು ತ್ತದೆ. ನಂತರ ಮಡ್ ರೋಡ್ ಪ್ರಾರಂಭವಾಗುತ್ತದೆ. ಆ ಕಾರಣದಿಂದ ನಾನು ಹೇಳಿದ್ದು.

SRI D. B. KALMANKAR.—One more thing I want to make clear. Probably he is thinking that the present Chief Minister who happened to be the Public Works Minister for a long time might have influenced to provide better roads in Gulbarga. He might be under the impression that Gulbarga has got all cement roads in every village. That is not the case. We people who come from Hyderabad Karnatak area are feeling that we are neglected even now, as we were neglected in the past. Even if my hon. friend Mr. Gureddi takes out the mileage, he will probably come to know that the mileage in Gulbarga District is less. I have seen Bijapur District also. Bijapur had the advantage of being in erstwhile Bombay State. There have been more roads and they are hundred times in a better position than Gulbarga. So, I for one think that though we have been giving so many proposals every year for taking up roads under State Fund Roads none of the roads have been taken up. In our Aland Taluka, I would submit there are no roads at all excepting one roadfrom Gulbarga to Aland. There is not one tar road or cement road. There are no communications in the interior. I had suggested that some roads might be taken up. There is one small road from Vajrakan Salyar and also there is one more road from Aland to Dudini which is a Railway Station. The length of these roads put together may cometo about 30 to 35 miles. These roads are very mportant roads, Though they are very important, they have not been taken up. The Road Transport Department are not willing to ply buses on these roads. In Maharastra what they do is even if there are metal roads, they ply buses on these roads. That is not the case with our Transport Department.

Then I would come to Irrigation. Our Hon. Finance Minister has said that just to safeguard the interests of the State, the State Government have taken up so many big projects both under Cauvery and Krishna Basins though they may not be completed

within a short period. What I submit in this connection is that Mr. Boothalingam who had been to Bangalore had himself admitted that we have done a great blunder in spending crores of rupees only on Major Irrigation Schemes. He has further said that we could have ventured upon short term schemes also. Besides these major irrigation schemes, the Government could have given sufficient funds for minor irrigation schemes, lift irrigation schemes and well irrigation schemes. If they had done it from the very beginning, we could have been self-sufficient in food. But the difficulty is we have been spending crores and crores of rupees on major irrigation. Out of Rs. 250 crores we have spent Rs. 90 to 95 crores on major irrigation, with the result the State has only 9.9 per cent irrigation. That being the position, we have not been able to overcome our food deficit. Secondly the area that is covered under the Minor Irrigation, as per figures given, is only to the extent of 3,44,230 acres. This is what achievement we have achieved during the last 17 years. But for minor irrigation a very meagre amount is provided when compared to the funds provided last year. It can be seen from the Capital Outlay that a provision of 42.99 crores has been provided. Out of this, 15 crores have been reserved for irrigation and 7 crores for hydro-electric power. Last year irrigation had been given much more amount than this year. We have 3.17 crores less this year for irrigation. That means we get lesser amount earmarked for irrigation schemes. We have been urging that Upper Krishna should be taken up immediately and completed. It requires about Rs. 165 crores. For the first stage it requires about 70 to 80 crores. Now only Rs 2 crores have been allotted for this project. This is not at all sufficient. Last year we M. L. As. coming from Gulbarga, Bijapur and Raichur submitted a representation to the then Chief Minister Sri Nijalingappa, saying that this project must be taken up immediately and completed because in every three years, there is a famine in that area and this area is very backward industrially and economically. We urged that at least Rs. 20 crores might be provided for this project to start with. In spite of our representation and in spite of repeated agitation, only Rs. 2 crores are earmarked for this project. At this rate, I am afraid, it may not be possible to complete this project even within 60 to 80 years. Sri Siddiah has said that at least 12½ crores should have been given for this project. The hon. Member has taken into account the backwardness of the three districts in respect of irrigation and also in respect of industrialisation and education. I entirely agree with the hon. Member. If this project is completed the State's food problem can be solved without any difficulty and these Districts will become granary of grains in our State. Therefore, I would submit that the Upper Krishna should be taken up in all earnestness and it should be treated on war footing. The Government must see that more funds are given for this project.

There are some other projects like Bhadra and Thungabhadra projects which are completed. Today we are able to irrigate more than 7 lakhs of acres under these two projects. Even in respect of

(SRI D. B. KALMANKAR)

these projects, their complete potentiality has not been tapped and the figures given are not correct. Digging channels and field channels have not been completed and therefore water could not be utilised. The Public Accounts Committee has made a reference regarding that.

In our area, we have no buildings for Courts. In Aland, we have no building for Court. I have been agitating for the last so many years. A provision of 22. 50 lakhs for Court buildings has been made. I would request the Hon'ble Chief Minister to consider and sanction a Court Building for Aland with quarters for the Munsiff and other staff.

5-30 P.M.

Then regarling power,!I have to submit that this year the allotment is rather less. The other day I was discussing with the Deputy Minister about the villages to be electrified and pump sets to be provided. I was told that out of 8 crores of money, 4½ to 5 crores are required for maintenance and very little is left for taking up new villages. According to hım a tentative figure of 25ı villages were mentioned. Last year we had 500 villages electrified and 20,000 pump sets were sanctioned. This year, the target is very bleak and I would request the Government that in the interest of production of more foodgrains and in the interest of industrialisation, this figure may be taken up at least on par with last year and more funds may be allotted for electricity.

With these words, I wish to thank the Chair for giving me an opportunity.

†ಶ್ರೀ ಸೋಲೂರು ಸಿದ್ಧಪ್ಪ (ಕುದೂರು).—ಸನ್ಮಾನ್ಯ ಸಭಾಪತಿಗಳೇ, ನಮ್ಮ ಮುಂದೆ ಇಟ್ಟಿರುವ ಡಿಮ್ಯಾಂಡ್‌ಗಳನ್ನು ಅನುಮೋದಿಸುತ್ತಾ ಸರ್ಕಾರದ ಗಮನಕ್ಕೆ ಕೆಲವು ವಿಷಯಗಳನ್ನು ತರಲು ಇಷ್ಟಪಡುತ್ತೇನೆ. ಈಗ ಶ್ರೀಮಾನ್ ಶಿವಪ್ಪನವರು ಕೆಲವು ವಿಚಾರಗಳನ್ನು ವಿರೋಧಿಸಿ ಮಾತನಾಡಿದರು. ದೇಶದಲ್ಲಿ ನಡೆದಿರತಕ್ಕಂಥ ಕಾಮಗಾರಿ ಕೆಲಸಗಳ ಬಗ್ಗೆ ಸಂತೋಷಪಡಬೇಕೇ ವಿನಃ ಟೀಕೆ ಮಾಡುವ ಹಾಗಿಲ್ಲ. ಅವರ ಮಾತನಾಡುವ ಶೈಲಿ ನೋಡಿದರೆ ಅವರು ಮೊದಲಿದ್ದ ಮಾರ್ಗವನ್ನೇ ಅನುಸರಿಸುತ್ತಿದ್ದಾರೆ. ಸರ್ಕಾರದವರು ಮಾಡಿರತಕ್ಕ ಕೆಲಸಕಾರ್ಯಗಳಿಗೆ ಅನುಕಂಪವನ್ನು ತೋರಿಸುವುದು ಸೂಕ್ತ. ಮೈಸೂರು ಸಂಸ್ಥಾನದಲ್ಲಿ ದೊಡ್ಡದೊಡ್ಡ ಜಲಾನಯನಗಳನ್ನು ಕೈಗೊಂಡಿದ್ದಾರೆ. ಇನ್ನೂ ಹೆಚ್ಚು ಆಗಬೇಕಾಗಿರುವ ಕೆಲಸಕಾರ್ಯಗಳು ಇವೆ. ಅವಕ್ಕೆ ಹೆಚ್ಚಿನ ಮುಖ್ಯ ಅಗತ್ಯವಾಗಿರುವುದರಿಂದ ಮುಖ್ಯ ಮಂತ್ರಿಗಳು ಹೆಚ್ಚಾಗಿ ಒದಗಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ನಾನು ಹೇಳುತ್ತೇನೆ.

ಇನ್ನು ಜಲಮಂಡಲಿಗಳನ್ನು ಜಾಗ್ರತೆ ಕೈಗೊಳ್ಳದೇ ಇದ್ದ ಪಕ್ಷದಲ್ಲಿ ದೇಶದಲ್ಲಿ ಸರ್ವತೋಮುಖವಾದ ಬೆಳವಣಿಗೆ ಆಗುವುದಿಲ್ಲ. ಮೈಸೂರು ಸಂಸ್ಥಾನದಲ್ಲಿ ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳನ್ನು ತೆಗೆದುಕೊಂಡು ಆಹಾರ ಪದಾರ್ಥಗಳ ಅಭಾವವನ್ನು ನೀಗುವಂತೆ ಮಾಡಬೇಕು. ಆಹಾರ ಪದಾರ್ಥಗಳನ್ನು ಬೇರೆ ದೇಶದವರಿಂದ ತರಿಸದೆ ನಮ್ಮ ಕಾಲಮೇಲೆ ನಿಂತು ಆಹಾರ ಪದಾರ್ಥವನ್ನು ಒದಗಿಸುವಂಥಾ ಸ್ಟೇಜಿಗೆ ಬರಬೇಕು. ಇನ್ನು ಕಾಮಗಾರಿಗಳ ಬಗ್ಗೆ ಹೇಳುವುದಾದರೆ ಅನೇಕ ಎಸ್ಟಿಮೇಟ್ಸ್‌ಗಳು ಹಾಗೆಯೇ ನಿಂತಿವೆ. ಅದಕ್ಕೆ ಒಂದು ಅಭಿಪ್ರಾಯ ಕೊಡುತ್ತೇನೆ. ನನ್ನ ಕ್ಷೇತ್ರದ ವಿಚಾರವನ್ನು ತೆಗೆದುಕೊಳ್ಳುವುದಾದರೆ ಮಾಗಡಿ ತಾಲ್ಲೂಕಿನಲ್ಲಿ ತಾವರೆಕೆರೆ, ಕೆಂಚನಪುರ,

ಬಿಸ್ಕೂರು, ಮಾಯಸಂದ್ರ, ದೊಡ್ಡೇರಿ ಪಿಕಪ್ ಇವುಗಳನ್ನು ಮಾಡಬೇಕೆಂದು ಅನೇಕ ಸಾರಿ ಮನವಿಮಾಡಿಕೊಂಡಿದ್ದೇನೆ. ಇವುಗಳಿಗೆ ಸುಮಾರು 8-10 ಲಕ್ಷ ರೂಪಾಯಿ ಖರ್ಚು ಮಾಡಿದರೆ ಆ ಪ್ರಾಂತದ ಜನರಿಗೆ ಅನುಕೂಲವಾಗುತ್ತದೆ. ಆದುದರಿಂದ ಈ ಕಾಮಗಾರಿಗಳನ್ನು ಕೈಗೊಂಡು ಆ ಪ್ರಾಂತದ ರೈತರಿಗೆ ಹೆಚ್ಚು ಆಹಾರ ಧಾನ್ಯಗಳನ್ನು ಬೆಳೆಯುವುದಕ್ಕೆ ಸರ್ಕಾರದವರು ಸಹಕಾರ ಮಾಡಬೇಕೆಂದು ಹೇಳುತ್ತೇನೆ. ಮಾಗಡಿ ತಾಲ್ಲೂಕಿನಲ್ಲಿ 200 ಮೈನರ್ ಕೆರೆಗಳು, 25 ಮೇಜರ್ ಕೆರೆಗಳು ಇವೆ. 10 ಲಕ್ಷ ರೂಪಾಯಿ ಒಳಪಟ್ಟಂಥ ಮೈನರ್ ಕೆರೆಗಳನ್ನು ತಾಲ್ಲೂಕು ಬೋರ್ಡಿಗೆ ವಹಿಸಿದ್ದೀರಿ. ತಾಲ್ಲೂಕು ಬೋರ್ಡಿಗೆ ಕೊಡತಕ್ಕಂಥ ಹಣ ಸಾಲದು. ಅದರಿಂದ ಅವುಗಳ ಜೀರ್ಣೋದ್ಧಾರದ ಕೆಲಸಗಳು ಸರಿಯಾಗಿ ನಡೆಯುತ್ತಾ ಇಲ್ಲ. ಆದುದರಿಂದ ಹಿಂದೆ ಇದ್ದ ಪದ್ಧತಿಯಂತೆ ಪಿ.ಡಬ್ಲ್ಯು.ಡಿ. ಇಲಾಖೆಗೆ ಸೇರಿಸುವುದು ನ್ಯಾಯವಾಗಿದೆ. ಪಿ.ಡಬ್ಲ್ಯು.ಡಿ. ನಲ್ಲಿರುವಂತೆ ಸಬ್-ಓವರಸೀಯರ್ ಆಗಲಿ, ಇಂಜನೀಯರ್ಸ್ ಆಗಲಿ ತಾಲ್ಲೂಕು ಬೋರ್ಡ್‌ನಲ್ಲಿ ಇಲ್ಲ. ಆ ಪ್ರಾಂತದಲ್ಲಿ 8 ಎಕರೆ, 9 ಎಕರೆ, 10 ಎಕರೆ ಇರುವಂಥ ಜನರಿಗೆ ಈ ಕೆರೆಗಳನ್ನು ಜೀರ್ಣೋದ್ಧಾರ ಮಾಡದೆ ಇರುವುದರಿಂದ ಬಹಳ ಕಷ್ಟವಾಗಿದೆ. ಆದುದರಿಂದ ಹಿಂದೆ ಇದ್ದಂತೆ ಪಿ.ಡಬ್ಲ್ಯು.ಡಿ. ಇಲಾಖೆಗೆ ಒಳಪಡಿಸಿ ಕಾಮಗಾರಿಗಳನ್ನು ಕೈಗೊಳ್ಳಬೇಕೆಂದು ಸರ್ಕಾರಕ್ಕೆ ಮನವಿಮಾಡಿಕೊಳ್ಳುತ್ತೇನೆ. ಎಂದಿನವರೆಗೆ ಈ ನೀರಾವರಿ ಕಾಮಗಾರಿಗಳನ್ನು ಮಾಡುವುದಕ್ಕೆ ಏರ್ಪಾಡು ಮಾಡುವುದಿಲ್ಲವೋ ಅಂದಿನವರೆಗೆ ಈ ಪ್ರಜೆಗಳಿಗೆ ಸುಖ ಮತ್ತು ಸಂತೋಷ ಉಂಟಾಗುವುದಿಲ್ಲ. ಇದೇ ರೀತಿ ಅನೇಕ ಕಾಮಗಾರಿಗಳು ಹಾಗೆಯೇ ಉಳಿದಿವೆ. ಈ ಮೈನರ್ ಕೆರೆಗಳನ್ನು ಪಿ.ಡಬ್ಲ್ಯು.ಡಿ. ಇಲಾಖೆ ಸೇರಿಸಿ, ದೇಶಾದ್ಯಂತ ಮೈನರ್ ಕೆರೆಗಳ ಎಸ್ಟಿಮೇಟನ್ನು ತಯಾರು ಮಾಡಿ ಕಾರ್ಯಗತ ಮಾಡಬೇಕು. ಗ್ರಾಮಾಂತರ ಪ್ರದೇಶದಲ್ಲಿರತಕ್ಕಂಥ ಬಯಲು ಪ್ರದೇಶವಲ್ಲಿ ದೊಡ್ಡ ದೊಡ್ಡ ಜಲಾಶಯಗಳು ಇಲ್ಲದೇ ಇರುವ ಕಡೆಯಲ್ಲಿ ಸಣ್ಣ ಸಣ್ಣ ಜಲಾಶಯಗಳನ್ನಾದರೂ ಮಾಡಿ ನೀರನ್ನು ಒದಗಿಸಬೇಕಾದ್ದು ಅತ್ಯಾವಶ್ಯಕ. ನನ್ನ ಕ್ಷೇತ್ರದಲ್ಲಿ ಹೇಳುವುದಾದರೆ 6 ಹೋಬಳಿಗಳಲ್ಲಿ 2 ಲಕ್ಷ ಜನಸಂಖ್ಯೆ ಇರುವ ಕಡೆ 13 ಸಾವಿರ ಎಕರೆ ತರಿ ಜಮೀನು ಇದೆ. ಆ ಪ್ರದೇಶದಲ್ಲಿ ಇಂತಹ ಕೆಲಸ ಮಾಡದೇ ಇದ್ದುದರಿಂದ ಆ ಪ್ರದೇಶದ ಜನರು ಉತ್ತಮಸ್ಥಿತಿಗೆ ಬರಲು ಕಷ್ಟವಾಗಿದೆ. ಮಾಗಡಿ ತಾಲ್ಲೂಕು ತಿಪ್ಪೇಗೌಡನಹಳ್ಳಿ ಜಲಾಶಯದ ಕಾರ್ಯವನ್ನು 35 ವರ್ಷದಿಂದಲೂ ನೋಡುತ್ತಿದ್ದೇನೆ. ಇಂದಿನವರೆಗೂ ಅಲ್ಲಿ ಪಿಕಪ್‌ಗಳನ್ನು ಮಾಡತಕ್ಕಂಥ ಕಾರ್ಯ ಹಾಗೆಯೇ ನಿಂತಿವೆ. ಏತಕ್ಕೆಂದರೆ ತಿಪ್ಪೇಗೌಡನಹಳ್ಳಿ ಜಲಾಶಯದಿಂದ ಬರತಕ್ಕಂಥ ನೀರನ್ನು ಯೋಜನೆಗಳಿಗೆ ಕೊಟ್ಟರೆ ಅಪಾಯವಾಗುತ್ತದೆ ಎಂದು ಇಲಾಖೆಯವರು ಯಾವ ವಿಧವಾದ ಕಾರ್ಯವನ್ನು ಕೈಗೊಂಡಿಲ್ಲ. ಅದನ್ನು ಕೈಗೊಳ್ಳಬೇಕಾದರೆ ಕಾವೇರಿ ನೀರಿನ ಸರಬರಾಜಿನ ಯೋಜನೆಯನ್ನು ಕೈಗೊಳ್ಳಬೇಕಾಗುತ್ತದೆ. ಆ ಕೆಲಸವೂ ಸಹ 3 ವರ್ಷದಿಂದಲೂ ಹಾಗೆಯೇ ನಿಂತಿರುವುದರಿಂದ ಅನ್ನದ ಅಭಾವ ಮುಂದುವರೆಯುತ್ತಾ ಇದೆ. ಅದನ್ನು ತೆಗೆದುಕೊಂಡಿದ್ದರೆ ತಾಲ್ಲೂಕಿನ ತಿಪ್ಪೇಗೌಡನಹಳ್ಳಿ ಜಲಾನಯನಕ್ಕೂ ನೀರನ್ನು ಒದಗಿಸಿ ಅಲ್ಲಿನ ರೈತರನ್ನು ಮುಂದುವರಿಸುವುದಕ್ಕೆ ಅವಕಾಶವಾಗುತ್ತಿತ್ತು. ಆದುದರಿಂದ ಈ ತಾಲ್ಲೂಕಿನಲ್ಲಿ ಎಸ್ಟಿಮೇಟ್ ಆಗಿ ನಿಂತಿರತಕ್ಕ ಕೆರೆಗಳ ಬಗ್ಗೆ ಇಲಾಖೆಯವರು ಹೆಚ್ಚು ಗಮನಕೊಟ್ಟು ಸಂಬಂಧಪಟ್ಟ ಮಂತ್ರಿಗಳು ತೀವ್ರ ಕ್ರಮ ತೆಗೆದುಕೊಳ್ಳಬೇಕಾದ್ದು ಅಗತ್ಯ ಎಂದು ಹೇಳುತ್ತೇನೆ. ಈ ಪಿಕಪ್‌ಗಳ ಕೆಲಸ ಬಿಸಿಲು ಕಾಲದಲ್ಲಿ ಆಗುವುದಿಲ್ಲ. ಡಿಸೆಂಬರ್‌ನಿಂದ ಮೇ ಅಂತ್ಯದವರೆಗೆ ಕೆಲಸ ಮಾಡಲು ಸಾಧ್ಯ. ಅಲ್ಲಿನವರೆಗೆ ಇಲಾಖೆಯವರು ಹಣವನ್ನು ಒದಗಿಸಿ ಸಂಬಂಧಪಟ್ಟ ಮಂತ್ರಿಗಳು ಆ ಕಾರ್ಯವನ್ನು ನಿರ್ವಹಿಸುವಂತೆ ನೋಡಬೇಕಾದುದು ಅವರ ಕರ್ತವ್ಯ ಎಂದು ಹೇಳುತ್ತೇನೆ. ಮುಖ್ಯವಾಗಿ ಅಸಿಸ್ಟೆಂಟ್ ಇಂಜನಿಯರ್ ಮತ್ತು ಎಕ್ಸಿಕ್ಯೂಟೀವ್ ಇಂಜನೀಯರ್ ಈ ಕೆಲಸಗಳನ್ನು ತೆಗೆದುಕೊಂಡು ಮುಗಿಸುವಂತೆ ಅಪ್ಪಣೆ ಮಾಡಬೇಕು. ಉದಾಹರಣೆಗೆ ಹೇಳುವುದಾದರೆ ಶ್ರೀಮಾನ್ ಚನ್ನಬಸಪ್ಪನವರ ಕಾಲದಲ್ಲಿ ಕೆಲವು ರಸ್ತೆಗಳನ್ನು ಮಾಡಿದರು. ಸರ್ಕಾರಕ್ಕೆ ಸುಮಾರು 8 ಕೋಟಿ ರೂಪಾಯಿಗಳಷ್ಟು ಖರ್ಚು ಆಯಿತು. ಇವೊತ್ತು ಹೋಗಿ ನೋಡಿದರೆ ಅವೆಲ್ಲಾ ಪಾಳಾಗಿ ಬಿದ್ದಿವೆ. ಆದುದರಿಂದ ಅವರುಗಳು ಹೆಚ್ಚಿನ ಗಮನ ಕೊಡಬೇಕು. ಯಾವಾಗಲೂ ಸರ್ಕಾರದವರು ಒಂದು ಸಂಪ್ರದಾಯವನ್ನು ಅನುಸರಿಸಿ ಕೆರೆಗಳ ರಿಪೇರಿ ಮಾಡುವುದು, ಪಿಕಅಪ್‌ಗಳನ್ನು ಮಾಡಿಸುವುದು, ರಸ್ತೆಗಳನ್ನು ದುರಸ್ತು ಮಾಡಿಸುವುದು ಇವುಗಳ ಕಡೆ ಸರ್ಕಾರದವರು ಹೆಚ್ಚಿನ ಗಮನ ಕೊಡಬೇಕು ಎಂದು ಹೇಳುತ್ತೇನೆ. ಸರ್ಕಾರದವರು ದೊಡ್ಡ ಮನಸ್ಸು ಮಾಡಿ ಅನೇಕ ರಸ್ತೆಗಳನ್ನು ಉತ್ತಮ ರಸ್ತೆಗಳನ್ನಾಗಿ ಮಾಡಿದ್ದಾರೆ. ಬೆಂಗಳೂರಿನಿಂದ ಬೆಳಗಾಂಗೆ ಹೋಗಬೇಕಾದ ಭಾಗದಲ್ಲಿ ಲಾರಿಗಳ ಸಂಚಾರ ಹೆಚ್ಚಿದೆ. ಹೀಗೆ ಲಾರಿ, ಕಾರು, ಟ್ಯಾಕ್ಸಿಗಳ ಸಂಚಾರ ಹೆಚ್ಚಿರುವುದರಿಂದ ದಿನವಹಿ ಆಕ್ಸಿಡೆಂಟ್ ಆಗಿ ಸಾಯುವ ಪ್ರಸಂಗ ವರದಿ ಸರ್ಕಾರಕ್ಕೆ ಬರುತ್ತಾ ಇದೆ. ಇದಕ್ಕೆ ಕಾರಣ ಪ್ರಾಯಶಃ ಪ್ರಯಾಣ ಮಾಡುವವರ ಸಂಖ್ಯೆ ಜಾಸ್ತಿ ಮತ್ತು ಎಲ್ಲ ಸಾಮಾನುಗಳೂ ಲಾರಿಗಳ ಮೂಲಕವೇ ಹೋಗಬೇಕಾಗಿರುವುದು. ಲಾರಿಗಳವರು

(ಶ್ರೀ ಸೋಲೂರು ಸಿದ್ದಪ್ಪ)

ಬೆಂಗಳೂರಿನಿಂದ ಬೆಳಗಾಂಗೆ ಹೋಗಬೇಕಾಗಿದ್ದರೆ ಯಾರಿಗೂ ದಾರಿ ಒಡದೆ ಮಧ್ಯೆ ರಸ್ತೆಯಲ್ಲಿ ಹೋಗುತ್ತಿರುತ್ತಾರೆ. ಆದ್ದರಿಂದ ಬೆಂಗಳೂರು-ಬೆಳಗಾಂ ರಸ್ತೆಯನ್ನು ಡಬಲ್ ರೋಡ್ ಮಾಡಬೇಕು. ಅದೇ ರೀತಿಯಲ್ಲಿ ಬೆಂಗಳೂರು-ಮಂಗಳೂರು ಮಾರ್ಗವನ್ನೂ ಡಬಲ್ ರೋಡ್ ಮಾಡಬೇಕು. ಹೀಗೆ ಮಾಡಿ ಜನಗಳಿಗೆ ಇರುವ ಪ್ರಾಣಾಪಾಯವನ್ನು ತಪ್ಪಿಸಿ ವಾಹನಗಳ ಓಡಾಟಕ್ಕೂ ಅನುಕೂಲ ಮಾಡಬೇಕು.

ಶರಾವತಿಯಿಂದ ವಿದ್ಯುಚ್ಛಕ್ತಿ ಉತ್ಪಾದನೆ ಜಾಸ್ತಿಯಾಗುತ್ತಿದ್ದು ಆದರಿಂದ ದೇಶಕ್ಕೆ ತುಂಬ ಅನುಕೂಲವಾಗಿದೆ. ಆದರೆ ಇಲಾಖೆಯಲ್ಲಿ ವಿದ್ಯುತ್ತನ್ನು ಒದಗಿಸಲು ಬೇಕಾದ ಕಂಬ, ತಂತಿ ಮುಂತಾದ ಸಾಮಾನುಗಳಿಲ್ಲದೆ ಜನಗಳಿಗೆ ತೊಂದರೆಯಾಗಿದೆ. ಯಾವ ಕೆಲಸವನ್ನೂ ಅವರು ಕಾರ್ಯಗತ ಮಾಡುತ್ತಿಲ್ಲ. ಇದರ ಬಗ್ಗೆ ಸರ್ಕಾರದವರು ಗಮನ ಕೊಡಬೇಕೆಂದೂ ಜಾಗ್ರತೆ ಕೆಲಸಗಳನ್ನು ಮಾಡಿಸಿಕೊಡಬೇಕೆಂದೂ ಕೇಳಿಕೊಳ್ಳುತ್ತೇನೆ. ಮದ್ರಾಸ್ ವಗೈರೆ ರಾಷ್ಟ್ರಗಳಿಗೆ ನಮ್ಮ ರಾಜ್ಯದಿಂದ ವಿದ್ಯುತ್ತನ್ನು ಕೊಡುತ್ತಿದ್ದಾರೆ. ಅದರಿಂದ ನಮಗೆ ಸ್ವಲ್ಪ ಹಣವೂ ಬರುತ್ತಿದೆ. ಅವರಿಗೆ ನಾವು ಪುಕ್ಕಟೆಯಾಗಿ ಕೊಡುತ್ತಿಲ್ಲ. ಆದರೂ ನಾವು ವಿದ್ಯುಚ್ಛಕ್ತಿಯ ಪ್ರಯೋಜನವನ್ನು ಹೆಚ್ಚಿನ ಮಟ್ಟದಲ್ಲಿ ಹೊಂದುವುದಕ್ಕೆ ಸರ್ಕಾರದವರು ಸಂಬಂಧಪಟ್ಟ ಇಲಾಖೆಯವರಿಗೆ ಒದಗಿಸಬೇಕಾದ ಕಂಬ, ತಂತಿ ಮುಂತಾದ ಸಾಮಾನುಗಳನ್ನು ಒದಗಿಸಿ ತನ್ಮೂಲಕ ರೈತರು ಹೆಚ್ಚು ಧಾನ್ಯ ಬೆಳೆದು ಪ್ರಗತಿ ಹೊಂದುವಂತೆ ಮಾಡಬೇಕೆಂದು ಹೇಳುತ್ತೇನೆ.

ಎಲ್ಲೆಲ್ಲಿ ಸರ್ಕಾರದವರು ದೊಡ್ಡ ದೊಡ್ಡ ಜಲಾಶಯಗಳನ್ನು ನಿರ್ಮಾಣ ಮಾಡಿದ್ದಾರೆ ಅಲ್ಲಿ ನೀರಗಂಟಿಗಳನ್ನು ಸರ್ಕಾರದವರೇ ನೇಮಕ ಮಾಡಬೇಕು. ಇಲ್ಲದೆ ಇದ್ದರೆ ನೀರು ಬಳಕೆಯಲ್ಲಿ ಅನ್ಯಾಯವಾಗತಕ್ಕ ಸಂದರ್ಭವಿದೆ. ಹಿಂದೆ ರೈತರು ನೀರಗಂಟಿಗಳಿಗೆ ಧಾನ್ಯ ಕೊಡುತ್ತಿದ್ದರು. ಈಗ ಆ ಪದ್ಧತಿ ಹೋಗಿರುವುದರಿಂದ ನೀರು ಪೋಲಾಗುವುದನ್ನು ತಪ್ಪಿಸಲು ದೊಡ್ಡ ದೊಡ್ಡ ಜಲಾಶಯಗಳಿಗೆ ನೀರಗಂಟಿಗಳನ್ನು ನೇಮಕ ಮಾಡಿ ಬೇಸಿಗೆಕಾಲದಲ್ಲಿ, ಮಳೆಗಾಲದಲ್ಲಿ ನೀರು ಕೊರತೆಯಾಗದಂತೆ ಬಿಡಲು ಅನುಕೂಲ ಮಾಡಿಕೊಡಬೇಕು. ಈ ವಿಷಯವನ್ನು ನಾನು ಅನೇಕ ಸಲ ಹೇಳಿದ್ದರೂ ಇನ್ನೂ ಕಾರ್ಯಗತವಾಗಿಲ್ಲ. ಅದನ್ನು ಮಾಡಿಸಿಕೊಡಬೇಕು.

ಎಲ್ಲೆಲ್ಲಿ ಸರ್ಕಾರ ರಸ್ತೆಗಳನ್ನು ತನ್ನ ವಶಕ್ಕೆ ತೆಗೆದುಕೊಂಡಿದೆಯೋ ಆ ರಸ್ತೆಗಳನ್ನು ಉತ್ತಮಪಡಿಸುವುದಲ್ಲದೆ ಅಲ್ಲಲ್ಲಿ ಹೋಗಿರತಕ್ಕ ಸೇತುವೆಗಳನ್ನೂ ಉತ್ತಮಪಡಿಸಿ ಸಂಚಾರಕ್ಕೆ ಯೋಗ್ಯವಾಗಿರುವಂತೆ ಮಾಡಿಕೊಡಬೇಕು. ಬೆಂಗಳೂರು—ತುಮಕೂರು ರಸ್ತೆಯಲ್ಲಿ ದೊಡ್ಡೇರಿ ಬಳಿ ಒಂದು ಸೇತುವೆಯು ಬಹಳ ಅಪಾಯಕ್ಕೆ ಈಡಾಗಿದೆ. ಇಂಥವು ಸಂಸ್ಥಾನದಲ್ಲಿ ಅನೇಕ ಕಡೆ ಇರುತ್ತದೆ. ಸರ್ಕಾರದವರು ಹೊಸ ಕೆಲಸಗಳನ್ನು ತೆಗೆದುಕೊಳ್ಳತಕ್ಕ ಉದ್ದೇಶವಿದ್ದರೂ ಉಳಿದಿರತಕ್ಕ ಕೆಲಸಗಳನ್ನು ಪೂರೈಸುವುದಕ್ಕೆ ಪ್ರಯತ್ನ ಮಾಡಬೇಕು.

ನೀರಾವರಿ ವಿಚಾರದಲ್ಲಿ ಸರ್ಕಾರದವರು ತುಂಬ ಮಾನ್ಯತೆಯನ್ನು ಪಡೆದಿದ್ದಾರೆ. ಕೇಂದ್ರದ ನೀರಾವರಿ ಮಂತ್ರಿಗಳು ಹಿಂದೆ ಬಂದಿದ್ದಾಗ ಎರಡು ತಿಂಗಳಿನಲ್ಲಿ ಮಂಚನಬೆಲೆ ಯೋಜನೆಯನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದರು. ತಹಲ್‌ವರೆಗೂ ಅವರು ಹೇಳಿದ್ದನ್ನು ನೆರವೇರಿಸಿಲ್ಲ, ಅದರ ಬಗ್ಗೆ ಆಸಕ್ತಿಯನ್ನು ತೋರಿಸಿಲ್ಲ. ಎಲ್ಲಿಯವರೆಗೆ ನಮ್ಮ ರಾಜ್ಯದಲ್ಲಿ ನೀರಾವರಿ ಕಾಮಗಾರಿಗಳು ಉಪಯುಕ್ತವಾಗಿ ಅಗಿ ದೊಡ್ಡ ಜಲಾಶಯಗಳಾಗಲೀ, ಸಣ್ಣ ಜಲಾಶಯಗಳಾಗಲೀ ಆಗುವುದಿಲ್ಲವೋ ಅಲ್ಲಿಯವರೆಗೆ ನಾವು ಆಹಾರಕ್ಕೆ ಬೇರೆಯವರನ್ನು ಅವಲಂಬಿಸಿಕೊಂಡಿರುವುದು ತಪ್ಪುವುದಿಲ್ಲ. ಸರ್ಕಾರದವರು ಎಷ್ಟು ಹಣವನ್ನು ಸಾಲ ಮಾಡಿದರೂ ಚಿಂತೆ ಇಲ್ಲ, ನೀರಾವರಿ ಯೋಜನೆಗಳನ್ನು ಮಾಡಿಕೊಡಬೇಕೆಂದು ಹೇಳುತ್ತೇನೆ.

ರಾಜ್ಯದಲ್ಲಿ ನಾಲ್ಕು ಸಾವಿರಕ್ಕಿಂತ ಹೆಚ್ಚು ಸಿವಿಲ್ ಇಂಜನಿಯರಿಂಗ್ ಡಿಪ್ಲೋಮಾ ಪಡೆದಿರುವವರು ನೌಕರಿ ಇಲ್ಲದೆ ಪರಿತಪಿಸುತ್ತಿದ್ದಾರೆ. ಇನ್ನು ಮೇಲಾದರೂ ಕೆಲವು ಕಾಲ ಇದಕ್ಕೆ ಸಂಬಂಧಪಟ್ಟ ಶಿಕ್ಷಣ ಕೊಡುವುದನ್ನು ನಿಲ್ಲಿಸಿ, ಉದ್ಯೋಗವಿಲ್ಲದೆ ಇರುವವರಿಗೆ ಬೇರೆ ಇಲಾಖೆಗಳಲ್ಲಿ ಯಾದರೂ ಕೆಲಸವನ್ನು ಕೊಟ್ಟು ಅವರ ನಿರುದ್ಯೋಗವನ್ನು ತಪ್ಪಿಸಬೇಕು.

ನೀರಾವರಿ ಯೋಜನೆಗಳ ವಿಷಯದಲ್ಲಿ ಆಸಕ್ತಿಯನ್ನು ವಹಿಸಿರುವ ನಮ್ಮ ಮುಖ್ಯ ಮಂತ್ರಿಗಳಿಗೆ ಇನ್ನೂ ಹೆಚ್ಚು ಆಸಕ್ತಿ ಬಂದು ದೇಶದ ಪ್ರಗತಿಯನ್ನು ಈಗ ಹೆಚ್ಚಿಸಿರುವುದರ ಜೊತೆಗೆ ಮತ್ತೂ ಹೆಚ್ಚಿಸಿ ದೇಶದ ಕಲ್ಯಾಣವನ್ನು ಮಾಡಿಕೊಡಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಚ್. ಎನ್. ನಂಜೇಗೌಡ (ಅರಕಲಗೂಡು).—ಮಾನ್ಯ ಸಭಾಧ್ಯಕ್ಷರೇ, ಒಂದು ಸೂಚನೆಯನ್ನು ಕೂಡ ನಾನು ಬೆಳಿಗ್ಗೆ ಈ ಸಭೆಯ ಮುಂದೆ ಇಟ್ಟೆ. ಈ ಮಾನ್ಯ ಸಭೆಯಲ್ಲಿ ಹೆಚ್ಚಿನ ಸದಸ್ಯರು ಅದರ ಕಡೆ ಗಮನ ಹರಿಸಿದಂತೆ ಕಾಣಲಿಲ್ಲ. ಕೃಷ್ಣ ಬೇಸಿನ್‌ನಲ್ಲಿನ ನೀರಾವರಿ ಅಭಿವೃದ್ಧಿಯಾಗುವುದಕ್ಕೆ 20 ಕೋಟಿ ರೂಪಾಯಿ ಮತ್ತು ಕಾವೇರಿ ಬೇಸಿನ್‌ನಲ್ಲಿನ ನೀರಾವರಿ ಅಭಿವೃದ್ಧಿಗೆ 10 ಕೋಟಿ ರೂಪಾಯಿ ಒಟ್ಟು 30 ಕೋಟಿ ರೂಪಾಯಿಗಳನ್ನು ತೆಗೆದಿಡಬೇಕು ಎನ್ನುವ ಸೂಚನೆ ಬಗ್ಗೆ ಯಾರೂ ಆಸ್ಥೆ ವಹಿಸಿದ ಹಾಗೆ ಕಾಣಲಿಲ್ಲ. ಮಾನ್ಯ ಗುರೆಡ್ಡಿಯವರಿಗೆ ಅದರ ಬಗ್ಗೆ ಹೇಳಲು ಏನೋ ಭಯವಿರಬಹುದು. 1972ನೇ ಇಸವಿ ಆದಮೇಲೆ ನಾವು ಪುನಃ ಜನತೆಯ ಬಳಿಗೆ ಹೋಗಬೇಕಾಗಿದೆ. ನಾವು ಈಗ ಸುಮ್ಮನೆ ಕುಳಿತುಕೊಂಡರೆ ದೇಶ ಉಳಿಯುವುದಿಲ್ಲ. ರಾಜ್ಯದ ತಲೆ ಹಾರಿ ಹೋಗಲಿ ಎನ್ನುವ ಮನೋಭಾವವನ್ನು ಬೆಳೆಸಿಕೊಳ್ಳುವುದಂತೂ ನನಗಂತೂ ಬಹಳ ಕಷ್ಟ. ಬೇರೆಯವರು ಮಾಡಬಹುದೋ ಏನೋ. ನಾವು ಮೊದಲಿನಿಂದಲೂ ಹಳೇ ಮೈಸೂರು, ಹೊಸ ಮೈಸೂರು, ಎಂದಾಗಲೀ ಕಾವೇರಿ ಬೇಸಿನ್‌ನಲ್ಲಿ ಕೆಲಸಗಳನ್ನು ಮಾಡಿಕೊಂಡು ಕೃಷ್ಣ ಬೇಸಿನ್ ಕೈಬಿಡಬೇಕು ಎಂದು ಹೇಳಿಲ್ಲ. ನಮಗೆ ಎಲ್ಲದರಲ್ಲಿಯೂ ಆಸ್ಥೆ ಇದೆ. ಕೆಲವರು ನಮ್ಮ ಸ್ನೇಹಿತರು ಕೃಷ್ಣ ಬೇಸಿನ್ ವಿಚಾರದಲ್ಲಿ ಎಷ್ಟೊಂದು ಆಸಕ್ತಿಯನ್ನು ತೋರಿಸುತ್ತಾರೆಯೋ ಅಷ್ಟೊಂದು ಆಸಕ್ತಿಯನ್ನು ಕಾವೇರಿ ಬೇಸಿನ್ ಬಗ್ಗೆ ತೋರಿಸದೇ ಇರುವುದನ್ನು ಅರ್ಥ ಮಾಡಿಕೊಂಡಿದ್ದೇನೆ. ಇಷ್ಟೆಲ್ಲ ಅರ್ಥ ಮಾಡಿಕೊಂಡಿದ್ದರೂ ಕೂಡ ಈ ರಾಜ್ಯ ಮಣ್ಣುಪಾಲಾಗುತ್ತದೆ, ರಾಜ್ಯದ ಜನತೆಯ ಮೇಲೆ ಚಪ್ಪಡಿ ಎಳೆಯುತ್ತಾರೆ ಎನ್ನುವ ಒಂದೇ ಒಂದು ದೃಷ್ಟಿಯಿಂದ ಇದನ್ನು ಅಗತ್ಯವಾಗಿ ಪರಿಶೀಲಿಸುವುದಕ್ಕೆ ಹೊರಟಿದ್ದೇನೆ. ಅದನ್ನು ನಾವು ಕೈ ಬಿಟ್ಟಿದ್ದೇವೆ ಎಂದು ಬೇರೆಯವರು ಸಂಕುಚಿತ ಮನೋಭಾವವನ್ನು ಹೊಂದಬಹುದು. ಅದರೆ ನಾವು ಮಾತ್ರ ವಿಶಾಲ ಭಾವನೆಯನ್ನು ಹೊಂದಿರುತ್ತೇವೆ.

ಮಾನ್ಯ ಅಧ್ಯಕ್ಷರೇ, ನಾನು ಒಂದು ಸೂಚನೆ ಕೊಟ್ಟಿದ್ದು ಇದೇ ಉದ್ದೇಶದಿಂದ. ನಿನ್ನೆ ಮಂತ್ರಿಗಳು ಹೇಳುತ್ತಿದ್ದುದು ನಿಜ, 32 ಕೋಟಿ ರೂಪಾಯಿ ಕೊಡಲು ಸಭೆ ಒಪ್ಪಿದರೆ ಆಗಬಹುದು ಎಂದು ಅವರು ಛಾಲೆಂಜ್ ಮಾಡಿದರು. ನಾನು ಒಂದು ವಿಚಾರ ಕೇಳುತ್ತೇನೆ. ಈ ದಿವಸ ರಾಜ್ಯದ ರೆವೆನ್ಯೂ ಅಕೌಂಟಿನಲ್ಲಿ 170 ಕೋಟಿ ರೂಪಾಯಿ ಆದಾಯ ಮಾತ್ರ ಇದ್ದರೆ ಆಗೇನು ಮಾಡುತ್ತಿದ್ದಿರಿ ? ಈ ರಾಜ್ಯದ ಹಿತವನ್ನು ಬದಿಗೊತ್ತುತ್ತಿರಲಿಲ್ಲ. ಮಾಡಲು ಮನಸ್ಸಿದ್ದರೆ 170 ಕೋಟಿ ಆದಾಯವಿದ್ದರೇನು ಮಾಡುತ್ತಿದ್ದಿರೋ ಅದನ್ನು ಈಗಲೂ ಮಾಡಬಹುದು. ಮನಸ್ಸಿದ್ದರೆ ಮಾರ್ಗವಿದೆ. ಮುಖ್ಯ ಮಂತ್ರಿಗಳಿಗೆ ಎಲ್ಲಿ ತಮ್ಮ ಸ್ಥಾನಕ್ಕೆ ಚ್ಯುತಿ ಬರುವುದೋ ಎಂಬ ಭಯವಿದೆ, ಅವರಿಗೆ ತಮ್ಮ ಪಕ್ಷದ ಬೆಂಬಲ ಮುಖ್ಯವಾಗಿ ಬೇಕಾಗಿದೆ. ತಮ್ಮ ಹಿತ ರಾಜ್ಯದ ಹಿತಕ್ಕಿಂತ ಹೆಚ್ಚು ಎಂದು ಅವರಿಗೆ ಬೇಕಾದವರೆಲ್ಲರನ್ನೂ ತೃಪ್ತಿಪಡಿಸುತ್ತಿದ್ದಾರೆ ಎಂದು ಹೇಳಬಹುದು. ಎಲ್ಲಾ ಲೆಕ್ಕ ಹಾಕಿದರೆ ನೂರಾರು ಕೋಟಿಯಾಗುವುದು. ಇದಿಲ್ಲದೆ ಅನೇಕ ದಿವಸಗಳಿಂದ ಜನರು ಬದುಕಿದ್ದಾರೆ. ಹಣವಿಲ್ಲ ಎಂದು ಹೇಳುವುದುಂಟು, ಅದು ಅರ್ಥವಾಗುತ್ತದೆ. ಹಣವಿಲ್ಲದೆ ಹೇಗೆ ಆಡಳಿತ ನಡೆಸುತ್ತಾರೆ ? ಅನ್ನವಿಲ್ಲದಿರುವವರಿಗೆ ಅದನ್ನು ಕೊಡುವುದು ಸಮಾಜದ ಧರ್ಮ. ಅದನ್ನು ಬಿಟ್ಟು ತೃಪ್ತರಾಗಿರುವವರಿಗೆ, ಕಾಲಮೇಲೆ ಕಾಲು ಹಾಕಿಕೊಂಡು ಷೋಕಿ ಮಾಡುವವರಿಗೆ, ಇಸ್ಪೀಟು ಆಡಿಕೊಂಡಿರುವವರಿಗೆ ಏನು ಮಾಡಿದರೂ ಪರವಾಗಿಲ್ಲ ಎಂದು ಹೇಳುವಾಗ ರಾಜ್ಯ ತೃಪ್ತಿಯಿಂದಿದೆ ಎಂದು ಹೇಗೆ ಹೇಳಬೇಕು ? ಖಾಸಗಿಯವರು, ಶ್ರೀಮಂತರು ಮುಂದೆ ಬಂದು ಹಾರಂಗಿ ಪ್ರಾಜೆಕ್ಟಿನ ಕೆಲಸ ಮಾಡಬೇಕೆಂದರೆ ಅವರು ಮಾಡುವರೇ ? ಅವರು ಆ ಕೆಲಸ ಮಾಡುವುದಿಲ್ಲ. ಇದೊಂದು ತಪ್ಪು ಅಭಿಪ್ರಾಯವಲ್ಲವೇ ? ಸರಕಾರದವರು ಹಣ ಎಲ್ಲಿಂದ ತಂದು ಸುರಿಯಲು ಸಾಧ್ಯ, ಅವಶ್ಯಕವಾದ ಬಾಬುಗಳಿಗೇ ಹಣವಿಲ್ಲ ಎಂದು ಹೇಳುವುದುಂಟು. ಹಾಗೆ ಹೇಳುವಾಗ ಎಂ.ಎಸ್.ಆರ್.ಟಿ.ಸಿ.ಗೆ 20 ಕೋಟಿ ಕೊಡುವುದು, ಅಕ್ಕಿ ವ್ಯಾಪಾರ ಮಾಡುವುದು, ಇದೆಲ್ಲಾ ಸರಿಯೇ ? ಅವಶ್ಯಕ ಇರುವುದನ್ನು ಮಾಡುವುದಿಲ್ಲ, ಬಾಗಲಕೋಟೆ ಖಾಸಗಿ ಜನರಿಗೆ ವಿದ್ಯುಚ್ಛಕ್ತಿಯನ್ನು ಸರಬರಾಯಿ ಮಾಡಿ ಲಾಭ ಮಾಡಿಕೊಳ್ಳಿ ಎಂದು ಹೇಳುತ್ತೀರಿ. ಹಣ ಎಲ್ಲಿ ತೊಡಗಿಸಬೇಕು ಎಂಬುದನ್ನು ವಿವೇಚಿಸಿ ತೊಡಗಿಸುತ್ತಿಲ್ಲ. ಪಾರ್ಟಿ ಬೇಸಿಸ್ ಮೇಲೆ ಕೊಡುವುದು, ತಮಗೆ ಬೇಕಾದವರನ್ನು ತೃಪ್ತಿಪಡಿಸುವುದಕ್ಕೆ ಕೊಡುವುದು ಇದೆಲ್ಲಾ ನೋಡಿದರೆ ಸರಿಯಾದ ತೀರ್ಮಾನಕ್ಕೆ ಬರಲು ಶಕ್ತಿಯಿಲ್ಲ ಎಂದು ನಿರ್ಣಯ ಮಾಡಬೇಕಾಗಿದೆ, ಇದು ನನ್ನ ಅನುಭವ. ಈ ಸರಕಾರಕ್ಕೆ ಒಂದು ನಿರ್ದಿಷ್ಟವಾದ ತೀರ್ಮಾನ ಮಾಡುವುದಕ್ಕೆ ಕೆಪ್ಯಾಸಿಟಿ ಇಲ್ಲ.

Sri S. V. AGNIHOTRI (Dharwar-Rural).—It is a matter of opinion.

Sri H. N. NANJE GOWDA.—It is a fact. It is already proved. Why do you dispute? ಅವರಿಗೆ ಗೊತ್ತಿಲ್ಲ, ಹೇಳುತ್ತೇನೆ. ಕೃಷ್ಣ ನದಿ ನೀರಿನ ವಿಷಯದಲ್ಲಿ ಶ್ರೀ ಕೆ. ಎಲ್. ರಾವ್ ರವರು ನಾಟಕವಾಡುತ್ತಿದ್ದಾರೆ, ಅವರನ್ನು ಬಾಯಿತುಂಬ ಬಯ್ಯಬೇಕು, ಅವರನ್ನು ನೆನೆಸಿಕೊಂಡರೆ ರಕ್ತ ಕುದಿಯುವುದು. ಅವರು ಆಂಧ್ರದ ಮುಖ್ಯ ಮಂತ್ರಿಗಳಾದ ಶ್ರೀ ಬ್ರಹ್ಮಾನಂದರೆಡ್ಡಿಯವರು ದತ್ತುಪುತ್ರರು ಅನ್ನುವಹಾಗೆ ಕೇಂದ್ರ ಸರಕಾರದಲ್ಲಿ ತೀರ್ಮಾನ ಮಾಡುತ್ತಿದ್ದಾರೆ. ಇದು ಅರ್ಥವಾಗಿದೆ. ತೀರ್ಮಾನ ಸರಿಯಾಗಿ ತೆಗೆದುಕೊಳ್ಳುವ ಚೈತನ್ಯ, ದಿಟ್ಟತನ ಇದ್ದರೆ ಅವರಿಗೆ ಹೇಳಬಹುದಾಗಿತ್ತು. ಎಷ್ಟೋ ಸಾರಿ ಕೇಂದ್ರ ಸರಕಾರದಲ್ಲಿ ಪೋರ್ಟ್‌ಫೋಲಿಯಗಳ ರೀಷಫಲ್ ಆಗಿದೆ. I ask my dear friend Sri Agnihotri: Why did the Chief Minister not tell the Prime Minister to change him? Dr. Rao has throughout proved to be a party siding Andhra; he is going against the interests of the Mysore State. Why did not this Government pursue and get his portfolio changed? ಶ್ರೀ ಕೆ. ಎಲ್. ರಾವ್ ರವರಿಗೆ ಬೇರೆ ಖಾತೆ ಕೊಡಬಹುದಾಗಿತ್ತು.

Sri S. V. AGNIHOTRI.—Our Chief Minister is not a small man to interfere in the Central administration.

Sri C. M. CHURCHIHALMATH.—He is not so small as to interfere with the rights of the Prime Minister.

Sri H.N. NANJE GOWDA.—But he is selling away the rights of the people of the Mysore State. ಪೂರ್ಣವಾಗಿ ಅರ್ಥಮಾಡಿಕೊಂಡರೋ ಇಲ್ಲವೋ ಗೊತ್ತಿಲ್ಲ. ಶ್ರೀ ಕೆ. ಎಲ್. ರಾವ್ ರವರು 51ನೆಯ ಇಸವಿಯ ವಿಚಾರ ಹೇಳುತ್ತಿದ್ದಾರೆ, 56ರಲ್ಲಿ ಬೌಂಡರಿ ವಿಷಯದಲ್ಲಿ ತೀರ್ಮಾನವಾಗಿದೆ, ಅದರಮೇಲೆ ಗುಲ್ಹಾಟಿ ಕಮಿಷನ್ ಆಯಿತು, ಅವರು ಕೇಂದ್ರ ಸರಕಾರಕ್ಕೆ ಬುದ್ಧಿವಾದ ಹೇಳಿದರು, ನಂತರ ಮಾಜಿ ನೀರಾವರಿ ಸಚಿವರು ಪಾರ್ಲಿಮೆಂಟಿನಲ್ಲಿ ನಾಗಾರ್ಜುನ ಸಾಗರದ ಸೆಕೆಂಡ್ ಸ್ಟೇಜನ್ನು ಗೋದಾವರಿ ನೀರನ್ನು ಕೃಷ್ಣಾಕ್ಕೆ ಡೈವರ್ಟ್ ಮಾಡಿದ ಮೇಲೆ ತೆಗೆದುಕೊಳ್ಳಬೇಕು ಎಂದು ಹೇಳಿದರು. The statement made by the Union Minister in 1963 amounts to executive direction to the State under the Constitution. If the Centre has the authority to give executive direction, under the same law you could plead for the dismissal of the Andhra Government. Who advises the Prime Minister in this? It is the Union Irrigation Minister. ಶ್ರೀ ಬ್ರಹ್ಮಾನಂದರೆಡ್ಡಿಯವರ ದತ್ತುಪುತ್ರರು ಕೇಂದ್ರದಲ್ಲಿರುವುದು ಆಂಧ್ರದವರನ್ನು ಬದುಕಿಸುವುದಕ್ಕೆ, ಬೇರೆಯವರನ್ನು ಸಾಯಿಸುವುದಕ್ಕೆ. ನೀವೇನು ಮಾಡುತ್ತಿದ್ದೀರಿ? ಏಕೆ ಅರ್ಥಮಾಡಿಕೊಂಡಿಲ್ಲ? You could have told the Union Government. You could have warned them. You could have given an ultimatum to them. If you take some decision, we can give them an ultimatum. ಶ್ರೀ ಕೆ. ಎಲ್. ರಾವ್ ರವರು ನೀರಾವರಿ ಸಚಿವರಾಗಿರುವವರೆಗೆ ಈ ವಿಷಯದಲ್ಲಿ ಕೇಂದ್ರ ಸರಕಾರ ಯಾವ ಸೂಚನೆಗಳಿಗೂ ಮನ್ನಣೆ ಕೊಡುವುದಿಲ್ಲ. ಅವರ ಕೃಪಾಕಟಾಕ್ಷಕ್ಕೆ ನಾವು ಕಾಯಬೇಕಾಗಿದೆ. ರಾಜ್ಯದ ಹಿತದೃಷ್ಟಿಯಿಂದ ನಮ್ಮ ಮುಖ್ಯ ಮಂತ್ರಿಗಳು ಸರಿಯಾದ ತೀರ್ಮಾನ ಮಾಡುವವರೆಗೆ ಶ್ರೀ ಕೆ. ಎಲ್. ರಾವ್ ರವರಿಗೆ ಬೇರೆ ಖಾತೆ ಕೊಡಬೇಕೆಂದು ಹೇಳಿ ಹಾಗೆ ಮಾಡಿಸಲು ಪ್ರಯತ್ನಪಟ್ಟರೆ ನಾವೂ ಅವರಿಗೆ ಸಹಕಾರ ನೀಡುತ್ತೇವೆ.

ಒಬ್ಬ ಮಾನ್ಯ ಸದಸ್ಯರು.—ಆ ಭಯವಿಲ್ಲ.

ಶ್ರೀ ಎಚ್ ಎನ್. ನಂಜೇಗೌಡ.—ಹಾಗಾದರೆ ಏಕೆ ತಕ್ಕ ರೀತಿಯಲ್ಲಿ ತಿಳಿಸಲಿಲ್ಲ? Why don't you compel the Prime Minister to remove that portfolio from Dr. K. L. Rao? ಶ್ರೀ ಕೆ. ಎಲ್. ರಾವ್ ರವರು ಇರುವವರೆಗೆ ಗೋದಾವರಿ ಡೈವರ್ಷನ್ ಸ್ಕೀಂ ಮಾಯವಾಗುತ್ತದೆ. ನಾಗಾರ್ಜುನಸಾಗರ ಸೆಕೆಂಡ್ ಸ್ಟೇಜ್ ಆಯಿತು, ಈ ದೇಶದ ಜನರಮೇಲೆ ಚಪ್ಪಡಿ ಎಳೆಯುವುದಕ್ಕೆ ಅವಕಾಶ ಮಾಡಿದ್ದೀರಿ. ಪಬ್ಲಿಕ್ ವರ್ಕ್ಸ್ ಇಲಾಖೆ ಕೆಲಸ, ಅದರಲ್ಲಿ ಇರಿಗೇಷನ್, ಮುಖ್ಯವಾಗಿ ಮೇಜರ್ ಇರಿಗೇಷನ್, ಈ ವಿಚಾರದಲ್ಲಿ ನಹ ಉತ್ಪ್ರೇಕ್ಷೆ ಮಾಡಿ ಹೇಳಬೇಕೇ? ಖಾಯಮಾಗಿ ಸಂಪತ್ತನ್ನು ವೃದ್ಧಿಮಾಡುವುದು ಮೇಜರ್ ಇರಿಗೇಷನ್. ಅದರಲ್ಲೂ

ವ್ಯವಸಾಯಾಭಿವೃದ್ಧಿ. This depends mainly on irrigation. ಒಂದು ಸೂಚನೆ ಕೊಡುತ್ತೇನೆ, ಸ್ವಿಟ್‌ಜರ್ಲೆಂಡಿನವರು ಬಂದು ಮಾತನಾಡುವಾಗ ನನಗೆ ಅಲ್ಲಿರುವುದಕ್ಕೆ ಅವಕಾಶ ವಿತ್ತು; ಪಿ.ಎಲ್. 480ರ ವಿಚಾರಕ್ಕೆ ಅದು ಸಂಬಂಧಪಟ್ಟಿತ್ತು. 1200 ಕೋಟಿ ಹಣ ಇಂಡಿಯಾದಲ್ಲಿ ಕೊಳೆಯುತ್ತಿದೆ, ಮೆಷಿನರಿ ಬೇಕಾದರೂ ಕೊಡುತ್ತಾರೆ, ಅಭಿವೃದ್ಧಿ ಕಾರ್ಯಗಳಿಗೆ ಕೊಡುವುದೂ ಇದೆ, ಅದನ್ನು ತೆಗೆದುಕೊಳ್ಳುವುದಕ್ಕೆ ಅವಕಾಶವಿದೆ. ಡೆವಲಪ್‌ಮೆಂಟಿಗಾಗಿ ಕೊಡುವುದಕ್ಕೆ, ಸಾಲ ಕೊಡುವುದಕ್ಕೆ ತಯಾರಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಡೆವಲಪ್‌ಮೆಂಟ್ ಕೆಲಸಗಳಿಗೆ ಪಿ.ಎಲ್. 480 ಕೊಟ್ಟಿಲ್ಲ. ಎಜುಕೇಷನ್, ಸಿ.ಐ.ಬಿ.ಗೆ ಕೊಡುತ್ತಾರೆಂದು ನನಗೆ ತಿಳಿದುಬಂದಿದೆ.

Sri S. V. AGNIHOTRI.—It is a disunited front.

Sri H. N. NANJE GOWDA.—That is a fact I am telling. I can convince the hon'ble Member on that matter also. ನಾನು ನಿರ್ದಿಷ್ಟವಾದ ಸೂಚನೆ ಕೊಡುವುದು ಇರಿಗೇಷನ್ ಏನಿದೆ ಅದು ಅಗ್ರಿಕಲ್ಚರಲ್ ಡೆವಲಪ್‌ಮೆಂಟಿಗೆ ಸಹಾಯಮಾಡುವ ಖಾತೆಯಾದ್ದರಿಂದ ಅದನ್ನು ವ್ಯವಸಾಯ ಶಾಖೆಯ ಮಂತ್ರಿಗಳಿಗೆ ಕೊಡಬೇಕು, ವ್ಯವಸಾಯ ಮತ್ತು ಇರಿಗೇಷನ್ ಅಣ್ಣತಮ್ಮಂದಿರಂತೆ ಇವೆ.

ವ್ಯವಸಾಯದ ಮಂತ್ರಿಗಳಿಗೆ ವಹಿಸಿದರೆ ರಾಜ್ಯದ ಕಷ್ಟ ಸುಖ ಏನು ಎಂಬುದನ್ನು ಆಹಾರ ಎಷ್ಟು ಬೆಳೆಯುತ್ತಾ ಇದ್ದಾರೆ ಎಂಬುದನ್ನು ಅರಿತಿರುತ್ತಾರೆ, ಅವರು ಈ ಕೆಲಸವನ್ನು ತೀವ್ರವಾಗಿ ಮಾಡಬಹುದು, ಈ ರೀತಿ ಮಾಡುವುದು ಬಹಳ ಅವಶ್ಯಕ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

5–30 P.M.

ಶ್ರೀ ಕೆ. ಪುಟ್ಟಸ್ವಾಮಿ.—ಫೈನಾನ್ಸ್ ಮಿನಿಸ್ಟರಿಗೆ ಕೊಟ್ಟರೆ ಏಕಾಗಬಾರದು?

ಶ್ರೀ ಎಚ್. ಎನ್. ನಂಜೇಗೌಡ.—ಕೊಡುವುದಾದರೆ ಕೊಡಿ ಸಂತೋಷ.

ಶ್ರೀ ಕೆ. ಪುಟ್ಟಸ್ವಾಮಿ.—ಏಕೆಂದರೆ ದುಡ್ಡು ಕೊಡುವವರು ಅವರು.

ಶ್ರೀ ಎಚ್. ಎನ್. ನಂಜೇಗೌಡ.—ಆ ಸಾಮ್ಯ ಏನು ಬೇಕಾಗಿಲ್ಲ. ಇನ್ನು ಲಾಟ್ರಿಬಗ್ಗೆ ಒಂದು ಮಾತು ಹೇಳಬೇಕಾಗಿದೆ. ಲಾಟ್ರಿ ಇರಬೇಕೇ ಬಿಡಬೇಕೆ ಎಂಬ ಪ್ರಶ್ನೆ ಇವತ್ತು ಚರ್ಚೆ ಮಾಡುವುದಿಲ್ಲ, ಇದು ರಾಷ್ಟ್ರದ ಪ್ರಶ್ನೆ. ಹಣ ಬಂದರೆ ಮಾಡಬೇಡಿ ಎಂದು ಯಾರು ಹೇಳುವುದಿಲ್ಲ. ಬಂಗಾಳ ಸರ್ಕಾರದವರು, ಮಹಾರಾಷ್ಟ್ರ ಸರ್ಕಾರದವರು, ಕೇರಳ ಸರ್ಕಾರದವರು ಈಗಾಗಲೇ ಪ್ರಾರಂಭಮಾಡಿ ಮುಗಿಸುತ್ತಾ ಇದ್ದಾರೆ. ನಮಗೆ ಹಣ ಬೇಕು, ಇದನ್ನು ಪಡೆದುಕೊಳ್ಳಲು ನಮಗೆ ರಸ್ತೆಗಳು ಬೇಡ, ಕಟ್ಟಡಗಳು ಬೇಡ. ಆಂಧ್ರದಲ್ಲಿ ನಾಗಾರ್ಜುನಸಾಗರ ಕಟ್ಟಲು ಅದನ್ನೆಲ್ಲಾ ನಿಲ್ಲಿಸಿದರು, ಅದೇ ರೀತಿ ಮನಸ್ಸಿದ್ದರೆ ಮಾರ್ಗ ಅಂತ ಅನ್ನುವ ರೀತಿಯಲ್ಲಿ ಮನಸ್ಸು ಇದ್ದರೆ ನಾವು ಏನು ಬೇಕಾದರೂ ಮಾಡಬಹುದು ನಿಮ್ಮ ಪಕ್ಷದವರೇ, ಸ್ಕೂಲು ಕೊಡಿ, ಅದು ಕೊಡಿ ಇದು ಕೊಡಿ ಎಂದು ಕೇಳುವವರು, ನಾವು ಯಾವುದೇ ಬೇಕು ಎಂದರೂ ನಮಗೆ ಏನೂ ಸಿಕ್ಕುವುದಿಲ್ಲ, ನಾವು ಅದನ್ನು ಚೆನ್ನಾಗಿ ಅರ್ಥ ಮಾಡಿಕೊಂಡಿದ್ದೇವೆ. ಹಳೇ ಮೈಸೂರಿಗೆ ಅಲೋಕೇಷನ್ ಎಷ್ಟಿದೆ ಹೊಸಮೈಸೂರಿಗೆ ಎಷ್ಟಿದೆ ಎಂಬ ವಿಷಯಕ್ಕೆ ನಾನು ಹೋಗುವುದಿಲ್ಲ ಹೇಗಿದ್ದರೂ ಹಳೇ ಮೈಸೂರಿಗೆ ಕೊಟ್ಟಿರುವುದು ಕಡಿಮೆ. ಅಂತೂ ಎಲ್ಲಾಕಡೆಯಲ್ಲೂ ಈ ತರಹದ ಕೆಲಸಕಾರ್ಯ ಗಳನ್ನು ನಿಲ್ಲಿಸಿ ಸರ್ಕಾರದವರಿಗೆ ಬೇಕಾದ ಹಣವನ್ನು ಕ್ರೋಢೀಕರಿಸಲು ಪ್ರಯತ್ನಮಾಡಿದರೆ 4 ವರ್ಷದಲ್ಲಿ ನಮ್ಮ ಪ್ರಾಜೆಕಟ್ಟುಗಳನ್ನು ಮಾಡಿ ಮುಗಿಸಬಹುದು. ಕೃಷ್ಣಾಕಾವೇರಿ ಪ್ರಾಜೆಕ್ಟುಗಳು ಆಗಬೇಕಾದರೆ ಎಷ್ಟು ಹಣ ಬೇಕೋ ಅದನ್ನು ಬಿಟ್ಟು ಉಳಿದದ್ದನ್ನು ಇತರ ಕಾರ್ಯಗಳಿಗೆ ಹಂಚಿ, ಅದರಿಂದ ಯಾವ ಪ್ರಪಂಚವು ಮುಳುಗಿ ಹೋಗುವುದಿಲ್ಲ. ನಿಮ್ಮ ಕಂಟ್ರಾಕ್ಟರುಗಳು ಏನು ಮಾಡುತ್ತಾರೆ ಎಂಬುದನ್ನು ನೋಡಿದ್ದೇವೆ. ಇನ್‌ಫ್ರಕ್ಚುಯಸ್ ಎಕ್ಸ್‌ಪೆಂಡೀಚರು ಆಗುವುದು ಬೇಡ.

ಕಾಳೀ ನದಿ ಯೋಜನೆ ಬಗ್ಗೆ ಶ್ರೀಮಾನ್ ಗುರಡ್ಡಿಯವರು ಪ್ರಸ್ತಾಪ ಮಾಡಿದರು. ಈ ಯೋಜನೆಯನ್ನು 4ನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸುವುದಕ್ಕೆ ಪ್ರಯತ್ನ ಪಟ್ಟರೆ ಅಭ್ಯಂತರವಿಲ್ಲ. ಆದರೆ ಸ್ಟೇಟ್ ಪ್ಲಾನ್‌ನಲ್ಲಿ ಸೇರಿಸುವುದು ಬೇಡ. ಅದರಿಂದ

(ಶ್ರೀ ಹೆಚ್. ಎನ್. ನಂಜೇಗೌಡ)

ಕೈ ಸುಟ್ಟುಹೋಗುತ್ತದೆ. ಕೈ ಸುಟ್ಟುಕೊಳ್ಳುವುದು ಬೇಡ ಎಂದು ಹೇಳಿ ಅಷ್ಟಕ್ಕೆ ನಿಲ್ಲಿಸುತ್ತೇನೆ.

ನಾನು ಈ ಮಾನ್ಯ ಸಭೆಯ ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಕೃಷ್ಣಾ ಬೇಸಿನ್‌ನಲ್ಲಿ 20 ಕೋಟಿ ರೂಪಾಯಿ, ಕಾವೇರಿ ಬೇಸಿನ್‌ನಲ್ಲಿ 10 ಕೋಟಿ ರೂಪಾಯಿಗಳನ್ನು ಒದಗಿಸಿ ಕೊಳ್ಳುವುದಕ್ಕೆ ಸಾಧ್ಯವಿದೆ. ಸಾಧ್ಯವಿಲ್ಲ ಅಂತ ಅನ್ನುವುದನ್ನು ನಾನು ಒಪ್ಪುವುದಿಲ್ಲ. ಬೇಕಾದಷ್ಟು ಬೋರ್ಡುಗಳನ್ನು ಮಾಡಿದ್ದೀರಿ. ಎಂಥೆಂಥಾದ್ದನ್ನೋ ಸಾಧ್ಯ ಮಾಡಿದ್ದೀರಿ. ಹೌಸಿಂಗ್ ಬೋರ್ಡು ಮಾಡಿದ್ದೀರಿ, ಅವರು ಕಟ್ಟಿರುವ ಮನೆಗಳು ಯಾವ ರೀತಿ ಇವೆ ಎಂಬುದನ್ನು ನೋಡಿದರೆ ಗೊತ್ತಾಗುತ್ತದೆ, ಅವುಗಳು ಬಿದ್ದೇ ಹೋಗುತ್ತಿವೆ. ಎಂ. ಎಸ್. ಆರ್. ಟಿ. ಸಿ. ಮಾಡಿದಿರಿ. ಸೋಲೂರು ಸಿದ್ದಪ್ಪನವರು ಹೇಳುತ್ತಾ ಇದ್ದರು ಅದರಲ್ಲಿ ಆಗುತ್ತಾ ಇರತಕ್ಕ ಆಕ್ಸಿಡೆಂಟ್‌ಗಳ ವೈಖರಿಯನ್ನು. ಪ್ರೈವೇಟ್ ಬಸ್‌ಗಳವರು ಓಡಿಸುತ್ತಾ ಇದ್ದಾಗ ಇಷ್ಟು ಜನ ಸಾಯುತ್ತಾ ಇರಲಿಲ್ಲ. ರಾಷ್ಟ್ರೀಕರಣ ಮಾಡಿದ್ದೀರಿ, ಬಸ್ಸುಗಳನ್ನು ಇಟ್ಟಿದ್ದೀರಿ, ಮಿಲ್‌ಗಳನ್ನು ತೆಗೆದಿದ್ದೀರಿ. ಹಾಗಿರುವಾಗ ನಮ್ಮ ಅನ್ನ ಸಮಸ್ಯೆಯನ್ನು ಬಗೆಹರಿಸಿಕೊಳ್ಳಬೇಕಾದರೆ ಕೃಷ್ಣಾ ಕಾವೇರಿ ಬೇಸಿನ್‌ನಲ್ಲಿ ಇರಿಗೇಷನ್ ಡೆವಲಪ್‌ಮೆಂಟ್ ಆಗಬೇಕು, ಅಲ್ಲಿ ನಮ್ಮ ಹಕ್ಕು ಹೊರಟುಹೋಗುತ್ತಾ ಇರತಕ್ಕ ಕಾಲದಲ್ಲಿ ಕೇಂದ್ರದಲ್ಲಿ ಆಂಧ್ರದ ಏಜೆಂಟರಾಗಿ ಕೆ. ಎಲ್. ರಾವ್‌ರವರು ಕುಳಿತುಕೊಂಡಿರತಕ್ಕ ಕಾಲದಲ್ಲಿ ನಾವು ಕಣ್ಣುಮುಚ್ಚಿಕೊಂಡು ಇರುವುದಾದರೆ ಇದೇ ರೀತಿ ಕಾಯಂ ಆಗಿ ಕುಳಿತೇ ಇರಬೇಕಾಗುತ್ತದೆ ಇದರಿಂದ ನಮ್ಮ ದೇಶಕ್ಕೆ ಅನ್ಯಾಯವಾಗುತ್ತದೆ ಈ ಅನ್ಯಾಯಕ್ಕೆ ನೀವೇ ಹೊಣೆಯಾಗುತ್ತೀರಿ ಎಂಬ ಎಚ್ಚರಿಕೆಯನ್ನು ಕೊಟ್ಟು ನಿಮಗೆ ಹೇಳಬೇಕಾಗಿದೆ.

ಇನ್ನು ಕಾರ್ಪೊರೇಷನ್ ಮಾತು ಶ್ರೀಮಾನ್ ಎಚ್. ಡಿ. ದೇವೇಗೌಡರು ಹೇಳಿದರು, ಕಾರ್ಪೊರೇಷನ್ ಆಗಬೇಕೇ ಬೇಡವೇ ಅಂತ ಅನ್ನುವುದು ಪ್ರಶ್ನೆಯಲ್ಲ, ಆಗುವುದು ಒಳ್ಳೆಯದು. ಆದರೆ ಅಂತಹ ಆಡಳಿತದಲ್ಲಿ ಹಣವನ್ನು ಒದಗಿಸುವುದು ಎಷ್ಟು ಪ್ರಾಮುಖ್ಯವೋ ಇಂಪ್ಲಿಮೆಂಟ್ ಮಾಡುವುದೂ ಕೂಡ ಅಷ್ಟೇ ಪ್ರಾಮುಖ್ಯ ಮಾಮೂಲಾಗಿ ರೂಲ್ಸ್‌ಗಳು ಇರುತ್ತವೆ, ಟೆಂಡರ್ ಕರೆದು ನೋಟೀಸ್ ಕೊಡಬೇಕು. ಈ ವರ್ಷ ನೋಟಿಫಿಕೇಷನ್ ಕೊಟ್ಟು ಮುಂದಿನ ವರ್ಷ ತೀರ್ಮಾನ ಮಾಡತಕ್ಕ ಪ್ರೊಸೀಜರ್ ಇವೆ. ಯಾವುದನ್ನೇ ಮಾಡಲಿ ವರ್ಷಕ್ಕೆ ಇಷ್ಟು ಪ್ರೊಗ್ರೆಸ್ ಆಗಬೇಕು, ಇಷ್ಟು ಹಣ ಖರ್ಚಾಗಬೇಕು ಎಂದು ನಿಗದಿ ಮಾಡುವುದು ಬಹಳ ಆವಶ್ಯಕ. ಆ ರೀತಿ ಮಾಡಿ ಕಾರ್ಪೊರೇಷನ್ ಮಾಡತಕ್ಕ ಆವಶ್ಯಕತೆ ಇದೆ. ಮಾಡಿರಿ. ನಾವು ಕೃಷ್ಣಾ ಕಾವೇರಿ ವಿಷಯ ಎಷ್ಟೇ ಹೇಳಿದರೂ ಅವರ ಕಿವಿಯಲ್ಲೇ ಹೋಗುವುದಿಲ್ಲ, ಅವರು ಇದನ್ನು ಅರ್ಥಮಾಡಿಕೊಳ್ಳುವುದಕ್ಕೆ ತಯಾರಾಗಿಲ್ಲ. ಆದ್ದರಿಂದ ನಾನು ಹೇಳುವುದು ಇಷ್ಟೆ. They are not up to the mark in these matters. ಇನ್ನು 20 ವರ್ಷವಾದರೂ ಕೂಡ ನಾವು ಏನು ಮಾಡುವುದಕ್ಕಾಗುವುದಿಲ್ಲ. ಈ ನದಿ ನೀರಿನ ವಿಷಯದಲ್ಲಿ ತೀರ್ಮಾನವಾಗುವ ಹೊತ್ತಿಗೆ ನಮ್ಮ ರಾಜ್ಯದ ಬೊಕ್ಕಸವನ್ನೆಲ್ಲಾ ನೀವು ಖಾಲಿ ಮಾಡಿರುತ್ತೀರಿ. ಎಂ.ಎಸ್.ಆರ್.ಟಿ.ಸಿ.ಗೆ ಹಣ ಹಾಕಿದ್ದೀರಿ, ಅನೇಕ ಇಂಡಸ್ಟ್ರೀಗಳಿಗೆ ನೀವು ಕರೆಂಟ್ ಸಪ್ಲೈ ಮಾಡಬೇಕು, ಒಂದು ಖಾದಿ ಬೋರ್ಡನ್ನು ಸ್ಥಾಪನೆ ಮಾಡಿದ್ದಾಯಿತು, ಹಣಖರ್ಚು ಮಾಡಿದ್ದಾಯಿತು, ಹೀಗೆ ಹಣ ಪೋಲಾಗಿ ಹೋದ ಮೇಲೆ ಇನ್ನು ಮಾಡುವುದೇನು? ಕಾವೇರಿ ಕೃಷ್ಣಾ ಬೇಸಿನ್‌ನಲ್ಲಾಗಬೇಕಾದ ಪ್ರಾಜೆಕ್ಟುಗಳಿಗೆ ಹಣ ಕಡಿಮೆ ಆಗಿಯೇ ಆಗುತ್ತದೆ. ಇನ್ನು ಏಕೆ ಹೇಳುತ್ತೇನೆ ಎಂದರೆ ನಮ್ಮ ಈ ಯೋಜನೆಗಳು ಕೇಂದ್ರದಲ್ಲಿ ಶ್ರೀಮಾನ್ ಕೆ. ಎಲ್. ರಾವ್‌ರವರು ಇರುವವರೆಗೂ ಏನೂ ಆಗುವುದಿಲ್ಲ. ಏನಿದ್ದರೂ ಮತ್ತೆ ಕಮಿಟಿ ಮಾಡುತ್ತಾರೆ, ರಿಪೋರ್ಟ್ ಕೊಡ್ರಿ ಅಂತ ಅನ್ನುತ್ತಾರೆ ಡಿಲೇ ಮಾಡುತ್ತಾರೆ. ಟ್ರಿಬ್ಯೂನಲ್‌ಗೆ ಹಾಕುತ್ತೇವೆಂದು ಅನ್ನುತ್ತಾರೆ. ಇವರಿಂದ ಡಿಲೇ ಆಗುತ್ತದೆಯೇ ಹೊರತು ಮತ್ತೇನೂ ಇಲ್ಲ. ಗುಲಾಟಿ ಕಮಿಷನ್ ಆಯಿತು, 1963ನೇ ಇಸವಿಗೆ ಮುಂದೆ ಆಯಿತು, 1968ನೇ ಇಸವಿ ಆದಮೇಲೆ ಆಯಿತು ಇದೆಲ್ಲಾ ಏಕೆ ಎಂದರೆ ಡಿಲೇಯಿಂಗ್ ಟ್ಯಾಕ್‌ಟಿಕ್ಸ್. ಕೆ. ಎಲ್. ರಾವ್‌ರವರು ಆಂಧ್ರದ ಏಜೆಂಟರು, ಇದರಲ್ಲಿ ಯಾರಿಗೂ ಅನುಮಾನವಿಲ್ಲ, ಅವರನ್ನು ನಂಬಿದರೆ ಕೃಷ್ಣಾ ಬೇಸಿನ್‌ನಲ್ಲಾಗಲಿ, ಕಾವೇರಿ ಬೇಸಿನ್‌ನಲ್ಲಾಗಲಿ ಯಾವ ಅನುಕೂಲವೂ ಆಗುವುದಿಲ್ಲ. ಕೃಷ್ಣಾ ಬೇಸಿನ್‌ನಲ್ಲಿ ಆಂಧ್ರದವರಿಗೂ, ಕಾವೇರಿ ಬೇಸಿನ್‌ನಲ್ಲಿ ಮದ್ರಾಸಿನವರಿಗೂ ಅನುಕೂಲವಾಗುವಂತೆ ಅವರವರು ಕನ್ಸೈರವಾಗಿ ನಮಗೆ ಅನ್ಯಾಯ ಮಾಡುತ್ತಾರೆ ಎಚ್ಚರ, ಎಚ್ಚರ ಎಂದು ಎಚ್ಚರಿಕೆ ಮಾಡುತ್ತಾ ಇದ್ದೇನೆ. ಇಷ್ಟು ಹೇಳಿ ಈ ರಾಜ್ಯದ ಹಿತರಕ್ಷಣೆ ಮಾಡತಕ್ಕ ವಿಷಯದಲ್ಲಿ ಸ್ವಲ್ಪ ಗಹನವಾಗಿ ತಮ್ಮ ತಲೆಯನ್ನು ಓಡಿಸಿ, ಬುದ್ಧಿ ಚುರುಕು ಮಾಡಿಕೊಂಡು ವ್ಯವಹಾರ ಮಾಡಿರಿ ಎಂದು ಸಲಹೆ ಮಾಡಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಸಂಗನಗೌಡ (ಲಿಂಗಸಗೂರು).—ಮಾನ್ಯ ಸಭಾಪತಿಗಳೇ, ಈ ದಿವಸ ಸಭೆಯ ಮುಂದೆ ಮಂಡಿಸಿರತಕ್ಕ ಬೇಡಿಕೆಗಳನ್ನು ನಾನು ಸ್ವಾಗತಿಸುತ್ತಾ ಕೆಲವೊಂದು ವಿಚಾರಗಳನ್ನು ಸರ್ಕಾರದವರ ಗಮನಕ್ಕೆ ತರಬಯಸುತ್ತೇನೆ.

ನಮ್ಮ ರಾಜ್ಯದಲ್ಲಿ ಇದುವರೆಗಾಗಲೆ ಮೂರು ಪಂಚವಾರ್ಷಿಕ ಯೋಜನೆಗಳು ಬಂದು ಅವು ಪೂರೈಸಿವೆ. ಅಷ್ಟಾಗಿದ್ದರೂ ನಮ್ಮಲ್ಲಿ ರಾಜ್ಯಮಟ್ಟದಲ್ಲೇ ಆಗಲಿ ಅಥವಾ ರಾಷ್ಟ್ರಮಟ್ಟದಲ್ಲೇ ಆಗಲೀ ಸರ್ಕಾರಗಳು ಒಕ್ಕಲುತನದ ಖಾತೆಗೆ ಹಾಗೂ ಅದರ ಅಭಿವೃದ್ಧಿಗೆ ಎಷ್ಟು ಹಣವನ್ನು ಒದಗಿಸಬೇಕಾಗಿತ್ತೋ ಅಷ್ಟು ಹಣವನ್ನು ಒದಗಿಸಿರುವುದಿಲ್ಲ. ಅದರಿಂದಾಗಿ ನಮ್ಮಲ್ಲಿ ನೀರಾವರಿ ಯೋಜನೆಗಳು ಸಾಕಷ್ಟು ಪ್ರಮಾಣದಲ್ಲಿ ಕಾರ್ಯಗತವಾಗಲಿಲ್ಲ. ಇದರಿಂದ ನಮ್ಮ ರಾಜ್ಯ ಧಾನ್ಯಗಳ ಉತ್ಪನ್ನದಲ್ಲಿ ಬಹಳ ಹಿಂದೆ ಬಿದ್ದಿದೆ. ನಾವು ಈ ಧಾನ್ಯಗಳ ಉತ್ಪನ್ನದ ಬಗ್ಗೆ ನಮ್ಮ ರಾಜ್ಯವನ್ನು ಅಕ್ಕಪಕ್ಕದಲ್ಲಿರತಕ್ಕ ರಾಜ್ಯಗಳೊಂದಿಗೆ ಹೋಲಿಸಿ ನೋಡಿದ್ದೇ ಆದರೆ ಮದ್ರಾಸ್ ರಾಜ್ಯದಲ್ಲಿ ಬೇಸಾಯಕ್ಕೆ ಅಣಿಯಾಗಿರತಕ್ಕ ಒಟ್ಟು ಜಮೀನಿನಲ್ಲಿ ನೂರಕ್ಕೆ 40ರಷ್ಟು ನೀರಾವರಿಯಾಗಿದ್ದರೆ, ಅದೇ ಆಂಧ್ರ ರಾಜ್ಯದಲ್ಲಿ ನೂರಕ್ಕೆ 20 ಭಾಗ ನೀರಾವರಿಯಾಗಿದೆ. ನಮ್ಮ ರಾಜ್ಯದಲ್ಲಿ ಅದು ನೂರಕ್ಕೆ ಕೇವಲ 9–10 ಇದೆ ಎಂದು ತಿಳಿಸುವುದಕ್ಕೆ ನನಗೆ ಬಹಳ ವಿಷಾದವಾಗುತ್ತದೆ. ಇನ್ನಾದರೂ ನಮ್ಮ ಸರ್ಕಾರದವರು ಕೂಡಲೆ ಎಚ್ಚರಗೊಂಡು ಕೃಷ್ಣಾ ಮತ್ತು ಕಾವೇರಿ ನದಿಗಳ ನೀರನ್ನು ಉಪಯೋಗ ಮಾಡಿಕೊಳ್ಳಲು ಸರ್ವ ಪ್ರಯತ್ನಗಳನ್ನೂ ನಡೆಸಬೇಕೆಂದು ಹೇಳುತ್ತೇನೆ. ಇದೊಂದು ನನ್ನ ಕಳಕಳಿಯ ಮನವಿ. ನಾನು ಇದೇ ಸಂದರ್ಭದಲ್ಲಿ ಒಂದು ಅಂಶವನ್ನು ಈ ಸಭೆಯ ಗಮನಕ್ಕೂ ಮತ್ತು ನಮ್ಮ ಸರ್ಕಾರದವರ ಗಮನಕ್ಕೂ ತರಬಯಸುವುದೇನೆಂದರೆ ನಮ್ಮ ರಾಜ್ಯ ಅಕ್ಕಪಕ್ಕದಲ್ಲಿರತಕ್ಕ ರಾಜ್ಯಗಳೊಂದಿಗೆ ಆಹಾರ ಧಾನ್ಯಗಳನ್ನು ಬೆಳೆಯುವ ಬಗ್ಗೆ ಕಾಂಪಿಟಿಷನ್ ಇಂದ ಕೆಲಸಮಾಡಬೇಕಾಗಿದ್ದರೆ ಈ ದಿವಸ ಸರ್ಕಾರ ರೈತರಿಗೆ ಕೊಡಬೇಕಾದ ಉತ್ತೇಜನ ಏನಿದೆ ಅದನ್ನು ಇನ್ನೂ ಹೆಚ್ಚು ಮಾಡಬೇಕು. ಇಲ್ಲವಾದರೆ ನಮ್ಮ ಒಕ್ಕಲುತನ ತೃಪ್ತಿಕರವಾಗಿ ಬೆಳೆಯುವುದಿಲ್ಲ. ನಮ್ಮ ರಾಜ್ಯದ ಭೌಗೋಳಿಕ ಪರಿಸ್ಥಿತಿಯನ್ನು ನೋಡಿದರೆ ನಮಗಿರತಕ್ಕದ್ದು ನೀರಾವರಿ ಸೌಲಭ್ಯಗಳ ಬಗ್ಗೆ ಎರಡೇ ಎರಡು ಮಾರ್ಗಗಳು. ಒಂದು ಕಾವೇರಿ ವ್ಯಾಲಿ, ಇನ್ನೊಂದು ಕೃಷ್ಣಾ ವ್ಯಾಲಿ. ಈ ಎರಡು ಕೈಬಿಟ್ಟರೆ ನಮಗಿನ್ನು ನೀರಾವರಿ ಸೌಲಭ್ಯಗಳೇ ರಾಜ್ಯದಲ್ಲಿಲ್ಲ. ಆದ್ದರಿಂದ ನಾವು ಈ ಎರಡು ವ್ಯಾಲಿಗಳಲ್ಲೂ ಎಲ್ಲೆಲ್ಲಿ ಏನೇನು ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೋ ಅವುಗಳನ್ನು ಕೈಗೊಳ್ಳಬೇಕು. ಅಂದರೆ ಹಾರಂಗಿ, ಕಂಬದಕಡ ಮತ್ತು ಹೇಮಾವತಿ ಈ ಪ್ರಾಜೆಕ್ಟನ್ನು ಕೂಡಲೆ ಕೈಗೊಳ್ಳಬೇಕು. ಆದರೆ ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ಬಿಟ್ಟರೆ ಅಲ್ಲಿನ್ನೇನೂ ಮಾಡುವುದಕ್ಕಾಗುವುದಿಲ್ಲ. ಆದರೆ ಈಗಾಗಲೇ ಕಾವೇರಿ ವ್ಯಾಲಿಯಲ್ಲಿ ಮತ್ತು ಕೃಷ್ಣಾನದಿಗಳ ನೀರನ್ನು ಬಳಸುವುದಕ್ಕೆ ಕೇಂದ್ರದವರ ಪರವಾನಿಗೆ ದೊರೆತಿರುತ್ತದೆ. ಅವುಗಳನ್ನೀಗ ಕೂಡಲೇ ಕಾರ್ಯಗತಮಾಡಬೇಕಾಗಿದೆ. ಹಾಗೆ ಸರ್ಕಾರದವರು ಇವುಗಳನ್ನು ಚುರುಕಾಗಿ ನಡೆಸುತ್ತಿಲ್ಲ ಎಂದು ಈ ಸಭೆಯಲ್ಲಿ ಪದೇ ಪದೇ ಸದಸ್ಯರು ಟೀಕೆಗಳನ್ನು ಮಾಡಿದ್ದಾರೆ. ಆ ದೃಷ್ಟಿಯಿಂದಲಾದರೂ ಸರ್ಕಾರದವರು ಇತ್ತಕಡೆಗೆ ತಮ್ಮ ಸಂಪೂರ್ಣ ಗಮನ ಹರಿಸಬೇಕೆಂದು ಹೇಳುತ್ತೇನೆ. ಸರ್ಕಾರದವರು ಕಳೆದ 10 ವರ್ಷಗಳಿಂದಲೂ ನಿಧಾನ ಮಾಡಿದ್ದೇ ಸಾಕು. ರಾಜ್ಯದಲ್ಲಿ ಪದೇ ಪದೇ ದುಷ್ಕಾಲಕ್ಕೆ ತುತ್ತಾಗುತ್ತಿರುವ ಬಿಜಾಪುರ, ರಾಯಚೂರು ಮತ್ತು ಗುಲ್ಬರ್ಗ ಜಿಲ್ಲೆಗಳಿಗೇನೂ ಅನುಕೂಲ ದೊರೆತಿರುವುದಿಲ್ಲ. ಆ ಮೂರು ಜಿಲ್ಲೆಗಳಲ್ಲಿ ಪದೇ ಪದೇ ಕ್ಷಾಮ ತಲೆದೋರುತ್ತಿದ್ದರೂ ಅಲ್ಲಿ ಈ ಕೃಷ್ಣಾ ಮೇಲ್ದಂಡೆಯ ಕಕ್ಷೆಲಿ ಬರತಕ್ಕ ಜಮೀನೇನಿದೆ ಅದು ಬಹಳ ಫಲವತ್ತಾದ್ದು. ಇಡೀ ರಾಜ್ಯಕ್ಕೆ ಈ ಪ್ರದೇಶ ಕಾಳನ್ನು ಒದಗಿಸಬಲ್ಲದು. ಆದಕಾರಣ ಸರ್ಕಾರದವರು ಈಗ ನಮ್ಮ ಮುಂದಿರತಕ್ಕ ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಾದರೂ ಇದಕ್ಕೆ ಒಂದು ಮೂರ್ತಸ್ವರೂಪವನ್ನು ಕೊಟ್ಟು ಇದಕ್ಕೆ ಸಾಕಷ್ಟು ಹಣವನ್ನು ಕೂಡಲೆ ಒದಗಿಸಬೇಕೆಂದು ಹೇಳುತ್ತೇನೆ. ಆದರೆ ಈ ದಿವಸ ಬಡ್ಜೆಟ್ಟಿನಲ್ಲಿ ಇದಕ್ಕೆ ಕೇವಲ ಎರಡು ಕೋಟಿ ರೂಪಾಯಿಗಳನ್ನು ಮಾತ್ರ ಒದಗಿಸಿದ್ದಾರೆ. ಇದು ಏತಕ್ಕೂ ಸಾಲದು. ಇದರಲ್ಲಿ ಸುಮಾರು 22–23ಲಕ್ಷ ನೌಕರರ ಸಂಬಳ ಸಾರಿಗೆಗೆ ಹೋಗುತ್ತದೆ. ಇಷ್ಟು ಸಣ್ಣ ಪ್ರಮಾಣದಲ್ಲಿ ಇಂಥ ಒಂದು ದೊಡ್ಡ ಯೋಜನೆಗೆ ಹಣವನ್ನು ಒದಗಿಸುತ್ತಾ ಹೋದರೆ ಇದನ್ನು ಪೂರ್ಣಗೊಳಿಸಲು 100 ವರ್ಷಗಳಾದರೂ ಸಾಲದು. ಇದನ್ನು ನಾವಾಗಲಿ ನಮ್ಮ ಮಕ್ಕಳಾಗಲಿ ನೋಡುವುದಕ್ಕಾಗುವುದಿಲ್ಲ ಅಂದಾಗ ನಾವು ಇದರಿಂದ ಸುಖಪಡುವುದಿನ್ನೆಲ್ಲಿಂದ ಬಂತು ? ಆದರೆ ನಾನು ನಮ್ಮ ಸರ್ಕಾರಕ್ಕೆ ಒಂದು ಎಚ್ಚರಿಕೆಯನ್ನು ಕೊಡಬೇಕಾಗಿದೆ: ಅದೇನೆಂದರೆ ಆ ಕೇಂದ್ರದಲ್ಲಿ ನೀರಾವರಿ ಮಂತ್ರಿಯಾಗಿ ಆ ಕೆ. ಎಲ್. ರಾವ್ ಇರುವತನಕ ನಮ್ಮ ರಾಜ್ಯಕ್ಕೆ ಸುಖವಿಲ್ಲ ಮತ್ತು ನಮಗೆ ಅಪಾಯ ತಪ್ಪಿದ್ದಲ್ಲ. ಆತ ಅಲ್ಲಿರುವತನಕ ಕೃಷ್ಣಾ ಮೇಲ್ದಂಡೆ

(ಶ್ರೀ ಕೆ. ಸಂಗನಗೌಡ)

ಯೋಜನೆಯನ್ನು ಮುಂದುವರಿಯುವುದಕ್ಕೆ ಆತನು ಅವಕಾಶ ಕೊಡುವುದಿಲ್ಲ. ಈಗಾಗಲೇ ಆ ಗುಲ್ಹಾತಿ ಕಮಿಷನ್ನಿನವರು ಗೋದಾವರಿ ನದಿಯ ನೀರನ್ನು ಕೃಷ್ಣಾ ನದಿಗೆ ಸೇರಿಸಬೇಕೆಂದು ತೀರ್ಮಾನ ಕೊಟ್ಟಿದ್ದಾಗ್ಗೂ ಈ ದಿವಸ ಈ ಎರಡು ನದಿಗಳ ನೀರಿನ ಹಂಚಿಕೆಯ ಬಗ್ಗೆ ಒಂದೇ ಕಮಿಷನ್ನನ್ನು ನೇಮಕ ಮಾಡದೆ ಎರಡಕ್ಕೂ ಬೇರೆ ಬೇರೆ ಕಮಿಷನ್ ಮಾಡಬೇಕೆಂದು ಹೇಳುತ್ತಿರುವುದು ಬಹಳ ವಿಷಾದಕರ ಹಾಗೂ ನಮ್ಮ ರಾಜ್ಯದ ದುರ್ದೈವ. ಇನ್ನಾದರೂ ನಮ್ಮ ಮಂತ್ರಿಗಳು ಮತ್ತು ಆ ಪಾರ್ಲಿಮೆಂಟಿನಲ್ಲಿರತಕ್ಕ ನಮ್ಮ ಸದಸ್ಯರುಗಳು ಪ್ರಧಾನಿಯವರ ಜೊತೆಯಲ್ಲಿ ಈ ವಿಚಾರಗಳನ್ನು ಮಾತನಾಡಿ ಇವರನ್ನು ಅಲ್ಲಿಂದ ಕಿತ್ತುಹಾಕಲು ಇಲ್ಲಿಯತನಕ ಏಕೆ ಪ್ರಯತ್ನ ಮಾಡಲಿಲ್ಲವೋ ಗೊತ್ತಾಗದು. ಆತ ಅಲ್ಲಿ ನೀರಾವರಿ ಮಂತ್ರಿಯಾಗಿದ್ದುದರಿಂದಲೇ ಆ ನಾಗಾರ್ಜುನ ಸಾಗರದ ಕೆಲಸ ಸರಾಗವಾಗಿ ನಡೆದು ನಮ್ಮಲ್ಲಿ ಆಗಬೇಕಾಗಿದ್ದ ನೀರಾವರಿ ಯೋಜನೆಗಳೆಲ್ಲಾ ಮೂಲೆಗೆ ಬಿದ್ದವು. ಆತ ಅಲ್ಲಸಲ್ಲದ ತೊಡಕನ್ನು ತಂದೊಡ್ಡುತ್ತಿದ್ದಾನೆ. ನಾವು ಇನ್ನೂ ಮುಂದಕ್ಕೆ ಆ ಕೇಂದ್ರದವರ ಹಾದಿಯನ್ನು ಕಾಯದೆ ನಾವು ನಮ್ಮ ಯೋಜನೆಗಳನ್ನು ಮುಂದುವರಿಸುವುದೇ ಲೇಸೆಂದು ಹೇಳುತ್ತೇನೆ. ನಾವು ನಮ್ಮ ಕೃಷ್ಣಾ ಯೋಜನೆಯನ್ನು ಒಂದು ರಾಷ್ಟ್ರೀಯ ಯೋಜನೆಯೆಂದು ಭಾವಿಸಿ ಅದನ್ನು ಮುಂದುವರಿಸಬೇಕೆಂದು ಹೇಳುತ್ತೇನೆ.

ಇನ್ನು ಈ ಯೋಜನೆಗಳಿಗೆ ಹಣವನ್ನು ಕೂಡಿಸತಕ್ಕ ಬಗ್ಗೆ ಕೃಷ್ಣಾವ್ಯಾಲಿಯ ಬಗ್ಗೆ ಒಂದು ಕಾರ್ಪೋರೇಷನ್ನನ್ನೂ ಮತ್ತು ಕಾವೇರಿವ್ಯಾಲಿ ಬಗ್ಗೆ ಒಂದು ಕಾರ್ಪೋರೇಷನ್ನನ್ನೂ ಕೂಡಲೆ ನಿರ್ಮಾಣಮಾಡಬೇಕು. ಈ ಅಭಿಪ್ರಾಯ ನಮ್ಮ ಮುಖ್ಯಮಂತ್ರಿಗಳ ಮನಸ್ಸಿನಲ್ಲೂ ಇದೆ. ಆದ್ದರಿಂದ ಈ ಎರಡೂ ಕಾರ್ಪೋರೇಷನುಗಳಿಗೂ ಒಂದು ಕಾನೂನು ಸ್ವರೂಪವನ್ನೂ ಕೊಟ್ಟು ಅದನ್ನು ತೀವ್ರವಾಗಿ ಜಾರಿಗೆ ತರಬೇಕೆಂದು ಹೇಳುತ್ತೇನೆ. ಕೃಷ್ಣಾದಂಡೆಗೆ 20 ಕೋಟಿ, ಕಾವೇರಿವ್ಯಾಲಿಗೆ 10 ಕೋಟಿ ರೂಪಾಯಿಗಳನ್ನು ಒದಗಿಸುವುದಕ್ಕೆ ಕೂಡಲೆ ಕ್ರಮ ಕೈಕೊಳ್ಳಲಿ ಎಂದು ಒತ್ತಾಯಮಾಡುತ್ತೇನೆ. ಅದೂ ಸಾಲದೆ ಬರುವುದಾದರೆ ಆ ನಾಗಾರ್ಜುನ ಸಾಗರದ ನಿರ್ಮಾಣ ಕಾಲದಲ್ಲಿ ಯಾವರೀತಿ ಅಲ್ಲಿ ಅಗತ್ಯವಾಗಿ ಆಗಬೇಕಾಗಿದ್ದ ರಸ್ತೆ ಮತ್ತು ಇತರೇ ಕಟ್ಟಡಗಳನ್ನು ನಿಲ್ಲಿಸಿ ಆದರಿಂದ ಉಳಿತಾಯವಾಗತಕ್ಕ ಹಣವನ್ನೂ ಮತ್ತು ಆ ಅಚ್ಚು ಕಟ್ಟುದಾರರಿಂದ ಮುಂಗಡವಾಗಿ ಎಕರೆಗೆ 200–300 ರೂಪಾಯಿಗಳಂತೆ ಕಾಂಟ್ರಿಬ್ಯೂಷನ್ ವಸೂಲ್ಮಾಡಿ ಆ ಕಾರ್ಯವನ್ನು ಮುಗಿಸಿದರೋ ಅದೇರೀತಿ ಇಲ್ಲಿ ನಾವೂ ಕೂಡ ಅದೇ ಮಾರ್ಗ ಅನುಸರಿಸಿದರೆ ಒಳ್ಳೆಯದೆಂದು ಹೇಳುತ್ತೇನೆ. ನಮ್ಮ ರಾಜ್ಯ ಸರ್ಕಾರದವರು ಪ್ರತಿಯೊಂದು ಪಿ. ಡಬ್ಲ್ಯು. ಡಿ. ಡಿವಿಜನ್ನಿಗೂ ಸರಿಯಾಗಿ ಹಣವನ್ನು ಹಂಚುತ್ತಿಲ್ಲ. ಒಂದು ಪಿ. ಡಬ್ಲ್ಯು. ಡಿ. ಡಿವಿಜನ್ನಿಗೆ 45 ಲಕ್ಷರೂಪಾಯಿಗಳನ್ನು ಖರ್ಚಮಾಡಿದರೆ, ಇನ್ನೊಂದು ಡಿವಿಜನ್ನಿಗೆ ಕೋಟಿ ರೂಪಾಯಿಗಳನ್ನು ಖರ್ಚುಮಾಡುವ ಅವಕಾಶವನ್ನು ಕಲ್ಪಿಸಿಕೊಡುತ್ತಾ ಇರುವುದನ್ನು ನಾವು ನೋಡುತ್ತಿದ್ದೇವೆ. ಇದಕ್ಕೆ ಒಂದು ಸೀಲಿಂಗ್ ಲಿಮಿಟ್ಟನ್ನು ಹಾಕಬೇಕು. ನಮ್ಮಲ್ಲಿ ಎಷ್ಟು ಪಿ. ಡಬ್ಲ್ಯು. ಡಿ. ಡಿವಿಜನ್ನುಗಳಿವೆಯೋ ಅವುಗಳಲ್ಲಿ ಒಂದೊಂದು ಡಿವಿಜನ್ನಿನಲ್ಲಿಯೂ ಸುಮಾರು 3–4 ಲಕ್ಷ ರೂಪಾಯಿಗಳು ಉಳಿಸಬಹುದು.

ಇನ್ನು ಕೃಷ್ಣಾ ಮೇಲ್ದಂಡೆ ಬಗ್ಗೆ ನನ್ನ ಸ್ನೇಹಿತರು ಹೇಳಿದ ಹಾಗೆ ಡೊನೇಷನ್ ತೆಗೆದು ಕೊಳ್ಳುವುದಕ್ಕೆ ಹಿಂಜರಿಯಬಾರದು. ನ್ಯಾಷನಲ್ ಪ್ರಶ್ನೆ ಬಂದಾಗ ಎಲ್ಲಾ ರಾಜ್ಯ ಸರ್ಕಾರದವರು ಹಣವನ್ನು ಕೂಡಿಸಿಕೊಡುವುದಕ್ಕೆ ಮತ್ತು ರಾಷ್ಟ್ರಕ್ಕೆ ಜಾಸ್ತಿ ಹಣವನ್ನು ಕೊಡುವುದಕ್ಕೆ ಯಾರೂ ಹಿಂದುಮುಂದು ನೋಡುವುದಿಲ್ಲ. ಇದು ಉತ್ತಮವಾದ ಸಲಹೆಯೆಂದು ಅದಕ್ಕೆ ಪರಿಹಾರ ಕೊಡಬೇಕು.

ಇನ್ನೊಂದು ವಿಷಯ. ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಸರ್ಕಾರದವರು ಎರಡು ಹಂತ ಗಳಾಗಿ ಮಾಡಿದ್ದಾರೆ. ಅದನ್ನು ತೆಗೆಯಬೇಕು. ಮೊದಲನೆಯ ಹಂತದಲ್ಲಿ ಕೇವಲ ಎಡದಂಡೆಗೆ ನೀರು ಕೊಡುತ್ತೇವೆ, ಎರಡನೆಯ ಹಂತದಲ್ಲಿ ಬಲದಂಡೆಗೆ ನೀರು ಕೊಡುತ್ತೇವೆಂದು ಹೇಳುತ್ತಾರೆ. ಇದನು ತೆಗೆದುಹಾಕಿ, ಎರಡು ಕಡೆಗಳಲ್ಲಿಯೂ ಒಂದೇ ಸಾರಿ ನೀರು ಕೊಡಬೇಕು. ಇದನ್ನು ಮಾಡುವುದಕ್ಕೆ 10–12 ವರ್ಷಗಳು ಏಕೆ? ಹೆಚ್ಚು ಕಾಲ ತೆಗೆದುಕೊಳ್ಳಬಾರದು. ಎಡ ಮತ್ತು ಬಲದಂಡೆ ಕೆಲಸವನ್ನು ಏಕಕಾಲದಲ್ಲಿ ತೆಗೆದುಕೊಂಡು ಎರಡೂ ಕಡೆಗೂ ನೀರನ್ನು ಒಂದೇ ಸಾರಿ ಕೊಡಬೇಕು. ಅದಕ್ಕೆ ಜನರು ಸಿದ್ಧರಾಗಿದ್ದಾರೆ. ಮನೆಮನೆಗೂ ಹೋಗಿ ಹಣ ಕೂಡಿಸುವುದಕ್ಕೆ ನಾವು ಹಿಂಜರಿಯುವುದಿಲ್ಲ.

ಇನ್ನು ಮೈನರ್ ಇರ್ರಿಗೇಷನ್ ವಿಷಯ. ನಮ್ಮ ಸರ್ಕಾರದವರು ಇದರ ಬಗ್ಗೆ ಎಷ್ಟು ಹಣವನ್ನು ಒದಗಿಸಿದ್ದಾರೋ ಅದು ತೀರಾ ಕಡಿಮೆ. ಕೃಷ್ಣಾ ನದಿಯಿಂದಾಗಲೀ ಅಥವಾ ಕಾವೇರಿ ನದಿಯಿಂದಾಗಲೀ ನೀರು ಸಿಗದೆ ಇರುವ ದೇಶ ಎಷ್ಟೋ ಇದೆ. ಅಂಥ ಕಡೆ ಮೈನರ್ ಇರ್ರಿಗೇಷನ್ ಕೆಲಸ ತೆಗೆದುಕೊಂಡು ಕೆರೆಗಳ ದುರಸ್ತುಮಾಡಿ ಪಿಕಪ್ಪುಗಳನ್ನು ಕಟ್ಟಿಸಿದರೆ ಅದರಿಂದ 7-8 ಲಕ್ಷ ಎಕರೆಗೆ ನೀರು ಸಿಗಬಹುದು ಎಂಬುದಾಗಿ ತಜ್ಞರು ವರದಿ ಕೊಟ್ಟಿದ್ದಾರೆ. ಪ್ರತಿಯೊಂದು ಜಿಲ್ಲೆಯಲ್ಲಿಯೂ ಆದಕ್ಕಾಗಿ ಸಾಕಷ್ಟು ಹಣವನ್ನು ಒದಗಿಸಿಲ್ಲ. ಮೈನರ್ ಇರ್ರಿಗೇಷನ್ನಿನಲ್ಲಿ ಎಲ್ಲಿ ಕೆರೆ ಕುಂಟೆಗಳಿರಲಿ, ಲಿಫ್ಟ್ ಇರ್ರಿಗೇಷನ್ ಕಾಮಗಾರಿಗಳೇ ಇರಲಿ, ಆ ಯೋಜನೆಗಳಿಗೆ ಸಾಕಷ್ಟು ಹಣ ಒದಗಿಸಿ ಕೂಡಲೇ ಪ್ರಾರಂಭಿಸಬೇಕು. ಅದರಿಂದ ಆಯಾ ಕ್ಷೇತ್ರಗಳಲ್ಲಿ ಹೆಚ್ಚಿಗೆ ಆಹಾರಧಾನ್ಯಗಳನ್ನು ಬೆಳೆಸುವುದಕ್ಕೆ ಮತ್ತು ರೈತರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವುದಕ್ಕೆ ಅನುಕೂಲವಾಗುತ್ತದೆ.

ಇನ್ನು ಅಂಡರ್‌ಗ್ರೌಂಡ್ ವಾಟರನ್ನು ಮೇಲಕ್ಕೆ ತಂದು ಉಪಯೋಗಮಾಡಿಕೊಳ್ಳುವ ಯೋಜನೆಯನ್ನು ನಮ್ಮ ರಾಜ್ಯದಲ್ಲಿ ಇದುವರೆಗೂ ಪ್ರಾರಂಭ ಮಾಡಲಿಲ್ಲ. ಕೆಲವು ಕಡೆಗಳಲ್ಲಿ ಜಮೀನಿನಲ್ಲಿ ಕಲ್ಲುಗಳು ಜಾಸ್ತಿಯಾಗಿವೆ. 60 ಅಡಿ ಅಥವಾ 80 ಅಡಿಗಳಷ್ಟು ಆಳ ತೆಗೆದರೂ ಸಾಕಷ್ಟು ನೀರು ಸಿಗುತ್ತಿಲ್ಲ. ಪ್ರತಿಯೊಂದು ಜಿಲ್ಲೆಗೂ ಒಂದೊಂದು ರಿಗ್ಗನ್ನು ಒದಗಿಸಿಕೊಡಬೇಕು. ರೈತರು ಆಳವಾದ ಬಾವಿಗಳನ್ನು ಸುಲಭವಾಗಿ ತೆಗೆಯುವುದಕ್ಕೆ ಸರ್ವ ಸಿದ್ಧತೆಗಳನ್ನು ಮಾಡಿಕೊಡಬೇಕು. ಒಂದೊಂದು ದಿವಸಕ್ಕೆ ಒಂದೊಂದು ಬಾವಿ ತೆಗೆಯುವ ಬ್ಲ್ಯಾಸ್ಟಿಂಗ್ ಮೆಷಿನ್ನುಗಳನ್ನು ಖರೀದಿಮಾಡಿ ಪ್ರತಿಯೊಂದು ಜಿಲ್ಲೆಗೂ ಒಂದೊಂದು ಅಂತಹ ಮೆಷೀನನ್ನು ಹಂಚಬೇಕೆಂದು ಹೇಳುತ್ತೇನೆ.

ಕೊನೆಯದಾಗಿ ನನಗೆ ಮಾತನಾಡಲು ಇಷ್ಟು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

[CHAIRMAN (SMT. K. LEELAVATHI RAI) in the Chair]

ಶ್ರೀ ಎಂ. ಮಂಚೇಗೌಡ (ಮದ್ದೂರು).—ಅಧ್ಯಕ್ಷಣಿಯವರೇ, ಈ ದಿವಸ ಈ ಸಭೆಯ ಮುಂದೆ ಮರಾಮತ್ತು ಶಾಖಾಸಚಿವರು ಮಂಡಿಸಿರತಕ್ಕ ಬೇಡಿಕೆಗಳನ್ನು ಸಮರ್ಥಿಸುತ್ತಾ ಕೆಲವು ಅಂಶಗಳನ್ನು ಈ ಸಭೆಯ ಮುಂದೆ ಇಡುವುದಕ್ಕೆ ಅಪೇಕ್ಷಿಸುತ್ತೇನೆ. ಇದುವರೆಗೆ ಮಾತಾನಾಡಿದಂಥ ಎಲ್ಲಾ ಸ್ನೇಹಿತರೂ ಕೂಡ ಒಂದೇ ಸಮನಾಗಿ ನೀರಾವರಿ ಸೌಲಭ್ಯವನ್ನು ಹೆಚ್ಚಿಸಿಕೊಳ್ಳುವುದು ಅಗತ್ಯ, ಮತ್ತೆ ಆ ಉದ್ದೇಶಸಾಧನೆಗೋಸ್ಕರ ಇಲ್ಲಿ ಮಂಡಿಸಿರತಕ್ಕ ಸುಮಾರು 98 ಕೋಟಿ ರೂಪಾಯಿಗಳ ಬೇಡಿಕೆಯಲ್ಲಿ ಸುಮಾರು ¼ ಭಾಗ ಮಾತ್ರ ನಿಜವಾಗಿ ಹೊಸ ನೀರಾವರಿ ಕೆಲಸಗಳಿಗೆ ಖರ್ಚಾಗುತ್ತದೆ, ಉಳಿಕೆಯ ಭಾಗದಲ್ಲಿ ಬಹುಭಾಗ ಸಿಬ್ಬಂದಿ ವೆಚ್ಚ, ಕೊಡಬೇಕಾಗಿರತಕ್ಕ ಬಡ್ಡಿ ಮೊಬಲಗು ರೂಪದಲ್ಲಿ ಈ ಬಗ್ಗೆ ಹೆಚ್ಚಿಗೆ ಹಣ ಉಪಯೋಗಿಸಿವೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಬಜೆಟ್ ಭಾಷಣದಲ್ಲಿ ಅರ್ಥ ಸಚಿವರು ಭಾಷಣವನ್ನು ಪ್ರಾರಂಭಮಾಡುವ ಸಂದರ್ಭದಲ್ಲಿ ನಮ್ಮ ರಾಜ್ಯದ ಹಣಕಾಸಿನ ಪರಿಸ್ಥಿತಿ ಬಗ್ಗೆ, ನೀರಾವರಿ ಪ್ರದೇಶದ ಬಗ್ಗೆ ಹಾಗೂ ನೆರೆಹೊರೆಯ ರಾಜ್ಯಗಳಲ್ಲಿರತಕ್ಕ ಪರಿಸ್ಥಿತಿಯನ್ನೂ ಸಹ ಹೇಳಿದ್ದಾರೆ. ನಾನು ನಿನ್ನೆ ದಿವಸ ಮಾತನಾಡುತ್ತಾ ಹೇಳಿದೆ, ನೆರೆಹೊರೆಯ ರಾಜ್ಯಗಳಲ್ಲಿ ಸುಭದ್ರ ಸರ್ಕಾರ ರಚನೆ ಯಾವರೀತಿ ಅಸಾಧ್ಯವಾಗಿ ಪರಿಣಮಿಸುತ್ತಿದೆಂಬುದನ್ನು ನೋಡಬೇಕು. ಆದ್ದರಿಂದ ನಾವೂ ಕೂಡ ನಮ್ಮ ರಾಜ್ಯದಲ್ಲಿರತಕ್ಕ ಬಹುತೇಕ ಜನಗಳ ಅಭಿವೃದ್ಧಿಗೋಸ್ಕರ ಈಗಲಾದರೂ ಕೂಡ ಮನಸ್ಸುಮಾಡದೇ ಹೋದ ಪಕ್ಷದಲ್ಲಿ ಅದೇ ಒಂದು ಪರಿಸ್ಥಿತಿಯನ್ನು ನಾವೂ ಕೂಡ ಇಲ್ಲಿ ಅನುಭವಿಸಬೇಕಾದಂಥ ಪರಿಸ್ಥಿತಿ ಸನ್ನಿಹಿತವಾಗುತ್ತದೆಂಬುದನ್ನು ನಾವು ಮರೆಯಬಾರದೆಂದು ನಮ್ಮ ಬಜೆಟ್ ನೋಡಿದರೆ ಮೈಸೂರು ರಾಜ್ಯದಲ್ಲಿ ಅರ್ಧ ಪರ್ಸೆಂಟ್ ಅಥವಾ ಒಂದು ಪರ್ಸೆಂಟ್ ಇರತಕ್ಕ ಜನಸಂಖ್ಯೆಯ ಅಭಿವೃದ್ಧಿ ಕಡೆಗೆ ಹೆಚ್ಚು ಗಮನಕೊಟ್ಟಿದ್ದಾರೆಯೇ ಹೊರತು ಸೇಕಡ 90ರಷ್ಟು ಇರತಕ್ಕ ರೈತಾಪಿ ಜನಗಳ ಅಭಿವೃದ್ಧಿ ಬಗ್ಗೆ ಹೆಚ್ಚು ಗಮನಕೊಟ್ಟಿಲ್ಲ.

6-00 P. M.

ಇದರಿಂದ ಬಹುತೇಕ ಮಂದಿಯ ಮನಸ್ಸಿನಲ್ಲಿ ಅತೃಪ್ತಿ ಉಂಟಾದ್ದೇ ಆದರೆ ನಮ್ಮ ಆರ್ಥಿಕ ರಂಗದಲ್ಲಾಗಲಿ, ಸಾಮಾಜಿಕ ರಂಗದಲ್ಲೇ ಆಗಲಿ, ರಾಜಕೀಯ ರಂಗದಲ್ಲೇ ಆಗಲಿ, ಒಂದು ಸುಭದ್ರ ಪರಿಸ್ಥಿತಿ ಇರುವುದಿಲ್ಲ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಮಾನ್ಯ ಆರ್ಥಿಕ ಮಂತ್ರಿ

(ಶ್ರೀ ಎಂ. ಮಂಚೇಗೌಡ)

ಯವರು, ತಪ್ಪು ಅಂಶವನ್ನು ಗಮನದಲ್ಲಿಟ್ಟುಕೊಂಡು ಗ್ರಾಮಾಂತರ ಪ್ರದೇಶದಲ್ಲಿ ಉತ್ಪತ್ತಿ ಹೆಚ್ಚಾಗಿದೆ, ಇದುವರಿಗೂ ಏನು ಹಣ ಖರ್ಚು ಮಾಡುತ್ತಾ ಬಂದಿದ್ದೇವೆ, ಅದರಲ್ಲಿ ಬಹುಪಾಲು ಹಣವನ್ನು ಗ್ರಾಮಾಂತರ ಪ್ರದೇಶಗಳಿಗೆ, ವ್ಯವಸಾಯ ಅಭಿವೃದ್ಧಿಗೆ ಖರ್ಚು ಮಾಡಿದ್ದೇವೆ ಅದರಿಂದ ಆದಾಯ ಹೆಚ್ಚಿದೆ ಎಂದು ಹೇಳಿದ್ದಾರೆ. ಈ ದಿವಸ ನಮ್ಮ ಮುಂದೆ ಇಟ್ಟಿರತಕ್ಕಂತಹ ಬಜೆಟಿನಲ್ಲಿ ರಾಜ್ಯಕ್ಕೆ ಒಳ್ಳೆಯ ಅನುಕೂಲಗಳನ್ನು ಕಲ್ಪಿಸತಕ್ಕಂತ ವಿಚಾರವನ್ನು ನಮೂದು ಮಾಡಿದ್ದಾರೆ. ಈಗ ಮರಾಮತ್ ಇಲಾಖೆಯ 98 ಕೋಟಿ ರೂಪಾಯಿ ಬಜೆಟಿನಲ್ಲಿ ಗ್ರಾಮಾಂತರ ಪ್ರದೇಶಗಳಿಗೆ ನೇರವಾಗಿ ಹೆಚ್ಚು ಹಣ ಖರ್ಚಾಗುತ್ತಾ ಇಲ್ಲ. 220 ಕೋಟಿ ಖರ್ಚು ಮಾಡತಕ್ಕ ಹಣದಲ್ಲಿ ನೇರವಾಗಿ ಅವರ ಅಭಿವೃದ್ಧಿಗೆ ಖರ್ಚು ಮಾಡತಕ್ಕ ಹಣ ತೀರಾ ಕಡಿಮೆ. ಇನ್ನು ಮಾನ್ಯ ಮಂತ್ರಿಯವರು ತಮ್ಮ ಭಾಷಣದಲ್ಲಿ ಐ. ಎ. ಡಿ. ಸಿ. ಮತ್ತು ಐ. ಎ. ಎ. ಪಿ. ಯೋಜನೆಯನ್ನು ಕಾರ್ಯಗತ ಮಾಡುವ ಉದ್ದೇಶವಿದೆ ಎಂದೂ, ಹೆಚ್ಚು ಇಳುವರಿ ಬೆಳೆಯ ಕಾರ್ಯಕ್ರಮವನ್ನು 12 ಲಕ್ಷ ಎಕರೆ ಭೂಮಿಗೆ ವಿಸ್ತರಿಸಲಾಗುವುದೆಂದೂ ಹೇಳಿದ್ದಾರೆ. ಇಂಥ ಪರಿಸ್ಥಿತಿ ಬಂದದ್ದೇ ಆದರೆ, ರೈತರಷ್ಟು ಸಂತೋಷಪಡತಕ್ಕವರು ನಮ್ಮ ಸಮಾಜದಲ್ಲಿ ಮತ್ತೆ ಯಾರೂ ಇಲ್ಲವೆಂದು ಕಾಣುತ್ತದೆ. ಅಂಥ ಪರಿಸ್ಥಿತಿ ಬರಬೇಕಾದರೆ, ಈಗಿನ ಬಜೆಟು ಎಷ್ಟು ಮಟ್ಟಿಗೆ ಸಹಕಾರಿಯಾಗಿದೆ ಎಂಬುದನ್ನು ಪರಿಶೀಲನೆ ಮಾಡಬೇಕಾಗಿದೆ. ಈಗ ಏನು ಹಣವನ್ನು ಬಜೆಟಿನಲ್ಲಿ ಒದಗಿಸಿದ್ದಾರೆ, ಬುದ್ಧಿವಂತಿಕೆಯಿಂದ ಇದೇ ಹಣದಲ್ಲಿ ಹೆಚ್ಚು ಭಾಗವನ್ನು ನೀರಾವರಿಗಾಗಿ ಉಪಯೋಗಿಸುವುದಕ್ಕೆ ಸಾಧ್ಯವಿದೆ. ಅದೇ ರೀತಿ ಬೇರೆ ಬೇರೆ ಬಾಬುಗಳಿಗೆ ಒದಗಿಸಿರತಕ್ಕಂತಹ ಹಣದಲ್ಲಿ ಖೋತಾ ಮಾಡಿ ಅದನ್ನು ವ್ಯವಸಾಯಕ್ಕೆ ಉಪಯೋಗಿಸುವುದು ಸಾಧ್ಯವಿದೆ. ಪ್ರತೀ ವರ್ಷ ವ್ಯವಸಾಯ ಇಲಾಖೆ ಮತ್ತು ಬೇರೆ ಬೇರೆ ಇಲಾಖೆಗಳಿಗೆ ಒದಗಿಸಿರತಕ್ಕ ಹಣ ಹೆಚ್ಚು ಇದೆ. ಕಳೆದ ಸಾರಿ 7 ಕೋಟಿ ಈ ಸಾರಿ 10 ಕೋಟಿ ಒದಗಿಸಿದ್ದಾರೆ. ಇವತ್ತು ವ್ಯವಸಾಯ ಇಲಾಖೆಯ ಸಿಬ್ಬಂದಿ ಮಾತ್ರ ಹೆಚ್ಚು ಮಾಡಿದ ಮಾತ್ರಕ್ಕೆ ನಮಗೆ ದಿನಸಿ ಹೆಚ್ಚುವುದಾದರೆ, ಬಹುಶಃ ಆ ರೀತಿ ಮಾಡಬಹುದಿತ್ತು. ಎಲ್ಲಿಯವರೆಗೆ ನೀರಾವರಿಯ ವಿಸ್ತರಣೆ ಹೆಚ್ಚಾಗುವುದಿಲ್ಲವೋ, ಅಲ್ಲಿಯವರೆಗೆ ನಮ್ಮ ದೇಶದ ಅಭಿವೃದ್ಧಿ ಸಾಧ್ಯವೆಂದು ಹೇಳುವುದಕ್ಕಾಗುವುದಿಲ್ಲ. ಇವತ್ತು ಎಲ್ಲರೂ ಉದ್ಯೋಗ ಕೊಡಬೇಕೆಂದು ಹೇಳುತ್ತಿದ್ದಾರೆ. ಇವತ್ತು ಹೆಚ್ಚು ಜನಸಂಖ್ಯೆಗೆ ಉದ್ಯೋಗ ಒದಗಿಸುವುದಾದರೆ, ಅದು ವ್ಯವಸಾಯ. ಬರೀ ಕುಡಿಯುವ ನೀರಾವರಿಯನ್ನು ಹೆಚ್ಚುಮಾಡಿದರೆ, ಮತ್ತು ಬೇರೆ ಯೋಜನೆಗಳನ್ನು ಹೆಚ್ಚು ಮಾಡುವ ಸಂದರ್ಭದಲ್ಲಿ ವ್ಯವಸಾಯ ಕುಸಿದು ಬೀಳುತ್ತದೆ. ವ್ಯವಸಾಯ ಕ್ಷೇತ್ರವೂ ಕೂಡ ಪ್ರತಿವರ್ಷವೂ ಕುಗ್ಗುತ್ತಾ ಇದೆ. ಕಳೆದ ಸಾರಿಯ ಕ್ಷಾಮದ ಕಾಲದಲ್ಲಿ ರೈತರಿಗೆ 700 ಕೋಟಿ ದಿನಸಿ ಉತ್ಪಾದನೆಯಾಗಿದೆ ಎಂಬುದಾಗಿ ಹೇಳಿದ್ದಾರೆ. ಮಾನ್ಯ ಅರ್ಥಿಕ ಸಚಿವರು ಹೇಳುವಂತಹ ಈ ಅಂಕಿ ಅಂಶಗಳು ಎಲ್ಲಿಂದ ಬಂತು ಎಂದು ಗೊತ್ತಿಲ್ಲ. ಗ್ರಾಮಾಂತರ ಪ್ರದೇಶದಿಂದ ಬಂದಂತಹ ನಾವು, ನಮ್ಮ ನಮ್ಮ ಗ್ರಾಮಗಳ ಪರಿಸ್ಥಿತಿ ಯಾವ ಮಟ್ಟದಲ್ಲಿ, ಯಾವ ರೀತಿಯಲ್ಲಿ ಇದೆ ಎಂಬುದನ್ನು ಯೋಚನೆ ಮಾಡಬೇಕು. ಇನ್ನೊಂದು ಅಂಶವೇನೆಂದರೆ, ಒಂದು ಕಡೆ ಜನಸಂಖ್ಯೆ ಏರುತ್ತಾ ಇದೆ, ಮತ್ತೊಂದು ಕಡೆ ಮಳೆಯಿಲ್ಲದೆ, ಬೆಳೆಯತಕ್ಕದ್ದು ಕಡಿಮೆಯಾಗುತ್ತಾ ಇದೆ. ಹಳ್ಳಿಯಲ್ಲಿ ನಾವು ಏನು ಲೆಕ್ಕ ಇಟ್ಟುಕೊಂಡಿದ್ದೇವೆ, 100ಕ್ಕೆ 10 ನೀರಾವರಿಯಾಗತಕ್ಕ ಜಮೀನು ಇದೆ ಎಂದು ಏನು ಹೇಳುತ್ತಿದ್ದೇವೆ, ಅದು ಬಹುಶಃ 4–5 ಪರ್‌ಸೆಂಟಿಗಿಂತ ಹೆಚ್ಚಾಗಿಲ್ಲ. ಅಷ್ಟೊಂದು ಕಡಿಮೆ ವಿಸ್ತೀರ್ಣದಲ್ಲಿ ಬಹುತೇಕ ಬೆಳೆಯತಕ್ಕ ಜನಸಂಖ್ಯೆಗೆ ಆಹಾರ ಒದಗಿಸಬೇಕಾದರೆ, ಯಾವ ರೀತಿ ಸಾಧ್ಯವೆಂಬುದನ್ನು ಯೋಚನೆ ಮಾಡಬೇಕಾಗಿದೆ. ಆದ್ದರಿಂದ ಇನ್ನು ಮೇಜರ್ ಇರಿಗೇಶನಾಗಲಿ, ಮಧ್ಯಮ ಇರಿಗೇಶನಾಗಲಿ, ಸಣ್ಣ ನೀರಾವರಿಯಾಗಲಿ, ಅಥವಾ ಲಿಫ್ಟ್ ಇರಿಗೇಶನಾಗಲಿ ಇವುಗಳನ್ನು ಎಷ್ಟೆಷ್ಟು ಹೆಚ್ಚಿಸಿಕೊಳ್ಳಲು ಸಾಧ್ಯವಿದೆ, ಅಷ್ಟನ್ನು ಹೆಚ್ಚಿಸಿಕೊಳ್ಳಬೇಕು. ಈ ಹಣದ ಕೊರತೆಯನ್ನು ಸರಿದೂಗಿಸಲು, ಈ ಸದನದಲ್ಲಿ ಕೆಲವು ಸದಸ್ಯರು, ಏಕೆ ಒಂದು ನೀರಾವರಿ ಕಾರ್ಪೊರೇಷನ್ ಎಂಬುದನ್ನು ರಚನೆ ಮಾಡಬಾರದು ಎಂದು ಕೇಳಿದ್ದಾರೆ. ಈಗ ಭೂಮಿಯ ಅಭಿವೃದ್ಧಿಗೆ ಸಾಲ ಕೊಡುತ್ತಿದ್ದಾರೆ. ಅದಕ್ಕೆ ಕಡಿಮೆ ದರದ ಬಡ್ಡಿಯನ್ನು ಹಾಕುತ್ತಿದ್ದಾರೆ. ಅಲ್ಲಿ ಆಗತಕ್ಕ ನಷ್ಟವನ್ನು ಸರ್ಕಾರದವರು ಸಬ್ಸಿಡಿ ಕೊಟ್ಟು ಭರ್ತಿ ಮಾಡುತ್ತಾರೆ. ಯಾವ ರೀತಿ ಭೂಮಿ ಅಭಿವೃದ್ಧಿ ಬ್ಯಾಂಕಿಗೆ ಆದ ನಷ್ಟವನ್ನು ಸರ್ಕಾರದವರು ಸರಿದೂಗಿಸುತ್ತಾರೋ, ಅದೇ ರೀತಿ ಸಹಕಾರಿ ಸಂಘಗಳಲ್ಲಿಯೂ ಆಗತಕ್ಕ ನಷ್ಟಕ್ಕೆ ಮ್ಯಾನೇಜೀರಿಯಲ್ ಕಾಸ್ಟ್ ಎಂದು ಸರ್ಕಾರ ಕೋಟಿಗಟ್ಟಲೆ ಹಣವನ್ನು ಕೊಡುತ್ತಿದ್ದಾರೆ. ಅದೇ ರೀತಿ ಸಬ್ಸಿಡಿ ಕೊಟ್ಟು ನೀರಾವರಿ ಕಾರ್ಪೊರೇಷನ್ ರಚನೆ ಮಾಡಿ, ಎರಡು ಮೂರು ಕಾರ್ಪೊರೇಷನ್ ಮಾಡಿ ಅದರ ಮೂಲಕ 5—10 ವರ್ಷಗಳಲ್ಲಿ ನೀರಾವರಿ ಸೌಲಭ್ಯಗಳನ್ನು ಮುಗಿಸಬೇಕು ಎಂಬ ಒಂದು ಧೃಢ ಮನಸ್ಸು ಮಾಡಿ, ಬಜೆಟಿನಲ್ಲಿ ಎಷ್ಟು

ಸಾಧ್ಯವೋ, ಅಷ್ಟು ಕೊಟ್ಟು, ಷೇರ್ ಭಂಡವಾಳ ಎಷ್ಟು ಸಾಧ್ಯ ಅಷ್ಟು ಕೊಟ್ಟು ಏಕೆ ನೀರಾವರಿ ಸೌಕರ್ಯಗಳನ್ನು ಮುಂದುವರಿಸಬಾರದು ? ಅದು ರಾಷ್ಟ್ರ ಮಟ್ಟದ ನೀರಾವರಿ ಯೋಜನೆಯಾಗಲಿ, ರಾಜ್ಯಮಟ್ಟದ ನೀರಾವರಿ ಯೋಜನೆಯಾಗಲಿ, ಅಥವಾ ಸದಸ್ಯರು ಹೇಳು ತ್ತಿರುವ ಸಣ್ಣ ನೀರಾವರಿ ಸೌಲಭ್ಯವಾಗಲಿ, ಅವುಗಳನ್ನು ಹೆಚ್ಚಿಸಿ ನಮ್ಮ ದೇಶದಲ್ಲಿ ರೈತರು ಎಲ್ಲಾ ಅನುಕೂಲಗಳನ್ನು ಪಡೆಯುವಂತೆ ಮಾಡಿಕೊಡಬೇಕು. ಇನ್ನು ಬರೇ ವ್ಯವಸಾಯ ಇಲಾಖೆಯಲ್ಲಿ ಸಿಬ್ಬಂದಿಯನ್ನು ಹೆಚ್ಚು ಮಾಡಿದರೆ, ವ್ಯವಸಾಯ ಅಭಿವೃದ್ಧಿಯಾಗುವುದಿಲ್ಲ. ಇವತ್ತು ಒಂದು ಕಡೆ ರಾಸಾಯನಿಕ ಗೊಬ್ಬರದ ಬೆಲೆ ಹೆಚ್ಚಾಗುತ್ತಿದೆ. ಇನ್ನೊಂದು ಕಡೆ ವ್ಯವಸಾಯದ ಉಪಕರಣಗಳ ಬೆಲೆಯೂ ಏರುತ್ತಾ ಹೋಗುತ್ತಿವೆ. ಇವತ್ತು ಹೆಚ್ಚಾಗಿ ಬೆಳೆಯಬೇಕಾದರೆ, ಶಾಸ್ತ್ರೀಯವಾದ ಪದ್ಧತಿಗಳನ್ನು, ಆಧುನಿಕ ಪದ್ಧತಿಗಳನ್ನು ಅನುಸರಿಸಬೇಕೆಂದು ಹೇಳುತ್ತಿದ್ದಾರೆ. ಎಲ್ಲಾ ಪದ್ಧತಿಯನ್ನು ಅನುಸರಿಸಿದರೂ, ಫಸಲು ಇಟ್ಟರೂ ಫಸಲು ಬರತಕ್ಕ ಕಾಲದಲ್ಲಿ ಮಳೆ ಬರದಿದ್ದರೆ ಅವನ ಗತಿ ಏನು ! ಇವತ್ತು ಆಧುನಿಕ ಪದ್ಧತಿಗಳನ್ನು ಅನುಸರಿಸಿ ಮಾಡತಕ್ಕ ರೈತರು ಎಷ್ಟು ಜನರು ಸಿಕ್ಕುತ್ತಾರೆ ? ಅವನಿಗೆ ತಾನು ಹಾಕಿದ ಫಸಲು ಸಿಕ್ಕದೆ ಹೋದರೆ, ಆತನ ಕುಟುಂಬದವರು ಹೇಗೆ ಜೀವನ ಮಾಡಬೇಕು ಮತ್ತು ಮಾಡಿರತಕ್ಕ ಸಾಲವನ್ನು ಹೇಗೆ ತೀರಿಸಬೇಕು ! ಇನ್ನು ಬಾವಿಗಳಿಗೆ ಸಾಲ ಕೊಡುವ ವಿಚಾರದಲ್ಲೂ ಸ್ವಲ್ಪ ಬದಲಾವಣೆಯಾಗ ಬೇಕು. ಎರಡು ವರ್ಷಗಳ ಹಿಂದೆ ತಾಲ್ಲೂಕುಬೋರ್ಡಿನವರು ಸಾಲ ಕೊಡುತ್ತಿದ್ದರು. ಆಯಾ ತಾಲೂಕು ಬೋರ್ಡಿನವರು ಸ್ಥಳೀಯ ಸ್ಥಿತಿಗಳಿಗೆ ಅನುಗುಣವಾಗಿ ಕೊಡುತ್ತಿದ್ದರು. ಒಂದೊಂದು ಕಂತಿನಲ್ಲಿ 500 ರೂಪಾಯಿ ಕೊಟ್ಟಲ್ಲಿ ಸದುಪಯೋಗವಾಗುತ್ತದೆ. ನಂತರ ಮತ್ತೊಂದು ಕಂತಿನಲ್ಲಿ 500 ರೂಪಾಯಿ ಪ್ರಕಾರ ಕೊಟ್ಟಲ್ಲಿ ಸದುಪಯೋಗವಾಗುತ್ತದೆ. ಭೂಮಿ ಅಭಿವೃದ್ಧಿ ಬ್ಯಾಂಕಿನವರು ಎಷ್ಟೋ ಸಲ ಮೊದಲನೆಯ ಇನ್‌ಸ್ಟಾಲ್‌ಮೆಂಟ್‌ನಲ್ಲಿ ಒಂದೂವರೆ ಸಾವಿರ ರೂಪಾಯಿ ಕೊಡುತ್ತಿದ್ದಾರೆ. ರೈತನಿಗೆ ಹಣದ ಅಭಾವವಿರುತ್ತದೆ, ಸಾಲ ಇರುತ್ತದೆ, ಆಗ ಅದು ಅಲ್ಲೇ ಬಟವಾಡೆ ಯಾಗುತ್ತದೆ. ಇದರಿಂದ ಬಾವಿಗಳ ಕೆಲಸ ಆಗುವುದಿಲ್ಲ. ಆದರೆ ಅವನು ಸಾಲಗಾರ ಆದ ಎನ್ನುವ ಲೆಕ್ಕ ಬರುತ್ತದೆ. ನೀರಾವರಿ ಬಾವಿಗಳಿಗೆ ಇಷ್ಟೊಂದು ಹಣವನ್ನು ಕೊಟ್ಟಿದ್ದೇವೆ ಎಂದು ಲೆಕ್ಕದಲ್ಲಿ ಇರುತ್ತದೆ. ಕಳೆದಸಾರಿ ಭೂ ಅಭಿವೃದ್ಧಿ ಬ್ಯಾಂಕಿನಿಂದ ಬೇಕಾದಷ್ಟು ಬಾವಿಗಳಿಗೆ ಹಣವನ್ನು ಮಂಜೂರುಮಾಡಿ ಸೆಕೆಂಡ್ ಇನ್‌ಸ್ಟಾಲ್‌ಮೆಂಟ್ ಹಣವನ್ನು ರೈತರಿಗೆ ಕೊಡುವುದಕ್ಕೆ ಬ್ಯಾಂಕಿನಲ್ಲಿ ದುಡ್ಡು ಇಲ್ಲದೆ ತನ್ನ ಭಾಗದ ಹಣವನ್ನು ಕೊಡದೆ ಬಾವಿಗಳ ಕೆಲಸ ಹಾಗೆಯೇ ನಿಂತಿದೆ. ಮಳೆ ಗಾಲ ಬಂದರೆ 10-15 ಅಡಿ ಬಾವಿಯನ್ನು ತೋಡಿರುವ ರೈತನ ಪಾಡು ಏನು ! ಮಳೆ ಬಂದಾಗ ಅರ್ಧಂಬರ್ಧ ತೋಡಿರುವ ಬಾವಿಯ ದಡ ಕುಸಿದು ಬೀಳುತ್ತದೆ ಇವೆಲ್ಲಾ ವಿಚಾರಗಳನ್ನೂ ಯೋಚನೆ ಮಾಡಿದರೆ ಯಾವ ರೈತನಿಗೂ ಸಣ್ಣ ನೌಕರಿದಾರನಿಗೆ ಬರುವಷ್ಟು ಖಾಯಂ ಆದ ವಾರ್ಷಿಕ ಸಂಪಾದನೆ ಬರುವುದಿಲ್ಲ ಎಂದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಅಧಿಕಾರಿಗಳಿಗಾಗಲೀ ವ್ಯಾಪಾರಸ್ಥರಿಗಾಗಲೀ ಖಾಯಂ ಆದ ವಾರ್ಷಿಕ ಆದಾಯ ಬಂದೇ ಬರುತ್ತದೆ. ವ್ಯಾಪಾರಸ್ಥನ ಬಂಡವಾಳಕ್ಕೆ ಅಧಿಕವಾದ ಲಾಭ ಬರುತ್ತದೆ. ಆದರೆ ರೈತನು ಹಾಕಿದಂತಹ ಬಂಡವಾಳಕ್ಕೆ ತಕ್ಕ ಹಾಗೆ ಅವನಿಗೆ ಆದಾಯ ಬರುವುದಿಲ್ಲ. 3-4 ವರ್ಷಗಳೇನಾದರೂ ಫಸಲು ಹೋದರೆ ರೈತ ಕುಸಿದು ಬಿದ್ದು ಹೋಗುತ್ತಾನೆ ಎಂದು ನಾನು ಹೇಳಬಯಸುತ್ತೇನೆ.

ಈಗ ಸರ್ಕಾರದವರು ಬೇಕಾದಷ್ಟು ಕೃಷಿ ಫಾರಂಗಳನ್ನು ನಡೆಸುತ್ತಿದ್ದಾರೆ 100 ಎಕರೆ 500 ಎಕರೆ ಫಾರಂಗಳಲ್ಲಿ ಆಧುನಿಕ ಸೌಲಭ್ಯ ಸಲಕರಣೆಗಳನ್ನು ಉಪಯೋಗಿಸುತ್ತಿದ್ದಾರೆ. ಅವುಗಳ ಮೇಲ್ವಿಚಾರಣೆಗೆ ಪದವೀಧರರನ್ನು ನೇಮಕ ಮಾಡಿದ್ದಾರೆ. ಎಷ್ಟು ಫಾರಂಗಳಲ್ಲಿ ಸರ್ಕಾರದವರು ಆದಾಯವನ್ನು ತೆಗೆದಿದ್ದಾರೆ ? ಸರ್ಕಾರ ತನ್ನ ಅಧೀನದಲ್ಲಿರತಕ್ಕ ಫಾರಂಗಳಲ್ಲಿ ಆದಾಯವನ್ನು ತೆಗೆಯುವುದಕ್ಕೆ ಸಾಧ್ಯವಿಲ್ಲದೆ ಲಕ್ಷಾಂತರ ರೂಪಾಯಿಗಳನ್ನು ಕಳೆದುಕೊಳ್ಳುತ್ತಿದ್ದಾರೆ. ಹೀಗಿರುವಾಗ ಸರ್ಕಾರದವರಿಗಿಂತ ರೈತರು ವ್ಯವಸಾಯದಲ್ಲಿ ಅಧಿಕವಾದ ಸಂಪಾದನೆಯನ್ನು ಮಾಡುತ್ತಾರೆಂದು ಯಾವ ಆಧಾರದಮೇಲೆ ಹೇಳುತ್ತಾರೋ ನನಗೆ ಅರ್ಥವಾಗುವುದಿಲ್ಲ.

ಲಿಫ್ಟ್ ಇರಿಗೇಷನ್ ಮತ್ತು ಸಣ್ಣ ನೀರಾವರಿ ಕೆಲಸಗಳಿಗೆ ಇಷ್ಟೇ ಹಣವನ್ನು ಖರ್ಚು ಮಾಡಬೇಕೆಂದು ಪರಮಾವಧಿಯನ್ನು ಗೊತ್ತುಮಾಡಿದ್ದಾರೆ. ಅದನ್ನು ತೆಗೆದುಹಾಕಬೇಕು. ಇಲ್ಲದಿದ್ದರೆ ಅತಿ ಸ್ವಲ್ಪ ಕಾಲದಲ್ಲಿ ಹೆಚ್ಚು ಉಪಯೋಗವನ್ನು ಪಡೆಯುತಕ್ಕ ರೈತರು ತೊಂದರೆಯನ್ನು ಅನುಭವಿಸಬೇಕಾಗುತ್ತದೆ.

ಈಗ ಮಂಡ್ಯ ಜಿಲ್ಲೆಯಲ್ಲಿ ಕಬ್ಬು ಬೆಳೆಯತಕ್ಕವರಿಂದ ಎಕರೆಗೆ 6 ರೂಪಾಯಿ ಸೆಸ್ಸನ್ನು ವಸೂಲು ಮಾಡುತ್ತಿದ್ದಾರೆ. ಅಲ್ಲಿ ನಾಲಾ ಪ್ರದೇಶದಲ್ಲಿ 1,500 ಮೈಲ ರಸ್ತೆಯನ್ನು ಇಂಟ

(ಶ್ರೀ ಎಂ. ಮಂಚೇಗೌಡ)

ಗ್ರೇಷನ್ ಆಗುವುದಕ್ಕಿಂತ ಮುಂಚೆಯೇ ಫಾರ್ಮೇಷನ್ ಮಾಡಿದ್ದಾರೆ. ಈಗ ಸುಮಾರು 10 ವರ್ಷಗಳಿಂದ ಇಲ್ಲಿಯವರೆಗೂ ಆ ರಸ್ತೆಗಳನ್ನು ರಿಪೇರಿ ಮಾಡಿಲ್ಲ. ಸರಿಯಾಗಿ ಮೇಂಟೇನ್ ಮಾಡಿ ಕೊಂಡು ಬರುತ್ತಿಲ್ಲ. ಅಲ್ಲಿ ರಸ್ತೆಗಳೆಲ್ಲಾ ಗುಂಡಿ ಬಿದ್ದಿವೆ. ಆ ರಸ್ತೆಗಳನ್ನು ಸರ್ಕಾರದವರು ಸರಿಯಾಗಿ ಮೇಂಟೇನ್ ಮಾಡದೇ ಹೋದರೆ ನಾವು ತೆರಿಗೆಯನ್ನು ಕೊಡುವುದಿಲ್ಲ ಎಂದು ಹೇಳಬೇಕಾದ ಸಂದರ್ಭ ಬರುತ್ತದೆ. ಆದ್ದರಿಂದ ನಮ್ಮ ಮಂಡ್ಯ ಜಿಲ್ಲೆಯಲ್ಲಿ ನಾನಾ ಪ್ರದೇಶದಲ್ಲಿ ಇರತಕ್ಕ ರಸ್ತೆ ಏನಿದೆ ಅದನ್ನು ರಿಪೇರಿ ಮಾಡಿಸಿ ಅದನ್ನು ಸರಿಯಾದ ರೀತಿಯಲ್ಲಿ ಮೇಂಟೇನ್ ಮಾಡುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕೆಂದು ನಾನು ಹೇಳುತ್ತೇನೆ. ಇಷ್ಟು ಹೇಳಿ ನನಗೆ ಮಾತನಾಡು ವುದಕ್ಕೆ ಅವಕಾಶವನ್ನು ಕೊಟ್ಟದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ಮಲ್ಲಪ್ಪ (ಬೀರೂರು).—ಸನ್ಮಾನ್ಯ ಅಧ್ಯಕ್ಷಿಣಿಯವರೇ, ಮಾನ್ಯ ಲೋಕೋಪ ಯೋಗಿ ಶಾಖೆಯ ಸಚಿವರು ಈ ಸದನದಲ್ಲಿ ಮಂಡಿಸಿರುವ ಬೇಡಿಕೆಗಳನ್ನು ವಿರೋಧಿಸುತ್ತಾ, ಒಂದೆರಡು ಸಲಹೆಗಳನ್ನು ನಾನು ಕೊಡಬಯಸುತ್ತೇನೆ. ನಮ್ಮ ರಾಜ್ಯದಲ್ಲಿ ಇರುವ ಸಣ್ಣ ಸಣ್ಣ ಕೆರೆಗಳನ್ನು ದುರಸ್ತಿ ಮಾಡಿ ರೈತರಿಗೆ ಏನಾದರೂ ಅನುಕೂಲ ಕಲ್ಪಿಸಿ ಕೊಡಬೇಕು ಎಂದು ಒಂದು ಯೋಜನೆಯನ್ನು ಹಾಕಿದರೆ ಕನಿಷ್ಠಪಕ್ಷ ಒಂದು 100 ಕೋಟಿ ರೂಪಾಯಿಗಳು ಈ ಸಣ್ಣ ಕೆರೆಗಳ ದುರಸ್ತಿಗಾಗಿಯೇ ಬೇಕಾಗುತ್ತದೆ. ಈ ವರ್ಷ ಸರ್ಕಾರದವರು ಸಣ್ಣ ಕೆರೆಗಳಿಗಾಗಿ 3 ಕೋಟಿ 80 ಲಕ್ಷ ರೂಪಾಯಿಗಳನ್ನು ಒದಗಿಸಿದ್ದಾರೆ. ಈ ರೀತಿ ಕೆಲಸ ಮಾಡಿದರೆ, ಕೆರೆಗಳನ್ನು ಈ ರೀತಿ ದುರಸ್ತಿ ಮಾಡಿದರೆ 100 ವರ್ಷಗಳಾದರೂ ಈ ಕೆಲಸವನ್ನು ಪೂರ್ತಿಗೊಳಿಸಲು ಸರ್ಕಾರಕ್ಕೆ ಸಾಧ್ಯವಿಲ್ಲ, ಎಂಬುದು ಇವರು ಈ ಸಭೆಯ ಮುಂದೆ ಮಂಡಿಸಿರುವ ಬೇಡಿಕೆಗಳಿಂದ ಕಂಡುಬರುತ್ತದೆ. ಈ ವರ್ಷ ಸರ್ಕಾರದವರು 20 ಸಾವಿರ ನೀರಾವರಿ ಬಾವಿಗಳನ್ನು ತೋಡ ಬೇಕು, 8 ಸಾವಿರ ಎಲೆಕ್ಟ್ರಿಕ್ ಪಂಪುಸೆಟ್ಟುಗಳ ಮೂಲಕ ರೈತರಿಗೆ ನೀರನ್ನು ಒದಗಿಸಬೇಕು, 3 ಸಾವಿರ ಡೀಜಲ್ ಎಂಜಿನ್‌ಗಳ ಮೂಲಕ ನೀರನ್ನು ಒದಗಿಸಬೇಕು, ಮತ್ತು 700 ಬೋರ್‌ವೆಲ್ ಗಳನ್ನು ಹಾಕಬೇಕು ಎಂದು ಯೋಜನೆಯನ್ನು ಹಾಕಿಕೊಂಡಿದ್ದಾರೆ. 20 ಸಾವಿರ ನೀರಾವರಿ ಬಾವಿಗಳ ಮೂಲಕ ನೀರನ್ನು ಒದಗಿಸಬೇಕು ಎಂದು ಏನು ಘೋಷಣೆ ಮಾಡಿದ್ದಾರೆ, ಆ ಪ್ರಕಾರ ರೈತರಿಗೆ ಬಾವಿಗಳನ್ನು ತೋಡುವುದಕ್ಕೆ ಹಣವನ್ನು ಒದಗಿಸಬೇಕಾದರೆ ಭೂ ಅಭಿವೃದ್ಧಿ ಬ್ಯಾಂಕುಗಳ ಮೂಲಕ ಒದಗಿಸಬೇಕು. ಮಾನ್ಯ ಸಚಿವರು ಪ್ರಶ್ನೋತ್ತರ ಕಾಲದಲ್ಲಿ ಉತ್ತರಕೊಟ್ಟ ಹಾಗೆ ನಮ್ಮ ರಾಜ್ಯದಲ್ಲಿ ಬಹುತೇಕ ಭೂ ಅಭಿವೃದ್ಧಿ ಬ್ಯಾಂಕುಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಎಷ್ಟೋ ಬ್ಯಾಂಕುಗಳು ಡಿಫಂಕ್ಟ್ ಆಗಿವೆ. ಒಂದು ಇನ್ಸ್ಟಾಲ್‌ಮೆಂಟ್ ಕೊಟ್ಟು ಉಳಿದ ಹಣವನ್ನು ಕೊಡುವುದಕ್ಕೆ ಸಾಧ್ಯವಿಲ್ಲದೆ ಇರತಕ್ಕ ಪರಿಸ್ಥಿತಿ ಇವೊತ್ತು ಒದಗಿದೆ. ಸರ್ಕಾರದವರು ಈ ಬಾಬಿಗೆ ಏನು ಹಣವನ್ನು ಒದಗಿಸಿದ್ದಾರೆ ಅದು ರೈತನಿಗೆ ಮುಟ್ಟಿ ಅದರಿಂದ ರೈತರಿಗೆ ಎಷ್ಟರ ಮಟ್ಟಿಗೆ ಅನುಕೂಲವಾಗುತ್ತದೆ ಎಂಬುದನ್ನು ಹೇಳುವುದಕ್ಕಾಗುವುದಿಲ್ಲ. ಎಲೆಕ್ಟ್ರಿಕ್ ಪಂಪುಸೆಟ್ಟುಗಳನ್ನು ಹಾಕಬೇಕು ಎಂದು ರೈತ ಸರ್ಕಾರಕ್ಕೆ ಅರ್ಜಿಯನ್ನು ಕೊಟ್ಟರೆ ಅದನ್ನು ಮಂಜೂರು ಮಾಡುವುದಕ್ಕೆ ಒಬ್ಬರಮೇಲೊಬ್ಬರು ತೋರಿಸಿ ರೈತನ ಬೇಡಿಕೆಯನ್ನು ಪೂರೈಸಲು ಯಾರೂ ಮುಂದೆ ಬರುವುದಿಲ್ಲ. ಈಗ ಸಭೆಯ ಮುಂದೆ ಇಟ್ಟಿರತಕ್ಕಂಥ ಬೇಡಿಕೆ ಏನಿದೆ ಇದು ಬರೀ ಒಂದು ತೋರಾಣಿಕೆಯ ನಾಟಕದ ಬೇಡಿಕೆ ಆಗಿದೆಯೇ ಹೊರತು ಇದರಿಂದ ರೈತರಿಗೆ ಯಾವ ವಿಧವಾದ ಅನುಕೂಲವೂ ಆಗುತ್ತಿಲ್ಲ, ಎಂದು ನಾನು ಹೇಳಬಯಸುತ್ತೇನೆ. ಇವೊತ್ತಿನ ದಿವಸ ನೀರಾವರಿ ಯೋಜನೆಗಳಿಗೆ ಸರ್ಕಾರದವರು ನಿಜವಾಗಿ ಹಣವನ್ನು ಒದಗಿಸಿ ರೈತರಿಗೆ ಅನುಕೂಲ ಮಾಡಬೇಕು ಎಂದರೆ ಸಣ್ಣ ನೀರಾವರಿ ಯೋಜನೆಗೆ ವರ್ಷೇ ವರ್ಷೇ 10 ಕೋಟಿ ರೂಪಾಯಿಗಳನ್ನು ಆದರೂ ಮೀಸಲಾಗಿಡಬೇಕು. ಇವೊತ್ತಿನ ದಿವಸ ನಮ್ಮ ರಾಜ್ಯದಲ್ಲಿ ಎಲ್ಲಾ ಕಡೆಗಳಲ್ಲೂ ಕೂಡ ನೀರಾವರಿ ಕಾಮಗಾರಿಗಳು ಎಷ್ಟರ ಮಟ್ಟಿಗೆ ಆಗಬೇಕೋ ಅಷ್ಟರ ಮಟ್ಟಿಗೆ ಆಗುತ್ತಿಲ್ಲ. ಅವುಗಳಿಗೆ ಹಣವನ್ನು ಸರಿಯಾಗಿ ಕೊಡದೆ ಕೆಲಸಗಳು ಪೂರ್ತಿ ಆಗುವುದಿಲ್ಲ. ಇನ್‌ವೆಸ್ಟಿಗೇಷನ್ ಡಿವಿಜನ್‌ನಲ್ಲಿ ಒಂದು ನಾಟಕ ಮಾಡುತ್ತಿದ್ದಾರೆ. ಒಂದು ಕೆರೆ ಕಟ್ಟಬೇಕು ಎಂದರೆ ಅದನ್ನು ಇನ್‌ವೆಸ್ಟಿಗೇಷನ್ ಡಿವಿಜನ್‌ನವರು ಪರಿಶೀಲನೆಮಾಡಿ ಅದಕ್ಕೆ ಅಂದಾಜು ತಯಾರುಮಾಡಿ ಅದು ಸರ್ಕಾರಕ್ಕೆ ಮುಟ್ಟಬೇಕಾದರೆ 3 ವರ್ಷಗಳಾಗುತ್ತದೆ. ಅದನ್ನು ಸರ್ಕಾರದವರು ಮಂಜೂರುಮಾಡಿ ಆ ಕೆಲಸ ಪೂರ್ತಿ ಆಗಬೇಕಾದರೆ 10 ವರ್ಷಗಳಾಗುತ್ತದೆ. ಈಗ ನಮ್ಮ ಜಿಲ್ಲೆಯಲ್ಲಿ ವಿಷ್ಣು ಹೊಳೆ ಎನ್ನತಕ್ಕಂಥ ಒಂದು ಹೊಳೆ ಹರಿಯುತ್ತದೆ. ಆ ಹೊಳೆಗೆ ಅಡ್ಡಗಟ್ಟೆ ಹಾಕಿ ಒಂದು ಅಣೆಕಟ್ಟನ್ನು ಕಟ್ಟಿಸಿಕೊಟ್ಟು ರೈತರಿಗೆ ಅನುಕೂಲ ಮಾಡಿದರೆ

ಸಾವಿರಾರು ಎಕರೆ ನೀರಾವರಿ ಆಗುತ್ತದೆ. ಈ ಬಗ್ಗೆ ಒಂದು ತೀರ್ಮಾನವನ್ನು ಕೈಗೊಳ್ಳುವುದಕ್ಕೆ ಚೀಫ್ ಇಂಜಿನಿಯರು ಯಾರು ಯಾರೋ ಅಲ್ಲಿಗೆ ಎಷ್ಟೋ ಸಾರಿ ಬಂದು ಹೋದರೂ, ಅದನ್ನು ನೋಡಿಕೊಂಡು ಹೋದರೂ ಆ ಬಗ್ಗೆ ತೀರ್ಮಾನವನ್ನು ಕೈಗೊಳ್ಳಲಿಲ್ಲ. ತಾತ್ಸಾರ ಮನೋಭಾವನೆಯಿಂದ ಕೆಲಸ ನಡೆಯುತ್ತಿದೆ. ನಮ್ಮ ಜಿಲ್ಲೆಯ ಬಗ್ಗೆ ಸರ್ಕಾರಕ್ಕೆ ತಾತ್ಸಾರ ಮನೋಭಾವನೆ ಇದೆ. ನಮ್ಮ ಜಿಲ್ಲೆಯಲ್ಲಿ ವಿರೋಧ ಪಕ್ಷದವರು ಬಹಳ ಜನ ಇದ್ದಾರೆ. ಆದ್ದರಿಂದ ಆ ಜಿಲ್ಲೆಗೆ ಹೆಚ್ಚು ಹಣವನ್ನು ಒದಗಿಸಬಾರದು ಎನ್ನುವ ದೃಷ್ಟಿಯಿಂದ, ವಿರೋಧ ಪಕ್ಷದವರ ಬಡ್ಜೆಟ್ಟನ್ನು ನಮ್ಮ ಜಿಲ್ಲೆಗೆ ತಯಾರು ಮಾಡಿದ್ದಾರೋ ಏನೋ ಎಂದು ಅನಿಸುತ್ತದೆ. ಇದಕ್ಕೆ ಸರ್ಕಾರದವರು ದೇವರ ಮುಂದೆ ಉತ್ತರ ಕೊಡಲಿ ಎಂದು ನಾನು ಹೇಳುತ್ತೇನೆ. ನಮ್ಮ ಜಿಲ್ಲೆಯಲ್ಲಿ ಬೇಕಾದಷ್ಟು ಕೆರೆಗಳ ದುರಸ್ತಿ ಆಗಬೇಕು. ಹೊಸ ಕೆರೆಗಳ ನಿರ್ಮಾಣ ಆಗಬೇಕು. ಆದರೆ ನಮ್ಮ ಜಿಲ್ಲೆಗೆ ಒದಗಿರುವ ಹಣ ಬಹಳ ಅಲ್ಪ. ಇನ್‌ವೆಸ್ಟಿಗೇಷನ್ ಆಗಿರತಕ್ಕ ಕೆರೆಗಳು ಬೇಕಾದಷ್ಟು ಇವೆ. ಇವರು ಈಗ ಕೊಟ್ಟಿರತಕ್ಕ ಹಣದಲ್ಲಿ ಒಂದು ಹೊಸ ಕೆರೆಯನ್ನು ಕಟ್ಟಬಹುದು ಎಂದು ಕಾಣುತ್ತದೆ. ನಮ್ಮ ಜಿಲ್ಲೆಯಲ್ಲಿ ಸುಮಾರು 20 ಕೆರೆಗಳ ಇನ್‌ವೆಸ್ಟಿಗೇಷನ್ ಪೂರ್ತಿ ಆಗಿ ಸರ್ಕಾರದ ಮಂಜೂರಾತಿಗಾಗಿ ಬಂದಿವೆ. ಇವುಗಳಿಗೆ ಸರ್ಕಾರದವರು ಹಣವನ್ನು ಒದಗಿಸದೆ ಲೋಪಮಾಡುತ್ತಿದ್ದಾರೆ. ಇದರಿಂದ ನೀವು ದೇಶಕ್ಕೆ ಮತ್ತು ದೇವರಿಗೆ ದ್ರೋಹ ಬಗೆದಂತಾಗುತ್ತದೆ. ಈ ವಿಚಾರವನ್ನು ತಾವು ತಮ್ಮ ಮನಸ್ಸಿನಲ್ಲಿ ಪರಿಗಣಿಸಬೇಕು. ಆದಕಾರಣ ಈ ಬಾಬಿಗೆ ತಾವು ಹೆಚ್ಚು ಹಣವನ್ನು ಒದಗಿಸಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇನ್ನು ಸಣ್ಣ ನೀರಾವರಿಯ ಬಗ್ಗೆ ಸರ್ಕಾರದವರು ಸಾಕಷ್ಟು ಗಮನ ಕೊಡುತ್ತಿಲ್ಲ. ಈ ಸಣ್ಣ ನೀರಾವರಿ ಯೋಜನೆಗಳಿಂದ ಸರ್ಕಾರದವರಿಗೆ ಫಾಯಿದೆ ಕಾಣುತ್ತಿಲ್ಲವೆಂದು ಕಾಣುತ್ತದೆ. ಇಂತಹ ಕೆರೆಯನ್ನು ಕಟ್ಟಿದರೆ ಇಷ್ಟು ಖರ್ಚಾಗುತ್ತದೆ, ಇಷ್ಟು ಎಕರೆಗೆ ನೀರಾವರಿಯಾಗುತ್ತದೆ ಎಂಬುದಾಗಿ ಪ್ಲಾನನ್ನು ತಯಾರಿಸಿ ಶಹಭಾಸ್‌ಗಿರಿಯನ್ನು ಪಡೆಯುತ್ತಿದ್ದೀರೇ ಹೊರತು ಆ ಕಾರ್ಯಗಳನ್ನು ಕಾರತ್ಯಃ ಮಾಡುತ್ತಿಲ್ಲ. ಇವತ್ತಿನ ದಿವಸ ನಿಮ್ಮ ಇಲಾಖೆಯವರು ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿ ಕಟ್ಟಿಸಿದ ಕೆರೆಗಳು ಮಾರನೇ ವರ್ಷವೇ ಒಡೆದುಹೋಗುತ್ತೀವೆ. ತರೀಕೆರೆಯ ಹತ್ತಿರವಿರುವ ಲಿಂಗದಹಳ್ಳಿ ಜೋಡಿಕಟ್ಟೆಯನ್ನು 80 ಸಾವಿರ ರೂಪಾಯಿಗಳ ವೆಚ್ಚದಲ್ಲಿ ಕಟ್ಟಿದರು. ಕೆರೆ ಕಟ್ಟಿದ ಒಂದು ವರ್ಷದಲ್ಲಿ ಒಡೆದುಹೋಯಿತು. ಇದೇ ರೀತಿ ಒಂದು ಲಕ್ಷ 80 ಸಾವಿರ ರೂಪಾಯಿಗಳ ವೆಚ್ಚದ ಕಡದಕೊಳಲೆ ಕೆರೆಯನ್ನು ಕಟ್ಟಿಸಿದರು, ಅದು ಸಹ ಒಡೆದುಹೋಗಿದೆ. ಈ ರೀತಿ ಒಡೆದುಹೋದ ಕೆರೆಗಳನ್ನು ಪುನಃ ಕಟ್ಟಿಸಲು ನಿಮ್ಮ ಇಲಾಖೆಯವರಿಗೆ ನಾಚಿಕೆ ಎಂದು ಕಾಣುತ್ತದೆ. ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡಿದ ಕೆರೆಗಳು ಒಂದು ವರ್ಷದಲ್ಲಿಯೇ ಒಡೆದುಹೋಗಿರುವುದರಿಂದ ಮತ್ತೆ ಅದೇ ಸ್ಥಳದಲ್ಲಿ ಹಣ ಖರ್ಚುಮಾಡುವುದು ಸರಿಯಲ್ಲವೆಂದು ನಾಚಿಕೆಯಿಂದ ಕೈಬಿಟ್ಟಿದ್ದಾರೆ. ರೈತರಿಗೆ ಯಾವ ರೀತಿ ಉಪಕಾರ ಮಾಡುತ್ತಿದ್ದೀರಿ ಎಂಬುದಕ್ಕೆ ಇದು ಒಂದು ನಿದರ್ಶನ. ಬೀರೂರಿನ ಹತ್ತಿರ ಮಡದಗೆರೆಗೆ ಒಂದು ನಾಲಾ ಇದೆ. ಇದಕ್ಕೆ ಮೊದಲು ಸೂಪರ್ ಪ್ಯಾಸೇಜಸ್ ಮಾಡಬೇಕೆಂದು ಯೋಚನೆ ಇರಲಿಲ್ಲ. ಆದರೆ ಚೀಫ್ ಇಂಜಿನಿಯರ್ ಅವರು ಈ ಭಾಗವನ್ನು ಪರಿಶೀಲನೆಮಾಡಿ ಒಂದು ರೋಡ್ ತಯಾರುಮಾಡುವುದಕ್ಕೆ ತಮ್ಮ ಅಭಿಪ್ರಾಯ ಕೊಟ್ಟರು. ಇದಕ್ಕಾಗಿ 80 ಸಾವಿರ ರೂಪಾಯಿಗಳನ್ನು ಸಹ ಖರ್ಚು ಮಾಡಿದರು. ಇದರ ಪರಿಣಾಮದಿಂದ ಕೆರೆಯ ಕೆಳಗಿರುವ ಜಮೀನಿಗೆ ಈ ನಾಲೆಯ ನೀರು ಬರುವುದಕ್ಕೆ ತೊಂದರೆಯಾಗಿದೆ. ಇದನ್ನು ಚೀಫ್ ಇಂಜಿನಿಯರ್ ಸಹ ನೋಡಿ ಬಂದಿದ್ದಾರೆ. ಒಂದು ನಾಲೆಯ ಮೂಲಕ ಹರಿದು ಬರುವ ನೀರನ್ನು ನಾಲೆಯ ಕೊನೆಯಲ್ಲಿರುವ ಜಮೀನಿಗೆ ಉಪಯೋಗ ಮಾಡಿಕೊಳ್ಳುತ್ತಿದ್ದಾರೆ. ಇದರಿಂದ ನ್ಯಾಯವಾಗಿ ನಾಲೆಯ ಕೆಳಗಿರುವ ಅಚ್ಚುಕಟ್ಟುದಾರರಿಗೆ ಸಿಗಬೇಕಾದ ನೀರು ಸಿಗುತ್ತಿಲ್ಲ. ಇದನ್ನು ಮುಚ್ಚಿಬಿಡಿ ಎಂದರೆ 80 ಸಾವಿರ ರೂಪಾಯಿಗಳನ್ನು ವಿವೇಚನೆಯಿಂದ, ತಾಂತ್ರಿಕ ರೀತಿಯಿಂದ ಖರ್ಚುಮಾಡಿದ್ದೇವೆ, ಯಾವ ರೀತಿ ಮುಚ್ಚುವುದು ಎಂದು ನಮಗೆ ಪ್ರಶ್ನೆ ಹಾಕುತ್ತಾರೆ. ಇದರಿಂದ ನಿಜವಾಗಿಯೂ ಆ ಭಾಗದ ರೈತರಿಗೆ ಕಷ್ಟವಾಗುತ್ತಿದೆ. ಆದಕಾರಣ ಮೊದಲಿನಂತೆ ಈ ರೈತರ ಜಮೀನಿಗೆ ನೀರನ್ನು ಒದಗಿಸಿ ಅವರ ಕಷ್ಟವನ್ನು ನಿವಾರಣೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತು ಈ ಬಗ್ಗೆ ತಾವು ದಯವಿಟ್ಟು ಯೋಚನೆ ಮಾಡಬೇಕು. ಗ್ರಾಮಾಂತರ ಪ್ರದೇಶದಲ್ಲಿರುವ ರೈತರ ಬಗ್ಗೆ ತಮಗೆ ಕಳಕಳಿ ಇದ್ದರೆ ಅವರಿಗೆ ಬೇಕಾಗುವ ಸೌಕರ್ಯಗಳನ್ನು ಒದಗಿಸಿಕೊಡಿ. ನೀರನ್ನು ಒದಗಿಸುವುದು ನಿಮ್ಮ ಆದ್ಯಕರ್ತವ್ಯ. ರೈತರ ಮಟ್ಟ ಹೆಚ್ಚಾಗಬೇಕೆಂದು ಮಾತಿನಲ್ಲಿ ಹೇಳಿದರೆ ಸಾಧ್ಯವಾಗುವುದಿಲ್ಲ, ಕಾರ್ಯತಃ ಮಾಡಿ ತೋರಿಸಬೇಕೆಂದು ಈ ಸಮಯದಲ್ಲಿ ಹೇಳಬಯಸುತ್ತೇನೆ. ನಮ್ಮ ಜಿಲ್ಲೆಯಲ್ಲಿ ಒಂದು ಇನ್‌ವೆಸ್ಟಿಗೇಷನ್ ಡಿವಿಜನ್ ಇದೆ. ದಾಸರಹಳ್ಳಿಯ ಹತ್ತಿರ ಒಂದು ಕೆರೆ ಕಟ್ಟುವ ಬಗ್ಗೆ 7 ಲಕ್ಷ ರೂಪಾಯಿಗಳಿಗೆ ಒಂದು ಎಸ್ಟಿಮೇಟ್ ತಯಾರುಮಾಡಿ, ನಂತರ ಯಾರೋ ಕಂಟ್ರಾಕ್ಟರ್‌ಗೆ ಅನುಕೂಲ ಮಾಡಿಕೊಡುವ

(ಶ್ರೀ ಎಂ. ಮಲ್ಲಪ್ಪ)

ದೃಷ್ಟಿಯಿಂದ 14 ಲಕ್ಷ ರೂಪಾಯಿಗಳವರೆಗೂ ಖರ್ಚು ಮಾಡಿ ಆ ಕೆಲಸವನ್ನು ಪೂರ್ತಿ ಮಾಡಿದ್ದಾರೆ. ಆದರೆ ಈ ಕೆರೆಯಿಂದ ಒಂದು ಎಕರೆಗೂ ಸಹ ನೀರಾವರಿಯಾಗುತ್ತಿಲ್ಲ. ಇಷ್ಟು ಹಣ ಖರ್ಚು ಮಾಡಿದ್ದು ಹೊಳೆಯಲ್ಲಿ ಹುಣಿಸೆಹಣ್ಣನ್ನು ತೊಳೆದಂತಾಯಿತು. ಈ ರೀತಿ ಕೆರೆಗಳನ್ನು ಕಟ್ಟಿಸುವಾಗ ಯೋಚನೆ ಮಾಡಿ ಕಟ್ಟಿಸಬೇಕು. ಇಲ್ಲದಿದ್ದರೆ ಇಂತಹ ಕೆಲಸಗಳನ್ನು ನಿಲ್ಲಿಸಿಬಿಡಬೇಕು. ಒಂದು ವಿಷಯವನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ, ಶ್ರೀ ಲಕ್ಕಪ್ಪನವರು ಈ ಇಲಾಖೆಯನ್ನು ವಹಿಸಿಕೊಂಡಮೇಲೆ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ರಸ್ತೆಗಳನ್ನು ಪ್ರಾಜೆಕ್ಟುಗಳನ್ನು ಹೆಚ್ಚು ಹೆಚ್ಚು ಮಾಡಿಸುತ್ತಿದ್ದಾರೆ. ಈ ಬಗ್ಗೆ ನಮಗೆ ಸ್ವಲ್ಪ ಆಶಾದಾಯಕವಾಗಿದೆ. ಕಳೆದ 20 ವರ್ಷಗಳಿಂದ ಆಗದೆ ನಿಂತ ಕೆಲಸಗಳನ್ನು ಈಗ ಮಾಡಿಸುತ್ತಿದ್ದಾರೆ. ಅದಕ್ಕಾಗಿ ಅವರನ್ನು ಅಭಿನಂದಿಸಬೇಕಾಗಿದೆ. ಇವತ್ತಿನ ದಿವಸ ನಮ್ಮ ಸರ್ಕಾರದವರು ಓವರ್‌ಬ್ರಿಡ್ಜ್ ಮತ್ತು ಅಂಡರ್ ಬ್ರಿಡ್ಜ್‌ಗಳ ಬಗ್ಗೆ ಅಷ್ಟೊಂದು ಗಮನ ಕೊಡುತ್ತಿಲ್ಲ. ಬೀರೂರಿನಲ್ಲಿ ಒಂದು ಬ್ರಿಡ್ಜ್ ಕಟ್ಟುವ ಬಗ್ಗೆ ನಾವುಗಳು ಕಳೆದ ಹತ್ತು ವರ್ಷಗಳಿಂದ ಕೇಳುತ್ತಿದ್ದೇವೆ. ಈ ಬಗ್ಗೆ ಕೇಂದ್ರ ಸರ್ಕಾರದವರು ತಮ್ಮ ಭಾಗದ ಹಣವನ್ನು ಕೊಡುವುದಕ್ಕೆ ಸಿದ್ಧರಾಗಿದ್ದಾರೆ. ಆದರೆ ನಮ್ಮ ಸರ್ಕಾರದವರು ತಮ್ಮ ಭಾಗದ ಹಣವನ್ನು ಕೊಡದೆ ಈ ಕೆಲಸ ನಿಂತಿದೆ. ಈ ಬಗ್ಗೆ ಮೈಸೂರು ಸರ್ಕಾರಕ್ಕೆ ಏನು ತೊಂದರೆ ಇದೆಯೋ ಎಂಬುದು ಗೊತ್ತಿಲ್ಲ. ಜನರಿಂದ ಬೇಡಿಕೆ ಬಂದಮೇಲೆ ಸರ್ಕಾರದವರು ಆ ಕೆಲಸವನ್ನು ಮಾಡಿಸಬೇಕು ಮತ್ತು ಆ ಬಗ್ಗೆ ನಿಗಾ ವಹಿಸಬೇಕೆಂದು ಹೇಳಿ ನನ್ನ ಎರಡು ಮಾತುಗಳನ್ನು ಮುಕ್ತಾಯಮಾಡುತ್ತೇನೆ.

† ಶ್ರೀ ಯಂಕಾನಾಯಕ್ (ಹರಪನಹಳ್ಳಿ).—ಮಾನ್ಯ ಅಧ್ಯಕ್ಷಿಣಿಯವರೇ, ಲೋಕೋಪಯೋಗಿ ಇಲಾಖೆಯ ಮಂತ್ರಿಗಳು ಮಂಡಿಸಿರತಕ್ಕಂಥ ಬೇಡಿಕೆಗಳನ್ನು ನಾನು ಸ್ವಾಗತಿಸುತ್ತಾ ನಾಲ್ಕು ಮಾತುಗಳನ್ನು ತಮ್ಮ ಮುಂದೆ ಹೇಳಲು ಇಚ್ಛಿಸುತ್ತೇನೆ. ಬಳ್ಳಾರಿ ಜಿಲ್ಲೆಯಲ್ಲಿ ನಾಲ್ಕಾರು ವರ್ಷಗಳಿಂದ ಅಭಾವಕ್ಕೆ ತುತ್ತಾಗಿರುವ ತಾಲ್ಲೂಕ್‌ಗಳು ಎಂದರೆ ಹರಪನಹಳ್ಳಿ, ಸಂಡೂರು, ಕೂಡ್ಲಗಿ ಮತ್ತು ಮಲ್ಲಾಪುರ. ಈ ತಾಲ್ಲೂಕ್‌ಗಳಲ್ಲಿ ಮಳೆ ಬೆಳೆ ಇಲ್ಲದೆ ಬರಗಾಲಕ್ಕೆ ತುತ್ತಾಗಿವೆ. ತುಂಗಭದ್ರಾ ಯೋಜನೆಯಿಂದ ನಮ್ಮ ಜಿಲ್ಲೆಯ ಕೆಲವು ತಾಲ್ಲೂಕ್‌ಗಳಿಗೆ ಮಾತ್ರ ನೀರಾವರಿಯ ಅನುಕೂಲ ಸಿಗುತ್ತಿದೆ. ಆದರೆ ನಮ್ಮ ತಾಲ್ಲೂಕ್‌ನಲ್ಲಿ ನೀರಾವರಿಯ ಅನುಕೂಲ ಇಲ್ಲದೆ, ಸರಿಯಾದ ಕೆರೆಗಳು ಸಹ ಇಲ್ಲದಿರುವುದರಿಂದ ಜನರಿಗೆ ಬೇಸಾಯ ಮಾಡಲು ಬಹಳ ಅನಾನುಕೂಲವಾಗುತ್ತಿದೆ. ಆದಕಾರಣ ಲಕ್ಕವಳ್ಳಿ ಪ್ರಾಜೆಕ್ಟನ್ನು ಹರಿಹರ, ದಾವಣಗೆರೆಯ ಮೂಲಕ ನಮ್ಮ ಭಾಗದವರಿಗೆ ಅನುಕೂಲವಾಗುವಂತೆ ಮುಂದುವರಿಸಬೇಕು. ಹರಪನಹಳ್ಳಿಯ 10 ಸಾವಿರ ಎಕರೆಗೆ ನೀರಾವರಿಯಾಗುವಂತೆ ಲಕ್ಕವಳ್ಳಿ ಪ್ರಾಜೆಕ್ಟನ್ನು ಮುಂದುವರೆಸುತ್ತೇವೆಂದು ಸರ್ಕಾರದವರು ಹೇಳಿದ್ದಾರೆ. ಈ ಬಗ್ಗೆ ಸರ್ವೆ ಕೆಲಸವನ್ನು ಮಾಡಿಸಿದ್ದಾರೆ. ಆದ್ದರಿಂದ ಆದಷ್ಟು ಜಾಗ್ರತೆ ಈ ಕೆಲಸವನ್ನು ಕಾರ್ಯರೂಪದಲ್ಲಿ ತಂದು ಲಕ್ಷಾಂತರ ಜನರಿಗೆ ಅನುಕೂಲ ಮಾಡಿಕೊಡಬೇಕೆಂದು ಮಾನ್ಯ ಲೋಕೋಪಯೋಗಿ ಮಂತ್ರಿಗಳಿಗೆ ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ಇದೇ ರೀತಿ ಬಾಲನಹಳ್ಳಿ ಕೆರೆಯನ್ನು ಕಟ್ಟುವ ಬಗ್ಗೆ ಸರ್ವೆ ಮಾಡಿ ಸರ್ಕಾರಕ್ಕೆ ಕಳಿಸಿದ್ದಾರೆ. ಮೂರು ನಾಲ್ಕು ವರ್ಷಗಳಾದರೂ ಸಹ ಇನ್ನೂ ಕಾರ್ಯ ಪ್ರಾರಂಭ ಮಾಡಿಲ್ಲ. ಈ ಕೆರೆಯನ್ನು ಕಟ್ಟುವುದರಿಂದ ಸಾವಿರಾರು ಎಕರೆಗಳಿಗೆ ನೀರಾವರಿಯಾಗುವುದರಿಂದ ಆದಷ್ಟು ಬೇಗ-ಕಾರ್ಯರೂಪಕ್ಕೆ ತರಬೇಕಲ್ಲದೆ ಈ ಸಾಲಿನ ಬಜೆಟ್‌ನಲ್ಲಿ ಈ ಬಾಬಿಗೆ ಹಣವನ್ನು ಒದಗಿಸಬೇಕೆಂದು ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ಸ್ವಾತಂತ್ರ್ಯ ಬಂದು 20 ವರ್ಷಗಳ ಮೇಲಾದರೂ ಕೂಡ ನಮ್ಮ ಬಳ್ಳಾರಿ ಜಿಲ್ಲೆಯಲ್ಲಿ ಲೋಕೋಪಯೋಗಿ ಇಲಾಖೆಯವರು 10 ಮೈಲಿ ರಸ್ತೆಗಳನ್ನು ಸಹ ತೆಗೆದುಕೊಂಡಿಲ್ಲ. ಈ ವಿಚಾರದಲ್ಲಿ ಲೋಕೋಪಯೋಗಿ ಮಂತ್ರಿಗಳು 3–4 ತಿಂಗಳ ಹಿಂದೆ ನಮ್ಮ ಜಿಲ್ಲೆಗೆ ಬಂದಿದ್ದಾಗ್ಗೆ ಮನವಿ ಮಾಡಿಕೊಂಡಿದ್ದೇವೆ. 15 ವರ್ಷಗಳ ಹಿಂದೆ ಅರಸಿಕೆರೆ, ಕಂಚಿಕೆರೆ ಮತ್ತು ದಾವಣಗೆರೆಗೆ ಸಂಬಂಧಪಟ್ಟ ಒಂದು ರೋಡನ್ನು ಕೇಂದ್ರಸರ್ಕಾರದವರು ತೆಗೆದುಕೊಂಡು ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿದ್ದರು. ಆದರೆ ಈ ರಸ್ತೆಯನ್ನು ಸರಿಯಾಗಿ ನೋಡಿಕೊಳ್ಳದಿರುವುದರಿಂದ ಇವತ್ತಿನ ದಿವಸ ಅಲ್ಲಿ ಎತ್ತಿನಗಾಡಿಗಳು ಸಹ ಹೋಗುವುದಕ್ಕಾಗುವುದಿಲ್ಲ. ಆ ರೀತಿ ಆ ರಸ್ತೆ ಹಾಳುಬಿದ್ದಿದೆ. ಆದ್ದರಿಂದ ಈ ರಸ್ತೆಯನ್ನು ಬೇಗನೆ ರಿಪೇರಿ ಮಾಡಿಸಬೇಕು. ನಮ್ಮ ತಾಲ್ಲೂಕ್‌ನಲ್ಲಿ ಹರಿಹರ-ಹೊಸಪೇಟೆ, ಹರಿಹರ-ಹರಪನಹಳ್ಳಿ-ಜಗಳೂರು ರಸ್ತೆಗಳನ್ನು ಬಿಟ್ಟರೆ ಬೇರೆ ಯಾವ ರಸ್ತೆಗಳು ಸಹ ಚೆನ್ನಾಗಿಲ್ಲ. ಕೆಲವು ತಾಲ್ಲೂಕ್‌ಗಳಲ್ಲಿ ಲೋಕೋಪಯೋಗಿ ಇಲಾಖೆಯವರು ನೂರಾರು ಮೈಲಿಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡಿದ್ದರೆ ನಮ್ಮ ಕಡೆ 5 ಮೈಲಿಯನ್ನು ಸಹ ತೆಗೆದುಕೊಂಡಿಲ್ಲ. ಆದುದರಿಂದ ತಾವು ಬೇಗನೆ ಇಂತಹ ಕಾರ್ಯಗಳನ್ನು ಮಾಡಬೇಕು ಮತ್ತು ಎಲ್ಲೆಲ್ಲಿ ಇಂತಹ ಪರಿಸ್ಥಿತಿಗಳಿವೆ ಎನ್ನುವು

ದನ್ನು ಸಂಬಂಧಪಟ್ಟ ಅಧಿಕಾರಿಗಳಿಂದ ತಿಳಿದುಕೊಂಡು ಅದರ ಬಗ್ಗೆ ಆಗಬೇಕಾದ ಎಲ್ಲ ಕಾರ್ಯಕ್ರಮಗಳನ್ನೂ ಮಾಡಿಸಿಕೊಡಬೇಕು ಎಂದು ಇಲ್ಲಿ ಒತ್ತಾಯಪೂರ್ವಕವಾಗಿ ಮನವಿ ಮಾಡಿಕೊಳ್ಳುತ್ತೇನೆ. ನಮ್ಮ ಭಾಗದಲ್ಲಿ 1962 ರಲ್ಲೇ ಕೆಲಸಗಳು ಮಂಜೂರಾಗಿದ್ದರೂ ಇದುವರೆಗೂ ಇದರ ಬಗ್ಗೆ ಯಾವ ಕೆಲಸಗಳನ್ನು ತೆಗೆದುಕೊಳ್ಳದೇ ಇರುವುದನ್ನು ನೋಡಿ ತುಂಬಾ ವಿಷಾದವಾಗಿದೆ. ಇದು ಎಲೆಕ್ಟ್ರಿಸಿಟಿ ಬಗ್ಗೆ ಆಗಿರುವುದು. ಇದರ ಬಗ್ಗೆ ಈಚೆಗೆ ಮಾನ್ಯ ಸಚಿವರಾದ ಶ್ರೀ ಪರಮೇಶ್ವರಪ್ಪನವರು ನಮ್ಮ ಭಾಗಕ್ಕೆ ಬಂದಾಗ ತೋರಿಸಿದುದರಿಂದ ಅವರು ಬಹಳ ಕಷ್ಟಪಟ್ಟು 3–4 ಹಳ್ಳಿಗಳಲ್ಲಿ ವಿದ್ಯುಚ್ಛಕ್ತಿ ಕೊಟ್ಟು ಸ್ವಲ್ಪ ಕೆಲಸ ಮಾಡಿಸಿದ್ದಾರೆ. ಇನ್ನೂ ನಾಲ್ಕಾರು ಹಳ್ಳಿಗಳಿಗೆ ಇನ್ನೂ ಪವರು ಕೊಟ್ಟಿಲ್ಲ. ಇದರ ಬಗ್ಗೆ ಬೇಗನೆ ಕಾರ್ಯಕ್ರಮಗಳನ್ನು ಹಾಕಿಕೊಂಡು ಬೇಗನೆ ಮಾಡಿಸಿಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

6–30 P.M.

ಇನ್ನು ಹೊಸಪೇಟೆ ಉಕ್ಕಿನ ಕಾರ್ಖಾನೆ ಆಗುತ್ತೆ ಎಂದು ಹೇಳುತ್ತಲೇ ಇದ್ದಾರೆ. ಇದು ಯಾವ ಕಾಲಕ್ಕೆ ಬರುತ್ತೋ ಗೊತ್ತಿಲ್ಲ.

[MR. DEPUTY SPEAKER in the Chair]

ರಾಜ್ಯ ಸರಕಾರದವರು ಕೇಂದ್ರ ಸರಕಾರವನ್ನು ಒತ್ತಾಯ ಮಾಡಿ ಇಲ್ಲಿಗೆ ಉಕ್ಕು ಕಾರ್ಖಾನೆ ಆಗುವ ಹಾಗೆ ಮಾಡಿದರೆ ಲಕ್ಷಾಂತರ ಜನಕ್ಕೆ ಉದ್ಯೋಗಗಳು ಸಿಗುತ್ತವೆ. ಆದಷ್ಟು ಬೇಗ ಇದು ಕಾರ್ಯರೂಪಕ್ಕೆ ಬರುವಂತೆ ರಾಜ್ಯ ಸರಕಾರ ಪ್ರಯತ್ನ ಮಾಡಬೇಕು ಮತ್ತು ಬೇಗನೆ ಇದು ಆಗುವ ಹಾಗೆ ಮಾಡಬೇಕು ಎಂದು ಮನವಿ ಮಾಡಿಕೊಳ್ಳುತ್ತೇನೆ.

ಇಷ್ಟು ಮಾತನಾಡಲು ಅವಕಾಶ ಕೊಟ್ಟುದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ (ಚಿಕ್ಕನಾಯಕನಹಳ್ಳಿ.)—ಮಾನ್ಯ ಅಧ್ಯಕ್ಷರೇ, ಒಂದು ದೇಶದ ಪ್ರಗತಿಗೆ ಎರಡು ಮೂಲಕಾರಣಗಳಿವೆ. ಒಂದನೇದು ವ್ಯವಸಾಯದ ಅಭಿವೃದ್ಧಿ, ಇನ್ನೊಂದು ಕೈಗಾರಿಕೆಗಳ ಅಭಿವೃದ್ಧಿ. ವ್ಯವಸಾಯದ ಅಭಿವೃದ್ಧಿಯಾಗಬೇಕಾದರೆ ನೀರಾವರಿ ಯೋಜನೆಗಳ ಪ್ರಗತಿ ಅತಿ ಮುಖ್ಯ. ಈ ದೇಶದಲ್ಲಿ ಎರಡು ಭೂತಗಳು ಅಂಟಿಕೊಂಡಿವೆ. ಒಂದು ಸ್ಥಳೀಯ ಭೂತ ಇನ್ನೊಂದು ಕೇಂದ್ರದ ಭೂತ. ಇವೆರಡೂ ನಮ್ಮನ್ನು ಯಾವಾಗಲೂ ಕಾಡುತ್ತವೆ. ಯಾವುದಾದರೂ ಒಂದು ಕಟ್ಟೆ ಕಟ್ಟಬೇಕಾದರೆ ಅದಕ್ಕೆ ಚೆಕ್ಕಿಕರ್ ಕ್ಲಿಯರೆನ್ಸು ಸಿಗುವುದಿಲ್ಲ. ನಮಗೆಲ್ಲಾ ಗೊತ್ತಿರುವ ಹಾಗೆ ಈ ನದಿ ನೀರಿನ ವಿವಾದಗಳು ಇನ್ನೂ ತೀರ್ಮಾನಮಾಡುವುದೇ ಕಷ್ಟವಾಗಿದೆ. ಬೇರೆ ಕಡೆ ಅನೇಕ ದೊಡ್ಡ ಯೋಜನೆಗಳಿಗೆ ಹಣ ಕೊಟ್ಟಿರುವುದರಿಂದ ಮೈಸೂರಿನಲ್ಲಿರುವ ಇತರ ಯೋಜನೆಗಳಿಗೆ ಹಣ ಸಾಲುವುದಿಲ್ಲ ಮತ್ತು ನಾಲ್ಕಾರು ಯೋಜನೆಗಳನ್ನು ಒಟ್ಟಿಗೆ ತೆಗೆದುಕೊಂಡರೆ ಯಾವುದನ್ನೂ ಬೇಗನೆ ಮಾಡುವುದಕ್ಕೆ ಸಾಧ್ಯವೂ ಇಲ್ಲ. ಇದಕ್ಕಾಗಿಯೇ ನಾನು ಸ್ಥಳೀಯ ಸರಕಾರ ಒಂದು ಭೂತವಾಗಿ ನಮ್ಮನ್ನು ಕಾಡುತ್ತಿದೆ ಎಂದು ಹೇಳಿದೆ. ಈ ಸರಕಾರಕ್ಕೆ ಸರಿಯಾದ ಒಂದು ಚೈತನ್ಯವಿಲ್ಲದೆ ಯೋಜನೆಗಳನ್ನು ಕೈಗೊಳ್ಳುತ್ತಿದ್ದಾರೆ. ಆದರೆ ಸರಕಾರದ ನೀತಿ ಸ್ಪಷ್ಟವಾಗಿಲ್ಲದೆ ಇರುವುದರಿಂದಾಗಿ ಇಂದಿನ ಯೋಜನೆಗಳೆಲ್ಲಾ ಸರಿಯಾಗಿ ಆಗುತ್ತಿಲ್ಲ. ಯಾವುದೇ ಯೋಜನೆಯನ್ನೇ ಮಾಡಲಿ ಅದರಲ್ಲಿ ಟೈಂ ಫಾಕ್ಟರು ಮುಖ್ಯ ಎನ್ನುವುದನ್ನು ಗಮನಿಸಬೇಕು. ಇದನ್ನು ಮನಸ್ಸಿನಲ್ಲಿಟ್ಟುಕೊಳ್ಳದೆ ಇಂದು ಯೋಜನೆಗಳನ್ನು ಕೈಗೊಳ್ಳುತ್ತಿರುವುದರಿಂದ ಯೋಜನೆಗಳು ಸರಿಯಾದ ಫಲಗಳನ್ನು ನಮಗೆ ಕೊಡುತ್ತಿಲ್ಲ. ಇದು ತುಂಬಾ ಶೋಚನೀಯವಾದ ವಿಚಾರವಾಗಿದೆ. ನೂರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಇಂದು ಕೃಷ್ಣಾ ಪ್ರಾಜೆಕ್ಟ್ ಕಟ್ಟಬೇಕೆಂದು ಇದ್ದಾರೆ ಮತ್ತು ಇದಕ್ಕೆ ಸುಮಾರು ಎರಡು ಕೋಟಿಯಷ್ಟು ಆಗಲೇ ಖರ್ಚು ಮಾಡಿದ್ದಾರೆ ಎಂದು ಹೇಳುತ್ತಾರೆ. ಇದು ಪೂರೈಸಬೇಕಾದರೆ ಇನ್ನೂ ಐವತ್ತು ವರ್ಷಗಳಾದರೂ ಬೇಕಾಗುತ್ತದೆ. ಇವೆಲ್ಲಾ ಹೇಗಿದೆ ಎಂದರೆ ಕನಸಿನಲ್ಲಿ ಗಂಟು ಕಂಡ ಹಾಗೆ ಇಂದು ನಾವು ನಮ್ಮ ಯೋಜನೆಗಳನ್ನು ನೋಡಿಕೊಂಡು ಇರಬೇಕಾಗಿದೆ ಮತ್ತು ಇದರಿಂದಲೇ ಸಂತೋಷವಾಗುತ್ತೋ ಏನೋ ಇದನ್ನು ತಾವು ಯೋಚನೆ ಮಾಡಬೇಕು. ಹಾರಂಗಿ ಯೋಜನೆ ಮಾಡಬೇಕೆಂದು ಮೂರು ಲಕ್ಷದ ಯೋಜನೆ ಇನ್ನೊಂದು ಕಡೆ ಹತ್ತಾರು ಕೋಟಿ ರೂಪಾಯಿಗಳ ಇನ್ನೊಂದು ಯೋಜನೆ ಮತ್ತೊಂದು ಕಡೆ ಮೂರು ಲಕ್ಷದ ಯೋಜನೆ ಎಂದು ಹಾಕಿಕೊಂಡರೆ ಇವೆಲ್ಲ ಇನ್ನೆಷ್ಟು ವರ್ಷಗಳಲ್ಲಿ

(ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ)

ಮುಗಿಯಬೇಕು ಎನ್ನುವುದನ್ನು ಯಾರೂ ಗಮನಕ್ಕೆ ತೆಗೆದುಕೊಂಡಂತೆ ಕಾಣುವುದಿಲ್ಲ. ನಮ್ಮ ಮುಖ್ಯ ಮಂತ್ರಿಗಳಾದ ಶ್ರೀಮಾನ್ ವೀರೇಂದ್ರ ಪಾಟೀಲರವರಿಗೂ ಕಷ್ಟಗಳಿವೆ. ಕೊನೆಯ ಪಕ್ಷ ಯಾವ ಯೋಜನೆ ತೆಗೆದುಕೊಂಡರೆ ಅದರಿಂದ ತೀವ್ರವಾದ ಪ್ರತಿಫಲ ದೊರೆಯುತ್ತದೆ ಅಂತಹ ಯೋಜನೆಗಳಿಗೆ ಮೊದಲು ಗಮನ ಕೊಟ್ಟು ಅದಕ್ಕೆ ಹೆಚ್ಚು ದುಡ್ಡು ಖರ್ಚು ಮಾಡಿ ಅದನ್ನು ಪೂರೈಸುವಂತೆ ಮಾಡಿದರೆ ಅದರಿಂದ ಎಷ್ಟೋ ಅನುಕೂಲಗಳಾಗುತ್ತದೆ. ಆದರೆ ಈ ದೇಶದಲ್ಲಿ ಬಹಳ ದೊಡ್ಡ ದೊಡ್ಡ ಕ್ಷೇತ್ರಗಳಲ್ಲಿ ಭಾರಿ ಯೋಜನೆಗಳನ್ನು ಹಾಕಿಕೊಂಡು ಅದು ಪೂರ್ತಿ ಯಾಗದಿದ್ದರೆ ನಾವು ಹೆಚ್ಚು ಹಾನಿ ಮಾಡಿದಂತಾಗುತ್ತದೆ. ಹೀಗೆ ಯಾವ ಕೆಲಸಗಳೇ ಆಗಲಿ ಯೋಜನೆಗಳೇ ಆಗಲಿ ಮೂರು ಯೋಜನೆಗಳನ್ನು ಮಾಡಿದರೂ ಅದರಿಂದ ಜನರಿಗೆ ಯಾವ ಪ್ರತಿಫಲವೂ ಇನ್ನೂ ಸಿಗಲಿಲ್ಲ. ಮೂರು ಯೋಜನೆಗಳನ್ನು ಮಾಡಿದುದರ ಉದ್ದೇಶವಾದರೂ ಏನು? ಇದಕ್ಕೆ ಏನಾದರೂ ಕಾಲಮಿತಿ ಇದ್ದರೆ ಅದಕ್ಕೆ ತಕ್ಕ ಪ್ರತಿಫಲ ದೊರೆಯುತ್ತಿತ್ತು. ಯಾವ ಯೋಜನೆಯೇ ಆಗಲಿ ಇವರು ಲೆಕ್ಕಾಚಾರ ಮಾಡಿದಂತೆ ಅಲ್ಲಿ ಕಾರ್ಯಗಳು ನಡೆಯುತ್ತಿಲ್ಲ. ಇದಕ್ಕೆ ನಾನು ಹೇಳುವುದು ಸುಮ್ಮನೆ ಇಪ್ಪತ್ತಾರು ಯೋಜನೆಗಳನ್ನು ಮಾಡುಕೊಳ್ಳುವುದಕ್ಕಿಂತ ಯಾವು ದಾದರೂ ಒಂದೆರಡು ಮುಖ್ಯವಾದ ಯೋಜನೆಗಳಿಗೆ ಒಂದು ಎಂಟು ಕೋಟಿಯಷ್ಟು ಖರ್ಚುಮಾಡಿ ಅದರ ಕೆಲಸಗಳನ್ನು ತೆಗೆದುಕೊಂಡು ಅವನ್ನು ಇಷ್ಟೇ ಕಾಲದಲ್ಲಿ ಮುಗಿಸಬೇಕು ಎಂದು ಅವನ್ನು ಮುಗಿಸಲೇಬೇಕು. ಇದಕ್ಕೆ ತಕ್ಕ ಹಾಗೆ ಪ್ರಯಾರಿಟಿ ಬೇಸಿಸ್ ಮೇಲೆ ಇಂತಿಂತಹ ಯೋಜನೆಗಳನ್ನು ಇಲ್ಲಿ ಪೂರೈಸಬೇಕು ಎಂದು ಮಾಡಿಕೊಂಡರೆ ಆಗ ಕೆಲವು ಕೆಲಸಗಳಾದರೂ ಪೂರ್ತಿಯಾಗುತ್ತವೆ. ಇಲ್ಲಿ ಅಂತಹ ಪ್ರಯಾರಿಟಿ ಲಿಸ್ಟ್ ಯಾವುದನ್ನೂ ಮಾಡಿದಂತೆ ಕಾಣುತ್ತಿಲ್ಲ. ಒಂದು ಕಡೆ ಒಂದು ಕಟ್ಟೆ ಕಟ್ಟಬೇಕಾದರೆ ಅದಕ್ಕೆ ಒಂದು ಕೋಟಿ, ಇನ್ನೊಂದು ಕಡೆ ರೀಕ್ಲಾಸಿಫೀಕೇಷನ್ ಆಗಿಲ್ಲ ಎಂದು ಅಲ್ಲಿ ಕೆಲವು ವರ್ಕ್ಸ್‌ಗಳು ನಿಂತಿವೆ ಇನ್ನು ಕೆಲವು ಕಡೆ ಸಾಗುವಳಿ ಮಾಡಲು ಅಲ್ಲಿ ನೀರೇ ಸಿಗುತ್ತಿಲ್ಲ. ತಮಗೆಲ್ಲಾ ಗೊತ್ತಿರುವ ಹಾಗೆ ತುಂಗಭದ್ರಾ ಯೋಜನೆ ಎಂದು ಮಾಡಿದರು. ಇದನ್ನು ಪೂರೈಸಲು ಎಷ್ಟು ವರ್ಷವಾಯಿತು ಎನ್ನುವುದನ್ನು ಯಾರಾದರೂ ಗಮನಿಸಿದ್ದೀರಾ? ಒಂದು ವರ್ಷದಲ್ಲಿ 20 ಸಾವಿರ ಎಕರೆಗೆ ನೀರು ಕೊಡುತ್ತೇವೆ ಎಂದರು. ಅದಕ್ಕೆ ಮುಂದಿನ ವರ್ಷ ಒಂದು ಸಾವಿರ ಎಕರೆಗೆ ಆ ನಂತರ ಇನ್ನೊಂದು ವರ್ಷದಲ್ಲಿ ಹತ್ತು ಸಾವಿರ ಎಕರೆಗೆ ನೀರು ಕೊಡ ಬೇಕು ಎಂದು ಯೋಜನೆ ಮಾಡಿಕೊಂಡು ಮಾಡಿದರೂ ಇದರ ಪ್ರತಿಫಲವನ್ನು ನಾವು ಯೋಚನೆ ಮಾಡಿ ದರೆ ಅದನ್ನು ಹೇಳಲು ಬಹಳ ದುಃಖವಾಗುತ್ತದೆ. ಹೀಗೆ ಈ ದೇಶದಲ್ಲಿ ಮಾಡುವ ಯೋಜನೆ ಗಳೆಲ್ಲಾ ಹಾಳಾಗುವುದಕ್ಕೆ ಕಾರಣವೇನು? ಇದರಲ್ಲಿ ಟೈಂ ಫ್ಯಾಕ್ಟರು ಎನ್ನುವುದಕ್ಕೆ ಬೆಲೆ ಕೊಡದೇ ಇರುವುದೇ ಇದಕ್ಕೆ ಮುಖ್ಯ ಕಾರಣ ಮತ್ತು ಇದರಿಂದಾಗಿ ಯೋಜನೆಗಳೆಲ್ಲಾ ವಿಫಲ ವಾಗುತ್ತಿವೆ. ಇನ್ನೊಂದು ಮುಖ್ಯ ಕಾರಣ ಇದರಲ್ಲಿರುವುದು ಎರಡು ಮೂರು ಸಲ ಅಂದಾಜುಗಳನ್ನು ಬದಲಾಯಿಸುತ್ತಾ ಹೋಗುವುದು. ಮೊದಲು ಯೋಜನೆ ಮಾಡುವಾಗ ಒಂದು ರೇಟಿನಲ್ಲಿ ಅಂದಾಜು ಇರುತ್ತದೆ. ಅದು ಮಾಡುವುದಕ್ಕೆ ಮೊದಲ ವರ್ಷದಲ್ಲೇ ರೇಟುಗಳು ಜಾಸ್ತಿಯಾಯಿತು ಎಂದು ಹೆಚ್ಚು ರೇಟುಗಳನ್ನು ಶೇಕಡಾ ಹತ್ತರಷ್ಟು ಏರಿಸುವುದು ಹೀಗಾಗಿ ಹತ್ತು ಕೋಟಿ ಇದ್ದ ಅಂದಾಜು ನೂರು ಕೋಟಿ ಆ ನಂತರ ನೂರೈದು ಕೋಟಿಯವರಗೆ ಮತ್ತು ಇದು ಪೂರೈಸುವುದರೊಳಗೆ 300 ಕೋಟಿಯವರೆಗೆ ಹೋಗುತ್ತವೆ. ಹೀಗೆ ಮಾಡಿದರೆ ಯಾವ ಯೋಜನೆಯನ್ನೂ ಪೂರೈಸುವುದಕ್ಕೆ ಸಾಧ್ಯವಿಲ್ಲ. ಸರಕಾರದಲ್ಲಿ ಇದರ ಬಗ್ಗೆ ಒಂದು ದಿಟ್ಟ ನಿಲುವು ಇಲ್ಲದಿದ್ದರೆ ಜಾಸ್ತಿ ಯೋಜನೆಗಳನ್ನು ತೆಗೆದುಕೊಳ್ಳಲು ಹೋಗಬೇಡಿ. ಹತ್ತಾರು ವರ್ಷಗಳಿಗೆ ಎಂದು ಇಷ್ಟು ಹಣ ವೆಚ್ಚ ಮಾಡಿ ಯೋಜನೆ ಗಳನ್ನು ಮಾಡಲು ಹೋಗಬೇಡಿ. ಇಂತಹ ಯೋಜನೆಗಳನ್ನು ಹಾಕಿಕೊಂಡು ದುಡ್ಡು ಹಾಳು ಮಾಡಿ ದೇಶವನ್ನು ದಾರಿದ್ರ್ಯದ ಕಡೆಗೆ ಎಳೆದೊಯ್ಯಲು ತಯಾರು ಮಾಡುತ್ತಿದ್ದಾರೆ ಎಂದು ಹೇಳಿದರೆ ಅದು ತಪ್ಪಾಗಲಾರದು. ಮೂರು ಕೋಟಿ ರೂಪಾಯಿಗಳಿಗೆ ಒಂದು ಯೋಜನೆ ಎಂದು ಮಾಡಿದರೆ ಅದಕ್ಕೆ ವರ್ಷಕ್ಕೆ ಬಡ್ಡಿ ಎಷ್ಟಾಗುತ್ತದೆ ಎನ್ನುವುದನ್ನು ಯೋಚನೆ ಮಾಡಬೇಕು ಮತ್ತು ಎಷ್ಟು ವಿದೇಶಿ ವಿನಿಮಯ ಬೇಕು ಎನ್ನುವುದನ್ನು ಯೋಚನೆ ಮಾಡಬೇಕು ಹೀಗಿರುವಾಗ ಇಷ್ಟು ಹಣ ಖರ್ಚು ಮಾಡುವುದು ಉಚಿತವೇ ಎನ್ನುವುದನ್ನೂ ನಾವು ಇಲ್ಲಿ ಯೋಚನೆ ಮಾಡ ಬೇಕಾಗಿದೆ.

ನಮ್ಮ ಹಳೆಯ ಮೈಸೂರಿನಲ್ಲಿ ಪಿ. ಡಬ್ಲ್ಯು. ಡಿ. ಇಲಾಖೆ ಎನ್ನುವುದು ಬಹಳ ಪ್ರಸಿದ್ಧ ವಾಗಿತ್ತು. ನಮ್ಮ ಮೈಸೂರಿನ ಇಂಜನೀಯರುಗಳು ಇಂದು ಭಾರತದಲ್ಲಿರುವ ಎಲ್ಲಾ ರಾಜ್ಯಗಳ ಲ್ಲಿಯೂ ಇದ್ದಾರೆ. ಕೊನೆಯ ಪಕ್ಷ ಇದರಲ್ಲಿ ಅರ್ಧ ಪಾಲು ಎಷ್ಟೋ ರಾಜ್ಯಗಳಲ್ಲಿ ಚೀಫ್ ಇಂಜನೀ ಯರುಗಳಾಗಿದ್ದಾರೆ. ಯು.ಪಿ. ನಲ್ಲಿ ಒಬ್ಬರು ಚೀಫ್ ಇಂಜನೀಯರಾಗಿದ್ದಾರೆ ಎಂ.ಪಿ.

ನಲ್ಲಿ ಒಬ್ಬರು ಚೀಫ್ ಇಂಜಿನಿಯರ್ ಆಗಿದ್ದಾರೆ ಹೀಗೆ ಮೈಸೂರಿನ ಇಂಜಿನೀಯರುಗಳು ನಾಲ್ಕಾರು ದೇಶಗಳಲ್ಲಿ ಇಂಜನೀಯರುಗಳು ಆಗಿದ್ದಾರೆ. ಆದರೆ ನಮ್ಮ ರಾಜ್ಯವೊಂದರಲ್ಲೇ ಒಂಬತ್ತು ಜನ ಚೀಫ್ ಇಂಜನೀಯರುಗಳಿದ್ದಾರೆ. ಇವರಿಗೆಲ್ಲಾ ಏನು ಕೆಲಸ ಇದೆ ಎಂದು ನಾನು ಕೇಳಬೇಕಾಗಿದೆ. ನಮಗೆ ನಾಲ್ಕು ಜನ ಚೀಫ್ ಇಂಜನೀಯರುಗಳಿದ್ದರೆ ಸಾಕು. ಒಂಬತ್ತು ಜನರು ಇದ್ದರೆ ದಕ್ಷತೆಯಿಂದ ಕೆಲಸಗಳಾಗುತ್ತವೆ ಇಲ್ಲದಿದ್ದರೆ ಇಲ್ಲ ಎಂದು ಮಾಡಿದ್ದಾರೆಯೇ? ಇವೊತ್ತು ಬೆಳಗ್ಗೆ ಒಂದು ಸಂದರ್ಭದಲ್ಲಿ ಪ್ರಶ್ನೆ ಬಂದಾಗ ಹೇಗಿದೆ ಎನ್ನುವುದು ಗೊತ್ತಾಗಿದೆ. ಒಬ್ಬರು ಕಳುಹಿಸಿಕೊಟ್ಟಿರುವ ರಿಪೋರ್ಟನ್ನು ಇನ್ನೊಬ್ಬ ಚೀಫ್ ಇಂಜನೀಯರಿಗೆ ಕೊಟ್ಟು ಅದು ಸರಿಯಾಗಿದೆಯೇ ಇಲ್ಲವೇ ಎನ್ನುವುದನ್ನು ತಿಳಿದುಕೊಳ್ಳಬೇಕೆಂದು ಮಾಡುತ್ತಿದ್ದಾರೆ ಎಂದು ನಮಗೆ ತಿಳಿದುಬರುತ್ತದೆ. ನಾನು ತಿಳಿದುಕೊಂಡಿರುವ ಮಟ್ಟಿಗೆ ಶ್ರೀಮಾನ್ ಬಾಳೆ ಕುಂದ್ರಿ ಎನ್ನುವ ಚೀಫ್ ಇಂಜನಿಯರ್‌ರವರು ಬಹಳ ಚೆನ್ನಾಗಿ ದಕ್ಷತೆಯಿಂದ ಕೆಲಸ ಮಾಡುವವರು ಎಂದು ಎಲ್ಲ ಜನರೂ ಹೇಳಿರುವುದನ್ನು ಕೇಳಿದ್ದೇನೆ. ಇಂತಹವರು ಸರಕಾರಕ್ಕೆ ಒಂದು ರಿಪೋರ್ಟನ್ನು ಕಳುಹಿಸಿದ್ದರೆ ಅದನ್ನು ಇನ್ನೊಬ್ಬ ಇಂಜನೀಯರು ಪರಿಶೀಲನೆ ಮಾಡಲು ಕಳುಹಿಸಿದ್ದಾರೆ ಎಂದು ಹೇಳಿದರೆ ಇದರಲ್ಲೂ ಒಂದು ರಾಜಕೀಯ ಮಾಡುತ್ತಿದ್ದಾರೆ ಎಂದು ಹೇಳಬೇಕಾಗಿದೆ. ಕೆರೆ ಕಟ್ಟಬೇಕಾದರೆ ಒಂದು ರಾಜಕೀಯ. ಹೊಸದಾಗಿ ಒಂದು ಕಾಲುವೆ ಮಾಡಬೇಕಾದರೆ ಒಂದು ರಾಜಕೀಯ, ಒಂದು ರಸ್ತೆ ಮಾಡಬೇಕಾದರೆ ಅದರಲ್ಲಿ ಒಂದು ರಾಜಕೀಯ ಎಂದು ಮಾಡಿ ಇಷ್ಟುಮಟ್ಟಿಗೆ ಈ ಇಲಾಖೆಯನ್ನು ಹಾಳು ಮಾಡುತ್ತಿದ್ದಾರೆ.

ನಮ್ಮ ದೇಶದಲ್ಲಿ ಮೂರು ಇಲಾಖೆ ಲಂಚಕ್ಕೆ ಪ್ರಸಿದ್ಧಿಯಾಗಿದೆ. ಮೊದಲನೇದು, ಸೇಲ್ಸ್ ಟ್ಯಾಕ್ಸ್, ಎರಡನೇದು ಇನ್‌ಕಂ ಟ್ಯಾಕ್ಸ್ ಮತ್ತು ಮೂರನೇದು ಪಿ.ಡಬ್ಲ್ಯು.ಡಿ. ಇಲಾಖೆ. ಇದರಲ್ಲಿ ವಸೂಲಾಗುವ ಹಣ ಸುಮಾರು 100 ಕೋಟಿಯಷ್ಟಾದರೆ ಇದರಲ್ಲಿ ಸುಮಾರು ಹತ್ತು ಕೋಟಿಯಷ್ಟು ಲಂಚಕ್ಕೇ ಹೋಗುತ್ತದೆ.

ಇದನ್ನು ನಿಜವಾಗಿಯೂ ಯೋಚನೆ ಮಾಡಬೇಕು. ಯಾವ ಅಂದಾಜನ್ನು ತೆಗೆದುಕೊಂಡರೂ ರಿವೈಸ್ಡ್ ಆಗದೇ ಇರುವುದಿಲ್ಲ. ಈ ವೊತ್ತಿನ ದಿವಸ 10 ಲಕ್ಷ ರೂಪಾಯಿ ಅಂದಾಜು ಮಾಡಿದ್ದರೆ ಆ ಕೆಲಸ ಪೂರೈಸುವುವರೊಳಗೆ 30 ಲಕ್ಷ ರೂಪಾಯಿಗೆ ಏರುತ್ತದೆ. ದೇಶದಲ್ಲಿ ಕಂಟ್ರಾಕ್ಟರ್ ಪ್ರಭಾವ ಎದ್ದು ಕಾಣುತ್ತಿದೆ. ಮೊನ್ನೆ ನಮ್ಮ ಮುಖ್ಯ ಮಂತ್ರಿಗಳು ಹೊಸ ನಾಯಕರಾಗಿ ಚುನಾವಣೆ ಆಗುತ್ತಿದ್ದ ಕಾಲದಲ್ಲಿ ಕೋಶಿ ಮತ್ತು ಪೆರೇಡ್ ಹೋಟೇಲ್‌ಗಳಿಗೆ ಹೋಗಿ ನೋಡಬೇಕಾಗಿತ್ತು. ಅಲ್ಲಿ ಒಬೊಬ್ಬ ಅಸಿಸ್ಟೆಂಟ್ ಇಂಜನೀಯರ್, ಎಕ್ಸಿಕ್ಯೂಟೀವ್ ಇಂಜನಿಯರ್ ಅವರು ಕಂಟ್ರಾಕ್ಟದಾರರುಗಳ ಜೊತೆಯಲ್ಲಿ ಓಡಾಡುತ್ತಾ ಇದ್ದರು. ಇದನ್ನು ನೋಡಿದರೆ ನಮ್ಮ ಇಂಜನಿಯರ್‌ಗೆ ರಾಜಕೀಯದಲ್ಲಿ ಎಷ್ಟು ಆಸಕ್ತಿ ಇದೆ ಎನ್ನುವುದು ಗೊತ್ತಾಗುತ್ತದೆ. ಮತ್ತು ಕೆಲವು ಇಂಜನಿಯರುಗಳಿಗೆ ಕಂಟ್ರಾಕ್ಟ್‌ದಾರರು ಸಹಾಯ ಮಾಡುತ್ತಾ ಇದ್ದಾರೆ. ಇನ್ನು ಒಬ್ಬ ಕಂಟ್ರಾಕ್ಟರ್‌ಗೆ ರೋಡ್ ಡಿವಿಷನ್‌ನಿಂದ ಆರು ಲಾರಿಗಳನ್ನು ಕೊಟ್ಟರು. ದುಡ್ಡು ಪೂರ್ತಾ ಪಾವತಿ ಆಗಿದೆ. ಆದರೆ ವೆಹಿಕಲ್ ಮಾತ್ರ ಕಂಟ್ರಾಕ್ಟರ್ ಹೆಸರಿಗೆ ಟ್ರಾನ್ಸ್‌ಫರ್ ಆಗಬೇಕಾದ್ದು ಆಗಿಲ್ಲ ಏತಕ್ಕೆಂದರೆ ಪಿ.ಡಬ್ಲ್ಯು.ಡಿ. ಲಾರಿಗೆ ಟ್ಯಾಕ್ಸ್ ಇಲ್ಲ. ಅವನು ಗೌರ್ನಮೆಂಟ್ ಆಫ್ ಮೈಸೂರು ಎಂಬ ಒಂದು ಬೋರ್ಡ್‌ನ್ನು ಹಾಕಿ ಲಾರಿ ಓಡಿಸುತ್ತಿದ್ದಾನೆ. ಒಂದು ಲಾರಿಗೆ ಇನ್‌ಷೂರೆನ್ಸ್ ಟ್ಯಾಕ್ಸ್ ಮುಂತಾದ್ದು ವರ್ಷಕ್ಕೆ ನಾಲ್ಕು ಸಾವಿರದಿಂದ ಆರು ಸಾವಿರದವರೆಗೆ ಆಗುತ್ತದೆ. ಈಗ ಆರು ವರ್ಷದಿಂದಲೂ ಹಾಗೇ ಓಡಾಡಿಸುತ್ತಿದ್ದಾನೆ. ಈ ರೀತಿ ಒಂದು ಲಾರಿಗೆ ನಾಲ್ಕು ಸಾವಿರ ಆದರೆ ಆರು ಲಾರಿಗೆ ವರ್ಷಕ್ಕೆ 24 ಸಾವಿರ ರೂಪಾಯಿ ಆಯಿತು. ಆರು ವರ್ಷಕ್ಕೆ ಒಂದೂವರೆ ಲಕ್ಷ ನಷ್ಟ ಹೊಂದಿದ್ದಾನೆ. ಆ ಮಹಾನುಭಾವ ಕಂಟ್ರಾಕ್ಟರು ಇಷ್ಟು ನಷ್ಟ ಹೊಂದಿದ್ದಾನೆ. ಮೊನ್ನೆ ನಾಯಕರ ಚುನಾವಣೆ ಸಂದರ್ಭದಲ್ಲಿ ಒಬ್ಬೊಬ್ಬರೂ 25 ಸಾವಿರ ರೂಪಾಯಿ ಖರ್ಚು ಮಾಡಿ ಚಿನ್ನದ ಹಾಗೆ ಕೋಡಿ ಹರಿಸಿದರು. ಮೊನ್ನೆ ಬೆಂಗಳೂರು ರೋಡ್ ಟ್ರಾನ್ಸ್‌ಪೋರ್ಟ್ ಆಫೀಸರ್ಸ್ ಒಂದು ಲಾರಿ ಹಿಡಿದು ಕೇಸು ಹಾಕಿದರು. ತಕ್ಷಣ ಮಿನಿಸ್ಟರ್‌ರವರಿಂದ ಫೋನ್ ಬಂತು. ಆ ಕಂಟ್ರಾಕ್ಟರನ್ನು ಉಳಿಸಬೇಕು, ಅವನನ್ನು ಬಿಟ್ಟುಬಿಡಿ ಎಂದು. ಮಿನಿಸ್ಟರುಗಳು ಏತಕ್ಕೆ ಈ ರಾಜಕೀಯಕ್ಕೆ ಕೈಹಾಕಬೇಕು ಆದುದರಿಂದ ಕಂಟ್ರಾಕ್ಟರ್ಸ್ ಕೂಡ ಈ ರಾಜಕೀಯಕ್ಕೆ ಕೈಹಾಕುತ್ತಾರೆ. ಇದನ್ನೆಲ್ಲಾ ನೋಡಿದ ಪಕ್ಷದಲ್ಲಿ ಈ ಪಿ. ಡಬ್ಲ್ಯು. ಡಿ. ಎಷ್ಟು ಕೀಳುಮಟ್ಟಕ್ಕೆ ಇಳಿದಿದೆ ಎನ್ನುವುದು ಗೊತ್ತಾಗುತ್ತದೆ. ಮೊದಲು ಮೈಸೂರಿನ ಪ್ರಗತಿ ಏನು ಇತ್ತೋ ಅದರ ತದ್ವಿರುದ್ಧವಾಗಿ ನಾವೆಲ್ಲಾ ತಲೆತಗ್ಗಿಸಬೇಕಾಗಿದೆ.

ಇನ್ನೊಂದು ಉದಾಹರಣೆ ಕೊಡುತ್ತೇನೆ. ಹಿಂದೆ ಮಾಣಿಕ್ಯಂರವರ ಜೊತೆಯಲ್ಲಿ ನಾನು ಕೂತಿದ್ದೆ. ಆವಾಗ ಯಾರೋ ಒಬ್ಬ ಕಂಟ್ರಾಕ್ಟರ್ ಬಗ್ಗೆ ಪಿ.ಡಬ್ಲ್ಯು.ಡಿ. ಮಂತ್ರಿಗಳು ಅವರಿಗೆ

(ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ)

ಫೋನ್ ಮಾಡಿದ್ದರು. ಹಾಸನದಿಂದ ಮಂಗಳೂರಿನವರೆಗೆ ಟಾರ್ ಹಾಕುವ ಸಂಬಂಧವಾಗಿ ಫೋನ್ ಬಂತು. ಆವಾಗ ಮೊದಲು ಯಾರು ಟೆಂಡರ್ ಹಾಕಿದ್ದರೋ ಅವರನ್ನು ಸಮಾಧಾನ ಮಾಡಿ ಇವರಿಗೆ ಕೊಟ್ಟರು. ಈ ರೀತಿ ಪಿ.ಡಬ್ಲ್ಯು.ಡಿ. ಮಂತ್ರಿಗಳು ತಮಗೆ ಬೇಕಾದವರಿಗೆ ಟಾರ್ ಹಾಕುವ ಕೆಲಸವನ್ನು ಕೊಡಿಸಿದ್ದಾರೆ. ಆದರೂ ಕೊನೆಗೆ ಅವನಿಂದ 15 ಪರ್ಸೆಂಟು 20 ಪರ್ಸೆಂಟು ಜಾಸ್ತಿ ಹಾಕಿಸಿ 20 ಲಕ್ಷ ರೂಪಾಯಿ ಜಾಸ್ತಿ ಬರುವ ಹಾಗೆ ಸಹಾಯ ಮಾಡಿದರು. ಆದುದರಿಂದ ಈಚೆಗೆ ಈ ಪಿ.ಡಬ್ಲ್ಯು.ಡಿ. ಇಲಾಖೆಯಲ್ಲಿ ದಕ್ಷತೆ ಇಷ್ಟು ಕೀಳು ಮಟ್ಟಕ್ಕೆ ಬಂದಿದೆ. ಯಾವುದಾದರೂ ಒಂದು ಕೆಲಸಕ್ಕೆ 10 ಸಾವಿರ ಮೂಟೆ ಸಿಮೆಂಟ್ ಕೊಟ್ಟರೆ, 2,500 ಸಿಮೆಂಟ್ ಮೂಟೆಯನ್ನು ಅಂದರೆ ¼ ಭಾಗದಷ್ಟು ಕಾಳಸಂತೆಗೆ ಹೋಗುತ್ತಾ ಇದೆ. ಪಿ.ಡಬ್ಲ್ಯು.ಡಿ. ಇಲಾಖೆಯಲ್ಲಿ ಬಿಲ್ಡಿಂಗ್ ಕಟ್ಟಿಸುವ ಇಲಾಖೆ ನೋಡಿದರೆ ಈ ಸಿಮೆಂಟ್ ಎಷ್ಟು ಪೋಲಾಗುತ್ತದೆ ಎನ್ನುವದು ಗೊತ್ತಾಗುತ್ತದೆ. ಈ ಶರಾವತಿ ಪ್ರಾಜೆಕ್ಟ್ ಬಂದುಬಿಟ್ಟು ಶಿವಮೊಗ್ಗಾದ ಮಾರ್ಕೆಟ್‌ನಲ್ಲಿ ಶರಾವತಿ ಸಿಮೆಂಟ್ 7–8 ರೂಪಾಯಿಗೆಲ್ಲಾ ಮಾರಾಟ ಮಾಡಿದ್ದಾರೆ. ಈ ಮನೆಯಲ್ಲೂ ಇದರ ಬಗ್ಗೆ ಪ್ರಸ್ತಾಪ ಬಂದಿದೆ. ಕೇಸು ಕೂಡ ಹಾಕಿದ್ದಾರೆ ಎನ್ನುವ ನಿದರ್ಶನ ಇದ್ದರೂ ಏನೂ ಆಗಲಿಲ್ಲ. ಈವೊತ್ತಿನ ದಿವಸ ಪಿ.ಡಬ್ಲ್ಯು.ಡಿ. ಇಲಾಖೆಯಲ್ಲಿ 10–6 ಲಕ್ಷ ರೂಪಾಯಿ ಟಾರ್ ಬರುತ್ತದೆ. ಅದರಲ್ಲಿ ¼ ಭಾಗದಷ್ಟು ಟಾರ್ ಭೂಮಿ ಮೇಲೆ ಬಿದ್ದಿರುತ್ತದೆ. ಏತಕ್ಕೆ ಈ ದರಿದ್ರ ಡ್ರಂನ್ನು ಉರುಳಿಸಿಕೊಂಡು ಬರುವಾಗ ಲೀಕ್ ಆಗಿ ವೇಸ್ಟೇಜ್ ತುಂಬಾ ಹೋಗುತ್ತದೆ. ಎಲ್ಲಾ ಹಳೇ ಡ್ರಂಗಳು. ನೀವು ವಿಧಾನಸೌಧದ ಒಂದು ಮೂಲೆಯೊಳಗೆ ಹೋಗಿ ನೋಡಿದರೆ ಎಷ್ಟು ವೇಸ್ಟೇಜ್ ಆಗುತ್ತದೆ ಎನ್ನುವುದನ್ನು ನೋಡಬಹುದು. ಈ ರೀತಿ ಡ್ರಂ ಉರುಳಿಸಿಕೊಂಡು ಹೋಗುವಾಗ ಭೂಮಿಮೇಲೆ ಹರಿದು ಹೋಗಿರುವ ಟಾರ್ ಮೇಲೆ ಮಣ್ಣು ಕೂಡಿಸಿ ಮುಚ್ಚಿರುವುದನ್ನು ನೋಡಬಹುದು. ಯಾವುದೇ ಒಂದು ಕೆಲಸವನ್ನು ತೆಗೆದುಕೊಂಡರೂ ಈ ರೀತಿ ¼ ಭಾಗದಷ್ಟು ವೇಸ್ಟೇಜ್ ಆಗುತ್ತದೆ. ಇನ್ನು ಓಲ್ಡ್ ರೋಡ್ ರೂಟ್‌ನಲ್ಲಿ ಟಾರ್ ಸ್ಟಾಕ್ ಮಾಡಿದ್ದಾರೆ. ಅಲ್ಲಿ ನೂರಾರು ಡ್ರಂಗಳು ಹಾಳಾಗಿವೆ.

ಇನ್ನು ಲಾರಿಗಳು ಕೆಲಸ ಮಾಡುವುದನ್ನು ತೆಗೆದುಕೊಂಡರೆ ವರ್ಷಕ್ಕೆ 3–4 ತಿಂಗಳು ಕೆಲಸ ಮಾಡುತ್ತದೆ. ಒಂದೊಂದು ಲಾರಿ ಟೈರುಗಳು ಇಲ್ಲದೆ 6–6 ತಿಂಗಳು ಹಾಗೆಯೇ ನಿಂತಿರುತ್ತೆ. ಈ ರೀತಿ ಒಂದೊಂದು ಲಾರಿ ಒಂದು ದಿವಸ ನಿಂತರೆ 100 ರೂಪಾಯಿಯಲ್ಲಿ ಲುಕ್ಸಾನು ಆಗುತ್ತದೆ. ಈವೊತ್ತಿನ ದಿವಸ ಈ ಇಲಾಖೆಯಲ್ಲಿ 100 ಕೋಟಿ ರೂಪಾಯಿಯಲ್ಲಿ 70—80 ಕೋಟಿ ರೂಪಾಯಿಯಷ್ಟು ಪ್ರಯೋಜನವಾಗುತ್ತದೆಯೇ ಎನ್ನುವುದನ್ನು ನೋಡಿದರೆ ಲುಕ್ಸಾನು ಆಗುತ್ತದೆಯೇ ವಿನಃ ಲಾಭವಾಗುವುದಿಲ್ಲ. ಇದರಿಂದ ಉಪಯೋಗವಾಗುವ ಬದಲು ಅಪಕಾರವಾಗುತ್ತದೆ. ಇದನ್ನು ದೀರ್ಘವಾಗಿ ಯೋಚನೆ ಮಾಡಬೇಕು. ಈವೊತ್ತಿನ ದಿವಸ ಪಿ. ಡಬ್ಲ್ಯು. ಇಲಾಖೆಯಲ್ಲಿ ಪ್ರಾಮಾಣಿಕತೆ ಕಡಿಮೆ, ದಕ್ಷತೆ ಕಡಿಮೆ, ವೇಸ್ಟೇಜ್ ಬಹಳ ಜಾಸ್ತಿಯಾಗುತ್ತದೆ. ಚೀಫ್ ಇಂಜನಿಯರ್ ಆಫೀಸಿಗೆ ಹೋಗಿ ನೋಡಿದರೆ ನೌಕರರು ಅವರವರ ಸೀಟಿನಲ್ಲೇ ಇರುವುದಿಲ್ಲ. ಯಾವಾಗ ನೋಡಿದರೂ ಕಾಫಿಕುಡಿಯುವುದಕ್ಕೆ ಹೋಗುತ್ತಾರೆ. ಅವರು ಎಷ್ಟು ಸಾರಿ ಕಾಫಿ ಕುಡಿಯುತ್ತಾರೋ ಪರಮಾತ್ಮನಿಗೇ ಗೊತ್ತು. ಆದರಲ್ಲೇ ಕಾಲುಭಾಗದಷ್ಟು ಟೈಮನ್ನು ಕಳೆಯುತ್ತಾರೆ. ಯಾವಾಗಲೂ ಕ್ಯಾಂಟೀನ್‌ನಲ್ಲೇ ಇರುತ್ತಾರೆ. ಹೀಗಿರುವಾಗ ಈ ಇಲಾಖೆಗೆ 100 ಕೋಟಿ ರೂಪಾಯಿ ಕೊಡುವುದು ಹೇಗೆ? ಇದನ್ನೆಲ್ಲಾ ಪರ್ಯಾಲೋಚಿಸಬೇಕು. ಇದನ್ನು ಏತಕ್ಕೆ ಹೇಳುತ್ತೇನೆ ಎಂದರೆ ಎಷ್ಟೋ ಜನ ಮಂತ್ರಿಗಳು ಸರಪ್ರೈಸ್ ವಿಸಿಟ್ ಕೊಡಬೇಕು. ಎಷ್ಟು ಕೆಲಸ ಮಾಡುತ್ತಾ ಇದ್ದಾರೆ. ಎಷ್ಟು ವೇಸ್ಟೇಜ್ ಆಗುತ್ತದೆ ಎನ್ನುವುದನ್ನು ನೋಡಬೇಕು. ಕೆಲವು ಆಫೀಸಿಗೆ ಹೋಗಿ ನೋಡಲಿ. ನಿಜ ಪರಿಸ್ಥಿತಿ ತಿಳಿಯುತ್ತದೆ. ಇದನ್ನೆಲ್ಲಾ ಯೋಚನೆ ಮಾಡಿದ್ದೇ ಆದಪಕ್ಷದಲ್ಲಿ ನಿಜ ಪರಿಸ್ಥಿತಿ ತಮಗೆ ಗೊತ್ತಾಗುತ್ತದೆ. ಈವೊತ್ತಿನ ದಿವಸ ಮೈಸೂರು ಪಿ. ಡಬ್ಲ್ಯು. ಡಿ. ಪರಿಸ್ಥಿತಿ ಇಂತಹ ಕೀಳುಮಟ್ಟಕ್ಕೆ ಇಳಿದಿರುವುದರಿಂದ ಇವರಿಗೆ 100 ಕೋಟಿ ರೂಪಾಯಿಯಲ್ಲಿ 75 ಕೋಟಿ ಅಷ್ಟು ಕೊಟ್ಟರೆ ಸಾಕು. ಇನ್ನು 25 ಕೋಟಿ ರೂಪಾಯಿಯಷ್ಟು ವೇಸ್ಟ್ ಆಗುವುದನ್ನು ಉಳಿಸಬಹುದು. ಇಷ್ಟು ಹೇಳಿ ನಮ್ಮ ಮುಂದಿಟ್ಟಿರುವ ಡಿಮ್ಯಾಂಡುಗಳನ್ನು ವಿರೋಧಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

† ಶ್ರೀ ಬಿ. ಎಂ. ಇದಿನಬ್ಬ.—ಸನ್ಮಾನ್ಯ ಅಧ್ಯಕ್ಷರೇ, ಈವೊತ್ತಿನ ದಿವಸ ಮಂಡಿಸಿರತಕ್ಕಂಥ ಡಿಮ್ಯಾಂಡ್‌ಗಳನ್ನು ಸ್ವಾಗತಿಸುತ್ತಾ ನಾಲ್ಕು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈವೊತ್ತು ನಮ್ಮ ಕರ್ಣಾಟಕ ರಾಜ್ಯ ಸ್ವಾವಲಂಬನೆ ಆಗಬೇಕು ಮತ್ತು ನಾವೆಲ್ಲಾ ಒಳ್ಳೆಯವರಾಗ

ಬೇಕು ಎಂದು ಹೇಳುವ ಕಾಲದಲ್ಲಿ ಇಡೀ ರಾಷ್ಟ್ರಕ್ಕೆ ಅನ್ವಯವಾಗುವ ರೀತಿಯಲ್ಲಿ ಮಾತನಾಡಬೇಕು. ಈ ವಿಚಾರವಾಗಿ ಶ್ರೀಮಾನ್ ಗುರೆಡ್ಡಿಯವರು ಹೇಳಿದ ಮಾತು ಸರಿ. ಕೃಷ್ಣಾ–ಗೋದಾವರಿ ನೀರಿನ ಸಮಸ್ಯೆ ಬರೀ ರಾಜ್ಯ ಸರ್ಕಾರಗಳ ಸಮಸ್ಯೆ ಎಂದು ತಿಳಿಯದೆ ಇಡೀ ದೇಶಕ್ಕೆ ಸಂಬಂಧಪಟ್ಟ ವಿಚಾರ ಎಂದು ಭಾವಿಸಿ ಇಡೀ ದೇಶದಲ್ಲಿ ಆಹಾರದ ಸಮಸ್ಯೆಯನ್ನು ಬಗೆಹರಿಸಬೇಕು. ಆ ಭಾವನೆಯಿಂದ ಕೆಲಸವನ್ನು ಮಾಡಿದರೆ ಇದು ಇಡೀ ಕರ್ಣಾಟಕ ರಾಜ್ಯಕ್ಕೆ ಒಳ್ಳೆಯದಾಗುವುದಲ್ಲದೆ ಸಮಗ್ರ ದೇಶಕ್ಕೂ ಒಳ್ಳೆಯದಾಗುತ್ತದೆ. ಈವೊತ್ತು ಹಣವಿಲ್ಲ ಎಂದು ಹೇಳತಕ್ಕ ಸಂದರ್ಭದಲ್ಲಿ ಯಾವ ಕೆಲಸವನ್ನೂ ಮಾಡುವುದಕ್ಕೆ ಆಗುವುದಿಲ್ಲ. ಆದರೂ ಅದನ್ನು ಆದಷ್ಟು ಜಾಗ್ರತೆ, ತ್ವರಿತದಿಂದ ಮಾಡಿದರೆ ಮಾತ್ರ ನಮ್ಮ ರಾಜ್ಯದ ಆಹಾರದ ಬಗ್ಗೆ ಬಹಳ ಒಳ್ಳೆಯ ರೀತಿಯಲ್ಲಿ ಸ್ವಾವಲಂಬನೆಯಾಗುವುದಕ್ಕೆ ಸಾಧ್ಯ.

ಎಲ್ಲಕ್ಕಿಂತಲೂ ಮುಖ್ಯವಾಗಿ ನೀರಾವರಿಗೆ ಪ್ರಾಶಸ್ತ್ಯವನ್ನು ಕೊಡಬೇಕು ಎಂದು ಹೇಳುತ್ತಿದ್ದಾರೆ. ಇದು ಸಹಜ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಣ್ಣ ನೀರಾವರಿ ಯೋಜನೆ ಇವೆ, ದೊಡ್ಡ ನೀರಾವರಿ ಯೋಜನೆ ಯಾವುದೂ ಇಲ್ಲ. ದಕ್ಷಿಣ ಕನ್ನಡ ಜಿಲ್ಲೆಯ ಪರಿಸ್ಥಿತಿ ಪ್ರತ್ಯೇಕವಾಗಿದೆ. ಅಲ್ಲಿ ಲಿಫ್ಟ್ ಇರಿಗೇಷನ್ ಮಾತ್ರ ಮಾಡಲು ಸಾಧ್ಯವಿದೆ. ಇದಕ್ಕೆ ಅಲ್ಲಿನ ರೈತರು ಬಹಳ ಮುಂದೆ ಬಂದಿದ್ದಾರೆ, ಬಹಳ ತವಕ ಪಡುತ್ತಿದ್ದಾರೆ. ಅಲ್ಲಿ ಇನ್ನೂ ಕೂಡ ಸಣ್ಣ ನೀರಾವರಿ ಯೋಜನೆಯನ್ನು ಹೆಚ್ಚು ಹೆಚ್ಚು ಮಾಡಿದರೆ ಇನ್ನೂ ಹೆಚ್ಚು ಕೆಲಸ ಮಾಡಲಿಕ್ಕೆ ಆಹಾರ ಬೆಳೆಯಲಿಕ್ಕೆ ಅನುಕೂಲವಾಗುತ್ತದೆ. ಕೆಲವು ಕಡೆಗಳಲ್ಲಿ ಬತ್ತ ಬೆಳೆಯುವುದು ಒಳ್ಳೆಯ ಕೆಲಸವಲ್ಲ ಎಂದು ಬತ್ತದ ಬೆಳೆಯನ್ನು ತೆಗೆಯದೆ ಲಾಭದ ಬೆಳೆಗಳನ್ನು ಹೆಚ್ಚು ಬೆಳೆಸುತ್ತಿದ್ದಾರೆ. ಇದನ್ನು ತಪ್ಪಿಸಬೇಕು. ಆಹಾರದ ಬೆಳೆಗಳಲ್ಲಿ ನಮ್ಮ ರಾಜ್ಯ ಮೊದಲು ಸ್ವಾವಲಂಬನೆಯನ್ನು ಹೊಂದಬೇಕು, ಮಿಂಚಿನ ವೇಗದಲ್ಲಿ ಸ್ವಾವಲಂಬನೆಯನ್ನು ಪಡೆಯಬೇಕು ಎಂದು ಎಲ್ಲರೂ ಹೇಳುತ್ತಿದ್ದೇವೆ. ದಕ್ಷಿಣ ಕನ್ನಡದಲ್ಲಿರುವ ರೈತರಿಗೆ ಎಲ್ಲ ರೀತಿಯ ಸವಲತ್ತನ್ನೂ ಒದಗಿಸಿದರೆ ಅವರು ಇನ್ನೂ ಹೆಚ್ಚು ಬೆಳೆಯನ್ನು ತೆಗೆಯುವ ಅವಕಾಶವಿದೆ. ಚಿಕ್ಕ ನೀರಾವರಿ ಯೋಜನೆಗಳಿಗೆ ಸಂಬಂಧಪಟ್ಟ ಹಾಗೆ ಅಂದಾಜುಗಳು ತಯಾರಾಗಿ ಚೀಫ್ ಇಂಜಿನಿಯರ ಹತ್ತಿರ ಬಂದಿವೆ, ದಕ್ಷಿಣ ಕನ್ನಡ ಜಿಲ್ಲೆಯ ಸಣ್ಣ ನೀರಾವರಿ ಯೋಜನೆಗಳೂ ಮಂಜೂರು ಮಾಡಲಿಕ್ಕೆ ಉಂಟು ಎಂದು ಗೊತ್ತಾಗಿದೆ. ಉಳ್ಳಾಲ ವೆಂಟೆಡ್ ಡ್ಯಾಂ, ತಲಪಾಡಿ, ಇಂಥ ಚಿಕ್ಕ ಚಿಕ್ಕ ನೀರಾವರಿ ಯೋಜನೆಗಳಿಂದ ಎರಡು ಸಾವಿರ ಮುಡಿ ಅಕ್ಕಿ ಜಾಸ್ತಿ ಬರುತ್ತದೆ. ನಮ್ಮಲ್ಲಿ ಹೆಚ್ಚಾಗಿ ನದಿಗಳಿವೆ. ಆ ನದಿಗಳ ನೀರೆಲ್ಲ ಸಮುದ್ರಕ್ಕೆ ಹರಿಯುತ್ತಿದೆ. ನೇತ್ರಾವತಿ, ಗುರುಪುರ, ಈ ನದಿಗಳ ನೀರನ್ನು ಉಪಯೋಗಿಸುವುದಕ್ಕೆ ಸಾಧ್ಯವಾಗದೆ ಆ ನೀರೆಲ್ಲ ಸಮುದ್ರದ ಪಾಲಾಗುತ್ತಿದೆ. 150 ಇಂಚು ಮಳೆ ಬರುವ ಪ್ರದೇಶ. ಆದರೂ ಕೂಡ ನೀರು ಇಂಗಿ ಹೋಗುತ್ತದೆ. ಹೆಚ್ಚು ಪಂಪ್‌ಸೆಟ್ ಕೊಟ್ಟು ವಿದ್ಯುತ್ತನ್ನು ಕೊಡಬೇಕು. ಇದು ಬಹಳ ಪ್ರಾಮುಖ್ಯವಾದ ವಿಚಾರ. ನೇತ್ರಾವತಿ ನದಿ ನೀರನ್ನು ತೆಗೆದುಕೊಳ್ಳಲು ಪಂಪ್‌ಸೆಟ್‌ಗಳನ್ನು ಕೊಡಬೇಕಾದರೆ ಕೆಲವು ಕಡ್ಡಾಯಗಳನ್ನು ಹಾಕುತ್ತಿದ್ದಾರೆ. ಬಂದರಿಗೆ ಮತ್ತು ಮುಂದೆ ಬರತಕ್ಕ ಗೊಬ್ಬರದ ಕಾರ್ಖಾನೆಗೆ ನೀರು ಉಪಯೋಗಿಸಲಿಕ್ಕೆ ಬೇಕಾಗುತ್ತದೆ ಎಂದು ಈವೊತ್ತು ತಡ ಹಾಕುತ್ತಿದ್ದಾರೆ. ಎರಡು ಮೂರು ವರ್ಷಗಳ ನಂತರ ಪ್ರತ್ಯೇಕ ಕಾರ್ಯಕ್ರಮ ಇರುವುದಾದರೆ ಈಗ ಪಂಪ್‌ಸೆಟ್ ಹಾಕಿ ನೀರನ್ನು ಉಪಯೋಗ ಮಾಡುವುದಕ್ಕೆ ಅಡ್ಡಿಯನ್ನು ಮಾಡಬಾರದು. ನೇತ್ರಾವತಿ ಮತ್ತು ಗುರುಪುರ ನದಿ ಪ್ರದೇಶದಲ್ಲಿ ಪಂಪ್‌ಸೆಟ್‌ಗಳನ್ನು ಇಡುವುದಕ್ಕೆ ಹೆಚ್ಚು ಅವಕಾಶ ಕೊಡಬೇಕು ಮತ್ತು ಅವಕ್ಕೆ ವಿದ್ಯುತ್ತನ್ನು ಕೂಡ ಕೊಡಬೇಕು.

ನೀರಾವರಿ ಯೋಜನೆ ಪ್ರಾಮುಖ್ಯವಾದುದು. ಅದು ಒಬ್ಬ ಮನುಷ್ಯನ ದೇಹದ ಹೃದಯವಿದ್ದ ಹಾಗೆ. ಹೃದಯ ಎಷ್ಟು ಪ್ರಾಮುಖ್ಯವೋ, ನೀರಾವರಿ ಯೋಜನೆಗಳೂ ಅಷ್ಟೇ ಪ್ರಾಮುಖ್ಯ. ಉಳಿದ ಅಂಗಾಂಗಗಳೂ ಉಂಟು. ಕೆಲವರು ರಸ್ತೆಗಳು ಬೇಡ ಎಂದು ಹೇಳುತ್ತಾರೆ. ಇವು ಮನುಷ್ಯನ ನರನಾಡಿಗಳಿದ್ದ ಹಾಗೆ. -ನರನಾಡಿಗಳಿಲ್ಲದೆ ಮನುಷ್ಯ ಬದುಕುವುದಿಲ್ಲ, ರಕ್ತ ಸಂಚಾರವಾಗಬೇಕು. ಹಾಗೆ ರಸ್ತೆಗಳ ಕೆಲಸ ಆಗಬೇಕು. ಕಟ್ಟಡಗಳು ಬೇಡ ಎಂದು ಹೇಳತಕ್ಕ ಮಾತಿಗೆ ನನ್ನ ಸಂಪೂರ್ಣ ಒಪ್ಪಿಗೆ ಇದೆ. ದೊಡ್ಡ ದೊಡ್ಡ ಕಟ್ಟಡಗಳನ್ನು ಕಟ್ಟಿ ನಿಲ್ಲಿಸುವ ಪರಿಸ್ಥಿತಿ ತಪ್ಪಬೇಕು. ಕಟ್ಟಡಗಳನ್ನು ಕಡಮೆ ಮಾಡಿ ರಸ್ತೆಗಳು ಎಲ್ಲಿ ಅಗತ್ಯವಾಗಿ ಆಗಬೇಕೋ ಅಲ್ಲಿ ಮಾಡಬೇಕು. ದಕ್ಷಿಣ ಕನ್ನಡ ಜಿಲ್ಲೆ ಗುಡ್ಡ, ಬಯಲು ಇರುವ ಪ್ರದೇಶ. ಅಲ್ಲಿ ಸಾರಿಗೆ ಸಂಪರ್ಕ ಕೊಡದೆ ಹೋದರೆ ಬೆಳೆದ ಪದಾರ್ಥಗಳನ್ನು ಬಜಾರಿಗೆ ತರುವುದಕ್ಕೆ ಸಾಧ್ಯವಿಲ್ಲ. ಲೋಕೋಪಯೋಗಿ ಮಂತ್ರಿಗಳಾದ ಲಕ್ಕಪ್ಪನವರು ಗ್ರಾಮಾಂತರ ಪ್ರದೇಶದವರು. ಅವರು ಎಷ್ಟೇ ಹಣವಿಲ್ಲ ಎಂದರೂ ಕೆಲವು ಪ್ರಾಮುಖ್ಯವಾದ ರಸ್ತೆಗಳಿಗೆ ಗಮನ ಕೊಡುತ್ತಿರುವುದು ಬಹಳ ಸಂತೋಷದ ವಿಚಾರ.

(ಶ್ರೀ ಬಿ. ಎಂ. ಇದಿನಬ್ಬ)

ಕೆಲವು ಗ್ರಾಮಾಂತರ ಪ್ರದೇಶದಲ್ಲಿರತಕ್ಕ ರಸ್ತೆಗಳಲ್ಲಿ ಚಿಕ್ಕ ಚಿಕ್ಕ ಸೇತುವೆಗಳು ಕೂಡ ಆಗಬೇಕಾಗಿದೆ. ಐದಾರು ಹಳ್ಳಿಗಳಿಗೆ ಹೋಗತಕ್ಕ ಮಾರ್ಗಗಳಿಗೆ, ಮಿಸ್ಸಿಂಗ್ ಲಿಂಕ್ಸ್ ಎಂದು ಹೇಳುವಂತೆ ಸೇತುವೆಗಳು ಆಗಬೇಕಾಗಿದೆ. ಬೆಳ್ಮರ, ಕೊಣಾಜೆ, ಇಂಥ ಕಡೆ ಆಗಬೇಕಾಗಿರುವ ಸೇತುವೆಗಳನ್ನು ಮಾಡಿದರೆ ಅನೇಕ ಗ್ರಾಮಗಳಿಗೆ ಒಂದು ರೀತಿಯ ಸಂಪರ್ಕ ಬರುತ್ತದೆ.

ಬೆಂಗಳೂರು-ಮಂಗಳೂರು ರಸ್ತೆ ಅಗಲವಾಗಬೇಕು. ಈ ಮಾರ್ಗದಲ್ಲಿ ಅನೇಕ ರೀತಿಯ ಅಪಘಡಗಳಾಗುವುದನ್ನು ಕೇಳಿದ್ದೇವೆ. ಈ ರಸ್ತೆಯನ್ನು ಕಾಲಕ್ರಮದಲ್ಲಿ ದೊಡ್ಡ ರಸ್ತೆಯನ್ನಾಗಿ ಮಾಡಿಯಾರು ಎನ್ನುವ ಭಾವನೆ ನನಗೆ ಇದೆ.

ಕೆಲಸ ಮಾಡುವಾಗ ಕಂಟ್ರಾಕ್ಟರುಗಳು ಒಮ್ಮೊಮ್ಮೆ ಉದಾಸೀನತೆಯಿಂದ ಕೆಲಸ ಮಾಡುತ್ತಾರೆ. ದೇವರು ವರ ಕೊಟ್ಟರೂ ಪೂಜಾರಿ ವರ ಕೊಡ ಎನ್ನುವಂತೆ ನಮ್ಮ ಸರ್ಕಾರದವರು ಒಪ್ಪಿದರೂ ಕೂಡ, ಟೆಂಡರುಗಳನ್ನು ಕರೆದರೂ ಕೂಡ, ಕಂಟ್ರಾಕ್ಟರುಗಳು ಆ ಕೆಲಸಗಳನ್ನು ತಡಮಾಡುವುದೂ ಉಂಟು. ಈ ಕಡೆ ಕೂಡ ಸರ್ಕಾರದವರು ಗಮನಕೊಟ್ಟು ಹೇಳಿದ ಕಾಲಕ್ಕೆ ಕೆಲಸ ಮಾಡಬೇಕು ಮತ್ತು ತಡ ಮಾಡತಕ್ಕ ವಂಚನೆ ಮಾಡತಕ್ಕ ಕಂಟ್ರಾಕ್ಟರುಗಳಿಗೆ ಕಂಟ್ರಾಕ್ಟು ತನದಿಂದ ತೆಗೆದುಹಾಕಬೇಕು ಎಂದು ಹೇಳುತ್ತೇನೆ.

ಬಂದರುಗಳ ವಿಚಾರ ಇದರಲ್ಲಿ ಬರುತ್ತದೆ. ಮಂಗಳೂರಿನಲ್ಲಿ ಬೆಂಗ್ರೆ ಎಂಬ ಪ್ರದೇಶ ಉಂಟು. ಅಲ್ಲಿನ ಜನಸಂಖ್ಯೆ ಐದಾರು ಸಾವಿರ. ಬೋಳೂರು ಬೆಂಗ್ರೆ ಇಲ್ಲಿರುವ ಜನರಿಗೆ ತಾಲ್ಲೂಕು ಬೋರ್ಡ್ ಮತ್ತು ಪಂಚಾಯಿತಿಗಳಲ್ಲಿ ವೋಟ್ ಇಲ್ಲ, ಸಾರ್ವತ್ರಿಕ ಚುನಾವಣೆಗಳಲ್ಲಿ ಮಾತ್ರ ಇದೆ. ಅವರೆಲ್ಲ ಬಂದರೊಳಗೆ ಇರತಕ್ಕ ಜನರು. ಆ ಪ್ರದೇಶಕ್ಕೆ ಬೇಕಾದ ನೀರಾವರಿ, ಬೇಕಾದ ಶಾಲೆಗಳು, ಬೇಕಾದ ಆಸ್ಪತ್ರೆಗಳು ಮತ್ತು ಇನ್ನಿತರ ಸೌಕರ್ಯಗಳನ್ನು ಒದಗಿಸಿಕೊಡಬೇಕೆಂದು ಹೇಳುತ್ತೇನೆ.

ಪಣಂಬೂರಿನಲ್ಲಿ ಆಗತಕ್ಕ ಬಂದರು ದೊಡ್ಡದು. ಅಲ್ಲಿನ ಜನರನ್ನು ಎಬ್ಬಿಸಿ ಬೇರೆಕಡೆಗೆ ಕಳಿಸಿದರು. ಮಾನ್ಯ ಸದಸ್ಯರಾದ ಇತಾಳ್ ಅವರು ಭೂತ ಪ್ರಸಂಗವನ್ನು ತಂದರು. ನಾನು ಹೇಳುವುದಾದರೆ ಅಲ್ಲಿ ಭೂತವಿದೆ, ಸ್ಮಶಾನವಿದೆ. ಅಂಥ ಸ್ಮಶಾನದ ಕಡೆ ಕೊಡಬೇಕೆಂದು ಯಾರೂ ಹೇಳಲಾರರು. ಸ್ಮಶಾನ ಇರುವಲ್ಲಿ ಕೊಡಬಾರದು, ಬೇರೆ ಕಡೆ ಕೊಡಬೇಕೆಂದು ಹೋದ ವರ್ಷ ಹೇಳಿದೆವು. ಅವರು ಸ್ವಲ್ಪ ತರ್ಕ ಮಾಡಿದರು. ಈಗ ಬೈಕಂಪಾಡಿ ಜನ ಅಲ್ಲಿಗೆ ಹೋಗಬೇಕಾದ ಪ್ರಸಂಗ ಬಂದಿದೆ. ಅದೇ ಸ್ಮಶಾನದಲ್ಲಿ ಸ್ಪೆಷಲ್ ಡೆಪ್ಯುಟಿ ಕಮಿಷನರು ಈಗ ಜಾಗ ಕೊಡುತ್ತಾರೆಂದು ಗೊತ್ತಾಗಿದೆ. ಇವರಿಗೂ ಕೂಡ ಅಲ್ಲಿ ಕೊಡಬಾರದು ಎಂಬುದು ನಮ್ಮ ಅಭಿಪ್ರಾಯ ಮತ್ತು ಆಹಾರ ಮಂತ್ರಿಗಳ ಅಭಿಪ್ರಾಯವೂ ಅದೇ ಆಗಿದೆ. ಹಾಗೆ ಮಾಡಿ ಜನರಿಗೆ ಬೇಕಾದ ಸೌಲತ್ತು ಕೊಡಬೇಕು. ಕೆಲವರು ಕಾಂಗ್ರೆಸ್ ಭೂತಕ್ಕೆ ಹೆದರುವುದಾಗಿ ಹೇಳಿದ್ದಾರೆ, ತಾಲ್ಲೂಕು ಬೋರ್ಡಿನಲ್ಲಿ ಭೂತ ಬಂದಿಲ್ಲ, ಶ್ರೀ ಇತಾಳರ ಸಲುವಾಗಿ ಬಂದಿರಬೇಕು. ಈ ಡಿಮ್ಯಾಂಡನ್ನು ಸ್ವಾಗತಿಸಿ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಣ್ಣ ಸಣ್ಣ ನೀರಾವರಿ ಯೋಜನೆ, ರಸ್ತೆ, ಕಟ್ಟೆಗಳು ವಗೈರೆ ಮಾಡಿ ಹೆಚ್ಚು ಆಹಾರ ಬೆಳೆಯುವುದಕ್ಕೆ ಅವಕಾಶಮಾಡಿಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

7-00 P.M.

ಶ್ರೀಮತಿ ಚಂಪಾಬಾಯಿ ಬೋಗಳೆ (ಕಾಗ್‌ವಾಡ).—ಮಾನ್ಯ ಅಧ್ಯಕ್ಷರೇ, ನಮ್ಮ ಮುಂದಿರುವ ಲೋಕೋಪಯೋಗಿ ಇಲಾಖೆಯ ಬೇಡಿಕೆಯನ್ನು ಅನುಮೋದಿಸುತ್ತಾ ಕೆಲವು ಸಲಹೆಗಳನ್ನು ಕೊಡಲು ಇಚ್ಛಿಸುತ್ತೇನೆ. ನಮ್ಮ ಮೈಸೂರು ರಾಜ್ಯ ನೀರಾವರಿ ಸಲುವಾಗಿ ಸಾಕಷ್ಟು ಹಣ ಖರ್ಚುಮಾಡಬೇಕಾಗಿದೆ. ಈಗ ಬೇಕಾದಷ್ಟು ವಿದ್ಯುಚ್ಛಕ್ತಿ ಇರುವುದರಿಂದ ಮತ್ತು ನೀರಾವರಿ ಸೌಕರ್ಯವಿರುವುದರಿಂದ ಚಿಂತಾಜನಕವಾಗಿರುವ ಆಹಾರ ಪರಿಸ್ಥಿತಿಯನ್ನು ಹೋಗಲಾಡಿಸಲು ಸೌಕರ್ಯ ಕಲ್ಪಿಸಬೇಕು, ಇನ್ನೂ ಹೆಚ್ಚು ನೀರಾವರಿ ಸೌಕರ್ಯ ಮಾಡಿಕೊಡಬೇಕು, ಸಣ್ಣ ನೀರಾವರಿ ಕೆಲಸಗಳನ್ನು ಮಾಡಬೇಕು, ಹೀಗೆ ಮಾಡಿ ಜನರಿಗೆ ಅನುಕೂಲವೊದಗಿಸಬೇಕು. ಯಾವ ಯಾವ ಪ್ರದೇಶದಲ್ಲಿ ಹೊಳೆಯಿದೆ ಅಲ್ಲಿ ಅದರ ನೀರನ್ನು ಉಪಯೋಗಿಸಿಕೊಳ್ಳಲು ಸೌಕರ್ಯ ಕಲ್ಪಿಸಬೇಕು, ಅಥಣಿ, ಚಿಕ್ಕೋಡಿ, ರಾಯಭಾಗ್ ತಾಲ್ಲೂಕುಗಳಲ್ಲಿ 50 ಲಕ್ಷ ನೀರಾವರಿಯಾಗಲು ಸೌಕರ್ಯವಿದೆ, ವೇದಗಂಗ, ಕೃಷ್ಣ ನದಿಗಳು ಹರಿಯುತ್ತವೆ. ಆದರೆ ಕೊೈನ ಪ್ರಾಜೆಕ್ಟಿಗೆ ಸಂಬಂಧಪಟ್ಟವರು ನೀರು ಬಿಡದೆ ತೊಂದರೆಮಾಡಿದ್ದಾರೆ ಆದುದರಿಂದ ಅಲ್ಲಿನ ರೈತರ ಪರಿಸ್ಥಿತಿ ಚಿಂತಾಜನಕವಾಗಿದೆ.

ಅಥಣಿ ತಾಲ್ಲೂಕಿನಲ್ಲಿ ಇರಿಗೇಷನ್ನಿಗೆ ಸೌಕರ್ಯಮಾಡಿಕೊಟ್ಟರೆ ಮೈಸೂರು ದೇಶಕ್ಕೆ ಎಷ್ಟೋ ಆಹಾರ ಒದಗಿಸಬಹುದು, ಅಲ್ಲಿನ ರೈತರು ಒಳ್ಳೆಯವರಿದ್ದಾರೆ. ಅಲ್ಲಿ ನಿರಾವರಿ ಸೌಕರ್ಯ ಮತ್ತು ವಿದ್ಯುಚ್ಛಕ್ತಿ–ಇವುಗಳ ಅವಶ್ಯಕತೆ ಬಹಳವಾಗಿದೆ. ನಮ್ಮ ಪ್ರದೇಶದಲ್ಲಿ 46–47 ಹಳ್ಳಿಗಳಿವೆ, ಅಲ್ಲಿ ಕೃಷ್ಣನದಿ ಹರಿಯುವುದು, ಆದರೆ 20 ವರ್ಷದಿಂದ ನೀರಿನ ಸೌಕರ್ಯಕ್ಕೆ ಲಕ್ಷ ಕೊಟ್ಟಿಲ್ಲ. ಎಲ್ಲರೂ ತಮ್ಮ ತಮ್ಮ ಪ್ರದೇಶಗಳ ಸೌಕರ್ಯವನ್ನು ನೋಡಿಕೊಳುತ್ತಾರೆ. ಬಾರ್ಡರಿಗೆ ಲಕ್ಷ ಕೊಟ್ಟಿಲ್ಲ ಎಂದು ಬಹಳ ವಿಷಾದದಿಂದ ಹೇಳಬೇಕಾಗಿದೆ. ಇಂಥ ಪ್ರದೇಶದಲ್ಲಿ ಮೊದಲು ಬೇಕಾದ ಅನುಕೂಲ ಕಲ್ಪಿಸಬೇಕು. ನಮ್ಮಲ್ಲಿ ಇರಿಗೇಷನ್ ಸೌಕರ್ಯದ ಆವಶ್ಯಕತೆ ಬಹಳವಾಗಿದೆ. ಆದುದರಿಂದ ಅಥಣಿ, ಚಿಕ್ಕೋಡಿ ಮತ್ತು ರಾಯಭಾಗ್ ಪ್ರದೇಶದಲ್ಲಿ ಹೆಚ್ಚು ನೀರಾವರಿ ಮಾಡಲು ಹಣ ಒದಗಿಸಬೇಕೆಂದು ವಿನಂತಿಮಾಡುತ್ತೇನೆ. ಗೋರೂರು ರಸ್ತೆ ಬಹಳ ಅವಶ್ಯಕವಾಗಿದೆ, ಅದು ಹೆದ್ದಾರಿ ರಸ್ತೆ, ಆದನ್ನು ಮಾಡಿದರೆ ಮೈಸೂರು ರಾಜ್ಯಕ್ಕೆ ಬರಲು 50 ಮೈಲಿ ದೂರ ಕಡಿಮೆಯಾಗುವುದು. ಸೇತುವೆ ಕಟ್ಟಿದರೆ ಬಿಜಾಪುರ, ಗೋಕಾಕ್ ಮುಂತಾದ ಪ್ರದೇಶಗಳಿಗೆ ಅನುಕೂಲವಾಗುವುದು. ಮಹಾರಾಷ್ಟ್ರದವರು ಅಂದರೆ ಹಿಂದಿನ ಮುಂಬಯಿ ಸರಕಾರ ಮಾಡಿದ್ದ ಪ್ಲಾನು ಮತ್ತು ಅಂದಾಜನ್ನು 20 ವರ್ಷಗಳಿಂದ ಮೂಲೆಗೆ ಹಾಕಿದ್ದಾರೆ, ಅದನ್ನು ತರಿಸಿ ಕಾರ್ಯ ಕೈಗೊಂಡು ಜನತೆಗೆ ಸೌಕರ್ಯ ಮಾಡಬೇಕು. ವಿದ್ಯುಚ್ಛಕ್ತಿ ಕೆಲವು ಕಡೆ ಬಂದಿದೆ. ಆದರೆ ಒಂದು ಕಡೆ 3 ಮೈಲಿ ಬಿಟ್ಟು ಬೇರೆ ಕಡೆ ಲೈನು ಹಾಕಿದ್ದಾರೆ, ಈಗ ಆ 3 ಮೈಲಿಗೆ ಲೈನು ಹಾಕಬೇಕಾದರೆ 10 ಮೈಲಿಯಿಂದ ಬರಬೇಕು. ಆದುದರಿಂದ ಹಾಗೆ ಮಾಡ ಬಾರದು, ಮಧ್ಯೆ ಬರುವ ಸಣ್ಣ ಸಣ್ಣ ಹಳ್ಳಿ ಬಿಟ್ಟು ಹೋಗಬಾರದು. ಐನಾಪುರದಿಂದ ಕಿತ್ತೂರಿಗೆ ಒಂದೂವರೆ ಮೈಲಿ ಇದೆ, ಅಲ್ಲಿಗೆ ಪ್ಲಾನ್ ಮಾಡಿಲ್ಲ, ಅಂಥ ಶೆಡಬಷ್ಯೇಷನ್ ಕಡೆಗೆ ವಿದ್ಯುತ್ ಕೊಡ ಬೇಕು. ಸಿರಗುಪ್ಪದಿಂದ ಮಂಗಾವತಿಗೆ 3 ಮೈಲಿ ಇದೆ, ಬರುವುದಕ್ಕೆ ಅನಾನುಕೂಲವಿದೆ, ಮಲ ತಾಯಿ ಧೋರಣೆ ಅಲ್ಲಿ ಅನುಸರಿಸುತ್ತಿದ್ದಾರೆಂದು ಹೇಳುತ್ತಿದ್ದಾರೆ. ಬಾರ್ಡರಿನಲ್ಲಿರುವ ಗ್ರಾಮ ಗಳನ್ನು ಅಲಕ್ಷ್ಯ ಮಾಡಬಾರದು.

ಮತ್ತೊಂದು ಕೃಷ್ಣ ಪ್ರಾಜೆಕ್ಟಿನಿಂದ ಕೆಲವು ಹಳ್ಳಿಗಳು ಮುಳುಗಿ ಹೋಗುವುವು ; ಇದೊಂದು ಅನಾನುಕೂಲವಿದೆ, ಇಂಥ ಕಡೆಗೆ ರಸ್ತೆ ಮಾಡಿ ವಿದ್ಯುಚ್ಛಕ್ತಿ ಒದಗಿಸಬೇಕು. ಅಲ್ಲಿ ದವಾಖಾನೆ ಇಲ್ಲ, ಕೊಡಬೇಕು. ಕೃಷ್ಣನದಿ ಪ್ರಾಜೆಕ್ಟಿನಿಂದ ಕೊನೆಯಲ್ಲಿರುವ ಶಿವಗುಂದ ಮೊದಲು ಮುಳುಗಿ ಹೋಗುವುದು. ಅಲ್ಲಿನವರು ನೀರಾವರಿ ಸೌಕರ್ಯ ಪಡೆಯುವಂತೆ ಮೊದಲು ಬೇಕಾದ ಕೆಲಸ ಪಬ್ಲಿಕ್ ವರ್ಕ್ಸ್ ಇಲಾಖೆ ಮಾಡಬೇಕು. ಈಗ ಇಲಾಖೆಯವರು ಜೀಪು ಹೋಗುವ ಕಡೆಗೆ ಮಾತ್ರ ಹೋಗುತ್ತಾರೆ, ಇತರ ಕಡೆಗೆ ಹೋಗುವುದಿಲ್ಲ. ಇದು ಸರಿಯಲ್ಲ. ಮಾರಿ ನೋಡಿ ಮಣ್ಣ ಹಾಕು ವುದು ಸರಿಯಲ್ಲ. ಬಾರ್ಡರ್ ಪ್ರದೇಶದಲ್ಲಿ ಸಾಕಾದಷ್ಟು ಅನುಕೂಲ ಮಾಡಬೇಕು.

ಮತ್ತೊಂದು ಕಾವಲ್ಲಿ ಕೆರೆ, ಅದಕ್ಕೆ ಸರಕಾರದವರು ಪ್ಲಾನು ಮತ್ತು ಎಸ್ಟಿಮೇಟ್ ಮಾಡಿ ದ್ದಾರೆ, ಅವರಿಂದ 4 ಸಾವಿರ ಎಕರೆ ನೀರಾವರಿಯಾಗುವುದು. ಅದನ್ನು ಮಾಡಬೇಕು. ಸಣ್ಣ ಸಣ್ಣ ನೀರಾವರಿ ಮಾಡಿದರೆ ವರ್ಷಕ್ಕೆ ಎರಡು ಲಕ್ಷ ಉತ್ಪತ್ತಿ ಬರುವುದು. ಆದುದರಿಂದ ನಮ್ಮ ಕಡೆ ರಸ್ತೆ, ನೀರಾವರಿ ಸೌಕರ್ಯ, ವಿದ್ಯುಚ್ಛಕ್ತಿ ಸಾಕಷ್ಟು ಒದಗಿಸಬೇಕೆಂದು ಕಳಕಳಿಯಿಂದ ಕೇಳಿ ಕೊಳ್ಳುತ್ತೇನೆ. ಇಷ್ಟು ಹೇಳಿ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Mr. DEPUTY SPEAKER.—The House will now rise and meet tomorrow at 1.00 P.M.

The House adjourned at Ten Minutes past Seven of the Clock to meet again at One of the Clock on Thursday, the 6th March 1969.

WD 12500–GPB–600–16-5-1969

ಮೈಸೂರು ವಿಧಾನ ಸಭೆ

MYSORE LEGISLATIVE ASSEMBLY

Thursday, 6th March 1969

The House met in the Assembly Chamber, Vidhana Soudha, Bangalore, at One of the Clock.

MR. SPEAKER (SRI S. D. KOTHAVALE) in the Chair.

STARRED QUESTIONS

(to which oral answers were given)

Irregularities in Taluk Agricultural Marketing Society Ltd., Arkalgud.

161. SRI H. N. NANJE GOWDA (Arkalgud).—

Will the Minister for Development be pleased to state :—

(a) whether shortages of manure and other stocks of the Taluk Agricultural Marketing Society Ltd., Arkalgud has come to the notice of the Government (The details of shortages, the amount misused and the irregularities committed may be furnished) ;

(b) whether sometime back the Government had promised to take suitable action to supersede the committee of management of the said society;

(c) if so, the reason for the same and when actually the said Committee could be superseded;

(d) the persons responsible for these shortages, misuse of funds and other irregularities in the administration of this society and the action Government propose to take in this behalf ?

SRI P. M. NADGOUDA (Minister for Development).—

(a) Yes, as detailed below :

	Shortage		*Value* Rs. Ps.
1.	*Controlled* Manure	18 T. 109 Q.	8,448-01
2.	*Non-controlled* Manure	0 Q. 42 Kgs.	16-80
3.	Seeds	54 Q. 83 Kgs.	3,240-40
4.	Other consumer Goods.	18 Q. 79 Kgs.	1,256-93

(SRI P. M. NADGOUDA)

The irregularities committed are non-observance of rules, non-settlement of claims and accounts, non-maintenance of accounts in certain cases, heavy dues as a result of non-recovery of purchase loan from members, non-settlement of advances made to the contractors and non-recovery of amounts due to the Society.

(*b*) and (*c*) As the Committee of Management did not function properly and failed to discharge the duties, it was superseded on 18-6-1968, which order has been stayed on 21-6-1968 by the Joint Registrar of Co-operative Societies, Mysore on an appeal preferred before him.

(*d*) Two employees are held responsible for shortages and misappropriation. One of them has paid all the dues and the other has paid in part. The latter has been issued a notice to pay off the balance. As regards other irregularities in the administration, further action will be taken after the appeal referred to in Clauses (*b*) and (*c*) is disposed of.

ಶ್ರೀ ಎಚ್. ಎನ್. ನಂಜೇಗೌಡ.—ಉತ್ತರದಲ್ಲಿ ಷಾರ್ಟೇಜಸ್ ಇಷ್ಟು ಎಂದು ಕೊಡಲಾಗಿದೆ. ಅದರಲ್ಲಿ ಕಮಿಟಿ ಆಫ್ ಮ್ಯಾನೇಜ್‌ಮೆಂಟ್ ವೇವ್ ಮಾಡಿರುವುದೂ ಸೇರಿಸಿ ಅಷ್ಟು ಆಗಿದೆಯೋ ಹೇಗೆ?

†ಶ್ರೀ ಬಿ. ಎಲ್. ಗೌಡ.—ಅದನ್ನು ಸೇರಿಸಿದೆ.

ಶ್ರೀ ಎಚ್. ಎನ್. ನಂಜೇಗೌಡ.—ಕಮಿಟಿ ಆಫ್ ಮ್ಯಾನೇಜ್‌ಮೆಂಟನ್ನು ಸೂಪರ್‌ಸೀಡ್ ಮಾಡುವುದಕ್ಕೆ ದೂರು ತಲ್ಪಿದಮೇಲೆ ನಿಮಗೆ ಎಷ್ಟು ಕಾಲ ಬೇಕಾಯಿತು ?

ಶ್ರೀ ಬಿ. ಎಲ್. ಗೌಡ.—ಸೂಪರ್‌ಸೀಡ್ ಮಾಡಿದ್ದೇವೆ, ಎಷ್ಟು ಕಾಲವಾಯಿತು ಎಂಬುದನ್ನು ಈಗ ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಚ್. ಎನ್. ನಂಜೇಗೌಡ.—ಸೂಪರ್‌ಸೀಡ್ ಮಾಡಿದಮೇಲೆ ಕಮಿಟಿಯು ಕೆಲಸ ಸ್ಥಗಿತವಾಗಿರುವುದುಂಟೇ ? ಅಥವಾ ಸ್ಥಗಿತವಾಗದ ರೀತಿಯಲ್ಲಿ ಜಾಯಿಂಟ್ ರಿಜಿಸ್ಟ್ರಾರರು ಸ್ಟೇ ಆರ್ಡರು ಮಾಡಿದರೋ ?

ಶ್ರೀ ಬಿ. ಎಲ್. ಗೌಡ.—ಸೂಪರ್‌ಸೀಡ್ ಆದಮೇಲೆ ಕೆಲಸ ಹೆಚ್ಚಾಗಿ ಆಗಿದೆ. 60 ಸಾವಿರ ರೂಪಾಯಿಗಳಲ್ಲಿ 40 ಸಾವಿರ ರೂಪಾಯಿ ಪಾವತಿಯಾಗಿವೆ, ಕೆಲವು ನ್ಯೂನತೆಗಳಿದ್ದರೂ ಹೆಚ್ಚು ಹಣ ವಸೂಲಾಗಿದೆ.

ಶ್ರೀ ಎಚ್. ಎನ್. ನಂಜೇಗೌಡ.—ಸ್ಟೇ ಆರ್ಡರು ಕೊಟ್ಟಮೇಲೆ ಸೆಕ್ರೆಟರಿಗಳು ಮೆಜಾರಿಟಿ ಬೆಂಬಲ ಪಡೆದು ಸೇವೆ ಮಾಡಿದ್ದಾರೆ. In law they are not members. What action will you take to punish the Directors ?

ಶ್ರೀ ಬಿ. ಎಲ್. ಗೌಡ.—ಆ ಮಾಹಿತಿ ಇಲ್ಲ. ವಿಚಾರ ತಿಳಿಸಿದರೆ ಎನ್‌ಕ್ವೈರ್ ಮಾಡುತ್ತೇವೆ.

SRI H. N. NANJE GOWDA.—Will the Government definitely assure the House that they will take action against that Secretary if he has invited the Directors who in law were not Directors and they were dismissed ?

SRI B. L. GOWDA.—I assure the hon. Member that I will take stringent action against those persons.

† Indicates that the speeches or remarks have not been revised by the member concerned.

Starting of Industry to consume Agricultural Produce

366. SRI M. NAGAPPA (Raichur).—

Will the Minister for Industries, Information and Publicity be pleased to state:—

(a) whether there is any scheme before Government to start any industry to consume the Agriculture produce in Raichur Town, particularly groundnuts, either in public, private or co-operative sector;

(b) if so, the stage at which the scheme stands?

SRI M. RAJASEKHARA MURTHY (Minister for Industries, Information and Publicity).—

(a) There is no scheme before Government to start any industry to consume groundnuts. The Government already recommended the application of M/s. Srinivas Industries, Raichur to the Government of India for grant of Industrial licence for setting up a new Roller Flour Mills at Raichur in view of the availability of wheat. The Government have also recommended to the Government of India the application of Srikrishna Gyanoday Sugar Ltd., Calcutta, for setting up of a new Sugar Factory at Gangavathi in Raichur District.

(b) Does not arise.

ಶ್ರೀ ಎಂ. ನಾಗಪ್ಪ.—ಅಲ್ಲಿ ಕಡಲೆಕಾಯಿ ಬೆಳೆ ಹೆಚ್ಚಾಗಿರುವುದರಿಂದ ಅದರ ಬಗ್ಗೆ ಯೋಚನೆ ಮಾಡಿ ಅಲ್ಲಿ ಏಕೆ ಒಂದು ಇಂಡಸ್ಟ್ರಿ ತೆರೆಯಬಾರದು ? ಅದಿಲ್ಲದೆ ರೈತರಿಗೆ ಈಗ ಹಾನಿಯಾಗುತ್ತಿದೆ.

ಶ್ರೀ ಎಂ. ರಾಜಶೇಖರಮೂರ್ತಿ.—ರಾಯಚೂರು ಜಿಲ್ಲೆಯಲ್ಲಿ ಈಗ 8 ಆಯಿಲ್ ಮಿಲ್ಲುಗಳಿವೆ, ಅವುಗಳಲ್ಲಿ 15 ಸಾವಿರ ಟನ್ ಆಯಿಲ್ ಪ್ರೊಡ್ಯೂಸ್ ಮಾಡುತ್ತಾರೆ. ಅಲ್ಲಿ ಬೆಳೆಯುವ ಕಡಲೆ ಕಾಯಿ ಇರುವ ಮಿಲ್ಲುಗಳಿಗೆ ಬೇಕಾದ್ದರಲ್ಲಿ ಸೇಕಡ 80 ರಷ್ಟು ಮಾತ್ರ ಆಗುತ್ತದೆ, ಉಳಿದ ಸೇಕಡ 20 ಭಾಗವನ್ನು ಹೊರಗಿನಿಂದ ತರಿಸಬೇಕಾಗಿರುವುದರಿಂದ ಅಲ್ಲಿ ಅಡೀಷನಲ್ ಇಂಡಸ್ಟ್ರೀಗೆ ಸ್ಕೋಪ್ ಇಲ್ಲ.

ಶ್ರೀ ಎಂ. ನಾಗಪ್ಪ.—ರಾಯಚೂರು ಮಾರ್ಕೆಟ್ಟಿಗೆ ಮೆಹಬೂಬ್‌ನಗರ ಗದ್ವಾಲ್ ಮುಂತಾದ ಕಡೆಗಳಿಂದ ಕಡಲೆಕಾಯಿ ಬೇಕಾದಷ್ಟು ಬರುತ್ತದೆ. ಆದ್ದರಿಂದ ಅಲ್ಲೊಂದು ಕೈಗಾರಿಕೆ ಸ್ಥಾಪಿಸುವುದು ಒಳ್ಳೆಯದಲ್ಲವೇ ?

ಶ್ರೀ ಎಂ. ರಾಜಶೇಖರಮೂರ್ತಿ.—ನಾನಾಗಲೇ ಹೇಳಿದೆ, ಅಲ್ಲಿ ಸೇಕಡ 80 ರಷ್ಟು ಮಾತ್ರ ದೊರೆಯುವುದು, ಇನ್ನೂ ಜಾಸ್ತಿ ಬೇಕಾಗಿದೆ ಎಂದು. ಹೊರಗಿನವರು ಅಲ್ಲಿಗೆ ತಂದು ಮಾರಾಟ ಮಾಡುವುದರಿಂದ ಇದನ್ನು ನೋಡಿ ಮಾಡುವುದಕ್ಕಾಗುವುದಿಲ್ಲ. ಸಾಕಷ್ಟು ರಾಮೆಟೀರಿಯಲ್ಸ್ ಅಲ್ಲಿ ದೊರೆಯುವುದಾದರೆ ಖಾಸಗಿಯವರು ಯಾರಾದರೂ ಮುಂದೆ ಬಂದರೆ ಸರಕಾರ ಅವರಿಗೆ ಸಹಾಯಮಾಡುವುದು.

MR. SPEAKER.—Question Nos. 397 and 500 may be taken up together.

Fourth Five Year Plan

397. Sri C. K. RAJAIAH SHETTY (Chicknayakanahalli).—

Will the Minister for Finance, Planning and Youth Welfare be pleased to state :—

(a) the final figure agreed upon for the Fourth Five Year Plan of the State ;

(b) the proposed expenditure for 1968–69 ;

(c) the Central aid to the State Plan ?

Sri RAMAKRISHNA HEGDE (Minister for Finance, Planning and Youth Welfare).—

(a) A final decision in regard to the outlay on the Fourth Five Year Plan of the State has yet to be taken.

(b) Rs. 60·25 crores.

(c) The Centre has yet to indicate firm figures in regard to Central assistance for the Fourb Plan.

Fourth Five Year Plan

500. Sri L. SRIKANTAIAH (Nanjangud).—

Will the Minister for Finance, Planning and Youth Welfare be pleased to state :—

(a) whether the Government has submitted its IV Plan proposals to the Planning Commission ;

(b) if so, what are the proposals (a copy of the proposals may be laid on the Table of the House) ;

(c) whether the Government has thought of an Annual Plan in the absence of the finalisation of IV Plan ?

Sri RAMAKRISHNA HEGDE (Minister for Finance, Planning and Youth Welfare).—

(a) Yes.

(b) Copies of the "Draft Outline" have been furnished to Members.

(c) Action has been taken to formulate an Annual Plan for 1969–70.

Sri C. K. RAJAIAH SHETTY.—May I know the amount required to meet the expenditure on spill over items of the Third Plan and the amount provided in this figure of Rs. 60·25 crores ?

Sri RAMAKRISHNA HEGDE.—It is impossible to provide amounts sufficient to complete the spill over items in the plan. In any plan it does not happen. For instance in respect of major irrigation and minor irrigation, as I submitted earlier, the total spill over is nearly of the order of 250 crores. It is not possible to provide 250 crores in the Fourth Plan itself. We have to provide according to our resources.

Sri C. K. RAJAIAH SHETTY.—In view of the heavy investment needed is it not wise to take up only spill over items and complete them ?

Sri RAMAKRISHNA HEGDE —It is a good suggestion. I personally agree with the hon. Member. We should not take up too many works and spread the butter too thinly on the bread. But, I explained the reasons for which the Government were obliged to take up too many works and there was no escape from it.

Sri C. K. RAJAIAH SHETTY.—Is it not a weak policy to spread butter too thinly on the bread and nullify the benefits ?

Sri RAMAKRISHNA HEGDE.—It is not the policy of the Government. The prudent policy should be to take up only such works which can yield quick results so that the yield can help to finance other projects. But, there are certain factors responsible which make the Government to take up all these projects. For example we have strong feeling of our rights over waters.

ಶ್ರೀ ಎಲ್. ಶ್ರೀಕಂಠಯ್ಯ.—ಯೋಜನೆಗಳನ್ನು ತಯಾರು ಮಾಡುವಾಗ ಪ್ರತಿಯೊಂದು ಡಿಸ್ಟ್ರಿಕ್ಟಿನ ಅವಶ್ಯಕತೆಗಳು ಏನು, ಅಲ್ಲಿ ಏನು ಕೆಲಸ ಮುಗಿದಿದೆ ಅಥವಾ ಮುಂದೆ ಏನು ಕೆಲಸ ನಡೆಯಬೇಕಾಗಿದೆ ಎನ್ನುವ ಸಮಗ್ರವಾದ ಒಂದು ಪಕ್ಷಿ ನೋಟ ತೆಗೆದುಕೊಳ್ಳಬೇಕು. ನಮಗೆ ಗೊತ್ತಿರುವ ಹಾಗೆ ಮೈಸೂರು ಡಿಸ್ಟ್ರಿಕ್ಟ್‌ನ 4ನೇ ಪಂಚವಾರ್ಷಿಕ ಯೋಜನೆ ಬಗ್ಗೆ ಹೋದ ಶನಿವಾರ ಒಂದು ಮೀಟಿಂಗ್ ಕರೆದು ಇನ್ನೂ ಚರ್ಚೆಯಾಗುತ್ತಾ ಇದೆ, ಕೆಲವು ಡಿಸ್ಟ್ರಿಕ್ಟ್‌ಗಳಲ್ಲಿ ಇನ್ನೂ ಚರ್ಚೆಯೇ ನಡೆದಿಲ್ಲ, ಯಾವ ವರದಿಯೂ ನಿಮ್ಮ ಮುಂದೆ ಇಲ್ಲದೆ ನಾಲ್ಕನೆಯ ಪಂಚವಾರ್ಷಿಕ ಯೋಜನೆಯನ್ನು ಹೇಗೆ ತಯಾರು ಮಾಡಿದಿರಿ ? ಇದರಲ್ಲಿ ತಿರುಳು ಇದೆಯೇ ?

ಶ್ರೀ ರಾಮಕೃಷ್ಣ ಹೆಗಡೆ.—ಯೋಜನೆಗಳು ತಯಾರಾಗಬೇಕಾದರೆ ಅದು ಬುಡದಿಂದ ತಯಾರಾಗಿ ಮೇಲೆ ಬರಬೇಕೆಂದು ಹೇಳುವ ತತ್ವವನ್ನು ನಾನು ಒಪ್ಪುತ್ತೇನೆ. ಪ್ರತಿ ಡಿಸ್ಟ್ರಿಕ್ಟ್‌ನಲ್ಲಿ ಜಿಲ್ಲಾ ಅಭಿವೃದ್ಧಿ ಮಂಡಲಿಯವರು ಅಲ್ಲಿರತಕ್ಕ ಸ್ಥಾನಿಕ ಅಧಿಕಾರಿಗಳ ಸಹಕಾರದ ಜೊತೆಗೆ ಆಯಾ ಡಿಸ್ಟ್ರಿಕ್ಟ್‌ನಲ್ಲಿ ಏನು ಆಗಬೇಕು, ಎಷ್ಟು ಬೇಕು ಅನ್ನುವಂತಹ ವಿಚಾರವನ್ನು ಚರ್ಚೆ ಮಾಡಿ ಅವರು ಒಂದು ಪ್ಲಾನನ್ನು ತಯಾರು ಮಾಡುತ್ತಾರೆ. ಅದೂ ಕೂಡ ನಮ್ಮದೇ ಆದಂತಹ ಸಲಹೆಯ ಮೇರೆಗೆ. ಜಿಲ್ಲಾ ಅಭಿವೃದ್ಧಿ ಮಂಡಲಿಯವರು ಮಾಡತಕ್ಕ ಎಲ್ಲಾ ಪ್ಲಾನ್‌ಗಳನ್ನೂ ಸೇರಿಸಿದರೆ ನಮ್ಮ 4ನೇ ಪಂಚವಾರ್ಷಿಕ ಯೋಜನೆ ಆಗುವುದಿಲ್ಲ. ಜಿಲ್ಲಾ ಪ್ಲಾನು ಯಾವ ಆಧಾರದ ಮೇಲೆ ಆಗುತ್ತದೆ ಎಂದರೆ ಸ್ಥಾನಿಕ ಅವಶ್ಯಕತೆಯ ಆಧಾರದ ಮೇಲೆ ಆಗುತ್ತದೆ. 4ನೇ ಪಂಚವಾರ್ಷಿಕ ಯೋಜನೆಯನ್ನು ಅಂತಿಮವಾಗಿ ನಾವು ನಿರೂಪಣೆ ಮಾಡಿಲ್ಲ ಡ್ರಾಫ್ಟ್ ಪ್ಲಾನ್ ಮಾತ್ರ ತಯಾರು ಮಾಡಿದ್ದೇವೆ. ಅದರ ಪ್ರತಿಯನ್ನು ಮಾನ್ಯ ಸದಸ್ಯರಿಗೆ ಹಂಚಿದ್ದೇವೆ. ಪ್ಲಾನಿಂಗ್ ಕಮಿಷನರು ಇವತ್ತಿನವರೆಗೂ 4ನೇ ಪಂಚವಾರ್ಷಿಕ ಯೋಜನೆಯ ಬಗ್ಗೆ ಅಂತಿಮವಾದ ನಿರ್ಣಯವನ್ನು ಕೈಕೊಂಡಿಲ್ಲ ಎಂದು ಅಷ್ಟು ಮಾತ್ರ ಹೇಳಬಯಸುತ್ತೇನೆ.

ಶ್ರೀ ಎಲ್. ಶ್ರೀಕಂಠಯ್ಯ.—ವಿದೇಶಗಳಲ್ಲೂ ಸಹ ಅನೇಕ ಯೋಜನೆಗಳನ್ನು ತಯಾರು ಮಾಡಿದ್ದಾರೆ. ನಾವು ಹೇಳುವ ರೀತಿಯಲ್ಲಿ ಯೋಜನೆ ತಯಾರು ಮಾಡುವುದು ಒಂದು ಸ್ಟೇಟ್‌ನ ಅವಶ್ಯಕತೆ ಪ್ರತಿಯೊಂದು ಅಂಗಾಂಗದಲ್ಲೂ ಏನಿದೆ ಅದನ್ನು ತಿಳಿದುಕೊಳ್ಳದೆ ಪ್ಲಾನನ್ನು ರಚನೆ ಮಾಡಿದ್ದೀರಲ್ಲಾ ಇದರಲ್ಲಿ ಏನಾದರೂ ತಿರುಳು ಇದೆಯೇ ? ಇದು ಒಂದನೆಯದು 4ನೇ ಪಂಚ

(ಶ್ರೀ ಎಲ್. ಶ್ರೀಕಂಠಯ್ಯ)

ವಾರ್ಷಿಕ ಯೋಜನೆ ಏನಿದೆ ಅದು ಡ್ರಾಫ್ಟ್ ಪ್ಲಾನು ಅದಕ್ಕೆ ಕೇಂದ್ರದವರ ಅನುಮತಿ ಇಲ್ಲ ಎಂದು ಹೇಳಿದಿರಿ. ಏಕವರ್ಷದ ಒಂದು ಡ್ರಾಫ್ಟ್ ಪ್ಲಾನ್ ಆದರೂ ಕೂಡ ಡಿಸ್ಟ್ರಿಕ್ಟ್ ಮಂಡಲಿಗಳ ವರಿಗೆ ನಿಮ್ಮ ರಿಕ್ವೈರ್‌ಮೆಂಟ್ ಎಷ್ಟೋ ಅಷ್ಟಕ್ಕೆ ಮಾತ್ರ ಪ್ಲಾನ್ ಮಾಡಿರಿ ಅಂತ ಇನ್‌ಸ್ಟ್ರಕ್ಷನ್ ಕೊಟ್ಟಿದ್ದೀರಾ?

ಶ್ರೀ ರಾಮಕೃಷ್ಣ ಹೆಗಡೆ.—ಜಿಲ್ಲಾಭಿವೃದ್ಧಿಮಂಡಳಿಗಳು ತಮ್ಮ ಅಗತ್ಯಕ್ಕೆ ತಕ್ಕಂತೆ ಒಂದು ವಾರ್ಷಿಕ ಯೋಜನೆಯನ್ನು ತಯಾರು ಮಾಡಿ ಕಳುಹಿಸಬೇಕೆಂದು ಸರ್ಕಾರದವರೇನೂ ಅವುಗಳಿಗೆ ತಿಳುವಳಿಕೆ ಕೊಟ್ಟಿರಲಿಲ್ಲ. ಆದಾಗ್ಯೂ ಅವು ತಮ್ಮ ಒಂದು ವಾರ್ಷಿಕ ಯೋಜನೆಯನ್ನು ತಯಾರಿಸಿ ಕಳುಹಿಸಿವೆ. ಆದರೆ ಅದಕ್ಕೆ ಹಿಂದೆ ಅಂಥ ಒಂದು ಯೋಜನೆಯನ್ನು ರೂಪಿಸಿ ಕಳುಹಿಸಲು ಒಂದು ಸೂಚನೆಯನ್ನು ಕೊಡಲಾಗಿತ್ತು. ಆದರೆ ಅವರ ಯೋಜನೆಗಳಿಗೆ ನಾವು ಅವು ಇಂತಿಷ್ಟೇ ವೆಚ್ಚದಲ್ಲಿರಬೇಕು ಎಂಬ ಮಿತಿಯನ್ನೂ ಕೂಡ ಹಾಕಿರಲಿಲ್ಲ. ಆದರೆ ಇಲ್ಲಿಯವರೆಗೂ ನಾವು ಹಾಕಿಕೊಂಡು ನಡೆಸುತ್ತಾ ಬಂದಿರತಕ್ಕ ಈ ಯೋಜನೆಗಳೇನಿವೆ ಅವುಗಳಿಂದ ಕಳೆದ ಮೂರು ಪಂಚವಾರ್ಷಿಕ ಯೋಜನೆಗಳಲ್ಲಿ ನಾವು ಹಾಕಿಕೊಂಡಿದ್ದ ಗುರಿಯೇನು—ಅದರಲ್ಲಿ ನಾವು ಸಾಧಿಸಿರತಕ್ಕದು ಎಷ್ಟು ಅಂದರೆ ಯಾವ ಯಾವ ರಂಗದಲ್ಲಿ ವ್ಯವಸಾಯ, ಔದ್ಯೋಗಿಕ, ಶಿಕ್ಷಣ ಮತ್ತು ಸಾಂಸ್ಕೃತಿಕ ಈ ಬಾಬುಗಳಲ್ಲಿ ಎಷ್ಟರಮಟ್ಟಿಗೆ ಕಳೆದ 5 ವರ್ಷಗಳಲ್ಲಿ ಒಂದು ವ್ಯವಹಾರದೃಷ್ಟಿಯಿಂದ ಅಭಿವೃದ್ಧಿಯನ್ನು ಸಾಧಿಸಿದ್ದೇವೆ ಅವುಗಳನ್ನು ಪೂರ್ತಿಯಾಗಿ ಕಾರ್ಯಗತಮಾಡಬೇಕಾಗಿದ್ದರೆ ಅದಕ್ಕೆ ಎಷ್ಟು ಹಣ ಬೇಕಾಗುತ್ತದೆ, ಆ ಸಂಪನ್ಮೂಲವನ್ನು ಹೇಗೆ ಒದಗಿಸಿಕೊಳ್ಳಬೇಕು ಎಂಬುದನ್ನೆಲ್ಲಾ ಸ್ಟೇಟ್ ಪ್ಲಾನಿಂಗ್ ಬಾಡಿಯಲ್ಲಿ ಚರ್ಚೆಮಾಡಿ ಇದಕ್ಕೆ ಎಷ್ಟೇ ಕಡೆಮೆ ಎಂದರೂ 440 ಕೋಟಿ ರೂಪಾಯಿಗಳು ಬೇಕಾಗಬಹುದೆಂದು ಅಂದಾಜುಮಾಡಿ ನಾವೀಗ ಇದನ್ನು ಆ ಕೇಂದ್ರದ ಪ್ಲಾನಿಂಗ್ ಕಮಿಷನ್ನಿಗೆ ಕಳುಹಿಸಿದ್ದೇವೆ. ನಮಗೆ ಇಷ್ಟಾದರೂ ನಾಲ್ಕನೇ ಪಂಚವಾರ್ಷಿಕ ಯೋಜನೆಗೆ ಬೇಕೇಬೇಕೆಂದು ತಿಳಿಸಿದ್ದೇವೆ.

ಶ್ರೀ ಕೆ. ಎಚ್. ರಂಗನಾಥ್.—ಇನ್ನು ಮುಂದಕ್ಕಾದರೂ ಸರ್ಕಾರದವರು ಕೈಗೊಳ್ಳತಕ್ಕ ಯೋಜನೆಗಳನ್ನು ಒಂದು ಕ್ಲುಪ್ತಕಾಲದಲ್ಲೇ ಒಂದಾವರ್ತಿ ಕ್ಲುಪ್ತಮಾಡಿದ ವೆಚ್ಚದಲ್ಲಿಗೆನಲ್ಲೇ ಮುಗಿಸಬೇಕೆಂದು ಅದನ್ನು ಮತ್ತೆ ಪುನರ್ವಿಮರ್ಶೆ ಮಾಡುವುದಕ್ಕೆ ಅವಕಾಶಕೊಡದಂತೆ ಕೆಲಸ ನಡೆಸುವಂತೆ ಸಂಬಂಧಪಟ್ಟವರಿಗೆ ಸೂಚನೆ ಕೊಡುವುದಕ್ಕೆ ಸಾಧ್ಯವೇ?

ಶ್ರೀ ರಾಮಕೃಷ್ಣ ಹೆಗಡೆ.—ನಮ್ಮಲ್ಲಿ ಆ ಬಾಬುಗಳಿಗೆ ಸಂಪೂರ್ಣ ಹಣವಿದ್ದರೆ ಹಾಗೆ ಮಾಡಬಹುದು. ಇಲ್ಲಿಗೆ ಮೂರು ವರ್ಷಗಳ ಹಿಂದೆ ಕೈಗೊಳ್ಳಲಾಗಿದ್ದ ಸಣ್ಣ ಸಣ್ಣ ನೀರಾವರಿ ಬಾಬುಗಳಲ್ಲಿ ಸ್ಪಿಲ್‌ಓವರ್ ಬಾಬುಗಳಿಗಾಗೇ 12 ಕೋಟಿ ರೂಪಾಯಿಗಳನ್ನು ಖರ್ಚುಮಾಡಬೇಕಾಯಿತು. ಅದಕ್ಕಾಗಿ ನಾನೂ ಮತ್ತು ಮುಖ್ಯಮಂತ್ರಿಗಳೂ ಇಬ್ಬರೂ ಎಲ್ಲಾ ಜಿಲ್ಲೆಗಳನ್ನೂ ಸುತ್ತಿಕೊಂಡು ಬಂದು ಆ ಉಳಿದಿದ್ದ ಕೆಲಸಗಳನ್ನು ಇಂತಿಷ್ಟೇ ದಿನಗಳಲ್ಲಿ ಮುಗಿಸಬೇಕೆಂದು ಒಂದು ಕಡ್ಡಾಯವನ್ನು ಹಾಕಿ ಬಂದಿದ್ದೆವು. ಕಾರಣ ಅವೆಲ್ಲಾ ಚಿಕ್ಕಪುಟ್ಟ ಯೋಜನೆಗಳು. ಅವುಗಳಿಗೆ ಅಗತಕ್ಕ ಹಣವೂ ನಮ್ಮಲ್ಲಿತ್ತು. ಆದರೆ ದೊಡ್ಡ ದೊಡ್ಡ ಯೋಜನೆಗಳ ಬಗ್ಗೆ ಅದರಲ್ಲೂ ಕೃಷ್ಣ ಮಲಪ್ರಭಾ—ಘಟಪ್ರಭಾ ಇಂಥಾ ದೊಡ್ಡ ಯೋಜನೆಗಳಲ್ಲಿ ಹಾಗೆ ನಿಗದಿಮಾಡುವುದಕ್ಕಾಗುವುದಿಲ್ಲ.

ಶ್ರೀ ಕೆ. ಎಚ್. ಶ್ರೀನಿವಾಸ್.—ಜಿಲ್ಲಾ ಅಭಿವೃದ್ಧಿಮಂಡಳಿಯವರು ಸೂಚನೆಮಾಡಿದ್ದ ಯೋಜನೆಗಳಲ್ಲಿ ಕೇವಲ ಅವರ ಅಗತ್ಯವಷ್ಟನ್ನೇ ಸೂಚನೆ ಮಾಡಿದ್ದವೋ ಅಥವಾ ಅದಕ್ಕೆ ಅಗತ್ಯವಾದ ಸಂಪನ್ಮೂಲಗಳನ್ನೂ ಸೂಚನೆ ಮಾಡಿದ್ದವೋ?

ಶ್ರೀ ರಾಮಕೃಷ್ಣ ಹೆಗಡೆ.—ಸಂಪನ್ಮೂಲಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಯೋಜನೆಗಳನ್ನು ಸೂಚನೆ ಮಾಡಬೇಕೆಂದು ಸರ್ಕಾರದವರು ತಿಳಿಸಿದ್ದಾರೆ. ಅವರು ಸೂಚನೆ ಮಾಡಿರಲಿಲ್ಲ.

* * * * *

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸಂಪನ್ಮೂಲಗಳನ್ನು ನೋಡಿ ಅಲ್ಲಲ್ಲಿ ಯೋಜನೆಗಳನ್ನು ಮಾಡಿ ಅವನ್ನು ಕಾರ್ಯಗತ ಮಾಡುವ ರೀತಿಯಲ್ಲಿ ನಿಮ್ಮ ನಾಲ್ಕನೆಯ ಪಂಚವಾರ್ಷಿಕ ಯೋಜನೆಯನ್ನು ಬದಲಾಯಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ?

* * * Matter expunged as ordered by the Chair.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಸದಸ್ಯರು ಹೇಳಿದಂಥ ಮಾತು ಅವರ ಅಭಿಪ್ರಾಯದ ವಿಚಾರ. ಅಂತಹ ಅಭಿಪ್ರಾಯಕ್ಕೆ ಬರಲು ಅವರಿಗೆ ಸ್ವಾತಂತ್ರ್ಯ ಉಂಟು. ಮಾನ್ಯ ಸದಸ್ಯರು ನಾನು ಹೇಳಿದಂಥ ಉತ್ತರ ಕೇಳಲಿಲ್ಲವೆಂದು ಹೇಳಿದರೆ ಅದು ಸತ್ಯಕ್ಕೆ ದೂರವಾದ ವಿಚಾರ. ಕಳೆದ ಮೂರು ಪಂಚವಾರ್ಷಿಕ ಯೋಜನೆಗಳಲ್ಲಿ ಗ್ರಾಮೀಣ ಅಭಿವೃದ್ಧಿ, ಅದರಲ್ಲಿಯೂ ಅರ್ಥಿಕಾಭಿವೃದ್ಧಿ ಸಾಕಷ್ಟು ಆಗಿದೆ. ಇನ್ನೂ ಹೆಚ್ಚು ಆಗಬೇಕಾದುದು ಬಾಕಿ ಇದೆ. ಡೆಲ್ಲಿಯಲ್ಲಿ ಕೂತು ಒಂದು ಯೋಜನೆಯನ್ನು ಸಿದ್ಧಮಾಡುತ್ತೇವೆ, ಅವರು ಸ್ಥಾನಿಕ ಸಂಸ್ಥೆಗಳ ಅರಿವು, ಜ್ಞಾನ ಇಲ್ಲದೆ ಮಾಡುತ್ತಾರೆ ಎಂಬುದಾಗಿ ಅವರು ತಿಳಿಯುವುದು ಸರಿಯಲ್ಲ. ಹಳ್ಳಿಯಿಂದ ಬಂದಂಥ ಪ್ರತಿನಿಧಿಗಳು ಸೇರಿ ರಾಜ್ಯಮಟ್ಟದಲ್ಲಿ ಚರ್ಚೆಮಾಡಿ ಯೋಜನೆಗೆ ಒಂದು ರೂಪ ಕೊಟ್ಟು ಕೊನೆಯಲ್ಲಿ ದೆಹಲಿಯಲ್ಲಿ ಸಿದ್ಧವಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ಉತ್ತರದಲ್ಲಿ ನಾಲ್ಕನೆಯ ಪಂಚವಾರ್ಷಿಕ ಯೋಜನೆ ಒಂದು ಡ್ರಾಫ್ಟ್ ಔಟ್‌ಲೇಯನ್ನು ಕೊಟ್ಟಿದೆ ಎಂದು ಹೇಳಿದೆ. ವಾಸ್ತವಿಕವಾಗಿ ಒಂದು ವರ್ಷದ ಯೋಜನೆಯನ್ನು ಕಾರ್ಯಗತಮಾಡುವುದಕ್ಕೆ ಹೊರಟಿದ್ದೀರಿ. ಇದರಿಂದ ನಾಲ್ಕನೆಯ ಪಂಚವಾರ್ಷಿಕ ಯೋಜನೆಯನ್ನೇ ಕೈಬಿಡುವಂತೆ ಆಗುವುದಿಲ್ಲವೇ? ಇದರಿಂದ ಯಾವ ಯೋಜನೆಯನ್ನು ಸಮರ್ಪಕವಾಗಿ ನಡೆಯಿಸುವುದಕ್ಕಾಗುವುದಿಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆಯೇ? ಇದು ಸರ್ಕಾರದ ದಿವಾಳಿಕೋರತನ ತೋರಿಸುವುದಿಲ್ಲವೇ?

ಶ್ರೀ ರಾಮಕೃಷ್ಣ ಹೆಗಡೆ.—4ನೇ ಪಂಚವಾರ್ಷಿಕ ಯೋಜನೆಯನ್ನು ಕೈಬಿಡುವ ಪ್ರಶ್ನೆ ಇಲ್ಲವೇ ಇಲ್ಲ. ನಾಲ್ಕನೆಯ ಪಂಚವಾರ್ಷಿಕ ಯೋಜನೆ ಮೂರು ವರ್ಷಗಳ ಹಿಂದೆಯೇ ಸಿದ್ಧವಾಗಿತ್ತು. ನಾವೂ ಕೂಡ ನಮ್ಮ ರಾಜ್ಯದ 4ನೇ ಪಂಚವಾರ್ಷಿಕ ಯೋಜನೆಯನ್ನು ಸಿದ್ಧಮಾಡಿ ಕಳುಹಿಸಿದೆವು. ಆಗ ನಮ್ಮ ದೇಶದಲ್ಲಿ ಆರ್ಥಿಕ ಮುಗ್ಗಟ್ಟು ಬೇರೆಬೇರೆ ಕಾರಣಗಳಿಂದ ಉಂಟಾಗಿ 4ನೇ ಪಂಚವಾರ್ಷಿಕ ಯೋಜನೆಯನ್ನು ಮುಂದೆ ಹಾಕಿದರು. ಇದನ್ನು ಕೈಬಿಡುವ ಪ್ರಶ್ನೆ ಇಲ್ಲ. ವಾರ್ಷಿಕ ಯೋಜನೆ ಮಾಡಿದ್ದರಿಂದ ನಾಲ್ಕನೆಯ ಪಂಚವಾರ್ಷಿಕ ಯೋಜನೆಗೆ ಧಕ್ಕೆ ಬರುತ್ತದೆಂದು ಮಾನ್ಯ ಸದಸ್ಯರ ಅಭಿಪ್ರಾಯವಾಗಿದ್ದರೆ ಅದು ಸರಿಯಲ್ಲ. 4ನೇ ಪಂಚವಾರ್ಷಿಕ ಯೋಜನೆ ಬರುವ ಏಪ್ರಿಲ್ ಒಂದನೇ ತಾರೀಖಿನಿಂದ ಶುರುವಾಗುತ್ತದೆ.

MR. SPEAKER.—Sri M. Mallappa may put Sri K. H. Patil's Question.

Dharwar District Co-operative Oil Seeds Processing Society Ltd., Gadag.

494. SRI M. MALLAPPA (Birur) [On behalf of SRI K. H. PATIL (Gadag)].—

Will the Minister for Development be pleased to state :—

(*a*) the total cost of the cotton seed oil extraction plant envisaged by the Dharwar District Co-operative Oil Seeds Processing Society Ltd., Gadag before the Government took control under section 54 of the Mysore Co-operative Societies Act, 1969 and the share capital of the Society at the time of taking over except Government share ;

(*b*) when was the loan of Industrial Finance Corporation sanctioned and its amount ;

(*c*) the total shares, loan and other types of assistance given to the said society after the control of the society was taken over under section 54 of the Mysore Co-operative Societies Act, 1959 ;

(*d*) the Chairman and Director of the Society and the salary and allowance if any, inclusive of all emoluments ;

(SRI M. MALLAPPA)

(e) whether the Managing Director is a retired Government servant and if so, his special qualification to get him reappointment ;

(f) whether any guarantee given by Government to this society has been revoked, and if so, whether the Government has stopped giving further aid to this society ;

(g) whether there has been any rule of equity followed in this society in sanctioning loans, shares, etc.

(h) whether there was election of Directors last year and if not, whether the Registrar took any action against the management ;

(i) whether General body of the society passed a resolution to convert the entire society into a public sector undertaking and if so, the steps taken by them to implement the same ;

(j) the share capital of the society excepting Government share contribution as at present and the ratio of the matching grant given ?

Sri P. M. NADGOUDA (Minister for Development).—

(a) Rs. 55·41 lakhs.
Share capital Rs. 4·50 lakhs.

(b) Dated 18-3-1962
Rs. 22·50 lakhs.

(c) Rs. 35,94,975.

(d) List appended.
Rs. 843 P.M. to Chairman and Managing Director.

(e) Yes. Administrative and Managerial experience in Industrials concern.

(f) No.

(g) No.

(h) No.

(i) Yes. Resolution is being examined.

(j) 1 : 5
Share Capital Rs. 4.73 lakhs.

List showing the Board of Directors of the Dharwar District Co-operative Oil-Seeds Processing Society Ltd., Gadag.

1 Sri S. M. Wali, Chairman and Managing Director.
2 Sri B. G. Patil of Harti, Vice Chairman. (Elected)
3 The Joint Registrar of Co-operative Societies, Belgaum,
4 The Deputy Registrar, Co-operative Societies, Dharwar,
5 The Deputy Director of Agriculture, Dharwar.

6 The Assistant Director of Industries and Commerce, Dharwar.
7 The Executive Engineer (B & R) (P.W.D.), Dharwar.
8 The Block Development Officer, Gadag.
9 The Assistant Commissioner, Gadag Division, Gadag.
10 Shri K. M. Kanavi of Gadag. (Elected)
11 Shri A. S. Manvi of Gadag. (Elected)
12 Shri M. V. Mulimani of Binkadakatti. (Elected)

Sri M. MALLAPPA.—What is the authorised share capital according to the bye-law of this Society ?

Sri P. M. NADGOUDA.—About Rs. 9 lakhs.

Sri M. MALLAPPA.—How many officials and non-officials are in the Managing Committee ?

Sri P. M. NADGOUDA.—In all, there are 12 Directors. Of them, 4 Directors are elected by the shareholders and the remaining are Government Officers.

ಶ್ರೀ ಜಿ. ದುಗ್ಗಪ್ಪ.—ಜನರಲ್ ಬಾಡಿ ಮೀಟಿಂಗಿನಲ್ಲಿ ಈಗಿರತಕ್ಕ ವ್ಯವಹಾರಿಕ ಮಂಡಲಿಯನ್ನು ಮುಂದುವರಿಸಕೂಡದೆಂದೂ, ಮುಂದುವರಿಸಿದರೆ ಹಾನಿಯಾಗುತ್ತದೆ ಎಂದು ಸರ್ಕಾರಕ್ಕೆ ಸೂಚನೆ ಕೊಟ್ಟಿದ್ದಾರೆಯೇ ?

ಶ್ರೀ ಪಿ. ಎಂ. ನಾಡಗೌಡ.—ಸೂಚನೆ ಕೊಟ್ಟಿದ್ದಾರೆ.

ಶ್ರೀ ಜಿ. ದುಗ್ಗಪ್ಪ.—ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಆ ಸಂಘಕ್ಕೆ ಹಣ ಕೊಡಕೂಡದೆಂದು ಸೂಚಿಸಿದರೂ, ಅದಕ್ಕೆ ವಿರುದ್ಧವಾಗಿ ಸರ್ಕಾರದವರು ಹಣ ಕೊಟ್ಟಿದ್ದಾರೆಯೇ ?

ಶ್ರೀ ಪಿ. ಎಂ. ನಾಡಗೌಡ.—ಆ ಮಾಹಿತಿ ಇವತ್ತಿನ ದಿವಸ ಇಲ್ಲಿ ಇಲ್ಲ.

ಶ್ರೀ ಕೆ. ಎಚ್. ರಂಗನಾಥ್.—(ಉ) ಪ್ರಶ್ನೆಗೆ ಉತ್ತರವಾಗಿ "ಹೌದು, ಕೈಗಾರಿಕ ಸಂಸ್ಥೆಯಲ್ಲಿನ ಆಡಳಿತಾತ್ಮಕ ಹಾಗೂ ನಿರ್ವಾಹಕ ಅನುಭವ ಇದೆ," ಎಂದು ಹೇಳಿದ್ದೀರಿ. ಇವರು ಪೆನ್‌ಶನ್ ಜೊತೆಗೆ 843 ರೂಪಾಯಿ ತೆಗೆದುಕೊಳ್ಳುತ್ತಾರೋ, ಹೇಗೆ ? ಮತ್ತು ಇವರು ಯಾವ್ಯಾವ ಕೈಗಾರಿಕೆಗಳಲ್ಲಿ ಕೆಲಸ ಮಾಡಿದ್ದಾರೆ, ಏನು ಅನುಭವ ಇದೆ ?

ಶ್ರೀ ಪಿ. ಎಂ. ನಾಡಗೌಡ.—ಇವರು ರಿಟೈರ್ಡ್ ಐ. ಎ. ಎಸ್. ಆಫೀಸರ್. ಅವರು ಕಿಂಗ್‌ಪಿನ್ ಆಫ್ ದಿ ಅಡ್ಮಿನಿಸ್ಟ್ರೇನ್. ಇವತ್ತು ಬೇರೆ ಬೇರೆ ಆಡಳಿತದೊಳಗೆ, ಇವರು ಇದ್ದಾರೆ. ಸಂಕೇಶ್ವರ ಕಾರ್ಖಾನೆಯೊಳಗೂ ಮ್ಯಾನೇಜಿಂಗ್ ಡೈರೆಕ್ಟರ್ ಆಗಿ ಇದ್ದರು. ಆ ಅನುಭವ ಎಲ್ಲಾ ನೋಡಿಕೊಂಡು ನೇಮಿಸಿದ್ದೇವೆ.

ಶ್ರೀ ಕೆ. ಎಚ್. ರಂಗನಾಥ್.—ಇದರೊಳಗೆ ಪೆನ್‌ಶನ್ ಕೂಡ ಸೇರಿದೆಯೋ ಇಲ್ಲವೋ ?

ಅಧ್ಯಕ್ಷರು.—ಅವರಿಗೆ ಪೆನ್‌ಶನ್ ಸಹಿತ ಕೊಡುತ್ತೀರಾ ಎಂದು ಕೇಳುತ್ತಾರೆ.

ಶ್ರೀ ಪಿ. ಎಂ. ನಾಡಗೌಡ.—ಅದರ ಮಾಹಿತಿ ಇಲ್ಲ.

Sri H. N. NANJE GOWDA.—Sir, I may be permitted to raise a question of privilege against the Hon'ble Minister.

Mr. SPEAKER.—That can be done after the Question Hour.

Dharmasthala Temple

503. Sri M. NAGAPPA (Raichur).—

Will the Minister for Law, Labour and Parliamentary Affairs be pleased to state :—

(*a*) whether the Government of Mysore has filed any case regarding the 'Dharmasthala Temple' in South Kanara District ;

(*b*) if so, the decisions of the Court ;

(*c*) whether the Government of Mysore propose to bring any suitable enactment or amendment so as to treat the said 'Dharmasthala Temple' as a public temple ;

(*d*) if so, when ?

Sri K. PUTTASWAMY (Minister for Law, Labour and Parliamentary affairs).—

(*a*) and (*b*) The State of Mysore had filed an appeal RA. 165/57 before the High Court of Mysore against the orders of the District Judge, South Kanara dated 9th November 1956 on his file holding that the provisions of the Hindu Religious Endowments Act, 1926 (Madras Act II of 1927) are not applicable to the Temple of Sri Manjunatha Devaru at Dharmasthala. The said appeal filed by the State was dismissed with costs. The High Court also held that the said Act did not apply to the Temple of Sri Manjunatha Dharmasthala. The State Government have filed an application for leave to appeal to Supreme Court of India and the said application is pending disposal before the High Court of Mysore.

(*c*) and (*d*) There is no such proposal under consideration.

ಶ್ರೀ ಎಂ. ನಾಗಪ್ಪ.—ಇದರ ಬಗ್ಗೆ ಎರಡೂ ಕೋರ್ಟಿನ ತೀರ್ಪು ಬಂದನಂತರ ತಾವು ಸೂಕ್ತವಾದಂತಹ ಒಂದು ಕಾಯಿದೆ ತರುವುದು ಸೂಕ್ತವಲ್ಲವೇ, ಹಾಗೆ ಈ ಸಭೆ ಮುಗಿಯುವಷ್ಟರಲ್ಲೇ ಒಂದು ಸೂಚನೆಯನ್ನು ತರಬಹುದೇ ?

ಶ್ರೀ ಕೆ. ಪುಟ್ಟಸ್ವಾಮಿ.—ಆ ವಿಚಾರ ಪರಿಶೀಲನೆ ಮಾಡುತ್ತಿದ್ದೇವೆ.

ಶ್ರೀ ಎಂ. ನಾಗಪ್ಪ.—ಆ ದೇವಸ್ಥಾನದ ಒಂದು ವರ್ಷದ ಆದಾಯವೆಷ್ಟು ?

ಶ್ರೀ ಕೆ. ಪುಟ್ಟಸ್ವಾಮಿ.—ಅದಕ್ಕೆ ನೋಟೀಸ್ ಬೇಕು.

ಶ್ರೀ ಬಿ. ಪಿ. ಗಂಗಾಧರ್.—ಆ ಸಂಸ್ಥೆ ಸರ್ವ ವ್ಯಾಪ್ತಿಯಾಗಿದೆ. ಇಡೀ ಮೈಸೂರು ದೇಶದಿಂದ ಮತ್ತು ಆಂಧ್ರ ಪ್ರದೇಶದಿಂದ ಭಕ್ತಾದಿಗಳು ಅಲ್ಲಿಗೆ ಹೋಗುತ್ತಿದ್ದಾರೆ. ಒಂದೊಂದು ದಿವಸಕ್ಕೆ ಸುಮಾರು 30–40 ಸಾವಿರ ರೂಪಾಯಿ ಮನಿಆರ್ಡರ್ ಹೋಗುತ್ತಿದೆ. ಅದರಿಂದ ಸಾರ್ವಜನಿಕ ಹಣ ಬಹಳ ಕಲೆಕ್ಟ್ ಆಗುತ್ತಿದೆ. ಸರ್ಕಾರದವರು ಇವತ್ತು ಇದಕ್ಕೆ ಮನಸ್ಸು ಮಾಡಿದರೆ ವೆಂಕಟೇಶ್ವರ ಯೂನಿವರ್ಸಿಟಿ ಏನು ಮಾಡಿದ್ದಾರೆ, ಅದೇ ರೀತಿಯಲ್ಲಿ ಒಂದು ದೊಡ್ಡ ಯೂನಿವರ್ಸಿಟಿಯನ್ನು ಈ ದೇವಸ್ಥಾನದ ಹಣದಲ್ಲಿ ಮಾಡಬಹುದು. ಅದ್ದರಿಂದ ವಿದ್ಯಾರ್ಥಿಗಳಿಗೂ ಎಲ್ಲೂ ಜಾಗ ಸಿಗದವರಿಗೆ ಅವಕಾಶ ಸಿಕ್ಕಿದ ಹಾಗೆ ಆಗುತ್ತದೆ. ಆದ್ದರಿಂದ ಅದಕ್ಕೆ ಒಂದು ಕಾನೂನನ್ನು ಮಾಡಿ ಒಂದು ಯೂನಿವರ್ಸಿಟಿ ಆಕ್ಟ್ ಮಾಡಿ, ಸಾರ್ವಜನಿಕರಿಗೋಸ್ಕರ ಇದನ್ನು ಏಕೆ ಉಪಯೋಗ ಮಾಡಿಕೊಳ್ಳಬಾರದು ?

Sri K. PUTTASWAMY.—That is the very point that the Government has been disputing.

ಶ್ರೀ ಕೆ. ಎಚ್. ರಂಗನಾಥ್.—"ಸಿ" ಮತ್ತು "ಡಿ" ಗೆ ಉತ್ತರವಾಗಿ, ಅಂಥ ಸಲಹೆ ಯಾವುದೂ ಪರಿಶೀಲನೆಯಲ್ಲಿರುವುದಿಲ್ಲವೆಂದು ಹೇಳಿದ್ದೀರಿ. ಕೋರ್ಟಿನಲ್ಲಿ Hindu Religious and Charitable Endowments ಆಕ್ಟ್ ಪ್ರಕಾರ ಅದಕ್ಕೆ ಅಪ್ಲೈ ಆಗುವುದಿಲ್ಲವೆಂದು ತೀರ್ಮಾನ ಮಾಡಿದ್ದಾರೆ. ಹಾಗೆ ತೀರ್ಮಾನ ಕೊಟ್ಟಿರುವುದರಿಂದ ತಾವು ಸುಪ್ರೀಂ ಕೋರ್ಟಿಗೆ ಹೋಗಬೇಕೆಂಬ ಅಭಿಪ್ರಾಯ ಇರುವುದರಿಂದ, ಆ Hindu Religions and Charitable Endowments ಆಕ್ಟನ್ನು ಅಮೆಂಡ್‌ಮೆಂಟ್ ಮಾಡತಕ್ಕ ಅವಶ್ಯಕತೆ ಸರ್ಕಾರಕ್ಕೆ ಬಂದಿಲ್ಲವೇ ?

Sri K. PUTTASWAMY.—I have already replied to that question. Now according to the judgment of the High Court, the Madras Hindu Religious and Charitable Endowments Act is not applicable. That means, it is to be considered as a private property. The Government has been seriously considering the method by which this can be brought under the purview of the Hindu Religious and Charitable Endowments Act.

ಶ್ರೀ ಕೆ. ಎಂ. ತಮ್ಮಯ್ಯ.—ಸ್ವಾಮಿ, ಈ ದೇವಸ್ಥಾನಕ್ಕೆ ಬರುವ ಹಣದಿಂದ ಅಲ್ಲಿ ಒಂದು ಕಾಲೇಜನ್ನು ಓಪನ್ ಮಾಡಬೇಕು ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

Sri K. PUTTASWAMY.—This temple is also incurring certain expenditure on charitable institutions.

ಶ್ರೀ ಎಂ. ನಾಗಪ್ಪ.—ಈಗ ಈ ಸಂಸ್ಥೆಯು ಒಂದು ಚಾರಿಟಬಲ್ ಇನ್‌ಸ್ಟಿಟ್ಯೂಷನ್ನಿಗೆ ಹಣವನ್ನು ಖರ್ಚು ಮಾಡುತ್ತಿದ್ದಾರೆ ಎಂದು ತಾವು ಹೇಳಿದಿರಿ, ಈಗ ಆ ಸಂಸ್ಥೆಗೆ ಬರತಕ್ಕಂಥ ಹಣವನ್ನೂ, ಖರ್ಚು ಮಾಡತಕ್ಕಂಥ ಹಣವನ್ನೂ ನೋಡಿದರೆ ಆ ಸಂಸ್ಥೆಗೆ ಎಷ್ಟು ದುಡ್ಡು ಬರುತ್ತದೆಯೋ ಅಷ್ಟು ದುಡ್ಡು ಸರಿಯಾಗಿ ಜನತೆಗೆ ಉಪಯೋಗವಾಗುತ್ತಿಲ್ಲ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ? ಅದು ಬಾರದಿದ್ದರೆ ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೀರಾ ?

Sri K. PUTTASWAMY.—By the judgment of the High Court we are not able to get into the entire aspect of the administration of this temple. Unless we get the legal authority, we would not be able to get all this information and supply it to this Hon'ble House.

Sri D. B. KALMANKAR.—Is it a fact that people of different religions and castes go to this temple every day ?

Sri K. PUTTASWAMY.—It has been held that the devotees do not exclusively belong to any one religion.

ಶ್ರೀ ಕೆ. ಎನ್. ವೀರಪ್ಪಗೌಡ.—ಈಗ ತಾವು ಪ್ರಸ್ತಾಪ ಮಾಡುತ್ತಾ ಇರತಕ್ಕ ಧರ್ಮಸ್ಥಳ ದೇವಸ್ಥಾನ ಏನಿದೆ ಇದು ಖಾಸಗೀ ಸಂಸ್ಥೆ. ಈಗ ತಾವು ಈ ಸಂಬಂಧದಲ್ಲಿ ತರಬೇಕೆಂದಿರತಕ್ಕ ಕಾನೂನು ಏನಿದೆ ಅದು ನಮ್ಮ ಸಂಸ್ಥಾನದಲ್ಲಿರತಕ್ಕ ಎಲ್ಲಾ ದೇವಸ್ಥಾನಗಳಿಗೂ ಅನ್ವಯವಾಗುತ್ತದೆಯೋ ಅಥವಾ ಇದು ಒಂದಕ್ಕೆ ಮಾತ್ರ ಅನ್ವಯಿಸುತ್ತದೆಯೇ ?

Sri K. PUTTASWAMY.—I do not know whether a Bill has already been introduced to bring uniformity in the administration of religious and charitable institutions.

ಶ್ರೀಮತಿ ಕೆ. ಲೀಲಾವತಿ ರೈ.—ಈಗಾಗಲೇ ಆ ದೇವಸ್ಥಾನದ ಆಡಳಿತಗಾರರು ಅಲ್ಲಿ ಒಂದು ಕಾಲೇಜು ನಡೆಸುತ್ತಿರುವುದು ಮಾತ್ರವಲ್ಲದೆ, ಇತರ ಜನತೆಗೆ ಮತ್ತು ಧಾರ್ಮಿಕ ಕಾರ್ಯಗಳಿಗೆ ಹಣವನ್ನು ವಿನಿಯೋಗ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಪುಟ್ಟಸ್ವಾಮಿ.—ನಾನು ಈಗಾಗಲೇ ಹೇಳಿದ್ದೇನೆ, ಆ ದೇವಸ್ಥಾನದವರು ಧಾರ್ಮಿಕ ಕಾರ್ಯಗಳಿಗೋಸ್ಕರ ಹಣವನ್ನು ವಿನಿಯೋಗ ಮಾಡುತ್ತಿದ್ದಾರೆ ಎಂದು.

Remission of Land Revenue

517. Sri THIRUMALA DEVARAYA (Gangavathi).—

Will the Minister for Revenue be pleased to state :—

whether remission of land revenue is given to the lands acquired by the Government for the construction of Roads and Canals and also for the lands given by the ryots free of cost for the above purpose in Raichur District ?

Sri H. V. KOUJALGI (Minister for Ravenue).—

Yes.

Sri THIRUMALA DEVARAYA.—I know that in some cases remission is not given. So, I request the Government to issue a circular to the concerned authorities in this respect.

† Sri H. V. KOUJALGI.—Circulars are there; but in some cases a part of the land is acquired. Unless measurement is there, it will be very difficult to give fixed remission. In such cases, the party can ask or refund.

ಶ್ರೀ ಸದಾಶಿವಪ್ಪ ಪಾಟೀಲ್.—ಭೂಮಿಯನ್ನು ಅಕ್ವೈರ್ ಮಾಡುವ ಕಾಲಕ್ಕೆ ರೈತರ ಕನ್‌ಸೆಂಟ್ ತೆಗೆದುಕೊಂಡು ಅಕ್ವೈರ್ ಮಾಡಿದ್ದೀರಾ, ಮತ್ತು ಎಷ್ಟು ಎಕರೆಗಳಿಗೆ ಇದುವರೆಗೆ ರೆಮಿಷನ್ ಕೊಟ್ಟು ಕಾಂಪೆನ್‌ಸೇಷನ್ ಕೊಟ್ಟಿದ್ದೀರಾ ?

ಶ್ರೀ ಎಚ್. ವಿ. ಕೌಜಲಗಿ.—ಭೂಮಿಯನ್ನು ಅಕ್ವೈರ್ ಮಾಡುವುದಕ್ಕೆ ರೈತರ ಕನ್‌ಸೆಂಟ ಬೇಕಾಗುವುದಿಲ್ಲ. ಅವಾರ್ಡ್ ಆದನಂತರ ಕಾಂಪೆನ್‌ಸೇಷನ್ ಕೊಡುತ್ತೇವೆ.

1-30 P.M.

Central Assistance for Famine Relief Works

524. Sri M. MALLAPPA (Birur).—

Will the Minister for Revenue be pleased to state :—

(a) the amount of Central assistance received by the State for famine relief works ;

(b) the details of amount distributed and spent in each district ;

(c) whether there is any time limit fixed to complete the relief works started out of allotted funds ;

(d) the number of irrigation wells that have been started out of relief funds allotted to each district ;

(e) the works of permanent nature sanctioned for the District of Chickmagalur under relief works?

Sri H. V. KOUJALGI (Minister for Revenue).—

(*a*) Rs. 8.13 Crores as on 1st February 1969.

(*b*) The required information is furnished in the statements I, II and III appended.

(*c*) All the sanctioned works will have to be either completed or brought to a safe stage before the end of March, 1969.

(*d*) *Vide* Statement IV appended.

(*e*) The following works of a permanent nature have been sanctioned :—

1. Irrigation Wells
2. Drinking Water wells
3. Repairs to Gokattas and Tanks
4. Construction and repairs to Feeder Channels.
5. Soil Conservation (contour bunding)
6. Communications.

STATEMENT I

Allotment and Expenditure under "64 Famine Relief—Soil Conservation" (As on 31-12-1968).

Sl. No.	Name of the District	Allotment	Expenditure
1	2	3	4
		Rs.	Rs.
1	Bangalore	2,90,000	2,83,770
2	Kolar	6,10,000	4,27,580
3	Tumkur	30,50,000	29,31,260
4	Chitradurga	26,75,000	25,66,580
5	Mysore	8,00,000	7,09,973
6	Mandya	2,00,000	1,97,609
7	Chickmagalur	3,00,000	2,62,051
8	Hassan	2,00,000	2,47,313
9	Belgaum	11,00,000	10,92,955
10	Dharwar	6,56,000	5,67,380
11	Bijapur	11,00,000	10,08,225
12	Gulbarga	8,50,000	8,75,258
13	Raichur	8,00,000	8,12,091
14	Bidar	2,00,000	1,21,301
15	Bellary	3,00,000	2,34,125
	Total ...	1,31,31,000	1,23,37,471

(SRI H. V. KOUJALGI)

STATEMENT II

Allotment and Expenditure under "64 - Famine Relief" on Minor Irrigation Works of the P. W. D.

Sl. No.	Name of the District	Grant during 1968-69 under "64 Famine Relief"	Expenditure to end of 12/68 (Rs. in lakhs)
1	2	3	4
1	Bangalore ...	9.50	9.49
2	Kolar ...	10.50	15.27
3	Tumkur ...	11.00	11.43
4	Mysore ...	12.50	17.50
5	Mandya ...	8.50	19.74
6	Shimoga ...	13.00	17.50
7	Chitradurga ...	8.00	23.85
8	Hassan ...	3.50	13.32
9	Chickmagalur ...	5.50	5.69
10	Belgaum ...	13.00	21.42
11	Bijapur ...	9.00	14.51
12	Dharwar ...	10.00	12.83
13	Gulbarga ...	12.50	18.55
14	Raichur ...	10.00	10.96
15	Bidar ...	6.00	5.30
16	Bellary ...	6.50	10.78
17	Coorg ...	1.00	2.12
	Total ...	150.00	230.26

STATEMENT III

Statement showing the allotment and the expenditure under the head of account "64 Famine-b-Relief Works"—(as on 31-12-1968)

Sl. No.	Name of the District		Allotment	Expenditure
1	2		3	4
			Rs.	Rs.
1	Bangalore	...	31,55,000	22,10,980
2	Kolar	...	28,30,000	24,52,495
3	Tumkur	...	32,55,000	26,39,349
4	Chitradurga	...	32,30,000	18,47,469
5	Shimoga	...	8,65,000	3,20,006
6	Mandya	...	29,80,000	19,57,065
7	Mysore	...	22,00,000	15,07,181
8	Hassan	...	41,20,000	14,10,789
9	Chickmagalur	...	26,15,000	25,43,828
10	Coorg	...	1,35,000	1,21,885
11	Belgaum	...	26,00,000	29,24,242
12	Dharwar	...	42,81,000	54,13,530
13	Bijapur	...	28,50,000	25,55,863
14	Gulbarga	...	19,09,000	6,63,784
15	Raichur	...	26,26,000	17,65,537
16	Bidar	...	19,91,000	10,76,844
17	Bellary	...	41,96,000	10,44,721
		Total ...	4,31,68,000	3,24,55,568

(SRI H. V. KOUJALGI)

STATEMENT IV

Statement showing the number of wells sanctioned out of Relief Fund in each District.

Sl. No.	Name of the District	Number of Irrigation wells started out of Relief Fund
1	2	3
1	Belgaum	5
2	Bijapur	Nil
3	Dharwar	Nil
4	Mysore	8
5	Mandya	20
6	Hassan	99
7	Chickmagalur	25
8	Coorg	Nil
9	Gulbarga	Nil
10	Raichur	92
11	Bidar	19
12	Bellary	Nil
13	Bangalore	Nil
14	Kolar	4
15	Tumkur	Nil
16	Chitradurga	46
17	Shimoga	Nil
	Total ...	318

SRI M. MALLAPPA.—In answer to (c), it is stated that all the sanctioned works will have to be either completed or brought to a safe stage before the end of March, 1969. We were given to understand that the Government has sanctioned 100 irrigation wells for Chickmagalur District. But, according to the statement appended, only 25 irrigation wells have been sanctioned and they are under progress. About 78 ryots have applied for assistance to dig irrigation wells in Kadur Taluk. Though the records have been built up, these 78 cases are pending because the Assistant Commissioner did not sanction these wells. Is it not necessary to give extension of time to these 78 cases because it is not the fault of the ryots but it is the fault of the office?

† Sri H. V. KOUJALGI.—I may bring to the notice of the hon'ble Member that these works were taken up as relief works. The hon'ble Member is speaking about the normal works.

Sri M. MALLAPPA.– Sir, I am speaking only about the relief works.

Sri H. V. KOUJALGI.—Those works were not sanctioned. They were only proposed to be taken up.

Sri M. MALLAPPA.—In Chickmagalur, Kadur and Tarikere Taluks, we are successively experiencing drought conditions. Is it not necessary to think of having permanent measures for these taluks ?

Sri H. V. KOUJALGI.—Yes, Sir. We should have permanent measures not only for Chickmagalur District, but for the whole State.

Agriculture Engineering Institute, Raichur

528. Sri M. NAGAPPA (Raichur).—

Will the Minister for Agriculture be pleased to state :—

(*a*) whether the foundation stone for the Agriculture Engineering Institute at Raichur, was laid by the Union Minister for Agriculture and Co-operation on 22nd December 1968 ;

(*b*) if so, the expenditure incurred by the University of Agriculture Sciences and Government of Mysore for the said function ;

(*c*) whether they have contributed any amount for the said function or the entire expenditure incurred for the function was expended from the amount raised on contribution by the public of Raichur, Gulbarga, Bidar and Bellary Districts ;

(*d*) whether Government have ordered the Deputy Commissioners of the said Districts to collect the amount so spent and that the Deputy Commissioners have collected the amount from the public ;

(*e*) whether they would issue immediate orders to stop the collection of amount spent for the function ?

Sri B. RACHAIAH (Minister for Agriculture).—

(*a*) Yes.

(*b*) Rs. 10,700. The entire expenditure is met out of the funds of the University.

(*c*) No.

(*d*) No.

(*e*) Does not arise in view of reply to clause (*d*).

ಶ್ರೀ ಎಂ. ನಾಗಪ್ಪ.—ನಮ್ಮ ದೇಶ ಬಹಳ ಬಡ ದೇಶ. ಒಂದು ಟ್ಯಾಂಕ್ ಕಟ್ಟಬೇಕಾದರೆ, ಒಂದು ಬಾವಿ ತೋಡಿಸಬೇಕಾದರೆ ಹಣ ಇಲ್ಲವೆಂದು ಸರ್ಕಾರದವರು ಹೇಳುತ್ತಾರೆ. ಗೊಬ್ಬರವನ್ನು ರೈತರಿಗೆ ಕೊಡಿಸುವುದಕ್ಕೆ ಹಣ ಇಲ್ಲವೆಂದು ಹೇಳುತ್ತಾರೆ. ಇಂತಹ ಪರಿಸ್ಥಿತಿಯಲ್ಲಿ ಈ ಅಸ್ತಿಭಾರಶಿಲೆಯನ್ನು ಹಾಕಲು 10,700 ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ಇದನ್ನು ಸರ್ಕಾರದವರು ಎಷ್ಟರಮಟ್ಟಿಗೆ ಸಮಂಜಸ ಎಂದು ತಿಳಿದುಕೊಂಡಿದ್ದಾರೆ ?

ಶ್ರೀ ಬಿ. ರಾಚಯ್ಯ.—ಅಸ್ತಿಭಾರಶಿಲೆ ಹಾಕಲು ಇಷ್ಟು ಹಣ ಖರ್ಚಾಗಿಲ್ಲ. ಆ ದಿವಸ ಬೇರೆ ಬೇರೆ ಕೆಲಸಗಳು ಸಹ ನಡೆದಿವೆ. ಆ ದಿವಸ ಎಲ್ಲಾ ಕೆಲಸಗಳಿಗೂ ಆದ ಖರ್ಚನ್ನು ಸೇರಿಸಿ ಇಲ್ಲಿ ಕೊಟ್ಟಿದ್ದೇವೆ.

ಶ್ರೀ ಎಂ. ನಾಗಪ್ಪ.—ಆ ದಿವಸ ತಾವು ಸಹ ಬಂದಿದ್ದಿರಿ. ಅಲ್ಲಿಯ ಏರ್ಪಾಡುಗಳನ್ನು ನೋಡಿದರೆ, ಒಂದು ಕಾಲಕ್ಕೆ ನಿಜಾಮರು ಬಂದರೆ ಏನು ಒಂದು ವೈಭವವನ್ನು ಕಾಣಬಹುದಾಗಿತ್ತೋ, ಆ ರೀತಿ ಇತ್ತು. ಮಂತ್ರಿಗಳು ಕುಳಿತುಕೊಳ್ಳುವುದಕ್ಕೆ ಪ್ರತ್ಯೇಕವಾದ ಕುರ್ಚಿಗಳು, ಮಂತ್ರಿಗಳು ಹೋಗುವ ಜಾಗದಲ್ಲಿ ಜಮಖಾನ ಹಾಸಿದ್ದರು. ಆ ಜಮಖಾನದ ಮೇಲೆ ಬೇರೆ ಯವರು ಓಡಾಡುವಹಾಗಿಲ್ಲ. ಆ ಒಂದು ವ್ಯವಸ್ಥೆ ಇತ್ತು. ಅದು ನಿಜವೇ ?

ಶ್ರೀ ಬಿ. ರಾಚಯ್ಯ.—ಈ ವ್ಯವಸ್ಥೆಗಳನ್ನು ರಾಯಚೂರಿನ ಪೌರಸಭೆಯವರು ಮತ್ತು ರಾಯಚೂರಿನ ಪೌರರು ಸೇರಿ ಮಾಡಿದ್ದರು. ಮಾನ್ಯ ಸದಸ್ಯರು ನವಾಬರ ಏರಿಯಾದಿಂದ ಬಂದಿದ್ದಾರೆ. ಆ ರೀತಿ ಏರ್ಪಾಡು ಮಾಡುವುದು ಅಲ್ಲಿಯ ಪದ್ಧತಿ ಇರಬಹುದೆಂದು ನಾನು ತಿಳಿದಿದ್ದೇನೆ.

Sri D. B. KALMANKAR.—Will the Government place the detailed break-up of the expenditure of Rs. 10,700 before this House ?

ಶ್ರೀ ಬಿ. ರಾಚಯ್ಯ.—ಆ ಬ್ರೇಕಪ್ ನನ್ನ ಹತ್ತಿರ ಇಲ್ಲ.

ಶ್ರೀ ಸದಾಶಿವಪ್ಪಪಾಟೀಲ್.—10,700 ರೂಪಾಯಿಗಳನ್ನು ಖರ್ಚು ಮಾಡಿರಬೇಕಾದರೆ ಕೇಂದ್ರದ ಮಂತ್ರಿಗಳನ್ನು ಒಲಿಸಿಕೊಳ್ಳುವುದಕ್ಕೆ ಮತ್ತು ಅವರಿಂದ ಹಣದ ಸಹಾಯ ಪಡೆದುಕೊಳ್ಳುವುದಕ್ಕೆ ಎಂದು ನನಗನ್ನಿಸುತ್ತದೆ. ಅದು ಸರಿಯೇ ?

ಶ್ರೀ ಬಿ. ರಾಚಯ್ಯ.—ಯಾವುದಾದರೂ ಇನಾಗ್ಯುರೇಷನ್ ಮಾಡುವಾಗ ರಸ್ತೆಗಳನ್ನು ಸರಿಮಾಡಬೇಕಾಗುತ್ತದೆ. ಪೆಂಡಾಲ್ ಕಟ್ಟಿಸಬೇಕಾಗುತ್ತದೆ. ಗೆಸ್ಟ್‌ಹೌಸ್ ಸರಿ ಇರಲಿಲ್ಲ. ಅಲ್ಲಿಯ ಎರಡು ರೂಮ್‌ಗಳನ್ನು ಸರಿ ಮಾಡಿಸಿ, ಆ ರೂಮ್‌ಗಳಿಗೆ ಹಾಸಿಗೆಯ ವ್ಯವಸ್ಥೆ ಮಾಡಿಸಬೇಕಾಗಿತ್ತು. ಈ ಖರ್ಚುಗಳೆಲ್ಲಾ ಸೇರಿ ಇಷ್ಟು ಹಣ ಖರ್ಚಾಗಿದೆ.

Protected Water Supply in Pandavapura Taluk

551. Sri N. A CHANNEGOWDA (Pandavapura).—

Will the Minister for Development be pleased to state :—

(a) the number of villages that are provided with protected water supply in Pandavapura Taluk ;

(b) the number of village Panchayats from which representations for protected water supply have been received by Government ;

(c) the number of village panchayats that have remitted their share of contribution ;

(*d*) when did Chinkurli Village Panchayat remit its share of contribution ;

(*e*) the impediments in the way of supplying protected water to Chinkurli Village Panchayat ?

SRI B. L. GOWDA (Deputy Minister for Co-operation).—

(*a*) One.

(*b*) Five.

(*c*) Two Panchayats have remitted their share in full ; One Panchayat has made part-payment.

(*d*) On 4th August 1966.

(*e*) Shortage of funds.

ಶ್ರೀ ಎನ್. ಎ. ಚನ್ನೇಗೌಡ.—ಎರಡು ಪಂಚಾಯಿತಿಗಳು ಹಣ ಪೂರ್ತಿ ಕೊಟ್ಟಿವೆ ಮತ್ತು ಇನ್ನೊಂದು ಭಾಗಶಃ ಕೊಟ್ಟಿದೆ ಎಂದು ಹೇಳಿದ್ದೀರಿ. ಯಾವ ಯಾವ ಪಂಚಾಯಿತಿಗಳು ಎನ್ನುವುದನ್ನು ಹೇಳುತ್ತೀರಾ ?

ಶ್ರೀ ಬಿ. ಎಲ್. ಗೌಡ.—ಇಲಕೆರೆ ಮತ್ತು ಚಿನಕುರುಳಿ ಎರಡು ಪಂಚಾಯಿತಿಗಳು ಪೂರ್ತಿ ವಂತಿಗೆಯನ್ನು ಕೊಟ್ಟಿವೆ ಬನ್ನಂಗಾಡಿ ಎನ್ನುವುದು ಅರ್ಧ ಹಣ ಕೊಟ್ಟಿದೆ.

ಶ್ರೀ ಎನ್. ಎ. ಚನ್ನೇಗೌಡ.—ಬನ್ನಂಗಾಡಿಯವರು ಪೂರ್ತಿ ಕೊಟ್ಟಿದ್ದಾರೆ. 1966 ರಲ್ಲಿ ಚಿನಕುರುಳಿ ಪಂಚಾಯಿತಿಯವರೂ ಕೊಟ್ಟಿದ್ದಾರೆ. ಹೀಗೆ ಪೂರ್ತಿ ಹಣ ಕೊಟ್ಟಿರುವ ಕೆಲಸಗಳನ್ನು ಮಾಡದೆ, ಬೇರೆ ಕಡೆಗೆ ಏಕೆ ಮಂಜೂರು ಮಾಡಿದ್ದೀರಿ ?

ಶ್ರೀ ಬಿ. ಎಲ್. ಗೌಡ.—ಇದರಲ್ಲಿರುವುದು ಮೂರು ಪಂಚಾಯಿತಿಗಳು. ಇದರಲ್ಲಿ ಮೊದಲು ಬನ್ನಂಗಾಡಿ ಪಂಚಾಯಿತಿ ಭಾಗಶಃ ಕೊಟ್ಟಿದೆ ಎಂದು ಹೇಳಿದೆ. ಅದು ಸರಿಯಲ್ಲ. ಬನ್ನಂಗಾಡಿಯವರು ಪೂರ್ತಿ ಹಣ ಕಟ್ಟಿದ್ದಾರೆ. ಬನ್ನಂಗಾಡಿ ಹಾಗೂ ಚಿನಕುರುಳಿ ಇವೆರಡು ಪಂಚಾಯಿತಿಗಳವರೂ ಪೂರ್ತಿ ಹಣ ಕಟ್ಟಿದ್ದಾರೆ.

Complaints against the District Social Welfare Officer, Gulbarga

558. SRI J. P. SARVESH (Sedam).—

Will the Minister for Social Welfare be pleased to state :—

(*a*) the number of complaints received against the District Social Welfare Officer, Gulbarga since he joined his duty at Gulbarga ;

(*b*) the number of persons complained and the dates of complaints ;

(*c*) whether the investigation into all complaints have been made, if so by whom ;

(SRI J. P. SARVESH)

(*d*) whether the allegation was that the D.S.W.O., Gulbarga, has torn important files of the section that was investigated;

(*e*) the number of S.C. Government employees in Social Welfare Department, that were removed from service during his period?

Sri V. L. PATIL (Minister for Social Welfare).—

(*a*) Four (4).

(*b*) (1) Sri Bhomla Naik. Lamani Seva Sangh, Chitapur and Gulbarga, and Sri Kheru Naik, Lamani Seva Sangh, Shahabad and Chitapur both non-officials have complained on 17th January 1969.

(2) Sri Motiram, Accountant, Office of the D.S.W.O., Gulbarga has complained on 17th January 1969.

(3) Sri Shankara Rao, II Division Clerk, Office of the District Social Welfare Officer, Gulbarga has complained on 18th January 1969.

(*c*) The matter is under investigation by the Deputy Commissioner, Gulbarga District.

(*d*) The matter is under investigation.

(*e*) Nil.

Sri J. P. SARVESH.—May I know why only those complaints which have been made after 1968 have been shown and why complaints submitted during 1968 are not shown here?

ಶ್ರೀ ವಿ. ಎಲ್. ಪಾಟೀಲ್.—ನಾಲ್ಕು ಕಂಪ್ಲೇಂಟುಗಳು ಬಂದಿವೆ. ಮೊದಲನೇ ಕಂಪ್ಲೇಂಟು ಜನವರಿಯಲ್ಲಿ ಎಂದರೆ 17-1-1969 ರಲ್ಲಿ ಮತ್ತು 18-1-1969 ರಲ್ಲಿ ಒಂದು ದೂರು ಬಂದಿದೆ. ಇದಲ್ಲದೆ ಬೇರೆ ಯಾವ ದೂರುಗಳೂ ಬಂದಿಲ್ಲ.

Sri J. P. SARVESH.—Sir, my question is, why complaints which were made in 1968 are not shown in this list?

ಶ್ರೀ ವಿ. ಎಲ್. ಪಾಟೀಲ್.—ಆ ಕಂಪ್ಲೇಂಟು ನನ್ನ ಕಡೆಗೆ ಬಂದಿಲ್ಲ.

Sri J. P. SARVESH.—May I know whether Sri Motiram, Accountant and Sri Shankar Ram, II Division Clerk, do not belong to scheduled caste, and what is their complaint?

ಶ್ರೀ ವಿ. ಎಲ್. ಪಾಟೀಲ್.—ಮಾನ್ಯ ಸದಸ್ಯರು ಯಾರ ಮೇಲೆ ದೂರುಗಳು ಬಂದಿವೆ ಎಂದು ಹೇಳುತ್ತಾರೋ ಆ ದೂರುಗಳನ್ನು ಮಾಡಿರುವವರೂ ಷೆಡ್ಯೂಲ್ ಕ್ಯಾಸ್ಟು ಪಂಗಡಕ್ಕೆ ಸೇರಿದವರೇ ಇದ್ದಾರೆ. ಇವರಿಬ್ಬರೂ ಸೇರಿಕೊಂಡು ದೂರುಗಳನ್ನು ಕೊಟ್ಟಿದ್ದಾರೆ ಎಂದು ತೋರುತ್ತದೆ. ಇದರ ಮೇಲೆ ಬೇರಾವ ದೂರುಗಳೂ ಈಗ ಬಂದಿಲ್ಲ. ಅಲ್ಲದೇ ಒಂದೇ ದಿವಸ ಈ ಕಂಪ್ಲೇಂಟುಗಳನ್ನು ಮಾಡಿಕಳುಹಿಸಿದ್ದಾರೆ.

Sri BAPU GOWDA.—May I know whether it has come to the notice of the Government that recently this officer has been harassed with the collusion of some subordinates and unsocial elements?

ಶ್ರೀ ವಿ. ಎಲ್. ಪಾಟೀಲ್.—ಅಂತಹ ದೂರುಗಳು ಯಾವುವೂ ನನ್ನ ಕಡೆಗೆ ಬಂದಿಲ್ಲ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ಇಲ್ಲಿರುವ ಅಧಿಕಾರಿಗಳಿಗೆ ಸಂಬಂಧಪಟ್ಟ ದೂರುಗಳು ಹಿಂದೆ ಒಂದು ಸಾರಿ ಬಂದಾಗ ಅವರ ಮೇಲೆ ಯಾವ ಕ್ರಮಗಳೂ ತೆಗೆದುಕೊಳ್ಳಲಿಲ್ಲ. ಇಲ್ಲಿ ನಾಲ್ಕು ತರಹದ ದೂರುಗಳು ಬಂದಿವೆ ಎಂದು ಹೇಳುತ್ತೀರಿ. ಇವು ಯಾವ ತರಹ ದೂರುಗಳು ಎನ್ನುವ ವಿವರಗಳನ್ನು ಕೊಡುತ್ತೀರಾ ?

ಶ್ರೀ ವಿ. ಎಲ್. ಪಾಟೀಲ್.—ಅವರು ಹೇಳಿದ ಪ್ರಕಾರ ಕೆಲವರು ಸಬಾರ್ಡಿನೇಟ್ ಆಫೀಸರ್ಸ್ ಪೇಪರನ್ನು ಹರಿದು ಹಾಕಿದ್ದಾರೆ ಎಂದು ಕಂಪ್ಲೇಂಟ್ ಮಾಡಿದ್ದಾರೆ. ಅದನ್ನು ಡೆಪ್ಯೂಟಿ ಕಮೀಷನರ್ ಇನ್‌ವೆಸ್ಟಿಗೇಷನ್ ಮಾಡುತ್ತಾ ಇದ್ದಾರೆ. ಇದರಲ್ಲಿ ನ್ಯಾಯ ಯಾವುದು ಅನ್ಯಾಯ ಯಾವುದು ಎನ್ನುವುದು ಗೊತ್ತಿಲ್ಲ. ಡೆಪ್ಯೂಟಿ ಕಮಿಷನರ್‌ವರ ರಿಪೋರ್ಟ್ ಬಂದನಂತರ ಸರ್ಕಾರದವರು ತೀರ್ಮಾನ ತೆಗೆದುಕೊಳ್ಳುತ್ತಾರೆ.

Sri V. N. PATIL.—What are the nature of allegations against this particular official and whether that official is continued in the same place pending enquiry and if so, whether it would not be advisable to post him somewhere else in the interest of fair enquiry, Sir ?

ಶ್ರೀ ವಿ. ಎಲ್. ಪಾಟೀಲ್.—ಯಾವ ಆಫೀಸರ್‌ನ್ನೇ ಆಗಲಿ ಅನ್ಯಾಯ ಇಲ್ಲದೇ ಟ್ರಾನ್ಸ್‌ಫರ್ ಮಾಡುವುದು ಯೋಗ್ಯವಾದುದಲ್ಲ ಎಂದು ಸರ್ಕಾರಕ್ಕೆ ಅನಿಸುತ್ತದೆ. ಟ್ರಾನ್ಸ್‌ಫರ್ ಮಾಡುವುದು ನ್ಯಾಯ ಎಂದು ಕಂಡುಬಂದರೆ ಅದನ್ನು ಮಾಡುತ್ತೇವೆ.

Sri G. CHANDRAKANTH.—Even though there were several complaints against this official no enquiry has been conducted by the Government and the people are fed up with his work there. Has it come to the notice of the Government that people are slinging mud at him, Sir ?

ಶ್ರೀ ವಿ. ಎಲ್. ಪಾಟೀಲ್.—ಕೊನೆಯಲ್ಲಿ ಸರ್ಕಾರದವರಿಗೆ ಕಂಪ್ಲೇಂಟ್ ಬಂದಿದೆ. ಎನ್‌ಕ್ವೈರಿ ಮಾಡಲಿಕ್ಕೆ ಕಳುಹಿಸಿದೆ. ಆದುದರಿಂದ ಮಾನ್ಯ ಸದಸ್ಯರು ಏನು ಹೇಳಿದರೋ ಆ ರೀತಿ ಕೆಲವರಿಗೆ ಅನ್ಯಾಯ ಮಾಡಿದವರಿಗೆ ಪನಿಷ್‌ಮೆಂಟ್ ಕೂಡ ಆಗಿದೆ.

Music Teachers in Bangalore District

586. Sri C. R. RANGE GOWDA (Magadi).—

Will the Minister for Education be pleased to state :—

(a) number of Music teachers in each taluk of Bangalore district ;
(b) the action taken to convert the post of part-time Music Teachers to full-time ones ?

Sri N. M. KOTRABASAIAH SOGI (Deputy Minister for Education).—

(a) Please see statement "A" appended.
(b) Part-time Music Teachers' post will be converted into full-time if there is adequate work-load.

(SRI N. M. KOTRABASAIAH SOGI)

STATEMENT 'A'

Sl. No.	Name of the Taluk	No. of Music Teachers	
		Full-time	Part-time
	I. Aided High Schools		
1.	Rural Girls High School, Kanakapura	...	1
	II. Government Senior Primary Schools		
1.	Bangalore South Taluk ...	...	3
2.	Bangalore North Taluk ...	1	1
3.	Anekal Taluk ...	2	4
4.	Kanakapura Taluk ...	1	...
5.	Magadi Taluk ...	1	...
6.	Ramanagaram Taluk ...	1	1
7.	Channapatna Taluk ...	1	1
8.	Hoskote Taluk ...	1	1
9.	Devanahalli Taluk ...	1	...
10.	Doddaballapura Taluk ...	...	1
11.	Nelamangala Taluk ...	1	2
	Total ...	10	14

ಶ್ರೀ ಸಿ. ಆರ್. ರಂಗೇಗೌಡ.—ಸ್ವಾಮಿ, ಕೊಟ್ಟ ಉತ್ತರದಿಂದ ಮಾಗಡಿ ತಾಲ್ಲೂಕಿನಲ್ಲಿ ಒಬ್ಬ ಪೂರ್ಣಕಾಲದ ಸಂಗೀತ ಉಪಾಧ್ಯಾಯರು ಇದ್ದಾರೆ. ಆ ತಾಲ್ಲೂಕಿನಲ್ಲಿ 380 ಜನ ಬಾಲಕಿಯರು ಇದ್ದಾರೆ. ಅವರಿಗೆ ಪೂರ್ತಿ ವರ್ಕ್ ಲೋಡ್ ಇದೆ. ಆದುದರಿಂದ ಪಾರ್ಟ್ ಟೈಂ ಟೀಚರನ್ನು ಫುಲ್‌ಟೈಂ ಉಪಾಧ್ಯಾಯರನ್ನಾಗಿ ಮಾಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

† ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಒಂದು ನಿರ್ದಿಷ್ಟವಾದ ಕೇಸನ್ನು ಹೇಳಿದರೆ ಅದರ ಬಗ್ಗೆ ರೆಪ್ರೆಸೆಂಟೇಷನ್ ಕೊಟ್ಟರೆ, ಆರೀತಿ ವರ್ಕ್ ಲೋಡ್ ಇದ್ದರೆ ಏರ್ಪಾಡು ಮಾಡುತ್ತೇವೆ.

ಶ್ರೀ ಸಿ. ಆರ್. ರಂಗೇಗೌಡ.—ಸ್ವಾಮಿ, ಬೆಂಗಳೂರು ಜಿಲ್ಲೆಯಲ್ಲಿ 10 ಜನ ಫುಲ್‌ಟೈಂ ವರ್ಕರ್, 14 ಜನ ಪಾರ್ಟ್‌ಟೈಂ ವರ್ಕರ್ ಸಂಗೀತ ಉಪಾಧ್ಯಾಯರು ಇದ್ದಾರೆ. ಈ 14 ಜನ ಪಾರ್ಟ್‌ಟೈಂ ವರ್ಕರ್ ಏನು ಇದ್ದಾರೋ ಅವರು ಚೆನ್ನಾಗಿ ಹೇಳುತ್ತಾರೆ. ಅವರಿಗೆ ವರ್ಕ್ ಲೋಡ್ ಕೂಡ ಇದೆ. ಆದುದರಿಂದ ಅವರನ್ನು ಫುಲ್‌ಟೈಂ ಉಪಾಧ್ಯಾಯರನ್ನಾಗಿ ಕನ್‌ವರ್ಟ್ ಮಾಡುವುದಕ್ಕೆ ಅವಕಾಶ ಇದೆಯೋ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಎಲ್ಲಿ ವರ್ಕ್ ಲೋಡ್ ಇದೆಯೋ ಅಲ್ಲಿ ಅವರನ್ನು ಅಪಾಯಿಂಟ್ ಮಾಡಬಹುದು.

ಶ್ರೀ ಬಾಪೂಗೌಡ.—ಸ್ವಾಮಿ, ಹಳೇ ಮೈಸೂರಿನಲ್ಲಿ ಸೀನಿಯರ್ ಪ್ರೈಮರಿ ಸ್ಕೂಲ್ ಮತ್ತು ಏಡೆಡ್ ಸ್ಕೂಲ್, ಹೈಸ್ಕೂಲ್‌ಗಳಿಗೆ ಸಂಗೀತ ಉಪಾಧ್ಯಾಯರುಗಳನ್ನು ಅಪಾಯಿಂಟ್ ಮಾಡಿಕೊಳ್ಳುವ ವ್ಯವಸ್ಥೆ ಇದೆ. ಆದರೆ ನಮ್ಮ ಹೈದರಾಬಾದ್ ಕರ್ನಾಟಕದಲ್ಲಿ ಆರೀತಿ ವ್ಯವಸ್ಥೆ ಇಲ್ಲ. ಆ ವ್ಯವಸ್ಥೆಯನ್ನು ಏರ್ಪಾಡು ಮಾಡುತ್ತೀರಾ ?

Mr. SPEAKER.—It is disalowed.

First Division Clerks in Judicial Department

643. Sri B. B. SAYANAK (Belgaum).—

Will the Minister for Law, Labour and Parliamentary Affairs be pleased to state :—

(*a*) whether it is a fact that the Government have not sanctioned required number of First Division Clerks posts in the Judicial Department of Bombay Karnatak Area ;

(*b*) if so, the reasons for not sanctioning them in spite of the fact that work load has increased in the Courts in Bombay Karnatak Area ?

Sri K. PUTTASWAMY (Minister for Law, Labour and Parliamentary Affairs).—

(*a*) Yes.

(*b*) The Pay Commission has recommended uniform staffing pattern for each category of Courts, based on assessment of work load. The High Court has to undertake a work study for the purpose, after completion of which, a decision for sanction of adequate number of First Division Clerks is possible.

Sri B. B. SAYANAK.—May I know whether first division clerks posts are available in Judicial, Revenue and Public Works Department in old Mysore State, Sir ?

Sri K. PUTTASWAMY.—As far as the department of Judiciary is concerned there are first division clerks posts.

Sri B. B. SAYANAK.—Then why there is discrimination ?

Sri K. PUTTASWAMY.—There is no discrimination. That point is engaging the attention of the High Court. In the meanwhile the Pay Commission was seized of the matter. Now the opinion of the Pay Commission is that there should be a uniform category of posts on the basis of workload, etc. The High Court is now examining the proposal. After receiving the opinion of the High Court, necessary steps will be taken in the matter.

Sri B. B. SAYANAK.—May I know when the Pay Commission Report will come into effect, Sir ?

Sri K. PUTTASWAMY.—I cannot give that assurance. Anyway. the report is entitled to receive all weight.

Sri D. B. KALMANKAR.—In view of the fact that the Pay Commission's Report may not be implemented by the Government, as is seen from the speeches made on the floor of this House, will the Government see that these appointments are made immediately and the work does not suffer there, Sir ?

Sri K. PUTTASWAMY.—Sir, I have already submitted that the recommendation of the Pay Commission is engaging the attention of both the High Court and the Government. After receiving the opinion of the High Court, Government will take necessary steps.

Verification of Membership of Trade Unions of H. M. T.

678. Sri M. S. KRISHNAN (Malleswaram).—

Will the Minister for Law, Labour and Parliamentary Affairs be pleased to state :—

(*a*) whether the verification of membership of Trade Unions in Hindustan Machine Tools Limited, Bangalore was conducted by the Labour Department ;

(*b*) if so, when it was conducted and the verified membership of the different trade unions in Hidustan Machine Tools, Bangalore ;

(*c*) whether the Government advised the Management of Hindustan Machine Tools Limited, Bangalore to recognise the Union with more membership than the other Trade Unions ;

(*d*) whether the Management of Hindustan Machine Tools Limited have acted according to the advice of Government ;

(*e*) if not, the steps that Government is contemplating to take so that the majority Union is recognised ?

Sri K. PUTTASWAMY (Minister for Law, Labour and Parliamentary Affairs).—

(*a*) Yes.

(*b*) The verification of the membership was conducted during the month of September 1968 and the membership of the Hindustan Machine Tools Employees' Association on verification was found to be 2,005. The membership of the Hindustan Machine Tools Karmika Sangha could not be verified as the Sangha failed to produce the relevant Registers for verification.

(*c*) No ; the matter is being placed before the next meeting of the State Industrial Relations Implementation and Evaluation Committee.

(*d*) Does not arise in view of reply to (*c*) above.

(*e*) Does not arise in view of reply to (*c*) above.

ಶ್ರೀ ಎಂ. ಎಸ್. ಕೃಷ್ಣನ್.- ಸೆಪ್ಟೆಂಬರ್ 1968ರಲ್ಲಿ ವೆರಿಫಿಕೇಷನ್ ನಡೆದಿದೆ ಎಂದು ಹೇಳಿದ್ದಾರೆ. ಯಾವಾಗ ಆರಂಭವಾಯಿತು, ಯಾವಾಗ ಮುಗಿಯಿತು ಎಂದು ಹೇಳುವುದಕ್ಕಾಗುತ್ತದೆಯೇ?

Sri K. PUTTASWAMY.—That information is not available, Sir.

ಶ್ರೀ ಎಂ. ಎಸ್. ಕೃಷ್ಣನ್.—ವೆರಿಫಿಕೇಷನ್ ಆಗಿ ಆರುತಿಂಗಳಾಗಿದೆ ಎಂದು ಗೊತ್ತಾಗುತ್ತದೆ. ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ?

Sri K. PUTTASWAMY.—The verification is not yet completed. One association which is concerned with this factory has not furnished information, but it is said that information is available with the management. The management seems to be in a position to supply the information regarding the number of employees who are members of H.M.T. Karmika Sangha and the Government is now at it.

ಶ್ರೀ ಎಂ. ಎಸ್. ಕೃಷ್ಣನ್.—ಕೋಡ್ ಆಫ್ ಡಿಸಿಪ್ಲಿನ್ ಪ್ರಕಾರ ವೆರಿಫಿಕೇಷನ್ ಪ್ರೊಸೀಜರ್ ಮಾಡುವುದು ಎಂದು ಗೊತ್ತಿದೆಯೇ? ಅದರ ಪ್ರಕಾರ ಒಂದು ನಿರ್ದಿಷ್ಟವಾದ ತಾರೀಖು ಗೊತ್ತುಮಾಡಿ ಯಾವುದೇ ಸಂಘಗಳಿರಲಿ ಆ ತಾರೀಖಿನೊಳಗಾಗಿ ಅಕೌಂಟ್ಸ್ ಪುಸ್ತಕಗಳನ್ನು ಹಾಜರು ಮಾಡಬೇಕು ಎನ್ನುವುದು ಗೊತ್ತಿದೆಯೇ? ಹಾಗೆ ಸಬ್‌ಮಿಟ್ ಮಾಡದೆ ಹೋದರೆ ರೆಕಗ್ನಿಷನ್‌ಗೆ ಅವರು ಅರ್ಹತೆ ಪಡೆಯುವುದಿಲ್ಲ ಎನ್ನುವುದು ಗೊತ್ತಿದೆಯೇ? ಎಚ್.ಎಂ.ಟಿ. ಕಾರ್ಮಿಕ ಸಂಘ ಅರ್ಹತೆಯನ್ನು ಪಡೆಯುವುದಿಲ್ಲ ಎನ್ನುವುದು ಗೊತ್ತಿದೆಯೇ?

Sri K. PUTTASWAMY.—These are matters which the Committee on Industrial Relations, Implementations and Evaluation will take into consideration.

Sri M. S. KRISHNAN.—Under what provision of the rules, the Government has decided to refer this matter to the Industrial Relations, Implementations and Evaluation Committee, Sir?

Sri K. PUTTASWAMY.—That is the implied understanding between the Trade Unions and the Government.

ಶ್ರೀ ಎಂ. ಎಸ್. ಕೃಷ್ಣನ್.—ಅದು ಸರಿಯಾದುದಲ್ಲ ಅದು ತಪ್ಪು. ಒಂದುಸಲ ವೆರಿಫಿಕೇಷನ್ ಮಾಡಿದ ತಕ್ಷಣ ಅದನ್ನು ಮ್ಯಾನೇಜ್‌ಮೆಂಟಿಗೆ ತಿಳಿಸುವ ಜವಾಬ್ದಾರಿ ಲೇಬರ್ ಇಲಾಖೆಗೆ ಇದೆ ಎಂದು ಕೋಡ್ ಆಫ್ ಡಿಸಿಪ್ಲಿನ್ ಪ್ರೊಸೀಜರ್ ಇಲ್ಲವೇ, ಸ್ವಾಮಿ?

Sri K. PUTTASWAMY.—I have already submitted Sir, that verification is not yet completed.

ಶ್ರೀ ಎಂ. ಎಸ್. ಕೃಷ್ಣನ್.—ವೆರಿಫಿಕೇಷನ್ ಮಾಡಿದ ಮೇಲೆ ಸ್ಟೇಟ್‌ಮೆಂಟ್ ಒಬ್ಬರು ಕೊಟ್ಟರು, ಇನ್ನೊಬ್ಬರು ಕೊಟ್ಟಿಲ್ಲ. ಅದು ಕಂಪ್ಲೀಟ್ ಆಯಿತು ಎಂದು ಅರ್ಥ. ಅದನ್ನು ತಿಳುವಳಿಕೆ ಕೊಡುವಂಥ ಜವಾಬ್ದಾರಿ ಲೇಬರ್ ಕಮಿಷನರದು ಅಲ್ಲವೇ?

Sri K. PUTTASWAMY.—That is the conception of the hon'ble Member, Sir. According to me, even now, the verification process is not yet complete and that Stage has not arisen.

Bee-Keepers' Co-operative Society, Chickmagalur

693. Sri C. M. S. SASTRY (Chickmagalur).—

Will the Minister for Development be pleased to state :—

(*a*) whether any application from Chickmagalur for Registration of a Bee-Keepers' Co-operative Society, has been received ;

(*b*) the time required to register the above Society ?

Sri P. M. NADGOUDA (Minister for Development).—

(*a*) No.

(*b*) Does not arise.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಈ ಜೇನು ನೊಣ ಸಾಕುವುದಕ್ಕೆ ಸಂಬಂಧಪಟ್ಟ ಸೊಸೈಟಿಯ ರಿಜಿಸ್ಟ್ರೇಷನ್ ಬಗ್ಗೆ ಯಾವರೀತಿಯ ಅರ್ಜಿಯೂ ಬಂದಿಲ್ಲವೆಂದು ಉತ್ತರದಲ್ಲಿ ಕೊಡಲಾಗಿದೆ, ಇದು ಸತ್ಯಕ್ಕೆ ಬಹಳ ದೂರವಿದೆ. ನಾವು ಅನೇಕ ಬಾರಿ ಜೇನು ನೊಣ ಸಾಕುವ ಸೊಸೈಟಿ ರಿಜಿಸ್ಟ್ರೇಷನ್ ಮಾಡಬೇಕು ಎಂದು ಆಫೀಸಿಗೆ ಹೋಗಿ ಕೇಳಿದಾಗ ರಿಜಿಸ್ಟ್ರೇಷನ್ ಮಾಡದೆ ವಾಪಸು ಕಳಿಸಿರುವುದು ಗಮನಕ್ಕೆ ಬಂದಿದೆಯೇ ?

ಶ್ರೀ ಬಿ. ಎಲ್. ಗೌಡ.—ಈ ಸೊಸೈಟಿ ಪ್ರಾರಂಭಿಸಲು ಸರಿಯಾದ ಯಾವ ಪ್ರಪೋಸಲ್ಲೂ ಬಂದಿಲ್ಲ. ಈಗಾಗಲೆ ಸಕಲೇಶಪುರದಲ್ಲಿ ಒಂದು ಸಹಕಾರ ಸಂಘ ಇದೆ. ಆದುದರಿಂದ ಚಿಕ್ಕಮಗಳೂರಿನಲ್ಲಿ ಇನ್ನೊಂದನ್ನು ಮಾಡುವುದಕ್ಕಾಗುವುದಿಲ್ಲ.

ಶ್ರೀ ಕೆ. ಎಚ್. ರಂಗನಾಥ್.—ಚಿಕ್ಕಮಗಳೂರು ತಾಲ್ಲೂಕು ಬೋರ್ಡ್ ಪ್ರೆಸಿಡೆಂಟರು ಮತ್ತು ಚೀಫ್ ಕಂಟ್ರೋಲರು ಹಾಸನದ ಡೆಪ್ಯುಟಿ ರಿಜಿಸ್ಟ್ರಾರರ ಆಫೀಸಿಗೆ ಹೋಗಿ ಕೇಳಿದಾಗ ರಿಜಿಸ್ಟ್ರೇಷನ್ ಮಾಡದೆ ತಿರಸ್ಕರಿಸಿರುವುದು ನಿಜವೇ ?

ಶ್ರೀ ಬಿ. ಎಲ್. ಗೌಡ.—ಆ ವಿಷಯ ಗೊತ್ತಿಲ್ಲ.

ಶ್ರೀ ಕೆ. ಎಚ್. ರಂಗನಾಥ್.—ಚಿಕ್ಕಮಗಳೂರು ಡೆವಲಪ್‌ಮೆಂಟ್ ಕೌನ್ಸಿಲ್ ಸಕಲೇಶಪುರದಲ್ಲಿ ಒಂದು ಸೊಸೈಟಿಯಿದ್ದರೂ ಕೂಡ ಮೂಡಿಗೆರೆ ಮುಂತಾದ ಸ್ಥಳಗಳಿಗೆ ಬೇಕಾಗಿರುವುದರಿಂದ ಬೇರೆ ಒಂದು ಸೊಸೈಟಿ ಮಾಡಬೇಕೆಂದು ತೀರ್ಮಾನಮಾಡಿಲ್ಲವೇ ?

ಶ್ರೀ ಬಿ. ಎಲ್. ಗೌಡ.—ಬೇರೆ ಮಾಡಬೇಕೆಂದು ತೀರ್ಮಾನಮಾಡಿರುವುದು ನಿಜ. ಆದರೆ ಪರಿಶೀಲಿಸಿದಮೇಲೆ ಆರ್ಥಿಕವಾಗಿ ಅದು ಅನ್‌ಎಕನಾಮಿಕಲ್, ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ತೀರ್ಮಾನಿಸಲಾಗಿದೆ.

ಶ್ರೀ ಹಂಜಿ ಶಿವಣ್ಣ.—ಈ ಸೊಸೈಟಿ ಸ್ಥಾಪಿಸಬೇಕೆಂದು ಚಿಕ್ಕಮಗಳೂರು ಜಿಲ್ಲೆಯಲ್ಲಿ ಕ್ಯಾಪಿಟಲ್ ಷೇರಿನ ಬಗ್ಗೆ ವಸೂಲುಮಾಡಿಲ್ಲವೇ ?

ಶ್ರೀ ಬಿ. ಎಲ್. ಗೌಡ.—ಅದು ಸರ್ಕಾರಕ್ಕೆ ಗೊತ್ತಿಲ್ಲ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ಸ್ವಾಮಿ, ಚಿಕ್ಕಮಗಳೂರಲ್ಲಿ ಈ ಸಂಘವನ್ನು ಸ್ಥಾಪಿಸಬೇಕೆಂದು ಜಿಲ್ಲಾಬೋರ್ಡ್ ಮಂಡಲಿ ನಿರ್ಣಯಮಾಡಿರುವುದರಿಂದ ತಾವು ಮಾಡಿರುವ ನಿರ್ಣಯ ಬದಲಾಯಿಸಿ ಅಲ್ಲಿ ಮಾಡುವುದು ರೆಮ್ಯೂನರೇಟಿವ್ ಆಗುವುದಾದರೆ ಅಲ್ಲಿ ಒಂದು ಸಂಘವನ್ನು ಸ್ಥಾಪಿಸುವುದಕ್ಕೆ ಅವಕಾಶ ಮಾಡುತ್ತೀರಾ ?

ಶ್ರೀ ಬಿ. ಎಲ್. ಗೌಡ.—ಅದನ್ನು ಪರಿಶೀಲನೆ ಮಾಡಿದ್ದೇವೆ. ಅದು ಅನ್‌ಎಕನಾಮಿಕ್, ರೆಮ್ಯೂನರೇಟಿವ್ ಅಲ್ಲ. ಆದುದರಿಂದ ಮಾಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಕೆ. ಎಚ್. ರಂಗನಾಥ್.—ಈಗಿರುವ ಸೊಸೈಟಿಯು ಹಾಸನ ಮತ್ತು ಚಿಕ್ಕಮಗಳೂರು— ಈ ಎರಡು ಜಿಲ್ಲೆಗಳ ವ್ಯಾಪ್ತಿಗೂ ಒಳಪಟ್ಟಿರುವುದರಿಂದ ಸಕಲೇಶಪುರ, ಬೇಲೂರು ಮತ್ತಿನ್ನಿತರ ತಾಲ್ಲೂಕುಗಳಿಗೆ ಒಂದು ಸೊಸೈಟಿ ಬೇಕಾಗಿರುವುದರಿಂದ ಚಿಕ್ಕಮಗಳೂರು ಜಿಲ್ಲೆಗೇ ಒಂದು

ಸೊಸೈಟಿ ಮಾಡುವುದು ಸೂಕ್ತವಲ್ಲವೇ? ಚಿಕ್ಕಮಗಳೂರು, ಮೂಡಿಗೆರೆ, ಕೊಪ್ಪ, ಶೃಂಗೇರಿ ಈ ಭಾಗಗಳಲ್ಲಿ ಜೇನಹುಳ ಹೆಚ್ಚಾಗಿ ಸಾಕುವುದರಿಂದ ಬೇರೆ ಒಂದು ಸೊಸೈಟಿ ಮಾಡುವುದು ಸೂಕ್ತವಲ್ಲವೇ?

ಶ್ರೀ ಬಿ. ಎರ್. ಗೌಡ.—ಚಿಕ್ಕಮಗಳೂರಿಗೇ ಪ್ರತ್ಯೇಕ ಸಹಕಾರ ಸಂಘವನ್ನು ಮಾಡಿದರೆ ಅದು ಸ್ವಾವಲಂಬಿಯಾಗುವುದಿಲ್ಲ, ಅದರಿಂದ ತೊಂದರೆಯಾಗುತ್ತದೆ, ಮಾಡುವುದಕ್ಕಾಗುವುದಿಲ್ಲ ಎಂದು ಆಗಲೇ ಹೇಳಿದೆ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಅನ್‌ಎಕನಾಮಿಕ್ ಆಗುತ್ತದೆ ಎಂದು ಹೇಳಿದಿರಿ. ಮೊದಲೇ ಷೇರು ಹಣವನ್ನು ವಸೂಲುಮಾಡಿ ರಿಜಿಸ್ಟ್ರೇಷನ್ ಮಾಡಬೇಕು ಎಂದು ರಿಜಿಸ್ಟ್ರಾರ್ ಆಫ್ ಕೋ-ಆಪರೇಟಿವ್ ಸೊಸೈಟಿಯವರ ಆದೇಶದಮೇರೆಗೆ ಈ ಕ್ರಮ ತೆಗೆದುಕೊಂಡು ನಿಮ್ಮನ್ನು ರಿಜಿಸ್ಟ್ರೇಷನ್ನಿಂಗ್ ಅವಕಾಶ ಕೊಡಬೇಕೆಂದು ಕೇಳಲಿಲ್ಲವೇ?

ಶ್ರೀ ಬಿ. ಎರ್. ಗೌಡ.—ಮಾನ್ಯ ಸದಸ್ಯರು ಒತ್ತಾಯಮಾಡುವುದರಿಂದ ಇದನ್ನು ಇನ್ನೊಂದು ಸಲ ಪರಿಶೀಲನೆ ಮಾಡುತ್ತೇವೆ.

ಅಧ್ಯಕ್ಷರು.—ಇಲ್ಲಿಗೆ ಪ್ರಶ್ನೋತ್ತರಗಳ ಕಾಲ ಮುಗಿಯಿತು.

QUESTIONS FOR ANSWERS ON THE DAY

(but not taken up)

Reconstitution of Fisheries Advisory Committee

522. Sri P. V. AITHALA (Surathkal).—

Will the Minister of State for Ports and Fisheries be pleased to state:—

(a) whether the Mysore State Fisheries Advisory Committee has been reconstituted recently;

(b) the criteria adopted in appointing members for the committee;

(c) the reasons for not including the 6 coastal M.L.As. of the District in the Fisheries Advisory Committee newly reconstituted?

Sri H. C. LINGA REDDY (Minister of State for Fisheries and Ports).—

(a) Yes.

(b) Persons who are engaged in or are closely connected with or are interested in different aspects of fisheries development including the welfare and socioeconomic problems of fishermen in the different parts of the State are nominated to the Board.

(c) Three of the coastal M.L As. and two M.L.Cs. in South Kanara District have been nominated.

Manhandling of Congress Workers

549. Sri RAJA PAID NAIK (Shorapur).—

Will the Chief Minister be pleased to state :—

(a) whether it has come to the notice of Government that the workers of Swatantra party attacked and manhandled the Congress candidates contesting the Municipal elections of Shorapur Town on the night of 23rd December 1968 ;

(b) whether the Sub-Inspecter of Police, Shorapur, was badly beaten and manhandled on the same night by some of the so called leaders and followers of the above party ;

(c) whether it has come to the notice of the Government that the said persons are threatening the life of one Vasudeva Naik, elected member of Shorapur T.D.B. as a result of which he is forced to live in hiding ;

(d) whether there is any proposal to hold a thorough enquiry by an independent Police Officer to book the offenders of Shorapur so that public may live in peace ?

Sri VEERENDRA PATIL (Chief Minister).—

(a) A case in this connection has been registered under Sections 451, 147, 148, 149, 323 and 427 IPC in crime No. 60/68 of the Shorapur Police Station and the same has also been charge-sheeted.

(b) No.
(c) No.
(d) No.

Construction of wells in Kolar District

553. Sri B. VENKATARAYAPPA (Sidlaghatta).—

Will the Minister for Development be pleased to state :—

(a) the number of wells sanctioned to Kolar District during the years 1965-66, 1966-67 and 1967-68 (Talukwise figures to be given) ;

(b) out of them, the number of wells completed during each year (Talukwise figures to be given) ;

(c) the time required for the completion of the remaining wells?

Sri P. M. NADGOUDA (Minister for Development).—

(a) and (b) A statement is appended.

(c) It cannot be said as it depends on the initiative and interest taken by the Loanee coupled with the geological conditions relation to each well.

STATEMENT

Statement showing talukwise sanction and completion of wells during the years 1965-66, 1966-67 and 1967-68 in Kolar District.

	Kolar District		No. of Applications sanctioned				No. of wells completed			
			1965–66	1966–67	1967–68	Total	65–66	66–67	67–68	Total
1	Bagepalli	...	126	76	151	353	...	41	49	90
2	Bangarpet	...	89	68	577	734	...	21	25	46
3	Chickballapur	...	103	45	375	523	...	37	49	86
4	Chintamani	...	126	17	428	571	...	51	21	72
5	Gudibanda	...	57	64	66	187	...	17	31	48
6	Gowribidanur	...	127	70	727	924	...	61	88	149
7	Kolar	...	89	63	337	489	...	49	68	117
8	Malur	...	73	66	236	375	...	14	59	73
9	Mulbagal	...	95	73	673	841	...	50	64	114
10	Sidlaghatta	...	89	70	195	354	...	55	9	64
11	Srinivasapur	...	79	87	271	437	...	90	40	130
	Grand Total	...	1,053	699	4,036	5,788	...	486	503	989

Election to Primary Land Development Bank

555. Sri B. VENKATARAYAPPA (Sidlaghatta).—

Will the Minister for Development be pleased to state :—

(*a*) whether the election to the Managing Committee of the Primary Land Development Bank for the year 1968-69 was scheduled to take place on 19th January 1969;

(*b*) if so, the reasons why the election to the Managing Committee was cancelled by a Notification issued by the Tahsildar of Siddlaghatta, who is the Returning Officer;

(*c*) the authority responsible for the said election and what action Government propose to take on them ?

Sri P. M. NADGOUDA (Minister for Development).—

(*a*) The election to the Managing Committee of the Primary Land Development Bank, Siddlaghatta was scheduled to take place on 19th January 1969.

(*b*) The Bank did not furnish the Voters' List of non-borrowers to the Returning Officer in accordance with the bye-laws.

(*c*) The matter is under examination.

Exploration of Gold Deposits and Survey of Copper Deposits

720. Sri RAJA PID NAIK (Shorapur).—

Will the Minister for Industries, Information and Publicity be pleased to state :—

(*a*) the steps taken to further explore at depth to establish the full potential of the deposits of Gold ore at the mines at Manglur in Shorapur Taluk, Gulbarga District;

(*b*) the programme drawn up by the Geological Survey of India for exploring the deposits at depths of Copper at the above mines ?

Sri A. P. APPANNA (Deputy Minister for Industries).—

(*a*) Exploration for gold in different parts of the State is being taken up on a planned basis by the Geological Survey of India. Presently it is being carried out at Gadag and will be extended to other places.

(*b*) Copper is not reported to occur at Marglur, Shorapur Taluk.

Furnishing incorrect replies to a Question

Sri H. N. NANJE GOWDA (Arkalgud).—I rise to a point of order under Rule 311 (1) which says that the point of order shall relate to the enforcement of the Rules as regulate the business of the Assembly.

ನಾವು ಪ್ರಶ್ನೆ ಕೇಳುವುದು ಸರಿಯಾದ ಉತ್ತರವನ್ನು ಪಡೆಯುವುದಕ್ಕೆ. ಸರ್ಕಾರದ ವತಿಯಿಂದ ನೇರವಾದ, ಪ್ರಾಮಾಣಿಕವಾದ ಸತ್ಯ ಸಂಗತಿ ತಿಳಿದು ಬರಲಿ ಎಂದು ಕೇಳುತ್ತೇವೆ.

ಶ್ರೀ ಕೆ. ಎಚ್. ಪಾಟೀಲ್.—(ಉ) ಪ್ರಶ್ನೆ ಹೀಗೆ ಇದೆ:—ಆಡಳಿತ ನಿರ್ದೇಶಕರು ನಿವೃತ್ತ ಸರ್ಕಾರೀ ನೌಕರರೇ, ಮತ್ತು ಹಾಗಿದ್ದಲ್ಲಿ, ಅವರನ್ನು ಪುನರ್ನೇಮಕಗೊಳಿಸುವಲ್ಲಿ ಅವರಿಗಿದ್ದ ವಿಶಿಷ್ಟ ಅರ್ಹತೆಗಳಾವುವು 'ಎಂದು ಕೇಳಿರುವುದಕ್ಕೆ 'ಹೌದು, ಕೈಗಾರಿಕಾ ಸಂಸ್ಥೆಯಲ್ಲಿನ ಆಡಳಿತಾತ್ಮಕ ಹಾಗೂ ನಿರ್ವಾಹಕ ಅನುಭವ' ಎಂದು ಹೇಳಿದ್ದಾರೆ. ಅವರು ಮತ್ತೆ ಹೇಳುವಾಗ ಐ.ಎ.ಎಸ್. ಅಧಿಕಾರಿ ಅಂತ ಅಷ್ಟೇ ಹೇಳಿದರೆ ಹೊರತು ಯಾವ ಕೈಗಾರಿಕೆಯಲ್ಲಿದ್ದರು ಎಂಬುದನ್ನು ಹೇಳಲಿಲ್ಲ. ಕೈಗಾರಿಕೆಯಲ್ಲಿ ಕೆಲಸ ಮಾಡಿದ ಅನುಭವ ಅವರಿಗೆ ಏನಿತ್ತು * * *

(Interruptions)

Sri K. PUTTASWAMY (Minister for Law, Labour and Parlimentary Affairs).—These things should not be permitted.

Mr. SPEAKAR.—Those words which reflect upon the officer concerned who is not in the House to defend himself, are expunged.

Sri H. N. NANJE GOWDA.—The purpose of asking a question is to get honest replies from the Government. The very purpose of asking the supplementary is why * * * person has been appointed.

Mr. SPEAKER.—The word * * * is expunged. It is not correct to make allegation against a person who is not in the House. It is not parliamentary to call a person * * * .

(Sri Vatal Nagaraj stood up to speak)

Mr. SPEAKER.—Hon. Member may resume his seat. Let the Member who has raised the point of order explain. No other Member should stand up and argue.

2–00 P.M.

ಶ್ರೀ ವಾಟಾಳ್ ನಾಗರಾಜ್ (ಚಿಕ್ಕಪೇಟೆ).—ಶ್ರೀ ನಂಜೇಗೌಡರು ಆ ಜಿಲ್ಲಾಧಿಕಾರಿಗಳ ಅನುಭವ ಏನೆಂಬುದನ್ನು ಸಭೆಗೆ ವಿವರಿಸುತ್ತಿದ್ದರು......

Mr. SPEAKER.—The hon. member should not stand and speak when I am standing. Nobody is allowed like that. ದಯವಿಟ್ಟು ಶ್ರೀಮಾನ್ ವಾಟಾಳ್ ನಾಗರಾಜರು ಕುಳಿತುಕೊಳ್ಳಬೇಕು. ಇಬ್ಬರು ಸದಸ್ಯರು ಎದ್ದುನಿಂತಿದ್ದಾಗ ಯಾರಿಗೂ ಮಾತನಾಡುವುದಕ್ಕೆ ಅವಕಾಶವಿಲ್ಲ.

ಶ್ರೀ ಎಚ್. ಎನ್. ನಂಜೇಗೌಡ.—ಸದಸ್ಯರು ಇಲ್ಲಿ ಪ್ರಶ್ನೆ ಕೇಳತಕ್ಕ ಉದ್ದೇಶವಾದರೂ ಏನು............

ಅಧ್ಯಕ್ಷರು.—ತಾವೇನು ಈಗ ಪಾಯಿಂಟಾಫ್ ಆರ್ಡರ್ ಮೇಲೆ ಮಾತನಾಡುತ್ತಿದ್ದೀರಾ ?

*** Expunged under orders of the Chair.

ಶ್ರೀ ಎಚ್. ಎನ್. ನಂಜೇಗೌಡ.—ಪ್ರಶ್ನೆಗಳನ್ನು ಹೇಳಿರತಕ್ಕದ್ದರಲ್ಲಿ ಎರಡು ಉದ್ದೇಶಗಳಿರುತ್ತವೆ. ಒಂದು ಸರ್ಕಾರದವರಿಂದ ವಿಷಯವನ್ನು ತಿಳಿದುಕೊಳ್ಳುವುದು, ಇನ್ನೊಂದು ಸರ್ಕಾರದವರೇನಾದರೂ ತಮ್ಮ ಕರ್ತವ್ಯದಲ್ಲಿ ಎಡವಟ್ಟಾಗಿ ಬಿದ್ದಿದ್ದರೆ, ಅನಿಷ್ಟಕಾರಕವಾದ ಕೆಲಸಗಳನ್ನು ಮಾಡಿದ್ದರೆ ಅಥವಾ ಯಾವುದಾದರೂ ಒಂದು ಅಧ್ಯಕ್ಷಸ್ಥಾನಕ್ಕೆ ಸಂಶಯಾಸ್ಪದವುಳ್ಳ ವ್ಯಕ್ತಿಯನ್ನು ಅಧ್ಯಕ್ಷನನ್ನಾಗಿ ಹಾಕಿದ್ದರೆ, ಅಂಥ ವ್ಯಕ್ತಿಯನ್ನು ಅಲ್ಲಿ ಹಾಕುವುದಕ್ಕೆ ಕಾರಣವೇನು? ಯಾವ ವ್ಯಕ್ತಿಯ ಮೇಲೆ ಸರ್ಕಾರದವರು ಹಿಂದೆ ಅನೇಕ ದೂರುಗಳನ್ನೂ ದೋಷಾರೋಪಣೆಗಳನ್ನೂ ಮಾಡಿದ್ದರೋ ಅದೇ ವ್ಯಕ್ತಿಯನ್ನು ಮತ್ತೆ ಆ ಅಧ್ಯಕ್ಷಸ್ಥಾನಕ್ಕೆ ಹಾಕುವುದಕ್ಕೇನು ಕಾರಣ? ಅದೇನು ಸ್ವಜನಪಾತ ದೃಷ್ಟಿಯಿಂದಲೋ ಅಥವಾ ಅವರೊಬ್ಬರು ನಿವೃತ್ತ ಐ.ಎ.ಎಸ್. ಅಧಿಕಾರಿಗಳು ಅಂತಲೋ? ಅವರಿಗೆ ಇಂಡಸ್ಟ್ರೀಸ್‌ಗಳಲ್ಲಿ ಏನು ಅನುಭವವಿದೆ? * * * * ಹೀಗಿದ್ದಾಗ್ಯೂ ಯಾವ ಕಾರಣಕ್ಕಾಗಿ ಆ ವ್ಯಕ್ತಿಯನ್ನು ಆ ಸ್ಥಾನದಲ್ಲಿಡಲಾಯಿತು ಎಂಬುದನ್ನು ವಿವರಗಳ ಸಹಿತ ಸಭೆಗೆ ತಿಳಿಸಬೇಕು.

Mr. SPEAKER.—The hon. Member should not speak like that when the man concerned is not here to defend. Such words will have to be expunged.

Sri H. N. NANJE GOWDA.—Suspicion is there in regard to this man. * * * * *

Mr. SPEAKER. All these words should be expunged. There is no room here to express indecent words. Therefore, such indecent and unparliamentary words should be expunged.

(*Some members wanted to speak*)

Mr. SPEAKER.—Nothing to be recorded till I give a ruling. *****

ಶ್ರೀ ಜಿ. ದುಗ್ಗಪ್ಪ (ಭರ್ಮಸಾಗರ).—ನೀವು ರೂಲಿಂಗ್ ಕೊಡುವ ಮುಂಚೆ ನಮ್ಮ ವಿಷಯವನ್ನು ಕೇಳಬೇಕು. ಮಾನ್ಯ ಶ್ರೀ ನಂಜೇಗೌಡರು ಕೆಲವು ಆಪಾದನೆಗಳನ್ನು ಮಾಡಿದ್ದಾರೆ. ನಾವು ಅಷ್ಟು ದಾರಿ ಬಿಟ್ಟು ಹೋಗುವುದಿಲ್ಲ. ನಿಮಗೆ ಅನುಕೂಲವಾಗಲಿ ಎಂದು ನಾವು ಹೇಳುತ್ತಿದ್ದೇವೆ. ಕೆಲವೊಂದು ಗುರುತರವಾದ ಆಪಾದನೆಗಳನ್ನು ಮಾನ್ಯ ಶ್ರೀ ನಂಜೇಗೌಡರು ಮಾಡಿದ್ದಾರೆ. ಈಗ ಉಪಮಂತ್ರಿಗಳಾಗಿರತಕ್ಕ ಮಾನ್ಯ ಬಿ. ಎಲ್. ಗೌಡರು ಇಲ್ಲ ಪಿ. ಎಸ್. ಪಿ. ಸದಸ್ಯರಾಗಿ ವಿರೋಧಪಕ್ಷದಲ್ಲಿ ಇದ್ದರು. ಆಗ ಗದಗ್ ಕೊ-ಆಪರೇಟಿವ್ ಸೊಸೈಟಿಯ ಮ್ಯಾನೇಜಿಂಗ್ ಡೈರೆಕ್ಟರ್ ಆಗಿ ಹಿಂದೆ ಚಿತ್ರದುರ್ಗ ಜಿಲ್ಲೆಯಲ್ಲಿ ಡೆಪ್ಯುಟಿ ಕಮಿಷನರ್ ಆಗಿದ್ದ ರಿಟೈರ್ಡ್ ಐ. ಎ. ಎಸ್. ಅಧಿಕಾರಿಯನ್ನು ನೇಮಕ ಮಾಡಿದರು. ಅವರ ಮೇಲೆ........

ಅಧ್ಯಕ್ಷರು.—ತಮಗೆ ಅವಕಾಶ ಕೊಡುತ್ತೇನೆ. ಏನು ಪಾಯಿಂಟ್ ಇದ್ದರೂ ಆಮೇಲೆ ಮಾತನಾಡಿ.

ಪ್ರಶ್ನೆ ಕೇಳಿದನಂತರ ಪ್ರಶ್ನೆಗೆ ಉತ್ತರ ಹೇಗೆ ಕೊಡಬೇಕು ಎಂಬುದು ಮಾತ್ರ ವಿಚಾರ ಇದೆ. ಅವನು ಹೇಗೆ ಇದ್ದಾನೆ, ಅವನ ಇತಿಹಾಸ ಏನು ಆ ವಿಷಯ ಎಲ್ಲಾ ಇಲ್ಲ ಇಲ್ಲ. ಅದಕ್ಕೆ ಬೇರೆ ಅವಕಾಶ ಇದೆ, ಇಲ್ಲಿ ಉತ್ತರ ಹೇಗೆ ಕೊಡಬೇಕು, ಎಂಬ ಪಾಯಿಂಟ್ ಮಾತ್ರ ಇರುವುದು.

ಶ್ರೀ ಜಿ. ದುಗ್ಗಪ್ಪ.—ಆ ಆಫೀಸರು ಎಂಥವನು ಎನ್ನುವುದನ್ನು ಗಮನಕ್ಕೆ ತೆಗೆದುಕೊಂಡರೆ, ಈಗ ಮಾನ್ಯ ನಂಜೇಗೌಡರು ಏನು ಹೇಳಿದ್ದಾರೆ, ಅವುಗಳು ಎಲ್ಲಾ ಸಣ್ಣ ಸಣ್ಣ ಆಪಾದನೆಗಳು. ನಿಜವಾದ ಆಪಾದನೆಗಳು ಶ್ರೀಮಾನ್ ಬಿ. ಎಲ್. ಗೌಡರು, ಈ ಕಡೆ ಇದ್ದಾಗ ಏನು ಆಪಾದನೆ ಮಾಡಿದ್ದಾರೆ, ಅದನ್ನು ತರಿಸಿಕೊಂಡು ನೋಡಬೇಕು. ಅದು ನಮ್ಮ ಪ್ರೊಸೀಡಿಂಗ್ಸಿನಲ್ಲಿ ಇದೆ. ಅದನ್ನು ನೋಡಿದರೆ ತಮಗೆ ಅರಿವಾಗಬಹುದು, ನಾನು 1952ನೇ ಇಸವಿಯಿಂದ ಅದೃಷ್ಟವೋ, ದುರಾದೃಷ್ಟವೋ ಇಲ್ಲಿದ್ದೇನೆ. ಅನೇಕ ವಿಚಾರಗಳನ್ನು ಕಣ್ಣಾರೆ ನೋಡಿದ್ದೇನೆ, ಕಿವಿಯಾರೆ ಕೇಳಿ

**** Matter expunged under orders of the Chair.

ದ್ದೇನೆ. ಆವೆಲ್ಲ ವಿಚಾರವೂ ನನಗೆ ಗೊತ್ತು. ಆಗಿನ ಮುಖ್ಯಮಂತ್ರಿಯವರು ಇಂಥವರನ್ನು ಅಲ್ಲಿಗೆ ತೆಗೆದುಕೊಂಡು ಹೋಗಿ, ಯಾರನ್ನೋ ತುಳಿಯುವುದಕ್ಕೆ ಯಾರ ಮೇಲೋ ಸೇಡು ತೀರಿಸುವುದಕ್ಕೆ ಸೇರಿಸಿದ್ದಾರೆ? ಇದರ ಅಭಿಪ್ರಾಯ ಏನು, ಇದರ ಹಿನ್ನೆಲೆ ಎಲ್ಲಾ ಅರಿತುಕೊಂಡು ಅದಕ್ಕೆ ಅವಕಾಶ ಕೊಡಬೇಕೆಂದು ಕೇಳುವುದು. ತಾವು ಏನು ಒಂದು ಎಕ್ಸ್‌ಪಂಜ್ ಮಾಡಬೇಕೆಂದು ಹೇಳಿದ್ದೀರಿ, ಅದು ಸಾಧುವಲ್ಲ, ಅದು ರಿಕಾರ್ಡಿನಲ್ಲಿ ಹೋಗಬೇಕು ಎಂದು ಕೇಳಿಕೊಳ್ಳುತ್ತೇನೆ.

† ಶ್ರೀ ಎಸ್. ಬಂಗಾರಪ್ಪ (ಸೊರಬ).—ಸ್ವಾಮಿ, ಈಗ ಪದಗಳನ್ನು ಪ್ರಯೋಗ ಮಾಡುವಾಗ ಈ ಸಭೆಯ ಮಾನ್ಯ ಸದಸ್ಯರು ಯಾರಾದರೂ, ತಮ್ಮ ಜವಾಬ್ದಾರಿಯನ್ನು ಅರಿತುಕೊಂಡೇ ಮಾಡುತ್ತಾರೆ. ಅದು ಪಾರ್ಲಿಮೆಂಟರಿಯೇ, ಅಥವಾ ಅನ್‌ಪಾರ್ಲಿಮೆಂಟರಿಯೇ ಎಂದು ತೀರ್ಮಾನ ತೆಗೆದುಕೊಳ್ಳುವ ಹಕ್ಕು, ರೂಲ್ಸ್ ಪ್ರಕಾರ ಅಧ್ಯಕ್ಷರಿಗೆ ಇದೆ. ಅದನ್ನು ನಾವೆಲ್ಲರೂ ಒಪ್ಪಿಕೊಂಡಿದ್ದೇವೆ. ಈ ಸಭೆಯ ಸದಸ್ಯರು ತಮ್ಮ ಜವಾಬ್ದಾರಿಯನ್ನು ಗೊತ್ತು ಮಾತನಾಡುತ್ತಾರೆ. ಪ್ರಜಾಪ್ರಭುತ್ವದಲ್ಲಿ ನಾವು ಒಂದು ವ್ಯಕ್ತಿಯ ಮೇಲೆ ಅಥವಾ ಒಂದು ಸರ್ಕಾರ ಅಥವಾ ಒಂದು ಗುಂಪಿನ ಮೇಲೆ, ಆಪಾದನೆ ಮಾಡಬೇಕಾದ ಸಂದರ್ಭ ಬರುತ್ತದೆ, ಮಾಡಲೇಬೇಕಾಗುತ್ತದೆ. ಮೊನ್ನೆ ನನ್ನ ಭಾಷಣದಲ್ಲಿ ಶಿವಮೊಗ್ಗದಲ್ಲಿ ಒಬ್ಬ ಫಾರೆಸ್ಟ್ ರೇಂಜ್ ಆಫೀಸರ್ ವರ್ಗಾವಣೆ ಮಾಡುವುದಕ್ಕೆ ಮಿನಿಮಂ 5 ಸಾವಿರ ರೂಪಾಯಿ ಫಿಕ್ಸ್ ಮಾಡಿದ್ದಾರೆಂದು ಹೇಳಿದ್ದೇನೆ. ಅದನ್ನೇ ಕರಪ್ಶನ್ ಎಂದು ಹೇಳತಕ್ಕಂತದ್ದು. ಆಗ ಪಾರ್ಲಿಮೆಂಟರಿ, ಅನ್‌ಪಾರ್ಲಿಮೆಂಟರಿ ಎಂಬ ಪ್ರಶ್ನೆಯೇ ಬರಲಿಲ್ಲ. ಆ ರೀತಿ ಒಂದು ಪದವನ್ನು ಉಪಯೋಗಿಸಿಕೊಂಡು ಎಲ್ಲರೂ ತಮ್ಮ ಕಾರ್ಯಕಲಾಪಗಳನ್ನು ನಡೆಸಿಕೊಂಡು ಬರುತ್ತಿದ್ದೇವೆ. ಕರಪ್ಶನ್ ಎಂಬ ಶಬ್ದ ಅನೇಕ ಸಲ ಬರುತ್ತಿದೆ. ತಾವು ಏನು ರಿಕಾರ್ಡಿನಿಂದ ತೆಗೆದುಹಾಕಬೇಕೆಂದು ಆಜ್ಞೆ ಮಾಡಿದ್ದೀರಿ, ಅದು ಕರಪ್ಷನ್ ಎನ್ನುವುದಕ್ಕಿಂತಲೂ ಕಡಿಮೆ ತರದ ಪದವೆಂದು ಹೇಳಬೇಕಾಗಿದೆ.

ಕನ್ನಡದಲ್ಲಿ ಕರಪ್ಶನ್ ಎನ್ನುವುದಕ್ಕಿಂತ ಲಂಚ ಎಂದು ಹೇಳಬಹುದು. ಕರಪ್ಷನ್ ಆಫೀಸರು ಎಂದರೆ ಲಂಚಕೋರ ಅಫೀಸರು ಎಂದು ನಾವು ಉಪಯೋಗ ಮಾಡುತ್ತಿದ್ದೇವೆ. ಡಿಸ್ ಆನೆಸ್ಟ್ ಎಂದರೆ ಅಪ್ರಾಮಾಣಿಕ ಅಧಿಕಾರಿ ಎಂದು ಅರ್ಥವಾಗುತ್ತದೆ. ಲಂಚ ಕೋರ, ಅಪ್ರಾಮಾಣಿಕ ಹೇಳತಕ್ಕ ಹಕ್ಕು ನಮಗೆ ಇಲ್ಲ ಎಂದು ಅಧ್ಯಕ್ಷರು ಹೇಳುವುದಾದರೆ ನಾವು ಸದಸ್ಯರಾಗಿ ಈ ಸಭೆಗೆ ಬರುವುದು ಉಪಯೋಗವಿಲ್ಲ. ನಾವು ನಮ್ಮ ಕರ್ತವ್ಯವನ್ನು ನಿರ್ವಹಿಸದೇ ಹೋದರೆ ಒಂದು ಲಕ್ಷ ಜನಗಳಿಗೆ ದ್ರೋಹವನ್ನು ಬಗೆದ ಹಾಗೆ ಆಗುತ್ತದೆ. ಸರ್ಕಾರದ ಆಡಳಿತಕ್ಕೆ ಸಂಬಂಧಪಟ್ಟ ಹಾಗೆ ಅಧಿಕಾರಿಗಳ ವಿಷಯವನ್ನು ಮಾತನಾಡುವಾಗ ನಾವು ಅವರ ವರ್ತನೆಗೆ ತಕ್ಕ ಹಾಗೆ ಅಪ್ರಮಾಣಿಕನಾದ ಅಧಿಕಾರಿ, ಮೋಸಗಾರ, ಲಂಚಕೋರ ಇತ್ಯಾದಿ ಪದಗಳನ್ನು ನಾವು ಈ ಸಭೆಯಲ್ಲಿ ಉಪಯೋಗ ಮಾಡಬೇಕಾಗುತ್ತದೆ. ಸುಮ್ಮನೆ ಆರ್ಬಿಟ್ರರಿಯಾಗಿ ತೀರ್ಮಾನ ಮಾಡಿ ಈ ಪದವನ್ನು ಪ್ರಯೋಗ ಮಾಡಬಾರದು ಎಂದು ಅಧ್ಯಕ್ಷರು ಹೇಳುವುದಾದರೆ ನಾವು ಇಲ್ಲಿ ಏತಕ್ಕೆ ಭಾಷಣ ಮಾಡಬೇಕು? ಆದ್ದರಿಂದ ಆ ಪದಗಳನ್ನು ಎಕ್ಸ್‌ಪಂಜ್ ಮಾಡಬೇಕಾಗಿಲ್ಲ. ಎಂದು ನಾನು ಹೇಳುತ್ತೇನೆ.

Sri H. M. CHANNABASAPPA (Periyapatna).—Sir,.........

Mr. SPEAKER.—The point involved is only this.

Sri H. M. CHANNABASAPPA.—I have had the privilege of education; I know what my duties are. I am not prepared to be told what I should say and what I should not say.

Mr. SPEAKER.—I wanted to tell the hon. Member that the point involved is, what is the scope of the question and answer.

Sri H. M. CHANNABASAPPA.—I have followed the debate so far and I know my duties and if I transgress my limits, then the Speaker can call me to order. Not otherwise. I need not be told what the point is.

Mr. SPEAKER.—The tone of the argument is surprising!

Sri H. M. CHANNABASAPPA.—This is not the way in which Hon. Members of this House have got to be treated. There is a way. Democracy does not mean autocracy.

Mr. SPEAKER.—I only pointed out that the point of order related to the scope of the question and answer. That is the only point. There is no scope for any other discussion.

Sri H. M. CHANNABASAPPA.—It is open to the Chair to say that such and such a thing is irrelevant and such and such a thing is relevant, only after I speak and not before.

Mr. SPEAKER.—I know the hon. member has long experience. But rule 311 says that if the Chair wants any clarification, the hon. Members may give and not otherwise. The point here is, what should be the scope of questions and answers. If the hon. Member wants to enlighten me about it, I have no objection.

Sri H. M. CHANNABASAPPA.—The very fact that I wanted to catch your eye means that I wanted to say within the limitations prescribed in the rule.

Sir, I am very sorry to find that different standards are prescribed for Members of this House. It is the privilege of the hon. Members of this House to function under the Constitution and say what they feel to be correct I was very greatly surprised when the hon. Speaker said that the word * * *should be expunged. The Government has a function to do and the Opposition has a function to do. The opposition has to critically examine the functions of the Government, the machinery of the Government, its advice and various activities. Within the limited knowledge of the legislature that I have, it is unknown in the history of democracy to say it is unparliamentary. Officers form part of the Government. If any hon. Member rises and speaks of the personal conduct of an officer in his individual capacity, I quite see there is a lot of force in your argument that such a thing should not be done when the gentleman is not here to defend himself. When I say that the machinery is corrupt or the part of the machinery is corrupt or the officials are corrupt, it is unknown in the history of parliamentary democracy that such an expression is termed as unparliamentary. Here is the Government which can defend the entire machinery of the Government. Therefore, I beg to submit that it would be too much to trust on your stand regarding the privilege and rights of the members of the opposition to make honest criticism and criticism of the functions of the Government. I do not think any member of this House on this side named the officer when they said that he is corrupt. When discussion has been going on if I say that a particular officer is corrupt, here are the concerned Ministers to defend the officers because they form part of the Government. You were pleased to observe that hon. Members of this House should not at all make any remark as to the way in which the officer is conducting himself. Therefore, I have to submit that different standards

are prescribed for the proceedings of this House and I for one with all my experience of these years must say that such a thing is unknown in the parliamentary history. I can tell as an example that in 1933-34 when the British Government was functioning here and when all officers of the Government were dead-against public o inion I raised a point that a particular Deputy Commissioner was a blackmarketeer and it has been recorded. You can see that. They were so fair and it is surprising that in democratic set up where the functions of the opposition are very great, very responsible, to tone up the administrative machinery, purify the administrative machinery, they will have to say so many things. To say that such a word is expunged, as I submit, is not correct. Your powers are very great but they are subjected to the powers and the privileges of this House and it cannot be arbitrary. Therefore, I would like to submit with all respect that you should think ten times before giving a ruling because a ruling from the Chair will be referred to not only within the limits of Mysore or India but such a ruling given by the Speaker of an Assembly will be a public document all over the world and it may be quoted by people elsewhere. Therefore any ruling coming from the Chair should be very well considered so that it should be respected not merely in Mysore but all over the world.

† ಶ್ರೀ ಎನ್. ಹುಚ್ಚಮಾಸ್ತಿಗೌಡ (ಹುಲಿಯೂರುದುರ್ಗ).—ಸ್ವಾಮಿ, ಶ್ರೀಮಾನ್ ನಂಜೇಗೌಡರು ಎತ್ತಿರುವ ಪಾಯಿಂಟ್ ಆಫ್ ಆರ್ಡರ್ ಇನ್ನೂ ಪೂರ್ಣವಾಗಿ ಮುಗಿದಿಲ್ಲ ಮತ್ತು ಇದು ಪಾಯಿಂಟ್ ಆಫ್ ಆರ್ಡರೋ ಅಥವಾ ಇಲ್ಲವೋ ಇನ್ನೂ ಗೊತ್ತಿಲ್ಲ. ಆದರೆ ನಾವು ಸಾಮಾನ್ಯವಾಗಿ ಮಾತನಾಡುವಾಗ ತಾವು ಇಲ್ಲಿ ಉಪಯೋಗಿಸುವ ಪದಗಳು ಸರಿಯಾಗಿಲ್ಲ ಇವನ್ನು ಎಕ್ಸ್‌ಪಂಜ್ ಮಾಡಿ ಎಂದು ರೂಲಿಂಗು ಕೊಡುತ್ತೀರಿ. ಇಲ್ಲಿ ನಾವು ಮಾತನಾಡುವುದೆಲ್ಲ ಅನ್ ಪಾರ್ಲಿಮೆಂಟರಿ ಯಾಗಿದ್ದರೆ ಅಂತಹ ಸಂದರ್ಭಗಳಲ್ಲಿ ತಾವು ಹೇಳುವುದು ಸರಿಯಾಗುತ್ತದೆ ಇಲ್ಲವೇ ರೂಲ್ಸಿಗೆ ವಿರೋಧವಾಗಿ ಹೋಗಿದ್ದರೆ ಅಂತಹ ಪದಗಳನ್ನು ತೆಗೆದುಹಾಕುವುದು ಸರಿಯಾಗಿರುತ್ತದೆ. ಆದರೆ ಇಲ್ಲ ಪ್ರಶ್ನೆಯನ್ನು ಕೇಳುವುದರ ಉದ್ದೇಶವಾದರೂ ಏನು ಎಂದರೆ ಪ್ರಶ್ನೆಯಲ್ಲಿಯೇ ಕೇಳಿರುವಂತೆ ಈ ಅಧಿಕಾರಿ ಅಂತಹವರಲ್ಲವೇ ಎನ್ನುವುದನ್ನು ತಿಳಿದುಕೊಳ್ಳುವುದಕ್ಕಾಗಿ ಮತ್ತು ಇದಕ್ಕೆ ಸರಿಯಾದ ಉತ್ತರವನ್ನೂ ಕೊಡುವುದಕ್ಕೆ ಸಾಧ್ಯವಿದೆ. ಹಾಗೆ ಉತ್ತರ ಹೇಳುವುದಕ್ಕೆ ಹಿಂದು ಮುಂದು ನೋಡಿ ಪ್ರಶ್ನೆಗೆ ಉತ್ತರ ಕೊಡದೇ ಇರುವಾಗ ಈ ಸಭೆಯ ಹಕ್ಕುಬಾಧ್ಯತೆಗಳಿಗೆ ಮೊಟಕುಮಾಡಿದಂತಾಗ ಲಿಲ್ಲವೇ, ಇದನ್ನು ತಾವು ಪರಿಶೀಲನೆ ಮಾಡಬೇಕು. ಇದಕ್ಕಾಗಿ ನಾವು ಅಧ್ಯಕ್ಷರ ರಕ್ಷಣೆಯನ್ನು ಕೇಳಿದಾಗ ತಾವು ಅಂತಹ ಪದಗಳನ್ನು ಎಕ್ಸ್‌ಪಂಜ್ ಮಾಡುತ್ತೇವೆ ಎಂದು ಹೇಳುತ್ತೀರಿ. ಇದಕ್ಕೆ ಬದಲು ತಾವು ಆ ಉತ್ತರ ಬರಲು ಸಹಾಯ ಮಾಡಬೇಕು ಮತ್ತು ಅದನ್ನು ಸದಸ್ಯರಿಗೆ ದೊರಕಿಸಿ ಕೊಡಬೇಕು. ಈ ಅಧಿಕಾರಿಯ ವಿಷಯ ಹಿಂದೆ ಒಂದು ಸಂದರ್ಭದಲ್ಲಿ ಚರ್ಚೆಯೂ ಆಗಿದೆ. ಹೀಗೆ ಆಗಿರತಕ್ಕ ಅಧಿಕಾರಿಯ ವಿಚಾರವನ್ನು ತಪ್ಪು ಎಂದು ಹೇಳಿದರೆ ಮತ್ತು ಪ್ರಶ್ನೋತ್ತರದ ಕಾಲದಲ್ಲಿ ತಾವು ಈ ರೀತಿ ಮೊಟಕು ಮಾಡಿದರೆ ಅದು ಸರಿಯಾಗುವುದಿಲ್ಲ. ನಮಗೆ ಇಂತಹ ಒಂದು ಸಂದರ್ಭ ದಲ್ಲಿ ತಾವು ಸರಿಯಾದ ಮಾರ್ಗದರ್ಶನವನ್ನು ಕೊಡಬೇಕು ಎಂದು ತಮ್ಮಲ್ಲಿ ಹೇಳಲು ಇಚ್ಛಿಸುತ್ತೇನೆ.

† ಶ್ರೀ ಕೆ. ಹೆಚ್. ಶ್ರೀನಿವಾಸ.—ಸ್ವಾಮಿ, ಈ ಸಭೆಯಲ್ಲಿ ಶ್ರೀಮಾನ್ ನಂಜೇಗೌಡರು ಕ್ರಿಯಾಲೋಪ ಎತ್ತಿದಾಗ ಅದನ್ನು ಪ್ರಶ್ನೋತ್ತರ ಕಾಲದಲ್ಲಿ ಎತ್ತಲಾಗದು ಎಂದೂ ತಾವು ಹೇಳಿದಿರಿ. ಪ್ರಶ್ನೆಗೆ ಸರಿಯಾದ ರೀತಿಯಲ್ಲಿ ಉತ್ತರ ಕೊಡಲಿಲ್ಲ ಇನ್‌ಫಾರ್ಮೇಷನ್ ಮುಚ್ಚಲಿಕೆ ಪ್ರಯತ್ನ ಮಾಡಿದ್ದಾರೆ, ಎಂದರೆ ಪ್ರಶ್ನೆಗಳಿಗೆ ಸರಿಯಾದ ಉತ್ತರ ಬರಲಲ್ಲ ಎನ್ನುವ ಒಂದು ಉದ್ದೇಶ ದಿಂದಲೇ ಈ ಕ್ರಿಯಾಲೋಪವನ್ನು ಶ್ರೀಮಾನ್ ನಂಜೇಗೌಡರು ಇಲ್ಲಿ ಎತ್ತಿದ್ದಾರೆ. ನಮ್ಮ ಮುಂದಿರುವ ಪ್ರಶ್ನೆಯಲ್ಲಿ ಕೇಳಿರುವುದಾದರೂ ಏನು ಎಂದರೆ :

(e) whether the Managing Director is a retired Government servant and if so, his special qualification to get him reappointment ?
ಇದಕ್ಕೆ ಉತ್ತರವಾಗಿ ಅವರೇ ಇಲ್ಲಿ ಹೇಳಿದ್ದಾರೆ, ಅದು ಹೀಗಿದೆ :

(ಶ್ರೀ ಕೆ. ಎಚ್. ಶ್ರೀನಿವಾಸ)

(e) Yes. Administrative and Managerial experience in Industrial concern.

ಇವರು ರಿಟೈರ್ಡ್ ಗವರ್ನ್‌ಮೆಂಟ್ ಸರ್ವೆಂಟೇ ಮತ್ತು ಇವರ ಕ್ವಾಲಿಫಿಕೇಷನ್‌ಗಳೇನು ಮತ್ತು ಮ್ಯಾನೇಜಿಂಗ್ ಡೈರೆಕ್ಟರಾಗಿ ಎಷ್ಟು ವರ್ಷಗಳಿಂದ ಇದ್ದಾರೆ ಎನ್ನುವುದೆಲ್ಲಾ ಸಪ್ಲಿಮೆಂಟರಿ ಪ್ರಶ್ನೆಗಳಾಗಿ ಕೇಳಿದ್ದಾರೆ. ಅದಕ್ಕೆ ಬಹುಶಃ ಸಚಿವರೂ ಸರಿಯಾದ ಉತ್ತರ ಕೊಟ್ಟಿದ್ದಾರೆ. ಅಲ್ಲದೆ ಇವರು ಇನ್‌ಎಕ್ಸ್‌ಪೀರಿಯನ್ಸ್‌ಡ್ ಆಗಿದ್ದರು ಇದರಿಂದ ಇಲ್ಲಿ ಮಾಡಿದ ಯೋಜನೆಗಳು ಸರಿಯಾಗಲಿಲ್ಲ ಎನ್ನುವುದನ್ನು ಇಲ್ಲಿ ಸಾಧನೆ ಮಾಡಬೇಕಾದ ಅಗತ್ಯವಿಲ್ಲ. ಇದನ್ನು ಪ್ರಸ್ತಾಪ ಮಾಡಲಿಕ್ಕೆ ಬೇಕಾದಷ್ಟು ಅವಕಾಶ ಇದೆ. ಆದರೆ ಇಲ್ಲಿ ಶ್ರೀಮಾನ್ ಹೆಚ್. ಎನ್. ನಂಜೇಗೌಡರು ಎತ್ತಿರತಕ್ಕಂಥ ಕ್ರಿಯಾಲೋಪಕ್ಕೆ ಎಷ್ಟು ಉತ್ತರ ಕೊಟ್ಟರೂ ಸಾಲದು. ಈ ಪ್ರಶ್ನೆಯನ್ನು ಕೇಳಿರತಕ್ಕಂಥವರು ಯಾವ ಉದ್ದೇಶದಿಂದ ಈ ಪ್ರಶ್ನೆಯನ್ನು ಕಳುಹಿಸಿದ್ದಾರೆ? ಅವರ ಮನಸ್ಸಿನಲ್ಲಿರುವ ಉದ್ದೇಶವನ್ನು ಕಲ್ಪಿಸಿಕೊಂಡು ಉತ್ತರ ಕೊಡಬೇಕು ಎಂದು ಈ ಕ್ರಿಯಾಲೋಪ ಎತ್ತಿದ್ದಾರೆ ಅದು ಸಾಧುವಾದುದಲ್ಲ.

2–30 P.M.

ಶ್ರೀ ವೀರೇಂದ್ರ ಪಾಟೀಲ್.—ಈ ಮಾನ್ಯ ಸಭೆ ಒಪ್ಪಿದರೆ, ತಾವೂ ಒಪ್ಪಿದರೆ ಈಗಾಗಲೇ 2½ ಗಂಟೆ ಆಗಿದೆ. ಈ ವಸ್ತುಪ್ರದರ್ಶನದ ಮೇಲೆ 2½ ಗಂಟೆ ಚರ್ಚೆ ಆಗಬೇಕಾಗಿದೆ. ಅದು ಆದಮೇಲೆ ಈವೊತ್ತು ಪಿ.ಡಬ್ಲ್ಯು.ಡಿ. ಮತ್ತು ಎಲೆಕ್ಟ್ರಿಸಿಟಿ ಬೋರ್ಡ್ ಬಗ್ಗೆ ಅನೇಕ ಡಿಮ್ಯಾಂಡ್‌ಗಳು ಇವೆ. ಈ ಡಿಮ್ಯಾಂಡ್ ಮೇಲೆ ಅನೇಕ ಮಾನ್ಯ ಸದಸ್ಯರುಗಳು ಚರ್ಚೆ ಮಾಡುವ ಕುತೂಹಲ ಇಟ್ಟು ಕೊಂಡಿದ್ದಾರೆ. ತಮ್ಮ ತಮ್ಮ ಕ್ಷೇತ್ರಕ್ಕೆ ಸಂಬಂಧಪಟ್ಟ ಅನೇಕ ಸಮಸ್ಯೆಗಳನ್ನು ಈ ಮಾನ್ಯ ಸಭೆಯ ಮುಂದೆ ಇಟ್ಟು ಚರ್ಚೆ ಮಾಡಿ ಸರ್ಕಾರದ ಉತ್ತರವನ್ನು ನಿರೀಕ್ಷಿಸುತ್ತಿದ್ದಾರೆ ಮತ್ತು ಆ ಕಾಲವನ್ನು ಎದುರು ನೋಡುತ್ತಿದ್ದಾರೆ. ಆದುದರಿಂದ ಈಗ ತಮ್ಮ ಮುಂದೆ ಬಂದಿರುವ ಪ್ರಶ್ನೆಗೆ ರೂಲಿಂಗನ್ನು ನಾಳೆ, ನಾಳಿದ್ದು ಕೊಟ್ಟು ಈಗ ಮುಂದಿನ ಕಾರ್ಯಕ್ರಮವನ್ನು ತೆಗೆದುಕೊಂಡರೆ ನಮ್ಮ ಮುಂದೆ ಇರತಕ್ಕಂಥ ಕೆಲಸವನ್ನು ಮುಗಿಸುವುದಕ್ಕೆ ಸಾಧ್ಯವಾಗುತ್ತದೆ. ಒಂದುವೇಳೆ ಈ ಮನೆಯವರು ಈ ವಸ್ತುಪ್ರದರ್ಶನದ ವಿಚಾರವೇ ಮುಖ್ಯ ಎನ್ನುವುದಾದರೆ ಇವೊತ್ತೇ ಚರ್ಚೆ ಮಾಡೋಣ. ನನ್ನ ಅಭ್ಯಂತರವಿಲ್ಲ.

Sri G. DUGGAPPA.—We are not at all anxious about the Budget debate. We know what kind of attention Government give to the points raised by the Members of this House. I have been here since 1952. Please refer to the proceedings and see the reply given by the Ministers. The Ministers in charge of Finance Department have not referred to the points raised by the Members of this hon. House. So we have lost that anxiety to listen to the reply of the Ministers. We feel that the Government will not make any pointed reference to many points raised in this House and give replies. Therefore, that anxiety to hear replies to the several points raised by us, is not there.

† ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷರೇ, ಈಗ ನಮ್ಮ ಮುಂದೆ ಎರಡು ಪ್ರಶ್ನೆ ಇವೆ. (1) ಕ್ರಿಯಾಲೋಪವನ್ನು ಎತ್ತುವುದು ಏತಕ್ಕೆ? ಮತ್ತು ಬಳಸಬೇಕಾದಂಥ ಭಾಷೆ ಯಾವುದು ಇರಬೇಕು? (2) ಯಾವ ಯಾವ ಶಬ್ದಗಳನ್ನು ಎಕ್ಸ್‌ಪಂಜ್ ಮಾಡುವುದಕ್ಕೆ ಅಧ್ಯಕ್ಷರಿಗೆ ಎಷ್ಟು ಅಧಿಕಾರ ಇದೆ? (3) ಶ್ರೀಮಾನ್ ವೀರೇಂದ್ರ ಪಾಟೀಲರು ಒಂದು ದೊಡ್ಡ ಮಾತು ಹೇಳಿದರು. ತಾನು ಏನೋ ಮಹತ್ತರವಾದ ಆಯವ್ಯಯವನ್ನು ಚರ್ಚೆಮಾಡಿ ದೇಶದ ರಕ್ಷಣೆ ಮಾಡಲಿಕ್ಕೆ ಹೊರಟಿರುವಂತೆಯೂ ವಿರೋಧಪಕ್ಷದಲ್ಲಿ ಕುಳಿತಿರುವವರೆಲ್ಲರೂ ದೇಶದ ರಕ್ಷಣೆ ಪ್ರಶ್ನೆ ಇಲ್ಲದೆ ಜನತೆಯ ಕಲ್ಯಾಣದ ಪ್ರಶ್ನೆಯೇ ಇಲ್ಲದೆ ಈ ಸಭೆಗೆ ಕಾಲಹರಣ ಮಾಡುವುದಕ್ಕೆ ಬಂದಿದ್ದಾರೆ ಎಂದು. ಶ್ರೀಮಾನ್ ಚೆನ್ನಬಸಪ್ಪನವರು ಮತ್ತು ಶ್ರೀಮಾನ್ ದುಗ್ಗಪ್ಪನವರು ಹೊಸದಾಗಿ ಕಲತು

ಕೊಳ್ಳಬೇಕಾದ್ದೂ ಏನೂ ಇಲ್ಲ. ಪಾರ್ಲಿಮೆಂಟರಿ ಪ್ರಾಕ್ಟೀಸನ್ನು ನಾವೂ ಓದಿದ್ದೇವೆ, ನೀವೂ ಓದಿದ್ದೀರಿ. ಹೇಗೆ ಶಬ್ದಗಳನ್ನು ಉಪಯೋಗಿಸಬೇಕು ಎನ್ನುವುದು ನಮಗೆ ಗೊತ್ತಿದೆ. ಸುಳ್ಳು ಹೇಳಬಾರದು ಎಂದು ಇದೆ. ಸುಳ್ಳು ಎನ್ನುವುದು ಸತ್ಯಕ್ಕೆ ದೂರವಾದ ಮಾತು ಎಂದು ಆ ಕಾಲದಲ್ಲಿ ಇತ್ತು. ಸುಳ್ಳನ್ನು ಸುಳ್ಳು ಎಂದು ಹೇಳಬೇಕಾಗುತ್ತದೆ, ವ್ಯಭಿಚಾರವನ್ನು ವ್ಯಭಿಚಾರ ಎಂದು ಹೇಳಬೇಕಾಗುತ್ತದೆ ನಾನು ಅದನ್ನು ಹಾದರ ಎಂದು ಹೇಳುತ್ತೇನೆ, ಸಂಸ್ಕೃತದಲ್ಲಿ ವ್ಯಭಿಚಾರ ಎಂದು ಹೇಳುತ್ತಾರೆ. ಆದುದರಿಂದ ಇದುವರೆಗಿನ ಪಾರ್ಲಿಮೆಂಟರಿ ಇತಿಹಾಸದಲ್ಲಿ ಯಾವ ಯಾವ ಶಬ್ದ ಎಲ್ಲೆಲ್ಲಿ ಬಳಕೆ ಮಾಡಿದರೆ ಅದು ಸಂಸದೀಯ ಶಬ್ದ ಅಲ್ಲ ಎನ್ನುವುದನ್ನು ಈಗಾಗಲೇ ಬಹಳ ಜನ, ತಮ್ಮಂಥ ಅಧ್ಯಕ್ಷರುಗಳು ನಿರ್ಣಯ ಕೊಟ್ಟಿದ್ದಾರೆ. ನಾನು ಅರ್ಥ ಮಾಡಿಕೊಳ್ಳಬಲ್ಲೆ. ಸಮಯ ಬೇರೆ ವಿಷಯಕ್ಕೆ ಹಾಳಾಗುವುದು ಬೇಡ ಎಂದು ಶ್ರೀಮಾನ್ ಸಾಗರದ ಸದಸ್ಯರು ಕೆಲವು ಮಾತುಗಳ ಬುದ್ಧಿವಾದ ಹೇಳುವುದಕ್ಕೆ ಪ್ರಯತ್ನಪಟ್ಟರು. ಶ್ರೀಮಾನ್ ನಂಜೇ ಗೌಡರ ಧ್ವನಿ ಮತ್ತು ಮಾತು ಕರ್ಕಶ ಹಾಗೂ ಕಠಿಣವಿರುತ್ತದೆ. ಅದರ ಹಿಂದೆ ಇರತಕ್ಕ ಕಳಕಳಿ ಯನ್ನು ನಾವು ತಿಳಿದುಕೊಳ್ಳಬೇಕಾಗುತ್ತದೆ. ಇಲ್ಲಿ ಒಂದೇ ಒಂದು ಪಾಯಿಂಟ್ ತಾವು ಹೇಳ ಬಹುದಾಗಿತ್ತು. ಈ ಸಭೆಯಲ್ಲಿ ತನ್ನನ್ನು ತಾನು ರಕ್ಷಿಸಿಕೊಳ್ಳಲಾರದವನ ಬಗೆಗೆ ಕಟು ಟೀಕೆ ಸಲ್ಲದು ಎಂದು ಎಲ್ಲೋ ಒಂದು ಕಡೆ ಯಾರೋ ಒಂದು ರೂಲಿಂಗ್ ಕೊಟ್ಟಿದ್ದಾರೆ. ಆದರೆ ಕಳ್ಳನನ್ನು ಕಳ್ಳ ಎಂದು ಹೇಳಲೇಬೇಕಾಗುತ್ತದೆ, ಸುಳ್ಳನನ್ನು ಸುಳ್ಳ ಎಂದು ಕರೆಯಬೇಕಾಗುತ್ತದೆ, ಭ್ರಷ್ಟಾಚಾರವನ್ನು ಭ್ರಷ್ಟಾಚಾರ ಎಂದು ಕರೆಯಬೇಕಾಗುತ್ತದೆ. ಎಲ್ಲ ವ್ಯವಹಾರವನ್ನೂ ವಿಚಾರ ಮಾಡುವ ಹೊಣೆಯನ್ನು ಹೊತ್ತಿರತಕ್ಕ ಇಂಥ ಒಂದು ಸಭೆಯಲ್ಲಿ ಶ್ರೀ ವೀರೇಂದ್ರ ಪಾಟೀಲರು ಎರಡೂವರೆ ಕೋಟಿ ಜನತೆಯ ಕಲ್ಯಾಣವನ್ನು ಹಾಗೂ ಅವರ ಹೊಣೆಯನ್ನು ಹೊತ್ತಿರತಕ್ಕವರು ಕುಳಿತಿರತಕ್ಕ ಸಭೆಯಲ್ಲಿ ಘನತೆ, ಗಾಂಭೀರ್ಯ, ಸತ್ಯ ಇವುಗಳನ್ನು ಎತ್ತಿ ಹಿಡಿಯಲೇ ಬೇಕಾಗುತ್ತದೆ, ತಾವು ಎತ್ತಿ ಹಿಡಿಯಬೇಕಾಗುತ್ತದೆ. ತಮ್ಮ ವರ್ತನೆಯನ್ನು ನಾನು ಈವೊತ್ತು ಬಹಳ ಆಸಕ್ತಿಯಿಂದಲೇ ನಿರೀಕ್ಷಿಸುತ್ತಿದ್ದೇನೆ. ನನಗೆ ಸ್ವಲ್ಪ ರಕ್ತದ ಒತ್ತಡ ಜಾಸ್ತಿ ಇದೆ. ಶ್ರೀಮಾನ್ ನಂಜೇಗೌಡರು ಹೇಳಿದ ಮಾತನ್ನು ಗಮನವಿಟ್ಟು ಕೇಳುತ್ತಲೇ ಇದ್ದೇನೆ. ಅವರು ಉಪಯೋಗಿಸಿದ ಪದಕ್ಕೆ ಏನು ಶಬ್ದ ಹಾಕಬಹುದು ಎಂದು ಶ್ರೀ ಬಂಗಾರಪ್ಪನವರು ಹೇಳಿ ಕನ್ನಡಿಸಿದ್ದಾರೆ.

ಇನ್ನು ಮೂರನೆ ಪಾಯಿಂಟಿಗೆ ಉತ್ತರ ಕೊಡುತ್ತೇನೆ. ಶ್ರೀಮಾನ್ ವೀರೇಂದ್ರ ಪಾಟೀಲರು ಈ ರಾಜ್ಯದ ಮುಖ್ಯ ಮಂತ್ರಿಗಳಾಗಿ ತಮ್ಮ ಜವಾಬ್ದಾರಿಯನ್ನು ತಾವು ನಿರ್ವಹಿಸಲಿ. ನಮಗೆ ಇಷ್ಟಬಂದರೆ ಸಹಕಾರ ಕೊಡುತ್ತೇವೆ. ಯಾವ ಕೆಲಸಕ್ಕೆ ಕೊಡಬೇಕು ಎನ್ನುವುದು ನಮಗೆ ಬಿಟ್ಟಿದ್ದು. ವಿರೋಧ ಮಾಡುವಾಗ ವಿರೋಧ ಮಾಡುತ್ತೇವೆ. ಅವರು ನಿನ್ನೆ ಹೇಳಿದರು, ದೊಡ್ಡ ಮಾತೊಂದು. ಯಾವ ಮಂತ್ರಿಗಳೂ ಸಭೆ ನಡೆಯುವಾಗ ಹೊರಗೆ ಹೋಗಬೇಡಿ ಎಂದು ಹೇಳಿದ್ದೇನೆ ಎಂದು. ಅದರಂತೆ ಶ್ರೀ ಕೌಜಲಗಿ ಅವರು ಬೇರೆಯವರೂ ಹೋಗಿರಲಾರರು ಎಂದು ಹೇಳಿದರು. ಈವೊತ್ತು ಒಬ್ಬ ಮಂತ್ರಿಗಳು ಮಧುಗಿರಿಗೆ ಹೋಗಿದ್ದಾರೆ, ತಾವೇ ನಾಳೆ ಡೆಲ್ಲಿಗೆ ಹೋಗುವುದಾದರೆ ಹೇಗೆ! ಸುಳ್ಳು ಹೇಳುವುದಕ್ಕೂ ಒಂದು ಮಿತಿ ಬೇಕು ; ಭ್ರಷ್ಟಾಚಾರಕ್ಕೂ ಒಂದು ಮಿತಿ ಬೇಕು. ನಾವೇ ಇಲ್ಲಿ ಘನ, ಗಂಭೀರ್ಯ ಕಾಪಾಡಿಕೊಳ್ಳಲು ಶಕ್ತರೂ, ಅರ್ಹರೂ ಆಗಿರಬೇಕು. ಆದುದರಿಂದ ತಾವು ಏಕಾಏಕಿ ಒಂದು ದೊಡ್ಡ ಅಪಾದನೆಯನ್ನು ಮಾಡಿ, ಈ ವಿರೋಧ ಪಕ್ಷವನ್ನು—ತಮಗೆ ಎಷ್ಟು ಜನ ವೋಟು ಕೊಟ್ಟಿದ್ದಾರೆ ವಿರೋಧ ಪಕ್ಷದವರಿಗೂ ಅಷ್ಟೇ ಜನ ವೋಟು ಕೊಟ್ಟಿದ್ದಾರೆ, ಅದಕ್ಕಿಂತ ಹೆಚ್ಚಾಗಿ ಕೊಟ್ಟಿದ್ದಾರೆ. ಜನತೆ ಪೂರ್ತಿ ತಮ್ಮ ಹಿಂದೆ ಇದೆ ಎನ್ನುವ ಭ್ರಮೆ ತಮಗೆ ಇರಬಾರದು. ಅಧ್ಯಕ್ಷರಿಗೆ ಹೇಳುತ್ತೇನೆ, ಮುಖ್ಯ ಮಂತ್ರಿಗಳಿಗೆ ಹೇಳುತ್ತೇನೆ, ವಿರೋಧ ಪಕ್ಷದವರನ್ನು ನಿಕೃಷ್ಟ ದೃಷ್ಟಿಯಿಂದ ನೋಡುವವರಿಗೂ ಹೇಳುತ್ತೇನೆ. ಈ ಮಾನ್ಯ ಸಭೆಯಲ್ಲಿ ಸ್ವಲ್ಪ ಜವಾಬ್ದಾರಿಯನ್ನು ಅರಿತು ನಿಯೋಜಿತ ಪ್ರಶ್ನೆಗಳಿಗೆ ಉತ್ತರ ಕೊಡುವಾಗ ಬಹಳ ಯೋಚನೆ ಮಾಡಿ ಉತ್ತರ ಕೊಡ ಬೇಕು. ನಾನು ಮೊನ್ನೆಯೂ ಕೂಡ ಶ್ರೀ ವಾಟಾಳ್ ನಾಗರಾಜ್ ಅವರು ಇದೇ ರೀತಿ ಪ್ರಶ್ನೆ ಎತ್ತಿದುದನ್ನು ಕಂಡೆ. ಮನಸ್ಸಿಗೆ ಬಂದಂಥ ಉತ್ತರ ಕೊಡಬೇಡಿರಿ. ಶ್ರೀಮಾನ್ ಬಿ. ಎಲ್. ಗೌಡರು ಯಾವ ಒಬ್ಬ ಅಧಿಕಾರಿಯ ಬಗ್ಗೆ ಮಾತನಾಡಿದ್ದರೋ ಅದೇ ಅಧಿಕಾರಿಯ ಬಗ್ಗೆ ಶ್ರೀ ನಂಜೇ ಗೌಡರು ಮಾತನಾಡಿದ್ದಾರೆ ಅವರು ತಮ್ಮ ನೆಂಟರೇ, ಸಂಬಂಧೀಕರೇ ? ತಮಗೆ ಕೋಪ ಏಕೆ ಬರಬೇಕು ? ತಮ್ಮ ಸಂಬಂಧೀಕನೇ ? ಭ್ರಷ್ಟನನ್ನು ಭ್ರಷ್ಟ ಎಂದು ಕರೆದರೆ ಕೋಪ ಏಕೆ ಬರಬೇಕು ?........

ಅಧ್ಯಕ್ಷರು.—ಕೋಪ ಏನೂ ಬರಲಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಆದ್ದರಿಂದ ನಾನು ತಮ್ಮಲ್ಲಿ ಅತಿ ನಮ್ರತೆಯಿಂದ ವಿನಂತಿ ಮಾಡುತ್ತೇನೆ, ಈ ಸಭೆಗೆ ಆರಿಸಿ ಬಂದಿರುವವರಲ್ಲಿ ಕೆಲವರು ಬಿಸಿ ರಕ್ತದವರಿದ್ದಾರೆ, ಅವರು

(ಶ್ರೀ ಎಸ್. ಗೋಪಾಲಗೌಡ)

ಕಾತುರರಾಗಿರುತ್ತಾರೆ. ಅವರನ್ನು ಜನರು ಆಡಳಿತ ಪಕ್ಷದವರನ್ನು ಹೇಗೆ ಆರಿಸಿ ಈ ಮನೆಗೆ ಕಳಿಸಿದ್ದಾರೋ ಅದೇ ರೀತಿಯಲ್ಲಿ ಆರಿಸಿ ಕಳಿಸಿದ್ದಾರೆ. ಆದುದರಿಂದ ಈ ವಿಚಾರದಲ್ಲಿ ಸಂದೇಹವಿರಬೇಕಾಗಿಲ್ಲ. ತಾವು ರೂಲಿಂಗ್ ಕೊಡುವಾಗ ಮಾನ್ಯ ಚನ್ನಬಸಪ್ಪನವರು ಹೇಳಿದಹಾಗೆ ತಾವು ವಿಚಾರಮಾಡಿ, ಮಾನ್ಯ ಸದಸ್ಯರ ಹಕ್ಕುಬಾಧ್ಯತೆಗಳನ್ನು ಎತ್ತಿಹಿಡಿದು ನಿಷ್ಪಕ್ಷಪಾತವಾಗಿ ವರ್ತಿಸಿ ಎಲ್ಲರಿಗೂ ಸಮಾಧಾನವಾಗುವಂತೆ ಕೊಡಬೇಕು ಎಂದು ಕೇಳಿಕೊಂಡು ಈ ಪ್ರಸಂಗವನ್ನು ತಮ್ಮ ಇಷ್ಟಬಂದಹಾಗೆ ಮುಗಿಸಬಹುದು, ನಮ್ಮ ಕಡೆ ಸದಸ್ಯರು ಎಷ್ಟೋ ಜನರು, ಬಣಕಾರ್ ಮುಂತಾದವರು ಹೇಳಬೇಕೆಂದಿರುವುದು ಇಷ್ಟೇ ಎಂದು ಭಾವಿಸುತ್ತೇನೆ. ಹೊಸ ಪಾಯಿಂಟ್ ಇದ್ದರೆ ಹೇಳುವುದಕ್ಕೆ ಅವಕಾಶ ಕೊಡಬಹುದು. ಏಕೆಂದರೆ ಪಾಯಿಂಟ್ ಆಫ್ ಆರ್ಡರ್ ಮೇಲೆ ರೂಲಿಂಗ್ ಕೊಡುವುದಕ್ಕೆ ಮುಂಚೆ ಎಲ್ಲರನ್ನೂ ಕೇಳಬೇಕು ಎಂದಿದೆ, ರೂಲಿಂಗ್ ಕೊಡವುದಕ್ಕೆ ಮುಂಚೆ ಸದ್ಯರ ಅಭಿಪ್ರಾಯ ತೆಗೆದುಕೊಳ್ಳಬಹುದು ಎಂದು ರೂಲ್ಸ್‌ನಲ್ಲಿದೆ. ಆದುದರಿಂದ ತೆಗೆದುಕೊಂಡಿದ್ದೀರಿ. ನನಗೆ ಇಷ್ಟು ಹೇಳಲು ಅವಕಾಶ ಕೊಟ್ಟಿದ್ದಕ್ಕೆ ನಾನು ಕೃತಜ್ಞನಾಗಿದ್ದೇನೆ. ಅದುದರಿಂದ ತಾವು ಕೂಡ ಸಭೆಯ ಕಾರ್ಯಕಲಾಪಗಳು ಗೊತ್ತಾಗಿರುವಂತೆ ನಡೆಯುವುದಕ್ಕೆ ಸಹಕರಿಸಬೇಕು ಎಂದು ಹೇಳಿ ಪ್ರಾರ್ಥನೆ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ತಾವು ರೂಲಿಂಗ್ ಕೊಡುವುದಕ್ಕೆ ಆಗಲೇ ಮನಸ್ಸು ಮಾಡಿರುವಂತೆ ಕಾಣುತ್ತದೆ. ನಾನಾದರೂ ಒಂದು ಸೂಚನೆ ಕೊಡಬೇಕೆಂದಿದ್ದೇನೆ. ಈ ದಿವಸ ಎತ್ತಿರುವ ವಿಚಾರ ಬಹಳ ಗಹನವಾದುದು. ಈ ಸಭೆಯಲ್ಲಿಲ್ಲದಿರುವ ವ್ಯಕ್ತಿಯ ವಿಚಾರವಾಗಿ ನಿಂದನೆ ಮಾಡುವಾಗ ಸಭಾಧ್ಯಕ್ಷರ ಕರ್ತವ್ಯವೇನು ಎಂದು ನಿರ್ಧಾರವಾಗಬೇಕಾದ್ದು ಒಂದನೆಯ ವಿಚಾರ, ಮತ್ತು ವ್ಯಕ್ತಿ ನಿಂದನೆ ಮಾಡುವ ಸನ್ನಿವೇಶ, ಹಿನ್ನೆಲೆ ಯಾವ ಸಂದರ್ಭದಲ್ಲಿ, ಹೇಗೆ ಉಂಟಾಯಿತು, ಹೇಗೆ ಮಾಡಿದರು ಎಂಬುದು ಎರಡನೆಯ ವಿಚಾರ. ಪ್ರಶ್ನೆಗಳಿಗೆ ಸರಕಾರದ ವತಿಯಿಂದ ಉತ್ತರ ಕೊಡುವಾಗ ಯಾರು ಯಾವ ಉತ್ತರ ಕೊಡಬೇಕೋ ಅದನ್ನು ಕೊಡುವುದಕ್ಕೆ ಧೈರ್ಯವಿಲ್ಲದೆ ಅದರಿಂದ ಇಕ್ಕಟ್ಟಿನ ಪರಿಸ್ಥಿತಿ ಬಂದರೆ ಅದನ್ನು ತಪ್ಪಿಸಿಕೊಳ್ಳಲು ಒಂದು ಮಾತು ಹೇಳುವುದು ಇಲ್ಲಿ ಅವಿಚ್ಛಿನ್ನವಾಗಿ ಬೆಳೆದುಕೊಂಡು ಬಂದಿದೆ. ಇದು ಮೂರನೆಯದು. ಇದಕ್ಕೆ ಔಷಧಿ ಕಂಡುಹಿಡಿಯುವುದಕ್ಕೆ ಸಾಧ್ಯವೇ ಎಂದು ವಿಚಾರಮಾಡಿ ಈ ಮೂರು ವಿಚಾರಕ್ಕೂ ರೂಲಿಂಗ್ ಕೊಡಬೇಕು ಆದುದರಿಂದ ತಾವು ಈ ದಿವಸ ಯೋಚನೆ ಮಾಡಿ ನಾಳೆ ಕೊಡುವುದು ಸೂಕ್ತ ಎಂದು ನನಗನ್ನಿಸುತ್ತಿದೆ. ಇಂದು ಬಹಳ ಜನ ನಮ್ಮ ಕಡೆ ಈ ವಿಚಾರದಲ್ಲಿ ಆಸಕ್ತರಾಗಿದ್ದಾರೆ. ಇಂದು ಸರಕಾರ ಕೆಲವು ವೇಳೆ ಕೊಡುವ ಉತ್ತರವನ್ನು ಯಾರೂ ಕೂಡ ಸಹಿಸುವುದಕ್ಕೆ ಸಾಧ್ಯವಿಲ್ಲ. ನಾವು ಪ್ರಜಾಪ್ರಭುತ್ವವನ್ನು ಬೆಳೆಸಬೇಕಾಗಿದೆ. ಆದುದರಿಂದ ಸುಮ್ಮನಿರಬೇಕಾಗಿದೆ, ಸರಕಾರದವರು ಮಾಡುತ್ತಿರುವುದನ್ನು ನೋಡಿ ಸುಮ್ಮನಿರುವುದಕ್ಕಾಗುವುದಿಲ್ಲ. ನಮ್ಮಲ್ಲಿರುವುದು ಪಾರ್ಲಿಮೆಂಟರಿ ಪ್ರಜಾಪ್ರಭುತ್ವ. ಅದು ಬೆಳೆಯಬೇಕು, ಬೇಕಾದರೆ ಸಲಹೆ ಕೊಡಲು ಸಿದ್ಧರಾಗಿದ್ದೇವೆ. ನಮ್ಮಲ್ಲಿ ಯಾವ ಸದಸ್ಯರೂ ಕೂಡ ವೈಯಕ್ತಿಕವಾಗಿ ಯಾರಮೇಲೂ ಕೂಡ ವೈಯಕ್ತಿಕವಾಗಿ ನಿಂದನೆ ಮಾಡುವ ಹವ್ಯಾಸವನ್ನಿಟ್ಟುಕೊಂಡಿಲ್ಲ. ಸರಕಾರಕ್ಕೆ ತಾವು ಬುದ್ಧಿವಾದ ಹೇಳಿ ನಮಗೆ ರಕ್ಷಣೆ ಕೊಡಬೇಕು. ಯಾರಮೇಲೂ ನಮಗೆ ವೈಯಕ್ತಿಕ ಆಕ್ರೋಶವಿಲ್ಲ ಎಂದು ಪುನಃ ಹೇಳುತ್ತೇನೆ. ಈ ವಿಚಾರದಲ್ಲಿ ಅಧ್ಯಕ್ಷರು ನಿಧಾನವಾಗಿ ಯೋಚನೆಮಾಡಿ ರೂಲಿಂಗ್ ಕೊಡಬೇಕು ಎಂದು ವಿನಂತಿ ಮಾಡಿಕೊಡುತ್ತೇನೆ.

MR. SPEAKER.—I accept the suggestion made by the Hon'ble the Leader of the Opposition and I shall give my considered ruling either tomorrow or on Monday.

Damages to the Raj Bhavan under construction

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಒಂದು ಬಹಳ ಗಂಭೀರವಾದ ಪ್ರಶ್ನೆ ಬಂದಿದೆ, ಅದೇನೆಂದರೆ ನನ್ನ ಗಮನಕ್ಕೆ ಜವಾಬ್ದಾರಿಯುತವಾದ ಜನರಿಂದ ತಿಳಿದು ಬಂದದ್ದು ಪಕ್ಕದಲ್ಲಿ ರಾಜಭವನ ಕಟ್ಟುತ್ತಾ ಇದ್ದಾರಲ್ಲಾ ಅಲ್ಲಿ ಹಾಲ್ ಕುಸಿದು ಬಿದ್ದಿದೆ ಎಂದು ತಿಳಿದು ಬಂದಿದೆ

ಸ್ಟ್ರೆಸ್ ಅಂಡ್ ಸ್ಟ್ರೇನ್ ಸರಿಯಾಗಿ ನೀಡದಿದ್ದರೆ ಕುಸಿದು ಬಿದ್ದು ಹೋಗುತ್ತದೆ. ಹಾಗಾಗಿ ಅದು ಕುಸಿದು ಬಿದ್ದಿದೆ, ಗವರ್ನರ್ ಸಾಹೇಬರು ಮೈಸೂರಿಗೆ ಹೋಗಿದ್ದರಂತೆ. ಅವರೂ ಸಹ ಅದನ್ನು ನೋಡಲಿಕ್ಕೆ ಓಡಿ ಬಂದರಂತೆ. ಅದಕ್ಕೆ ಸಂಬಂಧಪಟ್ಟ ಇಂಜನಿಯರು, ಸೂಪರ್‌ವೈಸರುಗಳು ಮತ್ತು ಇತರ ಉದ್ಯೋಗಸ್ಥರು ಯಾರಿದ್ದಾರೆ? ಇದನ್ನು ಯಾರಿಗೋ ಕಂಟ್ರಾಕ್ಟ್ ಕೊಡಲಾಗಿದೆ ಅವರಿಗೆ ಕೊಟ್ಟು ಹಣ ಖರ್ಚು ಮಾಡುತ್ತಾ ಇದ್ದೀರಿ. ಯಾವ ಕಂಟ್ರಾಕ್ಟರು ಈ ಹಣ ಖರ್ಚು ಮಾಡಿದ್ದಾರೆ, ಯಾವ ರೀತಿ ಕಟ್ಟಿದ್ದಾರೆ ಎನ್ನುವುದು ನಮಗೆ ಗೊತ್ತಿಲ್ಲ, ಎಷ್ಟು ಮೊಬಲಗಿಗೆ ಕೊಟ್ಟಿದ್ದೀರಿ ಎಂಬುದು ಗೊತ್ತಿಲ್ಲ.

ಅಧ್ಯಕ್ಷರು.—ನೋಟೀಸ್ ಕೊಟ್ಟ ಮೇಲೆ ಮಾನ್ಯ ಸಚಿವರು ಇನ್‌ಫರ್ಮೇಷನ್ ತರಿಸಿ ಹೇಳುತ್ತಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಇದು ಬಹಳ ಮುಖ್ಯವಾದ ಪ್ರಶ್ನೆಯಾದ್ದರಿಂದ ಮಾನ ಮುಖ್ಯಮಂತ್ರಿಗಳು ಇದರ ಬಗ್ಗೆ ಹೇಳಿಕೆ ಕೊಡಬೇಕೆಂದು ಹೇಳುತ್ತೇನೆ ಅಷ್ಟೆ.

ಅಧ್ಯಕ್ಷರು.—ಅದಕ್ಕೆ ನೋಟೀಸ್ ಕೊಡಬೇಕು, ತಾವು ಏನು ಕೇಳುತ್ತಿದ್ದೀರಿ ಅದರ ಬಗ್ಗೆ ಇನ್‌ಫರ್ಮೇಷನ್ ತರಿಸಿ ಹೇಳಬೇಕಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ಈ ಸ್ವತ್ತು ಸಾರ್ವಜನಿಕ ಸ್ವತ್ತು. ಸರ್ಕಾರ ಈ ದಿವಸ ಹಣ ಖರ್ಚು ಮಾಡುತ್ತಾ ಇದ್ದು ಯಾರೋ ಒಬ್ಬ ಕಂಟ್ರಾಕ್ಟರ್‌ಗೆ ಹಣ ಕೊಡುತ್ತಾ ಇದ್ದಾರೆ. ಆದ್ದರಿಂದ ಅದು ದುರ್ವಿನಿಯೋಗವಾಗಬಹುದು ಎಂಬ ದೃಷ್ಟಿಯಿಂದ ಹೇಳುತ್ತಾ ಇದ್ದೇನೆ. ರಾಜಭವನದಲ್ಲಿ ಗವರ್ನರ್ ಸಾಹೇಬರು ಇರಲಿಲ್ಲ. ಅವರಿಗೆ ಏನೂ ಆಗಲಿಲ್ಲ. ಆದರೆ ಅಲ್ಲಿ 80 ಜನ ಕೆಲಸ ಮಾಡುತ್ತಾ ಇದ್ದರು. ಆ ಜನಗಳಿಗೆ ಏನಾಯಿತು ಎಂಬುದು ಸರಿಯಾಗಿ ತಿಳಿದು ಬಂದಿಲ್ಲ. ಆ ಬಗ್ಗೆ ಒಂದು ಹೇಳಿಕೆಯನ್ನು ಮಾನ್ಯ ಮುಖ್ಯ ಮಂತ್ರಿಗಳು ಕೊಡಬೇಕೆಂದು ತಮ್ಮ ಮೂಲಕ ಅವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಿಕ್ಕಪೇಟೆ).—ತಾವು ನೋಟೀಸ್ ಕೊಡಿ ಎಂದು ಹೇಳುತ್ತೀರಿ. ನೋಟೀಸ್ ಕೊಡುವುದಕ್ಕೆ ಮುಂಚೆ ಇದು ನಡೆದುಹೋಗಿದೆ. ಅಲ್ಲಿ ಏನು ಅವ್ಯವಸ್ಥೆಯಾಗಿದೆ ಎಂಬುದರ ಬಗ್ಗೆ ಮಾನ್ಯ ಮಂತ್ರಿಗಳು ಇಲ್ಲಿ ಇದ್ದಾರೆ ಅವರು ತಕ್ಷಣ ಒಂದು ಹೇಳಿಕೆಯನ್ನು ಕೊಡಬೇಕೆಂದು ಹೇಳುತ್ತೇನೆ. ಇದಕ್ಕೇನೂ ನೋಟೀಸು ಬೇಕಾಗಿಲ್ಲ.

ಅಧ್ಯಕ್ಷರು :—ಯಾವುದೇ ಒಂದು ಕೆಲಸ ಮಾಡಬೇಕಾದರೂ ಒಂದು ಪದ್ಧತಿ ಬೇಕು. ಅವರು ಏನೇ ಹೇಳಬೇಕಾದರೂ ಕೂಡ ಸಮಾಚಾರ ತರಿಸಿಕೊಂಡು ಹೇಳಬೇಕಾಗುತ್ತದೆ. ಜವಾಬ್ದಾರಿಯುತವಾಗಿ ಹೇಳಬೇಕಾದರೆ ಅಂಥ ಒಂದು ಪ್ರೊಸೀಜರ್ ಇದೆ. ಮತ್ತು ಈ ವಿಷಯ ಇವತ್ತು ಅಜೆಂಡಾದಲ್ಲಿ ಇಲ್ಲ, ಇಲ್ಲದೇ ಇರುವ ವಿಷಯ ಈ ರೀತಿ ಮಾತನಾಡಲಿಕ್ಕೆ ಬರುವುದಿಲ್ಲ. ಅದಕ್ಕೋಸ್ಕರವೇ ಮಾನ್ಯ ಸದಸ್ಯರು ಯಾವುದಾದರೂ ಹೇಳಬೇಕಾದರೆ ರೂಲ್ 311ರ ಪ್ರಕಾರ ನೋಟೀಸ್ ಕೊಡಬೇಕು, ಕೊಟ್ಟರೆ ಲಿಬರಲ್ ಆಗಿ ಇಂಟರ್‌ಪ್ರಿಟ್ ಮಾಡಿ ಅವಕಾಶ ಕೊಡುತ್ತೇನೆ, ಅವರು ಉತ್ತರ ಕೊಡುವುದಾದರೆ ಕೊಡಲಿ ಬೇಡ ಅನ್ನುವುದಿಲ್ಲ.

Election of President, etc. of the Harihara Town Municipality

ಶ್ರೀ ಎಸ್. ಗೋಪಾಲಗೌಡ.—ತಾವು ಹೇಳಿದ ರೀತಿಯಲ್ಲಿ ನಿಯಮಾವಳಿಗಳ ಪ್ರಕಾರ ನಾನು ಮತ್ತು ನನ್ನ ಸಹೋದ್ಯೋಗಿಗಳು ಕೆಲವರು ಹರಿಹರ ಪೌರಸಭೆಯ ಅಧ್ಯಕ್ಷರ, ಉಪಾಧ್ಯಕ್ಷರ ಚುನಾವಣೆಯನ್ನು ಒಂದು ಗೊತ್ತಾದ ತಾರೀಖು ನಡೆಸುತ್ತೇವೆ ಎಂದು ಹೇಳಿ ಅಲ್ಲಿಯ ತಹಸೀಲ್ದಾರರು ಮತ್ತು ಚುನಾವಣಾ ಅಧಿಕಾರಿಯಾಗಿದ್ದವರು ಹೇಳಿ ಆ ಸದಸ್ಯರುಗಳಿಗೆಲ್ಲಾ ಸೂಚನಾಪತ್ರಗಳನ್ನು ಕೊಟ್ಟರು. ಆ ಚುನಾವಣೆಗಳು ನಡೆಯುವುದಕ್ಕೆ ಮುಂಚಿತವಾಗೇ ಆ ಹಿಂದೆ ಕೊಟ್ಟಿದ್ದ ನೋಟೀಸುಗಳಿಗೆ ಏನೇನೋ ಕುಂಟ ನೆಪಗಳನ್ನು ಒಡ್ಡಿ ಆ ಚುನಾವಣೆಗಳನ್ನು ನಡೆಸುವುದಕ್ಕಾಗುವುದಿಲ್ಲ, ತಾವು ಹಿಂದೇನು ಒಂದು ನೋಟೀಸನ್ನು ಕೊಟ್ಟು ಚುನಾವಣೆಗಳನ್ನು ನಡೆಸ

(ಶ್ರೀ ಎಸ್. ಗೋಪಾಲಗೌಡ)

ಲಾಗುತ್ತದೆಂದು ಹೇಳಿದ್ದರೋ, ಯಾವ ಕಾನೂನು ಪ್ರಕಾರ ನೋಟೀಸ್ ಕೊಡಲಾಗಿತ್ತೋ ಅದೇ ಕಾನೂನು ಪ್ರಕಾರ ಅದು ತಪ್ಪಾಗಿರುತ್ತೆ, ಆದುದರಿಂದ ಆ ಚುನಾವಣೆಗಳನ್ನು ರದ್ದುಪಡಿಸಲಾಗಿದೆ ಎಂದು ಹೇಳಿದ್ದು ಬಹುಶಃ ಆ ವೇಳೆಯಲ್ಲಿ ಅವೇಪಾರ್ಗದಲ್ಲಿ ನಮ್ಮ ರಾಜ್ಯದ ಮುಖ್ಯಮಂತ್ರಿಗಳೂ ಮತ್ತು ಅಖಿಲಭಾರತದ ಕಾಂಗ್ರೆಸ್ಸಿನ ಅಧ್ಯಕ್ಷರೂ ಹೋಗಬೇಕಾಗಿದ್ದುದರಿಂದ ಆ ತಹಶೀಲ್ದಾರರಿಗೆ ಈ ರೀತಿ ಆ ಚುನಾವಣೆಗಳನ್ನು ಮುಂದೂಡಲು ಒಂದು ತಿಳುವಳಿಕೆಯನ್ನು ಇವರು ಕೊಟ್ಟಿರಬಹುದು ಎಂಬ ಒಂದು ಸಂಶಯ ನಮ್ಮಲ್ಲಿ ಮೂಡಿದ್ದರಿಂದ ನಾನು ಇದೇ ವಿಚಾರದಲ್ಲಿ ಒಂದು ನೋಟೀಸನ್ನು ಕಳುಹಿಸಿ ಇದನ್ನು ಇಲ್ಲಿ ಚರ್ಚೆ ಮಾಡುವುದಕ್ಕೆ ಎರಡೂವರೆ ಗಂಟೆಗಳಿಗೆ ಮೀರದಂತೆ ಅಧ್ಯಕ್ಷರು ಅವಕಾಶ ಮಾಡಿಕೊಡಬೇಕೆಂದು ಕೋರಿ ಒಂದು ಸೂಚನೆಯನ್ನು ಕಳುಹಿಸಿದ್ದೇನೆ. ಹರಿಹರದ ಸದಸ್ಯರಾದ ಮಾನ್ಯ ಸಿದ್ದವೀರಪ್ಪನವರು ಇಲ್ಲಿಗೆ ಅಂದರೆ ಸಭೆಗೆ ಅವರ ಅನಾರೋಗ್ಯದ ನಿಮಿತ್ತ ಬರುವುದಕ್ಕಾಗಲಿಲ್ಲ. ಆದ್ದರಿಂದ ನಾನು ಅವರ ಪರವಾಗಿ ಈ ಸೂಚನೆಯನ್ನು ಅಧ್ಯಕ್ಷರ ಕಡೆಗೆ ಕೊಟ್ಟಿದ್ದೇನೆ. ಇದರ ವಿಚಾರದಲ್ಲಿ ನಮಗೆ ಇಲ್ಲಿ ಚರ್ಚೆ ಮಾಡುವುದಕ್ಕೆ ಕಾಲ್ ಅಟೆನ್‌ಷನ್ ಮೋಷನ್ ರೂಪದಲ್ಲಾಗಲೀ, ಷಾರ್ಟ್ ನೋಟೀಸ್ ರೂಪದಲ್ಲಾಗಲಿ ಅಡ್ಜರ್ನ್‌ಮೆಂಟ್ ರೂಪದಲ್ಲಾಗಲೀ, ಅಥವಾ ಅವಿಶ್ವಾಸ ನಿರ್ಣಯ ರೂಪದಲ್ಲಾಗಲೀ ಇದನ್ನು ಎರಡೂವರೆ ಗಂಟೆಗಳ ಕಾಲ ಇಲ್ಲ ಚರ್ಚೆ ಮಾಡುವುದಕ್ಕೆ ಅಧ್ಯಕ್ಷರು ಅವಕಾಶ ಕೊಡಬೇಕೆಂದೂ, ಇದು ಬಹಳ ಸಾಧುವಾಗಿದೆಯೆಂದೂ, ಸಾರ್ವಜನಿಕ ಪ್ರಾಮುಖ್ಯತೆಯುಳ್ಳದ್ದಾಗಿದೆಯೆಂದೂ ಅತಿಜರೂರಾದ ಸಮಸ್ಯೆಯಾಗಿದೆಯೆಂದೂ ಇತ್ತೀಚೆಗೆ ನಡೆದ ಘಟನೆಯಾಗಿದೆಯೆಂದೂ ಈ ಎಲ್ಲವನ್ನೂ ವಿಮರ್ಶೆ ಮಾಡಿ ಅಧ್ಯಕ್ಷರ ಕಡೆಗೆ ಕೊಡಲಾಗಿದೆ. ಇದನ್ನು ತಾವು ಅಂಗೀಕಾರ ಮಾಡಿ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ನಾನು ಈ ಎಲ್ಲ ಸದಸ್ಯರ ಪರವಾಗಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಜಿ. ದುಗ್ಗಪ್ಪ.—ಆ ಅರ್ಜಿಗೆ ರುಜುಹಾಕಿರುವವರಲ್ಲ ನಾನೂ ಒಬ್ಬ..........

ಅಧ್ಯಕ್ಷರು.—ಅದನ್ನು ನಾನು ನೋಡಿದ್ದೇನೆ.

ಶ್ರೀ ಜಿ. ದುಗ್ಗಪ್ಪ.—ಸರ್ಕಾರದವರು ದಿನವಹಿ ಆಡಳಿತದಲ್ಲಿ ಯಾವ ರೀತಿ ಕೈಹಾಕುತ್ತಿದ್ದಾರೆಂಬುದನ್ನು ಇಲ್ಲಿ ಚರ್ಚೆಮಾಡಬೇಕೆಂಬುದೇ ಇದರ ಮೂಲ ಉದ್ದೇಶ. ಅದಕ್ಕಾಗೇ ಈಗ ಈ ಸೂಚನೆಯನ್ನು ಅಧ್ಯಕ್ಷರ ಕಡೆಗೆ ಕಳುಹಿಸಲಾಗಿದೆ. ಅದನ್ನು ಚರ್ಚೆಮಾಡುವುದಕ್ಕೆ ಎಲ್ಲ ರೀತಿಯಿಂದಲೂ ಅವಕಾಶವಿದೆ. ಆದಕ್ಕೆ ಅಧ್ಯಕ್ಷರು ಅವಕಾಶ ಮಾಡಿಕೊಡಬೇಕೆಂದು ನನ್ನ ವಿನಂತಿ.

ಅಧ್ಯಕ್ಷರು.—ಮಾನ್ಯ ಗೋಪಾಲಗೌಡರು ಒಂದು ನೋಟೀಸನ್ನು ಕೊಟ್ಟಿದ್ದಾರೆ. ಅದು ನಮ್ಮ ಆಫೀಸಿಗೆ ಇವತ್ತಿನದಿವಸ 12 ಗಂಟೆಗೆ ಬಂದು ಮುಟ್ಟಿದೆ. ಅದು ಏನೋ ಪರಪಾಟಾಗಿ ನನ್ನ ಕಡೆಗೆ ಎರಡೂಮುಕ್ಕಾಲು ಗಂಟೆಗೆ ಬಂದಿತು. ಅದನ್ನು ಮಾಂಗ್ಮೂಲವಾಗಿ ನೋಡುವುದಕ್ಕೆ ನನಗೆ ಸಾಕಷ್ಟು ಅವಕಾಶ ಸಿಕ್ಕಲಿಲ್ಲ. ಅದನ್ನು ನಾನು ನೋಡಿದ ನಂತರ ಅವರ ಬಗ್ಗೆ ನನಗೆ ಕೆಲವು ಮಾಹಿತಿಗಳು ಬೇಕೆನಿಸಿತು. Rule 60 says :—"If the Speaker is satisfied, after calling for such information from the member who has given notice and from the Minister as he may consider necessary........." ಆದ್ದರಿಂದ ಇದರ ಸಂಬಂಧವಾಗಿ ಕೆಲವು ವಿಷಯಗಳ ಮೇಲೆ ಮಾಹಿತಿ ಕೇಳಬೇಕಾಗಿದೆ. ಮಾನ್ಯ ಸದಸ್ಯರು ಏನು ನೋಟೀಸ್ ಕೊಟ್ಟಿದ್ದಾರೋ ಅದಕ್ಕೆ ಪರ್ಮಿಷನ್ ಕೊಡಬೇಕೋ ಬಿಡಬೇಕೋ ಎಂಬುದನ್ನು ನಾಳೆ ತಮಗೆ ತಿಳಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಲೋಕೋಪಯೋಗಿ ಸಚಿವರು ಇಂದು ಇಲ್ಲಿ ಇದ್ದಾರೆ. ಅವರು ಈ ಸಭೆಗೆ ಭರವಸೆ ಕೊಡಲಿ.

ಶ್ರೀ ಎಂ. ನಾಗಪ್ಪ (ರಾಯಚೂರು).—ಈಗ ಮಾನ್ಯ ಶ್ರೀ ಕೃಷ್ಣನ್ ಅವರು ಏನು ಪ್ರಶ್ನೆ ಕೇಳಿದರೋ ಅದು ಸಾರ್ವಜನಿಕ ಪ್ರಾಮುಖ್ಯತೆ ಉಳ್ಳದ್ದು ರೂಲ್ 63ನೇ ಪ್ರಕಾರ ಇಂತಹ ವಿಷಯಗಳಿಗೆ ನೋಟೀಸ್ ಕೊಡಬೇಕೆಂದು ಏನೂ ಇಲ್ಲ. ಮಾನ್ಯ ಅಧ್ಯಕ್ಷರು ರೂಲ್ 63ನ್ನು ಓದಬೇಕು. ತಮ್ಮ ಅಪ್ಪಣೆ ಪಡೆದು ಮತ್ತು ತಮ್ಮ ಕನ್‌ಸೆಂಟ್ ತೆಗೆದುಕೊಂಡ ನಂತರ ತಾವು ಅದಕ್ಕೆ ಸಮಯ ಕೊಟ್ಟು ಮಂತ್ರಿಗಳಿಂದ ಉತ್ತರ ಪಡೆದುಕೊಳ್ಳಬಹುದು ಅಂತಹ ಸಂದರ್ಭದಲ್ಲಿ ನೋಟೀಸ್ ಕೊಡಬೇಕೆಂದಿಲ್ಲ. ತಮ್ಮ ಅಪ್ಪಣೆ ಮಾತ್ರ ಬೇಕು.

Rules 63 says :—

"(1) A member may, with the previous permission of the Speaker, call the attention of a Minister to any matter of urgent public importance and the Minister may make a brief statement or ask for time to make a statement at a later hour or date.

(2) There shall be no debate on such statement at the time it is made.

(3) Not more than one such matter shall be raised at the same sitting.

(4) In the event of more than one matter being presented for the same day, priority shall be given to the matter which is, in the opinion of the Speaker, more urgent and important.

(5) The proposed matter shall be raised after the questions and before the list of business is entered upon and at no other time during the sitting of the Assembly."

ಇದರೊಳಗೆ ನೋಟೀಸ್ ಕೊಡಬೇಕೆಂದು ಎಲ್ಲಿಯೂ ಇಲ್ಲ. ತಮ್ಮ ಅಪ್ಪಣೆ ಬೇಕು. ಆ ರೀತಿ ಅಪ್ಪಣೆ ಪ್ರಕಾರ ಪ್ರಶ್ನೆಯನ್ನು ಮಾನ್ಯ ಸದಸ್ಯರು ಎತ್ತಿದ್ದಾರೆ. ಮಂತ್ರಿಗಳು ಈಗ ಉತ್ತರ ಕೊಡಬಹುದು. ಒಂದು ಗಂಟೆ, 2 ಗಂಟೆಯಾದಮೇಲೆ ಉತ್ತರ ಕೊಡಬಹುದು. ಅಥವಾ ನಾಳೆ ಉತ್ತರ ಕೊಡಬಹುದು. ನೋಟೀಸ್ ಕೊಟ್ಟು ಇದನ್ನು ತರಬೇಕೆಂದು ಹೇಳುವುದು ರೂಲ್ 63ರ ಪ್ರಕಾರ ಸರಿಯಾಗಿಲ್ಲ. ಮಾನ್ಯ ಸದಸ್ಯರುಗಳು ಮಾತನಾಡುವುದಕ್ಕೆ ಸಮಯ ಬೇಕೆಂದು ಹೇಳಿದರೆ ಅಷ್ಟು ಸಮಯ ಕೊಟ್ಟು ಆಮೇಲೆ ಮಂತ್ರಿಗಳು ಉತ್ತರಿಸಬಹುದು.

Mr. SPEAKER. Hon'ble Member Sri Nagappa tells me that no notice is prescribed under Rule 63. In the first place, hon'ble Members Sriyuths Krishnan and Vatal Nagaraj raised a general point. Even as per Rule 63, previous permission of the Speaker should be taken, though there is no objection to the permission being taken orally or in writing. But the convention is that it should be in writing, and there is justification for this procedure. When a matter is raised, the Speaker cannot remember all the points that are made out so as to decide whether the matter is of definite public importance. The matter should not be left to be decided on the oral statements of the members. The matter to be of urgent public importance, should be of a definite nature. The matter cannot be vague. It should be reduced to writing. It is within my power to request the hon'ble member to state, exactly what he wants to raise. Before calling upon the Government to reply, previous notice or intimation by the Member is necessary, and the Government also require time to get the information from the concerned officers. Nobody can be taken by surprise.

Sri M. NAGAPPA.—Sir, before giving any such Ruling, I may please be heard. Sir, when Article 194 of the Constitution is very specific about this, why conventions should be applied ?

Mr. SPEAKER.—Permission should be sought in writing, and I shall consider the whole thing under Rule 63.

3-00 P.M.

Mahajan Commission Report—Adoption of

Sri B. P. KADAM (Karwar).—May I respectfully urge upon the Hon. Chief Minister to state what exactiy is the latest and considered stand of the Government on the Mysore-Mahar..shtra border dispute. Now that the respected people of integrity like Mr. Jaya Prakash Narayan have said that the Mahajan Commission has not followed any rigid principles, would it not be worthwhile for the Government of Mysore to take an objective view and have the solution of the border dispute on democratic principles, taking into consideration the wishes of the people, language, etc., and more so when the Government of India is controlled by the Congress party......

Sri K. H. SRINIVAS (Sagara).—On a point of order, Sir.

Sri B. P. KADAM.—Sir, more so when both the State Governments concern are being ruled by the same Congress party ? Further, may I also know from the Hon. Chief Minister, since he has already stated that the entire Mysore Legislature is solid behind the implementation of the Mahajan Commission's Report, whether the entire bulk of the legislators in the border areas have not opposed the Mahajan Commission's, Report, Sir?

Sri B. B. SAYANAK.—Sir, I support hon. Member Sri Kadam.

Sri K. H. SRINIVAS.—Sir, I am on a point of order...

Mr. SPEAKER.—What is the point of order ?

Sri K. H. SRINIVAS.—Sir, my point of order is that the matter referred to by the hon. Member Sri B. P. Kadam does not find a place in the agenda of this House for the day and hence, hon. Member Sri Kadam must not be allowed to make an elaborate statement on the matter.

Mr. SPEAKER.—The point raised by hon. Member Sri K. H. Srinivas is perfectly correct. I have already indicated that no matter should be raised which is not in the list of business for the day, except with the permission of the Speaker and I have also indicated that such permission could be sought under rule 312. Hon. Member Sri Kadam has not done so and I uphold the point of order raised by hon. member Sri K. H. Srinivas. I allowed Sri Kadam to speak because I did not know what he exactly wanted to say.

Sri S. M. GUREDDI.—I rise to a point of order. ಹಾಗಿದ್ದರೆ, ಯಾರು ಏನು ಬೇಕಾದರೂ ಹೇಳಬಹುದೇ, ಸ್ವಾಮಿ?

Sri V. N. PATIL.—On a point of order, Sir. When there is a point of order riased by an hon. Member, he should be heard.

Mr. SPEAKER.—There cannot be any point of orders, when the Chair is giving a ruling.

V-2 31 No9
N69-17 1-4
(B) 4862

I uphold the point of order raised by hon. Member Sri K. H. Srinivas and inform hon. Member Sri B. P. Kadam that if he wants to raise any matter he should have taken permission of the Chair. Secondly, this matter is being raised almost every day. The Hon. Chief Minister has made it very clear and I do not think there is any scope for further explanation. However, if hon. Member Sri Kadam wants to say anything, let him give notice in writing under rule 312. For the time being, I do not allow anything to be raised.

Sri B. P. GANGADHAR (Tumkur).–Sir, when the Assembly has already adopted a resolution and a statement in this respect has been made by the hon. Chief Minister, would it be right on the part of the hon. Chief Minister now to make another statement again in the matter?

Sri B. P. KADAM.—Sir, I want to know whether I am debarred from knowing the latest stand of the Government in the matter?

Mr. SPEAKER.—The hon. Member may give it in writing.

Sri V. N. PATIL (Humnabad).—Sir, I have not yet concluded my point of order. Now the question before this House is hon. Member Sri Kadam was expecting a statement from the hon. Chief Minister to the point raised by him. In the meanwhile, hon. Member Sri K. H. Srinivas raised a point of order. In all fairness to this House, it was necessary that hon. Memeber Sri Kadam should have yielded and the hon. Chair could also have asked the hon. Member Sri Kadam to yield and not to proceed with his statement. Now, the hon. Member Sri Kadam has explained what all he wanted to say. Secondly, the issue of Mahajan Commission's Report on the Mysore-Maharashtra border dispute has not become a closed chapter. This matter has been discussed on the floor of this House several times and a substantial motion also has been passed in this behalf by this hon. House. In view of all this, will it be fair on the part of the hon. Member Sri Kadam, the leader of M.E.S. to request the hon. Chief Minister to make a further statement or to explain the stand of the Mysore Government? Is it to serve the interest of some people who are working as supporters to Maharastra? The sense of this House on the Mahajan Commission's Report has already been taken...

Sri P. B. NANDIHALI (Uchagaon).—Sir, this issue is not at all closed.

Sri V. N. PATIL.—I am not yielding, Sir.

(Several memlers rose to speak)

ಶ್ರೀ ವಾಟಾಳ್ ನಾಗರಾಜ್.—ಮಹಾಜನ್ ಕಮಿಷನ್ ಬಗ್ಗೆ ಈ ಮಾನ್ಯ ಸಭೆ ಈಗಾಗಲೇ ತನ್ನ ಒಂದು ತೀರ್ಮಾನವನ್ನು ತೆಗೆದುಕೊಂಡಿದೆ. ಈಗ ಈ ಮಹಾರಾಷ್ಟ್ರ ಏಕೀಕರಣ ಸಮಿತಿಯ ಸದಸ್ಯರು ಪ್ರಚಾರಕ್ಕೋಸ್ಕರ ಇಲ್ಲಿ ಗಲಾಟೆ ಮಾಡುತ್ತಿದ್ದಾರೆ.

ಶ್ರೀ ಎಸ್ ಎಂ. ಗುರೆಡ್ಡಿ (ಮುದ್ದೇಬಿಹಾಳ್).—ಈಗ ಮಹಾರಾಷ್ಟ್ರ ಏಕೀಕರಣ ಸದಸ್ಯರು ಏನು ಹೇಳಿದ್ದಾರೆಯೋ ಅದನ್ನು ಎಕ್ಸ್‌ಪಂಜ್ ಮಾಡಬೇಕು.

Sri B. B. SAYANAK.—Who are you to dictate to the Chair?

Mr. SPEAKER.—I have heard hon. Member Sri V. N. Patil...

Sri V. N. PATIL.—I have not completed my point, Sir...

Mr. SPEAKER.—I have understood the hon. Member's point of order. Hon. Member's point is whatever is decided by the House should not be allowed to be re-opened, Hon. Members Sri V. N. Patil and Sri Vatal Nagaraj are anxious that the decision of the House should be respected. That is beyond doubt. Every decision of the House has got to be respected by all, even by those who have voted against it. That is the correct position. Now hon. Member Sri Kadam wanted to raise a point. I wanted him to give it in writing. Bearing in mind all the remarks and observations made by the hon. Members I will consider his request and there the matter should end.

Sri V. N. PATIL.—When it was a closed chapter, Sri K. H. Srinivas requested the Chair that it would not be proper to proceed with the matter further. The hon. Member did not stop his statement at that moment. Having recorded his statement, there would be no value for the point of order that was raised. All that has happened subsequent to the point of order becomes infructuous. Therefore, in all fairness, the proceedings subsequent to the raising of the point of orders should be expunged. That is one request of mine.

Sri B. P. KADAM. —How can the hon. Member dictate that ?

Sri V. N. PATIL.—The second thing is we are exercising our rights as representatives of the people.

Sri P. B. NANDIHALI.—We are doing the same thing also

Sri V. N. PATIL.—I request that it should be expunged, because whenever the Chief Minister goes to Delhi to discuss this matter, pressure is sought to be brought upon him.

Sri P. B. NANDIHALI.—It is our right.

Sri V. N. PATIL.—Actually when the problem is being discussed, when hon. Members are representing the interests of Mysore State in all earnestness without any emotion and saying what atrocities have been done by Shiv Sena, and when constructive suggestions are made in the best national interests, at that time Sri S. K. Patil says that the members are all arrogant men and the Speaker will assist the Chief Minister in the House. What is the respect, value or privilege this House has got, if it is not protected ? How can a person outside the House dictate terms ? He might be an ex-Minister and a Congressman. We do not want to allow Congressmen to play with the lives, properties and emotions of Kannadigas and they are not bundles of cotton to be thrown at the feet of Sri S. K. Patil or Shri Chavan.

Sri P. B. NANDIHALI.—We are there to protect the Kannadigas. We are not against them. We want our democratic feelings to be respected.

† ಶ್ರೀ ವಾಟಾಳ್ ನಾಗರಾಜ್.—ಸ್ವಾಮಿ, ಮಾನ್ಯ ಶ್ರೀ ಬಿ. ಎನ್. ಪಾಟೀಲ್‌ರವರು ಎತ್ತಿದಂತಹ ಕ್ರಿಯಾಲೋಪವನ್ನು ಸಮರ್ಥನೆ ಮಾಡುತ್ತಾ ತಮ್ಮ ಮುಂದೆ ಕೆಲವು ಮಾತುಗಳನ್ನು ಇಲ್ಲಿ ಹೇಳಬೇಕಾಗಿದೆ. ಮಹಾಜನ್ ರಿಪೋರ್ಟ್ ಬಗ್ಗೆ ಈ ಸಭೆಯ ಸದಸ್ಯರು ಏನು ತೀರ್ಮಾನ ತೆಗೆದುಕೊಂಡಿದ್ದಾರೆ ಎನ್ನುವುದು ಎಲ್ಲರಿಗೂ ಗೊತ್ತಿದೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಕೂಡ ಒಂದಲ್ಲ ಹತ್ತು ಸಾರಿ ಈ ಸಭೆಯಲ್ಲಿ ಹಾಗೂ ಬೇರೆ ಕಡೆಗಳಲ್ಲಿ ಹೇಳಿದ್ದಾರೆ. ಆದರೆ ಇಲ್ಲಿರುವ ಬಾರ್ಡರು ಪ್ರದೇಶದ ಸದಸ್ಯರುಗಳಿಗೆ ಕನ್ನಡಿಗರ ರಕ್ಷಣೆ ಮಾಡುತ್ತಿಲ್ಲ ಎಂದು ಇಲ್ಲಿ ಹೇಳುವುದು ಸರಿಯಲ್ಲ. ಬೆಳಗಾಂ ನಗರದಲ್ಲಿರುವ ಕನ್ನಡಿಗರು ಹಾಗೂ ರಾಜ್ಯದ ಎಲ್ಲ ಕನ್ನಡಿಗರೂ ಇಲ್ಲಿರುವ ಮೈನಾರಿಟಿ ಪಂಗಡವಾದ ಮರಾಠಿಗರನ್ನು ರಕ್ಷಣೆ ಮಾಡುತ್ತಿದ್ದಾರೆ. ಆದರೆ ಮರಾಠಿ ಜನ ಇಲ್ಲಿ ಏನೂ ರಕ್ಷಣೆ ಮಾಡುತ್ತಿಲ್ಲ ಎಂದು ಇಲ್ಲಿರುವ ಮಹರಾಷ್ಟ್ರ ಏಕೀಕರಣ ಸದಸ್ಯರು ಒಂದು ರೀತಿಯಾದ ತಪ್ಪು ಅಭಿಪ್ರಾಯವನ್ನು ತಮಗೆ ಪ್ರಚಾರ ದೊರೆಯಬೇಕು ಎನ್ನುವ ಒಂದು ಉದ್ದೇಶದಿಂದ ಇಲ್ಲಿ ಮಾತಾಡುತ್ತಿದ್ದಾರೆ. ತಾವು ಇಂತಹ ಮಾತುಗಳನ್ನು ಇಲ್ಲಿ ಆಡಲು ಅವಕಾಶ ಕೊಡಕೂಡದು ಮತ್ತು ಈಗಾಗಲೇ ಮಹಾಜನ್ ವರದಿ ಬಗ್ಗೆ ಆಗಲೇ ನಿರ್ಧಾರವಾಗಿದೆ. ಮತ್ತು ಹೊರಗಿರುವ ಎಲ್ಲ ಜನರೂ ಮುಖ್ಯ ಮಂತ್ರಿಗಳ ನಿಲುವಿಗೆ ಒಪ್ಪಿದ್ದಾರೆ. ಇದನ್ನೇ ನಮ್ಮ ಸಭಾನಾಯಕರು ಮತ್ತೊಮ್ಮೆ ಒತ್ತಾಯ ಮಾಡುತ್ತಾರೆಂದು ನಾನು ಭಾವಿಸಿದ್ದೇನೆ.

Mr. SPEAKER.—I will give due consideration to all the views expressed by the hon. Members.

Sri B. P. KADAM.—If we have no right to speak then we do not want to sit any further and we will walk out of this House.

(Sriyuths B. P. Kadam, P. B. Nandihali, N. B. Sirdesai and B. B. Sayanak withdrew.)

Calling Attention to a Matter of Urgent Public Importance

(*i*) *re* : Collection of Land Revenue and Water Tax in Mandya District

Sri N. A. CHANNE GOWDA (Pandavapura).—I call the attention of the Minister for Reveune to the coercive methods adopted by the Revenue Authorities in Pandavavapura and Srirangapatna Taluks to collect the revised rates of land revenue and water tax.

† Sri H. V. KOUJALGI (Minister for Revenue).—The Assurance given by the Revenue Minister in the Legislative Assembly on 29th January 1969 was the same as was given on 17th September 1968 which was already carried out by the issue of general instructions in Revenue Department Circular No. RD 578 SST 68 dated 13th September 1968. These instructions covered garden lands and rain-fed wet lands. In respect of other lands, the old classification was not changed as there was no dispute about general rates and hence there was no need for any assurance or issue of instructions upon this land. The instructions were to receive payments at old rates and account for them as part payment towards the new rates. This reservation was necessary because the law did not provide for going back to the old rates. If the legislation now under consideration gets through as it is expected to do in this session of the Assembly, the question of taking up a fresh revision to the necessary extent will be taken up. The final accounts will be made

(SRI H. V. KOUJALGI)

up according to the results of such revision. No instances have been reported to Government of cases where the local officers have harassed people to make payments at the revised rates.

If specific instances in Pandavapura and Srirangapatna Taluks are brought up to the notice of Government, detailed enquiries will be made into the circumstances.

Similar instructions were issued in Order No. RD 625 SST 68 dated 30th November 1968 in respect of rain-fed wet lands which had not come under the command of any Government irrigation work, in consideration of the Memo submitted to the High Court in certain writ petitions.

The Revision Settlement in respect of dry lands has not been so widely challenged as in the case of the garden lands and wet lands referred to above. A limited number of Writ Petitions were filed only in Shimoga, Chickmagalur and Dharwar Districts. The memo filed in the High Court covered only these specific cases and instructions have been issued in RD 625 SST 68 dated 18th January 1969 in respect of these cases only, that recoveries should be made at the old rates. These cases do not concern Pandavapura and Srirangapatna Taluks.

ಶ್ರೀ ಎನ್. ಎ. ಚನ್ನೇಗೌಡ.—ಮಾನ್ಯ ಕಂದಾಯ ಮಂತ್ರಿಗಳು ಇದು ಕವರ್ ಆಗುವುದಿಲ್ಲ ಎಂದು ಹೇಳಿದ್ದಾರೆ. ಸೆಪ್ಟೆಂಬರ್ 17ನೇ ತಾರೀಕಿನಲ್ಲಿ ಮಾಡಿದಂಥ ಈ ಸಭೆಯ ವರದಿಯಲ್ಲಿ 247ನೇ ಪುಟದಲ್ಲಿ ಮತ್ತು 243ನೇ ಪುಟದಲ್ಲಿ ನೋಡಿದರೆ ಅದು ಸಾರ್ವತ್ರಿಕವಾಗಿ ಎಲ್ಲಾ ಜಮೀನುಗಳಿಗೂ ಅನ್ವಯವಾಗುವ ಹಾಗೆ ಹೇಳಿದರು. ಅಂತಹ ಕೇಸಸ್ ಸರ್ಕಾರದ ಗಮನಕ್ಕೆ ತಂದರೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದರು. ಇದೇ ತಾಲ್ಲೂಕಿನಲ್ಲಿ ಕಂದಾಯ ವಸೂಲಿಗೆ ಕಿರುಕುಳ ಕೊಡುತ್ತಾ ಇದ್ದಾರೆ. ಹೊಸ ರೀತಿ ಕಂದಾಯ ವಸೂಲ್ಮಾಡುತ್ತಿದ್ದಾರೆ. ಚಿಕ್ಕಮಗಳೂರು ಮತ್ತು ಧಾರವಾಡದವರು ರಿಟ್ ಪಿಟೀಷನ್ ಹಾಕಿದ್ದಾರೆ ಪಾಂಡವಪುರ ಮತ್ತು ಶ್ರೀರಂಗಪಟ್ಟಣದಿಂದ ಬಂದಿಲ್ಲ ಎಂದು ಹೇಳಿದರು. ಇದು ಸತ್ಯಕ್ಕೆ ದೂರವಾದ ಮಾತು. ಪಾಂಡವಪುರ ಮತ್ತು ಶ್ರೀರಂಗಪಟ್ಟಣದವರೂ ಕೂಡ ರಿಟ್ ಪಿಟೀಷನ್ ಹಾಕಿದ್ದಾರೆ. ಹೈಕೋರ್ಟಿನಿಂದ ಸ್ಟೇ ಬಂದಿದೆ. ಅದನ್ನು ಸರ್ಕಾರದವರು ಒಪ್ಪಿಕೊಂಡಿದ್ದಾರೆ. ನಾನೂ ಕೂಡ ಕಂದಾಯ ಮಂತ್ರಿಗಳಿಗೆ ಕಾಗದ ಬರೆದಿದ್ದೇನೆ. ಈವೊತ್ತಿನವರೆಗೂ ಯಾವ ಕಾರ್ಯಕ್ರಮವನ್ನೂ ತೆಗೆದುಕೊಂಡಿಲ್ಲ. ಈಗ ಅಲ್ಲಿರುವ ರೈತರಿಗೆ ರೆವಿನ್ಯೂ ಅಧಿಕಾರಿಗಳು ಕಿರುಕುಳ ಕೊಡುವುದರಿಂದ ಅವರ ಬಗ್ಗೆ ಗಮನ ಕೊಡಬೇಕು ಎಂದು ಹೇಳುತ್ತೇನೆ.

Sri L. SRIKANTAIAH (Nanjangud).—The Hon. Minister for Revenue had placed 3 circulars contradicting the statement made by him on the month of August last. What was stated by him was that collections will be made as per Circulars issued and this was not referred to Srirangapatna and Pandavapura Taluks. I want to ask why the same concession should not be given to all Districts and Taluks ?

Sri K. H. SRINIVAS.—After giving reply to Call Attention there should not be any debate. But there is a convention to allow one or two clarifications. I feel this is taking a turn to a debate.

SRI L. SRIKANTAIAH.—I am not debating. I am seeking clarification from the Hon. Revenue Minister as to what is the method they have adopted. I want to know whether the Government intends to collect at the old rates only.

MR. SPEAKER. Is the hon. member making a speech ?

SRI L. SRIKANTAIAH.—No, Sir. Tax is being collected at the old rates and adjusted towards the new rates. What does it mean? The three circulars say that it may be collected at the old rates and adjusted towards the new rates. Will the Authorities accept at the old rates ?

MR. SPEAKER.—The hon. Member can raise this point, when the Revenue Demand comes up here for discussion. Only one or two clarifications are allowed now, but no speeches can be made.

† ಶ್ರೀ ಎಸ್. ಶಿವಪ್ಪ.—ಭೂಕಂದಾಯದ ವಿಚಾರ ದೊಡ್ಡ ಪ್ರಶ್ನೆ. ಅದರ ವಿಚಾರವಾಗಿ ಅವರು ಶಾಸನ ಸಭೆಯಲ್ಲಿ ಮಾಡತಕ್ಕ ಹೇಳಿಕೆ, ಅದಕ್ಕೆ ತದ್ವಿರುದ್ಧವಾಗಿ ಮಾಡಿರತಕ್ಕ ಸರ್ಕುಲರ್ ಗಳು ಇವೆಲ್ಲ ನಮ್ಮ ಮಿತ್ರರು ಹೇಳಿರುವಂತೆ ನಿಜ. ಅಷ್ಟೇ ಅಲ್ಲದೆ 1965ನೇ ಇಸವಿಯಿಂದ ಕಂದಾಯವನ್ನು ವಸೂಲ್ಮಾಡತಕ್ಕ ವಿಚಾರ, ವಜಾ ಮಾಡತಕ್ಕ ವಿಚಾರ ಬಹಳವಿದೆ. ನಾಳೆ ಇದಕ್ಕೆ ಸಂಬಂಧಪಟ್ಟ ಬೇಡಿಕೆಗಳನ್ನು ತೆಗೆದುಕೊಳ್ಳುವುದಕ್ಕೆ ಮುಂಚೆ ಸರ್ಕಾರ ಅದರ ಬಗ್ಗೆ ಯಾವ ಯಾವ ಸರ್ಕ್ಯುಲರ್ ಕೊಟ್ಟಿದೆ, ಏನು ಹೇಳಿಕೆ ಕೊಟ್ಟಿದೆ, ಅದಕ್ಕೆ ವಿರೋಧವಾಗಿ ಅಧಿಕಾರಿಗಳು ಏನೇನು ಕೆಲಸ ಮಾಡಿದ್ದಾರೆ, ಇವೆಲ್ಲವನ್ನೂ ಕೂಡ ನಮಗೆ ಕೊಟ್ಟರೆ ಆಗ ಈ ಬೇಡಿಕೆಗಳ ಮೇಲೆ ಚರ್ಚೆ ಮಾಡುವುದಕ್ಕೆ ಸಹಾಯವಾಗುತ್ತದೆ. ಮಾನ್ಯ ರೆವೆನ್ಯೂ ಸಚಿವರು ಇಂಥ ಒಂದು ನೋಟ್ ಕೊಟ್ಟರೆ ಚರ್ಚೆ ಮಾಡುವಾಗ ಬಹಳ ಪ್ರಯೋಜನವಾಗುತ್ತದೆ. ಅಂಥ ಆಶ್ವಾಸನೆಯನ್ನು ಕೊಟ್ಟರೆ ಈ ವಿಷಯವನ್ನು ಇಲ್ಲಿಗೇ ಬಿಡಬಹುದು.

3-30 P.M.

ಶ್ರೀ ಎಚ್. ವಿ. ಕೌಜಲಗಿ.—ಈಗ ಇಷ್ಯೂಮಾಡಿರುವ ಸರ್ಕ್ಯುಲರ್ ಕಾಪಿಯನ್ನು ಕೊಟ್ಟಿದೆ.

(ii) *re*: Communal disturbance in Someshwarpur in Mysore District.

SRI M. NAGAPPA (Raichur).—Sir, I call the attention of the Chief Minister to a Communal distrubance in the village Someshwarpur, seven miles away from Mysore City on 1st March 1969, consequently six persons were injured and a few houses were burnt completely and twelve houses partly of one community. The police has utterly failed to control the situation.

† SRI VEERENDRA PATIL (Chief Minister).—Sir, Someshwarpur Village is at a distance of about seven miles from Mysore City in Mysore Taluk. There are about 70 houses belonging to Pariwars, an equal number to Lingayats, about 20 houses belonging to Harijans and a dozen houses belonging to other communities in the village. Peaceful conditions prevailed in the village during the last several years. On 13th February 1969 there was a Jatra in the village and it was celebrated in a fitting manner by all the communities together. There was absolutely no ill-will amongst the different communities.

(SRI VEERENDRA PATIL)

The immediate cause for the trouble appears to be a minor quarrel between some boys of Pariwar Community and a boy of another community. There was some minor skirmish in the village on the evening of 27th February 1969. Information was received by police in this regard on 28th February 1969. The Sub-Inspector, Mysore South Police Station sent Policemen to the village and he also visited the village on 1st March 1969 and made detailed enquiries. The persons belonging to Pariwar community were not willing to give any complaint and wanted to have the matter compromised. On the morning of 1st March 1969 Panchayat meeting was convened by leaders of both the communities, namely Pariwars and Lingayats and a compromise was effected in the presence of the Sub-Inspector of Police. The Sub-Inspector of Police then left the village about noon leaving two constables in the village to keep watch.

It is alleged that on the evening of 1-3-1969 the houses belonging to Pariwar community were attacked and some of the Houses were burnt. As the situation could not be controlled by the two Police Constables present in the village, immediate intimation was sent to the Police Station. Thereupon, the Sub-Inspector reached the village at about 6-30 P.M. along with a Reserve Party and Fire Brigade and brought the situation under control. The Fire was put out. It was seen that five thatched huts belonging to the Pariwars were completely burnt and nine tiled houses of the same community damaged. It is also alleged that foodgrains and other articles were looted from the Houses of Pariwars. The extent of damage including loss of property is estimated at Rs. 4,000; five persons of the Pariwar Community sustained minor injuries. A case in Crime No. 14/69 under sections 143, 144, 148, 149, 436, 457, 390, 324 IPC has been registered in Mysore South Police Station. Four persons have been taken into custody so far. The Superintendent of Police, Mysore along with the Deputy Superintendent of Police, Hunsur and the Thasildar, Mysore Taluk visited the place. A strong police party is stationed in the village. A Mobile Van with armed Reserve is patrolling the neighbouring villages of Mysore and Nanjangud Taluks under the charge of Circle Inspector, Nanjangud. The situation is reported to be peaceful now.

ಶ್ರೀ ಎಂ. ನಾಗಪ್ಪ.—27 ಮತ್ತು 28 ನೆಯ ತಾರೀಖುಗಳಲ್ಲಿ ಎರಡು ದಿವಸ ಪೋಲೀಸಿನವರಿಗೆ ಅನುಮಾನ ಬಂದು ಮಾರುದಿವಸ ಇಬ್ಬರು ಪೋಲೀಸ್ ಕಾನ್‌ಸ್ಟೇಬಲ್ಲುಗಳನ್ನು ಅಲ್ಲಿ ಬಿಟ್ಟಿದ್ದರಿಂದ ಹೀಗಾಗಿದೆ. ಪೋಲೀಸಿನವರು ಬಂದ ಮಾರನೆಯ ದಿವ ಕಾನ್‌ಸ್ಟೇಬಲ್ಲುಗಳನ್ನು ಬಿಟ್ಟ ನಂತರ ಈ ರೀತಿ ಅಫೆನ್ಸ್ ಆಗುತ್ತಿದೆ. ಇವಕ್ಕೆ ಕ್ರಮ ತೆಗೆದುಕೊಳ್ಳುತ್ತೀರಾ ? ಮುಂದೆ ಹೀಗಾಗದಂತೆ ನೋಡಿಕೊಳ್ಳುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಇದೀಗ ಒಂದು ಸ್ಟೇಟ್‌ಮೆಂಟ್ ನಾನು ಮಾಡಿದೆ. ಸಬ್ ಇನ್‌ಸ್ಪೆಕ್ಟರು ಹೋದಾಗ ಎರಡೂ ಕಮ್ಯೂನಿಟಿಗಳವರೂ ಕೂಡಿ ಪ್ರಾಮಿಸ್ ಮಾಡಿದರು. ಅಲ್ಲಿ ಇಬ್ಬರು ಪೋಲೀಸ್ ಕಾನ್‌ಸ್ಟೇಬಲ್ಲುಗಳನ್ನು ಬಿಟ್ಟಮೇಲೆ ಹೀಗೆ ಎರಡೂ ಕಡೆಯೂ ಆಗುತ್ತದೆಂಬುದನ್ನು ಒಪ್ಪುವುದಕ್ಕಾಗುವುದಿಲ್ಲ.

Ninth Report of the Committee on Private Members, Bills and Resolutions

(Presentation)

Mr. DEPUTY SPEAKER (Sri D. Manjunath).—Sir, I present the 9th Report of the Committee on Private Members' Bills and Resolutions.

Mr. SPEAKER.—The report is presented.

ಶ್ರೀ ಕೆ. ಎಚ್. ಶ್ರೀನಿವಾಸ.—ಈ ಸಭೆಯು "ಖಾಸಗಿ ಸದಸ್ಯರ ವಿಧೇಯಕಗಳು ಮತ್ತು ನಿರ್ಣಯಗಳಿಗೆ ಸಂಬಂಧಪಟ್ಟ ಸಮಿತಿಯ ಒಂಬತ್ತನೆಯ ವರದಿಯನ್ನು ಒಪ್ಪಿಕೊಳ್ಳುತ್ತದೆ" ಎಂದು ಸೂಚಿಸುತ್ತೇನೆ.

Mr. SPEAKER.—The quetion is :

"That the Assembly agrees with the 9th Report of the Committee on Private Members' Bills and Resolutions".

The motion is adopted.

Mr. SPEAKER.—The Report is agreed to.

Discussion on a Matter of Public importance for Short Duration *re*: Facilities and Expenditure met by the Government on the Congress Exhibition during 1969.

Mr. SPEAKER.—Five hon. Members are parties to this notice. They are Sri S. Sivappa Leader of the Opposition, Sri N. Hutchmasthi Gowda, Sri Channiah, Sri K. H. Patil Sri Vatal Nagaraj. They may raise the discussion. The only point is, it should be finished within 2½ hours. Practically there is agreement between the two sides, The time may be equally divided between them. Shall we close this debate at 6-10 P.M.? Then we will have to take up debate on Demands. The Hon. Minister will reply and then the Demands will be put to vote.

† ಶ್ರೀ ಎಸ್. ಶಿವಪ್ಪ.—ಸಭಾಪತಿಯವರೇ, ಈಗ ಸಭೆಯ ಮುಂದಿರುವ ಅತಿ ಜರೂರು ಮತ್ತು ಪ್ರಾಮುಖ್ಯವಾದ ವಿಚಾರ ಯಾವುದೆಂದರೆ ಸುಭಾಷ್ ನಗರದಲ್ಲಿ ಬೆಂಗಳೂರು ಸಿಟಿಯಲ್ಲಿ ಕಾಂಗ್ರೆಸ್ ವಸ್ತುಪ್ರದರ್ಶನವನ್ನು ಮೈಸೂರು ಪ್ರದೇಶ ಕಾಂಗ್ರೆಸ್ ಕಮಿಟಿಯು ನಡೆಸುವುದಕ್ಕೆ ಸಂಬಂಧಪಟ್ಟಿದೆ. ಇದರ ಬಗ್ಗೆ ಚರ್ಚೆ ನಡೆಯಬೇಕೆಂದು ಒಂದು ನಿರ್ಣಯವಿದೆ. ಕಾಂಗ್ರೆಸ್ ವಸ್ತು ಪ್ರದರ್ಶನ ಸುಭಾಷ್ ನಗರದಲ್ಲಿ ಕಾಂಗ್ರೆಸ್ ಪಕ್ಷವು ನಡೆಸುವುದಕ್ಕೆ ಮೈಸೂರು ಸರಕಾರ ಯಾವ ರೀತಿಯಿಂದ ತನ್ನ ಪಕ್ಷಕ್ಕೆ ಸೌಲತ್ತು, ಸಹಾಯ, ಸರಕಾರದ ಖಜಾನೆಯಿಂದ ಖರ್ಚುಮಾಡಿ ಕೊಡುತ್ತಿದೆ ಎಂಬುದನ್ನು ವಿಚಾರಮಾಡಬೇಕಾಗಿದೆ. ಇದು ಬಹಳ ಗಹನವಾದ ವಿಚಾರವಾಗಿದೆ. ಪ್ರಜಾಪ್ರಭುತ್ವವಿರುವ ಯಾವುದೇ ಸರಕಾರ ಪ್ರಜಾಪ್ರಭುತ್ವ ತತ್ವದಮೇಲೆ ನಡೆಯುವ ಸರಕಾರ ಯಾವ ಪಕ್ಷವೇ ಆಗಲಿ ವಸ್ತು ಪ್ರದರ್ಶನ ನಡೆಸಿದಾಗ ಅದಕ್ಕೆ ತನ್ನ ಖಜಾನೆಯಿಂದ ಹಣ ಖರ್ಚು ಮಾಡಿ ಸೌಲತ್ತುಗಳನ್ನು ಕೊಡುವುದು ರಾಜ್ಯಾಂಗಕ್ಕೆ ಅಪಚಾರವಾಗುತ್ತದೆ ಎಂದು ಅದನ್ನು ಸಭೆಯಮುಂದೆ ಸಮರ್ಥನೆ ಮಾಡುವುದಕ್ಕೆ ಈ ಚರ್ಚೆಯನ್ನು ಮಾಡಲು ಅವಕಾಶ ಪಡೆಯಲಾಗಿದೆ. ಇಂದು ಕಾಂಗ್ರೆಸ್ ಪಕ್ಷವು ನಡೆಸುವ ವಸ್ತು ಪ್ರದರ್ಶನಕ್ಕೆ ಮೈಸೂರು ತನ್ನ ಖಜಾನೆಯಿಂದ ಖರ್ಚುಮಾಡಿ ಸಹಾಯಮಾಡಿರುವುದು ಅನೇಕರಿಗೆ ತಿಳಿದಿರಬಹುದು. ಸರಕಾರದ ಪರವಾಗಿ

(ಶ್ರೀ ಎಸ್. ಶಿವಪ್ಪ)

ಅನೇಕ ಇಲಾಖೆಗಳು ಈ ಪ್ರದರ್ಶನದಲ್ಲಿ ಭಾಗವಹಿಸುತ್ತಿವೆ ಅವುಗಳು ಉಪಯೋಗಿಸುವ ಮಳಿಗೆಗಳಿಗೆ ಸರಕಾರದಿಂದ ಹಣ ಕೊಡಲಾಗುತ್ತಿದೆ, ಬಾಡಿಗೆ ರೂಪದಲ್ಲಿ ಈ ರೀತಿ ಮಳಿಗೆಗಳಿಗೆ ಹಣ ಸಂದಾಯವಾಗುತ್ತಿದೆ. ಹೀಗೆ ಸರಕಾರದಿಂದ ಎಷ್ಟು ಹಣ ಕೊಡಲಾಗಿದೆ ಎಂಬುದನ್ನು ತಿಳಿಯಬೇಕಾಗಿದೆ.

ಈ ವಸ್ತುಪ್ರದರ್ಶನಕ್ಕೆ ಈ ಸರ್ಕಾರ ನೇರವಾಗಿ ಯಾವ ರೀತಿಯಿಂದ ಸಹಾಯ ಮಾಡಿದೆ, ಮತ್ತು ಎಲೆಕ್ಟ್ರಿಸಿಟಿ ಇತ್ಯಾದಿ ಒದಗಿಸತಕ್ಕ ವಿಚಾರದಲ್ಲಿ ಸರ್ಕಾರ ಮತ್ತು ಎಲೆಕ್ಟ್ರಿಸಿಟಿ ಬೋರ್ಡ್‌ನವರು ಏನೊಂದು ಸಹಾಯವನ್ನು ಮಾಡಿದ್ದಾರೆ ಮತ್ತು ಅವರಿಗೆ ಕೊಡತಕ್ಕ ಪೋಲೀಸ್ ಬಂದೋಬಸ್ತು ಇತ್ಯಾದಿಗಳ ವಿಚಾರದಲ್ಲಿ ಸರ್ಕಾರ ಅವರಿಂದ ಏನಾದರು ದುಡ್ಡು ವಸೂಲು ಮಾಡಿದೆಯೇ ಅಥವಾ ಮುಫತ್ತಾಗಿ ಆ ಪಹರೆ ಕಾಯುವ ಸಿಬ್ಬಂದಿಯನ್ನು ಸರ್ಕಾರ ಕೊಟ್ಟಿದೆಯೇ, ಮತ್ತು ಅಲ್ಲಿ ನಡೆಯತಕ್ಕ ಎಕ್ಸಿಬಿಷನ್‌ಗೆ ತೋಟಗಾರಿಕೆ ಇಲಾಖೆ ಯಾವುದಾದರೂ ರೀತಿಯಲ್ಲಿ ಸಹಾಯ ಮಾಡುವುದರ ಮುಖಾಂತರ ಎಷ್ಟು ಹಣವನ್ನು ಖರ್ಚು ಮಾಡಿದೆ ಈ ಕೆಲವು ವಿವರಗಳನ್ನು ಇವತ್ತು ಸರ್ಕಾರ ಈ ಸಭೆಗೆ ಒದಗಿಸಿ ಕೊಡಬೇಕು. ನಾನಾದರೂ ಹೇಳುತ್ತೇನೆ ಇವತ್ತು ಈ ಕಾಂಗ್ರೆಸ್ ಎಕ್ಸಿಬಿಷನ್‌ಗೂ ಮತ್ತು ಈ ಸರ್ಕಾರಕ್ಕೂ ಒಂದಕ್ಕೊಂದಕ್ಕೆ ವ್ಯತ್ಯಾಸ ಇಲ್ಲ. ಕಾಂಗ್ರೆಸ್ಸೇ ಸರ್ಕಾರ ಮತ್ತು ಸರ್ಕಾರವೇ ಕಾಂಗ್ರೆಸ್ ಒಂದರ ಹಿತ ಒಂದಕ್ಕೆ ಎಂಬ ಭಾವನೆ ಬರತಕ್ಕ ರೀತಿಯಲ್ಲಿ ಇವತ್ತು ಈ ವಸ್ತುಪ್ರದರ್ಶನ ಮಾಡುವುದರ ಮುಖಾಂತರ ಪ್ರಚಾರ ನಡೆಯುತ್ತಾ ಇದೆ. ಕಾಂಗ್ರೆಸ್ಸು ಒಂದು ರಾಜಕೀಯ ಪಕ್ಷ, ಅದು ಇವತ್ತು ಅಧಿಕಾರದಲ್ಲಿರಬಹುದು, ಅಂದಮಾತ್ರಕ್ಕೆ ಸರ್ಕಾರವೆಲ್ಲವೂ ಕೂಡ ಕಾಂಗ್ರೆಸ್ ಪಕ್ಷದ ಒಂದು ಹಿತಕ್ಕಾಗಿಯೇ ಇದೆ ಎಂಬ ರೀತಿಯಲ್ಲಿ, ಜನರಿಗೆ ಅನುಮಾನವನ್ನುಂಟು ಮಾಡತಕ್ಕ ರೀತಿಯಲ್ಲಿ ಬಹಿರಂಗವಾಗಿ ಸರ್ಕಾರದ ಎಲ್ಲಾ ಇಲಾಖೆಗಳು ಕೂಡ ಸಹಾಯಮಾಡುತ್ತಾ ಇರುವುದು ಸರಿಯಲ್ಲ. ಈ ಎಕ್ಸಿಬಿಷನ್ ಯಾರ ಆಶ್ರಯದಲ್ಲಿ ನಡೆಯುತ್ತಾ ಇದೆ ? 50 ಅಡಿ ಎತ್ತರದಲ್ಲಿ ಹಾರುತ್ತಾ ಇರತಕ್ಕ ಕಾಂಗ್ರೆಸ್ ಬಾವುಟದ, ಧ್ವಜದ ಅಡಿಯಲ್ಲಿ ನಮ್ಮ ಸರ್ಕಾರದ ಅಧಿಕಾರಿಗಳು, ನಮ್ಮ ಸರ್ಕಾರದ ಇಲಾಖೆಗಳ ಎಲ್ಲ ಪ್ರದರ್ಶನವನ್ನೂ ಕೂಡ ಅಲ್ಲಿ ಮಾಡಿ ಇವತ್ತಿನ ದಿವಸ ಸರ್ಕಾರ ತನ್ನ ಪಕ್ಷವನ್ನು ಪರೋಕ್ಷವಾಗಿ ಅಲ್ಲಿ ಬೆಳೆಸುತ್ತಾ ಇದೆ. ಈ ಒಂದು ವಸ್ತು ಪ್ರದರ್ಶನ ಬೆಂಗಳೂರು ಕಲ್ಯಾಣ ನಗರದಲ್ಲಿ ಕಳೆದ ಅನೇಕ ವರ್ಷಗಳಿಂದ ನಡೆದುಕೊಂಡು ಬರತಕ್ಕ ಪದ್ಧತಿಯಾಗಿದೆ. ಇದು ಎಲ್ಲಿಯವರೆಗೆ ಹೋಗಿದೆ ಎಂದರೆ ವಸ್ತುಪ್ರದರ್ಶನ ನಡೆಸತಕ್ಕ ಜಾಗವೇ ನಮ್ಮದು ಎಂಬ ಮಟ್ಟಕ್ಕೆ ಇವತ್ತಿನ ದಿವಸ ಹೋಗಿ, ಕೆಲವು ದಿವಸಗಳ ಹಿಂದೆ ಈ ವಿಷಯ ಈ ಸಭೆಯಲ್ಲಿ ಚರ್ಚೆ ಆಗಿದೆ. ಸುಭಾಸ್ ನಗರದ ಆ ಭೂಮಿಯನ್ನು ಕಾಂಗ್ರೆಸ್ ವಸ್ತುಪ್ರದರ್ಶನಕ್ಕೆ 99 ವರ್ಷ ಅನ್ನತಕ್ಕ ಒಂದು ಕಂಡೀಷನ್ ಕೂಡ ಹಾಕಿಕೊಡುವ ಮಟ್ಟಕ್ಕೆ ಬಂದು ಆ ಜಮೀನನ್ನು ಅವರ ವಶಕ್ಕೆ ಕೊಡತಕ್ಕ ಮಟ್ಟಕ್ಕೆ ಹೋಗಿದೆ. ನಾನಾದರೂ ಕೂಡ ಹೇಳುತ್ತೇನೆ, ಈ ಸರ್ಕಾರ ಈ ವಸ್ತುಪ್ರದರ್ಶನವನ್ನು ಬೆಂಗಳೂರು ನಗರದಂತಹ ದೊಡ್ಡ ನಗರದಲ್ಲಿ ಒಂದು ಬಹಳ ಪ್ರಾಮುಖ್ಯವಾದ ಜಾಗದಲ್ಲಿ ನಡೆಸುತ್ತಾ ಇರುವುದು ಬಹಳ ಪ್ರಾಮುಖ್ಯವಾದ ವಸ್ತುಪ್ರದರ್ಶನ, ಬಹಳ ವಿಜೃಂಭಣೆಯಿಂದ ಇಡೀ ಇಂಡಿಯಾದೇಶದ ಎಲ್ಲಾ ಕೈಗಾರಿಕೆಗಳನ್ನೂ ತರಿಸಿ ಅಲ್ಲಿ ಒಂದು ಪ್ರದರ್ಶನವನ್ನು ನೀವೇ ಮಾಡುವುದು ಅತಿ ಅಗತ್ಯವಾದ ವಿಚಾರ. ಸರ್ಕಾರದವರೇ ನೇರವಾಗಿ ಈ ಒಂದು ಜವಾಬ್ದಾರಿಯನ್ನು ತೆಗೆದುಕೊಂಡು ಈ ಒಂದು ಕೆಲಸವನ್ನು ಏಕೆ ಮಾಡಬಾರದು ಎಂದು ಕೇಳುತ್ತೇನೆ. ನಿಮ್ಮ ಇಲಾಖೆಗಳು, ನಿಮ್ಮ ಕೈಗಾರಿಕೆಗಳು, ನಿಮ್ಮ ವ್ಯಾಪಾರ ಸಂಸ್ಥೆಗಳು, ಅವರು ಕಟ್ಟುವ ಅಂಗಡಿಗಳಲ್ಲಿ ಇರುವುದಕ್ಕೆ ಬದಲಾಗಿ, ನೀವೇ ಅವುಗಳನ್ನು ಕಟ್ಟಿ ನಿಮ್ಮ ಅಂಗಡಿಗಳನ್ನು ಏಕೆ ಇಡಬಾರದು ? ಅವರು ಕಟ್ಟುವ ಅಂಗಡಿಗಳಿಗೆ ಮತ್ತೆ ನೀವು ಬಾಡಿಗೆ ಕೊಟ್ಟು ಕೇವಲ ತಮ್ಮ ಪಕ್ಷಕ್ಕೆ ದುಡ್ಡು ಸಿಕ್ಕಲಿ ಅಂತ ಮಾಡಿದರೆ ಇದು ಯಾವ ಒಂದು ತತ್ವ ಎಂಬುದನ್ನು ನಾನು ಅರಿಯದವನಾಗಿದ್ದೇನೆ. ಈ ಜವಾಬ್ದಾರಿಯನ್ನು ನೀವೇ ವಹಿಸಿ, ಅದರಿಂದ ನಿಮ್ಮ ಖಜಾನೆಗೆ ಎಂದರೆ ಸರ್ಕಾರದ ಖಜಾನೆಗೆ ಹಣ ದೊರಕುವಂತೆ ಮಾಡಿಕೊಳ್ಳುವುದರ ಜೊತೆಗೆ ಭಾರತಾದ್ಯಂತ ಅನೇಕ ಕಡೆಗಳಿಂದ ಬರತಕ್ಕ ಜನರು ಆಕರ್ಷಕರಾಗುವಂತಹ ಒಂದು ವಸ್ತುಪ್ರದರ್ಶನವನ್ನು ತಾವು ಏರ್ಪಾಡು ಮಾಡಬೇಕಾದ್ದು ಬಹಳ ಅಗತ್ಯವಾಗಿದೆ. ಕೇವಲ ಹಣ ಸಂಪಾದನೆ ಮಾಡುವುದಕ್ಕೆ ಯಾರೋ ಒಂದು ಪ್ರದರ್ಶನವನ್ನು ನಡೆಸುವುದಕ್ಕೆ ಸರ್ಕಾರ ಅದಕ್ಕೆ ನೇರವಾದ ತಮ್ಮ ಸಹಾಯವನ್ನು ಕೊಡುವುದು ಬಹಳ ಕೆಟ್ಟ ಪದ್ಧತಿ ಎಂದು ಹೇಳುತ್ತಾ ಇದ್ದೇನೆ. ನ್ಯಾಷನಲ್ ಫೇರ್ ಅಂತ ಆಗುತ್ತಾ ಇದೆ. ಅಲ್ಲಿಗೆ ಸರ್ಕಾರದವರು ಸ್ಟಾಲ್‌ಗಳನ್ನು ಕೊಡಲಿಲ್ಲ ಎಂದು ಕೇಳಿದೆ. ಒಪ್ಪಿಕೊಳ್ಳುತ್ತೇನೆ ಯಾರಿಗೇ ಆಗಲಿ ಕೊಡಬೇಡಿ, ನೀವೇ ನೇರವಾಗಿ ಅಂತಹ ಪ್ರದರ್ಶನವನ್ನು ನಡೆಸಬೇಕು. ಇಲ್ಲದೇ ಹೋದರೆ ಕಾರ್ಪೊರೇಷನ್ ಆಶ್ರಯದಲ್ಲಿ ಮಾಡಿ. ಮೈಸೂರಿನಲ್ಲಿ ದಸರಾ ಎಕ್ಸಿಬಿಷನ್ ಮಾಡುತ್ತಾರೆ ಅನೇಕವರ್ಷಗಳಿಂದ ನಡೆಯುತ್ತಾ ಇದೆ.

ಈಚಗೆ ಸರ್ಕಾರ ಅದಕ್ಕೆ ಅಷ್ಟೊಂದು ಉತ್ತೇಜನ ಕೊಡುತ್ತಿಲ್ಲ ಎಂದು ಕಾಣುತ್ತದೆ. ಅದು ಎಷ್ಟು ಕಳಕಳಿಯಿಂದ ಒಂದೆರಡು ತಿಂಗಳು ನಡೆಯುತ್ತದೆಯೋ ಅದೇ ರೀತಿ ಬೆಂಗಳೂರಿನಲ್ಲೂ ಕೂಡ ತಮ್ಮ ಅಧೀನದಲ್ಲಿ ಅಂತಹ ಒಂದು ವಸ್ತು ಪ್ರದರ್ಶನ ಮಾಡಬೇಕಾದ್ದು ತಮ್ಮ ಮಹತ್ವದ ಕರ್ತವ್ಯ ಎಂದು ಈ ಚರ್ಚೆಯ ಮುಖಾಂತರ ತಿಳಿಸುವುದಕ್ಕೆ ಈ ಚರ್ಚೆಯನ್ನು ಮಾಡುತ್ತಾ ಇದ್ದೇವೆ. ನಮ್ಮ ದೇಶದ ಪ್ರಗತಿ ಅನೇಕ ರೀತಿಯಲ್ಲಿ ನಡೆಯುತ್ತಾ ಇದೆ. ಒಂದು ಎರಡು ಮೂರು ಯೋಜನೆಗಳನ್ನು ಸಾಧನೆ ಮಾಡಿದ್ದೇವೆ. ಮುಂದೆ ನಾಲ್ಕನೆ ಯೋಜನೆಯನ್ನು ಸಾಧನೆ ಮಾಡಬೇಕೆಂದು ಇದ್ದೇವೆ, ಈ ಎಲ್ಲ ವಿಚಾರಗಳೂ ಕೂಡ ಜನತೆಗೆ ಸರಿಯಾದ ರೀತಿಯಲ್ಲಿ ತಿಳಿಯುವಂತೆ ಪ್ರದರ್ಶನ ನಡೆಸುವುದು ಯಾವುದೇ ಸರ್ಕಾರ ಇರಲಿ ಅದು ಅವರ ಕರ್ತವ್ಯ ಎಂದು ತಿಳಿಸುತ್ತೇನೆ. ಅದನ್ನು ಬಿಟ್ಟು ಆ ಕೆಲಸವನ್ನು ನಿಮ್ಮ ಒಂದು ಪಕ್ಷಕ್ಕೆ ಕೊಟ್ಟು ನೀವು ದುಡ್ಡು ಮಾಡಿಕೊಳ್ಳಿ ಎಂದು ಹೇಳಿ, ಪಕ್ಷದ ಸಾಧನೆಗೆ ಖಜಾನೆಯ ಹಣವನ್ನು ಖರ್ಚು ಮಾಡಿ ನಿಮ್ಮ ಪಕ್ಷವನ್ನು ಬೆಳೆಸತಕ್ಕ ಒಂದು ಕಾರ್ಯ ಏನಿದೆ ಇದು ರಾಜ್ಯಾಂಗಕ್ಕೆ ವಿರೋಧವಾದ ಕೆಲಸ. ದೇಶದ ಜನತೆಯ ಹಣವನ್ನು ನೀವು ಇವತ್ತು ಒಂದಲ್ಲ ಒಂದು ರೀತಿಯಲ್ಲಿ ನಿಮ್ಮ ಪಕ್ಷದ ಬೆಳವಣಿಗೆಗೆ ಖರ್ಚು ಮಾಡುವುದಾದರೆ ಅದಕ್ಕೆ ಜನತೆಯ ವಿರೋಧ ಇದೆ ಎಂಬುದನ್ನು ಹೇಳುತ್ತಾ ಇದ್ದೇನೆ. ಇವತ್ತು ಈ ಶಾಸನಸಭೆಯ ವಿರೋಧ ಪಕ್ಷ ಅಲ್ಲ, ಮೈಸೂರಿನ ಜನತೆ ಅದನ್ನು ವಿರೋಧ ಮಾಡತಕ್ಕ ಒಂದು ಮಟ್ಟಕ್ಕೆ ಬಂದಿದ್ದಾರೆ. ಕಾಂಗ್ರೆಸ್ ಬಾವುಟದ ಅಡಿಯಲ್ಲಿ ವಸ್ತುಪ್ರದರ್ಶನ ಮಾಡಿ, ಬೋರ್ಡ್ ಹಾಕಿ ಆ ಮೂಲಕ ನಿಮ್ಮ ಪ್ರಚಾರವನ್ನು ಬೆಂಗಳೂರಿನಲ್ಲಿ ಮಾಡುವುದಾದರೆ ಅಂತಹ ಕೆಲಸವನ್ನು ಮಾಡುವುದಕ್ಕೆ ನಾವು ಎಂದಿಗೂ ಕೂಡ ಒಪ್ಪುವುದಿಲ್ಲ. ಒಪ್ಪುವುದಕ್ಕೆ ಸಾಧ್ಯವಿಲ್ಲ. ಒಂದು ಪಕ್ಷ ನಿಮ್ಮಲ್ಲಿ ಅಧಿಕಾರ ಇದೆ ಮಾಡಿಯೇ ಮಾಡುತ್ತೇವೆ ಎಂದು ಹಟಮಾರಿತನದಿಂದ ಮಾಡುವುದಾದರೆ ಅದಕ್ಕೆ ಬೆಂಗಳೂರಿನ ಜನತೆಯು ಮತ್ತು ಮೈಸೂರಿನ ಜನತೆಯ ಪ್ರಬಲವಾದ ವಿರೋಧವನ್ನು ಈ ಸರ್ಕಾರ ನೋಡಬೇಕಾಗುತ್ತದೆ, ಅದನ್ನು ಎದುರಿಸಬೇಕಾದ ಪರಿಸ್ಥಿತಿ ಬರುತ್ತದೆ ಎಂಬ ಎಚ್ಚರಿಕೆಯ ಮಾತನ್ನೂ ಕೂಡ ಹೇಳುತ್ತೇನೆ. ಗಂಭೀರವಾಗಿ ಹೇಳುತ್ತಾ ಇದ್ದೇನೆ ಈ ಕೆಲಸವನ್ನು ಸರ್ಕಾರದವರೇ ನೇರವಾಗಿ ಮಾಡಿ. ವಿರೋಧ ಪಕ್ಷದ ಕಡೆಯಿಂದಲೂ ಕೆಲವು ಜನರನ್ನು ತೆಗೆದುಕೊಂಡು ಒಂದು ಕಮಿಟಿಯನ್ನು ಮಾಡಿ ಆ ಮೂಲಕ ಯಾವ ರೀತಿ ಈ ವಸ್ತುಪ್ರದರ್ಶನವನ್ನು ಮಾಡಬೇಕು ಯಾವ ರೀತಿ ಅದು ಮುಂದುವರಿಯಬೇಕು ಎಂಬ ವಿಚಾರವನ್ನು ಸರ್ಕಾರದವರು ಮಾಡಲು ಪರಿಶೀಲನೆ ಮಾಡಬೇಕೆಂದು ಆಗ್ರಹಪೂರ್ವಕವಾಗಿ ತಮ್ಮ ಮುಖೇನ ಸರ್ಕಾರದವರಿಗೆ ಸೂಚನೆ ಕೊಡುತ್ತೇನೆ ಮತ್ತು ಕಳೆದ ವರ್ಷಗಳಲ್ಲಿ ಈ ಎಕ್ಸಿಬಿಷನ್‌ಗೆ ಎಷ್ಟು ಹಣವನ್ನು ಕೊಟ್ಟಿದೆ ಸರ್ಕಾರದ ಇಲಾಖೆಗಳ ವತಿಯಿಂದ ಎಂಬ ಲೆಕ್ಕವನ್ನೂ ಕೂಡ ಈ ಸಭೆಗೆ ಈಗ ಕೊಡಬೇಕು. ಮತ್ತು 1969ನೇ ಇಸವಿಯಲ್ಲಿ ಈ ಎಕ್ಸಿಬಿಷನ್ ಮಾಡಬೇಕು ಎಂದು ಈಗಾಗಲೇ ಬಹಳ ರಭಸದಿಂದ ಕೆಲಸಕಾರ್ಯಗಳು ಸಾಗುತ್ತಿವೆ ಎಂಬುದನ್ನು ನೋಡಿದ್ದೇನೆ, ಅದನ್ನು ಕೈ ಬಿಡಬೇಕು, ಸರ್ಕಾರದವರೇ ನೇರವಾಗಿ ಮಾಡಬೇಕು ಎಂದು ಸರ್ಕಾರದವರಿಗೆ ಒತ್ತಾಯವಾಗಿ ಹೇಳುತ್ತೇನೆ. ಇದನ್ನು ಮೀರಿ ಮಾಡುವುದಾದರೆ ಅವರು ಬಹಳ ಕೆಟ್ಟ ಕೆಲಸವನ್ನು ಮಾಡಿದ ಹಾಗಾಗುತ್ತದೆ, ಸರ್ಕಾರ ತಮ್ಮ ಪಕ್ಷದ ಹಿತಸಾಧನೆಗೆ ಸರ್ಕಾರದ ಖಜಾನೆಯ ಹಣವನ್ನು ತನ್ನ ಸುಖಕ್ಕೆ ತಾನೆ ಖರ್ಚು ಮಾಡಿದ ಹಾಗಾಗುತ್ತದೆ, ಅದು ರಾಜ್ಯಾಂಗಕ್ಕೆ ಮತ್ತು ನಮ್ಮ ಈ ಶಾಸನಸಭೆಗೆ ವಿರೋಧವಾಗಿ ಮಾಡಿದಂತಹ ಕೆಲಸವಾಗುತ್ತದೆ. ಅಂತಹ ಒಂದು ಅಪರಾಧಕ್ಕೆ ಸರ್ಕಾರ ಗುರಿಯಾಗುತ್ತದೆ ಎಂಬ ಎಚ್ಚರಿಕೆಯನ್ನೂ ಕೂಡ ನಾನೂ ಕೊಡುತ್ತಾ ಇದ್ದೇನೆ. ಇಷ್ಟು ಹೇಳಿ ನಾನು ಈಗಾಗಲೇ ಕೇಳಿರತಕ್ಕ ವಿವರಗಳನ್ನು ಎಂದರೆ ಎಷ್ಟು ಹಣವನ್ನು ಈ ಪ್ರದರ್ಶನಕ್ಕೆ ಕೊಟ್ಟಿದ್ದೀರಿ, ಇವತ್ತು ನಡೆಯುತಕ್ಕ ಪ್ರದರ್ಶನಕ್ಕೆ ಎಷ್ಟು ಹಣವನ್ನು ಕೊಡಬೇಕೆಂದು ಯೋಚನೆ ಮಾಡಿದ್ದೀರಿ ಎಂಬ ವಿವರಗಳನ್ನು ಕೊಟ್ಟರೆ ನೀವು ಮುಂದೆ ನಡೆಸತಕ್ಕ ಪ್ರದರ್ಶನಕ್ಕೆ ಅನುಕೂಲವಾಗುತ್ತದೆ ಎಂದು ಭಾವಿಸಿ ಮಾನ್ಯ ಮುಖ್ಯ ಮಂತ್ರಿಗಳು ಆ ವಿವರಗಳನ್ನು ಕೊಡಬೇಕೆಂದು ತಮ್ಮ ಮುಖಾಂತರ ಪ್ರಾರ್ಥನೆ ಮಾಡುತ್ತೇನೆ.

† ಶ್ರೀ ವಾಟಾಳ್ ನಾಗರಾಜ್ (ಚಿಕ್ಕಪೇಟೆ).—ಸನ್ಮಾನ್ಯ ಅಧ್ಯಕ್ಷರೇ, ನಾವು ಈ ಏನ ಆ ಕಾಂಗ್ರೆಸ್ ವಸ್ತುಪ್ರದರ್ಶನಕ್ಕೆ ಸರ್ಕಾರದವರು ಮಳಿಗೆಗಳನ್ನು ಕೊಡುವುದರ ಮೂಲಕ ಒಂದು ಪಕ್ಷಕ್ಕೆ ಸರ್ಕಾರ ಬೆಂಬಲವನ್ನೂ ಮತ್ತು ಸಹಕಾರವನ್ನೂ ನೀಡಿದಂತಾಗುತ್ತದೆ ಅನ್ನತಕ್ಕ ಒಂದು ದೃಷ್ಟಿಯಿಂದ ಆ ವಸ್ತುಪ್ರದರ್ಶನದ ಕಾರ್ಯವನ್ನು ಸರ್ಕಾರದವರು ಕೂಡಲೆ ಕೈಬಿಡಬೇಕೆಂದೂ ಮತ್ತು ಆ ಸುಭಾಷ್‌ನಗರ ಮೈದಾನದಲ್ಲಿ ನಡೆಸುತ್ತಿರುವ ವಸ್ತುಪ್ರದರ್ಶನವನ್ನು ಕೂಡಲೆ ರದ್ದು ಮಾಡಬೇಕೆಂದೂ ಒತ್ತಾಯ ಮಾಡುವುದಕ್ಕೆ ನಿಂತಿದ್ದೇನೆ. ನಾವು ಏನು ಈ ದಿವಸ ಮಾಡುತ್ತಿದ್ದೇವೆ ಈ ಪ್ರತಿಭಟನೆಯ ಕಾರ್ಯ ಇನ್ನೂ ಅನೇಕ ವರ್ಷಗಳ ಹಿಂದೆಯೇ ನಡೆಯಬೇಕಾಗಿತ್ತು ಈ ಒಂದು ಎಚ್ಚರಿಕೆಯನ್ನು ಕಾಂಗ್ರೆಸ್‌ಪಕ್ಷದವರು ಈ ವರ್ಷ ಅರಿತುಕೊಂಡು ಕೈಬಿಡುತ್ತಾರೆ, ನಾಳೆ ವರ್ಷ ಕೈಬಿಡುತ್ತಾರೆಂದು ಭಾವಿಸಿದ್ದೆವು. ಜನತೆ ಕಾಂಗ್ರೆಸ್‌ಪಕ್ಷದವರು ಈ ರೀತಿ

(ಶ್ರೀ ವಾಟಾಳ್ ನಾಗರಾಜ್)

ಮಾಡತಕ್ಕದ್ದು ಸರಿಯಿಲ್ಲ ಎಂದು ಸುಮಾರು 15–16 ವರ್ಷಗಳಿಂದ ಕೂಗೆಬ್ಬಿಸಿದ್ದರೂ ಅದಕ್ಕೆ ಕಿವಿಗೊಡದೆ ಜನರ ಕೇಳಿಕೆ ಮನ್ನಣೆ ಕೊಡದೆ ಈ ಕಾಂಗ್ರೆಸ್ಸಿನವರು ತಮ್ಮ ಒಂದು ಪಕ್ಷವನ್ನು ಬಲಪಡಿಸಿಕೊಳ್ಳಲು—ಹಾಗೂ ಅದರ ಒಂದು ಪ್ರತಿಷ್ಠೆಯನ್ನು ಹೆಚ್ಚುಮಾಡಿಕೊಳ್ಳಲು ಈ ಕಲ್ಯಾಣ ನಗರದಲ್ಲಿ ಅತಿಪ್ರಾಮುಖ್ಯವಾದ ಅದರಲ್ಲೂ ಪವಿತ್ರ ಕೇಂದ್ರಸ್ಥಳವಾದ ಆ ಸುಭಾಷ್‌ನಗರದ ಪ್ರದೇಶವನ್ನು ತಮ್ಮ ಒಂದು ಪಕ್ಷವನ್ನು ಬೆಳೆಸಲು ಅಲ್ಲಿ ಒಂದು ವಸ್ತುಪ್ರದರ್ಶನ ನಡೆಸುವುದಕ್ಕಾಗಿ ಉಪಯೋಗ ಮಾಡುತ್ತಿರುವುದು ಬಹಳ ಅಕ್ಷಮ್ಯವಾದುದ್ದು. ಆ ವಸ್ತು ಪ್ರದರ್ಶನದಿಂದ ಕಾಂಗ್ರೆಸ್ ಪಕ್ಷ ಸರ್ಕಾರದ ಬೆಂಬಲವನ್ನು ದುರುಪಯೋಗಮಾಡಿಕೊಂಡು ಬರೀ ಒಂದು ಮಳಿಗೆಗಳನ್ನು ಜನಕ್ಕೆ ಹಂಚುವುದರಿಂದಲೇ ಸುಮಾರು ಎರಡೂವರೆ ಲಕ್ಷ ರೂಪಾಯಿಗಳ ಸಂಪಾದನೆ ಆಗುತ್ತದೆ. ಅದರ ಜೊತೆಗೆ ನಮ್ಮ ರಾಜ್ಯ ಸರ್ಕಾರ ಆ ವಸ್ತುಪ್ರದರ್ಶನಕ್ಕೆ ಎರಡು ಲಕ್ಷ ಐವತ್ತು ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದಾರೆ. ಕೇಂದ್ರ ಸರ್ಕಾರದಿಂದ ಐವತ್ತು ಸಾವಿರ ಬರುತ್ತೆ. ಇನ್ನು ಅಲ್ಲಿಗೆ ಪ್ರದರ್ಶನವನ್ನು ನೋಡುವುದಕ್ಕಾಗಿ ಬರತಕ್ಕ ಜನತೆಯಿಂದ ಸುಮಾರು ಎರಡೂವರೆ ಲಕ್ಷ ಬರುತ್ತದೆ. ಅಂದರೆ ಟಿಕೆಟ್ ಮಾರಾಟದಿಂದ ಅಷ್ಟು ಹಣ ಬರುತ್ತದೆ. ಇಷ್ಟೆಲ್ಲಾ ಆದಾಯ ಆ ಒಂದು ಕಾಂಗ್ರೆಸ್ ಸಂಸ್ಥೆಗೆ. ಇದಲ್ಲದೆ ಆ ಕಾಂಗ್ರೆಸ್ ಪಕ್ಷದಲ್ಲಿರತಕ್ಕ ಜನರು ಅಧಿಕಾರಾರೂಢರಾಗಿರುವುದರಿಂದ ಜನರನ್ನು ಹೆದರಿಸಿ ಜಾಹಿರಾತುಗಳಿಂದ ವಿಶೇಷ ಹಣವನ್ನು ಗಳಿಸುತ್ತಿದ್ದಾರೆ. ಅದಲ್ಲದೆ ಕಾಂಗ್ರೆಸ್ಸಿನವರು ಆಖೈರಿನಲ್ಲಿ ಒಂದು ಸವನಿಯರನ್ನು ಹೊರಡಿಸಿ ಅದರಿಂದ ಏನಿಲ್ಲಾ ಅಂದರೂ ಒಂದು ಲಕ್ಷ ರೂಪಾಯಿಗಳನ್ನು ಸಂಪಾದನೆ ಮಾಡಿಕೊಳ್ಳುತ್ತಾರೆ. ಹತ್ತು ಸಾವಿರ ರೂಪಾಯಿ ಜಾಹಿರಾತುಗಳಿಂದ ಬರುತ್ತದೆ. ಆದ್ದರಿಂದ ನಾನು ಇದನ್ನು ಬಹಳ ಕಳಕಳಿಯಿಂದ ವಿರೋಧಮಾಡಬೇಕಾಗಿದೆ. ಇದಕ್ಕೆ ಮುಖ್ಯ ಕಾರಣ ಅದು ಒಂದು ಪಕ್ಷದ ಹಿತಸಂರಕ್ಷಣೆಗಾಗಿ ಆಕ್ರಮ ಸಂಪಾದನೆ ಮಾಡುತ್ತಿರುವುದು ಸರಿಯಲ್ಲ ಅನ್ನುವುದು. ಆ ವಸ್ತುಪ್ರದರ್ಶನ ದೇಶದಲ್ಲಿರತಕ್ಕ ಎಲ್ಲ ಜನಕ್ಕೂ ಸೇರಿದ್ದರೂ ಅದರ ಸಂಪಾದನೆ ಮಾತ್ರ ಕೆಲವೇ ಜನರಿಗೆ ಲಭಿಸುತ್ತಿದೆ. ಅದು ಅಕ್ಷಮ್ಯವಾದುದ್ದು. ಇನ್ನು ರಾಜ್ಯದಲ್ಲಿ ಇರತಕ್ಕ ಈ ಸಚಿವರುಗಳಾದರೋ ಒಂದು ಪಕ್ಷಕ್ಕೆ ಸೇರಿದ್ದರೂ ಅವರು ಮಂತ್ರಿಗಳಾದ ತಕ್ಷಣ ಅವರು ಇಡೀ ದೇಶಕ್ಕೆ ಸೇರಿದ ಜನರಾಗುತ್ತಾರೆ. ಆದರೆ ಇವರಲ್ಲಿ ಅಂಥ ವಿಶಾಲಭಾವನೆ ಇಲ್ಲ. ಆ ವಸ್ತುಪ್ರದರ್ಶನದ ಕಮಿಟಿಯಲ್ಲಿ ನಮ್ಮ ರಾಜ್ಯದಲ್ಲಿ ಸಚಿವರುಗಳಾಗಿರತಕ್ಕ ಶ್ರೀಮಾನ್ ಮಹಮದಾಲಿಯವರು, ರಾಮಕೃಷ್ಣ ಹೆಗಡೆಯವರು, ಕೆ. ವಿ. ಶಂಕರೇಗೌಡ, ಕೆ. ಲಕ್ಕಪ್ಪನವರು ಮತ್ತು ಎಂ. ರಾಜಶೇಖರಮೂರ್ತಿಯವರು ಸದಸ್ಯರುಗಳಾಗಿದ್ದಾರೆ. ಈ ಐದು ಜನ ಮಂತ್ರಿಗಳಲ್ಲದೆ ಅದಕ್ಕೆ ಪ್ರತ್ಯೇಕವಾಗಿ ಒಬ್ಬ ವೈಸ್ ಛೇರ್ಮನ್ನರೂ ಮತ್ತು ಸ್ಟೇಟ್‌ಮಿನಿಸ್ಟರ್ ಆದ ಶ್ರೀ ಎ. ಜೆ. ದೊಡ್ಡಮೇಟಿಯವರೂ ಅಲ್ಲಿದ್ದಾರೆ. ಇಷ್ಟು ಜನ ಮಂತ್ರಿಗಳನ್ನು ಅಲ್ಲಿ ಬಳಸಿಕೊಂಡು ಆ ಒಂದು ಕಾಂಗ್ರೆಸ್ ಪಕ್ಷ ತನ್ನ ಹಿತಸಾಧನೆಯನ್ನು ಮಾಡಿಕೊಳ್ಳುತ್ತಿದೆ. ಇದು ಅಧಿಕಾರದ ದುರುಪಯೋಗವಲ್ಲದೆ ಮತ್ತೇನು! ಜನರು ಇಷ್ಟೆಲ್ಲಾ ಆರೋಪಣೆ ಮಾಡುತ್ತಿದ್ದರೂ ಸರ್ಕಾರಕ್ಕೆ ಇದಿನ್ನೂ ಅರಿವಾಗಲಿಲ್ಲ ಎಂದರೇನು ಅರ್ಥ? ಒಟ್ಟಿನಲ್ಲಿ ಯಾರು ಏನು ಬೇಕಾದರೂ ಹೇಳಿಕೊಳ್ಳಲಿ ಕಾಂಗ್ರೆಸ್ ಫಂಡಿಗೆ ಹಣ ಬಂದರಾಯಿತು ಎನ್ನತಕ್ಕ ಮನೋಭಾವನೆ ಈ ಕಾಂಗ್ರೆಸ್ ಮಂತ್ರಿಗಳಲ್ಲಿ ಇದ್ದಹಾಗಿದೆ. ಇವರು ಒಂದು ಪಕ್ಷವನ್ನು ಉದ್ಧಾರಮಾಡುವುದಕ್ಕಾಗಿ ಬಂದಿರತಕ್ಕ ಮಂತ್ರಿಗಳೇ ವಿನಾ ದೇಶವನ್ನು ಉದ್ಧಾರಮಾಡಲು ಇವರು ಬಂದಿಲ್ಲ, ಖಾಸಗೀ ಜನರ ಮೇಲೆ ಈ ಮಂತ್ರಿಗಳು ನಾನಾ ಮುಖನಾಗಿ ತಮ್ಮ ಪ್ರಭಾವವನ್ನು ಬೀರಿ ಹಣವನ್ನು ತಮ್ಮ ಸಂಸ್ಥೆಗೆ ಗಳಿಸುತ್ತಿದ್ದಾರೆ. ಇದು ಸರ್ಕಾರದ ಸಹಾಯದಿಂದ ಕಾಂಗ್ರೆಸ್ ಸಂಸ್ಥೆ ದೇಶದಲ್ಲಿರತಕ್ಕ ಹಣವನ್ನು ದರೋಡೆಮಾಡಿದಂತೆ ಆಗಿದೆ. ಇದು ಈ ರಾಜ್ಯದ ದುರ್ದೈವ. ನಾನು ಅದಕ್ಕಾಗಿ ಈಗ ಇವರಿಗೆ ಎಚ್ಚರಿಕೆ ಕೊಡುವುದೇನೆಂದರೆ ಕಾಂಗ್ರೆಸ್ ಪಕ್ಷದವರು ಕೂಡಲೆ ಎಚ್ಚರಗೊಂಡು ಆ ಮಳಿಗೆಗಳನ್ನು ರದ್ದುಗೊಳಿಸಬೇಕು. ಕಾಂಗ್ರೆಸ್ ವಿರೋಧಿಗಳೆಲ್ಲಾ ಕಾಂಗ್ರೆಸ್ ವಸ್ತುಪ್ರದರ್ಶನಕ್ಕೆ ಬರುತ್ತಿದ್ದಾರೆಂಬ ಪ್ರಚಾರವನ್ನು ತಡೆಗಟ್ಟಬೇಕು. ಇದನ್ನು ನಾನು ಖಂಡತುಂಡವಾಗಿ ವಿರೋಧಿಸುತ್ತಿದ್ದೇನೆ. ಸರ್ಕಾರವನ್ನು ಪಕ್ಷದ ಕೈಗೊಂಬೆಯನ್ನಾಗಿ ಮಾಡಿಕೊಂಡು ಸರ್ಕಾರದ ಬೊಕ್ಕಸದಲ್ಲಿರತಕ್ಕ ಹಣವನ್ನು ಸರ್ಕಾರಕ್ಕೆ ಸಲ್ಲಬೇಕಾದ ಹಣವನ್ನು ತನ್ನ ಒಂದು ಪಕ್ಷದ ಏಳಿಗೆಗಾಗಿ ಗಳಿಸುತ್ತಿರುವುದು ಬಹಳ ಅಕ್ಷಮ್ಯವಾದ ಕಾರ್ಯ. ಇವರಿಗೆ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇದ್ದರೆ ಹೀಗೆ ಒಂದು ಪಾರ್ಟಿಯನ್ನು ಬೆಳೆಸುವುದಕ್ಕೆ ಇಷ್ಟು ಅನ್ಯಾಯಕ್ಕೆ ಅವಕಾಶ ಕೊಡುತ್ತಿರಲಿಲ್ಲ. ಆದ್ದರಿಂದ ಇವರಿಗೆ ಈ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇದ್ದಹಾಗೆ ಕಂಡುಬರುತ್ತಿಲ್ಲ. ಸರ್ಕಾರಿ ಕೆಲಸವನ್ನು ಬಿಟ್ಟು ಐದು ಜನ ಮಂತ್ರಿಗಳು ಒಂದು ಸಂಸ್ಥೆಗೆ ಸಂಪಾದನೆಯನ್ನುಂಟು ಮಾಡಲು ಹೋಗು

ಬೇಕಾಗಿದ್ದರೆ ಅವರು ಮಂತ್ರಿಗಳಾಗಿರುವುದಕ್ಕೆ ಸಾಧ್ಯವೇ ಇಲ್ಲ. ಅವರು ಇಲ್ಲವೇ ಆ ಸಂಸ್ಥೆಯ ನೆಂಬರ್‌ಶಿಪ್‌ನ ಉಳಿಸಿಕೊಂಡು ಇಲ್ಲಿ ತಮ್ಮ ಮಂತ್ರಿಸ್ಥಾನವನ್ನು ಕೈಬಿಡಲಿ, ಇಲ್ಲವೇ ಆ ಸಂಸ್ಥೆಯ ನೆಂಬರ್‌ಶಿಪ್‌ನ ಕೈಬಿಟ್ಟು ಮಂತ್ರಿಗಳಾಗಿ ಕೆಲಸಮಾಡಬೇಕು. ಎರಡನ್ನೂ ಮಾಡುತ್ತೇವೆಂದರೆ ದೇಶಕ್ಕೆ ಅದರಿಂದ ಬಹಳ ಹಾನಿಯಾಗುತ್ತದೆ. ಜನರನ್ನು ಹೆದರಿಸಿ ಬೆದರಿಸಿ ಜಾಹೀರಾತುಗಳನ್ನು ಪಡೆಯುವುದು ಖಂಡಿತ ಯೋಗ್ಯವಾದದ್ದಲ್ಲ. ಇದನ್ನೆಲ್ಲಾ ಕೂಡಲೆ ಇವರು ನಿಲ್ಲಿಸಬೇಕು. ಮಂತ್ರಿಗಳು ವಸ್ತುಪ್ರದರ್ಶನದಲ್ಲಿ ಪ್ರತ್ಯೇಕವಾಗಿ ಭಾಗವಹಿಸುತ್ತಿರುವುದರಿಂದ ಜನಕ್ಕೆ ಕಾಂಗ್ರೆಸ್ಸಿನ ಮೇಲೆ ಅಭಿಮಾನವಿಲ್ಲದಿದ್ದರೂ—ಒಂದುವೇಳೆ ವಿರೋಧವಿದ್ದರೂ ಮಂತ್ರಿಗಳನ್ನು ತೃಪ್ತಿಪಡಿಸಲು ಅವರನ್ನು ಮೆಚ್ಚಿಸುವುದಕ್ಕಾಗಿ ಅವರು ಕೇಳತಕ್ಕ ಪ್ರಕಾರ ಅಡ್ವರ್‌ಟೈಜ್‌ಮೆಂಟನ್ನು ಕೊಡಬೇಕು. ಹೀಗೆಲ್ಲಾ ಮಾಡಿ ಬಲೋದ್ಬಂಧನದಿಂದ ಹಣವನ್ನು ಸುಲಿಗೆಮಾಡುತ್ತಿರುವುದು ಬಹಳ ಅಪರಾಧ. ಇದನ್ನು ಕೂಡಲೇ ನಿಲ್ಲಿಸಬೇಕು. ಹೀಗೆ ನಾನಾ ಮಾರ್ಗದಲ್ಲಿ ಹಣ ಸಂಪಾದನೆ ಮಾಡುವುದಕ್ಕೆ ನಡೆಸತಕ್ಕ ಪ್ರದರ್ಶನ ಅದು ವಸ್ತುಪ್ರದರ್ಶನವಾಗುವುದಿಲ್ಲ—ಅದನ್ನೊಂದು ಮಾರಮ್ಮನ ಜಾತ್ರೆ ಎಂದು ಕರೆಯಬಹುದು. ಜನರನ್ನು ಹೆದರಿಸಿ ಬೆದರಿಸಿ ಹಣವನ್ನು ಅವರಿಂದ ಸುಲಿಗೆ ಮಾಡಿಕೊಂಡು ಯಾರು ಕಾಂಗ್ರೆಸ್ ಪಕ್ಷದಲ್ಲಿ ಚುನಾವಣೆಗೆ ನಿಂತು ಸೋತಿದ್ದಾರೋ ಅಂಥವರಿಗೆ ಕಾರು ಭತ್ಯ, ಸಂಬಳ ಇತ್ಯಾದಿಗಳನ್ನು ಕೊಡುವುದಕ್ಕಾಗಿ ಈ ಹಣವನ್ನು ಬಳಸಲಾಗುತ್ತಿದೆ. ವಸ್ತುಪ್ರದರ್ಶನಕ್ಕೆ ತಗಲುವ ಎಲ್ಲಾ ವೆಚ್ಚಗಳನ್ನೂ ಕಳೆದು ಸುಮಾರು ಕಾಂಗ್ರೆಸ್ ಸಂಸ್ಥೆಗೆ 8–10 ಲಕ್ಷ ರೂಪಾಯಿಗಳು ಉಳಿಯುತ್ತವೆ. ಅದು ಎಂ. ಪಿ. ಸಿ. ಸಿ. ಗೆ ಸಂತರ್ಪಣೆಗೆ ವಿನಿಯೋಗವಾಗುತ್ತದೆ. ಸಾರ್ವಜನಿಕರು ತೆರಿಗೆ ರೂಪದಲ್ಲಿ ಕೊಟ್ಟಂಥ ಹಣವನ್ನು ಸರ್ಕಾರದವರು ತಮ್ಮ ಕಾಂಗ್ರೆಸ್ ಪಕ್ಷದ ಚುನಾವಣೆಗೋಸ್ಕರ ಉಪಯೋಗಿಸುತ್ತಿದ್ದಾರೆ. ಇವತ್ತಿನ ದಿವಸ ಅಲ್ಲಿರುವವರು ಯಾವ ಜನರೆಂದರೆ, ಯಾರು ಇವರಿಗೆ ಚುನಾವಣೆಯಲ್ಲಿ ಬೆಂಬಲ ಕೊಟ್ಟಿದ್ದರೋ ಅಂತಹವರ ಜೀವನವನ್ನು ನಡೆಸುವುದಕ್ಕೋಸ್ಕರ ಸರ್ಕಾರದ ಹಣವನ್ನು ಉಪಯೋಗಿಸುತ್ತಿದ್ದಾರೆ. ಇವರು ಯಾರ ಹಣವನ್ನು ಖರ್ಚುಮಾಡುವುದು ? ಇದು ಸರ್ಕಾರದ ಹಣ. ಸಾರ್ವಜನಿಕರ ಹಣ. ಸಾಮಾನ್ಯ ಜನರ ಹಣ. ಈ ಹಣವನ್ನು ಇವರು ವಸ್ತುಪ್ರದರ್ಶನ ರೂಪದಲ್ಲಿ ಖರ್ಚುಮಾಡುತ್ತಿದ್ದಾರೆ ಎಂದು ಬಹಳ ವ್ಯಥೆಯಿಂದ ಈ ಮಾತನ್ನು ಹೇಳಬೇಕಾಗಿದೆ. ಅದಕ್ಕಾಗಿ ನಾನು ಗುರುತರವಾದ ಆಪಾದನೆಯನ್ನು ಮಾಡುತ್ತಿದ್ದೇನೆ. ಅಲ್ಲಿ ಯಾರಾದರೂ ಕೆಲಸವನ್ನು ಕೇಳುವುದಕ್ಕೆ ಹೋದಾಗ ಅಲ್ಲಿನ ಉಪಾಧ್ಯಕ್ಷರಾದ ಮಾನ್ಯ ಶ್ರೀ ವೈ. ರಾಮಚಂದ್ರ ಎಂಬುವರು......

4–00 P.M.

ಶ್ರೀ ಕೆ. ಎಚ್. ಶ್ರೀನಿವಾಸ.—ಇಲ್ಲಿ ಯಾರು ಸಭಾಸದಸ್ಯರಲ್ಲವೋ ಅವರ ಬಗ್ಗೆ ಆಪಾದನೆಗಳನ್ನು ಮಾಡತಕ್ಕದ್ದು ಈ ಸಭೆಯ ನಿಯಮಾವಳಿಗಳ ಪ್ರಕಾರ ಸರಿಯಲ್ಲ. ಅದಕ್ಕೆ ಅವಕಾಶವಿಲ್ಲ.

ಉಪಾಧ್ಯಕ್ಷರು.—ಆ ರೀತಿಯಾಗಿ ಆಪಾದನೆಗಳನ್ನು ಮಾಡುವುದಕ್ಕೆ ಇಲ್ಲಿ ಅವಕಾಶವಿಲ್ಲ.

Hon'ble Member should not mention the names or make allegations against any person who is not present in the House.

ಶ್ರೀ ವಾಟಾಳ್ ನಾಗರಾಜ್.—ನಾನು ಅವರ ಹೆಸರನ್ನು ಹೇಳಬೇಕೆಂಬ ಉದ್ದೇಶವಿಲ್ಲ. ಅವರ ಹೆಸರನ್ನು ನಾನು ಹೇಳುವುದಕ್ಕೆ ಅವರೇನು ಹರಿಶ್ಚಂದ್ರರೇ, ಅಥವಾ ದೇವರೇ ! ಈ ಸಮಿತಿಯಲ್ಲಿ ಮಾನ್ಯ ಶ್ರೀ ವೈ. ರಾಮಚಂದ್ರ ಅವರು ಇದ್ದಾರೆ. ಅವರು ಯಾರು ಅಂದರೆ, ನನ್ನ ಕ್ಷೇತ್ರದಲ್ಲಿರುವವರು. ಚುನಾವಣೆಯಲ್ಲಿ ಸೋತಿರುವವರು. ಯಾರಾದರೂ ನಮ್ಮ ಕ್ಷೇತ್ರದ ಜನರು ಅಲ್ಲಿಗೆ ಹೋಗಿ ಏನಾದರೂ ಕೆಲಸ ಕೇಳಿದಾಗ ಅವರು ಏನು ಕೇಳುತ್ತಾರೆಂದರೆ, ನೀವು ಕಾಂಗ್ರೆಸ್ಸಿಗೆ ದುಡಿದಿದ್ದೀರಾ, ಕಾಂಗ್ರೆಸ್ಸಿಗೆ ಓಟು ಕೊಟ್ಟಿದ್ದೀರಾ ಎಂದು.

ಉಪಾಧ್ಯಕ್ಷರು.—ಹೆಸರು ಮೆನ್‌ಷನ್ ಮಾಡಿದರೆ ಸರಿಹೋಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಅದನ್ನು ಮತ್ತೆ ಮೆನ್‌ಷನ್ ಮಾಡುವುದಿಲ್ಲ. ಅವರು ಬಿ. ಸಿ. ಡಿ. ಸಿ. ಅಧ್ಯಕ್ಷರು. ಯಾರಾದರೂ ಅಲ್ಲಿ ಕೆಲಸ ಬೇಕೆಂದು ಅಲ್ಲಿಗೆ ಹೋದರೆ ನೀನು ಯಾವ ಪ್ರದೇಶದಿಂದ ಬಂದಿದ್ದೀಯೇ ? ಚಿಕ್ಕಪೇಟೆಯೋ, ಬಳೇಪೇಟೆಯೋ ಎಂದು ಕೇಳುತ್ತಾರೆ.

ಶ್ರೀ ಕೆ. ಎಚ್. ಶ್ರೀನಿವಾಸ.—ಮಾನ್ಯ ಸದಸ್ಯರು ಸತ್ಯಕ್ಕೆ ದೂರವಾದಂಥ ಮಾತನ್ನು ಹೇಳುತ್ತಿದ್ದಾರೆ. ಅವರು ಆ ರೀತಿ ಹೇಳಬಾರದು. ಅವರ ನಡತೆ ಬಗ್ಗೆ ಹೇಳುತ್ತಿದ್ದಾರೆ. ಅದು ಟೀಕೆ ಮಾಡಿದಂತಾಗುತ್ತದೆ.

ಉಪಾಧ್ಯಕ್ಷರು.—ಮಾನ್ಯ ಸದಸ್ಯರು ರೂಲ್ಸನ್ನು ಚೆನ್ನಾಗಿ ತಿಳಿದುಕೊಂಡಿದ್ದಾರೆ. ಈ ಸಭೆಯ ಸದಸ್ಯರಲ್ಲದವರ ಹೆಸರನ್ನು ಹೇಳಿ ಅವರ ಬಗ್ಗೆ ಯಾವ ಅಪಾದನೆಯನ್ನೂ ಮಾಡಬಾರದು. ಅದಕ್ಕೆ ರೂಲ್ಸ್ ಪ್ರಕಾರ ಇಲ್ಲಿ ಅವಕಾಶವಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಬಿ. ಸಿ. ಡಿ. ಸಿ. ಅಧ್ಯಕ್ಷರ ಹೆಸರನ್ನು ನಾನು ಈಗಾಗಲೇ ಹೇಳಿದ್ದೇನೆ. ಅವರ ಹತ್ತಿರ ಕೆಲಸಕ್ಕೆ ಯಾರಾದರೂ ಬಂದರೆ, ಅವರು ಮೊದಲು ನಾನು ಕಾಂಗ್ರೆಸ್ಸಿಗೆ ಓಟು ಕೊಡುತ್ತೇನೆಂದು ಪ್ರಾಮಿಸ್ ಮಾಡಬೇಕೆಂದು ಹೇಳಬೇಕು. ಇಂತಹ ನಿಯಮವನ್ನು ಅವರು ಹಾಕುತ್ತಿದ್ದಾರೆ.

ಶ್ರೀ ಕೆ. ಎಚ್. ಶ್ರೀನಿವಾಸ.—ಮಾನ್ಯ ಸದಸ್ಯರು ಆ ರೀತಿ ಮಾತನಾಡುವುದು ಸರಿಯಲ್ಲ.

ಶ್ರೀ ವಾಟಾಳ್ ನಾಗರಾಜ್.—ಅವರು ನನಗೆ ಬಹಳ ಬೇಕಾದವರು. ನಾನು ಖಂಡಿತವಾಗಿ ಅವರನ್ನು ಅಪಾದನೆ ಮಾಡುತ್ತಾ ಇಲ್ಲ. ನಾನು ಆ ವಿಷಯವನ್ನು ಇಲ್ಲಿ ಹೇಳಬೇಕಾಗುತ್ತದೆ. ಏಕೆಂದರೆ, ಸರ್ಕಾರ ಇದಕ್ಕಾಗಿ ಎರಡೂವರೆ ಲಕ್ಷ ರೂಪಾಯಿಗಳನ್ನು ಕೊಡತ್ತಿದೆ. ಈ ದುಡ್ಡು ಕಾಂಗ್ರೆಸ್ಸದು ಅಲ್ಲ. ಯಾರಪ್ಪನ ಮನೆ ಆಸ್ತಿ? ದುಡ್ಡು ಕಾಂಗ್ರೆಸ್ ಫಂಡಿಗೆ ಸಂಬಂಧ ಪಟ್ಟಿದ್ದರೆ, ಅವರು ಮಜಾ ಮಾಡಲಿ. ಇದು ಸರ್ಕಾರದ ದುಡ್ಡು. ಎರಡೂವರೆ ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದೇವೆ. ಸರ್ಕಾರದ ಹಣವನ್ನು ಕೊಡುವಾಗ ಇದನ್ನು ಕಾಂಗ್ರೆಸ್ ಪಕ್ಷದ ಹೆಸರಿನಲ್ಲಿ ನಡೆಸುತ್ತೇವೆಂದು ಹೇಳುತ್ತಾರೆ. ಈ ಒಂದು ವಸ್ತು ಪ್ರದರ್ಶನಕ್ಕೆ ನನ್ನ ಕ್ಷೇತ್ರದಿಂದಲೂ ಕೆಲವರು ಕೆಲಸಕ್ಕಾಗಿ ಅರ್ಜಿಗಳನ್ನು ಹಾಕಿದ್ದಾರೆ. ಬೆಂಗಳೂರಿನ ಅನೇಕ ಜನರೂ ಸಹ ಅರ್ಜಿಗಳನ್ನು ಹಾಕಿದ್ದಾರೆ. ಅವರು ಅಲ್ಲಿಗೆ ಕೆಲಸಕ್ಕಾಗಿ ಹೋದತಕ್ಷಣ, ನೀನು ಕಾಂಗ್ರೆಸ್ಸಿಗೋಸ್ಕರ ಕೆಲಸ ಮಾಡಿದ್ದೀಯೋ! ನಾನು ಅಂತಹವರಿಗೇ ಕೆಲಸ ಇಲ್ಲಿ ಕೊಡುವುದು ಎಂಬುದಾಗಿ ಹೇಳುತ್ತಾರೆ.

Sri K. H. SRINIVAS.—On a p int of Order. Personal charges are made. I expect a ruling from the Chair in this behalf.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಸದಸ್ಯರು ದುರ್ಯೋಧನ ಇದ್ದ ಹಾಗೆ ಇದ್ದಾರೆ. ಆದರೆ ಈ ವೇಷ ಹಾಕುತ್ತಿದ್ದಾರೆ.

ಶ್ರೀ ಕೆ. ಎಚ್. ಶ್ರೀನಿವಾಸ.—ಈ ಸಭೆಯ ಮುಂದೆ ಇರತಕ್ಕ ವಿಷಯ, ಸರ್ಕಾರದವರು ಕಾಂಗ್ರೆಸ್ ವಸ್ತು ಪ್ರದರ್ಶನಕ್ಕೆ ಏನು ಸೌಲಭ್ಯಗಳನ್ನು ಕೊಟ್ಟಿದ್ದಾರೆಂಬ ಪ್ರಶ್ನೆ. ಅಂದಮೇಲೆ ಈ ಸಭೆಗೆ ಸಂಬಂಧಪಡದೆ ಇರತಕ್ಕ ವ್ಯಕ್ತಿಯ ಬಗ್ಗೆ ಸುದೀರ್ಘವಾಗಿ ಈ ರೀತಿ ವೈಯಕ್ತಿಕವಾಗಿ ಅಪಾದನೆಗಳನ್ನು ಅಧ್ಯಕ್ಷರ ಮುನ್ಸೂಚನೆಯನ್ನು ಮೀರಿ ಮಾನ್ಯ ಸದಸ್ಯರು ಮಾತನಾಡುತ್ತಿದ್ದಾರೆ. ದಯವಿಟ್ಟು ಅವರು ಅದನ್ನು ನಿಲ್ಲಿಸಬೇಕೆಂದು ನನ್ನ ಪ್ರಾರ್ಥನೆ.

ಶ್ರೀ ಎಸ್. ಗೋಪಾಲಗೌಡ.—ಈಗ ಕಾಂಗ್ರೆಸ್ ಪಕ್ಷದವರು ಅಲ್ಲಿ ಇರುವುದರಿಂದ ರಾಜಕೀಯ ಮಾಡಬಹುದು

ಶ್ರೀ ಕೆ. ಎಚ್. ಶ್ರೀನಿವಾಸ.—ಯಾರು ಇಲ್ಲಿ ಹಾಜರು ಇಲ್ಲವೋ ಅವರ ಮೇಲೆ ವೈಯಕ್ತಿಕವಾಗಿ ಅಪಾದನೆ ಮಾಡಬಾರದು ಎಂಬುದಾಗಿ ನಾನು ಹೇಳಿದ್ದೇನೆ.

ಶ್ರೀ ಪಿ. ಅಂಜನಪ್ಪ.—ಮಾನ್ಯ ಶ್ರೀ ವಾಟಾಳ್ ನಾಗರಾಜ್ ಅವರು ಶ್ರೀ ಕೆ. ಎಚ್. ಶ್ರೀನಿವಾಸ ಅವರನ್ನು ದುರ್ಯೋಧನವೆಂಬುದಾಗಿ ಹೇಳಿದರು. ಹಿಂದೆ ಮಾನ್ಯ ಶ್ರೀ ಜಿ. ಬಿ. ಶಂಕರರಾವ್ ಅವರು 'ಓಹೋ' ಎಂದಿದ್ದಕ್ಕೆ ಅದನ್ನು ಅವರಿಂದ ವಿತ್‌ಡ್ರಾ ಮಾಡಿಸಿದ್ದೀರಿ. ಅಂದ ಮೇಲೆ ಇವತ್ತು ಆ ರೀತಿ ಏಕೆ ಹೇಳಿ ವಿತ್‌ಡ್ರಾ ಮಾಡಿಸಬಾರದು!

ಉಪಾಧ್ಯಕ್ಷರು.—ಈ ಸಭೆಯಲ್ಲಿ ಬಹಳ ಗೌರವವಾಗಿ ಮಾತನಾಡಬೇಕು.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಶ್ರೀ ಶ್ರೀನಿವಾಸ ಅವರಿಗೆ ನಾನು, ಅವರು ಸ್ನೇಹಿತರೆಂಬುದು ಗೊತ್ತಿಲ್ಲ. ಆದರೆ ಬಿ. ಸಿ. ಡಿ. ಸಿ. ಅಧ್ಯಕ್ಷರ ವಿಷಯವನ್ನು ಇಲ್ಲಿ ತರಬೇಡಿ ಎಂದು ಅವರು ಹೇಳುವುದಕ್ಕಾಗುವುದಿಲ್ಲ.

ಉಪಾಧ್ಯಕ್ಷರು.—ಈಗ 5 ಘಂಟೆಗೆ ಮುಖ್ಯ ಮಂತ್ರಿಗಳು ಉತ್ತರ ಹೇಳುತ್ತಾರೆ. ಆದ್ದರಿಂದ ಮಾನ್ಯ ಸದಸ್ಯರು ಜಾಗ್ರತೆಯಾಗಿ ಅವರ ಭಾಷಣವನ್ನು ಮುಗಿಸಬೇಕು. ಏಕೆಂದರೆ ಇನ್ನೂ ಅನೇಕ ಮಾನ್ಯ ಸದಸ್ಯರು ಮಾತನಾಡಬೇಕಾಗಿದೆ.

ಶ್ರೀ ವಾಟಾಳ್ ನಾಗರಾಜ್.—ಅವರು ಮಾಡತಕ್ಕ ವಿಷಯ ಇನ್ನೊಂದಿದೆ. ಅಲ್ಲಿಗೆ ಕೆಲವು ಕಲಾವಿದರು ಹೋಗಿದ್ದಾರೆ. ನಮಗೆ ನಾಟಕ ಕೊಡಿ ಎಂದು. ಅವರನ್ನೂ ಸಹ ನೀವು ಯಾವ ಪ್ರದೇಶದಿಂದ ಬಂದಿದ್ದೀರಿ, ನೀವೇನಾದರೂ ಕಾಂಗ್ರೆಸ್ಸಿಗೆ ಕೆಲಸ ಮಾಡಿದ್ದೀರಾ, ಅಂತಹವರಿಗೆ ಮಾತ್ರ ಇಲ್ಲಿ ಅವಕಾಶ ಕೊಡುವುದು. ನಾನು ಇದರ ಬಗ್ಗೆ ಹೇಳುವುದರಿಂದ ಮತ್ತಷ್ಟು ಮಾನ್ಯ ಸದಸ್ಯರಿಗೆ ಖಾರ ಆಗಬಹುದು.

ಶ್ರೀ ಕೆ. ಎಚ್. ಶ್ರೀನಿವಾಸ.—ಈ ಸಭೆಯಲ್ಲಿರುವ ವಿಷಯ ಅದಲ್ಲ. ಈ ಸಭೆಯಲ್ಲಿ ಸರ್ಕಾರದವರ ಜವಾಬ್ದಾರಿ ಪ್ರಶ್ನೆ ಇದೆ. ವೈಯಕ್ತಿಕವಾಗಿ ಬಿ. ಸಿ. ಡಿ. ಸಿ. ಅಧ್ಯಕ್ಷರ ಮೇಲೆ ಆಪಾದನೆ ಮಾಡುವುದು ಸರಿಯಲ್ಲ.

ಶ್ರೀ ವಾಟಾಳ್ ನಾಗರಾಜ್.—ತಮ್ಮ ಪ್ರತಾಪವನ್ನು ಮತ್ತು ತಮ್ಮ ಅಧಿಕಾರವನ್ನು ದುರುಪಯೋಗಪಡಿಸಿ ಒಂದು ಪಕ್ಷ ನಡೆಸತಕ್ಕ ವಸ್ತುಪ್ರದರ್ಶನದ ಮಳಿಗೆಗಳಿಗೆ ಸರ್ಕಾರದವರು 3 ಲಕ್ಷ ರೂಪಾಯಿ ಕೊಡುವುದನ್ನು ಮಾನ್ಯ ಶ್ರೀ ವೀರೇಂದ್ರ ಪಾಟೀಲರು ಕೈಬಿಡಬೇಕು. ಏಕೆಂದರೆ ಮಾನ್ಯ ವೀರೇಂದ್ರ ಪಾಟೀಲರು ಬಹಳ ಹೇಳುತ್ತಿದ್ದರು, ಪ್ರಜಾಪ್ರಭುತ್ವದಲ್ಲಿ ನನಗೆ ಅಪಾರವಾದ ನಂಬಿಕೆ ಇದೆ, ಹಾಗೆ ಹೀಗೆ ಎಂದು. ಈಗ ತೆಗೆದುಕೊಳ್ಳತಕ್ಕ ನಿರ್ಣಯದಲ್ಲಿ ಅವರ ಮಾತನ್ನು ಎಲ್ಲಾ ಇಲ್ಲಿ ತೋರಿಸಬೇಕು, ಇಲ್ಲದಿದ್ದರೆ ಇದರ ಬಗ್ಗೆ ಬೆಂಗಳೂರಿನ ಜನ ಕಾಂಗ್ರೆಸ್ ವಸ್ತುಪ್ರದರ್ಶನದ ಬಗ್ಗೆ ಒಂದು ನಿರ್ಣಯವನ್ನು ಮಾಡಬೇಕಾಗುತ್ತದೆ ಎಂದು ಹೇಳಿ, ಮಾತನಾಡಲು ಅವಕಾಶ ಕೊಟ್ಟಂತಹ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಸಭಾಪತಿಯವರೇ, ಈಗ ಮಾನ್ಯ ಶ್ರೀನಿವಾಸರವರು ಮಾತನಾಡುತ್ತಾ ಒಂದು ವಿಚಾರವನ್ನು ಹೇಳಿದರು—ಅದೇನೆಂದರೆ, ಇವತ್ತು ನಮ್ಮ ಮುಂದಿಟ್ಟಿರುವ ವಿಷಯ ಈ ಕಾಂಗ್ರೆಸ್ ವಸ್ತುಪ್ರದರ್ಶನಕ್ಕೆ ಸರ್ಕಾರದವರು ಯಾವ್ಯಾವ ರೀತಿಯ ಸಹಾಯವನ್ನು ಮಾಡಿದ್ದಾರೆ, ಮಾಡಿರುವುದು ಸರಿಯೇ, ಇಲ್ಲವೇ ಇಷ್ಟು ಮಾತ್ರ ಇದೆ ವಿನಹ ಬೇರೆ ವಿಚಾರಗಳನ್ನು ಇಲ್ಲಿ ಚರ್ಚೆ ಮಾಡಕೂಡದು ಎಂದು ಹೇಳಿದ್ದಾರೆ. ನನಗಾದರೂ ಅನಿಸುತ್ತದೆ—ಈ ದಿನ ಕಾಂಗ್ರೆಸ್ ವಸ್ತುಪ್ರದರ್ಶನವನ್ನು ನಡೆಸುವುದಕ್ಕೆ ಬಿಟ್ಟಿರುವುದು ಮೊದಲನೆ ಸಾರಿ ಸರಿಯೇ, ಸರ್ಕಾರ ಇವತ್ತಿನ ದಿವಸ ಯಾವ ರೀತಿಯ ಸಹಾಯ ಮಾಡುತ್ತದೆ ಎಂಬುದು ಮಾತ್ರವಲ್ಲ ಮುಖ್ಯವಾದ ಪ್ರಶ್ನೆ. ಈ ವಿಚಾರ ನಿನ್ನೆ ಕೂಡ ಚರ್ಚೆಯಾಗಿದೆ. ಮುಖ್ಯವಾದುದು ಏನೆಂದರೆ, ಈ ತರಹ ಒಂದು ರಾಜಕೀಯ ಪಕ್ಷಕ್ಕೆ ವಸ್ತು ಪ್ರದರ್ಶನಕ್ಕೆ ಅವಕಾಶ ಕೊಡಬಹುದೇ ಎಂಬುದು ತತ್ವದ ಪ್ರಶ್ನೆ. ಎರಡನೆಯದು ಕೊಡುವುದಾದರೆ ಯಾವ ರೀತಿ ಕೊಡಬೇಕು, ? ಇವತ್ತು ಇದನ್ನು 99 ವರ್ಷ ಗುತ್ತಿಗೆ ಕೊಡುವಂತಹ ಯೋಜನೆಯನ್ನು ಮಾಡಿದ್ದಾರೆ. ಆ ತರಹ ಮಾಡಿರುವುದು ಸರಿಯೇ ! ಇದು ಒಂದು ತತ್ವದ ಪ್ರಶ್ನೆ. ಎರಡನೆಯ ಬಗ್ಗೆ ತೀರ್ಮಾನ ತೆಗೆದುಕೊಂಡಿದ್ದಾರೆ, ಅದರ ಬಗ್ಗೆ ಚರ್ಚೆ ನಡೆದು ಅದಕ್ಕೆ ಮುಖ್ಯಮಂತ್ರಿಯವರು ಹೇಳಿಕೆಯನ್ನು ಕೊಟ್ಟಿದ್ದಾರೆ. ಆದರೂ ಸಹ ನಾವು ಇದನ್ನು ಎರಡು ದೃಷ್ಟಿಯಲ್ಲಿ ನೋಡುತ್ತಿದ್ದೇವೆ. ಮೊದಲನೆಯದು, ಈಗ ಮಾಡಿರುವ ಪ್ರಶ್ನೆ ತೆಗೆದುಕೊಳ್ಳೋಣ. ಈ ತರಹ ಒಂದು 99 ವರ್ಷಕ್ಕೆ ಕೊಟ್ಟಿರುವುದು ಸರಿಯೇ ? ಇವೊತ್ತು ಬೆಂಗಳೂರಿನಲ್ಲಿ ಬೇಕಾದಷ್ಟು ಕಟ್ಟಡಗಳಿವೆ, ಅವುಗಳೆಲ್ಲವನ್ನೂ ಲೀಸಿಗೆ ತೆಗೆದುಕೊಂಡು ಕೊಟ್ಟಿದ್ದಾರೆ. ಒಂದು ಆರ್ಥಿಕ ದೃಷ್ಟಿಯಿಂದ, ಒಂದು ವ್ಯಾಪಾರದ ದೃಷ್ಟಿಯಿಂದ ಸರ್ಕಾರದವರು ಇವತ್ತು ಈ ವಿಚಾರದಲ್ಲಿ ಏನು ಮಾಡುತ್ತಿದ್ದಾರೆ, ಬೇರೆ ವಿಚಾರದಲ್ಲಿ ಏನು ಮಾಡುತ್ತಿದ್ದಾರೆ ? ಉದಾಹರಣೆಗೆ ಗುಪ್ತಾ ಮಾರ್ಕೆಟ್ ತೆಗೆದುಕೊಳ್ಳೋಣ. ಅಲ್ಲಿ ಅನೇಕ ಅಂಗಡಿಗಳನ್ನು ಕಟ್ಟಿಸಿದ್ದಾರೆ. ಅದಕ್ಕೆ ಕನಿಷ್ಠ 2,500 ರೂಪಾಯಿ ಕೊಡುತ್ತಿದ್ದರು, ಈಗ 10 ಸಾವಿರದ ತನಕ ಒಂದು ತಿಂಗಳಿಗೆ ಬಾಡಿಗೆ ಕೊಡುತ್ತಿದ್ದಾರೆ. ಕೆಲವು ವರ್ಷ ಲೀಸಿಗೆ ಕೊಟ್ಟು, ನಂತರ ಅದು ಅವರಿಗೆ ಹೋಗುತ್ತದೆ. ಅದೇ ರೀತಿ ಜಾರ್ಜ್ ಓಕ್ಸ್ ಕಟ್ಟಡ ಕೂಡ. ನಾಲ್ಕೈದು ವರ್ಷ ಅವರು ಹೀಗೆ ಕೊಟ್ಟು ಕೊಂಡು ಬಂದು ಸ್ವಲ್ಪ ವರ್ಷದ ನಂತರ ಅವರದ್ದೇ ಆಗುತ್ತದೆ. ಇಲ್ಲಿ ಏನಾಗಿದೆ ಅಂದರೆ, ಆ ತರಹ ಆಗಿಲ್ಲ. ಇನ್ನು ಎಂ.ಎಸ್.ಆರ್.ಟಿ.ಸಿ.ಗೆ ಪಕ್ಕದಲ್ಲಿ ಜಮೀನನ್ನು ಕೊಟ್ಟಿದ್ದಾರೆ. ಅದನ್ನು ಕೂಡ ಒಂದು ಚದರ ಗಜಕ್ಕೆ 125 ರೂಪಾಯಿ ತರಹ ಕೊಟ್ಟಿದ್ದಾರೆ. ಕನಿಷ್ಠ ಪಕ್ಷ ಇದನ್ನು ಲೆಕ್ಕಾಚಾರ ಹಾಕಿಕೊಂಡರೆ, ಅಥವಾ ಯಾವ ಆಧಾರದ ಮೇಲೆ ಕೊಡಬೇಕು, ಮಾರ್ಕೆಟ್ ಬೆಲೆ ಏನು ಎಂಬುದನ್ನೆಲ್ಲಾ ನೋಡಿದರೆ, ಅದಕ್ಕೆ ಒಂದೂವರೆ ಕೋಟಿ ರೂಪಾಯಿಗಳಾಗುತ್ತದೆ. ಈ ತರಹ ಅದನ್ನು ಒಂದು ಪಕ್ಷಕ್ಕೆ ಕೊಡುವುದು ಸರಿಯೇ ? ವ್ಯವಹಾರಿಕವಾಗಿ ಸರ್ಕಾರ ತೀರ್ಮಾನ ಮಾಡುವಾಗ ಅದರಿಂದ ಸರ್ಕಾರಕ್ಕೆ ಆದಾಯ ಬರುವಂತೆ ಮಾಡಬೇಕಾಗುತ್ತದೆ. ಕಾಂಗ್ರೆಸ್ ಪಕ್ಷಕ್ಕೆ ಕೊಡತಕ್ಕಂತದ್ದು ತಪ್ಪು. ಆರ್ಥಿಕ ದೃಷ್ಟಿಯಿಂದಲೂ, ವ್ಯಾಪಾರ ದೃಷ್ಟಿಯಿಂದಲೂ ನೀವು ಮಾಡಿರತಕ್ಕ ಡೀಲ್ ಏನಿದೆ, ಇದು ತೀರಾ ಅನ್ಯಾಯ, ಮತ್ತು ಇದರಿಂದ ಜನರಿಗೆ ಒಂದು ಮೋಸ, ವಂಚನೆ

(ಶ್ರೀ ಎಂ. ಎಸ್. ಕೃಷ್ಣನ್)

ಮಾಡಿದಂತೆ ಆಗಿದೆ. ಇವತ್ತು ನೀವು ಖರ್ಚು ಮಾಡುತ್ತಾ ಇರುವುದು ಜನಗಳ ದುಡ್ಡನ್ನು. ಇದನ್ನು ಮಾನ್ಯ ಶಂಕರಗೌಡರು ಮತ್ತು ಮುಖ್ಯ ಮಂತ್ರಿಯವರು ಯೋಚನೆ ಮಾಡಬೇಕಾಗಿದೆ. ಈ ರೀತಿ ಮಾಡುವಾಗ, ಒಂದು ಪ್ರಜಾಪ್ರಭುತ್ವದ ಸರ್ಕಾರವನ್ನು ಇವರು ನಡೆಸುವುದಕ್ಕೆ ಲಾಯಕ್ಕೇ ಎನ್ನುವ ಪ್ರಶ್ನೆ ನಮ್ಮ ಮುಂದೆ ಬರುತ್ತದೆ. ಇನ್ನೊಂದು ಏನೆಂದರೆ, ಈ ಪ್ರದರ್ಶನ ನಮಗೆ ಗೊತ್ತಿರುವ ಹಾಗೆ ಸಾಧಾರಣ 20 ವರ್ಷದಿಂದ ನಡೆಸುತ್ತಿದ್ದಾರೆ. ಒಬ್ಬ ನನ್ನ ಮಿತ್ರರು, ಕಾಂಗ್ರೆಸ್ಸಿನಲ್ಲಿ ಹಿಂದೆ ಇದ್ದವರು, ಅಲ್ಲಿನ ಒಳಜಗಳದಿಂದ ಹಿಂದೆ ಬಂದಂತವರು ನನಗೆ ಹೇಳಿದರು. ಅವರು ಹಿಂದೆ ಕಾಂಗ್ರೆಸ್ ಬಿ.ಪಿ.ಡಿ.ಸಿ. ಕಾರ್ಯದರ್ಶಿ ಆಗಿದ್ದಾಗ, ಅಂದರೆ 10 ವರ್ಷದ ಹಿಂದೆ ಒಂದು ದಿನಕ್ಕೆ ಇದರಲ್ಲಿ ಮೂರು ಸಾವಿರ ರೂಪಾಯಿ ಬರುತ್ತಿತ್ತಂತೆ. ಭಾನುವಾರ ಮತ್ತು ರಜಾ ದಿನಗಳಲ್ಲಿ 15 ಸಾವಿರದಿಂದ 20 ಸಾವಿರ ಬರುತ್ತಿತ್ತು, ಮತ್ತು ಆ ರೀತಿ ಲೆಕ್ಕಾಚಾರ ಹಾಕಿದರೆ ಸುಮಾರು 28 ಲಕ್ಷ ರೂಪಾಯಿ ಕಾಂಗ್ರೆಸ್ಸಿನವರು ಇದರಿಂದ ಹಣ ಮಾಡಿದ್ದಾರೆ. ಆದರೆ ಪುನಃ ಬೆಲೆ, ಟಿಕೆಟ್ ಬೆಲೆ ಜಾಸ್ತಿ ಮಾಡಿದ್ದಾರೆ; ಗ್ರೌಂಡ್ ರೆಂಟ್ ಜಾಸ್ತಿ ಮಾಡಿದ್ದಾರೆ; ಮತ್ತು ಇದರಿಂದ ವರಮಾನವೂ ಜಾಸ್ತಿಯಾಗಿದೆ. ನನಗೆ ತಿಳಿದಿರುವ ಪ್ರಕಾರ 10 ವರ್ಷಗಳಲ್ಲಿ ಸಾಧಾರಣ 92 ಲಕ್ಷ ರೂಪಾಯಿ ಇವರು ಪಡೆದಿದ್ದಾರೆ. ಆದ್ದರಿಂದ ಇದರಲ್ಲಿ ಏನಾದರೂ ತತ್ವ ಇದೆಯೇ? ನೀವು ಏನಾದರೂ ಶಾಲೆಗಳನ್ನು ಕಟ್ಟಿಸುತ್ತಿದ್ದೀರೋ, ಆಸ್ಪತ್ರೆಗಳನ್ನು ಕಟ್ಟಿಸುತ್ತಿದ್ದೀರೋ, ಅಥವಾ ಅನಾಥಾಲಯಗಳನ್ನು ಕಟ್ಟಿಸುತ್ತಿದ್ದೀರೋ? ಇವತ್ತು ನಿಮ್ಮ ಕಾಂಗ್ರೆಸ್ಸಿನ ಅನಾಥಾಲಯಕ್ಕೆ, ನಿಮ್ಮ ಕಾಂಗ್ರೆಸ್ಸಿನ ಚುನಾವಣಾ ಪ್ರಚಾರಕ್ಕಾಗಿ ಖರ್ಚು ಮಾಡುತ್ತಿದ್ದೀರಿ. ಆಡಳಿತದ ಉಪಯೋಗಕ್ಕೆ ಒಂದು ಪೈಸ ಕೂಡ ಖರ್ಚು ಮಾಡುತ್ತಾ ಇಲ್ಲ ಇದರ ಮಧ್ಯೆ ಯಾವ್ಯಾವ ಜನ, ಎಷ್ಟೆಷ್ಟು ನಾಯಕರು, ಕಮಿಶನ್ ಪಡೆಯುತ್ತಿದ್ದಾರೋ ಲಂಚಗಳನ್ನು ಪಡೆಯುತ್ತಿದ್ದಾರೋ? ನನಗೆ ಈ ವಿಚಾರಗಳನ್ನು ಯಾರು ಕಾಂಗ್ರೆಸ್ಸಿನಲ್ಲಿ ಸಂಪರ್ಕ ಇಟ್ಟುಕೊಂಡಿದ್ದಾರೋ, ಅವರು ಹೇಳಿದ್ದಾರೆ. ಅಂತಹ ಸತ್ಯವಂತರಿಗೆ ಕಾಂಗ್ರೆಸ್ಸಿನಲ್ಲಿ ಸ್ಥಾನವಿಲ್ಲದಾಗಿದೆ. ಅವರು ಕಾಂಗ್ರೆಸ್ಸಿನಲ್ಲೇ ಇದ್ದಾರೆ, ಕಾಂಗ್ರೆಸ್ ಟಿಕೆಟ್‌ಗೆ ಪ್ರಯತ್ನ ಮಾಡಿದಂಥವರು.

ಇನ್ನೊಂದು ವಿಚಾರವೇನೆಂದರೆ, ಈ ತರಹ ಆರ್ಥಿಕವಾಗಿ ಸರ್ಕಾರಕ್ಕೆ ಹಣ ಬರಬೇಕಾದರೆ, ಈ ತರಹ ಅಧಿಕಾರವನ್ನು ದುರುಪಯೋಗಪಡಿಸಿಕೊಳ್ಳುವುದು ಸರಿಯಲ್ಲ. ಯಾರ್ಯಾರು ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇಟ್ಟುಕೊಂಡಿದ್ದಾರೋ, ಅವರು ಈ ರೀತಿ ಒಂದೊಂದು ಪಕ್ಷಕ್ಕೋಸ್ಕರ ಅಧಿಕಾರವನ್ನು ದುರುಪಯೋಗ ಮಾಡುವುದು ಸರಿಯಲ್ಲ. ಇದು ಜನರು ಕೊಟ್ಟಿರುವ ಹಣ. ಇನ್ನೊಂದು ಅಂಶ. ಏನೆಂದರೆ, ನಮಗೆ ಉತ್ತರ ಕೊಡುವಾಗ, ಏನ್ರಿ, ಒಂದು ರಾಜಕೀಯ ಪಕ್ಷಕ್ಕೆ ಎಗ್ಸಿಬಿಷನ್ ನಡೆಸುವುದಕ್ಕೆ ಅಧಿಕಾರವಿಲ್ಲವೇ, ನಾಳೆ ಕಮ್ಯೂನಿಸ್ಟ್ ಪಕ್ಷ ಆಡಳಿತಕ್ಕೆ ಬಂದರೂ ಅವರು ಹೇಗೆ ಮಾಡುತ್ತಾರೆ ಎಂದು ಮಾನ್ಯ ಮಂತ್ರಿಯವರು ಯಾರಾದರೂ ಹೇಳಬಹುದು. ಆದರೆ ನಾನು ಮಾತ್ರ ಇಷ್ಟೇ ಹೇಳಬೇಕಾಗಿದೆ. ತಾವು ಇವತ್ತಿನ ದಿವಸ ಯಾವ ರೀತಿಯಲ್ಲಿ ನಡೆಸುತ್ತಿದ್ದೀರಿ? ದೇಶ ಯಾವ ರೀತಿ ಹೋಗುತ್ತಿದೆ ಎಂದು ನೋಡಿ. ಇವತ್ತಿನ ದಿವಸ ಪ್ರತಿಯೊಂದು ಕಡೆಯೂ ಕಾಂಗ್ರೆಸ್ ಪಕ್ಷವು ಸೋಲುತ್ತಿದೆ. ನಮ್ಮ ರಾಜ್ಯದಲ್ಲಿಯೂ ಕಾಂಗ್ರೆಸ್ಸಿನವರೂ ಸೋಲುತ್ತಿದ್ದಾರೆ. ಇವತ್ತು ದೇಶದ ಅರ್ಧ ಭಾಗದಲ್ಲಿ ಚುನಾವಣೆ ನಡೆಯಿತು.

ಮೊನ್ನೆ ಜನರಲ್ ಎಲೆಕ್ಷನ್‌ನಲ್ಲಿ ಪಶ್ಚಿಮ ಬಂಗಾಳ, ಪಂಜಾಬ್ ಮತ್ತು ಬಿಹಾರದಲ್ಲಿ ಕಾಂಗ್ರೆಸಿನವರು ಸೋತಿದ್ದಾರೆ. ವೆಸ್ಟ್ ಬೆಂಗಾಲ್ ಮತ್ತು ಪಂಜಾಬಿನಲ್ಲಿ ಸಂಯುಕ್ತರಂಗ ಸರ್ಕಾರಗಳು ಬರುತ್ತವೆ. ಬಿಹಾರದಲ್ಲಿ ಸ್ವತಂತ್ರ ಪಕ್ಷದವರು ಕಾಂಗ್ರೆಸ್‌ನವರಿಗೆ ಬೆಂಬಲ ಕೊಡುವುದರಿಂದ ಕಾಂಗ್ರೆಸ್ ಸರ್ಕಾರ ಬರುತ್ತದೆ ಎಂದು ಹೇಳುತ್ತಿದ್ದಾರೆ. ಒಂದು ಪಕ್ಷ ಇನ್ನೊಂದು ಪಕ್ಷಕ್ಕೆ ಅನುಕೂಲ ಮಾಡಿಕೊಡುವುದು ರಾಜಕೀಯಧೋರಣೆ ಸರಿಯಾದ್ದಲ್ಲ. ರಾಜಕೀಯ ಸಹಾಯವನ್ನು ಕೈಬಿಡಬೇಕು ಎನ್ನುವುದು ನನ್ನ ಅಭಿಪ್ರಾಯ.

ಇದರಲ್ಲಿ ಮುಖ್ಯವಾಗಿ ನನಗೆ ಗೊತ್ತಿರುವಹಾಗೆ ಪಶ್ಚಿಮ ಜರ್ಮನಿ, ಸೋವಿಯಟ್ ರಷ್ಯಾ ಮತ್ತು ಅಮೇರಿಕಾದೇಶಗಳಲ್ಲಿ ಎಗ್ಸಿಬಿಷನ್ ಅನ್ನು ಆಯಾ ಸರ್ಕಾರದವರೇ ಬೃಹತ್ ಪ್ರಮಾಣದಲ್ಲಿ ನಡೆಸುತ್ತಿದ್ದಾರೆ. ಸರ್ಕಾರದವರೇ ಆ ಎಗ್ಸಿಬಿಷನ್ ನಡೆಸಿದರೆ ಹೆಚ್ಚು ಹಣ ಬರುತ್ತದೆ ಎಂದು ತಿಳಿದ ಮೇಲೆ ಸರ್ಕಾರಕ್ಕೆ ಹಣ ಬರುವ ಹಾಗೆ ಮಾಡಿಕೊಳ್ಳಬಹುದು. ಈಗ ಕಾಂಗ್ರೆಸಿನಲ್ಲೇ ಯಾರಾದರೂ ವಿರೋಧ ಮಾಡಿದರೆ ಅವರನ್ನು ದೂರೀಕರಿಸುತ್ತಾರೆ. ಈಗ ನಾನು ತಮಗೆ ಒಂದು ಉದಾಹರಣೆಯನ್ನು ಹೇಳುತ್ತೇನೆ. ಶ್ರೀಮಾನ್ ದಯಾನಂದ ಸಾಗರ್ ಅವರಿಗೆ ನ್ಯಾಷನಲ್ ಫೇರ್ ಮಾಡುವುದಕ್ಕೆ ಸರ್ಕಾರದವರು ಜಾಗವನ್ನೇನೋ ಕೊಟ್ಟರು. ಶ್ರೀಮಾನ್ ವೀರೇಂದ್ರ ಪಾಟೀಲರು ಈ ನ್ಯಾಷನಲ್ ಫೇರಿಗೆ ಕೆಲವು ಅನುಕೂಲಗಳನ್ನು ಮಾಡಿಕೊಡುತ್ತೇವೆಂದು ಭರವಸೆ

ಯನ್ನು ಕೊಟ್ಟಿದ್ದರಂತೆ. ಆದರೆ ಅದರಂತೆ ಅವರು ಅನುಕೂಲ ಮಾಡಿಕೊಡಲಿಲ್ಲ. ಶ್ರೀಮಾನ್ ದಯಾನಂದ ಸಾಗರ್ ಅವರು ಎಗ್ಸಿಬಿಷನ್ ಮಾಡಿರುವುದು ಸರಿ, ಇವರು ಮಾಡಿರುವುದು ತಪ್ಪು ಎಂದು ನಾನು ಹೇಳುತ್ತಿಲ್ಲ. ಎಗ್ಸಿಬಿಷನ್ ಸರ್ಕಾರದವರೇ ನಡೆಸಲಿ ಎಂದು ನಾನು ಹೇಳುತ್ತೇನೆ. ಕಾಂಗ್ರೆಸ್ಸಿನವರನ್ನು ಟೀಕೆ ಮಾಡಿದವರನ್ನು ದೂರೀಕರಿಸುವುದು ಖಂಡನೀಯ. ಸುಭಾಷ್‌ನಗರದ ಮೈದಾನವನ್ನು ಕಾಂಗ್ರೆಸ್ ಎಗ್ಸಿಬಿಷನ್ ನಡೆಸುವುದಕ್ಕೆ ಕಾಂಗ್ರೆಸ್ ಪಕ್ಷಕ್ಕೆ ಕೊಡುವುದನ್ನು ಬೆಂಗಳೂರಿನ ಜನತೆ, ಮೈಸೂರು ರಾಜ್ಯದ ಜನತೆ ಪ್ರಬಲ ವಿರೋಧ ಮಾಡುತ್ತಾರೆ. ಆದ್ದರಿಂದ ಇದನ್ನು ಕೈ ಬಿಡಬೇಕು, ಸರ್ಕಾರದವರೇ ಎಗ್ಸಿಬಿಷನ್ ನಡೆಸಬೇಕು. ಈ ಬಗ್ಗೆ ಸರ್ಕಾರದವರು ಏನೊಂದು ತೀರ್ಮಾನವನ್ನು ತೆಗೆದುಕೊಂಡಿದ್ದಾರೆಯೋ ಅದನ್ನು ಪುನರ್ ವಿಮರ್ಶೆಮಾಡಬೇಕೆಂದು ನಾನು ಆಗ್ರಹ ಪೂರ್ವಕವಾಗಿ ಕೇಳಿಕೊಂಡು ನಾನು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಟಿ. ಆರ್. ಶಾಮಣ್ಣ (ಕೋಟೆ),—ಮಾನ್ಯ ಸಭಾಧ್ಯಕ್ಷರೇ, ಈ ಕಾಂಗ್ರೆಸ್ ವಸ್ತುಪ್ರದರ್ಶನವನ್ನು ಬೆಂಗಳೂರು ಡಿಸ್ಟ್ರಿಕ್ಟ್ ಕಾಂಗ್ರೆಸ್ ಕಮಿಟಿಯವರು 10 ವರ್ಷಗಳಿಂದ ನಡೆಸುತ್ತಿದ್ದರು. ಆಮೇಲೆ ಇದು ಲಾಭದಾಯಕವಾದ ವೃತ್ತಿ ಎಂದು ತಿಳಿದುಕೊಂಡು ಎಂ. ಪಿ. ಸಿ. ಸಿ. ಯವರು ನೇರವಾಗಿ ತಮ್ಮ ಆಡಳಿತಕ್ಕೆ ಇದನ್ನು ತೆಗೆದುಕೊಂಡು ಈಗ ಸುಮಾರು 8 ವರ್ಷಗಳಿಂದ ಈ ವಸ್ತುಪ್ರದರ್ಶನವನ್ನು ನಡೆಸುತ್ತಿದ್ದಾರೆ. ಈ ವಸ್ತುಪ್ರದರ್ಶನಕ್ಕೆ ಸಂಬಂಧಪಟ್ಟ ಹಾಗೆ ನನಗೆ ಖಚಿತವಾಗಿ ತಿಳಿದು ಬಂದಿರುವ ಪ್ರಕಾರ ಕೆಲವು ಅಂಕಿ ಅಂಶಗಳನ್ನು ತಮ್ಮ ಮುಂದೆ ಇಡುತ್ತೇನೆ. ಇದರ ಮೂಲಕ ತಾವು ಅರ್ಥ ಮಾಡಿಕೊಳ್ಳಬಹುದು. ಕಳೆದ ವರ್ಷ ಸರ್ಕಾರದ ಸ್ಟಾಲುಗಳಿಂದ ವಸ್ತು ಪ್ರದರ್ಶನಕ್ಕೆ 2 ಲಕ್ಷ ರೂಪಾಯಿಗಳು ಬಂದಿದೆ. ಪ್ರೈವೇಟ್ ಸ್ಟಾಲುಗಳಿಂದ 1 ಲಕ್ಷ ಅಥವಾ 1½ ಲಕ್ಷ ರೂಪಾಯಿಗಳು ಬಂದಿದೆ. ಗೇಟ್ ಕಲೆಕ್ಷನ್ನಿನಿಂದ 2 ಲಕ್ಷ ರೂಪಾಯಿಗಳ ವರಮಾನ ಬಂದಿದೆ. ಕಳೆದ ವರ್ಷ ಒಟ್ಟು 6½ ಲಕ್ಷ ರೂಪಾಯಿಗಳು ವಸ್ತುಪ್ರದರ್ಶನದಿಂದ ವರಮಾನ ಬಂದಿದೆ. ಮತ್ತು ಹೋದ ವರ್ಷ ಖರ್ಚಾಗಿರತಕ್ಕದ್ದು ಕಾಮರಾಜರ ಚುನಾವಣೆಗೋಸ್ಕರ 50 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದಾರೆ. ಎಂ. ಪಿ. ಸಿ. ಸಿ. ಪ್ರೆಸಿಡೆಂಟರಿಗೆ ಕಾರನ್ನು ಕೊಂಡುಕೊಳ್ಳುವುದಕ್ಕೆ ಸ್ಟೇಟ್ ಟ್ರೇಡಿಂಗ್ ಕಾರ್ಪೊರೇಷನ್ನಿನವರಿಗೆ 80 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದಾರೆ. ಬೇರೆಯವರ ಚುನಾವಣೆಗೋಸ್ಕರ ಒಂದು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಕಾಂಗ್ರೆಸ್ ಆಫೀಸನ್ನು ನಡೆಸುವುದಕ್ಕೋಸ್ಕರ 80 ಸಾವಿರ ರೂಪಾಯಿಗಳಿಂದ ಒಂದು ಲಕ್ಷ ರೂಪಾಯಿಗಳವರೆಗೂ ಖರ್ಚುಮಾಡಿದ್ದಾರೆ. 6½ ಲಕ್ಷ ರೂಪಾಯಿಗಳಲ್ಲಿ 3½ ಲಕ್ಷ ರೂಪಾಯಿಗಳು ಉಳಿತಾಯವಾಗಿದೆ, ಗೇಟ್ ಕಲೆಕ್ಷನ್‌ನಿಂದ 2 ಲಕ್ಷ ರೂಪಾಯಿಗಳು ಬಂದಿದೆ. ಅಡ್ವರ್ಟೈಜ್‌ಮೆಂಟಿನಿಂದ ¾ ಹಣ ಬಂದಿದೆ. ಸ್ಟಾಲುಗಳನ್ನು ಸೇರಿಸಿಕೊಂಡು ಅರ್ಧಕ್ಕಿಂತ ಹೆಚ್ಚಿಗೆ ಎಂದರೆ ಸುಮಾರು 3½ ಲಕ್ಷ ರೂಪಾಯಿಗಳು ಸರ್ಕಾರದಿಂದ ಬಂದಿದೆ. ಸರ್ಕಾರದ ದುಡ್ಡು ಬಾರದೆ ಇದ್ದರೆ ಕಾಂಗ್ರೆಸ್ ಪಕ್ಷದವರು ಚುನಾವಣೆಗೆ ಮತ್ತು ಕಾಮರಾಜರ ಚುನಾವಣೆಗೆ ದುಡ್ಡು ಕೊಡುವುದಕ್ಕೆ ಆಗುತ್ತಾ ಇರಲಿಲ್ಲ. ಸರ್ಕಾರದ ದುಡ್ಡನ್ನು ಖರ್ಚು ಮಾಡುವ ಬಗ್ಗೆ ನಮ್ಮ ವಿರೋಧ ಇದೆ. ಇಲ್ಲಿ ನಡೆಯುತ್ತಾ ಇರತಕ್ಕ ಅನ್ಯಾಯ ಒಂದನೆಯದು ಗ್ರೌಂಡ್‌ರೆಂಟನ್ನು ನಾಮಕಾವಸ್ಥೆಗೆ 5 ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದಾರೆ. ಇದಕ್ಕೆ ಬಾಡಿಗೆ ಎಷ್ಟು ಬರಬೇಕೋ ಅಷ್ಟು ಬರುತ್ತಾ ಇಲ್ಲ. ಎಂಟರ್‌ಟೈನ್‌ಮೆಂಟ ಫೀಜು ಕೊಡಬೇಕು. ಅದನ್ನು ಕೊಡುತ್ತಾ ಇಲ್ಲ. ಕಾರ್ಪೊರೇಷನ್ನಿಗೆ ಬಿಲ್ಡಿಂಗ್ ಬಗ್ಗೆ ಒಂದು ಚದುರ ಅಡಿಗೆ ಒಂದು ರೂಪಾಯಿಯಂತೆ 10 ಸಾವಿರ ರೂಪಾಯಿಗಳನ್ನು ಕೊಡಬೇಕು ಅದನ್ನು ಕೊಟ್ಟಿಲ್ಲ. ಆದ್ದರಿಂದ ಈ ರೀತಿಯಿಂದ ಕಾಂಗ್ರೆಸ್ ಸಂಸ್ಥೆಯವರು ಹಣವನ್ನು ಉಳಿತಾಯ ಮಾಡಿಕೊಂಡು ದುಡ್ಡು ಸಂಪಾದನೆ ಮಾಡಿಕೊಂಡು ಜನಗಳನ್ನು ಶೋಷಣೆ ಮಾಡತಕ್ಕ ಪರಿಸ್ಥಿತಿಯಲ್ಲಿ ನಡೆಯುವುದಾದರೆ ಇದನ್ನು ಖಂಡನೆ ಮಾಡಬೇಕಾದ್ದು ನಮ್ಮ ಆದ್ಯ ಕರ್ತವ್ಯ. ಈ ಸುಭಾಷ್ ನಗರದ ಮೈದಾನವನ್ನು ವಸ್ತು ಪ್ರದರ್ಶನಕ್ಕಾಗಿ ಕಾಂಗ್ರೆಸ್ ಪಕ್ಷಕ್ಕೆ ಗುತ್ತಿಗೆಗೆ ಕೊಡುವ ಬಗ್ಗೆ ಬೆಂಗಳೂರಿನ ನಾಗರೀಕರ ವಿರೋಧ ಇದೆ. ಇದನ್ನು ವಿರೋಧ ಮಾಡುವುದಕ್ಕೆ ಒಂದು ಚಾರಿತ್ರಿಕವಾದ ಹಿನ್ನಲೆ ಇದೆ. ನಮಗೆ ಸ್ವಾತಂತ್ರ್ಯ ಬರುವುದಕ್ಕಿಂತ ಮುಂಚೆ ಈ ಮೈದಾನಕ್ಕೆ ಒಂದು ಸಂದರ್ಭದಲ್ಲಿ ಒಂದು ನ್ಯಾಷನಲ್ ಫ್ಲಾಗ್ ಹಾರಿಸಿ ಆ ಮೈದಾನಕ್ಕೆ ಝುಂಡಾಮೈದಾನ ಎಂದು ಕರೆದು ಅದನ್ನು ತೀರ್ಮಾನ ಮಾಡಿದ್ದಾರೆ. ಈಗ ನಮ್ಮ ದೇಶದ ನಾಯಕರಾದ ಸುಭಾಷ್‌ಚಂದ್ರ ಬೋಸರ ಹೆಸರು ಇಡಲಾಗಿದೆ. ಆದ್ದರಿಂದ ಈ ಜಾಗವನ್ನು ಕಾಂಗ್ರೆಸ್ ಪಕ್ಷಕ್ಕೆ ಕೊಡುವುದಕ್ಕೆ ಬೆಂಗಳೂರು ಜನತೆಯ ವಿರೋಧ ಇದೆ ಎಂದು ನಾನು ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ. ಈ ಪ್ರದೇಶ ಬೆಂಗಳೂರು ನಾಗರೀಕರ ಸೌಲಭ್ಯಕ್ಕಾಗಿ ಇರಬೇಕೇ ಹೊರತು ಯಾವ ಖಾಸಗೀ ಸಂಸ್ಥೆಗೂ ಕೊಡುವುದಕ್ಕೆ ಖಂಡಿತಾ ಒಪ್ಪುವುದಕ್ಕೆ ಸಾಧ್ಯವಿಲ್ಲ. ಆ ಜಾಗಕ್ಕೆ ಸಂಬಂಧಪಟ್ಟ ಹಾಗೆ ಕಟ್ಟಡ ಕಟ್ಟಲು ಒಂದು ಪ್ಲಾನ್ ತಯಾರು ಮಾಡಿದ್ದಾರೆ. ಅದನ್ನು ನಾನು ನೋಡಿದ್ದೇನೆ. ಅದು ಕಚ್ಚಾಪ್ಲಾನು. ಆ ಪ್ಲಾನಿನ ಪ್ರಕಾರ ಗ್ರೌಂಡ್ ಫ್ಲೋರಿನಲ್ಲಿ

(ಶ್ರೀ ಟಿ. ಆರ್. ಶಾಮಣ್ಣ)

ರಾರಿಸ್ಟಾ್ಯಂಡ್‌ಗೆ ಅನುಕೂಲವಾಗುವಂತೆ ಕಟ್ಟಿಕೊಡಬೇಕು. ಫಸ್ಟ್ ಫ್ಲೋರಿನಲ್ಲಿ ಅಂಗಡಿಗಳಿಗೆ ಮತ್ತು ಹೋಟೇಲುಗಳಿಗೆ ಕೊಡಬೇಕು. 2 ಮತ್ತು 3 ನೇ ಫ್ಲೋರಿನಲ್ಲಿ ರೂಮುಗಳನ್ನು ಕಟ್ಟಿ ಬಾಡಿಗೆಗೆ ಕೊಡಬೇಕು ಎಂದು 5-6 ಲಕ್ಷ ರೂಪಾಯಿಗಳ ಒಂದು ಪ್ಲಾನು ಇದೆ. ಮತ್ತು ಫಸ್ಟ್ ಫ್ಲೋರಿನಲ್ಲಿ ವಸ್ತು ಪ್ರದರ್ಶನಕ್ಕೆ ಅನುಕೂಲವಾಗುವಹಾಗೆ ಕಟ್ಟಿಸಬೇಕು ಎನ್ನುವಂಥಾ ಒಂದು ಪ್ಲಾನೂ ಇದೆ. ಆದ್ದರಿಂದ ಈ ಜಾಗವನ್ನು ಕಾಂಗ್ರೆಸ್ ಪಕ್ಷಕ್ಕೆ ಕೊಡಕೂಡದು. ಸರ್ಕಾರದವರು ಈ ವಸ್ತುಪ್ರದರ್ಶನದಿಂದ ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್ ವಸೂಲು ಮಾಡುತ್ತಿಲ್ಲ. ಅಡ್ವರ್ಟೈಸ್‌ಗೋಸ್ಕರ ಸರ್ಕಾರದ ಮುಖಾಂತರ ನೇರವಾಗಿ ಮಂತ್ರಿಗಳ ಪ್ರಭಾವದಿಂದ ಅಡ್ವರ್ಟೈಸ್‌ಮೆಂಟ್ ಕೊಟ್ಟಿದ್ದಾರೆ ಇದರಿಂದ 3½ ಲಕ್ಷ ರೂಪಾಯಿಗಳ ವರಮಾನ ಸರ್ಕಾರದಿಂದ ಇವರಿಗೆ ಬಂದಿದೆ. ಸರ್ಕಾರದವರು ಈ ಜಾಗವನ್ನು ಕಾಂಗ್ರೆಸ್ ಪಕ್ಷಕ್ಕೆ ಗುತ್ತಿಗೆಗೆ ಕೊಡುವುದನ್ನು ಕೈಬಿಡಬೇಕು. ಈ ಬಗ್ಗೆ ನನ್ನ ಸಲಹೆ ಇಷ್ಟೆ: ಈ ಜಾಗದಲ್ಲಿ ಸರ್ಕಾರದವರೇ ವಸ್ತು ಪ್ರದರ್ಶನವನ್ನು ನಡೆಸಿ ಅದರಿಂದ 10 ಲಕ್ಷ ರೂಪಾಯಿಗಳ ವರಮಾನವನ್ನು ಪಡೆಯಬಹುದು. ಗಾಂಧಿ ಶತಾಬ್ದಿ ವರ್ಷವಾದ ಈ ವರ್ಷ ಗಾಂಧೀಜಿಯವರಿಗೆ ಪ್ರಿಯವಾಗಿದ್ದ ಅನೇಕ ಕಾರ್ಯಗಳಿಗೆ ಇದನ್ನು ಉಪಯೋಗಿಸಬೇಕು. ಇದರಲ್ಲಿ ಬಂದಂಥ ದುಡ್ಡನ್ನು ಕಾಂಗ್ರೆಸಿನವರ ಚುನಾವಣೆಗಾಗಿ ಉಪಯೋಗಿಸಬೇಡಿ. ಇದರಿಂದ ಬಂದಂಥ ಹಣವನ್ನು ಹರಿಜನರ ಹಾಸ್ಟಲುಗಳಿಗೆ ಮತ್ತು ಸ್ಲಮ್ ಕ್ಲಿಯರೆನ್ಸಿಗೆ ಉಪಯೋಗಿಸಬೇಕು. ಕಾಂಗ್ರೆಸ್ಸಿನವರು ಆಡಳಿತ ನಡೆಸುವುದಕ್ಕೆ ಅನುಕೂಲವಾಗುವಂತಹ ಕೆಲಸಕ್ಕೆ ಉಪಯೋಗಿಸುವುದನ್ನು ಖಂಡಿತ ನಾನು ವಿರೋಧವನ್ನು ಸೂಚಿಸುತ್ತೇನೆ.

4-30 P.M.

ಆದ್ದರಿಂದ ನಿಮಗೆ ನಿಜವಾಗಿಯೂ ಸಾರ್ವಜನಿಕರಿಗೆ ಒಳ್ಳೆಯದನ್ನು ಮಾಡಬೇಕೆಂಬ ಮನೋಭಾವ ಇದ್ದರೆ ಈ ಜಾಗವನ್ನು ಕಾಂಗ್ರೆಸ್ ಸಂಸ್ಥೆಗೆ ಕೊಡಬಾರದು. ಮಾನ್ಯ ಮುಖ್ಯ ಮಂತ್ರಿಗಳು ಸುಭದ್ರವಾದ ಆಡಳಿತವನ್ನು ನಡೆಸುತ್ತೇವೆಂದು ಹೇಳಿದ್ದಾರೆ. ಆ ರೀತಿ ಹೇಳಿರುವುದು ನಿಜವಾಗಬೇಕಾದರೆ, ಗಾಂಧೀ ಶತಮಾನೋತ್ಸವದ ಸಮಯವಾದ ಈ ಕಾಲದಲ್ಲಿ ಒಂದು ದೃಢವಾದ ತೀರ್ಮಾನವನ್ನು ಕೈಗೊಳ್ಳಿ. ಈ ಪ್ರದೇಶದಿಂದ ಉತ್ಪತ್ತಿಯಾಗತಕ್ಕ ಪ್ರತಿಯೊಂದು ಕಾಸೂ ಕೂಡ ಗಾಂಧಿಯವರಿಗೆ ಪ್ರಿಯವಾದ ಕೆಲಸಗಳಿಗೆ ಮಾತ್ರ ಖರ್ಚು ಮಾಡುತ್ತೇವೆಂದು ಸರ್ಕಾರದವರು ತೀರ್ಮಾನ ತೆಗೆದುಕೊಂಡರೆ ಖಂಡಿತವಾಗಿ ನಾವು ನಿಮಗೆ ಶಹಭಾಸ್‌ಗಿರಿಯನ್ನು ಕೊಡುತ್ತೇವೆ. ಇಲ್ಲದಿದ್ದರೆ ನಾವು ಖಂಡಿತವಾಗಿ ವಿರೋಧ ಮಾಡುತ್ತೇವೆ. ಮತ್ತು ಆ ಜಾಗದಲ್ಲಿ ಕಾಂಗ್ರೆಸ್ ವಸ್ತುಪ್ರದರ್ಶನ ನಡೆಸುವುದಕ್ಕೆ ನಾವು ಅವಕಾಶ ಕೊಡುವುದಿಲ್ಲ. ಈ ಬಗ್ಗೆ ಸರ್ಕಾರದವರು ಒಂದು ಅಂತಿಮ ತೀರ್ಮಾನವನ್ನು ಹೇಳಬೇಕು. ಖಂಡಿತವಾಗಿಯೂ ಕೂಡ ಅಲ್ಲಿ ಕಾಂಗ್ರೆಸ್ ವಸ್ತುಪ್ರದರ್ಶನ ನಡೆಯುವುದಕ್ಕೆ ಸರ್ಕಾರದವರು ಅವಕಾಶ ಕೊಡಬಾರದು. ಗಾಂಧಿಯವರ ತತ್ವಗಳೇ ಕಾಂಗ್ರೆಸ್ಸಿನ ಧ್ಯೇಯ ಎಂದು ಮೊದಲು ಏನು ಹೇಳುತ್ತಿದ್ದೀರೋ ಅದಕ್ಕಾಗಿ ಮಾತ್ರ ಈ ಜಾಗದಿಂದ ಬರುವ ಉತ್ಪತ್ತಿಯನ್ನು ಉಪಯೋಗಿಸಬೇಕೆಂದು, ಅದರಂತೆ ಸರ್ಕಾರದವರು ಮಾಡುತ್ತಾರೆಂದು ತಿಳಿದುಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

†Sri H. M. CHANNABASAPPA.—Mr. Speaker, Sir, there are two issues involved in this. One is about the desirability of a political organisation running an exhibition and another is the disposal of the land belonging to Government for a political party along with procedure adopted for this. I am very greatly surprised at the stand taken by the Government in its reply the other day when this question came up before the Assembly. Exhibiton by itself, Sir, is very good. It is necessary to educate the people. If the Government is really serious about educating the people, it is desirable that exhibitions take place in the areas outside Bangalore in various parts of the State where the bulk of the people live and who are to be benefited by these exhibitions. The object of running exhibition in Bangalore apart from having a little educative value, is to create some evening stroll for the people of

Bangalore. My friend read out the economics of running an exhibition. I am not so much bothered about that.

All that I am bothered is whether this land in Subashnagar should be disposed of for a particular purpose and to what extent it is desirable and if so, how it should be disposed of. The other day, the Minister for Parliamentary Affairs appears to have made an assurance to this House that he would consult the leaders of the Opposition and then take a decision. Nothing could be more fantastic than this. The disposal of Government property is an executive function and there are rules and procedure prescribed for the disposal of such property and the Government if it thinks right and desirable to dispose of the property, all that is required is that they must adopt the procedure prescribed and dispose it of straightaway. If the Memberes on this side or on the other side, feel aggrieved about it, it is for them to question the *bona fides* and question the procedure and all that kind of things.

[Mr. SPEAKER in the Chair]

Nowhere do I hear being said that Government will consult the Members of any party or the Leader of the Opposition party in the matter of exercising the executive duty vested in them. This opens up the floodgates. I am warning the Government. No function of Government will become possible if a precedent of this kind is established. Today it may be that Sri Veerendra Patil is the Chief Minister and so people on his side may take pride that they have humbled him and they have to be consulted to do this executive job ; tomorrow if Sri S. Sivappa becomes the Chief Minister, the same precedent will be quoted and he should have to consult the Opposition for every executive action.

SRI D. DEVARAJ URS (Hunsur).—It shall not be quoted as precedent in future for any other action. That is what the Hon. Chief Minister has stated.

SRI H. M. CHANNABASAPPA.—He might have said that. But will that have any value ? It may be with the best of intentions he might have said it. I say that it is a sad statement, a most undesirable statement and a statement, I say with very great respect, made to suit expediency. When Governments are in trouble, the Government makes any statement which comes up uppermost in their mind just to get over the difficulty. Unfortunately, it has become the order of the day. The Government must function as a Government and not as an organisation to suit expediency. You must bear the brunt of it. If the disposal of the land is necessary and if it is desirable and if you think it is correct and in accordance with procedure, you must do it and take the consequences. Otherwise don't do it and take the consequences also. But yesterday you made that statement. I wish the Chief Minister and the Minister for Parliamentary Affairs withdraw it. If the Government are to be guided by pressure tactics and *galata*, I would make a big *galata*.

Sri B. P. GANGADHAR.—The representatives duly elected by the people have been persuading the Government not to give this land on a lease for 99 years.

Sri H. M. CHANNABASAPPA.—It is a dangerous attitude and a dangerous approach.

Sri B. P. GANGADHAR.—Of course representations have been made and it has been conceded by the Government. They have considered the wishes of the Opposition and they want to give due weight to it.

Sri H. M. CHANNABASAPPA.—The Government should not act according to the wishes of others.

Sri T. R. SHAMANNA.—That is a dictatorial attitude.

Sri H. M. CHANNABASAPPA.—I would like to be called a dictator if I am going to respect the rule of law. It is democracy based on rule of law and rule of procedure..

Sri AZEEZ SAIT (Narasimharaja).—I would like to give correct information. Both sides have been discussing over the issue of lease of Subashnagar. But that has already been decided in 1967 and that order is with Mr. Shankara Gowda. Now, discussion is done for the sake of discussion. There is a ruling given by Sri Ananthashayanam Iyengar that when a controversial subject comes up, the Speaker himself had to get file and examine it and if he is convinced he should report to the House. If Mr. Shankara Gowda were to be here, I would have called upon him to make a statement. I am sure in 1967 after general elections, during Sri Nijalingappa's Cabinet, decision has been taken and land has been granted to Congress organisation.

ಶ್ರೀ ಜಿ. ದುಗ್ಗಪ್ಪ.—ಸ್ವಾಮಿ, ಶ್ರೀಮಾನ್ ಚನ್ನಬಸಪ್ಪನವರು ಹೇಳುವ ಅಭಿಪ್ರಾಯಕ್ಕೆ ಅವರೇ ಬದ್ಧರಾಗಿರುತ್ತಾರೆ ಆದರೆ ಅವರಿಗೆ ನಾನು ಇಲ್ಲಿ ಒಂದು ವಿಚಾರ ಹೇಳಬೇಕಾಗಿದೆ. ಸುಭಾಷ್‌ನಗರದಲ್ಲಿ ಕಾಂಗ್ರೆಸ್ ವಸ್ತು ಪ್ರದರ್ಶನ ನಡೆಸಲು ಆ ನಿವೇಶನವನ್ನು ಸರಕಾರದವರು ಕೊಡಬೇಕು ಎನ್ನುವ ತೀರ್ಮಾನ ಆಗಲೇ ತೆಗೆದುಕೊಂಡಿದ್ದಾರೆ. ಇದರ ಬಗ್ಗೆ ಶ್ರೀಮಾನ್ ಕೆ. ಹೆಚ್. ಪಾಟೀಲರು ಕೇಳಿದಾಗ ಇನ್ನೂ ಯಾವ ನಿರ್ಣಯವೂ ಆಗಿಲ್ಲ ಎಂದು ಹೇಳಿದ್ದರಿಂದ ಇಲ್ಲಿ ಗಲಾಟೆಗಳು ಆದವು ಎಂದು ಹೇಳಿದರು. ಆದರೆ ನಿನ್ನೆ ಇದರ ವಿಚಾರ ಚರ್ಚೆಯಾಗುತ್ತಿದ್ದಾಗ ಮಾನ್ಯ ಸದಸ್ಯರು ಇಲ್ಲಿರಲಿಲ್ಲ. ಆದುದರಿಂದ ಅವರು ತಪ್ಪು ಅಭಿಪ್ರಾಯದಿಂದ ಇಲ್ಲಿ ಹೇಳುತ್ತಾರೆಂದು ಕಾಣುತ್ತದೆ.

Sri H. M. CHANNABASAPPA.—If the Government has already disposed of and if there is a Government Order to this effect, they will have to face the music and that is a different matter. As per the Statement made on behalf of the Government yesterday, the land has not been disposed of. I think it is true and I stand by it. Secondly, I am not justifying the giving of Subhash Nagar grounds for this purpose to the Congress Organisation. It is a matter which has got to be considered on merits and rules and procedure have to be observed. I am not disbelieving the statement made by the Minister for Parliamentary Affairs that it will be done following all the procedure.

Sri B. P. GANGADHAR.—How a State Government could give an assurance that the ground will be disposed of for 99 years? This is what

we have come to know as per the replies given on the floor of this House. The attitude of the State Government appears to be very lenient towards its Organisation. This is a State matter and they cannot give this bit of land to their organisation at this nominal rate. Just because the Organisation is holding exhibitions all these years on that ground, the land cannot be given. Are we not entitled to ask the Government not to give that land to its orgranisation? Are we not entitled to do that?

Sri H.M. CHANNABASAPPA.—You are entitled to do that. But I have heard from the other side saying that they are also interested in the State matters. That is my stand here.

Sri S. SIVAPPA.—That is a dictator's stand.

Sri H. M. CHANNABASAPPA.—As an executive, they will have to follow rule of law. There are certain principles to be adopted by the Executive. Of course due consideration should be given to the opinions and suggestions of the Legislators. I am sorry I cannot accept your argument. But here all aspects of the question have to be examined. Can anybody say that it should be according to my decision and should not be done according to rules? But it is for us to vote it down. In Sharavathi, about Rs. 180 crores have been wasted. We have been pressing all along that an enquiry should be held. Can I ask whenever you give a contract, you must consult me? It is impossible and this cannot be done in an administration. The question of disposing of Subhas Nagar, according to Government statement, is not finalised and the land has not been given over. Even if it is given, the order could be reversed. What are the procedures that are laid down in the statute for the disposal of Government properties? Have you observed these procedures? If you have not done it, I will charge-sheet you.

Sri K. PUTTASWAMY.—You are entitled to do that before this House.

Sri H. M. CHANNABASAPPA.—I will charge-sheet you even in the Court of law. Can any illegal action become legal in consultation with the Opposition or *vice versa?* Can it become a legal action if it is in collusion with the Opposition? Such action cannot be legalised. If you do this, it is nothing but purchasing the Opposition. I said this is a dangerous thing you have started nowadays. Please avoid these tactics, be firm in your decisions, stick to your decisions and let your decisions be according to rule of law. If there is any deviation you are bound to meet the consequences and you will have to be condemned. The Government cannot function in any manner it wants. The whole difficulty arises when the rule of law is not respected. There will be no difficulty at all if all the rules and regulations are followed. If anything goes wrong you will have to face the music not only in this case but also in other cases. Do things courageously and selflessly in accordance with the rule of law. Therefore I would appeal to Government, even though there is an assurance that opposition will be consulted, it cannot be a

(SRI H. M. CHANNABASAPPA)

precedent. But anyhow you have given a word in this House. There are rules for disposal of lands. You will have to abide by that. No question of political parties should come in here. This is a matter you will have to consider very carefully because these are days when every political party has a right to ask for it. Who knows the Congress Party may cease to function ; so also the other parties or they may exist for even for 100 years. Nobody knows about their future. Therefore. you must be very careful in dealing with such things. Adoption of rules will only save you.

Firstly, I am opposed to the disposal of that place ; Subhas Nagar is an area which is required for public meetings and lung space. You can give them for temporary purposes on a temporary basis. But if it is to be disposed of on a permanent basis, whether it is exhibition or anything else, it is a matter which has got to be considered in the light of the various inconveniences that may be caused to the citizens of Bangalore City and after having considered all these things, if you still feel that it can be disposed of, then you have to apply the rule of law. You may dispose it of by tenders, you may sell it by public auction, or in any manner prescribed by law. If the Congress Party is prepared to pay the highest amount, give it to Congress ; if the SSP or PSP can pay that money, give to that party ; or if any individual is prepared to pay that much amount, give it. Therefore I would like to suggest that there must be a procedure. You may consult anybody you want. You may consult Mr. Gangadhar ; consult me if you care to ; you consult all these friends on your side ; but ultimately decision is yours. But this method of saying that I consulted you before committing the murder, would not stand the test. You cannot commit the Opposition merely on the ground that you have consulted the Opposition Leaders including me and say : 'well I have consulted the Opposition'. You may purchase me, you may purchase Sri Gopala Gowda and purchase so many others. That is what is happening everywhere. Therefore, this will lead to a lot of demoralisation in this country.

With these few words, I would suggest that Government should not take this attitude which is incorrect and a decision which is illegal and improper in a democratic set up. You may consult and obtain a consensus and then take a decision. But do not do it because it is prescribed here.

With these few words, I say that this kind of an assurance by the Chief Minister will only have the effect of opening the floodgates for executive action and it is not a healthy trend. They should not give any quarter to it. This kind of a thing will repeat itself, if you start it today.

ಶ್ರೀ ಕೆ. ಎಚ್. ಶ್ರೀನಿವಾಸ್.—ಸನ್ಮಾನ್ಯ ಅಧ್ಯಕ್ಷರೇ, ಈ ಸಭೆಯು ಮುಂದಿರತಕ್ಕಂಥ ಪ್ರಶ್ನೆ ಕಾಂಗ್ರೆಸ್ ಎಕ್ಸಿಬಿಷನ್ನನ್ನು ಸುಭಾಸ್ ನಗರದಲ್ಲಿ ನಡೆಸುತ್ತಾ ಇರುವ ಬಗ್ಗೆ ಪ್ರತಿವರ್ಷವೂ ನಡೆಯುತ್ತಾ ಇರುವ ಹಾಗೆ ಈ ವರ್ಷವೂ ಏರ್ಪಾಡು ಮಾಡಿದೆ. ಇದರ ಬಗ್ಗೆ ಸರ್ಕಾರದವರು

ಯಾವ ಯಾವ ಸವಲತ್ತುಗಳನ್ನು ಕೊಟ್ಟಿದ್ದಾರೆ ? ಸರ್ಕಾರದವರು ಏನು ಖರ್ಚು ಮಾಡಿದ್ದಾರೆ ? ಇದರ ಬಗ್ಗೆ ಸರ್ಕಾರದವರ ಔಚಿತ್ಯ ಏನು ಎಂಬ ಪ್ರಶ್ನೆಗಳನ್ನು ಈ ಸಭೆಯು ಚರ್ಚೆಮಾಡಬೇಕಾಗಿದೆ.

ಈವೊತ್ತು ದೇಶದಲ್ಲಿ ಖಾಸಗಿ ಸಂಸ್ಥೆಗಳು, ರಾಜಕೀಯ ಪಕ್ಷಗಳು ಅನೇಕ ರೀತಿಯಲ್ಲಿ ಹಣವನ್ನು ಸಂಗ್ರಹ ಮಾಡುತ್ತಾ ಇರಬಹುದು. ಪ್ರದರ್ಶನಗಳನ್ನು ನಡೆಸುತ್ತಿರಬಹುದು ಅವರಿಗೆ ಅದರಲ್ಲಿ ಲಾಭ ಆಗಬಹುದು, ಲುಕ್ಸಾನು ಆಗಬಹುದು, ಆ ಪ್ರಶ್ನೆ ಮುಖ್ಯವಲ್ಲ. ವಿರೋಧ ಪಕ್ಷದ ಮಾನ್ಯ ಸದಸ್ಯರುಗಳು ಕೊಟ್ಟಂಥ ಅಂಕಿಸಂಖ್ಯೆಗಳನ್ನು ನಾನು ಗಮನಕೊಟ್ಟು ಕೇಳಿದ್ದೇನೆ. ಸರ್ಕಾರದವರು ಏನು ಸೌಲಭ್ಯಗಳನ್ನು ಕೊಟ್ಟಿದ್ದಾರೆ ಅನುಚಿತ ಸೌಲಭ್ಯಗಳನ್ನು ಈ ಒಂದು ರಾಜಕೀಯ ಪಕ್ಷಕ್ಕೆ ಕೊಟ್ಟಿದ್ದಾರೆಯೇ ? ಮತ್ತು ಸರ್ಕಾರದವರು ಅದರ ಮೇಲೆ ಎಷ್ಟು ಖರ್ಚು ಮಾಡಿದ್ದಾರೆ ಈ ವಿಚಾರದಲ್ಲಿ ಅಂಕಿಸಂಖ್ಯೆಗಳನ್ನು ಕೊಟ್ಟಿದ್ದರೆ ಚೆನ್ನಾಗಿತ್ತು. ವಸ್ತುಪ್ರದರ್ಶನ ನಡೆಸಿದವರಿಗೆ ಈವೊತ್ತು 1 ಕೋಟಿ ರೂಪಾಯಿ ಲಾಭವಾಗಬಹುದು ಅಥವಾ 10 ಲಕ್ಷ ರೂಪಾಯಿ ಲುಕ್ಸಾನು ಆಗಬಹುದು ಅದು ಮುಖ್ಯವಲ್ಲ. ಸರ್ಕಾರದವರು ಏನು ಸೌಲಭ್ಯಗಳನ್ನು ಕೊಟ್ಟಿದ್ದಾರೆ ಎನ್ನುವ ಬಗ್ಗೆ ವಿರೋಧಪಕ್ಷದವರು ಅಂಕಿ ಸಂಖ್ಯೆಗಳನ್ನು ಕೊಟ್ಟಿದ್ದರೆ ಅದನ್ನು ವಿಚಾರಣೆ ಮಾಡಬಹುದಾಗಿತ್ತು.

ಇದರಲ್ಲಿ ವಿಶೇಷವಾಗಿ ಜಾಗದ ಪ್ರಶ್ನೆ ಬಂದಿದೆ. ಈಗ ಏನು ಒಂದು ಕಾಂಗ್ರೆಸ್ ಎಕ್ಸಿಬಿಷನ್ ನಡೆಯುತ್ತಾ ಇದೆ ಆ ಎಕ್ಸಿಬಿಷನ್‌ಗೆ ಸಂಬಂಧಪಟ್ಟಂತೆ ಸರ್ಕಾರದವರು ಏನೇನು ಸೌಲಭ್ಯಗಳನ್ನು ಕೊಟ್ಟಿದ್ದಾರೆ ಎನ್ನುವ ಬಗ್ಗೆ ಅವರ ಹತ್ತಿರ ಹೆಚ್ಚಿಗೆ ಮಾಹಿತಿ ಇಲ್ಲ. ಅದನ್ನು ಬೇಕಾಗಿದ್ದರೆ ಸರ್ಕಾರದವರ ಹತ್ತಿರ ಕೇಳಿ ಅಧಿಕೃತವಾದ ಇನ್‌ಫರ್ಮೇಷನ್ನನ್ನು ತಿಳಿದುಕೊಳ್ಳಬಹುದಾಗಿತ್ತು. ಸರ್ಕಾರದವರು ಸಾವನೀರ್‌ಗೆ ಜಾಹೀರಾತು ಕೊಟ್ಟಿದ್ದಾರೆ. ಸಾವನೀರ್‌ನಲ್ಲಿ ಅಡ್ವರ್ಟೈಸ್‌ಮೆಂಟಿಗೆ 1 ಲಕ್ಷ ರೂಪಾಯಿಯನ್ನು ಕಲೆಕ್ಟ್ ಮಾಡುತ್ತಾರೆ. ಅದರಲ್ಲಿ ಸರ್ಕಾರದ್ದು 10 ಸಾವಿರ ರೂಪಾಯಿ ಮಾತ್ರ ಇದೆ. ಇದು ವಿರೋಧಪಕ್ಷದವರೇ ಕೊಟ್ಟಿರುವ ಅಂಕೆ ವರದಿ. ಇದು ನಿಜವಾಗಿದ್ದ ಪಕ್ಷದಲ್ಲಿ ಇದರೊಳಗೆ ಏನಾದರೂ ಅನ್ಯಾಯ ಇದೆಯೇ ಎನ್ನುವುದನ್ನು ನೋಡಬೇಕು. ಸರ್ಕಾರದವರು ಸಾವನೀರಿಗೆ ಅಡ್ವರ್ಟೈಸ್‌ಮೆಂಟ್‌ಗಳನ್ನು ಇದು ಒಂದಕ್ಕೇ ಕೊಡುತ್ತಾ ಇಲ್ಲ. ಅವರು ಬೇಕಾದಷ್ಟು ಪತ್ರಿಕೆಗಳಿಗೆ ಅಂದರೆ ದೈನಂದಿನಪತ್ರಿಕೆಗಳು, ವಾರಪತ್ರಿಕೆಗಳು ಈ ರೀತಿ ಎಲ್ಲಾ ಪತ್ರಿಕೆಗಳಿಗೂ ಜಾಹೀರಾತುಗಳನ್ನು ಕೊಟ್ಟಿದ್ದಾರೆ. ಒಂದು ಲಕ್ಷ ರೂಪಾಯಿ ಅಡ್ವರ್ಟೈಸ್‌ಮೆಂಟ್ ಸಾವನೀರ್‌ನಲ್ಲಿದ್ದರೆ ಸರ್ಕಾರದವರು ಕೇವಲ 10 ಸಾವಿರ ರೂಪಾಯಿಯನ್ನು ಜಾಹೀರಾತು ಕೊಟ್ಟಿದ್ದಾರೆ. ಇನ್ನು ಕೆಲವು ಕೋಆಪರೇಟೀವ್ ಸೊಸೈಟಿಗಳಿಗೆ 10% ಷೇರು ಹಾಕುತ್ತಾರೆ, ಕೊಡುವಪದ್ಧತಿ ಇದೆ. ಈವೊತ್ತು ಖಾಸಗಿಯವರು ನಮ್ಮ ರಾಜ್ಯದ ಸೌಲಭ್ಯಗಳನ್ನು ಉಪಯೋಗಿಸಿಕೊಂಡು 1½ ಲಕ್ಷ ರೂಪಾಯಿಯನ್ನು ಖರ್ಚು ಮಾಡಿ ಕನ್ನಡ ಚಿತ್ರ ತೆಗೆದರೆ 50 ಸಹಸ್ರ ರೂಪಾಯಿ ಸಬ್ಸಿಡಿ ಕೊಡುತ್ತಾರೆ. ಶ್ರೀಮಾನ್ ವಾಟಾಳ್ ನಾಗರಾಜ್‌ರವರು ಅದನ್ನು ಕೊಡಬೇಕೆಂದು ಸತತವಾಗಿ ಹೇಳುತ್ತಾರೆ. ಅದು ಕೊಟ್ಟರೆ ಅವರಿಗೆ ಸಂತೋಷ. ಉದಾಹರಣೆ ಹೇಳುವುದಾದರೆ ಈವೊತ್ತು ಕನ್ನಡ ಚಿತ್ರಕ್ಕೆ ಯಾವರೀತಿ ಸಬ್ಸಿಡಿ ಕೊಡುತ್ತೇವೋ ಅದರಂತೆ ಈ ಸಾವನೀರ್‌ನಲ್ಲಿ 1 ಲಕ್ಷ ರೂಪಾಯಿಯ ಅಡ್ವರ್ಟೈಸ್‌ಮೆಂಟ್‌ನಲ್ಲಿ ಸರ್ಕಾರದ್ದು ಕೇವಲ 10 ಸಹಸ್ರ ರೂಪಾಯಿನ ಅಡ್ವರ್ಟೈಸ್‌ಮೆಂಟ್ ಇದ್ದರೆ ಅದು ಕೇವಲ ಬಕ್ಷೀಸ್ ಎಂದು ತಿಳಿಯಬೇಕಾಗಿಲ್ಲ. ಅದರಿಂದ ಸರ್ಕಾರಕ್ಕೆ ಪ್ರಯೋಜನ ಇದೆ. ಸರ್ಕಾರದವರು ಯಾರಿಗಾದರೂ ಅಡ್ವರ್ಟೈಸ್‌ಮೆಂಟ್ ಕೊಡಬೇಕಾದರೆ ರೂಲ್ಸ್ ಇದೆ. ಆ ಪ್ರಕಾರ ಅವರಿಗೆ ಕೊಡುತ್ತಾರೆ. ಆದುದರಿಂದ ಸರ್ಕಾರದವರು ಮನಸ್ಸಿಗೆ ಬಂದಂತೆ ಅಡ್ವರ್ಟೈಸ್‌ಮೆಂಟ್ ಕೊಡುತ್ತಿದ್ದಾರೆ ಎಂದು ಹೇಳಿದರೆ ತಪ್ಪಾಗುತ್ತದೆ.

ಇನ್ನು ಖಾಸಗಿಯವರಿಗೆ ಸೌಲಭ್ಯಗಳನ್ನು ಕೊಡುತ್ತಾ ಇಲ್ಲವೇ ? ಇದೇ ಸುಭಾಸ್‌ನಗರದಲ್ಲಿರುವ ಹಿರಣ್ಣಯ್ಯ ಮಿತ್ರಮಂಡಲಿಯವರು ಎಷ್ಟು ವರ್ಷದಿಂದ ಥಿಯೇಟರ್ ಹಾಕಿದ್ದಾರೆ ! ಅನೇಕ ಪ್ರದರ್ಶನಗಳೂ ಕೂಡ ನಡೆಯುತ್ತಾ ಇವೆ. ಆ ಖಾಸಗಿ ಕಂಪನಿಯವರಿಗೆ ಎಷ್ಟು ಲಾಭ ಬರುತ್ತದೆ ಎನ್ನುವುದನ್ನು ನಿರೀಕ್ಷೆ ಮಾಡಿದ್ದಾರೆಯೇ ? ಖಾಸಗಿ ಸಂಸ್ಥೆಗಳು ಲಾಭ ಮಾಡಿಕೊಂಡಿವೆಯೇ ಇಲ್ಲವೇ ಎನ್ನುವುದು ಸರ್ಕಾರಕ್ಕೆ ಸಂ ಂಧಪಟ್ಟ ಪ್ರಶ್ನೆ ಅಲ್ಲ.

5-00 P.M.

ಕಾಂಗ್ರೆಸ್ ವಸ್ತು ಪ್ರದರ್ಶನಕ್ಕೆ ಇರುವ ಒಂದು ಹಿನ್ನೆಲೆಯನ್ನೂ ನೋಡಬೇಕು. ಇದು 1969ರಲ್ಲಿ ಪ್ರಾರಂಭವಾದುದಲ್ಲ. ಮೈಸೂರು ದೇಶಕ್ಕೆ ಸಂಬಂಧಪಟ್ಟ ಹಾಗೆ ಹೇಳುವುದಾದರೆ ಈ ವಸ್ತು ಪ್ರದರ್ಶನ ಮೈಸೂರು ದಸರಾ ವಸ್ತುಪ್ರದರ್ಶನದಂತೆ ಜನರ ವಿಶೇಷ ಆಕರ್ಷಣೆಗೆ ಮತ್ತು

(ಶ್ರೀ ಕೆ. ಎಚ್. ಶ್ರೀನಿವಾಸ)

ಮನ್ನಣೆಗೆ ಪಾತ್ರವಾಗಿದೆ. ಅದೇ ರೀತಿಯಲ್ಲಿ ಕಾಂಗ್ರೆಸ್ ವಸ್ತು ಪ್ರದರ್ಶನ ನನಗೆ ತಿಳಿದ ಮಟ್ಟಿಗೆ 1946ನೇ ಇಸವಿಯಲ್ಲಿ ಸ್ವಾತಂತ್ರ್ಯ ಬರುವುದಕ್ಕೆ ಒಂದು ವರ್ಷ ಮುಂಚೆ ಈ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಸ್ಥಾಪನೆಯಾಗುವುದಕ್ಕೆ ಒಂದು ಒಂದೂವರೆ ವರ್ಷ ಮುಂಚೆ ಪ್ರಾರಂಭವಾಯಿತು. ಅದನ್ನು ಪ್ರಾರಂಭ ಮಾಡಿದವರು ಬೆಂಗಳೂರು ಸಿಟಿ ಕಾಂಗ್ರೆಸ್ ಕಮಿಟಿಯವರು. 1958ನೇ ಇಸವಿಯವರೆಗೂ ಅವರೇ ನಡೆಸಿಕೊಂಡು ಬಂದರು. ಕಾಂಗ್ರೆಸ್ ಸರ್ಕಾರ ಬಂದಮೇಲೆ ಅದನ್ನು ಪ್ರಾರಂಭ ಮಾಡಿದ್ದಲ್ಲ. ಸರ್ಕಾರ ತಮ್ಮ ಕೈಗೆ ಬರುವುದಕ್ಕಿಂತ ಮುಂಚಿತವಾಗಿಯೇ ಪ್ರಾರಂಭಮಾಡಿ ಅಂದಿನಿಂದ ನಡೆಸಿಕೊಂಡು ಬರುತ್ತಿದ್ದಾರೆ. ಕಾಂಗ್ರೆಸ್ ಸಂಸ್ಥೆ ಸ್ವಾತಂತ್ರ್ಯ ಆಂದೋಳನದ ಕಾಲದಲ್ಲಿ ಜನರಿಗೆ ಬೋಧಪ್ರದವಾಗಿರಬೇಕು, ಇಡೀ ದೇಶದ ಜನಗಳಿಗೆ ಸ್ವಾತಂತ್ರ್ಯ ಹೋರಾಟಕ್ಕೆ ಬೇಕಾದಂಥ ಸ್ಫೂರ್ತಿಯನ್ನು ಕೊಡಬೇಕು ಸಂಘಟನೆ ಮಾಡಬೇಕು ಮತ್ತು ಅಂಥ ಸಂದರ್ಭದಲ್ಲಿ ಅತ್ಯಾವಶ್ಯಕವಾದ ನಿಧಿ ಸಂಗ್ರಹಣೆಯಾಗಬೇಕು ಎನ್ನುವ ಎಲ್ಲ ದೃಷ್ಟಿಯಿಂದ ಈ ಪ್ರದರ್ಶನ ಪ್ರಾರಂಭವಾಯಿತು. ಈವೊತ್ತು ಸರ್ಕಾರ ಏಕೆ ನಡೆಸಬಾರದು ಎಂದು ಕೆಲವರು ಕೇಳಿದ್ದಾರೆ. ಅದಕ್ಕೆ ನನ್ನ ಅಭ್ಯಂತರವಿಲ್ಲ. ಈವೊತ್ತು ಒಂದು ರಾಜಕೀಯ ಪಕ್ಷ ಇದನ್ನು ನಡೆಸಿಕೊಂಡು ಹೋಗಬೇಕು ಎಂದು ನಾನು ಹೇಳುವವನಲ್ಲ; ಸರ್ಕಾರ ಇದನ್ನು ನಡೆಸಲೇ ಕೂಡದು ಎಂದು ಹೇಳುವವನೂ ಅಲ್ಲ. ಒಂದೇ ಉಸಿರಿನಲ್ಲಿ ಎಲ್ಲವನ್ನೂ ಹೇಳಿದರೆ ಅದಕ್ಕೆ ಅರ್ಥ ಬಹಳ ಕಡಮೆಯಾಗುತ್ತದೆ. ನೀರಾವರಿ ಯೋಜನೆಗಳಿಗೆ 30 ಕೋಟಿ ಮೀಸಲಿಡಬೇಕೆಂಬ ಪ್ರಬಲವಾದ ನಿರ್ಣಯ ಸಭೆಯ ಮುಂದೆ ಬರುತ್ತದೆ ಎಂದು ಗೊತ್ತಾಗಿದೆ. ಸರ್ಕಾರದವರು ಬಾಕಿ ಎಲ್ಲ ವ್ಯಕ್ತಿಗಳ ಜವಾಬ್ದಾರಿಯನ್ನೂ ಅವರು ಮಾಡುವ ಕಸಬನ್ನೂ ವಹಿಸಿಕೊಂಡು ನಡೆಸಬೇಕು ಎಂದರೆ ಎಷ್ಟು ಮಟ್ಟಿಗೆ ಸರಿ ಎನ್ನುವುದನ್ನು ನಾವೆಲ್ಲ ಯೋಚನೆ ಮಾಡಬೇಕು. ಖಾಸಗಿ ಸಂಸ್ಥೆ ನಡೆಸುವಂಥ ಎಲ್ಲವನ್ನೂ ಕೂಡ ಸರ್ಕಾರದ ವತಿಯಿಂದ ಮಾಡುವುದಕ್ಕೆ ಭರವಸೆಯನ್ನು ಕೊಡುವುದಕ್ಕೆ ಸಾಧ್ಯವೇ ! ಖಾಸಗಿಯವರು ಮಾಡಿದಾಗ ಲಾಭವಾದ ಮಾತ್ರಕ್ಕೆ ಸರ್ಕಾರ ವಹಿಸಿಕೊಂಡರೆ ಲಾಭವಾಗುತ್ತದೆಯೆಂದಲ್ಲ. ಹಿರಣ್ಣಯ್ಯ ಮಿತ್ರಮಂಡಳಿಗೆ ಲಾಭವಾಗುತ್ತಿದೆಯೆಂದು ಸರ್ಕಾರವೇ ನಾಟಕ ಆಡಲು ಹೋಗಲು ಸಾಧ್ಯವಿಲ್ಲ. ಈವೊತ್ತು ಕಾಂಗ್ರೆಸ್ ವಸ್ತುಪ್ರದರ್ಶನ ಏನು ನಡೆದಿದೆ ಅದರಿಂದ ಅವರು ಹೇಳತಕ್ಕ ಘೋರ ಅನ್ಯಾಯವೇನೂ ಆಗಿಲ್ಲ. ಅನ್ಯಾಯವಾಗಿದ್ದರೆ ಮಾತ್ರ ಸರ್ಕಾರ ನಡೆಸಬೇಕು ಎಂದಿಲ್ಲ. ನ್ಯಾಯವಾಗಿ ನಡೆಯುತ್ತಿದ್ದರೂ ಕೂಡ ಕಾಲ ಮುಂದುವರಿದಂತೆ ಸರ್ಕಾರ ಜವಾಬ್ದಾರಿ ಹೊರಬೇಕಾಗುತ್ತದೆ. ಅದು ಇನ್ನೂ ಯಶಸ್ವಿಯಾದ, ದಕ್ಷವಾದ ರೀತಿಯಲ್ಲಿ ಮಾಡುವುದಕ್ಕೆ ಸಾಧ್ಯವಿದ್ದಾಗ ಅಂಥ ಕಾರ್ಯಗಳನ್ನು ಕೈಗೊಳ್ಳಬೇಕು. ಅದನ್ನು ಹೇಳುವುದಕ್ಕೋಸ್ಕರವಾಗಿ ಅನಾವಶ್ಯಕವಾಗಿ ಮಿಥ್ಯಾರೋಪವನ್ನು ಕಾಂಗ್ರೆಸ್ ಸಂಸ್ಥೆಗೆ, ಅಲ್ಲಿನ ಜನಗಳಿಗೆ ಹೊರಿಸುವುದು ಸರಿಯಲ್ಲ. ಬೇರೆಯವರಿಗೆ ಯಾರಿಗೂ ಕೊಡದೆ ಇರುವಂಥ, ಸಹಕಾರ ಸಂಘಸಂಸ್ಥೆಗಳಿಗೆ ಕೊಡದೆ ಇರುವಂಥ, ಸಿನಿಮಾ ತಯಾರು ಮಾಡುವ ಉದ್ಯಮದಲ್ಲಿ ತೊಡಗಿರುವವರಿಗೆ ಯಾರಿಗೂ ಕೊಡದೆ ಇರುವಂಥ ಸೌಲಭ್ಯವನ್ನು ಸರ್ಕಾರ ಕಾಂಗ್ರೆಸ್ ವಸ್ತುಪ್ರದರ್ಶನಕ್ಕೆ ಕೊಟ್ಟಿಲ್ಲ.

ಕಾಂಗ್ರೆಸ್ ವಸ್ತುಪ್ರದರ್ಶನ ಸುಭಾಸ್ ನಗರದಂಥ ಅತ್ಯುತ್ತಮವಾದ ಜಾಗದಲ್ಲಿ ನಡೆಯುತ್ತಿದೆ. ಇದು ಒಂದೇ ವಿರೋಧ ಪಕ್ಷದವರ ಮನಸ್ಸಿನಲ್ಲಿ ಹೆಚ್ಚಾಗಿ, ಪ್ರಬಲವಾಗಿ ಕಂಡು ಬರುತ್ತಿರುವ ಒಂದು ದೊಡ್ಡ ಆರೋಪ. ಇದರ ಬಗ್ಗೆ ಹೇಳುವುದಾದರೆ ಇದನ್ನು ಅವರಿಗೆ ಈವೊತ್ತು ಕೊಟ್ಟಿರುವುದಲ್ಲ. 1946ನೇ ಇಸವಿಯಿಂದ, ಕಾಂಗ್ರೆಸ್ ಸರ್ಕಾರ ರಾಜ್ಯದಲ್ಲಿ ಬರುವುದಕ್ಕೆ ಒಂದೂವರೆ ವರ್ಷ ಎರಡು ವರ್ಷ ಮುಂಚಿನಿಂದ ಅಲ್ಲಿ ವಸ್ತುಪ್ರದರ್ಶನವನ್ನು ನಡೆಸಿಕೊಂಡು ಬರುತ್ತಿದೆ. ಈವೊತ್ತು ಯಾವುದೇ ರೀತಿಯಿಂದ ಫೇವರ್ ಸರ್ಕಾರ ಮಾಡಿಲ್ಲ.

ಇನ್ನು ಇರತಕ್ಕ ಪ್ರಶ್ನೆ ಏನೆಂದರೆ 99 ವರ್ಷ ಲೀಸ್‌ಗೆ ಕೊಡುವ ಪ್ರಶ್ನೆ. ಆ ಪ್ರಶ್ನೆ ಬಗ್ಗೆ ಈಗಾಗಲೇ ಸಭೆಯಲ್ಲಿ ಏನಾಗಿದೆ ಎನ್ನುವುದು ಗೊತ್ತಿದೆ. ಮಾನ್ಯ ಮುಖ್ಯ ಮಂತ್ರಿಗಳು ಒಂದು ವಿಷಯವನ್ನು ಹೇಳಿದ್ದಾರೆ, ವಿರೋಧ ಪಕ್ಷದವರು ಹೇಳತಕ್ಕ ಮಾತುಗಳನ್ನು ಕೂಡ ಕೇಳಿಕೊಂಡು ಆ ಮೇಲೆ ನಿರ್ಧಾರಕ್ಕೆ ಬರುತ್ತೇನೆ ಎನ್ನುವ ಭಾವನೆ ಬರುವಂಥ ಮಾತುಗಳನ್ನು ಹೇಳಿದ್ದಾರೆ.

ಶ್ರೀ ಎಸ್. ಚನ್ನಯ್ಯ (ಕೃಷ್ಣರಾಜ).—ಕೊಡುವುದಕ್ಕಿಂತ ಮುಂಚೆ ವಿರೋಧ ಪಕ್ಷದವರ ಹತ್ತಿರ ಕನ್‌ಸಲ್ಟ್ ಮಾಡುತ್ತೇನೆ ಚರ್ಚೆ ಮಾಡುತ್ತೇನೆ ಎಂದು ಹೇಳಿದ್ದಾರೆ.

ಶ್ರೀ ಎಂ. ಡಿ. ಬಣಕಾರ್ (ಬ್ಯಾಡಗಿ).—ತಮ್ಮ ಅಭಿಪ್ರಾಯವೇನಿದೆ ಅದನ್ನು ಹೇಳಿ, ಅದಕ್ಕೆ ನಮ್ಮ ಅಭ್ಯಂತರವಿಲ್ಲ. ವಿರೋಧ ಪಕ್ಷದವರ ಮೇಲೆ ತಪ್ಪನ್ನು ಹೊರಿಸುವುದು ಬೇಡ. ವಿರೋಧ

ಪಕ್ಷದವರನ್ನು ಒಳಗೊಂಡು ಎನ್ನುವ ಶಬ್ದವನ್ನು ಅವರು ಹೇಳುವುದು ನ್ಯಾಯವಲ್ಲ. ಅದನ್ನು ದಯವಿಟ್ಟು ಹೇಳಬಾರದು.

ಶ್ರೀ ಕೆ. ಎಚ್. ಶ್ರೀನಿವಾಸ್.—ನಾನು ಅದನ್ನು ಹೇಳಿಲ್ಲ, ಅಂಥಾದ್ದೇನೂ ಹೇಳಿಲ್ಲ. ಈ ಕಡೆಯಿಂದ ಆ ಮಾತನ್ನು ನಾನು ಹೇಳಲಿಲ್ಲ. ಇದರ ಬಗ್ಗೆ ಮುಖ್ಯ ಮಂತ್ರಿಗಳು ಹೇಳಿದ್ದು ನಾನು ಅರ್ಥ ಮಾಡಿಕೊಂಡಿರುವಮಟ್ಟಿಗೆ ವಿರೋಧ ಪಕ್ಷದ ಭಾವನೆಯೇನಿದೆ ಅದಕ್ಕೆ ಒಂದು ಹಿಯರಿಂಗ್ ಕೊಡುತ್ತೇನೆ ಎಂಬುದು.

ಶ್ರೀ ಎಸ್. ಚನ್ನಯ್ಯ.—ಆ ರೀತಿಯಲ್ಲಿ, ವಿರೋಧ ಪಕ್ಷವನ್ನು ಕೇಳಿ ಮಾಡುತ್ತೇವೆ ಎಂದು ಅವರು ಹೇಳಿರುವುದು.

ಶ್ರೀ ಕೆ. ಎಚ್. ಶ್ರೀನಿವಾಸ್.—ಅದಕ್ಕಿಂತ ವಿಶೇಷವಾಗಿ ಪ್ರಸ್ತಾಪಮಾಡುವುದಕ್ಕೆ ನಾನು ಬಯಸದೆ ಇದ್ದರೂ ಆ ಭಾಗದ ಹಿರಿಯ ಸದಸ್ಯರಾದ ಶ್ರೀ ಚನ್ನಬಸಪ್ಪನವರು ಒಂದು ವಿಶೇಷ ಪ್ರಶ್ನೆಯನ್ನೆತ್ತಿದ್ದಾರೆ. ಎಗ್ಸಿಕ್ಯುಟಿವ್ ಆಕ್‌ಷನ್‌ನಲ್ಲಿ ಸರಕಾರ ವಿರೋಧ ಪಕ್ಷವನ್ನು ಕನ್‌ಸಲ್ಟ್ ಮಾಡುತ್ತದೆ ಎಂದು ಕಮಿಟ್ ಮಾಡಿಕೊಂಡರೆ— If the Government makes a commitment that it will consult the Opposition while taking executive action, it will open flood-gates and make the function of Government impossible. ಇದು ಅವರ ಶಬ್ದಗಳಲ್ಲಿ ಹೇಳಿರುವ ವಿಚಾರ. ಇದರ ಬಗ್ಗೆ ಹೇಳುವುದು ವಿರೋಧ ಪಕ್ಷದವರೂ ಕೂಡ ಜನರ ಪ್ರತಿನಿಧಿಗಳು, ಜನರ ಅಭಿಪ್ರಾಯದ ಮೇಲೆ ಆರಿಸಿ ಬಂದಿದ್ದಾರೆ, ರಾಷ್ಟ್ರದ ಅಭಿಪ್ರಾಯವನ್ನು ತಿಳಿಸುವುದಕ್ಕೆ ಅವರಿಗೆ ಹಕ್ಕಿದೆ. ಆದರೆ ಪ್ರತಿಯೊಂದಕ್ಕೂ ಸರಕಾರ ವಿರೋಧ ಪಕ್ಷವನ್ನು ಕೇಳಬೇಕೆಂದರೆ ಕಷ್ಟವಾಗುವುದು. ಮುಖ್ಯ ಮಂತ್ರಿಗಳು ತಾವು ಅಧಿಕಾರಕ್ಕೆ ಬಂದಾಗಿನಿಂದ ವಿರೋಧ ಪಕ್ಷವನ್ನು ಕಾನ್‌ಫಿಡೆನ್ಸಿಗೆ ತೆಗೆದುಕೊಂಡು ಆಡಳಿತ ನಡೆಸುತ್ತಿರುವುದು ಶ್ಲಾಘನೀಯ. ಕಳೆದ ಸಾರಿ ನಾನು ರಾಜ್ಯಪಾಲರ ಭಾಷಣದಮೇಲೆ ಮಾತನಾಡುವಾಗ ವಿರೋಧ ಪಕ್ಷವನ್ನು, ಆಡಳಿತದ ಅನುಭವವಿರುವವರನ್ನು ಕಾನ್‌ಫಿಡೆನ್ಸಿಗೆ ತೆಗೆದುಕೊಳ್ಳಬೇಕು ಎಂದು ಹೇಳಿದ್ದೇನೆ. ಆದರೆ ಸರಕಾರ ಏನೇ ಮಾಡಬೇಕಾದರೂ ವಿರೋಧ ಪಕ್ಷವನ್ನು ಕೇಳಿಯೇ ಮಾಡಬೇಕೆಂದರೆ ಬಹಳ ಕಷ್ಟವಾಗುತ್ತದೆ. ರಾಜಕೀಯ ಪಕ್ಷಗಳಿಗೆ ಮನ್ನಣೆ ಕೊಡಲಾಗುತ್ತಿದೆ, ವಿರೋಧ ಪಕ್ಷಕ್ಕೆ ಮನ್ನಣೆ ಕೊಟ್ಟು ಮುಖ್ಯವಾದ ವಿಷಯಗಳಲ್ಲಿ ಸರಕಾರ ಅದರ ಸಲಹೆಯನ್ನು ಪಡೆಯುತ್ತಿದೆ. ಆದರೆ ಎಲ್ಲ ವಿಷಯಗಳಲ್ಲೂ ಹಾಗೆ ಕೇಳಿ ಮುಂದುವರೆಯುವುದಕ್ಕಾಗುವುದಿಲ್ಲ. ಈಗ ಒಂದೇ ರಾಜಕೀಯ ಪಕ್ಷ ಆಡಳಿತ ನಡೆಸುತ್ತಿದೆ, ವಿರೋಧ ಪಕ್ಷವನ್ನು ಕೇಳದೆ ಯಾವ ವಿಷಯವನ್ನೂ ನಿರ್ಧರಿಸಲು ಸಾಧ್ಯವಿಲ್ಲದ ಒಂದು ರಾಜಕೀಯ ಪರಿಸ್ಥಿತಿ ಉಂಟಾದರೆ, ಆಗ ಸಮ್ಮಿಶ್ರ ಸರಕಾರ ರಚಿಸಬೇಕಾಗುತ್ತದೆ. ಅಂಥ ಪರಿಸ್ಥಿತಿ ಇಂದೇನೂ ಇಲ್ಲ. ಶ್ರೀ ಚನ್ನಬಸಪ್ಪನವರು ಕೊಟ್ಟಿರುವ ಅಭಿಪ್ರಾಯವನ್ನು ನಾನು ಸಮರ್ಥನೆ ಮಾಡುತ್ತೇನೆ. ಇಷ್ಟು ಹೇಳಿ ಕಾಂಗ್ರೆಸ್ ಪಕ್ಷ ಬಹಳ ವರ್ಷಗಳಿಂದ ವಸ್ತುಪ್ರದರ್ಶನವನ್ನು ನಡೆಸಿಕೊಂಡು ಬರುತ್ತಿದೆ. ಇದಕ್ಕೆ ಸರಕಾರ ಸ್ವಲ್ಪ ಸೌಲತ್ತು ಕೊಟ್ಟಿದ್ದರೂ ಸರಕಾರಿ ಇಲಾಖೆ ಕೆಲಸಗಳ ಅಡ್ವರ್ಟೈಜ್‌ಮೆಂಟ್ ಆದಂತಾಗುತ್ತದೆ, ಆದ್ದರಿಂದ ಸರಕಾರಕ್ಕೆ ಉತ್ಪತ್ತಿ ಬರುತ್ತದೆ. ಇದರಿಂದ ಯಾವುದೇ ಅನ್ಯಾಯವಾಗಿಲ್ಲ. ಯಾವುದೇ ರೀತಿಯ ಔಚಿತ್ಯವಿಲ್ಲದಿರುವ ಕೆಲಸವನ್ನು ಸರಕಾರ ಮಾಡಿಲ್ಲ. ಆದುದರಿಂದ ಕಾಂಗ್ರೆಸ್ ಪಕ್ಷ ವಸ್ತುಪ್ರದರ್ಶನವನ್ನು ನಡೆಸುವುದನ್ನು ಕುರಿತು ಹೀಗೆ ವಾದವನ್ನು ಬೆಳೆಸಬಾರದು ಇದರಲ್ಲಿ ಯಾವ ಲೋಪವೂ ಇಲ್ಲ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—Before permitting another Member to speak, I shall place before the House the statistics of the time taken on this debate. As many as 5 Members of the Oppsition have so far spoken and they have taken 80 minutes. This debate will have to close by 6-10 P.M. I want to know from the Government what time they will take for reply?

Sri VEERENDRA PATIL.—About 45 minutes to one hour.

Sri K. PUTTASWAMY.—May I know what time the Members on behalf of the Congress Party have taken?

Mr. SPEAKER.—Only 20 minutes have been taken.

Sri K. PUTTASWAMY.—If it is only 20 minutes, we have to take 55 minutes.

Sri VEERENDRA PATIL.—I am entitled to 55 minutes for reply.

ಶ್ರೀ ಎಸ್. ಚನ್ನಯ್ಯ.—ನಮಗೆ ಒಂದೂಕಾಲು ಗಂಟೆ, ಆಡಳಿತ ಪಕ್ಷಕ್ಕೆ ಒಂದೂಕಾಲು ಗಂಟೆ ಎಂದು ತೀರ್ಮಾನವಾಡಿದೆ.

Mr. SPEAKER.—Of course, there are 55 minutes at the disposal of the Congress Party. We can permit another one or two Members and each Member may take ten minutes. So the Hon. Chief Minister will commence his reply at 5-35 P.M. Now Sri Gopala Gowda will speak.

†**ಶ್ರೀ ಎಸ್. ಗೋಪಾಲಗೌಡ.**—ಮಾನ್ಯ ಅಧ್ಯಕ್ಷರೇ, ಸುಬಾಷ್ ನಗರದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ವಸ್ತು ಪ್ರದರ್ಶನವನ್ನು ನಡೆಸುವ ಸಲುವಾಗಿ ಸ್ಥಳವನ್ನು 99 ವರ್ಷಗಳ ಗುತ್ತಿಗೆಗೆ ಕೊಟ್ಟಿದ್ದಾರೆ ಅಥವ ಕೊಡುತ್ತಾರೆ ಎಂಬ ವಿಷಯವನ್ನು ಕೇಳಿ ಗಾಬರಿಗೊಂಡ ನಾವು ಈ ಎರಡೂವರೆ ಗಂಟೆ ಚರ್ಚೆಗೆ ಅನುಮತಿಯನ್ನು ಪಡೆದುಕೊಂಡಿದ್ದೇವೆ. ಈಗತಾನೆ ಮಾತನಾಡಿದ ಸಾಗರ ಕ್ಷೇತ್ರದ ಸದಸ್ಯರು—ಅವರು ಸಭೆಯಲ್ಲಿಲ್ಲವೆಂದು ಕಾಣುತ್ತದೆ—ಅವರನ್ನು ನಾನು ಟೀಕೆಮಾಡುವುದಿಲ್ಲ—ಹಾಲ ಹಸುಳೆ. ಅವರು 1966 ಅಥವ 67 ರಲ್ಲಿ ಕಾಂಗ್ರೆಸ್ಸಿಗೆ ಚುನಾವಣೆಗೆ ಸೇರಿರಬೇಕು. ಅಲ್ಲಿಯವರೆಗೆ ಅವರು ನಮ್ಮ ಜೊತೆಯಲ್ಲೇ ಇದ್ದರು. ಇಷ್ಟು ಹೇಳಿ ನನ್ನ ವಿಚಾರ ಸ್ವಲ್ಪ ಹೇಳುತ್ತೇನೆ. ಅದಕ್ಕೆ ಅವಕಾಶ ಕೊಡಬೇಕು. ನಾನು 1942 ರಲ್ಲಿ ಎಸ್. ಎಸ್. ಎಲ್. ಸಿ. ಓದುತ್ತಿದ್ದಾಗ ಬ್ರಿಟಿಷರೇ ಭಾರತ ಬಿಟ್ಟು ತೊಲಗಿ ಎಂಬ ಚಳವಳಿಯನ್ನೇನು ಗಾಂಧೀಜಿಯವರು ಆರಂಭಿಸಿದ್ದರು ಅದರಲ್ಲಿ ಭಾಗವಹಿಸಿ ಜೈಲಿಗೆ ಹೋದೆ.

6-8 ತಿಂಗಳ ಜೈಲುವಾಸ ಅನುಭವಿಸಿದ್ದೇನೆ. ಆಗ ನಾನು ಕಾಂಗ್ರೆಸ್ ಸದಸ್ಯನಾಗಿದ್ದೆ, ಯುವಕ ಕಾಂಗ್ರೆಸ್ ಸದಸ್ಯನಾಗಿದ್ದೆ. 1948ರಲ್ಲಿ ನಾಸಿಕ್ ಸಮ್ಮೇಳನದಲ್ಲಿ ಕಾಂಗ್ರೆಸ್ ಬಂಡವಾಳಶಾಹಿಗಳ ಕೈಗೊಂಬೆ ಎನ್ನುವ ಅಭಿಪ್ರಾಯ ನನಗೆ ಬಂದು ನಾವು ಕಾಂಗ್ರೆಸ್ಸನ್ನು ಬಿಟ್ಟವರು. ಆದ್ದರಿಂದ ಪಕ್ಷದ ದೂಷಣೆ ಮಾಡುವಂತಹ ವಿಷಯ ಏನೂ ಇಲ್ಲ. ನಾನು 1946-47ರಲ್ಲಿ ಕಾಂಗ್ರೆಸ್ ವಸ್ತು ಪ್ರದರ್ಶನವನ್ನು ನೋಡಿದ್ದೇನೆ. ಈಗತಾನೆ ಮಾತನಾಡಿದ ಬೆಂಗಳೂರಿನ ಸದಸ್ಯರಾದ ಶ್ರೀಮಾನ್ ಶಾಮಣ್ಣನವರು ಏನು ಹೇಳಿದರು ಅದು ಬಹಳ ಒಳ್ಳೆಯ ವಿಷಯ, ಆ ವಸ್ತು ಪ್ರದರ್ಶನದಲ್ಲಿ ಏನು ಮಾಡುತ್ತಾ ಇತ್ತು, ಅದರ ಉದ್ದೇಶ ಏನಿತ್ತು ಎಂಬುದನ್ನು ಅವರು ಹೇಳಿದ್ದಾರೆ. ಕಾಂಗ್ರೆಸ್ ಅಧಿಕಾರಕ್ಕೆ ಬರುವುದಕ್ಕಿಂತ ಮುಂಚಿನಿಂದಲೂ ಕಾಂಗ್ರೆಸ್ ವಸ್ತು ಪ್ರದರ್ಶನ ಈ ನಗರದಲ್ಲಿ ನಡೆದುಕೊಂಡು ಬಂದಿದೆ ಎಂದು ಅವರು ಹೇಳಿದರು. ಅವತ್ತು ಇದ್ದದ್ದು ಏನು ? ಗಾಂಧೀಜಿಯವರ ತತ್ವವನ್ನು ಪ್ರತಿಪಾದನೆ ಮಾಡುವುದಕ್ಕೆ, ಸ್ವಸಹಾಯ, ಸ್ವಧರ್ಮ, ಸ್ವದೇಶಿ ಅಂಥ ಹೇಳಿ ಗಾಂಧೀಜಿಯವರು ಏನು ಪ್ರತಿಪಾದನೆ ಮಾಡಿದರು ಆ ಒಂದು ಭಾವನೆಗಳನ್ನು ಈ ದೇಶದ ಜನತೆಯಲ್ಲಿ ನುಡಿಯ ಮೂಲಕ ಅವರನ್ನು ಕಾಂಗ್ರೆಸ್‌ಗೆ ಸೆಳೆಯಬೇಕು ಅನ್ನುವ ಕಾರಣಕ್ಕಾಗಿ ಅವತ್ತು ವಸ್ತು ಪ್ರದರ್ಶನವನ್ನು ಮಾಡಿದರು. ಅವತ್ತು ಈ ಸರ್ಕಾರ ಇರಲಿಲ್ಲ, ಎಲ್ಲರನ್ನೂ ಕೈಕಾಲು ಕಟ್ಟಿ ಖಾದಿ ಟೋಪಿಯನ್ನು ಹಾಕಿ, ನೂಲು ತೆಗೆಯುವುದನ್ನು ಏರ್ಪಾಡು ಮಾಡಿ ಅಶ್ವತ್ಥಮ್ಮನವರು—"ಅಕ್ಕ ತಕಲಿ ಇದೇ, ಪರಮಪಾವನವೂ" ಎಂದು ಹಾಡಿದರಲ್ಲಾ ಅದನ್ನು ಹಾಡಿಸುವುದಕ್ಕೆ ಆ ಅರ್ಥ ಮಾಡಿದ್ದರು—ಖಾದಿಯೇ ಸ್ವರ್ಗ—ಖಾದಿಯೇ ಪರಮ ಪಾವನ ಅಂತ. ಇವತ್ತು ಏನಾಗಿದೆ ? ಸಾಗರದ ಸದಸ್ಯರು ಮಾಡಿದ ಭಾಷಣ ಕೇಳಿ ಬಹಳ ವ್ಯಥೆ ಆಯಿತು ನನಗೆ. ಅವರು ಉತ್ಸಾಹಶಾಲಿಗಳು, ತರುಣರು, ಎಂ. ಎ., ಬಿ. ಎಲ್., ಓದಿದ್ದಾರೆ, ಆಗರ್ಭ ಶ್ರೀಮಂತರು, ತುಂಬಾ ಅಡಿಕೆ ಬೆಳೆಯುತ್ತಾರೆ, ಅದೆಲ್ಲಾ ಚೆನ್ನಾಗಿ ಗೊತ್ತು, ಅವರು ನನ್ನ ಸ್ನೇಹಿತರು ಕೂಡ ಹೌದು, ಆದರೆ ಅವರು ಒಂದು ವಿಷಯವನ್ನು ಮರೆಯುತ್ತಾರೆ "ಬಲಿಗೆ ಎಂದೇ ತಂದ ಕುರಿ ತಾ ಬಲ್ಲುದೇ ತನ್ನ ಕೊಲ್ಲುವುದು ಎಂಬುದನು" ಇನ್ನು ಸ್ವಲ್ಪ ಹೊತ್ತಿಗೆ ಕೊಲ್ಲಬೇಕೆಂದಿರುವಾಗ ಕೊಲ್ಲುವುದಕ್ಕೆ ತೆಗೆದುಕೊಂಡು ಹೋಗುತ್ತಾರೆ. ತಾನೇ ಅದಕ್ಕೆ ಮುಂಚೆ ಅದು ಹಸಿ ಹುಲ್ಲನ್ನು ತಿನ್ನುತ್ತಾ ಇರುತ್ತದೆ, ಪಾಪ. ಹಾಗೆ ಅವರು ವಿರೋಧ ಪಕ್ಷವನ್ನು ಮೂದಲಿಸುವಾಗ ಸ್ವಲ್ಪ ಎಚ್ಚರಿಕೆ ವಹಿಸಬೇಕು. ನಾವು ಹೇಳುವ ಅಂಶ ಏನು ಎಂಬುದನ್ನು ತಾವು ತಿಳಿದುಕೊಳ್ಳಬೇಕು. ಶ್ರೀಮಾನ್

ಚನ್ನಬಸಪ್ಪನವರೂ ಕಾಂಗ್ರೆಸ್‌ನಲ್ಲಿದ್ದವರೇ. ಅವರು ಆಡಳಿತ ವಿಷಯವನ್ನು ಚೆನ್ನಾಗಿ ತಿಳಿದುಕೊಂಡಿರುವವರು, ಅವರು ಏನು ಹೇಳಿದರು ? ಈ ಸರ್ಕಾರ ಎಷ್ಟೋ ದಕ್ಷತೆಯಿಂದ ಕೆಲಸ ಮಾಡಿದರೂ ರೂಲ್ ಆಫ್ ಲಾ ಏನಿದೆ ಅದನ್ನು ಬಹಳ ಚೆನ್ನಾಗಿ ನಡೆಸಿಕೊಂಡು ಹೋಗಬೇಕು. ಶಿವಪ್ಪನವರಿಗೆ ಅದರ ಮಾಹಿತಿ ಇಲ್ಲ. ಒಂದು ತೀರ್ಮಾನವನ್ನು ತೆಗೆದುಕೊಂಡ ಮೇಲೆ ಒತ್ತಡಕ್ಕೆ ಮಣಿಯದೆ ಗಾಬರಿಗೊಂಡು, ಪದೇ ಪದೇ ಬದಲಾಯಿಸಬಾರದು ಎಂಬ ವಿಷಯವನ್ನು ಅವರು ಬಹಳ ಚೆನ್ನಾಗಿ ಒತ್ತಿ ಹೇಳಿದರು. ನಮ್ಮ ಕಡೆ ಕೆಲವರು ಕೇಳಿದರು ಅವರಿಗೇನು ಬೆಂಬಲ ಕೊಡುತ್ತಾ ಇದ್ದೀರಿ ಕಾಂಗ್ರೆಸ್‌ನವರು ಮಾಡಿರುವ ಕೆಲಸಕ್ಕೆ ಎಂದು ಹೇಳಿ ಮಧ್ಯೆ ಮಧ್ಯೆ ಬಾಯಿ ಹಾಕಿದರು, ಅದೇ ಅರ್ಥದಲ್ಲಿ ಸಾಗರದ ಸದಸ್ಯರು ಶ್ರೀಮಾನ್ ಚನ್ನಬಸಪ್ಪನವರ ಭಾಷಣವನ್ನು ಉದ್ಧರಿಸಿದರು, ಇದೆಲ್ಲಾ ಒಳ್ಳೆಯದೇ; ನನಗೆ ಹೆಚ್ಚು ಹೊತ್ತು ಇಲ್ಲದೇ ಇರುವುದರಿಂದ ಹೆಚ್ಚು ವಿಷಯಗಳನ್ನು ಮಾತನಾಡುವುದಕ್ಕೆ ಸಮಯವಿಲ್ಲ. ಮಾತನಾಡುವುದು ಬಹಳ ಇದೆ. ಮಾತನಾಡೋಣ. ಇದು ಮಾತಿನ ಮನೆಯೇ; ಈ ವಿಷಯವನ್ನು ಪ್ರಸ್ತಾಪ ಮಾಡುವಾಗ ಬಂದ ಚರ್ಚೆಯಲ್ಲಿ ಭಾಗವಹಿಸುತ್ತಾ ನಾನು ಒಂದು ಮಾತು ಹೇಳಿದೆ, ಆಯವ್ಯಯದಮೇಲೆ ಚರ್ಚೆ ನಡೆಯಬೇಕು ಅನ್ನುವುದರ ಬಗ್ಗೆ ತಮಗೆ ಎಷ್ಟು ಕಾತುರ ಇದೆಯೋ ಅಷ್ಟೇ ಕಾತುರ ಈ ಮನೆಗೂ ಇದೆ, ವಿರೋಧ ಪಕ್ಷದ ಸದಸ್ಯರಿಗೂ ಇದೆ. ಇದರಲ್ಲಿ ಒಂದು ತತ್ವ ಇದೆ. ಇದು ತಪ್ಪು ಎಂದು ಈಗಾಗಲೇ ಬರೆದಿದ್ದೇನೆ. ನಾನು ಹೇಳುವುದರಲ್ಲಿ ಈ ರೀತಿ ಇದೆ:— "ಈ ಜಾಗದಲ್ಲಿ ಕಟ್ಟುವ ಸ್ಟಾಲ್‌ಗಳಿಂದ ಬರುವ ಆದಾಯ ಸರ್ಕಾರದ ಬೊಕ್ಕಸಕ್ಕೆ ಬರಬೇಕು, ಇಲ್ಲದೇ ಇದ್ದರೆ ಎಲ್ಲಾ ಪಕ್ಷಗಳಿಗೂ ಸಮಾನವಾಗಿ ಹಂಚಬೇಕು" ಈ ಒಂದು ವಾಕ್ಯವನ್ನು ನಾನು ತಿದ್ದುಪಡಿ ಮಾಡಿಕೊಳ್ಳಬೇಕು ಎಂದು ತಮ್ಮ ಅಪ್ಪಣೆಯನ್ನು ಬೇಡುತ್ತಾ ಇದ್ದೇನೆ. ಈ ಆದಾಯವನ್ನು ಎಲ್ಲ ಪಕ್ಷಗಳಿಗೂ ಹಂಚುವುದು ಅವಶ್ಯವಲ್ಲ. ವಸ್ತು ಪ್ರದರ್ಶನದ ಮೂಲಕ ಪಡೆದಂತಹ ಹಣವನ್ನು ನಮಗೆ ಹಂಚಬೇಕೆಂದು ನಾನು ಕೇಳುತ್ತಾ ಇಲ್ಲ. ಏಕೆಂದರೆ ನಮ್ಮ ಆಫೀಸಿಗೆ ಬಾಡಿಗೆ ಕೊಡುವುದಕ್ಕೆ ಆಗಿಲ್ಲ, ನೋಟೀಸ್ ಕೊಟ್ಟಿದ್ದಾರೆ, ನಮ್ಮ ಆಫೀಸಿನಲ್ಲಿ ಟೆಲಿಫೋನ್ ಹಾಕುವುದಕ್ಕೆ ಆಗಿಲ್ಲ. ಶ್ರೀಮಾನ್ ಶಾಮಣ್ಣನವರು ಬೆಂಗಳೂರಿನಲ್ಲಿ ಹಿಂದೆ ಕಾಂಗ್ರೆಸ್‌ನಲ್ಲಿ ಇದ್ದವರು,—ಶ್ರೀಮಾನ್ ಶ್ರೀನಿವಾಸ್‌ರವರು ಹುಟ್ಟುವುದಕ್ಕಿಂತ ಮುಂಚಿನಿಂದಲೂ ಇದ್ದವರು ಎಂದು ಹೇಳುತ್ತೇನೆ–ಏಕೆಂದರೆ ಅವರು ಹಿಂದೆ ಅವರು ಹಿಂದಲಗಿ ಜೈಲಿನಲ್ಲಿ ಬಹಳ ವರ್ಷ ಇದ್ದವರು, ಕಾಂಗ್ರೆಸ್‌ನ ವಿಷಯ ಅವರಿಗೆ ಬಹಳ ಚೆನ್ನಾಗಿ ಗೊತ್ತು, ಅವರನ್ನು ಅಪಹಾಸ್ಯಕ್ಕೆ ಈಡು ಮಾಡುವುದಕ್ಕೆ ಆಗುವುದಿಲ್ಲ. ದೊಡ್ಡವರಿಗೆ ಗೌರವ ಕೊಡಬೇಕು, ಮಾನ್ಯ ಮಾಡಬೇಕು ಅವರ ಜ್ಞಾನಕ್ಕೆ ಗೌರವ ಕೊಡಬೇಕು, ಅವರ ವಿದ್ಯೆಗೆ ಗೌರವ ಕೊಡಬೇಕು ಎಂದು ಈ ರೀತಿ ಎಲ್ಲಾ ನೂರು ಪಾಯಿಂಟ್‌ಗಳನ್ನು ಹಾಕಿದರೆ, ಎರಡು ಪಾಯಿಂಟ್‌ನ್ನಾದರೂ ಅವರಿಗೆ ಕೊಡಬೇಕಾಗುತ್ತದೆ. ನಾವು ಇಲ್ಲಿ ಯಾರೂ ನಮ್ಮ ನಮ್ಮ ಯೋಗ್ಯತೆಯನ್ನು ಅಳೆದುಕೊಳ್ಳುವುದಕ್ಕೆ ಕುಳಿತಿಲ್ಲ. ಸಾರ್ವಜನಿಕ ವಿಷಯಗಳನ್ನು ಚರ್ಚೆ ಮಾಡುವುದಕ್ಕೆ ಕುಳಿತಿದ್ದೇವೆ. ನನ್ನ ಭಾಷಣದಲ್ಲಿ ಈ ಒಂದು ತಿದ್ದುಪಡಿಯನ್ನು ಮಾಡಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ. ಮತ್ತು ಈ ಸಂದರ್ಭದಲ್ಲಿ ನಾವು ಒಂದು ಹಕ್ಕು ಬಾಧ್ಯತೆಯ ಸೂಚನೆಯನ್ನು ಕೊಟ್ಟಿದ್ದೆವು ಅದು ಇನ್ನೂ ಜೀವಂತವಾಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಇದು ಬಹಳ ಮಹತ್ತರವಾದ ಪ್ರಶ್ನೆ, ಏಕೆಂದರೆ ಇದು ಒಂದು ಶೇಷಪ್ರಶ್ನೆಯಾಗಿ, ಗುಟ್ಟಾಗಿ ಕಂಡು ಬರುತ್ತಾ ಇದೆ. ಈಗ ನಮ್ಮ ಗೆಳೆಯರು ಅಜೀಜ್ ಸೇಟ್‌ರವರು ಹೇಳಿದರು. ಶ್ರೀಮಾನ್ ನಿಜಲಿಂಗಪ್ಪನವರು ಇದ್ದಾಗಲೇ 90 ವರ್ಷಕ್ಕೆ ಕೊಟ್ಟಾಗಿ ಹೋಗಿದೆ ಎಂದು, ಅವರು ಫೈಲ್ ನೋಡಿಕೊಂಡು ಬಂದು ಹೇಳಿದರೋ ಏನೋ ನನಗೆ ಗೊತ್ತಿಲ್ಲ. ಇದು ಅಷ್ಟು ಸುಲಭವಲ್ಲ ನಾವು ತಿಳಿದುಕೊಂಡಷ್ಟು ಇದನ್ನು ತಾವು ತಿಳಿದುಕೊಳ್ಳಬೇಕು, ನಾನು ಸ್ವಲ್ಪ ಕಟುವಾಗಿ ಹೇಳಬಹುದು. ಏಕೆಂದರೆ ಸತ್ಯ ಯಾವಾಗಲೂ ಕಟುವಾಗಿರುತ್ತದೆ. ಔಷಧಿ ಸಿಹಿಯಾಗಿರುವುದಿಲ್ಲ, ಮೇಲೆ ಸ್ವಲ್ಪ ಸಿಹಿ ಹಚ್ಚಿರುತ್ತಾರೆ ಒಳಗೆ ಬಹಳ ಕಹಿ ಇರುತ್ತದೆ, ಅದೇ ರೀತಿ ಸತ್ಯ ಯಾವಾಗಲೂ ಕಹಿಯೇ, ಅದನ್ನು ಕೇಳುವುದಕ್ಕೆ ಬಹಳ ಕಷ್ಟವಾಗುತ್ತದೆ. ತಿಳಿದವರು ಹೇಳುತ್ತಾರೆ, ಸತ್ಯವನ್ನು ಹೇಳುವಾಗ ಪ್ರಿಯಂ ವದಾ ಎಂದು. ಒಂದು ದೇವರಿಗೆ ಗುಲಾಬಿ ಹೂವು ಪ್ರಿಯ, ಇನ್ನೊಂದು ದೇವರಿಗೆ—ಮಾರಮ್ಮನಿಗೆ ಕೋಣ ಪ್ರಿಯ, ರಕ್ತ ಪ್ರಿಯ ಆದ್ದರಿಂದ ಈ ಪ್ರಿಯಗಳಲ್ಲಿ ಬಹಳ ವ್ಯತ್ಯಾಸ ಇದೆ, ಯಾರಿಗೆ ಯಾವುದು ಪ್ರಿಯ ಎಂದು ಹೇಳುವುದು ಬಹಳ ಕಷ್ಟ. ಆದ್ದರಿಂದ ಈ ಪ್ರಿಯಂ ವದಾ, ಸತ್ಯಂ ವದಾ ಅನ್ನುವುದನ್ನು, ನಾವು ಸತ್ಯ ಹೇಳುವಾಗ ನಿಮಗೆ ಸ್ವಲ್ಪ ಅಪ್ರಿಯವಾದರೂ ಅದನ್ನು ತಡೆದುಕೊಳ್ಳುವ ಶಕ್ತಿ ನಿಮಗೆ ಇದೆ, ಆದ್ದರಿಂದ ಮಾನ್ಯ ಸಾಗರದ ಸದಸ್ಯರಿಗೆ ಹೇಳುತ್ತೇನೆ ತಾವು ಸ್ವಲ್ಪ ಪರಿಶೀಲನೆ ಮಾಡಿ ತಮ್ಮ ಭಾಷಣದ ವೈಖರಿ ವಿಚಾರವನ್ನು ಇದರಲ್ಲಿ ಒಂದು ದೊಡ್ಡ ವಿಷಯವೇನೆಂದರೆ ಬೆಂಗಳೂರು ನಗರದಲ್ಲಿ ಸ್ಥಳದ ಅಭಾವ ಬಹಳ ಇದೆ. ಸಾಗರದಲ್ಲಿ ತಾವು ಕಾಲೇಜು ಕಟ್ಟುವಾಗಲೂ ಎಷ್ಟು ಕಷ್ಟ ಬಂತು ಅಂತ ನನಗೆ ಗೊತ್ತಿದೆ.

(ಶ್ರೀ ಎಸ್. ಗೋಪಾಲಗೌಡ)

5–30 P.M.

ಆ ಸಾಗರದಲ್ಲೆ ಒಬ್ಬರು ಅಲ್ಲಿರತಕ್ಕ ಟಿ. ಬಿ. ಎದುರು ಒಂದು ಹೈಸ್ಕೂಲನ್ನು ಕಟ್ಟುವುದಕೆ ಜಾಗ ಕೇಳಿದಾಗ ಆ ಡಿ. ಸಿ. ಅವರು ಏನು ಹೇಳಿದರು ? ಆ ಮಾತುಗಳು ಈಗಲೂ ನನ್ನ ಕಿವಿಯಲ್ಲಿ ಘೋರ್ಗರೆಯುತ್ತಿವೆ. ಆ ಬಂಗಲೆಯ ಎದುರು ಭಾಗದಲ್ಲಿ ಒಂದು ಖಾಸಗೀ ಕಟ್ಟಡವನ್ನು ಕಟ್ಟುವುದಕ್ಕೆ ಜಾಗವನ್ನು ಕೊಡುವುದಕ್ಕಾಗುವುದಿಲ್ಲ ಎಂದರು.

ಶ್ರೀ ಕೆ. ಎಚ್. ಶ್ರೀನಿವಾಸ್.—ನಾನೂ ಕೂಡ ಕೊಡಲೇಬೇಕು ಎಂದೇನೂ ಹೇಳರಲಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಈ ವಸ್ತು ಪ್ರದರ್ಶನ ಸುಮಾರು 1946ರ ರಿಂದಲೇ ಅಲ್ಲಿ ನಡೆಯುತ್ತಿದೆ. ಅದರಲ್ಲಿ ಅನೇಕ ಗುಣದೋಷಗಳು ಇರುತ್ತವೆ. ಆದರೆ ಈ ದಿವಸ ಆ ವಸ್ತು ಪ್ರದರ್ಶನವನ್ನು ಆ ಕಾಂಗ್ರೆಸ್ ಪಕ್ಷದವರು ನಡೆಸಿಕೊಂಡು ಹೋಗುತ್ತಿದ್ದರೆ ಅದರಿಂದ ವಿರೋಧ ಪಕ್ಷದವರಿಗಾದ ನಷ್ಟವೇನು, ಇಷ್ಟೇಕೆ ಆ ವಿಷಯವನ್ನು ಇಲ್ಲಿ ಇವರು ಚರ್ಚೆ ಮಾಡುತ್ತಿದ್ದಾರೆ ಅನ್ನಬಹುದು. ಆದರೆ ಈ ದಿವಸ ಈ ಬೆಂಗಳೂರು ನಗರದಲ್ಲಿ ವಿರೋಧ ಪಕ್ಷದವರಿಗೆ ಭಾಷಣಗಳನ್ನು ಮಾಡುವುದಕ್ಕೆ ಒಂದು ಸರಿಯಾದ ಜಾಗವಿಲ್ಲ. ಹೊರಗಡೆಯಿಂದ ಯಾರಾದರೂ ಒಬ್ಬ ದೊಡ್ಡ ವ್ಯಕ್ತಿಗಳು ಬಂದು ಇಲ್ಲಿ ಒಂದು ಭಾಷಣ ಮಾಡಬೇಕೆಂದರೆ ಸ್ಥಳವಿಲ್ಲ. ಆದ್ದರಿಂದ ನಾವೀ ದಿವಸ ಈ ವಿಷಯವನ್ನು ಇಷ್ಟು ಗಹನವಾಗಿ ಮತ್ತು ಗಂಭೀರವಾಗಿ ಚರ್ಚೆ ಮಾಡಬೇಕಾದ ಅಗತ್ಯ ಉಂಟಾಯಿತು. ಅಷ್ಟೇ ಅಲ್ಲದೆ ಇಲ್ಲಿ ನಾನು ವಿಧಿಯಿಲ್ಲದೆ ಕೆಲವು ವಿಷಯಗಳನ್ನು ಹೇಳಲೇ ಬೇಕಾಗಿದೆ, ಅದಕ್ಕಾಗಿ ನಾನು ಬಹಳ ವಿಷಾದ ಪಡುತ್ತೇನೆ. ಆದರೆ ಈ ದಿವಸ ಈ ಮಾನ್ಯ ಸಭೆಯ ಕಾಲವನ್ನು ಹರಣಮಾಡಬೇಕು ಅನ್ನುವ ಉದ್ದೇಶ ಯಾರಿಗೂ ಇಲ್ಲ.

ಈ ದಿವಸ ಈ ನಗರದಲ್ಲಿ ಇಷ್ಟೊಂದು ಸ್ಥಳಾಭಾವ ಇರುವಾಗ, ಇತ್ತೀಚೆಗೆ ರಾಜಕೀಯ ಪರಿಸ್ಥಿತಿ ಬೇರೆ ಒಂದು ಉಲ್ಬಣ ಸ್ಥಿತಿಗೇರುತ್ತಿರುವಾಗ ಕೋಟ್ಯಾನು ಕೋಟಿ ರೂಪಾಯಿಗಳ ಬೆಲೆ ಬಾಳತಕ್ಕ ಬಹಳ ಆಯಕಟ್ಟು ಸ್ಥಳವನ್ನು ಅದರಲ್ಲೂ ಒಬ್ಬ ದೊಡ್ಡ ರಾಷ್ಟ್ರ ನಾಯಕನ ಹೆಸರನ್ನು ಇಟ್ಟಿರತಕ್ಕ ಆ ಸುಭಾಷ್ ನಗರ ಮೈದಾನವನ್ನು ಶಾಶ್ವತವಾಗಿ ಕಟ್ಟಡಗಳನ್ನು ಕಟ್ಟಿಸಿಕೊಳ್ಳಲು ಆ ಜಾಗವನ್ನು ಒಂದು ರಾಜಕೀಯ ಪಕ್ಷಕ್ಕೆ ಕೊಡತಕ್ಕದ್ದು ಸರಿಯೇ—ತಪ್ಪೇ ಅನ್ನುವುದನ್ನು ನಾವೀಗ ವಿಚಾರ ಮಾಡಬೇಕಾಗಿದೆ. ನನಗೆ ವೈಯಕ್ತಿಕವಾಗಿ ಆ ಕಾಂಗ್ರೆಸ್ ಸಂಸ್ಥೆಯ ಮೇಲೇನೂ ದ್ವೇಷವಿಲ್ಲ. ಏಕೆಂದರೆ ನಾವೆಲ್ಲರೂ ಆ ಕಾಲಗರ್ಭದಲ್ಲಿ ಕರಗಿ ಹೋಗತಕ್ಕವರಾಗಿದ್ದೇವೆ. ಈಗಾಗಲೇ ಈ ಮನೆಯಲ್ಲಿ ಹಿರಿಯ ನಾಯಕರಾದ ಶ್ರೀ ಎಚ್. ಎಂ. ಚನ್ನಬಸಪ್ಪನವರು ಆ ಜಾಗವನ್ನು ಕಾಂಗ್ರೆಸ್ ಪಾರ್ಟಿಗೆ 99 ವರ್ಷದ ಗುತ್ತಿಗೆಗೆ ಕೊಟ್ಟಿರುವುದು ಬಹಳ ಅನುಚಿತವಾದ್ದು ಎಂದು ಹೇಳಿದ್ದಾರೆ. ಆದರೆ ನಾಳೆಯಾರೋ—ನಾವು ಯಾರೋ ? ಇನ್ನು ಒಂದು ನೂರು ವರ್ಷಗಳು ಕಳೆದ ನಂತರ ಯಾರು ಇರುತ್ತಾರೋ—ಯಾರು ಇರುವುದಿಲ್ಲವೋ ಅನ್ನುವಾಗ ಇನ್ನು ಈ ಸಂಸ್ಥೆಗಳಪಾಡೇನು ? ಮಹಾತ್ಮಾ ಗಾಂಧಿ ಹುಟ್ಟಿ ಇಲ್ಲಿಗೆ ಅಗಲೆ ಒಂದು ನೂರು ವರ್ಷಗಳು ಆದವು. ಆದರೆ ಗಾಂಧೀಜಿಯ ಕೊಲೆಯಾದ್ದು 1948ರಲ್ಲಿ; ಅದು ಶುಕ್ರವಾರ. ಈ ದಿವಸ ಗುರುವಾರ, ಬೆಳಕರೆದರೆ ಮತ್ತೆ ಶುಕ್ರವಾರ. ಆದರೆ ಆ ಗಾಂಧೀಜಿ ಇದ್ದಾರೇನು ? ಇಲ್ಲ, ಅವರ ಫೋಟೋ ಇಟ್ಟುಕೊಂಡಿದ್ದಾರೆ ಆ ಪಕ್ಷದವರು. ಆ ಪಕ್ಷದವರು ತಮ್ಮ ಕೈಲಿ ಸರ್ಕಾರ ಇದೆ ನಾವೇನು ಮಾಡಿದರೂ ನಡೆಯುತ್ತದೆ ಎಂದರೆ ಹೇಗೆ ಸಾಧ್ಯ ? ಈ ದಿವಸ ಮಂತ್ರಿಗಳಾಗಿರತಕ್ಕವರು ಯಾರು ಯಾರಿಗೆ ಏನೇನು ಅಶೋತ್ತರಗಳನ್ನು ಹೇಳಿ ಲೈಸೆನ್ಸ್‌ಗಳನ್ನು ಕೊಡುತ್ತೇವೆ ಪರ್ಮಿಟ್‌ಗಳನ್ನು ಕೊಡುತ್ತೇವೆ ಎಂದು ಆ ಸರ್ಕಾರಿ ಮಳಿಗೆಗಳಿಗೆ ಹಣವನ್ನು ವಸೂಲ್ಮಾಡಿಕೊಂಡಿಲ್ಲವೇ ? ಹೆಸರಿಗೆ ಸರ್ಕಾರಿ ಮಳಿಗೆಗಳು—ಅವುಗಳ ಆದಾಯ ಕಾಂಗ್ರೆಸ್ ಪಕ್ಷಕ್ಕೆ. ಶ್ರೀ ಶ್ಯಾಮಣ್ಣನವರು ಕೊಡತಕ್ಕ ಲೆಕ್ಕಗಳು ಸರಿಯಾಗಿಲ್ಲ. ಅವರು ಕೊಡತಕ್ಕ ಲೆಕ್ಕಕ್ಕಿಂತ ಹೆಚ್ಚು ಹಣ ಆ ಕಾಂಗ್ರೆಸ್ ಪಕ್ಷಕ್ಕೆ ಸಂಪಾದನೆಯಾಗಿದೆ. ಎಷ್ಟೆಷ್ಟು ಖಾಸಗೀ ಜನರಿಗೆ ಮತ್ತು ಯಾರು ಯಾರಿಗೆ ಏನೇನು ಲೈಸೆನ್ಸ್‌ಗಳನ್ನು ಕೊಡುವುದಾಗಿ ಹೇಳಿ ಹಣವನ್ನು ವಸೂಲ್ಮಾಡಿದ್ದಾರೆ ಅನ್ನುವುದನ್ನೆಲ್ಲಾ ಸವಿಸ್ತಾರವಾಗಿ ವಿಚಾರಮಾಡಬೇಕಾಗಿದೆ. ಹಿಂದೆ ಯಾರೋ ಒಬ್ಬರು ಕಾಂಗ್ರೆಸ್ ಅಧ್ಯಕ್ಷ ಪದವಿಯಲ್ಲಿದ್ದು ಒಂದು ಕಡೆ ಅವರು ನಡೆಸಿದ ವಸ್ತುಪ್ರದರ್ಶನಕ್ಕೆ ಬಳಸಲಾಗಿದ್ದ ಜಿಂಕ್‌ಶೀಟುಗಳನ್ನು ದುರುಪಯೋಗಪಡಿಸಿದರು—ಎಂದು ಯಾರೋ ಒಂದು ಸಣ್ಣ ಪತ್ರಿಕೆಯವರು ಅದನ್ನು ಪ್ರಕಟಮಾಡಿದ್ದಕ್ಕೆ ನನಗೆ ಆ ಸಂಪಾದಕ ಅಪಮಾನ ಮಾಡಿದ್ದಾನೆ ಎಂದು ಆತನ ಮೇಲೆ ಮಾನನಷ್ಟ ಮೊಕದ್ದಮೆಯನ್ನು ಹೂಡಿದ್ದಾಗ ಅವರು ಮಾಡಿರತಕ್ಕ ತಪ್ಪು ಸಾಬೀತಾದ್ದರಿಂದ

ಅವರು ಮುಖ್ಯ ಮಂತ್ರಿಗಳಾಗಿರಬಹುದು, ಕಾಂಗ್ರೆಸ್ ಅಧ್ಯಕ್ಷರಾಗಿರಬಹುದು, ಆದಾಗ್ಯೂ ಅವರು ಮಾಡಿದ್ದು ಅಪರಾಧವೆಂದು ರುಜುವಾತಾದ ಮೇಲೆ.........

ಒಬ್ಬ ಮಾನ್ಯ ಸದಸ್ಯರು.—ಆತ ಕೇವಲ 200 ಜಿಂಕ್‌ಷೀಟ್ ತಗಡುಗಳನ್ನು ಮಾತ್ರ ಬಳಸಿದ್ದರು.

ಶ್ರೀ ಎಸ್. ಗೋಪಾಲಗೌಡ.—ಆ ವಿಷಯವನ್ನು ನಾನು ಬಹಳ ಗಂಭೀರವಾಗಿ ಹೇಳುತ್ತಿದ್ದೇನೆ. ಆದರೆ ಆ ವ್ಯಕ್ತಿಯಾರೆಂಬುದು ಇಲ್ಲಿ ಅನೇಕರಿಗೆ ಗೊತ್ತಿದೆ, ಆದರೆ ನಾನು ಹೆಸರನ್ನು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಆತನಿಗೆ ಕೊನೆಗೆ ಶಿಕ್ಷೆ ಕೂಡ ಆಯಿತು. ಇದು ಅಂಥ ಒಂದು ಪ್ರಸಂಗ. ಈ ದಿವಸ ಯಾರಾದರೂ ಒಬ್ಬ ದೊಡ್ಡ ವ್ಯಕ್ತಿ ಈ ಮಹಾ ನಗರಕ್ಕೆ ಬಂದರೆ ಪ್ರಜಾಪ್ರಭುತ್ವದಲ್ಲಿ ಅವರು ಭಾಷಣ ಮಾಡಬೇಕು ಅಂದರೆ ಇಲ್ಲಿ ಸ್ಥಳವಿಲ್ಲ. ಆ ಬನಪ್ಪಾ ಪಾರ್ಕು ಇದ್ದದ್ದು ಈ ದಿವಸ ಏನಾಗಿದೆ? ಆ ಚಿಕ್ಕಲಾಲ್‌ಬಾಗ್ ಇದ್ದದ್ದು ಈ ದಿವಸ ಏನಾಗಿದೆ? ಯಾರಾದರೂ ಈ ದಿವಸ ಒಂದು ಭಾಷಣವನ್ನು ಏರ್ಪಾಡು ಮಾಡಬೇಕು ಎಂದರೆ ಅದಕ್ಕೆ ಜಾಗವೇ ಇಲ್ಲ. ಇಂಥ ಒಂದು ಇಕ್ಕಟ್ಟಿನ ಪರಿಸ್ಥಿತಿಯಿರುವಾಗ ಇವರಿಗೆ ಅಧಿಕಾರ ಕೊಟ್ಟಿದ್ದಕ್ಕೆ ಇವರು ಮಾಡತಕ್ಕ ಪಾರುಪತ್ಯ ಇದೇನೇನು! ಸಾರ್ವಜನಿಕರಿಗೆ ಇಂಥಾ ಒಂದು ವಿಷಯದಲ್ಲಿ ಇಷ್ಟು ಇಕ್ಕಟ್ಟು ಇದೆ ಎಂಬುದನ್ನು ತಿಳಿದೂ ತಿಳಿದು, ಇವರು ತಮ್ಮ ಕೈಲೇ ಅಧಿಕಾರವಿದೆ, ನಾವೇನು ಮಾಡಿದರೆ ನಡೆಯುತ್ತದೆ ಎಂದು ಆ ಪ್ರದೇಶವನ್ನು ಇವರು 99 ವರ್ಷಗಳವರೆಗೆ ಲೀಜಿಗೆ ಕೊಡಬಹುದೇ? ಅದರಲ್ಲೂ ಅದನ್ನು ಕೊಟ್ಟಿರುವುದು ಯಾರಿಗೆ? ಒಂದು ರಾಜಕೀಯ ಪಕ್ಷಕ್ಕೆ, ಅದರಲ್ಲೂ ತಮ್ಮದೇ ಆದಂಥ ಪಕ್ಷಕ್ಕೆ ಒಬ್ಬ ಮಂತ್ರಿಗಳು ಹೇಳಿದರು 99 ವರ್ಷಗಳೇಕೆ 999 ವರ್ಷಗಳೆಂತಲೇ ಮಾಡಿ ಅಂದರು.........

ಶ್ರೀ ಕೆ. ಪುಟ್ಟಸ್ವಾಮಿ.—ನಾನು ಹಾಗೆ ಹೇಳಲಿಲ್ಲ. 99 ವರ್ಷಕ್ಕೇ ಕೊಟ್ಟಿದ್ದಾರಲ್ಲಾ ಎಂದು ಹೇಳಿದ್ದಕ್ಕೆ ನಾನು ಅದು ಅಷ್ಟು ತೀರಾ ಕಡಮೆ ಅಂತ ಭಾವಿಸಿದ್ದರೆ 999 ವರ್ಷಕ್ಕೇ ಲೀಜ್ ಮಾಡಿಕೊಡಿ ಎಂದು ಹೇಳಿದೆ.

ಶ್ರೀ ಎಸ್. ಗೋಪಾಲಗೌಡ.—ಅದನ್ನೂ ಮಾಡಬಹುದು. ಆದರೆ ಅಂಥ ಲೀಜುಗಳನ್ನು ಮಾಡತಕ್ಕ ಕಾಲದಲ್ಲಿ ಇದ್ದದ್ದು ಬ್ರಿಟಿಷ್ ಸ್ವಾರಾಜ್ಯದ ವಸಾಹತ. ಈ ವಿಚಾರ ಹಾಗಿರಲಿ. ಈ ದಿವಸ ಈ ಚರ್ಚೆಯಲ್ಲಿ ಭಾಗವಹಿಸಿರತಕ್ಕ ನಾಲ್ಕು ಜನ ಮಂತ್ರಿಗಳೂ ನಾಲ್ಕು ರೀತಿಯಲ್ಲಿ ಮಾತನಾಡಿದ್ದಾರೆ. ಅದರ ಮೇಲೆ ಶ್ರೀಮಾನ್ ಅಜೀಜ್‌ಸೇಟ್‌ರವರು ಬೇರೆ ಇನ್ನೂ ನಾವು ಗಾಬರಿ ಆಗುವಂಥ ಒಂದು ಸ್ಟೇಟ್‌ಮೆಂಟನ್ನು ಅವರು ಮಾಡಿದ್ದಾರೆ. ಇದರ ವಿಚಾರದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಹೇಳುತ್ತಿರುವುದನ್ನು ನೋಡಿದರೆ ಇದೆಲ್ಲವನ್ನೂ ಮತ್ತೆ ಸಂಪೂರ್ಣವಾಗಿ ವಿಚಾರ ಮಾಡಬೇಕಾಗುತ್ತದೆ. ನಮಗೆ ಈ ವಿಚಾರದಲ್ಲಿ ಪೂರ್ಣ ಮಾಹಿತಿ ಇರುವುದಿಲ್ಲ. ಅದನ್ನು ಮಾನ್ಯ ಮುಖ್ಯ ಮಂತ್ರಿಗಳೇ ಹೇಳಬೇಕು. ಅಲ್ಲಿ ಎಷ್ಟು ಸ್ಟಾಲುಗಳನ್ನು ಹಾಕಿದ್ದಾರೆ, ಏನು ಎತ್ತ ಎನ್ನುವುದೊಂದೂ ಗೊತ್ತಿರಲಿಲ್ಲಾ, ಈಗ ಎಲ್ಲವನ್ನೂ ಕೇಳಿಕೊಂಡು ಬಂದೆ. ಆದರೆ ಇತ್ತೀಚೆಗೆ ಆ ಸ್ಥಳ ಡಿಫೆನ್ಸ್‌ಬಾಬಿಗೆ ಸೇರಿದ್ದೋ, ಕಾರ್ಪೊರೇಷನ್ನಿಗೆ ಸೇರಿದ್ದೋ ಅಥವಾ ಸರ್ಕಾರಕ್ಕೆ ಸೇರಿದ್ದೋ ಎನ್ನುವುದು ಒಂದೂ ನಿರ್ಧಾರವಾಗದಂಥ ಒಂದು ಜಾಗದಲ್ಲಿ ಇದೇ ಸಭೆಯ ಒಬ್ಬ ಮಾನ್ಯ ಸದಸ್ಯರು ಒಂದು ನ್ಯಾಷನಲ್ ಫೇರನ್ನ ನಡೆಸುತ್ತಿದ್ದಾರೆ. ಅಲ್ಲಿ ಅದನ್ನು ನಡೆಸತಕ್ಕ ವ್ಯಕ್ತಿ ಆತ ಏನೇ ತಪ್ಪು ಮಾಡಿರಲಿ—ಗಂಡು ಆತ ನಿಜವಾಗಿಯೂ ಧೀರ ಎದೆಗಾರ. ಯಾರಾದರೂ ಒಬ್ಬ ಪೋಲೀಸ್ ಇಲಾಖೆಯ (ಮುಖ್ಯಾಧಿಕಾರಿ) ಐ. ಜಿ. ಪಿ. ಒಳಗೆ ಬಂದದ್ದೇ ಆದರೆ ಯೂ ಪ್ಲೀಸ್ ಗೆಟ್‌ಔಟ್ ಎಂತ ಹೇಳುವಷ್ಟು ದಕ್ಷತೆಯಿಂದ ಆತ ಆ ಫೇರನ್ನು ನಡೆಸುತ್ತಿದ್ದಾನೆ. ಆದರೆ ನನಗೆ ಈ ಜೂಜು, ಲಾಟರಿ ಸಟ್ಟಾ ಷೇರ್ ಮಾರ್ಕೆಟ್ ಇವುಗಳಲ್ಲಿ ನಂಬಿಕೆ ಇಲ್ಲ. ನನಗೇನಿದ್ದರೂ ಬೋಧಪ್ರದವಾದ ವಸ್ತು ಪ್ರದರ್ಶನಗಳನ್ನು ಮಾಡುವುದರಲ್ಲಿ ಆಸಕ್ತಿ ಜಾಸ್ತಿ. ಸರ್ಕಾರದವರು ವೇಷ ಹಾಕಿಕೊಂಡು ಜನಗಳಿಗೆ ಏನೇನು ತೋರಿಸಬೇಕೋ ಎಲ್ಲಾ ತೋರಿಸಲಿ. ಬಡಜನಗಳು ಸಂತೋಷಪಟ್ಟು ಸಾಯಲಿ. (ನಗು). ನಾವು ಚಿಕ್ಕವರಾಗಿದ್ದಾಗ ನಮ್ಮ ತಂದೆ ತಾಯಿಗಳು ಕೊಟ್ಟಂಥ ಮೂರು ಕಾಸು, ಅರ್ಧಾಣೆ ತೆಗೆದುಕೊಂಡು ಬೊಂಬೆ ಪೆಟ್ಟಿಗೆಯನ್ನು ನೋಡುತ್ತಿದ್ದೆವು. ಅದರಲ್ಲಿ ಈ ಚಿತ್ರ ನೋಡು ಆ ಚಿತ್ರ ನೋಡು, ರಾಜನನ್ನು ನೋಡು, ಆ ರಾಣಿಯನ್ನು ನೋಡು ಹೀಗೆ ಒಬ್ಬ ಬೊಂಬೆ ಪೆಟ್ಟಿಗೆ ಹಿಡಿದುಕೊಂಡು ತೋರಿಸುತ್ತಿದ್ದ. ಹಾಗೆ ನಿಮ್ಮ ಪ್ರದರ್ಶನವನ್ನೂ ಸಹ ತೋರಿಸಿ. ಜನರೂ ಕೂಡ ನಿಮ್ಮ ಪ್ರದರ್ಶನ ನೋಡುವುದಕ್ಕೆ ಕಾತುರರಾಗಿದ್ದಾರೆ, ತೋರಿಸಿ. ಆದರೆ ತಾವು ದಯವಿಟ್ಟು ಸ್ಟಾಲುಗಳನ್ನು ಕಾಂಗ್ರೆಸ್ ಪಕ್ಷಕ್ಕೆ ಕೊಡತಕ್ಕದಲ್ಲ, ಕೊಡುವುದು ತಪ್ಪು. ಶಾಶ್ವತವಾದಂಥ ಒಂದು ವಸ್ತುಪ್ರದರ್ಶನವನ್ನು, ಬೋಧಪ್ರದವಾದ ವಸ್ತುಪ್ರದರ್ಶನವನ್ನು, ಮತ್ತು

(ಶ್ರೀ ಎಸ್. ಗೋಪಾಲಗೌಡ)

ಸರ್. ಎಂ. ವಿಶ್ವೇಶರಯ್ಯನವರಂತಹ ಮ್ಯೂಜಿಯಂ ಪ್ರದರ್ಶನವನ್ನು ಮಾಡುವುದಾದರೆ ಅಂತಹ ಮಹಾನುಭಾವರ ಜನ್ಮ ಸಾರ್ಥಕವಾಗುವ ರೀತಿಯಲ್ಲಿ ಸರ್ಕಾರದವರು ನಡೆದುಕೊಳ್ಳುವುದಾದರೆ, ಅದನ್ನು ಮಾಡಿ. ಇದು ಈ ದೇಶದಲ್ಲಿ ಕಾಂಗ್ರೆಸ್ ಚುನಾವಣೆಗೋಸ್ಕರ ಆಗಿವೆಯೆಂದಾಗಬಾರದು. ಕಾಂಗ್ರೆಸ್ಸಿನಲ್ಲಿ ಒಂದು ದಿವಸ ಜೈಲಿಗೆ ಹೋದವರ ಪುನರ್ವ್ಯವಸ್ಥೆಯಾಗಿದೆ. 20 ವರ್ಷಗಳಲ್ಲಿ ಇದೇ ಆದುದು. ಅವರ ಪುನರ್ವ್ಯವಸ್ಥೆಯಾಯಿತೇ ಹೊರತು ಜನತೆಯುದಲ್ಲ. ಇದು ಸರ್ಕಾರದ ಹಣದಲ್ಲಿ ಆಗಿದೆ. ಮಾನ್ಯ ಶ್ರೀ ವಿಠಲದಾಸಶೆಟ್ಟಿಯವರು ಚೆನ್ನಾಗಿ ದುಂಡಗೆ ಇದ್ದರೆ ನಮಗೇನೂ ಹೊಟ್ಟೇಕಿಚ್ಚು ಇಲ್ಲ. ಸರ್ಕಾರದ ಹಣದಲ್ಲಿ ಕಾಂಗ್ರೆಸ್ಸಿನವರ ಪುನರ್ವ್ಯವಸ್ಥೆಯನ್ನು ಮಾಡುವುದಕ್ಕೆ ಹೋದರೆ, ಸರ್ಕಾರದ ಸ್ಟಾಲುಗಳನ್ನು ಅಲ್ಲಿ ಹಾಕಿದರೆ, ಅದಕ್ಕೆ ಎಡಗೈಯಲ್ಲಿ ಸರ್ಕಾರದ ಹಣವನ್ನು ತೆಗೆದುಕೊಂಡು ಮಾಡುವುದು ಸರಿಯಲ್ಲ. ಆದರೆ ಮಾನ್ಯ ಶ್ರೀ ದಯಾನಂದ ಸಾಗರ್ ಅವರ ಒಂದು ವಸ್ತುಪ್ರದರ್ಶನವನ್ನು ನಿಲ್ಲಿಸುವುದಕ್ಕೆ ಪೋಲೀಸರ ಕಿವಿಯಲ್ಲಿ ಏನೇನೋ ಹೇಳುವುದಕ್ಕೆ ಹೋದರೆ, ನಿಮ್ಮನ್ನು ನಾವು ಏನೆಂದು ಕರೆಯೋಣ ? ನಿಮ್ಮ ಈ ಕುಟಿಲ ನೀತಿ ನನಗೆ ಗೊತ್ತಿಲ್ಲವೆ ! ನೀವು ಸಂಪಾದನೆ ಮಾಡಿರುವ ಹಣ ಸಾಲದೇ ? ನೀವು ಕಟ್ಟಿರುವ ಕಾಂಗ್ರೆಸ್ ಆಫೀಸ್ ನನಗೆ ಗೊತ್ತಿಲ್ಲವೇ? ಕಾಂಗ್ರೆಸ್ಸನ್ನು ನಾನು ನೋಡಿಲ್ಲವೆ ? ಆದ್ದರಿಂದ ಮಾನ್ಯ ಕಾಂಗ್ರೆಸ್ ಸದಸ್ಯರು ಹೇಳುವಷ್ಟು ಲಘುವಾದ ರೀತಿಯಲ್ಲಿ ನಾವು ಹೇಳುತ್ತಿದ್ದೇವೆಂದು ಭಾವಿಸಬಾರದು. ನಾನು ಕೆಟ್ಟ ಭಾಷೆಯನ್ನು ಬಳಸುವುದಕ್ಕೆ ಇಷ್ಟಪಡುವುದಿಲ್ಲ. ನಿಮ್ಮ ಒಂದು ಹಿತದೃಷ್ಟಿಯಿಂದ ಇಂತಹ ಕೆಲಸವನ್ನು ಮಾಡಬಾರದು. ಮಾನ್ಯ ಮುಖ್ಯಮಂತ್ರಿಗಳು ಇದನ್ನೆ ಪ್ರಿಸೀಡೆಂಟ್ ಆಗಿ ಮಾಡಿಕೊಳ್ಳಬೇಡಿ ಎಂದು ಹೇಳಿದರು. ಮಾನ್ಯ ಶ್ರೀ ಚನ್ನಬಸಪ್ಪನವರು ಗೋಯೆಂಕಾರ್ ಅವರಿಗೆ ಭೂಮಿ ಕೊಟ್ಟಿರುವಾಗ್ಗೆ, ಹಿಂದೂ ಅವರಿಗೆ ಜಾಗ ಕೊಡಬೇಡವೇ ಎಂಬ ಬಗ್ಗೆ ಪ್ರಸ್ತಾಪಮಾಡಿದರು. ಅದರಲ್ಲಿಯೂ ತಪ್ಪಿನ ಸರಪಳಿಯಾಯಿತು. ಇವರಿಗೆ ಯಾವ ಕಾನೂನು ! ಒಂದು ಕಡೆ ಕಿವಿಯಲ್ಲಿ ಹೇಳುವುದು ಒಂದು, ಕಾಗದದಲ್ಲಿ ಒಂದು ಆಜ್ಞೆ ಕೊಡುವುದು. ಅದು ಅಪಾಯವಾಗುತ್ತದೆ. ಈ ಸಂಸ್ಥೆ ಬಹಳ ತ್ಯಾಗದಿಂದ ಹುಟ್ಟಿದಂಥ ಸಂಸ್ಥೆ. ನೀವು ಪುಣ್ಯವಂತರು. 20 ವರ್ಷಗಳಿಂದಲೂ ಆಡಳಿತ ಪಕ್ಷದಲ್ಲಿ ಇದ್ದೀರಿ. ನಾವು ವಿರೋಧಪಕ್ಷದಲ್ಲಿ ಕೂತು ಬಂದಿದ್ದೇವೆ. ನೀವು ಅಪರಾಧಿಗಳಾಗಿದ್ದೀರಿ. ನಾಳೆ ನಿಮ್ಮನ್ನು ನೇಣು ಹಾಕುವಾಗ ನನ್ನ ಕಣ್ಣಿನಲ್ಲಿ ನೀರು ಬರುತ್ತದೆ. ಏಕೆಂದರೆ, ನಾನು ಸಹೃದಯವಂತ. ಬೇಲೂರು ಶ್ರೀನಿವಾಸಯ್ಯಂಗಾರ್ ಅವರನ್ನು ಕೊಲೆಮಾಡಿದಂಥ ಕೃಷ್ಣನನ್ನು ಗಲ್ಲಿಗೆ ಹಾಕಿದ ದಿವಸ ನನ್ನ ಕಣ್ಣಿನಲ್ಲಿ ನೀರು ಬಂದಿದೆ. ನಿಮ್ಮನ್ನು ನಿರ್ವಂಶ ಮಾಡಬೇಕೆಂದು ಹೇಳುವ ಚಾಣಕ್ಯತಂತ್ರ ಮಾಡುವವ ನಾನಲ್ಲ. ನೀವೂ ಮನುಷ್ಯರೆ, ನಾವೂ ಮನುಷ್ಯರೇ ನಮ್ಮಲ್ಲಿ ಗದ್ದೆ ಹೂಡುವವರು ಇದ್ದಾರೆ, ಕುರಿ ಕಾಯುವವರು ಇದ್ದಾರೆ, ಕಂಬಳಿ ನೇಯುವವರು ಇದ್ದಾರೆ. ನಾವು ಏನೂ ದೇವಲೋಕದಿಂದ ಬಂದವರಲ್ಲ. ಕಾಂಗ್ರೆಸ್ ವಸ್ತುಪ್ರದರ್ಶನ ನಡೆಯುವ ಬಗ್ಗೆ ತೀರ್ಮಾನ ಮಾಡುವುದಾದರೆ, ಒಳ್ಳೆಯ ರೀತಿ ನೀತಿ ಇಂತಕ್ಕ ಪ್ರದರ್ಶನ ಮಾಡಿ. ಅದು ಬೋಧಕವಾಗಿರಲಿ, ಮನರಂಜನೆ ಇರಲಿ, ಕಲಾವಿದರಿಗೆ ಪ್ರೋತ್ಸಾಹ ಕೊಡುವಂತಿರಲಿ. ಸಿನಿಮಾಕ್ಕೆ ಹೋಗುವುದಕ್ಕಾಗದೇ ಇರುವ ಜನಸಾಮಾನ್ಯರು ಎರಡಾಣೆ ಮತ್ತು ನಾಲ್ಕಾಣೆ ಕೊಟ್ಟು ಅವನ್ನು ನೋಡಲಿ. ಅದು ಬೋಧಪ್ರದವಾಗಿರಲಿ, ಟೆಲಿವಿಷನ್ ಇರಲಿ. ಅಮೇರಿಕಾ ಮತ್ತು ರಷ್ಯಾದವರು ಇಡೀ ಜಗತ್ತಿನಲ್ಲಿ ಮಾಯಾಸೃಷ್ಟಿ ಮಾಡಿದಂತೆ ಮಾಡಿ. ಜನತೆಯ ಹಣ ಈ ಬಡ ಸರ್ಕಾರದ ಬೊಕ್ಕಸಕ್ಕೆ ಬಂದು ಬೀಳಲಿ. ದಿವಸಕ್ಕೆ ಸಾವಿರ ರೂಪಾಯಿಗಳು ಬರಲಿ, ತಿಂಗಳಿಗೆ 30 ಸಾವಿರ ರೂಪಾಯಿಗಳು ಬರಲಿ. ಇದರಲ್ಲಿ ಅವರ ರಾಜಕೀಯ ನಡೆಯದೇ ಇರಬೇಕು. ಅಲ್ಲಿಗೆ ನಾವು ಹೋಗೋಣ. ನೀವೂ ಹೋಗಿ, ಜನತೆಯೂ ಹೋಗಲಿ. ನೋಡಲಿ, ಎಲ್ಲರೂ ಬೇಕಾದರೆ ನೋಡಲಿ. ಮಾನ್ಯ ಶ್ರೀ ಚನ್ನಬಸಪ್ಪನವರು ಹೇಳಿದ ಹಾಗೆ ಬೇಕಾದರೆ ಅದನ್ನು ಹುಣಸೂರಿಗೆ ತೆಗೆದುಕೊಂಡು ಹೋಗೋಣ. ಹಳ್ಳಿಯಲ್ಲಿರುವವರೂ ನೋಡಲಿ. ಏಕೆಂದರೆ ಎಲ್ಲಿ ನೋಡಿದರೂ ದನಗಳ ಜಾತ್ರೆ, ಎಲ್ಲಿ ನೋಡಿದರೂ ಸಂತೆ. ನಮ್ಮ ದೇಶ ಸಂತೆ ದೇಶ, ದನಗಳ ಜಾತ್ರೆ ದೇಶವಾಗಿದೆ. ಕೊನೆಯದಾಗಿ ನಾನು ಹೇಳುವುದಿಷ್ಟೆ. ಮುಖ್ಯವಾಗಿ ಈ ದೇಶದ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಪಕ್ಷ ಪಂಗಡಗಳ ಬೇಧಭಾವವಿಲ್ಲದೆ ಇದನ್ನು ನಡೆಸಬೇಕು. ಏಕೆಂದರೆ ನಿಮ್ಮ ಆಳ್ವಿಕೆ ಶಾಶ್ವತವಲ್ಲ. ನೀವು ಹೇಗೆ ಮಾನ್ಯ ಶ್ರೀ ದಯಾನಂದ ಸಾಗರ್ ಅವರು ನಡೆಸುತ್ತಿರುವ ನ್ಯಾಷನಲ್ ಫೇರ್‌ಗೆ ಸರ್ಕಾರದಿಂದ ಯಾವ ಅಧಿಕಾರಿಗಳೂ ಸ್ಟಾಲ್ ಹಾಕಬಾರದು ಎಂಬುದಾಗಿ ಆರ್ಡರ್ ಕೊಟ್ಟಿರೋ ಹಾಗೆ ನಾಳೆ ಮಾನ್ಯ ಶ್ರೀ ಚನ್ನಯ್ಯನವರ ಸರ್ಕಾರ ಬಂದರೆ ಅವರನ್ನು ನೀವು ನಿಮ್ಮ ವಸ್ತುಪ್ರದರ್ಶನಕ್ಕಾಗಿ ಭಿಕ್ಷೆ ಬೇಡುತ್ತೀರಿ, ಎಂಬುದಾಗಿ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ವೀರೇಂದ್ರ ಪಾಟೀಲ್.—ಸನ್ಮಾನ್ಯ ಅಧ್ಯಕ್ಷರೇ, 1969ನೇ ಕಾಂಗ್ರೆಸ್ ವಸ್ತು ಪ್ರದರ್ಶನದಲ್ಲಿ ಸರ್ಕಾರ ಭಾಗವಹಿಸುವುದು ಉಚಿತವೇ, ಅನುಚಿತವೇ ಎನ್ನುವ ವಿಷಯದ ಮೇಲೆ ಕೆಲವು ಮಾನ್ಯ ಸದಸ್ಯರು ಕೆಲವು ಮಾತುಗಳನ್ನು ಆಡಿದ್ದಾರೆ. ಈ ವಿಷಯದ ಮೇಲೆ ಮಾತನಾಡುತ್ತಾ ಕೆಲವು ಮಾನ್ಯ ಸದಸ್ಯರು ಅನೇಕ ಎರಡನೆಯ ವಿಚಾರಗಳನ್ನು ಪ್ರಸ್ತಾಪಮಾಡಿದ್ದಾರೆ. ಅದಕ್ಕಾಗಿ ನನಗೆ ಏನೂ ತೋಚದು. ಇದರ ವಿಷಯವಾಗಿ ಉತ್ತರ ಕೊಡಬೇಕೋ ಅಥವಾ ಮಾನ್ಯ ಸದಸ್ಯರು ಹೇಳಿದಂಥ ಎಲ್ಲಾ ವಿಚಾರಗಳಿಗೂ ನನ್ನ ಅಭಿಪ್ರಾಯ ಮತ್ತು ಸರ್ಕಾರದ ಅಭಿಪ್ರಾಯ ಹೇಳಬೇಕೋ ಬೇಡವೋ ಎಂಬುದು ಗೊತ್ತಿಲ್ಲ. ಆ ರೀತಿಯಿಂದ ಹೇಳುವುದಕ್ಕೆ ಹೊರಟರೆ ಕಾಲ ಬಹಳ ಬೇಕಾಗುತ್ತದೆ. ಅಷ್ಟು ಕಾಲಾವಕಾಶವಿಲ್ಲ. ಪದೇ ಪದೇ ಈ ಮನೆಯಲ್ಲಿ ಈ ಒಂದು ವಿಚಾರವಾಗಿ ಮೇಲಿಂದಮೇಲೆ ವಿರೋಧಪಕ್ಷದ ಕೆಲವು ಸದಸ್ಯರು ಹೇಳುತ್ತಲೇ ಇದ್ದಾರೆ. ನಮ್ಮ ಪಕ್ಷದ ಒಬ್ಬ ಸದ್ಯರಾದ ಮಾನ್ಯ ಶ್ರೀ ದಯಾನಂದ ಸಾಗರ್ ಅವರು ಏರ್ಪಡಿಸಿರುವ ನ್ಯಾಷನಲ್ ಫೇರ್ ವಿಚಾರವಾಗಿ ಇಲ್ಲಿ ಯಾವ ಉದ್ದೇಶದಿಂದ ಹೇಳುತ್ತಿದ್ದಾರೆನ್ನುವುದನ್ನು ಅವರ ಆತ್ಮಸಾಕ್ಷಿಯಿಂದ ಅವರೇ ತಿಳಿದು ಕೊಂಡರೆ ಚೆನ್ನಾಗಿ ಗೊತ್ತಾಗುತ್ತದೆ,

ಶ್ರೀ ಎಸ್. ಗೋಪಾಲಗೌಡ.—ಈ ಸಂದರ್ಭದಲ್ಲಿ ನಾನು ಒಂದು ಮಾತನ್ನು ಹೇಳಬೇಕಾಗಿ ಬರುತ್ತದೆ. ಏಕೆಂದರೆ ನಾನು ಹೇಳಿದ ವಿಚಾರವಾಗಿ...

SRI VEERENDRA PATIL.- I am not yielding, Sir, because I must have my say. I am only appealing to the hon'ble Chair.

ಎರಡೂವರೆ ಗಂಟೆಯವರೆಗೆ ಇಷ್ಟು ಹೊತ್ತು, ಯಾವ್ಯಾವ ಸದಸ್ಯರು ಎಷ್ಟು ಕಟುಟುವಾಗಿ ಎಷ್ಟು ಮನಸ್ಸು ನೋವಾಗುವಂತೆ, ಕೊನೆಗೆ ನಿಮಗೆ ಚನ್ನಯ್ಯನವರ ಸರ್ಕಾರ ಬಂದಾಗ ಭಿಕ್ಷೆ ಬೇಡುವ ಪರಿಸ್ಥಿತಿ ಬರುತ್ತದೆ ಎಂದು ಕೂಡ ಹೇಳಿದಾಗ, ನಾವು ತಾಳ್ಮೆಯಿಂದ ಕೇಳಿದ್ದೇವೆ. ಎಲ್ಲದಕ್ಕೂ ಒಂದು ಮಿತಿ ಇರಬೇಕು. ಯಾವರೀತಿ ಮಾತನಾಡಬೇಕು ಅದೇ ರೀತಿಯಲ್ಲಿ ಕೇಳಲು ಸಹನೆ ಶಕ್ತಿ ಇರಬೇಕು. ಇವತ್ತಿನ ದಿವಸ ನಾನು ಹೇಳುತ್ತಾ ಇರುವುದು ಈ ಮಾನ್ಯ ಸಭೆಗೆ ಎರಡು, ಮೂರನೆಯ ಸಾರಿಯೆಂದು ಕಾಣುತ್ತದೆ. ನ್ಯಾಶನಲ್ ಫ್ಯಾರಿನ ಬಗ್ಗೆ ಒಂದೇ ಸಮನೆ ಮಾತನಾಡುತ್ತಿದ್ದಾರೆ. ಅದರ ಬಗ್ಗೆ ಏನೇನೋ ಅಭಿಪ್ರಾಯಗಳನ್ನು ವ್ಯಕ್ತಮಾಡಿದ್ದಾರೆ. ಬಹುಶಃ ನಿಜವಾದ ವಾಸ್ತವಾಂಶ ಏನು ? ಯಾರು ಭಾಗವಹಿಸಿದ್ದಾರೆ, ಯಾರು ಅನುಮತಿ ಕೊಟ್ಟಿದ್ದಾರೆ ಎಂಬುದನ್ನೆಲ್ಲಾ ನನ್ನಲ್ಲಿ ಕೇಳಿದ್ದರೆ ನಾನು ಹೇಳುವುದಕ್ಕೆ ತಯಾರಾಗಿದ್ದೆ. ಇವತಿನ ದಿವಸ ನಾನು ಏನೂ ಹೇಳಬೇಕಾಗಿಲ್ಲವೆಂದು ನನಗನಿಸುತ್ತದೆ. ನನಗೆ ಗೊತ್ತಿದೆ, ನ್ಯಾಷನಲ್ ಫೇರ್ ಮಾಡುತ್ತಿದ್ದ ಆ ಕಾರ್ನರ್ ಪ್ಲಾಟ್ ಬಗ್ಗೆ ಅನೇಕ ಸಮಯದಿಂದ ತಕರಾರು ಇದೆ. ಮಿಲಟೆರಿಯವರು ನಮ್ಮ ಪ್ಲಾಟ್ ಎಂದೂ, ಸರ್ಕಾರದವರು ನಮ್ಮ ಪ್ಲಾಟ್ ಎಂದೂ ಹೇಳುತ್ತಿದ್ದೇವೆ. ಅಷ್ಟೇ ಅಲ್ಲದೆ, ಮಾನ್ಯ ಸದಸ್ಯರಿಗೆ ಗೊತ್ತಿರಬಹುದು, ದಿವಂಗತ ನೆಹರೂರವರು ಅಲ್ಲಿ ಯಾವುದೋ ಒಂದು ಕಟ್ಟಡಕ್ಕೆ ಅಸ್ತಿಭಾರವನ್ನು ಹಾಕಿದರೂ ಆ ಕಟ್ಟಡ ಬರುವುದಕ್ಕೆ ಸಾಧ್ಯವಾಗಲಿಲ್ಲ. ಆದರೆ ಈ ಸಭೆಗೆ ಸಂಕ್ಷೇಪದಿಂದ ತಿಳಿಸುತ್ತೇನೆ, ನಾನು ಸುಮಾರು ಒಂದೂವರೆ ತಿಂಗಳ ಮೊದಲು ಇದರ ಬಗ್ಗೆ ಸಂಬಂಧಪಟ್ಟ ಡಿಫೆನ್ಸ್ ಮಂತ್ರಿಯವರ ಹತ್ತಿರ ಹೋಗಿ ಒಂದು ನಿಖಾಲೆ ಮಾಡಿಕೊಂಡು ಬಂದಿದ್ದೇನೆ. ಅವರು ಒಪ್ಪಿಕೊಂಡಿದ್ದಾರೆ, ಕಾಗದವೂ ಬರೆದಿದ್ದಾರೆ. ಆದ್ದರಿಂದ ಇದು ಅವರದ್ದು ಇವರದ್ದು ಎಂದು ಏನೂ ಇಲ್ಲ. ಇದರ ಬಗ್ಗೆ ಮಾಹಿತಿ ಏನು ಬೇಕಾದರೂ ಈ ಮಾನ್ಯ ಸಭೆಗೆ ಕೊಡಲು ತಯಾರಾಗಿದ್ದೇನೆ. ಅದೇ ರೀತಿ ಪಕ್ಷದ ಮಾನ್ಯ ಸದಸ್ಯರೊಬ್ಬರು ನಾಶನಲ್ ಫ್ಯಾರ್ ಮಾಡುತ್ತೇವೆಂದು ಕೇಳಿದಾಗ, ನೀವು ಮಾಡಬಹುದು ಎಂದು ಅನುಮತಿ ಕೊಟ್ಟಿದ್ದೇವೆ. ಅದರಿಂದ ಇದು ನಮ್ಮ ಪಕ್ಷದ ಪ್ರಶ್ನೆ ಇರುವುದರಿಂದ ಇದಕ್ಕಿಂತ ಮುಂದೆ ನಾನು ಹೋಗುವುದಿಲ್ಲ. ಅಲ್ಲಿಂದ ಇಲ್ಲದ್ದ ನೋಟೀಸ್ ಪ್ರಕಾರ ಹೋಗುತ್ತೇನೆ. ಇವತ್ತಿನ ದಿವಸ ವಿರೋಧ ಪಕ್ಷದ ಸದಸ್ಯರನ್ನೊಳಗೊಂಡು, ಶ್ರೀಮಾನ್ ಚನ್ನಯ್ಯನವರು, ಹುಚ್ಚುಮಾಸ್ತಿಗೌಡರು ಮತ್ತು ಕೆ. ಎಚ್. ಪಾಟೀಲರು ಒಂದು ರೂಲ್ 59 ಪ್ರಕಾರ ಸ್ಪೆಷಲ್ ಮೋಷನನ್ನು ತಂದಿದ್ದಾರೆ. ಅದು ಈ ರೀತಿ ಇದೆ :

> "to raise a discussion on the facilities accorded to, and expenditure incurred by Government on the Congress Exhibition organised by the M.P.C.C. for the year 1969 at Subhas Nagar, Bangalore"

ಅಂದರೆ ಇವತ್ತು ನಮ್ಮ ಮುಂದೆ ಚರ್ಚೆ ಮಾಡುವುದಕ್ಕೆ ಇರುವಂತದ್ದು 1969ರ ಕಾಂಗ್ರೆಸ್ ವಸ್ತು ಪ್ರದರ್ಶನದಲ್ಲಿ ಸರ್ಕಾರದವರು ಎಷ್ಟು ಖರ್ಚು ಮಾಡುವವರಿದ್ದಾರೆ, ಎಷ್ಟು ಖರ್ಚು ಮಾಡಿ

(SRI VEERENDRA PATIL)

ದ್ದಾರೆ ಎನ್ನುವಂತಹ ವಿಚಾರ. ಎರಡನೆಯದು ವಿಚಾರ, ಕಾಂಗ್ರೆಸ್ಸಿನವರ ವಸ್ತು ಪ್ರದರ್ಶನ ಮಾಡುವ ಬದಲು ನೀವೇ ಏಕೆ ಮಾಡುವುದಿಲ್ಲ? ಮೂರನೆಯದು ವಿಚಾರ ನೀವು ಮಾಡುವುದಿಲ್ಲವೆಂದರೆ, ಕಾರ್ಪೊರೇಷನಿಗೆ ಏಕೆ ಮಾಡಬಾರದು ? ಎಂಬುದು. ಈ ಮೂರು ವಿಚಾರದ ಬಗ್ಗೆ ನಾನು ಒಂದು ನನ್ನ ಉತ್ತರವನ್ನು ಸೀಮಿತವಾಗಿಟ್ಟುಕೊಳ್ಳುತ್ತೇನೆ. ಅದರ ಬಗ್ಗೆ ಅನೇಕ ವಿಚಾರಗಳು ಬಂದುವು. ಇದನ್ನು 99 ವರ್ಷದ ವರೆಗೆ ಲೀಸ್ ಕೊಡುವ ವಿಚಾರವನ್ನು ಅನೇಕ ಸದಸ್ಯರು, ಶ್ರೀಮಾನ್ ಗೋಪಾಲಗೌಡರನ್ನು ಒಳಗೊಂಡು, ಪ್ರಸ್ತಾಪ ಮಾಡಿದ್ದಾರೆ. ಅದರ ಬಗ್ಗೆ ನಾನು ಏನೂ ಹೇಳುವುದಿಲ್ಲ. ಏಕೆಂದರೆ ಆ ವಿಷಯ ಇವತ್ತು ಚರ್ಚೆಗೆ ಇಲ್ಲ. ಆದರೆ ಕಾಂಗ್ರೆಸ್ ವಸ್ತುಪ್ರದರ್ಶನ ನಡೆಸುವ ಸಲುವಾಗಿ ಸುಭಾಶ್ ನಗರದಲ್ಲಿ 99 ವರ್ಷದವರೆಗೆ ಕೊಡುವುದು ಉಚಿತವೋ, ಅನುಚಿತವೂ ಯಾವುದೂ ಇವತ್ತು ಇಲ್ಲ. ಅದರ ಬಗ್ಗೆ ಹೇಳುವುದಿಲ್ಲ. ಆದರೆ ಒಂದು ವಿಚಾರವನ್ನು ಚನ್ನಬಸಪ್ಪನವರು ಹೇಳಿದ್ದಾರೆ. ಇದು ನೀವು ವಿರೋಧ ಪಕ್ಷದ ನಾಯಕರ ಜೊತೆಯಲ್ಲಿ ಸಮಾಲೋಚನೆ ಮಾಡುತ್ತೇವೆಂದು ಏನು ಹೇಳಿದ್ದೀರಿ, ಇದು ಬಹಳ ಡೇಂಜರಸ್ ಪ್ರಿಸಿಡೆಂಟ್ ಎಂದು ಹೇಳಿದ್ದಾರೆ. ಅವರು ಆಡಳಿತದಲ್ಲಿ ಇದ್ದವರು, ಅನುಭವಿಕರು ಮತ್ತು ಯಾವುದೇ ಪಕ್ಷ ಸರ್ಕಾರಕ್ಕೆ ಬಂದರೂ ಯಾವ ರೀತಿ ಸರ್ಕಾರಿ ಕಾರ್ಯ ಕಲಾಪಗಳು ನಡೆಯಬೇಕು ಎಂದು ಹೇಳಿದ್ದಾರೆ. ಅವರು ಹೇಳಿದಂತದ್ದನ್ನು ನಾನು ಪೂರ್ತಿಯಾಗಿ ಒಪ್ಪುತ್ತೇನೆ. ಇವರು ಹೇಳುವುದರಲ್ಲಿ ನನಗೆ ಏನೂ ತಪ್ಪು ಕಂಡು ಬರುತ್ತಾ ಇಲ್ಲ. ಆದರೆ ನನ್ನ ವಿಚಾರ ಇವತ್ತಿನ ದಿವಸ ಪದೇ ಪದೇ ಹೇಳುತ್ತಿದ್ದೇನೆ. ಇದು ಒಂದು ಪ್ರಿಸಿಡೆಂಟ್ ಆಗಬಾರದು. ಸರ್ಕಾರದ ಕಾರ್ಯ ಕಲಾಪಗಳು ದಿನಂಪ್ರತಿ ನಡೆಯುತ್ತಾ ಇದೆ. ಇದಕ್ಕೆ ಎಲ್ಲದಕ್ಕೂ ವಿರೋಧ ಪಕ್ಷದವರಲ್ಲಿ ಸಮಾಲೋಚನೆ ನಡೆಸುವುದಕ್ಕಾಗುವುದಿಲ್ಲ. ಇದರಲ್ಲಿ ಡಿಸ್ಕ್ರಿಶನ್ ಉಪಯೋಗಿಸಿದ್ದೇನೆ. ನಾವಾಗಿ ಡಿಸ್ಕ್ರಿಶನ್ ಉಪಯೋಗ ಮಾಡಿಕೊಂಡು ಹೋಗುವುದಕ್ಕೆ ಎಷ್ಟು ಮಟ್ಟಿಗೆ ಸಾಧ್ಯವೋ ಅಷ್ಟು ಮಾಡುತ್ತೇವೆ. ಇನ್ನು ಜನರ ಅವಾಂತರ, ಕಳವಳ, ಸಂಕಟ ಎಲ್ಲಾ ಇದ್ದಾಗ ಇವರ ಹತ್ತಿರ ಸಮಾಲೋಚನೆ ಮಾಡಿ ಅವರ ಅಭಿಪ್ರಾಯ ತಿಳಿದುಕೊಳ್ಳುವುದು ತಪ್ಪು ಎಂದು ತಿಳಿದುಕೊಂಡಿಲ್ಲ. ಈ ದೃಷ್ಟಿಯಿಂದ ಸಮಾಲೋಚನೆ ಮಾಡುತ್ತೇವೆಂದು ಹೇಳಿದರೆ, ಹೊಸತಾಗಿ ಇದನ್ನು ಪ್ರಿಸಿಡೆಂಟ್ ಆಗಿ ಮಾಡುತ್ತೇವೆಂದು ಹೇಳಿಲ್ಲ. ಯಾವುದರಲ್ಲಿ ಸಮಾಲೋಚನೆ ಮಾಡಬೇಕು, ಅನೇಕ ಮಹತ್ವದ ವಿಚಾರಗಳಲ್ಲಿ ಮಾಡಬೇಕೆಂದು ಕಾಣುತ್ತದೆ. ಆಗ ವಿರೋಧ ಪಕ್ಷದವರಲ್ಲಿ ಸಮಾಲೋಚನೆ ಮಾಡುತ್ತದೆ, ಹಿಂದೆಯೂ ಮಾಡಿದೆ. ಮುಂದೆ ಏನಾದರು ಅಂತಹ ವಿಚಾರ ಬಂದಾಗ ಅವಶ್ಯವಾಗಿ ಮಾಡಬೇಕಾಗಿ ಬರುತ್ತದೆ. ಯಾವ ವಿಚಾರದಲ್ಲಿ ಮಾಡಬೇಕು, ಯಾವ ವಿಚಾರದಲ್ಲಿ ಮಾಡಬಾರದು ಎಂಬುದರಲ್ಲಿ ಸರ್ಕಾರ ನಿರ್ಣಯ ಮಾಡುತ್ತದೆ, ಹೊರತು ಯಾರಾದರೂ ಬೇರೆಯವರು ನಿರ್ಣಯ ಮಾಡುವುದಿಲ್ಲ. ಇವತ್ತು ಏನು ಎರಡೂವರೆ ಗಂಟೆ ಕಾಲ ಚರ್ಚೆಯಾಯಿತು ಇದರಿಂದ ನನಗಾದರೂ ಅನಿಸುತ್ತದೆ, ನಾನು ಮುಖ್ಯ ಮಂತ್ರಿಯಾಗಿ ಬಂದ ಮೇಲೆ ಯಾವ ತರದ ಪಾಪಗಳನ್ನು ಮಾಡುತ್ತಿದ್ದೇನೋ ಏನು ಅನ್ಯಾಯಗಳನ್ನು ಮಾಡುತ್ತಿದ್ದೇನೋ ಏನು ಸರ್ಕಾರದ ಬೊಕ್ಕಸವನ್ನು ಲೂಟಿ ಮಾಡುತ್ತಿದ್ದೇನೊ ಅಲ್ಲದೆ ಇತರ ಜನರಿಗೂ ಲೂಟಿ ಮಾಡಲು ಇನ್‌ಸ್ಟಿಗೇಟ್ ಮಾಡುತ್ತಿದ್ದೇನೋ ಎಂದು. ಏಕೆಂದರೆ ಇವತ್ತು ಹೊಸತಾಗಿ ಒಂದೊಂದು ಉದ್ಭವವಾಗುತ್ತಿದೆ. ಮಾನ್ಯ ಶ್ರೀನಿವಾಸನವರು ಹೇಳಿದಹಾಗೆ 1946ನೇ ಇಸವಿಯಿಂದ ಈ ಪ್ರದರ್ಶನ ನಡೆಯುತ್ತಿತ್ತು. ಆದರೆ ನಾನು ಅಧಿಕಾರಕ್ಕೆ ಬಂದ ತಕ್ಷಣ ಹೀಗೆ ಲಪಟಾಯಿಸಿಬಿಡಿ ಎಂದು ವಸ್ತುಪ್ರದರ್ಶನ ಮಾಡುತ್ತಾ ಇಲ್ಲ. ಮಾನ್ಯ ಸದಸ್ಯರು ಮತ್ತು ಹೊರಗಿನವರು ತಿಳಿದುಕೊಳ್ಳಬೇಕಾಗಿದೆ, ಏನೆಂದರೆ, 1946ನೇ ಇಸವಿಯಿಂದ ಈ ಪ್ರದರ್ಶನ ನಡೆಯುತ್ತಿದೆ. ಮಧ್ಯದಲ್ಲಿ ಒಂದೆರಡು ವರ್ಷ ಚೈನೀಸ್ ಅಗ್ರೆಷನ್ ಆದಾಗ ನಿಂತು ಹೋಗಿರಬಹುದು. ಇದೊಂದು ದುರ್ದೈವದ ಸಂಗತಿಯಾಗಿದೆ. ಇದು ಮೊದಲನೆಯ ಸಲ ಈ ರೀತಿ ಬರುತ್ತಾ ಇರುವುದು. ವಿಶಾಲ ಕರ್ನಾಟಕ ಆದ 1956ನೇ ಇಸವಿಯಿಂದಲೂ ನಾನು ಈ ಮನೆಯಲ್ಲಿ ಕಾಂಗ್ರೆಸ್ ಎಗ್ಜಿಬಿಷನ್ ಬೇಡಿ, ಸರ್ಕಾರ ಮಾಡಬೇಕು ಎಂದು ಹಿಂದೆ ಎಂದೂ ಬರಲಿಲ್ಲ. ಇವತ್ತು ಮಾತ್ರ ಬಂದಿದೆ.

ಶ್ರೀ ಎಸ್. ಶಿವಪ್ಪ.—ಸುಭಾಸ್‌ನಗರದಲ್ಲಿರುವ ಮೈದಾನವನ್ನು 99 ವರ್ಷಕ್ಕೆ ಲೀಸ್ ಕೊಡತಕ್ಕ ವಿಚಾರವೂ ಬಂದಿರುವುದು ಈಗಲೇ.

ಶ್ರೀ ವೀರೇಂದ್ರ ಪಾಟೀಲ್.—99 ವರ್ಷ ಲೀಸ್ ಕೊಡುವ ಪ್ರಶ್ನೆ ಹೇಗೆ ಎನ್ನುವುದನ್ನು ನಾನು ಹೇಳಲು ಹೋಗುವುದಿಲ್ಲ.

6-00 P. M.

ಇದರ ಬಗ್ಗೆ ನಾನು ಕಟ್ಟುಬದ್ಧನಾಗಿದ್ದೇನೆ, ನಾಲಗೆಯಲ್ಲಿ ನುಡಿದಿದ್ದೇನೆ. ಅದರಂತೆ ನಾನು ನಡೆದುಕೊಳ್ಳುತ್ತೇನೆಂದು ಹೇಳಿದ್ದೇನೆ. ಈ ಬಗ್ಗೆ ಚರ್ಚೆ ಮಾಡಬೇಕಾದಂತಹ ಅವಶ್ಯಕತೆ ಇಲ್ಲ. ಇವೊತ್ತು ಬಂದಿರುವ ಪ್ರಶ್ನೆ, ವಿಷಯ, ಕಾಂಗ್ರೆಸ್ ವಸ್ತು ಪ್ರದರ್ಶನದಲ್ಲಿ ಸರ್ಕಾರ ಭಾಗವಹಿಸುವುದು ಉಚಿತವೋ ಅಲ್ಲವೋ ಎನ್ನುವ ಪ್ರಶ್ನೆ ಬಂದಿದೆ. ಈ ಪ್ರಶ್ನೆ ಸುಮಾರು 23 ವರ್ಷಗಳ ನಂತರ ಬಂದಿದೆ. ನಾನು ಮುಖ್ಯಮಂತ್ರಿಯಾದಮೇಲೆ ಮೊದಲನೆಯ ಸಲ ಇದು ಬಂದಿದೆ. ನಾನು ಮುಖ್ಯ ಮಂತ್ರಿಯಾಗದಿದ್ದರೆ ಈ ವಿಷಯ ಬರುತ್ತಾ ಇರಲಿಲ್ಲವೋ ಏನೋ ಎಂದು ಅನಿಸುತ್ತದೆ. ಇವೊತ್ತು ಮೊದಲನೆಯ ಸಲ ಅಲ್ಲ, ಅನೇಕ ಮಾನ್ಯ ಸದಸ್ಯರು ಪ್ರತಿವರ್ಷ ಪ್ರಶ್ನೆಗಳನ್ನು ಹಾಕಿದ್ದಾರೆ ಕಾಂಗ್ರೆಸ್ ವಸ್ತು ಪ್ರದರ್ಶನಗಳಲ್ಲಿ ನಾವು ಎಷ್ಟರಮಟ್ಟಿಗೆ ಭಾಗವಹಿಸಿದ್ದೇವೆ, ಎಷ್ಟು ದುಡ್ಡು ಕೊಟ್ಟಿದ್ದೇವೆ, ಗ್ರೌಂಡ್ ರೆಂಟ್ ಎಷ್ಟು ಕೊಟ್ಟಿದ್ದೇವೆ, ಸ್ಟಾಲಿಗೆ ಎಷ್ಟು ದುಡ್ಡು ಕೊಟ್ಟಿದ್ದೇವೆ, ಅಡ್ವರ್ಟೈಜ್‌ಮೆಂಟಿಗೆ ಎಷ್ಟು ದುಡ್ಡು ಕೊಟ್ಟಿದ್ದೇವೆ, ಎನ್ನತಕ್ಕ ಪ್ರಶ್ನೆಗಳನ್ನು ಮಾನ್ಯ ಸದಸ್ಯರು ಈ ಸಭೆಯಲ್ಲಿ ಹಾಕಿದ್ದಾರೆ. ಇನ್‌ಫರ್‌ಮೇಷನ್ ಎಲಿಸಿಟ್ ಮಾಡಿದ್ದಾರೆ. ಇಲ್ಲ ಎಂದು ನಾನು ಹೇಳುವುದಿಲ್ಲ. ಕಾಂಗ್ರೆಸ್ ವಸ್ತು ಪ್ರದರ್ಶನದಲ್ಲಿ ಸರ್ಕಾರ ಭಾಗವಹಿಸಬಾರದು, ಎನ್ನುವಂಥ ಸ್ವರ ಮೊದಲನೆಯ ಸಲ ಬರುತ್ತಿದೆ.

ಶ್ರೀ ಎನ್. ಶ್ರೀಕಂಠಯ್ಯ.—ಹಿಂದೆ ಮಾಡಿದ ಪಾಪ ನಿಮ್ಮ ತಲೆಗೆ ಬಂದಿದೆ.

ಶ್ರೀ ಎಸ್ ಚನ್ನಯ್ಯ.—ವಿರೋಧಪಕ್ಷ ಬಲವಾಗಿದೆ.

ಶ್ರೀ ವೀರೇಂದ್ರ ಪಾಟೀಲ್.—ಅದು ಎಷ್ಟು ಬಲವಾಗಿದೆ ಎಂಬುದು ನಮಗೆ ಗೊತ್ತಿದೆ. ಪ್ರಜಾ ರಾಜ್ಯದಲ್ಲಿ ಹೆದರುವವರು, ಪ್ರಜಾ ರಾಜ್ಯದಲ್ಲಿ ರಾಜಕಾರಣದಲ್ಲಿರುವುದಕ್ಕೆ ಅರ್ಹರಲ್ಲ. ಹಾಗೆ ಹೆದರುವುದಾದರೆ ಎಲ್ಲರೂ ಹೆದರಿಸುತ್ತಾರೆ. ರಾಜಕಾರಿಣಿಗಳನ್ನು ಎದುರಿಸಬೇಕಾಗುತ್ತದೆ, ಜನಾಭಿಪ್ರಾಯವನ್ನು ಎದುರಿಸಬೇಕಾಗುತ್ತದೆ. ಏನು ಕೆಲಸಕಾರ್ಯಗಳನ್ನು ಮಾಡಬೇಕಾದರೂ ನೋಡಿ ಮಾಡಬೇಕಾಗುತ್ತದೆ. 1946ನೇ ಇಸವಿಯಲ್ಲಿ ಈ ಕಾಂಗ್ರೆಸ್ ವಸ್ತು ಪ್ರದರ್ಶನ ಪ್ರಾರಂಭವಾಯಿತು. ಅಲ್ಲಿಂದ ಇಲ್ಲಿಯವರೆಗೂ ಪ್ರತಿವರ್ಷವೂ ಸುಭಾಷ್ ನಗರ ಮೈದಾನದಲ್ಲಿಯೇ ಕಾಂಗ್ರೆಸ್ ವಸ್ತು ಪ್ರದರ್ಶನ ನಡೆದಿದೆ. ಆದ್ದರಿಂದ ಈ ವಸ್ತು ಪ್ರದರ್ಶನ ಬಗ್ಗೆ, ಇದರ ಮಹತ್ವದ ಬಗ್ಗೆ ನಾನು ಹೇಳಬೇಕಾಗಿಲ್ಲ. ಎಗ್ಸಿಬಿಷನ್‌ಗಳನ್ನು ಪ್ರಜಾ ರಾಜ್ಯದಲ್ಲಿ ಅಷ್ಟೇ ಅಲ್ಲ, ಕಮ್ಯುನಿಸ್ಟ್ ರಾಜ್ಯಗಳಲ್ಲಿಯೂ ಎಗ್ಸಿಬಿಷನ್ ಅನ್ನು ದೊಡ್ಡ ಪ್ರಮಾಣದಲ್ಲಿ ಮಾಡುತ್ತಾರೆ.

ಶ್ರೀ ಎಸ್. ಶಿವಪ್ಪ.—ಅಲ್ಲಿ ಸ್ಟೇಟ್ ಎಗ್ಸಿಬಿಷನ್ ಮಾಡುತ್ತಾರೆ.

ಶ್ರೀ ವೀರೇಂದ್ರ ಪಾಟೀಲ್.—ಅಲ್ಲಿ ಪಾರ್ಟಿಗೇ ಸ್ಟೇಟಿಗಿಂತ ಹೆಚ್ಚು ಮರ್ಯಾದೆ. ಅಲ್ಲಿ ಪ್ರೈಮಿನಿಸ್ಟರಿಗಿಂತಲೂ ಹೆಚ್ಚಿನ ಕಿಮ್ಮತ್ತು ಪಾರ್ಟಿ ಸೆಕ್ರೆಟರಿಯವರಿಗೆ ಇರುತ್ತದೆ. ಮೊದಲನೆಯ ನಂಬರು ಅವನು, ಪ್ರೈಮಿನಿಸ್ಟರು ಎರಡನೆಯ ನಂಬರ್.

Sri S. SIVAPPA.—Now you are coming to the point. You want to equate State with the Government.

ಶ್ರೀ ವೀರೇಂದ್ರ ಪಾಟೀಲ್.—ನಮ್ಮಲ್ಲಿ ಎಗ್ಸಿಬಿಷನ್ನಿಗೆ ಬಹಳ ಮಹತ್ವ ಇದೆ. ಇಂಟರ್‌ನ್ಯಾಷನಲ್ ಎಗ್ಸಿಬಿಷನ್‌ಗಳು ಆಗುತ್ತವೆ. ನ್ಯಾಷನಲ್ ಎಗ್ಸಿಬಿಷನ್‌ಗಳು ಆಗುತ್ತವೆ. ಮಾನ್ಯ ಸದಸ್ಯರಿಗೆ ಹೇಳಬೇಕಾಗಿದ್ದರೆ ಪ್ರತಿವರ್ಷ ಅನೇಕ ಎಗ್ಸಿಬಿಷನ್‌ಗಳು ಆಗುತ್ತವೆ. ಮುನಿಸಿಪಾಲಿಟಿಗಳವರು ಎಗ್ಸಿಬಿಷನ್ ಮಾಡುತ್ತಾರೆ. ಈಗ ಉದಾಹರಣೆಗೆ ಹೇಳಬೇಕಾಗಿದ್ದರೆ ಹಾಸನದಲ್ಲಿ ಮುನಿಸಿಪಾಲಿಟಿಯವರು ಕ್ಯಾಟಲ್ ಫೇರ್ ನಡೆಸುತ್ತಾರೆ. ಅದರಲ್ಲಿ ಸರ್ಕಾರದವರು ಭಾಗ ವಹಿಸಿದ್ದಾರೆ. ಈ ರೀತಿ ಮುನಿಸಿಪಾಲಿಟಿಯವರು ಮತ್ತು ಇತರ ಕಡೆಗಳಲ್ಲಿ ಏರ್ಪಡಿಸಿರುವ ವಸ್ತು ಪ್ರದರ್ಶನದಲ್ಲಿ ಸರ್ಕಾರ ಅದರ ಮಹತ್ವ ನೋಡಿ ಎಷ್ಟರಮಟ್ಟಿಗೆ ಭಾಗವಹಿಸಬಹುದೋ ಅಷ್ಟರಮಟ್ಟಿಗೆ ಭಾಗವಹಿಸುತ್ತಿದ್ದಾರೆ. ಹೋದ ಸಲ ಮದ್ರಾಸಿನಲ್ಲಿ ಇಂಡಿಯನ್ ನ್ಯಾಷನಲ್ ಟ್ರೇಡ್ ಎಗ್ಸಿಬಿಷನ್‌ನಲ್ಲಿ ನಮ್ಮ ಸರ್ಕಾರದವರು ಭಾಗ ವಹಿಸಿದ್ದಾರೆ. ನ್ಯಾಷನಲ್ ಅಗ್ರಿಕಲ್ಚರಲ್ ಫೇರ್ ಜಯಪುರದಲ್ಲಿ ನಮ್ಮ ಸರ್ಕಾರದವರು ಭಾಗವಹಿಸಿದ್ದಾರೆ. ದೆಹಲಿಯಲ್ಲಿ ಆದಂತಹ ಇಂಟರ್‌ನ್ಯಾಷನಲ್ ಗಾಂಧಿ ಎಗ್ಸಿಬಿಷನ್‌ನಲ್ಲಿ ನಮ್ಮ ಸರ್ಕಾರದವರು ಭಾಗವಹಿಸಿದ್ದಾರೆ. ಬೊಂಬಾಯಿನಲ್ಲಿ ನಡೆದಂತಹ ಅಗ್ರಿಕಲ್ಚರಲ್ ಫೇರ್‌ನಲ್ಲಿ ನಾವು ಭಾಗವಹಿಸಿದ್ದೇವೆ. ಎಲ್ಲಾ ಎಗ್ಸಿಬಿಷನ್‌ಗಳಲ್ಲಿಯೂ ಸರ್ಕಾರ ಅದರ ಮಹತ್ವ ನೋಡಿ

(ಶ್ರೀ ವೀರೇಂದ್ರ ಪಾಟೀಲ್)

ಅರಿತುಕೊಂಡು ಎಷ್ಟು ಪ್ರಮಾಣದಲ್ಲಿ ಅದರಲ್ಲಿ ಭಾಗವಹಿಸಬೇಕೆಂಬುದನ್ನು ತಿಳಿದುಕೊಂಡು ಅಷ್ಟು ಪ್ರಮಾಣದಲ್ಲಿ ಭಾಗವಹಿಸುತ್ತಿದ್ದೇವೆ. ಸ್ಟಾಲುಗಳನ್ನು ಹಾಕಿದ್ದೇವೆ. ಸಾವನಿಯರ್, ದಿನಪತ್ರಿಕೆಗಳು, ಮತ್ತು ವಾರಪತ್ರಿಕೆಗಳು ಮತ್ತು ಮಾಸಿಕ ಪತ್ರಿಕೆಗಳಲ್ಲಿ ಅಡ್ವರ್ಟೈಜ್‌ಮೆಂಟ್ ಕೊಡುತ್ತಿದ್ದೇವೆ. ಯಾವುದೇ ಪ್ರಜಾ ರಾಜ್ಯದಲ್ಲಿಗಲೀ ಸರ್ಕಾರ ಏನು ಕೆಲಸ ಕಾರ್ಯಗಳನ್ನು ಮಾಡಿದೆ, ಏನು ಕಾರ್ಯ ಸಾಧಿಸಿದೆ, ಮುಂದೆ ಏನು ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ ಎನ್ನತಕ್ಕದ್ದನ್ನು ಜನತೆಗೆ ಮನವರಿಕೆ ಮಾಡುವ, ತೋರಿಸುವ ಕಾರ್ಯಗಳು ಏನಿವೆ ಅವುಗಳನ್ನು ವಸ್ತು ಪ್ರದರ್ಶನದ ಮುಖಾಂತರ ಜನತೆಗೆ ಮನವರಿಕೆ ಮಾಡಿಕೊಡಬೇಕಾಗುತ್ತದೆ. ಅದರ ಸಲುವಾಗಿ ಸರ್ಕಾರ ಅನೇಕ ವರ್ಷಗಳಿಂದ ವಸ್ತುಪ್ರದರ್ಶನದಲ್ಲಿ ಭಾಗವಹಿಸುತ್ತಿದೆ. ಅದರಂತೆ ಪ್ರತಿವರ್ಷ ಕಾಂಗ್ರೆಸ್ ವಸ್ತು ಪ್ರದರ್ಶನದಲ್ಲಿ ಸರ್ಕಾರದವರು 16–18 ಸ್ಟಾಲುಗಳನ್ನು ಹಾಕುತ್ತಾರೆ. ವಸ್ತು ಪ್ರದರ್ಶನಗಳಲ್ಲಿ ಇಂಡಿಯಾ ಸರ್ಕಾರದ ಕೆಲವು ಇಲಾಖೆಗಳು ಭಾಗವಹಿಸುತ್ತವೆ. ಅದೇ ರೀತಿ ಅನೇಕ ಖಾಸಗಿಯವರು ಭಾಗವಹಿಸುತ್ತಾರೆ. ಕೈಗಾರಿಕೋದ್ಯಮಿಗಳು ಭಾಗವಹಿಸುತ್ತಾರೆ.

ಇನ್ನೊಂದು ವಿಚಾರ. ಶ್ರೀಮಾನ್ ಗೋಪಾಲಗೌಡರು ಮಾತನಾಡುತ್ತಾ, ಕಾಂಗ್ರೆಸ್ ಕಚೇರಿಯನ್ನು ಯಾವ ರೀತಿ ಕಟ್ಟಿದ್ದಾರೆಂಬುದು ನನಗೆ ಗೊತ್ತಿದೆ ಎಂದು ಹೇಳಿದರು. ಕಾಂಗ್ರೆಸ್ ಕಚೇರಿಯನ್ನು ಕಟ್ಟುವ ಮೊದಲು ನಾನು ಇಲ್ಲಿ ಇರಲಿಲ್ಲ. ಅದು ಅವರಿಗೇ ಚೆನ್ನಾಗಿ ಗೊತ್ತಿದೆ. ನನಗೆ ತಿಳಿದ ಮಟ್ಟಿಗೆ ನಾನು ಹೇಳಬಹುದು. ಯಾವ ವಸ್ತುಪ್ರದರ್ಶನ ಶ್ರೀಮಾನ್ ಚನ್ನಯ್ಯನವರು ಮತ್ತು ಶ್ರೀಮಾನ್ ಹುಚ್ಚಮಾಸ್ತಿಗೌಡರು ನಡೆಸಿಕೊಂಡು ಬಂದರೋ ಅದನ್ನೇ ನಾವು ನಡೆಸಿಕೊಂಡು ಹೋಗುತ್ತಿದ್ದೇವೆ. ಆಗ ಸರ್ಕಾರದವರು ಎಷ್ಟು ಉತ್ಸಾಹದಿಂದ ಎಗ್ಜಿಬಿಷನ್‌ನಲ್ಲಿ ಭಾಗವಹಿಸುತ್ತಿದ್ದರೋ ಅದೇ ರೀತಿ ಈಗಲೂ ಅಷ್ಟೇ ಪ್ರಮಾಣದಲ್ಲಿ ಈ ಕಾಂಗ್ರೆಸ್ ಎಗ್ಜಿಬಿಷನ್‌ನಲ್ಲಿ ಸರ್ಕಾರದವರು ಭಾಗವಹಿಸುತ್ತಿದ್ದಾರೆ. 1946ನೇ ಇಸವಿಯಿಂದ ನಡೆಸಿಕೊಂಡು ಬಂದಿರುವುದನ್ನು ನಾವು ಮುಂದುವರಿಸಿಕೊಂಡು ಹೋಗುತ್ತಿದ್ದೇವೆ. ಹೊಸದಾಗಿ ಇಲ್ಲಿ ನಡೆಯುತ್ತಿಲ್ಲ. 1958ನೇ ಇಸವಿಯಲ್ಲಿ ಶ್ರೀಮಾನ್ ಎಸ್. ಚನ್ನಯ್ಯನವರು ಕಾಂಗ್ರೆಸ್ ಅಧ್ಯಕ್ಷರಾಗಿದ್ದರು. ಕಾಂಗ್ರೆಸ್ ವಸ್ತು ಪ್ರದರ್ಶನದ ಆರಂಭೋತ್ಸವವನ್ನು ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಶ್ರೀಮಾನ್ ಚನ್ನಯ್ಯನವರು ಮೇ ತಿಂಗಳು 14 ರಂದು ನೆರವೇರಿಸಿದಾಗ, ತೆಗೆದ ಚಿತ್ರ ಇದು. ಇದು ಸಾವನೀಯರ್‌ನಲ್ಲಿ ಇದೆ. (ಈ ಸಂದರ್ಭದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಸಾವನೀಯರ್‌ನಲ್ಲಿರತಕ್ಕ ಚಿತ್ರವನ್ನು ಸಭೆಗೆ ತೋರಿಸಿದರು.)

ಶ್ರೀ ಎಸ್. ಚನ್ನಯ್ಯ.—ಆಗ ನಾನು ಅಲ್ಲಿ ಇದ್ದೆ. ಮಾಡಿದೆ.

ಶ್ರೀ ಎಸ್. ಶಿವಪ್ಪ.—ಶ್ರೀಮಾನ್ ಚನ್ನಯ್ಯನವರು ಕಾಂಗ್ರೆಸ್ ಅಧ್ಯಕ್ಷರಾಗಿದ್ದಾಗ ಸರ್ಕಾರದವರು ಕಾಂಗ್ರೆಸ್ ವಸ್ತುಪ್ರದರ್ಶನವನ್ನು ನಡೆಸುವುದಕ್ಕೆ ಎಷ್ಟು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದರು ಎಂಬುದನ್ನು ಹೇಳುತ್ತೀರಾ!

ಶ್ರೀ ವೀರೇಂದ್ರ ಪಾಟೀಲ್.—ಇದು ಲಕ್ಷ ಅಥವಾ ಎರಡು ಲಕ್ಷದ ಮಾತಲ್ಲ. ಇವತ್ತಿನ ದಿವಸದ ಪ್ರಸಂಗವನ್ನು ನಾವು ನೋಡಬೇಕಾಗಿದೆ.

ಶ್ರೀ ವಾಟಾಳ್ ನಾಗರಾಜ್.—ಶ್ರೀ. ಚನ್ನಯ್ಯನವರು ಕಾಂಗ್ರೆಸ್ ಅಧ್ಯಕ್ಷರಾಗಿದ್ದಾಗ ಸರ್ಕಾರದವರು ವಸ್ತುಪ್ರದರ್ಶನಕ್ಕೆ ಎಷ್ಟು ಹಣ ಕೊಟ್ಟಿದ್ದರು ಎಂಬುದನ್ನು ಮೊದಲು ಹೇಳಬೇಕು.

ಶ್ರೀ ವೀರೇಂದ್ರ ಪಾಟೀಲ್.—ಈ ಪುಸ್ತಕದಲ್ಲಿರುವುದನ್ನು ಮಾತ್ರ ನಾನು ಹೇಳುತ್ತಿದ್ದೇನೆ.

ಶ್ರೀ ಎಸ್. ಚನ್ನಯ್ಯ.—ಆಗ ಎಷ್ಟು ಹಣವನ್ನು ಸರ್ಕಾರದವರು ಕೊಟ್ಟಿದ್ದರು, ಈಗ ಎಷ್ಟು ಕೊಡುತ್ತಿದ್ದಾರೆಂಬುದನ್ನು ಹೇಳಬೇಕು.

ಶ್ರೀ ವೀರೇಂದ್ರ ಪಾಟೀಲ್.—1958ರಲ್ಲಿ ಕಾಂಗ್ರೆಸ್ ವಸ್ತುಪ್ರದರ್ಶನವನ್ನು ಉದ್ಘಾಟಿಸುತ್ತಾ ಅವರು ಮಾಡಿದಂತಹ ಭಾಷಣ ಈ ರೀತಿ ಇದೆ.

(ಗಲಾಟೆ)

ಅಧ್ಯಕ್ಷರು.—ತಾವು ಮಾತನಾಡುವಾಗ ಮಂತ್ರಿಗಳು ಶಾಂತ ರೀತಿಯಿಂದ ಕೇಳಿದ್ದಾರೆ. ಅದೇ ರೀತಿ ಅವರು ಹೇಳುವುದನ್ನು ಮುಗಿಸುವವರೆಗೂ ಸಹ ತಾವು ಶಾಂತ ರೀತಿಯಿಂದ ಕೇಳಬೇಕು. ಯಾರು ಹೇಳುತ್ತಿರುವುದು ತಪ್ಪು, ಯಾರು ಹೇಳುತ್ತಿರುವುದು ಸರಿ ಎಂಬುದು ಮುಖ್ಯವಲ್ಲ. ಒಬ್ಬರು ಮಾತನಾಡುತ್ತಿರುವಾಗ ಬೇರೆಯವರು ಶಾಂತ ರೀತಿಯಿಂದ ಕೇಳಬೇಕು.

ಶ್ರೀ ವೀರೇಂದ್ರ ಪಾಟೀಲ್.—ಈ ಸಭೆಯಲ್ಲಿ ಹೊಸ ಸದಸ್ಯರುಗಳು ಸಹ ಇದ್ದಾರೆ. ಅವರಿಗೆ ಎಲ್ಲಾ ವಿಚಾರಗಳು ತಿಳಿಯಲಿ ಎಂಬುದಾಗಿ ಇದನ್ನೆಲ್ಲಾ ಹೇಳುತ್ತಿದ್ದೇನೆ. ಈಗ 1958ನೇ ಮೇ-14ರಂದು ಶ್ರೀ ಚೆನ್ನಯ್ಯನವರು ಮಾಡಿದ ಭಾಷಣವನ್ನು ಓದುತ್ತೇನೆ.

(ಗಲಾಟೆ)

ಶ್ರೀ ವಾಟಾಳ್ ನಾಗರಾಜ್.—ಪಾಯಿಂಟ್ ಆಫ್ ಆರ್ಡರ್, ಸರ್.

ಅಧ್ಯಕ್ಷರು.—ಯಾವ ರೂಲ್ ಪ್ರಕಾರ?

ಶ್ರೀ ವಾಟಾಳ್ ನಾಗರಾಜ್.—311ನೇ ರೂಲ್ ಪ್ರಕಾರ.

ಶ್ರೀ ಎ. ಮುನಿಯಪ್ಪ.—ಅವರು ಸುಮ್ಮನೆ ಗಲಾಟೆ ಮಾಡುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್.—ಮೊದಲು ಆ ಕಡೆಯುವರು ಕುಳಿತುಕೊಳ್ಳುವುದಕ್ಕೆ ಹೇಳಿ. ನಾನು ಯಾವಾಗಲೂ ತಮ್ಮ ಅಪ್ಪಣೆಯನ್ನು ಪಾಲಿಸುತ್ತೇನೆ :

ಅಧ್ಯಕ್ಷರು.—ಯಾವ ರೀತಿ ಉತ್ತರ ಕೊಡಬೇಕು ಎನ್ನುವುದು ಅವರಿಗೇ ಬಿಟ್ಟಿದ್ದು. ಇದೇ ರೀತಿ ಉತ್ತರ ಕೊಡಬೇಕೆಂದು ಹೇಳುವ ಅಧಿಕಾರ ನಿಮಗೆ ಇಲ್ಲ. ಮೊದಲು ಅವರು ಹೇಳುವುದನ್ನು ಕೇಳಿ ನಂತರ ಬೇಕಾದರೆ ಪ್ರಶ್ನೆಗಳನ್ನು ಕೇಳಿ.

ಶ್ರೀ ಎಸ್. ಚೆನ್ನಯ್ಯ.—ತಾವು ಆ ಪುಸ್ತಕವನ್ನು ಯಾವಾಗ ತರಿಸಿಕೊಂಡಿರಿ, ಎಲ್ಲಿಂದ ತರಿಸಿಕೊಂಡಿರಿ ಎಂಬುದು ನನಗೆ ಗೊತ್ತು. ತಾವು ಹೇಳುವುದನ್ನು ಹೇಳಿ, ನಂತರ ನಾನು ಉತ್ತರ ಕೊಡುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್.—ವಸ್ತು ಪ್ರದರ್ಶನದ ಕಾಯಂ ಕಟ್ಟಡದ ಅಗತ್ಯವನ್ನು ಕುರಿತು ಶ್ರೀ ಚೆನ್ನಯ್ಯನವರು ಮಾಡಿದ ಭಾಷಣದ ಸಾರಾಂಶವನ್ನು ಈಗ ಓದುತ್ತೇನೆ.

1958ನೇ ಮೇ. 14 ರಂದು ಕಾಂಗ್ರೆಸ್ ವಸ್ತು ಪ್ರದರ್ಶನದ ಆರಂಭೋತ್ಸವವನ್ನು ನೆರವೇರಿಸುತ್ತಾ ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಶ್ರೀ ಎಸ್. ಚೆನ್ನಯ್ಯನವರು ಮಾಡಿದ ಭಾಷಣದ ಸಾರಾಂಶ :

> "ಬೆಂಗಳೂರಿನಂಥ ಮಹಾ ನಗರದಲ್ಲಿ ವರ್ಷಕ್ಕೊಮ್ಮೆ ಇಲ್ಲಿನ ಜನರಿಗೆ ಬೋಧಪ್ರದವಾದ ಹಾಗೂ ಕ್ರಿಯಾತ್ಮಕವಾದ ಉತ್ತಮ ಮನರಂಜನೆ ಒದಗಿಸಲು ಈ ಬಗೆಯ ವಸ್ತು ಪ್ರದರ್ಶನ ಬಹಳ ಅಗತ್ಯವಾದುದು. ಆದ್ದರಿಂದಲೇ ಇದನ್ನು ಚೆನ್ನಾಗಿ ನಡೆಸಲು ಅನುಕೂಲವಾಗುವಂತಹ ಶಾಶ್ವತವಾದ ವಸ್ತು ಪ್ರದರ್ಶನ ಕಾಯಂ ಕಟ್ಟಡವೊಂದನ್ನು ಏರ್ಪಡಿಸಬೇಕೆಂದು ನಾನೇ ಹಲವು ಸಾರಿ ಹೇಳಿದ್ದೇನೆ. ಈ ಕಡೆ ಸರ್ಕಾರ ಮತ್ತು ಸಾರ್ವಜನಿಕರ ಗಮನ ಅತ್ಯಗತ್ಯವಾಗಿ ಹರಿಯಬೇಕು. ಈ ವಸ್ತು ಪ್ರದರ್ಶನದ ಎಲ್ಲಾ ಶಿಸ್ತಿನ ಏರ್ಪಾಡುಗಳಿಗೆ ಬೇರೆ ಊರಿನ ಅನೇಕ ಕಾಂಗ್ರೆಸ್ ಕೆಲಸಗಾರರು ನೆರವಿತ್ತು ಶ್ರಮಿಸುತ್ತಿರುವುದನ್ನು ಕಂಡು ನನಗೆ ಬಹಳ ಆನಂದವೆನಿಸಿದೆ. ಈ ಪ್ರದರ್ಶನಕ್ಕೆ ಸರ್ವವಿಧದಲ್ಲೂ ಯಶಸ್ಸನ್ನು ಕೋರಿ, ಅತ್ಯಂತ ಸಂತೋಷದಿಂದ ಇದರ ಪ್ರಾರಂಭೋತ್ಸವವನ್ನು ಮಾಡುತ್ತೇನೆ."

ಈ ರೀತಿ ಹೇಳಿದ್ದಾರೆ.

(ಆಡಳಿತ ಪಕ್ಷದ ಸದಸ್ಯರುಗಳು ಕರತಾಡನ ಮಾಡಿ ಸಂತೋಷ ವ್ಯಕ್ತಪಡಿಸಿದ್ದರು)

ಶ್ರೀ ಎಸ್. ಚೆನ್ನಯ್ಯ.—ನಗುವುದಕ್ಕೆ ಏನು ಬಂತು, ನೀವುಗಳು ನೆನ್ನೆ ಮೊನ್ನೆ ಬಂದವರು. ನಿಮಗೆ ಸರಿಯಾದ ವಿಷಯ ಗೊತ್ತಿಲ್ಲ. ನಾನು ಆ ಜಾಗದಲ್ಲಿಯೇ ಕಟ್ಟಬೇಕೆಂದು ಹೇಳಿರಲಿಲ್ಲ. ಬೇರೆ ಕಡೆ ಜಾಗ ತೆಗೆದುಕೊಂಡು ಕಟ್ಟಬೇಕೆಂದು ಆಗ ಮಾತನಾಡಿಕೊಂಡಿದ್ದೆವು. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಈ ರೀತಿ ಹೇಳುವುದು ಸರಿಯಲ್ಲ.

ಶ್ರೀ ವೀರೇಂದ್ರ ಪಾಟೀಲ್.—ನಾನು ಇದ್ದಿರುವುದನ್ನು ಓದಿದೆ. ನನ್ನ ಅಭಿಪ್ರಾಯವನ್ನು ಹೇಳಲಿಲ್ಲ.

ಶ್ರೀ ಎಸ್. ಚೆನ್ನಯ್ಯ.—ನಾನೂ ಕೇಳಿದೆ.

ಶ್ರೀ ವೀರೇಂದ್ರ ಪಾಟೀಲ್.—ತಾವು ಯಾವ ರೀತಿ ಬೇಕಾದರೂ ಅರ್ಥ ಮಾಡಿಕೊಳ್ಳಬಹುದು. 1958ರಲ್ಲಿ ತಾವು ಮಾಡಿದ ಭಾಷಣವನ್ನು ನಾನು ಓದಿದೆ. ನಾನು ಕಾಮೆಂಟ್ ಮಾಡುತ್ತಿಲ್ಲ.

ಶ್ರೀ ಎಂ. ಜಿ. ಬಣಕಾರ.—ಶ್ರೀ ಚನ್ನಯ್ಯನವರು ಆ ಭಾಗದಲ್ಲಿಯೇ ಕಟ್ಟಬೇಕೆಂದು ಆಗ ಹೇಳಿದ್ದಾರೆಯೇ ಎಂಬುದನ್ನು ತಾವು ಹೇಳಬೇಕು. ಕಾಂಗ್ರೆಸ್ ವಸ್ತುಪ್ರದರ್ಶನ ನಡೆಸಬಾರದು ಎಂಬುದು ನಮ್ಮ ಅಭಿಪ್ರಾಯವಲ್ಲ. ಆದರೆ ಕಾಂಗ್ರೆಸ್ ಸಂಸ್ಥೆಯನ್ನು ಬೆಳೆಸಲು ಸರ್ಕಾರದ ಹಣವನ್ನು ವಸ್ತುಪ್ರದರ್ಶನದ ಮೂಲಕ ದುರುಪಯೋಗಪಡಿಸಬಾರದು ಎಂಬುದು ಈಗ ಬಂದಿರುವ ಪ್ರಶ್ನೆ. ಸ್ವಂತವಾದ ಒಂದು ಕಟ್ಟಡವನ್ನು ಬೇಕಾದರೆ ಕಾಂಗ್ರೆಸ್‌ನವರು ವಸ್ತುಪ್ರದರ್ಶನಕ್ಕಾಗಿ ಕಟ್ಟಿಕೊಳ್ಳಲಿ ಅದಕ್ಕೆ ನಮ್ಮ ಅಭ್ಯಂತರ ಇಲ್ಲ. ಆದರೆ ಪ್ರಮುಖ್ಯವಾದ ಪ್ರದೇಶದಲ್ಲಿರುವ ಈ ಜಾಗವನ್ನು ಸರ್ಕಾರದವರು ಕಾಂಗ್ರೆಸ್ ಸಂಸ್ಥೆಗೆ ಕೊಡುತ್ತಿರುವುದು ಅಧಿಕಾರದ ದುರುಪಯೋಗವಲ್ಲವೇ ? ಶ್ರೀ ಚನ್ನಯ್ಯನವರು ಸ್ವಂತವಾದ ಕಟ್ಟಡ ಆಗಬೇಕೆಂದು ಹೇಳಿದ್ದಾರೆಯೇ ಹೊರತು ಸುಭಾಸ್‌ನಗರದಲ್ಲಿರುವ ಜಮೀನಿನಲ್ಲಿಯೇ ಕಟ್ಟಬೇಕೆಂದು ಹೇಳಿರಲಿಲ್ಲ.

ಶ್ರೀ ಎಸ್. ಚನ್ನಯ್ಯ.—ನಾನು ಆ ಮಾತನ್ನು ಹೇಳುತ್ತಿಲ್ಲ. ಮೈಸೂರಿನಲ್ಲಿ ಎಗ್ಸಿಬಿಷನ್ ಆದಾಗಲೂ ಕೂಡ ಒಂದಲ್ಲ ಎರಡು ಸಾರಿ ಇದೇ ಮಾತನ್ನು ಹೇಳಿದ್ದೇನೆ. ಬೇಕಾದರೆ ಆ ಪ್ರೊಸೀಡಿಂಗ್ಸ್ ನೋಡಿ ಹೇಳಬಹುದು.

ಶ್ರೀ ಎಸ್. ಶಿವಪ್ಪ.—ಇಲ್ಲಿ ಸರಕಾರದ ಹಣ ಎಷ್ಟು ಕೊಟ್ಟಿದ್ದೀರಿ ?

ಶ್ರೀ ವೀರೇಂದ್ರ ಪಾಟೀಲ್.—ನನ್ನನ್ನು ಮಧ್ಯೆ ಮಧ್ಯೆ ಇಂಟರಪ್ಟ್ ಮಾಡದೇ ಇದ್ದರೆ ಎಲ್ಲ ವಿಚಾರಗಳನ್ನೂ ಹೇಳುತ್ತೇನೆ ಒಂದು ವಿಚಾರ ಮಾನ್ಯ ಸದಸ್ಯರೆಲ್ಲರೂ ಇಲ್ಲಿ ತಿಳಿದುಕೊಳ್ಳಬೇಕು. ತಾವು ಯಾರೇ ಆಗಲೀ ಮಾತನಾಡುವಾಗ ನಾನು ಮಧ್ಯದಲ್ಲಿ ಎದ್ದು ಒಂದು ಮಾತೂ ಆಡಲಿಲ್ಲ. ತಾವು ಏನು ಮಾತಾಡುತ್ತೀರೋ ಅದನ್ನು ಪೂರ್ತಿಯಾಗಿ ಕೇಳುತ್ತೇನೆ. ಹಾಗೆ ನಾನು ಮಾತಾಡಲು ಕೂಡ ಪೂರ್ತಿಯಾಗಿ ಅವಕಾಶ ಕೊಡಬೇಕು. ಇನ್ನು ತಾವು ಇಲ್ಲಿ ಇಂಟರಪ್ಟ್ ಮಾಡುತ್ತಾ ಹೋದರೆ, ನನಗೆ ವಿಚಾರಗಳ ಬಗ್ಗೆ ಪೂರ್ತಿ ಹೇಳಲು ಆಗುವುದಿಲ್ಲ. ನಾನು ಪೂರ್ತಿ ಮುಗಿಸಿದ ಮೇಲೆ ತಾವು ಏನು ಬೇಕಾದರೂ ಹೇಳಬಹುದು. ಆಗ ಕೇಳುತ್ತೇನೆ. ಮಾನ್ಯ ಸದಸ್ಯರು ಕೇಳಿರುವ ಎಲ್ಲ ಇನ್‌ಫರ್ಮೇಷನ್ನನ್ನೂ ಸಂಪೂರ್ಣವಾಗಿ ಕೊಡುತ್ತೇನೆ. ಯಾವ ಯಾವ ಮಾನ್ಯ ಸದಸ್ಯರಿಗೆ ಏನೇನು ಇನ್‌ಫರ್ಮೇಷನ್‌ಗಳು ಬೇಕೋ ಅವನ್ನೆಲ್ಲಾ ಕೊಡುತ್ತೇನೆ. ಇದರಲ್ಲಿ ಮುಚ್ಚುಮರೆ ಏನೂ ಇಲ್ಲ. ನಾನು ಇಲ್ಲಿ ಏನು ವಿಚಾರಗಳನ್ನು ಇಟ್ಟಿದ್ದಾರೋ ಅದರ ಬಗ್ಗೆ ಎಲ್ಲ ವಿಚಾರಗಳನ್ನೂ ಹೇಳುವುದಕ್ಕೆ ತಯಾರಾಗಿದ್ದೇನೆ. ಇನ್ನೂ ಇತರ ವಿಚಾರಗಳ ಬಗ್ಗೆ ಕೇಳಿದರೂ ಅದಕ್ಕೆ ಎಷ್ಟುಮಟ್ಟಿಗೆ ಇನ್‌ಫರ್ಮೇಷನ್ ಕೊಡಲು ಸಾಧ್ಯವೋ ಅವನ್ನೆಲ್ಲಾ ತಂದು ಬೇಕಾದರೆ ಒದಗಿಸಿಕೊಡುತ್ತೇನೆ. 1946 ರಿಂದ ಏನು ಎಗ್ಸಿಬಿಷನ್ ಆಯಿತು ಎನ್ನುವ ಇನ್‌ಫರ್ಮೇಷನ್ನನ್ನು ಇಲ್ಲಿ ತಂದಿಲ್ಲ. 1969 ರ ಎಗ್ಸಿಬಿಷನ್ನಿಗೆ ಸರಕಾರದವರು ಏನೇನು ಸವಲತ್ತುಗಳನ್ನು ಕೊಟ್ಟರು ಎಷ್ಟು ಖರ್ಚು ಮಾಡಿದ್ದಾರೆ ಎನ್ನುವುದರ ಬಗ್ಗೆ ಮಾತ್ರ ಇಲ್ಲಿ ವಿವರಗಳನ್ನು ಕೊಡುತ್ತೇನೆ. ಇಲ್ಲಿ ನಮ್ಮ ಮುಂದೆ ಇಟ್ಟಿರುವ ವಿಚಾರಗಳ ಬಗ್ಗೆ ಮಾತ್ರ ಇಲ್ಲಿ ಹೇಳುತ್ತೇನೆ. ಆಮೇಲೆ ಏನೇನು ಇನ್‌ಫರ್ಮೇಷನ್ ಬೇಕೆಂದು ಕೇಳುತ್ತೀರೋ ಅವನ್ನೆಲ್ಲಾ ಕೇಳಲಿ. ಅವನ್ನೆಲ್ಲಾ ಒದಗಿಸಿಕೊಡುವುದಕ್ಕೂ ತಯಾರಾಗಿದ್ದೇನೆ. ಇಲ್ಲಿ ನಾನು 1958 ರಲ್ಲಿ ಅವರೇ ಮಾಡಿರುವ ಭಾಷಣವನ್ನು ಸೋವಿನೀರ್‌ನಲ್ಲಿರುವಂತೆ ಓದಿದ್ದೇನೆ. ಇದಕ್ಕೆ ಹಿಂದೆ ಹೇಗಿತ್ತು ಎನ್ನುವುದು ನನಗೆ ಗೊತ್ತಿಲ್ಲ.

ಶ್ರೀ ಎಸ್. ಚನ್ನಯ್ಯ.— ನಾನು ಕೇಳುವ ವಿಚಾರವನ್ನೇ ಹೇಳುತ್ತಿಲ್ಲ. ಸರಿಯಾಗಿ ವಿಚಾರ ಹೇಳುವುದನ್ನು ಇಲ್ಲಿ ಅವಾಯ್ಡ್ ಮಾಡುತ್ತಿದ್ದೀರಿ. ನೀವು ನಾನು ಏನು ಹೇಳಿದ್ದೇನೆ, ಅವನ್ನೆಲ್ಲಾ ತೋರಿಸಿಕೊಡಿ ಇಲ್ಲಿ ಆಗ ನಾವು ಒಪ್ಪಿಕೊಳ್ಳುತ್ತೇವೆ.

ಶ್ರೀ ವೀರೇಂದ್ರ ಪಾಟೀಲ್.—ಶ್ರೀಮಾನ್ ಹಚ್ಚಮಾಸ್ತಿಗೌಡರು 1959 ರಲ್ಲಿ ಕಾಂಗ್ರೆಸ್ಸು ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿದ್ದರು. 1959 ರ ಸೊವಿನೀರ್‌ನಲ್ಲಿ ಕಾಂಗ್ರೆಸ್ಸು ವಸ್ತುಪ್ರದರ್ಶನದ ಬಗ್ಗೆ ಅವರೇ ಮಾಡಿರುವ ಭಾಷಣದಲ್ಲಿ ಈ ರೀತಿ ಇದೆ:

"ಕಾಂಗ್ರೆಸ್ ರಾಷ್ಟ್ರೀಯ ವಸ್ತುಪ್ರದರ್ಶನವನ್ನು ಯಶಸ್ವಿಗೊಳಿಸಬೇಕೆಂಬ ಸತ್ಸಂಕಲ್ಪದಿಂದ ನಗರದ ಕಾಂಗ್ರೆಸ್ ಕಾರ್ಯಕರ್ತರೆಲ್ಲರೂ ಹಗಲಿರುಳೂ ದುಡಿಯುತ್ತಿದ್ದಾರೆ ಮತ್ತು ವಸ್ತುಪ್ರದರ್ಶನಕಾರರ ಸಂಘದವರೂ ಶ್ರಮಿಸುತ್ತಿದ್ದಾರೆ.

ಈ ಪ್ರದರ್ಶನವನ್ನು ಆಗಗೊಳಿಸಲು ಕೇಂದ್ರ ಸರಕಾರದವರು ಮೈಸೂರು ಸರಕಾರದ ಎಲ್ಲಾ ಇಲಾಖೆಗಳವರೂ ಖಾಸಗೀ ಪ್ರದರ್ಶನಕಾರರೂ ನಗರದ ಕಾರ್ಪೊ

ರೇಷನ್ನಿನವರೂ ಪತ್ರಿಕೋದ್ಯೋಗಿಗಳೂ ಎಲ್ಲರೂ ಎಲ್ಲಾ ವಿಧದಲ್ಲಿಯೂ ಸಹಕಾರ ನೀಡಿದ್ದಾರೆ'' ಇತ್ಯಾದಿ...

ಅವರೂ ಈ ಭಾಷಣವನ್ನು ಒಪ್ಪುತ್ತಾರೆ.

ಶ್ರೀ ಮಹದೇವ ಬಣಕಾರ.—ಸುಭಾಸ್ ನಗರದಲ್ಲಿರುವ ನಿವೇಶನವನ್ನು ಕೊಡಬೇಕು ಎಂದು ಎಲ್ಲಿಯಾದರೂ ಹೇಳಿದ್ದರೆ ಅದನ್ನು ಓದಿ ಹೇಳಿ.

ಶ್ರೀ ವೀರೇಂದ್ರ ಪಾಟೀಲ್.—ಅದೇ ರೀತಿಯಿಂದ ಹಿಂದಿನಿಂದ ಇಲ್ಲಿ ವಸ್ತುಪ್ರದರ್ಶನ ನಡೆಯುತ್ತಿತ್ತು. ಅದೇ ರೀತಿ ಇಂದೂ ಅಲ್ಲಿ ವಸ್ತುಪ್ರದರ್ಶನ ನಡೆಯುತ್ತಿದೆ. ಇವೊತ್ತು ಇಲ್ಲಿ ರುವ ಪ್ರಶ್ನೆ ಏನೆಂದರೆ 1969 ರಲ್ಲಿ ಸರಕಾರದವರು ವಸ್ತುಪ್ರದರ್ಶನದಲ್ಲಿ ಭಾಗ ವಹಿಸುತ್ತಿದ್ದಾರೆಯೇ ಎನ್ನುವುದಕ್ಕಾಗಿ ಇಲ್ಲಿ ಹಿಂದಿನ ಸೋವಿನೀರ್‌ನಲ್ಲಿರುವುದನ್ನು ಓದುತ್ತಿದ್ದೇನೆ. ಮಾನ್ಯ ಸದಸ್ಯರು ಇಲ್ಲಿ ಏನು ಮೋಷನ್ ಕಳುಹಿಸಿದ್ದಾರೆ ಎಂದರೆ ಅವರ ಪ್ರಕಾರ ಕಾಂಗ್ರೆಸ್ಸು ವಸ್ತುಪ್ರದರ್ಶನದಲ್ಲಿ ಕಾಂಗ್ರೆಸ್ಸು ಸರಕಾರದವರು ಭಾಗವಹಿಸುವುದು ಅನುಚಿತ ಎಂದು ಇದರ ಬಗ್ಗೆ ಮಾತನಾಡಲು ಮೂರು ಜನ ಸಹಿ ಇದೆ. ಮಾನ್ಯ ಶ್ರೀ ಶಿವಪ್ಪನವರು ಇದನ್ನು ಒಪ್ಪುತ್ತಾರೆ. ಆದರೆ ಇಲ್ಲಿ ಮಾನ್ಯ ಸದಸ್ಯರಾದ ಶ್ರೀ ಬಣಕಾರರು ಈಗ ನಡೆಸುತ್ತಿರುವ ಕಾಂಗ್ರೆಸ್ಸು ವಸ್ತುಪ್ರದರ್ಶನಕ್ಕೆ ಇರುವ ಜಾಗವನ್ನು ಅವರಿಗೇ ಕೊಡಬೇಕೆಂದು ಸರಕಾರ ಆರ್ಡರು ಮಾಡಿದೆಯೇ ಎನ್ನುವುದು. ಇದನ್ನು ಕೊಡಬೇಕೇ ಬಿಡಬೇಕೇ ಎನ್ನುವುದು ಬೇರೆ ವಿಚಾರ. ಇದರ ಬಗ್ಗೆ ಹೇಳುವ ಹಾಗಿಲ್ಲ. ಅವರು ಹೇಳಿದಂತೆ ನಾವು ವಸ್ತುಪ್ರದರ್ಶನದಲ್ಲಿ ಭಾಗವಹಿಸುತ್ತಿರುವುದು ಇದು ಮೊದಲನೆಯ ಸಲವಲ್ಲ. ಇದು 1957 ರಿಂದಲೂ ನಡೆಯುತ್ತಿದೆ. ಇದರಲ್ಲಿ ಮಾನ್ಯ ಸದಸ್ಯರಾದ ಶ್ರೀ ಚನ್ನಯ್ಯನವರ ಫೋಟೋಗಳು ಇತರರ ಫೋಟೋಗಳು ಇವೆ. ಅವನ್ನೆಲ್ಲಾ 1946 ರಿಂದ ಆಗಿರುವ ಸೊವಿನೀರುಗಳಲ್ಲಿ ನೋಡಬಹುದು. ಇದರಂತೆ ಪ್ರತಿ ವರ್ಷವೂ ಸರಕಾರದವರು ಇದರಲ್ಲಿ ಭಾಗ ವಹಿಸುತ್ತಿದ್ದಾರೆ. ಪ್ರತಿ ವರ್ಷವೂ ಇದರ ಸೊವಿನೀರುಗಳು ಬರುತ್ತಿವೆ ಇವು ಪ್ರಿಂಟೂ ಆಗುತ್ತಿವೆ. ಇದೇನೂ ಹೊಸ ವಿಚಾರವಲ್ಲ.

ಶ್ರೀ ಎಸ್. ಚನ್ನಯ್ಯ.—ಕಾಂಗ್ರೆಸ್ಸು ಸೆಷನ್‌ಗಳೂ ಆಗಿವೆ ಅಲ್ಲಿ ವಸ್ತುಪ್ರದರ್ಶನಗಳೂ ಆಗಿವೆ, ಬೇರೆ ಕಡೆಗಳಲ್ಲೂ ಆಗಿವೆ. ಇದರ ವಿಚಾರವಲ್ಲ ನಾವು ಕೇಳುತ್ತಿರುವುದು.

ಶ್ರೀ ವೀರೇಂದ್ರ ಪಾಟೀಲ್.—ಇವೆಲ್ಲ ಅವರಿಗೆ ಗೊತ್ತಿರುವ ಅನುಭವಗಳು. ನನ್ನ ಅನುಭವ 1956 ರಿಂದ ಈಚೆಗೆ. ಇದಕ್ಕೆ ಮೊದಲಿಂದ ಇಲ್ಲ. ಅವರೇ ಹೇಳಿದ ಹಾಗೆ ಇದರ ಹಾಗೆ ಇಲ್ಲಿ ಅನೇಕ ಚಳುವಳಿಗಳೂ ನಡೆದಿವೆ. 1947 ರಿಂದ ಹಿಂದೆ ಆಗಿರುವುದು ಇಲ್ಲ. ನನ್ನ ಮುಂದಿರುವ ಪ್ರಶ್ನೆ 1946 ರಿಂದ ಸೋವಿನೀರ್‌ನಲ್ಲಿ ಇದ್ದ ವಿಚಾರಗಳನ್ನು ಮಾತ್ರ ಇಲ್ಲಿ ಹೇಳುತ್ತಿದ್ದೇನೆ. ಕೇವಲ ಮೈಸೂರಿನಲ್ಲೇ ಅಲ್ಲ, ವಸ್ತುಪ್ರದರ್ಶನ ನಡೆಯುತ್ತಿರುವುದು, ಮದ್ರಾಸ್‌ನಲ್ಲಿಯೂ ವಸ್ತುಪ್ರದರ್ಶನಗಳು ನಡೆಯುತ್ತಿವೆ. ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ಅನೇಕ ವರ್ಷಗಳಿಂದ ಮದ್ರಾಸ್‌ನಲ್ಲಿ ಕಾಂಗ್ರೆಸ್‌ನವರೇ ವಸ್ತುಪ್ರದರ್ಶನವನ್ನು ನಡೆಸುತ್ತಿದ್ದರು. ಇಂದು ಡಿ.ಎಂ.ಕೆ. ಸರಕಾರ ಇದ್ದರೂ ಅವರೂ ವಸ್ತುಪ್ರದರ್ಶನಗಳನ್ನು ನಡೆಸುತ್ತಿದ್ದಾರೆ. ಅವರೂ ಕೂಡ ನಮ್ಮ ಸರಕಾರವನ್ನು ಇದರಲ್ಲಿ ಭಾಗವಹಿಸಲು 18 ಸ್ಟಾಲುಗಳನ್ನು ಕೊಡುತ್ತೇವೆ ಎಂದೂ ಹೇಳಿದ್ದಾರೆ. ಆದರಂತೆ ಡಿ.ಎಂ.ಕೆ. ಸರಕಾರ ವಸ್ತುಪ್ರದರ್ಶನದಲ್ಲೂ ನಮ್ಮ ರಾಜ್ಯ ಸರಕಾರದವರೂ ಭಾಗವಹಿಸಿದ್ದಾರೆ. ಅದೇ ರೀತಿ ಬೇರೆ ರಾಜ್ಯಗಳಲ್ಲಿ ವಸ್ತುಪ್ರದರ್ಶನಗಳು ಆಗುತ್ತವೆ. ಅಲ್ಲೂ ಸರಕಾರದ ಪರವಾಗಿ ಭಾಗವಹಿಸುತ್ತಾರೆ. ಸುಮಾರು 16-18 ಸ್ಟಾಲುಗಳಲ್ಲಿ ಕಾಂಗ್ರೆಸ್ಸು ವಸ್ತುಪ್ರದರ್ಶನದವರೂ ಭಾಗವಹಿಸಿದ್ದಾರೆ. ಇದಕ್ಕಾಗಿ ಕಾಂಗ್ರೆಸ್ಸು ವಸ್ತುಪ್ರದರ್ಶನದಲ್ಲಿ ಭಾಗವಹಿಸುವುದು ಮಹಾ ಪಾಪ, ಅಪರಾಧ ಎಂದು ಬಹುಶಃ ಯಾರೂ ತಿಳಿದುಕೊಳ್ಳಕೂಡದು.

6-30 P.M.

ಶ್ರೀ ಎಸ್. ಚನ್ನಯ್ಯ.—ತಾವು ಈ ರೀತಿ ತಪ್ಪು ಭಾವನೆ ತಿಳಿದುಕೊಂಡರೆ ತಪ್ಪು ಎಂದು ಹೇಳುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್.—ನೀವು ತಿಳಿದುಕೊಂಡಿಲ್ಲ ಎಂದರೆ ಬಹಳ ಸಂತೋಷ. ಅದಕ್ಕಾಗಿ ಶ್ರೀಮಾನ್ ಚೆನ್ನಯ್ಯನವರನ್ನು ವಂದಿಸುತ್ತೇನೆ.

ಶ್ರೀ ಎಸ್. ಚೆನ್ನಯ್ಯ.—ನಾನು ಹೇಳುವ ವಿಷಯ ಬೇರೆ. ನೀವು ಹೇಳುವ ವಿಷಯ ಬೇರೆ. ಹಣದ ಬಗ್ಗೆ ಮಾತನಾಡುತ್ತಾರೆಯೇ ವಿನಃ ಜಾಗದ ವಿಷಯ ಮಾತನಾಡುತ್ತಾ ಇಲ್ಲ.

ಶ್ರೀ ವೀರೇಂದ್ರ ಪಾಟೀಲ್.—ಶ್ರೀಮಾನ್ ಚನ್ನಯ್ಯನವರಿಗೆ ಈ ವಸ್ತುಪ್ರದರ್ಶನದ ಬಗ್ಗೆ ಆತಂಕ ಇರಬಹುದು ಎಂದು ನನಗೆ ಅನಿಸುತ್ತದೆ. ಇದು ಖಾಯಂ ಆಗಿ ನಡೆಯಬೇಕಾದ ವಸ್ತುಪ್ರದರ್ಶನವಾದುದರಿಂದ ಅದರ ಪ್ರಕಾರ ನಡೆದುಕೊಳ್ಳುತ್ತಿದ್ದೇವೆ. ಈವೊತ್ತು ಬಂದಿರುವ ವಿಚಾರ ಇಷ್ಟೆ. ಇದರ ಬಗ್ಗೆ ಎಷ್ಟು ಖರ್ಚು ಆಗಿದೆ ಎಂಬುದು ಕೇಳಿಲ್ಲ. ಅವರಿಗೆ ಮೊದಲಿನಿಂದಲೂ ಏನು ಫೆಸಿಲಿಟೀಸ್ ಇತ್ತೋ ಅದೇ ಫೆಸಿಲಿಟೀಸ್ 1969 ರಲ್ಲೂ ಕೊಟ್ಟಿದ್ದೇವೆ. ಮೊದಲು ನಾವು ಗ್ರೌಂಡ್ ಕೊಟ್ಟುಬಿಡುತ್ತೇವೆ. ಅನಂತರ ಅದರ ಸುತ್ತ ಕಾಂಪೌಂಡ್ ಹಾಕಿಕೊಳ್ಳುವ ಜವಾಬ್ದಾರಿ, ಬೇಲಿಗಳನ್ನು ಕಟ್ಟಿಕೊಳ್ಳುವ ಜವಾಬ್ದಾರಿ ಅವರದ್ದೇ. ಕೆಲವು ಸ್ಟಾಲ್‌ಗಳನ್ನು ಅವರೇ ಕಟ್ಟಿಕೊಡುತ್ತಾರೆ. ಈ ರೀತಿ ಜವಾಬ್ದಾರಿ ಅವರದ್ದು ಇದೆ. ಪ್ರಾಸ್ಪೆಕ್ಟಸ್ ಬೇಕಾದರೆ ಟೇಬಲ್ ಮೇಲೆ ಇಡಲು ಇಷ್ಟಪಡುತ್ತೇನೆ. ಅದರಲ್ಲಿ ಏನು ಛಾರ್ಜು ಮಾಡುತ್ತಾರೆ ಅವೆಲ್ಲಾ ಷೆಡ್ಯೂಲ್‌ನಲ್ಲಿದೆ. ಈ ಮಾನ್ಯ ಸಭೆಗೆ ಹೇಳುವುದಾವರೆ ವಾಟರ್ ಸಪ್ಲೈಗೆ ಏನು ಛಾರ್ಜು ಆಗುತ್ತದೋ ಅಷ್ಟು ತೆಗೆದುಕೊಳ್ಳುತ್ತಾರೆ. ಎಲೆಕ್ಟ್ರಿಸಿಟಿ ಎಷ್ಟು ಖರ್ಚು ಮಾಡುತ್ತಾರೋ ಅದರ ಬಗ್ಗೆ ಕನ್‌ಸ್ಯೂಮರ್ಸ್‌ಗೆ ಯಾವ ರೇಟ್‌ನಲ್ಲಿ ಕೊಡುತ್ತಾರೋ ಆ ರೀತಿ ಕೊಡುತ್ತಾರೆ. ಕಾಂಗ್ರೆಸ್ ಎಕ್ಸಿಬಿಷನ್ ಎಂದು ಯಾವ ರೀತಿ ಡಿಸ್ಕ್ರಿಮಿನೇಷನ್ ಮಾಡುವುದಿಲ್ಲ. ಅದೇ ರೀತಿ ಪೋಲೀಸ್ ಸ್ಟೇಷನ್ ಹಾಕಿಕೊಳ್ಳುತ್ತಾರೆ. ಪೆವಿಲಿಯನ್‌ನಲ್ಲಿ ಅವರ ಸ್ಟಾಲ್ ಇರುವುದರಿಂದ ಬಂದೋಬಸ್ತ್‌ಗೆ ಛಾರ್ಜು ಇರುವುದಿಲ್ಲ. ಮತ್ತು ಒಳಗಡೆ ಫೈರ್ ಸರ್ವಿಸ್ ಇಂಜಿನ್ ಇಟ್ಟುಕೊಳ್ಳುತ್ತಾರೆ. ಅದಕ್ಕೆ ಏನು ಛಾರ್ಜಸ್ ಆಗುತ್ತದೋ ಅದನ್ನು ಎಕ್ಸಿಬಿಷನ್‌ನವರು ಕೊಡುತ್ತಾರೆ. ಈ ಪ್ರಾಸ್ಪೆಕ್ಟಸ್‌ನಲ್ಲಿ ಎಲ್ಲವನ್ನೂ ಪ್ರಿಂಟ್ ಮಾಡಿದ್ದಾರೆ. 16, 18 ಸ್ಟಾಲುಗಳು ಸರ್ಕಾರದ್ದು ಪೆವಿಲಿಯನ್‌ನಲ್ಲಿ ಇರುತ್ತವೆ. ಎಕ್ಸಿಬಿಷನ್‌ನಲ್ಲಿ ನೂರಾರು ಸ್ಟಾಲುಗಳು ಇರುತ್ತದೆ. ಕೇಂದ್ರ ಸರ್ಕಾರದ್ದೂ, ರಾಜ್ಯ ಸರ್ಕಾರಗಳದ್ದೂ ಎಲ್ಲರದ್ದೂ ಬರುತ್ತದೆ. ಎಲ್ಲರಿಗೂ ಒಂದೇ ದರ, ಎರಡನೆಯವರಿಗೆ ಕಡಿಮೆ ಎನ್ನುವುದೇನೂ ಇಲ್ಲ. ಎಲ್ಲರಿಗೂ ಒಂದೇ ಛಾರ್ಜು ಮಾಡಿದ್ದಾರೆ. ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಪ್ರಾಸ್ಪೆಕ್ಟಸ್ ಕೊಡುತ್ತೇನೆ, ತೆಗೆದುಕೊಳ್ಳಿ. ಪ್ರಾಸ್ಪೆಕ್ಟಸ್ ಪಬ್ಲಿಶ್ ಮಾಡಿದ ಮೇಲೆ ಬಂದ ಅರ್ಜಿಗಳನ್ನು ವಿಲೇವಾರಿ ಮಾಡುತ್ತಾರೆ. ಈ ಪೆವಿಲಿಯನ್‌ನಿಂದ ವರಮಾನ ಬರುತ್ತಿಲ್ಲ ಎಂದು ತಿಳಿದುಕೊಂಡಿದ್ದೇನೆ. ಪ್ರತಿವರ್ಷ ಎಷ್ಟು ಜನ ಮಳಿಗೆಗಳಿಗೆ ಅರ್ಜಿಗಳನ್ನು ಹಾಕಿಕೊಳ್ಳುತ್ತಾರೋ ಅವರೆಲ್ಲರಿಗೂ ಕೊಡುವುದಕ್ಕಾಗುದಿಲ್ಲ. ಸ್ಟಾಲುಗಳನ್ನು ಹಾಕುವುದಕ್ಕೆ ಸಾಕಷ್ಟು ಸ್ಥಳ ಇಲ್ಲ. ಈ ವರ್ಷ 70 ಅಪ್ಲಿಕೇಷನ್ಸ್ ರಿಜೆಕ್ಟ್ ಆಗಿವೆ. ಅಲ್ಲಿ ಕ್ಯೂ ನಿಂತು ತೆಗೆದುಕೊಳ್ಳುತ್ತಾರೆ. ಈ ಒಂದು ಪರಿಸ್ಥಿತಿ ಇದೆ. ಈಗ ನಮ್ಮ ಮುಂದಿರುವ ಪ್ರಶ್ನೆ ಎಕ್ಸಿಬಿಷನ್‌ಗೆ ಸರ್ಕಾರ ಸಹಾಯ ಕೊಡದೇ ಹೋದರೆ ಮುಳುಗಿಕೊಳ್ಳುತ್ತೆ ಎಂದು ಹೇಳುತ್ತಾರೆ. ಆ ರೀತಿ ತಿಳಿದುಕೊಳ್ಳಲು ಸಾಧ್ಯವಿಲ್ಲ. ಮತ್ತು ಅದರಲ್ಲಿ ಸಹಾಯ ಮಾಡುವಂಥ ವಿಚಾರವೇ ಇಲ್ಲ.

ಎರಡನೆಯದಾಗಿ ಖರ್ಚಿನ ಬಾಬುಗಳ ವಿಷಯ. ಎಕ್ಸಿಬಿಷನ್‌ಗೆ ಗ್ರೌಂಡ್ ಕೊಟ್ಟ ಮೇಲೆ ಅದನ್ನು ಆಕ್ಯುಪೈ ಮಾಡಿಕೊಂಡು ಇಂಟರ್‌ನಲ್ ಡೆಕೋರೇಷನ್ ಮಾಡಿಕೊಳ್ಳಬೇಕು. ಎಕ್ಸಿಬಿಷನ್ ಈ ತಿಂಗಳು 12–13ಕ್ಕೆ ಪ್ರಾರಂಭ ಮಾಡಬಹುದು ಎಂದು ಕೇಳಿದ್ದೇನೆ. ಅವರು ಸ್ಟಾಲ್ ಕೊಟ್ಟ ಮೇಲೆ ಅನಂತರ ಒಳಗಡೆ ಅವರ ಡಿಕ್ಷನ್, ಅವರ ರಿಕ್ವೈರ್‌ಮೆಂಟ್ಸ್ ಅದನ್ನೆಲ್ಲಾ ನೋಡಿಕೊಂಡು ಫ್ರಂಟ್ ಎಲಿವೇಷನ್ ಅವೆಲ್ಲಾ ಮಾಡಿಕೊಳ್ಳಬೇಕಾಗುತ್ತದೆ. ಅದಕ್ಕಾಗಿ 1969 ರಲ್ಲಿ ಎಷ್ಟು ಖರ್ಚು ಎಂದು ಹೇಳುವುದಕ್ಕಾಗುವುದಿಲ್ಲ. ಎಕ್ಸಿಬಿಷನ್ ಮುಗಿದ ಮೇಲೆ ಅವರ್ದು ಬಿಲ್ಸ್ ಬರುತ್ತವೆ. ಎಲೆಕ್ಟ್ರಿಸಿಟಿ ಮತ್ತು ವಾಟರ್‌ಗೆ ಕನ್‌ಸ್ಯೂಮರ್‌ಗೆ ಯಾವ ರೀತಿ ದರ ಇದೆಯೋ ಆ ರೀತಿ ಪೇಮೆಂಟ್ ಮಾಡುವುದಕ್ಕೆ ಬಂದಾಗ ಹೇಳುವುದಕ್ಕೆ ಸಾಧ್ಯವಾಗುತ್ತದೆ. ಈವೊತ್ತಿನ ದಿವಸ ಅದನ್ನು ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಸ್. ಶಿವಪ್ಪ.—1968 ರದ್ದು ಹೇಳುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—1968ರಲ್ಲಿ ನಾವು ಕೊಟ್ಟಿದ್ದು 2,08,476 ರೂಪಾಯಿ—19 ಪೆವಿಲಿಯನ್‌ಗಳು. 1967 ರಲ್ಲಿ 1,29,372·50—17 ಪೆವಿಲಿಯನ್‌ಗಳು. 1966 ರಲ್ಲಿ 1,00,828·00—9 ಮಳಿಗೆಗಳು. ವಾಟರ್ ಸಪ್ಲೈ 1965–66 ರಲ್ಲಿ ಕಟ್ಟಿದ್ದು 2,395.03. 1966–67 ರಲ್ಲಿ 4,666·91 ಪೈಸೇ. 1967–68 ರಲ್ಲಿ 5,699·72 ಪೈಸೇ. ಇನ್ನು ಎಲೆಕ್ಟ್ರಿಸಿಟಿ ಛಾರ್ಜಸ್: 1966 ರಲ್ಲಿ 11,296·35 ಪೈಸೇ. 1967 ರಲ್ಲಿ 16,307·00, 1968 ರಲ್ಲಿ 25,422·36 ಪೈಸೇ. ಇನ್ನು ಪೋಲೀಸ್ ಬಂದೋಬಸ್ತ್‌ಗಾಗಿ 1968 ರಲ್ಲಿ 14,670 ರೂಪಾಯಿ, ಅದಕ್ಕಿಂತ ಮೊದಲು ಅವರು ಛಾರ್ಜಸ್ ಮಾಡುತ್ತಾ ಇರಲಿಲ್ಲ, ಅವರಿಗೆ ನಾವೂ ಕೂಡ ಕೆಲವು ಛಾರ್ಜಸ್ ಮಾಡುತ್ತಾ ಇರಲಿಲ್ಲ.

ಇದರಲ್ಲಿ ಒಂದು ವಿಚಾರ ಬಹಳ ಮುಖ್ಯವಾದುದಿದೆ. ಅದರ ಬಗ್ಗೆ ಮಾಹಿತಿಯನ್ನು ಸಂಗ್ರಹಿಸುವುದಕ್ಕೆ ಪ್ರಯತ್ನ ಮಾಡಿವೆ. ವಸ್ತು ಪ್ರದರ್ಶನದಲ್ಲಿ ಬಹುಮಟ್ಟಿಗೆ ನಮಗೆ ಮಾರಾಟತೆರಿಗೆ ಬರುತ್ತದೆ. ಆ ಮಾಹಿತಿಯನ್ನು ಒಂದು ದಿವಸದಲ್ಲಿ ಸಂಗ್ರಹಿಸುವುದಕ್ಕೆ ಸಾಧ್ಯವಾಗಲಿಲ್ಲ. ಲಕ್ಷಾವಧಿ ರೂಪಾಯಿ ಮಾರಾಟ ತೆರಿಗೆಯ ಮೂಲಕ ಸರ್ಕಾರಕ್ಕೆ ಬರುತ್ತದೆ. ಇದರ ಬಗ್ಗೆ ಮಾಹಿತಿ ಬಂದ ತಕ್ಷಣ ಸಭೆಗೆ ತಿಳಿಸುತ್ತೇನೆ.

ವಸ್ತು ಪ್ರದರ್ಶನದಲ್ಲಿ ಲಾಭ ಬರುವುದಕ್ಕೇ ಅದರಲ್ಲಿ ನಾವು ಭಾಗ ವಹಿಸುವುದಕ್ಕೆ ಆಗುವುದಿಲ್ಲ. ಪಬ್ಲಿಸಿಟಿ ಬರುತ್ತದೆ. ಪ್ರತಿಯೊಂದು ವಸ್ತು ಪ್ರದರ್ಶನದಲ್ಲಿಯೂ, ಅದು ಯಾರಿಂದಲೇ ನಡೆಯಲಿ, ಸಾಮಾನ್ಯವಾಗಿ ನಾವು ಭಾಗವಹಿಸುತ್ತೇವೆ. ಈ ವಿಚಾರದಲ್ಲಿ ವಿರೋಧ ಪಕ್ಷದವರು ದೊಡ್ಡ ಮನಸ್ಸು ಮಾಡುವುದು ಬಹಳ ಅವಶ್ಯವಿದೆ. ನಾನು ಬಂದಮೇಲೆ ಹೊಸದಾಗಿ ಏನೂ ಮಾಡಿಲ್ಲ. 22-23 ವರ್ಷಗಳಿಂದ, ಸ್ವಾತಂತ್ರ್ಯ ಬರುವುದಕ್ಕೆ ಮೊದಲಿನಿಂದಲೂ ನಡೆದುಕೊಂಡು ಬಂದಿದೆ. ಅವನ್ನು ನಾವೂ ನಡೆಸಿಕೊಂಡು ಬಂದಿದ್ದೇವೆ. ಮಾನ್ಯ ಚನ್ನಯ್ಯನವರು, ಹುಚ್ಚಮಾಸ್ತಿ ಗೌಡರು, ಇವರೆಲ್ಲ ಏನು ನಡೆಸಿಕೊಂಡು ಬಂದಿದ್ದರೋ ಅದನ್ನೇ ನಡೆಸಿಕೊಂಡು ಬಂದಿದ್ದೇವೆ ಎನ್ನುವಂಥ ಮಾತನ್ನು ಹೇಳುತ್ತೇನೆ.

ಶ್ರೀ ಎಸ್. ಚನ್ನಯ್ಯ.—ನಾವು ನಡೆಸುತ್ತಿದ್ದ ರೀತಿಯಲ್ಲಿ ಮಾತ್ರ ನಡೆಯುತ್ತಿಲ್ಲ ಎಂದು ಹೇಳುತ್ತೇನೆ.

ಶ್ರೀ ಎನ್ ಹುಚ್ಚಮಾಸ್ತಿ ಗೌಡ.—ಈ ವಿಷಯದ ಪ್ರಸ್ತಾಪ ಮಾಡಿದ್ದರ ಉದ್ದೇಶ 99 ವರ್ಷ ಕಾಂಗ್ರೆಸ್ಸಿಗೆ ಗುತ್ತಿಗೆಗೆ ಕೊಡಬೇಕು ಎನ್ನುವ ಉದ್ದೇಶ ಕಂಡುಬಂದುದರಿಂದ. ಈ ಹಿನ್ನೆಲೆಯಿಂದ ಇದರ ವಿಷಯ ಪ್ರಸ್ತಾಪ ಮಾಡಲಾಯಿತು. ಏನ್ನುವುದನ್ನು ಯಾರೂ ಮರೆಯಬಾರದು. ಅವನ್ನು ಇದರಲ್ಲಿ ಏಕೆ ಸೇರಿಸಲಿಲ್ಲ. ಏಕೆಂದರೆ ಮಾನ್ಯ ಮುಖ್ಯ ಮಂತ್ರಿಯವರು ವಿರೋಧಪಕ್ಷದ ನಾಯಕರ ಜೊತೆಯಲ್ಲಿ ಪ್ರಸ್ತಾಪ ಮಾಡುತ್ತೇನೆ ಎನ್ನುವ ಭರವಸೆಯನ್ನು ಕೊಟ್ಟದ್ದರಿಂದ ಸೇರಿಸಲಿಲ್ಲವೇ ಹೊರತು ಮತ್ತೇನೂ ಅಲ್ಲ. ಅದನ್ನೇ ನೇರವಾಗಿ ಬರೆದು ಕಳಿಸಬಹುದಾಗಿತ್ತು. ಈ ಹಿನ್ನೆಲೆಯನ್ನು ಮರೆಯದೆ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ ಮಾತನ್ನು ನಾವು ತೆಗೆದುಕೊಂಡರೆ, ಕಾಂಗ್ರೆಸ್ ಪಕ್ಷ ವಸ್ತು ಪ್ರದರ್ಶನವನ್ನು ನಡೆಸಬಾರದು ಎಂಬುದು ಏನೂ ಇಲ್ಲ. ಅವರು ಅಲ್ಲಿ ನಡೆಸಬಹುದು, ಬೇರೆ ಕಡೆ ನಡೆಸಬಹುದು. ಆದರೆ ಅವರಿಗೆ ಸುಭಾಷ್ ನಗರ ಪ್ರದೇಶವನ್ನು ಕೊಡುವುದಿಲ್ಲ ಎನ್ನುವ ಭರವಸೆ ಕೊಟ್ಟರೆ ಈ ಪ್ರಶ್ನೆಯನ್ನು ನಾವು ಒತ್ತಾಯ ಮಾಡತಕ್ಕ ಅಗತ್ಯವಿರುವುದಿಲ್ಲ. ಇದು ಮುಖ್ಯವಾದ ವಿಚಾರ.

ಸರ್ಕಾರ ಅಲ್ಲಿ ಖರ್ಚು ಮಾಡುವಾಗ ನಾನಾ ತರಹ ವ್ಯತ್ಯಾಸ ಮಾಡುತ್ತಿರುವುದು ಇಚೆಗೆ ಕಂಡುಬಂದಿದೆ. ವ್ಯತ್ಯಾಸ ಮಾಡುತ್ತಿರುವುದನ್ನು ನಿಲ್ಲಿಸಬೇಕು.

ಶ್ರೀ ಎಸ್. ಶಿವಪ್ಪ.—ಮಾನ್ಯ ಮುಖ್ಯ ಮಂತ್ರಿಯವರು ದೀರ್ಘವಾಗಿ ಉತ್ತರ ಕೊಟ್ಟಿದ್ದಾರೆ. ಅವರ ಹೇಳಿಕೆ ಪ್ರಕಾರವಾಗಿ ಏನು ಕಾಣಿಸುತ್ತದೆಂದರೆ ಕಾಂಗ್ರೆಸ್ ಸರ್ಕಾರ ಕಾಂಗ್ರೆಸ್ ಪಕ್ಷ ನಡೆಸುತ್ತಿರುವ ವಸ್ತು ಪ್ರದರ್ಶನಕ್ಕೆ, ನನ್ನ ಪಕ್ಷ ನಡೆಸುತ್ತದೆ ಎನ್ನುವ ಪ್ರೇಮದಿಂದ ವರ್ಷಕ್ಕೆ ಒಂದೆರಡು ಲಕ್ಷ ರೂಪಾಯಿಗಳನ್ನು ನಾನಾ ರೀತಿಯಿಂದ ಕೊಡುತ್ತ ಬಂದಿದೆ. 1969ನೇ ಇಸವಿಯಲ್ಲಿ ಅದು ಮೂರು ಲಕ್ಷವಾಗಬಹುದು. 1966ರಿಂದ 1969ಕ್ಕೆ ಒಂದಕ್ಕೆ ಮೂರರಷ್ಟು ಆಗಬಹುದು. ಮದ್ರಾಸಿನಲ್ಲಿ ಡಿ. ಎಂ. ಕೆ. ಸರ್ಕಾರ ಏನೂ ಕೊಡುತ್ತಿಲ್ಲ. ಅವರು ಪಕ್ಷದಿಂದಲೇ ಖರ್ಚು ಮಾಡುತ್ತಾರೆ. ಆದರೆ ಇಲ್ಲಿ ಕಾಂಗ್ರೆಸ್ ಸರ್ಕಾರ ಕಾಂಗ್ರೆಸ್ ಪಕ್ಷಕ್ಕೆ ದುಡ್ಡು ಕೊಡುತ್ತಿದೆ. ನನ್ನ ಕಾಲದಲ್ಲಿ ಪ್ರಜಾಪ್ರಭುತ್ವ ಉಳಿಯಬೇಕು, ಅದಕ್ಕೆ ಧಕ್ಕೆ ಬರತಕ್ಕ ವಿಚಾರವನ್ನು ಮಾಡುವುದಿಲ್ಲ ಎಂದು ಹೇಳಿದ್ದಾರೆ. ಕಾಂಗ್ರೆಸ್ ಪಕ್ಷಕ್ಕೆ ನಮ್ಮ ಸರ್ಕಾರದವರು ಖಜಾನೆಯಿಂದ ಕೊಡತಕ್ಕ ಹಣವನ್ನು ಆದಷ್ಟೂ ಕಡಮೆ ಮಾಡಬೇಕು ಎನ್ನುವ ಉದ್ದೇಶದಿಂದ ಈ ಸೂಚನೆಯನ್ನು ನಾವು ತಂದಿದ್ದೇವೆ.

ಶ್ರೀ ಎಂ. ಜಿ. ಬಣಕಾರ್.—ಸ್ವಾಮಿ, ಮಹಾಜನ್ ಆಯೋಗದ.........

ಅಧ್ಯಕ್ಷರು.—ಇದೀಗ ಮಾನ್ಯ ಸದಸ್ಯರಾದ ಶ್ರೀ ಕಮದಂ ಅವರು ಏನು ಕೇಳಬೇಕೆಂದಿದ್ದರು ಮಾಡಿದ್ದರೋ ಅದನ್ನೇ ಈಗ ಮಾನ್ಯ ಸದಸ್ಯರು ಕೇಳಲು ಪ್ರಯತ್ನ ಮಾಡುತ್ತಿದ್ದಾರೆ. ಆ ವಿಚಾರಕ್ಕೆ ಸಭೆಯಲ್ಲಿದ್ದ ಎಲ್ಲ ಸದಸ್ಯರು ಅಭಿಪ್ರಾಯ ತಿಳಿಸಿದರು. ಆದ್ದರಿಂದ ಮಾನ್ಯ ಸದಸ್ಯರು ಮತ್ತೆ ಆ ವಿಷಯವನ್ನು ಪ್ರಸ್ತಾಪ ಮಾಡಬಾರದು ಬೇಡ.

ಶ್ರೀ ವಾಟಾಳ್ ನಾಗರಾಜ್.—ನಾನು 59ನೇ ರೂಲ್ ಪ್ರಕಾರ ಒಂದು ನಿಲುವಳಿ ಸೂಚನೆಯನ್ನು ಕಳಿಸಿದ್ದೆ ....

ಅಧ್ಯಕ್ಷರು.—ವಿರೋಧ ಪಕ್ಷದ ನಾಯಕರು, ಮಾನ್ಯ ಸದಸ್ಯರಾದ ಚನ್ನಯ್ಯನವರು, ಹುಚ್ಚಮಾಸ್ತಿಗೌಡರು, ಇವರೆಲ್ಲ ಈ ಸೂಚನೆಯನ್ನು ಯಾವಾಗ ಕೊಟ್ಟರು ಆ ಕಾಲಕ್ಕೆ ವಸ್ತು ಪ್ರದರ್ಶನಕ್ಕೆ ಸಂಬಂಧಪಟ್ಟ ಒಂದೇ ಮೋಷನ್ ಇರಬೇಕು ಬೇರೆ ಯಾವುದೂ ಇರಬಾರದು ಎನ್ನುವ ಸ್ಪಷ್ಟೀಕರಣದಮೇಲೆ ಈ ಸೂಚನೆಗ ಅವಕಾಶವನ್ನು ಕೊಡಲಾಯಿತು. ವಿರೋಧ ಪಕ್ಷದ ನಾಯಕರು ಹೇಳುವ ಮಾತನ್ನು ಮಾನ್ಯ ಸದಸ್ಯರು ಒಪ್ಪಿಕೊಳ್ಳಬೇಕು. ಆದ್ದರಿಂದ ಮಾನ್ಯ ಸದಸ್ಯರ ಸೂಚನೆಗೆ ನಾನು ಮಂಜೂರಾತಿ ಕೊಟ್ಟಿಲ್ಲ, ಆದ್ದರಿಂದ ಅವರು ಆ ವಿಷಯವನ್ನು ಸಭೆಯಲ್ಲಿ ಪ್ರಸ್ತಾಪ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್.—ನಿಮ್ಮ ಕಡೆಯವರಿಗೆ ಕೊಟ್ಟಿರುವುದಕ್ಕೆ ನನ್ನ ಅಭ್ಯಂತರವಿಲ್ಲ. ಆದರೆ ನನ್ನ ಪ್ರಶ್ನೆಯೇನೆಂದರೆ ಮುಖ್ಯ ಮಂತ್ರಿಗಳು ತಿಪ್ಪೆ ಸಾರಿಸಿ ಹೇಳಿಕೆ ಕೊಟ್ಟಿದ್ದಾರೆ, ನಾಳೆ ಪತ್ರಿಕೆಗಳಲ್ಲಿ ಬರುವುದನ್ನು ಓದಿದರೆ ಜನರಿಗೇನು ಅಭಿಪ್ರಾಯ ಬರುತ್ತದೆ ಎಂಬುದನ್ನು ಆಲೋಚನೆ ಮಾಡಬೇಕು. ವರ್ಷಕ್ಕೆ ಕಾಂಗ್ರೆಸ್ ಪಕ್ಷಕ್ಕೆ ಎರಡೂವರೆ ಲಕ್ಷ ರೂಪಾಯಿ ಕೊಡುತ್ತಾರೆ. ಅವರ ಹೇಳಿಕೆ ಸಂಪೂರ್ಣವಾಗಿ ಸರಿಯಿಲ್ಲ.

ಅಧ್ಯಕ್ಷರು.—ತಾವು ಹೇಳಿರುವುದೆಲ್ಲಾ ರಿಕಾರ್ಡಾಗಿದೆ, ತಾವು ಕೂಡಿ.

Budget Estimates for 1969-70—Demands for Grant Demand Nos. 6, 29, 30, 30A, 30B, 31, 31A, 32, 42, 43, 45, 47, 48 and 50.

(Debate Continued)

Mr. SPEAKER.—Let us now take up the next item on the Agenda. May I know what time is required for Government to reply?

Sri VEERENDRA PATIL.—In all, we three, myself, Minister for Public Works and Minister of State for Ports, are participating in the debate, and we may take one hour.

Mr. SPEAKER.—Then, I think the time will have to be extended by one hour.

ಶ್ರೀ ಎಸ್. ಚನ್ನಯ್ಯ.—ನಮ್ಮ ಕಡೆ ಮಾತನಾಡುವವರು ಇನ್ನೂ ಇದ್ದಾರೆ.

ಅಧ್ಯಕ್ಷರು.—ಇಬ್ಬರು ನಾಯಕರು ಸೇರಿ ಎರಡು ಷೆಡ್ಯೂಲು ತಯಾರು ಮಾಡಿದ್ದಾರೆ, ವಿರೋಧ ಪಕ್ಷದ ಪರವಾಗಿ ಹುಚ್ಚಮಾಸ್ತಿಗೌಡರು ಮತ್ತು ಆಡಳಿತ ಪಕ್ಷದ ಪರವಾಗಿ ಅಗ್ನಿಹೋತ್ರಿಯವರು ದಿನವೂ ಹೆಸರುಗಳನ್ನು ಬರೆದು ಕೊಟ್ಟು ಷೆಡ್ಯೂಲು ತಯಾರಿಸುತ್ತಿದ್ದಾರೆ. ಅದನ್ನು ಬಿಟ್ಟು ನಡೆಯುವುದಾದರೆ, ಇಬ್ಬರು ನಾಯಕರೂ ಕೂಡಿ ಹೇಳಿದರೆ ಒಳ್ಳೆಯದು. ಇಲ್ಲದಿದ್ದರೆ ನಾನೇನು ಮಾಡಲಿ!

ಶ್ರೀ ಎಸ್. ಚನ್ನಯ್ಯ.—ತಮ್ಮ ಮೂಲಕ ನಾಯಕರಿಗೆ ಹೇಳುತ್ತೇನೆ. ನಮಗೆ ಮಾತನಾಡುವುದಕ್ಕೆ ಅವಕಾಶ ಕೊಡಿ. ನೀವು ಬೆಳಿಗ್ಗೆ ಸ್ಪೆಷಲ್ಲಾಗಿ ಸಭೆ ಇಟ್ಟುಕೊಂಡು ಜವಾಬು ಕೊಟ್ಟರೆ ಅನುಕೂಲವಾಗುವುದು, ಹಾಗೆ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ತಾವು ಹಿರಿಯರು. ನಾನಾದರೂ ಏನು ಮಾಡಲಿ! ಒಮ್ಮತದಿಂದ ಕರಾರು ಆಗಿದೆ. ಅದನ್ನು ಹೆಚ್ಚುಕಡಮೆ ಮಾಡಬೇಕಾದರೆ ಅವರ ಒಪ್ಪಿಗೆ ಬೇಕು.

Sri S. SIVAPPA.—Today, we are discussing demands totalling about Rs. 98 crores, *i.e.*, nearly half the Budget. On these important demands, if there were to be no full discussion, we may not be doing full justice.

Unless there is full discussion, it may not be possible even for the Chief Minister to reply on vital subjects, like river waters, irrigation projects, etc. Therefore, the Hon. Chief Minister should hear some of the important suggestions by members. So many things crop up in the middle ; it is not in our hands.

ಅಧ್ಯಕ್ಷರು.—ಎರಡು ದಿವಸ ಅವಕಾಶ ಕೊಟ್ಟಿತ್ತು, ಆಗ ಬೇಕಾದ್ದು ಹೇಳಬಹುದಾಗಿತ್ತು.

Sri S. SIVAPPA.—I know the Hon. Chief Minister is going to Delhi tomorrow. Therefore, as Sri Channaiah suggested, if possible, we can sit in the morning tomorrow and the Chief Minister and other Ministers can reply, and today we can discuss the Demands for another two hours. That is the only way out.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮೊಟ್ಟಮೊದಲು ಕಾರ್ಯಕ್ರಮ ಗೊತ್ತುಮಾಡಿದಾಗ ಎರಡೂವರೆ ಗಂಟೆ ಕಾರ್ಯಕ್ರಮ ಬರುತ್ತದೆಂಬುದು ಗೊತ್ತಿರಲಿಲ್ಲ. ಮಧ್ಯೆ ಅದು ಬಂದುದರಿಂದ ಹೆಚ್ಚು ಜನರು ಮಾತನಾಡಲು ಅವಕಾಶವಾಗಲಿಲ್ಲ. ಸಾಯಂಕಾಲ ಹೆಚ್ಚು ಹೊತ್ತು ಕೂತರೂ ಬೆಳಿಗ್ಗೆ ಉತ್ತರ ಕೊಡಲಿ, ಇಂದು ಚರ್ಚೆ ನಡೆಯಲಿ. ಇದಕ್ಕೆ ಮುಖ್ಯ ಮಂತ್ರಿಗಳನ್ನು ಒಪ್ಪಿಸಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇವೆ. ಇದಕ್ಕೆ ಒಪ್ಪಿಗೆ ಕೊಟ್ಟರೆ ಎರಡು ಗಂಟೆ ಚರ್ಚೆ ಮಾಡಲು ಅವಕಾಶವಾಗುತ್ತದೆ. ದಯೆಯಿಟ್ಟು ಇದಕ್ಕೆ ಮುಖ್ಯ ಮಂತ್ರಿಗಳು ಒಪ್ಪಿಗೆ ಕೊಡಬೇಕು.

ಶ್ರೀ ಎಸ್. ವಿ. ಅಗ್ನಿಹೋತ್ರಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಹುಚ್ಚಮಾಸ್ತಿಗೌಡರು ನಾನು ಮತ್ತು ಸೆಕ್ರೆಟರಿಯವರು ಕುಳಿತು ಈ ಪ್ರಕಾರ ಕಾರ್ಯಕ್ರಮ ನಡೆಯಬೇಕೆಂದು ಒಂದು ನಿರ್ಣಯ ಮಾಡಿದ್ದೆವು. ಈಗ ಏಳು ಗಂಟೆಯಾಗುತ್ತಾ ಬಂತು, ಎರಡು ತಾಸು ಕೂತರೂ ಚಿಂತೆಯಿಲ್ಲ, ಇಂದೇ ಈ ಚರ್ಚೆಯನ್ನು ಮುಗಿಸಬೇಕು ಎಂದು ಹೇಳುತ್ತೇನೆ.

ಶ್ರೀ ಕೆ. ಎಚ್. ರಂಗನಾಥ್.—ರೂಲ್ 59 ರ ಪ್ರಕಾರ ಡಿಸ್‌ಕಷನ್ ರೈಸ್ ಮಾಡಲು ಎರಡೂವರೆ ಗಂಟೆ ಅವಕಾಶ ತಾವು ಕೊಡುತ್ತೀರಿ. ನಾವು ಡಿಮ್ಯಾಂಡ್ ಮೇಲೆ ಮಾತನಾಡಲು ನಮಗೆ ಹಕ್ಕಿದೆ, ಅದನ್ನು ಮೊಟಕುಮಾಡುವುದು ಅಷ್ಟು ಸಾಧುವಲ್ಲ. ಬೇಕಾದರೆ ಒಂದೇ ದಿವಸದಲ್ಲಿ ಗಿಲಟಿನ್‌ಗೆ ಹಾಕಿ ಮುಗಿಸಬಹುದು. ನಿನ್ನೆ ಕೂಡ ಕೇವಲ ಮೂರು-ನಾಲ್ಕು ಜನರು ಮಾತನಾಡಿದ್ದಾರೆ, ಬೇರೆ ವಿಷಯಕ್ಕೆ ಕಾಲ ವಿನಿಯೋಗವಾಯಿತು. ನಮ್ಮ ಹಕ್ಕನ್ನು ಕಳೆದುಕೊಳ್ಳಲು ನಾವು ತಯಾರಿಲ್ಲ. ಈ ವಿಚಾರ ಗಮನಿಸಿ ಅವಕಾಶ ಕೊಟ್ಟರೆ ಅನುಕೂಲವಾಗುತ್ತದೆ.

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ, ವಿರೋಧ ಪಕ್ಷದ ನಾಯಕರು ಮತ್ತು ಸದಸ್ಯರು ಹೇಳುತ್ತಿದ್ದಾರೆ, ಅವಕಾಶ ಬೇಕೆಂದು ಅವರು ಕೇಳುವುದರಿಂದ ಇವತ್ತು ಎಂಟು ಗಂಟೆಯವರೆಗೆ ಚರ್ಚೆಮಾಡಿ ನಾಳೆ ಉತ್ತರ ಕೊಡಲು ಅವಕಾಶ ಕೊಟ್ಟರೆ ಆಗಬಹುದು. ನಾಳೆ ನಾನು ದೆಹಲಿಗೆ ಹೋಗಬೇಕು, ಬಹಳ ಗಹನವಾದ ವಿಚಾರ ಅಲ್ಲಿ ಚರ್ಚೆಗೆ ಬರುತ್ತದೆ, ಅದಕ್ಕೆ ಕೆಲವು ಅಧಿಕಾರಿಗಳೊಡನೆ ಚರ್ಚೆಮಾಡಬೇಕು, ಫೈಲುಗಳನ್ನು ನೋಡಬೇಕು, ಹಿಂದಿನ ಚರಿತ್ರೆ ಇತ್ಯಾದಿ ನೋಡಬೇಕು, ಇದಕ್ಕೆ ಸಮಯವಿರಬೇಕು, ನಾಳೆ ಬಿಡುವಿದ್ದರೆ ಉತ್ತಮವಾಗಿತ್ತು. ಆದರೆ ಮಾನ್ಯ ಸದಸ್ಯರು ಒತ್ತಾಯ ಮಾಡುತ್ತಿದ್ದಾರೆ. ಈ ವಿಚಾರ ತಮಗೆ ಬಿಟ್ಟಿದೆ, ಅವಕಾಶ ಕೊಡಬಹುದು.

Mr. SPEAKER.—I am very glad that a request was made and it is accepted. I think, we may sit today up to 8-30 P.M. and tomorrow the Ministers will reply. Since the time to be extended is beyond one hour, I will have to take the consent of the House. Is it the pleasure of the House, that the time for these Demands be extended by two hours ?

HON. MEMBERS.—Yes.

Mr. SPEAKER.—Now the House will sit up to 8-30 P.M. and meet tomorrow again at 9-00 A.M.

7-00 P.M.

ಶ್ರೀ ಎನ್. ಜಿ. ಹಾಲಪ್ಪ (ಚನ್ನಗಿರಿ).—ಸನ್ಮಾನ್ಯ ಅಧ್ಯಕ್ಷರೇ, ಈ ಸಭೆಯ ಮುಂದೆ ಇರುವ ಬೇಡಿಕೆಗಳನ್ನು ವಿರೋಧಿಸುತ್ತಾ ನಾಲ್ಕು ಮಾತುಗಳನ್ನಾಡಬೇಕೆಂದು ಇಚ್ಛೆಪಡುತ್ತೇನೆ. ಈ ಇಲಾಖೆಗೆ ಲೋಕೋಪಯೋಗಿ ಇಲಾಖೆ ಎಂದು ಹೆಸರಿಟ್ಟಿದ್ದರೂ ಇದು ನಮ್ಮ ಸರ್ಕಾರದ ಒಂದು ಅತಿ ಪ್ರಾಮುಖ್ಯವಾದ ಇಲಾಖೆ ಎಂಬುದರಲ್ಲಿ ಭಿನ್ನಾಭಿಪ್ರಾಯವಿಲ್ಲ. ವಸ್ತುತಃ ಈ ಹೆಸರಿನಲ್ಲಿರತಕ್ಕ ಒಂದು ಗುಣ ಮಹತ್ವ ಇದರಲ್ಲಿ ಇದೆಯೇ ಎಂದರೆ ಖಂಡಿತವಾಗಿಯೂ ಇಲ್ಲ, ಇದಕ್ಕೆ ಬೇರೆ ಒಂದು ಹೆಸರನ್ನಿಡಬೇಕೆಂದು ನನ್ನ ಅಭಿಪ್ರಾಯ. ಇವತ್ತಿನ ದಿವಸ ಇದು ಲೋಕ ಅಪಾಯ ಇಲಾಖೆಯಾಗಿ ಪರಿಣಮಿಸಿದೆ. ನೂರು ಕೋಟಿ ರೂಪಾಯಿ ಖರ್ಚು ಮಾಡತಕ್ಕ ಈ ಇಲಾಖೆಯಲ್ಲಿ ಕೆಲಸ ಮಾಡತಕ್ಕ ಅಧಿಕಾರಿಗಳು ಮತ್ತು ಈ ಶಾಖೆಯ ಮಂತ್ರಿಗಳು ಎಷ್ಟು ದಕ್ಷತೆ ಮತ್ತು ಪ್ರಾಮಾಣಿಕತೆಯಿಂದ ಇದರ ಕೆಲಸವನ್ನು ಮಾಡುತ್ತಾರೆಯೋ ಅಷ್ಟು ದೇಶಕ್ಕೆ ಉಪಕಾರವಾಗುತ್ತದೆ. ಇವತ್ತಿನ ದಿವಸ ವಸ್ತುಸ್ಥಿತಿ ಅದಕ್ಕೆ ವಿರುದ್ಧವಾಗಿದೆ. ಇದನ್ನು ನಾವು ಬಹಳ ವಿಷಾದದಿಂದ ಹೇಳಬೇಕಾದ ಪರಿಸ್ಥಿತಿ ಬಂದೊದಗಿದೆ. ನಮ್ಮ ಸರ್ಕಾರದಲ್ಲಿ ಯಾವ ಯೋಜನೆ ಮಾಡಿದರೂನೂ ಹಣ ಇಲ್ಲ. ಹಣದ ಕೊರತೆ ಇದೆ ಮತ್ತು ಸಾಕಾದಷ್ಟು ಬಡ್ಜೆಟ್‌ನಲ್ಲಿ ನೀರಾವರಿ ಬಗ್ಗೆ ಹಣ ಒದಗಿಸಲಿಕ್ಕೆ ಆಗಲಿಲ್ಲ ಎಂಬ ವಾದ ಕೇಳಿ ಬರುತ್ತಾ ಇದೆ. ಇವತ್ತಿನ ದಿವಸ ಈ ಇಲಾಖೆಯಲ್ಲಿರತಕ್ಕ ಅಧಿಕಾರಿಗಳು ಮತ್ತು ಸಂಬಂಧಪಟ್ಟ ಮಂತ್ರಿಗಳು ಸ್ವಲ್ಪ ಇದರ ಲಗಾಮನ್ನು ಬಿಗಿ ಹಿಡಿದರೆ ಇದರಲ್ಲಿರತಕ್ಕ ಅಪವ್ಯಯವನ್ನು ಕಡಿಮೆ ಮಾಡಿದರೆ, ಭ್ರಷ್ಟಾಚಾರವನ್ನು ಕಡಿಮೆ ಮಾಡಿದರೆ ಬಹುಶಃ ಹಣವನ್ನು ನಮ್ಮ ಯೋಜನೆಗಳಿಗೆ ಉಳಿಸಬಹುದು ಎಂದು ಅನ್ನಿಸುತ್ತದೆ. ಇವತ್ತಿನ ದಿವಸ ಈ ಇಲಾಖೆಯಲ್ಲಿ ನಡೆಯತಕ್ಕ ಭ್ರಷ್ಟಾಚಾರ ಬಹಳ ಮಿತಿಮೀರಿ ಹೋಗಿದೆ, ಇದಕ್ಕೆ ಇಲ್ಲಿನವರೆಗೂ ಬಂದಿರತಕ್ಕ ಮಂತ್ರಿಗಳು ಯಾವ ತರಹದಲ್ಲಿಯೂ ಕೂಡ ಸರಿಯಾದ ಲಗಾಮನ್ನು ಹಾಕಿಲ್ಲ, ದಿನದಿಂದ ದಿನಕ್ಕೆ ಬಹಳವಾಗಿ ಹೆಚ್ಚಾಗುತ್ತಾ ಇದೆ. ಒಂದು ನಿದರ್ಶನ ಹೇಳಬೇಕೆಂದರೆ—ಇದು ಅವರಿಗೂ ಗೊತ್ತಿದೆ ಆದರೆ ಕಂಟ್ರೋಲ್ ಮಾಡುವುದಕ್ಕೆ ಮನಸ್ಸು ಇಲ್ಲವೇನೋ ಎಂದು ಶಂಕೆ ಬರುತ್ತಾ ಇದೆ ಇವತ್ತಿನ ದಿವಸ ನಮ್ಮ ಬೆಂಗಳೂರು ಮತ್ತು ಮೈಸೂರು ಅಲ್ಲದೇ ಇನ್ನೂ ಅನೇಕ ಪಟ್ಟಣಗಳನ್ನು ನೋಡಿದರೆ ಈ ಇಲಾಖೆಯಲ್ಲಿರತಕ್ಕ ಅನೇಕ ಸಬ್ ಓವರ್ಸೀಯರುಗಳು ಲಕ್ಷಾಂತರ ರೂಪಾಯಿ ಬಾಳತಕ್ಕ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಬೆಂಗಳೂರು ನಗರದಲ್ಲಿರತಕ್ಕ ಬಡಾವಣೆಗಳಲ್ಲಿ ಇದನ್ನು ತಾವು ನೋಡಬಹುದು, ಇದರ ಬಗ್ಗೆ ತನಿಖೆ ಮಾಡುವುದಕ್ಕೆ ವಿಜಿಲೆನ್ಸ್ ಕಮಿಷನ್ ಇದೆ, ಆಂಟಿಕರಪ್ಷನ್ ಕಮಿಟಿ ಇದೆ ಇಷ್ಟೆಲ್ಲಾ ಇದ್ದರೂಕೂಡ ಅವರು ಸುಖವಾಗಿ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಇದರ ಬಗ್ಗೆ ಸರ್ಕಾರದವರು ಸ್ವಲ್ಪ ನಿಗಾ ವಹಿಸಿದರೆ ಒಳ್ಳೆಯದು. ಎಲ್ಲರೂ ಕೆಟ್ಟವರು ಎಂದು ಹೇಳುವುದಿಲ್ಲ. ಈ ದಿಶೆಯಲ್ಲಿ ಸ್ವಲ್ಪ ಜಾಗರೂಕರಾಗಿದ್ದರೆ ನಮ್ಮ ವಾರ್ಷಿಕ ಪಂಚವಾರ್ಷಿಕ ಯೋಜನೆಗಾದರೂ ಕೂಡ ಹಣ ಒದಗುತ್ತದೆ ಎಂದು ಹೇಳಿ ನನ್ನ ಅಭಿಪ್ರಾಯ. ...ಮೈನರ್ ಇರಿಗೇಷನ್ ಬಗ್ಗೆ ನಮ್ಮ ಬಡ್ಜೆಟ್‌ನಲ್ಲಿ 3 ಕೋಟಿ 80 ಲಕ್ಷ ರೂಪಾಯಿಗಳನ್ನು ಒದಗಿಸಿದ್ದೀರಿ, ಇದು ಬಹಳ ಕಡಿಮೆ. ಇದು ಯಾವುದಕ್ಕೂ ಸಾಲುವುದಿಲ್ಲ ಎಂದು ನನ್ನ ಭಾವನೆ. ಮೈನರ್ ಇರಿಗೇಷನ್‌ನಿಂದ ಸುಮಾರು 8-10 ಲಕ್ಷ ಎಕರೆ ನೀರಾವರಿಯಾಗ ವಾಗ ಕೇವಲ ಇಷ್ಟು ಕಡಿಮೆ ಹಣವನ್ನು ಒದಗಿಸಿ ಇದನ್ನು ತಾತ್ಸಾರ ಮನೋಭಾವದಿಂದ ಕಡೆಗಣಿಸಿರುವುದನ್ನು ನೋಡಿದರೆ ನಮ್ಮ ದೇಶದ ಕಲ್ಯಾಣವನ್ನು ಸಾಧಿಸುವುದಕ್ಕೆ ಸಾಧ್ಯವಾಗುವುದಿಲ್ಲ ಮತ್ತು ನಮ್ಮ ದೇಶದ ಪ್ರಗತಿ ಇನ್ನು ನೂರು ವರ್ಷಗಳಾದರೂ ಕೂಡ ಇದೇ ಸ್ಥಿತಿಯಲ್ಲಿ ಇರುತ್ತದೆ ಎಂದು ಹೇಳಿ ಘಂಟಾಘೋಷವಾಗಿ ಹೇಳಬಹುದು.

ನಮ್ಮ ಬಜೆಟ್ಟನ್ನು ನೋಡಿದ್ದೇ ಆದರೆ ಅನೇಕ ಕೋಟಿ ರೂಪಾಯಿಗಳನ್ನು ಕಟ್ಟಡಗಳ ಮೇಲೆ ಹಾಕುತ್ತಾ ಇರುವುದು ಕಂಡು ಬರುತ್ತದೆ. ಇನ್ನೂ ಅಭಿವೃದ್ಧಿಯಾಗದೇ ಇರತಕ್ಕ ನಮ್ಮ ದೇಶದಲ್ಲಿ ಕಟ್ಟಡಗಳ ಮೇಲೆ ಇಷ್ಟೊಂದು ಕೋಟಿಗಟ್ಟಲೆ ರೂಪಾಯಿಗಳನ್ನು ಹಾಕಿರುವುದು ಸರಿಯೇ ಎಂಬ ಈ ಒಂದು ಪ್ರಶ್ನೆಯನ್ನು ಬಹಳ ದೀರ್ಘವಾಗಿ ಆಲೋಚನೆ ಮಾಡಬೇಕು. ಏಕೆಂದರೆ ಬೆಂಗಳೂರು ನಗರದಲ್ಲಿ ಪೋಲೀಸ್ ಖಾತೆಗೆ ಕೋಟ್ಯಾಂತರ ರೂಪಾಯಿಗಳನ್ನು ಕಟ್ಟಡಗಳ ಮೇಲೆ ಖರ್ಚು ಮಾಡಿದ್ದೀರಿ. ಅವರಿಗೆ ವಾಸದ ಕಟ್ಟಡಗಳನ್ನು ಕಟ್ಟ ಬೇಡ ಎಂದು ಹೇಳುವುದಿಲ್ಲ. ಆದರೆ ಇದರಲ್ಲಿ ಎಷ್ಟೋ ಹಣವನ್ನು ಮಿಗಿಸಬಹುದಾಗಿತ್ತು. ಹಾಗೆ ಮಾಡಲಿಲ್ಲ ಎಂದರೆ ಇದರಲ್ಲಿ ಏನು ಕಂಡುಬರುತ್ತದೆ ಎಂದರೆ ಕಂಟ್ರಾಕ್ಟ್‌ದಾರರ ಹೊಟ್ಟೆ ತುಂಬಿಸುವುದಕ್ಕೋ ಅಥವಾ ಇನ್ನಾವ ದೃಷ್ಟಿಯಿಂದಲೋ ಬೆಂಗಳೂರು ನಗರ ಒಂದರಲ್ಲೇ ಇಷ್ಟು ಹಣ ಖರ್ಚು ಮಾಡಿರುವುದು ನಿಜವಾಗಿಯೂ ಸಾಧುವಾದುದಲ್ಲ. ಇದರಲ್ಲಿ ಸುಮಾರು 50 ಲಕ್ಷ ರೂಪಾಯಿ ಹಣ ದುರುಪಯೋಗವಾಗಿದೆ ಎಂದು ನನಗೆ ಅನಿಸುತ್ತದೆ. ಬಿಲ್ಡಿಂಗ್ ಡಿವಿಜನ್ ತೆಗೆದುಕೊಂಡರೆ ಬಹಳ ತಾರತಮ್ಯ ಕಂಡು

ಬರುತ್ತದೆ. ಇನ್ನೊಂದು ವಿಷಯ ಈ ಸಂದರ್ಭದಲ್ಲಿ ಹೇಳಬೇಕೆಂದರೆ ಪೋಲೀಸ್‌ನವರ ಕ್ವಾರ್ಟರ್ಸ್‌ಗೆ ಹಣ ಖರ್ಚು ಮಾಡಿರುವಂತೆ ಜ್ಯುಡೀಷಿಯಲ್ ಡಿಪಾರ್ಟ್‌ಮೆಂಟಿಗೆ ಯಾವ ಹಣವನ್ನೂ ಖರ್ಚು ಮಾಡಲು ಒದಗಿಸಿಲ್ಲ. ಜ್ಯುಡೀಷಿಯಲ್ ಆಫೀಸರ್ಸ್‌ಗೆ ಕ್ವಾರ್ಟರ್ಸ್‌ನ್ನು ಕಟ್ಟಿ ಕೊಡಬೇಕಾದ್ದು ಅತಿ ಮುಖ್ಯ ಎಂದು ಹೇಳುತ್ತಾ ಇದ್ದೇನೆ. ಪೋಲೀಸಿನವರಿಗೆ ಕ್ವಾರ್ಟರ್ಸ್ ಕಟ್ಟಿ ಕೊಡುತ್ತಾ ಇರುವುದು ಕ್ರಿಮಿನಲ್ ವೇಸ್ಟ್ ಎಂದು ನನ್ನ ಅಭಿಪ್ರಾಯ. ಏಕೆಂದರೆ ಈ ಇಲಾಖೆಯಲ್ಲಿ ಕೆಲಸ ಮಾಡತಕ್ಕವರು ಎಷ್ಟು ಮಟ್ಟಿಗೆ ಕೆಲಸ ಕಾರ್ಯಗಳನ್ನು ಮಾಡುತ್ತಾರೆ ಎಂಬುದು ನನಗೆ ಖುದ್ದಾಗಿ ಗೊತ್ತಿದೆ. ಅಪರಾಧಿಗಳಿಂದಲೂ ಹಣವನ್ನು ತಿನ್ನುತ್ತಾರೆ. ಫಿರ್ಯಾದಿಯಿಂದಲೂ ಹಣವನ್ನು ತಿನ್ನುತ್ತಾರೆ, ಇಂತಹ ಭ್ರಷ್ಟಾಚಾರ ಇರತಕ್ಕ ಡಿಪಾರ್ಟ್‌ಮೆಂಟಿಗೆ ಕೋಟ್ಯಾಂತರ ರೂಪಾಯಿ ಖರ್ಚು ಮಾಡೀದ್ದಿರಿ. ಅದೇ ಜ್ಯುಡೀಷಿಯಲ್ ಆಫೀಸರ್ಸ್‌ಗೆ ಕ್ವಾರ್ಟರ್ಸ್ ಕಟ್ಟತಕ್ಕ ಬಗ್ಗೆ ಯಾವ ಹಣವನ್ನೂ ಒದಗಿಸಿಲ್ಲ, ನಮ್ಮ ಶಿವಮೊಗ್ಗಾದಲ್ಲಿ ಡಿಸ್ಟ್ರಿಕ್ಟ್ ಜಡ್ಜ್ ಒಬ್ಬರಿಗೆ ಬಿಟ್ಟರೆ ಇನ್ನಾರಿಗೂ ಕ್ವಾರ್ಟರ್ಸ್ ಇಲ್ಲ. 324 ಜನ ಎಂ. ಎ. ಆರ್. ಪಿ. ಪೋಲೀಸ್ ಕಾನ್‌ಸ್ಟೇಬಲ್ಸ್‌ಗೆ 36 ಲಕ್ಷ ರೂಪಾಯಿನ ಕಟ್ಟಡವನ್ನು ಕಟ್ಟಿಸಿಕೊಟ್ಟಿದ್ದೀರಿ. ಶಿವಮೊಗ್ಗಾದಲ್ಲಿ ಮುನ್‌ಸೀಫ್ ಮಾಜಿಸ್ಟ್ರೇಟ್ ಇದ್ದಾರೆ. ಲ್ಯಾಂಡ್ ರಿಫಾರಂಸ್ ಟ್ರಿಬ್ಯೂನಲ್ ಜಡ್ಜಸ್ ಇದ್ದಾರೆ. ಇವರು ಯಾರಿಗೂ ಕೂಡ ಕ್ವಾರ್ಟರ್ಸ್ ಇಲ್ಲ, ಒಬ್ಬರಂತೂ ಅಲ್ಲಿನ ಸರ್ಕ್ಯೂಟ್ ಹೌಸ್‌ನಲ್ಲಿ ಇದ್ದಾರೆ ಹೀಗಿರುವಾಗ ಕಟ್ಟಡಗಳಿಗಾಗಿ ಬಹಳ ಹಣವನ್ನು ದುರವ್ಯಯ ಮಾಡಿದ್ದೀರಿ ಎಂದು ಹೇಳುತ್ತಾ ಇದ್ದೇನೆ. ಹುಬ್ಬಳ್ಳಿ ಮೆಡಿಕಲ್ ಕಾಲೇಜಿಗೆ 2 ಕೋಟಿ ರೂಪಾಯಿ ಖರ್ಚುಮಾಡಿದ್ದೀರಿ. ಮೈನರ್ ಇರಿಗೇಷನ್‌ಗೆ ಕೇವಲ 3 ಕೋಟಿ 80 ಲಕ್ಷ ರೂಪಾಯಿಗಳನ್ನು ಕೊಟ್ಟಿರುವುದಕ್ಕೆ ನಾಚಿಕೆಯಾಗುವುದಿಲ್ಲವೇ ಎಂದು ಕೇಳುತ್ತೇನೆ. ಮತ್ತು ಜ್ಯುಡಿಷಿಯಲ್ ಆಫೀಸರ್ಸ್‌ಗೆ ಸರಿಯಾದ ಕ್ವಾರ್ಟರ್ಸ್‌ನ್ನು ಕಟ್ಟಿಸಿಕೊಡದೇ ಇರುವುದಕ್ಕಾಗಿ ಯಾವ ನಾಗರಿಕ ಸರ್ಕಾರವೇ ಆಗಲಿ ತಲೆ ತಗ್ಗಿಸಬೇಕು. ಆದ್ದರಿಂದ ನಾನು ಸರ್ಕಾರದವರಲ್ಲಿ ಅರಿಕೆ ಮಾಡಿಕೊಳ್ಳುವುದೇನೆಂದರೆ ಈಗಲಾದರೂ ಶಿವಮೊಗ್ಗಾದಲ್ಲಿರತಕ್ಕ ಜ್ಯುಡಿಷಿಯಲ್ ಆಫೀಸರ್ಸ್‌ಗೆ ಕ್ವಾರ್ಟರ್ಸ್ ಕಟ್ಟಿಸಿ ಕೊಡುವುದರ ಬಗ್ಗೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಪೋಲೀಸ್ ಇಲಾಖೆಗೆ ಮನೆಗಳನ್ನು ಕಟ್ಟಿಸಲು 36 ಲಕ್ಷ ರೂಪಾಯಿಗಳನ್ನು ಕೊಡಲಾಗಿದೆ. ಅದೇ ರೀತಿಯಲ್ಲಿ ಯಾವುದಾದರೊಂದು ದಾಮಾಷಪ್ರಕಾರ ಈ ನ್ಯಾಯಾಂಗ ಇಲಾಖೆಗೂ ಜಡ್ಜಿಗಳ ಹಾಗೂ ಇತರೇ ನ್ಯಾಯಾಧೀಶರ ವಾಸದ ಮನೆಗಳನ್ನು ಕಟ್ಟುವುದಕ್ಕೆ ಹಣವನ್ನು ಒದಗಿಸಬೇಕಾಗಿತ್ತು. ಎಲ್ಲರನ್ನೂ ಒಂದೇ ದೃಷ್ಟಿಯಿಂದ ನೋಡಬೇಕು ಎಂಬುದನ್ನು ನಾನು ಹೇಳಬಯಸುತ್ತೇನೆ.

ಇನ್ನು ಮೈನರ್ ಇರಿಗೇಷನ್ ಪ್ರಾಜೆಕ್ಟ್‌ಗಳ ವಿಚಾರಕ್ಕೆ ಬಂದರೆ ಆ ವಿಚಾರದಲ್ಲಿ ನನಗೆ ಕೆಲವು ಮಾತನಾಡಲು ಇಚ್ಛೆಯಿದೆ. ನಮ್ಮ ಬಡ್ಜೆಟ್ಟಿನಲ್ಲಿ ಇತ್ತೀಚೆಗೆ ಈ ರೀಜನಲ್ ಇಂಬ್ಯಾಲೆನ್ಸ್ ಎಂಬುದು ಜಾಸ್ತಿಯಾಗುತ್ತಿದೆ. ನಮ್ಮ ತಾಲ್ಲೂಕಿನಲ್ಲಿ ಎರಡು ಸೆಮಿಮಲೆನಾಡು ಹೋಬಳಿಗಳಿರುತ್ತವೆ. ಅಲ್ಲಿ ಬೇಕಾದಷ್ಟು ಮಳೆ ಬೀಳುತ್ತಿದೆ, ಅನೇಕ ಹೊಳೆಗಳು ಅಲ್ಲಿ ಹರಿಯುತ್ತಿವೆ. ಅಲ್ಲಿ ಕೆಲವು ಪ್ರಾಜೆಕ್ಟ್‌ಗಳನ್ನು ಕಟ್ಟಬೇಕೆಂದು ನಾನು ಸರ್ಕಾರಕ್ಕೆ ನಾಲ್ಕಾರು ಅರ್ಜಿಗಳನ್ನು ಬರೆದುಕೊಂಡಿದ್ದಾಗ್ಯೂ ಕೇವಲ ಅಲ್ಲಿ ಒಂದು ಕೆರೆಯನ್ನು ಮೂರು ಲಕ್ಷದ ವೆಚ್ಚದಲ್ಲಿ ಕಟ್ಟಲು ಸರ್ಕಾರದವರು ಒಪ್ಪಿಕೊಂಡಿದ್ದಾರೆ. ಆ ಕೆಲವಾದರೂ ವೇಗವಾಗಿ ನಡೆಯುತ್ತಿದೆಯೇ ಎಂದರೆ ಇಲ್ಲ. ನಾನು ನಮ್ಮ ಮುಖ್ಯ ಮಂತ್ರಿಗಳಿಗೆ ಆ ಶಾಂತಿ ಸಾಗರದಲ್ಲಿ ನೆರೆ ಹಾವಳಿಯನ್ನು ತಡೆಗಟ್ಟುತಕ್ಕ ಉದ್ದೇಶದಿಂದಲೂ ಮತ್ತು ಅಲ್ಲಿ ನೀರು ಮುಳುಗಡೆಯಿಂದ ಆಗಾಗ್ಗೆ ಸಂಭವಿಸುತ್ತಿರುವ ಹಾವಳಿ ಮತ್ತು ನಷ್ಟಗಳನ್ನು ತಪ್ಪಿಸುವುದಕ್ಕಾಗಿ ಆ ಕೆರೆಯ ಮೇಲ್ಭಾಗದಲ್ಲಿರತಕ್ಕ ಸಣ್ಣ ಸಣ್ಣ ಹದಿಮೂರು ಕೆರೆಗಳನ್ನು ಅಂದರೆ ಅವುಗಳಿಂದ ಸುಮಾರು ಐದೂವರೆಸಾವಿರ ಎಕರೆ ಜಮೀನು ತರೀ ಸಾಗುವಳಿಗೆ ಬರುತ್ತೆ ಅವುಗಳನ್ನು ರಿಪೇರಿ ಮಾಡಿಕೊಡಬೇಕೆಂದು ಪ್ರಾರ್ಥಿಸಿಕೊಂಡಿದ್ದೆನು ಅವರು ಅದಕ್ಕೆ ಆಗಲಿ ಮಾಡಿಸೋಣ ಎಂದು ಭರವಸೆಯನ್ನು ಕೂಡ ಕೊಟ್ಟಿದ್ದರು. ಆದರೆ ಅಲ್ಲಿ ಕೂಡ ಕೆಲಸ ಬಹಳ ನಿಧಾನವಾಗಿ ಸಾಗುತ್ತಿದೆ. ಆ ಕಾರ್ಯವನ್ನು ಸರ್ಕಾರದವರು ತ್ವರಿತವಾಗಿ ಕೈಗೊಂಡರೆ ಅಲ್ಲಿ ಅಡಿಷನಲ್ಲಾಗಿ ಐದೂವರೆ ಸಾವಿರ ಎಕರೆ ಭೂಮಿ ತರೀಸಾಗುವಳಿಗೆ ಬರುವುದರ ಜೊತೆಗೆ ಅಲ್ಲಿ ಆಗತಕ್ಕ ಅನೇಕ ತೊಂದರೆಗಳು ಬೇರೆ ತಪ್ಪುತ್ತವೆ, ಆ ಸೂಳೆಕೆರೆಯ ನೀರಿನಿಂದ ಸಬ್‌ಮರ್ಜ್ ಆಗತಕ್ಕ ಅನಾಹುತವು ತಪ್ಪುತ್ತದೆ, ಆದ್ದರಿಂದ ಅದನ್ನು ತೀವ್ರವಾಗಿ ಪೂರ್ಣಗೊಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನೊಂದು ವಿಚಾರ ಸ್ವಾಮಿ, ಅನೇಕ ಸಂದರ್ಭಗಳಲ್ಲಿ ನಮ್ಮ ಯೋಜನೆಗಳು ಅವುಗಳನ್ನು ಕಾರ್ಯಗತಗೊಳಿಸತಕ್ಕ ಅಧಿಕಾರಿಗಳೇನಿರುತ್ತಾರೆ ಅವರ ಮನೋಭಾವವನ್ನು ಅವಲಂಬಿಸಿ ಅವು ಮುಂದುವರಿಯಬೇಕಾಗಿದೆ. ಆದ್ದರಿಂದ ಆ ಕೆಲಸ ಕಾರ್ಯಗಳನ್ನು ಎಗ್ಜಿಕ್ಯೂಟ್ ಮಾಡತಕ್ಕ

(ಶ್ರೀ ಎಚ್. ಜಿ. ಹಾಲಪ್ಪ)

ಅಧಿಕಾರಿಗಳು ಎಷ್ಟು ಸತ್ಯಸಂಧರು ಅನ್ನುವುದನ್ನು ಅವಲಂಬಿಸಿರುತ್ತದೆ, ಅಲ್ಲದೆ ಆ ಕೆಲಸದ ಸಕ್ಸಸ್ ಕೂಡ ಅವರನ್ನೇ ಹಿಂಬಾಲಿಸಿರುತ್ತದೆ. ನಮ್ಮಲ್ಲಿ ಅಂದರೆ ಹಾಲಿ ನಮ್ಮ ಜಿಲ್ಲೆಗೆ ಬಂದಿರತಕ್ಕ ಎಗ್ಜಿಕ್ಯುಟೀವ್ ಇಂಜಿನಿಯರ್ ಏನಿದ್ದಾರೆ ಇವರು ಆ ಸ್ಥಾನಕ್ಕೆ ಆ ಸ್ಥಳಕ್ಕೆ ಬಂದು ಇಲ್ಲಿಗೆ ನಾಲ್ಕು ವರ್ಷಗಳಾಯಿತು. ಆದರೆ ಅವರ ಕೆಲಸ ಅಷ್ಟು ಸಮರ್ಪಕವಾಗಿಲ್ಲ. ನಾನೀಗ ಅವರ ಪರ್ಸನಲ್ ವಿಷಯಕ್ಕೆ ಅಷ್ಟಾಗಿ ಕೈಹಾಕುತ್ತಿಲ್ಲ, ಅಲ್ಲಿ ಈ ಅಧಿಕಾರಿಗೆ ಕಣ್ಣಿಗೆ ಕಾಣಿಸತಕ್ಕದ್ದು ಕೇವಲ ಎರಡೇ ಎರಡು ತಾಲ್ಲೂಕುಗಳು ಮಾತ್ರ. ಇನ್ನು ಯಾವ ತಾಲ್ಲೂಕುಗಳು ಆ ಜಿಲ್ಲೆಯಲ್ಲಿ ಇದ್ದಂತೆ ಅವರು ಪರಿಗಣಿಸಿರುವುದಿಲ್ಲ. ಅಲ್ಲದೆ ಅವರಲ್ಲಿರತಕ್ಕ ಒಂದು ವಿಶೇಷ ಮತ್ತು ವೈಶಿಷ್ಟ್ಯತೆ ಏನೆಂದರೆ ಅವರು ಹಗಲು ಹೊತ್ತಿನಲ್ಲಿ ರಸ್ತೆ ವಗೈರೆಗಳ ಇನ್ಸ್ಪೆಕ್ಷನ್ನಿಗೆ ಹೋಗುತ್ತಿಲ್ಲ. ಎಲ್ಲವನ್ನು ಅವರು ರಾತ್ರಿವೇಳೆಯಲ್ಲೇ ಬಹಳ ಚುರುಕಾಗಿ ನಡೆಸುತ್ತಿದ್ದಾರೆ. ಬಹುಶಃ ಅವರಿಗೆ ಹಗಲಿನಲ್ಲಿ ಕಣ್ಣುಗಳು ಅಷ್ಟು ಚೆನ್ನಾಗಿ ರಾತ್ರಿ ವೇಳೆಯಲ್ಲಿ ಕಂಡ ಹಾಗೆ ಕಾಣಿಸುವುದಿಲ್ಲವಂತೆ. ಕಾರಣ ಅವರಿಗೆ ಆ ಗೂಬೆಗಳಿಗಿದ್ದಂತೆ ಗೂಬೆಗಣ್ಣಿರಬೇಕು. ನಾನು ಇವರನ್ನು ಶಿಕ್ಷೆಗೆ ಗುರಿಮಾಡಿ ಅಂತ ಹೇಳುವುದಿಲ್ಲ. ಇವರಿಗೆ ಸ್ವಲ್ಪ ಚಾಟಿ ಏಟನ್ನು ಮಾತ್ರ ಕೊಡಬೇಕೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇವರು ತಮ್ಮ ಜೀಪಿನಲ್ಲಿ ಕುಳಿತುಕೊಂಡರೆ ಅದರಲ್ಲಿ ಡ್ರೈವರ್ ಇಲ್ಲದಿದ್ದಾಗ್ಯೂ ಸಹಿತ ಅದು ನೇರವಾಗಿ ಹೋಗಿ ಆ ಹೊನ್ನಾಳಿ ಟಿ. ಬಿ. ಯ ಮುಂದೆ ನಿಲ್ಲುತ್ತದೆ. ಹೀಗೇ ಆ ಜೀಪು ಆ ಎಗ್ಜಿಕ್ಯುಟಿವ್ ಇಂಜಿನಿಯರ್ ಯಾವ ತಾಲ್ಲೂಕ್ ಟಿ. ಬಿ. ಯಲ್ಲಿ ಹೋಗಿ ನಿಲ್ಲಬೇಕು ಎಂದರೆ ಆ ತಾಲ್ಲೂಕ್ ಟಿ. ಬಿ. ಯಲ್ಲಿ ಅದು ಸವಳಂಗ ಟಿ. ಬಿ. ಆಗಿರಬಹುದು. ಇಲ್ಲವೇ ತೀರ್ಥಹಳ್ಳಿ ಟಿ. ಬಿ. ಆಗಿರಬಹುದು ಅಲ್ಲ ಮಾತ್ರವೇ ನಿಲ್ಲುತ್ತದೆ. ಅಲ್ಲಿಂದ ಈ ಅಧಿಕಾರಿ ಅಲ್ಲಿ ಟಿ. ಬಿ. ಯ ಕೆಲಸದಲ್ಲಿರತಕ್ಕ ಮೇಟಿಗಳಿಗೆ ಕೊಡತಕ್ಕ ಚಿತ್ರಹಿಂಸೆಯನು ಅವರ ಗೋಳನ್ನೂ ಹೇಳತೀರದಾಗಿದೆ. ನನಗೆ ಒಬ್ಬ ಮೇಟಿ ಬಂದು ಹೇಳಿದ ಅದು ಏನೆಂದರೆ ಆ ಮೇಟಿಗಳು ಈ ಇಂಜಿನಿಯರಿಗೆ ರಾತ್ರಿ ವೇಳೆಯಲ್ಲಿ ಏನೇನು ಚಟಗಳು ಇರುತ್ತವೋ ಅವುಗಳಿಗೆಲ್ಲಾ ಅನುಕೂಲ ಮಾಡಿಕೊಡಬೇಕು ಎಂದು ಅವರನ್ನು ಪೀಡಿಸುತ್ತಿದ್ದಾನಂತೆ. ಹಾಗೆ ಅವರು ಆತನ ಅನುಕೂಲಗಳನ್ನು ಆತನಿಗೆ ತೃಪ್ತಿಯಾಗುವಂತೆ ಒದಗಿಸದಿದ್ದರೆ ಅವರಿಗೆ ಸಂಬಳವನ್ನೆ ಬಟವಾಡೆ ಮಾಡುವುದಿಲ್ಲವಂತೆ. ಕೆಲವು ಮೇಟಿಗಳಿಗೆ ಆತನು ಕೇಳತಕ್ಕದ್ದನ್ನೆಲ್ಲಾ ಒಬ್ಲೈಜ್ ಮಾಡದೆ ಇರುವುದರಿಂದ ಅನೇಕ ತೊಂದರೆಗಳಿಗೆ ಗುರಿಯಾಗಿದ್ದಾರೆ. ಒಂದಾವರ್ತಿ ಗಾಜನೂರು ಟಿ. ಬಿ. ಯಲ್ಲಿ ಈ ಅಧಿಕಾರಿಯನ್ನು ಕೂಡಿ ಬೀಗ ಕೂಡ ಹಾಕಿದ್ದರೆಂದು ಹೇಳಲಾಗುತ್ತಿದೆ. ಅಷ್ಟಾದರೂ ಅವರ ವಿಚಾರ ಬೆಳಕಿಗೆ ಬಾರದಿರುವುದನ್ನು ನೋಡಿದರೆ ಅವರಿಗೆ ಈ ಸರ್ಕಾರದಲ್ಲಿ ಯಾರದೋ ಬಹಳ ದೊಡ್ಡವರೊಬ್ಬರ ಸಹಾಯವಿದೆ ಎಂಬುದಾಗಿ ವೇದ್ಯವಾಗುತ್ತದೆ. ಆದರೆ ನಮಗೆ ಅವರ ಸೇವೆ ಅಲ್ಲಿ ಸಾಕಾಗಿದೆ. ಅವರನ್ನು ಮಾನ್ಯ ಸಚಿವರು ಬೆಂಗಳೂರಿಗೆ ಇಲ್ಲಿಗೆ ಕರೆಸಿಕೊಂಡು ಅವರನ್ನು ಮಂತ್ರಿಗಳು ನೇರವಾಗಿ ತಮ್ಮ ಮೂಗಿನ ಕೆಳಗೇ ಇಟ್ಟುಕೊಂಡರೆ ಬಹಳ ಅನುಕೂಲವಾಗುತ್ತದೆ. ನಾನು ಅವರು ಆ ಮೇಟಿಗಳ ವಿಚಾರದಲ್ಲಿ ತೋರಿಸುತ್ತಿರುವ ಅವರ ವರ್ತನೆಯ ಬಗ್ಗೆ ನನಗೆ ಬರೆದುಕೊಡಿ ಎಂದು ಒಬ್ಬ ಮೇಟಿಯನ್ನು ಕೇಳಿದೆ. ಅದಕ್ಕೆ ಆತ ಹೆದರಿದ. ಇನ್ನಾದರೂ ಸರ್ಕಾರದವರು ಇವರನ್ನು ಸ್ವಲ್ಪ ಹುಷಾರಾಗಿ ಬಳಸಿದರೆ ಸರ್ಕಾರಕ್ಕೆ ಬಹಳ ಹಣ ಉಳಿತಾಯವಾಗುತ್ತದೆ ಎಂದು ತಿಳಿಸುವುದಕ್ಕೆ ಇಚ್ಛೆ ಪಡುತ್ತೇನೆ. ಸಾಮಾನ್ಯವಾಗಿ ಸರ್ಕಾರದ ಒಂದು ಪಾಲಿಸಿ ಏನೆಂದರೆ ಒಳ್ಳೆ ಒಳ್ಳೆಯ ಅಧಿಕಾರಿಗಳನ್ನು ತಮ್ಮ ಹತ್ತಿರವೇ ಇಟ್ಟುಕೊಂಡು ಬೇಡವಾದ ಕೆಲವು ಅಧಿಕಾರಿಗಳನ್ನು ದೂರವಾಗಿ ಅಟ್ಟಿರುತ್ತಾರೆ. ಅಂಥ ಒಂದು ನಿದರ್ಶನದಲ್ಲಿ ಬರುತ್ತಾರೆ ಈ ನಮ್ಮ ಜಿಲ್ಲೆಯ ಎಗ್ಜಿಕ್ಯೂಟೀವ್ ಇಂಜನಿಯರ್. ಆದ್ದರಿಂದ ಇವರ ಮಹಾಸೇವೆ ಇತರರಿಗೂ ಸೇರಲಿ ನಮಗೇನೋ ಸಾಕಾಗಿದೆ. ಇವರನ್ನು ಬೇರೆ ಕಡೆಗೆ ಕೂಡಲೆ ವರ್ಗಾಯಿಸಬೇಕೆಂದು ಕೇಳಿಕೊಳ್ಳುತ್ತೇನೆ. ನಾನು ಇಷ್ಟೆಲ್ಲವನ್ನೂ ಏತಕ್ಕಾಗಿ ಹೇಳಿದೆ ಎಂದರೆ ನಮ್ಮ ಯೋಜನೆಯ ಕೆಲಸ ಕಾರ್ಯಗಳನ್ನು ಎಗ್ಸಿಕ್ಯೂಟ್ ಮಾಡತಕ್ಕ ಅಧಿಕಾರಿಗಳು ಸತ್ಯಸಂಧರಾಗಿರದೆ ಅವರ ನಡತೆ ಸರಿಯಾಗಿಲ್ಲದಿದ್ದರೆ ಆ ಕೆಲಸಗಳು ಯಶಸ್ವಿಯಾಗುವುದಿಲ್ಲ ಎಂಬುದನ್ನು ಸರ್ಕಾರಕ್ಕೆ ಮನವರಿಕೆ ಮಾಡಲು ಹೇಳಬೇಕಾಯಿತು ಅಷ್ಟೆ. ಇಂಥ ಅಧಿಕಾರಿಗಳನ್ನು ಇಟ್ಟುಕೊಂಡಿದ್ದರೆ ಬಡಜೋರೇಗೌಡನ ಖಜಾನೆಯಲ್ಲಿರತಕ್ಕ ಹಣ ಹಾಳಾಗುತ್ತದೆ ವಿನಾ ದೇಶದ ಅಭಿವೃದ್ಧಿಯೇನೂ ಆಗಲಾರದು. ಸರ್ಕಾರದವರು ಕೆಲವು ಕಡೆ ಈ ಕಟ್ಟಡಗಳಿಗಾಗಿ ಹಣವನ್ನು ಚೆಲ್ಲಿರುವುದನ್ನು ನೋಡಿದರೆ ಹೊಟ್ಟೆ ಉರಿಯುತ್ತದೆ—ಬೆಂಕಿ ಬೀಳುತ್ತದೆ. ನಮ್ಮ ಜಿಲ್ಲೆಯಾದರೋ ಸರ್ಕಾರದವರ ಬೊಕ್ಕಸವನ್ನು ತುಂಬುವುದರಲ್ಲಿ ಬೇರಾವ ಜಿಲ್ಲೆಗೂ ಕಡಮೆಯಾಗಿಲ್ಲ. ಬೇರೆಯವರಿಗೆ ಕೊಟ್ಟ ಹಾಗೆ ನಮ್ಮ ಜಿಲ್ಲೆಗೂ ಕೂಡ ಕೊಡಬೇಕು. ಆದರೆ ಅಂಡರ್ ಡೆವಲಪ್

ಭಾಗಗಳೇನಿವೆ ಅವುಗಳಿಗೆ ಸ್ವಲ್ಪ ಜಾಸ್ತಿ ಕೊಡಿ, ಬೇಡ ಎನ್ನುವುದಿಲ್ಲ. ನಮ್ಮ ಶಿವಮೊಗ್ಗ ಜಿಲ್ಲೆಯಲ್ಲಿ ಸಹ್ಯಾದ್ರಿ ಕಾಲೇಜಿನಲ್ಲಿ 1500 ಜನ ವಿದ್ಯಾರ್ಥಿಗಳಿದ್ದಾರೆ. ಅವರಿಗೆ ಅಲ್ಲಿ ಊಟದ ವ್ಯವಸ್ಥೆ ಸರಿಯಾಗಿಲ್ಲ. ಅಷ್ಟು ಅನಾನುಕೂಲಗಳಿದ್ದರೂ ಅಲ್ಲಿಗೆ ಒಂದು ಜನರಲ್ ಹಾಸ್ಟಲನ್ನು ಕೊಡುವುದಕ್ಕೆ ಸರ್ಕಾರಕ್ಕೆ ಮನಸಿಲ್ಲ. ದಾವಣಗೆರೆಯಲ್ಲಿ ಅನೇಕ ವಿದ್ಯಾರ್ಥಿ ನಿಲಯಗಳಿವೆ. ಆದಾಗ್ಗೂ ಅಲ್ಲಿ ಮತ್ತೊಂದು ಜನರಲ್ ಹಾಸ್ಟಲನ್ನು ಕೊಡುವುದಾಗಿ ಹೇಳಿದ್ದಾರೆ. ಅಲ್ಲಿ ಅನೇಕ ಕೋಮುಗಳವರ ಹಾಸ್ಟಲುಗಳಿವೆ. ಆದಾಗ್ಯೂ ಅಲ್ಲಿಗೆ ಕೊಡುವುದಕ್ಕೆ ಹೊರಟಿದ್ದಾರೆ. ಆ ಶಿವಮೊಗ್ಗಿಯಲ್ಲಿ ಒಬ್ಬೊಬ್ಬ ಹುಡುಗನೂ ಒಂದೊಂದು ರೂಮಿಗೆ 30-40 ರೂಪಾಯಿ ಬಾಡಿಗೆ ಕೊಡಬೇಕು. ಕಾರಣ ಅಲ್ಲಿ ಇಂಥ ಒಂದು ಹಾಸ್ಟಲಿನ ಅನುಕೂಲ ಇಲ್ಲದಿರುವುದೇ ಆಗಿದೆ. ಇದ್ದರಿಂದ ಶಿವಮೊಗ್ಗಿಗೆ ಒಂದು ಜನರಲ್ ಹಾಸ್ಟಲನ್ನು ಏಕೆ ಕೊಡಬಾರದು ? ನಾವು ಪ್ರತಿನಿಧಿಗಳು ಇಲ್ಲಿ ಬಂದು ಸರ್ಕಾರಕ್ಕೆ ಒತ್ತಾಯ ಮಾಡಿದಮೇಲೆ ಅವರು ಆ ಅನುಕೂಲವನ್ನು ಮಾಡಿದರೆ ಅದಕ್ಕೆ ಅಷ್ಟು ಬೆಲೆಯಿಲ್ಲ. ನಾವು ಕೇಳುವುದಕ್ಕೆ ಮೊದಲೇ ಸರ್ಕಾರದವರು ಅದನ್ನು ಅರಿತುಕೊಂಡು ಆ ಅನುಕೂಲವನ್ನು ಕಲ್ಪಿಸಿಕೊಡಬೇಕಾದ್ದು ಅವರ ಧರ್ಮ ಮತ್ತು ಅದು ಅವರ ಆದ್ಯ ಕರ್ತವ್ಯ. ಸರ್ಕಾರದವರು ಕಡೂರು ತಾಲ್ಲೂಕಿನಲ್ಲಿ ಒಂದು ಕೆರೆಯನ್ನು ಕಟ್ಟಲು 7 ಲಕ್ಷ ರೂಪಾಯಿಗಳ ಅಂದಾಜನ್ನು ತಯಾರಿಸಿ ಅನಂತರ ಅದನ್ನು 14 ಲಕ್ಷಕ್ಕೆ ರಿವೈಜ್‌ಮಾಡಿ ಆ ಕಾರ್ಯ ಮಾಡಿದ್ದಾರೆ. ಆದರೆ ಅಲ್ಲಿ ಮಳೆಯೇ ಇಲ್ಲ ಕೆರೆಯಲ್ಲಿ ನೀರೂ ಇಲ್ಲ. ಹೀಗೆ ವಿವೇಚನೆಯಿಲ್ಲದೆ ಸರ್ಕಾರದವರು ಕೆಲಸಮಾಡುತ್ತಿದ್ದಾರೆ. ಎಲ್ಲಿ ಏನು ಕೆಲಸ ಮಾಡಬೇಕು, ಎಲ್ಲಿ ಯಾವ ಕೆಲಸ ಮಾಡಿದರೆ ಅದರಿಂದ ಹಾನಿಯಾಗುತ್ತದೆ ಎಂಬುದನ್ನು ಅರಿತು ಕೆಲಸ ಮಾಡಬೇಕು. ಹಾಗೆ ಮಾಡಿದರೆ ಮಾತ್ರ ಸರ್ಕಾರಕ್ಕೆ ಲಾಭವಾಗುತ್ತದೆ. ಜನರಿಗೂ ಒಂದು ಅನುಕೂಲವಾಗುತ್ತದೆ. ಆಗ ದೇಶ ಉದ್ಧಾರವಾಯಿತೆಂದು ಹೇಳಬಹುದು. ನಮ್ಮ ತಾಲ್ಲೂಕಿನಲ್ಲಿ ಸರ್ಕಾರದವರು ಕೂಡಲೇ ನಡೆಸಿಕೊಡಬೇಕಾದ ಒಂದು ಮುಖ್ಯ ಕಾರ್ಯವೇನೆಂದರೆ ನಮ್ಮ ತಾಲ್ಲೂಕಿನಲ್ಲಿ ಭದ್ರಾ ಚಾನಲ್ ಕೆಳಗಡೆ ಇರಿಗೇಷನ್ ಟ್ರ್ಯಾಕ್ಟರ್ ರೋಡ್ ಮೂರನೇ ಪಟ್ಟಿಯನ್ನು ಸರ್ಕಾರದವರ ಮಂಜೂರಾತಿಗಾಗಿ ಕಳುಹಿಸಲಾಗಿದೆ. ಅಲ್ಲಿ ಜನರು ಹೆಂಗಸರು ಮಕ್ಕಳು ತಿರುಗುವುದಕ್ಕೆ ಸಾಧ್ಯವಾಗುತ್ತಿಲ್ಲ. ಎಲ್ಲಿ ನೋಡಿದರಲ್ಲಿ ಕೆಸರಿನಿಂದ ತುಂಬಿವೆ. ರಸ್ತೆ ಇಲ್ಲ ಅದಕ್ಕಾಗಿ ಸರ್ಕಾರದವರು ಕೂಡಲೆ ಅದನ್ನು ಮಂಜೂರು ಮಾಡಬೇಕೆಂದು ಹೇಳುತ್ತೇನೆ. ಇನ್ನು ಶಾಗ್ಗಾ ಗ್ರಾಮದ ಬಳಿ ಒಂದು ಕಾಲುವೆಯನ್ನು ನಿರ್ಮಾಣಮಾಡಿದರೆ ಅಲ್ಲಿ 1500 ಎಕರೆ ನೀರಾವರಿ ಆಗುತ್ತದೆ ಎಂದು ಸರ್ಕಾರಕ್ಕೆ ಪದೇ ಪದೇ ಒತ್ತಾಯ ಮಾಡುತ್ತಿದ್ದರೂ ಅಲ್ಲಿಯ ಜನರು ಕಾಂಗ್ರೆಸ್‌ಗೆ ಓಟು ಮಾಡಲಿಲ್ಲಾ ಎಂತಲೋ ಏನೋ ಅದನ್ನು ಮಂಜೂರು ಮಾಡುವುದಕ್ಕೆ ಹಿಂದೆ ಮುಂದೆ ನೋಡುತ್ತಿದ್ದಾರೆ. ನಮ್ಮಲ್ಲಿಗೆ ಚೀಫ್ ಇಂಜನಿಯರ್ ಬಂದಿದ್ದರು. ಇರ್ರಿಗೇಷನ್ ಕಮಿಟಿಯಲ್ಲಿ ಗ್ರಾಮಸ್ಥರು ನೂರಾರು ಜನ ಪ್ರತಿಭಟನೆ ಮಾಡಿದರು. ಆದರು ಬಂದಿಷ್ಟನ್ನು ನೋಡಿ ನಮಗಿಂತಲೂ ಅವರೇ ಪಟ್ಟಿಗೆ ಮನವಿಗಳನ್ನು ಕೊಟ್ಟರು. ಇಲ್ಲಿ ತಾರತಮ್ಯ ಮನೋಭಾವನೆ ಇರಬಾರದು. ಇತ್ತೀಚೆಗೆ ಅಲ್ಲಿ ಕೆಲವು ಅಧಿಕಾರಿಗಳು ಗ್ರಾಮಗಳನ್ನು ಷಿಫ್ಟ್ ಮಾಡುವ ಬಗ್ಗೆ ಒಂದು ರೀತಿಯ ಧೋರಣೆಯನ್ನು ಇಟ್ಟುಕೊಂಡು ಬಣ್ಣದ ಕನ್ನಡಕವನ್ನು ಹಾಕಿಕೊಂಡು ನೋಡುತ್ತಿದ್ದಾರೆ. ಅವರು ಆ ರೀತಿ ಮಾಡುವುದು ಸರಿಯಿಲ್ಲ. ನನ್ನ ತಾಲ್ಲೂಕಿನಲ್ಲಿ ಆಲೂರು ಮತ್ತು ಕರೇಕಟ್ಟೆ ಎಂಬ ಗ್ರಾಮಗಳಿವೆ. ಎಗ್ಸಿಕ್ಯುಟಿವ್ ಇಂಜನಿಯರನ್ನು ಕರೆಸಿ ಅಲ್ಲಿನ ಗ್ರಾಮಸ್ಥರನ್ನು ಬೇರೆ ಕಡೆಗೆ ಷಿಫ್ಟ್ ಮಾಡುವ ಅವಶ್ಯಕತೆಯನ್ನು ತೋರಿಸಿಕೊಟ್ಟಿದ್ದೇವೆ. ಆದರೂ ಇದುವರೆಗೂ ಈ ಗ್ರಾಮದವರನ್ನು ಷಿಫ್ಟ್ ಮಾಡಿಲ್ಲ, ಆದುದರಿಂದ ತಕ್ಷಣ ಈ ಗ್ರಾಮಗಳ ಜನರನ್ನು ಬೇರೆ ಕಡೆಗೆ ಷಿಫ್ಟ್ ಮಾಡಬೇಕೆಂದು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

ಇನ್ನೊಂದು ವಿಷಯ, ಮೈನರ್ ಕೆರೆಗಳ ವಿಷಯ. ನಮ್ಮ ಶಿವಮೊಗ್ಗಾ ಸರ್ಕಲ್ ತೆಗೆದುಕೊಂಡರೆ, ಹೊಸನಗರ, ಶಿವಮೊಗ್ಗಾ, ಸಾಗರ, ಚಿಕ್ಕಮಗಳೂರು, ಈ ಪ್ರದೇಶಗಳಲ್ಲಿನ ಎಲ್ಲಾ ಡಿವಿಷನ್ನುಗಳನ್ನು ತೆಗೆದುಕೊಂಡರೆ, ಕೇವಲ ಕೆಲವೇ ಕೆರೆಗಳನ್ನು ತೆಗೆದುಕೊಂಡಿದ್ದಾರೆ. ಆದರೆ ಚಿತ್ರದುರ್ಗ ಜಿಲ್ಲೆಯೊಳಗೆ ಒಂದು ಡಿವಿಷನ್ನಿನಲ್ಲಿ 32 ಕೆರೆಗಳನ್ನು ತೆಗೆದುಕೊಂಡಿದ್ದಾರೆ. ಅಲ್ಲಿ ಕೆರೆಗಳು ತುಂಬುತ್ತವೋ ಇಲ್ಲವೋ ಗೊತ್ತಿಲ್ಲ. ಇದರಲ್ಲಿ ಒಂದು ರಾಜಕೀಯ ಮನೋಭಾವನೆಯಿಂದ ಕೆಲಸಗಳು ನಡೆಯುತ್ತಾ ಇವೆಯೆಂದು ಗೊತ್ತಾಗುತ್ತದೆ. ಚಿತ್ರದುರ್ಗದಲ್ಲಿ ಮಳೆ ಬಾರದೇ ಇರುವದರಿಂದ ಅಲ್ಲಿ ಕೆರೆಗಳಲ್ಲಿ ನೀರೇ ಇರುವುದಿಲ್ಲ. ದಾವಣಗೆರೆ ಮತ್ತು ಚಿತ್ರದುರ್ಗಾ ತಾಲ್ಲೂಕುಗಳಲ್ಲಿ ಅಷ್ಟು ಮಳೆಯೇ ಬರುವುದಿಲ್ಲ. ಕಸಬಾ ಉಬ್ರಾಣಿ ಹೋಬಳಿಯಲ್ಲಿರತಕ್ಕ ಕೆರೆಗಳಲ್ಲಿ ಎರಡು ವರ್ಷಗಳಿಂದಲೂ ಒಂದನ್ನೂ ಇನ್‌ವೆಸ್ಟಿಗೇಷನ್ ಮಾಡಲಿಲ್ಲ. ಹೊಸದಾಗಿ ರೈತರಿಗೆ ವಾಟರ್ ಟ್ಯಾಕ್ಸ್ ಹಾಕುತ್ತಿದ್ದಾರೆ. ಅಲ್ಲಿ ಇರ್ರಿಗೇಷನ್ ಪೊಟೆನ್ಷಿಯಾಲಿಟೀಸ್ ಇವೆ. 15 - 20 ಸಾವಿರ ಎಕರೆಗಳಷ್ಟು ನೀರಾವರಿಯನ್ನು ಮಾಡಬಹುದು. ಸರ್ಕಾರದವರು ಪಕ್ಷಪಾತ ಮನೋಭಾವವನ್ನು ಬಿಟ್ಟು ದೇಶದ ಹಿತದೃಷ್ಟಿಯಿಂದ ಅದನ್ನು ಮಾಡಿಕೊಡಬೇಕು. ಅದು ಅವರಿಗೆ ಬಹಳ ಕಷ್ಟವಾಗು

(ಶ್ರೀ ಎನ್. ಜಿ. ಹಾಲಪ್ಪ)

ತ್ತದೆಂದು ನನಗನ್ನಿಸುತ್ತದೆ. ನಮ್ಮ ಜಿಲ್ಲೆಯಲ್ಲಿರತಕ್ಕವರ ಪೈಕಿ ಇಬ್ಬರು ಉಪಮಂತ್ರಿಗಳು ಇದ್ದಾರೆ. ಮಾನ್ಯ ಶ್ರೀ ವೀರೇಂದ್ರ ಪಾಟೀಲ್ ಅವರಿಗೆ ಈ ವಿಚಾರ ಗೊತ್ತು. ಆದರೂ ನಮಗೆ ಸೊನ್ನೆ. ಅವರು ಏನು ಕೆಲಸ ಮಾಡುತ್ತಿದ್ದಾರೆಂದರೆ, ಇಲ್ಲಿ ಅವರು ಜೀತ ಮಾಡುವುದಕ್ಕೋಸ್ಕರ ಮಾತ್ರ ಇದ್ದಾರೆಂದು ನಾನು ತಿಳಿಯುತ್ತೇನೆ. ಇದರಿಂದ ನಮ್ಮ ಜಿಲ್ಲೆಗೆ ಬಹಳ ಅನ್ಯಾಯವಾಗಿದೆ. ಒಟ್ಟಿನಲ್ಲಿ ಸರ್ಕಾರದವರು ತಾರತಮ್ಯ ದೃಷ್ಟಿಯಿಂದ ನೋಡದೆ ಎಲ್ಲಾ ಜಿಲ್ಲೆಗಳನ್ನು ಸಮದೃಷ್ಟಿಯಿಂದ ನೋಡ ಬೇಕು. ಅದೇ ರೀತಿಯಲ್ಲಿ ರಸ್ತೆಗಳೂ ಸಹ ಸರಿಯಾಗಿಲ್ಲ. ಇದರಿಂದ ಚೆನ್ನಗಿರಿ ತಾಲ್ಲೂಕಿನಲ್ಲಿ ಜನ ಇದ್ದಾರೋ ಇಲ್ಲವೋ ಎಂಬುದಾಗಿ ಸರ್ಕಾರ ತಿಳಿದುಕೊಂಡಿದೆಯೆಂದು ನನಗೆ ಕಾಣುತ್ತದೆ. ಕಾರಿ ಗನೂರು ಹತ್ತಿರ ಭದ್ರಾ ಪ್ರಾಜೆಕ್ಟ್ ಸರ್ವೆ ಮಾಡಿ ಇರ್ರಿಗೇಷನ್ ಚಾನಲ್ ತೆಗೆಯುದ್ದಾರೆ. ಯಾರೋ ಒಬ್ಬ ಪ್ರಮುಖ ಮನುಷ್ಯನ ಜಮೀನು ಇದರಿಂದ ಹೋಗುತ್ತದೆಂದು ಅದನ್ನು ಮುಚ್ಚಿಸಿ ಅಲ್ಲಿ ಅಲೈ ನ್‌ಮೆಂಟ್ ಹಾಕುತ್ತಿದ್ದಾರೆ. ಉಪಮಂತ್ರಿಗಳು ಆ ಸ್ಥಳವನ್ನು ನೋಡಿಕೊಂಡು ಬಂದಿದ್ದಾರೆ. ಸುಮಾರು 300 ಎಕರೆ ಪ್ರದೇಶದಲ್ಲಿ ನೀರಾವರಿ ಭತ್ತದ ಫಸಲನ್ನು ಹಾಕಲಿಕ್ಕಾಗಲಿಲ್ಲ. ಇಷ್ಟು ಅನ್ಯಾಯ ನಡೆಯುತ್ತಿದೆ. ಇದಕ್ಕೆ ಸಂಬಂಧಪಟ್ಟ ಇಲಾಖೆಯವರು ಸತ್ಯದಿಂದ ಕೆಲಸಮಾಡಿದರೆ ದೇಶದ ಕಲ್ಯಾಣವಾಗುತ್ತದೆ. ಈ ಇಲಾಖೆಯನ್ನು enemy No. 2 ಎಂಬುದಾಗಿ ಮಾನ್ಯ ಶ್ರೀ ರಾಜಗೋಪಾಲಚಾರಿಯವರೇ ಕರೆದಿದ್ದಾರೆ. ಈ ರೀತಿಯಾಗಿ ನಾವು ಮಾಡುತ್ತಾ ಹೋದರೆ, ನಿಜ ವಾಗಿ ದೇಶದಲ್ಲಿ ಬಹಳ ಅನ್ಯಾಯವಾಗುತ್ತದೆ. ಲೋಕೋಪಯೋಗಿ ಸಚಿವರು ಬಹಳ ಜಾಗ್ರತೆಯಿಂದ ಕೆಲಸಮಾಡಿದರೆ ಮತ್ತು ಎಲ್ಲಾ ಜಿಲ್ಲೆಗಳಲ್ಲಿಯೂ ಏಕೀಭೂತವಾದ ಕೆಲಸಗಳನ್ನು ಮಾಡಿದರೆ ದೇಶಕ್ಕೆ ಕಲ್ಯಾಣವಾಗುತ್ತದೆಂದು ಹೇಳಿ, ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶಕೊಟ್ಟಂಥ ಅಧ್ಯ ಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀಮತಿ ಶಾರದವ್ವ ಎಂ. ಪಟ್ಟಣ್ (ರಾಮದುರ್ಗ).—ಮಾನ್ಯ ಸಭಾಪತಿಗಳೇ, ಬೆಳಗಾವ್ ಜಿಲ್ಲೆಯ ರಾಮದುರ್ಗ ತಾಲ್ಲೂಕು ಬೆಳಗಾಂ, ಧಾರವಾಡ, ವಿಜಾಪುರ ಮಧ್ಯದಲ್ಲಿ ಇದ್ದು ಇದು ಚಿಕ್ಕ ಸಂಸ್ಥಾನದ ಆಳ್ವಿಕೆಯಲ್ಲಿ ತುಂಬಾ ಹಿಂದುಳಿದ ಪ್ರದೇಶವಾಗಿದ್ದು ಸುತ್ತಲಿನ ಜಿಲ್ಲೆಯ ಸಂಪರ್ಕ ಬೆಳೆಸಬೇಕಾದರೆ ಮಲಪ್ರಭಾ ನದಿಗೆ ಪೂಲ ಕಟ್ಟುವುದು ಬಹಳೇ ಅವಶ್ಯವಿದ್ದು ಪ್ರತಿ ವರ್ಷವೂ ಸರ್ಕಾರವು ಆಶ್ವಾಸನೆ ಕೊಡುತ್ತಾ ಬಂದಿದ್ದು ಇನ್ನು ಮೇಲಾದರೂ ತೀವ್ರ ಕ್ರಮ ಕೈಗೊಳ್ಳುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಆಜ್ಞೆ ಮಾಡಬೇಕು. ಮತ್ತು ಕಟಕೋಳ, ಸಾಲಹಳ್ಳಿ ನಡುವೆ ಗೊಡಚಿಹಳ್ಳಕ್ಕೆ ಪೂಲ ಕಟ್ಟುವ ಯೋಜನೆ ಈವರೆಗಾಗಿ ಮಂಜೂರು ಕೂಡ ಆಗಿದ್ದು ಮತ್ತೆ ಯಾವ ಕಾರಣದಿಂದಲೋ ನನೆಗುದಿಗೆ ಬಿದ್ದ ಈ ಗೊಡಚಿ ಪೂಲಿನ ಕೆಲಸ ಕಾರ್ಯಗತ ಗೊಳಿಸಬೇಕು. ಮತ್ತು ಮುನವಳ್ಳಿ—ಕಟಕೋಳ ನಡುವೆ ಇರುವ ಹಿರೇಹಳ್ಳಕ್ಕೆ ಮತ್ತು ಇನ್ನೊಂದು ಚಿಕ್ಕಹಳ್ಳಕ್ಕೆ ಪೂಲ ಕಟ್ಟುವುದು ಸವದತ್ತಿ, ರಾಮದುರ್ಗ ಈ ಎರಡೂ ತಾಲ್ಲೂಕಿನ ಸಂಪರ್ಕ ಬೆಳಸುವ ಹೆದ್ದಾರಿಯಲ್ಲಿ ಇರುವುದರಿಂದ ಸದರೀ ಎರಡೂ ಹಳ್ಳಕ್ಕೆ ಮಂಜೂರಿ ಕೊಡಬೇಕು. ತೊಂಡಿಕಟ್ಟಿ, ಚಿಪ್ಪಲಕಟ್ಟಿ ಈ ಎರಡೂ ಹಳ್ಳದ ಪೂಲ ಕಟ್ಟುವುದರಿಂದ ರಾಮದುರ್ಗ, ಗೋಕಾಕ್ ತಾಲ್ಲೂಕಿನ ಸಂಪರ್ಕಕ್ಕೆ ಹೆಚ್ಚಿನ ಅನುಕೂಲವಿದ್ದು ಆ ಭಾಗದಲ್ಲಿ ನಮ್ಮ ತಾಲ್ಲೂಕಿನ ದೊಡ್ಡ ದೊಡ್ಡ ಹಳ್ಳಿಗಳಿಗೂ ಸದರೀ ಪೂಲಿನಿಂದ ಹೆಚ್ಚಿಗೆ ಅನುಕೂಲವಿದೆ. ಮತ್ತು ಚಿಕ್ಕೊಪ್ಪ ಊರ ಮುಂದೆ ಇರುವ ಹಳ್ಳಕ್ಕೆ ಇದು ಅಲ್ಲದೇ ಕಿತ್ತೂರು ಗ್ರಾಮದ ಮುಂದೆ ಸೊರಬಾನ—ಕಿತ್ತೂರ ನಡುವೆ ಇರುವ ಜವಳಹಳ್ಳಕ್ಕೆ ಪರಿಶಿಮಾಡಿಸುವುದು ಬಹಳೇ ಅಗತ್ಯವಿದ್ದು ನಮ್ಮ ತಾಲ್ಲೂಕಿನ ದೊಡ್ಡ ಹಳ್ಳಿಗಳಿಗೂ ಬರ ಹೋಗುವ ತೊಂದರೆ ನಿವಾರಣೆಯಾಗಿ ಪಕ್ಕಿಯ ನರಗುಂದ ತಾಲ್ಲೂಕಿನ ಸಂಪರ್ಕ ಕೂಡಾ ತೀರಾ ಹತ್ತಿರವಾಗುತ್ತಿದೆ.

ಈ ವರ್ಷ ಬರಗಾಲ ಕಾಮಗಿರಿಯಲ್ಲಿ ಕೆಲವು ರಸ್ತೆಗಳು ಪ್ರಾರಂಭವಾಡಿದ್ದು ಮಳೆ ಆದ ಕೂಡಲೇ ಒಮ್ಮೆಲೇ ಆ ರಸ್ತೆಗಳ ಕಾಮಗಿರಿ ಬಂದ್ ಮಾಡಿದ್ದರಿಂದ ಅವೆಲ್ಲ ಕೆಲವು ಹಳ್ಳಿಗಳಿಗೇ ಹೋಗಿ ಬರುವ ಬಂಡಿಯದಾರಿಗಳಲ್ಲಿ ಕಲ್ಲು ಮಣ್ಣು ಅಲ್ಲಿಂದಲೇ ಸಿಕ್ಕಾಪಟ್ಟೆ ಬಿದ್ದು ಬಂಡಿಯ ದಾರಿಗಳೇ ಕಟ್ಟಾಗಿವೆ. ಅಂಥ ರಸ್ತೆಗಳು ಮಾತ್ರ ಪಿ. ಡಬ್ಲ್ಯು. ಡಿ. ಯಿಂದ ದುರಸ್ತಿಮಾಡಿ ಕೊಡಲು ಆಜ್ಞೆಮಾಡಬೇಕು.

ಮಾನ್ಯರೇ ನಮ್ಮ ತಾಲ್ಲೂಕು ಬರಗಾಲ ಪ್ರದೇಶದ ವಿಜಾಪೂರ ಜಿಲ್ಲೆಯ ಕೊನೆಯ ತಾಲ್ಲೂಕುವಿದ್ದದ್ದರಿಂದ ಮೇಲಿಂದ ಮೇಲೆ ಆ ಭಾಗದ ನಮ್ಮ ತಾಲ್ಲೂಕಿನ ಹಳ್ಳಿಗಳು ಬರಗಾಲ ಪೀಡಿತವಾಗಿ ರೈತರು ತೊಂದರೆಗೀಡಾಗುತ್ತಿದ್ದು ಮಲಪ್ರಭಾ ಎಡದಂಡೆ ಕಾಲುವೆಯ ಯೋಜನೆ ಯನ್ನು ಕೂಡ ಈಗಲೇ ಸರಕಾರವು ಪ್ರಾರಂಭಿಸಿ ರಾಮದುರ್ಗ ಮತ್ತು ಬಾದಾಮಿ ತಾಲ್ಲೂಕಿನ

ಹಳ್ಳಿಗಳ ಲಕ್ಷಾಂತರ ಎಕರೆ ನೀರಾವರಿ ಯೋಜನೆ ಕಾರ್ಯಗತವಾಗುವಂತೆ ಸರ್ಕಾರವು ಹೆಚ್ಚಿನ ಆಸ್ತೆ ವಹಿಸಬೇಕು.

ಇನ್ನು ಚಿಕ್ಕ ನೀರಾವರಿ ಯೋಜನೆಯು ನಮ್ಮ ತಾಲ್ಲೂಕಿನಲ್ಲಿ ಪ್ರಗತಿಪರವಾಗಿ ನಡೆದಿದ್ದು ಅಭಿನಂದನೀಯವಾಗಿದೆ. ಇನ್ನೂ ಕಾರ್ಯರೂಪಕ್ಕೆ ಬರಲು ಅತಂಕವಾಗಿರುವ ರಂಕಲಕೊಪ್ಪ ಮತ್ತು ಪಿಪ್ಪಲಕಟ್ಟಿ ಹೊಸೂರು—ಈ ಎರಡು ಕೆರೆಗಳು ಆ ಭಾಗದ ರೈತರಿಗೆ ಬಹಳೇ ಅನುಕೂಲ ವಿದ್ದು ಈ ಎರಡು ಕೆರೆಗಳ ಮುಳುಗಡೆಯ ಪ್ರದೇಶದ ಅಕ್ವಿಸಿಷನ್ ಪ್ರಕರಣಗಳು ಯಾರ ಭಿಡೇ ಮುರವತ್ತುಗಳಿಗೂ ಬಗ್ಗದೇ ಆದಷ್ಟು ಬೇಗ ಮುಗಿಸುವಂತೆ ಪ್ರಕರಣಗಳಿಗೆ ಸಂಬಂಧಿಸಿದ ಅಧಿಕಾರಿಗಳಿಗೆ ಅಲ್ಲಲ್ಲಿ ಫೈಲುಗಳು ನಿಲ್ಲದೇ ಮುಂದೆ ಕಳುಹಿಸಲು ಆದೇಶ ನೀಡಬೇಕು.

ಇನ್ನು ಎಲೆಕ್ಟ್ರಿಕ್ ಪವರ್ ಬಗ್ಗೆ ನಮ್ಮ ತಾಲ್ಲೂಕಿನ ರೈತರಿಗೆ ಪಂಪುಸೆಟ್ಟಿಗೆ ಕರೆಂಟು ಒದಗಿಸಿಕೊಳ್ಳುವುದು ಅದು ಒಂದು ದೊಡ್ಡ ಸಮಸ್ಯೆಯಾಗಿ ಪರಿಣಮಿಸಿದೆ. ಪ್ರತಿನಿತ್ಯ ಹಳ್ಳಿಯ ಜನರು ನಾವು ಫೀಕಟ್ಟಿ ಅರ್ಜಿಕೊಟ್ಟು ಎಷ್ಟೋ ದಿನಗಳಾದರೂ ಕೂಡ ನಮಗೆ ಕರೆಂಟ್ ಒದಗಿಸಿಲ್ಲ. ನಮಗಿಂತ ಹಿಂದುಗಡೆ ಅರ್ಜಿಕೊಟ್ಟವರಿಗೆ ಎಷ್ಟೋ ಜನರಿಗೆ ಮೊದಲು ಬಂದಿದೆ. ಇದರ ಕಾರಣಗಳೇ ತಿಳಿಯದಂತಾಗಿದೆ. ತಾಲ್ಲೂಕು ಸೆಕ್ಷನ್ ಆಫೀಸರ್ ಕಂಟ್ರಾಕ್ಟರ್ ಕಡೆ ಹೋಗಿರಿ ಅಂದ್ರೆ ಕಂಟ್ರಾಕ್ಟರ್ ಕಡೆಗೆ ಹೋದರೆ ಅವರು ತಾಲ್ಲೂಕ್ ಸೆಕ್ಷನ್ ಅಫೀಸರ್ ಕಡೆಗೆ ಹೋಗಿರಿ ಅನ್ನುತ್ತಾರೆ. ಇದೂ ಅಲ್ಲದೆ ಬ್ಯಾಂಕಿನವರನ್ನು ಬಳ್ಳುಮಾಡಿ ತೋರಿಸುವುದು ಏನೂ ಅರಿಯದ ಅಶಿಕ್ಷಿತ ಹಳ್ಳಿಯ ಜನರ ಸುಲಿಗೆ ನಡೆದಿದೆ. ಸರ್ಕಾರ ಇದರ ಬಗ್ಗೆ ನಿರ್ದಿಷ್ಟ ಒಂದು ಯೋಜನೆ ಕೈಕೊಂಡು ಹಳ್ಳಿಯ ಜನರಿಗೇ ಈ ಕರೆಂಟ್ ಪಡಕೊಳ್ಳುವ ಕುರಿತು ತಾಲ್ಲೂಕ್ ಸೆಕ್ಷನ್ ಆಫೀಸರ್ ಮತ್ತು ಕಂಟ್ರಾಕ್ಟರ್ ಇವರಿಂದಾಗುವ ತೊಂದರೆಯನ್ನು ನಿವಾರಣೆಮಾಡುವ ಯೋಜನೆ ಸರ್ಕಾರ ಕಂಡುಹಿಡಿಯಬೇಕೆಂದು ವಿನಂತಿಸುವೆ.

7-30 P.M.

ಇನ್ನು ಹಿಡಿಕಲ್ ಡ್ಯಾಮ್‌ನಲ್ಲಿ 10—15 ವರ್ಷಗಳಿಂದ ಪಿ. ಡಬ್ಲ್ಯು. ಡಿ. ವರ್ಕ್‌ಷಾಪ್‌ನಲ್ಲಿ ದುಡಿಯುವಂತಹ ಜನರಿಗೆ ಪ್ರೊಮೋಷನ್ಸ್ ಮೊದಲಾದುವುಗಳಲ್ಲಿ ಏನೂ ಮಾಡಿಲ್ಲ. ಅದರಿಂದ ಅಲ್ಲಿರುವ ಎಲ್ಲಾ ಕೆಲಸಗಾರರಿಗೆ ಹೆಚ್ಚಿನ ಭಡ್ತಿ ಕೊಟ್ಟು, ಖಾಯಂಗೊಳಿಸದವರನ್ನು ಖಾಯಂ ಗೊಳಿಸಬೇಕೆಂದು ಮಾನ್ಯ ಪಿ. ಡಬ್ಲ್ಯು. ಡಿ. ಮಂತ್ರಿಯವರೊಡನೆ ಕೇಳಿಕೊಳ್ಳುತ್ತೇನೆ. ನಾವು ಇವತ್ತು 5 ವರ್ಷಗಳಿಗೊಮ್ಮೆ ಚುನಾಯಿತರಾಗಿ ಬರುತ್ತೇವೆ. ಅದಕ್ಕೆ ಏನಾದರೂ ಕೇಳಿದರೆ ಮಂತ್ರಿಯವರು ಮಾಡುತ್ತೇವೆ, ನೋಡುತ್ತೇವೆಂದು ಹೇಳುತ್ತಿದ್ದಾರೆ. ಆದರೆ ನಮಗೆ ಹಳ್ಳಿಗಳಿಗೆ ಹೋದರೆ, ಅಲ್ಲಿ ಜನರು ನೀವು ಏನು ಮಾಡಿದಿರಿ, ನಮಗೆ ಬಹಳ ತೊಂದರೆಯಾಗಿದೆ, ಎಂದು ಎಲ್ಲಾ ತಮ್ಮ ಕಳವಳವನ್ನು ವ್ಯಕ್ತಪಡಿಸುತ್ತಿದ್ದಾರೆ. ನಾನು ಈವರೆಗೂ ಏನೂ ಮಾತನಾಡಿದ್ದಿಲ್ಲ. ಈಗ ಧೈರ್ಯವಾಗಿ ಮಾನ್ಯ ಮಂತ್ರಿಯವರಲ್ಲಿ ವಿನಂತಿಮಾಡಿಕೊಳ್ಳುವುದೇನೆಂದರೆ, ಅದು ಯಾವ ಕೆಲಸವೇ ಇರಲಿ, ಅದನ್ನು ಪೂರ್ತಿಮಾಡಬೇಕು. ಇದು ಸುಳ್ಳೋ ಸತ್ಯವೋ ಎಂಬುದನ್ನು ನೋಡಿ ಕೊಂಡು, ಮಾಡಬೇಕು. ಇವತ್ತು ಹೇಳದೇ ಮಾಡುವವನು ರೂಢಿಯೊಳಗುತ್ತಮನು ಹೇಳಿ ಮಾಡುವವನು ಮಧ್ಯಮನು, ಆದರೆ ಹೇಳಿಯೂ ಮಾಡದವನು ಅಧಮನು ಎಂಬ ಒಂದು ಗಾದೆಯನ್ನು ಜ್ಞಾಪಿಸಿಕೊಳ್ಳಬಹುದು. ಆದ್ದರಿಂದ ಮಾನ್ಯ ಮಂತ್ರಿಯವರು ಆಡಿದಂತೆ ನಡೆದು ಕಾರ್ಯಗತ ಮಾಡಿ ಜನರಿಗೆ ಒಂದು ತತ್ವ ಅನುಸರಿಸತಕ್ಕಂತಹ ನೀತಿಯನ್ನು ತೋರಿಸಬೇಕೆಂದು ಕೇಳಿಕೊಂಡು ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಪಿ. ವಿ. ಐತಾಳ್ (ಸುರತ್ಕಲ್).—ಮಾನ್ಯ ಅಧ್ಯಕ್ಷರೇ, ಬಂದರಿನ ಅಭಿವೃದ್ಧಿ ಬಾಬ್ತು ಏನು ಬೇಡಿಕೆ ಇಲ್ಲಿ ಬಂದಿದೆ, ಆ ಬೇಡಿಕೆಯ ವಿರೋಧವಾಗಿ ಒಂದೆರಡು ಮಾತುಗಳನ್ನು ಹೇಳಬೇಕೆಂದಿದ್ದೇನೆ. ಇವತ್ತು ನಮ್ಮ ವೀರೇಂದ್ರ ಪಾಟೀಲರಿಗೆ ಕೆಲವರು ಚೇಳರು ಇದ್ದಾರೆ. ಅವರು ಇವರನ್ನು ಬೇಕಾದರೆ ದೇವರ ಹಾಗೆ ಪೂಜೆ ಮಾಡುವವರು. ಪಬ್ಲಿಕ್ ಅಡ್ಮಿನಿಸ್ಟ್ರೇಷನ್ ಒಳ್ಳೆಯದಾಗಬೇಕಾದರೆ, ಸರ್ಕಾರದವರು ಕೆಲವು ರೂಲ್ಸ್‌ಗಳನ್ನು ಮಾಡಿದ್ದಾರೆ. ಒಬ್ಬ ಆಫೀಸರನ್ನು ಮೂರು ವರ್ಷದ ಮೇಲೆ ಒಂದೇ ಕಡೆ ಇಡಬಾರದು ಎಂದು ಇದೆ. ಈ ವಿಚಾರದಲ್ಲಿ ಒಂದು ಪ್ರಶ್ನೆ ಕೂಡ ಇಲ್ಲಿ ಬಂತು. ಕೆಲವು ಒಳ್ಳೆಯ ಆಫೀಸರನ್ನು, ಯಾರೂ ಬೇಡವೆಂದರೂ ಒಂದು ವರ್ಷದಲ್ಲಿ ಟ್ರಾನ್ಸ್‌ಫರ್ ಮಾಡುತ್ತಾರೆ. ಏಕೆ ಉಳಿದವರನ್ನು ಮಾಡುವುದಿಲ್ಲವೆಂದು ಕೇಳಿದರೆ, ಅದಕ್ಕೆ ಎಕ್ಸಿಜೆನ್ಸೀಸ್ ಆಫ್ ಪಬ್ಲಿಕ್ ಸರ್ವಿಸ್, ಎಂದು ಹೇಳುತ್ತಾರೆ. ಅವರಿಗೆ ಬೇಕಾದಂತಹ ಚೇಳರನ್ನು ನಾಲ್ಕುವರೆ ವರ್ಷ ಬೇಕಾದರೆ ಇಟ್ಟಿದ್ದಾರೆ. ಉದಾಹರಣೆಗೆ, ಸ್ಪೆಷಲ್

(ಶ್ರೀ ಪಿ. ವಿ. ಐತಾಳ್)

ಡಿಪ್ಯೂಟಿ ಕಮಿಷನರ್ ಫಾರ್ ಹಾರ್ಬರ್, ಶ್ರೀ ಟಿ. ಜೆ. ರಾಮಕೃಷ್ಣ ಎಂಬವರನ್ನು ನಾಲ್ಕೂವರೆ ವರ್ಷ ಇಟ್ಟಿದ್ದಾರೆ. 8 ತಿಂಗಳ ಕೆಳಗೆ ಎಲ್ಲಾ ದಕ್ಷಿಣ ಕನ್ನಡ ಜಿಲ್ಲೆಯ ವಿರೋಧ ಪಕ್ಷದ ಸದಸ್ಯರು ಅವರನ್ನು ಇಡಬೇಡಿ, ಎಂದು ಹೇಳಿದರೂ ಕೇಳಲಿಲ್ಲ. ಆದರೆ ಒಬ್ಬ ಮನುಷ್ಯನನ್ನು ಮೂರು ವರ್ಷಗಳ ಮೇಲೆ ಇಟ್ಟರೆ ಅವರು ಅನ್ಯಾಯಗಳನ್ನು ಮಾಡುತ್ತಾನೆ, ಎಂದು ಹೇಳಿದರೂ ಅದು ಏನೂ ಈ ಸರ್ಕಾರದ ಮೇಲೆ ನಡೆಯಲಿಲ್ಲ. ಶ್ರೀ ಟಿ. ಜೆ. ರಾಮಕೃಷ್ಣ ಅವರು ಮಾಡಿದ ಭತ್ತೆ ಎಷ್ಟು ಎಂದು ಎಲ್ಲಾ ನೋಡಿದರೆ ಗೊತ್ತಾಗುತ್ತದೆ. ಕೇವಲ ಒಂದು ಫೇರ್ ಕಾಪಿಗೆ ಸೈನ್ ಮಾಡಬೇಕಾದರೂ ಅದು ಇಲ್ಲಿಗೆ ಬರುತ್ತದೆ. ಇವರನ್ನು ತೆಗೆಯಿರಿ ಎಂದು ವಿರೋಧ ಪಕ್ಷದವರಲ್ಲದೆ, ಮಾನ್ಯ ಇದ್ದಿನಬ್ಬನವರೂ ಹೇಳಿದ್ದಾರೆ. ಶ್ರೀಮತಿ ಲೀಲಾವತಿ ರೈಯವರೂ ಹೇಳಿದ್ದಾರೆ, ಮತ್ತು ಆಹಾರ ಮಂತ್ರಿ ಶ್ರೀ ವಿಠಲದಾಸ್ ಶೆಟ್ಟರೂ ಹೇಳಿದ್ದಾರೆ. ಆದರೂ ಕೂಡ ಮಾನ್ಯ ವೀರೇಂದ್ರ ಪಾಟೀಲರು ಈ ಚೇಲರನ್ನು ಇನ್ನೂ ಇಟ್ಟುಕೊಂಡಿದ್ದಾರೆ. ಇನ್ನೂ ಕೇಳಿದರೆ, ನಾಲ್ಕೂವರೆ ವರ್ಷ ಇಟ್ಟುಕೊಂಡು 'ಎಕ್ಸಿಜೆನ್ಸೀಸ್ ಆಫ್ ಪಬ್ಲಿಕ್ ಸರ್ವಿಸ್'' ಎಂದು ಹೇಳುತ್ತಾರೆ. ಏಕೆಂದರೆ, ಇವರು ಅಲ್ಲಿ ಜನರಿಗೆ ಕೊಡುವಂತಹ ಸವಲತ್ತನ್ನು ಕಟ್ ಮಾಡುತ್ತಾರೆ. ಅದು ಇವರಿಗೆ ಬಹಳ ಸಂತೋಷ. ಇವತ್ತು ಅಲ್ಲಿ ಮನೆ ಬಿಟ್ಟು ಹೋಗುವವರಿಗೆ ಪಿಶಾಚಿಗಳು ಇರುವಂತಹ ಕಡೆ 12ವರೆ ಸೆಂಟ್ಸ್ ಜಾಗ ಕೊಡಬೇಕೆಂದು ಆರ್ಡರ್ ಮಾಡಿದ್ದಾರೆ. ಅದನ್ನು ನಿಜಲಿಂಗಪ್ಪನವರು ಇರುವಾಗ ಮಾಡಿದ್ದಾರೆ. ಡೆಪ್ಯೂಟಿ ಕಮಿಶನರ್ ಸರ್ಕಾರಕ್ಕೆ ಲಾಭ ಮಾಡಬೇಕೆಂದು ಅದನ್ನು 10 ಸೆಂಟ್ಸಿಗೆ ಇಳಿಸಿ ಆಳೆದು ಇಟ್ಟುಬಿಟ್ಟರು. ಎರಡೆರಡು ಸಾವಿರ ರೂಪಾಯಿ ಇವರಿಗೆ ಉಳಿಯಿತು. ಇವರು ಕೇವಲ ಪೋಸ್ಟಿನಲ್ಲಿ ಕಳಿಸುವಂತಹ ಫೇರ್ ಕಾಪಿಯನ್ನು ಸೈನಿಗೆ ಇಲ್ಲಿಗೆ ಕಳಿಸುತ್ತಾರೆ. ಇವರು ಒಟ್ಟು 24 ಸಾವಿರ ರೂಪಾಯಿ ಭತ್ಯ ಮಾಡಿದ್ದಾರೆ. ಅದನ್ನು ಪ್ರಶ್ನೆಯಲ್ಲಿ ನಾವು ಕೇಳುವವರಿದ್ದೇವೆ. ಫಿಶರೀಸ್‌ನವರಿಗೆ ಸರ್ಕಾರದವರು 10 ಸೆಂಟ್ ಕೊಡಬೇಕೆಂದು ಇದ್ದರೂ ಇವರು 8 ಸೆಂಟ್ಸ್, 6 ಸೆಂಟ್ಸ್ ವರೆಗೆ ಮಾತ್ರ ಕೊಟ್ಟಿದ್ದಾರೆ. ಇವರು ದೇವರು ಕೊಟ್ಟರೂ ಪೂಜಾರಿ ಬಿಡ ಎಂಬಂತೆ ಮಾಡುತ್ತಿದ್ದಾರೆ. ನಾವು ಇವತ್ತು ಒಂದು ಪರಶುರಾಮ ಸೃಷ್ಟಿಯಲ್ಲಿರತಕ್ಕವರು, ನಿಮಗೂ, ನಮಗೂ ಏನೂ ಸಂಬಂಧವಿಲ್ಲ, ನಮ್ಮನ್ನು ಯಾರೂ ಕೇಳುವವರಿಲ್ಲದಾಗಿದೆ. ಇನ್ನು ಅಲ್ಲಿ ಚಾಲಿಗೇಣಿ ಒಕ್ಕಲುಗಳು ತಲೆತಲಾಂತರದಿಂದ ಇದ್ದಾರೆ. ಅಂಥ 200-300 ಕುಟುಂಬಗಳು ಇದರಲ್ಲಿ ಎವಿಕ್ಟ್ ಆಗಿದ್ದಾರೆ. ಅಂಥವರಿಗೆ ಕಾನೂನು ಪ್ರಕಾರ ಮೂರು ವರ್ಷದ ಗೇಣಿಯಷ್ಟು ಮೌಲ್ಯವನ್ನು ಕೊಡಬೇಕೆಂದಾಗಿದೆ. ಇವರು ಏನು ಮಾಡಿದರೆಂದರೆ, 1964ನೇ ವರ್ಷದಲ್ಲಿ ಬಿಟ್ಟಂತಹ 100 ಕುಟುಂಬಗಳಿಗೆ ಒಂದು ಕಾಸೂ ಕೊಟ್ಟಿಲ್ಲ. ಇವತ್ತು ಅಲ್ಲಿ ಒಂದು ಆರ್ಡರ್ ಮಾಡಿದರು, 15 ದಿವಸದೊಳಗೆ, ಒಂದು ತಿಂಗಳೊಳಗೆ ಮನೆ ಬಿಡಬೇಕೆಂದು ಹೇಳಿದರು. ಕೆಲವರು ಅಕ್ವಿಜಿಶನ್ ಆಗುವಾಗ ಅಲ್ಲಿಗೆ ಹೋಗುವಂತಹ ಭಯ ಬಂದು ಅವರು ಹೋಗುವಾಗ ಒಂದು ತಿಂಗಳು, ಎರಡು ತಿಂಗಳು, ಮೂರು ತಿಂಗಳು ತಡವಾಯಿತು. ಅಂಥ 100 ಕುಟುಂಬದವರಿಗೆ ಇವತ್ತಿನವರೆಗೂ ಒಂದು ಚಿಕ್ಕಾಸೂ ಕೊಟ್ಟಿಲ್ಲ ಒಂದು ಸಲ 64ನೇ ಇಸವಿಯಲ್ಲಿ 1,200 ಎಕರೆ ಎಕ್ವ್ಯಾಯರ್ ಆಗಲು ನೋಟಿಫಿಕೇಶನ್ ಆಯಿತು. ಒಂದು 64ನೇ ವರ್ಷ ಅಂತ್ಯಕ್ಕೆ ನೋಟಿಫಿಕೇಶನ್ ಆಯಿತು. 66-67ರಲ್ಲಿ ಒಂದು ಎವಿಕ್ಷನ್ ಆಯಿತು. 64ನೇ ಇಸವಿಯಲ್ಲಿ ಪ್ರಥಮವಾಗಿ ಮನೆ ಬಿಟ್ಟವರಿಗೆ ಒಂದು ಪಾವಾಣೆಯೂ ಇಲ್ಲ. 66—67ರಲ್ಲಿ ಬಿಟ್ಟವರಿಗೆ ಮೂರು ವರ್ಷದ ಪರಿಹಾರ ಕೊಡುತ್ತಿದ್ದಾರೆ. ಹಿಂದೆ ಬಿಟ್ಟವರಿಗೆ ಏನೂ ಕೊಡುತ್ತಾ ಇಲ್ಲ: ಇದು ಸರಿಯಲ್ಲ. ಮುಖ್ಯಮಂತ್ರಿಯವರಿಗೆ ಇದರ ವಿಚಾರವಾಗಿ ಪತ್ರ ಕೂಡ ಬರೆದಿದ್ದೇನೆ; ಬಂದರಿನ ಮಂತ್ರಿ ಶ್ರೀ ಎಚ. ಸಿ. ಲಿಂಗಾರೆಡ್ಡಿಯವರಿಗೂ ಕಾಗದ ಬರೆದಿದ್ದೇನೆ. ಅಲ್ಲಿಗೆ ಹತ್ತು ಸಲ ಹೋದೆ. ಸ್ಪೆಶಲ್ ಡಿ. ಸಿ. ಗೆ ಬರೆದರೆ ಉತ್ತರವಿಲ್ಲ. ಎಕ್ಸಪ್ಲನೇಶನ್ ಫೈಲೇ ಇಲ್ಲ. ಈ ನಮೂನೆ ಮಾಡುತ್ತಾ ಇದ್ದರೆ, ಬಡ ರೈತರಿಗೆ, ಪರಿಹಾರ ದೊರಕುವುದಾದರೂ ಹೇಗೆ? ಇವತ್ತು ಆ 100 ಕುಟುಂಬದವರು ನಿರ್ಗತಿಕರಾಗಿದ್ದಾರೆ. ಪಿ ಡಬ್ಲ್ಯು ಡಿ ಸೆಕ್ರೆಟರಿಯವರ ಹತ್ತಿರ, ಫೈಲು ಎಲ್ಲಿ ಉಂಟು ಎಂದರೆ, ಅಂಥ ಫೈಲು ಇಲ್ಲವೆಂದು ಹೇಳುತ್ತಿದ್ದಾರೆ. ಬರೇ ಇವರಿಂದ ನಿಮ್ಮ ಕಾಗದ ಬಂದಿದೆ, ಕಾಗದವನ್ನು ಪರಿಗಣಿಸಲಾಗುತ್ತದೆಂದು ಒಂದು ಉತ್ತರ ಬಂದಿವೆಯಲ್ಲದೆ, ಆ ಫೈಲು ಎಲ್ಲಿ ಉಂಟು ಎಂದು ಗೊತ್ತಿಲ್ಲ ಎಂದು ಹೇಳುತ್ತಿದ್ದಾರೆ. ಇವರು ಪ್ರತಿಯೊಂದು ವಿಷಯದಲ್ಲೂ ಇಂಟರ್‌ಫಿಯರ್ ಆಗಿ ಜನರಿಗೆ ಇವತ್ತು ಮೋಸವನ್ನು ಮಾಡುತ್ತಿದ್ದಾರೆ.

ಅಂಥಾ ಆಫೀಸರನ್ನು ಬದಲಾವಣೆ ಮಾಡಿ. ಅವರು ಇಲ್ಲದಿದ್ದರೆ ಸೂರ್ಯ ಚಂದ್ರರು ಉದಯವಾಗುವುದಿಲ್ಲವೇ? 4½ ವರ್ಷಗಳಿಂದ ಏತಕ್ಕೆ ಆ ದೊಡ್ಡ ಭೂತನನ್ನು ಅಲ್ಲಿ ಇಟ್ಟುಕೊಂಡಿದ್ದೀರಿ,

ಆ ಭೂತನಿಂದ ನಮ್ಮ ಜಿಲ್ಲೆಯಲ್ಲಿ ಸುಮಾರು 4-5 ಗ್ರಾಮಗಳಿಗೆ ಕ್ಷೇಮವಿಲ್ಲ. ಬೈಕಂಪಾಡಿ ಮತ್ತು ಪಣಂಬೂರಿನಲ್ಲಿ ಸ್ಥಳ ಬಿಡಿಸಿದವರಿಗೆ ಸ್ಮಶಾನದ ಹತ್ತಿರ ಸ್ಥಳ ಕೊಟ್ಟಿದ್ದೀರಿ.

ಶ್ರೀ ಬಿ. ವಿಟ್ಠಲದಾಸ ಶೆಟ್ಟಿ (ಆಹಾರ ಮತ್ತು ನಿತ್ಯೋಪಯೋಗಿ ಸರಬರಾಜು ಶಾಖೆಗಳ ರಾಜ್ಯಮಂತ್ರಿಗಳು).—ಸ್ಮಶಾನದ ಹತ್ತಿರ ಸ್ಥಳ ಕೊಟ್ಟಿದ್ದಾರೆ ಎಂದು ತಾವು ಹೇಳುವುದು ಸರಿಯಲ್ಲ. ಸ್ಮಶಾನ, ಕಾಲನಿಯಿಂದ ಒಂದೂವರೆ ಫರ್ಲಾಂಗ್ ದೂರದಲ್ಲಿದೆ. ಆದ್ದರಿಂದ ಸ್ಮಶಾನದಲ್ಲಿ ಜಾಗ ಕೊಟ್ಟಿದ್ದಾರೆ ಎಂದು ಪದೇ ಪದೇ ಹೇಳುವುದು ಬೇಡ.

ಶ್ರೀ ಪಿ. ವಿ. ಐತಾಳ್.—ಮಾನ್ಯ ಮಂತ್ರಿಗಳು ಅದನ್ನು ಸ್ಮಶಾನ ಎಂದು ಹೇಳಬೇಡಿ ಎಂದು ಹೇಳುತ್ತಾರೆ, ಅವರು ಆ ಪ್ರದೇಶಕ್ಕೆ ಬಂದು ನೋಡಿದರೆ ಗೊತ್ತಾಗುತ್ತದೆ. ಅಲ್ಲಿರತಕ್ಕ ಸ್ಮಶಾನದಲ್ಲಿ ಶವಸಂಸ್ಕಾರ ಮಾಡಿದರೆ, ಹೊಗೆ ಹರಡಿಕೊಂಡು ಪಕ್ಕದಲ್ಲಿ ವಾಸವಾಗಿರತಕ್ಕ ಜನಗಳು ಮತ್ತು ಮಕ್ಕಳು ಮರಿಗಳಿಗೆಲ್ಲಾ ತೊಂದರೆಯಾಗುತ್ತದೆ. ಆ ಒಂದು ದೃಶ್ಯವನ್ನು ಮಾನ್ಯ ಮಂತ್ರಿಗಳು ನೋಡಿದರೆ ಗೊತ್ತಾಗುತ್ತದೆ.

ಶ್ರೀ ಬಿ. ವಿಟ್ಠಲದಾಸ ಶೆಟ್ಟಿ.—ನಾನು ಅಲ್ಲಿಗೆ ಹೋಗಿ ನೋಡಿದ್ದೇನೆ. ಶ್ರೀಮಾನ್ ಇದಿನಬ್ಬ ಅವರೂ ಅಲ್ಲಿಗೆ ಹೋಗಿ ನೋಡಿದ್ದಾರೆ. ಸ್ಮಶಾನ ಕಾಲನಿಯಿಂದ ಒಂದೂವರೆ ಫರ್ಲಾಂಗ್ ದೂರದಲ್ಲಿದೆ. ಯಾವುದನ್ನೂ ನೋಡದೆ ಮಾತನಾಡುವುದು ಸರಿಯಲ್ಲ. ದಯವಿಟ್ಟು ನನ್ನ ಜೊತೆಯಲ್ಲಿ ಬನ್ನಿ ನೋಡೋಣ.

ಶ್ರೀ ಪಿ. ವಿ. ಐತಾಳ್.—ಇದೇ ಮಂತ್ರಿಗಳು ಬೈಕಂಪಾಡಿಯಲ್ಲಿ ಹೇಳಿದ್ದಾರೆ, 'ಶವದರ್ಶನಂ' ಶುಭ ಲಕ್ಷಣಂ, ಅಂತ ಪಂಚಾಂಗದಲ್ಲಿ ಹೇಳಿದೆ. ಆದ್ದರಿಂದ ಸ್ಮಶಾನಕ್ಕೆ ದುಃಖಪಡದೆ ಹೋಗಿ ಎಂದು ಹೇಳಿದ್ದಾರೆ. ಈಗ ಅವರು ಸತ್ಯಕ್ಕೆ ದೂರವಾದ ಮಾತುಗಳನ್ನು ಹೇಳುತ್ತಿದ್ದಾರೆ.

ಇನ್ನೊಂದು ಸ್ಪೆಷಲ್ ಡೆಪ್ಯುಟಿ ಕಮೀಷನರ್ ಮಾಡಿದ್ದು ಏನೆಂದರೆ 1964ನೇ ಇಸವಿಯಲ್ಲಿ ಬಂದರು ನಿರ್ಮಾಣಕ್ಕಾಗಿ ಜಾಗವನ್ನು ಬಿಟ್ಟು ಕೊಟ್ಟ ಚಾಲಗೇಣಿ ಒಕ್ಕಲುಗಳಿಗೆ ಇನ್ನೂ ಪರಿಹಾರ ಕೊಟ್ಟಿಲ್ಲ. ಇದಕ್ಕೆ ಕಾರಣವೇನು ? ಮತ್ತು ಈ ರೀತಿ ಬಂದರು ನಿರ್ಮಾಣದಲ್ಲಿ ಗ್ರಾಮ ಸ್ವಾಧೀನಕ್ಕೆ ಒಳಗಾಗಿ ಊರು ಬಿಟ್ಟು ಬೇರೆ ಕಡೆ ಹೋಗತಕ್ಕ ಕುಟುಂಬಗಳಿಗೆ ಟ್ರಾನ್ಸ್‌ಪೋರ್ಟ್ ಚಾರ್ಜ್ ಪೂರ್ತಿ ಕೊಡಬೇಕೆಂದು ಸರ್ಕಾರದವರು ಹುಕುಂ ಮಾಡಿದ್ದಾರೆ. ಹೀಗಿದ್ದರೂ ಸಹ ಡೆಪ್ಯುಟಿ ಕಮೀಷನರು ಒಂದು ಫ್ಯಾಮಿಲಿಗೆ 20 ರೂಪಾಯಿ ಟ್ರಾನ್ಸ್‌ಪೋರ್ಟೇಷನ್ ಚಾರ್ಜ್ ಕೊಟ್ಟರೆ ಸಾಕು ಎಂದು ಸರ್ಕಾರದಿಂದ ಹುಕುಂ ಪಡೆದುಕೊಂಡರು. ಈ ರೀತಿಯಾಗಿ ಅವರು ಅಲ್ಲಿನ ಜನತೆಗೆ ಅನ್ಯಾಯ ಮಾಡುತ್ತಿದ್ದಾರೆ. ಯಾವುದಾದರೂ ಒಂದು ನೋಟಿಫಿಕೇಷನ್ನಿಗೆ ಮೇಲ್ಪಟ್ಟ ಅಧಿಕಾರಿಗಳ ಸಿಗ್ನೇಚರ್ ಹಾಕಿಸುವ ಸಂದರ್ಭದಲ್ಲಿ 20 ಪೈಸೆ ಸ್ಟಾಂಪು ಖರ್ಚು ಕೊಟ್ಟು ಪೋಸ್ಟಿನಲ್ಲಿ ಬೆಂಗಳೂರಿಗೆ ಕಳುಹಿಸಿದರೂ ಆ ಕೆಲಸ ಆಗುತ್ತದೆ. ಆದರೆ ಈ ಡೆಪ್ಯುಟಿ ಕಮೀಷನರು ಆ ರೀತಿ ಮಾಡುವುದಕ್ಕೆ ಬದಲಾಗಿ ತಾವೇ ಸ್ವತಃ ಬೆಂಗಳೂರಿಗೆ ಬಂದು ಭತ್ಯ ಪಡೆಯುತ್ತಾರೆ. ಇಂಥಾ ಡೆಪ್ಯುಟಿ ಕಮೀಷನರನ್ನು ನಮ್ಮ ಜಿಲ್ಲೆಯಲ್ಲಿ ಇಟ್ಟುಕೊಂಡಿದ್ದಾರೆ.

ಶ್ರೀ ಬಿ. ಎಂ. ಇದಿನಬ್ಬ (ಮಂಗಳೂರು-2).—ಕಾಟಿಪಳ್ಳದಲ್ಲಿ ಡೆಪ್ಯುಟಿ ಕಮೀಷನರು ಬಾವಿಗಳನ್ನು ತೋಡಿಸಿಕೊಟ್ಟಿದ್ದಾರೆ.

ಶ್ರೀ ಪಿ. ವಿ. ಐತಾಳ್.—ಈ ವಿಚಾರವನ್ನು ಕಳೆದ ಸಲ ಹೇಳಿದ್ದೇನೆ. ಇದು ಮಾನ್ಯ ಆಹಾರ ಖಾತೆಯ ಮಂತ್ರಿಗಳಿಗೂ ಗೊತ್ತಿರಬಹುದು. ಆ ಪ್ರದೇಶಕ್ಕೆ ಹೊಸದಾಗಿ ಯಾರಾದರೂ ಮಂತ್ರಿಗಳು ಪ್ರವಾಸ ಬರುವುದಾದರೆ ಡೆಪ್ಯುಟಿ ಕಮೀಷನರು ಮತ್ತು ಇಂಜಿನಿಯರು ಸೇರಿಕೊಂಡು ನೀರು ಇಲ್ಲದೆ ಇರುವ ಬಾವಿಗಳಿಗೆ ಲಾರಿಯಲ್ಲಿ ನೀರು ತಂದು ಹಾಕುತ್ತಾರೆ ಮಂತ್ರಿಗಳು ಬಂದಾಗ ಹಿರಿಯ ಅಧಿಕಾರಿಗಳು ಬಂದಾಗ ಅವರಿಗೆ ಬಾವಿಯಲ್ಲಿ ನೀರು ತೋರಿಸಿ 3 ಅಡಿ ನೀರು ಇದೆ ಎಂದು ತೋರಿಸಿದ್ದಾರೆ.

ಇನ್ನು ಲ್ಯಾಂಡ್ ಅಕ್ವಿಜೇಷನ್ ಕೆಲಸ ಮುಗಿದಿದೆ. ಅಲ್ಲಿ ಲ್ಯಾಂಡ್ ಅಕ್ವಿಜಿಷನ್ ಆಫೀಸರು ಎಂದರೆ ಡಿ. ಸಿ. ಯವರು ಇರುವುದು ಅಗತ್ಯವಿಲ್ಲ. ಅವರನ್ನು ವಾಪಸ್ಸು ಕರೆಸಿಕೊಳ್ಳಿರಿ. ಹಾಸನ-ಮಂಗಳೂರು ರೈಲ್ವೆ ಸಂಬಂಧದ ಹಾಗೂ ಇತರೇ ಲ್ಯಾಂಡ್ ಅಕ್ವಿಜಿಷನ್ ಸಂಬಂಧದಲ್ಲಿ ಒಂದು ಎಕರೆಗೆ 5 ಸಾವಿರ ರೂಪಾಯಿಗಳ ಪರಿಹಾರವನ್ನು ಕೊಡಬೇಕೆಂದು ಸಂಬಂಧಪಟ್ಟ ರೈಲ್ವೆ ಲ್ಯಾಂಡ್ ಅಕ್ವಿಜಷನ್ ಆಫೀಸರು ಬರೆದರೆ, ಈ ಲ್ಯಾಂಡ್ ಅಕ್ವಿಜಿಷನ್ ಸ್ಪೆಷಲ್ ಡೆಪ್ಯುಟಿ ಕಮೀಷನರು ತಮ್ಮ ಅಪ್ರೂವಲ್‌ಗೆ ಬಂದಾಗ 3 ಸಾವಿರ ರೂಪಾಯಿಗಳನ್ನು ಕೊಡಬೇಕೆಂದು ಬರೆಯುತ್ತಾರೆ. ಅದೇ ಖಾಯಂ ಆಗುತ್ತದೆ. ಈ ರೀತಿ ಪ್ರತಿಯೊಬ್ಬರಿಗೂ ಕಡಿಮೆ ಕೊಡುವಂತೆ ಬರೆದಿದ್ದಾರೆ. ಇವರಿಂದ ನಮ್ಮ ಜಿಲ್ಲೆಯ ಜನಗಳಿಗೆ ಉಪಕಾರವಾಗುವುದಕ್ಕೆ ಬದಲಾಗಿ ಅಪಕಾರ

(ಶ್ರೀ ಪಿ. ವಿ. ಐತಾಳ್)

ವಾಗುತ್ತಿದೆ. ಈ ರೀತಿ ಕಡಿಮೆ ಪರಿಹಾರವನ್ನು ಪಡೆದುಕೊಂಡವರು ನಮಗೆ ಇನ್ನು ಹೆಚ್ಚು ಕೊಡಬೇಕು ಕೋರ್ಟಿಗೆ ಕೇಸು ಹಾಕಿದ್ದವರಿಗೆ ಸಿವಿಲ್ ಜಡ್ಜ್ ಇನ್ನೂ ಸ್ವಲ್ಪ ಜಾಸ್ತಿ ಕೊಡಬೇಕೆಂದು ಹುಕುಂಮಾಡಿದ್ದಾರೆ. 100-200 ರೂಪಾಯಿಗಳನ್ನು ಜಾಸ್ತಿ ಕೊಟ್ಟರೂ ಅವರಮೇಲೆ ಈ ಡೆಪ್ಯುಟಿ ಕಮೀಷನರು ಗುಳಿಗನ ದೃಷ್ಟಿಯಲ್ಲಿ ಕಣ್ಣು ಬಿಡುತ್ತಾರೆ. ಸಿವಿಲ್ ಕೋರ್ಟಿನವರು ಪರಿಹಾರ ಜಾಸ್ತಿ ಕೊಡಬೇಕೆಂದು ಹೇಳಿದ್ದಾರೆ. ಅದಕಾರಣ ಪ್ರತಿಯೊಂದು ಕೇಸ್‌ನ ಬಗ್ಗೆಯೂ ಕೂಡ ಮೇಲಿನ ಕೋರ್ಟಿಗೆ ಅಪೀಲ್ ಮಾಡಿ ಎಂದು ಸರ್ಕಾರಕ್ಕೆ ಅಲ್ಲಿಯ ಜಿಲ್ಲಾಧಿಕಾರಿ ಅಂದರೆ ವೀರೇಂದ್ರಪಾಟೀಲರ ಚೇಲ ಬರೆದಿದ್ದಾರೆ. 100 ರೂಪಾಯಿ 200 ರೂಪಾಯಿಗಳು ಜಾಸ್ತಿ ತೆಗೆದುಕೊಂಡಿರುವ ಮನೆಮಠ ಕಳೆದುಕೊಂಡ ನಿರ್ಗತಿಕರ ಮೇಲೆ ಅಪೀಲ್ ಮಾಡಿ ಎಂದು ಆ ಚೇಲ ಸರ್ಕಾರಕ್ಕೆ ಕಾಗದ ಬರೆದಿದ್ದಾರೆ. ಅದರಂತೆ ಸರ್ಕಾರದವರು ಮೇಲಿನ ಕೋರ್ಟಿನಲ್ಲಿ ಅಪೀಲ್ ಮಾಡಿದ್ದಾರೆ. ಈ ಪ್ರಕಾರವಾಗಿ ನಮ್ಮ ಭಾಗದ ಬಡ ಜನರಿಗೆ ಅನ್ಯಾಯ ಮಾಡುತ್ತಿದ್ದಾರೆ.

ಇನ್ನು ಶ್ರೀಮಾನ್ ಲಕ್ಕಪ್ಪನವರಿಗೆ ಹಿಂದೆ ಅನುಸರಿಸುತ್ತಿದ್ದ ಒಂದು ಪದ್ಧತಿಯನ್ನು ತಿಳಿಸುತ್ತೇನೆ. ಏನೆಂದರೆ ಹಿಂದೆ ಪ್ರತಿಯೊಬ್ಬ ಎಂ. ಎಲ್. ಎ. ಕ್ಷೇತ್ರದಲ್ಲಿ ವರ್ಷಕ್ಕೆ ಒಂದೊಂದು ರಸ್ತೆಯನ್ನು ಮಾಡಿಸಬೇಕೆಂಬ ನೀತಿ ಇತ್ತು. ಅದನ್ನು ಈಗಿನ ಸರ್ಕಾರದವರು ಸಂಪೂರ್ಣವಾಗಿ ಕೈಬಿಟ್ಟಿದ್ದಾರೆ. ನನ್ನ ಕ್ಷೇತ್ರದಲ್ಲಿ 10–15 ರಸ್ತೆಗಳನ್ನು ತೆಗೆದುಕೊಳ್ಳಬೇಕೆಂದು ಸರ್ಕಾರಕ್ಕೆ ಬರೆದಿದ್ದೇನೆ. ನಾನು ಎಂ. ಎಲ್. ಎ. ಆದ್ದರಿಂದ ಬರೆದೆ. ಆದರೆ ನಾನು ವಿರೋಧ ಪಕ್ಷದವನು ಎಂಬ ಕಾರಣದಿಂದ ಒಂದು ರಸ್ತೆಯನ್ನೂ ಸಹ ಮಾಡಿಸಿಲ್ಲ.

ಶ್ರೀ ಬಿ. ಎಂ. ಇದಿನಬ್ಬ.—ಕಾಂಗ್ರೆಸ್ ಪಕ್ಷದವರ ಕ್ಷೇತ್ರದಲ್ಲಿಯೂ ಸಹ ಮಾಡಿಸಿಲ್ಲ.

ಶ್ರೀ ಪಿ. ವಿ. ಐತಾಳ್.—ಒಂದು ವಿಚಾರ ಹೇಳುತ್ತೇನೆ, ಮಾನ್ಯ ಮಂತ್ರಿಗಳು ನೋಟ್ ಮಾಡಿಕೊಳ್ಳಬೇಕು. ನನ್ನ ಕ್ಷೇತ್ರದಲ್ಲಿ 53 ಗ್ರಾಮಗಳು ಇವೆ. ಈ ಪೈಕಿ ಉಳ್ಳಾಯಿ, ಬಂಡೋಲ ಮತ್ತು ಬೆಟ್ಟದ ಮಲ್ಲೂರು ಗ್ರಾಮಗಳಲ್ಲಿ ಸ್ಕೂಲ್ ಇಲ್ಲ. ಈ ಗ್ರಾಮಗಳ ಹುಡುಗರು ವಿದ್ಯಾಭ್ಯಾಸಕ್ಕಾಗಿ ಗುರುಪುರದ ಸ್ಕೂಲಿಗೆ ನದಿ ದಾಟಿಕೊಂಡು ಹೋಗಬೇಕು. ಈ ನದಿಗೆ ಒಂದು ಸೇತುವೆ ಕಟ್ಟಿಸಿಕೊಡಿ ಎಂದು ಬರೆದರೆ ಮುಂದಿನ ವರ್ಷ ನೋಡೋಣ ಎಂದು ತಾವು ಹೇಳಿದ್ದೀರಿ. ಮಳೆಗಾಲದಲ್ಲಿ 25 ರೂಪಾಯಿಗಳನ್ನು ಪ್ರತಿಯೊಬ್ಬ ವಿದ್ಯಾರ್ಥಿಯೂ ದೋಣಿಯಲ್ಲಿ ಕುಳಿತುಕೊಂಡು ಹೋಗುವುದಕ್ಕಾಗಿ ಕೊಡಬೇಕಾಗಿದೆ. ಮೊನ್ನೆ ಇಬ್ಬರು ಮಕ್ಕಳು ನದಿಯಲ್ಲಿ ಬಿದ್ದು ಸತ್ತುಹೋದರು. ನಮಗೆ ಸ್ವಾತಂತ್ರ್ಯ ಬಂದಿದೆ ಎಂದು ಹೇಳಬೇಕೋ, ಇಲ್ಲ ಎಂದು ಹೇಳಬೇಕೋ ಗೊತ್ತಿಲ್ಲ. ಈ ಸತ್ತಮಕ್ಕಳ ಬಳಗದವರಿಗೆ ಸರ್ಕಾರದವರು ಒಂದೊಂದು ಸಾವಿರ ರೂಪಾಯಿಗಳ ಪರಿಹಾರವನ್ನು ಕೊಟ್ಟಿದ್ದಾರೆ. ಇದು ಬಹಳ ಅನ್ಯಾಯವೆಂದು ಹೇಳಬಹುದು. ಶ್ರೀ ಶ್ರೀನಿವಾಸಮಲ್ಯ ಅವರು ಇದ್ದಾಗ ನಮ್ಮ ಜಿಲ್ಲೆಯಲ್ಲಿ ಬಹಳ ಕೆಲಸಗಳು ಆಗಿವೆ. ಅವರು ಹೋದನಂತರ ನಮ್ಮ ಜಿಲ್ಲೆಯನ್ನು ಕೇಳುವವರೇ ಇಲ್ಲವಾಗಿದೆ ಎಂದು ನಾನು ಪುನಃ ಪುನಃ ಹೇಳುತ್ತಿದ್ದೇನೆ. ಯಾವ ಪಬ್ಲಿಕ್ ವರ್ಕ್ಸ್ ಕೂಡ ನಡೆಯುತ್ತಿಲ್ಲ. ಪೋರ್ಟ್ ಕೆಲಸ ಆಗುತ್ತಿದೆ ಎಂದು ತಾವು ಹೇಳಬಹುದು. ಆದರೆ ಅದು ಕೇಂದ್ರಸರ್ಕಾರದವರು ಮಾಡಿಸುತ್ತಿರುವುದು. ಶ್ರೀನಿವಾಸಮಲ್ಯರು ಇದ್ದಾಗ ಐನೂರು ಅಪ್ರೋಚ್ ರೋಡು ಬಂಟ್ವಾಳದವರೆಗೆ ಆಗಿತ್ತು. ಅದಕ್ಕೆ ಆರೂವರೆ ಲಕ್ಷ ರೂಪಾಯಿಗಳು ಖರ್ಚಾಗಿತ್ತು. ಆದರೆ 8-10 ವರ್ಷಗಳಿಂದ ಈ ರಸ್ತೆಯನ್ನು ರಿಪೇರಿ ಮಾಡಿಸದೆ, ನದಿಯ ನೀರು ಬಂದು ಗುದ್ದಿ ಗುದ್ದಿ ಎಲ್ಲಾ ಹಾಳಾಗಿದೆ. ಆ ರಸ್ತೆಯನ್ನು ದುರಸ್ತಿ ಮಾಡಿಸಬೇಕಾಗಿದೆ.

ಶ್ರೀ ಎಸ್. ವಿ. ಅಗ್ನಿಹೋತ್ರಿ.—ಶ್ರೀನಿವಾಸಮಲ್ಯ ಅವರು ಯಾವ ಪಕ್ಷದವರು ?

ಶ್ರೀ ಪಿ. ವಿ. ಐತಾಳ್.—ಅವರು ಕಾಂಗ್ರೆಸ್ ಪಕ್ಷದವರು. ಅವರು ಕಾಂಗ್ರೆಸ್ ಪಕ್ಷದವರಾದರೂ ಕೂಡ ನಮ್ಮ ಜಿಲ್ಲೆಗೆ ಸ್ವಲ್ಪ ಕೆಲಸ ಮಾಡಿದ್ದಾರೆಂದು ನಾನು ಒಪ್ಪಿಕೊಳ್ಳುತ್ತೇನೆ. ಇವರು ಮಾಡಿಸಿದಂತಹ ಅಪ್ರೋಚ್ ರೋಡ್ ನೀರಿನಿಂದ ಕೊಚ್ಚಿ ಹೋಗಿ ಹಾಳಾಗುತ್ತಿದೆ, ದುರಸ್ತಿ ಮಾಡಿ ಎಂದು ಸರ್ಕಾರಕ್ಕೆ ಹೇಳಿದರೆ it is under examination—ಎಂದು ನನಗೆ ಸರ್ಕಾರದವರು ಪತ್ರ ಬರೆದಿದ್ದಾರೆ.

ಉಪಾಧ್ಯಕ್ಷರು.—ತಮ್ಮ ಸಮಯ ಮುಗಿಯಿತು. ಇನ್ನೂ ಮಾತನಾಡುವವರು ಬಹಳ ಜನ ಇದ್ದಾರೆ.

ಶ್ರೀ ಪಿ. ವಿ. ಐತಾಳ್.—ಆಗಬಹುದು.

†ಶ್ರೀ ಎಸ್. ಭೀಮಣ್ಣ (ಭಾಲ್ಕಿ).—ಮಾನ್ಯ ಉಪಾಧ್ಯಕ್ಷರೇ, ಈ ಬಡ್ಜೆಟ್ ನೋಡಿದರೆ ನಮ್ಮ ಸರ್ಕಾರದವರು ಸಮಾಜವಾದ, ಲೋಕಶಾಹಿ ಸಮಾಜವಾದ ಎಂದು ಏನು ಘೋಷಣೆ ಮಾಡಿಕೊಂಡು ಬಂದಿದ್ದಾರೆ ಇವಕ್ಕೆ ಒಂದಕ್ಕೊಂದು ವ್ಯತ್ಯಾಸವಿರುವಂತೆ ಕಾಣುತ್ತಿದೆ. ಈ ಬಡ್ಜೆಟ್ ನೋಡಿದಮೇಲೆ ಸಮಾಜವಾದದ ಬಗ್ಗೆ ಪರಸ್ಪರ ವಿರೋಧವಾಗಿ ನಡೆದುಕೊಂಡಿರುವಂತೆ ಕಾಣುತ್ತದೆ. ವಾಸ್ತವಿಕವಾಗಿ ದೇಶದಲ್ಲಿ ಆಯವ್ಯಯ ಎರಡೂ ಸರಿಯಾದ ರೀತಿಯಲ್ಲಿ ನಡೆಯಬೇಕಾಗಿದೆ. ವರಮಾನ ಎಷ್ಟು ಮಹತ್ವದ್ದು ಇದೆಯೋ ಅದರ ಪ್ರಕಾರ ದೇಶದಲ್ಲಿ ಹಣ ಖರ್ಚು ಮಾಡುವುದು ಸಹ ಅಷ್ಟೇ ಮಹತ್ವದ್ದು ಇದೆ. ಆ ಪ್ರಕಾರ ನೋಡಿದರೆ ನಮ್ಮ ಬಡ್ಜೆಟ್‌ನಲ್ಲಿ ಏನು ಹಣ ಇದೆ, ಅದನ್ನು ಸರಿಯಾದ ರೀತಿ ಹಂಚುತ್ತಿಲ್ಲ. ಈ ಮಾತನ್ನು ನಾನು ಬಹಳ ವರ್ಷಗಳಿಂದ ಹೇಳುತ್ತಾ ಇದ್ದೇನೆ. ಬಿದರೆ ಜಿಲ್ಲೆಯ ಇರಿಗೇಷನ್ ಪ್ರಾಜೆಕ್ಟ್ ಬಗ್ಗೆ 7 ವರ್ಷಗಳಿಂದ ಹೇಳುತ್ತಿದ್ದೇನೆ. ಅನೇಕ ಪ್ರಶ್ನೆಗಳನ್ನು ಹಾಕಿದ್ದೇನೆ. ಈ ವಿಚಾರದ ಬಗ್ಗೆ ಪ್ರಸ್ತಾಪ ಮಾಡಿದಾಗಲೆಲ್ಲಾ 4ನೇ ಪಾಂಚವಾರ್ಷಿಕ ಯೋಜನೆಯಲ್ಲಿ ತೆಗೆದುಕೊಳ್ಳುತ್ತೇವೆಂದು ಹೇಳುತ್ತಾ ಬಂದಿದ್ದಾರೆ. ಈ ದೃಷ್ಟಿಯಿಂದ ನಾನು ಮೂರು ನಾಲ್ಕು ಪಾಯಿಂಟ್‌ಗಳನ್ನು ಹೇಳಬೇಕಾಗಿದೆ. ಸರ್ಕಾರದವರು ಕಾರಂಜ ಯೋಜನೆಯನ್ನು ತೆಗೆದುಕೊಳ್ಳಬೇಕೆಂದಿದ್ದೇವೆ ಎಂದು ಹೇಳುತ್ತಾ ಬಂದಿದ್ದಾರೆ. ನಮ್ಮ ಜಿಲ್ಲೆ ಮೈಸೂರು ರಾಜ್ಯದಲ್ಲಿಯೇ ಎಲ್ಲಾ ಮಲೆನಾಡು ಪ್ರದೇಶಗಳಿಗಿಂತಲೂ ಹಿಂದುಳಿದಿದೆ. ಇದನ್ನು ನಮ್ಮ ಸರ್ಕಾರದವರು ಮತ್ತು ಕೇಂದ್ರಸರ್ಕಾರದವರು ಒಪ್ಪಿಕೊಂಡಿದ್ದಾರೆ. ನಮ್ಮ ಜಿಲ್ಲೆಯಲ್ಲಿ ಕೆಲವು ಯೋಜನೆಗಳನ್ನು ನಾಲ್ಕನೆ ಪಾಂಚವಾರ್ಷಿಕ ಯೋಜನೆಯಲ್ಲಿ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ಡ್ರಾಫ್ಟ್ ಔಟ್‌ಲೈನ್‌ನಲ್ಲಿ ಬಿದರೆ ಜಿಲ್ಲೆಯ ಬಗ್ಗೆ ಈ ರೀತಿ ರೆಫರ್ ಮಾಡಿದ್ದಾರೆ:

"It was agreed that the District of Bidar could be deemed to be the most backward in the State. It was agreed as a further step that special steps will have to be taken for the accelerated development of that district and that in particular the needs of the district will have to be given due consideration in the allocation of sectoral and schematic outlays.

"Accordingly therefore, special efforts are being made to ensure the accelerated development of Bidar District to enable it to catch up with the remaining parts of the State......

"The policy during the current year has been to ensure that 1/20th of the outlays on the programmes is earmarked for the exclusive benefit of the backward District of Bidar.........

"A firm decision has been taken to accord special considerations in the Districtwise allocation of funds under various schemes to this the most backward district of the State."

ಇದನ್ನೆಲ್ಲಾ ಒಪ್ಪಿದ್ದರೂ ಕೂಡ ಇನ್ನೂ ಕಾರಂಜ ಯೋಜನೆಯನ್ನು ಕೈಗೊಂಡಿಲ್ಲ. ಕಳೆದ 15 ವರ್ಷಗಳಿಂದ ಅಂದರೆ ನಿಜಾಮರ ಕಾಲದಿಂದಲೂ ಸಹ ಈ ಯೋಜನೆಯಾಗಬೇಕೆಂದು ಕೇಳುತ್ತಿದ್ದೇವೆ. ಈ ಯೋಜನೆಯಿಂದ 17 ಸಾವಿರ ಎಕರೆಗೆ ನೀರಾವರಿಯಾಗುತ್ತದೆ. 12 ವರ್ಷದ ಹಿಂದೆ 3 ಕೋಟಿ ರೂಪಾಯಿಗಳಿಗೆ ಎಸ್ಟಿಮೇಟ್ ತಯಾರಾಗಿತ್ತು. 8 ವರ್ಷದ ಹಿಂದೆ ಇದೇ ಯೋಜನೆ ಕೈಗೊಳ್ಳಲು 8 ಕೋಟಿ ರೂಪಾಯಿಗಳು ಬೇಕಾಗುತ್ತದೆಂದು ಎಸ್ಟಿಮೇಟ್ ಮಾಡಿದ್ದರು. ಈಗ 10 ಕೋಟಿ ರೂಪಾಯಿಗಳಾಗಿದೆ. ಕೃಷ್ಣಾ, ಕಾವೇರಿ, ತುಂಗಭದ್ರಾ ಯೋಜನೆಗಳಿಂದ ನೀರಿನ ಉಪಯೋಗವನ್ನು ಪಡೆದುಕೊಳ್ಳುವುದಕ್ಕಾಗಿ ಅನೇಕ ಕೆಲಸಗಳು ನಡೆಯುತ್ತಿವೆ. ಮಹತ್ವಪೂರ್ಣವಾದ ಯೋಜನೆಗಳು ಎಂದು ಸರ್ಕಾರದವರು ತೀರ್ಮಾನಿಸಿದ್ದಾರೆ. ಇದೇ ರೀತಿ ಕಾರಂಜ ಯೋಜನೆಯು ಸಹ ಮಹತ್ವಪೂರ್ಣವಾದ ಯೋಜನೆ ಎಂದು ಕಂಡು ಬಂದಿದ್ದರೂ ಕೂಡ ಸರ್ಕಾರದವರು ಇದುವರೆಗೆ ತೆಗೆದುಕೊಂಡಿಲ್ಲದಿರುವುದು ಬಹಳ ಆಶ್ಚರ್ಯಕರ ಹಾಗೂ ವಿಷಾದಕರವೆಂದು ಹೇಳುತ್ತಿದ್ದೇನೆ. ಕೇಂದ್ರ ಸರ್ಕಾರದವರು ಈ ಯೋಜನೆಗೆ ಮಂಜೂರಾತಿ ಕೊಟ್ಟಿಲ್ಲ ಹಾಗೂ ಟೆಕ್ನಿಕಲ್ ಕ್ಲಿಯರೆನ್ಸ್ ಕೊಟ್ಟಿಲ್ಲ. ಈ ಯೋಜನೆಗೆ ಟೆಕ್ನಿಕಲ್ ಕ್ಲಿಯರೆನ್ಸ್ ಬೇಕಿಲ್ಲ. ಕಾರಣ ಯಾವುದೇ ರಾಜ್ಯದೊಂದಿಗೆ ವಿವಾದ ಇಲ್ಲ. ಯಾರ ಅಡ್ಡಿಯೂ ಇಲ್ಲ. ಆದರೂ ಕೂಡ

(ಶ್ರೀ ಎಸ್. ಭೀಮಣ್ಣ)

ಸರ್ಕಾರದವರು ಯಾವಾಗ ಕೇಳಿದರೂ ಕೂಡ ನಮ್ಮಲ್ಲಿ ಹಣವಿಲ್ಲವೆಂದು ಒಂದೇ ರೀತಿಯ ಉತ್ತರ ಹೇಳುತ್ತಿರುತ್ತಾರೆ.

8-00 P.M.

ಒಂದು ಮಾತನ್ನು ಇಲ್ಲಿ ಸರಕಾರದ ಗಮನಕ್ಕೆ ತರಬೇಕಾಗಿದೆ. ಸರಕಾರ ಐದು ವರ್ಷಗಳಿಗಾಗಿ ಒಂದು ಯೋಜನೆ ಮಾಡಿ ಇದರಲ್ಲಿ ಇಪ್ಪತ್ತನೆ ಒಂದು ಭಾಗದಷ್ಟು ಹಣ ಖರ್ಚು ಮಾಡುತ್ತಿದ್ದಾರೆಯೇ ವಿನಾ ಪೂರ್ತಿ ಕೆಲಸಗಳಿಗೆ ಆಗುವಷ್ಟು ಹಣವನ್ನು ಕೊಡುತ್ತಿಲ್ಲ. ನಮ್ಮಲ್ಲಿ ಪರ್ ಕ್ಯಾಪಿಟಾ ಇನ್ ಕಂ ಎಷ್ಟಿದೆ ಎನ್ನುವುದನ್ನು ಗಮನಕ್ಕೆ ತೆಗೆದುಕೊಂಡರೆ ಆಗ ಗೊತ್ತಾಗುತ್ತದೆ. ಕೇಂದ್ರ ಸರಕಾರದವರು ಒಂದು ಕಡೆಯಲ್ಲಿ ಪರ್ ಕ್ಯಾಪಿಟಾ ಇನ್‌ಕಂ ಎಲ್ಲೆಲ್ಲಿ ಹೇಗಿದೆ ಎನ್ನುವುದರ ಬಗ್ಗೆ ಅಂಕೆ ಸಂಖ್ಯೆಗಳನ್ನು ನಮಗೆ ಒದಗಿಸಿ ಕೊಟ್ಟಿದ್ದಾರೆ. ಅದರಂತೆ ನೋಡಿದರೆ ನಮ್ಮದು ಹೆಚ್ಚಾಗಿಲ್ಲ. ಇಲ್ಲಿ ಜೀರೋ ಬರಬಹುದು. ನಮ್ಮ ಸ್ಟೇಟ್‌ನಲ್ಲಿ ನೋಡಿದರೆ ಉತ್ತರ ಭಾಗಕ್ಕೂ ದಕ್ಷಿಣ ಭಾಗಕ್ಕೂ ಇರುವ ಅಂತರ ಗೊತ್ತಾಗುತ್ತದೆ. ಚಿಕ್ಕಮಗಳೂರು ಜಿಲ್ಲೆ, ಸೌತ್ ಕೆನರಾ ಜಿಲ್ಲೆ ಬಗ್ಗೆ ಕೊಟ್ಟಿದ್ದಾರೆ. ಶಿವಮೊಗ್ಗಾ ಜಿಲ್ಲೆಯಲ್ಲಿ ಪರ್ ಕ್ಯಾಪಿಟಾ ಇನ್‌ಕಂ 558 ಇತ್ತು ಅದೇ ರೀತಿ ಬೀದರು ಜಿಲ್ಲೆಯಲ್ಲಿ ಪರ್ ಕ್ಯಾಪಿಟಾ ಇನ್‌ಕಂ 223 ಇತ್ತು ಎಂದು ಇದೆ. ಇದನ್ನು ವೆಲ್ ಫೇರ್ ಸ್ಟೇಟು ಎಂದು ಹೇಳುತ್ತಾರೆ, ಲೋಕಷಾಹಿ ರಾಜ್ಯ ಎಂದು ಹೇಳುತ್ತಾರೆ. ನಮ್ಮ ಹಿಂದುಳಿದಿರುವ ಬೀದರು ಜಿಲ್ಲೆಯನ್ನು ನೋಡಿದರೆ ನಮ್ಮ ಜಿಲ್ಲೆ ಎಷ್ಟು ಹಿಂದೆ ಇವೆ ಎನ್ನುವುದು ತಮಗೆ ಗೊತ್ತಾಗುತ್ತದೆ. ಇಲ್ಲಿ ಯಾವ ನೀರಾವರಿ ಯೋಜನೆಯನ್ನೂ ಮಾಡುವುದಕ್ಕೆ ಆಗಲಿಲ್ಲ. ವಾಸ್ತವವಾಗಿ ನಮ್ಮ ಬಜೆಟ್ಟಿನಲ್ಲಿ ಇಂತಹ ಜಿಲ್ಲೆಗೆ ಏನಾದರೂ ಹಣ ಇಟ್ಟಿದ್ದಾರೆಯೇ ಎಂದು ನೋಡಿದರೆ ಯಾವುದೂ ಕಾಣುತ್ತಿಲ್ಲ. ನಾನು ಸುಮಾರು 12 ವರ್ಷಗಳಿಂದಲೂ ಈ ಸರಕಾರಕ್ಕೆ ಹೇಳುತ್ತಲೇ ಬರುತ್ತಿದ್ದೇನೆ. ಮತ್ತು ಅವರಲ್ಲಿ ರಿಕ್ವೆಸ್ಟ್ ಕೂಡ ಮಾಡಿದ್ದೇನೆ. ಯೋಜನೆಗಳಿಗೆ ಹಣ ಹಂಚುವಾಗ ನಮ್ಮ ಬೀದರು ಜಿಲ್ಲೆಗೆ ಸರಿಯಾಗಿ ಹಂಚಿಕೆ ಮಾಡುತ್ತಿಲ್ಲ. ಬಾಕಿ ಕಡೆಗಳಲ್ಲಿ ಯಾವ ಪ್ರಕಾರ ಮಾಡುತ್ತಿದ್ದೀರೋ ಆ ಪ್ರಕಾರ ಮಾಡುತ್ತಿಲ್ಲ. ಬೇರೆ ಕಡೆಗಳಲ್ಲಿ ಜನರ ಇನ್‌ಕಂ ಹೆಚ್ಚು ಮಾಡಲು ಅವರಿಗೆ ಬಾವಿ ಕೊಡುತ್ತಿದ್ದಾರೆ, ಕೆರೆಗಳನ್ನು ಡೀಸಿಲ್ಟ್ ಮಾಡಲು ಹಣ ಕೊಡುತ್ತಿದ್ದಾರೆ ಹಾಗೂ ಇನ್ನಿತರ ಕೆಲಸಗಳನ್ನು ಮಾಡಿ ಕೊಡುತ್ತಿದ್ದಾರೆ. ಆದರೆ ನಮ್ಮ ಬೀದರು ಜಿಲ್ಲೆಗೆ ಇದುವರೆಗೆ ಯಾವ ಕಾರ್ಯಗಳನ್ನು ಮಾಡುವ ಪ್ರಯತ್ನ ಮಾಡಲಿಲ್ಲ ಎನ್ನುವ ಮಾತನ್ನು ವಿಷಾದದಿಂದ ಇಲ್ಲಿ ಹೇಳಬೇಕಾಗಿದೆ.

ಶ್ರೀ ಎಂ. ನಾಗಪ್ಪ.—ಬೀದರ್‌ನಲ್ಲಿ ಎಂ.ಪಿ.ಸಿ.ಸಿ. ಸಭೆ ನಡೆದಾಗ ಇದರ ಬಗ್ಗೆ ಅಲ್ಲಿ ಒಂದು ರೆಸಲ್ಯೂಷನ್ ಮಾಡಿರಲಿಲ್ಲವೇ ?

ಶ್ರೀ ಎಸ್. ಭೀಮಣ್ಣ.—ನಮ್ಮ ಬೀದರ್ ಜಿಲ್ಲೆಯಲ್ಲಿ ಈಚೆಗೆ ಎಂ.ಪಿ.ಸಿ.ಸಿ. ಮೀಟಿಂಗು ನಡೆದಾಗ ಅಲ್ಲಿ ಬಂದ ಮಂತ್ರಿಗಳಲ್ಲಿ ಇದರ ಬಗ್ಗೆ ಹೇಳಿಯಾಗಿತ್ತು ಮತ್ತು ಒಂದು ನಿರ್ಣಯ ಮಾಡಿ ಅವರಿಂದ ಅಷ್ಯೂರೆನ್ಸ್ ಕೂಡ ಪಡೆಯಲಾಗಿತ್ತು. ಆ ಸಮಯದಲ್ಲಿ ಅಲ್ಲಿಗೆ ಬಂದಿದ್ದ ಮಿನಿಸ್ಟರೆಲ್ಲರೂ ನಮ್ಮ ಬಗ್ಗೆ ಬಹಳವಾದ ಸಹಾನುಭೂತಿ ತೋರಿಸಿದರು ಮತ್ತು ಈ ರೆಸಲ್ಯೂಷನ್‌ನ್ನು ಯುನಾನಿಮಸ್ ಆಗಿ ಒಪ್ಪಿಕೊಂಡಿದ್ದರು. ಬೀದರು ಜಿಲ್ಲೆ ಬ್ಯಾಕ್ ವರ್ಡ್ ಏರಿಯಾ ಎನ್ನುವುದನ್ನೂ ಒಪ್ಪಿ ಇಲ್ಲಿರುವ ಕಾರಂಜ ಸ್ಕೀಂನ್ನು ಮಾಡಲಾಗಿದೆ. ಈ ಕಾರಂಜಾ ಪ್ರಾಜೆಕ್ಟನ್ನು ಮಾಡದೇ ಹೋದರೆ ಇಲ್ಲಿನ ಜನರ ಆರ್ಥಿಕ ಪರಿಸ್ಥಿತಿ ಸುಧಾರಣೆಯಾಗುವುದಿಲ್ಲ ಎಂದೂ ಹೇಳಿದ್ದರು ಮತ್ತು ಇಲ್ಲಿಗೆ ಬಂದ ತಜ್ಞರು ಕೂಡ ಈ ಯೋಜನೆಯನ್ನು ಬೇಗನೆ ತೆಗೆದುಕೊಳ್ಳುತ್ತೇವೆ ಎನ್ನುವ ಆಶ್ವಾಸನೆಯನ್ನೂ ಕೊಟ್ಟಿದ್ದರು. ಇಲ್ಲಿಯವರೆಗೂ ಇದು ಆಗಲಿಲ್ಲ. ಹೀಗಾದರೆ ನಮ್ಮ ಜನರ ಗತಿಯೇನು ಎಂದು ಇಲ್ಲಿ ಕೇಳಬೇಕಾಗಿದೆ. ನಾನು ಆ ಜಿಲ್ಲೆಯ ಪ್ರತಿನಿಧಿಯಾಗಿ ಎಂ.ಎಲ್.ಎ. ಆಗಿ ಎಂ.ಪಿ.ಸಿ.ಸಿ. ನಲ್ಲಿ ರೆಸಲ್ಯೂಷನ್ ಕೂಡ ಮಾಡಿ ಅದರಂತೆ ಕಾರ್ಯಗತ ಮಾಡದೇ ಇದ್ದರೆ, ನಮ್ಮ ಜನರ ಗತಿಯೇನು ? ಈ ಯೋಜನೆ ಕಾರ್ಯಗತವಾಗದೇ ಇರಲು ಕಾರಣವೇನು ಎಂದು ಕೇಳುತ್ತಲೇ ಬಂದಿದ್ದೇವೆ. ಆದರೂ ನಾವು ನಮ್ಮ ಸರಕಾರದಲ್ಲಿ ನಂಬಿಕೆ ಇಟ್ಟು ಕೇಳುತ್ತಿದ್ದೇವೆ. ಈ ಸಾರಿಯಾದರೂ ಆ ರೆಸಲ್ಯೂಷನ್ನಿನಂತೆ ಮಾಡಿಸಿಕೊಡುತ್ತಾರೆ ಎಂದು ಆಸೆ ಮಾಡುತ್ತೇನೆ ಮತ್ತು ಇದಕ್ಕೆ ಏನು ಬೇಕಾದರೂ ಮಾಡಲು ತಯಾರಿದ್ದೇವೆ ಎಂದು ಸರಕಾರದಲ್ಲಿ ಕಳಕಳಿಯಿಂದ ಕೇಳುತ್ತಿದ್ದೇನೆ. ನಮ್ಮ ಕಾರಂಜಾ ಪ್ರಾಜೆಕ್ಟ್ ಮಾಡಬೇಕು ಎಂದು ಹೇಳುತ್ತಿದ್ದರೂ ಇದರ ಹೆಸರು

ನಾಲ್ಕನೇ ಯೋಜನೆಯಲ್ಲಿ ಎಲ್ಲೂ ಕಾಣಲಿಲ್ಲ. ನಾವು ವರ್ಷ ವರ್ಷವೂ ಕಾರಂಜ ಪ್ರಾಜೆಕ್ಟ್ ಆಗಬೇಕು ಎಂದು ಒತ್ತಾಯ ಮಾಡುತ್ತಿದ್ದರೂ ಇದುವರೆಗೆ ಇದನ್ನು ಮೂರು ಯೋಜನೆಗಳಾದರೂ ಇದರಲ್ಲಿ ಬರಲಿಲ್ಲ. ನಾಲ್ಕನೇ ಯೋಜನೆಯಲ್ಲಿ ಇದರ ಹೆಸರು ಸೇರಿಸುತ್ತಾರೆ ಎಂದು ಆಶೆ ಇತ್ತು. ಆದರೆ ಇನ್ನೂ ಈ ಯೋಜನೆ ಫೈನಲ್ ಆಗಿಲ್ಲ ಎಂದು ಕೇಳುತ್ತೇವೆ. ಆದುದರಿಂದ ಮುಂದೆ ನಾಲ್ಕನೇ ಯೋಜನೆ ಫೈನಲ್ ಆಗುವ ವೇಳೆಯಲ್ಲಾದರೂ ನಮ್ಮ ಬಿದರ್ ಜಿಲ್ಲೆಗೆ ಅತಿ ಮುಖ್ಯವಾದ ಕಾರಂಜಾ ಪ್ರಾಜೆಕ್ಟನ್ನು ಸೇರಿಸಬೇಕೆಂದು ಕಳಕಳಿಯಿಂದ ಸರಕಾರದಲ್ಲಿ ವಿನಂತಿ ಮಾಡುತ್ತೇನೆ. ಇದನ್ನು ಸೇರಿಸುತ್ತಾರೆ ಎಂದು ಆಶೆ ಮಾಡುತ್ತೇನೆ. ಇದಕ್ಕೆ ಹೆಚ್ಚು ಖರ್ಚು ಕೂಡ ಬರುವುದಿಲ್ಲ. ಇದರಲ್ಲಿ 78 ಸಾವಿರ ಎಕರೆಗೆ ನೀರು ಸಿಗುತ್ತದೆ ಮತ್ತು 24 ಟಿ.ಎಂ.ಸಿ. ಅಡಿಯಷ್ಟು ಉಪಯೋಗಕ್ಕೆ ಬರುತ್ತದೆ. ಬೇರೆ ಕಡೆ 3 ಕೋಟಿಯಿಂದ ಹತ್ತು ಕೋಟಿಯವರೆಗೆ ಆಗುವ ಯೋಜನೆಗಳಿಗೆ ಹಣ ಕೊಡುತ್ತಿದ್ದಾರೆ. ನಮ್ಮ ಈ ಸಣ್ಣ ಯೋಜನೆಗೆ ಹೆಚ್ಚು ವೆಚ್ಚ ಬರುವುದಿಲ್ಲ ಎಂದು ಕೇಳುತ್ತಿದ್ದೇವೆ. ಇವಕ್ಕೆಲ್ಲಾ ಟೆಕ್ನಿಕಲ್ ಕ್ಲಿಯರೆನ್ಸ್ ತೊಂದರೆ ಬರುತ್ತದೆ. ನಮ್ಮದು ಸಣ್ಣ ಯೋಜನೆಯಾಗಿದೆ. ಇದಕ್ಕೆ ಸರಕಾರ ಒತ್ತಾಯ ಮಾಡಿ 4 ನೇ ಯೋಜನೆಯಲ್ಲೇ ಸೇರಿಸಬೇಕೆಂದು ಕೇಳುತ್ತಿದ್ದೇನೆ. ಇದನ್ನು ಪ್ರಚಾರಕ್ಕಾಗಿ ನಾನು ಇಲ್ಲಿ ಹೇಳುತ್ತಿಲ್ಲ. ಚೀಫ್ ಇಂಜನೀಯರ್‌ರವರು ಕೂಡ ಇದು ಬಹು ಮುಖ್ಯವಾದ ಸ್ಕೀಂ ಎಂದು ಸರಕಾರಕ್ಕೂ ಶಿಫಾರಸು ಮಾಡಿದ್ದಾರೆ. ಜನತೆಯ ಪರವಾಗಿ ಇದನ್ನು ಒತ್ತಾಯ ಮಾಡುತ್ತಿದ್ದೇನೆ, ಸರಕಾರ ಈ ಸಾರಿ ಮಾಡುತ್ತಾರೆಂದೂ ನಂಬಿಕೆ ಇದೆ. ಯಾವ ಪ್ರಕಾರಕ್ಕೂ ಇದನ್ನು ಮುಂದೂಡದೆ ನಾಲ್ಕನೇ ಯೋಜನೆಯಲ್ಲೇ ಇದನ್ನು ಫೈನಲ್ ಆಗುವ ವೇಳೆಯಲ್ಲಿ ಸೇರಿಸಬೇಕೆಂದು ಮತ್ತೊಮ್ಮೆ ಒತ್ತಾಯ ಮಾಡುತ್ತೇನೆ. ಅಧ್ಯಕ್ಷರು ಇಷ್ಟು ಮಾತಾಡಲು ಅವಕಾಶ ಕೊಟ್ಟುದಕ್ಕಾಗಿ ಅವರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎನ್. ಹುಚ್ಚಮಾಸ್ತಿಗೌಡ (ಹುಲಿಯೂರುದುರ್ಗ).—ಮಾನ್ಯ ಅಧ್ಯಕ್ಷರೇ, ಅರ್ಥ ಸಚಿವರಾದ ಶ್ರೀಮಾನ್ ರಾಮಕೃಷ್ಣ ಹೆಗ್ಗಡೆಯವರು ಅವರ ಭಾಷಣದಲ್ಲಿ ಒಂದು ಮಾತನ್ನು ಹೇಳಿದ್ದಾರೆ. ಅದು ಹೀಗಿದೆ :

'ನಾವು ಯಾವುದೇ ಪಕ್ಷಕ್ಕೆ ಸೇರಿದವರಾಗಿದ್ದರೂ ಸರಿಯೇ, ಜನತೆಯ ಹಿತಸಾಧನೆ, ಶ್ರೇಯೋಭಿವೃದ್ಧಿಗಳೇ ನಮ್ಮ ಮೂಲೋದ್ದೇಶವಷ್ಟೇ' ಎಂದು. ಈ ಮೂಲ ಉದ್ದೇಶವೇನೋ ಸರಿ. ಅಭಿವೃದ್ಧಿ ಕಾರ್ಯಗಳಾಗಬೇಕು, ಜನರಿಗೆ ಕ್ಷೇಮವಾಗ ಬೇಕು ; ಇದನ್ನು ಮಾಡುವಾಗ ಯಾವುದೇ ಕಾರ್ಯಕ್ರಮಗಳನ್ನು ಹಾಕಿಕೊಂಡರೂ ಅದರಿಂದ ಎಲ್ಲ ಜನರಿಗೂ ಪ್ರಯೋಜನ ಸಿಗಬೇಕು, ಹೀಗಿರುವ ಉದ್ದೇಶ ಇದ್ದರೂ ಕಾರ್ಯತಃ ಹಾಗೆ ನಡೆಯುತ್ತಿದೆಯೋ ಎನ್ನುವುದನ್ನು ಇಲ್ಲಿ ನಾವು ನೋಡಬೇಕು. ಇಲ್ಲಿ ನನಗೆ ಒಂದು ಗಾದೆ ಜ್ಞಾಪಕಕ್ಕೆ ಬರುತ್ತದೆ. 'ಮನೆ ಮುಂದೆ ಮಾಡೋದು ಅನಾಚಾರ ಒಳಗೆ ಬೃಂದಾವನ' ಎನ್ನುವಂತಾಗಿದೆ ಇಂದಿನ ಪರಿಸ್ಥಿತಿ. ನಮ್ಮ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಬಿಚ್ಚಿಟ್ಟೇನೋ ಬೃಂದಾವನದಂತಿದೆ. ದೇಶದ ಇತರ ಕಡೆಗಳಲ್ಲಿ ಬೇಕಾದಷ್ಟು ಅನಾಚಾರಗಳು ನಡೆಯುತ್ತಿವೆ. ಆದರೆ ತತ್ವಗಳೇನೋ ಹೇಳುತ್ತಾರೆ. ಕಾರ್ಯತಃ ಏನು ನಡೆಯುತ್ತಿದೆ ಎಂದರೆ ಪಕ್ಷಪಾತ ಎನ್ನುವುದೇ ಎಲ್ಲೆಲ್ಲೂ ಕಾಣಬರುತ್ತಿದೆ. ಪಕ್ಷಪಾತ ಮಾಡಬೇಡಿ ಎನ್ನುವುದಕ್ಕೆ ಕೆಲವು ಉದಾಹರಣೆಗಳನ್ನು ಕೊಡಬಹುದು. ಕಾಂಗ್ರೆಸ್ಸೇತರರುಗಳ ಕ್ಷೇತ್ರದಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಮಾಡಬೇಕೆಂದು ಅನೇಕ ಸದಸ್ಯರುಗಳು ಸರಕಾರಕ್ಕೆ ಹೇಳುತ್ತಲೇ ಇರುತ್ತಾರೆ. ಆದರೆ ರಸ್ತೆಗಳ ಕಾರ್ಯಗಳಾಗಲಿ, ಕ್ಷಾಮ ಪರಿಹಾರ ಕಾರ್ಯಗಳೇ ಆಗಲೀ ಕಾಂಗ್ರೆಸ್ಸೇತರರು ಇರುವ ಕಡೆಗಳಲ್ಲಿ ಹೆಚ್ಚು ಮಾಡಬಾರದು ಎಂದು ಇದ್ದಾರೆ ಎಂದು ಕಾಣುತ್ತದೆ. ಉದಾಹರಣೆಗಾಗಿ ನಮ್ಮ ಕ್ಷೇತ್ರದ ಕಡೆಗೆ ರಸ್ತೆಗಳಿಗಾಗಿ ಹಣ ಒದಗಿಸಿರುವುದನ್ನು ಒಂದು ಹೆಡ್‌ನಲ್ಲಿ ನಾವು ನೋಡಿದರೆ ರಸ್ತೆಗಳಿಗಾಗಿ ಸುಮಾರು 54 ಲಕ್ಷದಷ್ಟು ಒದಗಿಸಿದ್ದಾರೆ.

54 ಲಕ್ಷ ರೂಪಾಯಿಗಳಲ್ಲಿ ಯಾವ ಯಾವ ಜಿಲ್ಲೆಗೆ ಎಷ್ಟೆಷ್ಟು ಹಣ ಒದಗಿಸಿದೆ ಎನ್ನುವುದು ಈ ರೀತಿ ಇದೆ—

ಮೈಸೂರು ಸರ್ಕಲ್	...	3,84,000
ಬೆಂಗಳೂರು ಸರ್ಕಲ್	...	2,60,000
ಶಿವಮೊಗ್ಗ ಸರ್ಕಲ್	...	4,65,000
ಬೆಳಗಾಂ ಸರ್ಕಲ್	...	8,52,000
ಧಾರವಾರ ಸರ್ಕಲ್	...	11,92,000
ಗುಲ್ಬರ್ಗ ಸರ್ಕಲ್	...	20,33,000
ಮಂಗಳೂರು ಸರ್ಕಲ್	...	2,05,000

(ಶ್ರೀ ಎನ್. ಹುಚ್ಚಮಾಸ್ತಿಗೌಡ)

ಇವುಗಳನ್ನೆಲ್ಲಾ ನೋಡಿದರೆ ಜನರ ನೀಡ್ಸ್ ನೋಡಿಕೊಂಡು ಕೊಡುತ್ತಾ ಇಲ್ಲ ಎನ್ನುವುದು ಗೊತ್ತಾಗುತ್ತದೆ. ಮೈಸೂರು ರಾಜ್ಯ ಪುನರ್ರಚನೆ ಆದಾಗ ಅನೇಕ ಜಿಲ್ಲೆಗಳಲ್ಲಿ ರಸ್ತೆ ಸೌಕರ್ಯ ಕಡಿಮೆ ಇತ್ತು ಎನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಕೇವಲ 10 ವರ್ಷಗಳಲ್ಲಿ ಎಲ್ಲಾ ಜಿಲ್ಲೆಗಳಲ್ಲೂ ಸರಿಸಮಾನವಾದ ರಸ್ತೆ ಸೌಕರ್ಯ, ಕುಡಿಯುವ ನೀರಿನ ಭಾವಿ, ವಿದ್ಯುಚ್ಛಕ್ತಿ ಇವೆಲ್ಲಾ ಪೂರೈಸಬೇಕು ಸಾಧ್ಯವಾಗುವುದಿಲ್ಲ. ಕೆಲವು ಜಿಲ್ಲೆಗಳಲ್ಲಿ ಹೆಚ್ಚು ಸೌಕರ್ಯಗಳನ್ನು ಒದಗಿಸುತ್ತೀರಿ. ಏನೂ ಸೌಕರ್ಯ ಇಲ್ಲದೇ ಇರುವ ಕಡೆ ಇಂತಹ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲವೇ ! ಇಂತಹ ಪರಿಸ್ಥಿತಿಯನ್ನು ಹೋಗಲಾಡಿಸಬೇಕೆಂದು ಸೂಚನೆ ಕೊಡುವುವಕ್ಕೆ ಇಷ್ಟಪಡುತ್ತೇನೆ.

ಇನ್ನು 1 ಲಕ್ಷಕ್ಕಿಂತ ಕಡಿಮೆ ಖರ್ಚು ಆಗುವ ರಸ್ತೆಗಳನ್ನು ನೋಡಿದರೆ, ಅದರಲ್ಲೂ ತಾರತಮ್ಯ ತೋರಿಸಿದ್ದೀರಿ. ಕೆಲವು ಜಿಲ್ಲೆಗಳಲ್ಲಿ ಅಂತಹ ರಸ್ತೆಗಳನ್ನು ಮಾಡಿಸಲು ಲಕ್ಷಗಟ್ಟಲೆ ಕೊಟ್ಟಿದ್ದೀರಿ, ಕೆಲವು ಕಡೆ ಕಡಿಮೆ ಕೊಟ್ಟಿದ್ದೀರಿ. ಆ ವಿವರಗಳನ್ನು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಮತ್ತು ಅಸ್ಫಾಲ್ಟಿಂಗ್ ಆಫ್ ರೋಡ್ಸ್ ಅದಕ್ಕೆ 17 ಲಕ್ಷ 6 ಸಾವಿರ ರೂಪಾಯಿ ಕೊಟ್ಟಿದ್ದೀರಿ ಮೈಸೂರು ಸರ್ಕಲ್‌ಗೆ 1 ಲಕ್ಷ, ಬೆಂಗಳೂರು ಸರ್ಕಲ್‌ಗೆ 2 ಲಕ್ಷ 70 ಸಾವಿರ, ಶಿವಮೊಗ್ಗ ಸರ್ಕಲ್‌ಗೆ 3 ಲಕ್ಷ 31 ಸಾವಿರ, ಧಾರವಾಡ ಸರ್ಕಲ್‌ಗೆ 5 ಲಕ್ಷ 73 ಸಾವಿರ ಈ ರೀತಿ ಇದೆ.

ಇನ್ನು ಬ್ರಿಡ್ಜಸ್‌ಗೆ ಒಟ್ಟು 1 ಕೋಟಿ 12 ಲಕ್ಷ 53 ಸಾವಿರ ರೂಪಾಯಿ ಈ ಬಡ್ಜೆಟ್ಟಿನಲ್ಲಿ ಒದಗಿಸಿದ್ದೀರಿ. ಇದರಲ್ಲೂ ತಾವು ಯಾವ ರೀತಿ ತಾರತಮ್ಯ ಮಾಡಿದ್ದೀರಿ ಎಂದು ನೋಡಬಹುದು.

ಮೈಸೂರು ಸರ್ಕಲ್‌ಗೆ	...	10 ಲಕ್ಷ
ಬೆಂಗಳೂರು ಸರ್ಕಲ್‌ಗೆ	...	6 ಲಕ್ಷ
ಶಿವಮೊಗ್ಗ ಸರ್ಕಲ್‌ಗೆ	...	13 ಲಕ್ಷ 19 ಸಾವಿರ
ಬೆಳಗಾಂ ಸರ್ಕಲ್‌ಗೆ	...	19 ಲಕ್ಷ 9 ಸಾವಿರ
ಧಾರವಾಡ ಸರ್ಕಲ್‌ಗೆ	...	14 ಲಕ್ಷ 50 ಸಾವಿರ
ಗುಲ್ಬರ್ಗ ಸರ್ಕಲ್‌ಗೆ	...	19 ಲಕ್ಷ 24 ಸಾವಿರ
ಮಂಗಳೂರು ಸರ್ಕಲ್‌ಗೆ	...	30 ಲಕ್ಷ 50 ಸಾವಿರ

ಇದನ್ನು ನೋಡಿದರೆ ಅವರ ಜಿಲ್ಲೆಗಳನ್ನು ಗಮನದಲ್ಲಿಟ್ಟುಕೊಂಡು ಅವಕ್ಕೆ ಪ್ರಾಶಸ್ತ್ಯ ಕೊಟ್ಟು ಕೆಲಸ ಮಾಡುತ್ತಿದ್ದಾರೆ ಎನ್ನುವುದು ಗೊತ್ತಾಗುತ್ತದೆ.

ಇನ್ನು ನೀರಾವರಿ ಕಾಮಗಾರಿ ವಿಷಯ ತೆಗೆದುಕೊಂಡರೆ ಅದನ್ನು ಏನು ಮಾಡಿದ್ದಾರೆ ಎಂದರೆ 1 ಲಕ್ಷಕ್ಕಿಂತ ಕಡಿಮೆ ಇರುವ ಅಂದಾಜುಗಳನ್ನು ಈ ಬಡ್ಜೆಟ್ಟಿನಲ್ಲಿ ಕೊಡುವ ಅಭ್ಯಾಸವನ್ನು ಬಿಟ್ಟುಬಿಟ್ಟಿದ್ದಾರೆ. ಇದರಿಂದ ಯಾವ ಯಾವ ಜಿಲ್ಲೆಗೆ ಯಾವ ಯಾವ ತಾಲ್ಲೂಕಿಗೆ ಎಷ್ಟೆಷ್ಟು ಕೊಡುತ್ತಾರೆ ಎಂಬುದು ಗೊತ್ತಾಗುವುದಿಲ್ಲ. ಕೇಳಿದರೆ ಲಂಪ್‌ಸಂ ಆಗಿ ಕೊಟ್ಟಿದ್ದೇವೆ ಎಂದು ಹೇಳುತ್ತಾರೆ. ಹಿಂದೆ ಬಡ್ಜೆಟ್‌ನಲ್ಲಿ ಈ ವಿವರಗಳನ್ನು ತೋರಿಸುತ್ತಾ ಇದ್ದರು. ಇದರ ಬಗ್ಗೆ ಒಂದು ಪಟ್ಟಿ ಮಾಡಿ ಕೊಡಬೇಕು ಎಂದು ಹೇಳಿದ್ದೆ ಯಾವ ಯಾವ ಕ್ಷೇತ್ರಕ್ಕೆ, ಯಾವ ಯಾವ ಜಿಲ್ಲೆಗೆ ಖರ್ಚು ಮಾಡಬೇಕೆಂಬ ಉದ್ದೇಶ ಇದೆಯೋ ಅದರಂತೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಈ ಬಡ್ಜೆಟ್ಟಿನಲ್ಲಿ ತೋರಿಸುವುದನ್ನು ಕೈಬಿಟ್ಟಿದ್ದಾರೆ. ಆದುದರಿಂದ ಮುಂದೆಯಾದರೂ ಒಂದು ಲಕ್ಷಕ್ಕಿಂತ ಕಡಿಮೆ ಇರುವ ಕಾಮಗಾರಿ ಕೆಲಸಗಳನ್ನು ಬಡ್ಜೆಟ್ಟಿನಲ್ಲಿ ತೋರಿಸಬೇಕು ಮತ್ತು ಇಂತಿಂಥ ಜಿಲ್ಲೆಗೆ ಕಾಮಗಾರಿ ಕೆಲಸಕ್ಕೆ ಇಷ್ಟಿಷ್ಟು ಒದಗಿಸಿದೆ ಎನ್ನುವುದನ್ನು ಶಾಸನಾಸಭಾ ಸದಸ್ಯರ ಗಮನಕ್ಕೆ ತರುವಂತೆ ಏರ್ಪಾಡು ಮಾಡಬೇಕೆಂದು ಈ ಸಂದರ್ಭದಲ್ಲಿ ಸಲಹೆ ಮಾಡುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಮೈನರ್ ಕಾಮಗಾರಿ ಕೆಲಸವನ್ನು ಕ್ಷಾಮನಿವಾರಣಾ ಕೆಲಸದಲ್ಲಿ ತೆಗೆದುಕೊಂಡಿದ್ದಾರೆ. 2 ಕೋಟಿ 30 ಲಕ್ಷ ರೂಪಾಯಿಗಳಲ್ಲಿ ಯಾವ ಯಾವ ಜಿಲ್ಲೆಗೆ ಎಷ್ಟೆಷ್ಟು ಕೊಟ್ಟಿದ್ದಾರೆ ಎನ್ನುವುದನ್ನು ತೋರಿಸಲಿಲ್ಲ. ಜಿಲ್ಲಾವಾರು, ತಾಲ್ಲೂಕುವಾರು ವಿವರಣೆಗಳನ್ನು ಕೊಟ್ಟಿಲ್ಲ. ಅದರ ವಿವರಣೆಗಳನ್ನು ಕೊಟ್ಟರೆ ಅದರಲ್ಲೂ ತಾರತಮ್ಯ ಇರುವುದನ್ನು ಮನಗಾಣಬಹುದು. ನೀರಾವರಿ ಕಾಮಗಾರಿಗಳನ್ನು ಮಾಡುವುದರಲ್ಲಿ ಒಂದೇ ಅಲ್ಲ, ರಸ್ತೆಗಳನ್ನು ಮಾಡುವುದರಲ್ಲಿಯೂ ಇನ್ನೂ ಅನೇಕ ವಿಷಯಗಳಲ್ಲಿಯೂ ನನ್ನ ಅನುಭವಕ್ಕೆ ಬಂದಿರುವಹಾಗೆ, ರಾಜಕೀಯ, ಜಾತಿ, ಸ್ವಜನ ಪಕ್ಷಪಾತ ಇವನ್ನು ದೃಷ್ಟಿಯನ್ನಿಟ್ಟುಕೊಂಡು ಕೆಲಸ ಮಾಡುತ್ತಾರೆ. ಇಂತಿಂಥ ಕೆಲಸಗಳನ್ನು ತೆಗೆದುಕೊಳ್ಳಬೇಕು ಎಂದು ಅಧಿಕಾರಿಗಳಿಗೆ ತಿಳುವಳಿಕೆ ಕೊಡುತ್ತಾರೆ. ಇದು ಸಾರೋದ್ಧಾರವಾಗಿ

ನಡೆದುಕೊಂಡು ಬರುತ್ತಾ ಇದೆ. ಇದನ್ನು ಕೊನೆಗಾಣಿಸಬೇಕು, ಎಲ್ಲರನ್ನೂ ಒಂದೇ ರೀತಿಯಲ್ಲಿ ನೋಡಿಕೊಂಡು ಕೆಲಸ ಮಾಡುತ್ತಾರೆ ಎನ್ನುವ ನಂಬಿಕೆ ನನಗೆ ಇಲ್ಲ.

ಇನ್ನು ದೊಡ್ಡ ನೀರಾವರಿ ಕಾಮಗಾರಿಗಳ ವಿಷಯ. ಕೃಷ್ಣಾ ಆಗಲಿ, ಹಾರಂಗಿ ಆಗಲಿ, ಹೇಮಾವತಿ ಆಗಲಿ ಇದಕ್ಕೆ ಕೆಲವೇ ಕೋಟಿ ಹಣ ಒದಗಿಸಿದ್ದೀರಿ. ಇದರ ಬಗ್ಗೆ ನಮ್ಮ ಸರ್ಕಾರಕ್ಕೂ ಕೇಂದ್ರಕ್ಕೂ ಒಪ್ಪಂದವಾಗಿರುತ್ತದೆ. ಹಾಗೆಯೇ ಇವಕ್ಕೆ ಹಣ ಒದಗಿಸಿರುವುದನ್ನು ನೋಡಿದರೆ, 50 ಲಕ್ಷ ರೂಪಾಯಿ, 30 ಲಕ್ಷ ರೂಪಾಯಿಯಂತೆ ಒದಗಿಸುತ್ತಾರೆ. ಈ ಹಣ ಅಲ್ಲಿನ ಸಿಬ್ಬಂದಿ ಖರ್ಚಿಗೂ ಸಾಕಾಗುವುದಿಲ್ಲ.

ಇನ್ನು ಕಾವೇರಿ ಜಲಾನಯನದ ಬಗ್ಗೆ ಹೇಳುವುದಾದರೆ 1974ರ ಒಳಗೆ ಮದ್ರಾಸ್‌ಗೂ ಮತ್ತು ಮೈಸೂರ್‌ಗೂ ಆಗಿರುವ ಅಗ್ರಿಮೆಂಟ್ ಮುಗಿಯುತ್ತದೆ. ಇದನ್ನು ಪೂರೈಸಬೇಕು ಎಂದು ಈ ಸಭೆ ಮೀಟಿಂಗ್ ಕರೆದು ಏನೇನೋ ಮಾಡಿದಿರಿ. ನಾವೂ ಕೂಡ ಮುಂದೆ ಬೇಕಾದಂಥ ಕಾರ್ಯಕ್ರಮವನ್ನು ತೆಗೆದುಕೊಳ್ಳಬಹುದೆಂದು ಊಹಿಸಿದ್ದೆವು. ಆದರೆ ಈ ಬಜೆಟನ್ನು ನೋಡಿದರೆ ಈ ಸಭೆ ಕರೆದದ್ದು ಏನೂ ಪ್ರಯೋಜನವಾಗಲಿಲ್ಲ ಎಂದು ಅನ್ನಿಸುತ್ತದೆ. ಈ ಕೆಲಸವನ್ನು 1974ರ ಒಳಗೆ ತೆಗೆದುಕೊಂಡು ಮಾಡದೇ ಹೋದರೆ ಮುಂದೆ ಏನು ಮಾಡಬೇಕು ? ಇದಕ್ಕೆ ಏನಾದರೂ ಒಂದು ಭರವಸೆ ಕೊಡಬೇಕು ಇಲ್ಲದಿದ್ದರೆ ಬೇರೆ ಮಾರ್ಗ ಹಿಡಿಯಬೇಕಾದೀತು ಎಂದು ನನಗೆ ತೋರುತ್ತದೆ.

ಇನ್ನು ಇಂಜಿನಿಯರಿಂಗ್ ಇಲಾಖೆಯಲ್ಲಿ ಕೆಲವರು ಶಾಸನಾಸಭಾಸದಸ್ಯರು ಕಾಗದ ಬರೆದರೂ ಆಫೀಸರ್‍ಸ್ ಉತ್ತರವೇ ಕೊಡುವುದಿಲ್ಲ. ಅವರಿಗೇನಾದರೂ ಈ ರೀತಿ ತಿಳುವಳಿಕೆ ಕೊಟ್ಟಿದ್ದೀರಾ ? ಹೀಗೇನಾದರೂ ಶಾಸನಾ ಸಭಾಸದಸ್ಯರು ಬರೆದರೆ ಕಾಗದ ಬರೆಯಬೇಡಿ ಅವರ ಜೊತೆಗೆ ಯಾವ ಕಾರ್ಯಕ್ರಮವನ್ನೂ ಹಾಕಿಕೊಳ್ಳಬೇಡಿ, ಅವರನ್ನು ಕರೆದುಕೊಂಡು ಹೋಗಬೇಡಿ ಎಂದು ಏನಾದರೂ ತಿಳಿಸಿದ್ದೀರಾ ? ಇಂತಹ ಕೀಳುಮಟ್ಟಕ್ಕೆ ನಮ್ಮ ಸರ್ಕಾರ ಇಳಿದಿದೆಯೆಂದು ಭಾವಿಸಿರಲಿಲ್ಲ. ನಾನು ಕಾಂಗ್ರೆಸ್ ಪಕ್ಷದಲ್ಲಿ ಇದ್ದಾಗ ಇಂತಹ ವಿಚಾರಗಳನ್ನು ನೋಡಿದ್ದೇನೆ. ನನಗೆ ಎರಡು ಕಡೆಯ ಅನುಭವವೂ ಇದೆ. ಆಗ ಎದುರು ಪಕ್ಷದ ಸ್ನೇಹಿತರಿಗೆ ಕಾಂಗ್ರೆಸ್ಸಿನ ಪಕ್ಷದವರು ಇಷ್ಟೊಂದು ತೊಂದರೆ ಯಾವೊತ್ತೂ ಕೊಡುತ್ತಾ ಇರಲಿಲ್ಲ. ಈವೊತ್ತಿನ ಪರಿಸ್ಥಿತಿ ನೋಡಿದರೆ ಉದ್ದೇಶಪೂರ್ವಕವಾಗಿ ಎದುರುಪಕ್ಷದವರನ್ನು ದಮನ ಮಾಡುವ ವೃತ್ತಿಯನ್ನಿಟ್ಟುಕೊಂಡು ಮಾಡುತ್ತಾರೆಂದು ಸ್ಪಷ್ಟವಾಗಿ ಗೊತ್ತಾಗುತ್ತದೆ.

ಸ್ವಾಮಿ, ಬ್ಯಾಲದ ಕೆರೆ ಬಗ್ಗೆ ನಡೆದಿರತಕ್ಕ ವಿದ್ಯಮಾನಗಳನ್ನು ಗಮನಿಸಬೇಕಾದ್ದು ಅವಶ್ಯಕ. ಮುಖ್ಯ ಇಂಜಿನಿಯರ್ ಆದ ಬಾಳೆಕುಂದ್ರಿ ಅವರು ಬಹಳ ಬುದ್ಧಿವಂತರು ಎಂದು ನಮ್ಮೆಲ್ಲರ ಅಭಿಪ್ರಾಯ. ಅಂಥವರು ಹೋಗಿ ಸ್ಥಳ ನೋಡಿ ಅವರ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಅವರು ದಾಕ್ಷಿಣ್ಯಕ್ಕೆ ಒಳಗಾಗತಕ್ಕ ಸ್ವಭಾವದವರಲ್ಲ. ಅವರು ಪರಿಣತರಾಗಿರುವುದರಿಂದ ಅವರ ಅಭಿಪ್ರಾಯವನ್ನು ಕೊಟ್ಟರು. ಈಗ ಅದರ ಬಗ್ಗೆ ಮತ್ತೊಬ್ಬ ಮುಖ್ಯ ಇಂಜಿನಿಯರ ಅವರ ಅಭಿಪ್ರಾಯವನ್ನು ತೆಗೆದುಕೊಳ್ಳಬೇಕೆಂದು ಇದ್ದಾರೆ. ಆ ಕೆರೆ ಕೆಲಸವನ್ನು ತೆಗೆದುಕೊಳ್ಳುವ ಉದ್ದೇಶವಿದ್ದರೆ ಪುನಃ ಇನ್ನೊಬ್ಬರ ಅಭಿಪ್ರಾಯವನ್ನು ತೆಗೆದುಕೊಳ್ಳಬೇಕಾದ ಅಗತ್ಯವಿರಲಿಲ್ಲ. ಹಿಂದೆ ಇದ್ದಂಥ ಮುಖ್ಯ ಇಂಜಿನಿಯರು ಕೊಟ್ಟಿರುವ ಅಭಿಪ್ರಾಯವಾದರೂ ಕೂಡ ಮತ್ತೆ ಅದನ್ನು ಬದಲಾವಣೆ ಮಾಡಿ ತಮ್ಮ ಉದ್ದೇಶ ನೆರವೇರಿಸಿಕೊಳ್ಳುವುದಕ್ಕೆ ಈ ಕ್ರಮ ಹಾಕಿಕೊಂಡಿದ್ದಾರೆಂದು ನಾನು ಭಾವಿಸುತ್ತೇನೆ. ಸಂಬಂಧಪಟ್ಟ ಮಂತ್ರಿಗಳಾದ ಶ್ರೀ ಅಂದಾನಪ್ಪ ದೊಡ್ಡಮೇಟಿ ಅವರು ಅದನ್ನು ಗಮನದಲ್ಲಿಟ್ಟುಕೊಳ್ಳಬೇಕೆಂದು ಸಲಹೆ ಮಾಡುವುದಕ್ಕೆ ಇಷ್ಟಪಡುತ್ತೇನೆ. ಟೆಕ್ನಿಕಲ್ ಒಪಿನಿಯನ್‌ಗೆ ಮಾನ್ಯತೆ ಕೊಡಬೇಕು. ಯಾವ ಪಕ್ಷದವರೇ ಆಗಲೀ ತಜ್ಞರು ಹೇಳಿರುವುದಕ್ಕೆ ಮಾನ್ಯತೆಯನ್ನು ಕೊಡಲೇ ಬೇಕು. ಇದನ್ನು ಕಡ್ಡಾಯವಾಗಿ ಅನುಸರಿಸಬೇಕು ಎಂದು ಹೇಳುತ್ತೇನೆ.

ನಮ್ಮೆಲ್ಲರತಕ್ಕ ರೀತಿನೀತಿಗಳನ್ನು ನೋಡಿದರೆ, ಅದರಲ್ಲಿಯೂ ಲೋಕೋಪಯೋಗಿ ಇಲಾಖೆಯಲ್ಲಿ ಕೆಲಸ ಮಾಡತಕ್ಕ ಅಧಿಕಾರಿಗಳು ಲಂಚಕ್ಕೆ ಎತ್ತಿದ ಕೈ ಎನ್ನುವುದನ್ನು ನಾವು ಮರೆಯುವ ಹಾಗೆ ಇಲ್ಲ. ಇದನ್ನು ತಪ್ಪಿಸುವುದು ಹೇಗೆ ಎಂದು ಗೊತ್ತಾಗುವುದಿಲ್ಲ. ಮೇಲ್ಮಟ್ಟದಲ್ಲಿರುವವರು ಹಸ್ತಶುದ್ಧರಾಗಿದ್ದರೆ ಅವರ ಕೆಳಗಿನ ಅಧಿಕಾರಿಗಳು ಸ್ವಲ್ಪ ಹೆದರಿಕೊಳ್ಳುತ್ತಾರೆ. ಇವರ ಹಸ್ತವೇ ಶುದ್ಧವಾಗಿಲ್ಲದೆ ಇರುವಾಗ ಕೆಳಗಿನ ಅಧಿಕಾರಿಗಳು ಶುದ್ಧ ಹಸ್ತರಾಗುತ್ತಾರೆ, ಲಂಚದಿಂದ ದೂರವಾಗುತ್ತಾರೆ ಎನ್ನುವ ಭರವಸ ಈವೊತ್ತು ಹೋಗಿದೆ. ಮಾನ್ಯ ಮಂತ್ರಿಗಳಾದ ಲಕ್ಕಪ್ಪನವರು ಸ್ವಲ್ಪ ಗಟ್ಟಿ ಮನಸ್ಸು ಮಾಡಿ ಅಧಿಕಾರಿಗಳಮೇಲೆ ಪೂರ್ಣ ಹತೋಟಿಯನ್ನಿಟ್ಟುಕೊಳ್ಳಬೇಕು. ಕಾಂಗ್ರೆಸ್ಸಿನವರಾಗಲೀ ಕಾಂಗ್ರೆಸ್ಸೇತರರಾಗಲೀ, ತಾರತಮ್ಯ ಮಾಡಬಾರದು

(ಶ್ರೀ ಎನ್. ಹುಚ್ಚಮಾಸ್ತಿಗೌಡ)

ಎನ್ನುವ ಸಲಹೆಯನ್ನು ಕೊಡಬೇಕು, ಅಭಿವೃದ್ಧಿ ಕಾರ್ಯಗಳಿಂದ ಎಲ್ಲರಿಗೂ ಸರಿಸಮಾನವಾದ ಪ್ರಯೋಜನ ದೊರಕುವಂತೆ ಏರ್ಪಾಡು ಮಾಡಬೇಕು ಎಂದು ಸಲಹೆ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀಮತಿ ನಾಗಮ್ಮ (ಕಲಮಾಲ).—ಮಾನ್ಯ ಅಧ್ಯಕ್ಷರೇ, ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟ್ ಬೇಡಿಕೆಗಳ ಮೇಲೆ ಮಾತನಾಡಲು ನಾನು ಇಷ್ಟಪಡುತ್ತೇನೆ. ರಾಯಚೂರು ಜಿಲ್ಲೆ ಹೈದರಾಬಾದ್ ಭಾಗದಲ್ಲಿ ಬಹಳ ಹಿಂದುಳಿದ ಭಾಗ. ರಾಯಚೂರಿನವರಿಗೇನು, ತುಂಗಭದ್ರ ಡ್ಯಾಂ ಇದೆ ಎಂದು ಜನ ತಿಳಿಯುತ್ತಾರೆ. ರಾಯಚೂರು ಜಿಲ್ಲೆಯ ಮೂರು ತಾಲ್ಲೂಕುಗಳಿಗೆ ಮಾತ್ರ ನೀರು ಬಂದಿದೆ. ಉಳಿದ ಭಾಗಗಳು ಹಾಗೆಯೇ ಇವೆ. ಬಡತನದಿಂದ ಜನರು ಬಹಳ ಕೊರಗುತ್ತಿದ್ದಾರೆ. ರಾಯಚೂರು ತಾಲ್ಲೂಕಿನಲ್ಲಿ ಚಂದ್ರದಂಡ ಸರ್ಕಲ್ಲಿಗೆ ತುಂಗಭದ್ರದಿಂದ ಕಾಲುವೆ ತೆಗೆದು ನೀರನ್ನು ಕೊಡಬೇಕು ಎಂದು ಬಹಳ ದಿವಸಗಳಿಂದ ಕೇಳುತ್ತಿದ್ದೇವೆ. ಅವರೂ ನಮ್ಮ ಸರ್ಕಾರದ ಗಮನಕ್ಕೆ ಬಂದಿಲ್ಲ. ಮಾನ್ಯ ಮಂತ್ರಿಗಳು ನಮ್ಮ ಭಾಗಕ್ಕೆ ಇನ್ನೂ ಬಂದಿಲ್ಲ. ನೀರು ಎಷ್ಟು ಇದ್ದಾಗೂ ಕೂಡ ಎಲ್ಲೋ ಹರಿದು ಹೋಗುತ್ತದೆ ಏಕೆ ಹೋಗುತ್ತದೆ ಎಂದು ಒಬ್ಬರೂ ಅದರ ಕಡೆ ನೋಡುವುದಿಲ್ಲ. ನಮ್ಮ ಭಾಗದಲ್ಲಿ ಬಡತನ ಬಹಳವಿದೆ. ಆ ಭಾಗಕ್ಕೆ ನೀರು ಕೊಡಬೇಕಾಗುತ್ತದೆ ಎಂದು ಸರ್ಕಾರದ ಗಮನಕ್ಕೆ ಇದುವರೆಗೂ ಬರಲಿಲ್ಲ ಎಂದು ವಿಷಾದದಿಂದ ಹೇಳಬೇಕಾಗುತ್ತದೆ. ಪಬ್ಲಿಕ್ ವರ್ಕ್ಸ್ ಇಲಾಖೆಯವರು ಎಲ್ಲೆಲ್ಲಿ ಅವಶ್ಯಕತೆ ಇದೆ ಅಲ್ಲಿ ಅಯಕಟ್ಟು ರಸ್ತೆ ಮಾಡಬೇಕು ನಮ್ಮ ಭಾಗದಲ್ಲಿ ಇನ್ನೂ ಯಾವುದೂ ಆಗಿಲ್ಲ. ಯಾವುದೇ ಭಾಗವಾಗಲಿ ಆಯ ಕಟ್ಟು ರಸ್ತೆ ಮುಂತಾದುವನ್ನು ಯಾವ ಕಾಲಕ್ಕೆ ತೆಗೆದುಕೊಳ್ಳಬೇಕಾದರೂ ಅಂಥವರ ಬಗ್ಗೆ ಸರ್ವೆ ಮಾಡಿಸಿ. ಎಸ್ಟಿಮೇಟ್ ಮಾಡಿಸಿ, ತಯಾರು ಇಟ್ಟಿರಬೇಕು. ಬಾವಿಯಾಗಲೀ, ಕೆರೆಯಾಗಲೀ ಯಾವುದನ್ನು ಎಲ್ಲೆಲ್ಲಿ ಮಾಡಬೇಕು ಎಂಬುದಕ್ಕೆ ಸರ್ವೆ ಮಾಡಿ ಎಸ್ಟಿಮೇಟುಗಳನ್ನು ತಯಾರು ಮಾಡಿರಬೇಕು. ಇದರಿಂದ ಯಾವ ಕೆಲಸವನ್ನು ಅರ್ಜೆಂಟಾಗಿ ತೆಗೆದುಕೊಳ್ಳಬೇಕು ಎನ್ನುವುದು ಗೊತ್ತಾಗುತ್ತದೆ.

ನಾನು ಮೊದಲೇ ಹೇಳಿದಂತೆ ರಾಯಚೂರು ಜಿಲ್ಲೆ ಬಹಳ ಹಿಂದುಳಿದ ಭಾಗ. ಅಲ್ಲಿಗೆ ಅಪ್ಪರ್ ಕೃಷ್ಣ ನೀರನ್ನು ಕೊಡುತ್ತೇವೆಂದು ಹೇಳುತ್ತಿದ್ದಾರೆ. ಅದು ಯಾವಾಗ ಬರುತ್ತದೆಯೋ ಗೊತ್ತಿಲ್ಲ. ಹೋದ ಸಲ 13 ಕೋಟಿ ರೂಪಾಯಿ ಮಂಜೂರು ಮಾಡಿದ್ದಾರೆ ಎಂದರು. ಅದೆಲ್ಲ ಸಿಬ್ಬಂದಿ, ಮತ್ತು ಇತರ ಕೆಲಸಗಳಿಗೆ ಆಯಿತು. ಆ ಕಟ್ಟಡದ ಕೆಲಸ ಏನೂ ನಡೆಯುತ್ತಿಲ್ಲ. ನೀರಾವರಿ ಯೋಜನೆ ಮಾಡಿದರೆ ಬಹಳ ಜನರಿಗೆ ಅನ್ನ ದೊರೆತು ಊಟ ಮಾಡಿದ ಹಾಗೆ ಆಗುತ್ತದೆ. ಕೃಷ್ಣ ವ್ಯಾಲಿಯಲ್ಲಿ ಲಿಫ್ಟ್ ಇರಿಗೇಷನ್ ಮಾಡಬೇಕು ಎಂದು ಸರ್ವೆ ಆಗಿ, ಎಸ್ಟಿಮೇಟ್ ಆಗಿದೆ, ಅದು ಮಂಜೂರಾಗಿ ಅತಗೂರು, ರಾಮಪುರ, ಕೊತಕುಂಬೂರ್ ಈ ಭಾಗಗಳಿಗೆ ಅನುಕೂಲವಾಗುವ ಹಾಗೆ ಎಸ್ಟಿಮೇಟ್ ಮಾಡಿ ತಯಾರು ಇಟ್ಟಿದ್ದಾರೆ. ಇದನ್ನು ಅರ್ಜೆಂಟಾಗಿ ಮಾಡಿಸಬೇಕು ಎಂದು ಹೇಳುತ್ತೇನೆ. ಈ ತಿಂಗಳಲ್ಲಿಯೇ ಕೆಲಸ ಶುರು ಆಗುವ ಹಾಗೆ ವ್ಯವಸ್ಥೆ ಮಾಡಬೇಕು ಎಂದು ಪದೇ ಪದೇ ಪಬ್ಲಿಕ್ ವರ್ಕ್ಸ್ ಇಲಾಖೆಯ ಮಂತ್ರಿಗಳಲ್ಲಿ ಮನವಿ ಮಾಡುತ್ತೇನೆ. ನಮ್ಮ ಭಾಗಕ್ಕೆ ಬಂದರೆ ನಮ್ಮ ಕಷ್ಟವೇನು ಎನ್ನುವುದು ಗೊತ್ತಾಗುತ್ತದೆ.

ಅಪ್ಪರ್ ಕೃಷ್ಣಾ ಯೋಜನೆ ಮಾಡಿದರೆ ಎಡದಂಡೆ ನಾಲೆ, ಬಲದಂಡೆ ನಾಲೆ ಎಂದು ಇದರಲ್ಲಿ ಯಾವುದನ್ನು ಮೊದಲು ತೆಗೆದುಕೊಳ್ಳೋಣ ಎನ್ನುವ ವಿಚಾರ ಬರುತ್ತದೆ. ಇನ್ನೂ ಡ್ಯಾಂ ಕಟ್ಟಿಲ್ಲ. ಆದರೂ ಮುಂದೆ ಎಡದಂಡೆ ನಾಲೆ, ಬಲದಂಡೆ ನಾಲೆ ಎನ್ನಲಾರದಂತೆ ಕೆಲಸ ಮಾಡಬೇಕು.

ರಾಯಚೂರು ಜಿಲ್ಲೆಗೆ ಸಣ್ಣ ನೀರಾವರಿ ಬಾವಿಗಳನ್ನು ಇನ್ನೂ ಹೆಚ್ಚು ಕೊಡಬೇಕು ಎಂದು ಮನವಿ ಮಾಡಿ ನನ್ನ ಎರಡು ಮಾತನ್ನು ಮುಗಿಸುತ್ತೇನೆ.

† SRI G. CHANDRAKANTH (Bidar).—Hon. Speaker Sir, I rise to oppose the demands placed before this House for consideration relating to Public Works, Electricity and Irrigation schemes, etc. These demands, total comes to Rs. 98 crores almost amounting to half of the Budget provision of this year. I have gone through all the demands and I find that major portion of the amount has been asked for and none of the new works were to be taken up this year. I would confine

myself to Bidar District rather than going in detail. I can very boldly say that no new major works of any kind have been included this year in our area. A few works in Sri Manickrao's constituency have been proposed to be taken up. A few more works have been taken up in the Constituency of Sri Bhimanna. Both of them are the Congress members. For a few incompleted works, a small amount seems to have been earmarked for their completion. I do not know at this rate whether we will be able to complete them in coming 25 years. No Irrigation works such as tanks and projects have been taken up in Bidar District. Though we have been pressing during the last 4 or 5 years that irrigation tanks should be taken up, they have not been taken up. These irrigation tanks are found to be very defective. For example in our District, there is one Nizampur Tank. We do not find water at all in this tank. Water does not store in the tank. There are so many such tanks in our District. So many such tanks are constructed defectively in connivance with the P. W. D. contractors. Not a single drop of water will be there. But the ryots have to pay the betterment tax and such other taxes though the water has not been given. Other facilities also have not been given. It is quite unjustifiable to say that these people should pay all these taxes though the facilities have not been given. The ryots are due to pay arrears of all these taxes. As rightly pointed out by Sri Bhimanna Bidar District is a very backward area. Though the Government have assured that several developmental programmes will be taken up in this District, we find no such developmental works have at all been taken up. Every time we are bringing to the notice of the Government in every speech of ours that Bidar has been neglected and developmental activities should be taken up forthwith. But so far our speeches have had no effect. The Government is not heeding to our request. In this connection I want to mention here, that Hon'ble Member Sri Kalmankar was mentioning that 23 tanks are taken up. But actually they are not situated in our District.

Even in regard to Road Development we are far far behind. There was a Committee appointod for the purpose. The Committee has submitted a report. But unfortunately the recommendations of the Committee have not been implemented and they have gone into cold storage. You are telling several times, that between the North and South of the State there is much disparity and this disparity could be done away with by earmarking some good amount. Have you done this? The only project that is proposed in the District is Karanji Project which has been estimated for Rs. 12 crores. I am told the plans and estimates are ready and they have been sent to the Central Government. Our Minister concerned told us several times that only technical clearance is to be obtained for this project. I do not know how long it will take. Our Hon'ble Chief Minister is going to Delhi tomorrow. He may take up this question with the Central Government and see what all to be done is done in this matter, and see that this most backward District is brought up to the level of other Districts.

(SRI G. CHANDRAKANTH)

With regard to electrification, I say that only 44 villages have been electrified and only a few pump sets have been energised. I would therefore request that a good number of pump sets may be energised and a few more villages are electrified. Pump sets are only the source for irrigation in Bidar District. Therefore, steps should be taken to see that as many number of pumpsets as possible may be energised. With these words, I thank you, Sir.

† ಶ್ರೀ ಸದಾಶಿವಪ್ಪ ಪಾಟೀಲ್ (ದೇವದುರ್ಗ).—ಸನ್ಮಾನ್ಯ ಅಧ್ಯಕ್ಷರೇ, ಕಡೆಯದಾಗಿ ನನ್ನ ಭಾಷಣವಿರುತ್ತದೆ ಎಂದು ಕಾಣಿಸುತ್ತದೆ. ಈಗ ತುಂಗಭದ್ರ ಕಾಲುವೆಯಿಂದ ರಾಯಚೂರು ವಿಭಾಗದಲ್ಲಿ ಹೆಚ್ಚು ನೀರಾವರಿಯಾಗಿ ರಾಯಚೂರು ಜಿಲ್ಲೆಯವರು ಬಹಳ ಒಳ್ಳೆಯ ರೀತಿಯಿಂದಿದ್ದಾರೆ ಎಂಬ ಭಾವನೆ ಇದೆ. ಆದರೆ ನೀರಾವರಿ ಬಗ್ಗೆ ಹೇಳಬೇಕಾದರೆ ಸುಮಾರು 6 ಲಕ್ಷ ಎಕರೆ ನೀರಾವರಿಯಾಗುತ್ತದೆಂದು ಪಿ.ಡಬ್ಲ್ಯು.ಡಿ.ಯವರು ಡಿಕ್ಲೇರ್ ಮಾಡಿದ್ದಾರೆ, ನಿಜವಾಗಿ ಇದರಲ್ಲಿ ಈಗ ಡೆವಲಪ್ ಆಗಿರುವುದು ಕೇವಲ 3 ಲಕ್ಷ ಎಕರೆ. ಇನ್ನೂ 3 ಲಕ್ಷ ಎಕರೆ ಡೆವಲಪ್ ಆಗಲು ಫೀಲ್ಡ್ ಛಾನಲ್ ಆಗಬೇಕು, ಬೇಕಾದ ಮೆಷೀನರಿ ಇಲ್ಲ. ಸಿಂಧನೂರಿನಲ್ಲಿ ರೆಫ್ಯೂಜಿಗಳು ಸಿಲೋನಿನಿಂದ ಬಂದು ನೆಲಸಿದ್ದಾರೆ. ಅವರಿಗೆ ಕೊಡುತ್ತಿರುವ ಸೌಲತ್ತು ಮತ್ತು ಮೆಷೀನರಿ ನೋಡಿದರೆ ನಿಜವಾಗಿಯೂ ಕೂಡ ನಮ್ಮ ರೈತರಿಗೆ ದುಃಖವಾಗುತ್ತದೆ. ಏಕೆಂದರೆ ಅಲ್ಲಿ ಸುಮಾರು 18—20 ಬುಲ್‌ಡೋಜರುಗಳು ಕೆಲಸ ಮಾಡುತ್ತಿವೆ. ಆದರೆ ಇಡೀ ಜಿಲ್ಲೆಯಲ್ಲಿ ತುಂಗಭದ್ರ ಅಯಕಟ್ಟಿನಲ್ಲಿ ಒಂದೇ ಒಂದು ಬುಲ್‌ಡೋಜರ್ ಇದೆ. ಇದರಿಂದ ನೀರಾವರಿ ಹೆಚ್ಚಿಸುವುದಕ್ಕೆ ಅಥವಾ ರಾಜ್ಯಕ್ಕೆ ಹೆಚ್ಚು ಆಹಾರ ಬೆಳೆದು ಕೊಡುವುದಕ್ಕೆ ರೈತರಿಗೆ ಸಾಧ್ಯವಾಗಿಲ್ಲ, ಅದು ಅವರ ತಪ್ಪಲ್ಲ. ನಿಜವಾದ ತಪ್ಪು ಸರಕಾರದ್ದು.

ರಸ್ತೆ ಬಗ್ಗೆ ಹೇಳುವುದಾದರೆ ರಾಯಚೂರು ಜಿಲ್ಲೆಯಲ್ಲಿ ಎಷ್ಟು ಮೈಲಿ ರಸ್ತೆ ಇರಬೇಕೋ ಅಷ್ಟಿಲ್ಲ. ಜಿಲ್ಲೆಗೆ ಹಣವನ್ನು ಅಲಾಟ್ ಮಾಡುವ ಬದಲು ತಾಲ್ಲೂಕಿಗೆ ಅಲಾಟ್‌ಮಾಡಿದರೆ ಒಳ್ಳೆಯದು ಎಂದು ನನಗನ್ನಿಸುತ್ತದೆ. ಏಕೆಂದರೆ ಸರ್ಕಲ್ ಅಥವ ಡಿವಿಜನ್‌ಗೆ ಅಲಾಟ್ ಮಾಡಿದರೆ ಪೊಲಿಟಿಕಲ್ ಪ್ರೆಷರ್ ಮೂಲಕ ಯಾರಿಗೆ ಎಷ್ಟು ಬೇಕೋ ಅಷ್ಟನ್ನು ಅವರು ಅಲಾಟ್ ಮಾಡಿಸಿ ಕೊಳ್ಳುತ್ತಾರೆ. ಇದರಿಂದ ಬೇರೆ ಕಡೆಗಳಿಗೆ ಸಾಕಷ್ಟು ದೊರೆಯುವುದಿಲ್ಲ, ಅಂಥ ಕಡೆ ಕಮ್ಯೂನಿಕೇಷನ್ ಮತ್ತು ಕಟ್ಟಡಗಳು ಸೌಕರ್ಯವಾಗುವುದಕ್ಕೆ ಸಾಧ್ಯವಾಗುವುದಿಲ್ಲ. ನಾವು ಕೆಲವು ವರ್ಷಗಳು ಬಜೆಟ್ಟನ್ನು ನೋಡಿದರೆ ನನ್ನ ತಾಲ್ಲೂಕಿನಲ್ಲಿ ಯಾವ ಹೊಸಕಟ್ಟಡ ಕಾಣುವುದಿಲ್ಲ, ಒಂದು ರಸ್ತೆ ಇಲ್ಲ, ಒಂದು ಹೊಸ ಕೆರೆ ಇಲ್ಲ. ವಿರೋಧ ಪಕ್ಷದ ಸದಸ್ಯರಿದ್ದಾರೆನ್ನುವ ದೃಷ್ಟಿಯಿಂದ ಬಿಟ್ಟಿದ್ದಾರೆಂದನ್ನಿಸುತ್ತದೆ. ಇಡೀ ರಾಜ್ಯದಲ್ಲಿ ಎಲ್ಲಿ ಅವಶ್ಯವಿದೆ ಅಲ್ಲಿ ಕೆಲಸ ಮಾಡಬೇಕಾಗಿದೆ. ಕಮ್ಯುನಿಕೇಷನ್ ದೃಷ್ಟಿಯಿಂದ, ಅಥವಾ ಬಿಲ್ಡಿಂಗ್ ದೃಷ್ಟಿಯಿಂದ, ಅಥವಾ ನೀರಾವರಿ ದೃಷ್ಟಿಯಿಂದ ಎಲ್ಲಿ ಅವಶ್ಯವಿದೆ ಅಲ್ಲಿ ಕೆಲಸಗಳನ್ನು ಪ್ರಾರಂಭ ಮಾಡಬೇಕು.

ಎಲೆಕ್ಟ್ರಿಸಿಟಿ ಬಗ್ಗೆ ಹೇಳಬೇಕೆಂದರೆ ಇವೊತ್ತು ಬೆಳಿಗ್ಗೆ ರಾಯಚೂರು ಜಿಲ್ಲೆಯ ಎಂ. ಎಲ್. ಎಗಳ ಮೀಟಿಂಗ್‌ನಲ್ಲಿ ಐ. ಪಿ. ಸೆಟ್‌ಗಳನ್ನು ಕೊಡುವುದರ ಬಗ್ಗೆ ಚರ್ಚೆ ನಡೆಯಿತು. ಐ. ಪಿ. ಸೆಟ್‌ಗಳನ್ನು ಸರ್ಕಾರ ಏಕೆ ಹೆಚ್ಚು ಮಾಡುವುದಿಲ್ಲ, ಏಕೆ ಮಂಜೂರು ಮಾಡುವುದಿಲ್ಲ? ಇದಕ್ಕೆ ಎಲೆಕ್ಟ್ರಿಸಿಟಿ ಬೋರ್ಡ್‌ನವರ ತಪ್ಪೋ ಅಥವಾ ಕೋ ಆಪರೇಟಿವ್ ಬ್ಯಾಂಕ್‌ನವರ ತಪ್ಪೋ ಎನ್ನುವ ವಿಚಾರ ಬಂತು. ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್ ಐ. ಪಿ. ಸೆಟ್‌ಗಳನ್ನು ಮಂಜೂರು ಮಾಡಬೇಕು. ಬ್ಯಾಂಕಿನವರು ಎಲೆಕ್ಟ್ರಿಸಿಟಿ ಬೋರ್ಡಿಗೆ ಇಂಥವರಿಗೆ ಐ. ಪಿ. ಸೆಟ್ ಮಂಜೂರು ಮಾಡಬೇಕು, ರೈತ ಬೆಳೆಯುತ್ತಿರೋ ಇಲ್ಲವೋ ಎಂದು ಅವರು ಕೇಳಬೇಕು. ಎಲೆಕ್ಟ್ರಿಸಿಟಿ ಬೋರ್ಡಿನವರು ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿನವರು ಒಬ್ಬರನ್ನೊಬ್ಬರು ಕೇಳಿಕೊಂಡು ಸಾಲ ಮಂಜೂರು ಮಾಡುತ್ತಾರೆ. ಇಷ್ಟರಲ್ಲಿ ಆರು ತಿಂಗಳು ಹೋಗುತ್ತದೆ. ಕೊಟ್ಟಿರುವ ಸಾಲದಲ್ಲಿ 90 ಪರ್ಸೆಂಟ್ ರಿಕವರಿ ಆಗುವವರೆಗೆ ಮುಂದಿನ ಅಪ್ಲಿಕೇಷನ್ ಪರಿಶೀಲಿಸುವುದಿಲ್ಲ ಎನ್ನುವ ನಿರ್ಣಯವನ್ನು ತೆಗೆದುಕೊಂಡಿದ್ದಾರೆ. 89 ಪರ್ಸೆಂಟ್ ರಿಕವರಿ ಆದರೂ ಯಾರಾದರೂ ಒಬ್ಬ ಡೈರೆಕ್ಟರ್ ಅಥವಾ ಪ್ರೆಸಿಡೆಂಟ್ ಅಥವಾ ಪ್ರಭಾವಿ ಮನುಷ್ಯ ಸಾಲದ ಮರುಪಾವತಿ ಮಾಡದ ಇದ್ದರೆ ಬೇರೆಯವರಿಗೆ ಸಾಲ ಸಿಕ್ಕುವುದಕ್ಕೆ ಸಾಧ್ಯವಿಲ್ಲ. ಈ ರೀತಿಯ ಕ್ರಮದಿಂದ ಯಾವ ರೈತನಿಗೂ ಅನುಕೂಲವಾಗುವುದಿಲ್ಲ. ಅದರ ಸಲುವಾಗಿ ಐ. ಪಿ. ಸೆಟ್ಸ್ ಎಲ್ಲ ಕಡೆಯೂ ಸರಿಯಾದ ರೀತಿಯಿಂದ ಒದಗಿಸುವುದಕ್ಕಾಗುವುದಿಲ್ಲ.

ಮಾನ್ಯ ಮಿತ್ರರು ಭ್ರಷ್ಟಾಚಾರದ ಬಗ್ಗೆ ಹೇಳಿದರು. ಈ ಇಲಾಖೆಯಲ್ಲಿರುವಷ್ಟು ಸಿಸ್ಟಮ್ಯಾಟಿಕ್ ಆಗಿ ಬೇರೆಲ್ಲಿಯೂ ಕರಪ್ಷನ್ ಇಲ್ಲ ಎಂದು ಹೇಳುತ್ತೇನೆ. ಅಂದಾಜಾಗಿರುವ ರೇಟಿನಲ್ಲಿ ಅಸಿಸ್ಟೆಂಟ್ ಇಂಜಿನಿಯರಿಗೆ 5 ಪರ್ಸೆಂಟ್, ಎಕ್ಸಿಕ್ಯೂಟಿವ್ ಇಂಜನಿಯರಿಗೆ 5 ಪರ್ಸೆಂಟ್, ಸೂಪರಿಂಟೆಂಡಿಂಗ್ ಇಂಜನಿಯರ್‌ಗೆ ಇಷ್ಟು, ಚೀಫ್ ಇಂಜನಿಯರಿಗೆ ಇಷ್ಟು ಎಂದಿದೆ. ಆಮೇಲೆ ನಿಮಗೇನೋ ಗೊತ್ತಿಲ್ಲ ಇಲ್ಲಿ ಭೇದ ಭಾವನೇ ಇಲ್ಲ. ಅದಕ್ಕಾಗಿ ಸಿಸ್ಟಮ್ಯಾಟಿಕ್ ಕರಪ್ಷನ್ ಡಿಪಾರ್ಟಮೆಂಟ್ ಎಂದು ಹೇಳಬಹುದು. ಈ ಇಲಾಖೆ ಯಾವಾಗ ಸುಧಾರಣೆಯಲ್ಲಿತ್ತು ಎಂದರೆ—ನಾನು ಅವಾಗ ಎಂ. ಎಲ್. ಎ. ಆಗಿರಲಿಲ್ಲ—ಮಾನ್ಯ ಚನ್ನಬಸಪ್ಪನವರ ಕಾಲದಲ್ಲಿ ಸುಧಾರಣೆಯಲ್ಲಿತ್ತು ಎಂದು ಹೇಳಬಹುದು. ಆವಾಗ ಸ್ವಲ್ಪ ಪ್ರಕಾರವಾಗಿತ್ತು. ಮಂತ್ರಿಗಳ ಬಗ್ಗೆ ಇಂಜಿನಿಯರು ಗಳಿಗೆಲ್ಲ ಒಂದು ರೀತಿಯಲ್ಲಿ ಭಯವಿತ್ತು. ಭಯದಿಂದ ಸಾಧ್ಯವಾದಷ್ಟು ಕರಪ್ಷನ್‌ಗೆ ಪರ್ಸೆಂಟೇಜ್ ಕಡಮೆ ಆಗಿರಬಹುದು. ಮಾನ್ಯ ಮಂತ್ರಿಗಳು ಆದಷ್ಟು ಕರಪ್ಷನ್ ಬಗ್ಗೆ ಗಮನ ಕೊಡ ಬೇಕು. ಎಸ್ಟಿಮೇಟ್ ಮಂಜೂರಾಗಲಾರದೆ, ಟೆಕ್ನಿಕಲ್ ಸ್ಯಾಂಕ್ಷನ್, ಆಗಲಾರದೇ ಎಕ್ಸಿಕ್ಯೂಟಿವ್ ಇಂಜಿನಿಯರ್, ಸೂಪರಿಂಟೆಂಡಿಂಗ್ ಇಂಜಿನಿಯರ್ ಯಾರೇ ಆಗಲೀ ಕೆಲಸಗಳನ್ನು ತೆಗೆದುಕೊಳ್ಳ ಬಾರದು ಎಂದು ಆದೇಶ ಕೊಡಬೇಕು. ಅವರು ಕೆಲಸಗಳನ್ನು ಟೆಂಡರ್ ಇಲ್ಲದೆ ತಮ್ಮ ಮನಸ್ಸಿಗೆ ಬಂದ ಕಂಟ್ರಾಕ್ಟರಿಗೆ ಕೊಡುತ್ತಿದ್ದಾರೆ. ಎಷ್ಟೋ ತಾಲ್ಲೂಕುಗಳಲ್ಲಿ ಒಬ್ಬನೇ ಒಬ್ಬ ಕಂಟ್ರಾಕ್ಟರ್ ಮೂರು ನಾಲ್ಕು ಕೆಲಸಗಳನ್ನು ಹಿಡಿದಿರುತ್ತಾನೆ. ರಾಯಚೂರು ಜಿಲ್ಲೆಯಲ್ಲಿ ಒಬ್ಬರೇ ಕಂಟ್ರಾಕ್ಟರು 20 ಲಕ್ಷ ರೂಪಾಯಿ ಕೆಲಸವನ್ನು ತೆಗೆದುಕೊಂಡಿದ್ದಾರೆ. ಈ ರೀತಿ ಟೆಂಡರ್ ಕರೆಯುವುವಾಗ ಒಂದು ಎಸ್ಟಿಮೇಟ್ ಇರುತ್ತದೆ. ಒಂದು ವರ್ಷವಾದ ಕೂಡಲೇ ಅದು ರಿವೈಸ್ ಆಗುತ್ತದೆ. ಒಮ್ಮೆ ಅಗ್ರಿಮೆಂಟ್ ಆದ ಬಳಿಕ ಅದರ ಪ್ರಕಾರ ಆಗಬೇಕಾದ ಕೆಲಸ ಮುಗಿಯುವವರೆಗೆ ಎಸ್ಟಿಮೇಟಿನಲ್ಲಿ ಅಥವಾ ರೇಟಿನಲ್ಲಿ ಯಾವ ಬದಲಾವಣೆಯೂ ಆಗಲಾರದಂತೆ ನೋಡಿಕೊಳ್ಳಬೇಕು. ಆ ರೀತಿ ಬದಲಾವಣೆ ಮಾಡುತ್ತ ಹೋದರೆ 10 ವರ್ಷವಾದರೂ ಅಗ್ರಿಮೆಂಟ್ ಪ್ರಕಾರ ಕೆಲಸ ಮಾಡುವುದಿಲ್ಲ. ಒಂದೊಂದು ವರ್ಷಕ್ಕೂ ರೇಟ್ ಜಾಸ್ತಿಯಾಗುತ್ತ ಹೋಗುತ್ತದೆ. ಅ ಕೆಲಸ ಮುಗಿಯುವುದಿಲ್ಲ, ರಾಜ್ಯಕ್ಕೆ ಆದಾಯವಿರುವುದಿಲ್ಲ. ಕಂಟ್ರಾಕ್ಟರ ರಾಜ್ಯವಾಗುತ್ತದೆ. ಆ ರೀತಿ ಕಂಟ್ರಾಕ್ಟರ್ ರಾಜ್ಯವಾಗಲಿಕ್ಕೆ ತಾವು ಅವಕಾಶ ಕೊಡಬಾರದು ಎಂದು ಹೇಳಿ ಅಧ್ಯಕ್ಷರು ಮಾತನಾಡುವುದಕ್ಕೆ ಅವಕಾಶ ಕೊಟ್ಟದ್ದಕ್ಕಾಗಿ ಅವರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Mr. DEPUTY SPEAKER.—Now the House stands adjourned to meet tomorrow at 9 A.M.

The House adjourned at Forty-five Minutes past Eight of the Clock to meet again at Nine of the Clock on Friday, the 7th March 1969.

WD 12603—GPB—500—21-6-69

ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Friday, 7th March 1969

The House met in the Assembly Chamber, Vidhana Soudha, Bangalore, at Nine of the Clock.

MR. SPEAKER (Sri S. D. KOTHAVALE) in the Chair.

Budget estimates for 1968-69—Demands for grants

Demand Nos: 6, 29, 30, 30A, 30B, 31, 31A, 32, 43, 45, 46, 47, 48 and 50.

(Debate Continued)

Sri H. N. NANJE GOWDA (Arkalgud).—I would like to suggest something to the Hon. Chief Minister because I have moved a motion also. ಈ ಸಭೆಯಲ್ಲಿ ಸದಸ್ಯರ ಫೀಲಿಂಗ್ ನೋಡಿದರೆ 30 ಕೋಟಿ ರೂಪಾಯಿಗಳನ್ನು ಇಯರ್ ಮಾರ್ಕ್ ಮಾಡುವುದು ಕಷ್ಟ ಎಂಬುದಾಗಿ ಹೇಳುತ್ತಾ ಇರುವ ಹಾಗೆ ಕಾಣುತ್ತದೆ. ನನಗೆ ತಿಳಿದು ಬಂದಿರುವ ಹಾಗೆ ಶ್ರೀಮಾನ್ ಕೆ. ಎಚ್. ಶ್ರೀನಿವಾಸ್‌ರವರು ಒಂದು ಬಿಲ್ಲನ್ನೂ ಕೂಡ ಕೊಟ್ಟಿದಾರೆ.

Sri K. PUTTASWAMY (Minister for Law, Labour and Parliamentary Affairs):—He has spoken.

ಶ್ರೀ ಎಚ್. ಎನ್. ನಂಜೇಗೌಡ.—ಮಾನ್ಯ ಪಾರ್ಲಿಮೆಂಟರಿ ಸಚಿವರು ಸಿಟ್ಟಾಗಬೇಕಾದ ಕಾರಣವಿಲ್ಲ.

Mr. SPEAKER.—Sri Nanje Gowda may please be brief.

Sri K. PUTTASWAMY.—We must follow some procedure.

Sri H. N. NANJE GOWDA.—I have got the right of reply. I cannot be snubbed like that by the minister for Parliamentary Affairs. I have got the privilege to reply on my motion. ಮಾನ್ಯ ಶ್ರೀನಿವಾಸ್‌ರವರು ಒಂದು ಬಿಲ್ಲನ್ನೂ ಕೂಡ ಕೊಟ್ಟಿದ್ದಾರೆ ಎಂದು ಗೊತ್ತಾಗಿದೆ ಅದು ಸಭೆಯ ಮುಂದೆ ಬರುತ್ತದೆ ಎಂದು ಕಾಣುತ್ತದೆ.

Mr. SPEAKER.—I request him to be brief.

ಶ್ರೀ ಎಚ್. ಎನ್. ನಂಜೇಗೌಡ.—ಅನ್‌ಆಥರೈಸ್ಡ್ ಆಕ್ಯುಪೇಷನ್ ರೆಗ್ಯುಲರೈಸ್ ಮಾಡುವುದರಿಂದ ಸರ್ಕಾರಕ್ಕೆ 1 ಕೋಟಿ ರೂಪಾಯಿ ಆದಾಯ ಬರುತ್ತದೆಂದು ಹಿಂದೆ ಮಾನ್ಯ ರೆವಿನ್ಯೂ ಮಂತ್ರಿಗಳು ಇಲ್ಲಿ ಅಪ್ಪಣೆ ಕೊಡಿಸಿದ್ದಾರೆ. ಅರಿಯರ್ಸ್ ಕರೆಕ್ಷನ್ ಆಫ್ ಕಾಂಟ್ರಿಬ್ಯೂಷನ್,

(ಶ್ರೀ ಹೆಚ್. ಎನ್. ನಂಜೇಗೌಡ)

ಬೆಟರ್‌ಮೆಂಟ್ ಲೆವಿಯಿಂದ ಎರಡೂವರೆ ಕೋಟಿ ರೂಪಾಯಿ ನಿರೀಕ್ಷೆ ಮಾಡಬಹುದು. ಇನ್ನು ಉಳಿದ ಡಿಮ್ಯಾಂಡ್‌ನಲ್ಲಿ 50 ಲಕ್ಷ ರೂಪಾಯಿ ಮಿಗಿಸುವುದಕ್ಕೆ ಅವಕಾಶವಿದೆ. ಈಗ ಹದಿಮೂರು ವರೆ ಕೋಟಿ ರೂಪಾಯಿ ಒದಗಿಸಿದ್ದೀರಿ. ಇನ್ನು ಹದಿನಾರುವರೆ ಕೋಟಿ ರೂಪಾಯಿ ಬೇಕಾಗುತ್ತದೆ, ಅದಷ್ಟು ತೀವ್ರವಾಗಿ ಪರಿಗಣಿಸಿ ಈ ಹಣವನ್ನು ಜಾಸ್ತಿಯಾಗಿ ಕೊಡುತ್ತೇವೆ ಎಂಬ ಭರವಸೆಯನ್ನು ಈ ಸಭೆಗೆ ಮಾನ್ಯ ಮುಖ್ಯ ಮಂತ್ರಿಗಳು ಕೊಡುವುದಾದರೆ ನಾನು ನನ್ನ ಸೂಚನೆಯನ್ನು ವಾಪಸು ತೆಗೆದುಕೊಳ್ಳುವುದಕ್ಕೆ ಸಿದ್ಧವಾಗಿದ್ದೇನೆ.

ಶ್ರೀ ಕೆ. ಲಕ್ಕಪ್ಪ (ಲೋಕೋಪಯೋಗಿ ಶಾಖೆ ಮಂತ್ರಿಗಳು)—ಸ್ವಾಮಿ ಎರಡು ದಿವಸಗಳಿಂದ ಈ ಡಿಮ್ಯಾಂಡ್ ನಂಬರ್ ಎರಡರಮೇಲೆ ಅನೇಕ ಕಟ್ ಮೋಷನ್‌ಗಳು ಬಂದು, ಈ ಸದನದ ಅನೇಕ ಮಾನ್ಯ ಸದಸ್ಯರು ಅನೇಕ ವಿಷಯಗಳನ್ನು ಪ್ರಸ್ತಾಪಮಾಡಿದ್ದಾರೆ. ನಮ್ಮ ಮೈಸೂರು ರಾಜ್ಯ ವಿಸ್ತೀರ್ಣದಲ್ಲಿ 74,210 ಚದುರ ಮೈಲಿ ವಿಸ್ತೀರ್ಣದ ರಾಜ್ಯವಾಗಿದ್ದು ಸುಮಾರು ಈ ರಾಜ್ಯದಲ್ಲಿ ಇದುವರೆಗೆ ನಾವು 38,117 ಮೈಲಿ ಉದ್ದದಷ್ಟು ರಸ್ತೆಯನ್ನು ಮಾಡಿದ್ದೇವೆ. ನಾನು ಈ ಅಂಕಿ ಅಂಶಗಳನ್ನು ತಾರೀಕು 31-3-1968ರ ದಾಖಲೆಯ ಮೇಲೆ ಹೇಳುತ್ತಿದ್ದೇನೆ. ನಮ್ಮ ರಾಜ್ಯದಲ್ಲಿ ಇದುವರೆಗೂ ಮಾಡಿರತಕ್ಕ ರಸ್ತೆಯನ್ನು ನಾವು ಅಳತೆ ಮಾಡಿ ನೋಡುವುದಾದರೆ ಸುಮಾರು ಚದುರ ಮೈಲಿ ಒಂದಕ್ಕೆ ನಾವು 0.50 ಅಷ್ಟು ಉದ್ದದ ರಸ್ತೆಯನ್ನು ಮಾಡಿದ್ದೇವೆಂದು ಹೇಳಬಹುದು. ಇದು 1957 ನೇ ಸಾಲಿನಲ್ಲಿ 0. 36 ಮೈಲಿಗಳಷ್ಟು ಮಾತ್ರ ಇತ್ತು. ಕೇವಲ ಕಳೆದ ಹತ್ತು ವರ್ಷಗಳಿಂದೀಚೆಗೆ ನಾವು 0.14 ಮೈಲಿಯಷ್ಟು ಹೆಚ್ಚು ರಸ್ತೆಯನ್ನು ಮಾಡಿದ್ದೇವೆ. ಅಂದರೆ ಅಷ್ಟು ರಸ್ತೆಯನ್ನು ಹೆಚ್ಚಿನ ಪ್ರಮಾಣದಲ್ಲಿ ಮಾಡುವುದಕ್ಕೆ ನಾವು ಕೈಹಾಕಿದ್ದೇವೆ. ನೂರು ಅಡಿ ಲೀನಿಯರ್ ವಾಟರ್‌ವೇಯನ್ನು ಒಂದು ಅಳತೆಗೋಲನ್ನಾಗಿಟ್ಟುಕೊಂಡರೆ ನಮ್ಮ ರಾಜ್ಯದಲ್ಲಿ 1957 ರಲ್ಲಿ 232 ಸೇತುವೆಗಳು ಮಾತ್ರ ಇದ್ದವು. ಅವು ತಾರೀಕು 1-4-168ಕ್ಕೆ 474 ಸೇತುವೆಗಳಾಗಿವೆ. ಇಷ್ಟು ಸೇತುವೆಗಳನ್ನು ಹೊಸದಾಗಿ ಕಟ್ಟಿದೆ. ಅಂದರೆ ಸುಮಾರು ಮೊದಲು ಇದ್ದ ಸೇತುವೆಗಳ ಎರಡುಪಟ್ಟು ಜಾಸ್ತಿ ಸೇತುವೆಗಳನ್ನು ನಾವು ಕಟ್ಟಿಸಿದ್ದೇವೆಂದಹಾಗಾಯಿತು. ಇಷ್ಟು ಕಾರ್ಯವನ್ನು ನಾವು ಕಳೆದ 10 ವರ್ಷಗಳಲ್ಲಿ ಸಾಧಿಸಿದ್ದೇವೆ. ಹಿಂದೆ ಹಲವಾರು ವರ್ಷಗಳಿಂದ ಏನು ಕಾರ್ಯವನ್ನು ಸಾಧಿಸಲಾಗಿತ್ತೋ ಅದರ ಎರಡರಷ್ಟನ್ನು ನಾವು ಕೇವಲ 10 ವರ್ಷಗಳಲ್ಲಿ ಮಾತ್ರ ಸಾಧನೆ ಮಾಡಿದ್ದೇವೆ ಅನ್ನುವುದನ್ನು ಈ ಅಂಕಿ ಅಂಶಗಳು ಎತ್ತಿ ತೋರಿಸುತ್ತವೆ. ಇಡೀ ಇಂಡಿಯಾ ದೇಶದಲ್ಲಿ ಯಾವ ರಾಜ್ಯದಲ್ಲೂ ಕೂಡ ಈ ರಸ್ತೆಗಳನ್ನು ಚದರ ಮೈಲಿ ಒಂದಕ್ಕೆ 1.40 ಮೈಲಿಗಿಂತ ಜಾಸ್ತಿಮಾಡಿಲ್ಲ. ಆದರೆ ನಮ್ಮ ರಾಜ್ಯದಲ್ಲಿ ನಾವು 1.50 ರಷ್ಟು ಮುಂದೆ ಹೋಗಿದ್ದೇವೆ ಎಂಬುದನ್ನು ಈ ಅಂಕಿ ಅಂಶಗಳು ಎತ್ತಿ ತೋರಿಸುತ್ತವೆ. ಆದರೆ ನಾನು ಈ ಮಾತನ್ನು ಹೇಳುತ್ತಾ ನಾವು ಇಲ್ಲಿಯವರೆಗೆ ಸಾಧನೆ ಮಾಡಿರತಕ್ಕ ಎಲ್ಲಾ ರಸ್ತೆಗಳೂ ಬಹಳ ತೃಪ್ತಿಕರವಾಗಿರುತ್ತವೆ, ಆರೀತಿಯಾದ ಕೆಲಸವನ್ನು ಮಾಡಿದ್ದೇವೆಂದು ಹೇಳತಕ್ಕ ಸಾಹಸಕ್ಕೆ ಕೈಹಾಕುವುದಿಲ್ಲ, ಅಂಥ ಮಾತನ್ನು ಹೇಳುವುದಕ್ಕೂ ಹೋಗುವುದಿಲ್ಲ. ಇನ್ನೂ ಅನೇಕ ರಸ್ತೆಗಳನ್ನು ನಾವು ಉತ್ತಮಪಡಿಸಬೇಕಾಗಿದೆ. ಆ ಹೊಣೆ ಸರ್ಕಾರದವರ ಮೇಲೆ ಇದ್ದೇ ಇದೆ. ಅದನ್ನು ಪೂರ್ಣಗೊಳಿಸಬೇಕು ಎಂಬ ಆಸೆ ಆಕಾಂಕ್ಷೆಗಳು ಸರ್ಕಾರದವರಿಗೂ ಇವೆ. ಆದರೆ ನಮಗೆ ಹಣದ ಮಿತಿ—ಇಕ್ಕಟ್ಟು ಇರುವುದರಿಂದ ಇದರ ಸಾಧನೆಯನ್ನು ತಾವೆಲ್ಲರೂ ನಿರೀಕ್ಷಿಸಿದ್ದ ಮಟ್ಟದಲ್ಲಿ ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ಆದರೆ ಮಾಡಬೇಕೆಂಬ ಆ ಮನೋಭಾವನೆ ಇದೆ. ಮುಂದಿನ ವರ್ಷದ ಬಡ್ಜೆಟ್ಟಿನಲ್ಲಾದರೂ ಅದಕ್ಕೆ ಹೆಚ್ಚಿನ ಹಣವನ್ನು ಒದಗಿಸಿ ಆ ಕಾರ್ಯವನ್ನು ಪೂರ್ಣಗೊಳಿಸಬೇಕೆಂಬ ಆಸೆ ಇದೆ. ಅದಕ್ಕೆ ಸೂಕ್ತ ಪ್ರಯತ್ನಗಳನ್ನು ಈಗಾಗಲೇ ನಡೆಸಿದ್ದೇವೆ. ನಾನು ಈಗಾಗಲೇ ಮೇಲೆ ಹೇಳಿದ 38,117 ಮೈಲಿ ಉದ್ದದ ರಸ್ತೆಯಲ್ಲಿ ನಮ್ಮ ಪಿ.ಡಬ್ಲ್ಯು.ಡಿ. ಖಾತೆಗೆ ನೇರವಾಗಿ ಸೇರಿರತಕ್ಕದ್ದು 27,624 ಮೈಲಿ. ತಾಲ್ಲೂಕ್ ಡೆವಲಪ್‌ಮೆಂಟ್ ಬೋರ್ಡಿಗೆ ಸೇರಿರತಕ್ಕ ರಸ್ತೆಯ ಉದ್ದ 8900 ಮೈಲಿ. 1,590 ಮೈಲಿಗಳಷ್ಟು ಉದ್ದದ ರಸ್ತೆ ಫಾರೆಸ್ಟ್ ಇಲಾಖೆಗೆ ಸೇರಿದ್ದು. 1961ನೇ ಸಾಲಿನಲ್ಲಿ ಇಡೀ ಇಂಡಿಯಾ ದೇಶದಲ್ಲಿರತಕ್ಕ ಎಲ್ಲಾ ರಾಜ್ಯಗಳ ಇಂಜನಿಯರುಗಳೂ ಬೊಂಬಾಯಿನಲ್ಲಿ ಸಭೆ ಸೇರಿ ಇನ್ನು 20 ವರ್ಷಗಳೊಳಗಾಗಿ ಒಂದು ಯೋಜನೆಯನ್ನು ಸಿದ್ಧಗೊಳಿಸಿಕೊಂಡು ಅದರ ಪ್ರಕಾರ 1961—1981ರ ವೇಳೆಗೆ ಎಷ್ಟು ಪ್ರಮಾಣದ ರಸ್ತೆಯನ್ನು ಮಾಡಬೇಕು ಎಂಬುದಕ್ಕೆ ಒಂದು ಯೋಜನೆಯನ್ನು ಹಾಕಿಕೊಂಡು ಅದರ ಪ್ರಕಾರ ಕೆಲಸಕಾರ್ಯಗಳನ್ನು ಈಗಾಗಲೇ ನಡೆಸಿಕೊಂಡು ಬರುತ್ತಿದ್ದೇವೆ. 1981ನೇ ಸಾಲಿಗೆ ನಾವು ಸುಮಾರು 42,565 ಮೈಲಿಗಳಷ್ಟು ಉದ್ದದ ರಸ್ತೆಯನ್ನು ಹೊಸದಾಗಿ ನಿರ್ಮಾಣಮಾಡಬೇಕಾಗಿದೆ. ಆ ರಸ್ತೇಲಿ 4—5 ದರ್ಜೆಯ ರಸ್ತೆಗಳು ಸೇರಿರುತ್ತವೆ, ಅವು ಬೇರೆ ಬೇರೆ ಹಂತದ ರಸ್ತೆಗಳಾಗಿವೆ. ಅದರಲ್ಲಿ ಮೊದಲನೆಯದು ನ್ಯಾಷನಲ್

ಹೈವೆ—ನಮ್ಮ ರಾಜ್ಯದಲ್ಲಿ ಇದುವರೆಗೂ ಇದ್ದದ್ದು 818 ಮೈಲಿಗಳಷ್ಟು ಉದ್ದದ ರಸ್ತೆಮಾತ್ರ ಇತ್ತು. ಇದನ್ನು 1981ನೇ ಸಾಲಿನ ಹೊತ್ತಿಗೆ 2481 ಮೈಲಿಗಳಿಗೆ ಏರಿಸಬೇಕಾಗಿದೆ. ಅಂದರೆ ಎಷ್ಟು ನ್ಯಾಷನಲ್ ಹೈವೇ ನಮಲ್ಲಿನ್ನೂ ಆಗಬೇಕಾದ್ದಿದೆ ಹಾಗೆ ಉಳಿದಿರತಕ್ಕದ್ದನ್ನು ನಾವು ಮಾಡಿ ಮುಗಿಸಬೇಕು. ಅದಾದ ಮೇಲೆ ಸ್ಟೇಟ್ ಹೈವೇಗಳಿವೆ ಇಲ್ಲಿಯುವರೆಗೂ ನಮ್ಮ ರಾಜ್ಯದಲ್ಲಿದ್ದ ಸ್ಟೇಟ್‌ಹೈವೇ ರೋಡ್ 4,158 ಮೈಲಿಗಳು ಮಾತ್ರ. ಅದನ್ನು ನಾವು 1981ರ ವೇಳೆಗೆ 4,412 ಮೈಲಿಗಳಿಗೆ ಹೆಚ್ಚಿಸಬೇಕಾಗಿದೆ. ಇನ್ನು ಮೇಜರ್ ಡಿಸ್ಟ್ರಿಕ್ಟ್ ರೋಡುಗಳಿವೆ. ನಮ್ಮ ರಾಜ್ಯದಲ್ಲಿ, ಮೇಜರ್ ಡಿಸ್ಟ್ರಿಕ್ಟ್ ರಸ್ತೆಗಳು ಹಾಲಿ 8,687 ಮೈಲಿಗಳ ಉದ್ದದಷ್ಟು ರಸ್ತೆ ಇತ್ತು. ಅದನ್ನು ಈ 11 ವರ್ಷಗಳ ಅವಧಿಯಲ್ಲಿ 9,600 ಮೈಲಿಗಳಿಗೆ ಹೆಚ್ಚಿಸಬೇಕಾಗಿದೆ. ಇನ್ನುಳಿದ ರಸ್ತೆಗಳೆಂದರೆ ಅವು ಇತರ ಡಿಸ್ಟ್ರಿಕ್ಟ್ ರೋಡ್ಸ್ ಅದು ರಾಜ್ಯದಲ್ಲಿ ಇಲ್ಲಿಯವರೆಗೂ ಇದ್ದದ್ದು 5,718 ಮೈಲಿ. ಅದನ್ನು ಮುಂದಕ್ಕೆ 12,125 ಮೈಲಿಗಳಿಗೆ ಹೆಚ್ಚಿಸಬೇಕಾಗಿದೆ. ಇದಾದಮೇಲೆ ಇನ್ನು ವಿಲೇಜ್ ರೋಡ್ಸ್ ಮತ್ತು ವಿಲೇಜ್ ಕಮ್ಯೂನಿಕೇಷನ್ ರೋಡ್ಸ್‌ಗಳು 17,736 ಮೈಲಿ ಇದ್ದ ರಸ್ತೆಯನ್ನು ಇನ್ನೂ ಹೆಚ್ಚು ಮಾಡಬೇಕಾಗಿದೆ. ಅದನ್ನು 13,960 ಮೈಲಿಗಳಷ್ಟು ಹೆಚ್ಚಿನ ರಸ್ತೆಯನ್ನು ಮಾಡಬೇಕಾದ್ದಿದೆ. ಇಷ್ಟೆಲ್ಲಾ ರಸ್ತೆಯನ್ನೂ ಸರ್ಕಾರ ಇನ್ನು ಬರಲಿರುವ 11 ವರ್ಷದಲ್ಲಿ ಮಾಡಬೇಕಾಗಿದೆ. ಆದರೆ ಇದೇ ಸಂಧರ್ಭದಲ್ಲಿ ಮಾನ್ಯ ಸದಸ್ಯರು ತಮ್ಮಗಮನಕ್ಕೆ ತಂದುಕೊಳ್ಳಬೇಕಾದ ಒಂದು ವಿಷಯ ಏನೆಂದರೆ ಅದು ಬಹಳ ಅಗತ್ಯವಾದ ವಿಚಾರವು ಹೌದು, ಸರ್ಕಾರದವರು ಇನ್ನು 11 ವರ್ಷಗಳಲ್ಲಿ ಇಷ್ಟು ರಸ್ತೆ ಕಾರ್ಯವನ್ನು ಕೈಗೊಂಡು ಮುಗಿಸಬೇಕಾಗಿದ್ದರೆ ಅದಕ್ಕೆ ಕನಿಷ್ಟಪಕ್ಷ 280 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಅಷ್ಟು ಮೊತ್ತವನ್ನು ನಾವು ಪಡೆಯುವುದಕ್ಕೆ ಸೂಕ್ತ ವ್ಯವಸ್ಥೆಗಳನ್ನು ಮಾಡಿಕೊಳ್ಳದಿದ್ದರೆ ಮುಂದೆ ಬಹಳ ಕಷ್ಟವಾಗುತ್ತದೆ. ಆದರೆ ನಾವು ಮಾಡತಕ್ಕ ಕಾರ್ಯದಲ್ಲಿ ಎಂದೂ ಹಿಂದೆಗೆಯುವುದಿಲ್ಲ. ಹಾಗೇನಾದರೂ ನಾವು ಈ ಬಾಬಿನಲ್ಲಿ ಹಿಂದೆ ಬಿದ್ದಿದ್ದೇವೆ ಅನ್ನುವುದಾದರೆ ಅದು ನಮ್ಮ ತಪ್ಪಲ್ಲ—ನಮ್ಮಲ್ಲಿ ಅಷ್ಟಕ್ಕೆ ಸಾಕಾಗುವಷ್ಟು ಹಣವಿಲ್ಲದೆ ಆ ಕಾರ್ಯವನ್ನು ನಡೆಸುವುದಕ್ಕಾಗಲಿಲ್ಲ ಅದನ್ನು ಹಣದ ಕೊರತೆಯಿಂದ ಹಿಂದಕ್ಕಿಡಲಾಗಿದೆ ಎಂಬುದನ್ನು ತಾವು ಗಮನಿಸಬೇಕು. ಆದರೆ ಇತ್ತೀಚೆಗೆ ನಮ್ಮ ಅನೇಕ ಮಾನ್ಯ ಸದಸ್ಯರು ಮತ್ತು ಖಾಸಗೀ ಜನರು ಹಾಗೂ ತಾಲ್ಲೂಕ್ ಬೋರ್ಡುಗಳ ಅಧ್ಯಕ್ಷರು ಹಾಗೂ ಅದರ ಸದಸ್ಯರು ನನ್ನ ಪ್ರವಾಸ ಕಾಲದಲ್ಲಿ ಮತ್ತು ಇಲ್ಲಿ ಬೆಂಗಳೂರಿಗೆ ನೇರವಾಗಿ ಪತ್ರ ಮುಖೇನ ರಸ್ತೆಗಳ ಬಗ್ಗೆ ಬರೆದು ತಿಳಿಸುತ್ತಿದ್ದಾರೆ. ಈಗಾಗಲೇ ತಾಲ್ಲೂಕು ಬೋರ್ಡ್ ಅಧೀನದಲ್ಲಿಯೋ ಅಥವಾ ವಿಲೇಜ್ ಪಂಚಾಯತಿ ಅಧೀನದಲ್ಲಿಯೋ ಉಳಿದಿರತಕ್ಕ ರಸ್ತೆಗಳನ್ನು ಪಿ. ಡಬ್ಲ್ಯು. ಡಿ. ಖಾತೆಗೆ ವಹಿಸಬೇಕೆಂದೂ ಮತ್ತು ಆ ರಸ್ತೆಗಳನ್ನು ಅವರಿಂದ ಮೇನ್‌ಟೇನ್ ಮಾಡಿಸಬೇಕೆಂದೂ ಎಲ್ಲಾ ಕಡೆಗಳಿಂದಲೂ ಬಹಳ ಹೆಚ್ಚಿನ ಪ್ರಮಾಣದಲ್ಲಿ ಬಹಳ ಒತ್ತಾಯಪೂರ್ವಕವಾಗಿ ಸರ್ಕಾರಕ್ಕೆ ಮನವಿಗಳು ಬರುತ್ತಾ ಇದೆ. ಇದನ್ನು ಸರ್ಕಾರದವರು ತೆಗೆದುಕೊಳ್ಳಬಾರದೆಂದು ನನ್ನ ಉದ್ದೇಶವಲ್ಲ ಸರ್ಕಾರದ ಉದ್ದೇಶವೂ ಇಲ್ಲ. ಇವನ್ನು ಆದಷ್ಟು ಜಾಗ್ರತೆಯಾಗಿ ತೆಗೆದುಕೊಳ್ಳಬೇಕು ಎಂದು ಸರ್ಕಾರದ ಅಭಿಲಾಷೆ. ಆದರೆ ಈಗಾಗಲೇ ಸುಮಾರು 13 ಸಾವಿರ ಮೈಲಿಗಳಷ್ಟು ಹಿಂದೆ ತಾಲ್ಲೂಕು ಬೋರ್ಡ್‌ನಲ್ಲಿದ್ದಂಥ ರಸ್ತೆಗಳನ್ನು ಸರ್ಕಾರ ವಹಿಸಿಕೊಂಡಿದ್ದಾರೆ. ಈಗ ತೆಗೆದುಕೊಂಡಿರುವ 13 ಸಹಸ್ರ ಮೈಲಿಗಳಷ್ಟು ರಸ್ತೆಗಳನ್ನು ಸರಿಯಾದ ರೀತಿಯಲ್ಲಿ ದುರಸ್ತುಮಾಡಿ ವಾಹನ ಸಂಚಾರಕ್ಕೆ ಅನುಕೂಲವಾಗುವ ರೀತಿಯಲ್ಲಿ ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ಆದರೂ ಕೆಲವು ಕಡೆ ಇನ್ನೂ ಹೆಚ್ಚು ಹೆಚ್ಚು ಪ್ರಮಾಣದಲ್ಲಿ ರಸ್ತೆಗಳನ್ನು ಸರ್ಕಾರ ವಹಿಸಿಕೊಳ್ಳಲಿ ಎನ್ನುವ ಮಾತು ಕೂಡ ಬರುತ್ತಾ ಇದೆ. ಅದಕ್ಕೆ ಒಂದು ಪ್ರೋಗ್ರಾಂ ಹಾಕಿಕೊಂಡು ಅವುಗಳ ದುರಸ್ತು ಕಾರ್ಯಗಳನ್ನು ಮಾಡಿ ಅನಂತರ ಹೊಸದಾಗಿ ರಸ್ತೆಗಳನ್ನು ಸರ್ಕಾರಕ್ಕೆ ತೆಗೆದುಕೊಳ್ಳುವ ಯೋಚನೆಯನ್ನು ಮಾಡಬೇಕಾಗುತ್ತದೆ. ಈಗ ಆ ರಸ್ತೆಗಳನ್ನು ಸರ್ಕಾರಕ್ಕೆ ವಹಿಸಿಕೊಳ್ಳುವುದು ಅಷ್ಟು ಸೂಕ್ತವಲ್ಲವೆಂದು ನಾನು ಅಂದುಕೊಂಡಿದ್ದೇನೆ. ಆದರೆ ಅದನ್ನು ಈಗ ಸಂಪೂರ್ಣವಾಗಿ ಕೈಬಿಡುವುದಕ್ಕೆ ಆಗುವುದಿಲ್ಲ, ಎಲ್ಲಿ ಅಗತ್ಯವಿದೆಯೋ ಅಲ್ಲಿ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡೋಣವೇ ಎನ್ನುವುದನ್ನು ಯೋಚನೆ ಮಾಡುತ್ತಿದ್ದೇವೆ. ಇತ್ತೀಚೆಗೆ ಅನೇಕ ಗ್ರಾಮಗಳಲ್ಲಿ ರಸ್ತೆಗಳು ಬಹಳ ಹೆಚ್ಚಿನ ಪ್ರಮಾಣದಲ್ಲಿ ಆಗಿದೆ ಎನ್ನುವ ಮಾತನ್ನು ಒಪ್ಪಿಕೊಳ್ಳುತ್ತೀರೆಂದು ನಾನು ತಿಳಿದುಕೊಂಡಿದ್ದೇನೆ. ಮುಂದೆ ಕ್ಷಾಮಪೀಡಿತ ನಿವಾರಣೆಯ ಕಾರ್ಯವನ್ನು ಕೈಗೊಂಡಾಗ ಸುಮಾರು 7–8 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗುತ್ತದೆ. ಕೆರೆಕಟ್ಟೆಗಳ ದುರಸ್ತು, ಜೊತೆಗೆ ವಿಲೇಜ್ ರಸ್ತೆಗಳನ್ನು ನಿರ್ಮಾಣ ಮಾಡುವುದಕ್ಕೆ ಕೈಹಾಕಿದ್ದೇವೆ. ನಾನು ಪ್ರವಾಸ ಮಾಡಿರುವ ಕಡೆ ನೋಡಿದ್ದೇನೆ. ಬಹಳ ಹೆಚ್ಚಿನ ಪ್ರಮಾಣದಲ್ಲಿ ರಸ್ತೆಗಳ ಕೆಲಸಗಳು ಆಗಿವೆ. ಈಗ ವಿಲೇಜ್ ರಸ್ತೆಗಳಾಗಿ ಉಳಿದುಕೊಂಡಿರತಕ್ಕ ಕೆಲವು ರಸ್ತೆಗಳನ್ನು ದುರಸ್ತು ಮಾಡುವ ಕಾರ್ಯ ಪೂರ್ಣವಾಗಿ ಕೈಬಿಡುವುದು ಸರಿಯಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಈಗ ಸರ್ಕಾರದ ವತಿಯಿಂದ ಒಂದು ತೀರ್ಮಾನಕ್ಕೆ ಬಂದಿದ್ದೇವೆ.

(ಶ್ರೀ ಕೆ. ಲಕ್ಕಪ್ಪ)

ಸರ್ಕಾರಕ್ಕೆ ಈ ರಸ್ತೆಗಳನ್ನು ವಹಿಸಿಕೊಳ್ಳುವುದು ಸಾಧ್ಯವಾಗಿಲ್ಲದಿದ್ದರೂ ಅವನ್ನು ನಡು ನೀರಿನಲ್ಲಿ ಕೈಬಿಡುವುದು ಸರಿಯಲ್ಲವೆಂಬ ದೃಷ್ಟಿಯಿಂದ ಒಂದು ನಿರ್ಧಾರಕ್ಕೆ ಬಂದಿದ್ದೇವೆ. ಆದ್ದರಿಂದ ಹಳ್ಳಿಗಳಿಂದ ಬಂದ ಹಣ ಹಳ್ಳಿಗಳ ಅಭಿವೃದ್ಧಿಗೇ ಉಪಯೋಗವಾಗುವ ಹಾಗೆ ಒಂದು ಧೋರಣೆ ಸರ್ಕಾರ ಇಟ್ಟುಕೊಂಡು ಸರ್ಕಾರದ ಬೊಕ್ಕಸಕ್ಕೆ ಗ್ರಾಮಾಂತರ ಪ್ರದೇಶಗಳಿಂದ ಕಂದಾಯ ರೂಪದಲ್ಲಿ ಎಷ್ಟು ಬರುತ್ತದೋ ಅಷ್ಟೂ ಹಣವನ್ನು ಡೆವಲಪ್‌ಮೆಂಟ್ ಬೋರ್ಡ್‌ಗಳಿಗೆ ಮತ್ತು ಪಂಚಾಯತಿಗಳಿಗೆ ಹಿಂತಿರುಗಿಸಿ ಕೊಟ್ಟು ತಾಲ್ಲೂಕು ಬೋರ್ಡ್‌ಗಳ ಮೂಲಕ ಮತ್ತು ಪಂಚಾಯತಿಗಳ ಮೂಲಕ ಈ ಕೆಲಸಗಳನ್ನು ಮಾಡೋಣವೆಂಬ ನಿರ್ಧಾರಕ್ಕೆ ಬಂದಿದ್ದೇವೆ. ಈ ನಿರ್ಧಾರವನ್ನು ಸಂಬಂಧಪಟ್ಟ ತಾಲ್ಲೂಕು ಬೋರ್ಡ್‌ಗಳು ಮತ್ತು ಪಂಚಾಯತಿಗಳಿಗೆ ತಿಳಿಸಿ ಅವರಿಗೆ ಈ ಹಣವನ್ನು ಇಷ್ಟರಲ್ಲಿಯೇ ಕೊಡುತ್ತೇವೆ. ಹೀಗೆ ಮಾಡುವುದರಿಂದ ಹಳ್ಳಿಗಾಡಿನ ರಸ್ತೆಗಳನ್ನು ದುರಸ್ತು ಮಾಡಿಕೊಂಡು ಇಟ್ಟುಕೊಳ್ಳುವುದಕ್ಕೆ ಅವಕಾಶವಾಗುತ್ತದೆಂದು ನಾನು ಭಾವಿಸಿದ್ದೇನೆ. ಇದೇ ಹಳ್ಳಿಗಾಡಿನ ರಸ್ತೆಗಳನ್ನು ಪಿ.ಡಬ್ಲ್ಯು.ಡಿ. ಅವರು ತೆಗೆದುಕೊಂಡು ಮಾಡುವುದಾದರೆ, ಕೆಲವು ಕಡೆ ಎಸ್ಟಿಮೇಟುಗಳನ್ನು ಮಾಡಿ ಕಳುಹಿಸಿ, ನಮ್ಮ ಪಿ.ಡಬ್ಲ್ಯು.ಡಿ. ಆಫೀಸರ್‌ಗೆ ತಿಳಿಸಿದರೆ ಕೇವಲ 4–6 ಮೈಲುಗಳ ರಸ್ತೆಗಳನ್ನು ಮಾಡಬೇಕಾದರೆ ಸುಮಾರು 50 ಸಾವಿರ ರೂಪಾಯಿಗಳ ವರೆಗೆ ಎಸ್ಟಿಮೇಟ್ಸ್ ಹಾಕಿ ಕಳುಹಿಸುತ್ತಾರೆ. ಈ ಪ್ರಮಾಣದಲ್ಲಿ ರಸ್ತೆಗಳನ್ನು ಮಾಡುವುದಕ್ಕಾಗುವುದಿಲ್ಲ. ಈಗ ನಾಲ್ಕಾರು ದರ್ಜೆಯ ರಸ್ತೆಗಳಿವೆ. ನ್ಯಾಷನಲ್ ಹೈವೇಸ್, ಸ್ಟೇಟ್ ಹೈವೇಸ್, ಮೇಜರ್ ಡಿಸ್ಟ್ರಿಕ್ಟ್ ರೋಡ್ಸ್, ಡಿಸ್ಟ್ರಿಕ್ಟ್ ರೋಡ್ಸ್, ವಿಲೇಜ್ ಕಮ್ಯೂನಿಕೇಷನ್ ರೋಡ್ಸ್ ಎಂದು ಮಾಡಿಕೊಂಡಿದ್ದಾರೆ. ಗ್ರಾಮಾಂತರ ರೈತರ ಗಾಡಿಗಳ ಸಂಚಾರಕ್ಕೆ ಅವುಗಳಿಂದ ತೊಂದರೆಯಾಗಬಾರದೆಂದು, ಅವು ಚೆನ್ನಾಗಿ ಮಟ್ಟವಾಗಿರಬೇಕೆಂದು ಒಮ್ಮೆ ಒಮ್ಮೆ ಅನೇಕರು ಹೇಳುತ್ತಿದ್ದಾರೆ. ಅವರು ಬೆಳೆದಂಥ ಪದಾರ್ಥಗಳನ್ನು ಸಾಗಿಸುವುದಕ್ಕೆ ಲಾರಿಗಳು ಬರುತ್ತವೆ. ಅವುಗಳ ಸಂಚಾರಕ್ಕೂ ಸಹ ತೊಂದರೆಯಾಗಬಾರದು. ಇವನ್ನು ಗ್ರ್ಯಾವಲ್ ರೋಡ್‌ಗಳಾಗಿ ಪರಿವರ್ತಿಸಬೇಕಾಗುತ್ತದೆಂದು ಹೇಳಿದ್ದಾರೆ. ಸದ್ಯಕ್ಕೆ ಆ ರೀತಿಯಾಗಿ ಮಾಡುವುದಕ್ಕಾಗುವುದಿಲ್ಲ. ಈಗ ಕೆಲವು ರಸ್ತೆಗಳನ್ನು ಪಿ. ಡಬ್ಲ್ಯು. ಡಿ.ಯವರಿಗೆ ವಹಿಸದೆ ತಾಲ್ಲೂಕು ಬೋರ್ಡ್‌ಗಳಿಗೆ ಕೊಡುವ ಪಕ್ಷದಲ್ಲಿ ಪಿ.ಡಬ್ಲ್ಯು.ಡಿ.ಯವರು ಅವನ್ನು ಎಷ್ಟು ಉತ್ತಮ ರೀತಿಯಲ್ಲಿ ಇಟ್ಟುಕೊಳ್ಳಬಹುದೋ ಅಷ್ಟು ಉತ್ತಮ ರೀತಿಯಲ್ಲಿ ಅವರು ಇಟ್ಟುಕೊಳ್ಳುವುದಕ್ಕೆ ಅವಕಾಶವಿದೆಯೆಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ (ಚಿಕ್ಕಪೇಟೆ).—ಈ ಸಭೆಯಲ್ಲಿ ಮಾನ್ಯ ಶ್ರೀ ಶ್ರೀಕಂಠಯ್ಯನವರು ಒಂದು ಹಕ್ಕುಬಾಧ್ಯತೆ ನಿರ್ಣಯವನ್ನು ಲೋಕೋಪಯೋಗಿ ಸಚಿವರ ಮೇಲೆ ತಂದಿದ್ದಾರೆ. ಅದರ ಬಗ್ಗೆ ರೂಲಿಂಗ್ ಕೊಟ್ಟಿಲ್ಲ.

ಶ್ರೀ ಕೆ. ಲಕ್ಕಪ್ಪ.—ಮಾನ್ಯ ಸದಸ್ಯರು ಬೇರೆ ವಿಚಾರ ಮಾತನಾಡುತ್ತಿದ್ದಾರೆ. ಅದು ಏನೆಂಬುದು ಗೊತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಆ ಒಂದು ಹಕ್ಕುಬಾಧ್ಯತೆ ಇನ್ನೂ ತೀರ್ಮಾನವಾಗದೆ ಮಾನ್ಯ ಮಂತ್ರಿಗಳು ಅವರ ಶಾಖೆಯ ಬಗ್ಗೆ ಉತ್ತರ ಕೊಡುವುದು ಸರಿಯೇ ?

ಅಧ್ಯಕ್ಷರು.—ಮಾನ್ಯ ಸದಸ್ಯರು ಹೇಳಿದ್ದು ತಿಳಿಯಿತು.

Sri H. N. NANJE GOWDA.—It is a serious matter.

ಶ್ರೀ ವಾಟಾಳ್ ನಾಗರಾಜ್.—ತಾವು ಇನ್ನೂ ಅದರ ಬಗ್ಗೆ ರೂಲಿಂಗ್ ಕೊಟ್ಟಿಲ್ಲ. ಅವರು ಪಕ್ಷಪಾತ ಮಾಡಿದ್ದಾರೆಂದು ಆರೋಪಣೆ ಇದೆ.

ಅಧ್ಯಕ್ಷರು.—ಯಾವ ರೂಲ್ ಬ್ರೀಚ್ ಆಗಿದೆಯೆಂಬುದನ್ನು ಹೇಳಿ. ತಾವು ನನ್ನ ಚೇಂಬರ್‌ನಲ್ಲಿ ಬಂದು ನೋಡಿ. ಅದನ್ನು ವಿಚಾರ ಮಾಡೋಣ.

Sri H. N. NANJE GOWDA.—When the Privilege motion is not decided or withdrawn, it amounts to that the Minister is not above board and it also amounts to "no-confidence" against that particular Minister. When such is the case, how can we depend on the statement of the Minister? When his very existence is in doubt and when he is not above board, what importance can we attach to his statement?

ಅಧ್ಯಕ್ಷರು.—ಅದರ ಮೇಲೆ ರೂಲಿಂಗ್ ಕೊಡಬಾರದು ಎಂದು ಸೂಚನೆ ಬಂತು. ಅದಕ್ಕೋಸ್ಕರ ಕೊಡಲಿಲ್ಲ. ನಾನು ರೂಲಿಂಗ್ ಕೊಡಲು ತಯಾರಿದ್ದೇನೆ.

ಶ್ರೀ ಎಚ್. ಎನ್. ನಂಜೇಗೌಡ.—ಮಾನ್ಯಮಂತ್ರಿಗಳು ಮಾನ್ಯ ಸದಸ್ಯರ ಅಪಾದನೆಯಿಂದ ಮೊದಲು ಮುಕ್ತರಾಗಲಿ. ಇಲ್ಲದಿದ್ದರೆ ಮಾನ್ಯ ಶ್ರೀ ವಾಟಾಳ್ ನಾಗರಾಜ್ ಅವರಾಗಲೀ ಅಥವಾ ಮಾನ್ಯ ಸದಸ್ಯರು ಶ್ರೀ ಶ್ರೀಕಂಠಯ್ಯನವರಾಗಲೀ ಇದನ್ನು ವಿತ್‌ಡ್ರಾ ಮಾಡಬೇಕು.

ಅಧ್ಯಕ್ಷರು.—ನನ್ನ ಸೆಕ್ರೆಟೇರಿಯಟ್ಟಿನಿಂದ ಬಂದಂಥ ವರದಿ ಪ್ರಕಾರ ಮಾನ್ಯ ಶ್ರೀ ಶ್ರೀಕಂಠಯ್ಯನವರ ಮೋಷನ್ನಿಗೆ ರೂಲಿಂಗ್ ಕೊಡಬೇಕಾಗಿಲ್ಲವೆಂದು ತಿಳಿಸಿದ್ದಾರೆ. I shall verify and give my Ruling, if necessary.

9-30 A.M.

Sri S. SIVAPPA (Sravanabelgola).—Sir, Hon'ble Member Sri L. Srikantiah had tabled a privilege motion and the Hon'ble Chair has not given ruling on that. Now, Hon'ble Member Sri Vatal Nagaraj has raised a relevant point that unless a ruling is given on the privilege motion of Sri L. Srikantiah, the Hon'ble Minister for Public Works could not reply or make any statement, as the very bona fide of the hon. Minister is in question, and he is not obsolved of the charges made against him. Hon. Member Sri Nagaraj wants to know whether that privilege motion has been disallowed and if not, why a ruling has not been given so far and all that.

ಅಧ್ಯಕ್ಷರು.—ಶ್ರೀಕಂಠಯ್ಯನವರು ಒಂದು ಪ್ರಿವಿಲೇಜ್ ಮೋಶನ್ ಮೂವ್ ಮಾಡಿದ್ದರು. ಅದಕ್ಕೆ ಒಪ್ಪಿಗೆ ಕೊಡಲಿಲ್ಲ. ಅದನ್ನು ವಿಚಾರ ಮಾಡುವ ಕಾಲಕ್ಕೆ ನನಗೆ ಸೆಕ್ರೆಟೆರಿಯೇಟಿನಿಂದ ಬಂದ ವರದಿ ಪ್ರಕಾರ, ಅವರು ಅದರ ಮೇಲೆ ರೂಲಿಂಗ್ ಬೇಕಿಲ್ಲವೆಂದು ಹೇಳಿದ್ದರು. ಅದು ಸರಿಯೋ ತಪ್ಪೋ ಎಂಬುದು ನನಗೆ ಬಿಟ್ಟಿದ್ದು. ಅವರು ಆ ರೀತಿ ಹೇಳಿದ್ದರಿಂದ ನಾನು ರೂಲಿಂಗ್ ಕೊಟ್ಟಿಲ್ಲ. ಅವರು ರೂಲಿಂಗ್ ಕೊಡಿ, ಅಂದರೆ ನಾನು ಅತ್ಯವಶ್ಯಕವಾಗಿ ಕೊಡುತ್ತೇನೆ. ಅದಕ್ಕೆ ನೀವು ಏನೂ ಸಂಶಯ ಪಡಬೇಕಾಗಿಲ್ಲ.

Sri C. K. RAJAIAH SHETTY (Chicknaikanahalli).—Sir, it is a matter which happened during the last session.

Mr. SPEAKER.—I shall find out. If hon. Member Sri Srikantiah wants a ruling on that, I shall give it immediately.

Sri C. K. RAJAIAH SHETTY.—Sir, giving a ruling after such a long time, does not bear, out any facts.

ಅಧ್ಯಕ್ಷರು.—ಅವರು ರೂಲಿಂಗ್ ಬೇಡ ಎಂದು ಹೇಳಿದ್ದಾರೆ.

Sri G. DUGGAPPA.—The hon. Member Sri L. Srikantiah had made serious allegations against the particular Hon. Minister and he had also moved a privilege motion to that effect.

Mr. SPEAKER.—The Hon. Minister need not make any reference to the subject matter of that privilege motion in his reply. He may now proceed with his reply.

ಶ್ರೀ ಕೆ. ಎಚ್. ಶ್ರೀನಿವಾಸ (ಸಾಗರ).—ಈಗ ಇಲ್ಲಿ ಇರುವ ವಿಚಾರ, ಶ್ರೀಕಂಠಯ್ಯನವರ ಪ್ರಿವಿಲೆಜ್ ಮೋಷನ್ ಬಗ್ಗೆ ರೂಲಿಂಗ್ ಕೊಡತಕ್ಕದ್ದಲ್ಲ. ಆದರೆ ವಿರೋಧ ಪಕ್ಷದ ಸದಸ್ಯರು ಹೇಳತಕ್ಕದ್ದು, ನಾವು ಚಾರ್ಜಸ್ ಮಾಡಿದ್ದೇವೆ, ಪ್ರಿವಿಲೇಜ್ ನೋಷನ್ ಮೂವ್ ಮಾಡಿದ್ದೇವೆ, ಆದ್ದರಿಂದ ಮಂತ್ರಿಯವರಿಗೆ ಉತ್ತರ ಕೊಡುವುದಕ್ಕೆ ಅಧಿಕಾರವಿಲ್ಲವೆಂದು. ಒಬ್ಬರು ಚಾರ್ಜಸ್ ಮಾಡಿದ ಪಕ್ಷಕ್ಕೆ ಅದು ಎಸ್ಟ್ಯಾಬ್ಲಿಷ್ ಮಾಡಿದ ಹಾಗೆ ಆಗಲಿಲ್ಲ. A person is not

(ಶ್ರೀ ಕೆ. ಎಚ್. ಶ್ರೀನಿವಾಸ)

supposed to be guilty unless the charges are established against him. Unless the charges are established, he is presumed to be innocent. ಆದ್ದರಿಂದ ಮಂತ್ರಿಯವರಿಗೆ ಡಿಮ್ಯಾಂಡ್ ಬಗ್ಗೆ ಉತ್ತರ ಹೇಳತಕ್ಕ ಸ್ವಾತಂತ್ರ್ಯ ಇದೆ. ಸದಸ್ಯರು ಏನೇನು ಡಿಮ್ಯಾಂಡ್ ಮೇಲೆ ಹೇಳಿದ್ದಾರೆ ಅದಕ್ಕೆ ಉತ್ತರ ಕೊಡುವುದಕ್ಕೆ ಸ್ವಾತಂತ್ರ್ಯವಿದೆಯೇ ಇಲ್ಲವೇ ಎಂಬುದರ ಬಗ್ಗೆ ತಾವು ರೂಲಿಂಗ್ ಕೊಡಬೇಕು.

Sri G. DUGGAPPA.--Sir, the Hon. Minister may reply to any points that were raised during disscussion on the demands for grants but not refer any matter raised by privilege motion tabled by hon. Member Sri L. Srikantiah.

ಅಧ್ಯಕ್ಷರು.—ಒಬ್ಬ ಸದಸ್ಯರ ಅಥವಾ ಮಂತ್ರಿಗಳು ಮೇಲೆ ಪ್ರಿವಿಲೇಜ್ ಮೋಷನ್ ಸೂಚಿಸದ ಮಾತ್ರಕ್ಕೇ ಅವರಿಗೆ ಡಿಸ್‌ಕ್ವಾಲಿಫಿಕೇಷನ್ ಬರುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಅದು ಬ್ರೀಚ್ ಆಫ್ ಪ್ರಿವಿಲೇಜ್ ಆಗುತ್ತದೆಯೇ ಎಂದು ನೋಡಿ, ಅದಕ್ಕೆ ತಕ್ಕ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಎರಡನೆಯದು ಏನೆಂದರೆ, ಯಾವುದೇ ಮೆಂಬರ್, ಒಬ್ಬ ಮೆಂಬರ್ ಮೇಲೆ ಅಥವಾ ಒಬ್ಬ ಮಂತ್ರಿಯ ಮೇಲೆ ಪ್ರಿವಿಲೇಜ್ ಮೋಷನ್ ಸೂಚಿಸಿದರೆಂದರೆ, ಅಂಥ ಮಂತ್ರಿ ಅಥವಾ ಮೆಂಬರಿಗೆ ಇಲ್ಲಿ ಕೆಲಸ ಮಾಡುವುದಕ್ಕೆ ಡಿಸ್‌ಕ್ವಾಲಿಫಿಕೇಶನ್ ಆಗುವುದಲ್ಲವೆಂದು ನನ್ನ ರೂಲಿಂಗ್.

Sri K. H. PATIL (Hubli).—I raise to a point of order, Sir. With great respect I submit to the Hon. Chair in regard to the decision that has been given by the Hon. Chair just now. But at the same time, if I have correctly understood the ruling of the Hon. Chair, *i.e.*, that every hon. Member or Hon. Minister is entitled to have his say.........

Sri K. H. SRINIVAS.—Sir, there cannot be any point of order on the ruling given by the Hon. Chair,

ಅಧ್ಯಕ್ಷರು.—ರೂಲಿಂಗ್ ಮೇಲೆ ಪಾಯಿಂಟ್ ಆಫ್ ಆರ್ಡರ್ ಕೇಳಲಾಗುವುದಿಲ್ಲ. ಸದಸ್ಯರು ಕ್ಲಾರಿಫಿಕೇಶನ್ ಕೇಳಬಹುದು, ರೂಲಿಂಗ್ ತಪ್ಪು ಎಂದು ಹೇಳಬಾರದು.

Sri K. H. PATIL.—Sir, I have not said so. I want to know why this pre-judgment system is imposed in this House. Have I said that ? I only stated that with great respect I submit to the Chair that if I have correctly understood the ruling, it is said, that every Hon. Minister or every hon. Member is entitled to have his say in his capacity as a Member or a Minister. But here the question is, when a privilege motion has been moved against a particular Hon. Minister, I feel, that particular Hon. Minister, for the purpose of that privilege motion, comes in the category of accused. Whether I am right in saying this or not, but it is my opinion and feeling, that the Hon. Chair may consider whetheer he could be permitted to make any statement. Therefore, my submission is that he should not impose his right as Minister. A Committee of Privileges is provided for holding an enquiry and deciding whether a breach of privilege is committed. The Speaker is invested with certain powers cannot be curtailed by the statement that is to be made in the capacity as Minister by using the post of Ministership. I think the Speaker's ruling is governed by the statement I have made. If the hon. Minister is not guilty, why should he try to make a statement early. A time will come when he can defend

himself. If he does his statement in reply to the breach of privilege motion, it is rather a very peculiar position we are not here now to hear from him that statement; if he does, so many complications will arise. He will have an opportunity later at the appropriate time. We cannot all of a sudden come to the conclusion to punish him. There is ample scope to defend himself and make his statement. The valuable time of the House should not be taken in making a statement now.

Mr. SPEAKER.—There appears to be much misunderstanding. The Hon. Minister Sri Lakkappa is not replying to the breach of privilege motion. He is not saying anything in respect of that motion. Moreover that privilege motion is not before the House. I have not given my consent to it; it is at that stage. As I said earlier, I was told by the Secretary that Sri Srikantaiah was not interested in his breach of privilege motion and that he expected no ruling on it, though I have got my ruling ready.

When consent to the breach of privilege motion is not given and when that motion is not before the House there can be no question of anybody being an accused and anybody being a complainant. Even according to the fundamental proposition of the criminal law, an accused person is presumed to be innocent until it is proved that he is guilty. Therefore, if any breach of privilege motion is brought against any Minister or Member, it does not work as a disqualification on the concerned Minister or Member and does not preclude him from functioning as such. I wish to reiterate again that the breach of privilege motion is not before the House and that Sri Srikantiah wants no ruling. I do not hesitate to give a ruling but it is his right to say that he does not press the matter. When he is not interested in pursuing his motion, I think this matter should stop here.

The Hon. Minister is speaking in reply to the debates and not in reply to any breach of privilege motion. The Hon. Minister may continue his reply.

ಶ್ರೀ ಕೆ. ಲಕ್ಕಪ್ಪ.—ಸ್ವಾಮಿ ನಾನು ಹಳ್ಳಿಗಾಡಿನ ರಸ್ತೆಯ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದೆ.

....

Sri AZEEZ SAIT (Narasimharaja).—I have a point of order.

Sri V. N. PATIL (Humnabad).—I have a submission.

Mr. SPEAKER.—Sri Patil may please sit down. The Member has to respect the Chair. Mr. Azeez Sait also should not comment on the ruling of the Chair.

Sri V. N. PATIL.—I have no submission on the ruling of the Chair. There is a misapprehension and misunderstanding of the situation. I am not going to challenge the ruling of the Chair. When the Chair is seized of a matter, the Chair cannot be a split personality. The Chair is one personality. That being so, when once the Chair is seized of the matter, the Chair cannot function in a dual capacity. The Chair's ruling is still reserved. It is held in abeyance. Pending a decision on the motion, the Minister is not cleared of the charges

(SRI V. N. PATIL)

made against him. When the Chair is seized of the matter, in all fairness, the Chair should give a ruling.

Mr. SPEAKER.—If Sri Srikantiah requests for a ruling, I shall certainly give it. The absence of a ruling does not prevent the Hon. Minister from functioning as such.

ಶ್ರೀ ಕೆ. ಲಕ್ಕಪ್ಪ.—ಗ್ರಾಮಾಂತರ ರಸ್ತೆಗಳ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದೆ. ರಸ್ತೆಗಳನ್ನು ಪೂರ್ಣವಾಗಿ ಕೈ ಬಿಡಬೇಕು ಎನ್ನುತಕ್ಕಂಥ ಉದ್ದೇಶ ಸರ್ಕಾರಕ್ಕೆ ಇಲ್ಲ. ಅವುಗಳನ್ನು ಸಹ ನಡೆಸಿಕೊಂಡು ಹೋಗುತ್ತಿದ್ದೇವೆ. ಅದಕ್ಕೆ ಸಾಕಷ್ಟು ಸೌಲಭ್ಯಗಳನ್ನು ಕೊಟ್ಟು.......

Sri AZEEZ SAIT.—I rise to a point of order.

Mr. SPEAKER.—Under what rule ?

Sri AZEEZ SAIT.—The privilege motion was tabled by Sri Srikantiah in this House. You were good enough to say that you would give a ruling on it. If Sri Srikantiah has intimated that he is not interested in his motion, it is only in a private talk between the Secretary and himself outside this House; and on that private talk the hon. Speaker cannot presume that the hon. Member Srikantiah is not very much interested in his motion. A presumption should not be drawn on what has transpired in your Chamber and outside this House. The House is seized of the matter and the Hon. Speaker has to discharge the duty cast him, that is, to give his ruling in this House. Even in case Sri Srikantiah is not interested in your giving a ruling, he must say in this House that he has become a friend of Sri Lakkappa, that they have arrived at an understanding in good humour. We cannot be in the dark. He must say in this House that he is not interested in the motion. As we all know, the matter was discussed at great length in this House. Now if the Hon. Minister has to reply to the debate raised by the hon. Members, he has to reply only to the questions raised in the debate on the Demand. He cannot touch on the Privilege Motion which is not before the House. ನಮಗೆ ಅನ್ಯಾಯ ಮಾಡಬೇಡಿ. ಅಸತ್ಯ, ಅಧರ್ಮ ಮಾಡಬೇಡಿ.

Mr. SPEAKER.—I do not need the advice of the Hon. Member.

ಶ್ರೀ ಅಜೀಜ್ ಸೇಟ್.—ನಮ್ಮನ್ನು ನೀವು ಪ್ರೈಮರಿ ಸ್ಕೂಲ್ ಹುಡುಗರ ಹಾಗೆ ಟ್ರೀಟ್ ಮಾಡುತ್ತಿದ್ದೀರಿ.

ಶ್ರೀ ಎ. ನಂಜಪ್ಪ (ಶಾಂತಿನಗರ).—ಸಿಟ್ಟು ಮಾಡಿಕೊಂಡರೆ ಪ್ರಯೋಜನವಾಗುವುದಿಲ್ಲ.

ಶ್ರೀ ಅಜೀಜ್ ಸೇಟ್.—ಇವತ್ತು ನೀವು ಜನರಿಗೆ ಹೆಂಡ ಕುಡಿಸಿ ಗೆದ್ದು ಇಲ್ಲಿಗೆ ಬಂದಿದ್ದೀರಿ, ಮಂತ್ರಿಗಳು ಮೊಗಲಾಯರ ದರ್ಬಾರ್ ಮಾಡುತ್ತಿದ್ದಾರೆ. ಇವರಿಗೆ ಒಂದು ರೀತಿ ಇಲ್ಲ, ಒಂದು ನೀತಿ ಇಲ್ಲ. ನಿಮ್ಮಂತೆ ನಮಗೂ ಮಾತನಾಡುವ ಅಧಿಕಾರ ಇದೆ.

ಶ್ರೀ ಎಸ್. ಎಂ. ಗುರೆಡ್ಡಿ (ಮುದ್ದೇಬಿಹಾಳ್).—ಸ್ವಾಮಿ, ತಮ್ಮ ಅನುಮತಿ ಇಲ್ಲದೆ ಮಾತನಾಡುತ್ತಿದ್ದಾರೆ. ಆದಕಾರಣ ಅದನ್ನು ರೆಕಾರ್ಡ್‌ನಿಂದ ತೆಗೆಸಬೇಕು, ಪೇಪರ್‌ನವರಿಗೂ ಸಹ ಹೇಳಬೇಕು.

ಶ್ರೀ ಪಾಟಾಳ್ ನಾಗರಾಜ್.—ನಮಗಿರುವ ತೊಂದರೆಯನ್ನು ಹೇಳುವ ಅಧಿಕಾರ ನಮಗೆ ಇದೆ. ಅದನ್ನು ರೆಕಾರ್ಡ್‌ನಿಂದ ತೆಗೆಸುವ ಪ್ರಸಂಗ ಬಂದಿಲ್ಲ.

ಶ್ರೀ ಅಜೀಜ್ ಸೇಟ್.—ಇದು ಏನು ಕಾಂಗ್ರೆಸ್‌ನವರ ಆಸ್ತಿಯಲ್ಲ. ಅನ್ಯಾಯ ಆಗಿರುವುದನ್ನು ಹೇಳುವುದಕ್ಕೆ ಇಲ್ಲಿಗೆ ಬಂದಿದ್ದೇವೆ. ಅದನ್ನು ನೀವು ಕೇಳಬೇಕು, ಉತ್ತರ ಕೊಡಬೇಕು.

(ಗಲಾಟೆ)

ಅಧ್ಯಕ್ಷರು.—ಎಲ್ಲರೂ ಕುಳಿತುಕೊಳ್ಳಬೇಕು.

†ಶ್ರೀ ಎಂ. ಎನ್. ರಾಮಣ್ಣ (ತುರುವೇಕೆರೆ).—ತಾವು ಅವರಿಗೇ ಮಾತನಾಡುವುದಕ್ಕೆ ಅವಕಾಶ ಕೊಡುತ್ತೀರಿ, ನಮಗೆ ಕೊಡುತ್ತಿಲ್ಲ. ಕಾಂಗ್ರೆಸ್‌ನವರು ಹೆಂಡ ಕುಡಿಸಿ ಗೆದ್ದು ಬಂದಿದ್ದಾರೆಂದು ಶ್ರೀ ಅಜೀಜ್‌ಸೇಟ್ ಅವರು ಹೇಳಿದರು. ಅದು ಸದಸ್ಯರ ಘನತೆಗೆ ಗೌರವಕ್ಕೆ ಚ್ಯುತಿ ಬಂದಿದೆ. ಆ ಶಬ್ದವನ್ನು ಅವರು ವಾಪಸ್ ತೆಗೆದುಕೊಳ್ಳಬೇಕು, ಅದು ಸತ್ಯವಾದ ಮಾತಲ್ಲ.

ಶ್ರೀ ವಾಟಾಳ್ ನಾಗರಾಜ್.—ಅವರು ಸತ್ಯವಾದ ಮಾತನ್ನು ಹೇಳಿದ್ದಾರೆ. ಚುನಾವಣೆ ಸಮಯದಲ್ಲಿ ಹೆಂಡ ಕುಡಿಸಿರುವುದು ಸತ್ಯವಾದ ಸಂಗತಿ. ಆದಕಾರಣ ರೆಕಾರ್ಡ್‌ನಿಂದ ತೆಗೆಸಿ ಹಾಕಿ ಎಂದು ಹೇಳುವುದು ಸರಿಯಲ್ಲ.

ಶ್ರೀ ಎನ್. ಚಿಕ್ಕೇಗೌಡ (ಹೊಸಕೋಟೆ).—ಶ್ರೀ ಅಜೀಜ್‌ಸೇಟ್ ಅವರು ಬೀಡಿ ಕಾರ್ಮಿಕರಿಂದ ಲಂಚ ತೆಗೆದುಕೊಂಡು ಇಲ್ಲಿಗೆ ಆರಿಸಿ ಬಂದಿದ್ದಾರೆ.

ಶ್ರೀ ಅಜೀಜ್‌ಸೇಟ್.—ಒಂದು ನಯಾಪೈಸೆಯನ್ನು ಯಾರಿಂದಲೂ ತೆಗೆದುಕೊಂಡಿಲ್ಲ. ಆ ರೀತಿ ತೆಗೆದುಕೊಂಡಿದ್ದೇನೆಂದು ಪ್ರೂವ್ ಮಾಡಿದರೆ ನಾನು ರಾಜೀನಾಮೆ ಕೊಡುತ್ತೇನೆ.

ಅಧ್ಯಕ್ಷರು.—ನನ್ನ ಅನುಮತಿ ಇಲ್ಲದೆ ಮಾನ್ಯ ಸದಸ್ಯರುಗಳು ಮಾತನಾಡುತ್ತಿದ್ದಾರೆ, ಅದು ಸರಿಯಲ್ಲ. ಎಲ್ಲರೂ ಕುಳಿತುಕೊಳ್ಳಬೇಕು.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಸದಸ್ಯರುಗಳು ಶ್ರೀ ಅಜೀಜ್‌ಸೇಟ್ ಅವರು ಲಂಚ ತೆಗೆದುಕೊಂಡು ಇಲ್ಲಿಗೆ ಆರಿಸಿ ಬಂದಿದ್ದಾರೆಂಬ ಗುರುತರವಾದ ಆಪಾದನೆ ಮಾಡಿದ್ದಾರೆ. ಅದನ್ನು ಪ್ರೂವ್ ಮಾಡಬೇಕು.

ಅಧ್ಯಕ್ಷರು.—ಚನ್ನಯ್ಯನವರೇ, ತಾವು ಎಲ್ಲರಿಗೂ ಕೂಡುವಂತೆ ಹೇಳಿ.

ಶ್ರೀ ಎಸ್. ಚನ್ನಯ್ಯ (ಕೃಷ್ಣರಾಜ).—ಇಲ್ಲಿ ಏನು ತೋರುತ್ತಿದೆ ಎಂದರೆ, ನಾನು ಏನು ತಪ್ಪು ಮಾಡಿದರೂ ಕೂಡ ಅಧ್ಯಕ್ಷರು ಸಪೋರ್ಟ್ ಮಾಡುತ್ತಾರೆಂಬ ಭಾವನೆ ಆ ಕಡೆಯವರಿಗೆ ಬಂದಿದೆ. ತಾವು ಆ ರೀತಿ ತಪ್ಪನ್ನು ಮುಚ್ಚಿಕೊಂಡು ಅವರ ಕಡೆಗೆ ಸಪೋರ್ಟ್ ಮಾಡುವುದು ಸರಿಯಲ್ಲ. ತಮ್ಮ ಪ್ರೊಟೆಕ್ಷನ್ ಇಲ್ಲದಿದ್ದರೆ ನಾನು ಅವರನ್ನು ಹೊರಗೆ ಕಳಿಸುತ್ತಿದ್ದೆ. ತಾವು ಎರಡು ಕಡೆಯವರನ್ನೂ ಒಂದೇ ರೀತಿ ನೋಡಿಕೊಳ್ಳಬೇಕು. ಅವರಿಗೆ ಯಾವ ರೀತಿ ಮನ್ನಣೆ ಕೊಡುತ್ತೀರೋ ಅದೇ ರೀತಿ ನಮಗೂ ಕೊಡಬೇಕು. ತಾವು ಅಧ್ಯಕ್ಷರಾದ ಮೇಲೆ ಎಲ್ಲರಿಗೂ ಅಧ್ಯಕ್ಷರೇ. ನಿಮ್ಮ ಬಗ್ಗೆ ನಮಗೆ ಗೌರವ ಇದೆ. ನಾನು ತಮ್ಮ ಹತ್ತಿರ ಯಾವ ರೀತಿ ಮಾತನಾಡಿದ್ದೇನೆಂಬುದು ನಿಮಗೆ ಗೊತ್ತಿದೆ. ಮಾನ್ಯ ಶ್ರೀನಿವಾಸನ್ ಅವರು ನಮ್ಮ ಕಡೆಯವರು ರೂಲ್ ಬಿಟ್ಟು ಮಾತನಾಡುತ್ತೀರೆಂದು ಹೇಳುವುದು ಸರಿಯಲ್ಲ. ಅವರನ್ನೂ ಚಿಕ್ಕ ಹುಡುಗರು.

ಶ್ರೀ ಸಿ. ಎಂ. ಚುರ್ಚಿಹಾಳ್‌ಮಠ್ (ಮುಂಡರಗಿ).—ವಾಟಾಳ್ ನಾಗರಾಜ್ ಮತ್ತು ಅಜೀಜ್‌ಸೇಟ್ ಅವರು ಆ ರೀತಿ ಮಾತನಾಡಿದ್ದು ಸರಿಯೇ ?

ಶ್ರೀ ಎಸ್. ಚನ್ನಯ್ಯ.—ನಮ್ಮ ಕಡೆಯವರು ರೂಲ್ ಬಿಟ್ಟು ಮಾತನಾಡಿದರೆ ಅದನ್ನು ಒಪ್ಪಿಕೊಳ್ಳುತ್ತೇವೆ, ಅದನ್ನು ನಾನು ಮುಚ್ಚಿಕೊಳ್ಳುವುದಿಲ್ಲ.

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು).—ಎಲ್ಲಾ ಸದಸ್ಯರಲ್ಲಿಯೂ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಯಾರಾದರೂ ಮಾತನಾಡಬೇಕಾದರೆ ಎದ್ದುನಿಂತು ಅಧ್ಯಕ್ಷರ ಅನುಮತಿ ತೆಗೆದುಕೊಂಡು ಮಾತನಾಡಬೇಕೆಂದು ಎಲ್ಲರಲ್ಲಿಯೂ ಸವಿನಯ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಆ ರೀತಿ ಅನುಮತಿ ಇಲ್ಲದೆ ಮಾತನಾಡಿದರೆ, ಆ ವಿಷಯ ರೆಕಾರ್ಡ್ ಆಗಬಾರದು, ಪತ್ರಿಕೆಗಳಲ್ಲಿ ಬರಬಾರದು. ಆ ರೀತಿಯಾದರೆ ಬಹಳಷ್ಟು ಗಲಾಟೆ ಕಡಿಮೆಯಾಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ನೆನ್ನೆ ದಿನವೇ ಇವತ್ತು ಯಾರು ಯಾರು ಉತ್ತರ ಕೊಡಬೇಕೆಂದು ತೀರ್ಮಾನವಾಗಿತ್ತು. ಅದರಂತೆ ರಿಪ್ಲೈ ಪ್ರಾರಂಭವಾಗಿದೆ. ಪ್ರಾರಂಭವಾದಮೇಲೆ ಯಾವುದೋ ಒಂದು ಪ್ರಿವಿಲೇಜ್ ಮೋಷನ್ ತಂದರು. ಈ ಬಗ್ಗೆ ಸಂಬಂಧಪಟ್ಟ ಸದಸ್ಯರು ಪ್ರೆಸ್ ಮಾಡಿಲ್ಲ, ಆದರೂ

(ಶ್ರೀ ವೀರೇಂದ್ರ ಪಾಟೀಲ್)

ನಾನು ವಿಚಾರ ಮಾಡುತ್ತೇನೆ ಎಂದು ಅಧ್ಯಕ್ಷರು ಹೇಳಿದರು. ಆದರೂ ಕೂಡ 40 ನಿಮಿಷಗಳಿಂದ ಒಬ್ಬರಾದ ಮೇಲೆ ಒಬ್ಬರು ಪಾಯಿಂಟ್ ಆಫ್ ಆರ್ಡರ್ ಎಂದುಕೊಂಡು ಮಾತನಾಡುತ್ತಿದ್ದಾರೆ. ಮಾನ್ಯ ಚನ್ನಯ್ಯನವರು ಅಧ್ಯಕ್ಷರ ಪ್ರೊಟೆಕ್ಷನ್ ಇಲ್ಲದಿದ್ದರೆ ಈ ಕಡೆಯ ಸದಸ್ಯರನ್ನು ಹೊರಗೆ ಕಳುಹಿಸುತ್ತಿದ್ದೆ ಎಂದು ಹೇಳಿದರು, ಯಾವ ರೀತಿ ಕಳುಹಿಸುತ್ತಾರೋ ಗೊತ್ತಿಲ್ಲ.

ಶ್ರೀ ಎಸ್. ಚನ್ನಯ್ಯ.—ಬೇಕಾದರೆ ಪರೀಕ್ಷೆ ಮಾಡಿ ನೋಡಿ.

ಶ್ರೀ ವೀರೇಂದ್ರ ಪಾಟೀಲ್.—ಅದನ್ನು ಪರೀಕ್ಷೆ ಮಾಡೋಣ. ಆ ರೀತಿ ತಾವು ಹೇಳುವುದಾದರೆ ಇಲ್ಲಿ ಅಧ್ಯಕ್ಷರು ಇರುವ ಅವಶ್ಯಕತೆಯೇ ಇರಲಿಲ್ಲ.

ಶ್ರೀ ಎಸ್. ಚನ್ನಯ್ಯ.—ಇನ್ನೊಬ್ಬರನ್ನು ಬೇಕಾದರೆ ನಾವು ಅಧ್ಯಕ್ಷರನ್ನಾಗಿ ಮಾಡುತ್ತೇವೆ.

ಶ್ರೀ ವೀರೇಂದ್ರ ಪಾಟೀಲ್.—ನಿಮಗೆ ಅಧಿಕಾರ ಇಲ್ಲ. ಈ ಮನೆ ತೀರ್ಮಾನ ಮಾಡಬೇಕು. ಈಗಿನ ಅಧ್ಯಕ್ಷರನ್ನು ಈ ಮನೆಯವರು ಆರಿಸಿದ್ದಾರೆ. ಯಾರು ಯಾವ ರೀತಿ ಮಾತನಾಡುತ್ತಿದ್ದಾರೆಂಬುದು ಎಲ್ಲರಿಗೂ ಗೊತ್ತಿದೆ. ಯಾವುದಕ್ಕೂ ಒಂದು ಸಹನೆ ಇರುತ್ತದೆ. ನಮ್ಮ ಕಡೆಯವರು ಸಹ ಅರ್ಧ ಘಂಟೆಯವರೆಗೆ ಆ ಕಡೆಯವರು ಹೇಳುವುದನ್ನು ಕೇಳುತ್ತಾ ಇದ್ದರು. ಏನೂ ಮಾತನಾಡಲಿಲ್ಲ. ಅಧ್ಯಕ್ಷರು ರೂಲಿಂಗ್ ಕೊಟ್ಟು ಭಾಷಣ ಮುಂದುವರೆಸಬಹುದು ಎಂದು ಹೇಳಿದ ಮೇಲೆ ಶ್ರೀ ಅಜೀಜ್‌ಸೇಟ್ ಅವರು ಏನೇನು ಮಾತನಾಡಿದ್ದಾರೆಂಬುದನ್ನು ತರಿಸಿಕೊಂಡು ಓದಿ ಸಮಾಧಾನಪಟ್ಟುಕೊಳ್ಳಲಿ. ನಾವೇನು ನಾಲ್ಕನೇ ಕ್ಲಾಸ್‌ನ ಹುಡುಗರೇ ಎಂದು ಅವರು ಮಾತನಾಡಿದರು. ನಾವು ಹುಡುಗರು ಅಲ್ಲ. ನಾವು ರೂಲ್ ಮಾಡಿದ್ದೇವೆ ಏನು ಮಾತನಾಡಬೇಕಾದರೂ ಅಧ್ಯಕ್ಷರ ಅನುಮತಿ ಪಡೆಯಬೇಕಾಗುತ್ತದೆ. ರೂಲ್ಸ್‌ನ್ನು ಎಲ್ಲರೂ ಸರಿಯಾಗಿ ಅನುಸರಿಸಿಕೊಂಡು ಬಂದರೆ ಏನೂ ತಂಟೆಯೇ ಇರುವುದಿಲ್ಲವೆಂದು ಕಾಣುತ್ತದೆ. ಆ ಕಡೆಯವರಿಗೆ ಮಾತನಾಡುವುದಕ್ಕೆ ಅಧಿಕಾರ ಇದೆ, ಈ ಕಡೆಯವರಿಗೆ ಇಲ್ಲ ಎಂದು ಹೇಳುವುದು ಸರಿಯಲ್ಲ. ಆ ಮಾತನ್ನು ಅನೇಕ ಸಲ ಹೇಳಿದ್ದೇನೆ. ಗದ್ದಲ ಮಾಡಿದರೆ ಕೆಲಸಕಾರ್ಯಗಳನ್ನು ನಡೆಸುವುದಕ್ಕೆ ಆಗುವುದಿಲ್ಲ. ಆದಕಾರಣ ಯಾರಾದರು ಮಾತನಾಡಬೇಕಾದರೆ ಅಧ್ಯಕ್ಷರ ಅನುಮತಿ ಪಡೆದು ಮಾತನಾಡಬೇಕು. ಆ ರೀತಿ ಮಾತನಾಡಿದ್ದು ಮಾತ್ರ ರೆಕಾರ್ಡ್ ಆಗಬೇಕು ಮತ್ತು ಪೇಪರ್‌ಗಳಲ್ಲಿ ಬರಬೇಕು. ಅನುಮತಿ ಇಲ್ಲದೆ ಮಾತನಾಡಿದ ವಿಷಯಗಳು ರೆಕಾರ್ಡ್ ಆಗಬಾರದು, ಪತ್ರಿಕೆಗಳಲ್ಲಿ ಬರಬಾರದೆಂದು ಅಧ್ಯಕ್ಷರು ಸ್ಟ್ರಿಕ್ಟ್ ಮಾಡಿದರೆ ಆ ರೀತಿ ನಾವೆಲ್ಲರೂ ನಡೆದುಕೊಳ್ಳುವುದಕ್ಕೆ ಸಿದ್ಧರಿದ್ದೇವೆ.

10-00 A.M.

ಶ್ರೀ ಎಸ್. ಶಿವಪ್ಪ.—ಸ್ವಾಮಿ, ಮಾನ್ಯ ಮುಖ್ಯ ಮಂತ್ರಿಗಳು ಹೇಳುತ್ತಾ ಯಾರಾದರೂ ಈ ಸಭೆಯಲ್ಲಿ ಎದ್ದು ನಿಂತುಕೊಂಡು ತಮ್ಮ ಪರ್ಮಿಷನ್ ಇಲ್ಲದೆ ಮಾತನಾಡಿದರೆ ಅವನ್ನು ಇಲ್ಲಿ ರಿಕಾರ್ಡ್ ಮಾಡಕೂಡದು ಮತ್ತು ಅದು ಪತ್ರಿಕೆಗಳಿಗೂ ಹೋಗಕೂಡದು ಎಂದು ಹೇಳಿದರು.

I am questioning him? Who is he here? By virtue of his position of Chief Minister, he cannot be a dictator. He cannot dictate to anybody. I am requesting the Speaker because he alone is the custodian of the rights and privileges of the Members of this House. ಮಂತ್ರಿಗಳ ಮೇಲೆ ಅಪಾದನೆಗಳಿವೆ ಎಂದು ನಾವು ಎಷ್ಟೇ ಹೇಳಿದರೂ ಮತ್ತು ಅದನ್ನು ಇತ್ಯರ್ಥ ಇನ್ನೂ ಮಾಡದೇ ಇರುವಾಗ ಅದನ್ನು ಮೊದಲು ಇತ್ಯರ್ಥ ಮಾಡಿ ಎಂದು ಹೇಳುವುದು ತಪ್ಪೇ! ದೇಶದ ಹಣ ಹಾಳಾಗಿ ಹೋಗುತ್ತಿದೆ. ಇವರಿಗೆ ಬೇಕಾದವರು ಬೇಕಾದ ಹಾಗೆ ಮಾಡಿ ಇವರು ಹೇಗೆ ಬೇಕಾದರೂ ಕೆಲಸ ಮಾಡಿಕೊಂಡು ಹೋಗಬಹುದು ಎಂದು ತಿಳಿದಿರುವಂತಿದೆ. ಇದನ್ನು ಕೇಳಿದರೆ ಇದು ಮಹಾ ಪಾಪ. ನಿಮ್ಮ ಮೇಲೆ ಪ್ರಭಾವ ಬೀರಿ ಅವರಿಗೆ ಬೇಕಾದವುಗಳನ್ನು ಮಾಡುತ್ತಿದ್ದರೆ ಇದು ಡೆಮಾಕ್ರಸಿಯೋ!

Mr. SPEAKER.—I have heard all sections of the House. The hon. Member Sri Chennaiah, a senior Member of this House said that some sections of the House are under the impression that they have my

support. May I tell you with the permission of the House, all sections of the House irrespective of affiliations............

Sri AZEEZ SAIT.—Slab system!
ಇದನ್ನು ಸತ್ಯವಾಗಿ ದೇವರ ಮುಂದೆ ನಿಂತುಕೊಂಡು ಬೇಕಾದರೆ ಹೇಳುತ್ತೇನೆ.

Mr. SPEAKER.—Is it proper?

Sri AZEEZ SAIT.—That is my very earnest opinion.

Mr. SPEAKER.—Let there be no impression that I am doing one thing to one section and another thing to another section.

Another thing that has happened here is rules which have been framed by the House are not observed. It is beyond dispute that if the proceedings of this House are to be conducted usefully and if the decorum and dignity of the House are to be maintained, the rules must be strictly obeyed. Otherwise, nothing can be done. I do not know what would be the reaction among the hon. Members if I were to point out how much of our time is spent usefully. Some times it happens that the time is not spent on the normal business and it becomes necessary to extend the time, and also sit in the morning. If we utilise the time properly no such thing will happen. I therefore request all hon. Members here to obey the rules in regulating the business of the House and the provisions of the Constitution in letter and spirit and I hope the hon. Members will co-operate with the Chair.

The Hon. Minister may continue his reply.

(The hon. Sri K. Lakkappa stood up to speak)

Sri H. N. NANJE GOWDA.—Sir, just to uphold the prestige and dignity of the House, I am raising a point of order.

It is the foremost duty of every member from the Chief Minister down to the last Member to humbly respect the Chair and not make any attempt to direct the Chair how it should act in the discharge of its duty. The Hon. Chief Minister in a way, and in the voice of a dictator said something just now. He cannot dictate terms to the Chair. This is my first submission.

ಮಾನ್ಯ ಸಭಾಧ್ಯಕ್ಷರು ನಮ್ಮ ಹಿತವನ್ನು ರಕ್ಷಣೆ ಮಾಡತಕ್ಕವರು ಎಂದು ತಿಳಿದುಕೊಂಡು ಅವರಲ್ಲಿ ಎಷ್ಟೋ ವಿನಯದಿಂದ ನಡೆದುಕೊಂಡು ಅವರ ಆಜ್ಞೆಗಳನ್ನು ಪಾಲಿಸಿಕೊಂಡು ನಾನು ಮತ್ತು ನಮ್ಮ ಸಹೋದ್ಯೋಗಿಗಳು ಇಲ್ಲಿ ಕೆಲಸ ಮಾಡಿಕೊಂಡು ಬರುತ್ತಿದ್ದೇವೆ. ಆದರೆ ನಾವು ಈಗ ಇಲ್ಲಿ ಎತ್ತಿರುವ ಹಕ್ಕುಬಾಧ್ಯತೆ ಸೂಚನೆಯ ಬಗ್ಗೆ ಇನ್ನೂ ಸರಿಯಾದ ತೀರ್ಮಾನವಾಗಲಿಲ್ಲ. ತಾಲ್ಲೂಕು ಬೋರ್ಡ್ ಎಲೆಕ್ಷನ್‌ನಲ್ಲಿ ಈ ಮಂತ್ರಿಗಳು ಸರ್ಕಾರದ ಕಾರನ್ನುಪಯೋಗಿಸಿ ಅಧಿಕಾರ ವನ್ನು ದುರುಪಯೋಗಿಸಿದ್ದಾರೆ. ಇದು ಸರಿಯಾಗಿ ಕಾಣುತ್ತದೆಯೇ.....

Mr. SPEAKER.—That is not a point of order.

[Interruptions]

* * * *

Now the proceedings will start. I do not know whether we are having any dreams. This is not going to add to the prestige of the

***Not recorded as directed by the Chair.

(MR. SPEAKER)

House. Whatever is being said by this side or the other side, I construe, as a request to the Chair and not as dictation. This spate of point of orders should stop. A point of order is something very serious and sacred which should not be easily resorted to, to get a hearing. Then it becomes an abuse of the procedure. We have lost nearly one hour now without doing any business. Let us try to help ourselves and give a patient hearing to whoever speaks. Hon. Minister is giving reply to the debate. I think he is probably halfway. Let him complete his reply.

ಶ್ರೀ ಕೆ. ಲಕ್ಕಪ್ಪ.—ಸ್ವಾಮಿ, ಗ್ರಾಮಾಂತರ ರಸ್ತೆಗಳ ಬಗ್ಗೆ ಪ್ರಸ್ತಾಪ ಮಾಡುತ್ತಾ ಹೇಳಿದೆ. ಹಳ್ಳಿಗಾಡಿನಿಂದ ಬಂದಂಥ ದುಡ್ಡು ಹಳ್ಳಿಗಾಡಿಗೆ ಖರ್ಚಾಗಬೇಕು ಎನ್ನತಕ್ಕಂಥ ದೃಷ್ಟಿಯಿಂದ ಕಂದಾಯ ರೂಪದಲ್ಲಿ ಸರ್ಕಾರಕ್ಕೆ ಬರುತ್ತಾ ಇರುವ ಎಲ್ಲ ಹಣವನ್ನೂ ಸಹ ತಾಲ್ಲೂಕು ಬೋರ್ಡ್ ಮತ್ತು ಪಂಚಾಯಿತಿಗಳಿಗೂ ಸಹ ಕೊಟ್ಟು ಗ್ರಾಮಾಂತರ ರಸ್ತೆಗಳ ಮತ್ತು ಇತರ ಅಭಿವೃದ್ಧಿ ಕಾರ್ಯಗಳನ್ನು ಮಾಡಬೇಕು ಎನ್ನುವ ನಿರ್ಧಾರವನ್ನು ತೆಗೆದುಕೊಂಡಿದ್ದೇವೆ. ಈ ಕಾರಣದಿಂದ ಗ್ರಾಮಾಂತರ ರಸ್ತೆಗಳನ್ನು ಕೈಬಿಡತಕ್ಕ ಗೋಜಿಗೆ ಹೋಗುವುದಿಲ್ಲ. ಅದನ್ನೂ ಸಹ ಸಾಧ್ಯವಾದ ಮಟ್ಟಿಗೆ ಮುಂದುವರಿಸಿಕೊಂಡು ಹೋಗುವ ಪ್ರಯತ್ನ ಮಾಡುತ್ತೇವೆ ಎಂದು ಹೇಳುತ್ತೇನೆ. ಇದುವರೆಗೆ ಮಾತನಾಡಿದ್ದು ಜನರಲ್ ಆಗಿ ಮಾತನಾಡಿದೆ.

ಇನ್ನು ಕತ್ತರಿ ಪ್ರಯೋಗದ ಬಗ್ಗೆ ಕೆಲವು ಸದಸ್ಯರುಗಳು ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದರು. ಅದರಲ್ಲಿ ಬಹು ಮುಖ್ಯವಾದ ವಿಚಾರಗಳಿಗೆ ಉತ್ತರ ಕೊಡಬೇಕೆಂದು ಬಯಸುತ್ತೇನೆ.

ಇನ್ನು ಮಂಗಳೂರಿನ ಸದಸ್ಯರೊಬ್ಬರು ಮಾತನಾಡುತ್ತಾ ಹೇಳಿದರು. ಮಂಗಳೂರಿನಿಂದ ಬೆಂಗಳೂರಿಗೆ ಒಂದು ನೇರವಾದ ಹೈವೇ ಆಗಬೇಕು, ಸರ್ಕಾರದ ಕಡೆಯಿಂದ ಪ್ರಯತ್ನ ನಡೆಯಬೇಕು ಎನ್ನುವ ಮಾತನ್ನು ಪ್ರಸ್ತಾಪ ಮಾಡಿದರು. ನಾನು ಮೊದಲೇ ಹೇಳಿದಹಾಗೆ ನಮ್ಮ ರಾಜ್ಯದಲ್ಲಿ ಇನ್ನೂ ಬಹಳ ಹೆಚ್ಚಿನ ಪ್ರಮಾಣದಲ್ಲಿ ರಸ್ತೆಗಳು ಆಗಬೇಕಾಗಿವೆ. ಈಗಾಗಲೇ 7–8 ಮುಖ್ಯ ರಸ್ತೆಗಳನ್ನು ನ್ಯಾಷನಲ್ ಹೈವೇ ಆಗಿ ಟ್ರೀಟ್ ಮಾಡಿ ಕೇಂದ್ರ ಸರ್ಕಾರದವರು ಇದಕ್ಕೆ ಹಣವನ್ನು ಒದಗಿಸಬೇಕು ಎನ್ನುವ ಪ್ರಯತ್ನವನ್ನು ಮಾಡಿದ್ದೇವೆ ಮತ್ತು ಪದೇ ಪದೇ ಒತ್ತಾಯ ಮಾಡುತ್ತಿದ್ದೇವೆ. ಮಂಗಳೂರು-ಹಾಸನ ರಸ್ತೆಯೂ ಕೂಡ ನ್ಯಾಷನಲ್ ಹೈವೇ ಆಗಬೇಕಾದ್ದು ಅಗತ್ಯ ಇದೆ ಎಂದು ನನಗೆ ಅನಿಸಿದೆ. ಅದನ್ನು ಜಾಗ್ರತೆ ತೆಗೆದುಕೊಳ್ಳುವುದಕ್ಕೆ ಸಕಾರಣಗಳೂ ಇವೆ ಎಂದು ನಾನು ತಿಳಿದುಕೊಂಡಿದ್ದೇನೆ. ತಿಪಟೂರು, ಚಿಕ್ಕನಾಯಕನಹಳ್ಳಿ, ಮಂಗಳೂರು, ಓರ್‌ಕ್ಯಾರೀಯಿಂಗ್ ರಸ್ತೆಗಳು ಇವನ್ನು ಸ್ಟ್ಯಾಂಡರ್ಡ್ ರಸ್ತೆಯನ್ನಾಗಿ ಈಗಾಗಲೇ ಮಾಡಿದೆ. ಈ ರೀತಿ ಹಾಸನ-ಮಂಗಳೂರು 105 ಮೈಲಿ ರಸ್ತೆ ವಿಶಾಲವಾದ ರಸ್ತೆಯಾಗಬೇಕು. ಈಗ ಬೆಂಗಳೂರು-ನೆಲಮಂಗಲ ನ್ಯಾಷನಲ್ ಹೈವೇ ಇದೆ. ಇನ್ನು ಕೇವಲ 85 ಮೈಲಿ ಮಾತ್ರ ನ್ಯಾಷನಲ್ ಹೈವೇ ಆಗಬೇಕು. ಎಲ್ಲವನ್ನೂ ತೆಗೆದುಕೊಳ್ಳಬೇಕಾದರೆ ಹಣಕಾಸಿನ ಪರಿಸ್ಥಿತಿ ಬಿಕ್ಕಟ್ಟು ಇದೆ. ಆದರೆ ಕೇವಲ 85 ಮೈಲಿ ರಸ್ತೆ ಇರುವುದನ್ನು ಜಾಗ್ರತೆ ತೆಗೆದುಕೊಂಡರೆ ಅನುಕೂಲವಾಗುತ್ತದೆ ಎಂದು ಡೆಲ್ಲಿಗೆ ಹೋದಾಗ ಸಹಾ ಪ್ರಸ್ತಾಪ ಮಾಡಿದ್ದೇನೆ. ಮತ್ತು ಇದಕ್ಕೆ ಪೂರ್ವಕವಾಗಿ ಸರ್ವೆ ಮಾಡಿ ಕಳುಹಿಸಿಕೊಟ್ಟಿದ್ದೇನೆ. ಪ್ರಾಯಶಃ ಅವರು ಒಪ್ಪಿದರೆ ಈ ರಸ್ತೆಯನ್ನು ನ್ಯಾಷನಲ್ ಹೈವೇ ಮಾಡುವುದಕ್ಕೆ ಸಾಧ್ಯ ಇದೆ ಎಂದು ಮಾನ್ಯ ಸದಸ್ಯರಿಗೆ ಉತ್ತರ ಹೇಳಲು ಬಯಸುತ್ತೇನೆ. ಇನ್ನೂ ಕೆಲವು ಮಿತ್ರರು ಶ್ರೀಮಾನ್ ಹುಚ್ಚಮಾಸ್ತಿಗೌಡರು ಚಿಕ್ಕನಾಯಕನಹಳ್ಳಿ ಸದಸ್ಯರಾಗಿರತಕ್ಕಂಥ ಶ್ರೀಮಾನ್ ರಾಜಯ್ಯಶೆಟ್ಟರು ಕೆಲವು ಮುಖ್ಯವಾದ ವಿಚಾರಗಳನ್ನು ಪ್ರಸ್ತಾಪ ಮಾಡಿದರು. ಪಿ. ಡಬ್ಲ್ಯು. ಡಿ. ಯಲ್ಲಿ ಅದಕ್ಷತೆ ಮತ್ತು ಭ್ರಷ್ಟಾಚಾರ ಇತ್ಯಾದಿ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಆಡಳಿತದಲ್ಲಿ ದಕ್ಷತೆಯನ್ನು ತರಬೇಕು ಎನ್ನುವ ಕಾರಣದಿಂದ ಹೆಚ್ಚಿನ ಪ್ರಯತ್ನವನ್ನು ನಡೆಸುತ್ತಾ ಇದ್ದೇವೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಉದಾಹರಣೆಗಳ ಮೂಲಕ ತಮಗೆ ಹೇಳಬೇಕು ಎಂದು ನನಗೆ ಅನಿಸುತ್ತದೆ. ಪಿ. ಡಬ್ಲ್ಯು. ಡಿ. ಯಲ್ಲಿ ಅದಕ್ಷತೆ ಇದೆ ಎನ್ನುವ ಮಾತು ಬರುತ್ತಾ ಇರುವುದರಿಂದ ಅದನ್ನು ಸರಿಪಡಿಸಬೇಕು ಎನ್ನತಕ್ಕಂಥಾದ್ದರ ಬಗ್ಗೆ ಹೆಚ್ಚಿನ ಪ್ರಯತ್ನಕ್ಕೆ ಒಂದು ಮೊದಲನೆ ಹೆಜ್ಜೆಯಾಗಿ ದಿಟ್ಟತನದ ಕಾರ್ಯಕ್ರಮ

ವನ್ನು ಕೈಕೊಂಡಿದ್ದೇವೆ. ಇದಕ್ಕೆ ನಮ್ಮ ರಾಜ್ಯದ ಮುಖ್ಯಮಂತ್ರಿಗಳು ಹೆಚ್ಚಿನ ಆಸಕ್ತಿಯನ್ನು ತೆಗೆದುಕೊಂಡಿದ್ದಾರೆ. ಅದನ್ನು ಈಗಾಗಲೇ ಕಾರ್ಯಗತ ಸಹ ಮಾಡಿದ್ದೇವೆ. ನಮ್ಮ ಇಲಾಖೆಯಲ್ಲಿ ಮಾತ್ರವಲ್ಲ ಅನೇಕ ಕಡೆ ಕೆಲವರು ಖಾಯಿಲೆಯಿಂದ ನರಳುತ್ತಾ ಇದ್ದಾರೆ, ಸಾಯುವುದೂ ಇಲ್ಲ, ಬದುಕುವುದೂ ಇಲ್ಲ ಎನ್ನುವ ರೀತಿಯಲ್ಲಿ ಅಧಿಕಾರಿಗಳು ಇದ್ದಾರೆ. ಈ ರೀತಿ ಅನಾರೋಗ್ಯದಿಂದ ಇದ್ದಾರೆ. ಸೀನಿಯಾರಿಟಿ ಇದೆ. ಅವರು ಆಫೀಸಿನಲ್ಲಿ ಇದ್ದರೂ ದಕ್ಷತೆಯಿಂದ, ಸರಿಯಾದ ರೀತಿಯಲ್ಲಿ ಕೆಲಸಕಾರ್ಯಗಳನ್ನು ಮಾಡುವುದಕ್ಕೆ ಆಗುತ್ತಾ ಇಲ್ಲ. ಅಂತಹವರು ಕೆಲವರು ಉಳಿದುಕೊಂಡಿದ್ದಾರೆ. ಇನ್ನು ಕೆಲವರು ಸರಿಯಾದ ರೀತಿಯಲ್ಲಿ ಕೆಲಸ ಕಾರ್ಯಗಳನ್ನು ನಡೆಸಿಕೊಂಡು ಹೋಗುತ್ತಾ ಇಲ್ಲ. ಅಂತಹವರನ್ನು ಕೂಡ ಆಡಳಿತದಲ್ಲಿ ಇರಿಸಿಕೊಳ್ಳುವುದು ಸೂಕ್ತವಲ್ಲ ಎನ್ನುವ ದೃಷ್ಟಿಯಿಂದ ಕಾರ್ಯಕ್ರಮ ಕೈಗೊಂಡು 19 ಜನ ಅಧಿಕಾರಿಗಳನ್ನು ನಿವೃತ್ತಿ ಮಾಡುತ್ತಾ ಇದ್ದೇವೆ. ಮತ್ತು 55 ವರ್ಷ ಅವಧಿ ಮುಗಿದವರು ಅಥವಾ 25 ವರ್ಷ ಅವಧಿ ಮುಗಿದವರನ್ನು ಮುಂದುವರಿಸಿಕೊಂಡು ಹೋಗಲು ಸಾಧ್ಯವಿಲ್ಲ ಎನ್ನುವ ನಿರ್ಧಾರ ತೆಗೆದುಕೊಂಡು ಅವರನ್ನೂ ನಿವೃತ್ತಿ ಮಾಡಬೇಕು ಎಂದು ಮಾಡಿದ್ದೇವೆ. ಸಾಮಾನ್ಯವಾಗಿ ಸೂಪರ್‌ವೈಸರ್, ಗುಮಾಸ್ತರು, ಅಸಿಸ್ಟೆಂಟ್ ಇಂಜನಿಯರ್ ಮಾತ್ರವಲ್ಲ ಅವರ ಜೊತೆಗೆ ಸೂಪರಿಂಟೆಂಡಿಂಗ್ ಇಂಜನೀಯರ್, ಎಕ್ಸಿಕ್ಯೂಟೀವ್ ಇಂಜನಿಯರ್ ಮತ್ತು ದೊಡ್ಡ ದೊಡ್ಡ ಅಧಿಕಾರಿಗಳನ್ನು ನಿವೃತ್ತಿ ಮಾಡುವ ದೊಡ್ಡ ಹೆಜ್ಜೆಯನ್ನು ಇಟ್ಟಿದ್ದೇವೆ. ಅದೇ ರೀತಿ ಇತರೇ ಖಾತೆಗಳಲ್ಲೂ ಮಾಡಬೇಕೆಂದು ಸರ್ಕಾರದ ನಿಲುವು ಆಗಿದೆ.

ಇನ್ನೊಂದು ವಿಚಾರ ಏನೆಂದರೆ ತಮಗೆಲ್ಲರಿಗೂ ಗೊತ್ತಿರುವ ಹಾಗೆ ರಸ್ತೆಗಳನ್ನು ರಿಪೇರಿ ಮಾಡಿಸುವುದಕ್ಕೋಸ್ಕರ ರೋಡ್ ಗ್ಯಾಂಗ್‌ಮನ್‌ಗಳನ್ನು ಇಟ್ಟುಕೊಂಡು ಬಂದಿದ್ದೇವೆ. ಇದು ನನ್ನ ಅನುಭವ ಮಾತ್ರವಲ್ಲದೆ ತಮ್ಮ ಅನುಭವದ ಮಾತು ಸಹ ಎಂದು ತಿಳಿದುಕೊಂಡಿದ್ದೇನೆ. ನಾವು ಯಾವ ಒಂದು ಒಳ್ಳೆಯ ಉದ್ದೇಶದಿಂದ ಈ ರೋಡ್ ಗ್ಯಾಂಗ್‌ಮನ್‌ಗಳನ್ನು ಇಟ್ಟುಕೊಂಡಿದ್ದೇವೆಯೋ ಆ ಉದ್ದೇಶ ಸರಿಯಾಗಿ ಆಗುತ್ತಾ ಇಲ್ಲ ಎನ್ನತಕ್ಕಂಥಾದ್ದು ನನ್ನ ಮನವರಿಕೆಯಾಗಿರದೆ ನಿಮ್ಮ ಮನವರಿಕೆಯೂ ಕೂಡ ಆಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಅದನ್ನು ಸರಿಪಡಿಸುವುದಕ್ಕೆ ಅನೇಕ ವರ್ಷಗಳಿಂದ ಪ್ರಯತ್ನಗಳು ನಡೆದುಕೊಂಡು ಬರುತ್ತಾ ಇದೆ. ಇತ್ತೀಚೆಗೆ ಹೆಚ್ಚಿನ ಪ್ರಯತ್ನಗಳನ್ನು ನಡೆಸಿ ರೋಡ್ ಗ್ಯಾಂಗ್‌ನಿಂದ ತೃಪ್ತಿಕರವಾದಮಟ್ಟಿಗೆ ಕಾರ್ಯವನ್ನು ತೆಗೆದುಕೊಂಡಿದ್ದೇವೆ. ಬಹುಶಃ ತಾವೆಲ್ಲಾ ಪ್ರಯಾಣ ಮಾಡುವಾಗ ನೋಡಿರಬಹುದು. ಒಂದು ಕೆಂಪು ಬಾವುಟವನ್ನು ಎರಡು ಕಡೆಯೂ ಹಾಕಿ ಕೆಲಸ ಮಾಡುತ್ತಾ ಇರಬೇಕು. ಆ ಗ್ಯಾಂಗ್‌ನಲ್ಲಿ ಎಷ್ಟು ಜನ ಕೆಲಸ ಮಾಡುತ್ತಾ ಇದ್ದಾರೆ ಎನ್ನುವ ಬೋರ್ಡ್ ಹಾಕಿರಬೇಕು. ಮತ್ತು ಒಂದೊಂದು ಗ್ಯಾಂಗ್‌ನವರೂ ಇಷ್ಟಿಷ್ಟು ಕೆಲಸ ಮಾಡಬೇಕೆಂದು ಅವರು ಕೆಲಸ ಮಾಡುವ ಬುಕ್‌ನಲ್ಲಿ ಬರೆದು ಹೋಗುತ್ತಾರೆ. ಅಸಿಸ್ಟೆಂಟ್ ಇಂಜನಿಯರ್, ಎಕ್ಸಿಕ್ಯೂಟೀವ್ ಇಂಜನೀಯರ್, ಸೂಪರಿಂಟೆಂಡಿಂಗ್ ಇಂಜನಿಯರ್ ಹೋಗಿ ಚೆಕ್ ಮಾಡುತ್ತಾರೆ, ನಾನು ಒಂದೊಂದು ಸಲ ಚೆಕ್ ಮಾಡುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅದರೊಳಗೆ ಅರ್ಧ ಜನ ಇಂಜನೀಯರ್ಸ್, ಸೂಪರ್‌ವೈಸರ್ಸ್ ಮನೆಯಲ್ಲಿ ಸೌದೆ ಒಡೆಯುವ, ನೀರು ಹೊರುವ ಕೆಲಸ ಮಾಡುತ್ತಿದ್ದಾರೆ.

ಶ್ರೀ ಕೆ. ಲಕ್ಕಪ್ಪ.—ನೀವು ಹೇಳತಕ್ಕಂಥ ಮಾತು, ದಿಟ. ಒಪ್ಪಿಕೊಳ್ಳುತ್ತೇನೆ. ಆ ರೀತಿ ನಡೆಯುತ್ತಿತ್ತು. ಅದನ್ನು ತಪ್ಪಿಸಬೇಕು ಎನ್ನುವ ಪ್ರಯತ್ನವನ್ನು ಮಾಡುತ್ತಾ ಇದ್ದೇವೆ. ತೃಪ್ತಿಕರವಾಗಿ ಕೆಲಸ ಮಾಡುತ್ತಾರೆ ಎನ್ನುವ ನಂಬಿಕೆ ಇಲ್ಲ. ಒಂದು ವರ್ಷ ನೋಡೋಣ. ಸರಿಯಾದ ರೀತಿಯಲ್ಲಿ ಕೆಲಸ ಆಗುವುದಕ್ಕೆ ಪ್ರಯತ್ನ ಮಾಡೋಣ. ಹಾಗೆ ಆಗದೇ ಹೋದ ಪಕ್ಷದಲ್ಲಿ ಗ್ಯಾಂಗ್‌ಮೆನ್ ಇಟ್ಟುಕೊಳ್ಳುವುದು ಸೂಕ್ತವಲ್ಲ ಎಂದು ಸಂಪೂರ್ಣವಾಗಿ ತೆಗೆದುಹಾಕುವ ಭಾವನೆಯೂ ಇದೆ. ಈ ಗ್ಯಾಂಗ್‌ಗಳನ್ನು ತೆಗೆಯುವ ವಿಚಾರದಲ್ಲಿ ಕೂಡ ಸದಸ್ಯರಲ್ಲಿ ಒಮ್ಮತವಾದ ಒಪ್ಪಿಗೆ ಇಲ್ಲ. ಕೆಲವರು ತೆಗೆಯಿರಿ ಎಂದು ಹೇಳುತ್ತಾರೆ, ಕೆಲವರು ತೆಗೆಯುವುದು ಸರಿಯಲ್ಲ ಎಂದು ಹೇಳುತ್ತಾರೆ. ಈ ಗ್ಯಾಂಗ್‌ಗಳ ಲೆಕ್ಕವನ್ನು ತರಿಸಿ ನೋಡಿದ್ದೇನೆ. ರಸ್ತೆಗಳ ರಿಪೇರಿಗಾಗಿ ಸ್ಟೇಟ್ ಹೈವೇ ಇದ್ದರೆ ಒಂದು ಮೈಲಿಗೆ ಒಂದು ಸಾವಿರ ರೂಪಾಯಿ, ಮೇಜರ್ ಡಿಸ್ಟ್ರಿಕ್ಟ್ ರೋಡಿಗೆ 750 ರೂಪಾಯಿ, ಇತರ ಜಿಲ್ಲಾ ರಸ್ತೆಗಳಿಗೆ 500 ರೂಪಾಯಿ ಎಂದು ಮಾಡಿಕೊಂಡಿದ್ದೇವೆ. ಗ್ಯಾಂಗ್‌ಗಳಿಗೆ ಕೊಡುವ ಹಣವೇ ಒಂದು ಮೈಲಿಗೆ 300 ರಿಂದ 350 ರೂಪಾಯಿವರೆಗೂ ಆಗುತ್ತದೆ. ಒಂದು ಮೈಲಿಗೆ 500 ರೂಪಾಯಿ ಇರತಕ್ಕ ಕಡೆ 300–350 ರೂಪಾಯಿ ಗ್ಯಾಂಗ್‌ಗಳಿಗೆ ಖರ್ಚು ಮಾಡಿದರೆ ಹೇಗೆ? ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿ 600 ರೂಪಾಯಿಗಳವರೆಗೂ ಖರ್ಚಾಗುತ್ತದೆ. ಹೈದರಾಬಾದ್ ಭಾಗದಲ್ಲಿಯೂ ಬಹಳ ಹೆಚ್ಚಿನ ಪ್ರಮಾಣದಲ್ಲಿ ಖರ್ಚಾಗುತ್ತದೆ. ಆದರೆ ಅವರು ಕೊಡತಕ್ಕ ಹಣಕ್ಕೆ

(ಶ್ರೀ ಕೆ. ಲಕ್ಕಪ್ಪ)

ಸರಿಯಾಗಿ ಕೆಲಸ ಮಾಡುತ್ತಿಲ್ಲ. ನಾವು ಎಷ್ಟೇ ಪ್ರಯತ್ನ ಮಾಡಿದರೂ ಸಹ ಅವರಿಂದ ಸಾಕಷ್ಟು ಕೆಲಸಕಾರ್ಯಗಳನ್ನು ತೆಗೆದುಕೊಳ್ಳುವುದು ಕಷ್ಟವೆಂದು ತಿಳಿದುಕೊಂಡಿದ್ದೇನೆ. ನಾನು ಹೋಗುವಂಥ ಕಡೆಗಳಲ್ಲಿ ಕಡ್ಡಾಯವಾಗಿ ಕೆಲಸ ಮಾಡುತ್ತಿರುತ್ತಾರೆ. ಕಣ್ಣಿಗೆ ಮಣ್ಣೆರಚುವ ಕೆಲಸ ನಡೆಯುತ್ತಿದೆಯೋ ಏನೋ ಗೊತ್ತಿಲ್ಲ. ಅವರಿಂದ ಹೆಚ್ಚಿನ ರೀತಿಯಲ್ಲಿ ವ್ಯವಸ್ಥೆಯಿಂದ ಕೆಲಸವಾಗುವುದಕ್ಕೆ ಪ್ರಯತ್ನವನ್ನು ಮಾಡುತ್ತಿದ್ದೇವೆ.

ಸ್ವಲ್ಪ ದಕ್ಷತೆಯಿಂದ ಕೆಲಸ ನಡೆಯಲಿ, ಕ್ವಾಲಿಟಿ ಕೂಡ ಸರಿಯಾಗಿರಲಿ ಎನ್ನುವ ದೃಷ್ಟಿಯಿಂದ ರಸ್ತೆಗಳಿಗೆ ಟಾರ್ ಹಾಕುವ ಕೆಲಸವನ್ನು ಇಲಾಖೆ ಮೂಲಕ ಮಾಡಿಸುತ್ತಿದ್ದೇವೆ. ಕಂಟ್ರಾಕ್ಟರುಗಳಿಗೆ ಕೊಡತಕ್ಕ ಸಂದರ್ಭಗಳೂ ಇವೆ. ಕ್ವಾಲಿಟಿ ದೃಷ್ಟಿಯಿಂದ ಮತ್ತು ಸರ್ಕಾರಕ್ಕೆ ಹೆಚ್ಚಿನ ಹಣ ಉಳಿತಾಯವಾಗಬೇಕು ಎನ್ನುವ ದೃಷ್ಟಿಯಿಂದ, ಸಾಕಷ್ಟು ನಿರುದ್ಯೋಗಿ ಇಂಜನಿಯರುಗಳು ಇರುವ ಕಾರಣದಿಂದ ಈ ಎಲ್ಲ ಕೆಲಸವನ್ನೂ, ಟಾರ್ ಹಾಕತಕ್ಕ ಕೆಲಸವನ್ನು ನಮ್ಮ ಇಂಜನಿಯರುಗಳೇ ಮಾಡತಕ್ಕುದು ಸೂಕ್ತ ಎನ್ನುವ ಭಾವನೆಯಿಂದ ಟಾರ್ ಹಾಕುವ ಕೆಲಸವನ್ನು ಕಂಟ್ರಾಕ್ಟರುಗಳಿಗೆ ಕೊಡುವ ಗೋಜಿಗೆ ಹೋಗದೆ ಇಲಾಖೆ ಮುಖಾಂತರವೇ ಮಾಡಬೇಕು ಎಂದು ಹೇಳಿದ್ದೇವೆ. ಇಲಾಖೆಯ ಮುಖಾಂತರ ಮಾಡಿದರೆ ಒಂದು ಮೈಲಿಗೆ ಸುಮಾರು 15-16 ಸಾವಿರ ರೂಪಾಯಿ ಖರ್ಚಾದರೆ ಅದನ್ನೇ ಕಂಟ್ರಾಕ್ಟರ ಮುಖಾಂತರವಾಗಿ ಮಾಡಿಸಿದರೆ 19-20 ಸಾವಿರ ರೂಪಾಯಿವರೆಗೂ ಆಗುತ್ತದೆ. ಒಂದು ಮೈಲಿಗೆ ನಾಲ್ಕೈದು ಸಾವಿರ ರೂಪಾಯಿ ಉಳಿತಾಯವಾಗುತ್ತದೆ ಅಲ್ಲದೆ ಈ ಕೆಲಸಗಳನ್ನೆಲ್ಲ ಇಲಾಖೆಯ ಮೂಲಕ ಮಾಡಿಸುವುದಕ್ಕೆ ಅನುಕೂಲವಿರುವುದರಿಂದ ಇಲಾಖೆಯ ಮುಖಾಂತರ ಮಾಡಬೇಕೆಂದು ಸರ್ಕ್ಯುಲರ್ ಕಳಿಸಿ ಆ ರೀತಿ ಮಾಡುವುದಕ್ಕೆ ಕೈ ಹಾಕಿದ್ದೇವೆ.

ಕಂಟ್ರಾಕ್ಟರುಗಳಿಗೆ ಕಟ್ಟಡದ ಕೆಲಸಗಳನ್ನು ಮತ್ತು ರಸ್ತೆ ಕೆಲಸಗಳನ್ನು ಟೆಂಡರ್ ಕರೆದು ಅದರ ಪ್ರಕಾರ ಕೊಡಲಾಗುತ್ತಿದೆ. ಕೆಲವು ಸಂದರ್ಭಗಳಲ್ಲಿ ಒಂದೇ ಒಂದು ಟೆಂಡರ್ ಬಂದಿರುತ್ತದೆ. ಹಾಗೆ ಬಂದಿರುವ ಕಡೆ ಎಸ್ಟಿಮೇಟೆಡ್ ರೇಟ್‌ಗಿಂತ ಸುಮಾರು 25 ರಿಂದ 35 ಪರ್ಸೆಂಟ್ ವರೆಗೂ ಜಾಸ್ತಿ ಇರುವ ಎಸ್ಟಿಮೇಟುಗಳನ್ನು ನೋಡಿದ್ದೇನೆ. ಈ ರೀತಿ ಹೆಚ್ಚು ಮೊತ್ತದ ಟೆಂಡರುದಾರರಿಗೆ ಕೊಡುವುದರಿಂದ ಸರ್ಕಾರಕ್ಕೆ ನಷ್ಟವಾಗುತ್ತದೆ. ಹಾಗಾಗಬಾರದು ಎನ್ನುವ ದೃಷ್ಟಿಯಿಂದ ಎಸ್ಟಿಮೇಟೆಡ್ ರೇಟಿಗಿಂತ ಶೇಕಡ ಹತ್ತಕ್ಕಿಂತ ಯಾರಾದರೂ ಟೆಂಡರ್ ಹಾಕಿದರೆ ಸರ್ಕಾರದ ಗಮನಕ್ಕೆ ತರದೆ ಅಂಥ ಟೆಂಡರುಗಳನ್ನು ಕೊಡಬಾರದು ಎನ್ನುವ ನಿಯಮ ಮಾಡಿದ್ದೇವೆ. ಈಗಾಗಲೇ ಇಂಥ ಸಂದರ್ಭಗಳಲ್ಲಿ ಇಲಾಖೆಯ ಮುಖಾಂತರ ಕೆಲಸ ಮಾಡಿಸುವುದಕ್ಕೆ ಪ್ರಯತ್ನ ಮಾಡಿದ್ದೇವೆ.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಟೆಂಡರ್ ಕರೆಯದೆ ಕೆಲವು ಕೆಲಸಗಳನ್ನು ವಹಿಸಿ ಅದರಿಂದ ಲಾಭ ಸಂಪಾದನೆ ಮಾಡುತ್ತಿರುವುದನ್ನು ಮೊದಲು ತಪ್ಪಿಸುವುದಕ್ಕೆ ಸಾಧ್ಯವಿಲ್ಲವೇ ?

ಶ್ರೀ ಕೆ. ಲಕ್ಕಪ್ಪ.—ಸಣ್ಣ ಕಂಟ್ರಾಕ್ಟರುಗಳಿಗೆ ಟೆಂಡರ್ ಕರೆಯದೆ ಕೊಡತಕ್ಕ ಪದ್ಧತಿ ಬಂದಿದೆ.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ (ಚಿಕ್ಕನಾಯಕನಹಳ್ಳಿ).—ಒಂದು ಲಕ್ಷ ರೂಪಾಯಿನ ಅಂದಾಜಿನ ಕೆಲಸಗಳನ್ನೂ ಕೊಟ್ಟಿದ್ದಾರೆ. ಮಧುಗಿರಿಯಲ್ಲಿ ಸುಮಾರು 20 ಕೆಲಸಗಳನ್ನು ಕೊಟ್ಟಿದ್ದಾರೆ.

ಶ್ರೀ ಕೆ. ಲಕ್ಕಪ್ಪ.—ಕಂಟ್ರಾಕ್ಟನ್ನು ಸ್ಪ್ಲಿಟ್ ಮಾಡಿ ಅವರ ಅನುಕೂಲತೆಗೆ ಕೊಡುವುದಕ್ಕೆ ಪ್ರಾಯಶಃ ಪ್ರಯತ್ನಗಳು ನಡೆಯುತ್ತಿರಬಹುದು. ಅಕ್ರಮವಾಗಿ ಆ ರೀತಿ ಆಗಿರುವುದು ಕಂಡು ಬಂದರೆ ಅದನ್ನು ಸರ್ಕಾರ ಖಂಡಿತವಾಗಿ ಸಹಿಸುವುದಿಲ್ಲ.

ಇಲಾಖೆಯಲ್ಲಿ ಭ್ರಷ್ಟಾಚಾರ ಹೆಚ್ಚಾಗಿದೆ ಎನ್ನುವ ಮಾತನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ಭ್ರಷ್ಟಾಚಾರ ಇಲ್ಲ, ಎಲ್ಲ ಅಧಿಕಾರಿಗಳೂ ಸತ್ಯಸಂಧರಾಗಿದ್ದಾರೆ ಎನ್ನುವ ಸಾಹಸದ ಮಾತನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ನನಗೂ ಅರಿವು ಇದೆ ಆದರೆ ಈ ಭ್ರಷ್ಟಾಚಾರವನ್ನು ತಡೆಗಟ್ಟಬೇಕು ಎನ್ನತಕ್ಕ ಪ್ರಯತ್ನವನ್ನೇನೋ ನಡೆಸುತ್ತಿದ್ದೇನೆ. ಈ ಮಾತನ್ನು ಹೇಳುವಾಗ ತಾವೆಲ್ಲರೂ ಒಪ್ಪುತ್ತೀರಿ. ಮೇಲಿರತಕ್ಕ ಅಧಿಕಾರಿಗಳು ಪ್ರಾಮಾಣಿಕವಾದ ರೀತಿಯಲ್ಲಿದ್ದರೆ ಕೆಳ ಮಟ್ಟದಲ್ಲಿಯೂ ಅದೇ ರೀತಿ ಆಗುತ್ತದೆ ಎನ್ನುವುದನ್ನು ತಾವೆಲ್ಲರೂ ಒಪ್ಪುತ್ತೀರಿ ಎಂದು ನಾನು ತಿಳಿದುಕೊಂಡಿದ್ದೇನೆ. ಮೇಲ್ಮಟ್ಟದಲ್ಲಿ ನಾನು ಮಂತ್ರಿಯಾಗಿದ್ದೇನೆ. ನನ್ನ ಭಾಗಕ್ಕೆ ಹೇಳುವುದಾದರೆ

ಪ್ರಾಮಾಣಿಕತೆಯ ಕೊರತೆ ಇಲ್ಲ ಎನ್ನುವ ಮಾತನ್ನು, ಈ ಸಭೆ ದೇವರ ಸಭೆ ಎಂದು ತಿಳಿದುಕೊಂಡು ಮಾತನಾಡುತ್ತಿದ್ದೇನೆ. ಪ್ರಾಮಾಣಿಕತೆಯೇ ನನ್ನ ಜೀವನದ ಉಸಿರು, ಅದಕ್ಕೆ ಕೊನೆಯ ಉಸಿರು ಇರುವವರೆಗೂ ಪ್ರಾಮಾಣಿಕವಾಗಿ ನಡೆಯಬೇಕು ಎಂದು ಪ್ರತಿಜ್ಞೆ ಮಾಡಿದ್ದೇನೆ, ಆ ರೀತಿ ನಡೆದು ಕೊಂಡು ಬಂದಿದ್ದೇನೆ. ಇದರಲ್ಲಿ ಯಾರಿಗಾದರೂ ಅನುಮಾನವಿದ್ದರೆ ಪರೀಕ್ಷೆ ಸಹ ಮಾಡಬಹುದು ಎಂದು ಈ ಸಭೆಯಲ್ಲಿ ಹೇಳಬಯಸುತ್ತೇನೆ.

ಶ್ರೀ ಡಿ. ದೇವರಾಜ ಅರಸ್ (ಹುಣಸೂರು).—ಮಾನ್ಯ ಮಂತ್ರಿಗಳು ಪ್ರಾಮಾಣಿಕರಾಗಿ ದ್ದಾರೆ ಎಂದು ತಿಳಿದುಕೊಂಡಿರುವವರಲ್ಲಿ ನಾನೂ ಒಬ್ಬ. ಮಾನ್ಯ ಮಂತ್ರಿಗಳು ಪ್ರಾಮಾಣಿಕರಾಗಿ ಇರುತ್ತಾರೆಯೇ ಇಲ್ಲವೇ ಎನ್ನುವುದಕ್ಕಿಂತ ಹೆಚ್ಚಾಗಿ ಮಂತ್ರಿಯಾದವರು ತಮ್ಮ ಕೈಕೆಳಗಿನ ಅಧಿ ಕಾರಿಗಳು ಪ್ರಾಮಾಣಿಕವಾಗಿ ಕೆಲಸ ಮಾಡುವಂತೆ ಮಾಡಿಸುವುದಕ್ಕೆ ಸಾಧ್ಯವಿದೆಯೇ ಇಲ್ಲವೇ ಎನ್ನುವುದು ಮುಖ್ಯವಾದ ವಿಚಾರ. ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ ಭ್ರಷ್ಟಾಚಾರ ಇವರ ಕಾಲ ದಲ್ಲಿ ಮಾತ್ರ ಬಂದಿರುವುದಲ್ಲ. ಅದು ಹಿಂದಿನಿಂದಲೂ ಬೆಳೆದು ಬಂದಿರುವ ವಿಚಾರ. ಮಾನ್ಯ ಲಕ್ಕಪ್ಪನವರು ತಮ್ಮ ಪ್ರಾಮಾಣಿಕತೆಯ ಜೊತೆಗೆ ಅಧಿಕಾರಿಗಳು ಪ್ರಾಮಾಣಿಕವಾಗಿ ನಡೆಯುವ ರೀತಿ ಮಾಡಬೇಕಾದರೆ ಬಹಳ ಶ್ರಮ ವಹಿಸಬೇಕಾಗುತ್ತದೆ; ಅದಕ್ಕೆ ಅನೇಕ ಅಡಚಣೆಗಳು ಬರು ತ್ತವೆ. ಇದರ ಬಗ್ಗೆ ನಾನು ಒಂದು ಸಲಹೆಯನ್ನು ಕೊಡುವುದಾದರೆ, ಈಗಿರತಕ್ಕ ಸಿ. ಸಿ. ಎ. ರೂಲ್ಸ್ ಪ್ರಕಾರ ಗೆಜೆಟೆಡ್ ನೌಕರರು ಕೆಲಸಕ್ಕೆ ಸೇರುವ ಮುಂಚೆ ತಮ್ಮ ಆಸ್ತಿಯ ವಿವರಗಳನ್ನು ಕೊಡಬೇಕು. ಮತ್ತು ವರ್ಷೇ ವರ್ಷೇ ಅವರ ಆಸ್ತಿಯ ವಿವರಗಳನ್ನೂ ಕೊಡಬೇಕು. ಮಾನ್ಯ ಮಂತ್ರಿಗಳು ಕೆಲವರ ಮಟ್ಟಿಗಾದರೂ ಆಸ್ತಿಯ ವಿವರಗಳನ್ನು ತರಿಸಿಕೊಂಡು ಹಿಂದೆ ಏನು ಆಸ್ತಿ ಇತ್ತು, ಈಗ ಯಾವ ರೀತಿ ಆಸ್ತಿ ಬೆಳೆದಿದೆ, ಸಾಧಾರಣ ಅಸಿಸ್ಟೆಂಟ್ ಇಂಜಿನಿಯರು, ಓವರ್ಸಿಯರ್ ಈವೊತ್ತಿನ ದಿವಸ ಲಕ್ಷೋಪಲಕ್ಷ ರೂಪಾಯಿಗಳ ಆಸ್ತಿ, ಮನೆ ಇವುಗಳನ್ನು ಹೊಂದಿರಬೇಕಾದರೆ ಅವ ರಲ್ಲಿ ಪ್ರಾಮಾಣಿಕತೆ ಇದೆಯೇ ಇಲ್ಲವೇ ಎನ್ನುವುದನ್ನು ಕಂಡುಹಿಡಿಯುವುದಕ್ಕೆ ಸಾಧ್ಯವಾಗುತ್ತದೆ. ಅದನ್ನು ಮಾನ್ಯ ಲಕ್ಕಪ್ಪನವರು ಅಥವಾ ಸರ್ಕಾರದವರು ಮಾಡುವುದಕ್ಕೆ ಪ್ರಯತ್ನ ಮಾಡಿದರೆ ಪ್ರಾಮಾಣಿಕತೆ ಅಧಿಕಾರಿಗಳಲ್ಲಿ ಉಂಟುಮಾಡುವುದಕ್ಕೆ ಸಾಧ್ಯವಾಗಬಹುದೋ ಏನೋ ಎಂದು ಸಲಹೆ ಮಾಡುತ್ತೇನೆ. ವಿಜಿಲೆನ್ಸ್ ಕಮಿಷನ್ ಜೊತೆಗೆ ಟೆಕ್ನಿಕಲ್ ಆಡಿಟ್ ಸೆಲ್ ಎಂಬುದನ್ನು ಅಟ್ಯಾಚ್ ಮಾಡಿದ್ದಾರೆ. ಅದಕ್ಕೆ ಸಂಪೂರ್ಣ ಅಧಿಕಾರ ಬರುವಹಾಗೆ ಮಾಡಿ ದಕ್ಷರಾದ ಅಧಿಕಾರಿ ಗಳನ್ನು ಅದಕ್ಕೆ ನೇಮಿಸಿದ್ದಾರೆ. ಅವರ ಮೂಲಕ ಪರಿಶೀಲಿಸಿ ಅವರ ಶಿಫಾರಸ್ಸನ್ನು ಸರಕಾರ ಸಂಪೂರ್ಣವಾಗಿ ಒಪ್ಪಿ ತಕ್ಕ ಕ್ರಮ ಕೈಕೊಂಡರೆ ಒಳ್ಳೆಯ ಸುಧಾರಣೆಯಾಗಬಹುದು ಎಂಬುದನ್ನು ಗಮನಕ್ಕೆ ತರುತ್ತೇನೆ.

10-30 A.M.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಲೀಡರ್ ಚುನಾವಣೆಯಾಗುವ ಕಾಲದಲ್ಲಿ ಅನೇಕ ಕಂಟ್ರಾ ಕ್ಟರುಗಳ ಸಿಬ್ಬಂದಿಯನ್ನು ತಂದು ಮೆಂಬರುಗಳ ಮುಂದೆ ಪ್ರದರ್ಶನ ಮಾಡುತ್ತಿದ್ದರು. ಏನು ಕಾರಣದಿಂದ ಹಾಗೆ ಮಾಡಿದರೆಂಬುದು ನಮಗೆ ಗೊತ್ತಾಗುವುದಿಲ್ಲವೇ? ಆಗ ಹಣವೇನು ವಿನಿ ಯೋಗಮಾಡಿದರು ಎಂಬುದು ಗೊತ್ತಾಗುವುದಿಲ್ಲವೇ?

ಶ್ರೀ ಜಿ. ದುಗ್ಗಪ್ಪ (ಭರ್ಮಸಾಗರ).—ಇದು ಮುಖ್ಯವಾದ ಪ್ರಶ್ನೆ, ಇದನ್ನು ಮಂತ್ರಿಗಳು ಸ್ವಲ್ಪ ಮನಸ್ಸಿಗೆ ತಂದುಕೊಂಡಂತೆ ಕಾಣುತ್ತದೆ, ಸಂತೋಷ. ಚಿತ್ರದುರ್ಗದಲ್ಲಿ ಕೋರ್ಟ್ ಕಟ್ಟಡ ಕಟ್ಟಿದ್ದಾರೆ. ಅದಕ್ಕೆ ಪ್ಲಾನು ಎಸ್ಟಿಮೇಟ್ ಮಾಡುವಾಗ ಹೊರಗೆ ಒಂದು ನೂಲು ಬರಬೇಕು, ಒಳಗೆ ಒಂದು ನೂಲು ಬರಬೇಕು ಎಂದು ನಮೂದುಮಾಡಿದ್ದರು. ಅಲ್ಲಿರುವ ಎಗ್ಜಿಕ್ಯುಟಿವ್ ಎಂಜಿ ನಿಯರು ಬೆಳಿಗ್ಗೆ ಎಲ್ಲೆಲ್ಲೋ ತಿರುಗಿಕೊಂಡು ಬಂದು ನಂತರ ಕೆಲಸದ ಜಾಗಕ್ಕೆ ಹೋಗಿ ನೋಡಿ ಅಲ್ಲ ಕೆಲಸ ಮಾಡುವವರನ್ನು ಇದು ಸರಿಯಾಗಿಲ್ಲ, ಅದು ಸರಿಯಾಗಿಲ್ಲ, ಹೀಗೇಕೆ ಮಾಡಿದೆ ಎಂದು ಬಯ್ಯು ವುದು, ಆಮೇಲೆ ಅಸಿಸ್ಟೆಂಟ್ ಎಂಜಿನಿಯರನ್ನು ಕರೆದು ಹೋಗಲಿ, ಸುಮ್ಮನೆ ಹೊಡಕೊಳ್ಳುತ್ತಾರೆ. ಬಿಲ್ಲುಮಾಡಿ ಕೊಡಿ ಎಂದು ಹೇಳುವುದು, ಈ ರೀತಿ ಮಾಡುತ್ತಾರೆ. ನಂತರ ಬಿಲ್ ಮಾಡಿದರು ಹಣ ತೆಗೆದುಕೊಂಡರು. ಟೆಕ್ನಿಕಲ್ ಆಡಿಟ್ ಸೆಲ್‌ನವರು ಆಮೇಲೆ ಬಂದು ಕೋರ್ಟ್ ಕಟ್ಟಡ ಕಟ್ಟಿರು ವುದನ್ನು ಪರೀಕ್ಷೆಮಾಡಿದರು. ಆ ಕಟ್ಟಡಕ್ಕೆ ಹೊರಗೆ ಒಂದು ನೂಲು ಮಾಡಿದ್ದರು, ಒಳಗೆ ಹೋಗಿ ಗೋಡೆ ಒಡೆದು ಪ್ಲಾಸ್ಟರ್ ಸರಿಯಾಗಿ ಮಾಡಿರುವರೇ ಎಂದು ನೋಡಿದರು. ಸರಿಯಾಗಿ ಒಳಗೆ ಮಾಡಿರಲಿಲ್ಲವೆಂಬುದು ಗೊತ್ತಾಯಿತು. ಬಸವರಾಜ ಅರಸ್ ಎನ್ನುವವರು ಪ್ರಾಮಾಣಿಕರು, ಅವರು ಪರೀಕ್ಷೆಮಾಡಿದಮೇಲೆ ಮೇಲಕ್ಕೆ ವರದಿಮಾಡಿದ್ದಾರೆಂದು ತಿಳಿದುಬಂದಿದೆ. ಹೀಗೆ ಎಷ್ಟೋ

(ಶ್ರೀ ಜಿ. ದುಗ್ಗಪ್ಪ)

ಅಧಿಕಾರಿಗಳಿಂದ ಅವ್ಯವಹಾರ ನಡೆಯುತ್ತಿದೆ, ಆರೋಪ ಅಧಿಕಾರಿಗಳಮೇಲೆ ಬಂದರೆ ಅದನ್ನು ಮುಚ್ಚಬಾರದು, ತಕ್ಕ ಕ್ರಮ ಅವರಮೇಲೆ ಕೂಡಲೆ ಕೈಕೊಳ್ಳಬೇಕು. ಇಲ್ಲದಿದ್ದರೆ ಪ್ರಯೋಜನವಾಗುವುದಿಲ್ಲ. ಭ್ರಷ್ಟಾಚಾರಕ್ಕೆ ನಾನು ಒಂದು ಉದಾಹರಣೆ ಕೊಟ್ಟೆ.

ಶ್ರೀಮತಿ ಚಂಪಾಬಾಯಿ ಬೋಗರೆ (ಕಾಗವಾಡ).—ಹಿಡಕಲ್ ಡ್ಯಾಂ ಕೆಳಗೆ ನೂರಾರು ಜನರು ಕೆಲಸಮಾಡುತ್ತಿದ್ದಾರೆ, ಅಲ್ಲಿ ಕೆಲಸಮಾಡುವ ನೌಕರರಿಗೆ 15-20 ವರ್ಷಗಳಿಂದ ಪ್ರಮೋಷನ್ ದೊರೆತಿಲ್ಲ. ಅದನ್ನು ಕೊಟ್ಟು ಅವರಿಗೆ ಅನುಕೂಲಮಾಡುತ್ತೀರಾ ?

ಶ್ರೀ ಕೆ. ಲಕ್ಕಪ್ಪ.—ಈಗತಾನೆ ಶ್ರೀ ದೇವರಾಜ ಅರಸ್‌ರವರು ಹೇಳಿದ್ದನ್ನು ನಾನು ಅಕ್ಷರಶಃ ಒಪ್ಪುತ್ತೇನೆ. ಇದುವರೆಗೆ ಮಾತನಾಡಿದವರು ಒಳ್ಳೆಯ ರೀತಿಯಿಂದ ಮಾತನಾಡಿದ್ದಾರೆ. ಭ್ರಷ್ಟಾಚಾರ ಮತ್ತು ಇರುವ ಲೋಪದೋಷವನ್ನು ಯಾವ ರೀತಿಯಲ್ಲಿ ತಡೆಗಟ್ಟುವುದಕ್ಕೆ ಸಾಧ್ಯ, ಹೇಗೆ ಮಾಡಿದರೆ ಪರಿಣಾಮಕಾರಿಯಾಗುತ್ತದೆ ಎಂಬುದಕ್ಕೆ ಸೂಕ್ತ ಸಲಹೆ ಕೊಟ್ಟರೆ ನಿಜವಾಗಿಯೂ ಕೂಡ ಅದನ್ನು ಸ್ವಾಗತಿಸುತ್ತೇನೆ. ಶ್ರೀ ದೇವರಾಜ ಅರಸ್‌ರವರು ಒಂದು ಸಲಹೆ ಕೊಟ್ಟಿದ್ದಾರೆ. ಈಗ ಅನೇಕ ಕಡೆ ಲಂಗುಳಿತನವಿದೆ, ಭ್ರಷ್ಟಾಚಾರ ನಡೆಯುತ್ತಿದೆ ಎಂದು ತಿಳಿಸಿದ್ದಾರೆ, ಅನೇಕ ಮೂಗರ್ಜಿಗಳು ಬರುತ್ತಿವೆ. ಮೂಗರ್ಜಿ ಬಂದರೆ ಕ್ರಮ ತೆಗೆದುಕೊಳ್ಳುವುದಕ್ಕೆ ಅಷ್ಟಾಗಿ ಅವಕಾಶವಾಗುವುದಿಲ್ಲ. ಆದರೂ ಕೂಡ ಅದರಲ್ಲಿ ನಿಜಾಂಶವಿದೆಯೇ ಎಂದು ಪರೀಕ್ಷೆಮಾಡಲು ವಿಜಿಲೆನ್ಸ್ ಕಮಿಷನ್ನಿಗೆ ಕಳಿಸುತ್ತಿದ್ದೇನೆ. ಇರುವ ಲೋಪದೋಷಗಳನ್ನು ತಡೆಗಟ್ಟಬೇಕಾದರೆ, ಯಶಸ್ವಿಯಾಗಿ ಈ ಬಗ್ಗೆ ಕೆಲಸಕಾರ್ಯ ನಡೆಯಬೇಕಾದರೆ ಸರಕಾರವೊಂದೇ ಪ್ರಯತ್ನಮಾಡಿದರೆ ಸಾಲದು, ಮಾನ್ಯ ಸದಸ್ಯರೂ ಕೂಡ ಒಂದಲ್ಲ ಒಂದು ರೀತಿಯಲ್ಲಿ ಸರಕಾರದ ಅಂಗ, ಹೀಗೆ ಹೇಳಿದರೆ ತಪ್ಪಾಗಲಾರದು, ಸರಕಾರದಮೇಲಿರುವ ಜವಾಬ್ದಾರಿ ಸದಸ್ಯರಮೇಲೂ ಇದೆ. ಇವತ್ತು ಇದಕ್ಕೆ ನಿಮ್ಮ ಕಡೆಯಿಂದ ಸಹಕಾರ ಬಂದರೆ ಸ್ವಾಗತಿಸುತ್ತೇನೆ. ಹಣ ತಿಂದುಹಾಕಿದ್ದಾರೆ ಆಸ್ತಿ ಮಾಡಿಕೊಂಡಿದ್ದಾರೆ, ಮನೆಗಳನ್ನು ಕಟ್ಟಿದ್ದಾರೆ ಎಂದು ಸುಮ್ಮನೆ ಹೇಳುವುದಕ್ಕೆ ಬದಲಾಗಿ ಹೇಗೆ ಮಾಡಿಕೊಂಡರು, ಹಣವೆಲ್ಲಿಂದ ಬಂತು ಎಂಬುದನ್ನು ಕಂಡುಹಿಡಿಯಲು ಪ್ರಯತ್ನಮಾಡಿ, ನಿಜಾಂಶ ಸ್ವಲ್ಪ ತಿಳಿದುಕೊಂಡು ಸರಕಾರಕ್ಕೆ ತಿಳಿಸಿದರೆ ಹೆಚ್ಚಿನ ಸಹಾಯವಾಗಬಹುದು. ಅಕ್ರಮ ರೀತಿಯಲ್ಲಿ ಸಂಪಾದನೆ ಮಾಡಿರುವವರು ಬಹಳ ಬುದ್ಧಿವಂತಿಕೆಯಿಂದ ಅದು ಗೊತ್ತಾಗದ ರೀತಿಯಲ್ಲಿ ವಿನಿಯೋಗಮಾಡುತ್ತಿದ್ದಾರೆ, ಮನೆ ಕಟ್ಟಿದರೂ ಅವರ ಸಂಬಂಧೀಕರ ಹೆಸರಿನಲ್ಲಿ ಅಥವ ಯಾರದೋ ಹೆಸರಿನಲ್ಲಿ ಮಾಡಿಕೊಂಡಿರುತ್ತಾರೆ. ಇದರಿಂದ ನಿಜಾಂಶ ತಿಳಿಯದೆ ಪರಿಣಾಮಕಾರಿಯಾದ ರೀತಿಯಲ್ಲಿ ಕ್ರಮ ತೆಗೆದುಕೊಳ್ಳುವುದಕ್ಕೆ ಕಷ್ಟವಾಗಿದೆ. ಇದನ್ನು ತಡೆಗಟ್ಟಬೇಕು, ಪ್ರಾಮಾಣಿಕತೆಯನ್ನು ಹೆಚ್ಚಿಸಬೇಕು ಎಂಬ ಆಸೆ ಇದೆ. ಇದು ಫಲಕಾರಿಯಾಗಬೇಕಾದರೆ ಸದಸ್ಯರು ಹೆಚ್ಚು ಸಹಕರಿಸಬೇಕು, ರಚನಾತ್ಮಕವಾದ ಸಲಹೆಗಳನ್ನು ನೀಡಬೇಕು, ಹೆಚ್ಚು ಪ್ರಯತ್ನಮಾಡಬೇಕು.

ಶ್ರೀ ಪಿ. ವೆಂಕಟಗಿರಿಯಪ್ಪ (ಕೋಲಾರ).—ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ ಕೆಲವು ಇಂಜನಿಯರುಗಳು 20 ಸಾವಿರ ರೂಪಾಯಿಗಳ ಕೆಲಸವಿದ್ದರೆ ಪೀಸ್‌ವರ್ಕ್ ಆಗಿ ಕೆಲಸಮಾಡಿಸುತ್ತಾರೆ, ಮೊದಲು 5 ಸಾವಿರ ರೂಪಾಯಿಗಳ ಅಂದಾಜುಮಾಡಿ ಕೆಲಸಮಾಡಿ ನಂತರ 4 ಸಾವಿರ ರೂಪಾಯಿಗಳ ಅಂದಾಜುಮಾಡುವುದು ಹೀಗೆಲ್ಲಾ ಮಾಡುತ್ತಾರೆ. ಹೀಗೆ ಮಾಡುವವರಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಕೆ. ಲಕ್ಕಪ್ಪ.—ಅಕ್ರಮವಾದ ರೀತಿಯಲ್ಲಿ ಮಾಡಿರುವರೇ ಎಂಬುದನ್ನು ನೋಡಬೇಕು. ಪೀಸ್ ವರ್ಕ್ ಕೆಲಸಮಾಡುವುದರಲ್ಲಿ ಮೂರು ರೀತಿ ಇದೆ. ಅದರ ಪ್ರಕಾರ ಕೆಲಸಮಾಡಿದ್ದರೆ ತಪ್ಪಾಗುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಆದರೆ ಭ್ರಷ್ಟಾಚಾರವಾಗಿದ್ದರೆ ಅದನ್ನು ಮನವರಿಕೆಮಾಡಿಕೊಟ್ಟರೆ ಖಂಡಿತ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನಮಾಡುತ್ತೇವೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗ ರೀಜನಲ್ ಇಂಬ್ಯಾಲೆನ್ಸ್ ಇವೆ, ರಸ್ತೆ, ಸೇತುವೆ ಮುಂತಾದುವುಗಳಿಗೆ ಯಾವ ತಾಲ್ಲೂಕಿನಲ್ಲಿ ಎಷ್ಟು ಖರ್ಚಾಗಿದೆ ಎಂದು ನೋಡಿದರೆ ತಾರತಮ್ಯವಿದೆ ಎಂದು ಕೇಳಿದ್ದೇನೆ. ಕೆಲವು ಜಿಲ್ಲೆಗಳಲ್ಲಿ ಸಂಪೂರ್ಣವಾಗಿ ಕೆಲಸಮಾಡದಿರುವುದಕ್ಕೆ ಕಾರಣ ತಿಳಿಸುತ್ತೀರಾ ?

ಶ್ರೀ ಕೆ. ಲಕ್ಕಪ್ಪ.—ಇಂಬ್ಯಾಲೆನ್ಸ್ ಇದೆ, ಯಾವ ಕಾರಣದಿಂದ ಆಗಿದೆ ಎಂಬುದನ್ನು ತಾವು ಮನವರಿಕೆ ಮಾಡಿಕೊಳ್ಳಬೇಕೆಂದು ತಮ್ಮಲ್ಲಿ ಪ್ರಾರ್ಥಿಸುತ್ತೇನೆ. ಒಂದು ಪಟ್ಟಿಯನ್ನು ತಮ್ಮ

ಮುಂದೆ ಇಡುತ್ತೇನೆ ಅದನ್ನು ನೋಡಿದರೆ ಹೆಚ್ಚು ಪ್ರಮಾಣದ ಇಂಬ್ಯಾಲೆನ್ಸ್ ಆಗಿಲ್ಲ ಎಂಬುದು ತಮಗೇ ವ್ಯಕ್ತವಾಗುತ್ತದೆ. ಕಟ್ಟಡಗಳು, ರಸ್ತೆಗಳು ಮತ್ತು ಸೇತುವೆಗಳ ಬಗ್ಗೆ ಬಡ್ಜೆಟ್‌ನಲ್ಲಿ ಹಣವನ್ನು ಒದಗಿಸಿದ್ದೇವೆ, ಅದು ಈ ರೀತಿ ಇದೆ:—

ಮೈಸೂರು ಸರ್ಕಲ್	...	175.15	ಲಕ್ಷ ರೂಪಾಯಿ
ಬೆಂಗಳೂರು ಸರ್ಕಲ್	...	337.98	ಲಕ್ಷ ರೂಪಾಯಿ
ಶಿವಮೊಗ್ಗಾ ಸರ್ಕಲ್	...	267.21	ಲಕ್ಷ ರೂಪಾಯಿ
ಬೆಳಗಾಂ ಸರ್ಕಲ್	...	203.68	ಲಕ್ಷ ರೂಪಾಯಿ
ಧಾರವಾಡ ಸರ್ಕಲ್	...	263.71	ಲಕ್ಷ ರೂಪಾಯಿ
ಗುಲ್ಬರ್ಗಾ ಸರ್ಕಲ್	...	297.4	ಲಕ್ಷ ರೂಪಾಯಿ
ಮಂಗಳೂರು ಸರ್ಕಲ್	...	183.36	ಲಕ್ಷ ರೂಪಾಯಿ

ಫಾರ್ಮೇಷನ್ ಆಫ್ ರೋಡ್ಸ್ ಅಂಡ್ ಇಂಪ್ರೂವ್‌ಮೆಂಟ್ಸ್ ಟು ಎಕ್ಸಿಸ್ಟಿಂಗ್ ರೋಡ್ಸ್ ಅನ್ನುವುದರಲ್ಲಿ-

ಮೈಸೂರು ಸರ್ಕಲ್	...	36.84	ಲಕ್ಷ ರೂಪಾಯಿ
ಬೆಂಗಳೂರು ಸರ್ಕಲ್	...	2.60	ಲಕ್ಷ ರೂಪಾಯಿ
ಗುಲ್ಬರ್ಗಾ ಸರ್ಕಲ್	...	20.33	ಲಕ್ಷ ರೂಪಾಯಿ
ಧಾರವಾಡ ಸರ್ಕಲ್	...	11.92	ಲಕ್ಷ ರೂಪಾಯಿ

ಒದಗಿಸಲಾಗಿದೆ.

ಹಿಂದಿನಿಂದ ಬಂದಿರತಕ್ಕ ರಸ್ತೆಗಳು, ನಾದುರಸ್ತಾಗಿರತಕ್ಕ ರಸ್ತೆಗಳ ರಿಪೇರಿ ಬಗ್ಗೆ ಕೆಲಸ ನಡೆದಿದೆ. ಇದು ಎಲ್ಲಾ ಜಿಲ್ಲೆಗಳಿಗೂ ಸಹ ಒಂದೇ ರೀತಿಯಾಗಿ ಒಂದೇ ಪ್ರಮಾಣದಲ್ಲಿ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ಅದರಲ್ಲೂ ಉತ್ತರ ಕರ್ನಾಟಕದಲ್ಲಿ ಮತ್ತು ಹೈದ್ರಾಬಾದು ಜಿಲ್ಲೆಯಲ್ಲಿ ಇರತಕ್ಕ ಪ್ರದೇಶಗಳು ನಮ್ಮ ಹಳೇ ಮೈಸೂರಿನ ಎರಡು ಪಟ್ಟು ವಿಸ್ತೀರ್ಣದ ಜಿಲ್ಲೆಗಳು. ಅಲ್ಲೆಲ್ಲಾ ನಾನು ಹೋಗಿ ನೋಡಿಕೊಂಡು ಬಂದಿದ್ದೇನೆ. ಅಲ್ಲಿನ ಕೆಲವು ಜಿಲ್ಲೆಗಳಿಗೆ ಸ್ವಲ್ಪ ಹೆಚ್ಚಿನ ಪ್ರಮಾಣದ ಹಣವನ್ನು ಕೊಟ್ಟಿದೆ. ಮಾನ್ಯ ಸದಸ್ಯರಿಗೂ ಕೂಡ ಗೊತ್ತಿರಬಹುದು ಹೈದ್ರಾಬಾದು ಕರ್ನಾಟಕ ರಸ್ತೆ ವಿಚಾರದಲ್ಲಿ ಬಹಳ ಹಿಂದುಳಿದಿದೆ. ಅಂಕಿಅಂಶಗಳಿಂದ ಅದು ತಮಗೆಲ್ಲರಿಗೂ ಗೊತ್ತಾಗುತ್ತದೆ. ಈ ಮಾತನ್ನು ಹೇಳುವಾಗ ಕೆಲವು ಭಾಗಗಳನ್ನು ಸಂಪೂರ್ಣವಾಗಿ ಅನಾದರಣೆ ಮಾಡಿ ಇನ್ನು ಕೆಲವು ಭಾಗಗಳಿಗೆ ಹೆಚ್ಚಿನ ಹಣವನ್ನು ಒದಗಿಸಲಾಗಿದೆ ಎಂದು ಹೇಳುವುದು ಸರಿಯಲ್ಲ. ಹೆಚ್ಚಿನ ಇಂಬ್ಯಾಲೆನ್ಸ್ ಆಗದಹಾಗೆ ಅಲ್ಲಿನ ಪರಿಸ್ಥಿತಿಗಳನ್ನು ನೋಡಿಕೊಂಡು ಇದನ್ನು ಮಾಡಲಾಗಿದೆ ಎಂದು ತಮ್ಮ ಗಮನಕ್ಕೆ ತರಬಯಸುತ್ತೇನೆ.

ಇನ್ನು ಕೊನೆಯದಾಗಿ ಒಂದು ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ನನ್ನ ಮಿತ್ರರು ಮತ್ತು ವಿರೋಧ ಪಕ್ಷದ ನಾಯಕರೂ ಆಗಿರತಕ್ಕ ಶ್ರೀಮಾನ್ ಶಿವಪ್ಪನವರು ಕಟ್ ಮೋಷನ್ ಮೇಲೆ ಮಾತನಾಡುತ್ತಾ ಲೋಕೋಪಯೋಗಿ ಮಂತ್ರಿಗಳವರು ಯಾವುದೋ ಒಂದು ವಿಚಾರದಲ್ಲಿ ಪ್ರವೇಶ ಮಾಡಿದ್ದಾರೆ ಎಂಬ ಮಾತನ್ನು ಪ್ರಸ್ತಾಪ ಮಾಡಿದ್ದಾರೆ. ಆ ಕಾರಣದಿಂದ ಬಹಳ ವಿನಯದಿಂದ ಸತ್ಯಾಂಶ ಏನಿದೆ ಎಂಬುದನ್ನು ಹೇಳುತ್ತಾ ಇದ್ದೇನೆ.

ಶ್ರೀ ಎಸ್. ಶಿವಪ್ಪ.—ಯಾವ ವಿಷಯ ?

ಶ್ರೀ ಕೆ. ಲಕ್ಕಪ್ಪ.—ಸುಗ್ಗನಹಳ್ಳಿ ಕೆರೆ ಹಿಂದೆ ನೀರು ಕೊಡುವ ವಿಷಯ ಹೇಳಿದ್ದಾರೆ. ನಾನು ಶಿವಪ್ಪನವರೂ ಇಬ್ಬರೂ ಒಂದೇ ಊರಿನಲ್ಲಿ ಹುಟ್ಟಿ ಬೆಳೆದವರು. ಜೊತೆಯಲ್ಲಿ ವಿದ್ಯಾಭ್ಯಾಸ ಮಾಡಿದ್ದೇವೆ, ಈ ಹೊತ್ತಿನವರೆಗೂ ಸಹ ನಾವು ಹಿಂದಿನಿಂದ ಯಾವ ಸ್ನೇಹಭಾವನೆಯನ್ನು ಬೆಳೆಸಿಕೊಂಡು ಬಂದಿದ್ದೇವೆಯೋ ಅದೇ ಭಾವನೆಯನ್ನು ಇಟ್ಟುಕೊಂಡು ಬಂದಿದ್ದೇವೆ. ಚುನಾವಣೆಯ ಕಾಲದಲ್ಲಿ ಅವರ ಪ್ರಚಾರ ಅವರು ಮಾಡಿಕೊಳ್ಳುತ್ತಾರೆ, ನನ್ನ ಪ್ರಚಾರ ನಾನು ಮಾಡಿಕೊಳ್ಳುತ್ತೇನೆ, ಅಷ್ಟೇ ವಿನಹ ನಾನು ಅವರಲ್ಲಿ ಯಾವ ದೋಷಗಳನ್ನೂ ಕಂಡುಹಿಡಿಯುವುದಕ್ಕೆ ಆಗಿಲ್ಲ. ಅದೇ ರೀತಿ ನನ್ನಲ್ಲಿ ಅವರು ಯಾವ ದೋಷಗಳನ್ನೂ ಕಂಡುಹಿಡಿದಿಲ್ಲ ಎಂದು ತಿಳಿದುಕೊಂಡಿದ್ದೇನೆ. ನನ್ನ ಕಿವಿ ಹಿತ್ತಾಳೆಯ ಕಿವಿಯಲ್ಲ. ಸಾಧಾರಣವಾಗಿ ಅನೇಕ ಜನ ಬಂದು ಅನೇಕ ರೀತಿಯಲ್ಲಿ ವಿಚಾರಗಳನ್ನು ಹೇಳುತ್ತಾ ಇರುವಾಗ, ನಿಜಾಂಶವೇನು ಎಂಬುದನ್ನು ತಿಳಿದು ಕೊಳ್ಳುವವರೆಗೂ ನಾನು ದುಡುಕಿ ಯಾವುದಕ್ಕೂ ಕೈ ಹಾಕುವುದಿಲ್ಲ. ಯಾರಿಗೋ ಒಬ್ಬರಿಗೆ ನೀರನ್ನು ಕೊಡುವ ವಿಚಾರದಲ್ಲಿ ಲಕ್ಕಪ್ಪನವರು ಕೈ ಹಾಕಿದರು ಎಂದು ಹೇಳಿದರು, ಪ್ರಾಯಶಃ

(ಶ್ರೀ ಕೆ. ಲಕ್ಕಪ್ಪ)

ಯಾರೋ ಹೇಳಿರುವ ಮಾತಿನಮೇಲೆ ಆ ರೀತಿ ಅವರು ಮಾತನಾಡಿದ್ದಾರೆ ಎಂದು ಹೇಳಿ ನಾನು ಭಾವಿಸುತ್ತೇನೆಯೇ ಹೊರತು ನಿಜವಾಗಿಯೂ ಅವರಿಗೆ ನಿಜಾಂಶ ಗೊತ್ತಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಮೊನ್ನೆಯವರೆಗೂ ಅದರ ವಿಷಯ ನನಗೆ ಗೊತ್ತಿರಲಿಲ್ಲ. ಚನ್ನರಾಯ ಪಟ್ಟಣಕ್ಕೆ ಹೋದಾಗ ಆ ವಿಚಾರ ಪರಿಸ್ಥಿತಿ ಹೀಗಾಗಿದೆ ಎಂದು ಹೇಳಿದರು. ಅದರ ವಿಚಾರ ನನಗೆ ಏನೂ ಗೊತ್ತಿಲ್ಲ, ನೀವು ಹೇಳುತ್ತಾ ಇದ್ದೀರಿ. ನಮ್ಮ ಸೆಕ್ರೆಟರಿಯವರು ಒಂದು ವರದಿಯನ್ನು ತರಿಸಿಕೊಳ್ಳುವುದಕ್ಕಾಗಿ ಅಲ್ಲಿಗೆ ಟೆಲಿಗ್ರಾಂ ಕಳುಹಿಸಿದ್ದಾರೆ, ರಿಪೋರ್ಟ್ ಏನು ಬರುತ್ತದೆ—ನಿಜ ಂಶ ಏನು ಎಂಬುದನ್ನು ತಿಳಿದುಕೊಂಡು ನ್ಯಾಯವಾದ ರೀತಿಯಲ್ಲಿ ಯಾವ ರೀತಿ ಕೆಲಸ ಮಾಡಬೇಕಾಗುತ್ತದೆಯೋ ಆ ರೀತಿ ಮಾಡಬೇಕಾಗುತ್ತದೆಯೇ ವಿನಾ ನೀವು ಹೇಳಿದಂತೆ ಮಧ್ಯೆ ಪ್ರವೇಶ ಮಾಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಸ್. ಶಿವಪ್ಪ.—ಅನ್ ಅಥರೈಸ್ಡ್ ಆಗಿ ನೀರನ್ನು ಉಪಯೋಗಿಸುತ್ತಿದ್ದರೆ ಅದನ್ನು ನಿಲ್ಲಿಸುವುದಕ್ಕೆ ಏನು ತೊಂದರೆ ಇತ್ತು?

ಶ್ರೀ ಕೆ. ಲಕ್ಕಪ್ಪ.—ಅಲ್ಲಿನ ಪರಿಸ್ಥಿತಿ ಏನು ಎಂಬುದರ ಬಗ್ಗೆ ಈಗತಾನೇ ವಿಷಯ ತರಿಸಿಕೊಂಡಿದ್ದೇನೆ ಅದನ್ನು ಮಾನ್ಯ ಶಿವಪ್ಪನವರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಈ ಕೆರೆ ಹಿಂದುಗಡೆ ಹತ್ತು ವರ್ಷಗಳಿಂದ ಹಿಂದಿನಿಂದಲೂ ಸಹ ಯಾರೋ ಒಬ್ಬರು 4 ಎಕರೆ ಜಮೀನಿಗೆ ನೀರು ಉಪಯೋಗಿಸಿಕೊಳ್ಳುತ್ತಾ ಇದ್ದಾರಂತೆ, ದಿಟ, ಇವತ್ತಿಗೂ ಉಪಯೋಗಿಸಿಕೊಳ್ಳುತ್ತಾ ಇದ್ದಾರೆ. ಈ ಕೆರೆಯಲ್ಲಿರತಕ್ಕ ನೀರನ್ನು ಇನ್ನೂ ಕೆಲವು ಎಕರೆಗಳಿಗೆ ಕೊಡುವುದರಿಂದ ಯಾರಿಗೂ ಅಡಚಣೆ ಯಾಗುವುದಿಲ್ಲ ಎಂಬುದನ್ನು ಮನಗಂಡು ಡಿಪಾರ್ಟಮೆಂಟಿನವರು ಅವರಿಗೆ ನೀರು ಕೊಡತಕ್ಕ ವ್ಯವಸ್ಥೆಯನ್ನು ಈಗಾಗಲೇ ಹತ್ತು ವರ್ಷಗಳಿಂದ ಮಾಡಿಕೊಂಡು ಬಂದಿದ್ದಾರೆ. ಹತ್ತು ವರ್ಷಗಳಿಂದ ಅವರು ಕಂದಾಯ, ವಾಟರ್‌ರೇಟು ಎಲ್ಲಾ ಕಟ್ಟಿಕೊಂಡು ಬಂದು ಅಲ್ಲಿ ವ್ಯವಸಾಯ ಮಾಡುತ್ತಾ ಇದ್ದಾರೆ ಎಂದು ತಿಳಿದುಬಂದಿದೆ.

ಶ್ರೀ ಎಸ್. ಶಿವಪ್ಪ.—ಅಲ್ಲಿ ನೀರೇ ಇಲ್ಲ.

ಶ್ರೀ ಕೆ. ಲಕ್ಕಪ್ಪ.—ನೀರು ಇಲ್ಲದೇ ಇದ್ದರೆ ತೆರಿಗೆಯೂ ಇಲ್ಲ.

ಶ್ರೀ ಎಸ್. ಶಿವಪ್ಪ.—ಅದಕ್ಕೆ ಫೀಡರ್ ಚಾನಲ್ ತೋಡಲು ನೀವೇ ಮಂಜೂರಾತಿ ಕೊಟ್ಟಿದೀರಿ.

ಶ್ರೀ ಕೆ. ಲಕ್ಕಪ್ಪ.—ಇವತ್ತಿನವರೆಗೂ ಈ ಹತ್ತು ವರ್ಷಗಳಿಂದ ಯಾವಾಗಲೂ ಆ ಕೆರೆಯ ಹಿಂದುಗಡೆ ಇರತಕ್ಕ ಜಮೀನು ಮಾಡತಕ್ಕವರು ಇತರರು ಯಾರಿದ್ದಾರೆ ಅವರು ಯಾರಿಂದಲೂ ಕೂಡ ದೂರು ಬಂದಿಲ್ಲ. ಈಗ ಅಲ್ಲಿ ಏನೋ ಸ್ವಲ್ಪ ರಾಜಕೀಯ ಉಂಟಾಗಿ, ಅತ್ತ ಕಡೆಯವರು, ಇತ್ತ ಕಡೆಯವರು ಒಬ್ಬರಿಗೊಬ್ಬರಿಗೆ ಕ್ಲೇಶವುಂಟಾಗಿದೆ ಎಂದು ರಿಪೋರ್ಟಿನಿಂದ ಗೊತ್ತಾಗುತ್ತದೆ.

ಶ್ರೀ ಎಸ್. ಶಿವಪ್ಪ.—ಮಾನ್ಯ ಮೈನರ್ ಇರಿಗೇಷನ್ ಮಂತ್ರಿಗಳಿಗೆ ಮತ್ತು ಚೀಫ್ ಇಂಜಿನಿಯರಿಗೆ ಯಾರಿಗೂ ಕೂಡ ಈ ರೀತಿ ಅನ್‌ಅಥರೈಸ್ಡ್ ಕಲ್ಟಿವೇಷನ್‌ನಿಂದ ತೊಂದರೆಯಾಗುತ್ತಿದೆ ಎಂದು ಅರ್ಜಿ ಬಂದಿಲ್ಲವೇ?

ಶ್ರೀ ಕೆ. ಲಕ್ಕಪ್ಪ.—ಈಗ ಬಂದಿರುವುದು ವಿನಾ ಹಿಂದೆ ಯಾವಾಗಲೂ ಬಂದಿಲ್ಲ. ಇದರಲ್ಲಿ ನಾನು ಪ್ರವೇಶ ಮಾಡಬೇಕಾದಂತಹ ವಿಷಯ ಏನೂ ಇಲ್ಲ ಮತ್ತು ನಾನು ಆ ರೀತಿ ಪ್ರವೇಶ ಮಾಡುವುದಕ್ಕೆ ಹೋಗುವುದೂ ಇಲ್ಲ. ಮಾನ್ಯ ಶಿವಪ್ಪನವರು ವಿಷಯವನ್ನು ಸರಿಯಾಗಿ ತಿಳಿದುಕೊಳ್ಳದೇ ಸ್ವಲ್ಪ ದುಡುಕಿದ್ದಾರೆ. ಆ ರೀತಿ ದುಡುಕುವುದು ಬೇಡ ಎಂದು ಅವರಿಗೆ ನಾನು ಹೇಳುತ್ತಾ ಇದ್ದೇನೆ.

ಶ್ರೀ ಎಸ್. ಶಿವಪ್ಪ.—ಕೆರೆಯ ಅಚ್ಚುಕಟ್ಟುದಾರರಿಗೇ ಕೆರೆಯ ನೀರು ಸಾಲುವುದಿಲ್ಲ ಅನ್ನುವುದಿದ್ದಾಗ ಅಕ್ರಮವಾಗಿ ಅನಧಿಕೃತವಾಗಿ ಬೇರೆಯವರು ನೀರನ್ನು ಕಳೆದ 8–10 ವರ್ಷಗಳಿಂದ ಬಳಸಿದ್ದಾಗ್ಯೂ ಏಕೆ ಅವರ ಬಗ್ಗೆ ಕಾರ್ಯಕ್ರಮ ಕೈಗೊಳ್ಳಲಿಲ್ಲಾ! ಆ ಸ್ಥಳೀಯ ಅಧಿಕಾರಿಗೆ ಮೇಲಿನಿಂದ ವಿಚಾರಣೆ ಮಾಡುವುದಕ್ಕೆ ತಿಳಿಸಿದ್ದಾಗ್ಯೂ ಆತ ಇದರ ಬಗ್ಗೆ ಯಾವ ಕ್ರಮವನ್ನೂ ಕೈಗೊಳ್ಳದಿರುವುದು ತುಂಬಾ ಶೋಚನೀಯ. ಈ ದಿವಸ ನಾಗ್ಗೇಹಳ್ಳಿಯ ಒಬ್ಬ ಪ್ರಮುಖ ವ್ಯಕ್ತಿ ಬೆಳಗ್ಗೇನೆ ನಮ್ಮ ಮನೆ ಹತ್ತಿರ ಬಂದು ಸ್ವಾಮಿ, "ಇಲ್ಲೇನು ಸರ್ಕಾರ ಇದೆಯೋ ಇಲ್ಲವೋ ತಪ್ಪಿತಸ್ಥರನ್ನು ಕೇಳತಕ್ಕವರೇ ಇಲ್ಲವಲ್ಲ" ಎಂದು ಗೋಳಾಡುವುದಕ್ಕೆ ಪ್ರಾರಂಭಮಾಡಿದರು.

ನಾನು ವಿಚಾರ ಮಾಡುವುದಾಗಿ ಅವರಿಗೆ ಸಮಾಧಾನ ಮಾಡಿದೆ. ಆದ್ದರಿಂದ ನಾಳೆ ದಿನವೇ ಇಲ್ಲಿಂದ ಚೀಫ್ ಇಂಜಿನಿಯರನ್ನು ಸ್ಥಳಕ್ಕೆ ಕರೆದುಕೊಂಡು ನಾವೆಲ್ಲರೂ ಹೋಗೋಣ—ಅಲ್ಲಿ ಆ ಸ್ಥಳೀಯ ಅಧಿಕಾರಿ ಹೇಳುವಂತೆ ಕೆರೆಯಲ್ಲಿ ನೀರು ಅಷ್ಟು ಹೆಚ್ಚಾಗಿದೆಯೇ ಮತ್ತು ಹಾಗೆ ಅಕ್ರಮವಾಗಿ ಅನಧಿಕೃತವಾಗಿ ನೀರನ್ನು ಕೊಟ್ಟರೆ ಅಚ್ಚುಕಟ್ಟುದಾರರಿಗೆ ತೊಂದರೆಯಾಗುವುದಿಲ್ಲ ಎನ್ನುವುದನ್ನು ಆತ ರುಜುವಾತು ಮಾಡಲಿ. ನನ್ನ ಅಪಾದನೆಯೇನೂ ಇಲ್ಲ. ನೀರಿದ್ದರೆ ಮಹರಾಯರಾಗಿ ಕೊಡಲಿ ಯಾರು ಬೇಡವೆನ್ನುವುದಿಲ್ಲ. ನಾಳೆಯೇ ಇದು ವಿಚಾರಣೆ ಆಗಬೇಕು.

ಶ್ರೀ ಕೆ. ಲಕ್ಕಪ್ಪ.—ನನಗೆ ಬಂದಿರುವ ವರದಿಯ ಪ್ರಕಾರ ಆ ಜಮೀನಿಗೆ ನೀರನ್ನು ಉಪಯೋಗ ಮಾಡಿಕೊಂಡರೂ ತೊಂದರೆಯೇನೂ ಇಲ್ಲ, ಅಷ್ಟು ನೀರು ಹೆಚ್ಚಾಗಿದೆ ಎಂದು ಸ್ಥಳೀಯ ಅಧಿಕಾರಿಯಿಂದ ವರದಿ ಬಂದಿದೆ.

ಶ್ರೀ ಎಸ್. ಶಿವಪ್ಪ.—ನಾನು ನಾಳೆಯೇ ಇದರ ವಿಚಾರವಾಗಬೇಕೆಂದೂ ಅದೂ ಆ ಚೀಫ್ ಇಂಜಿನಿಯರಿಂದಲೇ ಆಗಬೇಕೆಂದೂ ಒತ್ತಾಯಮಾಡುತ್ತೇನೆ. ಅದನ್ನು ಸರ್ಕಾರದವರು ಗಮನದಲ್ಲಿಟ್ಟುಕೊಳ್ಳಬೇಕು. ಆ ಸ್ಥಳೀಯ ಅಧಿಕಾರಿಯ ವರದಿಯ ಬಗ್ಗೆ ಅನುಮಾನವಿದೆ.

ಶ್ರೀ ಭೀಮಣ್ಣ ಶಿವಲಿಂಗಪ್ಪ.—ನಮ್ಮ ಭಾಗಕ್ಕೆ ಜಾಸ್ತಿ ಹಣವನ್ನು ಕೊಡುತ್ತಿದ್ದಾರೆಂದು ಹೇಳುತ್ತಿದ್ದಾರೆ. ಕಳೆದ ನಾಲ್ಕು ವರ್ಷಗಳಲ್ಲಿ ಯಾವ ಯಾವ ಭಾಗಕ್ಕೆ ಎಷ್ಟೆಷ್ಟು ರೀಜನಲ್ ಇಂಬ್ಯಾಲೆನ್ಸ್ ಆಗಿದೆ ಅಷ್ಟನ್ನು ಅಲ್ಲಿ ಕಡಿಮೆ ಇದ್ದರೆ ಅದನ್ನು ಕೂಡಿಸಿ ಕೊಡುವುದಕ್ಕೆ ಸರ್ಕಾರದವರು ಒಪ್ಪುತ್ತಾರೆಯೇ ?

ಶ್ರೀ ಎಂ. ನಾಗಪ್ಪ (ರಾಯಚೂರು).—ಮಂತ್ರಿಗಳು ಈಗತಾನೆ ತಮ್ಮ ಭಾಷಣದಲ್ಲಿ ಹೇಳಿದರು ರಾಯಚೂರು ಗುಲ್ಬರ್ಗ ಮತ್ತು ಬಿದಾರ್ ಈ ಜಿಲ್ಲೆಗಳಿಗೆ ರೀಜನಲ್ ಇಂಬ್ಯಾಲೆನ್ಸ್ ಏನೂ ಆಗಿಲ್ಲವೆಂದು ಹೇಳಿದರು. ಈ ದಿವಸ ಸರ್ಕಾರದವರು ತಯಾರು ಮಾಡಿರತಕ್ಕ ನಾಲ್ಕನೇ ಪಂಚ ವಾರ್ಷಿಕ ಯೋಜನೆಯ ಕರಡು ಪ್ರತಿಯಲ್ಲಿ ಇಲ್ಲಿರತಕ್ಕ ಯಾರಾದರೂ ಸದಸ್ಯರು ಅಲ್ಲಿ ಕೊಟ್ಟಿರತಕ್ಕ ಒಂದು ಥಾಪ್ಟರನ್ನು ನೋಡಿದರೆ ಗೊತ್ತಾಗುತ್ತದೆ. ಪ್ರತಿಯೊಂದು ಜಿಲ್ಲೆಗೂ ಒಂದು ಪ್ರಯಾರ್ಟಿ ಪ್ರಕಾರ ಹಣವನ್ನು ಒದಗಿಸುತ್ತ ಅದನ್ನು ಒಂದು ತರಗತಿವಾರ್ ವಿಂಗಡಿಸಿರುವಂತೆ ಯಾರಿಗಾದರೂ ಭಾಸವಾಗದೆ ಇರದು. ಇಲ್ಲಿ 18 ಜಿಲ್ಲೆಗಳಲ್ಲಿ ನಮ್ಮ ರಾಯಚೂರು, ಬೀದಾರ್, ಗುಲ್ಬರ್ಗ ಜಿಲ್ಲೆಗಳಿಗೆ ಸರ್ಕಾರದವರು ಕೊಟ್ಟಿರತಕ್ಕ ರ್‍ಯಾಂಕ್ ರಾಯಚೂರು—17; ಗುಲ್ಬರ್ಗ ರ್‍ಯಾಂಕ್—18; ಬೀದಾರ್ ರ್‍ಯಾಂಕ್—19. ಹೀಗೆ ವಿಂಗಡಿಸಿರುವುದರಲ್ಲಿ ಆಗಿರತಕ್ಕ ಇಂಬ್ಯಾಲೆನ್ಸ್‌ನ್ನು ಸರ್ಕಾರದವರು ಗಮನಕ್ಕೆ ತೆಗೆದುಕೊಂಡು ಅದನ್ನು ವಿಚಾರ ಮಾಡುತ್ತಾರೆಯೇ ?

ಶ್ರೀ ಕೆ. ಲಕ್ಕಪ್ಪ.—ಅಲ್ಲಿಯ ರಸ್ತೆಗಳಿಗೆ ನಾವು 4 ಕೋಟಿ ರೂಪಾಯಿಗಳನ್ನು ಖರ್ಚುಮಾಡಿದ್ದೇವೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—20 ವರ್ಷದ ಒಂದು ರಸ್ತೆಯ ಕಾರ್ಯಕ್ರಮಕ್ಕೆ ಸರ್ಕಾರಕ್ಕೆ ಇನ್ನು 11 ವರ್ಷಗಳಲ್ಲಿ ರಸ್ತೆಗಳನ್ನು ಮಾಡಲು ಬೇಕಾಗಿರತಕ್ಕ ಮೊಬಲಗು ಒಂದೊಂದು ಜಿಲ್ಲೆಗೂ ಸುಮಾರು 19 ಕೋಟಿ ರೂಪಾಯಿಗಳು ಬೇಕಾಗಿರುತ್ತೆ. ಅಷ್ಟು ಹಣವನ್ನು ಒದಗಿಸಿಕೊಳ್ಳುವುದಕ್ಕೆ ಸರ್ಕಾರದವರೇನಾದರೂ ಸೂಕ್ತ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆಯೇ ? ಹಾಕಿಕೊಂಡಿದ್ದರೆ ಆ ಕಾರ್ಯಕ್ರಮಗಳೇನು, ಹಾಕಿಕೊಳ್ಳದಿದ್ದರೆ ಈ ಯೋಜನೆಯನ್ನು ಸುಮ್ಮನೆ ಕೈಬಿಡುವುದು ಸೂಕ್ತವಲ್ಲವೇ ?

ಶ್ರೀ ಎಸ್. ಶಿವಪ್ಪ.—ಮೈಸೂರು ರಾಜ್ಯದಲ್ಲಿ ಪ್ರವಾಸಿಗರಿಗೆ ಆಕರ್ಷಕವಾದಂಥ ಅನೇಕ ಸ್ಥಳಗಳು ಅಂದರೆ ನಮ್ಮ ಜಿಲ್ಲೆಯಲ್ಲಿ ಬೇಲೂರು—ಹಳೇಬೀಡು—ಶ್ರವಣಬೆಳಗೊಳ—ಮೈಸೂರು ಹೀಗೆ ಇನ್ನೂ ಅನೇಕ ಸ್ಥಳಗಳಿವೆ. ಅವುಗಳನ್ನು ಟೂರಿಸ್ಟ್ ಸೆಂಟರುಗಳನ್ನಾಗಿ ಮಾಡಿ ಜನರನ್ನು ಹೆಚ್ಚಾಗಿ ಆಕರ್ಷಣೆ ಮಾಡುವುದಕ್ಕಾಗಿ ಮತ್ತು ತನ್ಮೂಲಕ ಸರ್ಕಾರಕ್ಕೆ ಹೆಚ್ಚಿನ ಸಂಪಾದನೆಯನ್ನು ಹೊಂದತಕ್ಕ ಹಾದಿಯಲ್ಲಿ ಏನೇನು ಕ್ರಮಗಳನ್ನು ಕೈಗೊಂಡಿದ್ದಾರೆಂಬುದನ್ನು ತಿಳಿಸಬೇಕು.

ಶ್ರೀ ಎಸ್. ಎಂ. ಗುರೆಡ್ಡಿ.—ಬಿಜಾಪುರ ಜಿಲ್ಲೆಯಲ್ಲಿ ರಸ್ತೆಗಳು ಸ್ವಲ್ಪವೂ ಚೆನ್ನಾಗಿಲ್ಲ. ಹೋದ ವರ್ಷ ಬಡ್ಜೆಟ್ಟಿನಲ್ಲಿಟ್ಟಿದ್ದ ಹಣವನ್ನು ಖರ್ಚು ಮಾಡದೆ ಹಾಗೆ ಉಳಿಸಿದ್ದಾರೆ. ಶ್ರೀ ಮಹಮದಾಲಿಯವರಿಗೆ ಅಲ್ಲಿನ ರಸ್ತೆಗಳ ವಿಷಯ ಚೆನ್ನಾಗಿ ಗೊತ್ತಿದೆ, ಏಕೆಂದರೆ ಅವರು ಅಲ್ಲಿ ಎಸ್.ಟಿ. ಬಸ್ಸುಗಳನ್ನು ಓಡಿಸುತಿದ್ದಾರೆ. ಆ ರಸ್ತೆಗಳನ್ನು ಉತ್ತಮಪಡಿಸುವುದಕ್ಕೆ ಏನು ಕಾರ್ಯಕ್ರಮ ಹಾಕಿಕೊಂಡಿದ್ದಾರೆ ?

ಶ್ರೀ ಬಿ. ಪರಮೇಶ್ವರಪ್ಪ.—ಈ ದಿವಸ ತಾಲ್ಲೂಕ್ ಅಭಿವೃದ್ಧಿ ಬೋರ್ಡುಗಳಿಗೆ ವಹಿಸಿರತಕ್ಕ ರಸ್ತೆಗಳ ದುರಸ್ತಿ ಏನಿದೆ ಅದನ್ನು ಪೂರೈಸುವುದಕ್ಕೆ ಅವರಲ್ಲಿ ಸಾಕಷ್ಟು ಹಣವಿಲ್ಲ. ಅದಕ್ಕಾಗಿ ಅವರಿಗೆ ಲ್ಯಾಂಡ್‌ರೆವಿನ್ಯೂ ಬಾಬಿನಿಂದ ಬರತಕ್ಕ ವರಮಾನವನ್ನು ಪೂರ್ತಿಯಾಗಿ ಆಯಾಯ ತಾಲ್ಲೂಕ್ ಅಭಿವೃದ್ಧಿ ಬೋರ್ಡ್‌ಗಳಿಗೆ ಕೊಡಬೇಕೆಂದು ತೀರ್ಮಾನವಾಗಿದೆ. ಆದರೆ ಇತ್ತೀಚಿಗೆ ಕೆಲವು ರಸ್ತೆಗಳನ್ನು ಅಂದರೆ ಗ್ರಾವೆಲ್ ರಸ್ತೆಗಳನ್ನು ಅವು ಪಿ.ಡಬ್ಲ್ಯು.ಡಿ. ಇಲಾಖೆಯಲ್ಲಿದ್ದವುಗಳನ್ನು ತಾಲ್ಲೂಕ್ ಬೋರ್ಡಿಗೆ ವರ್ಗಾಯಿಸಲಾಗಿದೆ. ಹೀಗೆ ಹೆಚ್ಚಿಗೆ ಬಂದ ರಸ್ತೆಯ ಗ್ರಾವೆಲ್ ವೆಚ್ಚವನ್ನು ಯಾರು ಯಾರು ಕೊಡುತ್ತಾರೆ? ಅಥವಾ ಈ ಎಲ್ಲಾ ರಸ್ತೆಗಳ ವೆಚ್ಚವೂ, ಆ ಹಣದಲ್ಲೇ ಸೇರಿದೆಯೋ ?

Sri D. B. KALMANKAR.—Sir, I have one question to ask. My question pertains to the famine relief works...... ...

Mr. SPEAKER.—I think that pertains to the Revenue Department. The hon'ble member may put his question to the hon'ble Minister for Revenue, when demands pertaining to Revenue Department are taken up.

ಶ್ರೀ ಜಿ. ದುಗ್ಗಪ್ಪ.—ಭದ್ರಾ ರೈಟ್‌ಬ್ಯಾಂಕ್ ಛಾನಲ್‌ನಲ್ಲಿ ಸದಾ ನೀರು ಹರಿಯುತ್ತಿರುವುದರಿಂದ ಹರಿಹರ–ದಾವಣಗೆರೆಯ ಹತ್ತಿರ ಜನರು ರಸ್ತೆಗಳೆಲ್ಲಾ ಕೆಸರಾಗಿ ನಡೆಯುವುದಕ್ಕಾಗುತ್ತಾ ಇಲ್ಲ. ಅಲ್ಲಿನ ರಸ್ತೆಗಳೆಲ್ಲಾ ಬಹಳ ಕೆಟ್ಟುಹೋಗಿವೆ. ಜನರ ಗೋಳನ್ನು ಹೇಳುವುದಕ್ಕಾಗುವುದಿಲ್ಲ. ಆದ್ದರಿಂದ ಅಲ್ಲಿ ರಸ್ತೆ ಕಾರ್ಯಕೈಗೊಳ್ಳುವಾಗ ಯಾವುದಕ್ಕೆ ಮೊದಲು ಪ್ರಯಾರ್ಟಿ ಕೊಡಬೇಕು ಎಂಬುದನ್ನು ಮೊದಲು ತೀರ್ಮಾನ ಮಾಡಿ ಅದರಲ್ಲಿ ಈ ರಸ್ತೆಗಳಿಗೆ ಮೊದಲನೇ ಪ್ರಾಶಸ್ತ್ಯ ಕೊಡುವುದಕ್ಕೆ ಸಂಬಂಧಪಟ್ಟ ಇಂಜಿನಿಯರುಗಳಿಗೆ ತಿಳಿಸುತ್ತೀರಾ ? ಅದರಂತೆ ಒಂದು ಪಟ್ಟಿಯನ್ನು ತಯಾರಿಸುವುದಕ್ಕೆ ಡೈರೆಕ್ಷನ್ ಕೊಡುತ್ತೀರಾ ?

ಶ್ರೀ ಕೆ. ಲಕ್ಕಪ್ಪ.—ಅದರ ಬಗ್ಗೆ ಈಗಾಗಲೇ ಅಂದಾಜು ಎಸ್ಟಿಮೇಟುಗಳು ತಯಾರಾಗಿವೆ ಹಣವನ್ನು ಒದಗಿಸಿ ಅದನ್ನು ಮೊದಲು ಕೈಗೊಳ್ಳುವಂತೆ ವ್ಯವಸ್ಥೆ ಮಾಡಲಾಗುತ್ತದೆ.

ಇನ್ನು ಶ್ರೀಮಾನ್ ಹುಚ್ಚಮಾಸ್ತಿಗೌಡರು—ಪ್ಲಾನಿನ ಪ್ರಕಾರ ಮಾಡಬೇಕಾಗಿರತಕ್ಕ ರಸ್ತೆಯನ್ನು ಮಾಡುವುದಕ್ಕೆ ಸರ್ಕಾರದಲ್ಲಿ ಸಾಕಷ್ಟು ಹಣವಿದೆಯೇ, 209 ಕೋಟಿ ರೂಪಾಯಿಗಳನ್ನು ಒದಗಿಸಿಕೊಳ್ಳುವುದಕ್ಕೆ ಏನೇನು ವ್ಯವಸ್ಥೆಯನ್ನು ಮಾಡಲಾಗಿದೆ, ಹಾಗೆ ಯಾವ ಒಂದು ಯೋಜನೆಯೂ ಇಲ್ಲದಿದ್ದಲ್ಲಿ ಅದನ್ನು ಕೈಬಿಡುವುದು ಸೂಕ್ತವಲ್ಲವೇ ಎಂದು ಕೇಳಿದ್ದಾರೆ. ಆ 20 ವರ್ಷದ ಅವಧಿಯಲ್ಲಿ ಈಗಾಗಲೇ 9 ವರ್ಷಗಳು ಕಳೆದುಹೋಗಿವೆ. ಆ ಪ್ಲಾನ್ ಪ್ರಕಾರ ಎಷ್ಟನ್ನು ಮಾಡಬೇಕಾಗಿತ್ತೋ ಅಷ್ಟನ್ನು ಈಗ ಮಾಡಿದ್ದೇವೆ. ಹಾಗೊಂದುವೇಳೆ ನಮಗೆ ಈ ವರ್ಷ ಈ ಬಾಬಿಗೆ ಹೆಚ್ಚು ಹಣವನ್ನು ಹಾಕುವುದಕ್ಕೆ ಸಾಧ್ಯವಾಗದಿದ್ದರೆ, ಮುಂದಿನ ವರ್ಷ ಹೆಚ್ಚು ಹಣವನ್ನು ಒದಗಿಸಿ ಆ ಕಾರ್ಯವನ್ನು ಮುಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಅಲ್ಲಿಗೂ ಸಾಧ್ಯವಾಗಲಿಲ್ಲಾ ಎಂದರೆ ಏನು ಮಾಡುವುದಕ್ಕಾಗುತ್ತದೆ ? ಗುರಿಯನ್ನು ಸಾಧಿಸಬೇಕು ಎಂಬ ಒಂದು ಧೃಡವಾದ ನಿಲುವು ಸರ್ಕಾರಕ್ಕಿದೆ. ಸಾಧ್ಯವಾದ ಎಲ್ಲ ಪ್ರಯತ್ನಗಳನ್ನೂ ನಡೆಸುತ್ತೇವೆ. ನಮ್ಮ ಕರ್ತವ್ಯ ನಾವು ಮಾಡದೆ ಇರುವುದಿಲ್ಲ.

11–00 A.M.

ಇನ್ನು ಮಾನ್ಯ ಶ್ರೀ ಶಿವಪ್ಪನವರು ಒಂದು ಮಾತನ್ನು ಹೇಳಿದರು. ಹಾಸನ ಜಿಲ್ಲೆಯಲ್ಲಿ ಬೇಲೂರು, ಹಳೆಯಬೀಡು, ಶ್ರವಣಬೆಳಗೊಳಕ್ಕೆ ಮಂತ್ರಿಗಳು ಹೋಗಿ ಬಂದರೂ ಅಲ್ಲಿರತಕ್ಕ ರಸ್ತೆಗಳನ್ನು ಉತ್ತಮಪಡಿಸುವುದಕ್ಕೆ ಏನು ಕಾರ್ಯಕ್ರಮವನ್ನು ತೆಗೆದುಕೊಂಡಿಲ್ಲವೆಂದು. ನಾನು ಅದಕ್ಕೆ ಪ್ರಯತ್ನಮಾಡಿದ್ದೇನೆ. ಆಮೇಲೆ ಮಾನ್ಯ ಮುಖ್ಯಮಂತ್ರಿಗಳೂ ಸಹ ಈಗಾಗಲೇ ಹೆಚ್ಚಿನ ಪ್ರಯತ್ನ ಮಾಡಿದ್ದಾರೆ. ಶ್ರವಣಬೆಳಗೊಳದಿಂದ ಚಿಕ್ಕೇರಿಗೆ ಹೋಗತಕ್ಕ ರಸ್ತೆಯನ್ನು ಸೂಕ್ತವಾಗಿ ಟಾರ್ ರಸ್ತೆಯನ್ನಾಗಿ ಮಾಡಿದ್ದಾರೆ. ಇನ್ನೂ ಅಲ್ಪಸ್ವಲ್ಪ ರಸ್ತೆ ಉಳಿದಿದ್ದರೆ, ಅದನ್ನೂ ಸಹ ಮಾಡೋಣ. ಬೇಲೂರಿಗೆ ಚನ್ನನಾಯಕನಹಳ್ಳಿಯಿಂದ ಹೋಗತಕ್ಕ ರಸ್ತೆ ಮತ್ತು ಇನ್ನೂ ಕೆಲವು ರಸ್ತೆಗಳನ್ನು ಉತ್ತಮಪಡಿಸಬೇಕೆಂದು ಮಾಡಿಕೊಂಡಿದ್ದೇವೆ. ಅದನ್ನೂ ಮಾಡುತ್ತೇವೆ.

ಶ್ರೀ ಎಸ್. ಶಿವಪ್ಪ.—ಶ್ರವಣಬೆಳಗೊಳದಿಂದ ಮೈಸೂರಿಗೆ ಹೋಗುವ ರಸ್ತೆ, ಅದನ್ನು ನೋಡಿದ್ದೀರಾ ?

ಶ್ರೀ ಕೆ. ಲಕ್ಕಪ್ಪ.—ನಾನು ಆ ರಸ್ತೆಯಲ್ಲಿಯೂ ಪ್ರಯಾಣಮಾಡಿದ್ದೇನೆ. ಅದು ಸ್ವಲ್ಪ ನಾದುರಸ್ತು ಆಗಿದೆ. ಅದನ್ನೂ ದುರಸ್ತು ಮಾಡುತ್ತೇವೆ. ಬೇಲೂರಿಗೆ ಹೋಗುವ ರಸ್ತೆಯನ್ನೂ ಸಹ ದುರಸ್ತು ಮಾಡುವುದು ಅಗತ್ಯವಿದೆ. ಮಾನ್ಯ ಟ್ರಾನ್ಸ್‌ಪೋರ್ಟ್ ಮಂತ್ರಿಗಳು ಬಂದಿದ್ದಾರೆ. ನನ್ನ ಕಡೆಯಿಂದ ಅನುಕೂಲವಿದ್ದರೆ ನಾನು ಮಾಡಿಸುತ್ತೇನೆ. ನೀವೂ ಮಾಡಿಸಿ. ಹಾಸನದಿಂದ ಹಳೇಬೀಡಿಗೆ ಹೋಗುವ ರಸ್ತೆ, ಹಳೇಬೀಡಿನಿಂದ ಮುಂದೆ ಅರಸೀಕೆರೆಗೆ ಹೋಗುವ ರಸ್ತೆಗಳಲ್ಲಿ ಬಹಳ ಜನ ಯಾತ್ರಿಕರು ತಿರುಗಾಡುತ್ತಾರೆ. ಅದನ್ನು ಉತ್ತಮಪಡಿಸುವುದಕ್ಕೆ ಈಗಾಗಲೇ ತಕ್ಕ ಕಾರ್ಯಕ್ರಮಗಳನ್ನು ಕೈಗೊಂಡಿದ್ದೇವೆ.

ಇನ್ನೂ ಅನೇಕ ಮಿತ್ರರು ಕೆಲವು ಕಡೆ ರಸ್ತೆಗಳು, ಸೇತುವೆಗಳು ಆಗಿಲ್ಲ, ಭದ್ರಾ ಚಾನಲ್‌ನಲ್ಲಿ ಕೆಲಸವಾಗಿಲ್ಲವೆಂದು ಪ್ರತ್ಯೇಕ, ಪ್ರತ್ಯೇಕವಾಗಿ ಹೇಳಿದ್ದಾರೆ. ಇವೆಲ್ಲವನ್ನೂ ದುರಸ್ತುಮಾಡುವುದು, ಸರಿಪಡಿಸುವುದು ಸರ್ಕಾರದ ಉದ್ದೇಶ. ಪ್ರತ್ಯೇಕವಾಗಿ ಅಲ್ಲಿರತಕ್ಕ ಹೆಚ್ಚಿನ ತೊಂದರೆಗಳನ್ನು ಗಮನಿಸಿ ಮಾನ್ಯ ಮಿತ್ರರು ಪತ್ರವ್ಯವಹಾರ ನಡೆಸಿದರೆ, ಅದನ್ನು ಕೈಗೊಳ್ಳುವುದಕ್ಕೆ ಅನುಕೂಲ ವಾಗುತ್ತದೆ.

ಶ್ರೀ ಎಸ್. ಎಂ. ಗುರೆಡ್ಡಿ.—ನಿಮ್ಮ ಬಜೆಟ್ಟಿನಲ್ಲಿ ಹಣವನ್ನು ಒದಗಿಸಿದ್ದರೂ ಕೆಲವನ್ನು ಕೈಬಿಟ್ಟಿದ್ದೀರಿ.

ಶ್ರೀ ಕೆ. ಲಕ್ಕಪ್ಪ.—ಯಾವುಯಾವುದನ್ನು ಮಾಡುವುದಕ್ಕೆ ಸಾಧ್ಯವೋ ಅವನ್ನು ಮಾಡುತ್ತೇವೆ.

† ಶ್ರೀ ಎಚ್. ಸಿ. ಲಿಂಗಾರೆಡ್ಡಿ (ಮೀನುಗಾರಿಕೆ ಮತ್ತು ಬಂದರು ಶಾಖೆಗಳ ರಾಜ್ಯ ಮಂತ್ರಿಗಳು).—ಅಧ್ಯಕ್ಷರೇ, ಬಂದರುಗಳ ಅಭಿವೃದ್ಧಿಗೆ ಸಂಬಂಧಪಟ್ಟ ಬೇಡಿಕೆಗಳ ವಿಷಯದಲ್ಲಿ ಕೇವಲ ಕೆಲವು ಸದಸ್ಯರು ಮಾತ್ರ ಕೆಲವು ಸಲಹಾರೂಪವಾದ ಟೀಕೆಗಳನ್ನು ಮಾಡಿದ್ದಾರೆ. ಅದಕ್ಕಾಗಿ ನಾನು ಅವರನ್ನು ವಂದಿಸುತ್ತೇನೆ. ನಮ್ಮ ಸಂಸ್ಥಾನದಲ್ಲಿ ಸಣ್ಣ ಬಂದರುಗಳ ಅಭಿವೃದ್ಧಿಗಾಗಿ ಒಂದು ತೀವ್ರತರವಾದಂಥ ಮತ್ತು ಯೋಜನಾಬದ್ಧವಾದಂಥ ಕಾರ್ಯಕ್ರಮಗಳನ್ನು ಹಾಕಿಕೊಂಡು ಅವುಗಳ ಅಭಿವೃದ್ಧಿಯಲ್ಲಿ ಸರ್ಕಾರದವರು ಸಾಕಷ್ಟು ಆಸಕ್ತಿವಹಿಸಿ ಹೆಚ್ಚಿಗೆ ಪ್ರಯತ್ನಮಾಡುತ್ತಿದ್ದಾರೆಂದು ನಾನು ವಿನಂತಿ ಮಾಡುತ್ತೇನೆ. ಮಾನ್ಯ ಶ್ರೀ ನಾಡಕರ್ಣಿಯವರು ಉತ್ತರ ಕನ್ನಡ ಜಿಲ್ಲೆಯ ಬಂದರುಗಳ ವಿಷಯದಲ್ಲಿ ಸರ್ಕಾರದವರು ಹೆಚ್ಚು ನಿಗಾ ಕೊಡುತ್ತಾ ಇಲ್ಲವೆಂದು ಸೂಚನೆಗಳನ್ನು ಮಾಡಿದ್ದಾರೆ. ನಮ್ಮ ಸಂಸ್ಥಾನ, ಪುನರ್ವಿಂಗಡಣೆಯಾದಮೇಲೆ, ನಮ್ಮ ಸುಯೋಗದಿಂದ 19 ಬಂದರುಗಳ ನಿರ್ಮಾಣ ಕಾರ್ಯಕ್ರಮ ದೊರಕಿದೆ. ನಿಮಗೆಲ್ಲರಿಗೂ ಗೊತ್ತಿರುವಂತೆ ಕೀರ್ತಿಶೇಷರಾದ ಸರ್ ಎಂ. ವಿಶ್ವೇಶ್ವರಯ್ಯನವರು ಹಿಂದೆ ಮೈಸೂರು ಸಂಸ್ಥಾನದ ಸಂಪದಭಿವೃದ್ಧಿಗೆ ಭಟ್ಕಳ್ ಬಂದರು ಆಗಬೇಕೆಂದಾಗ ಇಂಗ್ಲಿಷ್‌ನವರ ದರಬಾರ್ ಇದ್ದುದರಿಂದ ಅದನ್ನು ಕೊಡದೆ ನಮ್ಮ ಸಂಸ್ಥಾನದಲ್ಲಿ ಬಂದರುಗಳು ಅಷ್ಟಾಗಿ ಅಭಿವೃದ್ಧಿಯಾಗುವುದಕ್ಕೆ ಅವಕಾಶವಾಗಲಿಲ್ಲ. ಈಗ ಸುಯೋಗದಿಂದ 19 ಬಂದರುಗಳನ್ನು ಕೊಟ್ಟಿದ್ದಾರೆ. ಅವುಗಳ ಪೈಕಿ ಮಂಗಳೂರು ಬಂದರು ಮೇಜರ್ ಬಂದರು. ಅದನ್ನು ಇಂಡಿಯಾ ಸರ್ಕಾರದವರು ತೆಗೆದುಕೊಂಡು ಅಭಿವೃದ್ಧಿಪಡಿಸುತ್ತಿದ್ದಾರೆ. ಅದಕ್ಕೆ ಹೆಚ್ಚಿನ ಹಣ ದೊರಕಿದೆ. ಕೇಂದ್ರ ಸರ್ಕಾರದವರು 3 ಕೋಟಿ ರೂಪಾಯಿಗಳಷ್ಟು ಹಣವನ್ನು ಒದಗಿಸುತ್ತಾರೆ. 1971ನೇ ಇಸವಿಯೊಳಗೆ ಕಾರ್ಯಕ್ರಮದಂತೆ ಅದನ್ನು ಮುಗಿಸುವ ಸನ್ನಿವೇಶದಲ್ಲಿದ್ದೇವೆ ಎನ್ನುವುದನ್ನು ಹೇಳುವುದಕ್ಕೆ ನಾವು ಸಂತೋಷಪಡಬೇಕಾಗುತ್ತದೆ. ಯಾವುದಾದರೂ ಸಣ್ಣ ಬಂದರುಗಳ ಅಭಿವೃದ್ಧಿ ಬಗ್ಗೆ ಅಥವಾ ಒಂದು ಮೈನರ್ ಬಂದರಿನ ಅಭಿವೃದ್ಧಿ ಬಗ್ಗೆ ಗಮನಕೊಟ್ಟು ಅದನ್ನು ಅಭಿವೃದ್ಧಿಪಡಿಸುತ್ತೇವೆಂದು ಕೇಳಿದಮೇಲೆ ಅದಕ್ಕೆ ಕೇಂದ್ರ ಸರ್ಕಾರದವರು ಮಾನ್ಯತೆ ಕೊಡಬೇಕಾಗುತ್ತದೆ. ಇನ್ನೊಂದು, ಸರಕು ಸಾಗಾಣಿಕೆ ಬಂದರುಗಳಲ್ಲಿ ಬಹಳ ಮುಖ್ಯವೆಂದು ಹೇಳಿದರೆ, ಅದು ಕಾರವಾರ ಬಂದರು ಅದನ್ನು ನಾವು ಕೊಡುವುದಕ್ಕೆ ಒಪ್ಪಿದ ಮೇಲೆ ಕೇಂದ್ರ ಸರ್ಕಾರದವರು ಒಂದೊಂದು ಸಂಸ್ಥಾನದಿಂದ ಮೈನರ್ ಪೋರ್ಟ್ಸ್ ತೆಗೆದುಕೊಂಡು ಅಭಿವೃದ್ಧಿಪಡಿಸುತ್ತಾರೆಂಬ ನೀತಿಯನ್ನು ಅನುಸರಿಸಿ 4ನೇ ಪಂಚವಾರ್ಷಿಕ ಯೋಜನೆಯಲ್ಲಿ ಕಾರವಾರ ಬಂದರನ್ನು ಅಭಿವೃದ್ಧಿಪಡಿಸುತ್ತೇವೆಂದು ಕೇಳಿ ಅವರನ್ನು ಒಪ್ಪಿಸಿದ್ದೇವೆ. ಸಂಸ್ಥಾನ ಸರ್ಕಾರದವರು ಹಾಕಿರತಕ್ಕ ಯೋಜನೆಗಳ ರೀತಿಯಲ್ಲಿ ಕಾರವಾರ ಬಂದರು ಸೆಂಟ್ರಲಿ ಸ್ಪಾನ್ಸರ್ಡ್ ಸ್ಕೀಂ ಆಗಿದೆಯೆಂದು ನಾನು ಭಾವಿಸುತ್ತೇನೆ. ಸಂಸ್ಥೆಗಳ ಸಹಾಯ ಸಹಕಾರಗಳಿಂದ ಸರ್ಕಾರದವರು ಅದನ್ನು ಅಭಿವೃದ್ಧಿಪಡಿಸಬೇಕೆಂಬ ಒಂದು ಷರತ್ತಿನ ಮೇಲೆ ನಾವು ಅದನ್ನು ಒಪ್ಪಿಕೊಂಡಿದ್ದೇವೆ ಮತ್ತು ಕಾರವಾರದಲ್ಲಿ ಈಗಾಗಲೇ ಸುಮಾರು ಒಂದು ಕೋಟಿ ರೂಪಾಯಿಗಳ ಖರ್ಚನ್ನು ಮಾಡಿದ್ದೇವೆ. ಸರಕು ಸಾಗಾಣಿಕೆಗಾಗಿ ಬಹಳ ಹೆಚ್ಚಿನ ಪ್ರೋತ್ಸಾಹ ಕೊಟ್ಟಿದ್ದೇವೆ. ಅಲ್ಲಿ

†Indicates that the remarks or speeches have not been revised by the member concerned.

(ಶ್ರೀ ಹೆಚ್. ಸಿ. ಲಿಂಗಾರೆಡ್ಡಿ)

ಎರಡೂವರೆ ಸಾವಿರ ಟನ್ನುಗಳಷ್ಟು ಸರಕುಗಳನ್ನು ತುಂಬುವುದಕ್ಕೆ ಅವಕಾಶ ಇದ್ದುದನ್ನು ಕ್ವಿಕ್ ಲೋಡಿಂಗ್ ಮೆಷಿನ್ನುಗಳನ್ನು ತಂದು 5 ಸಾವಿರ ಟನ್ನುಗಳಷ್ಟು ಕಬ್ಬಿಣವನ್ನು ತುಂಬುವುದಕ್ಕೆ ಅವಕಾಶ ಮಾಡಿದ್ದೇವೆ. ವರ್ಷಕ್ಕೆ 10 ಲಕ್ಷ ಟನ್ನುಗಳಷ್ಟು ಐರನ್ ಓರ್ ತುಂಬುವುದಕ್ಕೆ ಸಾಧ್ಯವಿದೆ. ಆದರೆ 10 ಲಕ್ಷ ಟನ್ನಿನಷ್ಟು ಐರನ್ ಓರನ್ನು ತುಂಬುವುದಕ್ಕೆ ಸಾಧ್ಯವಾಗುತ್ತಾ ಇಲ್ಲ. ಏಕೆಂದರೆ ಎನ್. ಎಂ. ಡಿ. ಸಿ. ಅವರು ಮತ್ತು ಎಂ. ಎನ್. ಟಿ. ಸಿ. ಅವರು ಇದಕ್ಕೆ ತಕ್ಕ ಅವಕಾಶವನ್ನು ಮಾಡಿಕೊಡಬೇಕಾಗಿದೆ ಎಂದು ಸರ್ಕಾರದವರು ಒತ್ತಾಯಮಾಡುತ್ತಿದ್ದಾರೆ. ಪೂರ್ತಿಯಾಗಿ ಆ ಸಾಮರ್ಥ್ಯವನ್ನು ಉಪಯೋಗಿಸಿಕೊಳ್ಳದೆ, 3-4 ಸಾವಿರ ಟನ್ನುಗಳಷ್ಟು ಮಾತ್ರ ತುಂಬುವುದಕ್ಕೆ ಈಗ ಸಾಧ್ಯವಾಗಿದೆ. 10 ಲಕ್ಷ ಟನ್ನುಗಳಷ್ಟು ಐರನ್ ಓರನ್ನು ವರ್ಷಕ್ಕೆ ತುಂಬಿ ಈ ಕಾರವಾರ್ ಬಂದರಿನ ಮೂಲಕ ಸಾಗಿಸುವುದಕ್ಕೆ ಅವಕಾಶವಿದೆಯೆಂದು ಹೇಳುತ್ತಿದ್ದೇನೆ. ಅದನ್ನು ನಾವು ಮಾಡುತ್ತೇವೆ. ಅದಕ್ಕಾಗಿ ಹುಬ್ಬಳ್ಳಿ ಕಾರವಾರ ರೈಲು ಇಲ್ಲಿ ಆಗಲೇಬೇಕೆಂದು ಸರ್ಕಾರದವರು ಒತ್ತಾಯಮಾಡುತ್ತಿದ್ದಾರೆ. ಆ ರೈಲು ಬಂದಮೇಲೆ ಹಾಸ್ಪೇಟ್‌ನಲ್ಲಿ ಸಿಗುವ ಹೆಚ್ಚಿನ ಕಬ್ಬಿಣದ ಅದುರನ್ನು ಹೆಚ್ಚಿಗೆ ಸಾಗಿಸಿ ಕಾರವಾರ ಬಂದರನ್ನು ಹೆಚ್ಚು ಅಭಿವೃದ್ಧಿಪಡಿಸುವುದಕ್ಕೆ ಸಾಧ್ಯವಿದೆ ಯೆಂದು ನಾನು ನಂಬಿದ್ದೇನೆ. ಇನ್ನು ಉಳಿದಿರತಕ್ಕ ನಾರ್ತ್ ಕೆನರಾದ ಹೊನ್ನಾವರ ಮತ್ತು ತಾದ್ರಿ ಬಂದರುಗಳ ವಿಷಯದಲ್ಲಿ ಅನೇಕ ನೌಕಾ ಸೌಕರ್ಯಗಳನ್ನು ಒದಗಿಸುತ್ತಿದ್ದೇವೆ. ಭಟ್ಕಳ್ ಬಂದರಿನ ಸಂಬಂಧವಾಗಿ ಈಗಾಗಲೇ 2.2 ಲಕ್ಷ ರೂಪಾಯಿಗಳ ಖರ್ಚಿನಲ್ಲಿ ಒಂದು ಕಾರ್ಗೋ ಷೆಡ್, ಒಂದು ಪಾಸೆಂಜರ್ ಷೆಡ್ ಮತ್ತು ಒಂದು ವಾರ್ಫ್ ಕಟ್ಟಿಸಿದ್ದೇವೆ.

ಇನ್ನು ಮೀನಿನ ಸಂಬಂಧದ ವಿಷಯವಾಗಿ ಹಾಗೂ ಸರಕು ಸಾಗಾಣಿಕೆ ಬಂದರುಗಳ ವಿಷಯ ವಾಗಿ ಸ್ವಲ್ಪ ಹೇಳುತ್ತೇನೆ. ಮೀನಿನ ಅಭಿವೃದ್ಧಿಗೆ ಸಂಬಂಧಪಟ್ಟ ಬಂದರುಗಳ ವಿಷಯದಲ್ಲಿ ಮತ್ತು ಮೀನಿನ ವ್ಯವಸಾಯದ ಬೇಡಿಕೆ ಬಂದ ದಿವಸ ಅವತ್ತು ಹೇಳೋಣವೆಂದು ಇದ್ದೇನೆ. ಹೊನ್ನಾವರ ಬಂದರಿನ ವಿಷಯ ಬೇರೆ. ಅಲ್ಲಿಂದ 50 ಸಾವಿರ ಟನ್ನುಗಳಷ್ಟು ಐರನ್ ಓರನ್ನು ಸಾಗಿಸಬಹುದು. ಅದಕ್ಕಾಗಿ 24 ಸಾವಿರ ರೂಪಾಯಿಗಳನ್ನು ಖರ್ಚುಮಾಡಿದ್ದೇವೆ. ಅಲ್ಲಿ 4 ಆರ್‌ಸಿಸಿ ಜಟ್ಟಿ, 2 ಲಕ್ಷ ಟಗ್ಸ್, ಸ್ಟ್ಯಾಫ್ ಕ್ವಾಟರ್ಸ್, ಟ್ರಾನ್ಸಿಟ್ ಷೆಡ್ಸ್ ಕಟ್ಟಿದ್ದೇವೆ. ಬೆಳಿಕೆರೆಯಲ್ಲಿ 5 ಲಕ್ಷ ರೂಪಾಯಿಗಳ ಖರ್ಚಿನಲ್ಲಿ ನೌಕಾ ಸೌಕರ್ಯಗಳನ್ನು ಮಾಡಿಕೊಟ್ಟಿದ್ದೇವೆ. 4 ಲಕ್ಷ ರೂಪಾಯಿಗಳಲ್ಲಿ ಇತರ ಸೌಕರ್ಯ ಗಳು ಅಂದರೆ, ಬೆಕನ್ ಲೈಟ್ಸ್, ಡಿಪಾರ್ಟ್‌ಮೆಂಟಲ್ ಆಫೀಸ್ ಕ್ವಾರ್ಟರ್ಸ್, ಲತರೇಜ್, ವಾರ್ಫ್ಸ್ ಮತ್ತು ಕಾರ್ಗೋ ಸ್ಟಾರ್ಟಿಂಗ್ ಏರಿಯಾ—ಇವನ್ನು ಒದಗಿಸುವ ಏರ್ಪಾಡನ್ನು ಮಾಡಿದ್ದೇವೆ.

ಇನ್ನು ತಾದ್ರಿ ವಿಷಯ, ಮಾನ್ಯ ನಾಡಕರ್ಣಿಯವರಿಗೆ ಹತ್ತಿರವಾದಂತಹ ಸ್ಥಳ. ಅಲ್ಲಿ ಸುಮಾರು ಒಂದೂವರೆ ಲಕ್ಷ ಖರ್ಚಿನಲ್ಲಿ ಲತರೇಜ್ ವಾರ್ಫ್, ಲೈಟ್ ಹೌಸ್, ಲ್ಯಾಗ್ ಸ್ಟ್ಯಾಂಡ್ ಮೊದಲಾದುವುಗಳನ್ನು ಒದಗಿಸಬೇಕೆಂದು ಮಾಡಿಕೊಂಡಿದೆ. 19 ಬಂದರುಗಳ ಪೈಕಿ ಎಲ್ಲವನ್ನೂ ಅಭಿವೃದ್ಧಿಪಡಿಸುವುದು ಒಮ್ಮೆಲೇ ಕಷ್ಟ. 7 ಬಂದರುಗಳನ್ನು ಆರಿಸಿಕೊಂಡು ಅವುಗಳನ್ನು ತೀವ್ರ ವಾಗಿ ಅಭಿವೃದ್ಧಿಪಡಿಸುತ್ತಿದ್ದೇವೆ. ಮತ್ತು ಕಾರವಾರದಲ್ಲಿ ಬಂದರು ಅಭಿವೃದ್ಧಿಯಾಗಬೇಕಾದರೆ, ನಾನ್ ಅಫೀಶಿಯಲ್ಸ್, ಖಾಸಗೀ ಮುಖಂಡರ ಸಹಕಾರ ಬೇಕು. ಈಗ ಪೋರ್ಟ್ ಟ್ರಸ್ಟ್, ಮಂಗಳೂರು ಇದ್ದ ಹಾಗೆ, ಮಾಡಬೇಕೆಂದು ಇದೆ. ಇದಕ್ಕೆ ತಕ್ಕ ಒಂದು ಮಸೂದೆ ತಯಾರು ಮಾಡಿ, ಸರ್ಕಾರಿ ಇಲಾಖೆಗಳ ಪರಿಶೀಲನೆಯಲ್ಲಿದೆ. ಅದು ಪೂರ್ತಿಯಾಗಿ ಆದ ಕೂಡಲೆ ಅದನ್ನು ಈ ಸಭೆಯ ಮುಂದೆ ಇಡಬೇಕೆಂಬ ಏರ್ಪಾಡು ಇದೆ. ಇನ್ನು ಶ್ರೀಮಾನ್ ಇದ್ದಿನಬ್ಬನವರು ಮಂಗಳೂರಿನಲ್ಲಿ ಬಂದರು ಪ್ರದೇಶದಲ್ಲಿರತಕ್ಕ 6 ಸಾವಿರ ಜನರಿಗೆ ಪಂಚಾಯಿತಿನಲ್ಲಾಗಲಿ, ತಾಲ್ಲೂಕು ಬೋರ್ಡು ಚುನಾವಣೆಯಲ್ಲಾಗಲಿ ಓಟು ಕೊಡುವ ಸೌಕರ್ಯ ಇಲ್ಲವೆಂದು ಹೇಳಿದ್ದಾರೆ. ಅದನ್ನು ಪರೀಕ್ಷೆ ಮಾಡಿ, ಅದಕ್ಕೆ ಏನು ಗಮನ ಕೊಡಬೇಕೋ, ಅದನ್ನು ಕೊಟ್ಟು, ಅವರಿಗೆ ಬೇರೆ ಯಾವುದಕ್ಕೆ ಸೇರಿಸಬೇಕು, ತಾಲ್ಲೂಕು ಬೋರ್ಡಿಗೋ, ಯಾವುದಕ್ಕೆಂದು ನೋಡಿ, ಅದನ್ನು ಮಾಡುತ್ತೇವೆ. ಶ್ರೀಮಾನ್ ಐತಾಳರು ನೆನ್ನೆಯ ದಿವಸ ಪಣಂಬೂರು ಬಂದರಿನ ಅಭಿವೃದ್ಧಿಗೆ ಸಂಬಂಧಪಟ್ಟ ಹಾಗೆ, ಅಲ್ಲಿನ ಜಮೀನುಗಳನ್ನು ಬಿಟ್ಟು ಬೇರೆ ಸೌಕರ್ಯ ಒದಗಿಸಿದ ಕಡೆ ಹೋದವರಿಗೆ ಸರಿಯಾದಂತಹ ಪರಿಹಾರ ಕೊಟ್ಟಿಲ್ಲವೆಂಬ ಆರೋಪಗಳನ್ನು ಮಾಡಿದ್ದಾರೆ. ಅವರಲ್ಲಿ ಅನೇಕರಿಗೆ ಪರಿಹಾರಗಳನ್ನು ಕೊಟ್ಟಿದೆ. ಇನ್ನು ಕೆಲವರಿಗೆ, ಅವರು ಸಕಾಲದಲ್ಲಿ ಅರ್ಜಿ ಹಾಕದಿರುವುದರಿಂದ, ಕಾಲ ಮುಗಿದ ಮೇಲೆ ಅರ್ಜಿ ಹಾಕಿದುದರಿಂದ ಹಾಗೆ ಆಗಿರಬಹುದು. ಅದನ್ನೂ ಕೂಡ ಸರ್ಕಾರ ದವರು ಪರಿಶೀಲನೆ ಮಾಡುತ್ತಿದ್ದಾರೆ. ಅದು ಆದ ಕೂಡಲೇ ತಕ್ಕ ಕಾರ್ಯಕ್ರಮವನ್ನು ತೆಗೆದು ಕೊಳ್ಳುತ್ತೇವೆ ಎಂದು ಹೇಳಿ, ಎರಡೂ ಬೇಡಿಕೆಗಳನ್ನು ಮಾನ್ಯ ಸದಸ್ಯರೆಲ್ಲರೂ ಒಮ್ಮತದಿಂದ ಒಪ್ಪಬೇಕೆಂದು ಪ್ರಾರ್ಥಿಸಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ವೀರೇಂದ್ರ ಪಾಟೀಲ್ (ಮುಖ್ಯಮಂತ್ರಿಯವರು).—ಸನ್ಮಾನ್ಯ ಸಭಾಧ್ಯಕ್ಷರೇ, ನೀರಾವರಿ ಮತ್ತು ವಿದ್ಯುಚ್ಛಕ್ತಿ, ಈ ಎರಡು ಖಾತೆಗಳಿಗೆ ಸಂಬಂಧಪಟ್ಟ ವಿಚಾರಗಳನ್ನು ಕೆಲವು ಮಾನ್ಯ ಸದಸ್ಯರು ವ್ಯಕ್ತಮಾಡಿದ್ದಾರೆ. ಎಲ್ಲಾ ಸದಸ್ಯರು ಮಾತನಾಡುವಾಗ ನೀರಾವರಿಯ ಮಹತ್ವ ಮತ್ತು ನೀರಾವರಿಗೆ ಹೆಚ್ಚಿನ ಹಣ ಒದಗಿಸಬೇಕೆಂಬುದನ್ನು ಒತ್ತಾಯ ಮಾಡಿ ಹೇಳಿದ್ದಾರೆ. ಆ ಮಾತುಗಳನ್ನು ನಾನು ಸ್ವಾಗತಿಸುತ್ತೇನೆ. ನೀರಾವರಿಯ ಸೌಕರ್ಯ ನಮ್ಮ ರಾಜ್ಯದಲ್ಲಿ ಹೆಚ್ಚಾಗದೆ, ನಮ್ಮ ರಾಜ್ಯದಲ್ಲಿ ನಾವು ಆಹಾರದಲ್ಲಿ ಸ್ವಾವಲಂಬಿಗಳಾಗುವುದಿಲ್ಲ ಮತ್ತು ಆರ್ಥಿಕ ಭದ್ರತೆ ಬರುವುದಿಲ್ಲ ಎಂಬುದನ್ನು ಸರ್ಕಾರ ಸಂಪೂರ್ಣವಾಗಿ ಮನಗಂಡಿದೆ. ಇವತ್ತು ನೀರಾವರಿಗೆ ಹೆಚ್ಚಿನ ಅನುಕೂಲವಾಗಬೇಕು, ಮತ್ತು ಕೃಷ್ಣಾ, ಕಾವೇರಿ ನದಿ ಪಕ್ಕದಲ್ಲಿರತಕ್ಕ ಪ್ರದೇಶ ಬೆಳವಣಿಗೆ ಆಗಬೇಕಾದರೆ, ಎರಡು ನದಿಗಳ ನೀರನ್ನು ಹೆಚ್ಚಿನ ಮಟ್ಟದಲ್ಲಿ ಉಪಯೋಗಿಸಬೇಕೆಂದು ಶ್ರೀಮಾನ್ ನಂಜೇಗೌಡರು ಒಂದು ಮೋಷನನ್ನು ಕಳಿಸಿದ್ದಾರೆ. ಮೂವತ್ತು ಕೋಟಿ ರೂಪಾಯಿ ಈ ವರ್ಷ ಅದಕ್ಕೆ ಖರ್ಚು ಮಾಡಬೇಕು, 20 ಕೋಟಿ ರೂಪಾಯಿ ಕೃಷ್ಣ ಬೇಸಿನಲ್ಲಿರತಕ್ಕ ನೀರಾವರಿ ಯೋಜನೆಗಳಿಗೆ, 10 ಕೋಟಿ ಕಾವೇರಿ ಬೇಸಿನಲ್ಲಿರತಕ್ಕ ನೀರಾವರಿ ಯೋಜನೆಗಳಿಗೆ; ಎಂದು. ಅದನ್ನು ನಾನು ತತ್ವಶಃ ಸ್ವಾಗತಿಸುತ್ತೇನೆ. ಹೆಚ್ಚಿನ ಪ್ರಾಶಸ್ತ್ಯ ಕೊಟ್ಟು, ಹೆಚ್ಚಿಗೆ ಹಣ ಒದಗಿಸತಕ್ಕಂತದ್ದು ಸರ್ಕಾರದ ಮನಸ್ಸು ಮತ್ತು ಸರ್ಕಾರದ ನೀತಿಯಾಗಿದೆ. ಆದರೆ, ಅವರೇ ಪ್ರಥಮದಲ್ಲಿ ಹೇಳಿದ ಹಾಗೆ ಇವತ್ತಿನ ದಿವಸ 30 ಕೋಟಿ ರೂಪಾಯಿ ಒದಗಿಸುತ್ತೇವೆಂದು ಹೇಳುವುದು ಕಷ್ಟವಾಗುತ್ತದೆ. ಎಷ್ಟು ಈಗ ಒದಗಿಸುವುದಕ್ಕೆ ಸಾಧ್ಯವಾಗುತ್ತದೆ ಎಂಬುದಕ್ಕೆ ಎರಡು ವಿಧಾನವಿದೆ. ಒಂದು ವಿಧಾನ, ಎಲ್ಲಾ ಇಲಾಖೆಗಳಲ್ಲೂ ಇರತಕ್ಕಂತಹ ಕಾರ್ಯಕ್ರಮಗಳನ್ನು ಎಷ್ಟು ಮಟ್ಟಿಗೆ ಮೊಟಕು ಮಾಡಿ, ಹಣವನ್ನು ಉಳಿತಾಯ ಮಾಡಿ, ಈ ಬಾಬಿಗೆ ಒದಗಿಸಬಹುದು ಎಂಬ ವಿಚಾರ. ಇದಕ್ಕೆ ಎಲ್ಲಾ ಇಲಾಖೆಯ ಅಧಿಕಾರಿಗಳ ಜೊತೆಯಲ್ಲಿ, ಮಂತ್ರಿಗಳ ಜೊತೆಯಲ್ಲಿ ಚರ್ಚೆ ಮಾಡಿ, ಅವರು ಎಷ್ಟೆಷ್ಟು ಉಳಿತಾಯ ತೋರಿಸುತ್ತಾರೆ ಎಂದು ತಿಳಿದುಕೊಂಡು, ಅದನ್ನು ನೀರಾವರಿ ಸಲುವಾಗಿ ಒದಗಿಸಬೇಕು ಎನ್ನುವುದು. ಎರಡನೆಯ ವಿಧಾನ—ನಮ್ಮ ಸಂಪನ್ಮೂಲಗಳನ್ನು ಹೆಚ್ಚು ಮಾಡಿಕೊಂಡು ಈ ದುಡ್ಡನ್ನು ಪೂರ್ತಿಯಾಗಿ ನೀರಾವರಿ ಯೋಜನೆಗಳಿಗೆ ಹಾಕತಕ್ಕದ್ದು. ಸಂಪನ್ಮೂಲಗಳನ್ನು ಹೆಚ್ಚು ಮಾಡಬೇಕೆಂಬ ಉದ್ದೇಶದಿಂದ ಈಗಾಗಲೇ ಅನೇಕ ವಿರೋಧಪಕ್ಷದ ನಾಯಕರನ್ನು ಒಳಗೊಂಡು ಒಂದು ಸಮಿತಿಯನ್ನು ನೇಮಕ ಮಾಡಿದ್ದೇವೆ. ಆರ್ಥಿಕ ಮಂತ್ರಿಯವರು ಅದಕ್ಕೆ ಕನ್‌ವೀನರ್ ಆಗಿದ್ದಾರೆ. ಬಹುಶಃ ಅವರು ಒಂದೆರಡು ಸಲ ಸೇರಿರಬಹುದು. ಅವರು ಈ ಬಗ್ಗೆ ವಿಚಾರ ಮಾಡಿ, ಸಲಹೆ ಕೊಟ್ಟಾಗ ಮುಂದೆ ಅದನ್ನು ವಿಚಾರ ಮಾಡುತ್ತೇವೆ. ಅದೇ ರೀತಿ ಇವತ್ತು 30 ಕೋಟಿ ರೂಪಾಯಿಗಳನ್ನು ನೀರಾವರಿ ಯೋಜನೆಗಳಿಗೆ ಒದಗಿಸುತ್ತೇವೆ ಎಂದು ನಿರ್ದಿಷ್ಟವಾಗಿ ಹೇಳುವುದಕ್ಕೆ ಸಾಧ್ಯವಿಲ್ಲ. ಆದರಿಂದ ನಂಜೇಗೌಡರಲ್ಲಿ ವಿನಂತಿ ಮಾಡಿಕೊಳ್ಳುವುದು ಇಷ್ಟೆ. ಈ ಒಂದು ಮೋಷನಿನ ಹಿಂದಿರುವಂತಹ ಸ್ಪಿರಿಟ್ ಏನಿದೆ, ಅದನ್ನು ನಾನು ತತ್ವಶಃ ಒಪ್ಪಿ, ಎಷ್ಟು ಮಟ್ಟಿಗೆ ಸಾಧ್ಯವಾಗುತ್ತದೆ, ಅಷ್ಟು ಹಣವನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಈ ಸಂದರ್ಭದಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಅದರ ಪ್ರಕಾರ ಅವರ ಮೋಷನನ್ನು ಒತ್ತಾಯಪಡಿಸಲಿಕ್ಕಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ.

ಅಲ್ಲಿಂದ ಅನೇಕ ಮಾನ್ಯ ಸದಸ್ಯರು ಕೃಷ್ಣಾ, ಗೋದಾವರಿ ದಂಡೆಯ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಅದು ಈಗಾಗಲೇ ಎಲ್ಲರಿಗೂ ಗೊತ್ತಿದೆ. ಕೃಷ್ಣಾ ನದಿ, ಗೋದಾವರಿ ನದಿ ನೀರಿನ ಭಾಗ ನಮಗೆ ಸಿಗಬೇಕು ಮತ್ತು ಆರ್ಬಿಟ್ರೇಶನಿಗೆ ಹೋಗಬೇಕು ಎನ್ನತಕ್ಕಂತದ್ದನ್ನು ಹೇಳಿದ್ದೇನೆ. ಕೇಂದ್ರ ಸರ್ಕಾರದವರು ಆರ್ಬಿಟ್ರೇಶನಿಗೆ ರೆಫರ್ ಮಾಡುವುದಕ್ಕೆ ತಯಾರಾಗಿದ್ದಾರೆಂದು ಹೇಳಿದ್ದಾರೆ. ಆದರೆ ಒಂದು ಆರ್ಬಿಟ್ರೇಶನ್ ಇರಬೇಕೋ, ಎರಡು ಟ್ರಿಬ್ಯೂನಲ್ ಇರಬೇಕೋ ಎನ್ನತಕ್ಕಂತಹ ವಿಚಾರ ಬಂದಿರುವುದರಿಂದ, ನಾವು ಈಗಾಗಲೇ ಕೇಂದ್ರ ಸರ್ಕಾರಕ್ಕೆ ಪತ್ರವನ್ನು ಬರೆದಿದ್ದೇವೆ. ಇವು ಎರಡೂ ಒಂದೇ ಸಮಸ್ಯೆ ಎಂದು ಪರಿಗಣಿಸುವುದರಿಂದ ಅದಕ್ಕೆ ಒಂದೇ ಟ್ರಿಬ್ಯೂನಲ್ ಅವಶ್ಯವೆಂದು ಒತ್ತಾಯಪೂರ್ವಕವಾಗಿ ಹೇಳಿದ್ದೇವೆ. ಆದರೆ ಕೇಂದ್ರ ಸರ್ಕಾರದಿಂದ ನಮಗೆ ಯಾವುದೂ, ನಾವು ಕಳಿಸಿದಂತಹ ಪತ್ರಕ್ಕೆ ಉತ್ತರ ಬಂದಿಲ್ಲ. ಮೊನ್ನೆ ಪಾರ್ಲಿಮೆಂಟಿನಲ್ಲಿ ಕೇಂದ್ರದ ನೀರಾವರಿ ಮಂತ್ರಿಯವರು ಮಾತನಾಡುತ್ತಾ ಎರಡು ಟ್ರಿಬ್ಯೂನಲ್ ಮಾಡಬೇಕೆಂದು, ಅಲ್ಲಿನ ಲಾ ಮಂತ್ರಿಯವರು ಅಭಿಪ್ರಾಯಪಟ್ಟಿದ್ದಾರೆಂದು ಹೇಳಿದ್ದಾರೆ. ಅದರ ಬಗ್ಗೆ ಖಚಿತವಾದ, ಲಿಖಿತವಾಗಿ ಏನೂ ನಮಗೆ ಬರಲಿಲ್ಲ. ಆದ್ದರಿಂದ ಅದನ್ನು ಏನೂ ಹೇಳುವುದಕ್ಕಾಗುವುದಿಲ್ಲ. ನಮ್ಮಲ್ಲೂ ಕೂಡ ಲಾ ಸೆಕ್ರಟರಿಯವರಿಗೆ, ಅಡ್ವಕೇಟ್ ಜನರಲ್ ರವರಿಗೆ ಈ ಬಗ್ಗೆ ಪರಿಶೀಲನೆ ಮಾಡಿ ಎರಡು ಟ್ರಿಬ್ಯೂನಲ್ ಅವಶ್ಯ ಇದೆಯೇ, ಕಾನೂನು ಪ್ರಕಾರ ಒಂದು ಟ್ರಿಬ್ಯೂನಲ್ ಸಾಧ್ಯವಿದೆಯೇ ಎಂಬುದನ್ನು ನೋಡಿರಿ ಎಂದು ಹೇಳಿದ್ದೇನೆ. ಅದರ ಬಗ್ಗೆ ಅವರೂ ಕೂಡ ಪರಿಶೀಲನೆ ಮಾಡುತ್ತಿದ್ದಾರೆ. ನಂತರ ಯಾವ ರೀತಿ ಸಲಹೆ ಕೊಡುತ್ತಾರೆ, ಹಾಗೆ ಮುಂದಿನ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್. ಶಿವಪ್ಪ.—ಅವರು ಪಾರ್ಲಿಮೆಂಟಿನಲ್ಲಿ ಹೇಳಿದ್ದಾರೆ.

ಶ್ರೀ ವೀರೇಂದ್ರ ಪಾಟೀಲ್.—ಆದರೆ ಕೇಂದ್ರ ಸರ್ಕಾರದವರು ಇದುವರೆಗೂ ನಮಗೆ ಉತ್ತರ ಕೊಟ್ಟಿಲ್ಲ. ಅವರ ನಿಲುವು ಏನು, ಏಕೆ ಹಾಗೆ ವಿಚಾರ ಮಾಡಿದ್ದಾರೆ, ನಿರ್ಣಯ ಮಾಡಿದ್ದಾರೆ ಎಂದು ನಮಗೆ ಯಾವುದೂ ಅಂತಿಮವಾಗಿ ಬಂದಿಲ್ಲ. ಈ ಮಧ್ಯೆ, ಲಾ ಸೆಕ್ರೆಟರಿಯವರು, ಅಡ್ವೊಕೇಟ್ ಜನರಲರವರು, ಮತ್ತು ನಮ್ಮ ಇಲಾಖೆಯ ಇಂಜಿನಿಯರುಗಳು ವಿಚಾರ ಮಾಡುತ್ತಿದ್ದಾರೆ. ಏಕೆ ಎರಡು ಟ್ರಿಬ್ಯೂನಲ್ ಮಾಡಬೇಕೆಂದು ಹೇಳುತ್ತಿದ್ದಾರೆ, ಕಾನೂನು ಪ್ರಕಾರ ಅದರ ಅವಶ್ಯಕತೆ ಇದೆಯೇ. ಅಥವಾ ಅವಶ್ಯಕತೆ ಇಲ್ಲದಿದ್ದರೆ ಏಕೆ ಮಾಡುತ್ತಾರೆ ಎಂಬುದನ್ನೆಲ್ಲಾ ನಾವು ಪರಿಶೀಲನೆ ಮಾಡುತ್ತಿದ್ದೇವೆ ಎಂದು ಹೇಳಿದೆ. ಮಧ್ಯದಲ್ಲಿ ಟ್ರಿಬ್ಯೂನಲ್ ಮಾಡುವಂತಹ ಒಂದು ಸಮಸ್ಯೆಯನ್ನು ಸ್ವಲ್ಪ ಮಟ್ಟಿಗೆ ಮುಂದೆ ಹಾಕಿದ್ದಾರೆಂದು ಹೇಳುವ ವಿಚಾರ ಮೊನ್ನೆ ಪತ್ರಿಕೆಯಲ್ಲಿ ಬಂದಿದೆ. ಅಧರ ಬಗ್ಗೆ ನಮಗೆ ಏನೂ ಬಂದಿಲ್ಲ. ಇನ್ನು ಕೊನೆಯ ಪ್ರಯತ್ನದಲ್ಲಿ ಫೈಲ್ ಆದರೆ, ಆರ್ಬಿಟ್ರೇಶನ್ ಮಾಡಬೇಕೆನ್ನುವ ವಿಚಾರ ಇಟ್ಟುಕೊಂಡಿದ್ದಾರೆ ಎಂದು ನಾನು ಕೇಳಿದ್ದೇನೆ. ಇನ್ನು ಕೊನೆಯ ಪ್ರಯತ್ನ ಅಂದರೆ, ಮತ್ತೆ ಏನಾದರೂ ಫ್ರೆಶ್ ಪ್ರೊಪೋಸಲ್ಸ್ ಇಡುತ್ತಾರೋ ಏನೋ ಎಂದು ಗೊತ್ತಿಲ್ಲ. ಬಹುಶಃ ಎಲ್ಲಾ ಮುಖ್ಯಮಂತ್ರಿಯವರನ್ನು ಕರೆದು ಮಾತನಾಡಬಹುದೆಂದು ನನಗನಿಸುತ್ತದೆ. ಈ ರೀತಿ ಮಾತನಾಡಿದರೆ, ಆ ರೀತಿ ಏನಾದರೂ ಪ್ರೊಪೋಸಲ್ಸ್ ಬಂದರೆ ನಮ್ಮ ರಾಜ್ಯದ ಹಿತದೃಷ್ಟಿಯಿಂದ ಎಷ್ಟು ಮಟ್ಟಿಗೆ ಅಂಥ ಪ್ರೊಪೋಸಲ್ಸನ್ನು ಒಪ್ಪಿಕೊಳ್ಳುವುದಕ್ಕೆ ಸಾಧ್ಯ ಎಂಬುದನ್ನು ವಿಚಾರ ಮಾಡಿ ನಾವು ಮುಂದೆ ಹೆಜ್ಜೆ ಇಡುತ್ತೇವೆ.

ಆ ಬಗ್ಗೆ ಯಾವುದೇ ರೀತಿಯಿಂದ ನಮ್ಮ ರಾಜ್ಯದ ಹಿತಕ್ಕೆ ಧಕ್ಕೆ ಬಾರದಂತೆ ನಾವು ನೋಡಿಕೊಳ್ಳುತ್ತೇವೆ ಎನ್ನುವ ವಿಚಾರವನ್ನು ನಾನು ಈ ಸಂದರ್ಭದಲ್ಲಿ ಸ್ಪಷ್ಟಪಡಿಸುತ್ತೇನೆ.

ಅನೇಕ ಮಾನ್ಯ ಸದಸ್ಯರು ಅಪ್ಪರ್ ಕೃಷ್ಣಾ ಪ್ರಾಜೆಕ್ಟಿನ ಕೆಲಸವನ್ನು ತೆಗೆದುಕೊಳ್ಳಬೇಕು ಎಂದು ಬಹಳ ರೀತಿಯಿಂದ ಆಗ್ರಹ ಪೂರ್ವಕವಾಗಿ ಹೇಳಿದ್ದಾರೆ. ಅವರ ಆತುರತೆಯನ್ನು ನಾನು ಒಪ್ಪಿಕೊಳ್ಳುತ್ತೇನೆ. ಈ ವಿಚಾರವನ್ನು ಅನೇಕ ದಿವಸಗಳಿಂದ ಹೇಳಿಕೊಂಡು ಬರುತ್ತಿದ್ದಾರೆ. ಇದಕ್ಕೆ ಇಲ್ಲಿಯವರೆಗೂ ಹೆಚ್ಚಿನ ಮಟ್ಟದಲ್ಲಿ ಏನೂ ಕೆಲಸ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಅದಕ್ಕಾಗಿ ಈಗಾಗಲೇ ಅಲ್ಲಿ ಅರ್ತ್-ವರ್ಕ್ ಪ್ರಾರಂಭ ಮಾಡಿದ್ದೇವೆ. ಇದಕ್ಕೆ ಮೇಸನರಿ ಡ್ಯಾಮ್ ಕಟ್ಟಲು ಟೆಂಡರು ಬಂದಿದೆ. ಈ ಟೆಂಡರು ಬಗ್ಗೆ ಚೀಫ್ ಇಂಜಿನಿಯರಿಂದ ಶಿಫಾರಸ್ಸು ಬಂದಮೇಲೆ ಅದನ್ನು ಟೆಕ್ನಿಕಲ್ ಸಬ್ ಕಮಿಟಿಯವರು ಪರಿಶೀಲನೆ ಮಾಡಿದಮೇಲೆ ಆ ಬಗ್ಗೆ ಒಂದು ನಿರ್ಧಾರವನ್ನು ತೆಗೆದುಕೊಳ್ಳಬೇಕಾಗುತ್ತದೆ. ಈ ವರ್ಷ ಈ ಕೃಷ್ಣಾ ಮೇಲ್ದಂಡೆಯ ಯೋಜನೆಗೆ 2 ಕೋಟಿ ರೂಪಾಯಿಗಳನ್ನು ಒದಗಿಸಿದೆ. ಒಂದುವೇಳೆ ಅದಕ್ಕೆ ಹೆಚ್ಚಿನ ಹಣದ ಅವಶ್ಯಕತೆ ಬಂದರೆ ಅದನ್ನು ಒದಗಿಸುವುದಕ್ಕೆ ಏನಾದರೂ ಪ್ರಯತ್ನ ಮಾಡಬೇಕಾಗುತ್ತದೆ ಎನ್ನುವ ವಿಚಾರವನ್ನು ನಾವು ಇಟ್ಟುಕೊಂಡಿದ್ದೇವೆ. ನಾನು ಇಷ್ಟು ಮಾತ್ರ ಹೇಳುತ್ತೇನೆ, ಈ ಕೆಲಸವನ್ನು ನಿಲ್ಲಿಸುವುದಿಲ್ಲ. ಮುಂದೆ ನಡೆಯುತ್ತದೆ. ಈ ಅಪ್ಪರ್ ಕೃಷ್ಣಾ ಪ್ರಾಜೆಕ್ಟು ಬಹಳ ದೊಡ್ಡ ಪ್ರಾಜೆಕ್ಟು ಸುಮಾರು 140 ಕೋಟಿ ರೂಪಾಯಿಗಳು ಖರ್ಚಾಗುವಂತಹ ಒಂದು ಪ್ರಾಜೆಕ್ಟ್. ಅದಕ್ಕಾಗಿ ನಾವು ಸಜೆಸ್ಟ್ ಮಾಡಿದ್ದೇವೆ, ಮೊದಲನೇ ಸ್ಟೇಜಿನಲ್ಲಿ ಈ ಯೋಜನೆಗೆ 70—75 ಕೋಟಿ ರೂಪಾಯಿಗಳು ಖರ್ಚಾಗುತ್ತದೆ, ಅದರಿಂದ ಲಕ್ಷಾಂತರ ಎಕರೆಗೆ ನೀರು ಸಿಕ್ಕುತ್ತದೆ. ಆದರೆ ಈ ಯೋಜನೆಗೆ ಇಷ್ಟೊಂದು ಹಣವನ್ನು ಈಗ ನಾವು ಒದಗಿಸುವುದಕ್ಕೆ ಸಾಧ್ಯವಾಗುವುದಿಲ್ಲ, ಅದರ ಸಲುವಾಗಿ ಯಾವುದಾದರೂ ಒಂದು ಏಜೆನ್ಸಿ ಮುಖಾಂತರ ಹಣವನ್ನು ಒದಗಿಸಿಕೊಳ್ಳಬೇಕು ಎಂದು ನಾವು ಸರ್ವಪ್ರಯತ್ನ ಮಾಡುತ್ತಿದ್ದೇವೆ. ಕೇಂದ್ರ ಸರ್ಕಾರದಿಂದ ಇದಕ್ಕೆ ಪ್ರತ್ಯೇಕವಾಗಿ ಧನಸಹಾಯ ಮಾಡಬೇಕೆಂದು ನಾವು ಪದೇ ಪದೇ ಕೇಳಿದ್ದೇವೆ, ಇತ್ತೀಚೆಗೆ ಐ. ಡಿ. ಎ. ಏಜೆನ್ಸಿ ಮುಖಾಂತರ ಹಣವನ್ನು ಒದಗಿಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆಯೇ ಎಂಬುದನ್ನು ಪರಿಶೀಲನೆ ಮಾಡುತ್ತಿದ್ದೇವೆ. ಈಗ ತಕ್ಷಣ ನಮ್ಮಲ್ಲಿರುವ ಪ್ರಾಜೆಕ್ಟ್ ರಿಪೋರ್ಟನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿ ಐ. ಡಿ. ಎ. ಏಜೆನ್ಸಿಯಿಂದ ಹಣ ಸಹಾಯವನ್ನು ಪಡೆಯುವುದಕ್ಕೆ ನಾವು ಪ್ರಯತ್ನ ಮಾಡುತ್ತಿದ್ದೇವೆ. ಐ. ಡಿ. ಎ. ಏಜೆನ್ಸಿಯ ಅಧ್ಯಕ್ಷರು ಮತ್ತು ಎಕ್ಸ್‌ಪರ್ಟ್‌ಗಳು ಸಹ ಇಲ್ಲಿಗೆ ಬಂದು ಕಮ್ಯಾಂಡ್ ಏರಿಯಾ ಪರಿಸ್ಥಿತಿ ಏನಿದೆ ಅದರಿಂದ ನೀರಾವರಿ ಆದರೆ ಯಾವ ಯಾವ ಪ್ರದೇಶಕ್ಕೆ ನೀರಾವರಿ ಸೌಕರ್ಯ ದೊರೆಯುತ್ತದೆ, ಎನ್ನತಕ್ಕ ವಿಚಾರವೆಲ್ಲವನ್ನೂ ಅವರು ನೋಡಿಕೊಂಡು ಹೋಗಿದ್ದಾರೆ. ಕೇಂದ್ರ ಸರ್ಕಾರದವರ ಮುಖಾಂತರ ಐ. ಡಿ. ಎ. ಏಜೆನ್ಸಿಯವರಿಂದ ಈ ಯೋಜನೆಗೆ ಧನಸಹಾಯ ಪಡೆಯಬೇಕೆಂದು ನಾವು ಪ್ರಯತ್ನಮಾಡುತ್ತಿದ್ದೇವೆ ಒಂದು ವೇಳೆ ಸುದೈವದಿಂದ ಐ. ಡಿ. ಎ. ಅವರು ಧನಸಹಾಯವನ್ನು ಮಾಡುವುದಕ್ಕೆ ಒಪ್ಪಿಕೊಂಡರೆ ಈ ಕೆಲಸ ಬಹಳ ವೇಗವಾಗಿ ನಡೆಯುತ್ತದೆ ಎಂದು ನಾನು ಕಳಕಳಿಯಿಂದ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಅದೇ ರೀತಿ ಕಾವೇರಿ ಬೇಸಿನ್‌ನಲ್ಲಿ ಈಗಾಗಲೇ ಹೇಮಾವತಿ, ಕಪಿನಿ, ಈ ಪ್ರಾಜೆಕ್ಟುಗಳ ಸಣ್ಣಪುಟ್ಟ ಕೆಲಸಗಳು ನಡೆಯುತ್ತಿವೆ. ಆದರೆ ಹಾರಂಗಿ ಪ್ರಾಜೆಕ್ಟಿನ ಕೆಲಸವನ್ನು ಇನ್ನೂ ಪ್ರಾರಂಭ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಪ್ರಿಲಿಮಿನರಿ ವರ್ಕ್ ಸ್ವಲ್ಪಮಟ್ಟಿಗೆ ಮಾಡುವುದಕ್ಕೆ ಪ್ರಯತ್ನ ಮಾಡಿದ್ದಾರೆ. ನಿಜವಾಗಿಯೂ ಅಲ್ಲಿ ಕೆಲಸಗಳು ನಡೆಯುತ್ತವೆ ಎಂದು ಹೇಳುವಂತಹ ಪರಿಸ್ಥಿತಿಯಲ್ಲಿ ಇಲ್ಲ. ಅದಕ್ಕೆ ಕಾರಣವನ್ನು ನಾನು ಅನೇಕಸಾರಿ ಹೇಳಿದ್ದೇನೆ. ಅದಕ್ಕೆ ಹಣದ ಮುಗ್ಗಟ್ಟು ಕಾರಣ. ಆ ಪ್ರಾಜೆಕ್ಟಿಗೆ ಟೆಕ್ನಿಕಲ್ ಕ್ಲಿಯರೆನ್ಸ್ ಬಂದಿಲ್ಲ ಎಂದು ಆ ಕೆಲಸಗಳು ನಿಲ್ಲಲಿಲ್ಲ. ಕಪಿನಿ ಹಾರಂಗಿ ಹೇಮಾವತಿ ಈ ಯೋಜನೆಗಳಿಗೆ ಟೆಕ್ನಿಕಲ್ ಕ್ಲಿಯರೆನ್ಸ್ ಬಂದಿಲ್ಲ. ಅದು ಬಾರದಿದ್ದರೂ ನಾವು ಕೆಲಸವನ್ನು ಮುಂದುವರಿಸಿಕೊಂಡು ಹೋಗುತ್ತಿದ್ದೇವೆ. ಆ ಪ್ರಾಜೆಕ್ಟುಗಳಿಗೆ ಹೆಚ್ಚಿನ ಹಣವನ್ನು ಒದಗಿಸುವ ವಿಚಾರ ಇದೆ. ಆದ್ದರಿಂದ ಇದಕ್ಕೆ ಯಾವರೀತಿ ಹಣವನ್ನು ಒದಗಿಸಬೇಕು ಎನ್ನುವುದನ್ನು ನಾವು ವಿಚಾರ ಮಾಡುತ್ತಿದ್ದೇವೆ. ಇದಕ್ಕೆ ವಿರೋಧಪಕ್ಷದ ನಾಯಕರೂ ಸಹ ಸಹಕರಿಸುತ್ತೇವೆಂದು ಭರವಸೆಯನ್ನು ಕೊಟ್ಟಿದ್ದಾರೆ. ಹೇಮಾವತಿ ಯೋಜನೆಗೆ ಟೆಕ್ನಿಕಲ್ ಕ್ಲಿಯರೆನ್ಸ್ ಕೊಟ್ಟಿಲ್ಲ ಎನ್ನುವ ಬಗ್ಗೆ ಮಾನ್ಯ ಸದಸ್ಯರಿಗೆ ಅಸಮಾಧಾನ ಇದೆ. ಈ ವಿಚಾರವನ್ನು ಕೆಲವು ಮಾನ್ಯ ಸದಸ್ಯರು ಅವರ ಭಾಷಣದಲ್ಲಿ ವ್ಯಕ್ತಮಾಡಿದ್ದಾರೆ. ಇದಕ್ಕಾಗಿ ಕೇಂದ್ರ ಸರ್ಕಾರದ ಮಂತ್ರಿಗಳಾದ ಶ್ರೀಮಾನ್ ಕೆ. ಎಲ್. ರಾವ್ ಅವರ ಹೆಸರನ್ನು ಪ್ರಸ್ತಾಪ ಮಾಡಬೇಕಾದಂತಹ ಅವಶ್ಯಕತೆ ಇರಲಿಲ್ಲ. ಅದಕ್ಕೆ ವ್ಯಕ್ತಿ ಮುಖ್ಯವಲ್ಲ. ಕೇಂದ್ರ ಸರ್ಕಾರದವರು ಈ ಹೇಮಾವತಿ ಯೋಜನೆಗೆ ಟೆಕ್ನಿಕಲ್ ಕ್ಲಿಯರೆನ್ಸ್ ಕೊಡಬೇಕಾದ್ದನ್ನು ಕೊಟ್ಟಿಲ್ಲ. ಇದು ಸತ್ಯದ ಮಾತು ಇದೆ. ನಾನು ಅನೇಕಸಾರಿ ಈ ಸಭೆಯಲ್ಲಿ ಮಾನ್ಯ ಸದಸ್ಯರಿಗೆ ಹೇಳಿದ್ದೇನೆ. ಮದ್ರಾಸ್ ಸರ್ಕಾರದವರಿಗೆ ಯಾವರೀತಿ ಸರಿಯಾಗುತ್ತದೆಯೋ ಆ ರೀತಿ ನಾವು ಒಪ್ಪಿಕೊಂಡರೆ ಟೆಕ್ನಿಕಲ್ ಕ್ಲಿಯರೆನ್ಸ್ ಕೊಡುತ್ತಾರೆ ಎನ್ನುವ ರೀತಿಯಲ್ಲಿ ಪತ್ರವ್ಯವಹಾರ ಮಾಡುತ್ತಿದ್ದಾರೆ ಎಂದು ಕಾಣುತ್ತದೆ. ಅದಕ್ಕಾಗಿ ನಾವು ಕೈ ಕಟ್ಟಿ ಕುಳಿತುಕೊಳ್ಳುವುದಿಲ್ಲ. ಟೆಕ್ನಿಕಲ್ ಕ್ಲಿಯರೆನ್ಸ್ ಪಡೆಯಬೇಕು ಎಂದು ನಾವು ಪ್ರಯತ್ನ ಮಾಡುತ್ತಿದ್ದೇವೆ. ಬಹುಶಃ ಇದು ನಿಧಾನವಾಗುತ್ತದೆ ಎಂದು ನಾವು ಕೆಲಸವನ್ನು ನಿಲ್ಲಿಸುವುದಿಲ್ಲ. ನಮ್ಮ ಹಿತಕ್ಕೆ ಧಕ್ಕೆ ಬಾರದಂತೆ ನಾವು ನೋಡಿಕೊಳ್ಳಬೇಕಾಗುತ್ತದೆ. ಆದ್ದರಿಂದ ನಾವು ನಮ್ಮ ಪ್ರಯತ್ನವನ್ನು ಮುಂದುವರಿಸಿಕೊಂಡು ಹೋಗುತ್ತೇವೆ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ರೈತರಿಂದ ನೀರಾವರಿ ಯೋಜನೆಗಳಿಗೆ ಅಡ್ವಾನ್ಸ್ ಕಾಂಟ್ರಿಬ್ಯೂಷನ್ ವಸೂಲುಮಾಡುವ ಬಗ್ಗೆ ನಾನು ಹೇಳಿದ್ದೇನೆ. ಈ ಅಡ್ವಾನ್ಸ್ ಕಾಂಟ್ರಿಬ್ಯೂಷನ್ ವಸೂಲು ಮಾಡಬೇಕಾದರೆ ಇರಿಗೇಷನ್ ಲೆವಿ, ಬೆಟರ್‌ಮೆಂಟ್ ಲೆವಿ ಆಕ್ಟನ್ನು ತಿದ್ದುಪಡಿ ಮಾಡಬೇಕಾಗುತ್ತದೆ. ಅದಕ್ಕೆ ಸಂಬಂಧಪಟ್ಟಂಥ ಒಂದು ಬಿಲ್ ಇಂಟ್ರೊಡ್ಯೂಸ್ ಆಗಿ ಈ ಸಭೆಯಲ್ಲಿ ಪಾಸಾದರೆ ನೀರಾವರಿ ಯೋಜನೆಗಳಿಗೆ ರೈತರಿಂದ ಅಡ್ವಾನ್ಸ್ ಕಾಂಟ್ರಿಬ್ಯೂಷನ್ ವಸೂಲು ಮಾಡುವುದಕ್ಕೆ ಸರ್ಕಾರಕ್ಕೆ ಅಧಿಕಾರ ಬರುತ್ತದೆ. ಈಗ ನಾವು ಅಡ್ವಾನ್ಸ್ ಕಾಂಟ್ರಿಬ್ಯೂಷನ್ ವಸೂಲು ಮಾಡುವುದಕ್ಕೆ ಅಧಿಕಾರವಿಲ್ಲ. ಬಿಲ್ ಪಾಸಾದಮೇಲೆ ಆ ಅಧಿಕಾರ ಬರುತ್ತದೆ. ಆದ್ದರಿಂದ ಮುಂದೆ ಈ ಸಭೆಯಲ್ಲಿ ಅಂಥಾ ಒಂದು ಬಿಲ್ಲನ್ನು ತಂದಾಗ ಮಾನ್ಯ ಸದಸ್ಯರೆಲ್ಲರೂ ಅದನ್ನು ಒಪ್ಪಿ ಪಾಸು ಮಾಡಿದರೆ ಆ ಬಗ್ಗೆ ಮುಂದಿನ ಕಾರ್ಯಕ್ರಮ ತೆಗೆದುಕೊಳ್ಳಬಹುದು ಎನ್ನುವ ವಿಚಾರ ಇದೆ.

ಹೋದ ಸಲ ಜನರಲ್ ಡಿಸ್‌ಕಷನ್ ನಡೆದಂತಹ ಸಂದರ್ಭದಲ್ಲಿ ಈ ಯೋಜನೆಗಳಿಗೆ ಸಂಬಂಧಪಟ್ಟ ಹಾಗೆ ರಿವರ್ ವ್ಯಾಲಿ ಕಾರ್ಪೊರೇಷನ್ ರಚನೆ ಮಾಡುವ ಪ್ರಶ್ನೆ ಬಂದಿತ್ತು. ಅದಕ್ಕಾಗಿ ನಾನು ಹೇಳುವುದೇನೆಂದರೆ ಕಾವೇರಿ ಡೆವಲಪ್‌ಮೆಂಟ್ ಕಾರ್ಪೊರೇಷನ್, ಮತ್ತು ಕೃಷ್ಣಾವ್ಯಾಲಿ ಡೆವಲಪ್‌ಮೆಂಟ್ ಕಾರ್ಪೊರೇಷನ್ ಎಂದು ಎರಡು ಕಾರ್ಪೊರೇಷನ್‌ಗಳನ್ನು ರಚನೆ ಮಾಡಿದರೆ ಎರಡು ವ್ಯಾಲಿಗಳ ಪ್ರಾಜೆಕ್ಟ್ ಕಟ್ಟಡಗಳನ್ನು ಈ ಕಾರ್ಪೊರೇಷನ್ನಿಗೆ ಟ್ರಾನ್ಸ್‌ಫರ್ ಮಾಡುವುದು ಸಾಧ್ಯವಾಗುತ್ತದೆ. ಆ ರೀತಿ ಟ್ರಾನ್ಸ್‌ಫರ್ ಮಾಡಿದಾಗ ಅಸೆಟ್ಸ್ ಬಿಲ್ಡಪ್ ಮಾಡಿದಂತಾಗುತ್ತದೆ ನಮ್ಮಲ್ಲಿ ಮೀಡಿಯಂ ಮತ್ತು ಮೇಜರ್ ನೀರಾವರಿ ಯೋಜನೆಗಳಿಗೆ ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಎಷ್ಟು ಹಣವನ್ನು ಖರ್ಚು ಮಾಡಬೇಕೆಂದು ಇರುತ್ತದೆಯೋ ಅದನ್ನು ಈ ಕಾರ್ಪೊರೇಷನ್ನಿಗೆ ವರ್ಗಾಯಿಸಬಹುದು. ಮತ್ತು ಡಿಬೆಂಚರ್ ಸಾಲ, ಎಲ್. ಐ ಸಿ. ಸಾಲ ಇವುಗಳನ್ನು ಪಡೆದು ಈ ಯೋಜನೆಗಳ ಕೆಲಸಕಾರ್ಯಗಳನ್ನು ಸಾಗಿಸುವುದಕ್ಕೆ ಸಾಧ್ಯವಾಗುತ್ತದೆ ಎನ್ನುವ ವಿಚಾರವನ್ನು ಡೀಟೈಲಾಗಿ ವರ್ಕ್‌ಔಟ್ ಮಾಡಿದಮೇಲೆ ಇದಕ್ಕೆ ಒಂದು ಮಸೂದೆಯನ್ನು ತಯಾರು ಮಾಡಿ ಈ ಸಭೆಯಮುಂದೆ ತರಬೇಕೆಂಬ ವಿಚಾರವನ್ನು ಇಟ್ಟುಕೊಂಡಿದ್ದೇವೆ. ಇದನ್ನು ವಿರೋಧ ಪಕ್ಷದ ನಾಯಕರು ಮತ್ತು ಇತರ ಮಾನ್ಯ ಸದಸ್ಯರೆಲ್ಲರೂ ಸ್ವಾಗತಿಸಿದ್ದಾರೆ. ಈ ರೀತಿ ಎಲ್ಲರೂ ಸೇರಿ ಮಾಡುವುದಾದರೆ ನೀರಾವರಿ ಯೋಜನೆಗಳಿಗೆ ಹೆಚ್ಚಿನ ಆದ್ಯತೆ ಕೊಟ್ಟು ಹೆಚ್ಚಿನ ಹಣವನ್ನು ಖರ್ಚು ಮಾಡಬಹುದಾದಂತಹ ಪರಿಸ್ಥಿತಿಗೆ ಬರುವುದಕ್ಕೆ ಸಾಧ್ಯವಾಗುತ್ತದೆ ಎಂದು ಅನಿಸುತ್ತದೆ.

(ಶ್ರೀ ವೀರೇಂದ್ರ ಪಾಟೀಲ್)

ವಿದ್ಯುಚ್ಛಕ್ತಿ ಬಗ್ಗೆ ನಾನು ಹೇಳಬೇಕಾದರೆ ವಿದ್ಯುಚ್ಛಕ್ತಿ ಕೆಲಸವನ್ನು ಬಹಳ ವೇಗವಾಗಿ ನಾವು ಪ್ರಾರಂಭ ಮಾಡಿದ್ದೇವೆ. ಮಾನ್ಯ ಸದಸ್ಯರಿಗೆ ಗೊತ್ತಿದೆ ಹೋದ ವರ್ಷ ಸಹ ಎಲೆಕ್ಟ್ರಿಸಿಟಿ ಬೋರ್ಡಿನವರು ಎಲ್. ಐ. ಸಿ. ಮತ್ತು ಫೈನಾನ್ಸ್ ಕಾರ್ಪೊರೇಷನ್‌ನವರು ಮತ್ತು ಇತರ ಬ್ಯಾಂಕುಗಳಿಂದ ಸಾಲವನ್ನು ತೆಗೆದುಕೊಂಡು ದೊಡ್ಡ ಪ್ರಮಾಣದಲ್ಲಿ ಅವರ ಪ್ರೋಗ್ರಾಂ ಹಾಕಿಕೊಂಡು ಕೆಲಸಕಾರ್ಯಗಳನ್ನು ಮಾಡಿದ್ದಾರೆ. ಮುಂದಿನ ವರ್ಷ ಸಹ ಸುಮಾರು 20—25 ಸಾವಿರ ಬಾವಿಗಳಿಗೆ ಸರ್ವೀಸ್ ಮಾಡಬೇಕೆಂದು ಕಾರ್ಯಕ್ರಮ ಹಾಕಿಕೊಂಡಿದ್ದಾರೆ. ಲೈಫ್ ಇನ್‌ಷ್ಯೂರೆನ್ಸ್ ಕಾರ್ಪೊರೇಷನ್, ಷೆಡ್ಯೂಲ್ ಬ್ಯಾಂಕ್ ಅಗ್ರಿಕಲ್ಚರಲ್ ಫೈನಾನ್ಸ್ ಕಾರ್ಪೊರೇಷನ್ ಇವರುಗಳ ನೆರವು ಸಿಕ್ಕುತ್ತದೆ. ಅದನ್ನು ನಾವು ಪ್ರಯತ್ನ ಮಾಡುತ್ತೇವೆ. ಈಗ ನಮ್ಮಲ್ಲಿ ಸ್ವಲ್ಪ ವಿದ್ಯುಚ್ಛಕ್ತಿ ಹೆಚ್ಚು ಇದೆ. ಆ ವಿದ್ಯುಚ್ಛಕ್ತಿಯನ್ನು ನಾವು ನೆರೆ ಪ್ರಾಂತ್ಯಗಳಿಗೆ ಸರಬರಾಜು ಮಾಡುತ್ತಿದ್ದೇವೆ.

11-30 A.M.

ಮಾನ್ಯ ಸದಸ್ಯರುಗಳಿಗೆ ಗೊತ್ತಿದೆ, ಏನೆಂದರೆ ಮಹಾರಾಷ್ಟ್ರದವರು ವಿದ್ಯುಚ್ಛಕ್ತಿ ಬೇಕೆಂದು ಕೇಳಿದಮೇಲೆ ಮಹಾರಾಷ್ಟ್ರ ಮತ್ತು ಮೈಸೂರು ಈ ಎರಡು ರಾಜ್ಯಗಳ ನಡುವೆ ಗ್ರಿಡ್ ಎಸ್ಟಾಬ್ಲಿಸ್ ಮಾಡಬೇಕೆಂಬ ದೃಷ್ಟಿಯಿಂದ, ಅವರು ಕೇಳಿದ ಹುಬ್ಬಳ್ಳಿ ಬೆಳಗಾಂ ಲೈನ್ ಹಾಕಿದ್ದೇವೆ. ಈಗ ಬೆಳಗಾಂ ಮತ್ತು ಕೊಲ್ಹಾಪುರ ಲೈನನ್ನು ಹಾಕಬೇಕೆಂಬ ವಿಚಾರಮಾಡಿ ಪ್ರಾರಂಭ ಮಾಡಿದ್ದೇವೆ. ಈ ಕೆಲಸ ಬರುವ ಏಪ್ರಿಲ್ ತಿಂಗಳೊಳಗೆ ಮುಗಿದು ಸ್ವಲ್ಪಮಟ್ಟಿಗೆ ಮಹಾರಾಷ್ಟ್ರಕ್ಕೆ ವಿದುಚ್ಛಕ್ತಿ ಸರಬರಾಜು ಮಾಡುವ ಪರಿಸ್ಥಿತಿಗೆ ಬರುತ್ತೇವೆಂದು ತಿಳಿದುಕೊಂಡಿದ್ದೇನೆ. ತಾತ್ಪೂರ್ತಿಕವಾಗಿ ನಮ್ಮಲ್ಲಿ ವಿದ್ಯುಚ್ಛಕ್ತಿ ಹೆಚ್ಚು ಇದ್ದರೂ ಕೂಡ ಲೋಡ್ ಸರ್ವೆ ಮಾಡಿದಮೇಲೆ 1973-74 ರಲ್ಲಿ ಮತ್ತೆ ನಮಗೇ ವಿದ್ಯುಚ್ಛಕ್ತಿಯ ಅಭಾವ ಪರಿಣಮಿಸುತ್ತದೆಂದು ತಿಳಿದುಬಂದಿದೆ. 1973-74 ರಲ್ಲಿ ವಿದ್ಯುಚ್ಛಕ್ತಿಯ ಅಭಾವ ಬಂದಮೇಲೆ ಇನ್ನೊಂದು ಪ್ರಾಜೆಕ್ಟ್ ಮಾಡಬೇಕೆಂದು ಹಿಂದೆಮುಂದೆ ಯೋಚನೆ ಮಾಡಿದರೆ ಅಲ್ಲಿಂದ ಮುಂದಕ್ಕೆ ನಾಲ್ಕೈದು ವರ್ಷಗಳು ಬೇಕಾಗುತ್ತವೆ. ಅದಕ್ಕಾಗಿಯೇ ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಕಾಳಿ ನದಿ ಯೋಜನೆಯನ್ನು ತೆಗೆದುಕೊಳ್ಳಬೇಕೆಂದು ವಿಚಾರಮಾಡಿ ಆ ಬಗ್ಗೆ ಡೀಟೈಲ್ ರಿಪೋರ್ಟ್ ತಯಾರು ಮಾಡಿ ಕೇಂದ್ರಸರ್ಕಾರಕ್ಕೆ ಅವರ ಅನುಮತಿಗಾಗಿ ಕಳುಹಿಸಿದ್ದೇವೆ. ಕೇಂದ್ರ ಸರ್ಕಾರದವರು ನಾಲ್ಕನೆಯ ಯೋಜನೆಯಲ್ಲಿ ಈ ಯೋಜನೆಯನ್ನು ಕೈಗೊಳ್ಳಲು ಅಷ್ಟೊಂದು ಹಣವಿಲ್ಲವೆಂದು ಹೇಳುತ್ತಿದ್ದಾರೆ. ಅದಕ್ಕಾಗಿ ಪ್ರತ್ಯೇಕವಾದ ಯಾವುದಾದರು ಒಂದು ಏಜೆನ್ಸಿ ಮೂಲಕ ಸಾಲದ ರೂಪದಲ್ಲಿ ಹಣ ಸಿಕ್ಕಿದರೆ ಕೆಲಸ ಪ್ರಾರಂಭ ಮಾಡುವುದಕ್ಕೆ ಸಹಾಯವಾಗುತ್ತದೆಂದು ತಿಳಿದು ಅದಕ್ಕಾಗಿ ಪ್ರಯತ್ನ ಮಾಡಬೇಕೆಂದಿದ್ದೇವೆ. ಇರಿಗೇಷನ್ ಸೆಟಪ್‌ನಲ್ಲಿ ವಿದ್ಯುಚ್ಛಕ್ತಿ ಯೋಜನೆಯನ್ನು ತೆಗೆದುಕೊಳ್ಳುವುದು ಕಷ್ಟವಾಗುತ್ತದೆ. ನಮ್ಮ ಅಭಿಪ್ರಾಯದ ಪ್ರಕಾರ ಈ ಯೋಜನೆ ತೆಗೆದುಕೊಳ್ಳುವುದು ಕಷ್ಟ ಇದ್ದರೂ ಕೂಡ ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಕಾಳಿ ನದಿ ಯೋಜನೆಯನ್ನು ಪ್ರಾರಂಭ ಮಾಡಬೇಕೆಂಬ ವಿಚಾರವನ್ನು ಇಟ್ಟುಕೊಂಡಿದ್ದೇವೆಂದು ಮಾನ್ಯ ಸಭೆಗೆ ಹೇಳುತ್ತೇನೆ.

ಇನ್ನು ಕೊನೆಯದಾಗಿ ಶ್ರೀಮಾನ್ ಭೀಮಣ್ಣನವರು ಮತ್ತು ಬಿದರೆ ಜಿಲ್ಲೆಯ ಎಲ್ಲಾ ಸದಸ್ಯರುಗಳು ಅವರ ಜಿಲ್ಲೆಯ ಬಗ್ಗೆ ಹೇಳಿದ್ದಾರೆ. ಬಿದರೆ ಜಿಲ್ಲೆಯ ಗೋದಾವರಿ ಬೇಸಿನ್‌ನಲ್ಲಿ ನಾವು ಇಲ್ಲಿಯವರೆಗೆ ನೀರಾವರಿಯ ಸೌಕರ್ಯವನ್ನು ಅಲ್ಲಿಯ ಜನತೆಗೆ ಒದಗಿಸಿಕೊಡುವುದಕ್ಕೆ ಆಗಿಲ್ಲ. ಕೆಲವು ಕೆರೆಕಟ್ಟೆ ಕಟ್ಟಿಸಿಕೊಟ್ಟಿರಬಹುದು. ಆದರೆ ದೊಡ್ಡ ಜಲಾಶಯಗಳು ನಿರ್ಮಾಣವಾಗಿಲ್ಲ. ಅದಕ್ಕಾಗಿಯೇ ದೊಡ್ಡ ಜಲಾಶಯವಾದ ಕಾರಂಜ ಪ್ರಾಜೆಟ್‌ನ್ನು ತೆಗೆದುಕೊಳ್ಳಬೇಕೆಂಬ ದೃಷ್ಟಿಯಿಂದ ಅಂದಾಜು ತಯಾರುಮಾಡಿ ಡೀಟೈಲ್ ಪ್ರಾಜೆಕ್ಟ್ ರಿಪೋರ್ಟ್ ತಯಾರುಮಾಡಿ ಕೇಂದ್ರಸರ್ಕಾರಕ್ಕೆ ಕಳಿಸಿದ್ದೇವೆ. ಈ ಯೋಜನೆಗೆ 9·90 ಕೋಟಿ ರೂಪಾಯಿಗಳು ಖರ್ಚಾಗುತ್ತದೆ. ಈ ಯೋಜನೆಯನ್ನು ನಾಲ್ಕನೆ ಪಂಚವಾರ್ಷಿಕ ಯೋಜನೆಯಲ್ಲಿ ಪ್ರಾರಂಭ ಮಾಡಬೇಕೆಂಬ ವಿಚಾರ ಇಟ್ಟುಕೊಂಡಿದ್ದೇವೆ. ಈ ಭಾಗದಲ್ಲಿ 15-20 ಸಾವಿರ ಬಾವಿಗಳು ಇವೆ. ಮೊದಲು ಬಾವಿಗಳಲ್ಲಿ ನೀರು ಮೇಲೆ ಇರುತ್ತಿತ್ತು. ಈಗ ಅಣ್ಣತಮ್ಮಂದಿರೇ ಒಂದೇ ಮನೆಯಲ್ಲಿ ಎರಡು ಬಾವಿಗಳನ್ನು ಮಾಡಿಕೊಂಡು ಬಾವಿಗಳ ಸಂಖ್ಯೆ ಜಾಸ್ತಿಯಾಗುತ್ತಿರುವುದರಿಂದ ನೀರು ಕೆಳಗೆ ಹೋಗುತ್ತಿದೆ. ಆದಕಾರಣ ಈ ಭಾಗಕ್ಕೆ ನೀರಾವರಿ ಸೌಕರ್ಯವನ್ನು ಒದಗಿಸಿಕೊಡದಿದ್ದರೆ ಮುಂದೆ ಸರ್ಕಾರಕ್ಕೆ ಒಂದು ಸಮಸ್ಯೆಯಾಗುತ್ತದೆ. ಈಗ ಅಲ್ಲಿ ಕಬ್ಬನ್ನು ಬೆಳೆಸುತ್ತಿದ್ದಾರೆ. ಮುಂದೆ ಕಬ್ಬನ್ನು ಬೆಳೆಯಲು ತೊಂದರೆಯಾದರೆ ಕೋಆಪರೇಟಿವ್ ಸೆಕ್ಕಾರ್‌ನಲ್ಲಿರುವ ಸಕ್ಕರೆ ಕಾರ್ಖಾನೆಗಳಿಗೆ ಧಕ್ಕೆ

ಬರುತ್ತಿದೆಂಬ ವಿಚಾರವನ್ನು ಗಮನದಲ್ಲಿಟ್ಟುಕೊಂಡು ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ ಈ ಕಾರಂಜ ಯೋಜನೆಯನ್ನು ಪ್ರಾರಂಭ ಮಾಡಬೇಕೆಂಬ ವಿಚಾರ ಇಟ್ಟುಕೊಂಡಿದ್ದೇವೆ. ಅನೇಕ ಸಲ ಈ ವಿಚಾರವನ್ನು ಅಲ್ಲಿಯ ಮಾನ್ಯ ಸದಸ್ಯರುಗಳು ವ್ಯಕ್ತಮಾಡಿರುವುದರಿಂದ, ಈ ಯೋಜನೆ ತೆಗೆದುಕೊಳ್ಳುವ ಮಹತ್ವ ಇದೆ ಎಂದು ತಿಳಿದುಕೊಂಡಿದ್ದೇನೆ. ಅದನ್ನೇ ಪುನಃ ಪುನಃ ಹೇಳಬೇಕಾದ್ದು ಇಲ್ಲ. ಈ ಬೇಡಿಕೆಗಳನ್ನು ಸರ್ವಾನುಮತದಿಂದ ಮಾನ್ಯ ಸದಸ್ಯರುಗಳು ಒಪ್ಪಿಕೊಳ್ಳಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ.

ಶ್ರೀ ವಿ. ಎನ್. ಪಾಟೀಲ್ (ಹುಮ್ನಾಬಾದ್).—ಈ ಯೋಜನೆಗೆ ಈ ವರ್ಷದಲ್ಲಿ ಎಷ್ಟು ಹಣ ಇಟ್ಟಿದ್ದೀರಿ?

ಶ್ರೀ ಎಂ. ಕೆ. ಬೊಮ್ಮೇಗೌಡ.—ಕಾವೇರಿ ಬೇಸಿನ್ ಬಗ್ಗೆ ಮೈಸೂರಿಗೂ ಮತ್ತು ಮದ್ರಾಸ್‌ಗೂ ಇರುವ ಒಪ್ಪಂದ 1974ಕ್ಕೆ ಮುಗಿಯುತ್ತದೆ. ನಮ್ಮ ಭಾಗದ ಯೋಜನೆಗಳಿಗೆ ಕೇಂದ್ರಸರ್ಕಾರದವರು ಟೆಕ್ನಿಕಲ್ ಕ್ಲಿಯರೆನ್ಸ್ ಕೊಡುತ್ತಿಲ್ಲ. ನಮ್ಮಲ್ಲಿ ಹಣವಿಲ್ಲವೆಂದು ಹೇಳುತ್ತೀರಿ. 1974 ರೊಳಗೆ ನಮ್ಮ ಹಕ್ಕು ಪಡೆಯುವುದಕ್ಕೆ ಕೆಲವು ಯೋಜನೆಗಳನ್ನಾದರೂ ಮುಗಿಸುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ಈಗ ನೀರಾವರಿ ಯೋಜನೆಗಳಿಗೆ ಹೆಚ್ಚು ಹಣ ಒದಗಿಸುವುದಕ್ಕಾಗಿ ಬೇರೆ ಬಾಬುಗಳಿಗೆ ಒದಗಿಸುವ ಹಣದಲ್ಲಿ ಕಟ್‌ಮಾಡಬೇಕೆಂದಿದ್ದೇವೆ ಮತ್ತು ಒಂದು ಬಾದು ಕಾರ್ಪೊರೇಷನ್ ಮಾಡಬೇಕೆಂದಿದ್ದೇವೆ ಎಂದು ಹೇಳಿದಿರಿ. ಈ ಸಾಲಿಗೆ 213 ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕೆಂದಿದ್ದೀರಿ. ಈ ಹಣದಲ್ಲಿ 30 ಕೋಟಿ ರೂಪಾಯಿಗಳನ್ನು ನೀರಾವರಿಗೂ ಉಳಿದ 183 ಕೋಟಿ ರೂಪಾಯಿಗಳನ್ನು ಇತರೇ ಬಾಬುಗಳಿಗೂ ಒದಗಿಸುವುದಕ್ಕಾಗುವುದಿಲ್ಲವೇ, ಈ ಬಗ್ಗೆ ಸರ್ಕಾರದ ದೃಢ ನಿಲುವು ಏನು ?

ಶ್ರೀ ಎಸ್. ಎಂ. ಗುರೆಡ್ಡಿ.—ಅಪ್ಪರ್‌ಕೃಷ್ಣಾ ಯೋಜನೆಯ ಬಗ್ಗೆ ಈಗಾಗಲೇ ಒಂದು ಕಡೆ ಡ್ಯಾಮ್ ಕಟ್ಟುತ್ತಿದ್ದೀರಿ. ಆದರೆ ಆಲಮಟ್ಟಿಯಲ್ಲಿ ಡ್ಯಾಮ್ ಕಟ್ಟುವ ಬಗ್ಗೆ ಇನ್ನೂ ಟೆಂಡರ್ ಕರೆಯಲಿಲ್ಲ. ಆದರೆ ಭೂಸ್ವಾಧೀನ ಕಾರ್ಯವನ್ನು ಮಾಡಿದ್ದೀರಿ. ಆದಕಾರಣ ಈ ಬಗ್ಗೆ ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ ?

ಶ್ರೀ ಪಿ. ಆಂಜನಪ್ಪ.—ನಾಗಲಮಡಿಕೆ ಪ್ರಾಜೆಕ್ಟ್ ಯಾವ ಹಂತದಲ್ಲಿದೆ ?

ಶ್ರೀ ಬಿ. ಎಂ. ಸಾಣಿಕೊಪ್ಪ (ಕಿತ್ತೂರು).—ಈಗ ಮಹಾರಾಷ್ಟ್ರಕ್ಕೆ ವಿದ್ಯುಚ್ಛಕ್ತಿ ಕೊಡಬೇಕೆಂದು ತೀರ್ಮಾನ ಮಾಡಿದ್ದೀರಿ. ಆದರೆ ಅವರು ಕೊಯ್ನಾ ಜಲಾಶಯದಿಂದ ಸಾಕಷ್ಟು ನೀರನ್ನು ಬಿಡದಿರುವುದರಿಂದ ನಮ್ಮ ಕೃಷ್ಣಾನದಿಯಲ್ಲಿ ಸಾಕಷ್ಟು ನೀರು ಇಲ್ಲವಾಗಿದೆ. ಮತ್ತು ಬೇರೆ ಯಾವ ನದಿಗಳಿಂದಲೂ ಸಹ ಕೃಷ್ಣಾನದಿಗೆ ನೀರು ಬರುತ್ತಿಲ್ಲ. ಆದಕಾರಣ ಕಷ್ಣಾನದಿಯ ನೀರು ನೆರೆ ರಾಜ್ಯಕ್ಕೆ ಹೋಗದಂತೆ ಬಂದ್ ಮಾಡಿ ಕರ್ನಾಟಕ ಪ್ರದೇಶಕ್ಕೆ ಆ ನೀರಿನ ಉಪಯೋಗವಾಗುವಂತೆ ಏನಾದರೂ ಏರ್ಪಾಡು ಮಾಡುತ್ತೀರಾ ?

SRI G. CHANDRAKANT (Bidar).—The hon. Minister was kind enough to state that in Bidar not a single project is taken and only Karanja is the project to be taken up. May I have an assurance that the Government will see that this Karanja Project is taken up in the fourth plan so that it may work as a sort of development for the backward district of Bidar?

ಶ್ರೀ ಕೆ. ಎಂ. ತಮ್ಮಯ್ಯ (ಕಡೂರು).—ಯಗಚಿ ನದಿ ಯೋಜನೆಯನ್ನು ಮೂರು ನಾಲ್ಕು ವರ್ಷಗಳಿಂದಲೂ ತೆಗೆದುಕೊಳ್ಳಬೇಕೆಂದು ಕೇಳುತ್ತಿದ್ದೇವೆ. ಇನ್ನೂ ಪ್ರಾರಂಭ ಮಾಡಿಲ್ಲ. ಇದನ್ನು ಕೈಗೊಳ್ಳುವುದರಿಂದ ಮಾರಿಕಣಿವೆ ಕೆಳಗಿರುವ 20 ಸಾವಿರ ಎಕರೆಗಳಿಗೆ ನೀರಾವರಿಯಾಗುತ್ತದೆ. ಆದಕಾರಣ ಈ ಯೋಜನೆಯನ್ನು ಈ ವರ್ಷ ತೆಗೆದುಕೊಳ್ಳುತ್ತೀರಾ ಮತ್ತು ಎಷ್ಟು ಹಣ ಒದಗಿಸುತ್ತೀರಾ ಎಂಬುದನ್ನು ತಿಳಿಸಬೇಕು ?

ಶ್ರೀ ಬಿ. ಎಸ್. ಸೌದಾಗರ್.—1965 ರಲ್ಲಿ ಅಥಣಿಯಲ್ಲಿ ಒಂದು ಸೇತುವೆ ಕಟ್ಟಬೇಕೆಂದು ಕೇಳಿದಾಗ 1966 ರಲ್ಲಿ ಮಾಡುತ್ತೇವೆಂದು ಸರ್ಕಾರದವರು ಹೇಳಿದ್ದರು. ಆದರೆ ಇನ್ನೂವರೆಗೆ ಮಾಡಿಲ್ಲ. ಈ ರಾಜ್ಯಕ್ಕೆ ನಾವು ಬರುವುದಕ್ಕೆ ಮುಂಚೆ ಮುಂಬೈ ಸರ್ಕಾರದವರು ಕಟ್ಟಿಸಿಕೊಡುತ್ತೇವೆಂದು ಸಹ ಹೇಳಿದ್ದರು. ಈ ಸೇತುವೆ ಇಲ್ಲದಿರುವುದರಿಂದ ಆ ಭಾಗದಲ್ಲಿ ಬೆಳೆಯುವ ಪದಾರ್ಥಗಳು

(ಶ್ರೀ ಬಿ. ಎಸ್. ಸೌದಾಗರ್)

ಮಹಾರಾಷ್ಟ್ರಕ್ಕೆ ಹೋಗುತ್ತಿದೆ. ಇದರಿಂದ ನಮ್ಮ ಸರ್ಕಾರಕ್ಕೆ ವರ್ಷಕ್ಕೆ 10 ಸಾವಿರ ರೂಪಾಯಿಗಳು ಉತ್ಪನ್ನನಾಗುತ್ತಿದೆ. ಆದ್ದರಿಂದ ಬೇಗ ಈ ಸೇತುವೆಯನ್ನು ಕಟ್ಟಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಎನ್. ನಂಜೇಗೌಡ (ಅರಕಲಗೂಡು).—ಮಾನ್ಯ ಮುಖ್ಯಮಂತ್ರಿಗಳು ಭಾರಿ ನೀರಾವರಿ ಯೋಜನೆಗಳಿಗೆ ಜಾಸ್ತಿ ಹಣ ಒದಗಿಸಬೇಕೆಂಬ ಕಳಕಳಿಯನ್ನು ಇಟ್ಟು ಕೊಂಡಿದ್ದಾರೆ. ಅದೇ ರೀತಿ ಕಾವೇರಿ ಬೇಸಿನ್‌ನಲ್ಲಿರುವ ಯೋಜನೆಗಳನ್ನು ಸಹ ಕೈಕೊಳ್ಳುವ ಬಗ್ಗೆ ಕಳಕಳಿಯನ್ನು ಇಟ್ಟು ಕೊಂಡು ಹಾರಂಗಿ ಯೋಜನೆಯ ಬಗ್ಗೆ ಇರುವ ಡಿವಿಜನನ್ನು ಸ್ಟ್ಯಾಂಡ್‌ಅಫ್ ಮಾಡದೆ ಆ ಡಿವಿಜನನ್ನು ಮುಂದುವರಿಸಬೇಕು. ಏಕೆಂದರೆ ಆ ಡಿವಿಜನನ್ನು ಮುಚ್ಚುವ ಏರ್ಪಾಡನ್ನು ಮಾಡುತ್ತಿರುವುದರಿಂದ ಅಲ್ಲಿಯ ಜನರಿಗೆ ಕಳವಳ ಬಂದಿದೆ. ಈ ಬಗ್ಗೆ ಏನಾದರೂ ಭರವಸೆ ಕೊಡುತ್ತೀರಾ?

ಶ್ರೀ ಬಿ. ಎಂ. ಇದಿನಬ್ಬ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಣ್ಣ ಸಣ್ಣ ನೀರಾವರಿ ಯೋಜನೆಗಳು ಇವೆಯೇ ಹೊರತು ದೊಡ್ಡ ನೀರಾವರಿ ಯೋಜನೆಗಳು ಇಲ್ಲ. ಕೆಲವು ಲಿಫ್ಟ್ ಇರಿಗೇಷನ್‌ಗಳನ್ನು ತೆಗೆದುಕೊಳ್ಳುವ ಬಗ್ಗೆ ಎಸ್ಟಿಮೇಟ್ ತಯಾರುಮಾಡಿ ಸರ್ಕಾರಕ್ಕೆ ಕಳಿಸಲಾಗಿದೆ. ಅವುಗಳನ್ನು ಸರ್ಕಾರದವರು ಮಂಜೂರು ಮಾಡಿ ನಮ್ಮ ಜಿಲ್ಲೆಯಲ್ಲಿ ಹೆಚ್ಚಿನ ಬೆಳೆ ಬೆಳೆಯುವುದಕ್ಕೆ ಅನುಕೂಲ ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಅಪೇಕ್ಷೆಪಡುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಲೋಕೋಪಯೋಗಿ ಇಲಾಖೆಯಲ್ಲಿ ಲಂಚದ ಹಾವಳಿ ಜಾಸ್ತಿಯಾಗಿದೆ. ಈ ಬಗ್ಗೆ ಮಂತ್ರಿಗಳು ಉತ್ತರ ಕೊಡುವಾಗ ಏನನ್ನೂ ಹೇಳಲಿಲ್ಲ. ಈ ಲಂಚದ ಹಾವಳಿಯನ್ನು ತಡೆಗಟ್ಟಬೇಕಾದರೆ ಚೀಫ್-ಇಂಜಿನಿಯರ್ ಅವರುಗಳ ಅಸೆಟ್ಸ್ ಅಂಡ್ ಲಯಬಿಲಿಟೀಸನ್ನು ಪಡೆಯಲು ತಮ್ಮ ಕೈಯಲ್ಲಿ ಸಾಧ್ಯವೇ ? ಎರಡನೆಯದಾಗಿ ಲೋಕೋಪಯೋಗಿ ಇಲಾಖೆಯ ಮಂತ್ರಿಗಳು ವರ್ಗ ಮಾಡಿದ ಒಬ್ಬ ಅಧಿಕಾರಿಯ ಆರ್ಡರನ್ನು ಡೆಪ್ಯುಟಿ ಸೆಕ್ರೆಟರಿಯವರು ಹಾಗೆಯೇ ಇಟ್ಟುಕೊಂಡು ಸೆಕ್ರೆಟರಿಯವರು ದೆಹಲಿಯಿಂದ ಬಂದಮೇಲೆ ಅವರ ಗಮನಕ್ಕೆ ತಂದು, ನಂತರ ಸೆಕ್ರೆಟರಿಯವರು ಮುಖ್ಯ ಮಂತ್ರಿಗಳಿಗೆ ಹೇಳಿ ಆ ವರ್ಗವನ್ನು ರದ್ದು ಮಾಡಿಸಿದ್ದಾರೆ. ಈ ಒಂದು ದೌಷ್ಟ್ಯ ಸೆಕ್ರೆಟರಿಯವರಿಗೆ ಇದ್ದರೆ ಮಂತ್ರಿಗಳ ಮಾನಮರ್ಯಾದೆಯ ಪ್ರಶ್ನೆ ಏನು, ಅವರ ಕಾರ್ಯದಕ್ಷತೆ ಉಳಿಯುತ್ತದೆಯೇ, ಇದನ್ನು ತಡೆಗಟ್ಟುವುದಕ್ಕೆ ಪ್ರಯತ್ನ ಮಾಡುತ್ತೀರಾ ? ಮೂರನೇಯದು ; ಎದುರು ಪಕ್ಷದ ಸದಸ್ಯರು ಅನೇಕ ಅಧಿಕಾರಿಗಳಿಗೆ ಕಾಗದಗಳನ್ನು ಬರೆಯುತ್ತಾರೆ. ಅವರಲ್ಲೂ ಲೋಕೋಪಯೋಗಿ ಖಾತೆಯ ಅಧಿಕಾರಿಗಳಿಗೆ ಎಷ್ಟು ಪತ್ರಗಳನ್ನು ಬರೆದರೂ ಅದಕ್ಕೆ ಉತ್ತರವೇ ಸಿಗುವುದಿಲ್ಲ. ಎದುರು ಪಕ್ಷಕ್ಕೆ ಸೇರಿದವರು ಎಂದು ಅವರಿಗೆ ಉತ್ತರ ಕೊಡಬಾರದು ಎನ್ನುವ ಸೂಚನೆಗಳೇನಾದರೂ ಅವರಿಗೆ ಕೊಟ್ಟಿದ್ದೀರಾ ? ಹಾಗಿಲ್ಲದಿದ್ದರೆ ಎಲ್ಲರಿಗೂ ಸರಿಸಮಾನವಾಗಿ ನೋಡಿಕೊಳ್ಳಬೇಕು ಎಂದು ಹೇಳಿ ನಿಮ್ಮ ಅಧಿಕಾರಿಗಳು ಎಲ್ಲರಿಗೂ ಉತ್ತರ ಕಳುಹಿಸಿಕೊಡುವ ಮನಸ್ಸು ಮಾಡುತ್ತಾರೆಯೇ ?

ಶ್ರೀ ಕೆ. ಲಕ್ಕಪ್ಪ.—ಮಾನ್ಯ ಸದಸ್ಯರು ಹೇಳುವಂತೆ ಹಿಂದೆ ಮಾಡಿದ್ದ ಆರ್ಡರನ್ನು ಚೀಫ್ ಮಿನಿಷ್ಟರಿಗೆ ಹೇಳಿ ಅದನ್ನು ಕ್ಯಾನ್ಸಲ್ ಮಾಡಿಲ್ಲ. ಇದರಲ್ಲಿ ಬೇರೆ ವಿಚಾರಗಳೂ ಇವೆ. ಇವನ್ನೆಲ್ಲಾ ನಾವು ನೋಡಿಕೊಂಡು ಮಾಡಬೇಕಾಗುತ್ತದೆ.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಒಂದು ಆರ್ಡರನ್ನು ಮಾನ್ಯ ಸಚಿವರು ಮಾಡಿದಾಗ ಅದನ್ನು ಡೆಪ್ಯೂಟಿ ಕಾರ್ಯದರ್ಶಿಯವರು ಹಾಗೆ ಇಟ್ಟು, ಇಲ್ಲಿನ ಕಾರ್ಯದರ್ಶಿಗಳು ದೆಹಲಿಯಿಂದ ವಾಪಸು ಬಂದಮೇಲೆ ಮುಖ್ಯ ಮಂತ್ರಿಯವರ ಮೂಲಕ ಒತ್ತಾಯ ತಂದು ಕ್ಯಾನ್ಸಲ್ ಮಾಡಿರುವುದು ಸರಿಯಿಲ್ಲ ಎಂದು ಕೇಳಿದರೆ ಇದು ಮಾನ್ಯ ಮಂತ್ರಿಗಳಿಗೆ ನಿಜವಲ್ಲವೇ. ಇದರಲ್ಲಿ ತಮಗೆ ಮರ್ಯಾದೆ ಬರುತ್ತದೆಯೇ ?

ಶ್ರೀ ಕೆ. ಲಕ್ಕಪ್ಪ.—ಹಾಗೆ ಆಗಿಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನೀವೇ ಹಾಗೆ ಹೇಳುವುದಾದರೆ ನೀವೇ ಅನುಭವಿಸಿ.

ಶ್ರೀ ಬಾಪೂಗೌಡ (ಷಹಾಪೂರ).—ಕೃಷ್ಣಾ ಗೋದಾವರಿಗಾಗಿ ಒಂದು ಕಾರ್ಪೊರೇಷನ್ ತರಹ ಮಾಡುತ್ತೇವೆಂದು ಹೇಳಿದರು. ನಿರ್ದಿಷ್ಟವಾಗಿ ಇದನ್ನು ಯಾವಾಗ ಮಾಡುತ್ತೀರಿ ? ಈಗಾಗಲೇ ನಾರಾಯಣಪುರದ ಬಳಿ ಮೇಸನರಿ ಡ್ಯಾಂ ಕಟ್ಟಲು ಸುಮಾರು 14 ಟೆಂಡರುಗಳು ಬಂದಿವೆ. ಟೆಂಡರುಗಳನ್ನು ನಿಧಾನ ಮಾಡಿದರೆ ಮುಂದೆ ರೇಟುಗಳು ಹೆಚ್ಚು ಆಗಬಹುದು ಮತ್ತು ಅಂದಾಜುಗಳೂ ಬದಲಾವಣೆಯಾಗಬಹುದು. ಆದುದರಿಂದ ಬಂದಿರುವ ಟೆಂಡರುಗಳನ್ನು

ಜಾಗ್ರತೆಯಾಗಿ ತೆಗೆದುಕೊಂಡು ಇದರ ಬಗ್ಗೆ ನಿರ್ಣಯ ಮಾಡುವುದು ಅನುಕೂಲವಾಗುತ್ತದೆ ಮತ್ತು ಸರಕಾರಕ್ಕೆ ಹೆಚ್ಚು ರೇಟುಗಳು ಕೊಡುವುದೂ ಉಳಿತಾಯವಾಗುತ್ತದಲ್ಲವೇ ?

ಶ್ರೀ ಎಸ್. ಬಿ. ಅಗ್ನಿಹೋತ್ರಿ (ಧಾರವಾಡ ಗ್ರಾಮಾಂತರ).—ಕಾರವಾರದ ಬಂದರಿನಿಂದ ಹುಬ್ಬಳ್ಳಿ ಬಂದರ್‌ವರೆಗೆ ಇರುವ ರೈಲ್ವೆ ಮಾರ್ಗವನ್ನು ಮುಗಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ಮತ್ತು ಇದರ ಬಗ್ಗೆ ಯಾವ ಕಾರ್ಯ ಕ್ರಮಗಳನ್ನು ಸರಕಾರ ತೆಗೆದುಕೊಳ್ಳುವುದಕ್ಕೆ ಯೋಚಿಸಿದೆ ?

ಶ್ರೀ ಎಸ್. ಎಚ್. ಪುಟ್ಟರಂಗನಾಥ್.—ಯಗಚಿ ಯೋಜನೆಗೆ ಹೇಮಾವತಿಯಿಂದ ನೀರು ಕೊಡುವ ಯೋಚನೆ ಏನಾಗಿದೆ ಮತ್ತು ಇದರ ಬಗ್ಗೆ ಯಾವ ಕಾರ್ಯಕ್ರಮ ತೆಗೆದುಕೊಂಡಿದ್ದೀರ ?

ಶ್ರೀ ಕೆ. ಎಚ್. ಪಾಟೀಲ್ (ಹುಬ್ಬಳ್ಳಿ).—ಗದಗ್ ಜನರಿಗೆ ಸಾಕಷ್ಟು ನೀರು ಸಿಗುತ್ತಿಲ್ಲ. ಮಲಪ್ರಭಾ ಯೋಜನೆ ಮಾಡಿ ಇದನ್ನು ನವಲಗುಂದದವರೆಗೆ ನಿಲ್ಲಿಸಿದ್ದೀರಿ. ಇದನ್ನು ಗದಗ್‌ವರೆಗೆ ಎಕ್ಸ್‌ಟೆಂಡು ಮಾಡುತ್ತೀರಾ ? ಇದರ ಬಗ್ಗೆ ಪುನರ್ವಿಮರ್ಶೆ ಮಾಡಬೇಕೆಂದು ಇಲ್ಲಿ ಜನ ಕೇಳುತ್ತಿರುವುದರಿಂದ ಇದನ್ನು ಸರಕಾರ ಪರಿಶೀಲನೆ ಮಾಡುತ್ತದೆಯೇ ?

Smt. WINNIFRED F. FERNANDES (Coondapur).—In South Kanara District, due to heavy rains there were floods last year. As a result, there was much destruction to property as well as to life. Will the Government take protective measures to see that such floods do not occur in future and that rivetments will be put up all along the Coastal Belt ?

ಶ್ರೀ ಎಂ. ನಾಗಪ್ಪ.—ತುಂಗಭದ್ರಾ ಕ್ಯಾನಲ್ ಮಾಡಿರುವುದನ್ನು ಗದ್ವಾಲ್‌ವರೆಗೆ ಎಕ್ಸ್‌ಟೆಂಡು ಮಾಡಬೇಕೆಂದು ಪ್ರಯತ್ನ ಮಾಡಿದ್ದೀರಾ ! ಹಾಗೆ ಮಾಡಿದರೆ ಇನ್ನೂ ಐದು ಸಾವಿರ ಎಕರೆಗಳವರೆಗೆ ನೀರು ಸಿಗುತ್ತದೆ. ಇದಲ್ಲದೆ ಈಗಾಗಲೇ 101 ಡಿಸ್ಟ್ರಿಬ್ಯೂಟರಿಗಳನ್ನು ಮಾಡಿ 91ನೇ ಡಿಸ್ಟ್ರಿಬ್ಯೂಟರಿಗೆ ನೀರು ಬಂದಿದೆ. ಇದರಲ್ಲಿ ಸುಮಾರು 6.78 ಸಾವಿರ, ಎಕರೆಗಳವರೆಗೆ ನೀರು ಸಿಗುತ್ತದೆ. ಆದರೆ ಇದನ್ನೂ ಇನ್ನೂ ಮುಂದಕ್ಕೆ ವಿಸ್ತರಿಸುವ ಪ್ರಯತ್ನ ಮಾಡುತ್ತೀರಾ ? ಎರಡನೆಯದು, ಪಂಪುಸೆಟ್ಟುಗಳನ್ನು ಈಗ ಲ್ಯಾಂಡು ಡೆವಲಪ್‌ಮೆಂಟ್ ಬ್ಯಾಂಕುಗಳ ಮೂಲಕ ಕೊಡಬೇಕೆಂದು ಕೊಡುತ್ತಿದ್ದೀರಿ. ಹಿಂದೆ ಪಂಪು ಸೆಟ್ಟುಗಳನ್ನು ವಿದ್ಯುಚ್ಛಕ್ತಿ ಇಲಾಖೆ ಮೂಲಕ ಕೊಡುತ್ತಿದ್ದರು. ಇದರಿಂದ ಜನಕ್ಕೆ ಸ್ವಲ್ಪ ಹೆಚ್ಚು ಅನುಕೂಲವಾಗುತ್ತಿತ್ತು; ಮತ್ತು ಬೇಗನೆ ಸಿಗುತ್ತಿತ್ತು. ಈಗ ಬ್ಯಾಂಕುಗಳ ಮೂಲಕ ಕೊಡುವಾಗ ಪಂಪು ಸೆಟ್ಟುಗಳು ಸಿಗುವುದು ನಿಧಾನವಾಗುತ್ತಿದೆ. ಇದಕ್ಕಾಗಿ ಹಿಂದೆ ಸರಕಾರ ಇದ್ದ ಪದ್ಧತಿಯಂತೆ ಇಲಾಖೆಯ ಮೂಲಕವೇ ಪಂಪು ಸೆಟ್ಟುಗಳನ್ನು ಹಂಚುವುದು ಅನುಕೂಲವಾಗುತ್ತದೆ ಎಂದು ಒತ್ತಾಯ ಬಂದರೆ ಅದನ್ನು ಪುನಃ ಪರಿಶೀಲನೆ ಮಾಡಬಹುದು ಎಂದು ಹೇಳಿದ್ದೀರಿ. ನಮ್ಮ ಜಿಲ್ಲೆಯಲ್ಲಿ ಬ್ಯಾಂಕುಗಳ ಮೂಲಕ ಕೊಟ್ಟಿರುವ ಸಂಖ್ಯೆಗಳನ್ನು ನೋಡಿ ಮತ್ತು ಹಿಂದೆ ಇಲಾಖೆ ಮೂಲಕ ಇರುವ ಅಂಕೆ ಸಂಖ್ಯೆಗಳನ್ನು ನೋಡಿರಿ. ಇದರಲ್ಲಿ ವಾಸ್ತವವಾಗಿ ನೋಡಿದರೆ ಇಲಾಖೆಯಲ್ಲಿ ಹಿಂದೆ ಇದ್ದ ಪದ್ಧತಿಯೇ ಸರಿಯಾಗಿತ್ತು ಎನ್ನುವುದು ಕಂಡುಬರುತ್ತದೆ. ಇದನ್ನು ಗಮನಕ್ಕೆ ತೆಗೆದುಕೊಂಡು ಪುನಃ ಪರಿಶೀಲನೆ ಮಾಡುತ್ತೀರಾ ?

ಶ್ರೀ ಎನ್. ಜಿ. ಹಾಲಪ್ಪ (ಚನ್ನಗಿರಿ).—ವಾಣಿವಿಲಾಸ ಸಾಗರದ ಬಳಿ ಇರುವ ಕೆರೆಗಳನ್ನು ಸರಿಯಾಗಿ ದುರಸ್ತು ಮಾಡದೇ ಇರುವುದರಿಂದ ಇಲ್ಲಿ ನೀರು ನಿಲ್ಲುವುದು ತೊಂದರೆಯಾಗಿದೆ ಮತ್ತು ಹೊಸ ಕೆರೆಗಳನ್ನು ಯಾವಾಗ ಮಾಡಬೇಕೆಂದು ಇದ್ದೀರಿ ? ಇದರ ಬಗ್ಗೆ ನಿರ್ದಿಷ್ಟವಾದ ಉತ್ತರ ಕೊಡಬೇಕು, ಎರಡನೆಯದು, ಬೇಲೂರು ಬಳಿ ಯಗಚಿ ಯೋಜನೆ ಬಗ್ಗೆ ಈ ವರ್ಷದ ಬಜೆಟ್ಟಿನಲ್ಲಿ ಇಲ್ಲ. ಇದಕ್ಕೆ ಹಣ ಒದಗಿಸುತ್ತೀರಾ ಹೇಗೆ ?

ಶ್ರೀ ಕೆ. ಎಂ. ಪುಟ್ಟಸ್ವಾಮಿ (ಚಿಕ್ಕಬಳ್ಳಾಪುರ).—ಕೋಲಾರ ಜಿಲ್ಲೆ ಬಹಳ ಹಿಂದುಳಿದಿರುವ ಜಿಲ್ಲೆ. ಇಲ್ಲಿ ನೀರಿನ ಕಷ್ಟ ಬಹಳ ಹೆಚ್ಚಾಗಿದೆ. ಇದೂ ಅಲ್ಲದೆ ಇಲ್ಲಿರುವ ಷುಗರ್ ಫ್ಯಾಕ್ಟರಿಗೆ ಬೇಕಾಗುವ ಕಬ್ಬಿಗೇ ನೀರು ಸಿಗುತ್ತಿಲ್ಲ. ಇದಕ್ಕಾಗಿ ಇಲ್ಲಿ ಉತ್ತರ ಪಿನಾಕಿನಿ ನದಿ ಹರಿಯುತ್ತದೆ ಈ ರಿವರು ಬೆಡ್‌ನಲ್ಲಿ ಸುಮಾರು ನೂರು ಅಥವಾ 120 ಬಾವಿಗಳನ್ನು ತೊಡಿಸಿಕೊಟ್ಟರೆ ಇಲ್ಲಿ ಸುಮಾರು 200 ಎಕರೆಗಳಿಗಿಂತ ಹೆಚ್ಚು ನೀರಾವರಿ ಆಗುವ ಸೌಕರ್ಯಗಳು ಇರುತ್ತವೆ, ಇಂತಹ ಬಾವಿಗಳನ್ನು ರಿವರುಬೆಡ್‌ಗಳನ್ನು ಮಾಡಿಸಿಕೊಡುತ್ತೀರಾ ? 4ನೇ ಯೋಜನೆಯಲ್ಲೇನಾದರೂ ತೆಗೆದುಕೊಳ್ಳುತ್ತೀರಾ ?

ಶ್ರೀ ಬಿ. ಭಾಸ್ಕರಶೆಟ್ಟಿ (ಕೌಪು).—ಮಂಗಳೂರಿನಲ್ಲಿರುವ ಪಿ. ಡಬ್ಲ್ಯು. ಡಿ. ಸರ್ಕಲ್‌ನನ್ನು ತೆಗೆಯಬೇಕೆಂದು ಇದ್ದಾರೆ ಎಂದು ತಿಳಿಯಬರುತ್ತದೆ ಮತ್ತು ಈ ಸರಕಲ್‌ನ್ನು ಬದಲಾಯಿಸಿ ಬೇರೆ ಸರ್ಕಲ್‌ನಲ್ಲೇ ಎಲ್ಲ ಕೆಲಸಗಳನ್ನೂ ಮಾಡಬೇಕೆಂದು ಇದ್ದಾರೆ ಎಂದು ಕೇಳುತ್ತೇವೆ. ಮಂಗಳೂರು ಪೋರ್ಟ್ ಆಗುವಾಗ ಇಲ್ಲಿಂದ ಒರ ಹೆಚ್ಚು ಸಾಗಿಸಬೇಕಾಗುತ್ತದೆ. ಆಗ ಬೇರೆ ಸರ್ಕಲ್ ಆರಂಭ ಮಾಡುವುದಕ್ಕೆ ಬದಲಾಗಿ ಈಗಿರುವ ಸರ್ಕಲ್‌ನ್ನು ಮುಂದುವರಿಸಿಕೊಂಡು ಬರಲಾಗುವುದಿಲ್ಲವೇ ?

ಶ್ರೀ ಎಂ. ಬಸವರಾಜು.—(ಕೃಷ್ಣರಾಜಪೇಟೆ).—ಈಗ 4-6 ವಾರಗಳ ಹಿಂದೆ ಪೇಪರ್‌ನಲ್ಲಿ ಒಂದು ವಿಷಯ ಬಂದಿದೆ. ಹಾರಂಗಿಯ ಒಂದು ಕಡೆ ಮಳುಗಡೆ ಏರಿಯಾದಲ್ಲಿ ಒಂದು ಪಿಕ್‌ಅಪ್ ಕಟ್ಟಿ, ಲಕ್ಷ್ಮಣ ತೀರ್ಥದ ಪ್ರಾಜೆಕ್ಟನ್ನೂ ಪರಿಶೀಲನೆ ಮಾಡಿದೆ ಎಂದು ಇದೆ. ಹಾಗಾದರೆ ನಮ್ಮ ಕಾವೇರಿ ಬೇಸಿನ್ ಕೂಡ ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿದೆಯೇ ? ಮತ್ತು ಹಾರಂಗಿ ಪ್ರಾಜೆಕ್ಟನ್ನು ತೆಗೆದುಕೊಂಡರೆ ಅದರಿಂದ ಜನರಿಗೆ-ತೊಂದರೆಯಾಗುತ್ತದೆ, ಕಿರುಕುಳ ಉಂಟಾಗುತ್ತದೆ. ಹಾಗಾಗಬಾರದು ಎಂದು ಹೇಳುತ್ತೇನೆ.

ಶ್ರೀ ಪಿ. ಆಂಜನಪ್ಪ.—(ಪಾವಗಡ) ಸ್ವಾಮಿ, ನಾಗಲಮಡಿಕೆ ಪ್ರಾಜೆಕ್ಟ್‌ಗೆ 80 ಲಕ್ಷ ರೂಪಾಯಿ ಎಂದು ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಅದನ್ನು ಇಷ್ಟರಲ್ಲೇ ಮುಗಿಸುವುದಕ್ಕೆ ಏರ್ಪಾಡು ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಸ್ವಾಮಿ, ಒಂದು ಲಕ್ಷಕ್ಕಿಂತ ಕಡಿಮೆ ಇರುವ ಕೆಲಸವನ್ನು ಈ ಬಡ್ಜೆಟ್ಟಿನಲ್ಲಿ ಬರುವುದಿಲ್ಲ, ಅದಕ್ಕೆ ಒಂದು ಪಟ್ಟಿಯನ್ನು ಒದಗಿಸಿ ಕೊಡಬೇಕು ಎಂದು ಹೇಳುತ್ತೇನೆ. ಈಗಿನ ಮುಖ್ಯ ಮಂತ್ರಿಗಳು ಹಿಂದೆ ಲೋಕೋಪಯೋಗಿ ಮಂತ್ರಿಗಳಾಗಿದ್ದಾಗ ಒಂದು ಪಟ್ಟಿಯನ್ನು ಒದಗಿಸಿ ಕೊಡುವ ವ್ಯವಸ್ಥೆ ಮಾಡಬೇಕು ಎಂದು ತಿಳಿಸಿದ್ದೆ. ಅದನ್ನು ಇದುವರೆಗೂ ಕೊಟ್ಟಿಲ್ಲ. ಆದುದರಿಂದ ಆ ಪಟ್ಟಿಯನ್ನು ಜಾಗ್ರತೆ ಒದಗಿಸಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಚಿಕ್ಕೇಗೌಡ (ಗುಬ್ಬಿ)—ಸ್ವಾಮಿ, ನಮ್ಮ ಗುಬ್ಬಿ ತಾಲ್ಲೂಕಿನಲ್ಲಿ 300, 400 ಬಾವಿಗಳು ತಯಾರಾಗಿವೆ. ಅದಕ್ಕೆ ಕರೆಂಟ್ ಇಲ್ಲದೆ ಜನರಿಗೆ ತೊಂದರೆಯಾಗಿದೆ. ಮಹಾರಾಷ್ಟ್ರಕ್ಕೆ ಲೈನ್ ಕೊಡುತ್ತೇವೆ, ಕರೆಂಟ್ ಕೊಡುತ್ತೇವೆ ಎಂದು ಹೇಳುತ್ತಾರೆ. ನಮ್ಮ ಕಡೆ ತೊಂದರೆ ಇರುವಾಗ ಮುಂಚೆ ಇಲ್ಲಿಗೆ ಕರೆಂಟ್ ಕೊಡಿಸುವ ಅವಕಾಶ ಮಾಡಿ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಬಿ. ಎನ್. ನಾರಾಯಣ ಸ್ವಾಮಿ (ಶ್ರೀನಿವಾಸಪುರ) ಸ್ವಾಮಿ, ಕೋಲಾರ ಜಿಲ್ಲೆಯಲ್ಲಿ ನೀರಾವರಿ ಸೌಕರ್ಯ ಇಲ್ಲದೆ ಜನರು ಕುಡಿಯಲಿಕ್ಕೆ ನೀರು ಇಲ್ಲದೆ ಕಷ್ಟಪಡುತ್ತಿದ್ದಾರೆ. ಆದುದರಿಂದ ಬೆಂಗಳೂರಿಗೆ ನೀರು ತರುವ ಯೋಜನೆ ಏನು ಮಾಡುತ್ತಿದ್ದೀರೋ ಅದನ್ನು ಕೋಲಾರ ಜಿಲ್ಲೆಗೂ ಒದಗಿಸುವ ಯೋಜನೆ ಮಾಡುತ್ತೀರಾ ?

ಶ್ರೀ ವಿ. ಎನ್. ಪಾಟೀಲ್.—ಸ್ವಾಮಿ, ಚಂದ್ರಪಲ್ಲಿ, ನಾಗಲಮಡಿಕೆ ಪ್ರಾಜೆಕ್ಟ್ ಇನ್ ಕಂಪ್ಲೀಟ್ ಆಗಿದೆ. ಅವೆರಡನ್ನೂ ಇದೇ ಪ್ಲಾನ್‌ನಲ್ಲಿ ಸೇರಿಸುವಂತೆ ಏರ್ಪಾಡು ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಈಗ ಅನೇಕ ವಿಚಾರಗಳನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ಅದನ್ನೆಲ್ಲಾ ಸವಿಸ್ತಾರವಾಗಿ ಹೇಳಲು ಸಾಕಷ್ಟು ಸಮಯ ಇಲ್ಲ. ಆದುದರಿಂದ ಶ್ರೀಮಾನ್ ಹುಚ್ಚಮಾಸ್ತಿ ಗೌಡರು ಪಿ.ಡಬ್ಲ್ಯು.ಡಿ. ಮಿನಿಸ್ಟರು ಟ್ರಾನ್ಸ್‌ಫರ್ ಮಾಡಿದುದನ್ನು ಮುಖ್ಯ ಮಂತ್ರಿಗಳು ಕ್ಯಾನ್ಸಲ್ ಮಾಡಿದ್ದಾರೆ ಎಂದು ಹೇಳಿದರು. ನಾನು ತಮಗೆ ಹೇಳಬೇಕಾಗಿದ್ದರೆ ಎಕ್ಸಿಕ್ಯುಟೀವ್ ಇಂಜನೀಯರ್ ಮತ್ತು ಅವರ ಮೇಲುಗಡೆ ಇರುವ ಅಧಿಕಾರಿಗಳ ಟ್ರಾನ್ಸ್‌ಫರ್ ಆಗಬೇಕಾಗಿದ್ದರೆ, ನಾನು ಪಿ.ಡಬ್ಲ್ಯು.ಡಿ. ಸೆಕ್ರಟರಿ, ಸಂಬಂಧ ಪಟ್ಟ ಮಂತ್ರಿಗಳು ಮತ್ತು ಚೀಫ್ ಇಂಜನಿಯರು ಸೇರಿ ಮಾಡುತ್ತೇವೆ. ಚೀಫ್ ಇಂಜನಿಯರು ಯಾರು ಯಾರು ಎಲ್ಲೆಲ್ಲಿ ವರ್ಕ್ ಮಾಡುತ್ತಾರೆ ಎಂದು ಅವರಿಗೆ ಗೊತ್ತಿರುವುದರಿಂದ ಅವರನ್ನು ಕೇಳದೆ ಮಾಡಿದರೆ ಅವರ ಕೆಲಸಕ್ಕೆ ಧಕ್ಕೆ ಆಗುತ್ತದೆ ಎಂದು ತಿಳಿದು ಅವರೊಂದಿಗೆ ಸಲಹೆ ಮಾಡಿ ಮಾಡುತ್ತೇವೆ. ಅವರ ಅಭಿಪ್ರಾಯಗಳನ್ನು ತಿಳಿದುಕೊಂಡು ಯಾರು ಯಾರನ್ನು ಎಲ್ಲೆಲ್ಲಿ ಟ್ರಾನ್ಸ್‌ಫರ್ ಮಾಡಬಹುದು ಎನ್ನುವುದನ್ನು ಯೋಚನೆ ಮಾಡುತ್ತೇವೆ.

ಇನ್ನು ಚೀಫ್ ಇಂಜನಿಯರ್‌ರ ಅಸೆಟ್ಸ್ ಅಂಡ್ ಲಯಬಿಲಿಟೀಸ್ ವಿಚಾರವಾಗಿ ತರಿಸಿಕೊಳ್ಳಬೇಕು ಎಂದು ಹೇಳಿದ್ದಾರೆ. ಇದು ಒಂದೇ ಡಿಪಾರ್ಟ್‌ಮೆಂಟ್ ಅಲ್ಲ, ಎಲ್ಲಾ ಡಿಪಾರ್ಟ್‌ಮೆಂಟ್‌ನಿಂದಲೂ ಎಲ್ಲಾ ಅಧಿಕಾರಿಗಳ ಅಸೆಟ್ಸ್ ಅಂಡ್ ಲಯಬಲಿಟೀಸನ್ನು ತರಿಸಿಕೊಳ್ಳುತ್ತಿದ್ದೇವೆ.

ಪ್ರತಿಯೊಂದು ಅಧಿಕಾರಿಯು ಅಸೆಟ್ಸ್ ಅಂಡ್ ಲಯಬಿಲಿಟೀಸನ್ನು ತರಿಸಿಕೊಂಡು, ಪರಿಶೀಲನೆ ಮಾಡಿ, ಸ್ಕ್ರೀನ್ ಮಾಡಿ ಯಾರು ಯಾರ ಅಸೆಟ್ಸ್ ಅಂಡ್ ಲಯಬಿಲಿಟೀಸ್‌ಗಳು ಡಿಸ್‌ಪ್ರಪೋರ್ಷನ್ ಟುದಿ ಇನ್‌ಕಂ ಇದೆ ಎನ್ನುವುದನ್ನು ನಮ್ಮ ಸೆಕ್ರೆಟೇರಿಯೇಟ್‌ನಲ್ಲಿ ಸ್ಕ್ರುಟಿನೈಜ್ ಮಾಡುತ್ತಿದ್ದಾರೆ. ಆರ್ಗನೈಸೇಷನ್ ಅಂಡ್ ಮೆಥೆಡ್ಸ್ ಅವರು ಇದನ್ನು ಸ್ಕ್ರುಟಿನೈಸ್ ಮಾಡುತ್ತಾರೆ. ಪ್ರತಿಯೊಂದು ಡಿಪಾರ್ಟ್‌ಮೆಂಟನ್ನೂ ತೆಗೆದುಕೊಂಡು ವಿಚಾರ ಮಾಡುತ್ತಿದ್ದಾರೆ.

ಶ್ರೀ ಎಸ್. ಶಿವಪ್ಪ.—ಮಂತ್ರಿಗಳ ಆಸ್ತಿ ಕೈಬಿಟ್ಟಿರಾ ?

ಶ್ರೀ ವೀರೇಂದ್ರ ಪಾಟೀಲ್.—ಯಾರ ಯಾವ ಆಸ್ತಿಯನ್ನೂ ಕೈಬಿಡುವುದಿಲ್ಲ. ನಿಮ್ಮ ಆಸ್ತಿಯನ್ನು ನಾವು ಕೈಬಿಡುವ ಹಾಗೆ ಇಲ್ಲ, ನಮ್ಮ ಆಸ್ತಿಯನ್ನು ನೀವು ಕೈಬಿಡುವ ಹಾಗೆ ಇಲ್ಲ.

ಶ್ರೀಮಾನ್ ಬೋಳ ರಘುರಾಮ ಶೆಟ್ಟರು ಬೇರೆಯವರಿಗೆ ಪವರ್ ಕೊಡಲು ಅಗ್ರಿಮೆಂಟ್ ಮಾಡಿಕೊಳ್ಳುತ್ತಾರೆ, ನಮಗೆ ಎಷ್ಟೋ ಕಷ್ಟವಿರುವಾಗ ಈ ರೀತಿ ಮಾಡುತ್ತಾರೆ ಎಂದು ಹೇಳಿದರು. ನಾವು ಅಗ್ರಿಮೆಂಟ್ ಮಾಡಿಕೊಳ್ಳಬೇಕಾದರೆ ವರ್ಷ ವರ್ಷಕ್ಕೂ ಅಗ್ರಿಮೆಂಟ್ ಮಾಡಿಕೊಳ್ಳುತ್ತೇವೆ. ನಾವು ತೊಂದರೆಪಟ್ಟುಕೊಂಡು ಎರಡನೆಯವರಿಗೆ ಉಪಕಾರ ಮಾಡಬೇಕು ಎನ್ನುವುದೇನೂ ಇಲ್ಲ. ಆದುದರಿಂದ ವರ್ಷ ವರ್ಷಕ್ಕೂ ಅಗ್ರಿಮೆಂಟ್ ಮಾಡಿಕೊಳ್ಳುವುದರಿಂದ ಏನೂ ಕಷ್ಟವಾಗುವುದಿಲ್ಲ.

ಇನ್ನು ಅಪ್ಪರ್ ತುಂಗಭದ್ರ ಪ್ರಾಜೆಕ್ಟ್ ವಿಷಯದಲ್ಲಿ ನಮ್ಮ ಅಧಿಕಾರಿಗಳು ಇನ್‌ವೆಸ್ಟಿಗೇಷನ್ ಮಾಡಿ, ಡಿಟೈಲ್ ಸರ್ವೆ ಮಾಡಿ ಪ್ರಾಜೆಕ್ಟ್ ರಿಪೋರ್ಟ್ ತಯಾರು ಮಾಡಿದ್ದಾರೆ. 5–6 ತಿಂಗಳ ಹಿಂದೆ ಕೇಂದ್ರ ಸರ್ಕಾರಕ್ಕೆ ತಾಂತ್ರಿಕ ಮಂಜೂರಾತಿಗಾಗಿ ಕಳುಹಿಸಿಕೊಟ್ಟಿದ್ದೇವೆ.

ಅದೇ ರೀತಿ ನಾಗಲಮಡಿಕೆ ಪ್ರಾಜೆಕ್ಟ್ ಅದನ್ನು ಸರ್ವೆ ಮಾಡಿ ಪ್ರಾಜೆಕ್ಟ್ ರಿಪೋರ್ಟ್ ತಯಾರು ಮಾಡಿ ತಾಂತ್ರಿಕ ಮಂಜೂರಾತಿಗಾಗಿ ಕಳುಹಿಸಿಕೊಟ್ಟಿದ್ದೇವೆ. ಇದರಲ್ಲಿ ಆಂಧ್ರದವರಿಗೂ ಮೈಸೂರಿನವರಿಗೂ ಅಗ್ರಿಮೆಂಟ್ ಇದೆ. ಆ ಅಗ್ರಿಮೆಂಟ್ ಪ್ರಕಾರ ಎಷ್ಟು ನೀರು ಸಿಕ್ಕುತ್ತದೆಯೋ, ಎಷ್ಟು ಸಾಧ್ಯ ಇದೆಯೋ ಅದರ ರಿಪೋರ್ಟನ್ನು ತಯಾರು ಮಾಡಿ ತಾಂತ್ರಿಕ ಮಂಜೂರಾತಿಗಾಗಿ ಕಳುಹಿಸಿದೆ. ಅದು ಬಂದಮೇಲೆ ಮುಂದಿನ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಅದೇ ರೀತಿ 1974ರ ಒಳಗೆ ಕಾವೇರಿ ನೀರಿನ ಅಗ್ರಿಮೆಂಟ್ ಮುಗಿಯುತ್ತದೆ. ಅಷ್ಟರೊಳಗೆ ಎಲ್ಲಾ ಪ್ರಾಜೆಕ್ಟ್‌ಗಳನ್ನು ಮುಗಿಸುತ್ತೇವೆ ಎಂದು ಹೇಳುವುದು ಕಷ್ಟವಾಗುತ್ತದೆ. ಈ ಪ್ಲಾನ್‌ನಲ್ಲಿ ಯಾವ ಯಾವ ಪ್ರಾಜೆಕ್ಟ್‌ಗಳನ್ನು ತೆಗೆದುಕೊಳ್ಳಬೇಕೋ ಅದಕ್ಕೆ ಸರ್ವ ಪ್ರಯತ್ನ ಮಾಡುತ್ತಿದ್ದೇವೆ. ಆದರೆ ಕಾವೇರಿ ನೀರಿನ ಪ್ರಾಜೆಕ್ಟ್ ಅಗ್ರಿಮೆಂಟ್ ಮುಗಿಯುತ್ತಾ ಇರುವುದರಿಂದ ಆ ಪ್ರಾಜೆಕ್ಟನ್ನು ತೆಗೆದುಕೊಂಡು ಮುಗಿಸಬೇಕು. ಇಂತಹ ಪ್ರಾಜೆಕ್ಟ್‌ಗಳನ್ನು ತೆಗೆದುಕೊಳ್ಳಬೇಕು ಎಂದು ಮಾಡಿದರೆ ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ಆದರೂ ಇತರ ಪ್ರಾಜೆಕ್ಟ್‌ಗಳ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದನ್ನು ವಿಚಾರ ಮಾಡುತ್ತೇನೆ.

ಇನ್ನು ಗೋದಾವರಿ ಬೇಸಿನ್‌ನಲ್ಲಿ ಕಾರಂಜಿ ಪ್ರಾಜೆಕ್ಟನ್ನು 4ನೇ ಪಂಚವಾರ್ಷಿಕ ಯೋಜನೆಯಲ್ಲಿ ತೆಗೆದುಕೊಳ್ಳಬೇಕು ಎಂದು ಹೇಳಿದ್ದಾರೆ. ಅದು 4ನೇ ಪಂಚವಾರ್ಷಿಕ ಯೋಜನೆ ಫೈನಲೈಸ್ ಆಗುವ ತನಕ ಏನೂ ಮಾಡುವುದಕ್ಕಾಗುವುದಿಲ್ಲ. ಒಬ್ಬ ಮಾನ್ಯ ಸದಸ್ಯರು ಪೇಪರ್‌ನಲ್ಲಿ ಓದಿರುವುದನ್ನು ಹೇಳಿದರು. ನ್ಯಾಷನಲ್ ಡೆವಲಪ್‌ಮೆಂಟ್ ಕೌನ್ಸಿಲ್ ಮೀಟಿಂಗ್ ಈ ತಿಂಗಳು 22–23ನೇ ತಾರೀಖು ಸೇರುತ್ತದೆ. ಅದರಲ್ಲಿ 4ನೇ ಪಂಚವಾರ್ಷಿಕ ಯೋಜನೆಯ ಕೆಲಸವನ್ನು ಫೈನಲೈಸ್ ಮಾಡುವಾಗ ಯಾವ ಯಾವ ಪ್ರಾಜೆಕ್ಟ್ ಹೊಸದಾಗಿ ತೆಗೆದುಕೊಳ್ಳಬೇಕು, ಎಷ್ಟು ದುಡ್ಡು ಒದಗಿಸಬೇಕು ಎನ್ನುವ ಪ್ರಶ್ನೆ ಉದ್ಭವವಾಗುತ್ತದೆ. ಆಮೇಲೆ ಎಷ್ಟೆಷ್ಟು ಹಣ ಕೊಡಬೇಕು ಎನ್ನುವ ಯೋಚನೆ ಮಾಡುತ್ತೇವೆ.

ಇನ್ನು ಒಬ್ಬ ಮಾನ್ಯ ಸದಸ್ಯರು 213 ಕೋಟಿ ರೂಪಾಯಿ ಆದಾಯದಲ್ಲಿ 30 ಕೋಟಿ ರೂಪಾಯಿ ಉಳಿಸುವುದಕ್ಕಾಗುವುದಿಲ್ಲವೇ ಎಂದು ಹೇಳಿದ್ದಾರೆ. 30 ಕೋಟಿ ರೂಪಾಯಿ ಉಳಿಸುವುದು ಅಷ್ಟು ಸುಲಭ ಸಾಧ್ಯವಿಲ್ಲ.

ಇನ್ನು ಇರ್ರಿಗೇಷನ್ ಪ್ರಾಜೆಕ್ಟ್‌ಗಳಲ್ಲಿ ಕೆಲವು ಕಮಿಟೆಡ್ ಡೆವಲಪ್‌ಮೆಂಟ್ ವರ್ಕ್ಸ್ ಬರುತ್ತದೆ. ಅದಕ್ಕೆಲ್ಲಾ ದುಡ್ಡು ಒದಗಿಸಬೇಕಾಗುತ್ತದೆ. ಅದನ್ನು ಹಾಗೆ ಬಿಡುವ ಹಾಗಿಲ್ಲ. ಈ ಸ್ಕೀಂನಲ್ಲಿ ಏನು ಇದೆಯೋ ಅದನ್ನೆಲ್ಲಾ ಮಾಡಬೇಕು. ಆದರೆ ಹೊಸದಾಗಿ ತೆಗೆದುಕೊಳ್ಳುವುದನ್ನು ಕೈಬಿಡಬಹುದು. ಸ್ಕೀಂನಲ್ಲಿ ಇರುವ ಕೆಲಸವನ್ನು ಕಡಿಮೆ ಮಾಡುವ ಹಾಗಿಲ್ಲ. ಆ ರೀತಿ ಮಾಡಲೂ ಸಾಧ್ಯವಿಲ್ಲ. ನಾವು ಯೋಜನೆ ಮಾಡುವಾಗ ಸೇವಿಂಗ್ಸ್ ಮಾಡುವುದಕ್ಕೆ ಸಾಧ್ಯವೂ ಇದೆ ಮತ್ತು ಎಷ್ಟುಮಟ್ಟಿಗೆ ಹೊಸದಾಗಿ ಸಂಪನ್ಮೂಲಗಳನ್ನು ಹೆಚ್ಚಿಸಿಕೊಳ್ಳುವುದಕ್ಕೆ ಸಾಧ್ಯವಿದೆ ಎನ್ನುವುದನ್ನೂ ಸಹ ನೋಡುತ್ತೇವೆ.

(ಶ್ರೀ ವೀರೇಂದ್ರ ಪಾಟೀಲ್)

ಇನ್ನು ಆಲಮಟ್ಟಿ ನಾರಾಯಣಪುರದ ಕೆಲಸದಲ್ಲಿ ಆಲಮಟ್ಟಿಯನ್ನು ಕೈಬಿಡುತ್ತಾರೆಂದು ಎನ್ನುವುದೇನೂ ಇಲ್ಲ. ನಾವು ಯೋಜನೆ ತೆಗೆದುಕೊಳ್ಳಬೇಕಾದರೆ ಆಲಮಟ್ಟಿ ಡ್ಯಾಮ್ ಕಟ್ಟಬೇಕಾಗಿ ಬಂದೇ ಬರುತ್ತದೆ. ಆಲಮಟ್ಟಿಗೆ ಮುಖ್ಯವಾಗಿ ರಿಸರ್ವಾಯರ್ ಬರುವುದು, ನಾರಾಯಣಪುರಕ್ಕೆ ಡೈವರ್ಷನ್ ಬರುವುದರಿಂದ ನಾರಾಯಣಪುರ ಪ್ರಾಜೆಕ್ಟನ್ನೂ ಮುಂದುವರಿಸಿಕೊಂಡು ಹೋಗಬೇಕು ಎನ್ನುವುದನ್ನೂ ವಿಚಾರ ಮಾಡುತ್ತಿದ್ದೇವೆ.

ಇನ್ನು ಶ್ರೀ ಸಣಿಕೊಪ್ಪ ಅವರು ಹೇಳಿದ ಹಾಗೆ ಕೃಷ್ಣಾನದಿ ಪ್ರಾಜೆಕ್ಟ್ ಕಟ್ಟುವುದಕ್ಕೆ ಈಗ ನೀರು ಇಲ್ಲದೇ ಜಗಳವಾಗುತ್ತಾ ಇವೆ. ಈಗ ಏನಾಗಿದೆ ಎಂದರೆ ಸಣ್ಣ ಸಣ್ಣ ಹಳ್ಳಗಳಲ್ಲಿ ಹರಿದುಕೊಂಡು ಹೋಗುವ ನೀರನ್ನು ಮಹಾರಾಷ್ಟ್ರದಲ್ಲಿರುವ ಅನ್‌ಆಥರೈಸ್ಡ್ ಭಂಡಾರಗಳು ಮೇಲುಗಡೆ ನೀರು ಕಟ್ಟಿಕೊಂಡು ನೀರು ಬಿಟ್ಟಿದ್ದೇವೆ ಎಂದು ಹೇಳುತ್ತಾರೆ. ಹೀಗಾಗಿ ನೀರು ಬಾರ್ಡರ್‌ಗೆ ಬರುತ್ತಾ ಇಲ್ಲ. ಈ ಪರಿಸ್ಥಿತಿ ಇರುವುದರಿಂದ ಮಹಾರಾಷ್ಟ್ರ ಸರ್ಕಾರಕ್ಕೆ ನೀರನ್ನು ಬಿಡಿರಿ ಎಂದು ಪತ್ರ ಬರೆದಿದ್ದೇವೆ. ಇದರ ಬಗ್ಗೆ ಪತ್ರ ವ್ಯವಹಾರ ನಡೆಯುತ್ತಾ ಇದೆ.

ಅವರು ಒಂದೆರಡು ಸಲ ನೀರು ಬಿಟ್ಟಿದ್ದೇವೆಂದು ಹೇಳುತ್ತಾರೆ. ಅವರು ನೀರು ಬಿಟ್ಟಿದ್ದರೂ ನಮ್ಮ ಬಾರ್ಡರ್‌ಗೆ ಬರುವುದರೊಳಗಾಗಿ ನೀರು ನಿಂತು ಹೋಗಿರುತ್ತದೆ. ಅವರು ಕೊಯನಾದಿಂದ ತಮ್ಮ ಬಾರ್ಡರ್‌ವರೆಗೂ ಅನೇಕ ಕಡೆ ಬಂಡಾರಗಳನ್ನು ಹಾಕಿಕೊಂಡಿದ್ದಾರೆ, ಹಾಗೆ ಬಂದ ನೀರನ್ನೆಲ್ಲ ಉಪಯೋಗ ಮಾಡುವುದರಿಂದ ನಮ್ಮ ಬಾರ್ಡರಿಗೆ ನೀರು ಬರುವುದೇ ಕಷ್ಟವಾಗಿದೆ. ಇದಕ್ಕಾಗಿ ಮಹಾರಾಷ್ಟ್ರ ಸರ್ಕಾರದೊಡನೆ ಪತ್ರವ್ಯವಹಾರ ಮಾಡುತ್ತಿದ್ದೇವೆ. ಈ ಕಷ್ಟವನ್ನು ತಪ್ಪಿಸಬೇಕಾದರೆ ನಾವೂ ನಮ್ಮ ಭಾಗದಲ್ಲಿ ಬಂಡಾರಗಳನ್ನು ಮಾಡಬೇಕಾಗುತ್ತದೆ. ಆ ರೀತಿ ಬಂಡಾರಗಳನ್ನು ಹಾಕಬೇಕು ಎಂದು ಅಂದಾಜುಗಳನ್ನು ತಯಾರು ಮಾಡಿದ್ದೇವೆ, ಕೆಲವು ಕೆಲಸ ಪ್ರಾರಂಭ ಮಾಡಿದ್ದೇವೆ, ಇನ್ನು ಕೆಲವು ಕೆಲಸಗಳನ್ನು ಈ ವರ್ಷ ತೆಗೆದುಕೊಳ್ಳುವುದಕ್ಕೆ ವಿಚಾರ ಮಾಡುತ್ತೇವೆ.

12 Noon

ಯಗಚಿ ಡೈವರ್ಷನ್ ವಿಚಾರವಾಗಿ ಹೇಳುವುದಾದರೆ ಈ ಯೋಜನೆಗೆ ಏಳೆಂಟು ಕೋಟಿ ರೂಪಾಯಿಗಳು ಖರ್ಚಾಗುತ್ತದೆ. ಈ ಯೋಜನೆಯನ್ನು ಕೇಂದ್ರ ಸರ್ಕಾರಕ್ಕೆ ತಾಂತ್ರಿಕ ಮಂಜೂರಾತಿಯ ಸಲುವಾಗಿ ಕಳಿಸಿದ್ದೇವೆ. ಅದನ್ನು ನಾಲ್ಕನೆ ಯೋಜನೆಯಲ್ಲಿ ತೆಗೆದುಕೊಳ್ಳಬೇಕೆಂಬ ವಿಚಾರವಿದೆ. ಯಗಚಿ ಪ್ರಾಜೆಕ್ಟಿನಿಂದ 34-35 ಸಾವಿರ ಎಕರೆ ಜಮೀನಿಗೆ ಹಾಸನ ಜಿಲ್ಲೆಯಲ್ಲಿ ನೀರಾವರಿ ಸೌಲಭ್ಯ ಸಿಕ್ಕುತ್ತದೆ. ವಾಣಿವಿಲಾಸ ಸಾಗರದ ಕೆರೆಗೆ ನೀರನ್ನು ಡೈವರ್ಟ್ ಮಾಡಿದರೆ ಅಲ್ಲಿ ಸುಮಾರು 20-25 ಸಾವಿರ ಎಕರೆ ನೀರಾವರಿ ಹೆಚ್ಚಿನ ಪ್ರಮಾಣದಲ್ಲಿ ಕೊಡುವುದಕ್ಕೆ ಅನುಕೂಲವಾಗುತ್ತದೆ. ವಾಣಿವಿಲಾಸ ಕೆರೆಯನ್ನು ಕಟ್ಟಿದಾಗ ವೇದಾವತಿ ನದಿಯ ನೀರನ್ನು ಲಿಫ್ಟ್ ಇರಿಗೇಷನ್‌ಗಾಗಲೀ, ಅಲ್ಲಿ ಕೆರೆಕಟ್ಟೆಗಳನ್ನು ಕಟ್ಟಿ ನೀರಾವರಿಗೆ ನೀರನ್ನು ಉಪಯೋಗಿಸಿಕೊಳ್ಳುವುದಾಗಲೀ ಮಾಡಬಾರದು ಎಂದು ಮೊದಲೇ ಸರ್ಕಾರಿ ಆರ್ಡರ್ ಆಗಿದೆ. ಯಗಚಿ ನೀರು ಅದಕ್ಕೆ ಡೈವರ್ಟ್ ಮಾಡಿದರೆ ಅಲ್ಲಿ ಅನೇಕ ವರ್ಷಗಳಿಂದ ಯಾವ ನೀರಿಲ್ಲ ಎಂದು ಹೇಳುತ್ತಿದ್ದಾರೆ ಅಂಥ ಜನಗಳಿಗೆ ಸ್ವಲ್ಪ ಪ್ರಮಾಣದಲ್ಲಿಯಾದರೂ ನೀರಾವರಿ ಅನುಕೂಲತೆ ಮಾಡಿಕೊಡುವುದಕ್ಕೆ ಸಾಧ್ಯವಾಗುತ್ತದೆ. ಈ ಯೋಜನೆ ಆದಬಳಿಕ ಆ ವಿಚಾರವನ್ನು ಪರಿಶೀಲನೆ ಮಾಡುವುದಕ್ಕೆ ಸಾಧ್ಯವಾಗುತ್ತದೆ.

ದರೂರು ಸೇತುವೆ ಕಟ್ಟಬೇಕೆಂದು ಹೇಳಿದ್ದಾರೆ. ಅದು ಬಹಳ ಆವಶ್ಯಕವಾದುದು. ಅನೇಕ ಹಳ್ಳಿಗಳು ಕಟ್ ಆಫ್ ಆಗುತ್ತವೆ. ಇದಕ್ಕೆ ಬೇಕಾಗಿರುವ ಪ್ಲಾನ್ ಎಸ್ಟಿಮೇಟ್ ಮಾಡಿಸಿದ್ದೇವೆ. ಇದಕ್ಕೆ 60—70 ಲಕ್ಷ ರೂಪಾಯಿ ಆಗುತ್ತದೆ. ಅಷ್ಟು ದುಡ್ಡನ್ನು ನಾವು ಒದಗಿಸುವುದಕ್ಕೆ ಸಾಧ್ಯವಿಲ್ಲ. ಕೇಂದ್ರ ಸರ್ಕಾರದ ಸೆಂಟ್ರಲ್ ರೋಡ್ ಫಂಡಿನಿಂದ ಈ ಕಾರ್ಯವನ್ನು ಮಾಡಬೇಕಾಗುತ್ತದೆ. ಎಂದು ಹೇಳುತ್ತಿದ್ದೇವೆ ಬಹುಶಃ ನಾಲ್ಕನೆ ಯೋಜನೆಯಲ್ಲಿ ಇದಕ್ಕೆ ಸೆಂಟ್ರಲ್ ರೋಡ್ ಫಂಡಿನಿಂದ ಏನಾದರೂ ಕೊಡುವುದಕ್ಕಾಗುತ್ತದೆಯೋ ಎಂದು ಪ್ರಯತ್ನ ಮಾಡುತ್ತೇವೆಂದು ಮಾತ್ರ ಹೇಳುತ್ತೇನೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ದೊಡ್ಡ ನೀರಾವರಿ ಯೋಜನೆಗಳಿಗೆ ಅವಕಾಶವಿಲ್ಲ. ಅದಕ್ಕಾಗಿ ಲಿಫ್ಟ್ ಇರಿಗೇಷನ್‌ಗೆ ಸ್ವಲ್ಪಮಟ್ಟಿಗೆ ಪ್ರಾಶಸ್ತ್ಯ ಕೊಡಿ ಎಂದು ಶ್ರೀ ಇಬಿನಬ್ಬ ಅವರು ಕೇಳಿದ್ದಾರೆ. ಅದನ್ನು ಮನಗಂಡೇ ನೀರಾವರಿಗೆ ಹೆಚ್ಚಿನ ಅನುಕೂಲತೆಗಳನ್ನು ಮಾಡಿಕೊಡುತ್ತಿದ್ದೇವೆ. ಅಲ್ಲಿ ಎಷ್ಟೋ ನದಿಗಳಿವೆ, ಪರ್ಮನೆಂಟ್ ವಾಟರ್ ಸಪ್ಲೈ ಇರುತ್ತದೆ. ಅಲ್ಲಿ ಪಂಪ್ ಸೆಟ್‌ಗಳನ್ನು ಸಬ್ಸಿಡಿ

ಮಾಡಿಸುವಂಥ ಕಾರ್ಯಕ್ರಮ ಒಳ್ಳೆಯ ರೀತಿಯಿಂದ ನಡೆದಿದೆ. ಕೋಲಾರ, ತುಮಕೂರು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ದೊಡ್ಡ ನೀರಾವರಿ ಯೋಜನೆಗೆ ಅನುಕೂಲವಿಲ್ಲದೆ ಇರುವುದರಿಂದ ಬಾವಿಗಳನ್ನು ತೆಗೆದು ಭೂಗರ್ಭದಲ್ಲಿ ಇರುವಂಥ ನೀರನ್ನು ಉಪಯೋಗ ಮಾಡಿಕೊಳ್ಳಬೇಕಾಗಿದೆ. ಅದಕ್ಕಾಗಿ ಹೆಚ್ಚಿನ ಪ್ರಮಾಣದಲ್ಲಿ ಅನುಕೂಲ ಮಾಡಿಕೊಡಬೇಕೆಂದು ಅಗ್ರಿಕಲ್ಚರಲ್ ರೀ-ಫೈನಾನ್ಸ್ ಕಾರ್ಪೊರೇಷನ್‌ನಿಂದ ಸಹಾಯ ಪಡೆಯುತ್ತಿದ್ದೇವೆ. ಕೋಲಾರ ಮತ್ತು ತುಮಕೂರು ಜಿಲ್ಲೆಗಳಲ್ಲಿ ಈ ರೀತಿಯಿಂದ ಲಿಫ್ಟ್ ಇರಿಗೇಷನ್‌ಗೆ ಅನುಕೂಲ ಮಾಡಿಕೊಡುತ್ತಿದ್ದೇವೆ. ಈ ರೀತಿಯಿಂದ ಎಲ್ಲೆಲ್ಲಿ ಸಾಧ್ಯವಾಗುತ್ತದೆಯೋ ಅಲ್ಲೆಲ್ಲ ನೀರಾವರಿ ಸೌಕರ್ಯವನ್ನು ಒದಗಿಸುವುದಕ್ಕೆ ಸಾಕಷ್ಟು ಪ್ರಯತ್ನ ಮಾಡುತ್ತಿದ್ದೇವೆ.

ಲಕ್ಷ ರೂಪಾಯಿಗಳ ಕೆಲಸ ಪಟ್ಟಿ ವಿಚಾರ ಕೇಳಿದ್ದಾರೆ. ಅದನ್ನು ವಿಚಾರಿಸುತ್ತೇನೆ. ಮಾನ್ಯ ಸದಸ್ಯರು ಹೋದ ಸಲ ಹೇಳಿದರು. ಅವರು ಹೇಳಲಾರದೆ ಇದ್ದರೂ ಈ ವರ್ಷ ಸರ್ಕಾರಕ್ಕೆ ಹೊಸದಾಗಿ ತೆಗೆದುಕೊಳ್ಳುವುದಕ್ಕಾಗುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಮೈನರ್ ಇರಿಗೇಷನ್ ಸ್ಪಿಲ್ ಓವರ್ ಬೇಕಾದಷ್ಟಿದೆ, ಸುಮಾರು 16 ಕೋಟಿ ರೂಪಾಯಿಗಳವರೆಗೂ ಇದೆ. ಕೇಂದ್ರ ಸರ್ಕಾರದಲ್ಲಿ ಕೇಳಿದರೆ, ಇಷ್ಟು ದೊಡ್ಡ ಮೊತ್ತದ ಸ್ಪಿಲ್ ಓವರ್ ಇಟ್ಟುಕೊಂಡು ಹೊಸ ಕೆಲಸಗಳನ್ನು ಏಕೆ ಸಜೆಸ್ಟ್ ಮಾಡುತ್ತೀರಿ, ಇರುವ ದುಡ್ಡಿನಲ್ಲಿ ಬಾಕಿ ಉಳಿದಿರುವ ಕೆಲಸಗಳನ್ನು ಮಾಡಲು ಪ್ರಯತ್ನ ಮಾಡಿ ಎಂದು ಹೇಳುತ್ತಾರೆ. ಏನು ಪಟ್ಟಿ ತಯಾರಾಗುತ್ತಿದೆ ಅದನ್ನು ಸಭೆಯ ಮುಂದೆ ಇಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಪಿ. ಡಬ್ಲ್ಯು.ಡಿ. ಸರ್ಕಲ್ ಬಗ್ಗೆ ಕೇಳುತ್ತಿದ್ದಾರೆ. ಪೇ ಕಮೀಷನ್ ರಿಪೋರ್ಟ್ ಸರ್ಕಾರದ ಮುಂದೆ ಇದೆ. ಸಂಬಳ ಸಾರಿಗೆಗಳನ್ನು ಕೊಡುವುದು, ಡಿ. ಎ. ಕೊಡುವುದು ಇದನ್ನೆಲ್ಲ ಮಾಡಿ ಎಂದು ಹೇಳುತ್ತಾರೆ. ಅವರು ಮಾಡಿರುವ ಸಲಹೆಯಂತೆ ಕೆಲವು ಸರ್ಕಲ್‌ಗಳು ಬೇಡ, ಡಿವಿಜನ್‌ಗಳು ಬೇಡ ಎಂದರೆ ಅದಕ್ಕೆ ಮಾತ್ರ ಒಪ್ಪುವುದಿಲ್ಲ, ಅದಕ್ಕೆ ಕೈ ಹಚ್ಚಬೇಡಿ ಎಂದು ಹೇಳುತ್ತಾರೆ. ಪೇ ಕಮಿಷನ್ ರಿಪೋರ್ಟ್ ಪರಿಶೀಲನೆ ಮಾಡುತ್ತಿದ್ದೇವೆ. ಅವರು ಕೆಲವು ಸರ್ಕಲ್‌ಗಳನ್ನು ಕಡಮೆ ಮಾಡಿ ಎಂದು ಹೇಳಿದ್ದಾರೆ. ವರ್ಕ್ ಲೋಡ್ ಇಲ್ಲ ಎಂಬುದನ್ನು ನೋಡಿಕೊಂಡು ಹೇಳಿದ್ದಾರೆ. ಅವರ ಸಲಹೆಗಳು ಸರ್ಕಾರದ ಪರಿಶೀಲನೆಯಲ್ಲಿವೆ.

ಮಲಪ್ರಭ ಯೋಜನೆ ಬಗ್ಗೆ ಹೇಳುವುದಾದರೆ ಅದರ ಯೋಜನೆ ಬಹಳ ಹಿಂದಿನದು. ಸುಮಾರು 2 ಲಕ್ಷ ಎಕರೆಗೆ ನೀರಾವರಿಯಾಗಬಹುದು. ಆರೇಳು ಲಕ್ಷ ಎಕರೆವರೆಗೂ ನೀರಾವರಿ ಮಾಡಬಹುದು ಎಂದು ರಿವೈಸ್ಡ್ ಸ್ಕೀಂ ಮಾಡಿದ್ದಾರೆ. ಅದು ಇನ್ನೂ ಪೂರ್ತಿ ತಯಾರಾಗಿ ಬಂದಿಲ್ಲ. ನಾನು ಹೋದಾಗ ಚೀಫ್ ಇಂಜಿನಿಯರಿಗೆ ಹೇಳಿದ್ದೇನೆ, ರಿವೈಸ್ಡ್ ಸ್ಕೋಪ್ ಏನಿದೆ, ನೀರು ಎಷ್ಟು ಪ್ರಮಾಣದಲ್ಲಿ ಬರುತ್ತದೆ ಎಂದು ಲೆಕ್ಕ ಹಾಕಿ ಪ್ರಾಜೆಕ್ಟ್ ರಿಪೋರ್ಟ್ ಕಳಿಸಿ, ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದೇನೆ. ಇದನ್ನೆಲ್ಲ ವಿಚಾರ ಮಾಡಬೇಕಾಗುತ್ತದೆ.

ಫ್ಲಡ್ ಪ್ರೊಟೆಕ್ಷನ್ ವಿಷಯ ಮಾನ್ಯ ಸದಸ್ಯರಾದ ಫರ್ನಾಂಡಿಸ್ ಅವರು ಕೇಳುತ್ತಿದ್ದಾರೆ. ಅದರ ವಿಷಯ ಈಗಲೇ ಹೇಳುವುದು ಕಷ್ಟವಾಗುತ್ತದೆ. ಕೇಂದ್ರ ಇದಕ್ಕೆ ನಮಗೆ ಏನೂ ಸಹಾಯ ಮಾಡುತ್ತಿಲ್ಲ. ಅದಕ್ಕಾಗಿ ಇದರ ಬಗ್ಗೆ ಏನು ಮಾಡಬೇಕು ಎನ್ನುವುದನ್ನು ನೇರವಾಗಿ ಹೇಳುವುದಕ್ಕಾಗುವುದಿಲ್ಲ.

ಮಾನ್ಯ ಸದಸ್ಯರು ಅಧಿಕಾರಿಗಳಿಗೆ ಬರೆದ ಪತ್ರಗಳಿಗೆ ಅಕ್ನಾಲೆಡ್ಜ್ ಮಾಡಬೇಕು ಎಂದು ಸರ್ಕ್ಯುಲರ್ ಕೊಡಲಾಗಿದೆ. ಆ ರೀತಿಯಿಂದ ಯಾವುದೇ ಅಧಿಕಾರಿ ಮಾಡುತ್ತಿಲ್ಲ ಎಂಬುದನ್ನು ಮಾನ್ಯ ಸದಸ್ಯರು ನನ್ನ ಗಮನಕ್ಕೆ ತಂದರೆ ಅವರ ಎಕ್ಸ್‌ಪ್ಲನೇಷನ್ ಕಾಲ್‌ಫಾರ್ ಮಾಡುತ್ತೇನೆ.

ಹಾರಂಗಿ ಯೋಜನೆಗೆ ಏನು ದುಡ್ಡು ಒದಗಿಸುತ್ತಾರೆ ಎನ್ನುವುದರ ಮೇಲೆ ಅದು ಅವಲಂಬಿಸುತ್ತದೆ. ಅದಕ್ಕಾಗಿ ವಿರೋಧ ಪಕ್ಷದ ನಾಯಕರು ಕೂಡ ಈ ಪ್ರಶ್ನೆ ಪರಿಶೀಲನೆ ಮಾಡುತ್ತಿದ್ದಾರೆ. ಎಷ್ಟರಮಟ್ಟಿಗೆ ನಮ್ಮಲ್ಲಿರುವ ಹಣವನ್ನು ನಾವು ಅದಕ್ಕೆ ಡೈವರ್ಟ್ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎನ್ನುವುದನ್ನು ನಾವು ಕಾದು ವಿಚಾರ ಮಾಡಬೇಕಾಗುತ್ತದೆ. ಹಾರಂಗಿ ಕೈಬಿಡಬಾರದು ಎನ್ನುವ ವಿಚಾರವನ್ನು ಇಟ್ಟುಕೊಂಡಿದ್ದೇವೆ, ಅದನ್ನು ಮುಂದುವರಿಸಬೇಕು ಎನ್ನುವ ವಿಚಾರವಿದೆ. ಸರ್ಕಾರದವರು ಅದರ ಬಗ್ಗೆ ಎಷ್ಟು ದುಡ್ಡು ಒದಗಿಸುವುದಕ್ಕೆ ಸಾಧ್ಯವಾಗುತ್ತದೆ ಎಂದು ವಿಚಾರಮಾಡಿ ಕಾರ್ಯಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

Mr. SPEAKER.—I would like to know from the Hon. Leader of Opposition, in the light of the assurance given by the Hon. Chief Minister, what he proposes to do in regard to the motion of hon. Member Sri H. N. Nanje Gowda.

ಶ್ರೀ ಎಸ್. ಶಿವಪ್ಪ.—ನಿರ್ಣಯದ ವಿಷಯ ಮತ್ತು ಅದನ್ನು ಕಾರ್ಯಗತ ಮಾಡುವ ವಿಷಯವನ್ನು ಮಾನ್ಯ ಮುಖ್ಯ ಮಂತ್ರಿಯವರು ಒಪ್ಪಿಕೊಂಡಿದ್ದಾರೆ. ನಮಗೆ ಇದ್ದ ರಿಸೋರ್ಸಸ್‌ನಲ್ಲಿ 30 ಕೋಟಿ ರೂಪಾಯಿ ಒದಗಿಸುವ ವಿಷಯದಲ್ಲಿ ಸಾಧ್ಯವಾದುದನ್ನೆಲ್ಲ ಮಾಡುತ್ತೇನೆ ಎಂದು ಹೇಳಿದ್ದಾರೆ, ಮಾನ್ಯ ಸದಸ್ಯರಾದ ನಂಜೇಗೌಡರು ಕೂಡ ಮಂತ್ರಿಗಳು ಒಪ್ಪಿಕೊಂಡರೆ ವಾಪಸು ತೆಗೆದುಕೊಳ್ಳುತ್ತೇನೆ ಎಂದು ಹೇಳಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳು ಕೊಟ್ಟಿರುವ ಭರವಸೆ ಮೇಲೆ ಸೂಚನೆಯನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಅವಕಾಶ ಕೊಡಬೇಕು ಎಂದು ಹೇಳುತ್ತೇನೆ.

ಶ್ರೀ ಎಚ್. ಎನ್. ನಂಜೇಗೌಡ.—ಮಾನ್ಯ ಮುಖ್ಯ ಮಂತ್ರಿಗಳು ತಾತ್ವಿಕವಾಗಿ ಭಾರಿ ನೀರಾವರಿ ಯೋಜನೆಗಳಿಗೆ ಹೆಚ್ಚಿನ ದುಡ್ಡನ್ನು ಒದಗಿಸಿಕೊಡಲು ಒಪ್ಪಿಕೊಂಡರು. ಇಂತಿಷ್ಟೇ ಹಣವನ್ನು ಒದಗಿಸುತ್ತೇವೆಂದು ಹೇಳುವ ಪರಿಸ್ಥಿತಿಯಲ್ಲಿಲ್ಲದೇ ಇದ್ದರೂ ಯಾವುದೇ ರೀತಿಯಿಂದ ಹೆಚ್ಚಿನ ಹಣವನ್ನು ಒದಗಿಸುವುದಕ್ಕೆ ನಾವು ಕಳಕಳಿಯನ್ನು ಇಟ್ಟುಕೊಂಡಿದ್ದೇವೆನ್ನುವ ಭರವಸೆಯನ್ನು ಕೊಟ್ಟರು. ಹಾಗೂ ಮಾನ್ಯ ವಿರೋಧ ಪಕ್ಷದ ನಾಯಕರು ಇದನ್ನು ವಾಪಸು ತೆಗೆದುಕೊಳ್ಳುವುದು ಸೂಕ್ತ ಎಂದು ಹೇಳಿದ್ದಾರೆ. ಆದ್ದರಿಂದ ಈ ಸೂಚನೆಯನ್ನು ವಾಪಸು ತೆಗೆದುಕೊಳ್ಳುವುದಕ್ಕೆ ಸಭೆಯ ಅನುಮತಿ ಬೇಡುತ್ತೇನೆ.

[The motion was by leave withdrawn.

MR. SPEAKER.—Now, I shall put the demands to the vote of the House. The question is:

"That the respective sums, not exceeding the amounts mentioned, be granted to the Government to defray the charges which will come in course of payment during the financial year for the period ending with 31st day of March, 1970 in respect of Demand No. 6, 29, 30, 30A, 30B, 31, 31A, 32, 43, 45, 46, 47, 48 and 50.

The motion was adopted.

As directed by the chair the motion for Demand for grants adopted by the House are reproduced below:

DEMAND NO. 6.—OTHER TAXES—ADMINISTRATION

13. Other Taxes and Duties.

"That a sum not exceeding Rs. 14,89,000 be granted to the Government to defray the charges which will come in course of payment during the financial year for the period ending 31st day of March 1970, in respect of 'Other Taxes and Duties'."

DEMAND NO. 29.—IRRIGATION (COMMERCIAL.)

43. Irrigation, Navigation, Embankment and Drainage Works (Commercial)

"That a sum not exceeding Rs. 8,94,87,000 be granted to the Government to defray the charges which will come in course of payment during the financial year for the period ending 31st day of March 1970, in respect of 'I. N. E. and D. Works (Commercial)'."

DEMAND NO. 30.—IRRIGATION—NON-COMMERCIAL,

44. Irrigation, Navigation, Embankment and Drainage Works (Non-Commercial.)

"That a sum not exceeding Rs. 3,33,31,000 be granted to the Government to defray the charges which will come in course of payment during the financial year for the period ending 31st day of March 1970, in respect of 'I. N. E. and D. Works (Non-Commercial)'."

DEMAND NO. 30-A.—ELECTRICITY SCHEMES.

45. Electricity Schemes.

"That a sum not exceeding Rs. 6,15,26,000 be granted to the Government to defray the charges which will come in course of payment during the financial year for the period ending 31st day March 1970, in respect of 'Electricity Schemes'."

DEMAND NO. 30 B.—IRRIGATION

48. Capital Outlay on Irrigation, Navigation, Embankment and Drainage Works.

"That a sum not exceeding Rs. 88,00,000 be granted to the Government to defray the charges which will come in course of payment during the financial year for the period ending 31st day of March 1970, in respect of 'Capital Outlay on I. N. E. and D. Works'."

DEMAND NO. 31.—PUBLIC WORKS.

50. Public Works.

"That a sum not exceeding Rs. 29,90,13,000 be granted to the Government to defray the charges which will come in course of payment during the financial year for the period ending 31st day of March 1970, in respect of 'Public Works'."

DEMAND NO. 31 A.—CAPITAL OUTLAY ON PUBLIC WORKS.

52. Capital Outlay on Public Works.

"That a sum not exceeding Rs. 65,80,000 be granted to the Government to defray the charges which will come in course of payment during the financial year for the period ending 31st day of March 1970, in respect of 'Capital Outlay on Public Works'."

DEMAND NO. 32.—PORTS AND PILOTAGE

53. Ports and Pilotage.

"That a sum not exceeding Rs. 10,46,000 be granted to the Government to defray the charges which will come in course of payment during the financial year for the period ending 31st day of March 1970, in respect of 'Ports and Pilotage'."

DEMAND NO. 43.—CAPITAL OUTLAY ON IMPROVEMENT OF PUBLIC HEALTH

94. Capital Outlay on Improvement of Public Health.

"That a sum not exceeding Rs. 1,26,37,000 be granted to the Government to defray the charges which will come in course of payment during the financial year for the period ending 31st day of March 1970, in respect of 'Capital Ontlay on Improvement of Public Health'."

DEMAND NO. 45.—CAPITAL OUTLAY ON IRRIGATION

99. Capital Outlay on Irrigation, Navigation, Embankment and Drainage Works (Commercial).

"That a sum not exceeding Rs. 17,14,08,000 be granted to the Government to defray the charges which will come in course of payment during the financial year for the period ending 31st day of March 1970, in respect of 'Capital Outlay on Irrigation, Navigation, Embankment and Drainage Works (Commercial)'."

DEMAND NO. 46.—CAPITAL OUTLAY ON IRRIGATION—NON-COMMERCIAL

100. Capital Outlay on I.N.E. and D. Works (Non-Commercial).

"That a sum not exceeding Rs. 2,17,00,000 be granted to the Government to defray the charges which will come in course of payment during the finaneial year for the period ending 31st day of March 1970, in respect of 'Capital Outlay on I.N.E. and D. Works (Non. Commercial).'"

DEMAND NO. 47.—CAPITAL ACCOUNTS OF ELECTRICITY SCHEMES OUTSIDE THE REVENUE ACCOUNT.

101. Capital Outlay on Electricity Schemes.

"That a sum not exceeding Rs. 18,29,63,000 be granted to the Government to defray the charges which will come in course of payment during the financial year for the period ending 31st day of March 1970 in respect of 'Capital Outlay on Electricity Schemes'."

DEMAND NO. 48.—CAPITAL OUTLAY ON PUBLIC WORKS

103. Capital Outlay on Public Works.

"That a sum not exceeding Rs. 8,62,47,000 be granted to the Government to defray the charges which will come in course of payment during the financial year for the period ending 31st day of March 1970 in respect of 'Capital Outlay on Public Works'."

DEMAND NO. 50.—DEVELOPMENT OF MINOR PORTS

110. Capital Outlay on Ports.

"That a sum not exceeding Rs. 62,00,000 be granted to the Government to defray the charges which will come in course of payment during the financial year for the period ending 31st day of March 1970, in respect of 'Capital Outlay on Ports'."

MR. SPEAKER.—There is another point, *i.e.*, the Hon. Chief Minister is in a hurry to proceed to Delhi. I shall be holding over all the questions which are to be answered by the Hon. Chief Minister. Now, the House will rise and meet again at two of the clock.

The House adjourned at Fifteen minutes past Twelve of the Clock and re-assembled at Two of the Clock.

[MR. SPEAKER in the Chair]

Obiturary Reference *re*: the Demise of Sri Sydney A. Thomas Ex. Member, R. A.

MR. SPEAKER.—Before calling questions, I intend to make an obituary announcement.

I regret to inform the House that Mr. Sydney Thomas, a nominated member of the First Assembly, died recently. I convey the sympathy of the House to the bereaved family. In token of sympathy, I request the hon Members to stand in silence for a minute.

(*The House Stood in Silence for a Minute.*)

STARRED QUESTIONS

(to which oral Answers were given)

New Railway Lines in the State

144 Sri N. A. CHANNE GOWDA (Pandavapura).—

Will the Minister for Public Works be pleased to state :—

(a) the number of new Railway lines in the State that have been proposed by the State Government to Central Government ; which are they ;

(b) whether any representations for laying the railway line between Pandavapura-Tumkur have been received, if so, the action taken by them in this behalf ;

(c) the action taken by them to convert the Mysore-Bangalore railway line into broadgauge and to electrify the same ?

Sri K. LAKKAPPA (Minister for Public Works).—

(a) The following railway lines were recommended:

1. Conversion of the Hospet-Hubli line into Broad Gauge.
2. A new broad gauge line from Hubli port to Karwar port.
3. Kottur-Harihar link line.
4. Harihar to Moodabidri to run through Shimoga, Bhadravathi, Chickmagalur.
5. Talaguppa to Karwar *via* Sirsi.
6. Gadag-Wadi line.
7. Chamarajanagar-Satyamangalam line.

(b) Yes. The Ministry of Railways has been addressed in the matter.

(c) The matter is being pursued.

Sir, there is one correction to the printed answer which may be noted. In reply (a) item 2, instead of 'Hubli port' it may be read as 'Hubli'. The word PORT may be deleted.

Mr. SPEAKER.—This question has come before the House twice or thrice. Let supplementaries be very short. I would like the hon. Members to be brief.

ಶ್ರೀ ಎನ್. ಎ. ಚನ್ನೇಗೌಡ.—ಮೈಸೂರು ಸಂಸ್ಥಾನದಲ್ಲಿ 740 ಮೈಲಿಗಳಷ್ಟು ರೈಲ್ವೆ ಮಾರ್ಗಗಳನ್ನು ಹಾಕುವುದಕ್ಕಾಗಿ ಕೇಂದ್ರಸರ್ಕಾರದವರು 20ಕೋಟಿ ರೂಪಾಯಿಗಳಷ್ಟು ರಿಜರ್ವ್ ಫಂಡಿನಿಂದ ಕೊಟ್ಟರೂ ಹಳೆಯ ಮೈಸೂರು ಪ್ರದೇಶದಲ್ಲಿ ಎಷ್ಟು ಹೊಸ ರೈಲುಮಾರ್ಗಗಳನ್ನು ಹಾಕಿಸಿದ್ದೀರಿ ? ಬೆಂಗಳೂರು-ಮೈಸೂರು ರೈಲ್ವೆ ಮಾರ್ಗವನ್ನು ಎಲೆಕ್ಟ್ರಿಫೈ ಮಾಡುವುದಕ್ಕೆ ಇದ್ದಂಥ ಆತಂಕಗಳೇನು ?

† ಬಸವರಾಜ್ ಮಾಗಾವಿ.—ಈಗ ಹೊಸದಾಗಿ ರೈಲ್ವೆ ಲೈನುಗಳನ್ನು ಹಾಕುವುದರಲ್ಲಿ ಹೊಸ ಮೈಸೂರು ಮತ್ತು ಹಳೆಯ ಮೈಸೂರು ಎಂಬ ಭೇದಭಾವ ಮಾಡುತ್ತಾ ಇಲ್ಲ. ಈಗ ಬೆಂಗಳೂರು-ಮೈಸೂರು ರೈಲ್ವೆ ಮಾರ್ಗವನ್ನು ಎಲೆಕ್ಟ್ರಿಫೈ ಮಾಡಿ ಎಲೆಕ್ಟ್ರಿಕ್ ಟ್ರೈನಿಗೆ

ಬದಲಾವಣೆಮಾಡಬೇಕೆಂದು ಕೇಂದ್ರಸರ್ಕಾರದವರನ್ನು ನಾವು ಒತ್ತಾಯಪಡಿಸಿದ್ದೇವೆ. ಕೇಂದ್ರ ಸರ್ಕಾರದವರು ಮೀಟರ್ ಗೇಜನ್ನು ಬ್ರಾಡ್‌ಗೇಜಾಗಿ ಕನ್‌ವರ್ಟ್ ಮಾಡಬೇಕೆಂದು ತೀವ್ರಾಲೋಚನೆ ಮಾಡುತ್ತಾ ಇದ್ದಾರೆ. ಇದನ್ನು ನಾವು ಎಲೆಕ್ಟ್ರಿಫೈ ಮಾಡಬೇಕೆಂದು ಒತ್ತಾಯ ಮಾಡುತ್ತಿದ್ದೇವೆ. ಅವರೂ ಕೂಡ ಹಂತಹಂತವಾಗಿ ಇದನ್ನು ಮಾಡುತ್ತೇವೆಂದು ಒಪ್ಪಿಕೊಂಡಿದ್ದಾರೆ.

ಶ್ರೀ ಎನ್. ಎ. ಚನ್ನೇಗೌಡ.—ಮೈಸೂರು ಮತ್ತು ಬೆಂಗಳೂರು ರೈಲ್ವೆಮಾರ್ಗವನ್ನು 1943ನೇ ಇಸವಿಯಿಂದಲೇ ಉತ್ತಮ ಪಡಿಸಬೇಕೆಂದು, ಪ್ರಯಾಣಿಕರು ತಮ್ಮ ಎಲ್ಲಾ ಕೆಲಸಕಾರ್ಯಗಳನ್ನು ಮುಗಿಸಿಕೊಂಡು, ಸಾಮಾನುಗಳನ್ನು ತೊಂಡುಕೊಳ್ಳುವುದಕ್ಕೆ ಅನುಕೂಲವಾಗಲೆಂದು ನಮ್ಮ ಪಾಂಡವಪುರ — ತುಮಕೂರು ರೈಲ್ವೆಯನ್ನು ಸರ್ವೆಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ನೆರೆ ರಾಜ್ಯದಲ್ಲಿ ಎಷ್ಟೋ ಹೊಸ ರೈಲುಮಾರ್ಗಗಳನ್ನು ಹಾಕಿರುವಾಗ ಮೈಸೂರು ರಾಜ್ಯದಲ್ಲಿ ಹೆಚ್ಚು ರೈಲುಮಾರ್ಗಗಳನ್ನು ಹಾಕುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಬಸವರಾಜ್ ಮಾಗಾವಿ.—ಈಗಾಗಲೇ ಉತ್ತರದಲ್ಲಿ ಹೇಳಿರುವಂತೆ 7 ರೈಲ್ವೆ ಮಾರ್ಗಗಳನ್ನು ಪ್ರಾರಂಭಮಾಡುವುದಕ್ಕೆ ಸೂಕ್ತ ವ್ಯವಸ್ಥೆಯನ್ನು ಮಾಡುತ್ತಿದ್ದಾರೆಂದು ಹೇಳಿದ್ದೇವೆ. ಮಾನ್ಯ ಸದ್ಯರು ಪಾಂಡವಪುರ—ತುಮಕೂರು ರೈಲು ರಸ್ತೆಯ ವಿಷಯವಾಗಿ ಕೇಳಿದ್ದಾರೆ. ಅದನ್ನು ಕೇಂದ್ರ ಸರ್ಕಾರದವರಿಗೆ ಅದರಲ್ಲಿಯೂ ರೈಲ್ವೆ ಮಂತ್ರಿಗಳಿಗೆ ಮೇಲಿಂದ ಮೇಲೆ ಬರೆದು ಒತ್ತಾಯಮಾಡುತ್ತಿದ್ದೇವೆ. ಅವರು ಅದನ್ನು ಮಾಡುತ್ತೇವೆಂದು ಒಪ್ಪಿಕೊಂಡಿದ್ದಾರೆ. ಮಂಗಳೂರಿಗೆ 128 ಮೈಲಿಗಳವರೆಗೂ ರೈಲು ಮಾರ್ಗ 1971ರಲ್ಲಿ ಮಾಡಿ ಮುಗಿಯತಕ್ಕದ್ದು ಇದೆ.

ಶ್ರೀ ಬಿ. ಪಿ. ಗಂಗಾಧರ್.—(ಅ)ಗೆ ಉತ್ತರವಾಗಿ ಮನವಿಗಳು ಬಂದಿವೆ ಎಂದು ಹೇಳಿದೆ. ಅದರ ಬಗ್ಗೆ ಸರ್ವೆ ನಡೆದಿದೆಯೇ, ಆದರಿಂದ ವ್ಯಾಪಾರಕ್ಕೆ ಅನುಕೂಲವಾಗುತ್ತದೆಂಬುದನ್ನು ಪರಿಗಣಿಸಿದ್ದೀರಾ? ಟ್ರಾಫಿಕ್ ಪೊಟೆನ್‌ಷಿಯಲ್ ಏನು ಇರುತ್ತದೆಂಬುದನ್ನು ನೋಡಿದ್ದೀರಾ? ಈ ಕೆಲಸವನ್ನು ಎಷ್ಟು ದಿವಸಗಳಲ್ಲಿ ಮಾಡುತ್ತೀರಾ?

ಶ್ರೀ ಬಸವರಾಜ್ ಮಾಗಾವಿ.—ಆದರ ಬಗ್ಗೆ ಸರ್ವೆ ನಡೆದಿಲ್ಲ. ಕೇಂದ್ರ ಸರ್ಕಾರಕ್ಕೆ ನಾವು ಅರಿಕೆಮಾಡಿಕೊಂಡಿದ್ದೇವೆ. 1969–70ರಲ್ಲಿ ಕೊಟ್ಟೂರು-ಹರಿಹರ ಮತ್ತು ಯಶವಂತಪುರ-ಚಿತ್ರದುರ್ಗ ರೈಲುಮಾರ್ಗಗಳನ್ನು ಪೂರೈಸಬೇಕೆಂಬುದಾಗಿ ಈ ಪ್ಲಾನಿನಲ್ಲಿ ಇಟ್ಟುಕೊಂಡಿದ್ದೇವೆ. ಅದನ್ನು ಮಾಡುತ್ತೇವೆ.

ಶ್ರೀ ಕೆ. ಎಚ್. ಶ್ರೀನಿವಾಸ.—(ಅ)ನಲ್ಲಿ 5ನೇ ಐಟಂ ತಾಳಗುಪ್ಪದಿಂದ ಸಿರಸಿ ಮಾರ್ಗವಾಗಿ ಕಾರವಾರಕ್ಕೆ ಒಂದು ರೈಲುಮಾರ್ಗ ಹಾಕಬೇಕೆಂದು ಶಿಫಾರಸ್ಸು ಆಗಿದೆಯೆಂದು ಹೇಳಲಾಗಿದೆ. ಎರಡು ವರ್ಷಗಳ ಹಿಂದೆ ತಾಳಗುಪ್ಪದಿಂದ ಹೊನ್ನಾವರಕ್ಕೆ ರೈಲುಮಾರ್ಗ ಮಾಡುತ್ತೇವೆಂದು ಹೇಳಿದ್ದರು. ಈಗ ಎರಡು ಲೈನ್ ಒಂದೇ ಆಗಿವೆ. ಇದನ್ನು ಎಷ್ಟು ಮೈಲಿಗಳ ದೂರ ಮಾಡಿದ್ದೀರಿ? ಎರಡು ಲೈನುಗಳನ್ನು ಪ್ರತ್ಯೇಕವಾಗಿ ಮಾಡಿದ್ದೀರಾ ಅಥವಾ ಬೇರೆಬೇರೆ ಮಾಡಿದ್ದೀರಾ ?

ಶ್ರೀ ಬಸವರಾಜ ಮಾಗಾವಿ.—ಈ ಪ್ರಶ್ನೆಯಲ್ಲಿ ಪಾಂಡವಪುರ-ತುಮಕೂರು ರೈಲ್ವೆ ರಸ್ತೆಯ ವಿಚಾರನ್ನು ಸ್ಪೆಸಿಫಿಕ್ಕಾಗಿ ಕೇಳಿದ್ದಾರೆ. ಮಾನ್ಯ ಸದಸ್ಯರು ಕೇಳಿದಂತಹ ಪ್ರಶ್ನೆಗೆ ಮಾಹಿತಿ ಇಲ್ಲದೆ ಇರುವುದರಿಂದ, ಅವರು ಬೇರೆ ಪ್ರಶ್ನೆ ಕೇಳಿದರೆ ಒದಗಿಸಬಹುದು.

Sri K. H. SREENIVAS.—It had been replied earlier that the line from Talaguppa to Honnavar has been recommended; I want to know whether this is identical with that or whether two lines have been recommended or whether there is any correction to be made of?

Mr. SPEAKER.—It appears there is some confusion about this point. Let the Hon. Minister get the correct information about it. If the Members do not mind, in the interest of correct information, I will hold over the question.

Sri B. V. MAGAVI.—My submission, is they have asked half-dozen lines. It is better they put a specific question afresh.

Sri S. SIVAPPA.—Fresh question is not necessary. This question may be held over Sir.

Mr. SPEAKER.— I will hold over the question.

ಶ್ರೀ ಎಂ. ಎಂ. ಜಾಲಿಸಟ್‌ಗಿ.—ಸ್ವಾಮಿ ಇವರು ಹಿಂದೆ ಹುಬ್ಬಳ್ಳಿಯಿಂದ ಹೊನ್ನಾವರ ಎಂದು ಹೇಳಿದ್ದಾರೆ. ಮತ್ತು ತಾಳಗುಪ್ಪದಿಂದ ಕಾರವಾರಕ್ಕೆ ಎಂದು ಹೇಳುತ್ತಾರೆ. ಇದು ಬಹಳ ಕಳವಳಕ್ಕೆ ಕಾರಣವಾಗಿದೆ. ಈಗ ಇವರು ತಾಳಗುಪ್ಪ ಸಿರ್ಸಿಮಾರ್ಗವಾಗಿ ಕಾರವಾರ ಎಂದರೆ ಮೊದಲಿನ ಉತ್ತರಕ್ಕೂ ಇದಕ್ಕೂ ವ್ಯತ್ಯಾಸ ಬರುತ್ತದೆ. ಹೊನ್ನಾವರ ತಾಳಗುಪ್ಪದಿಂದ ಕೇವಲ 54 ಮೈಲಿ ಇರುವುದು. ಅದಲ್ಲದೆ ಅದನ್ನು ಮೇಜರ್ ಪೋರ್ಟ್ ಮಾಡುವುದಕ್ಕೆ ಶುರು ಮಾಡಿದ್ದಾರೆ. ಅದಲ್ಲದೆ ಅದು ಬಹಳ ಮುಖ್ಯವಾದ ಕೇಂದ್ರವಾಗಿದೆ. ಅಲ್ಲಿಂದ ಹೊಸಪೇಟೆ, ಮದ್ರಾಸ್ ಮರ್ಮಗೋವಕ್ಕೆ ಹೋಗತಕ್ಕ ರೋಡ್ಸ್ ಇವೆ. ಈಪೊತ್ತು ಹೊನ್ನವರವನ್ನು ವಾಯ ಮಾಡಬೇಕೆಂದು ಇದ್ದಾರೆ. ಅದನ್ನು ಸೇರಿಸಬೇಕು.

ಶ್ರೀ ಕೆ. ಲಕ್ಕಪ್ಪ.—ಬಹುಶಃ ಸಿರ್ಸಿಯಿಂದ ಹೊನ್ನವರಕ್ಕೆ ಹೋಗಿ, ಹೊನ್ನಾವರದಿಂದ ಕಾರವಾರಕ್ಕೆ ಹೋಗಬಹುದು.

(*Interruptions*)

Sri H. N. NANJE GOUDA —You must warn the Minister Sir. He gave different answer on a former occasion in answer to a question.

Mr. SPEAKER.—The Hon. Minister will kindly find out the correct position and place the facts before the House. I hold over the question,

ಶ್ರೀ ಕೆ. ಎಚ್. ಶ್ರೀನಿವಾಸ್.—ಕನ್ನಡದಲ್ಲಿ ತಪ್ಪು ಆಗಿದೆ ಎಂದು ಕಾಣುತ್ತದೆ. ಅದನ್ನು ಸರಿಪಡಿಸಬೇಕು.

Rural Communication Roads

201. Sri S. R. BOMMAI (Kundgol).—

Will the Minister for Public Works be pleased to state :—

(*a*) the length of Rural Communication Roads formed in the State up till now ;

(*b*) the amount spent on it so far ;

(*c*) who is maintaining the roads after formation ;

(*d*) whether it has come to their notice that part of R. C. Roads formed are not in proper condition which is due to lack of maintenance;

(*e*) the steps they intend to take to preserve these roads ?

Sri BASAVARAJ MAGAVI (Deputy Minister for Public Works).—

(*a*) 12,019 miles to end of March 1968.

(*b*) Rs. 676.62 lakhs to end of March 1968.

(*c*) These Roads have to be maintained by the Taluk Boards.

(*d*) Yes.

(e) Instructions have been issued to the local officers to handover the completed Roads to Taluk Development Boards for maintenance.

Sri S. R. BOMMAI.—Has it come to the notice of the Government that most of the Taluk Boards have refused to take over these roads because of non-availability of funds ?

† Sri B. V. MAGAVI.—It had come to the notice of the Government that many Taluk Boards have refused to take over the roads. I personally feel that they are shirking their responsibility and I will insist on them to take over the roads.

Sri S. R. BOMMAI.—Is there any law enabling you to force the Taluk Boards to take over these roads because they belong to the Government ?

Sri B. V. MAGAVI.—Yes, there is already provision in the Taluk Boards and Village Panchayats Act, that when these rural communications are formed the responsibility for maintaining them vests with the Taluk Boards.

ಶ್ರೀ ಎಸ್. ಎಂ. ಗುರಡ್ಡಿ.—ತಾವು ತಾಲ್ಲೂಕು ಬೋರ್ಡುಗಳಿಗೆ ಗ್ರಾಮಾಂತರ ರಸ್ತೆಗಳನ್ನು ವಹಿಸಿಕೊಡುವಾಗ 2-3 ಮೈಲಿ ಇರುವಂತಹ ರಸ್ತೆಗಳು ಮತ್ತು ಕೂಡು ರಸ್ತೆಗಳು ಏನಿವೆ ಅವುಗಳನ್ನು ತಾಲ್ಲೂಕುಬೋರ್ಡುಗಳಿಗೆ ವಹಿಸಿಕೊಟ್ಟಿದ್ದೇವೆ ಎಂದು ಸ್ಪೆಸಿಫಿಕ್ ಆಗಿ ಆರ್ಡರನ್ನು ಹೊರಡಿಸಿದ್ದೀರಾ ? ಮತ್ತು ಈಗ ತಾಲ್ಲೂಕು ಬೋರ್ಡುಗಳ ವಶದಲ್ಲಿರತಕ್ಕ 5 ಮೈಲಿ, 10 ಮೈಲಿ, 15 ಮೈಲಿ ಇರತಕ್ಕ ಕಮ್ಯುನಿಕೇಷನ್ ರಸ್ತೆಗಳ ಕೆಲಸಗಳು ಆಗದೆ ಹಾಗೆಯೇ ಉಳಿದಿವೆ. ಅವುಗಳನ್ನು ಪಿ. ಡಬ್ಲ್ಯು. ಡಿ. ನವರು ತೆಗೆದುಕೊಳ್ಳುತ್ತೀರಾ ?

ಶ್ರೀ ಬಸವರಾಜ್ ಮಾಗಾವಿ.—ಬಹುಶಃ ತಾಲ್ಲೂಕು ಬೋರ್ಡಿನಲ್ಲಿ ಸಾಕಷ್ಟು ಹಣವಿಲ್ಲ ಎಂದು ಮಾನ್ಯ ಸದಸ್ಯರ ಅಭಿಪ್ರಾಯ ಎಂದು ಕಾಣುತ್ತದೆ. ಈಗ ಹೊಸ ತಿದ್ದುಪಡಿಯ ಮೂಲಕ ಎರಾಲ್ಯಾಂಡ್ ರೆವಿನ್ಯೂ ಅನ್ನು ತಾಲ್ಲೂಕುಬೋರ್ಡುಗಳಿಗೆ ಕೊಡುತ್ತೇವೆ. ಅದು ಜಾರಿಗೆ ಬಂದಮೇಲೆ ಅವರಿಗೆ ಸಾಕಷ್ಟು ಧನಸಹಾಯ ಸಿಕ್ಕುತ್ತದೆ. ಆಗ ತಾಲ್ಲೂಕು ಬೋರ್ಡಿನವರು ಆ ರಸ್ತೆಗಳನ್ನು ಮೇನ್‌ಟೇನ್ ಮಾಡುವುದಕ್ಕೆ ಸಾಧ್ಯವಾಗಬಹುದು ಎಂದು ನಾನು ಭಾವಿಸುತ್ತೇನೆ.

ಶ್ರೀ ಟಿ.ಪಿ. ಗಂಗಾಧರ್.—ಈಗ ತಾವು 1968ನೇ ಮಾರ್ಚ್ ತಿಂಗಳ ಅಂತ್ಯದವರಿಗೆ 12,019 ಮೈಲಿ ಉದ್ದದ ಗ್ರಾಮಾಂತರ ಸಂಪರ್ಕ ರಸ್ತೆಗಳನ್ನು ಮಾಡಲಾಗಿದೆ ಮತ್ತು ಆ ರಸ್ತೆಗಳನ್ನು ತಾಲ್ಲೂಕು ಮಂಡಲಿಯವರು ನಿರ್ವಹಿಸಿಕೊಂಡು ಬರಬೇಕಾಗಿದೆ ಎಂದು ಹೇಳಿದ್ದೀರಿ ಯಾವ ಯಾವ ತಾಲ್ಲೂಕುಬೋರ್ಡಿಗೆ ಯಾವ ಯಾವ ಜ್ಯೂರಿಸ್‌ಡಿಕ್ಷನ್ ಬರುತ್ತದೆ, ಅದು ಎಷ್ಟೆಷ್ಟು ಮೈಲಿ ಇದೆ, ಆ ರಸ್ತೆಗಳನ್ನು ಒಳ್ಳೆಯ ರೀತಿಯಲ್ಲಿ ಇಡಬೇಕಾದರೆ ಎಷ್ಟು ಹಣ ಖರ್ಚಾಗುತ್ತದೆ, ತಾಲ್ಲೂಕು ಬೋರ್ಡಿಗೆ ಉತ್ಪತ್ತಿ ಎಷ್ಟು ಬರುತ್ತದೆ ಎನ್ನುವ ಮಾಹಿತಿ ಇದೆಯೇ ? ಇಂಥಾ ಮಾಹಿತಿ ಇಲ್ಲದೇ ಇದ್ದರೆ ಆ ಕೆಲಸವನ್ನು ತಾಲ್ಲೂಕುಬೋರ್ಡಿನವರಿಗೆ ವಹಿಸಿ ಅವರನ್ನು ಮಾಡಿ ಎಂದು ಹೇಳಿದರೆ ನಿಮ್ಮ ಜವಾಬ್ದಾರಿ ಮುಗಿಯಿತೇ? ಆ ಕೆಲಸವನ್ನು ಪೂರ್ಣವಾಗಿ ಅವರೇ ಮಾಡುತ್ತಾರೆಯೇ ?

ಶ್ರೀ ಬಸವರಾಜ್ ಮಾಗಾವಿ.—ತಾಲ್ಲೂಕುಬೋರ್ಡುಗಳಿಗೆ ಹೊಸ ತಿದ್ದುಪಡಿಯ ಮೂಲಕ ರ್ಲ್ಯಾಂಡರೆವಿನ್ಯೂನಿಂದ ಎಷ್ಟು ಆದಾಯ ಬರುತ್ತದೆ ಎಂಬುದನ್ನು ನೋಡಿಕೊಂಡು, ಆ ಆದಾಯದಿಂದ ಅವರು ಅದನ್ನು ಮೇನ್‌ಟೇನ್ ಮಾಡುವುದಕ್ಕೆ ಸಾಧ್ಯವಾಗದೇ ಹೋದರೆ ಮುಂದೆ ಸರ್ಕಾರದವರು ತಾಲ್ಲೂಕುಬೋರ್ಡುಗಳಿಗೆ ಸಹಾಯ ಮಾಡಬಹುದೇ ಎಂಬುದನ್ನು ವಿಚಾರ ಮಾಡುತ್ತಿದ್ದೇವೆ. ಎರಡನೆಯದಾಗಿ ಈಗ ಫಾರ್ಮೇಷನ್ ಆಗಿ ಕಂಪ್ಲೀಟಾಗಿರತಕ್ಕ ರೋಡುಗಳನ್ನು ತಾಲ್ಲೂಕುಬೋರ್ಡಿನವರು ತಮ್ಮ ವಶಕ್ಕೆ ತೆಗೆದುಕೊಳ್ಳುವವರೆಗೂ ಅವುಗಳನ್ನು ಸುವ್ಯವಸ್ಥೆಯಲ್ಲಿಡುವುದಕ್ಕೆ ಪಿ. ಡಬ್ಲ್ಯು. ಡಿ. ಇದೆ. ನಾವೇ ಅದನ್ನು ಮಾಡುತ್ತೇವೆ.

ಶ್ರೀ ಬಿ. ಎಂ. ಇದಿನಬ್ಬ.—ತಾಲ್ಲೂಕು ಬೋರ್ಡುಗಳಿಗೆ ಗ್ರಾಮಾಂತರ ರಸ್ತೆಗಳನ್ನು ವಹಿಸಿ ಕೊಡುತ್ತೇವೆಂದು ತಿಳಿಸಿದ್ದೀರಿ. ಆ ಕೆಲಸವನ್ನು ಮಾಡುವುದಕ್ಕೆ ತಾಲ್ಲೂಕು ಬೋರ್ಡುಗಳಲ್ಲಿ ಸಾಕಷ್ಟು ಹಣ ಇಲ್ಲ ಎನ್ನುವ ವಿಚಾರ ಎಲ್ಲರಿಗೂ ಗೊತ್ತಿರುವ ವಿಚಾರ. ಒಂದು ವೇಳೆ ಲ್ಯಾಂಡ್ ರೆವಿನ್ಯೂ ತಾಲ್ಲೂಕುಬೋರ್ಡುಗಳಿಗೆ ಕೊಟ್ಟೂ ಕೂಡ ಆ ಕೆಲಸವನ್ನು ಮಾಡುವುದಕ್ಕೆ ಶಕ್ತಿ ಇಲ್ಲದಂತಹ ತಾಲ್ಲೂಕು ಬೋರ್ಡುಗಳು ಇದ್ದರೆ, ಅವುಗಳಿಗೆ ಕಡಿಮೆ ಬಡ್ಡಿ ಹಣವನ್ನು ಕೊಟ್ಟು ಅವುಗಳು ತಮ್ಮ ಕೆಲಸವನ್ನು ಸುಸೂತ್ರವಾಗಿ ನಡೆಸುವಂತೆ ಮಾಡುತ್ತೀರಾ ?

ಶ್ರೀ ಬಸವರಾಜ್ ಮಾಗಾವಿ.—ಈ ಬಗ್ಗೆ ನಾನು ಈಗಾಗಲೇ ಉತ್ತರ ಹೇಳಿದ್ದೇನೆ. ಆ ರೀತಿ ಕಂಡುಬಂದಲ್ಲಿ ಹೆಚ್ಚಿನ ಧನಸಹಾಯ ಮಾಡುತ್ತೇವೆ.

ಶ್ರೀ ಎಸ್. ಆರ್ ಬೊಮ್ಮಾಯಿ.—(ಈ) ಪ್ರಶ್ನೆಯಲ್ಲಿ ಸರಿಯಾಗಿ ನಿರ್ವಹಿಸಿಕೊಂಡು ಬಂದಿರುವುದರಿಂದಾಗಿ ನಿರ್ಮಿಸಿರುವ ಗ್ರಾಮಾಂತರ ಸಂಪರ್ಕ ರಸ್ತೆಗಳ ಪೈಕಿ ಕೆಲವು ಭಾಗ ಸುಸ್ಥಿತಿಯಲ್ಲಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದಕ್ಕೆ ಬಂದಿದೆ ಎಂದು ಹೇಳಿದ್ದೀರಿ. ಹಾಗಾದರೆ ಈ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಬಸವರಾಜ್ ಮಾಗಾವಿ.—ಯಾವ ಯಾವ ರಸ್ತೆಗಳು ಸಂಪೂರ್ಣವಾಗಿ ಫಾರಂ ಆಗಿವೆಯೋ ಅವುಗಳನ್ನು ತಾಲ್ಲೂಕು ಬೋರ್ಡಿನವರು ತೆಗೆದುಕೊಳ್ಳಬೇಕು ಎಂದು ಎಗ್ಸಿಕ್ಯುಟೀವ್ ಎಂಜಿಯರು ತಾಲ್ಲೂಕುಬೋರ್ಡುಗಳಿಗೆ ಆರ್ಡರ್ಸ್‌ಮಾಡಿದ್ದಾರೆ. ಯಾವ ಯಾವ ರೋಡುಗಳು ಕಂಪ್ಲೀಟ್ ಆಗಿಲ್ಲವೊ ಆ ರೋಡುಗಳನ್ನು ಪಿ. ಡಬ್ಲ್ಯು ಇಲಾಖೆಯವರೇ ಫಾರಂ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆ. ತಾಲ್ಲೂಕು ಬೋರ್ಡುಗಳಿಗೆ ಸಾಕಷ್ಟು ಅಧಿಕಾರವನ್ನು ಕೊಡಬೇಕು ಎಂದು ಈ ಸದನದ ಅನೇಕ ಜನ ಮಾನ್ಯ ಸದಸ್ಯರು ಹೇಳುತ್ತಿದ್ದರು. ಆದ್ದರಿಂದ ಅವರಿಗೆ ಸರ್ಕಾರದವರು ಅಧಿಕಾರವನ್ನು ವಹಿಸಿಕೊಡುವುದಕ್ಕೆ ತಯಾರಾಗಿದ್ದಾರೆ. ದುಡ್ಡು ಕೊಡುವುದಕ್ಕೆ ತಯಾರಾಗಿದ್ದಾರೆ., ಆದರೆ ಈಗ ಅವರು ಅದನ್ನು ವಹಿಸಿಕೊಳ್ಳುವುದಕ್ಕೆ ತಯಾರಾಗಬೇಕು.

ಶ್ರೀ ಡಿ. ಎಸ್. ನಾಡಕರ್ಣಿ.—100ಕ್ಕೆ 50 ರಷ್ಟು ತಾಲ್ಲೂಕುಬೋರ್ಡುಗಳಿಗೆ ಈ ಕೆಲಸವನ್ನು ಮಾಡುವುದಕ್ಕೆ ಕಷ್ಟವಾಗುತ್ತದೆ. ಈ ದೃಷ್ಟಿಯಿಂದ ಅವುಗಳಿಗೆ ಧನ ಸಹಾಯ ಮಾಡಿ ಅವುಗಳು ಸುಸೂತ್ರವಾಗಿ ತಮ್ಮ ಕೆಲಸಗಳನ್ನು ನಡೆಸಿಕೊಂಡು ಬರುವಂತೆ ಸರ್ಕಾರದವರು ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಬಸರಾಜ್ ಮಾಗಾವಿ.—ಲ್ಯಾಂಡ್ ರೆವೆನ್ಯೂನಲ್ಲಿ 10 ಪರ್ಸೆಂಟ್ ಗ್ರಾಮ ಪಂಚಾಯಿತಿ 10 ಪರ್ಸೆಂಟ್ ತಾಲ್ಲೂಕು ಬೋರ್ಡು ಹೀಗೆ 100ರಕ್ಕೆ 20 ಭಾಗವನ್ನು ಸರ್ಕಾರದವರೇ ಇಟ್ಟುಕೊಂಡು ಒಂದು ಕನ್‌ಸಾಲಿಡೇಟೆಡ್ ಫಂಡ್ ಮಾಡಿ ದುರ್ಬಲವಾದ ಗ್ರಾಮಪಂಚಾಯಿತಿ ಮತ್ತು ಸ್ಥಳೀಯ ಸಂಸ್ಥೆಗಳಿಗೆ ಒಂದು ವಿಶೇಷವಾದ ಸಹಾಯ ಕೊಡಬೇಕೆಂದು ಉದ್ದೇಶ ಇದೆ.

ಶ್ರೀ ಕೆ. ಎಚ್. ಶ್ರೀನಿವಾಸ್.—ತಾಲ್ಲೂಕ್ ಅಭಿವೃದ್ಧಿ ಮಂಡಲಗಳಿಗೆ ಲ್ಯಾಂಡ್ ಲೆವೆನ್ಯೂವನ್ನು ಸಂಪೂರ್ಣವಾಗಿ ವಹಿಸಿಕೊಟ್ಟಮೇಲೆ, ಅವರು ಸಂಬಂಧಪಟ್ಟ ರಸ್ತೆಗಳನ್ನು ಮೇನ್‌ಟೇನ್ ಮಾಡುವುದಕ್ಕೆ ಮತ್ತು ಬೆಳೆಸುವುದಕ್ಕೆ ಮೊದಲ ಆದ್ಯತೆ ಕೊಡಬೇಕೆಂಬ ಷರತ್ತನ್ನು ಹಾಕುವ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿರುವುದು ನಿಜವೇ ?

ಶ್ರೀ ಬಸವರಾಜ ಮಾಗಾವಿ.—ಲ್ಯಾಂಡ್ ರೆವಿನ್ಯೂವನ್ನು ತಾಲ್ಲೂಕ್‌ಅಭಿವೃದ್ಧಿ ಮಂಡಲಗೆ ವಹಿಸಿಕೊಟ್ಟಮೇಲೆ ಅವುಗಳ ಆರ್ಥಿಕ ಪರಿಸ್ಥಿತಿಯನ್ನು ನೋಡಿಕೊಂಡು, ಯಾವ ರೀತಿ ಅವರು ಸಂಬಂಧಪಟ್ಟ ರಸ್ತೆಗಳಿಗೆ ಖರ್ಚು ಮಾಡಬೇಕೆಂಬ ಬಗ್ಗೆ ಷರತ್ತನ್ನು ಹಾಕಲಾಗುತ್ತದೆ.

ಶ್ರೀ ಎಂ. ನಾಗಪ್ಪ.—ರಾಯಚೂರು, ಗುಲ್ಬರ್ಗ, ಬದರೆ ಜಿಲ್ಲೆಗಳು ಬಹಳ ಹಿಂದುಳಿದಿವೆ. ಈ ಜಿಲ್ಲೆ ತಾಲ್ಲೂಕ್ ಅಭಿವೃದ್ಧಿ ಮಂಡಳಿಗಳಿಗೆ ಲ್ಯಾಂಡ್ ರೆವಿನ್ಯೂವನ್ನು ಸಂಪೂರ್ಣವಾಗಿ ಕೊಟ್ಟರೂ ಸಹ ಅವರು ರಸ್ತೆ ಕೆಲಸವನ್ನು ಮಾಡಿಸುವುದು ಕಷ್ಟವಾಗುತ್ತದೆ. ಆದ್ದರಿಂದ ಈ ಜಿಲ್ಲೆಗಳನ್ನು ಸ್ಪೆಷಲ್ ಆಗಿ ಟ್ರೀಟ್ ಮಾಡಿ, ಈ ಜಿಲ್ಲೆಗಳ ಬಗ್ಗೆ ಒಂದು ಸ್ಪೆಷಲ್ ಸ್ಕೀಮನ್ನು ಜಾರಿಗೆ ತರುತ್ತೀರಾ ?

ಶ್ರೀ ಬಸವರಾಜ ಮಾಗಾವಿ.—ಹಿಂದುಳಿದ ಪ್ರದೇಶಗಳಿಗೆ ವಿಶೇಷವಾಗಿ ಸಾರಿಗೆಸೌಲಭ್ಯಗಳನ್ನು ಒದಗಿಸಿಕೊಡಬೇಕೆಂದು ಪ್ರಯತ್ನ ಮಾಡುತ್ತಿದ್ದೇವೆ. ನಾನು ಮೊದಲೇ ಹೇಳಿದಂತೆ 20 ಪರ್ಸೆಂಟ್ ಕನ್‌ಸಾಲಿಡೇಟೆಡ್ ಫಂಡ್ ಅಂತ ಏನಿದೆ ಅದರಿಂದ ಹೆಚ್ಚಿನ ಹಣವನ್ನು ಹಿಂದುಳಿದ ಭಾಗಗಳಿಗೆ ಕೊಡುವುದಕ್ಕೆ ಆಸ್ಪದವಿದೆ.

Providing of Wells and Pumpsets in Raichur District

359. **Sri M. NAGAPPA** (Raichur).—

Will the Minister for Development be pleased to state :—

(*a*) whether there is any scheme before the Government to provide a well and pumpset for every five acres of land in Raichur District under the Area Development Scheme;

(*b*) if so, whether any recommendation has been made in this behalf by the Joint Director of Co-operative Societies, Raichur ;

(*c*) if so, the number of taluks (with names) included in the said scheme ;

(*d*) the proposed expenditure to complete the scheme;

(*e*) whether any representation is received in this respect, if so, the action taken by the Government ?

Sri B. L. GOWDA (Deputy Minister for Co-Operation)—

(*a*) No.

(*b*) The scheme is yet to be formulated.

(*c*) The taluks of Kushtagi, Yelbarga and Lingasugur of Raichur District are proposed for inclusion in the scheme.

(*d*) As the scheme is yet to be prepared, it will not be possible to estimate the expenditure at present.

(*e*) The District Development Council, Raichur, on the repesentation by the Taluk Development Board, Lingasugur, resolved to recommend to Government the taking up of the Area Development programme in Lingasugur, Kushtagi and Yelbaga taluks. The Geologist, Bellary District has been requested to conduct detailed survey regarding ground water potential in the said taluks. This survey is in progress.

ಶ್ರೀ ಎಂ. ನಾಗಪ್ಪ.—ಯೋಜನೆ ಇದೆಯೆಂದು ಹೇಳಿದ್ದೀರಿ. ಇಲ್ಲಿ ಲಿಂಗಸುಗೂರು, ಕುಷ್ಟಗಿ ಮತ್ತು ಯಲಬುರ್ಗಾ ಮೂರು ತಾಲ್ಲೂಕ್‌ಗಳನ್ನು ಮಾತ್ರ ಸೇರಿಸಿದ್ದೀರಿ. ದೇವದುರ್ಗ, ರಾಯಚೂರು, ಮಾನ್ವಿಯ ಅರ್ಧ ಭಾಗ, ಸಿಂಧನೂರಿನ ಅರ್ಧ ಭಾಗವನ್ನು ಸಹ ಸೇರಿಸದೆ ಕೈಬಿಟ್ಟಿರುವುದಕ್ಕೆ ಕಾರಣವೇನು ?

ಶ್ರೀ ಬಿ. ಎಲ್. ಗೌಡ.—ನಿರ್ದಿಷ್ಟವಾದ ಯೋಜನೆ ಸರ್ಕಾರದ ಮುಂದೆ ಇಲ್ಲ. ರಾಯಚೂರಿನ ಜಿಲ್ಲಾ ಅಭಿವೃದ್ಧಿ ಪರಿಷತ್ತಿನವರು ಈ ಬಗ್ಗೆ ಒಂದು ಠರಾವನ್ನು ಮಾಡಿ ಕಳಿಸಿದ್ದಾರೆ. ಅದನ್ನು ಜಾಯಿಂಟ್ ರಿಜಿಸ್ಟ್ರಾರ್ ಅವರಿಗೆ ಕಳಿಸಿಕೊಟ್ಟಿದ್ದೇವೆ. ಈ ವಿಚಾರದಲ್ಲಿ ಮಾನ್ಯ ಸದಸ್ಯರು ಏನಾದರೂ ಸಲಹೆ ಕೊಟ್ಟರೆ ಅದನ್ನೂ ಸಹ ಜಾಯಿಂಟ್ ರಿಜಿಸ್ಟ್ರಾರ್ ಅವರಿಗೆ ಕಳಿಸಿಕೊಡುತ್ತೇವೆ.

ಶ್ರೀ ಎಂ. ನಾಗಪ್ಪ.—ಈಗಾಗಲೇ ಒಂದು ಮನವಿಯನ್ನು ತಮ್ಮಲ್ಲಿ ಸಲ್ಲಿಸಿದ್ದೇನೆ. ರಾಯಚೂರಿನ ಯಾವಯಾವ ಭಾಗ, ದೇವದುರ್ಗದ ಯಾವ ಯಾವ ಭಾಗಗಳನ್ನು ತೆಗೆದುಕೊಳ್ಳಬೇಕೆಂಬ ಬಗ್ಗೆ ಒಂದು ಅರ್ಜಿ ಮೂಲಕ ತಮಗೆ ಕೊಟ್ಟಿದ್ದೇನೆ. ಈಗಾಗಲೇ ಈ ಬಗ್ಗೆ 10 ಕೋಟಿ ರೂಪಾಯಿಗಳ ಒಂದು ಸ್ಕೀಮನ್ನು ತಯಾರು ಮಾಡಿ ಸರ್ಕಾರಕ್ಕೆ ಕಳಿಸಿದ್ದಾರೆಂದು ತಿಳಿದಿದ್ದೇನೆ. ಇದರಲ್ಲಿ ಎಷ್ಟರಮಟ್ಟಿಗೆ ಸತ್ಯಾಂಶ ಇದೆ ಎಂಬುದನ್ನು ಹೇಳುತ್ತೀರಾ ?

ಶ್ರೀ ಬಿ. ಎಲ್. ಗೌಡ.—ಸರ್ಕಾರಕ್ಕೆ ಯಾವ ಯೋಜನೆಯೂ ಬಂದಿಲ್ಲ. ಇಂತಹ ಒಂದು ನಿರ್ಣಯವನ್ನು ರಾಯಚೂರಿನ ಜಿಲ್ಲಾ ಅಭಿವೃದ್ಧಿ ಮಂಡಲಿಯವರು ಮಾಡಿ ಸರ್ಕಾರಕ್ಕೆ ಕಳಿಸಿದ್ದರು. ಅದನ್ನು ಜಾಯಿಂಟ್ ರಿಜಿಸ್ಟ್ರಾರ್‌ಗೆ ಕಳಿಸಿಕೊಟ್ಟಿದ್ದೇವೆ. ಈ ಯೋಜನೆಯನ್ನು ಕೈಗೊಳ್ಳುವುದಕ್ಕೆ ಮುಂಚೆ ಭೂಗರ್ಭ ಶಾಸ್ತ್ರಜ್ಞರು ಭೂಗರ್ಭದಲ್ಲಿ ಎಷ್ಟು ನೀರು ಇದೆ ಎಂಬುದನ್ನು ಅಂದಾಜು ಮಾಡಬೇಕಾಗಿದೆ. ಅದಕ್ಕಾಗಿ ಬಳ್ಳಾರಿ ಜಿಲ್ಲೆಯ ಭೂಗರ್ಭ ಶಾಸ್ತ್ರಜ್ಞರನ್ನು ಕೋರಲಾಗಿದೆ. ಅವರಿಂದ ಮಾಹಿತಿ ಬಂದಮೇಲೆ ವಿಚಾರ ಮಾಡುತ್ತೇವೆ.

ಶ್ರೀ ಕೆ. ಸಂಗನಗೌಡ.—ರಾಯಚೂರಿನ ಜಿಲ್ಲಾ ಅಭಿವೃದ್ಧಿ ಮಂಡಲಿಯವರು ಈ ವಿಚಾರದಲ್ಲಿ ನಿರ್ಣಯ ಮಾಡಿ ಎಷ್ಟು ದಿವಸವಾಯಿತು. ಬಳ್ಳಾರಿ ಜಿಲ್ಲೆಯ ಭೂಗರ್ಭಶಾಸ್ತ್ರಜ್ಞರು ಸರ್ವೆ ಮಾಡುತ್ತಿದ್ದಾರೆಂದು ಹೇಳಿದಿರಿ. ಆ ಸರ್ವೆ ಕೆಲಸ ಯಾವ ಮಟ್ಟದಲ್ಲಿ ಇದೆ. ನನಗೆ ತಿಳಿದಮಟ್ಟಿಗೆ ಅವರು ಸರ್ವೆ ಮಾಡಲು ಯಾವ ತಾಲ್ಲೂಕ್‌ಗೂ ಬಂದಿಲ್ಲ. ಬಂದಿದ್ದರೆ ಯಾವ ಯಾವ ತಾಲ್ಲೂಕ್‌ಗಳಿಗೆ ಬಂದಿದ್ದರು ಎಂಬುದು ತಿಳಿಸಿ.

ಶ್ರೀ ಬಿ. ಎಲ್. ಗೌಡ.—ರಾಯಚೂರಿನ ಜಿಲ್ಲಾ ಅಭಿವೃದ್ಧಿ ಮಂಡಲಿಯವರು ಯಾವ ತಾರೀಖು ನಿರ್ಣಯ ಕೈಗೊಂಡರು ಎಂಬುದು ನನಗೆ ಗೊತ್ತಿಲ್ಲ. ಭೂಗರ್ಭ ಶಾಸ್ತ್ರಜ್ಞರು ತಮ್ಮ ವರದಿಯನ್ನು ಮಾರ್ಚಿ ಕೊನೆಯೊಳಗೆ ಕೊಡುತ್ತಾರೆಂಬ ವಿಷಯ ಗೊತ್ತಿದೆ. ಅವರ ಕಾರ್ಯ ಚಟುವಟಿಕೆಯ ಬಗ್ಗೆ ನನಗೆ ಗೊತ್ತಿಲ್ಲ.

2-30 P.M.

ಶ್ರೀ ಸದಾಶಿವಪ್ಪ ಪಾಟೀಲ್.—ಕಷ್ಟಗಿ, ಯಲ್‌ಬುರ್ಗಾ ಮತ್ತು ಲಿಂಗಸುಗೂರು ಇವು ಮೂರನ್ನು ಮಾತ್ರ ರಾಯಚೂರು ಡೆವಲಪ್‌ಮೆಂಟು ಕೌನ್ಸಿಲ್‌ನಲ್ಲಿ ತೆಗೆದುಕೊಳ್ಳಬೇಕು ಎಂದು ಯಾವ ಆಧಾರದ ಮೇಲೆ ಹೇಳಿದರು ಮತ್ತು ಯಾವ ಆಧಾರದಮೇಲೆ ದೇವದುರ್ಗವನ್ನು ಬಿಟ್ಟರು?

ಶ್ರೀ ಬಿ. ಎಲ್. ಗೌಡ ಡೆವಲಪ್‌ಮೆಂಟು ಕೌನ್ಸಿಲ್‌ನವರು ಮಾಡಿ ಕಳುಹಿಸಿರುವ ಸೂಚನೆ ಮಾತ್ರ ರೆಸಲ್ಯೂಷನ್ ಮಾಡಿದ್ದಾರೆ. ಇದನ್ನು ನಮ್ಮ ಕಡೆಗೆ ಕಳುಹಿಸಿದ್ದಾರೆ.

ಶ್ರೀ ಇ. ಪುಂಡಲೀಕಪ್ಪ.—ಬಳ್ಳಾರಿ ಜಿಲ್ಲೆಯಲ್ಲಿ ಭೂಗರ್ಭ ಇಲಾಖೆ ಅಧಿಕಾರಿಗಳು ಒಬ್ಬರೇ ಇರುವುದರಿಂದ ಇವರು ನಾಲ್ಕೂ ಜಿಲ್ಲೆಗಳಿಗೆ ಹೋಗಿ ಕೆಲಸ ಮಾಡಲು ವರ್ಷಗಟ್ಟಲೆಕಾಲ ಬೇಕಾಗುತ್ತದೆ. ಇದಕ್ಕಾಗಿ ಇಲ್ಲಿ ಸ್ಪೆಷಲ್ ಆಗಿ ಏನಾದರೂ ಕಳುಹಿಸುವ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಬಿ. ಎಲ್. ಗೌಡ.—ಜಿಯಾಲಜಿಕಲ್ ಡೈರೆಕ್ಟರಿಗೆ ಸ್ಪೆಷಲ್ ಆಗಿ ಬರೆದು ಪುನಃ ಅವರಿಗೆ ಒತ್ತಿ ಹೇಳುತ್ತೇವೆ.

ಶ್ರೀ ಬಾಪೂಗೌಡ.—ನಮ್ಮ ರಾಜ್ಯದಲ್ಲಿ ಗುಲ್ಬರ್ಗಾ ಬೀದರ್ ಹಾಗೂ ರಾಯಚೂರಿನಲ್ಲಿ ಎಲ್ಲೆಲ್ಲಿ ನೀರಿನ ಅಭಾವ ಇದೆಯೋ, ಅಲ್ಲಿಗೆ ಸರಿಯಾದ ಒಂದು ಸ್ಕೀಂಗಳನ್ನು ಹಾಕಿಕೊಂಡು ಇದರ ಬಗ್ಗೆ ಯೋಚನೆ ಮಾಡುತ್ತೀರಾ?

ಶ್ರೀ ಬಿ. ಎಲ್. ಗೌಡ.—ಇದನ್ನು ಮುಂದೆ ಯೋಚನೆ ಮಾಡಬಹುದು.

Irrigation Wells in Chickmagalur District

525. Sri M. MALLAPPA (Birur).—

Will the Minister for Revenue be pleased to state.—

(*a*) the number of irrigation wells sanctioned for the Chickmagalur District under Famine Relief works (Taluk-wise information may be given);

(*b*) the number of wells completed and the amount of expenditure incurred;

(*c*) how long the Government propose to continue this scheme so as to provide additional facilities to the ryots to develop agriculture?

Sri H. V. KOUJALGI (Minister for Revenue).—

(a) *Taluk*		*No. sanctioned*
Tarikere	...	12
Chickmagalur	...	4
Kadur	...	9
		25

(b) Number completed ... Nil.
Reported expenditure Rs. 27,923-55.

(c) No time limit has been prescribed. The Deputy Commissioners have to keep ready a programme of construction of irrigation well initially from funds under "64 Faminine Relief" and to review this programme every year.

ಶ್ರೀ ಎಂ. ಮಲ್ಲಪ್ಪ.—ಕ್ಷಾಮ ಪರಿಹಾರ ಕಾಮಗಾರಿಗಳನ್ನು ತೆಗೆದುಕೊಂಡರೆ ಅನೇಕ ಜನರಿಗೆ ಕೆಲಸಗಳು ಸಿಗುತ್ತಿತ್ತು. ಆದರೆ ಕೆಲವು ಕಡೆಗಳಲ್ಲಿ ನೂರಾರು ಕೇಸುಗಳು ಕೆಲಸ ಆಗದೆ ಹಾಗೇ ಉಳಿದಿವೆ. ಇದಕ್ಕೆ ಹಣ ಇಲ್ಲ ಎಂದು ಹೇಳುತ್ತಾರೆ. ಅದಕ್ಕಾಗಿ ಸರಕಾರ ಬೇಗನೆ ಹಣ ಒದಗಿಸಿ ಇಲ್ಲಿ ಕೆಲಸಗಳನ್ನು ಮಾಡಲು ಪ್ರಯತ್ನ ಮಾಡುತ್ತೀರಾ ?

ಶ್ರೀ ಹೆಚ್. ವಿ. ಕೌಜಲಗಿ.—ಇವನ್ನು ಪರ್ಮನೆಂಟು ಸ್ಕೀಂ ಮಾಡಿದಾಗ ತೆಗೆದುಕೊಳ್ಳಲು ಪ್ರಯತ್ನ ಮಾಡಬಹುದು.

ಶ್ರೀ ಹಂಜಿ ಶಿವಣ್ಣ.—ತರಿಕೆರೆಯಲ್ಲಿ 12 ಬಾವಿಗಳನ್ನು ಮಂಜೂರು ಮಾಡಿದೆ ಎಂದು ಉತ್ತರದಲ್ಲಿದೆ. ಇವು ಪೂರ್ಣವಾದ ಬಾವಿಗಳಲ್ಲ. ಇದರ ಬಗ್ಗೆ ಸರಕಾರ ಏನು ಹೇಳುತ್ತದೆ ?

ಶ್ರೀ ಹೆಚ್. ವಿ. ಕೌಜಲಗಿ.—ಯಾವ ಯಾವ ಬಾವಿಗಳು ಮಂಜೂರಾಗಿವೆ ಎನ್ನುವುದನ್ನು ಅಲ್ಲಿರುವ ಕಮಿಟಿಯವರೇ ಮಾಡಿ ಕಳುಹಿಸುತ್ತಾರೆ.

ಶ್ರೀ ಬಿ. ಪಿ. ಗಂಗಾಧರ್.—ನಮ್ಮ ಜಿಲ್ಲೆಗೆ ಸಂಬಂಧಪಟ್ಟಂತೆ ಒಂದಲ್ಲ ಒಂದು ಕಡೆ ಕ್ಷಾಮ ಬರುತ್ತಲೇ ಇರುತ್ತದೆ. ಇದರ ಬಗ್ಗೆ ರಾಜ್ಯದಾದ್ಯಂತ ಎಲ್ಲೆಲ್ಲಿ ಕ್ಷಾಮ ಬರುತ್ತದೆ ಎನ್ನುವುದನ್ನು ಪಟ್ಟಿ ಮಾಡಿ ಅದಕ್ಕೆ ತಕ್ಕ ಹಾಗೆ ಶಾಶ್ವತವಾಗಿ ಪರ್ಮನೆಂಟ್ ರಿಲೀಫ್ ಮೆಷರ್ಸ್ ತೆಗೆದುಕೊಂಡರೆ ಸಾಕಷ್ಟು ಸೌಕರ್ಯಗಳು ಸಿಗುವುದಿಲ್ಲವೇ ? ಹಾಗೆ ಮಾಡುತ್ತೀರಾ ?

ಶ್ರೀ ಹೆಚ್. ವಿ. ಕೌಜಲಗಿ.—ಸರಕಾರದ ಉದ್ದೇಶವೂ ಇದೆ. ಅದರ ಬಗ್ಗೆ ಮುಂದೆ ಏರ್ಪಾಡು ಮಾಡಬೇಕೆಂದು ಇದೆ. ಮತ್ತು ಮಾನ್ಯ ಸದಸ್ಯರಿಗೆ ಗೊತ್ತಿರುವಂತೆ ಇದಕ್ಕೆ 20 ಕೋಟಿ ರೂಪಾಯಿಗಳ ಒಂದು ಯೋಜನೆ ಮಾಡಿ ಕೇಂದ್ರ ಸರಕಾರಕ್ಕೂ ಕೂಡ ಕಳುಹಿಸಲಾಗಿದೆ.

ಶ್ರೀ ಎಂ. ಮಲ್ಲಪ್ಪ.—ಬಾವಿಗಳನ್ನು ಪೂರ್ತಿ ಮಾಡಲು ಇದರಲ್ಲಿ ಹಣ ಇಲ್ಲ ಎಂದು ಹೇಳುತ್ತೀರಿ, ಸರಕಾರ ಎಲ್ಲಿ ಅರ್ಧಕೆಲಸಗಳು ಆಗಿ ಬಾವಿ ನಿಂತಿದೆಯೋ ಅದಕ್ಕೆ ಬೇಗ ಹಣ ಕೊಟ್ಟು ಪೂರ್ತಿ ಮಾಡಲು ಆಗುವುದಿಲ್ಲವೇ ?

ಶ್ರೀ ವಿ. ಕೌಜಲಗಿ.—ಈಗ ಕೊಟ್ಟ ಹಣವನ್ನೇ ಪೂರ್ತಿಯಾಗಿ ಉಪಯೋಗಮಾಡಿಲ್ಲ. ಇನ್ನು ಹೆಚ್ಚು ಹಣ ಕೊಡುವುದು ಎಂದರೆ ಹೇಗೆ ?

Mr. SPEAKER.—Since the Hon. Chief Minister is not here, at his special request question nos. 368, 527, 599, 617 and 847 are held over.

Sri K. H. PATIL.—Is it possible to extend the same facility to the Members also ? After all, the Chief Minister is attending the Party meeting at Delhi. But we will be having more urgent and more important business than the Chief Minister. Will the facility given to the Chief Minister, be extended to us also ?

Mr. SPEAKER.—I shall consider that,

Hubli-Dharwar Municipal Corporation School Board Election

530. **Sri S. R. BOMMAI** (Kundagol).—

Will the Minister for Education be pleased to state—

(*a*) whether the Government is aware that election of members to Hubli Dharwar Municipal Corporation School Board has taken place 6 months back;

(*b*) if so, the reasons for not publishing the names of the elected members in the Gazette and the difficulties in publishing the names;

(*c*) whether it has come to the notice of the Government that members of the Corporation and elected members of the School Board and the Public of the Hubli–Dharwar are agitated because of the delay in the publication of names and prevention of newly elected members from assuming office;

(*d*) whether Government have received any representation in this behalf, if so, the action tsken in this matter?

Sri N. M. KOTRABASAIAH SOGI (Deputy Minister for Education).—

(*a*) Yes.

(*b*) Notification No. ED 325 PMS 68 has been issued on 22nd January 1969.

(*c*) No.

(*d*) (i) No.

(ii) Does not arise.

ಶ್ರೀ ಎಸ್. ಆರ್. ಬೊಮ್ಮಾಯಿ.—ಸ್ಕೂಲ್‌ಬೋರ್ಡ್ ಚುನಾವಣೆ ಆದ 9 ತಿಂಗಳಮೇಲೆ ನೋಟಿಫಿಕೇಷನ್ ಹೊರಟಿದೆ. ಇಷ್ಟು ತಡವಾಗುವುದಕ್ಕೆ ಕಾರಣ ಏನು ? ಇದಕ್ಕೆ ಏನಾದರೂ ಕ್ರಮ ತೆಗೆದುಕೊಳ್ಳುತ್ತೀರಾ ?

† ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ನೋಟಿಫಿಕೇಷನ್ ಸರ್ಕಾರದಿಂದಾಗಲಿ ಅಥವ ಅಧಿಕಾರಿಗಳಿಂದಾಗಲೀ ಏನೂ ತಡವಾಗಿಲ್ಲ. ನೋಟಿಫಿಕೇಷನ್ ಗೆಜಟ್‌ನಲ್ಲಿ ಬಂದಿದೆ. ಹುಬ್ಬಳ್ಳಿ—ಧಾರವಾಡ ಕಾರ್ಪೊರೇಷನ್ನಿನ ಮೇಯರ್‌ರವರಿಂದ ಬರಬೇಕಾದ ಪ್ರಪೋಸಲ್ಸ್ ಇಲ್ಲಿಗೆ ತಡವಾಗಿ ಬಂತು. ಅದು ಕಳುಹಿಸುವಾಗ ತಪ್ಪಾಗಿ ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ನಿಗೆ ಹೋಯಿತು. ಅಲ್ಲಿ ಸ್ವಲ್ಪ ಓಡಾಡಿ ಡಿಪಾರ್ಟ್‌ಮೆಂಟಿಗೆ ಬರುವುದಕ್ಕೆ ತಡವಾಯಿತು. ಮುನಿಸಿಪಲ್ ಕಮೀಷನರಿಗೆ ಎಜುಕೇಷನ್ ಡಿಪಾರ್ಟ್‌ಮೆಂಟಿನಿಂದ ರಿಮೈಂಡರ್ ಕೂಡ ಕಳುಹಿಸಿದರು. ಆಮೇಲೆ ಮುನಿಸಿಪಲ್ ಕಮೀಷನರಿಂದ ಡಿ.ಪಿ.ಐ.ಗೆ ಡಿಸೆಂಬರ್ 6ನೇ ತಾರೀಖು ಪ್ರಪೋಸಲ್ಸ್ ಬಂತು. 7ನೇ ತಾರೀಖು ಡಿ.ಪಿ.ಐ.ನಿಂದ ಸರ್ಕಾರಕ್ಕೆ ಕಳುಹಿಸಿಕೊಟ್ಟರು. ಅನಂತರ ಸರ್ಕಾರದಿಂದ ಜನವರಿ 22ನೇ ತಾರೀಖು ನೋಟಿಫಿಕೇಷನ್ ಇಷ್ಯೂ ಮಾಡಿದೆವು. ಅದರ ಹಿಂದಿನ ಗೆಜೆಟ್‌ನಲ್ಲಿ ಪ್ರಕಟವಾಗಿದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮೇಯರ್‌ರವರಿಂದ ಸರ್ಕಾರಕ್ಕೆ ಯಾವಾಗ ಬಂತು ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಅವರು ಜುಲೈ 30ನೇ ತಾರೀಖು ಕಳುಹಿಸಿದಾಗ ಮಿಸ್ಸೆಂಟ್ ಆಗಿ ಮುನಿಸಿಪಲ್ ಅಡ್ಮಿನಿಸ್ಟ್ರೇಷನ್‌ಗೆ ಹೋಗಿದ್ದರಿಂದ ಅಲ್ಲಿಂದ ಡಿಪಾರ್ಟ್‌ಮೆಂಟಿಗೆ 4-1-69ರಲ್ಲಿ ಬಂತು.

ಶ್ರೀ ಕೆ. ಹೆಚ್. ಪಾಟೀಲ್.—ಸ್ವಾಮಿ ಈ ಮುನಿಸಿಪಲ್ ಸ್ಕೂಲ್ ಬೋರ್ಡ್‌ಗೆ ಧಾರವಾಡ-ಹುಬ್ಬಳ್ಳಿ ಪ್ರೈಮರಿ ಎಜುಕೇಷನ್ ಆಕ್ಟ್ ಅನ್ವಯ ಆಗುತ್ತದೆಯೇ ? ಅಥವ ಕಾರ್ಪೊರೇಷನ್ ಆಕ್ಟ್ ಅನ್ವಯ ಆಗುತ್ತದೋ ಅಥವಾ ಸ್ಕೂಲ್ ಬೋರ್ಡ್ ಕಾಯಿದೆಯ ಪ್ರಕಾರ ಇದು ಅಸ್ತಿತ್ವದಲ್ಲಿ ಇದೆಯೋ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಈ ಪ್ರಶ್ನೆಗೂ ಅದಕ್ಕೂ ಸಂಬಂಧವಿಲ್ಲ. ಆದರೂ ಉತ್ತರ ಕೊಡುತ್ತೇನೆ. ಪ್ರೈಮರಿ ಎಜುಕೇಷನ್ ಆಕ್ಟ್ ಪ್ರಕಾರ ಮುನಿಸಿಪಲ್ ಸ್ಕೂಲ್ ಬೋರ್ಡ್ ಅಸ್ತಿತ್ವದಲ್ಲಿದೆ. ಅದೇ ಆಧಾರದಮೇಲೆ ಮುಂದುವರಿಸಿಕೊಂಡು ಬರುತ್ತಾ ಇದೆ. ಆದರೆ ಇದನ್ನು ಏಕೀಕೃತ ಆಡಳಿತವಾಗಿ ತರಬೇಕು ಎಂದು ಸರ್ಕಾರ ಪರಿಶೀಲನೆ ಮಾಡುತ್ತಿದೆ.

ಶ್ರೀ ಎಂ. ನಾಗಪ್ಪ.—ಕಾರ್ಪೊರೇಷನ್ ಅಧ್ಯಕ್ಷರನ್ನು ನಾಮಿನೇಷನ್ ಮಾಡಬೇಕಾದ್ದು ಔಚಿತ್ಯ. ಅವರು ಈ ಸ್ಕೂಲ್ ಬೋರ್ಡ್‌ಗೆ ಚುನಾವಣೆ ಮಾಡಬೇಕಾದರೆ ಅದು ಪ್ರೈಮರಿ ಆಕ್ಟ್ ಪ್ರಕಾರ ಆಗದೆ, ಕಾರ್ಪೊರೇಷನ್ ಆಕ್ಟ್ ಪ್ರಕಾರ ಆದರೆ ಈ ಕಾಯಿದೆ ದೃಷ್ಟಿಯಿಂದ ಆ ರೀತಿ ಮಾಡುವುದಕ್ಕೆ ಕಿಮ್ಮತ್ತು ಇದೆಯೇ ? ಮತ್ತು 6 ನೇ ತಾರೀಖು ಡೈರೆಕ್ಟರ್‌ರವರಿಂದ ಸರ್ಕಾರಕ್ಕೆ ಹೋದರೆ, ಸರ್ಕಾರದಲ್ಲಿ 22 ನೇ ತಾರೀಖಿನವರೆಗೆ ಇರಲಿಕ್ಕೆ ಕಾರಣ ಏನು ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಡೈರೆಕ್ಟರ್‌ರವರಿಂದ 7ನೇ ತಾರೀಕು ಬಂದಿದೆ. 22ನೇ ತಾರೀಖು ನೋಟಿಫಿಕೇಷನ್ ಹೊರಡಿಸಿದೆ. ನಮ್ಮಲ್ಲಿ 15 ದಿವಸ ತಡವಾಗಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಮೇಯರ್ ಅವರು ಬರೆದ ಕಾಗದ ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ನಿಗೆ ಹೋಯಿತು, ನಮಗೆ ಬರಲಿಲ್ಲ. ಅವರು ನೋಡಿಕೊಂಡು ಮತ್ತೆ ಕಾರ್ಪೊರೇಷನ್‌ಗೆ ಬರೆದರು, ಆಮೇಲೆ ಅಲ್ಲಿಂದ ನಮಗೆ ಬಂತು ಎಂದು ಹೇಳಿದರು. ಆಮೇಲೆ ಅದರ ಬಗ್ಗೆ ಚರ್ಚೆ ಮಾಡಿ ತೀರ್ಮಾನ ತೆಗೆದುಕೊಳ್ಳಲಾಯಿತು ಎಂದೂ ಹೇಳಿದರು. ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ನಿಗೆ ಬಂದಾಗ ಎಜುಕೇಷನ್ ಡಿಪಾರ್ಟ್‌ಮೆಂಟಿಗೆ ಹೋಗಬೇಕು ಎಂದು ಅವರಿಗೆ ತಿಳಿಯಲಿಲ್ಲವೇ, ಅದರ ಪರಿವೆ ಅವರಿಗೆ ಇಲ್ಲವೇ ? ಅವರ ಜೂರಿಸ್‌ಡಿಕ್ಷನ್ ಏನು ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಮುನಿಸಿಪಲ್ ಕಮಿಷನ್‌ರಿಗೆ ಮುನಿಸಿಪಲ್ ಡಿಪಾರ್ಟ್‌ಮೆಂಟಿನವರು ಕೇಸನ್ನು ವಾಪಸ್ ಕಳಿಸಿದರು. ಆ ಕೇಸ್ ಎಜುಕೇಷನ್ ಡಿಪಾರ್ಟ್‌ಮೆಂಟಿಗೆ ಬರಬೇಕಾದ್ದು ಎಂದು ನಾವು ಡಿ. ಪಿ. ಐ. ಅವರಿಗೆ ಒಂದು ರಿಮೈಂಡರ್ ಕಳಿಸಿದೆವು. ಅಲ್ಲಿಂದ ಪ್ರಪೋಸಲ್ ಬಂತು. ಆ ಪ್ರಕಾರ ಮಾಡಿದ್ದೇವೆ.

Cocoon Markets in Ramanagaram Sub-Division

580. Sri C. R. RANGE GOWDA (Magadi).—

Will the Minister for Agriculture be pleased to state:—

(a) number of Government and private cocoon markets in each taluk of Ramanagaram Sub-Division (Talukwise figures may be furnished);

(b) the reason for having such different types of cocoon markets;

(c) the transactions carried on in each one of these markets each year for the last three years;

(d) whether it has come to the notice of Government that on account of establishing different types of cocoon markets, sericulturists are put to hardship;

(e) the action taken to safeguard the interest of the Sericulturists of the abovesaid area?

Sri B. RACHAIAH (Minister for Agriculture).—

(a)		*Govt. Cocoon Markets*	*Private Cocoon Markets*
1. Ramanagaram Taluk	...	2	4
2. Channapatna Taluk	...	1	1
3. Kanakapura Taluk	...	2	9
4. Magadi Taluk	...	2	...

(*b*) According to the Mysore Silk Worm Seed and Cocoon (Regulation of Production, Supply and Distribution) Act, 1959 which is in force, Government Cocoon Markets only have to function. Suitable action is being taken to see that the Private markets are eliminated.

(*c*)—

Name of Government Notified Cocoon Markets		1966-67 quantity of Cocoons transacted in Kgs.	1967-68 quantity of Cocoons transacted in Kgs.	1968-69 (up to end of January 69) quantity of Cocoons transacted in Kgs.
1. Ramanagaram	...	9,644.4	22,645.0	92,741.8
2. Channapatna	...	1,28,739.3	1,99,356.7	1,73,607.2
3. Kanakapura	...	16,373.2	26,239.87	3,492.3
4. Chickmudawadi	...	46,812.4	13,758.4	635.4
5. Magadi	...	87,853.0	95,963.3	1,02,301.0
6. Veeregowdanadoddi	...	9,063.7	11,296.3	2,484.0
7. Bidadi	...	12,502.3	18,149.5	10,200.3

Private Cocoon Markets—figures not available.

(*d*) Yes.

(*e*) Suitable amendments to Act and Rules for eliminating private sectors are under consideration. When these are passed there will be no hardship to the sericulturists in marketing cocoons.

ಶ್ರೀ ಸಿ. ಆರ್. ರಂಗೇಗೌಡ.—ಸರ್ಕಾರಿ ಕಕೂನ್ ಮಾರುಕಟ್ಟೆಗಳು 7, ಖಾಸಗಿಯವರದು 14 ಮೈಸೂರು ಸಿಲ್ಕ್ ವರ್ಮ್ ಸೀಡ್ ಅಂಡ್ ಕಕೂನ್ (ರೆಗ್ಯುಲೇಷನ್ ಆಫ್ ಪ್ರೊಡಕ್ಷನ್, ಸಪ್ಲೈ ಅಂಡ್ ಡಿಸ್ಟ್ರಿಬ್ಯೂಷನ್) ಆಕ್ಟ್, 1959 ರ ಪ್ರಕಾರ ಮಾಡಿದ್ದಾರೆ. ಖಾಸಗಿ ಕಕೂನ್ ಮಾರ್ಕೆಟ್ಸ್‌ನವರ ಪ್ರಭಾವಕ್ಕೆ ಬಲಿಯಾಗಿ ಈ ಕಾನೂನು ಜಾರಿಗೆ ತರದೆ ರೇಷ್ಮೆ ಬೆಳೆಯುವ ರೈತರಿಗೆ ಅನ್ಯಾಯ ಮಾಡಿದ್ದಾರೆ ಕರ್ತವ್ಯಲೋಪ ಮಾಡಿದ್ದಾರೆ ಎಂದು ಭಾವಿಸಬಹುದೇ ?

ಶ್ರೀ ಬಿ. ರಾಚಯ್ಯ.—ಇಲ್ಲ, ಸ್ವಾಮಿ. ಕಾನೂನನ್ನು ಜಾರಿಗೆ ಕೊಟ್ಟಾಗ ಹೈಕೋರ್ಟ್‌ನಲ್ಲಿ ಮತ್ತು ಸುಪ್ರೀಂ ಕೋರ್ಟ್‌ನಲ್ಲಿ ಈ ಬಗ್ಗೆ ಕೆಲವು ಫಿರ್ಯಾದುಗಳಾದುವು. ಅವು ತೀರ್ಮಾನವಾಗುವ ವರೆಗೂ ಬೇರೆ ಕಡೆ ಹೊಸದಾಗಿ ಕಕೂನ್ ಮಾರುಕಟ್ಟೆಗಳನ್ನು ತೆಗೆಯುವುದಕ್ಕಾಗಲಿಲ್ಲ. ಅನಾದ ಮೇಲೆ ಎಲ್ಲಕಡೆಯೂ ಸರ್ಕಾರಿ ಕಕೂನ್ ಮಾರುಕಟ್ಟೆಗಳನ್ನು ತೆರೆದಿದ್ದೇವೆ. ಆದರೂ ಕಕೂನ್ ಮಾರ್ಕೆಟ್ ನಡೆಸುತ್ತಿರುವ ಖಾಸಗಿಯವರು ಕಾನೂನು ಪರಿಮಿತಿಯಿಂದ ತಪ್ಪಿಸಿಕೊಳ್ಳುವುದಕ್ಕೆ ಹೇಗೆ ಸಾಧ್ಯ ಎಂದು ಪ್ರಯತ್ನ ಮಾಡುತ್ತಿದ್ದಾರೆ. ಬೆಳೆಗಾರರ ಹಿತವನ್ನು ಕಾಪಾಡುವುದಕ್ಕೆ ಸರ್ವ ಪ್ರಯತ್ನವನ್ನೂ ಮಾಡಲಾಗುತ್ತದೆ.

ಶ್ರೀ ಸಿ. ಆರ್. ರಂಗೇಗೌಡ.—(ಇ) ಭಾಗಕ್ಕೆ ಕೊಟ್ಟಿರುವ ಉತ್ತರದ ಸಂಬಂಧದಲ್ಲಿ ಕೇಳುತ್ತೇನೆ. ಇಲಾಖೆಯವರು ರಾಮನಗರ ಸರ್ಕಾರಿ ಕಕೂನ್ ಮಾರುಕಟ್ಟೆಯನ್ನು ಕಾರ್ಯರೂಪಕ್ಕೆ ತರಬೇಕೆಂದು ಸಂಬಂಧಪಟ್ಟ ಅಧಿಕಾರಿಗಳನ್ನು ಕಳಿಸಿದಾಗ ಅವರಿಗೆ ಮುಖಭಂಗ ಮಾಡಿ ಅವಮಾನ ಮಾಡಿದ್ದಾರೆ. ಈಗಲಾದರೂ ಕೂಡ ಜಾಗ್ರತೆಯಾಗಿ ಆ ಅವಮಾನಕ್ಕೆ ಪ್ರತೀಕಾರವೆಂಬಂತೆ ಇದನ್ನು ಕಾರ್ಯರೂಪಕ್ಕೆ ತರುತ್ತೀರಾ ?

ಶ್ರೀ ಬಿ. ರಾಚಯ್ಯ.—ಇಂಥ ಸೋಷಿಯಲ್ ಅಜಿಟೇಷನ್ ಬಂದಾಗಲೆಲ್ಲ ಪಟ್ಟಭದ್ರ ಹಿತಗಳು ಸಾಕಷ್ಟುಮಟ್ಟಿಗೆ ತಮ್ಮ ಹಿತವನ್ನು ಉಳಿಸಿಕೊಳ್ಳುವುದಕ್ಕೆ ಪ್ರಯತ್ನ ಪಡುತ್ತಾರೆ. ಅದು ಆಗದೆ ಇದ್ದಾಗ ಅಧಿಕಾರಿಗಳ ಮೇಲೆ ಕೈ ಮಾಡುತ್ತಾರೆ. ಈ ವಿಚಾರವಲ್ಲಿ ಕೇಸು ಕೂಡ ಹಾಕಿದ್ದೇವೆ. ತಿದ್ದುಪಡಿ ತರುವುದಕ್ಕೆ ಡ್ರಾಫ್ಟ್ ಮಾಡಿಸುತ್ತಿದ್ದೇವೆ.

ಶ್ರೀ ಎನ್. ಎ. ಚನ್ನೇಗೌಡ.—ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್‌ನಲ್ಲಿ ತೀರ್ಮಾನವಾಗಿದ್ದರೂ ಕೂಡ ಖಾಸಗಿ ರೇಷ್ಮೆ ಗೂಡಿನ ಮಾರುಕಟ್ಟೆಯವರು ಪ್ರಭಾವ ಬೀರಿ ರಾಮನಗರ, ಚನ್ನಪಟ್ಟಣ ಮುಂತಾದ ಕಡೆ ಕಾನೂನಿನ ಚೌಕಟ್ಟಿನೊಳಗೆ ಬಾರದೆ ತೊಂದರೆ ಕೊಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ ?

ಶ್ರೀ ಬಿ. ರಾಚಯ್ಯ.—ಆಗಲೇ ಗಮನಕ್ಕೆ ಬಂದಿದೆಯೆಂದು ಹೇಳಿದೆ. ರೈತರಿಗೆ ಅಡ್ವಾನ್ಸಾಗಿ ಮುಂಚೆಯೇ ಸಾಲ ಕೊಟ್ಟು ಗೂಡಿಗೆ ಅವರ ಕಡೆ ಬರುವಹಾಗೆ ಪ್ರಯತ್ನಮಾಡುತ್ತಿದ್ದಾರೆ. ರೈತರು ಮನಸ್ಸುಮಾಡಿದರೆ ಈಗಲೂ ಕೂಡ ಇರುವ ಕಾಯಿದೆ ಪ್ರಕಾರ ಸರಕಾರದ ಮಾರುಕಟ್ಟೆಗಳಲ್ಲೇ ಮಾರುವುದಕ್ಕೆ ಅನುಕೂಲವಿದೆ. ಈಗ ಸರಕಾರಿ ಮಾರುಕಟ್ಟೆಯನ್ನು ಬೆಳಿಗ್ಗೆ 8 ರಿಂದ ಸಾಯಂಕಾಲ 6 ಗಂಟೆಯವರೆಗೆ ತೆರೆದಿರಬೇಕು. ಆಗ ಗೂಡು ಮಾರಾಟಮಾಡುತ್ತಾರೆ. ಕಾನೂನಿಗೆ ವಿರೋಧವಾಗಿ ಮಾರಾಟ ಮಾಡಿದಾಗ ಕಾಗ್ನೈಜಬಲ್ ಅಫೆನ್ಸ್ ಎಂದು ಪರಿಗಣಿಸಿ ಗೂಡನ್ನು ಸೀಜ್ ಮಾಡುವುದಕ್ಕೆ ಕಾನೂನಿಗೆ ತಕ್ಕ ತಿದ್ದುಪಡಿಯನ್ನು ತರುತ್ತಿದ್ದೇವೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗಿರುವ ಕಾನೂನು ಪರಿಮಿತಿಯಲ್ಲೇ ರೈತರು ವ್ಯಾಪಾರ ಮಾಡುವವರು, ಕೊಳ್ಳುವವರು ಸರಕಾರಿ ಮಾರುಕಟ್ಟೆಗೆ ಬರುವ ಹಾಗೆ ಮಾಡಲು ಸಾಧ್ಯವಿಲ್ಲವೆ ? ಇತ್ತೀಚೆಗೆ ರೈತರು ಸರಕಾರಿ ಮಾರುಕಟ್ಟೆಯಲ್ಲಿ ನಡೆಯುವ ವಿಧಾನವನ್ನು ನೋಡಿ ಅದರಿಂದ ತೊಂದರೆಯೆಂದು ಬೇರೆ ಕಡೆಗೆ ಹೋಗುತ್ತಿರಬಹುದಲ್ಲವೆ?

ಶ್ರೀ ಬಿ. ರಾಚಯ್ಯ.—ಮೊದಲು ಸರಕಾರಿ ಮಾರುಕಟ್ಟೆ ಬರುವುದಕ್ಕೆ ಮುಂಚೆ ಖಾಸಗಿಯವರ ಮಾರುಕಟ್ಟೆಗಳಲ್ಲಿ ತೊಂದರೆ ಇತ್ತು. ಆಮೇಲೆ ಸರಕಾರಿ ಮಾರುಕಟ್ಟೆಗಳಲ್ಲಿ ನೂರಕ್ಕೆ ಒಂದೂವರೆ ಇದ್ದಾಗ ಹೆಚ್ಚು ರೈತರು ಅಲ್ಲಿಗೆ ಬರುತ್ತಿರಲಿಲ್ಲ. ಆದುದರಿಂದ ಅದನ್ನು ಸೇಕಡ ಒಂದಕ್ಕೆ ಇಳಿಸಬೇಕೆಂದು ತೀರ್ಮಾನವಾಗಿದೆ. ದಳ್ಳಾಳಿಗಳ ಮೂಲಕ ಬರುವ ಕಕೂನ್‌ಗಳಿಗೆ ಹೆಚ್ಚು ಬೆಲೆ ಕೊಡುತ್ತಿದ್ದಾರೆ, ರೈತರಿಗೆ ತೊಂದರೆಯಾಗಿದೆ, ಸರಿಯಾದ ಬೆಲೆಗೆ ದೊರೆಯುತ್ತಿಲ್ಲ ಎಂಬುದು ಗಮನಕ್ಕೆ ಬಂದಿದೆ.

ಶ್ರೀ ಕೆ. ಎಚ್. ರಂಗನಾಥ್.—ತಮ್ಮಲ್ಲಿ ಜಾಸ್ತಿ ಸಿಬ್ಬಂದಿಯಿದ್ದರೂ ಕೂಡ ಕಾನೂನನ್ನು ಸರಿಯಾಗಿ ಜಾರಿಗೆ ಕೊಡುವಂತೆ ತೀರ್ಮಾನಮಾಡಲು ಸಾಧ್ಯವಿಲ್ಲವೇ!

ಶ್ರೀ ಬಿ. ರಾಚಯ್ಯ.—ಈಗಿರುವ ಕಾನೂನು ಪ್ರಕಾರ ಅನೇಕ ಕೇಸುಗಳನ್ನು ಹಾಕಿದೆ. ಕಾಂಪೌಂಡ್ ಕೂಡ ಮಾಡಿದೆ ಆದರೂ ಕೂಡ ಅನುಕೂಲವಾಗಿಲ್ಲ. ಶೀಘ್ರವಾಗಿ ತಕ್ಕ ಕಾಯಿದೆ ತರಬೇಕಾಗಿದೆ.

ಶ್ರೀ ಎಸ್. ಬಂಗಾರಪ್ಪ. —ಈಗತಾನೆ ಕಾಗ್ನೈಜಬಲ್ ಅಫೆನ್ಸ್ ಎಂದು ಮಾಡಲು ರೂಲ್ಸ್ ಮಾಡಲಾಗಿದೆ, ಅದನ್ನು ತರುತ್ತೇವೆ ಎಂದು ಹೇಳಿದರು. ಅದನ್ನು ತೀವ್ರವಾಗಿ ಜಾರಿಗೆ ತರಲಾಗುವುದೇ?

ಶ್ರೀ ಬಿ. ರಾಚಯ್ಯ.—ತರುವುದಕ್ಕೆ ಪ್ರಯತ್ನಮಾಡುತ್ತೇವೆ.

Grant-in-Aid to Private Colleges in the State

606. Sri S. BHIMANNA (Bhalki).—

Will the Minister for Education be pleased to state :—

(*a*) the number of private Colleges opened after 1966 and given grant-in-aid by the Government;

(*b*) the conditions to be fulfilled by the Private managements for opening new Arts and Science Colleges and getting grant-in-aid from Government;

(*c*) whether any representation was made by the Private management for giving grant-in-aid from the coming academic year in a backward area (*i.e.*, Bidar District) of the State in order to enable the public of that area to come up on par with the other educationally developed area;

(*d*) if so, action taken by Government in the matter?

Sri N.M. KOTRA BASAIAH SOGI (Deputy Minister for Education).—

(*a*) 15 (Colleges affiliated before 1967-68).

(*b*) After the commencement of the Academic year 1967-68, no College started by Private Managements is given grant-in-aid. For opening Colleges without grant-in-aid the requirements of the University concerned will have to be met. These are broadly provision of land, buildings and financial resources in addition to the need for a College in the place proposed.

(*c*) Yes.

(*d*) Government do not propose to admit any more Colleges to the Grant-in-Aid Code.

ಶ್ರೀ ಎಸ್. ಭೀಮಣ್ಣ.—ಈ 15 ಕಾಲೇಜುಗಳಲ್ಲದೆ ಗ್ರಾಂಟ್ ಪಡೆಯುದಿರುವ ಕಾಲೇಜುಗಳೆಷ್ಟಿವೆ?

†ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಅದಕ್ಕೆ ನೋಟೀಸ್ ಬೇಕು.

ಶ್ರೀ ಎಸ್. ಭೀಮಣ್ಣ.—1966 ರಿಂದ 1969 ರವರೆಗೆ ಎಷ್ಟು ಕಾಲೇಜುಗಳು ಪ್ರಾರಂಭಿಸಲ್ಪಟ್ಟಿವೆ?

ಶ್ರೀ ಎನ್.ಎಮ್. ಕೊಟ್ರಬಸಯ್ಯ ಸೋಗಿ.—1966ರಿಂದ 1967-68ರವರೆಗೆ ಗ್ರಾಂಟ್-ಇನ್-ಏಡ್ ಪಡೆದು ಓಪನ್ ಆಗಿರುವ ಕಾಲೇಜುಗಳು 15.

Sri G. CHANDRAKANTH.—Are the Government aware that there are only a few colleges in Bidar, only two and the third has been started by the hon. Member Sri Bheemanna who belongs to the ruling party and they reqiure grant in aid?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಇತ್ತೀಚೆಗೆ ಹೆಚ್ಚು ಕಾಲೇಜುಗಳು ಪ್ರಾರಂಭವಾಗಿವೆ. ಹೈದರಾಬಾದು ಮತ್ತು ಬಿದರೆ ಭಾಗಗಳಲ್ಲಿ ಅನೇಕ ಕಾಲೇಜುಗಳಿವೆ. ಅಲ್ಲದೆ ಅಲ್ಲಿ ಹೈಸ್ಕೂಲುಗಳಲ್ಲಿ 11 ನೆಯ ಸ್ಟ್ಯಾಂಡರ್ಡ್ ತೆರೆದಿರುವುದರಿಂದ ಎಸ್.ಎಸ್.ಎಲ್.ಸಿ. ಆದವರು 11 ನೆಯ ಸ್ಟ್ಯಾಂಡರ್ಡಿಗೆ ಸೇರಲು ಅವಕಾಶವಿವೆ, ಅದು ಪಿ.ಯು.ಸಿ.ಗೆ ಸಮ. ಡಿಗ್ರಿ ಕೋರ್ಸಿಗೆ ಬರುವವರಿಗೆ ಕಾಲೇಜುಗಳಿಗೆ ಸೇರಲು ಅವಕಾಶವಿದೆ.

ಹೊಸ ಕಾಲೇಜು ಪ್ರಾರಂಭ ಮಾಡುತ್ತೇವೆ ಎಂದು ಹೇಳಿದ್ದರ ಬಗ್ಗೆ ಅದು ಸರ್ಕಾರದ ಪರಿಶೀಲನೆಯಲ್ಲಿ ಇಲ್ಲ. ಅದೇನಿದ್ದರೂ ಎಕ್ವಿಪ್‌ಮೆಂಟ್ ಗ್ರ್ಯಾಂಟ್ ಕೊಡಬಹುದು ಅದನ್ನು ಹಣ ಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ವಿಚಾರ ಮಾಡಬೇಕಾಗುತ್ತದೆ.

ಶ್ರೀ ಸದಾಶಿವಪ್ಪ ಪಾಟೀಲ್.—ಹೈದರಾಬಾದ್ ಕರ್ನಾಟಕದಲ್ಲಿ 1966ರ ನಂತರ ಎಷ್ಟು ಕಾಲೇಜು ತೆಗೆದಿದೆ ಎಂಬುದರ ಬಗ್ಗೆ 1967-68ರ ಮುಂದೆ ಎಂದು ಹೇಳಿದ್ದೀರಿ. 11ನೇ ಸ್ಟ್ಯಾಂಡರ್ಡ್ ಬಗ್ಗೆ ಆದಷ್ಟು ಓಪನ್ ಮಾಡಲಿಕ್ಕೆ ಪ್ರಯತ್ನ ನಡೆಸಿದ್ದೇವೆ ಎಂದು ಈಗತಾನೆ ಹೇಳಿದಿರಿ. ಹೈದರಾಬಾದು ಕರ್ನಾಟಕದಲ್ಲಿ ಎಲ್ಲಾ ತಾಲ್ಲೂಕುಗಳಲ್ಲಿ 11 ಸ್ಟ್ಯಾಂಡರ್ಡ್ ಓಪನ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಅಧ್ಯಕ್ಷರು.—ಅದು ಈ ಪ್ರಶ್ನೆಗೆ ಸಂಬಂಧಪಡುವುದಿಲ್ಲ. ಆದ್ದರಿಂದ ಅದಕ್ಕೆ ಅವಕಾಶ ಕೊಡಲಿಕ್ಕೆ ಆಗುವುದಿಲ್ಲ.

Condition for starting City Bus Service

612. Sri M. NAGAPPA (Raichur).—

Will the Minister for Transport be pleased to state :—

(*a*) the general condition for starting City Service buses in the State ;

(*b*) whether there is any proposal before the Government or the M. S. R. T. C. to start City Service buses at Raichur Town ;

(*c*) if so, the period required for startng City Service buses at Raichur Town ;

(*d*) if not, the reasons for not starting such City Service buses in Raichur Town ?

Sri MOHAMED ALI (Minister for Transport).—

(*a*) City bus services are operated only in cities with a population of over one lakh.

(*b*) No.

(*c*) Does not arise in view of reply at (*b*).

(*d*) Since the population of Raichur is less than a lakh and also passages within the town limits are narrow operation of city services is not contemplated.

ಶ್ರೀ ಎಂ. ನಾಗಪ್ಪ.–ಒಂದು ಲಕ್ಷಕ್ಕಿಂತ ಹೆಚ್ಚು ಪಾಪ್ಯುಲೇಷನ್ ಇರಬೇಕೆನ್ನುವ ಈ ಒಂದು ನೀತಿಯನ್ನು ಏನು ತಾವು ಅನುಸರಿಸಿದ್ದೀರಿ ಇದು ರಾಯಚೂರಿಗಾಗಿಯೇ ಇದೆಯೋ ಅಥವಾ ಗುಲ್ಬರ್ಗಾ ಡಿವಿಜನ್ ಅಥವಾ ಸಣ್ಣದಾಗಿರತಕ್ಕ ತಾಲ್ಲೂಕಾ ಪ್ಲೇಸ್‌ಗೂ ಅನ್ವಯಿಸುತ್ತೀರಾ ?

Sri MOHAMED ALI.—Sir, the policy of running city buses in a City which has got a population of one lakh and above is made applicable for the entire State, and nowhere there appears to be any exemption.

ಶ್ರೀ ಎಂ. ನಾಗಪ್ಪ.—ತಮ್ಮ ನೆನಪಿಗೆ ತಂದು ಕೊಡುತ್ತೇನೆ. ಗುಲ್ಬರ್ಗ—ಯಾದ್ಗೀರ್ ಎರಡೂ ಕೂಡ ಸಿಟಿ ಬಸ್ಸುಗಳನ್ನು ಹೊಂದಿವೆ ಮತ್ತು ಬಿಜಾಪುರದಲ್ಲೂ ಪ್ರಾರಂಭ ಮಾಡಿದ್ದೀರಿ. ರಾಯಚೂರು ಲಕ್ಷದ ಮೇಲೆ ಪಾಪ್ಯುಲೇಷನ್ ಇರುವಾಗ ಅಲ್ಲಿ ಏಕೆ ಮಾಡಲಿಲ್ಲ. ?

Sri MOHAMED ALI.—I am not sure and I cannot say at this stage with certainty what has happened so far as Bijapur or Yadgir is concerned. I have to collect the information before I reply.

Sri M. NAGAPPA.—Perhaps the Hon. Minister might be knowing about Gulbarga. There are City buses in Gulbarga and the population is hardly about 70,000.

Sri MOHAMED ALI.—The population of Gulbarga is over one lakh.

Sri M. NAGAPPA.—According to what Census, Sir?

Sri MOHAMED ALI.—In the last census about 10 years ago, it was 98,000 and now it is easily more than a lakh.

Sri S. R. BOMMAI.—May I know within what limit of the City the buses are run? Is it 10 miles or 15 miles?

Sri MOHAMED ALI.—Within a radius of 10 miles.

ಶ್ರೀ ಬಿ. ಪಿ. ಗಂಗಾಧರ.—ಸರ್ಕಾರದವರು ಆ ಪ್ರಜಾ ಸಂಖ್ಯೆ ಅಷ್ಟೇ ಇರಬೇಕು ಎಂಬ ರೂಲ್ಸನ್ನು ರಿಜಿಡ್ಡಾಗಿ ಅನುಸರಿಸುವುದಕ್ಕೆ ಬದಲು ಜನರಿಗೆ ಅನುಕೂಲವುಂಟುಮಾಡತಕ್ಕ ದೃಷ್ಟಿಯಿಂದ ಅಗತ್ಯವಿರುವ ಕಡೆಗಳಲ್ಲಿ ಅಂದರೆ ಈ ದಿವಸ ತುಮಕೂರಿನಲ್ಲಿ ಒಂದು ಇಂಜಿನಿಯರಿಂಗ್ ಕಾಲೇಜಿದೆ, ಪಾಲಿಟೆಕ್ನಿಕ್ ಇದೆ ಮತ್ತು ಫಸ್ಟ್‌ಗ್ರೇಡ್. ಕಾಲೇಜು ಇದೆ. ಆ ಪಟ್ಟಣದ ಒಂದು ಕೊನೆಯಿಂದ ಇನ್ನೊಂದು ಕೊನೆಗೆ ನಾಲ್ಕು ಐದು ಮೈಲಿ ದೂರವಾಗುತ್ತೆ. ಅಲ್ಲದೆ ವಿದ್ಯಾರ್ಥಿಗಳು ಹೊರಗಡೆಯಿಂದ ಆರು ಏಳು ಮೈಲಿಗಳಿಂದ ಕೂಡ ಬರುತ್ತಾರೆ. ಅಲ್ಲಿ ಒಂದು ಎಂ.ಎಸ್.ಆರ್.ಟಿ.ಸಿ. ಷೆಡ್ ಬೇರ ಇದೆ, ಆದ್ದರಿಂದ ಅಲ್ಲಿಗೆ ಒಂದು ಬಸ್ಸನ್ನ ಓಡಿಸುವುದಕ್ಕೆ ಏರ್ಪಾಡು ಮಾಡುತ್ತೀರಾ?

Sri MOHAMED ALI.—Sir, so far as bus fares are concerned, concessions have been granted to all the students in the State irrespective of towns or cities. So far as Tumkur is concerned, we can think of running a shuttle service at the time of College hours. It will be difficult to run City services; for the convenience of students we can only think of running shuttle services.

Sri D. B. KALMANKAR.—In view of the fact that Gulbarga has got less than one lakh population and even then there is city service, may I know whether the same concession will be given to Raichur also?

Sri MOHAMED ALI.—I do not accept that the population of Gulbarga is less than one lakh. The city services were introduced in Gulbarga just last year.

Sri G. CHANDRAKANTH.—It seems that the M.S.R.T.C. is to run a city service wherever the population is more than one lakh. In places, where the population is not more than one lakh, will the Government consider grant of permit to private operators to run local buses?

Sri MOHAMED ALI.—So far as the nationalised sectors are concerned as per law there is no scope to grant any permit to any private operator. Of course, in areas and in Cities, which have not been nationalised there is scope for granting permit to private operators. They can apply to the R. T. O. and take their chance.

ಶ್ರೀ ಬಿ. ಎಂ. ಇದಿನಬ್ಬ.—ನಮ್ಮ ಮಂಗಳೂರಿನಲ್ಲಿ ಈಗ ಪ್ರಜಾ ಸಂಖ್ಯೆ ಒಂದು ಲಕ್ಷ ಇಪ್ಪತ್ತು ಸಾವಿರದ ಮೇಲಿದೆ. ಆದ್ದರಿಂದ ಸರ್ಕಾರದವರು ಅಲ್ಲಿ ಬಸ್ಸನ್ನು ಓಡಿಸುವುದಕ್ಕೆ ಏರ್ಪಾಡನ್ನು ಮಾಡುತ್ತೀರಾ ?

Sri MOHAMED ALI.—The routes in Mangalore City have not been nationalised.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗ ರಾಜ್ಯದ ಕೆಲವು ಪಟ್ಟಣಗಳಲ್ಲಿ ಏನು ಆ ಸಿಟಿ ಬಸ್ಸುಗಳನ್ನು ಓಡಿಸಲಾಗುತ್ತಿದೆ, ಆ ಪಟ್ಟಣಗಳಷ್ಟೇ ಪ್ರಜಾ ಸಂಖ್ಯೆ ಇರತಕ್ಕ ಬೇರೆ ಪಟ್ಟಣಗಳಲ್ಲಿ ಕೂಡ ಆ ಬಸ್ಸುಗಳನ್ನು ಓಡಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

Sri MOHAMED ALI.—I do not know what to reply, because I do not know any place where such City services are being run where the population is less than one lakh. I cannot say, whether it is a shuttle service or City service that is being run, because that has got to be verified. I hope the hon'ble Member will appreciate my difficulty for not giving a specific reply.

3-00 P.M.

ಶ್ರೀ ಸದಾಶಿವಪ್ಪ ಪಾಟೀಲ್.—ಈ ಸಂಸ್ಥಾನದಲ್ಲಿ ರಾಯಚೂರು ಒಂದು ಒಳ್ಳೆಯ ಬಿಜಿನೆಸ್ ಸೆಂಟರ್ ಆಗಿದೆ. 10 ಮೈಲಿಗಳ ರೇಡಿಯಸ್‌ನಲ್ಲಿ ಬಂದರೆ, ನೀವು ಪಾಪ್ಯುಲೇಷನ್ ನೋಡುತ್ತೀರೋ ಅಥವಾ ಎಂ. ಎಸ್. ಆರ್. ಟಿ. ಸಿ.ಗೆ ಲಾಭದಾಯಕವಾದ ದೃಷ್ಟಿ ಇರಲಿ ಎಂದು ನೋಡುತ್ತೀರೋ ? ಯಾದ್‌ಗಿರ್ ವಿಷಯ 10 ವರ್ಷಗಳಿಂದಲೂ ಗೊತ್ತಿಲ್ಲವೆಂದು ಹೇಳಿದರೆ ಹೇಗೆ ?

Sri MOHAMED ALI.—Sir, it is for the hon'ble Member to think whatever he likes if he does not believe me. I cannot help. I can with certainty say that I have no information about Yadgir.

Mr. SPEAKER.—Now, held-over question No. 373 of 4th March 1969 by hon'ble Member Sri S. R. Bommai may be taken up.

Q. No. 373 *re* : Acquisition Proceedings pending in Kundgol Taluk

Sri H. V. KOUJALGI.—Sir, in addition to the printed reply, I have to state that in so far as item No. 1 in reply to clause (*a*) of the question, action was taken immediately, but long time was taken in selecting the site. A notification has already been issued under section 4. So also the case with item No. 5 a notification under section 6 has already been issued. Action was also immediately taken.

Sri S. R. BOMMAI.—So far as Sirur village is concerned there is no case pending, but still no sites have been allotted. May I know the reasons ?

Sri H. V. KOUJALGI.—Sir, the case has been disposed of there. Further steps will be taken to handover possession, etc.

Mr. SPEAKER.—Next, short notice question No. 38 by Sri Subbarao Halsand. I hold-over this question as it is to be replied by the Hon'ble Chief Minister.

Sri D. B. KALMANKAR.—Sir, there are other questions standing in the name of hon'ble Chief Minister in to-day's list. May I know, whether they will also be held-over?

Mr. SPEAKER.—I have already said that they are held-over. Next, call attention notice.........

Newspaper Publication *re*: a Letter of Sri S. K. Patil to the Chief Minister

Sri M. S. KRISHNAN (Malleswaram).—Sir, I have a submission to make. I had sent a privilege motion yesterday in regard to the letter of Mr. S. K. Patil waritten to the Hon'ble Chief Minister. I have also sent the paper in which it has been published. Sir, the way in which Mr. S. K. Patil has written to the Hon'ble Chief Minister is not only derogatory to the hon'ble Members of this House but also to the Hon'ble Chair, because he has advised the Hon'ble Chair through the Hon'ble Chief Minister.

Mr. SPEAKER.—I shall taken note of the views of the hon'ble Member and consider the matter.

Sri B. P. GANGADHAR.—Sir, I would request the hon'ble Speaker to issue a notice to Sri S. K. Patil and he should be called up before this House. It is not proper for him to ask somebody to advise the Hon'ble Speaker. I appeal to the Chair that this matter be taken very seriously and courageously. Sri S. K. Patil must be taught a lesson in this matter.

Mr. SPEAKER.—I have received notices of breach of privilege in respect of alleged statement made by Sri S. K. Patil and it has also appeared in the Press. I have already heard hon'ble Members Sri Nagappa and Sri Kalmankar. The motion given notice of by hon'ble Member Sri M. S. Krishnan also appears to be a similar one. I shall consider all the motions given notice of and after giving a hearing to Sri Krishnan, if necessary, I shall make up my mind as to what should be done in the matter. I shall give an opportunity to hon'ble Member Sri Krishnan later.

Sri M. NAGAPPA.—Sir, before any discussion takes place on this matter, I humbly submit to the Hon'ble Chair, that according to the Press, the letter that has been written to Hon'ble Chief Minister may be called for, though not placed on the Table of this House, and perused by the Hon'ble Speaker, as that would give a clear picture and the intention of Sri S. K. Patil in writing that letter.

Mr. SPEAKER.—I shall look into it.

Sri D. B. KALMANKAR.—The importance of the privilege motion will be lost, if it is not taken up early.

Mr. SPEAKER.—I shall look into it.

ಶ್ರೀ ಎಂ. ಎಸ್. ಕೃಷ್ಣನ್.—ಸ್ವಾಮಿ, ನನಗೆ ಯಾವಾಗ ಅವಕಾಶ ಕೊಡುತ್ತೀರಿ? ನಾನು ಪುಸ್ತಕ ಎಲ್ಲಾ ತೆಗೆದುಕೊಂಡು ಬಂದಿದ್ದೇನೆ. ಇದು ಒಂದು ಬಹಳ ಮುಖ್ಯವಾದ ವಿಷಯ.

Mr. SPEAKER.—I will hear the hon'ble Member Sri Krishnan in my chambers and not here. The hon'ble Member may meet me on Monday morning in my Chambers and I will hear him.

ಶ್ರೀ ಎಂ. ಎಸ್. ಕೃಷ್ಣನ್.—ಸ್ವಾಮಿ, ಎಸ್. ಕೆ. ಪಾಟೀಲರು ಸಿಕ್ಕಾಪಟ್ಟೆ ಬಯ್ಯಬಹುದೇ ತಮ್ಮನ್ನೂ ಬಯ್ಯಬಹುದೇ?

ಶ್ರೀ ಎಸ್. ಎಚ್. ಪುಟ್ಟರಂಗನಾಥ್.—ಸ್ವಾಮಿ, ನಾನೂ ಕೆಲವು ಪ್ರಶ್ನೆಗಳನ್ನು ಕಳಿಸಿದ್ದೆ. ಇನ್ನೂ ಉತ್ತರ ಬಂದಿಲ್ಲ. ಅದನ್ನು ದಯವಿಟ್ಟು ನೋಡಬೇಕು.

ಅಧ್ಯಕ್ಷರು.—ಅದನ್ನು ನೋಡುತ್ತೇನೆ. ಎಲ್ಲಾ ಪ್ರಶ್ನೆಗಳಿಗೂ ಉತ್ತರ ಕೊಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

Sri G. CHANDRAKANTH.—With regard to questions I would like to say that in the Questions list I find four questions in the name of hon'ble Member Sri M. Nagappa. I do not know what special privileges hon'ble Member Sri Nagappa is having.

Mr. SPEAKER.—No aspersions please. All members have equal privileges and there is no special privilege to any particular Member.

Sri B. B. SAYANAK.—Sir, I gave a call attention notice on 21st February 1969 and I have received an intimation on 28th February 1969. But so far that call attention notice has not come up before this House. If this is the case, what is the use of giving calling attention notices, Sir?

Mr. SPEAKER.—If the hon'ble Member's call attention notice has been admitted, it will certainly be taken up in due course.

Sri D. B. KALMANKAR.—Sir, I have given a short notice question ten days back, but so far it has not been taken up. I submit that short notice questions which have been submitted by other hon'ble Members just two to three days back have already been taken up and answered. Is it not a discrimination, Sir?

Mr. SPEAKER.—There is no discrimination.

Sri D. B. KALMANKAR.—Then what about my short notice question, Sir?

Mr. SPEAKER.—The hon'ble Member should know that it is not proper for him to waste the time of this House.

Calling Attention to Matters of Urgent Public Importance
(i) *re:* Remission of Land Revenue in Srinivaspur Taluk

Sri B. L. NARAYANASWAMY (Srinivaspur).—I call the attention of the Hon'ble Minister for Revenue to the failure of Government in not acting according to the Rules of Remission of Land Revenue in Srinivaspur Taluk.

† Sri H. V. KOUJALGI (Minister for Revenue).—Sir, there are heavy arrears of Land Revenue, surcharge on land revenue, loans and other Government dues outstanding in Srinivasapur Taluk. As at the end of January, 1969, these arrears totalled up to sum of about Rs. 25½ lakhs. The collections during January and February, 1969 were a little less than Rs. 2 lakhs. The arrears under the several heads as at the end of February, 1969 come to a total of Rs. 23,59,240. These arrears consist of land revenue amounting to Rs. 8,29,728, surcharge on land revenue of Rs. 85,565 and other Government dues such as loans, etc., amounting to Rs. 14,43,947.

The new rules for remission and suspension of land revenue issued under the Government Notification dated 15th April, 1968, have been given retrospective effect from 1st April, 1964. The Tahsildar, Srinivasapur Taluk has submitted revised proposals for remission of Rs. 1,74,115 for the year 1965-66 covering all the 346 villages in the Taluk. This proposal is under scrutiny of the subordinate officers and has not been received by Government yet. The Tahsildar has also submitted proposals for remission of Rs. 1,40,476 for the year 1966-67 and Rs. 1,12,265 for the year 1967-68. These proposals also are under the scrutiny of the subordinate officers.

The Deputy Commissioner, Kolar, has issued instructions to the Tahsildars that pending working out of the revised proposals and issue of Government Orders thereon, recovery of land revenue in respect of which remission was previously proposed should not be made.

ಶ್ರೀ ಬಿ. ಎರ್. ನಾರಾಯಣಸ್ವಾಮಿ.—ಸ್ವಾಮಿ, ಈಗಾಗಲೇ ಅನೇಕರಿಂದ ಕಂದಾಯವನ್ನು ವಸೂಲು ಮಾಡಿದ್ದಾರೆ. ಆದ್ದರಿಂದ ಈಗ ವಸೂಲಾಗಿರುವುದನ್ನು ಮುಂದೆ ಬಾಕಿಗೆ ಅದನ್ನು ಅಡ್ಜಸ್ಟ್ ಮಾಡಿಕೊಳ್ಳುವಂತೆ ಆದೇಶ ನೀಡಬೇಕು. ಮತ್ತು ಯಾವ ಯಾವ ಗ್ರಾಮಗಳಲ್ಲಿ ಯಾರು ಯಾರಿಗೆ ರೆಮಿಷನ್ ದೊರಕಿದೆ ಎಂಬುದನ್ನು ತಿಳಿಸುವಂತೆ ಒಂದು ಆದೇಶ ನೀಡಬೇಕು. ಆ ರೀತಿ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಚ್. ವಿ. ಕೌಜಲಗಿ.—ಯಾವ ಯಾವ ಹಳ್ಳಿಗಳಿಗೆ ಕಂದಾಯದ ರಿಮಿಷನ್ ಬಗ್ಗೆ ಪ್ರಪೋಜಲ್ಸ್ ಬಂದು ಯಾವ ಯಾವ ಹಳ್ಳಿಗಳಿಗೆ ಕಂದಾಯದ ರಿಮಿಷನ್ ದೊರೆತಿದೆಯೋ ಅವುಗಳ ಬಗ್ಗೆ ಕಂದಾಯವನ್ನು ವಸೂಲು ಮಾಡಬಾರದು ಎನ್ನುವ ಬಗ್ಗೆ ಆಜ್ಞೆ ಏನಿದೆ ಅದನ್ನು ಡೆಪ್ಯುಟಿ ಕಮೀಷನರು ಸಂಬಂಧಪಟ್ಟ ತಾಲ್ಲೂಕಿನ ಅಮಲ್ದಾರರಿಗೆ ಕಳುಹಿಸುತ್ತಾರೆ. ಅಕಸ್ಮಾತ್ತಾಗಿ ಕಂದಾಯವನ್ನು ವಸೂಲು ಮಾಡಿದರೆ ಅದನ್ನು ಮುಂದೆ ಬಾಕಿಗೆ ಅಡ್ಜಸ್ಟ್ ಮಾಡಿಕೊಳ್ಳುವಂತೆ ಹುಕುಂ ಮಾಡುತ್ತೇವೆ ಮತ್ತು ಪುನಃ ವಸೂಲು ಮಾಡಬಾರದು ಎಂದು ಹೇಳುತ್ತೇವೆ.

(ii) re: Collapse of a Hall in Raj Bhavan under construction in Bangalore

Sri M. S. KRISHNAN.—I call the attention of the Hon'ble Minister for Public Works to the collapse of a Hall under construction in Raj Bhavan at Bangalore.

SRI K. LAKKAPPA (Minister for Public Works).—An estimate amounting to Rs. 3.30 lakhs for the construction of a first floor to Raj Bhavan was administratively approved in October 1967 and technically sanctioned in December 1967. The work was started in January 1968 and the main construction work including the roof slabs, etc., was completed in November 1968. Works pertaining to providing water supply, electrical and sanitary connections, etc., and finishing items such as plastering, painting, floor finishings, are in progress.

During the normal inspection of the works in progress by the Departmental Officers on 3rd March 1969, plaster cracks were observed in the Top portion of the twin circular brick columns in the right wing of the ground floor verandah on the Southern side. Action was initiated to remove the damaged plaster and re-do the same under the normal annual repairs. But when the old plaster of columns was removed, it was found that some of the bricks immediately below the rolled steel girder supporting the old Madras terrace roof of the verandah had also yielded. The entire edifice is intact. Therefore, there is no question of any accident having taken place.

The Raj Bhavan building is about 100 years old. All necessary precautions have been taken to ensure that the loads due to the construction of the first floor over the existing building are within the safe limits. The long age of the building and the progressive deterioration of some of the construction materials during this period might presumably have caused the bricks of the twin column to yield. Such situations are not normal, but only incidental. This view is supported by the fact that roof and column of an identical portion of the building in the left wing on the northern side has not shown any signs of crack. The central hall of the building is quite sound.

Since it has been revealed now that some of the old brick masonry columns of the verandah portion are considered not dependable, necessary action has been taken to crop up the old Madras terrace to ensure safety. It is proposed to replace the old columns with new ones.

ಶ್ರೀ ಎಂ. ಎಸ್. ಕೃಷ್ಣನ್.—ಇದರ ಬಗ್ಗೆ ಒಂದು ವಿಷಯ ಕೇಳಬೇಕಾಗಿದೆ. ಅಧಿಕಾರಿಗಳು ಏನು ವರದಿ ತಯಾರು ಮಾಡಿಕೊಟ್ಟಿದ್ದಾರೋ ಅದನ್ನು ಓದಿಬಿಟ್ಟಿರಿ. ತಾವೇ ಹೋಗಿ ನೋಡಿಕೊಂಡು ಬಂದು ಈ ಬಗ್ಗೆ ಹೇಳುತ್ತಿಲ್ಲ. ನಾನು ಅಲ್ಲಿಗೆ ಹೋಗಿ ನೋಡಿಕೊಂಡು ಬಾದು ಹೇಳುತ್ತಿದ್ದೇನೆ.

It is stated here that "when the old plaster of columns was removed, it was found that some of the bricks immediately below the rolled steel girder supporting the old Madras terrace roof of the verandah had also yielded." The impression that is given here is that only the plaster was removed below. But the brick in the whole column also has yielded. Is it not because of the construction on the first floor over the verandah which is an old one and because of wrong calculations of stresses and strain that this has happened? I would like to have this clarification from you.

ಶ್ರೀ ಕೆ. ಲಕ್ಕಪ್ಪ.—ಮಾನ್ಯ ಸದಸ್ಯರು ಅಲ್ಲಿಗೆ ಹೋಗಿ ನೋಡಿಕೊಂಡು ಬಂದಿರುವಂತೆ ನಾನೂ ಸಹ ಹೋಗಿ ನೋಡಿಕೊಂಡು ಬಂದಿದ್ದೇನೆ. ಮೇಲೆ ಇನ್ನೂ ಲೋಡ್ ಹಾಕಿಲ್ಲ. ಮರದ ಕೆಲವು ಬೀಮ್ಸ್‌ಗಳನ್ನು ಇಡಲಾಗಿದೆ. ರಿಪೇರಿ ಮಾಡುವುದಕ್ಕೆ ಹೋದಾಗ ಲೂಸ್ ಕಾಂಟ್ಯಾಕ್ಟ್ ನಿಂದ ಈ ರೀತಿಯಾಗಿದೆ. ಯಾವ ಆಕ್ಸಿಡೆಂಟ್ ಕೂಡ ಆಗಿಲ್ಲ. ಅಂತಹ ಯಾವ ಪ್ರಮಾದ ಆಗಿಲ್ಲ. ಈಗ ಆಗಿರುವುದನ್ನು ಸರಿಪಡಿಸುತ್ತಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್.—ಈ ಕಟ್ಟಡದ ಮೇಲೆ ಹೊಸದಾಗಿ ಮತ್ತೆ ಕಟ್ಟಡವನ್ನು ಕಟ್ಟಿದರೆ ಅಪಾಯವಾಗುತ್ತದೆಂದು ಹಿಂದೆ ಸಂಬಂಧಪಟ್ಟ ಅಧಿಕಾರಿಗಳು ತಿಳುವಳಿಕೆ ಕೊಟ್ಟಿದ್ದರು ಎಂಬುದು ನನಗೆ ಗೊತ್ತಿದೆ. ಆದಕಾರಣ ಮೊದಲೇ ಈ ಬಗ್ಗೆ ಜಾಗ್ರತೆ ವಹಿಸಿ ಮಾಡಿದ್ದರೆ ಇಂತಹ ಪ್ರಮಾದವನ್ನು ತಪ್ಪಿಸಬಹುದಾಗಿತ್ತು ಅಲ್ಲವೇ ಮತ್ತು ಇದಕ್ಕಾಗಿ ಎಷ್ಟು ಹಣ ಖರ್ಚಾಯಿತು ?

ಶ್ರೀ ಕೆ. ಲಕ್ಕಪ್ಪ.—ಹಿಂದೆ ಅಂತಹ ವಿಚಾರವನ್ನು ಸಂಬಂಧಪಟ್ಟವರು ಸರ್ಕಾರದ ಗಮನಕ್ಕೆ ತಂದಿದ್ದರೋ ಏನೋ ಎಂಬುದು ಗೊತ್ತಿಲ್ಲ. ತಂದಿದ್ದ ಪಕ್ಷದಲ್ಲಿ ಆ ರೀತಿ ಮಾಡಿಸುತ್ತಿದ್ದರು ಎಂದು ಕಾಣುತ್ತದೆ. ಈಗ ಆಗಿರುವುದನ್ನು ಸರಿಪಡಿಸುತ್ತಿದ್ದೇವೆ.

ಶ್ರೀ ಎಸ್. ಎಂ. ಗುರೆಡ್ಡಿ.—ಈ ಕಟ್ಟಡ 100 ವರ್ಷಗಳ ಹಳೆಯದು ಎಂದು ಗೊತ್ತಿದೆ. ಪುನಃ ಅದರ ಮೇಲೆ ಕಟ್ಟಡವನ್ನು ಕಟ್ಟುವುದರಲ್ಲಿ ಏನು ಅರ್ಥವಿದೆ ?

ಶ್ರೀ ಕೆ. ಲಕ್ಕಪ್ಪ.—ಈ ಕಟ್ಟಡದ ಮೇಲೆ ಕಟ್ಟುತ್ತಿಲ್ಲ. ಬೇರೆ ಕಡೆ ಕಟ್ಟುತ್ತಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್.—ಉತ್ತರ ಕೊಡುವಾಗ ಮರೆಮಾಚಬೇಡಿ. ಈಗಾಗಲೇ ಫ್ಲೋರಿಂಗ್ ಹಾಕುತ್ತಿದ್ದಾರೆ. ಪ್ರೆಸ್ ಜಾಸ್ತಿಯಾಗಿ ಕಟ್ಟಡ ಕುಸಿದು ಬೀಳುವುದಿಲ್ಲವೆ ?

ಶ್ರೀ ಕೆ. ಲಕ್ಕಪ್ಪ.—ಮರೆಮಾಚುವುದು ಏನಿಲ್ಲ. ವುಡನ್ ಫ್ಲೋರಿಂಗ್ ಹಾಕುವುದಕ್ಕೆ ಈಗಾಗಲೇ 7-8 ಬೀಮ್ಸ್ ಹಾಕಿದ್ದಾರೆ. ವುಡನ್ ಕಾಲಮ್ಸ್ ಇನ್ನೂ ಹಾಕಿಲ್ಲ. ರಿಪೇರಿ ಮಾಡುವುದಕ್ಕೆ ಹೋದಾಗ ಈ ರೀತಿಯಾಗಿದೆ. ಅದನ್ನು ಸರಿಪಡಿಸುತ್ತಿದ್ದೇವೆ.

Business of the House

Sri H. N. NANJE GOWDA (Arkalgud).—Sir, I have got objection for the presentation of the Demand. I was the person who took objection. The reason is this :

ಭೂಕಂದಾಯದ ಬಗ್ಗೆ ಸರಿಯಾದ ಸರಕಾರದ ನಿಲುವು ಹೇಳಿಲ್ಲ.

† ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಸ್ವಾಮಿ, ಈಗಾಗಲೇ ಶ್ರೀಮಾನ್ ನಾಗಪ್ಪನವರು ಮತ್ತು ನಂಜೇಗೌಡರು ಇಂದು ಇಲ್ಲಿ ತೆಗೆದುಕೊಳ್ಳುವ ಡಿಮ್ಯಾಂಡುಗಳ ಬಗ್ಗೆ ಅಬ್‌ಜೆಕ್ಷನ್‌ಗಳೇನು ಎನ್ನುವುದನ್ನು ಇಲ್ಲಿ ತಿಳಿಸುತ್ತಾರೆ. ನಾನು ಸರಕಾರದ ಗಮನವನ್ನು ಸೆಳೆಯುತ್ತಿರುವುದು ಮಾನ್ಯ ಕಂದಾಯ ಮಂತ್ರಿಗಳು ಈ ದೇಶದಲ್ಲಿ ಕಂದಾಯದ ನೀತಿ ವಿಚಾರವಾಗಿ ಅನೇಕ ಕಡೆಗಳಲ್ಲಿ ಅನೇಕ ರೀತಿಯಾದ ಹೇಳಿಕೆಗಳನ್ನು ಕೊಡುತ್ತಾ ಬರುತ್ತಿರುವುದರಿಂದ ಇಡೀ ದೇಶದಲ್ಲಿ ಭೂಕಂದಾಯದ ನೀತಿ ಬಗ್ಗೆ ಏನು ಮಾಡಬೇಕು ಎನ್ನತಕ್ಕದ್ದು ನಮ್ಮ ರೈತರಿಗೆ ಗೊತ್ತಾಗಲಿಲ್ಲ. ಮತ್ತು ಸರಕಾರದ ಅಧಿಕಾರಿಗಳಿಗೆ ಭೂಕಂದಾಯದ ನೀತಿ ಗೊತ್ತಿದೆಯೋ ಎಂದು ಕೇಳಿದರೆ ಅವರೂ ನಮಗೆ ಗೊತ್ತಿಲ್ಲ ಎನ್ನುತ್ತಾರೆ. ಇದರೊಳಗೆ ಕೆಲವು ಕಡೆ ಮಳೆ ಇಲ್ಲದೇ ಇದ್ದುದರಿಂದ ಈ ಸಾರಿ ಕಂದಾಯ ಮಾಫಿಯಾಗಿದೆ ಎಂದೂ ಹೇಳಿದ್ದರು. ಆದುದರಿಂದ ಮಾನ್ಯ ರೆವಿನ್ಯೂ ಮಂತ್ರಿಗಳು ಇಲ್ಲಿ ಮಂಡಿಸುವ ರೆವಿನ್ಯೂ ಬೇಡಿಕೆಗಳ ಕಾಲದಲ್ಲಿ ಭೂಕಂದಾಯದ ನೀತಿ ಏನು ಎನ್ನುವುದನ್ನು ಸ್ಪಷ್ಟವಾಗಿ ಅವರಿಂದ ತಿಳಿಯಬಯಸುತ್ತೇವೆ. ಕಂದಾಯದ ನೀತಿ ಹೇಗಿದೆ ಎಂದರೆ 1966ರಿಂದ ಪೂರ್ವಕ್ಕೆ ಒಂದು ನೀತಿ ಇತ್ತು. ಅದರಂತೆ ಒಂದು ರೀತಿಯಾದ ಆಶ್ವಾಸನೆ ಕೊಟ್ಟಿದ್ದರು. 1966ನೇ ಡಿಸೆಂಬರು ತಿಂಗಳಿಂದ ಕಂದಾಯವನ್ನು ವಜಾ ಮಾಡುತ್ತೇವೆ ಎಂದು ಮಹಾಚುನಾವಣೆಗಳಿಗೆ ಮುಂಚೆ ಜನತೆಗೆ ಭರವಸೆ ಕೊಟ್ಟು ಚುನಾವಣೆಗಳಲ್ಲಿ ಗೆದ್ದು ಇಂದು ಆಡಳಿತದಲ್ಲಿದ್ದರೂ ಜನತೆಗೆ ಕೊಟ್ಟ ಆಶ್ವಾಸನೆಯನ್ನು ಇದುವರೆಗೂ ಪೂರೈಸಲಿಲ್ಲ. ಜನರ ಆಶ್ವಾಸನೆಗೆ ವಿರುದ್ಧವಾಗಿ ಇಂದು ಹೇಳಿಕೆಗಳನ್ನು ಕೊಡತ್ತಿದ್ದಾರೆ. ಹಿಂದೆ ಇದೇ ವಿಚಾರವನ್ನು ಈ ಶಾಸನ ಸಭೆಯಲ್ಲಿ ಎತ್ತಿದಾಗ ಆಗಿದ್ದ ಕಂದಾಯದ

ಮಂತ್ರಿಗಳು ಒಂದು ರೀತಿ ಹೇಳಿದರು. ಹೀಗೆ ಇದರ ವಿಚಾರ ಬಂದಾಗಲೆಲ್ಲಾ ಕಂಡೂ ಕಾಣದೆ ಸುಮ್ಮನೆ ಮುಂದೂಡುತ್ತಾ ಜನತೆಗೆ ಮೋಸ ಮಾಡುತ್ತಿದ್ದಾರೆ ಮತ್ತು ವಚನಭ್ರಷ್ಟರಾಗಿದ್ದಾರೆ ಎನ್ನುವ ಮಾತನ್ನು ಇಲ್ಲಿ ಹೇಳಬೇಕಾಗಿದೆ. 1967 ನೇ ಇಸವಿಯಲ್ಲಿ ಒಂದು ನೀತಿ ಅನುಸರಿಸುತ್ತಿರುವುದರಿಂದ ಇದನ್ನು ಪ್ರತಿಭಟನೆ ಮಾಡಬೇಕಾಗಿದೆ. ಇದರ ಮೇಲೆ ಸರಕಾರ ಒಂದು ಕಡೆ ಕಂದಾಯದ ದರವನ್ನು ಹೆಚ್ಚು ಮಾಡಿದೆ. ಕಂದಾಯದ ರೇಟ್‌ಗಳು ಒಂದೊಂದು ಭಾಗದಲ್ಲಿ ಒಂದೊಂದು ರೀತಿಯಾಗಿವೆ. ಇದನ್ನು ವಿರೋಧ ಮಾಡುವುದಕ್ಕಾಗಿ ನಾವು ಕೆಲವು ಸೂಚನೆಗಳನ್ನು ಮಾಡಿ ಕಳುಹಿಸುತ್ತಿದ್ದೇವೆ. ಸರಕಾರದಲ್ಲಿ ಕಂದಾಯದ ಬಗ್ಗೆ ನಿರ್ದಿಷ್ಟ ಪಾಲಿಸಿ ಏನು ಎನ್ನುವುದು ಇನ್ನೂ ಖಚಿತವಾಗಿ ನಿರ್ಧಾರವಾಗಿಲ್ಲ.

ಮಾನ್ಯ ರೆವಿನ್ಯೂ ಸಚಿವರಾಗಿರುವ ಶ್ರೀ ಕೌಜಲಗಿಯವರು 1968 ರಲ್ಲಿ ಕಂದಾಯ ನೀತಿ ಪುನರ್ವಿಮರ್ಶೆ ಮಾಡುತ್ತೇವೆ ಎಂದು ಹೇಳಿದುದರಿಂದ ಇಷ್ಟೆಲ್ಲಾ ಗೊಂದಲಗಳಿಗೆ ಕಾರಣವಾಗಿದೆ. ಹಳೆ ಕಂದಾಯವನ್ನು ವಸೂಲು ಮಾಡುವುದಿಲ್ಲ ಮುಂದೆ ಹೊಸ ದರದಲ್ಲಿ ಹೆಚ್ಚು ಕಂದಾಯ ಕೊಡಬೇಕು ಎಂದು ಕೆಲವು ಕಡೆ ಒತ್ತಾಯದಿಂದ ವಸೂಲು ಮಾಡುತ್ತಿದ್ದಾರೆನ್ನುವುದೂ ನಮಗೆ ಕಂಡುಬಂದಿದೆ. 1965ನೇ ಇಸವಿಯಿಂದಲೂ ಕಂದಾಯದ ಬಗ್ಗೆ ಜನರಿಗೆ ಸರಿಯಾದ ಯಾವ ಪರಿಹಾರಗಳೂ ಸಿಗಲಿಲ್ಲ. ಇಂದು ಸರಕಾರಕ್ಕೆ ಅನೇಕ ಕೋಟಿ ರೂಪಾಯಿಗಳಷ್ಟು ವರಮಾನ ಬರುತ್ತಿದ್ದರೂ ಕೆಲವು ಕಡೆ ಕ್ಷಾಮದ ಸ್ಥಿತಿ ಹಾಗೆಯೇ ಇದೆ. ಕ್ಷಾಮ ಪರಿಹಾರ ಕಾರ್ಯಗಳನ್ನು ಮಾಡುತ್ತಿರುವ ಭಾಗದಲ್ಲಿ ಕಂದಾಯವನ್ನು ವಸೂಲು ಮಾಡುವುದಿಲ್ಲ ಎಂದು ಹೇಳಿದ್ದರು. 1965ನೇ ಇಸವಿಗೆ ಮುಂಚೆ ಇದ್ದ ರೇಟಿನಲ್ಲೇ ಕಂದಾಯ ವಸೂಲಿ ಮಾಡುತ್ತೇವೆ ಎಂದು ಹೇಳಿದ್ದರೂ ಅದರಂತೆ ಮಾಡುತ್ತಿಲ್ಲ. ಕೆಲವು ಕಡೆ ತಾತ್ಕಾಲಿಕವಾಗಿ ಕಂದಾಯದ ವಸೂಲಿ ಮುಂದೂಡಿದ್ದೇವೆ ಎನ್ನುತ್ತಾರೆ. ಕೆಲವು ಕಡೆ ರಿಕಾರ್ಡ್ ಆಫ್ ರೈಟ್ಸ್ ಪ್ರಕಾರ ಸೆಟಲ್‌ಮೆಂಟು ಕೆಲಸಗಳಾಗಿಲ್ಲ ಇಲ್ಲಿ ವಸೂಲು ಮಾಡುವುದಿಲ್ಲ ಎಂದು ಒಂದು ಸಾರಿ ಹೇಳಿದರು. ಈಗ ನಾಲ್ಕು ವರ್ಷಗಳ ಕಂದಾಯವನ್ನೂ ಒಂದೇ ಸಾರಿಗೆ ಒಟ್ಟಿಗೆ ವಸೂಲು ಮಾಡಬೇಕೆಂದು ಕೆಲವು ಕಡೆಗಳಲ್ಲಿ ಅಧಿಕಾರಿಗಳು ಒತ್ತಾಯ ಮಾಡಿ ವಸೂಲು ಮಾಡುತ್ತಿದ್ದಾರೆ ಮತ್ತು ಫಸಲುಗಳನ್ನು ಕೂಡ ಜಪ್ತಿ ಮಾಡುತ್ತೇವೆ ಎಂದೂ ಹೇಳುತ್ತಾರೆ. ಇದರಿಂದ ಕಂದಾಯದ ವಸೂಲಿಯ ಬಗ್ಗೆ ಮತ್ತು ಕಂದಾಯವನ್ನು ವಜಾ ಮಾಡುವುದರ ಬಗ್ಗೆ ಸರಕಾರದ ನಿರ್ದಿಷ್ಟವಾದ ನೀತಿ ಏನು ಎನ್ನುವುದೇ ಗೊತ್ತಾಗುತ್ತಿಲ್ಲ. ಮನಸ್ಸಿಗೆ ಬಂದ ಹಾಗೆ ಮಾಡುತ್ತಿದ್ದಾರೆ. ಇದರಿಂದ ಜನರಿಗೆ ಬಹಳ ತೊಂದರೆಯಾಗುತ್ತಿದೆ. ಹಿಂದೆ ನಾಲ್ಕು ವರ್ಷಗಳ ಕಂದಾಯವನ್ನೂ ವಜಾ ಮಾಡುತ್ತೇವೆ ಎಂದು ಹೇಳಿದ್ದರು. ಇದರಿಂದಾಗಿ ಜನಗಳಿಗೆ ಬಹಳ ತೊಂದರೆಗಳಾಗಿವೆ. ಮೊದಲೇ ಕ್ಷಾಮದಿಂದ ಬೆಂಡಾಗಿರತಕ್ಕ ರೈತರು ದೇಶದಲ್ಲಿ ಅಲ್ಲೋಲಕಲ್ಲೋಲವಾಗಿ, ಹಾಹಾಕಾರ ಮಾಡುತ್ತಾ ಇರುವಾಗ ಕಂದಾಯ ಸಚಿವರು ಕಂದಾಯವನ್ನು ವಸೂಲ್ಮಾಡುವ ಬಗ್ಗೆ ಕಳೆದ ಸೆಪ್ಟೆಂಬರ್ ಅಧಿವೇಶನದಲ್ಲಿ ಹಳೇ ಕಂದಾಯವನ್ನೇ ವಸೂಲ್ಮಾಡುತ್ತೇವೆ ಎಂದು ಹೇಳಿದರು. ಆದುದರಿಂದ ರೆವಿನ್ಯೂ ಸಚಿವರು ಮುಂಚಿತವಾಗಿ ಈ ಸಭೆಗೆ ಒಂದು ಆಶ್ವಾಸನೆಯನ್ನು ಕೊಟ್ಟರೆ ನಾವು ಈ ಸಭೆಯಲ್ಲಿ ಭಾಗವಹಿಸುವುದಕ್ಕೆ ಅವಕಾಶವಾಗುತ್ತದೆ. ದೇಶದಲ್ಲಿ ರೈತರು ಕಷ್ಟಪರಿಸ್ಥಿತಿಯಲ್ಲಿರುವ ಕಾಲದಲ್ಲಿ ಒಂದು ನಿರ್ದಿಷ್ಟವಾದ ಆಶ್ವಾಸನೆಯನ್ನು ಈ ಸಭೆಗೆ ಕೊಡದಿದ್ದರೆ ನಾವು ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ಆಗುವುದಿಲ್ಲ ಎಂದು ವ್ಯಸನದಿಂದ ಹೇಳಬೇಕಾಗಿದೆ. ಆದುದರಿಂದ ಈ ಸಭೆಗೆ ಒಂದು ನಿರ್ದಿಷ್ಟವಾದ ಆಶ್ವಾಸನೆ ಕೊಡಬೇಕು ಎಂದು ಹೇಳುತ್ತೇನೆ.

ಶ್ರೀ ಹೆಚ್. ಎನ್. ನಂಜೇಗೌಡ.—ಸ್ವಾಮಿ, ತಮಗೆ ಗೊತ್ತಿರುವ ಹಾಗೆ ಈ ಸಭೆಯಲ್ಲಿ ಕಳೆದ ಅಧಿವೇಶನದಲ್ಲಿ ಸೆಪ್ಟೆಂಬರ್ 17 ನೇ ದಿನಾಂಕದಂದು ಒಂದು ತಿದ್ದುಪಡಿ ಮಸೂದೆಯನ್ನು ತಂದಾಗ ಅದನ್ನು ವಾಪಸ್ಸು ಪಡೆಯಬೇಕಾಯಿತು. ಭೂಕಂದಾಯದ ವೆಚ್ಚ ಬಗ್ಗೆ ಸರ್ವೆ ಅಂಡ್ ಸೆಟಲ್‌ಮೆಂಟ್‌ನಲ್ಲಿ ಅನೇಕ ಲೋಪದೋಷಗಳು ಇತ್ತು. ಇದರಿಂದ ರೈತರು ಬಹಳ ಕಷ್ಟಕ್ಕೆ ನಷ್ಟಕ್ಕೆ ಗುರಿಯಾಗಿರುವುದನ್ನು ಅವರ ಗಮನಕ್ಕೆ ತಂದಾಗ ಮಂತ್ರಿಗಳು ಸದಸ್ಯರಿಗೆ ಈ ಸಭೆಯಲ್ಲಿ ಒಂದು ಅಷ್ಯೂರೆನ್ಸ್ ದಯಪಾಲಿಸಿದರು. ಅದು ಏನೆಂದರೆ ಸರ್ಕಾರದವರು ರೈತರಿಗೆ ಆಗಿರುವ ಕಷ್ಟನಷ್ಟಗಳನ್ನು ತಪ್ಪಿಸುವ ಸಲುವಾಗಿ ಒಂದು ಕಾಂಪ್ರೆಹೆನ್ಸೀವ್ ಅಮೆಂಡ್‌ಮೆಂಟನ್ನು ಸರ್ಕಾರದವರು ತರುತ್ತಾರೆ. ಮತ್ತು ಅಲ್ಲಿಯತನಕ ರಾಜ್ಯಾದ್ಯಂತ ಹಳೇ ಕಂದಾಯವನ್ನು ತರುತ್ತಾರೆ ಎನ್ನುವ ಭರವಸೆಯನ್ನು ಕೊಟ್ಟರು. ಅದು ರಿಕಾರ್ಡ್ ಕೂಡ ಆಗಿದೆ. ಅದನ್ನು ಮಂತ್ರಿಗಳೇ ಆಗಲಿ, ತಾವೇ ಆಗಲಿ ತರಿಸಿ ನೋಡಬಹುದು. ಇದೇ ಶಾಸನ ಸಭೆಯಲ್ಲಿ ಶ್ರೀಮಾನ್ ಚೆನ್ನಬಸಪ್ಪನವರು ಮಾತನಾಡಿದಂಥ ಕಾಲದಲ್ಲಿ ಮುಖ್ಯಮಂತ್ರಿಗಳು ಮಧ್ಯೆ ಪ್ರವೇಶಿಸಿ ಅವರೂ ಕೂಡ ರೈತರ ಕಷ್ಟ ಪರಿಸ್ಥಿತಿ ಕೆಟ್ಟಿದೆ ಹಳೇ ಕಂದಾಯವನ್ನೇ ವಸೂಲ್ಮಾಡುತ್ತೇವೆ ಎಂದು ಹೇಳಿದರು. ಅದಕ್ಕಾಗಿ

(ಶ್ರೀ ಎಚ್. ಎನ್. ನಂಜೇಗೌಡ)

ಕಾಂಪ್ರಹೆನ್ಸೀವ್ ಅಮೆಂಡ್‌ಮೆಂಟ್ ತರಬೇಕಾಗುತ್ತದೆ. ಅದಕ್ಕೆ ಸ್ವಲ್ಪ ತಡವಾಗುತ್ತದೆ, ಮುಂದಿನ ಶಾಸನ ಸಭೆಯಲ್ಲಿ ತಿದ್ದುಪಡಿ ತರುತ್ತೇವೆ ಎಂದು ಅಪ್ಪಣೆ ಕೊಡಿಸಿದರು. ಆದರೆ ನಾವು ಅಧಿಕಾರಿಗಳಿಗೆ ಇನ್‌ಸ್ಟ್ರಕ್ಷನ್ ಕೊಟ್ಟಿದ್ದೇವೆ ಏನೆಂದರೆ ಹಳೇ ಕಂದಾಯವನ್ನೇ ವಸೂಲ್ಮಾಡಿಕೊಳ್ಳಿ, ಪಾರ್ಟ್‌ಪೇಮೆಂಟ್ ಬಂದರೂ ಜಮಾ ಮಾಡಿಕೊಳ್ಳಿ, ಎಂದು ಹೇಳಿದ್ದೇವೆ ಮತ್ತು ಅವರು ಆದರಂತೆ ಅವರು ವಸೂಲ್ಮಾಡುತ್ತಾರೆ ಎಂದು ಹೇಳಿದರು. ಈ ಸಭೆಯಲ್ಲಿ ಈ ರೀತಿ ಜವಾಬ್ದಾರಿ ಮಾತನ್ನು ಕೊಟ್ಟರು. ಆದರೆ ಇವೊತ್ತು ಇಷ್ಟು ದಿನವಾದರೂ ಕೂಡ ಸೆಪ್ಟೆಂಬರ್ ಹೋಗಿ ಫೆಬ್ರವರಿ ಬಂದರೂ ಕೂಡ ಯಾವ ಬದಲಾಣೆಯನ್ನೂ ಮಾಡಲಿಲ್ಲ. ಈ ರೀತಿ ಜವಾಬ್ದಾರಿಯಿಂದ ವಚನ ಕೊಟ್ಟಂಥ ಸಚಿವರು ಇದುವರೆಗೆ ಏನೂ ಮಾಡದೆ ಈ ಡಿಮ್ಯಾಂಡುಗಳನ್ನು ಮಂಡಿಸತಕ್ಕಂಥ ಹಕ್ಕು ಅವರಿಗೆ ಇದೆ ಎನ್ನುವುದನ್ನು ನಾನು ತಿಳಿದುಕೊಂಡಿಲ್ಲ. ಅವರು ಈ ಸಭೆಗೆ ಜವಾಬ್ದಾರಿಯಾಗಿ ವರ್ತಿಸಿಲ್ಲ. ನಾನು ಸರ್ಕಾರಕ್ಕೆ ಹೇಳುವುದೇನೆಂದರೆ ಈ ತಪ್ಪನ್ನು ಅವರು ತಿದ್ದಿಕೊಂಡು, ಅವರು ಈ ಸಭೆಯಲ್ಲಿ ಏನು ವಚನ ಕೊಟ್ಟಿದ್ದರೋ, ಏನು ಭರವಸೆಯನ್ನು ಕೊಟ್ಟಿದ್ದರೋ ಅದರಂತೆ ನಡೆದುಕೊಳ್ಳಬೇಕು. ಹಾಗೆ ಮಾಡದೆ ತರಾತುರಿಯಾಗಿ ಬೇಡಿಕೆಗಳನ್ನು ಸಭೆಯ ಮುಂದೆ ಮಂಡಿಸುವುದಾದರೆ ಮಂಡನೆ ಮಾಡುವುದಕ್ಕೆ ಅವಕಾಶ ಕೊಡಲು ಕಷ್ಟವಾಗುತ್ತದೆ.

3–30 P.M.

† ಶ್ರೀ ಎನ್. ಎ. ಚನ್ನೇಗೌಡ (ಪಾಂಡವಪುರ).—ಶ್ರೀಮಾನ್ ನಂಜೇಗೌಡರು ಖಾಸಗಿ ಮಸೂದೆಯನ್ನು ತಂದಾಗ ಕ್ಲಾಸಿಫಿಕೇಷನ್ ಸರಿಯಾಗಿ ಆಗಿಲ್ಲ, ಆದ್ದರಿಂದ ಕೆಲವು ಜಮೀನುಗಳನ್ನು ಬಾಗಾಯಿತು ಎಂದು ವರ್ಗೀಕರಣ ಮಾಡಿ ಹೆಚ್ಚಿನ ಕಂದಾಯವನ್ನು ಹಾಕಿರುವುದು ಸರಿಯಲ್ಲ ಎಂದು ಹೇಳಿದರು. ಕೆಲವು ಸದಸ್ಯರು ಎಲ್ಲ ರೀತಿಯ ಜಮೀನುಗಳಿಗೂ ಹೆಚ್ಚುವರಿ ಕಂದಾಯವನ್ನು ಹಾಕಿದ್ದಾರೆ, ಕ್ಲಾಸಿಫಿಕೇಷನ್ ತತ್ವವೇ ತಪ್ಪು; ಆದರೂ ಈಗ ವಿಧಿಸಿರತಕ್ಕ ಕಂದಾಯವನ್ನು ವಸೂಲ್ಮಾಡುತ್ತಿದ್ದಾರೆ ಎಂದು ಹೇಳಿದರು. ಸನ್ಮಾನ್ಯ ಮಂತ್ರಿಗಳು 'ಹೊಸ ತಿದ್ದುಪಡಿ ಆಗುವವರೆಗೂ ಸರ್ಕಾರದವರು ಹಳೇ ದರದ ಪ್ರಕಾರ ಕಂದಾಯ ವಸೂಲ್ಮಾಡಬೇಕು, ಹೆಚ್ಚಿನ ಅಕರಣೆ ಪ್ರಕಾರ ವಸೂಲ್ಮಾಡಬಾರದು' ಎಂದು ಹೇಳಿ ಒಪ್ಪಿಕೊಂಡಿದ್ದಾರೆ. ಅನಂತರ ಸರ್ವೇಯರುಗಳನ್ನು ಕಳಿಸಿ ಡ್ರೈ ಲ್ಯಾಂಡ್‌ಗೆ ಮಾತ್ರ ಪಿನಾಯಿತಿಯನ್ನು ತೋರಿಸುತ್ತೇವೆಂದು ಹೇಳಿದರು. ಹೈಕೋರ್ಟಿನಲ್ಲಿ ರಿಟ್‌ಪಿಟಿಷನ್ಸ್ ಹಾಕಿದಾಗ ಗಾರ್ಡನ್ ಲ್ಯಾಂಡ್‌ಗೆ ಮಾತ್ರ ಅನ್ವಯವಾಗುತ್ತದೆ ಎಂದು ಹೇಳಿದರು. ಮೂರನೆಯ ಸಲ ಅಭಾವಪಿರತಕ್ಕ ಪ್ರದೇಶಗಳಲ್ಲಿರುವ ಜಮೀನುಗಳಿಗೆ ಮಾತ್ರ ಅನ್ವಯವಾಗುತ್ತದೆ, ಮಿಕ್ಕ ಎಲ್ಲರೂ ಹೊಸ ತೆರಿಗೆಯನ್ನು ಕೊಡಬೇಕು ಎಂದು ಹೇಳಿದರು. ಈ ಸಭೆಯಲ್ಲಿ ಗಮನ ಸೆಳೆಯುವ ಸೂಚನೆಯನ್ನು ತಂದಾಗ ಉತ್ತರ ಕೊಟ್ಟರು. ಜನವರಿ ತಿಂಗಳಿನಲ್ಲಿ 29ನೇ ತಾರೀಖು ಪುನಃ ಸಚಿವರು ಭರವಸೆಯನ್ನು ಕೊಟ್ಟರು. 30ನೇ ತಾರೀಖು ವಿಭಾಗಾಧಿಕಾರಿಗಳು ತಹಸೀಲ್ದಾರರಿಗೆ ಬರೆದರು. ಅವರು ಕಂದಾಯದ ವಸೂಲಿಗೆ ಸೂಕ್ತ ಕ್ರಮ, ಬಲಾತ್ಕಾರ ಕ್ರಮ ತೆಗೆದುಕೊಳ್ಳುತ್ತೇವೆ ಎನ್ನುವ ಒಂದು ಪ್ರಕಟಣೆಯನ್ನು 6–2–69ರಲ್ಲಿ ಹೊರಡಿಸಿದ್ದಾರೆ. ನಾನು ಮಂತ್ರಿಗಳ ಗಮನಕ್ಕೆ ಇದನ್ನು ತಂದು ಅಧಿಕಾರಿಗಳ ಉಪಟಳ ಜಾಸ್ತಿಯಾಗುತ್ತಿದೆ, ಏನಾದರೂ ಮಾಡಿ ಇನ್‌ಸ್ಟ್ರಕ್ಷನ್ಸ್ ಕಳಿಸಿಕೊಡಿ ಎಂದು ಹೇಳಿದೆ, ನಾನು ಕಾಗದವನ್ನು ಕೂಡ ಬರೆದೆ. ಅದಕ್ಕೆ ಉತ್ತರ ಒಂದು ತಿಂಗಳಾದ ಮೇಲೆ ಬಂತು. ಅದರಲ್ಲಿ ನಿಮ್ಮ ಕಾಗದ ಬಂತು, ಕ್ರಮ ಕೈಗೊಳ್ಳುತ್ತಿದ್ದೇವೆ ಎಂದು ತಿಳಿಸಿದರು. ರೈತರಿಗೆ ಹೆಚ್ಚುವರಿ ಕಂದಾಯ ಕೊಡಲಾರದೆ ಇರುವ ಪರಿಸ್ಥಿತಿ ಒದಗಿದೆ. ಮಳೆ ಬೆಳೆಗಳಿಲ್ಲದೆ ಕಂದಾಯ ಹೇಗೆ ಕೊಡುವುದು ಎಂದು ಒದ್ದಾಡುತ್ತಿರುವಾಗ ಒಂದು ಕಾಗದಕ್ಕೆ ಉತ್ತರ ಕೊಡುವುದಕ್ಕೆ ಮಂತ್ರಿಗಳು ಒಂದು ತಿಂಗಳು ತೆಗೆದುಕೊಂಡರೆ ರೈತರಿಗೆ ಏನು ಪರಿಹಾರ ಸಿಕ್ಕುತ್ತದೆ ? ಮಂತ್ರಿಗಳು ಜನಗಳಿಗೋಸ್ಕರ ಇದ್ದಾರೆಯೋ ಅಥವಾ ತಮ್ಮ ಅಧಿಕಾರವನ್ನು ಚಲಾಯಿಸಿ, ಕಾಲ ಕಳೆಯುವುದಕ್ಕೆ ಇದ್ದಾರೆಯೋ ಎನ್ನುವುದು ಗೊತ್ತಾಗುವುದಿಲ್ಲ. ಕಂದಾಯ ಮಂತ್ರಿಗಳು ಮಾತು ಮಾತಿಗೂ ತಮ್ಮ ಭರವಸೆಯನ್ನು ಮರೆತು ಈ ಸಭೆಯಲ್ಲಿ ರೈತರಿಗೆ ತೊಂದರೆಯಾಗುತ್ತಿಲ್ಲ ಎನ್ನುವ ರೀತಿಯಲ್ಲಿ ಮಾತನಾಡುತ್ತಾರೆ. ಯಾವುದೇ ವಿಷಯವನ್ನು ಅವರ ಗಮನಕ್ಕೆ ತ ದಾಗ, ಇಡೀ ರಾಜ್ಯದಲ್ಲಿ ತೊಂದರೆ ಇದೆ, ರೈತರಿಗೆ ಅಗಾಧವಾದ ತೊಂದರೆಯಾಗುತ್ತ ಇದೆ, ಆದ್ದರಿಂದ ತಕ್ಷಣದಲ್ಲಿ ಸಚಿವರು ತುರ್ತು ಕಾರ್ಯಕ್ರಮ ತೆಗೆದುಕೊಂಡು ಅಧಿಕಾರಿಗಳಿಗೆ ಸೂಚನೆ ಕೊಟ್ಟು ಅಧಿಕಾರಿಗಳು ರೈತರಿಗೆ ಕಿರುಕುಳ ಕೊಡುವುದನ್ನು ತಪ್ಪಿಸಬೇಕು. ಹಾಗೆ ಮಾಡದೆ ಇದ್ದರೆ ಈ ಬೇಡಿಕೆಗಳನ್ನು ಮಂಡಿಸುವುದಕ್ಕೆ ಅವಕಾಶ ಕೊಡುವುದಿಲ್ಲ ಎಂದು ಹೇಳಬಯಸುತ್ತೇನೆ.

† Sri H. M. CHANNABASAPPA (Periyapatna).—Mr. Speaker, Sir, to cut short all the debate that is going on, I would like to make a submission. All this has arisen on account of the fact that the question of land revenue assessment, procedure for recovery, is in a mess in the whole State. I am sure the Hon'ble Minister Sri Koujalgi will agree with me that it is in a mess. This mess is partly created by the statements of expendiency made on the floor of the House which are contrary to what is going on. Therefore, all that is necessary to clear the cloud is that the Hon'ble Minister for Revenue should make a positive statement reiterating the assurance that he has already held out to this House that only assessment on the basis of the previous rates will be collected till such time that Government takes adequate powers in order to see that injustice wherever it may be, may be rectified which is existing on account of the indiscriminate revision of assessment. Therefore, instead of wasting much time of the House, I am sure Mr. Koujalgi will rise to the occasion and make an assurance to this House and through the House to the entire farm population in the country that the Government will not and shall not collect taxes on the revised rates, that they will collect only at the rates prevalent before the revision and that they will bring a comprehensive amendment immediately and try to readjust equitably the assessment procedures.

Secondly, in regard to the land policy, it is also in a mess. I am sure the Hon'ble Minister knows that more than I do. They are not able to do anything about the matter because they are saying one thing in one session, and another thing in another session. This is very unfair for a Government. Government must function as a Government and not as an organisation which is always calculating to take its decision on an expediency. Therefore, I would appeal to the Revenue Minister to rise to the occasion and reiterate that assurance and implement that assurance immediately.

† Sri AZEEZ SAIT.—Sir, already several Members have referred to the assurance of the Revenue Minister about the collection of tax at the old rates. The Hon'ble Minister also informed me that such instructions have been given. My information is that in Mysore District and Mysore Taluk coercive measures have been taken to attach household articles and agricultural implements of the raiyats. Further they have been demanding three years, tax at the new rates and they are trying to collect the entire amount in one lump and thereby a miserable situation is created. When the Hon'ble Minister makes a categorical statement in this august House and if it has not been implemented for whatever reason best known to him, what will be the misery inflicted on the raiyats in rural areas? Why is it that what has been said is not implemented? On the other hand, quite against the assurance given, the officers are working. If the Government is not able to live up to its assurance, I must say that it does not deserve to continue in power. Either the Government must make up its mind to implement the

(SRI AZEEZ SAIT)

assurance it has given or the people will put them out of office. Every body's mind is very much agitated on this issue. I trust that the Hon'ble Minister for Revenue will rise to the occasion and make a categorical statement even now.

Although half-a-dozen members have expressed themselves on this matter, the Hon'ble Minister does not seem to be very serious about this affair. May I request the Hon'ble Minister through you, Sir that he should tell us here and now that his assurance will be carried out immediately and that the taxes which have already been collected by now in Mysore will be readjusted, towards future demand, if not refunded? Since refund takes a lot of time, I suggest that what has been collected already may be adjusted against future demand. I do hope that the Minister will rise to the occasion and make a proper statement to allay the misgivings on the part of the Members and the public at large.

† Sri D. B. KALMANKAR.—What happened is, after the sessions we went to our constituencies and I met the Deputy Commissioner, Gulbarga and told him that the Hon Minister has accepted the principle that at the revised rate land revenue will not be collected but that it would be collected at the old rates. He stated that he had not received any instructions from the Government. So, what happens is, the Minister makes a promise here and we take it for granted and go to the officers saying that such and scuh a promise was made. They say that they have not received instructions. Our position becomes ridiculous. The people do not know what to do. There is substance in what Sri Channabasappa has stated that only for expediency the Ministers make a statement here but do not mean real business.

Again, after that I gave a call attention notice stating that in view of drought conditions the land revenue may not be collected. Again a statement was made that the Deputy Commissionr was informed to act as per rules. Again when we approached the Deputy Commissioner he said that it would be done after crop cutting experiment is done. No such experiment is done and now I am told that the Assistant Commissioner and Tahsildars are going ahead with the collection of land revenue. What really happens is, the public opinion becomes ridiculous. I request the Hon. Minister to consider this matter seriously and he must clear the doubts before we take up the Demands.

Sri B. P. GANGADHAR.—Today happens to be the non-official day. We are nearing 3-45 P.M. If at least two hours are given to non-official work, only 15 minutes will be left to this matter. Is it your desire that this could be finished within these fifteen minutes or it can be taken up on some other day? I had also given a call attention notice.

Mr. SPEAKER.—The non-official work will not be taken up today in accordance with the agreement between the leaders on both sides.

† Sri M. NAGAPPA.—I am sorry to state that we have not come here only to transact Government business. The rules have given certain powers to the members to do some work for the public as they represent certain constituencies. Since the last two years I am continuously seeing on the Floor of the House that the private member's business is not given sufficient importance. If we see for the last two years how many days we sat for Government business and how it is compensated, we know that it has not been compensated at all. I did not expect the Speaker to say at this stage that we are not going to taken up private member's business. Neither the Business Advisory Committee is supreme nor the Speaker is supreme when the House has decided yesterday morning that on the 7th such and such a Bill would be taken up and six hours are allotted for that and when that has been approved. When such an approval is given, by the House neither the Speaker nor the Business Advisory Committee nor any member of this House has anything to say against that. So far as rule 28 is concerned it says that for every 14 days we have to allot two days for the non-official business. When non-official business is not to be taken up when it is approved by the House, it must be according to rule 28, proviso :

> " Provided further that on a motion made by a Minister for the suspension of this rule the Assembly may resolve to transact Government business on a day allotted for non-official business in which case the time so used shall be made available for the transaction of private members' business on such other day allotted for Government business as the Speaker in consultation with the Leader of the House may determine ".

No such thing has happened. We are sorry to say that time and again revised and re-revised business lists are sent. We get prepared on certain thing but some notice comes to us. For example, this Revenue Demand is put for some other day. Now it is immediately brought in two days' business. If business is going to be adjusted according to the convenience of Ministers, why should 216 hon. Member of this House should give way for adjustment of business only in respect of Ministers ? Secondly, when this day is going to be taken as Government business day, definitely it has to be compensated. No such assurances are coming. There are many resolutions sent by us. So far, only one resolution is there. If that is the case, I do not know what should happen to other resolutions. We are sending resolutions and they are printed but they are only going to the wast paper baskets because Government business comes in on the days allotted for the private business. It should not be thought that private business is not important. So, I humbly submit that here there is only a motion to suspend rule 28. When we have approved the report of the Committee on Private Members' Bills and resolutions. Is the approval of the House supreme or the business allotted by the Speaker is supreme ? These are two things to be decided by the Chair particularly in view of second proviso to rule 28. These six hours should be taken only for private members' business

(SRI M. NAGAPPA)

and therefore Government business will not come in. I humbly submit that the private Members business should not be belittled. It has its own importance. So, I request the Government business should not be allowed to be moved now.

ಶ್ರೀ ಎಸ್. ಬಂಗಾರಪ್ಪ.—ಈಗ ಪ್ರಿಂಟ್ ಆಗಿರತಕ್ಕ ನಾನ್ ಅಫಿಷಿಯಲ್ ಡೇ ವಿಷಯವಾಗಿ ಶ್ರೀಮಾನ್ ನಾಗಪ್ಪನವರು ಸಾಕಾದಷ್ಟು ಹೇಳಿದ್ದಾರೆ. 8ನೇ ರೆಸಲ್ಯೂಷನ್ ನನ್ನದು ಇದೆ. ಅದಕ್ಕೆ ಟೈಂ ಕೂಡ ಅಲಾಟ್ ಆಗಿದೆ. ವಿರೋಧ ಪಕ್ಷದ ನಾಯಕರೊಡನೆ ಸಮಾಲೋಚನೆ ಮಾಡಿ ಗವರ್ನ್‌ಮೆಂಟ್ ವರ್ಕ್ ಅಲಾಟ್ ಮಾಡಿದ್ದೇನೆ ಎಂದು ಹೇಳಿದಿರಿ. ಯಾವ ಪ್ರೊವಿಸೋ ಪ್ರಕಾರ ತಾವು ವಿರೋಧ ಪಕ್ಷದ ನಾಯಕರನ್ನು ಕೇಳಿ ನಾನ್‌ಅಫಿಸಿಯಲ್ ಡೇ ಅನ್ನು ಅಫಿಸಿಯಲ್ ಡೇ ಆಗಿ ತೆಗೆದುಕೊಳ್ಳುವುದಕ್ಕೆ ಅವಕಾಶ ಕೊಟ್ಟಿರಿ ಎಂಬುದು ಅರ್ಥವಾಗುತ್ತಿಲ್ಲ. ಆ ರೀತಿ ಮಾಡುವುದಕ್ಕೆ ಸಾಧ್ಯವಿಲ್ಲ. ಎರಡನೆಯದು ಬಿಸಿನೆಸ್ ಅಡ್ವೈಸರಿ ಕಮಿಟಿಯವರು ಯೋಚನೆ ಮಾಡಬೇಕು, ರೆಸಲ್ಯೂಷನ್ ಪ್ರಿಂಟ್ ಆಗಿದೆ. ನನ್ನ ಹೆಸರಿನಲ್ಲಿ ರೆಸಲ್ಯೂಷನ್ ಇದೆ, ಇದೇ ರೀತಿ ಇನ್ನೂ ಅನೇಕರ ಹೆಸರಿನಲ್ಲಿ ಇದೆ. ನಾನು ನನ್ನ ರೆಸಲ್ಯೂಷನ್ ಬರುತ್ತದೆ ಎಂದು ಹೇಳಿ ತಯಾರಾಗಿ ಬಂದಿದ್ದೇನೆ. ನನಗೆ ಮುಕ್ಕಾಲು ಗಂಟೆ ಟೈಂ ಅಲಾಟ್ ಆಗಿದೆ, ಎಲ್ಲ ವಿಷಯಗಳನ್ನೂ ಓದಿಕೊಂಡು ಬರೆದುಕೊಂಡು ಬಂದಿರುವಾಗ ಈ ರೀತಿ ತೆಗೆದುಕೊಳ್ಳುವುದಿಲ್ಲ ಎಂದರೆ ಹೇಗೆ! ತಾವು ತಮ್ಮ ಮನಸ್ಸಿಗೆ ಬಂದ ಹಾಗೆ ಯಾವುದೋ ಒಂದು ದಿವಸ ನಿಗದಿ ಮಾಡಿದರೆ ನನ್ನ ರೆಸಲ್ಯೂಷನ್ ಹೊರಟು ಹೋಗುತ್ತದೆ, ಅಥವಾ ಅದನ್ನು ಕರೆಯದೇ ಇರತಕ್ಕ ಸಂದರ್ಭ ಬರಬಹುದು. ಆದ್ದರಿಂದ ತಾವು ಈ ನಾನ್-ಅಫಿಸಿಯಲ್ ಡೇ ಅನ್ನುವುದನ್ನು ಇಷ್ಟು ಲೈಟ್‌ಆಗಿ ತೆಗೆದುಕೊಳ್ಳಬಾರದು. ಗವರ್ನ್‌ಮೆಂಟ್ ವರ್ಕ್‌ಗೆ ಎಷ್ಟು ಪ್ರಾಮುಖ್ಯತೆ ಕೊಡುತ್ತೇವೆಯೋ ಅಷ್ಟೇ ನಾನ್‌ಅಫಿಷಿಯಲ್ ಡೇಗೂ ಪ್ರಾಮುಖ್ಯತೆಯನ್ನು ಎಲ್ಲರೂ ಕೂಡ ಕೊಡಬೇಕು. ಹಾಗೇ ಮಾಡದೇ ಈ ರೀತಿ ಚರ್ಚೆ ಮಾಡುತ್ತಾ ಹೋದರೆ ಟೈಂ ಟೇಕನ್ ಅವೇ ಆಗುವುದಿಲ್ಲ. ''ಟೈಂ ಈಟನ್ ಅವೇ'' ಆಗುತ್ತದೆ. ಆದ್ದರಿಂದ ನನ್ನ ರೆಸಲ್ಯೂಷನ್‌ನ್ನು ಮಂಡಿಸುವುದಕ್ಕೆ ನನಗೆ ಅವಕಾಶ ಕೊಡಬೇಕು, ಇವತ್ತು ಬಿಟ್ಟರೆ ಬೇರೆ ಯಾವ ದಿವಸ ಬರುತ್ತದೆ ಎಂಬುದು ನನಗೆ ಗೊತ್ತಾಗುತ್ತಾ ಇಲ್ಲ. ಶ್ರೀಮಾನ್ ನಾಗಪ್ಪನವರು ಹೇಳಿದ ಹಾಗೆ ಈ ರೀತಿ ಬದಲಾವಣೆಯಾಗತಕ್ಕ ಕಾರ್ಯಕ್ರಮ ಏನಿದೆ ಇದು ಒಳ್ಳೆಯದಲ್ಲ. ಇಲ್ಲಿರತಕ್ಕ ಸದಸ್ಯರ ಪೈಕಿ ಮಿನಿಸ್ಟರು ಮಾತ್ರ ಜವಾಬ್ದಾರಿ ಹೊಂದಿದ್ದವರು, ವಿಪರೀತ ಕೆಲಸ ಇದ್ದವರು ಎಂಬ ಭಾವನೆ ತಮಗೆ ಇರುವುದಾದರೆ ಅವನ್ನು ತಾವು ಇನ್ನೊಂದು ಸಾರಿ ಪರಿಶೀಲನೆ ಮಾಡುವುದು ಒಳ್ಳೆಯದು ಎಂದು ನನ್ನ ಭಾವನೆ. ನಮಗೂ ಕೂಡ ಜವಾಬ್ದಾರಿ ಇದೆ. ಹೇಳತಕ್ಕ ಹತ್ತಾರು ವಿಷಯಗಳು ಇವೆ, ಬಹಳ ಪ್ರಾಮುಖ್ಯವಾದ ವಿಷಯಗಳನ್ನು ಈ ವಿಧಾನ ಸಭೆಯ ಗಮನಕ್ಕೆ ತರಬೇಕಾಗುತ್ತದೆ. ಆದ್ದರಿಂದ ತಾವು ವಿಚಾರ ಮಾಡಿ ನನ್ನ ರೆಸಲ್ಯೂಷನ್‌ನ್ನು ಮಂಡಿಸುವುದಕ್ಕೆ ನನಗೆ ಅಲಾಟ್ ಆದ ಟೈಂನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ.

† ಶ್ರೀ ಕೆ. ಎಚ್. ರಂಗನಾಥ್.—ಶ್ರೀಮಾನ್ ನಾಗಪ್ಪನವರ ಪಾಯಿಂಟ್ ಆಫ್ ಆರ್ಡರ್ ಕೇಳಿದ್ದೀರಿ ತಮ್ಮ ರೂಲಿಂಗ್ ಕೊಡಬಹುದು, ತಾವು ಈ ದಿವಸ ಕಾರ್ಯಕ್ರಮವನ್ನು ತೆಗೆದುಕೊಳ್ಳುವುದಕ್ಕಿಂತ ಮುಂಚೆ ಈ ಲ್ಯಾಂಡ್ ರೆವಿನ್ಯೂ ಬಗ್ಗೆ ಮಾನ್ಯ ಮಂತ್ರಿಗಳು ಕೊಟ್ಟಿರತಕ್ಕ ಆಶ್ವಾಸನೆ ಏನಿದೆ ಅದನ್ನು ಸರಿಯಾಗಿ ಕಾರ್ಯರೂಪಕ್ಕೆ ತರುತ್ತಾ ಇಲ್ಲ ಆ ವಿಷಯವನ್ನು ಹೇಳಬೇಕಾಗಿದೆ. ಆ ವಿಷಯದಲ್ಲಿ ಕಾಂಪ್ರಹೆನ್ಸಿವ್ ಅಮೆಂಡ್‌ಮೆಂಟ್ ತರುವವರೆಗೂ ಕೂಡ ಹಿಂದಿನ ಕಂದಾಯವನ್ನೇ ವಸೂಲು ಮಾಡುತ್ತೇವೆ. ಈ ವರ್ಷದಿಂದ ಜಾರಿ ಮಾಡುತ್ತೇವೆ ಎಂದು ಆಶ್ವಾಸನೆ ಕೊಟ್ಟಿದ್ದರು. ಈಗ ಜಮಾಬಂದಿ ಆಗುತ್ತಾ ಇದ್ದು ಏಪ್ರಿಲ್ ಒಂದರಿಂದ ಮುಂದಿನ ವರ್ಷ ಪ್ರಾರಂಭವಾಗುತ್ತದೆ. ಇಂತಹ ಒಂದು ಕಷ್ಟ ಪರಿಸ್ಥಿತಿ ಇರುವಾಗ ಸರ್ಕಾರದವರು ಈ ಡಿಮ್ಯಾಂಡನ್ನು ಮೂವ್ ಮಾಡುವುದಕ್ಕಿಂತ ಮುಂಚೆ ಮಾನ್ಯ ಮಂತ್ರಿಗಳು ಹೇಳಿಕೆ ಕೊಟ್ಟು, ನಂತರ ಶ್ರೀಮಾನ್ ನಾಗಪ್ಪನವರ ಪಾಯಿಂಟ್ ಆಫ್ ಆರ್ಡರ್ ಬಗ್ಗೆ ತಾವು ತಮ್ಮ ರೂಲಿಂಗನ್ನು ಕೊಡಬಹುದು. ಮುಂದಿನ ಕಾರ್ಯಕ್ರಮ ತೆಗೆದುಕೊಳ್ಳಬಹುದು, ಶ್ರೀಮಾನ್ ಶಿವಪ್ಪನವರು ಮತ್ತು ನಂಜೇಗೌಡರು ಮೂವ್ ಮಾಡುವುದಕ್ಕಿಂತ ಮುಂಚೆ ಈ ಪ್ರಶ್ನೆಗೆ ಸರಿಯಾದ ಸಮಜಾಯಿಸಿ ಕೊಟ್ಟು ರೈತರಿಗೆ ಈ ವರ್ಷ ಯಾವ ರೀತಿ ಪರಿಹಾರ ಕೊಡುತ್ತೇವೆ ಎಂಬುದನ್ನು ತಿಳಿಸಬೇಕು. ಸಮಜಾಯಿಸಿ ಕೊಟ್ಟಮೇಲೆ ನಾವು ಈ ಡಿಮ್ಯಾಂಡನ್ನು ಮೂವ್ ಮಾಡುವುದಕ್ಕೆ ಅವಕಾಶ ಕೊಡು

ತ್ತೇವೆ ಇಲ್ಲದೇ ಹೋದರೆ ಕೊಡಲಿಕ್ಕೆ ಬರುವುದಿಲ್ಲ ಎಂಬ ಒಂದು ಅಭಿಪ್ರಾಯವನ್ನು ನಾವು ಕೆಲವರು ಹೊಂದಿದ್ದೇವೆ. ಆದ್ದರಿಂದ ಈ ಸಭೆಗೆ ಮಂತ್ರಿಗಳು ಒಂದು ಹೇಳಿಕೆಯನ್ನು ಕೊಡಲಿ, ನಂತರ ನಾಗಪ್ಪನವರ ಪಾಯಿಂಟ್ ಆಫ್ ಆರ್ಡರ್‌ಗೆ ತಮ್ಮ ರೂಲಿಂಗ್ ಕೊಟ್ಟು ಮುಂದಿನ ಕಾರ್ಯಕ್ರಮವನ್ನು ನಡೆಸಬಹುದು.

Sri B. P. GANGADHAR.—The point of order was raised by my hon. Friend at the most appropriate and exact time. ಇವತ್ತು ಲ್ಯಾಂಡ್ ರೆವೆನ್ಯೂ ತಾವು ವಸೂಲು ಮಾಡುವುದಕ್ಕಾಗುವುದಿಲ್ಲ ಏಕೆಂದರೆ ಅದನ್ನು ಬಹಳ ಜನ ಡಿಸ್‌ಪ್ಯೂಟ್ ಮಾಡುವವರು ಇದ್ದಾರೆ. ಇಂತಹ ಸಂದರ್ಭದಲ್ಲಿ ನಮ್ಮ ಏರಿಯಾದಲ್ಲಿ ಲ್ಯಾಂಡ್ ರೆವಿನ್ಯೂ ವಸೂಲು ಮಾಡಲು ಪೋಲೀಸ್‌ನವರನ್ನು ಉಪಯೋಗಿಸಿಕೊಂಡು 4 ವರ್ಷದಿಂದ ಕೊಡಬೇಕಾಗಿರತಕ್ಕ ಹಣವನ್ನು ಈ ಒಂದೇ ವರ್ಷದಲ್ಲಿ ಕೊಡಬೇಕೆಂದು ಒತ್ತಾಯ ಮಾಡುತ್ತಾ ಇದ್ದಾರೆ. ಇಂತಹ ಸಂದರ್ಭದಲ್ಲಿ ಈ ಒಂದು ವಿಷಯವೂ ಕೂಡ ಚರ್ಚೆಯಾಗಬೇಕಾಗಿದೆ. According to rules, once in a fortnight, there should be non-official business and you have to allow it according to your discretion, of course. ಈಗ ಎರಡು ವಾರ ಆಗಿದೆ. ಒಂದು ವಾರವೂ ಕೂಡ ನಾನ್‌ಅಫಿಷಿಯಲ್ ಬಿಸಿನೆಸ್ ಮಾಡುವುದಕ್ಕೆ ಆಗಿಲ್ಲ, ಒಂದು ದಿವಸವೂ ಕೂಡ ಅಲಾಟ್ ಆಗಿಲ್ಲ. ನಿಮಗೆ ಇರತಕ್ಕ ಅಧಿಕಾರವನ್ನು ಉಪಯೋಗಿಸಿಕೊಂಡು ಇಷ್ಟು ಲೈಟ್ ಆಗಿ ಇದನ್ನು ಭಾವನೆ ಮಾಡುತ್ತಿರುವುದನ್ನು ನಾವು ನೋಡಿಕೊಂಡು ಕುಳಿತಿರುವುದಕ್ಕೆ ಸಾಧ್ಯವಿಲ್ಲ. ತಯಾರಾಗಿಲ್ಲ. ಒಂದು ವಾರದಲ್ಲಿ ಒಂದು ದಿವಸವಾದರೂ ಪೂರ್ಣವಾಗಿ ಇದಕ್ಕೆ ಉಪಯೋಗಿಸಿಕೊಳ್ಳಬೇಕಾಗಿರುವುದು ನಮ್ಮ ಹಕ್ಕು, ಇದನ್ನು ಸರ್ಕಾರದ ಕಾರ್ಯಕಲಾಪಗಳಿಗೆ ಕೊಡುವುದಕ್ಕೆ ನಮಗೆ ಇಷ್ಟವಿಲ್ಲ. ಆದ್ದರಿಂದ ತಾವು ನಮಗೆ ಈ ವಿಷಯದಲ್ಲಿ ಪ್ರೊಟೆಕ್ಷನ್ ಕೊಡಬೇಕು. ಗವರ್ನಮೆಂಟ್ ಬಿಸಿನೆಸ್ ಎಷ್ಟು ಪ್ರಾಮುಖ್ಯವೋ ನಾನ್‌ಅಫಿಷಿಯಲ್ ಬಿಸಿನೆಸ್ ಕೂಡ ಅಷ್ಟೇ ಮುಖ್ಯ. ಅಷ್ಟೇ ಆವಶ್ಯಕ. ನಾನ್‌ಅಫಿಷಿಯಲ್ ಬಿಸಿನೆಸ್‌ಗೆ ಅವಕಾಶ ಮಾಡಿಕೊಡಬೇಕು ಇಲ್ಲದೆ ಇದ್ದರೆ ನಿಯಮಗಳನ್ನು ಉಲ್ಲಂಘನೆ ಮಾಡಿದ ಹಾಗಾಗುತ್ತದೆ ಎಂದು ಹೇಳುತ್ತೇನೆ.

Sri K. H. RANGANATH.—What I said was not properly understood by my friends and Sri Gangadhar.

Mr. SPEAKER.—I have understood the hon. Member.

Sri K. H. RANGANATH.—Sri Gangadhar stated that the point of order raised by the hon. Member Sri Nagappa was at the appropriate time. I do not know whether I made myself clear. My point is only this: Immediately after the Question Hour, before the Demand was to be moved, a request was made, with the permission of the Chair, to the Hon. Revenue Minister to give certain clarifications and make positive statements on some of the burning issues of the State that are before the State to-day. So we are at this stage.

Sri M. NAGAPPA.—Please excuse me, Sir. I just asked the Hon. Chair whether he is going to allow me to speak or whether the Demands are going to be taken into consideration. The Chair allowed me. Otherwise, I would have given full scope for the hon. Minister to reply.

Mr. SPEAKER.—I never stated so. After this discussion began, I have been only listening.

Sri M. NAGAPPA.—The records may be perused.

Mr. SPEAKER.—I never uttered a single word.

ಶ್ರೀ ಎಂ. ಎಸ್. ಕೃಷ್ಣನ್.—ತಮ್ಮ ಗಮನಕ್ಕೆ ಒಂದು ವಿಷಯ ತರಬಯಸುತ್ತೇನೆ. ಈಗ ಎರಡು ಪ್ರಶ್ನೆಗಳು ಬಂದಿವೆ. ಮೊದಲನೆಯ ಪ್ರಶ್ನೆ ಎಂದರೆ ರೆವಿನ್ಯೂ ಡಿಮ್ಯಾಂಡ್ ಮೇಲೆ ಶ್ರೀಮಾನ್ ಕೌಜಲಗಿಯವರು ಡಿಮ್ಯಾಂಡನ್ನು ಮಂಡಿಸುವುದಕ್ಕೆ ಅವಕಾಶ ಕೊಡಬೇಕೇ, ಬೇಡವೇ ಎಂಬುದು. ಎರಡನೆಯದು ಇವತ್ತು ನಾನ್‌ಅಫಿಷಿಯಲ್ ಡೇ, ಆದ್ದರಿಂದ ಅಫಿಷಿಯಲ್ ಬಿಸಿನೆಸ್ ನಡೆಸುವುದಕ್ಕೆ ಅವಕಾಶ ಕೊಡಬೇಕೇ ಬೇಡವೇ ಎಂಬುದು. ಮೊದಲನೆಯದು ಬಹಳ ಮುಖ್ಯವಾದ ಪ್ರಶ್ನೆ ಎಂದು ನನಗೆ ಅನಿಸುತ್ತದೆ. ಇಲ್ಲಿ ಹೇಳಿರತಕ್ಕ ಮಾತುಗಳನ್ನು ಕೇಳಿದ್ದರಲ್ಲಿ ಇದನ್ನು ತೆಗೆದುಕೊಳ್ಳುವುದಕ್ಕೆ ಅವಕಾಶವಾಗುತ್ತದೆ ಎಂದು ಭರವಸೆ ಇಡುವುದಕ್ಕೆ ಸಾಧ್ಯವಿಲ್ಲ. ತಮಗೆ ಗೊತ್ತಿರುವಂತೆ ಹಿಂದಿನ ಬಡ್ಜೆಟ್ ಸೆಷನ್‌ಗೆ ಮುಂಚೆಯೇ ಪತ್ರಿಕೆಗಳಲ್ಲಿ ಲ್ಯಾಂಡ್ ರೆವಿನ್ಯೂ ಅಬಾಲಿಷ್ ಮಾಡುತ್ತೇವೆ ಅಂತಲೇ ಬಂದಿತ್ತು. ಅದರ ಬಗ್ಗೆ ಪರಿಶೀಲನೆ ಮಾಡುತ್ತಾ ಇದೆ ಸರ್ಕಾರ ಅಂತ ಬಂದಿರಲಿಲ್ಲ.

4-00 P.M.

ಹಿಂದೆ ಶ್ರೀ ರಾಮಕೃಷ್ಣ ಹೆಗಡೆಯವರು ಬಡ್ಜೆಟ್ ಭಾಷಣ ಮಾಡುತ್ತಾ ಏನು ಹೇಳಿದ್ದಾರೆಂಬುದನ್ನು ತೆಗೆಸಿ ನೋಡಿ. ಅದರಲ್ಲಿ ಅವರು ಭೂಕಂದಾಯವನ್ನು ರದ್ದುಮಾಡುತ್ತೇವೆಂದು ಹೇಳಿದ್ದಾರೆ. ಆದರೆ ಈ ದಿವಸ ಅದನ್ನು ಇನ್ನೂ ಎನ್‌ಹ್ಯಾನ್ಸ್ ಮಾಡುವುದಕ್ಕೆ ಹೊರಟಿದ್ದಾರೆ ಅಂದಾಗ ಅದನ್ನು ಇನ್ನು ರದ್ದುಮಾಡುವುದೆಲ್ಲಿ ಬಂತು ಇಂಥ ಒಂದು ಅಚಾತುರ್ಯದಿಂದ ಲಕ್ಷಾಂತರ ಜನರಿಗೆ ಬಹಳ ಅನ್ಯಾಯವಾಗಿದೆ. ಇಲ್ಲಿ ಮಂತ್ರಿಗಳಾಗಿರತಕ್ಕವರು ಒಂದೊಂದಾವರ್ತಿ ಒಂದೊಂದು ರೀತಿ ಹೇಳಿಕೆಗಳನ್ನು ಕೊಡುತ್ತಾ ಹೋದರೆ ಇದೇನು ನಾಟಕವೇ ನಾವಿಲ್ಲಿ ನಡೆಸುತ್ತಿರುವುದು ? ಮಾತೆತ್ತಿದರೆ ಅಧ್ಯಕ್ಷರಾದ ತಾವು ಉತ್ತರ ಕೊಡಲಿ ಆನಂತರ ನೋಡೋಣ ಅನ್ನುತ್ತಿದ್ದೀರಿ. ಆದರೆ ಇಲ್ಲಿ ಬೆಂಕಿ ಹತ್ತಿ ಉರಿಯುತ್ತಿರುವಾಗ ಅದನ್ನು ಆರಿಸುವುದಕ್ಕೆ ತಾವು ಪ್ರಯತ್ನ ಮಾಡದೆ ಆಡಳಿತ ಪಕ್ಷಕ್ಕೆ ತಾವು ಮತ್ತಿಷ್ಟು ಎಣ್ಣೆ ತುಪ್ಪ ಸುರಿಯುವಂತೆ ಮಾಡುತ್ತಿದ್ದೀರಿ; ಅಂದರೆ ಇನ್ನು ಬೆಂಕಿ ಆರಿಸುವುದೆಲ್ಲಿ ಬಂತು ? ರೈತಾಪಿ ವರ್ಗಕ್ಕೆ ಈ ದಿವಸ ಬಹಳ ಅನ್ಯಾಯವಾಗಿದೆ. ಇಲ್ಲಿ ಮಂತ್ರಿಗಳಾಗಿರತಕ್ಕವರು ಆಡಿದ ಮಾತನ್ನು ಉಳಿಸಿಕೊಳ್ಳುವುದಕ್ಕೆ ಅವರು ಸಿದ್ಧರಾಗಿಲ್ಲ; ತಯಾರಾಗಿಲ್ಲ. ಹೀಗೆ ಇವರು ಇಲ್ಲಸಲ್ಲದ ಮಾತುಗಳನ್ನಾಡಿ ಜನರನ್ನು ವಂಚಿಸುತ್ತಿದ್ದಾರೆ. ಜನರಿಂದ ಮತಗಳನ್ನು ಪಡೆಯುವವರೆಗೆ ಒಂದು ಹೇಳಿಕೆ, ಜನರಿಂದ ಓಟನ್ನು ಪಡೆದದ್ದು ಆದನಂತರ ಮತ್ತೊಂದು ಹೇಳಿಕೆ. ಇದು ಆಗಬಾರದು. ಆದ್ದರಿಂದ ಈ ವಿಷಯ ಮೊದಲೆ ಚರ್ಚೆಯಾಗಬೇಕು. ಇದರ ಬಗ್ಗೆ ಮಾನ್ಯ ಮಂತ್ರಿಗಳು ಒಂದು ಹೇಳಿಕೆಯನ್ನು ಕೊಟ್ಟರೆ ಆಗ ನಮಗೆ ಸ್ವಲ್ಪ ಸಂಶಯ ನಿವಾರಣೆ ಆದರೂ ಆಗಬಹುದು. ಇನ್ನು ಎರಡನೆಯದಾಗಿ ಈ ದಿವಸ ಇಲ್ಲಿ ಖಾಸಗೀ ಕಾರ್ಯಕಲಾಪಗಳನ್ನು ನಡೆಸಬೇಕಾದ್ದು ಯುಕ್ತ. ಅದನ್ನು ನಾನು ತಮ್ಮ ಚಿತ್ತಕ್ಕೆ ಬಿಡುತ್ತೇನೆ. ಇದರ ಬಗ್ಗೆ ಇನ್ನು ನಾನು ಹೆಚ್ಚು ಹೇಳುವುದಕ್ಕೆ ಇಷ್ಟಪಡುವುದಿಲ್ಲ.

Mr. SPEAKER.—There is not a single new point in the Hon. Member's speech. He has repeated the same point *ad nauseam* ;

Sri M. S. KRISHNAN.—I did not repeat. The Speak is mistaken.

ಶ್ರೀ ಎಸ್. ಹುಚ್ಚಮಾಸ್ತಿಗೌಡ.—ಸ್ವಾಮಿ, ಈ ವಿಚಾರದಲ್ಲಿ ನಾನು ಸಲಹೆ ಮಾಡುವುದಿಷ್ಟೆ: ಈ ದಿವಸ ನಮ್ಮ ಕಾರ್ಯಕ್ರಮದ ಪಟ್ಟಿಯಲ್ಲಿ ಹೇಳಿರುವ ಪ್ರಕಾರ ಇಲ್ಲಿ ಮಂತ್ರಿಗಳು ಡಿಮ್ಯಾಂಡನ್ನು ಮುವ್ ಮಾಡುವುದಕ್ಕೆ ಮೊದಲು ವಿಷಯಗಳ ಬಗ್ಗೆ ಕ್ಲಾರಿಫಿಕೇಷನ್ ಕೊಡಬೇಕೆಂದು ಮಂತ್ರಿಗಳನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಕೇಳಿಕೊಂಡಿದ್ದಾರೆ. ಹಾಗೆ ಅವರು ಉತ್ತರಕೊಟ್ಟ ನಂತರ ಈ ದಿವಸ ಚರ್ಚೆ ನಡೆಯಬೇಕಾಗಿರುವುದು ನಾನ್ ಅಫಿಷಿಯಲ್ ಬಿಜಿನೆಸ್. ಅದರ ಚರ್ಚೆಗೆ ಅವಕಾಶವನ್ನು ಕೊಡಲೇಬೇಕೆಂದು ಕೆಲವು ಸದಸ್ಯರು ಒತ್ತಾಯ ಮಾಡುತ್ತಿದ್ದಾರೆ. ಆ ಒತ್ತಾಯದಲ್ಲಿ ಶ್ರೀಗಳಾದ ಬಂಗಾರಪ್ಪನವರು, ನಾಗಪ್ಪನವರು ಬಹಳವಾಗಿ ಚರ್ಚೆಮಾಡಿದ್ದಾರೆ. ಆದರೆ ನನಗೆ ಇದರ ಬಗ್ಗೆ ಎರಡು ಸಲಹೆಗಳನ್ನು ಮಾಡಬಹುದೆಂದು ಅನಿಸುತ್ತಿದೆ. ಒಂದು ಈ ದಿವಸ ಹಾಕಿರತಕ್ಕ ಪ್ರೋಗ್ರಾಂ ಪ್ರಕಾರ ಡಿಮ್ಯಾಂಡನ್ನು ಡಿಸ್‌ಕಸ್‌ಮಾಡುವುದು ಈ ಡಿಮ್ಯಾಂಡುಗಳ ಚರ್ಚೆ ಮುಗಿದನಂತರ ಅಂದರೆ ತಾ : 28-3-69 ನಂತರ ಈ ನಾನಫಿಷಿಯಲ್ ಬಿಜಿನೆಸ್ ನಡೆಸುವುದು ಒಂದು ಸಲಹೆ; ಇನ್ನೊಂದು ಸಲಹೆ ಏನೆಂದರೆ ಈ ದಿವಸ ನಾನಫಿಷಿಯಲ್ ಚರ್ಚೆ ಮಾಡಬೇಕಾದುದು ನ್ಯಾಯವಾದ್ದು. ಆದ್ದರಿಂದ ಅದನ್ನು ಚರ್ಚೆಗೆ ತೆಗೆದುಕೊಂಡು ನಾಳೆ ಸೋಮವಾರ ಈ ದಿವಸದ ಡಿಮ್ಯಾಂಡನ್ನು ಡಿಸ್‌ಕಸ್ ಮಾಡಬಹುದು ಅನ್ನುವುದು. ಆದರೆ ಈ ಬಗ್ಗೆ ನನ್ನ ಪರ್ಸನಲ್

ಒಪೀನಿಯನ್ ಏನೆಂದರೆ ಮೊದಲು ಈ ದಿವಸ ಡಿಮ್ಯಾಂಡನ್ನು ಚರ್ಚೆಗೆ ತೆಗೆದುಕೊಂಡು ಅನಂತರ ವೇಳೆಯೇನಾದರೂ ಉಳಿದರೆ ನಾನಫಿಷಿಯಲ್ ಸಬ್‌ಜೆಕ್ಟನ್ನು ಡಿಸ್‌ಕಸ್ ಮಾಡಬಹುದೆಂದು ಹೇಳುತ್ತೇನೆ.

† ಶ್ರೀ ಎಸ್. ಶರಣಗೌಡ ಇನಾಂದಾರ್.—ಸ್ವಾಮಿ, ನಾನು ಈ ಮನೇಲಿ ನಡೆಯುತ್ತಿರುವ ವಿಚಾರಗಳನ್ನೆಲ್ಲಾ ಬಹಳ ಕೂಲಂಕಷವಾಗಿ ವಿಮರ್ಶೆಮಾಡಿ ನೊಡುತ್ತಿದ್ದೇನೆ. ಈ ದಿವಸ ಕೊಶ್ಚೆನ್ ಅವರ್ ಆದನಂತರ ಈ ಮನೆಯಲ್ಲಿ ನಿರ್ದಿಷ್ಟವಾದ ರೀತಿಯಲ್ಲಿ ಏನು ಒಂದು ಬಿಜಿನೆಸ್ ನಡೆಯಬೇಕೋ ಅದನ್ನು ನಡೆಸುವುದಕ್ಕೆ ಇಲ್ಲ ಅವಕಾಶ ಕೊಡುತ್ತಿಲ್ಲ ಅನ್ನುವುದನ್ನು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಈ ಸಭೆಯಲ್ಲಿ ಪ್ರತಿಯೊಬ್ಬರೂ ಇಂಪಾರ್‌ಟೆಂಟ್ ಪರ್ಸನ್‌ಗಳೇ, ಪ್ರತಿಯೊಂದು ವಿಚಾರವೂ ಇಲ್ಲಿ ಬಹಳ ಇಂಪಾರ್‌ಟೆಂಟ್ ಆದದ್ದೇ. ಯಾವ ದೃಷ್ಟಿಯಿಂದ ನೋಡಿದರೂ ಇದನ್ನು ತಪ್ಪಿಸುವುದಕ್ಕೆ ಸಾಧ್ಯವಾಗುವಂತೆ ಕಂಡುಬರುತ್ತಿಲ್ಲ. ಅಧ್ಯಕ್ಷರಾದ ತಾವು ನೆನ್ನೆಯ ದಿವಸ ಇಲ್ಲಿ ಪ್ರೈವೇಟ್ ಮೆಂಬರುಗಳ ಬಿಲ್ ವಿಚಾರವನ್ನು ಅದರ ಚರ್ಚೆ ಮತ್ತು ಅದಕ್ಕೆ ನಿಗದಿಮಾಡಿರತಕ್ಕ ಕಾಲವನ್ನು ಸಭೆಗೆ ತಿಳಿಸಿದಿರಿ. ಈ ದಿವಸ ನಮಗೆ ಅಧ್ಯಕ್ಷರ ಆಫೀಸಿನಿಂದ ಬಂದಿರತಕ್ಕ ಅಜೆಂಡಾದಲ್ಲಿ ಸೂಚಿಸಿರುವಂತೆ ಇಲ್ಲಿ ಈ ದಿವಸ ಏನೇನು ವಿಷಯಗಳನ್ನು ಚರ್ಚೆಮಾಡುವುದಕ್ಕೆ ಅವಕಾಶವಿದೆ, ಯಾವ ಯಾವ ಸಬ್‌ಜೆಕ್ಟನ್ನು ಎಷ್ಟೆಷ್ಟು ಹೊತ್ತು ಚರ್ಚೆಮಾಡಬೇಕೆಂಬುದೂ ಈಗಾಗಲೇ ತೀರ್ಮಾನವಾಗಿದೆ. ತಾವು ನೆನ್ನೆಯ ದಿನವೇ ಈ ದಿವಸ ಇಲ್ಲಿ ನಾನಫಿಷಿಯಲ್ ಬಿಲ್ಲುಗಳ ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ ಅನ್ನುವುದಾಗಿ ಈ ಅಜೆಂಡದಲ್ಲಿ ಗೊತ್ತಾಗುತ್ತಿದೆ. ಅಧ್ಯಕ್ಷರು ನೆನ್ನೆಯೇ ಇದಕ್ಕೆ ಒಪ್ಪಿದ್ದಾರೆಂದು ಅರ್ಥವಾಗುತ್ತದೆ. ಅಧ್ಯಕ್ಷರು ಈ ದಿವಸದ ಬಿಜಿನೆಸ್ ಆಫ್ ದಿ ಡೇ ಏನಿದೆ ಅನ್ನುವುದನ್ನು ನೋಡಿ—ಇದರಲ್ಲಿ ಬೆಳಗ್ಗೆ 9 ಗಂಟೆಯಿಂದ ಹತ್ತೂವರೆಯವರೆಗೆ ಫೈನಾನ್‌ಷಿಯಲ್ ಬಿಜಿನೆಸ್. ಆದಾದನಂತರ ಮಧ್ಯಾಹ್ನ ಒಂದು ಗಂಟೆಯಿಂದ ಸಾಯಂಕಾಲ 7 ಗಂಟೆಯವರೆಗೆ ಅಂದರೆ ಆರು ಗಂಟೆಯ ಅವಧಿಯಲ್ಲಿ ಮೊದಲು ಕಾಲಟೆಂಷನ್ ನೋಟೀಸ್‌ಗಳ ಚರ್ಚೆ, ಅದಾದನಂತರ ಫೈನಾನ್ಷಿಯಲ್ ಬಿಜಿನೆಸ್ ಅಂದರೆ ಇದರಲ್ಲಿ ಒಂದು ಗಂಟೆ ಕೊಶ್ಚೆನ್ ಅವರಿಗೆ ಹೋಗುತ್ತದೆ. ಅನಂತರ ಪ್ರೈವೇಟ್ ಮೆಂಬರುಗಳ ಬಿಲ್ಲಿನ ಮೇಲೆ ಚರ್ಚೆ ಹೀಗಿದೆ. ಆದರೆ ಹೀಗೆ ಈ ಪಟ್ಟಿಯನ್ನು ತಯಾರು ಮಾಡಿರುವುದನ್ನು ನೋಡಿದರೆ ಇದರಲ್ಲೇನೋ ಸ್ವಲ್ಪ ಇನ್‌ಕನ್‌ಸ್ಟಿಟೆನ್‌ಸಿ ಇದ್ದಹಾಗೆ ಇದೆ. ಈ ಪಟ್ಟಿಯನ್ನು ತಯಾರಿಸಿರುವುದು ಸರಿಯಾಗಿರುವಂತೆ ಕಾಣುವುದಿಲ್ಲ. ಈ ದಿವಸ ನಾವು ಇಲ್ಲಿ ಪ್ರೈವೇಟ್ ಮೆಂಬರುಗಳ ಬಿಲ್ಲನ್ನು ಚರ್ಚೆಗೆ ತೆಗೆದುಕೊಂಡರೆ ಅದಕ್ಕೆ ನಾಲ್ಕು ಗಂಟೆಗಳನ್ನು ಅಲಾಟ್ ಮಾಡಲಾಗಿದೆ. ಅಂದಾಗ ಇನ್ನು ಈ ರೆವಿನ್ಯೂ ಹೆಡ್ಡನ್ನು ತೆಗೆದುಕೊಳ್ಳುವುದಕ್ಕೆ ಚರ್ಚೆಮಾಡುವುದಕ್ಕೆ ಅವಕಾಶವಾದರು ಎಲ್ಲಿದೆ ? ಇದಕ್ಕೆ ಸುತರಾಂ ವೇಳೆ ಇಲ್ಲ. ಒಂದರಿಂದ ಸಾ. 7ಕ್ಕೆ ಇರತಕ್ಕ ಆರು ಗಂಟೆಯಲ್ಲಿ ಪ್ರಶ್ನೆಗೆ ಒಂದು ಗಂಟೆ ಹೋಗುತ್ತಾ ಉಳಿದ 5 ತಾಸಿನಲ್ಲಿ 4 ತಾಸು ಪ್ರೈವೇಟ್ ಮೆಂಬರ ಬಿಲ್ಲಿನ ಚರ್ಚೆಗೆ ಹೋದರೆ ಇನ್ನು ಡಿಮ್ಯಾಂಡನ್ನು ಚರ್ಚೆ ಮಾಡುವುದಕ್ಕೆ ಅವಕಾಶವೆಲ್ಲಿದೆ ! ಇದರ ಮೇಲೆ ಮಾತನಾಡುವುದಕ್ಕೆ ಅವಕಾಶವೇ ಇಲ್ಲ. ಇಲ್ಲಿ ಏನಿದ್ದರೂ ಬರಿ ಪಾಯಿಂಟಾಫ್ ಆರ್ಡರುಗಳನ್ನು ರೈಜ್‌ಮಾಡುವುದರಲ್ಲೆ ಕಾಲ ಹೋಗುತ್ತಿದೆ. ನಾನು ತಮ್ಮಲ್ಲಿ ಬಹಳ ಸವಿನಯವಾಗಿ ಅರಿಕೆ ಮಾಡಿಕೊಳ್ಳುವುದೇನೆಂದರೆ ಈ ಮನೆಯ ವೇಳೆ ಬಹಳವಾಗಿ ಹರಣವಾಗುತ್ತಿದೆ. I am fed up with what is happening in the House. We come here duly prepared to speak and make contribution to the debate. Now most of the valuable time of the House is taken away by the indifferent attitude taken by some of the members and I think the Chair is helping it. I am very sorry to say this.

Sri K. H. RANGANATH.—I rise to a point of order, Sir.

Sri S. SHARAN GOUDA INAMDAR.—Sir, I am also speaking on a point of order.

Sri K. H. RANGANATH.—Let the records be verified; he is not speaking on a point of order.

Mr. SPEAKER.—Hon. Member Sri Ranganath may please sit down.

Sri K. H. RANGANATH.—I am not amenable to this compromising attitude of the Chair. Sir, I am on a Point of Order. I am very sorry about the remarks made by my friend Sri Sharanagouda Inamdar. I am in the Opposition and Sri Sharanagouda Inamdar is also in the Opposition. Still, I cannot subscribe to the view of my friend personally that we have been wasting the time of the House and some of us are contributing to it. My point of order is this. Have we, on all these days, from 21st February, wasted the time of the august House ? Have we not contributed anything which is to be looked down by the public ? Such a remark has been made by my friend. Is it in order ?

Sri SHARANAGOUDA INAMDAR.—Sir, I had also raised a Point of Order under Rules 27 and 28. I was very much interested in bringing to the notice of the Chair that these two Agenda papers have been supplied, *viz.* one Report which was read and approved by the House, and another is the list supplied to the Members. I think, there is some inconsistency in these two things. Therefore, instead of allowing speeches by Members, I request the Chair to decide it immediately without giving any more scope for others to raise other issues. Please decide whether you are going to allow the business of the House today according to the List of Business or allow Private Members' business as per the recommendation accepted by this House yesterday. The hon. the Leader of the Opposition has said so many things. Yesterday also, we demanded certain documents and information regarding the action taken by the Government from September last up to this day about the assurance given regarding land revenue collection. I request the Hon. Minister, through you, Sir, to at least give a statement as to the correct position with regard to land revenue collection. I request the Chair to decide immediately as to which business prevails today. My friend, Sri Ranganath raising a Point of Order in between said that my remarks are not relevant. I leave it to the Chair to decide whether it is relevant or not.

Sri K. H. RANGANATH.—I am not prepared to accept that we are contributing to wasting of time in this House. I do not want to take the accusation. We should not allow things to go in that way.

Sri K. H. PATIL.—Sir, will it be proper on our part to discuss other things when my friend Sri Nagappa has raised a fundamental question ?

Mr. SPEAKER.—I am just seeking information from the Hon. Minister for Parliamentary Affairs on that very Point of Order.

ಶ್ರೀ ಕೆ. ಪುಟ್ಟಸ್ವಾಮಿ (ನ್ಯಾಯ, ಕಾರ್ಮಿಕ ಮತ್ತು ಪಾರ್ಲಿಮೆಂಟರಿ ಶಾಖೆಗಳ ಮಂತ್ರಿಗಳು).—ತಾವು ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ಕೃತಜ್ಞನಾಗಿದ್ದೇನೆ. ನನಗೇನೊ ಒಂದೊಂದು ಸಾರಿ ಈ ಕಡೆ ಗಣನೆಗೆ ಇರುವುದಿಲ್ಲವೋ ಏನೋ ಎಂಬ ಅನುಮಾನ ಬರುತ್ತದೆ. ಮಾನ್ಯ ಶ್ರೀ ಕೆ. ಎಚ್. ಪಾಟೀಲ್ ಅವರು ಹೇಳುತ್ತಾ ಇರತಕ್ಕ ಸಲಹೆಯನ್ನು ವಿಧಾನವಾಗಿ ಪರಿಶೀಲಿಸುತ್ತೇನೆ. ಒಂದು, ಎರಡು, ಮೂರು ಕ್ರಿಯಾಲೋಪಗಳನ್ನು ಎತ್ತಿದ್ದಾರೆ. ಮಾನ್ಯ ಸದಸ್ಯರು ಖಾಸಗಿ ಕಾರ್ಯಕಲಾಪಗಳ ಬಗ್ಗೆ ಮತ್ತು ಪ್ರೈವೇಟ್ ಮೆಂಬರ್ಸ್ ಬಿಜಿನೆಸ್ ಬಗ್ಗೆ ಸಾಕಷ್ಟು ಕಾಲವನ್ನು ಒದಗಿಸುತ್ತಾ ಇಲ್ಲವೆಂಬುದಾಗಿ ಮಾನ್ಯ ಸದಸ್ಯರು ಆಗ್ರಹ ಮಾಡುತ್ತಾ ಇರುವುದು

ಸರಿಯಾಗಿಲ್ಲ. ಅದಕ್ಕೆ ಕಾಲ ಒದಗಿಸಿಕೊಡಬೇಕು ಅದಕ್ಕೆ ಇರತಕ್ಕ ನಿಯಮಾವಳಿಯನ್ನು ಸ್ವಲ್ಪ ಮಟ್ಟಿಗೆ ಪರಿಶೀಲನೆಮಾಡಿದರೆ, ಕಾಲ ಒದಗಿಸಿಕೊಡುವುದು ನ್ಯಾಯವಾದುದು ಮತ್ತು ಅಗತ್ಯವಾದುದು ಎಂದು ಒಪ್ಪಿಕೊಂಡರೂ, ತಾವು ಅನುಸರಿಸತಕ್ಕ ಕ್ರಮ ಸರಿಯಾಗಿದೆ, ಕ್ರಿಯಾಲೋಪಕ್ಕೆ ಅವಕಾಶವಿಲ್ಲವೆಂದು ನನ್ನ ಅಭಿಪ್ರಾಯ. ಮಾನ್ಯ ಸದಸ್ಯರು ಹೇಳಿದರು 'ನಿನ್ನೆ ಪ್ರೈವೇಟ್ ಮೆಂಬರ್ಸ್ ಬಿಲ್ಸ್ ಅಂಡ್ ರೆಜಲ್ಯೂಷನ್ಸ್ ಕಮಿಟಿಯವರು ಒಂದು ವರದಿಯನ್ನು ಈ ಸಭೆಯ ಮುಂದಿಟ್ಟು ಆ ವರದಿ ಈ ಸಭೆಯ ಅಂಗೀಕಾರವನ್ನು ಪಡೆದಿದೆ. ಆ ವರದಿ ಬಗ್ಗೆ ಈ ದಿನ 7ನೇ ತಾರೀಖು ಶುಕ್ರವಾರ 4 ಗಂಟೆಗಳ ಕಾಲ ಖಾಸಗೀ ಕಾರ್ಯಕಲಾಪಗಳ ಮೂಲಕ ಚರ್ಚೆ ನಡೆಯಬೇಕಾಗಿತ್ತು.

ಶ್ರೀ ಎಂ. ನಾಗಪ್ಪ.—ಈಗ 6 ಗಂಟೆಕಾಲ ಕೆಲಸ ನಡೆಯಬೇಕಾಗಿದೆ. ಈ ಸಭೆ 6½ ಗಂಟೆ ಕಾಲ ಪ್ರೈವೇಟ್ ಮೆಂಬರ್ಸ್ ಬಿಜಿನೆಸ್ಸಿಗೆ ಕಾಲವನ್ನು ನಿಗದಿಮಾಡಿದ ಮೇಲೆ 6 ಗಂಟೆಗಳ ಕಾಲ ಈಗ ನಿಗದಿಮಾಡುವುದಕ್ಕಾಗುವುದಿಲ್ಲ. ಪ್ರೈವೇಟ್ ಮೆಂಬರ್ಸ್ ಬಿಲ್ಸ್ ಅಂಡ್ ರೆಜಲ್ಯೂಷನ್ಸ್ ಇವನ್ನು ತೆಗೆದುಕೊಂಡಾಗ್ಗೆ ಈ ಸಭೆ ಎಷ್ಟು ಹೊತ್ತು ಕೊಡಬೇಕೆಂಬುದನ್ನು ಟೋಟಲ್ ಮಾಡಿದರೆ ಅಷ್ಟು ಹೊತ್ತು ಕೊಡಬೇಕು. ಮರುದಿವಸಕ್ಕೆ 2½ ತಾಸು ಎಂಬುದಾಗಿ ಪರಿಗಣಿಸಬೇಕು.

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಸದಸ್ಯರು ಹೇಳುತ್ತಾ ಇರುವುದನ್ನು ನಾನು ಸರಿಯಾಗಿ ಹೇಳುತ್ತೇನೆ. ಈ ಕಾರ್ಯಕ್ರಮವನ್ನು ಈ ಸಭೆಯಲ್ಲಿ ತೆಗೆದುಕೊಂಡಿದ್ದರೂ ಬೇರೆ ರೀತಿಯಲ್ಲಿ ಇತರ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದು ಸರಿಯೇ ಎಂಬ ಪ್ರಶ್ನೆ ಎದ್ದಿದೆ. ಸಾಮಾನ್ಯ ಕಾರ್ಯಕಲಾಪಗಳಿಗೆ ಅಡಚಣೆ ಬಾರದೆ ಬೇರೆ ಕಾರ್ಯಕಲಾಪಗಳನ್ನು ನಡೆಸುವುದಕ್ಕೆ ಒಪ್ಪಿಕೊಳ್ಳದೇ ಇದ್ದರೆ, ಅಧ್ಯಕ್ಷರಿಗೆ ಬೇರೆ ಮಾರ್ಗವಿರಲಿಲ್ಲ. ಈ ಸಭೆಯ ಅನುಮತಿ ಪಡೆಯದ ಹೊರತು ಏನೂ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಈ ಸಭೆಯ ಕಾರ್ಯಕಲಾಪಗಳನ್ನು ತೆಗೆದುಕೊಳ್ಳಬೇಕಾಯಿತು. ನಿನ್ನೆಯ ಪರಿಸ್ಥಿತಿಯೇ ಬೇರೆ. ಈ ಸಭೆಯ ಒತ್ತಾಯಕ್ಕೆ ತಾವು ಒಪ್ಪಿ ಇವತ್ತು ಬೆಳಿಗ್ಗೆ 9 ರಿಂದ 10½ ವರೆಗೆ ಪುನಃ 1 ರಿಂದ 7 ಗಂಟೆಯವರೆಗೆ ಕೂಡುವುದಕ್ಕೆ ನಿರ್ಣಯವಾಯಿತು. ಬೆಳಿಗ್ಗೆ 9 ಗಂಟೆಗೆ ಸೇರಿದ ಸಭೆ 12½ ಗಂಟೆಯವರೆಗೆ ಕಾರ್ಯಕಲಾಪ ನಡೆಸಿ, 1 ರಿಂದ 7 ರವರೆಗೆ ನಡೆಸುವ ಕಾರ್ಯಕಲಾಪಗಳಿಗಾಗಿ 2 ಗಂಟೆಗೆ ಸೇರಿತೆಂದು ನನ್ನ ಅಭಿಪ್ರಾಯ. ನಿನ್ನೆ ಈ ಸಭೆ ಒಪ್ಪಿದಂತೆ ಆ ವರದಿಯ ಬಗ್ಗೆ ಬೇರೆ ನಿರ್ಣಯವಾಗಿದೆಯೆಂದು ಸಲಹೆ ಬಂದಿದೆ. ನಮ್ಮ ಮುಂದೆ ಈ ಪ್ರೈವೇಟ್ ಮೆಂಬರ್ಸ್ ಬಿಲ್ಸ್ ಅಂಡ್ ರೆಜಲ್ಯೂಷನ್ಸ್ ಬಗ್ಗೆ ಏನು ವರದಿ ಬಂತು, ಈ ಸಭೆ ಏನು ನಿರ್ಣಯಮಾಡಿತು ಎಂಬ ಬಗ್ಗೆ ಮಾಹಿತಿ ಈಗ ನಮ್ಮ ಮುಂದೆ ಇಲ್ಲ.

ಈ ಸಭೆ ನಿನ್ನೆ ಸಂಜೆ 7 ಗಂಟೆಯ ಮೇಲೆ ಯಾವ ಪುನರ್ನಿರ್ಣಯಕ್ಕೆ ಬಂತೋ, ಆ ನಿರ್ಣಯ ಮಾತ್ರ ನಮ್ಮ ಮುಂದೆ ಇದೆ. ನಿರ್ಣಯ ಮಾಡಿದಮೇಲೆ ನಿರ್ಣಯದಂತೆ ಈ ಸಭೆ ಕಾರ್ಯಕಲಾಪಗಳನ್ನು ನಡೆಸಿಕೊಂಡು ಬಂದಿದೆ. ಬೆಳಿಗ್ಗೆ ಮೂರುವರೆ ಗಂಟೆ, ಈಗ ಎರಡರಿಂದ ನಾಲ್ಕುವರೆ ಎಂದು 6 ಗಂಟೆಯ ಕಾರ್ಯಕಲಾಪಗಳನ್ನು ಮಾಡಿದೆ. ಆದ್ದರಿಂದ ಯಾವುದೇ ಸದಸ್ಯರಾಗಲೀ, ಪುನಃ ಹಿಂದಕ್ಕೆ ಹೋಗುವುದು ಸರಿಯಾದುದಲ್ಲವೆಂದು ನನ್ನ ಅಭಿಪ್ರಾಯ. ಎರಡನೆಯದು, ಇವತ್ತು ತಾವು ಒಂದು ಕಾರ್ಯಕ್ರಮ ಪಟ್ಟಿಯನ್ನು ಕೊಟ್ಟಿದ್ದೀರಿ. ಇದು ಸರಿಯೇ ಎನ್ನುವುದನ್ನು ಪರಿಶೀಲನೆ ಮಾಡಬೇಕು. ಮಾನ್ಯ ಸದಸ್ಯರು 28ನೇ ನಿಯಮವನ್ನು ಓದಿ, ಇದನ್ನು ಬದಲಾವಣೆ ಮಾಡುವುದಕ್ಕೆ ಯಾವ ವಿಧವಾದ ಹಕ್ಕು ಇಲ್ಲವೆಂದು ವಾದಿಸಿದ್ದಾರೆ. 28ನೇ ನಿಯಮವನ್ನು ಓದಿದರೆ ತಮಗೆ ಅಧಿಕಾರ ಇದೆ ಎಂದು ಸ್ಪಷ್ಟವಾಗುತ್ತದೆ.

"28. (1) The Speaker, after considering the state of business of the Assembly, may allot so many days as may in his opinion be possible, compatibly with the public interest for private Members' business and may allot different days for the disposal of different classes of such business; and on days so allotted for any particular class of business, business of that class shall have precedence. On other days no business other than Government business shall be transacted except with the consent of the Leader of the House."

(ಶ್ರೀ ಕೆ. ಪುಟ್ಟಸ್ವಾಮಿ)

ಆದ್ದರಿಂದ ಅಲಾಟ್ ಮಾಡತಕ್ಕದ್ದು ತಮ್ಮ ವಿವೇಚನೆಗೆ ಒಳಪಟ್ಟದ್ದು. ಕಾರ್ಯಕಲಾಪಗಳ ಪಟ್ಟಿಯಲ್ಲಿ ಪ್ರೈವೇಟ್ ಮೆಂಬರ್ ಬಿಸಿನೆಸ್ ಕೂಡ ಸೇರಿಸಿದ್ದಾರೆ. ಮಾನ್ಯ ನಾಗಪ್ಪನವರು ಎತ್ತಿದಂತಹ ಕ್ರಿಯಾಲೋಪದಲ್ಲಿ

"Provided further that on a motion made by a Minister for the suspension of this rule the Assembly may resolve to transact Government business on a day allotted for non-official business, in which case the time so used shall be made available for the transaction of private members' business on such other day allotted for Government business as the Speaker in consultation with the Leader of the House may determine."

ಎಂದು ಹೇಳಿದ್ದಾರೆ. ಇದು ಕೂಡ ಅಪ್ಲೈ ಆಗಿದೆ. ಏಕೆಂದರೆ ನಿನ್ನೆ ಸಂಜೆ ಕಾರ್ಯಕಲಾಪಗಳನ್ನು ಬದಲಾವಣೆ ಮಾಡುವಂತಹ ಸಮಯದಲ್ಲಿ ವಿರೋಧಪಕ್ಷದ ನಜೇತಕರು ಮತ್ತು ನಮ್ಮ ಪಕ್ಷದ ನಾಯಕರು, ತಾವು ಎಲ್ಲಾ ಸಮಾಲೋಚನೆ ಮಾಡಿ ಒಪ್ಪಿಗೆಯಾದಂತಹ ಕಾರ್ಯಕ್ರಮ ಪಟ್ಟಿಯನ್ನು ತಯಾರುಮಾಡಿದಮೇಲೆ ಈಗ ಶ್ರೀಮಾನ್ ನಾಗಪ್ಪನವರು ಮಾಡಿದಂತಹ ಕ್ರಿಯಾಲೋಪ ಬರುವುದಿಲ್ಲ. ಈಗ ಮಾನ್ಯ ಮುಖ್ಯಮಂತ್ರಿಯವರೇ ಸೂಚನೆ ಮಾಡಿದ್ದಾರೆ. ಈ ಸೂಚನೆಗೆ ಸಭೆ ಒಪ್ಪಿದೆ ಎಂದು ನಾವು ಭಾವಿಸಬೇಕಾಗಿದೆ. ಹಾಗೆ ಭಾವನೆ ಮಾಡುವುದಕ್ಕೆ ಅವಕಾಶವಿಲ್ಲದಿದ್ದರೆ,

Provided further that the Speaker may in his discretion permit transaction of Government business on a day allotted for non-official business."

ಈ ಪ್ರೊವಿಸೋ ಪ್ರಕಾರ ತಮ್ಮ ಅಧಿಕಾರಕ್ಕೆ ಯಾವ ಅಡಚಣೆಯೂ ಇಲ್ಲ. ತಾವು ಪರಿಶೀಲನೆ ಮಾಡಿ; ಸರ್ಕಾರಿ ಕಾರ್ಯಕಲಾಪಗಳು ಆಗಬೇಕಾದದು ಅಗತ್ಯ. ಖಾಸಗಿ ಕಾರ್ಯಕಲಾಪಗಳನ್ನು ಮಾಡುವುದಕ್ಕೆ ತೀರ್ಮಾನ ಕೈಗೊಂಡರೆ, ಅದನ್ನು ಯಾರೂ ಪ್ರಶ್ನೆ ಮಾಡುವುದಕ್ಕೆ ಅವಕಾಶವಿಲ್ಲ. ಕಾರ್ಯಕ್ರಮ ಪಟ್ಟಿಯನ್ನು ಮಾಡಿದಮೇಲೆ 28 (1) ರ ಕೊನೆಯ ಪ್ರೊವಿಸೊ ಪ್ರಕಾರ ತಾವು ತೀರ್ಮಾನ ಕೈಕೊಂಡಿದ್ದೀರಿ ಒಂದು ಭಾವನೆ ಮಾಡಬೇಕಾಗಿದೆ. ಅದೇ ಕಾರಣದಿಂದ ನೀವು ಇವತ್ತಿನ ದಿವಸ ಕೈಕೊಂಡಿರತಕ್ಕ ಕಾರ್ಯಕ್ರಮಗಳೆಲ್ಲಾ ಸರಿಯಾಗಿದೆ, ಕಾನೂನು ನಿಯಮಗಳಿಗೆ ಅನುಸಾರವಾಗಿದೆ ಎಂದು ನಾನು ಅಭಿಪ್ರಾಯ ಪಡುತ್ತೇನೆ.

† ಶ್ರೀ ಕೆ. ಎಚ್. ಪಾಟೀಲ್ (ಗದಗ್).—ಮಾನ್ಯ ಮಂತ್ರಿಯವರು ಮಾತನಾಡುತ್ತಾ, ಪ್ರೈವೇಟ್ ಬಿಸಿನೆಸ್ ಯಾವ ದಿವಸ ನಿಯಮಿಸಿದ್ದಾರೆ, ಆ ದಿವಸ ಅಧ್ಯಕ್ಷರು ತಮ್ಮ ಡಿಸ್ಕ್ರಿಶನ್ ಉಪಯೋಗಮಾಡಿಕೊಂಡು ಸರ್ಕಾರಿ ಬಿಸಿನೆಸ್ಸಿಗೆ ಪರವಾನಿಗೆ ಕೊಡಬಹುದು ಎಂದು ಹೇಳಿದರು. ಅದು ನಿಜ. ಏನಾದರೂ ಅಂಥ ಅನಾಹುತ ಸರ್ಕಾರಕ್ಕೆ ಬಂದಾಗ, ದೇಶ ಹಾಳಾಗಿ ಹೋಗುತ್ತಿರುವಾಗ, ಇತರ ಸಭೆಯಲ್ಲಿ ಹಾಕಿಕೊಂಡಂತಹ ವಿಚಾರವನ್ನು ಹಿಂದೆ ಹಾಕಿ, ಹೆಚ್ಚು ಅಗತ್ಯವೆಂದು ಕಂಡುಬಂದದನ್ನು ತೆಗೆದುಕೊಳ್ಳಲು ಸ್ಪೀಕರಿಗೆ ಹಕ್ಕು ಇದೆ. ಯಾವುದಾದರೂ ಒಂದು ರೂಲ್ಸನ್ನು ಸ್ಪೀಕರ್ ಸಸ್ಪೆಂಡ್ ಮಾಡುವ ಅಧಿಕಾರವೂ ಇದೆ. ಮಾನ್ಯ ಮಂತ್ರಿಯವರು ಬಹಳ ಕಟ್ಟುನಿಟ್ಟಾದ ರೂಲ್ಸ್ ಇದೆ ಎಂದು ಹೇಳಿದರು. 14 ದಿವಸದೊಳಗೆ ಎರಡು ದಿವಸಕ್ಕಿಂತ ಕಡಿಮೆ ಕೊಡಬಾರದು ಎಂದು. ಎರಡು ದಿವಸ ಅಂದರೆ, ಒಂದರಿಂದ 6 ಗಂಟೆಯ ತನಕ ಕಾರ್ಯಕ್ರಮ ಹಾಕುತ್ತಾರೆ. ಅಲ್ಲಿ 10 ಗಂಟೆಯ ಅವಧಿಯಾಯಿತು. ಈ 10 ಗಂಟೆಯ ಅವಧಿಯನ್ನು ನಾನ್ ಅಫಿಷಿಯಲ್ ಬಿಸಿನೆಸ್ಸಿಗೆ ಕೊಡಬೇಕಾಗುತ್ತದೆ. ಅದರಲ್ಲಿ 9ವರೆ ಗಂಟೆ ಕೂಡ ಕೊಡುವುದಕ್ಕೆ ಸ್ಪೀಕರಿಗೆ ಅಧಿಕಾರವಿಲ್ಲ. ಆದ್ದರಿಂದ ಅವಕ್ಕೆ ಇರುವಂತಹ ಒಂದು ದಿವಸದ ಅವಕಾಶವನ್ನು ಈ ರೀತಿ ಹೇಳಿ ಮೊಟಕು ಮಾಡುವುದು ಸಮಂಜಸವಲ್ಲ. ಸರ್ಕಾರದವರು ನಾನ್ ಅಫಿಷಿಯಲ್ ಬಿಸಿನೆಸ್ ಬಗ್ಗೆ ಪ್ರೋತ್ಸಾಹ ಮಾಡಬೇಕು, ಹಾಗೆ ಮಾಡಿದರೆ ನಮ್ಮ ವಂದನೆಯನ್ನು ಇವರಿಗೆ ಇದಕ್ಕಿಂತ ಹೆಚ್ಚು ಸಲ್ಲಿಸಬಹುದು. ಮಾನ್ಯ ಹುಚ್ಚುಮಾಸ್ತಿ ಗೌಡರು ಯಾವುದೋ ಅವಸರದಲ್ಲಿ ಇದನ್ನು ಡಿಸ್ಕಸ್ ಮಾಡಿರಬಹುದು. ಈಗ ಒಂದು ಗಂಟೆಯನ್ನು ಉಪಯೋಗ ಮಾಡುತ್ತಾ ಉಳಿದ 9 ತಾಸನ್ನು ಮುಂದೆ ಉಪಯೋಗಿಸಿಕೊಳ್ಳೋಣ. ರೆವೆನ್ಯೂ ಡಿಮ್ಯಾಂಡನ್ನು ತೆಗೆದು

ಕೊಳ್ಳುವುದಕ್ಕೆ ಬರುವುದಿಲ್ಲ. ಮಾನ್ಯ ರೆವೆನ್ಯೂ ಮಂತ್ರಿಯವರು ತಾವು ಮಾಡಿರತಕ್ಕ ಸ್ಟೇಟ್‌ಮೆಂಟಿನ ಬಗ್ಗೆ ನಮಗಾಗಲಿ, ಜನತೆಗಾಗಲಿ, ಯಾವ ನಿಲುವೆಯನ್ನೂ ಕೊಟ್ಟಿಲ್ಲ. ಅವರು ಹಾಕಿರತಕ್ಕಂತಹ ಕರಭಾರವನ್ನು ನಿರ್ದಿಷ್ಟವಾಗಿ ಹೇಳಿಲ್ಲ. ಇವರು ಒಂದಕ್ಕೊಂದು ತದ್ವಿರುದ್ಧವಾಗಿ ಹೇಳುತ್ತಿದ್ದಾರೆ. ಇಂಥ ಒಬ್ಬ ಮಂತ್ರಿಯವರ ಸ್ಟೇಟ್‌ಮೆಂಟಿಗೆ ತಾಳಮೇಳಗಳು ಇಲ್ಲದಂತಾಗಿದೆ. ಸರ್ಕಾರದವರು ಯಾವ ರೀತಿಯಲ್ಲೂ ವಿಚಾರ ಮಾಡದೆ, ಇವತ್ತು ಡಿಮ್ಯಾಂಡ್ ಇಡುತ್ತೇವೆ, ಒಂದು ಗಂಟೆಯಲ್ಲಿ ಮಂಜೂರು ಮಾಡಿ, ನೀವು ಓಟು ಹಾಕಿ ಎಂದು ಹೇಳುವುದು ಸರಿಯಲ್ಲ. ಮಾನ್ಯ ಕೌಜಲಗಿಯವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ಇನ್ನೊಂದು ದಿವಸವನ್ನು ಇದಕ್ಕೆ ಮೀಸಲಾಗಿಟ್ಟುಕೊಳ್ಳಿ. ಇವತ್ತಿನ ದಿವಸವನ್ನು ನಾನ್ ಅಫಿಷಿಯಲ್ ಬಿಸಿನೆಸ್‌ಗೆ ಮೀಸಲಾಗಿಡಬೇಕು. ಹೋದ ಒಂದು ವಾರ ಮತ್ತು ಇವತ್ತಿನ ಒಂದು ವಾರ. ಇದು ಮಾಡಿದಿದ್ದರೆ, ಸರ್ಕಾರದ ತಪ್ಪಾಗುತ್ತದೆ, ಅದಕ್ಕೆ ಸ್ಪೀಕರ್ ಜವಾಬ್ದಾರರಲ್ಲ, ಮೆಂಬರ್ಸ್ ಜವಾಬ್ದಾರರಲ್ಲ. ಸದಸ್ಯರ ಹಕ್ಕಿಗೆ ಚ್ಯುತಿ ಬರದಂತಹ ಅವಕಾಶ ಕೊಡಬೇಕು. ಯಾವುದೇ ರೀತಿಯಲ್ಲಿ ಬದಲಾಯಿಸುವುದಾದರೂ, ನಾನ್ ಅಫೀಷಿಯಲ್ ಕಾರ್ಯಕಲಾಪಗಳಿಗೆ ಚ್ಯುತಿ ಬಾರದಂತೆ ಒಂದು ಬುದ್ಧಿವಂತಿಕೆಯಿಂದ ಮಾಡಬೇಕೆಂದು ವಿನಂತಿಮಾಡಿಕೊಳ್ಳುತ್ತೇನೆ.

4-30 P.M.

Sri H. M. CHANNABASAPPA.—On this point of order, the Hon. Minister for Parliamentary Affairs is a very clever lawyer. He knows how to win his case. Unfortunately, many of us are not lawyers. That is our deficiency. No doubt, the Speaker has ample powers to change the order of business and introduce Government business on a non-official day. But what is the spirit behind it? It is as one of the hon. Members referred as extraordinary occasions. The Constitution provides extraordinary powers to the Governor. Does the Governor exercise the power every day? It is only under extraordinary circumstances that he could intervene.

Sri K. PUTTASWAMY.—I readily concede that point. My contention was the House has decided it.

Sri H. M. CHANNABASAPPA.—Granting that, the Speaker is the custodian of the privileges of the members of this House and the time for non-official business has got to be safeguarded very scrupulously by the Hon. Speaker because non-officials are always at a disadvantage. Therefore it would not be in the fitness of things to encroach upon the non-official business on the plea that the Government business should immediately have priority. I should have no objection for Government business to have adequate time. It is for the Government to sit and adjust its own requirements and provide as much time as may be necessary for Government business. While deciding what time is required for Government business and what time is required for non-official business, adequate time might be provided for unforeseen contingencies that might arise during the deliberations of this House. I for one think that there is not such extraordinary situation arisen in order to force the Government business on a non-official day. In the absence of such a contingency, it would not be fair for the Speaker to curtail the privileges of non-officials and curtail non-official time for non-official business.

ಶ್ರೀ ಕೆ. ಎಚ್. ಶ್ರೀನಿವಾಸ್ (ಸಾಗರ).—ಸ್ವಾಮಿ ಇಷ್ಟು ಹೊತ್ತಿನ ಚರ್ಚೆಯಲ್ಲಿ ಒಟ್ಟು 3 ಪ್ರಶ್ನೆಗಳು ಉದ್ಭವವಾಗಿವೆ. ಒಂದು ರೆವಿನ್ಯೂ ಡಿಮ್ಯಾಂಡನ್ನು ಈ ದಿವಸ ಸಭೆಯ ಮುಂದೆ ಇಟ್ಟಿದ್ದಾರೆ ! ಒಂದು ಲ್ಯಾಂಡ್ ರೆವಿನ್ಯೂ ವಿಷಯದಲ್ಲಿ ಹಲವಾರು ವಿಷಯಗಳು ಪ್ರಸ್ತಾಪವಾಗಿದ್ದು ಒಂದು. ನಾನ್ ಅಫಿಷಿಯಲ್ ಬಿಲ್ಲೂ ಕೂಡ ಸಭೆಯ ಮುಂದೆ ಬಂದಿತ್ತು ಸರ್ಕಾರದವತಿಯಿಂದ ಹಿಂದೆ ಈ ಬಗ್ಗೆ ಕೆಲವೊಂದು ಭರವಸೆಯನ್ನು ಕೊಟ್ಟಿದ್ದಾರೆ. ಅದು ಏನಾಯಿತು ಎಂಬುದು ಇದುವರೆಗೂ ಗೊತ್ತಾಗಲಿಲ್ಲ. ಅದನ್ನು ಕ್ಲಾರಿಫೈ ಮಾಡದ ಹೊರತು ಈ ಡಿಮ್ಯಾಂಡ್ ಇಡಕೂಡದು ಎಂದು ಆಕ್ಷೇಪಣೆ ಇದೆ. ನ್ಯಾಯವಾಗಿ ರೂಲ್ಸ್ ಆಫ್ ಪ್ರೊಸೀಜರ್ ಪ್ರಕಾರ ಈ ಆಕ್ಷೇಪಣೆ ಸರಿಹೋಗದೇ ಇದ್ದರೂ ಕೂಡ ಈ ಆಕ್ಷೇಪಣೆಯಲ್ಲಿ ಕೆಲವು ಮೆರಿಟ್ಸ್ ಇವೆ. ಆದ್ದರಿಂದ ಅವುಗಳನ್ನು ಗಮನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಲ್ಯಾಂಡ್ ರೆವಿನ್ಯೂ ಬಗ್ಗೆ ಏನು ನಡೆದಿದೆ ಎಂಬುದು ಈ ಸಭೆಗೆ ಗೊತ್ತಿದೆ. ಸರ್ಕಾರದವತಿಯಿಂದ ಕೆಲವು ಭರವಸೆಗಳನ್ನು ಕೊಟ್ಟಿದ್ದಾರೆ. ಆ ಭರವಸೆಗಳ ಬಗ್ಗೆ ಸ್ಪಷ್ಟವಾದ ಅಭಿಪ್ರಾಯಗಳನ್ನು ತಿಳಿಸಿದರೆ ಚರ್ಚೆಗೆ ಅನುಕೂಲವಾಗುತ್ತದೆ ಎನ್ನುವುದರಲ್ಲಿ ಸಾಕಷ್ಟು ಮೆರಿಟ್ ಇದೆ, ಇದು ಒಂದು ವಿಷಯ. ರೆವಿನ್ಯೂ ಮಂತ್ರಿಗಳು ಸ್ಟೇಟ್‌ಮೆಂಟ್ ಮಾಡಬೇಕು ಅದರಿಂದ ತೃಪ್ತಿಯನ್ನು ಪಡೆದುಕೊಂಡು ಡಿಮ್ಯಾಂಡ್ ತೆಗೆದುಕೊಳ್ಳಬೇಕು ಎನ್ನುವುದು ಎರಡನೇ ವಿಚಾರ. ಈಗ ಇನ್ನೊಂದು ಪ್ರಶ್ನೆ ಏನೆಂದರೆ ನಾನ್ ಅಫಿಷಿಯಲ್ ಬಿಜಿನೆಸ್ಸಿಗೆ ಸಮಯ ಕೊಟ್ಟಿದ್ದೀರಿ, ಆ ಸಮಯ ಈಗ ಹತ್ತಿರಕ್ಕೆ ಬಂದಿದೆ; ಅದನ್ನು ತೆಗೆದುಕೊಳ್ಳಬೇಕು ರೆವಿನ್ಯೂ ಡಿಮ್ಯಾಂಡ್ ತೆಗೆದುಕೊಳ್ಳಬಾರದು ಎನ್ನುವುದು ಇದೆ. ಇದರ ಬಗ್ಗೆ ಮಾನ್ಯ ಪಾರ್ಲಿಮೆಂಟರಿ ಖಾತಾ ಸಚಿವರು ಒಂದು ಮಾತನ್ನು ಹೇಳಿದರು, ಈ ಸಭೆಯ ಬಿಜನೆಸ್ ಅನ್ನು ನಿನ್ನೆ ಸಾಯಂಕಾಲ ಪುನರ್ ವಿಮರ್ಶೆ ಮಾಡಿದ್ದೇವೆ ಎಂದು. ನಾನು ಸ್ವಲ್ಪ ಇದರ ಬಗ್ಗೆ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುವುದಾದರೆ ನಿನ್ನೆ ಸಂಜೆ ಏನು ಸಮಯ ಕಡಿಮೆ ಬಿತ್ತು ಅದನ್ನು ಇವೊತ್ತು ಬೆಳಿಗ್ಗೆ ತುಂಬಿಕೊಂಡು ಪಬ್ಲಿಕ್ ವರ್ಕ್ಸ್ ಡಿಮ್ಯಾಂಡನ್ನು ಮುಗಿಸಬೇಕು ಎಂದು, ಅಷ್ಟು ಮಾತ್ರಕ್ಕೆ ಒಂದು ನಿರ್ಧಾರಕ್ಕೆ ಬಂದಿದ್ದೇವೆಯೇ ಹೊರತು ಮುಖ್ಯ ಕಾರ್ಯಕಲಾಪಗಳ ಬಗ್ಗೆ ಯಾವುದೇ ರೀತಿಯ ನಿರ್ಧಾರಕ್ಕೆ ಬಂದಿದ್ದೇವೆ ಎಂದು ತಿಳಿದುಕೊಳ್ಳಬೇಕಾದ ಅವಶ್ಯಕತೆ ಕಂಡುಬರುವುದಿಲ್ಲ. ಇವೊತ್ತು ಇರುವ ಪ್ರಶ್ನೆ ನಾನ್ ಅಫಿಷಿಯಲ್ ಬಿಜಿನೆಸ್ ತೆಗೆದುಕೊಳ್ಳಬೇಕು, ಅದಕ್ಕೆ 2½ ತಾಸು ಇರತಕ್ಕದ್ದು ಎಂದು ಗೊತ್ತುಮಾಡಿದೆ. ಇನ್ನೊಂದು ಕಡೆ ಮೆನ್‌ಷನ್ ಆಗಿರುವುದು ಕೃಷ್ಣಾ ಗೋದಾವರಿ ನೀರಿನ ಬಗ್ಗೆ ಪ್ರಸ್ತಾಪ ಶ್ರೀಮಾನ್ ಎಚ್. ಎನ್. ನಂಜೇಗೌಡರಿಗೆ ಸಂಬಂಧಪಟ್ಟದ್ದು. ಡಿಮ್ಯಾಂಡುಗಳನ್ನು ನಾನ್ ಅಫಿಷಿಯಲ್ ಬಿಜಿನೆಸ್ಸಿನ ಮಧ್ಯದಲ್ಲಿ ಸೇರಿಸಿದ್ದಾರೆ. ಆದ್ದರಿಂದ ಈ ಪ್ರಸ್ತಾಪ ತೆಗೆದುಕೊಳ್ಳಬೇಕೇ, ಖಾಸಗೀ ಸದಸ್ಯರ ವಿಧೇಯಕಗಳನ್ನು ತೆಗೆದುಕೊಳ್ಳಬೇಕೇ, ರೆವಿನ್ಯೂ ಡಿಮ್ಯಾಂಡುಗಳನ್ನು ರೆವಿನ್ಯೂ ಮಂತ್ರಿಗಳ ಹೇಳಿಕೆಯನ್ನು ಪಡೆದು ಅನಂತರ ತೆಗೆದುಕೊಳ್ಳಬೇಕೇ, ಎಂಬ 3 ಪ್ರಶ್ನೆಗಳ ಬಗೆ 3 ತರಹ ಅಭಿಪ್ರಾಯ ಮಾನ್ಯ ವಿರೋಧ ಪಕ್ಷದ ಸದಸ್ಯರಲ್ಲಿ ವ್ಯಕ್ತಪಟ್ಟಿದೆ. ಇದರ ಪೈಕಿ ಯಾವುದು ಒಂದು ಆದರೂ ಕೂಡ ನಮ್ಮ ಅಬ್ಜೆಕ್ಷನ್ ಇಲ್ಲ. ನಾವು ಒಮ್ಮತಕ್ಕೆ ಬಂದಿದ್ದೇವೆ. ನಾನ್ ಅಫಿಷಿಯಲ್ ಬಿಜಿನೆಸ್ ತಕ್ಷಣ ತೆಗೆದುಕೊಂಡು ಚರ್ಚೆ ಮಾಡಬೇಕೆಂದು ಹೇಳೋಣವೇ, ಅಥವಾ ರೆವಿನ್ಯೂ ಮಂತ್ರಿಗಳು ಹೇಳಿಕೆಯನ್ನು ಕೊಡಿ ಎಂದು ಹೇಳೋಣವೇ ಎಂಬುದನ್ನು ಈ ಸಭೆ ನಿರ್ಧರಿಸಬೇಕು. ಇಲ್ಲಿ ಅಧ್ಯಕ್ಷರು ಇದನ್ನು ನಿರ್ಧರಿಸಿದರೆ 3 ರಲ್ಲಿ ಯಾವುದಾದರೂ ಒಂದು ಕಾರ್ಯಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಎಂದು ನಾನು ತಮ್ಮಲ್ಲಿ ವಿನಂತಿಸಿಕೊಳ್ಳುವುದಕ್ಕೆ ಬಯಸುತ್ತೇನೆ.

Mr. SPEAKER.—I have very carefully heard the hon. Members on the various points raised and I can tell them straightaway that whatever has been done, whatever agenda for to days sitting is presented to this House. House is done with the knowledge of both the sides and as a result of agreement between them and I have not gone further than that.

The hon. Member Sri Nagappa has expressed the view that the House is supreme and the rules have to be obeyed. There is no doubt about it. I think it is not out of place to say that when the whips of both sides come together and decide that the course of business should run in a particular manner, the Chair as Speaker of the House thought that the Leaders are speaking on behalf of their followers and therefore

accepted that decision. There is no point in blaming the Chair at all If at all, I might have committed the mistake of accepting the agreement between both sides. I request the whip of the Ruling Party and the Whip of the Opposition Party to come to an understanding and inform the Chair so that the Chair can function effectively and carry out the various items of agreement. Otherwise I have to place the matter before the House every time and have it decided.

Now as regards the allotment of time for non-official business, hon. Members might know that a Committee was appointed by this House for the purpose of revising the rules and the draft rules are circulated to the hon. Members. Even before those rules are passed by this House, requests have been made by various members on both the sides to implement some of those revised rules. For instance, hon. Members know, we have been working six days in a week including Saturday but the draft rules provide for working only for 5 days and Saturday should be taken as a holiday. There was concensus of opinion that this draft rule should be given effect to and to compensate for holiday on Saturday, the House should sit in the remaining five days one hour extra.

I have been acting upon this understanding from the commencement of the present Session. We have been sitting from 1 P.M. to 7 P.M. and that is in accordance with the consensus arrived at between the parties in this House. Two days in a fortnight are given to the Private Members Business. But according to the draft rules, only Two and half hours on every Friday is allotted for non-official business that is being acted upon. So in respect of these timings a sort of an understanding is being enforced. According to this understanding, the time allotted for the private members business is 2½ hours on every Friday and that is provided for here. If the members do not want it the House will have to revert to the old practice and hold its sittings on Saturdays also. Therefore, let it not be understood that the Chair is responsible for these things. The chair has acted upon the decision of the House. There is no point in saying that the Chair has acted wrongly.

Next point is about a reference made to the Business Advisory Committee Report on Private Members Business. The time allotted is six hours. I think, it may be seen that even on normal days when we sit for six hours, one hour goes to question and answers and five hours for business on the Agenda. I think it stands to reason. Sri Nagappa suggested that business could be taken as per agenda and the time allotted should be strictly adhered to, as per the decision of the Business Advisory Committee. Of course that was what was being done all along. It was only on the basis of understanding between the Leaders of the Parties, that time was allotted for the private Members' Business and the Government business, and only 2½ hours on Friday are allotted for the Private Members Business and the remaining time for the Government Business. The Whips of both the sides have been

(MR. SPEAKER)

consulted for drawing up the programme and they have accepted it. There is no point in saying that the Business Advisory Committee has allotted most of the time or half of the time for the Government business. I am here to implement the decision of the Committee and also the decision arrived at by both the Whips. The decision has been taken after consulting sections and not groups.

Seats have also been allotted in the House after consulting the Whips. The seats have been allotted to the best satisfaction of all the hon. Members and this arrangement has been found to be very satisfactory. I do not want the leaders of the parties to misunderstand the Chair. A Leader talks not only for himself but also for his entire party. A whip also does not talk for himself but on behalf of the entire party. I am always acting on the advice of the Leaders of the parties, the Whips and the Business Advisory Committee. If the hon. Members want me to make a departure from it I have no objection. It is for them to say so.

There is another point about the motion moved by hon. Member Sri Nanje Gowda. When the Leader of the House asked me why this motion was admitted, I told him that I have admitted it in view of its importance. I am told by the Leader of the House and the Leader of the Opposition that this motion should be taken up to-day and it may be considered for 2½ hours and the time consumed out of private members business for this motion should be compensated in the first week of April. I am only implementing the suggestion made by both the sides. If the hon. Members do not want it, I will put it before the House for its consideration. I feel that the time allotted for the Government demands like Revenue etc., is over. So the demands will be taken up on some other day. If the Hon. Minister wants to make a statement, let him do so on these demands. I will decide the whole question in consulation with both the sides. I will place before them all the things that have been agreed upon and know their mind as to what to do with the non-official business and other things. Then I shall put the matter before the house and I shall take its opinion.

ಶ್ರೀ ಎಸ್. ಶಿವಪ್ಪ.—ಮಾನ್ಯ ಸಭಾಪತಿಗಳೇ, ಯಾವ ರೀತಿ ಕಾಲವನ್ನು ಅಳವಡಿಸಿಕೊಳ್ಳಲಾಗಿದೆ ಎಂಬ ಬಗ್ಗೆ ಇದುವರೆಗೆ ತಾವು ಹೇಳಿರುವುದು ಸತ್ಯಾಂಶದಿಂದ ಕೂಡಿದೆ. ಇದುವರೆಗೆ ನಾನ್ ಅಫಿಷಿಯಲ್ ಬಿಜಿನೆಸ್ ಶನಿವಾರ ಎಂಟೂವರೆಯಿಂದ ಹನ್ನೆರಡುವರೆಯುವರೆಗೆ ನಡೆಯುತ್ತಿತ್ತು. ಆದರೆ ಇತ್ತೀಚಿನ ನಿಯಮಗಳ ಪ್ರಕಾರ ಪ್ರತಿದಿವಸ ಒಂದು ಗಂಟೆ ಹೆಚ್ಚು ಕಾಲ ಸಭೆ ನಡೆಸಿ ವಾರಕ್ಕೆ 5 ದಿವಸ ನಡೆಸಬೇಕೆಂದು ತೀರ್ಮಾನವಾಗಿದೆ. ಲೋಕ ಸಭೆಯಲ್ಲಿ ಇರುವ ರೀತ್ಯ ಶುಕ್ರವಾರ ಎರಡೂವರೆಗಂಟೆ ನಾನ್ ಅಫಿಷಿಯಲ್ ಬಿಜಿನೆಸ್ ನಡೆಸಬೇಕೆಂಬ ಕಡ್ಡಾಯವನ್ನು ನಾವು ಒಪ್ಪಿಕೊಂಡಿದ್ದೇವೆ.

ಸರಕಾರದ ಕಾರ್ಯಕಲಾಪಗಳನ್ನು ಶುಕ್ರವಾರ ಬಂದಾಗ ಸ್ವಲ್ಪ ಕಾಲ ಮಾಡಿ ಆ ನಂತರ ಎರಡೂವರೆ ಗಂಟೆಗಳ ಕಾಲ ಖಾಸಗಿ ಕೆಲಸಕಾರ್ಯಗಳಿಗೆ ಕೊಡಬೇಕೆಂದು ಬಿಸಿನೆಸ್ ಅಡ್ವೈಜರಿ ಕಮಿಟಿಯಲ್ಲಿ ಆದ ತೀರ್ಮಾನದಂತೆ ಇದೆ. ಇದನ್ನು ತಾವು ಹೇಗೆ ಮಾಡಬೇಕು ಎನ್ನುವುದು ತಮಗೆ ಬಿಟ್ಟದ್ದು. ಇವೊತ್ತು ರೆವೆನ್ಯೂ ಡಿಮ್ಯಾಂಡುಗಳು ಬರಲು ಆಗದೆ ಇರಲು ಅನೇಕ ವಿಶೇಷ ಕಾರಣ

ಗಳು ಬಂದು ಅಡಚಣೆಯುಂಟಾಗಿದೆ ಎನ್ನುವುದು ತಮಗೂ ಸಹ ತಿಳಿದಿದೆ. ಆದುದರಿಂದ ಇನ್ನು ಈಗ ರೆವೆನ್ಯೂ ಡಿಮ್ಯಾಂಡುಗಳನ್ನು ತೆಗೆದುಕೊಳ್ಳಲು ಸಾಧ್ಯವಾಗುವುದಿಲ್ಲ. ಉಳಿಕೆಯ ಕಾಲವನ್ನು ನಾನ್ ಅಫಿಷಿಯಲ್ ಬಿಸಿನೆಸ್‌ಗೆ ಕೊಡಬಹುದು. ಇದಕ್ಕೆ ಮುಂಚೆ ಶ್ರೀಮಾನ್ ನಂಜೇಗೌಡರು ಬಹಳ ಪ್ರಾಮುಖ್ಯವಾದ ವಿಚಾರವನ್ನು ಎಂದರೆ ಕಂದಾಯದ ನೀತಿ ವಿಚಾರವಾಗಿ ಎತ್ತಿದ್ದರು. ಇದಕ್ಕೆ ಕಾರಣ ರೆವೆನ್ಯೂ ಮಂತ್ರಿಗಳು ಕೊಟ್ಟಿರುವ ಹೇಳಿಕೆಗಳು ಕಂದಾಯದ ನೀತಿ ಬಗ್ಗೆ ಸ್ಪಷ್ಟವಾದ ನಿಲುವು ಏನು ಎನ್ನುವುದನ್ನು ತಿಳಿಯಲು ಇವೆಲ್ಲ ವಿಚಾರಗಳು ಬಂದವು. ಇದರ ಕಾಲವನ್ನು ತುಂಬಿಕೊಳ್ಳಲು ಮುಂದೆ ತಾವು ಹೇಗೆ ಮಾಡಬೇಕು ಎನ್ನುವುದು ತಮಗೆ ಸೇರಿದ್ದು. ತಾವೇ ಹೇಳಿದಂತೆ ಸೋಮವಾರ ರೆವೆನ್ಯೂ ಡಿಮ್ಯಾಂಡುಗಳು ಬರುವಂತಿಲ್ಲ. ಬೇರೆ ಡಿಮ್ಯಾಂಡುಗಳು ಬರಬಹುದು. ಈಗ ನಮ್ಮ ಮುಂದಿರುವ ನಿರ್ಣಯವನ್ನು ತೆಗೆದುಕೊಳ್ಳಬಹುದು. ಮುಂದೆ ರೆವೆನ್ಯೂ ಮಂತ್ರಿಗಳು ಸ್ಪಷ್ಟವಾದ ನಿಲುವು ಕಂದಾಯದ ಬಗ್ಗೆ ಕೊಡಬೇಕು ಎಂದು ಪ್ರಾರ್ಥನೆ ಮಾಡಿ ಈಗ ನಾನ್ ಅಫಿಷಿಯಲ್ ಬಿಸಿನೆಸ್‌ಗೆ ಹೋಗಬಹುದು.

Mr. SPEAKER.—Now the suggestion is made by the Hon. Leader of the Opposition that the motion of Sri Nanje Gowda regarding Krishna-Godavari waters may be taken up in lieu of the non-official business. May I know the view of the Minister for Parliamentary Affairs ?

Sri K. PUTTASWAMY.—If that is the understanding, I have no objection.

Mr. SPEAKER.—Now I want to ascertain the view of the House. The hon. leader of the opposition suggests that in preference to non-official business, the motion tabled by Sri Nanje Gowda may be taken up for discussion. The time required for this will be given out of the time allotted for Government business. Whatever time is taken away for this motion will be made good in the first week of April.

Sri K. H. PATIL.—Sir, when the Hon. Leader of the Opposition and the Hon. Minister for Parliamentary Affairs have come to an agreement, I do not want to express any divergent view on this. The only suggestion that I make is that there are two Bills which have to be introduced. Their introduction may not take more than one or two minutes. If it appeals to the Speaker, that may be permitted and then we can take up the discussion of this motion.

Sri B. P. GANGADHAR.—Today happens to be non-official day. There was already some subject under discussion and unless that resolution is disposed of how can we take another resolution ? can we take up two resolutions simultaneously ? Will this not lead to some complication ? I want some clarification from the Chair.

Sri S. SIVAPPA.—Probably my friend is under an apprehension that the non-official resolution will lapse if this motion is taken up.

Mr. SPEAKER.—I have already made it clear that this motion of Mr. Nanje Gowda will be given time out of the Government quota. The non-official resolution which is still to be discussed will be taken up next time. Whatever time that is lost for non-official business, will be compensated some time in the first week of April. Sri Nanje Gowda will now move his resolution.

Sri H. N. NANJE GOWDA.—Sir, as suggested by my friend Sri K. H. Patil, if you permit, the two bills will be introduced in one or two minutes and then we can start discussion on this motion.

Mr. SPEAKER.—We do not know, if we take up the introduction of those Bills, there may be some difficulty and the motion of Mr. Nanje Gowda may remain whether it is. I am anxious that Mr. Nanje Gowda's motion should be discussed. Let it be taken up and finished within one or one hour and a half, say by 6-30 P.M. to day. Then at 6-30 P. M. we can take up the introduction of the Bills.

The second point is, one hour and a half that is allotted for this motion may be suitably apportioned between the two sides. The Minister has to reply within that time. May I know what time the Government requires?

Sri K. PUTTASWAMY.—If the time allotted for this discussion is one hour and a half, this side requires 45 minutes including reply.

Mr. SPEAKER.—On that basis let the debate proceed Sri Nanje Gowda may move his motion :

Motion to Consider the Appointment of the Tribunals to resolve the Krishna-Godavari Water Disputes

Sri H. N. NANJE GOWDA.—Sir, I beg to move :

"That the situation arising out of the recent controversy over the appointment of one or more Tribunals to resolve the dispute of Krishna Godavari waters be taken into consideration.

Mr. SPEAKER.—Motion moved :

"That the situation arising out of the recent controversy over the appointment of one or more Tribunals to resolve the dispute of Krishna-Godavary waters be taken into consideration".

5-00 P.M.

† ಶ್ರೀ ಹೆಚ್. ಎನ್. ನಂಜೇಗೌಡ.—ಮಾನ್ಯ ಸಭಾಧ್ಯಕ್ಷರೇ, ಕೃಷ್ಣಾ ಗೋದಾವರಿ ನದಿಗಳ ನೀರಿನ ವಿವಾದವನ್ನು ಬಗೆಹರಿಸಲು, ಒಂದು ಅಥವಾ ಎರಡು ಟ್ರಿಬ್ಯೂನಲ್ ನೇಮಕ ಮಾಡಬೇಕೇ ಎಂಬುದರ ಬಗ್ಗೆ ಚರ್ಚಿಸುವುದಕ್ಕಾಗಿ ಈವೊತ್ತು ಮೈಸೂರು ರಾಜ್ಯದ ಜನತೆಯು ಹಾಗೂ ಈ ಸಭೆಯ ಸದಸ್ಯರ ಮನಸ್ಸು ಕಲುಕಿದೆ ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳಲು ಇಚ್ಛೆಪಡುತ್ತೇನೆ.

(MR CHAIRMAN SRI G. RAMEGOWDA in the Chair)

ಮೊಟ್ಟಮೊದಲು ಅದರ ಹಿನ್ನೆಲೆ ಏನು ಎನ್ನುವುದನ್ನು ಅರ್ಥ ಮಾಡಿಕೊಳ್ಳಬೇಕಾದ್ದು ಅವಶ್ಯಕ. ಇದರಲ್ಲಿ ಕಾನೂನಿನ ಹಿನ್ನೆಲೆ ಅಥವಾ ತಾಂತ್ರಿಕ ಹಿನ್ನೆಲೆ ಅತಿಯಾಗಿ ಬೆಳೆದು ಬಂದಿದ್ದರಿಂದ ಈ ಸಮಸ್ಯೆ ಈವೊತ್ತು ಇಷ್ಟರಮಟ್ಟಿಗೆ ಬಿಗಡಾಯಿಸಿದೆ ಎನ್ನುವುದನ್ನು ಗತ್ಯಂತರವಿಲ್ಲದೆ ಹೇಳಬೇಕಾಗಿದೆ. ಇದರ ರಾಜಕೀಯದ ಹಿನ್ನೆಲೆ ಏನು, ಕಾನೂನಿನ ಹಿನ್ನೆಲೆ ಏನು ಎಂದು ಕೇಳಬೇಕಾದರೆ ಕೃಷ್ಣಾ ನದಿ ಬೇಸಿನ್ನೇ ಬೇರೆ, ಗೋದಾವರಿ ಬೇಸಿನ್ನೇ ಬೇರೆ. ಅದರ ಪ್ರಕಾರ ಈ ಬೇಸಿನ್ ನೀರು ಉಪಯೋಗಿಸಿಕೊಳ್ಳುವಾಗ ಕೃಷ್ಣಾನದಿ ಬೇಸಿನ್ ನೀರನ್ನು ಕೃಷ್ಣಾ ಬೇಸಿನ್‌ಗೇ ಉಪಯೋಗಿಸಿಕೊಂಡಿದ್ದರೆ, ಗೋದಾವರಿ ಬೇಸಿನ್ ನೀರನ್ನು ಗೋದಾವರಿ ಬೇಸಿನ್‌ಗೆ ಉಪ

ಯೋಗಿಸಿಕೊಂಡಿದ್ದರೆ ಬಹುಶಃ ಈ ರಾಜ್ಯ ಸರ್ಕಾರಕ್ಕೆ ಯಾವ ಅಬ್ಜಕ್ಷನ್ ಕೂಡ ಇರುತ್ತಾ ಇರಲಿಲ್ಲ. ಇದು ಕಾನೂನಿನ ಹಿನ್ನಲೆಗೆ ಒಳಪಟ್ಟಿರುವ ಅಂಶ. ಆದರೆ ಅದು ಈಗ ತದ್ವಿರುದ್ಧವಾಗಿ ವ್ಯವಹಾರ ಮಾಡುವ ರೂಪಕ್ಕೆ ಬಂದುವು. ಇದರಿಂದ ಕೃಷ್ಣಾ-ಗೋದಾವರಿ ಸಮಸ್ಯೆ ಒಗಟಾಗಲು ಕಾರಣವಾಯಿತು.

ಆಂಧ್ರದವರು ಕೃಷ್ಣಾ ನದಿ ನೀರನ್ನು ಕೃಷ್ಣಾ ಬಯಲಿಗೆ ಬಳಸದೆ ಸುಮಾರು 20 ಲಕ್ಷ ಎಕರೆಗೆ ನೀರನ್ನು ಗೋದಾವರಿ ಹಾಗೂ ಪೆನ್ನಾರ್ ಮೊದಲಾದ ಕೃಷ್ಣಾಬಯಲಿನ ಹೊರಗೆ ಬಳಸಿದ್ದರಿಂದ ಈ ಸಮಸ್ಯೆ ಉದ್ಭವವಾಯಿತು. ಕೃಷ್ಣಾ ನದಿ ನೀರನ್ನು ಪೆನ್ನಾರ್ ನದಿಗೆ ತೆಗೆದುಕೊಂಡು ಗೋದಾವರಿ ಬೇಸಿನ್‌ಗೆ ಉಪಯೋಗಿಸಿದ್ದುದರಿಂದ ಇದು ಒಗಟಾಗಲು ಕಾರಣವಾಯಿತು ಎನ್ನುವುದನ್ನು ಅರ್ಥ ಮಾಡಿಕೊಳ್ಳಬೇಕು.

ಕೃಷ್ಣಾ-ಗೋದಾವರಿ ನೀರಿನ ಸಮಸ್ಯೆ ಬಗ್ಗೆ ಒಂದೇ ಟ್ರಿಬ್ಯುನಲ್ ಏಕೆ ಆಗಬೇಕೆಂದು ಕೆಲವರಿಗೆ ಇದೆ. ಅದನ್ನು ನಾವು ಖಚಿತವಾಗಿ ಅರ್ಥ ಮಾಡಿಕೊಳ್ಳಬೇಕು. ಆಂಧ್ರದವರು ಕೃಷ್ಣಾನದಿ ನೀರನ್ನು ಗೋದಾವರಿ ಮತ್ತು ಪೆನ್ನಾರ್ ನದಿಗೆ ಉಪಯೋಗಿಸಿಕೊಂಡು ಬಂದಿದ್ದಾರೆ. ಕೃಷ್ಣಾ ನದಿಯಲ್ಲಿ ಉಪಯೋಗಿಸಿಕೊಂಡಿರುವ ನೀರನ್ನು ನಾವು ಕೇಳಬೇಕಾಗಿದೆ. ಗೋದಾವರಿ ನೀರನ್ನು ಉಪಯೋಗಿಸಿಕೊಂಡಿದ್ದರೆ ನಮ್ಮ ಸರ್ಕಾರದ ಹಕ್ಕು ಸೊನ್ನೆ. ಆವೊತ್ತು ನಮ್ಮ ಜಗಳ ಇರುತ್ತಾ ಇರಲಿಲ್ಲ. ಇನ್ನು ಇದಕ್ಕೆ ಬೇರೆ ಬೇರೆ ಟ್ರಿಬ್ಯೂನಲ್ ಮಾಡಿದರೂ ಕೂಡ, ಕೇಂದ್ರ ಸರ್ಕಾರವೇ ಆಗಲಿ ಯಾರೇ ಪ್ರಯತ್ನ ಮಾಡಿದರೂ ಸಹ ಆಂಧ್ರದವರು ಕೃಷ್ಣಾನದಿ ನೀರನ್ನು ಉಪಯೋಗಿಸುತ್ತಿರುವುದರಿಂದ ಆಂಧ್ರವು ಗೋದಾವರಿ ನೀರನ್ನು ಕೃಷ್ಣಾ ನದಿಗೆ ತಿರುಗಿಸಬೇಕೆಂಬುದೇ ರಾಜ್ಯದ ಜನತೆಯ ಬೇಡಿಕೆ. ಇದೇ ಸಂಬಂಧದಲ್ಲಿ ಗುಲ್ಹಾಟಿ ಕಮೀಷನ್‌ನವರನ್ನು ಕೇಂದ್ರ ಸರ್ಕಾರದವರು ಆಮಂತ್ರಿಸಿದರು. ಯಾವ ಆಧಾರದ ಮೇಲೆ ಈ ಕಮೀಷನ್ ನೇಮಿಸಿದ್ದಾರೆ ಎಂದರೆ 1959ನೇ ಇಸವಿಯಲ್ಲೂ ಈ ಪ್ರಶ್ನೆ ಬಂದಾಗ ಕಾನೂನು ಮೀರಿ ನೇಮಿಸಿದರು. ಅದೇ ರೀತಿ ಕಾನೂನಿನ ಚೌಕಟ್ಟಿನೊಳಗೆ ಹೇಳುವುದಾದರೆ 196.ನೇ ಇಸವಿಯಲ್ಲಿ ಒಂದು ಸ್ಟೇಟ್‌ಮೆಂಟನ್ನು ಕೇಂದ್ರ ಸರ್ಕಾರದ ನೀರಾವರಿ ಮಂತ್ರಿಗಳು ಕೊಟ್ಟರು. ಸರಿಯಾದ ನೀರಿನ ಅಲೋಕೇಷನ್ ಆಗಲಿಲ್ಲ. ಕಾನೂನು ಪರಿಮಿತಿಯೊಳಗೆ ಕೇಂದ್ರ ಸರ್ಕಾರ ವ್ಯವಹರಿಸಲಿಲ್ಲ. ಕಾನೂನು ನಿರರ್ಥಕವಾಗಿದೆ. ಮುಂದೆ ಏನಾಗುತ್ತದೋ ಗೊತ್ತಿಲ್ಲ. ಮತ್ತೆ ನದಿ ನೀರಿನ ಸಮಸ್ಯೆ ಮೂರು ರಾಜ್ಯಕ್ಕೂ ಕೂಡ ಒಳಪಟ್ಟಿದೆ. ಮಹಾರಾಷ್ಟ್ರ, ಮೈಸೂರು, ಆಂಧ್ರ ಈ ಮೂರು ರಾಜ್ಯಗಳಲ್ಲೂ ಮತ್ತು ಕೇಂದ್ರ ಸರ್ಕಾರದಲ್ಲೂ ಒಂದೇ ಪಕ್ಷದ ಆಡಳಿತ ಇದ್ದುದರಿಂದ ಅವರ ಒಂದು ದಕ್ಷತೆಯನ್ನು ತೋರಿಸಿ, ತಮ್ಮ ಅಧಿಕಾರವನ್ನು ಉಪಯೋಗಿಸಿಕೊಂಡು 1963ನೇ ಇಸವಿಯಲ್ಲಿ ಒಂದು ಸ್ಟೇಟ್‌ಮೆಂಟ್ ಕೊಟ್ಟರು. ಕೇಂದ್ರ ಸರ್ಕಾರ ಆಂಧ್ರಕ್ಕೆ ಅನುಕೂಲ ಮಾಡಿಕೊಡುವುದಕ್ಕಾಗಿ ಗುಲ್ಹಾಟಿ ಕಮೀಷನ್ನನ್ನು ಕಾನೂನು ಮೀರಿ ರಚಿಸಿದರು. ಮೂರು ರಾಜ್ಯದಲ್ಲೂ ಕೂಡ ಕಾಂಗ್ರೆಸ್ ಆಡಳಿತ ಇತ್ತು. ಆವೊತ್ತು ವಿರೋಧ ಪಕ್ಷದ ಆಡಳಿತ ಇದ್ದಿದ್ದರೆ ಅವರು ಕಾನೂನನ್ನು ಮೀರುತ್ತಾ ಇರಲಿಲ್ಲ. ಆ ಕಮಿಷನ್ನು ಮಾಡಿರುವುದು ತಪ್ಪು ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಒಂದು ದೃಷ್ಟಿಕೋಣದಿಂದ ಮುಂದುವರಿದು ಈ ರಾಜಕೀಯದ ಬೆಳವಣಿಗೆಯಿಂದ ನಮ್ಮ ರಾಜ್ಯಕ್ಕೆ ತೊಂದರೆ ಏನಾಯಿತು ಎಂದರೆ ನಮ್ಮ ರಾಜ್ಯವನ್ನು ಕಡೆಗಣಿಸಿ ನಮಗೆ ದೊರಕಬೇಕಾದ ಅನುಕೂಲತೆಗಳನ್ನು ತಪ್ಪಿಸಿ ಇದರ ಬಗ್ಗೆ ಕೇಂದ್ರ ಸರ್ಕಾರದವರು ಡಿಲೇ ಟ್ಯಾಕ್ಟಿಕ್ಸನ್ನು ಬೆಳೆಸಿಕೊಂಡು ಬರುವುದಕ್ಕೆ ಅವಕಾಶವಾಯಿತು. 1963ನೇ ಇಸವಿಯಲ್ಲಿ ಒಂದು ಸ್ಟೇಟ್‌ಮೆಂಟ್ ಕೊಟ್ಟು 3 ರಾಜ್ಯಗಳ ಮೇಲೂ ತಮ್ಮ ನಿರ್ಣಯವನ್ನು ಹೇರತಕ್ಕಂಥ ಒಂದು ಪ್ರಯತ್ನ ಮಾಡಿದರು. ಇದರಲ್ಲಿ ಒಂದು ಅಂಶ ಮಾತ್ರ ನೆನಪಿನಲ್ಲಿಟ್ಟುಕೊಳ್ಳಬೇಕೆಂದು ಮಾನ್ಯ ಸದಸ್ಯರಿಗೆ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಕಾನೂನು ಮೀರಿ ಗುಲ್ಹಾಟಿ ಕಮೀಷನ್ನನ್ನು ನೇಮಿಸಿದ್ದರೂ ಕೂಡ ಈ ಕಮೀಷನ್ ಏತಕ್ಕೆ ಮಾಡಿದರು ಎನ್ನುವುದನ್ನು ಅರ್ಥ ಮಾಡಿಕೊಳ್ಳಲು ಸ್ವಲ್ಪ ಡೀಟೇಲ್ ಆಗಿ ಹೋಗಬೇಕು. ಮಾನ್ಯ ಸದಸ್ಯರು ಇದನ್ನು ಕೇಳಬೇಕು ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇದು 9ನೇ ಪುಟದಲ್ಲಿ ಇದೆ. ಗೋದಾವರಿ ಬೇರೆ, ಕೃಷ್ಣಾ ಬೇರೆ. ಕೃಷ್ಣಾ ನದಿ ನೀರನ್ನು ಗೋದಾವರಿ ನೀರಿಗೆ ಬಳಸಿದ್ದಾರೆ. ಅದರೆ ಕೃಷ್ಣಾ ನದಿ ನೀರಿನಿಂದ ಉಪಯೋಗವಾಗತಕ್ಕಂಥಾದ್ದನ್ನು ವಿವರಿಸಿದ್ದರೆ ಚೆನ್ನಾಗಿತ್ತು. ಆದರೆ ಯೀಲ್ಡ್ ಏರಿಯಾವನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಕೃಷ್ಣಾ ಬೇಸಿನ್ ಒಂದರಲ್ಲೇ ತೆಗೆದುಕೊಂಡರೆ 29441 ಚದರ ಮೈಲಿ ಆಗುತ್ತದೆ. ಬೇಸಿನ್ ಏರಿಯಾ ನಮ್ಮ ಮೈಸೂರು ರಾಜ್ಯಕ್ಕೆ ಸೇರುವಂಥಾದ್ದು 47734 ಚದರಮೈಲಿ. ನಮ್ಮದೇ ಹೆಚ್ಚು. ಮೈಸೂರು ರಾಜ್ಯಕ್ಕೆ ಕೃಷ್ಣ ಬೇಸಿನ್‌ನಲ್ಲಿ ಸುಮಾರು 15 ಸಾವಿರ ಎಕರೆ ಚದರಮೈಲಿ ಯೀಲ್ಡ್ ಏರಿಯಾ ಇದೆ. ಕೃಷ್ಣಾ ನದಿಯಿಂದ ಯೀಲ್ಡ್ ಏರಿಯಾ ಇರತಕ್ಕಂಥಾದ್ದನ್ನು ಆಲೋಚನೆ ಮಾಡಿದರೆ

(ಶ್ರೀ ಎಚ್. ಎನ್. ನಂಜೇಗೌಡ)

ಅದರಲ್ಲಿ ಕೃಷ್ಣಾ-ಗೋದಾವರಿ ನೀರು ಸರಿಯಾಗಿ ಹಂಚಿಲ್ಲ. ಕೃಷ್ಣಾ ನದಿಯಿಂದ 22217 ಟಿ.ಎಂ.ಸಿ.ಎಫ್.ಟಿ. ನೀರನ್ನು ಕೊಟ್ಟಿದ್ದಾರೆ. ಗೋದಾವರಿಯಿಂದ 4630 ಟಿ.ಎಂ.ಸಿ.ಎಫ್.ಟಿ. ನೀರನ್ನು ಕೊಟ್ಟಿದ್ದಾರೆ. ಇದರ ನೀರಿನ ಹಂಚಿಕೆಯನ್ನು ಅರ್ಥ ಮಾಡಿಕೊಂಡರೆ ಅದು ಸರಿಯಾಗಿ ಆಗುತ್ತಾ ಇಲ್ಲ. ಕೃಷ್ಣಾ ನದಿ ಬೇಸಿನ್ ನೀರನ್ನು ಇಂಟರ್ ನ್ಯಾಷನಲ್ ಇರ್ರಿಗೇಷನ್ ರೈಟ್ಸ್ ಕಾಂಟ್ರಿಬ್ಯೂಷನ್ ಆಫ್ ವಾಟರ್ ಟು ದಿ ಬೇಸಿನ್ ರೀತ್ಯಾ ಹಂಚಿಕೊಳ್ಳಬೇಕಾದರೆ 47734 ಚದರಮೈಲಿಗೆ ಅಷ್ಟು ಭಾಗ ಮೈಸೂರಿಗೆ ಬರಬೇಕಾಗಿದೆ. 27734 ಚದರಮೈಲಿ ಅಷ್ಟು ಭಾಗ ಆಂಧ್ರಕ್ಕೆ ಹೋಗಬೇಕಾಗಿದೆ. ಒಟ್ಟಿನಲ್ಲಿ ಇದರಿಂದ ಆಂಧ್ರಕ್ಕೆ 3 ಭಾಗ ಆದರೆ ಮೈಸೂರಿಗೆ 5 ಭಾಗ ಬರಬೇಕು. ಹಾಗಾಗಲಿಲ್ಲ. ಏಕೆಂದರೆ ಆಂಧ್ರದವರು ಕೃಷ್ಣಾನದಿ ಜಲಾನಯನ ನೀರನ್ನು ಗೋದಾವರಿ ಹಾಗೂ ಪೆನ್ನಾರ್ ವಲಯದ ಹೊರಗಡೆ ಉಪಯೋಗಿಸಿಕೊಂಡಿದ್ದಾರೆ. ನಮ್ಮ ಅಂಕಿ-ಅಂಶಗಳ ಪ್ರಕಾರ ಹೇಳುವುದಾದರೆ ಸ.ಮಾರು 19 ಲಕ್ಷ ಎಕರೆ ಆಂಧ್ರದ ಅಚ್ಚುಕಟ್ಟು ಏನಿದೆಯೋ, ಕೃಷ್ಣ ನದಿ ಜಲಾನಯನ ಭೂಮಿಯಲ್ಲಿ ಮತ್ತು ಅದನ್ನು ಮೀರಿ ಏನು ಇದೆಯೋ ಅದನ್ನು ಕಾನೂನು ಬಾಹಿರವಾಗಿ ಮಾಡಿದ್ದಾರೆಂದು ಕೇಂದ್ರ ಸರ್ಕಾರ ನೇಮಿಸಿದ್ದ ಗುಲ್ಹಾಟಿ ಕಮಿಷನ್‌ನವರು ಕೊಟ್ಟಿರತಕ್ಕ ವರದಿಯ 73ನೇ ಪುಟದಲ್ಲಿರುವುದನ್ನು ನೋಡಿದರೆ ನಮಗೆ ತಿಳಿದು ಬರುತ್ತದೆ. ಆ ವಿವರಗಳನ್ನು ನಾನು ಓದುವುದಕ್ಕೆ ಅಪೇಕ್ಷೆ ಪಡುವುದಿಲ್ಲ. 1951ನೇ ಇಸವಿಯಿಂದ 1961 ನೇ ಇಸವಿಯವರೆಗೂ ಆಂಧ್ರದವರು 17,60,914 ಎಕರೆ ಡೆವಲಪ್ ಮಾಡಿದರು. ನಮ್ಮಲ್ಲಿ ಅದೇ ಕಾಲದಲ್ಲಿ ಕೇವಲ 5,09,000 ಎಕರೆ ಡೆವಲಪ್ ಆಯಿತು. ಸ್ಟೇಟ್ಸ್ ರೀ-ಆರ್ಗನೈಜೇಷನ್ ಆಗುವುದಕ್ಕೆ ಮುಂಚೆ ಮತ್ತು ಸ್ಟೇಟ್ಸ್ ರೀಆರ್ಗನೈಜೇಷನ್ ಆದಮೇಲೆ ಕೇಂದ್ರ ಸರ್ಕಾರದವರು ಆಂಧ್ರದ ಪರವಾಗಿದ್ದಾರೆ, ಪ್ರಭಾವಯುತ ವ್ಯಕ್ತಿಗಳು ಅವರ ಹಿತವನ್ನು ರಕ್ಷಿಸಿ ನಮ್ಮ ಹಿತವನ್ನು ಗಾಳಿಗೆ ತೂರುವುದಕ್ಕೆ ಡಿಲೇಯಿಂಗ್ ಟ್ಯಾಕಿಟಿಕ್ಸ್ ಮಾಡಿಕೊಂಡು ಬಂದಿದ್ದಾರೆ. 1959ನೇ ಇಸವಿಯಿಂದಲೇ ಟ್ರಿಬ್ಯೂನಲ್ ಬಗ್ಗೆ ನಾವು ಮಾತನಾಡಿದೆವು. ನಮ್ಮ ಸರ್ಕಾರದವರು ಕಾನೂನು ಪರಿಮಿತಿಯೊಳಗೆ, ಇಂಟರ್ ಸ್ಟೇಟ್ ರಿವರ್ಸ್ ಡಿಸ್ಪ್ಯೂಟ್ ಆಕ್ಟ್ ಪ್ರಕಾರ, 1962 ನೇ ಇಸವಿಯಿಂದ ಟ್ರಿಬ್ಯುನಲ್ ನೇಮಕ ಮಾಡಿರಿ ಎಂದು ಹೇಳಿಕೊಂಡು ಬಂದಿದ್ದಾರೆ. ಏಕೆ ನಾನು ಹೇಳುತ್ತೇನೆಂದರೆ ಒಂದು ಪತ್ರಿಕಾ ವರದಿಯ ಬಗ್ಗೆ ಮಾನ್ಯ ಅಧ್ಯಕ್ಷರ ಗಮನವನ್ನು ಸೆಳೆಯುವುದಕ್ಕೆ ಇಷ್ಟಪಡುತ್ತೇನೆ, ಇದು 3-8-1967ಕ್ಕೆ ಸಂಬಂಧಪಟ್ಟದು. ಅದರಲ್ಲಿ 'ಸೆಂಟ್ರಲ್ ಫ್ರೆನ್ಸ್ ಲೀಗಲ್ ಆಕ್ಷನ್ ಟ್ರೆಟ್' ಎಂದು ಬರೆದಿದ್ದಾರೆ. ಕೇಂದ್ರದಲ್ಲಿ ಕಾನೂನು ತಜ್ಞರಿಲ್ಲದೆ ಇಲ್ಲ ಕೇಂದ್ರದವರಿಗೆ ಹೆದರಿಕೆಯಾಗಿದೆ. ಈ ವಿಚಾರ ಟ್ರಿಬ್ಯುನಲ್‌ಗೆ ಹೋದರೆ ಮೈಸೂರಿನವರು ತಮ್ಮ ಕೇಸನ್ನು ಸರಿಯಾಗಿ ಸ್ಪಾನ್ಸರ್ ಮಾಡಿದರೆ ಕೇಂದ್ರದವರು ತಪ್ಪಿತಸ್ಥರಾಗುತ್ತಾರೆ ಎಂದು ಅವರಿಗೆ ಗೊತ್ತಾಗಿದೆ. ಕಾನೂನು ಚೌಕಟ್ಟಿನೊಳಗೆ ಅವರು ನಡೆದುಕೊಂಡು ಬಂದಿಲ್ಲ. ಆಂಧ್ರದವರು ಏಕೆ ಕೇಂದ್ರದವರು ಕೂಡ ಕಾನೂನು ಪರಿಮಿತಿಯೊಳಗೆ ಕೃಷ್ಣ ನದಿ ನೀರಿನ ಬಗ್ಗೆ ವ್ಯವಹರಿಸದೆ ಇರುವುದು ಒಂದು ಸತ್ಯಸಂಗತಿ ಅದಕ್ಕಾಗಿ ಅವರಿಗೆ ಭಾರಿ ಭಯವಿದ್ದೇ ಇದೆ ಎನ್ನುವುದನ್ನು ನಾವು ಮೊದಲು ಅರ್ಥ ಮಾಡಿಕೊಳ್ಳಬೇಕಾದ್ದು ಬಹಳ ಪ್ರಾಮುಖ್ಯವಿದೆ. ಇದರ ಜೊತೆಗೆ ಕಮಿಷನ್ ನೇಮಕ ಮಾಡುವ ಕಾಲದಲ್ಲಿ ವಿಶಾಲವಾಗಿ ಇದನ್ನು ಪರಿಶೀಲನೆ ಮಾಡಿಲ್ಲ. ಇದರ ಜೊತೆಗೆ ಕೃಷ್ಣ ನದಿ ನೀರಿನಿಂದ, ಕೃಷ್ಣ ಜಲಾನಯನ ಭೂಮಿಯಿಂದ ಹೊರಗೆ, ಔಟ್‌ಸೈಡ್ ಕೃಷ್ಣ ಬೇಸಿನ್ ಆಂಧ್ರದವರು ಅಚ್ಚುಕಟ್ಟನ್ನು ಆಯಾಚಿತವಾಗಿ ಮಾಡಿಕೊಂಡಿರುತ್ತಾರೆ. ಇದರಿಂದ ಕೃಷ್ಣ—ಗೋದಾವರಿ ಸಮಸ್ಯೆ ಏಕಸಮಸ್ಯೆಎಂದು ಗೊತ್ತಾಗುತ್ತದೆ. ಕೃಷ್ಣ ನದಿ ನೀರನ್ನು ಕೃಷ್ಣ ಬೇಸಿನ್‌ನಲ್ಲಿ ಉಪಯೋಗ ಮಾಡಿಕೊಂಡಿದ್ದ ಪಕ್ಷದಲ್ಲಿ ಕೃಷ್ಣ ನದಿ ವ್ಯವಹಾರ ಬೇರೆ, ಗೋದಾವರಿ ನದಿ ವ್ಯವಹಾರ ಬೇರೆ ಎಂದು ಇಡಬಹುದಾಗಿತ್ತು ಆದರೆ ಆ ರೀತಿ ಆಗಿಲ್ಲ. ಇದನ್ನೆಲ್ಲ ನೋಡಿದರೆ ಆಂಧ್ರ ಮತ್ತು ಕೇಂದ್ರ ಸರ್ಕಾರಗಳು ಸೇರಿ ಇಂಟರ್‌ನ್ಯಾಷನಲ್ ಇರಿಗೇಷನ್ ರೈಟ್ಸ್ ಎನ್ನತಕ್ಕ ಕಾನೂನು ಏನಿದೆಯೋ ಅದಕ್ಕೆ ಹೊರತಾಗಿ ಮಾಡಿದ್ದಾರೆ. Any development of irrigation must be within the basin of a river and not outside the basin. It is opposed to international irrigation rights. ಇಲ್ಲೀಗಲ್ ಆಕ್ಟನ್ನು ಲೀಗಲೈಸ್ ಮಾಡುವುದಕ್ಕೆ, ಕಾನೂನು ಬಾಹಿರವಾದ ಕ್ರಮವನ್ನು ಕಾನೂನು ಬದ್ಧ ಮಾಡುವುದಕ್ಕೆ ಹೋಗಿದ್ದಾರೆ. ಕೃಷ್ಣ ಬೇಸಿನ್‌ನ ಹೊರಗೆ ಏನು ಅಚ್ಚುಕಟ್ಟು ಇದೆಯೋ, ಏನು ಅಚ್ಚುಕಟ್ಟು ಡೆವಲಪ್ ಮಾಡಿದ್ದಾರೆಯೋ ಅದು ಕಾನೂನು ಬಾಹಿರ. ಕಾನೂನ ಬಾಹಿರವಾದ ಕೆಲಸವನ್ನು ಕಾನೂನು ಬದ್ಧ ಮಾಡುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಕೃಷ್ಣ ಗೋದಾವರಿ ಸಮಸ್ಯೆ ಒಂದೇ ಸಮಸ್ಯೆ ಎನ್ನುವುದನ್ನು ಕಮಿಷನ್‌ನವರು ಸೂಚ್ಯವಾಗಿ ತಿಳಿಸಿದ್ದಾರೆ. ಈ ವರದಿಯಲ್ಲಿ ಅದನ್ನು ಓದಿದ ಯಾರೇ ವಿಚಾರವಂತರು ಈ ವಿಷಯವನ್ನು ಅರ್ಥ ಮಾಡಿಕೊಳ್ಳು

ವುದಕ್ಕೆ ಕಷ್ಟವಾಗುವುದಿಲ್ಲ. ಇದರ ಜೊತೆಗೆ ಅವರು ಇನ್ನೂ ಒಂದು ವಿಷಯವನ್ನು ಹೇಳಿದರು. ನಾಗಾರ್ಜುನಸಾಗರದಿಂದ ಕೂಡ ಅವರ ಪ್ಲಾನ್ ಮತ್ತು ಎಸ್ಟಿಮೇಟ್ ಪ್ರಕಾರ 8 ಲಕ್ಷ ಎಕರೆಗೆ ಕೃಷ್ಣ ಬೇಸಿನ್ ಹೊರಗಡೆ ಈ ಕೃಷ್ಣ ನದಿ ನೀರು ಉಗಯೋಗವಾಗುತ್ತದೆ ಎಂದು ಹೇಳಿದ್ದಾರೆ. ಇದರಲ್ಲಿ ಈಗ ಪ್ರಾಮುಖ್ಯವಾಗಿ ಒಂದು ರಾಜಕೀಯ ಹಿನ್ನೆಲೆ ಇದೆ. ಏನೆಂದರೆ, ಇಂಟರ್‌ಸ್ಟೇಟ್ಸ್ ರಿವರ್ ವಾಟರ್ಸ್‌ಗೆ ಸಂಬಂಧಪಟ್ಟ ಕಾನೂನಿನಲ್ಲಿ ಕನ್‌ಸರ್ವೇಷನ್, ಕಂಟ್ರೋಲ್ ಮತ್ತು ಆಫ್ಟಿಮಮ್ ಯುಟಿಲೈಜೇಷನ್ ಆಫ್ ವಾಟರ್ ರಿಸೋರ್ಸಸ್, ಇದನ್ನು ಯಾರು ಮಾಡಬೇಕು ಎಂದು ಹೇಳಿದ್ದಾರೆ. ಬರೀ ಮೈಸೂರು ರಾಜ್ಯದ್ದಾದರೆ ಮೈಸೂರಿನವರೇ ಮಾಡಬೇಕು, ಅಥವಾ ಆಂಧ್ರ ರಾಜ್ಯಕ್ಕೆ ಸೇರಿದ್ದರೆ ಅವರೇ ಮಾಡಿಕೊಳ್ಳಬೇಕು, ಆದರೆ ಅಂತರ ರಾಜ್ಯಗಳಿಗೆ ಸಂಬಂಧಪಟ್ಟ ವಿಷಯಗಳಲ್ಲಿ ಕನ್‌ಸರ್ವೇಷನ್, ಕಂಟ್ರೋಲ್ ಮತ್ತು ಅಪ್ಟಿಮಮ್ ಯುಟಿಲೈಸೇಷನ್ ಯಾರು ಮಾಡಬೇಕು, ಯಾರು ಕಾಯಬೇಕು ? ರಿವರ್ ಬೋರ್ಡ್ ಆಕ್ಟ್ ಪ್ರಕಾರ ಒಂದು ಬೋರ್ಡ್ ಮಾಡಿದ್ದರೆ ಅವರು ಇದನ್ನು ಕಾಯಬೇಕು. ಕೇಂದ್ರ ಸರ್ಕಾರದವರು ರಿವರ್ ಬೋರ್ಡ್ ಆಕ್ಟ್ ಪ್ರಕಾರ ಒಂದು ಬೋರ್ಡ್ ಮಾಡಿದ್ದರೆ ಅವರು ಕಾಯಬಹುದಾಗಿತ್ತು. ಅವರು ಕಾಯದೆ ಇದ್ದರೆ ಅಗ್ರೀವ್ಡ್ ಪಾರ್ಟಿ ಕೋರ್ಟಿಗೆ ಹೋಗಿ ತೀರ್ಪು ತೆಗೆದುಕೊಳ್ಳುವುದಕ್ಕೆ ಅವಕಾಶವಿತ್ತು. ಒಂದು ವೇಳೆ ಬೋರ್ಡ್ ಮಾಡದೆ ಇದ್ದರೆ ಕೇಂದ್ರ ಸರ್ಕಾರ ಈವೊತ್ತು ಇದನ್ನು ಕಾಯಬೇಕು. ಇವೆರಡರಲ್ಲಿ ಒಂದೂ ಆಗಿಲ್ಲ. ಕೇಂದ್ರ ಸರ್ಕಾರದವರು ಏನು ಮಾಡಿದರು ಎನ್ನುವುದರಲ್ಲಿ ರಾಜಕೀಯ ಹಿನ್ನೆಲೆ ಬರುವುದು. ಇದನ್ನು ನಾವು ಅರ್ಥ ಮಾಡಿಕೊಳ್ಳಬೇಕಾದ್ದು ಬಹಳ ಆವಶ್ಯಕವಿದೆ. ಕೃಷ್ಣ ಗೋದಾವರಿ ನೀರಿನ ಸಂಬಂಧದಲ್ಲಿ ನಮ್ಮ ರಾಜ್ಯ ಸರ್ಕಾರದವರು ಒಂದು ಲಿಖಿತ ಆಕ್ಷೇಪಣೆಯನ್ನು ಸಲ್ಲಿಸಿದ್ದಾರೆ. ಕೃಷ್ಣ ಬೇಸಿನ್ ಹೊರಗೆ ಇರುವ ಅಚ್ಚುಕಟ್ಟಿಗೆ ಕೃಷ್ಣ ನೀರನ್ನು ಪತಕ್ಕಾಗಿ ತೆಗೆದುಕೊಂಡು ಹೋದರು ಎನ್ನುವ ಆಕ್ಷೇಪಣೆಯನ್ನು ಎತ್ತಿದ್ದಾರೆ. ಆದರೆ ಆಗ ಅದನ್ನು ಅವರು ಒತ್ತಾಯ ಮಾಡಲಿಲ್ಲ. ಅಲ್ಲಿಯೂ ಕಾಂಗ್ರೆಸ್ ಸರ್ಕಾರ, ಇಲ್ಲಿಯೂ ಕಾಂಗ್ರೆಸ್ ಸರ್ಕಾರ ಎನ್ನುವ ದಾಕ್ಷಿಣ್ಯಕ್ಕೆ ಒಳಗಾಗಿ ಖಾಜಿ ನ್ಯಾಯದಂತೆ ಮಾಡಿಕೊಂಡರು. ಇದನ್ನು ಆಲೋಚನೆ ಮಾಡಬೇಕು. ಕೃಷ್ಣ ಗೋದಾವರಿ ಎರಡನ್ನೂ ಸೇರಿಸಿ ಒಂದು ಸಮಸ್ಯೆ ಎಂದು ಇಟ್ಟುಕೊಂಡು ಮುಂದೆ ವಿಚಾರ ಮಾಡೋಣ, ಡೈವರ್ಷನ್ ಸ್ಕೀಂ ಮಾಡಿಸೋಣ ಎಂದು ಇದನ್ನು ಒಂದೇ ಸಮಸ್ಯೆ ಎನ್ನುವುದನ್ನು ಒಪ್ಪಿಕೊಂಡಿದ್ದಾರೆ. ತದನಂತರ ಏನಾಯಿತು ಎನ್ನುವುದನ್ನು ನಾವು ನೋಡಬೇಕಾದ್ದು ಆವಶ್ಯಕವಿದೆ.

ನಾನು ಈ ಸಂದರ್ಭದಲ್ಲಿ ಕೆಲವು ವಿಷಯಗಳನ್ನು ಮಾನ್ಯ ಸಭೆಯ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ ಕೃಷ್ಣ ಗೋದಾವರಿ ಬಗ್ಗೆ ಹೊರಡಿಸಿರುವ ಸ್ಟೇಟ್‌ಮೆಂಟ್ ಏನಿದೆ, ಅದರ ಬಗ್ಗೆ ಕೋರ್ಟಿನಲ್ಲಿ ಪ್ರೆಷರೈಸ್ ಮಾಡಿದರೆ, ಕಾನೂನು ಪ್ರಕಾರ ಅದು 'ಸ್ಕ್ರಾಪ್ ಆಫ್ ಪೇಪರ್ ಆಗುತ್ತದೆ, ಇದು ಯಾವ ಬೈಂಡಿಂಗ್ ಡಾಕ್ಯುಮೆಂಟರಿ ಎವಿಡೆನ್ಸ್ ಆಗುವುದಿಲ್ಲ. ಅದನ್ನು ಮಾತ್ರ ನಾವು ನೆನಪಿನಲ್ಲಿಟ್ಟುಕೊಳ್ಳಬೇಕು. ಕಾನೂನು ಪರಿಮಿತಿಯೊಳಗೆ ಇದು ಆದದ್ದಲ್ಲ. ಕಾನೂನು ಮೀರಿ ಮಾಡಿದೆ. ಆದರೂ ಕೂಡ ಕೇಂದ್ರದವರು ಆಂಧ್ರಕ್ಕೆ ಸಹಾಯ ಮಾಡುವುದಕ್ಕೆ ಮಾಡಿದ್ದಾರೆ ಎಂದು ಅರ್ಥವಾಗುತ್ತದೆ. ನಮಗೆ ಇರತಕ್ಕದು 43 ಚದುರಮೈಲಿ ಕಾಂಟ್ರಿಬ್ಯೂಟರಿ ಏರಿಯಾ, ಆಂಧ್ರದವರಿಗೆ ಇರುವುದು 28 ಸಾವಿರ ಚಿಲ್ಲರೆ ಚದುರಮೈಲಿ ಕಾಂಟ್ರಿಬ್ಯೂಟರಿ ಏರಿಯಾ. ಆದರೂ ಕೂಡ ಆಂಧ್ರದವರಿಗೆ ಕೇಂದ್ರ ಸರ್ಕಾರದವರು ಅನುಕೂಲ ಮಾಡುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಇದು ಕಾನೂನು ಬಾಹಿರವಾಗುತ್ತದೆಯೋ ಅಥವಾ ಕಾನೂನು ಬದ್ಧವಾಗುತ್ತದೆಯೋ ಎನ್ನುವುದಕ್ಕೆ ವರದಿಯಲ್ಲಿ ಕೊಟ್ಟಿರುವುದನ್ನು ನಾನು ಉದಹರಿಸುತ್ತೇನೆ.

The Government of Maharashtra and Mysore also requested the Government of India not to entertain any fresh commitments in regard to Andra Pradesh in the Krishna-Godavari basin pending settlement of allocations of waters of the two rivers. Grave doubts have been expessed about the validity or otherwise of the 1951 Agreement. 1951 ರ ಅಗ್ರಿಮೆಂಟ್ ಕಾನೂನು ಬಾಹಿರ ಎಂದು ಬೇರೆಯವರೂ ಹೇಳಿದ್ದಾರೆ. 1956 ನೇ ಇಸವಿಯಲ್ಲಿ ಬೇರೆ ರಾಜ್ಯವಾಯಿತು ; ನಮ್ಮ ರಾಜ್ಯಕ್ಕೆ ಕ್ಯಾಚ್‌ಮೆಂಟ್ ಏರಿಯಾ ವಿಸ್ತಾರವಾಯಿತು, ಕಾಂಟ್ರಿಬ್ಯೂಟರಿ ಏರಿಯಾ ಜಾಸ್ತಿಯಾಯಿತು. ಕಾನೂನು ಪರಿಮಿತಿಯೊಳಗೆ ಸ್ಟೇಟ್ಸ್ ರೀ ಅರ್ಗನೈಜೇಷನ್ ಆಕ್ಟ್ ಪ್ರಕಾರ ರಿವರ್ ಬೇಸಿನ್ ಬದಲಾವಣೆಯಾಗಬೇಕಾದ್ದು ಅಗತ್ಯ, ಆದಕ್ಕೆ ಕಾನೂನಿನಲ್ಲಿ ಅವಕಾಶವಿದೆ. ಆದರೆ 1951 ರಲ್ಲೂ ಕೂಡ ಆಂಧ್ರದ ಬ್ರಹ್ಮಾನಂದರೆಡ್ಡಿಯವರು ದಬಾವಣೆ ಮಾಡುತ್ತಿದ್ದರು. ಅದು ಸೌಜನ್ಯದ ಮಾತಲ್ಲ. ಸ್ಟೇಟ್ಸ್ ರೀಅರ್ಗನೈಜೇಷನ್ ಆದನಂತರ

(ಶ್ರೀ ಎಚ್. ಎನ್. ನಂಜೇಗೌಡ)

ಬದಲಾಯಿಸಬೇಕಾಗಿತ್ತು. ಸ್ಟೇಟ್ ಬೌಂಡರಿ ವ್ಯತ್ಯಾಸವಾಗಿದೆ. ಆದುದರಿಂದ ಇಡೀ ಸಮಸ್ಯೆಯನ್ನು ಬೇರೆ ರೀತಿಯಲ್ಲಿ ಬಗೆಹರಿಸುವುದು ಅವಶ್ಯಕ ಎಂದು ಆವತ್ತು ಮಹಾರಾಷ್ಟ್ರ ಸರಕಾರದವರೂ ಹೇಳಿದ್ದಾರೆ. ಅದನ್ನು ಆಂಧ್ರ ಒಪ್ಪಿಕೊಂಡಿತ್ತು. 51 ರ ಅಗ್ರಿಮೆಂಟ್ ಬಗ್ಗೆ ಕೇಂದ್ರ ಸರಕಾರದ ಲಾ ಮಂತ್ರಿಗಳು ಅಡ್ವೈಜ್ ಕೊಟ್ಟಿರುವುದು, ಇರಿಗೇಷನ್ ಮಂತ್ರಿಗಳು ಕೇಂದ್ರ ಸರಕಾರದಲ್ಲಿ ಹೇಳಿರುವುದು ಉದಾಹರಣೆ ಹೇಳುತ್ತಿದ್ದಾರೆ. ಎರಡನೆಯ ಪುಟದಲ್ಲಿ ಕೊನೆಯ ಪ್ಯಾರಾದಲ್ಲಿ ಹೀಗೆ ಹೇಳಿದ್ದಾರೆ:

"Briefly the advice of the Ministery of Law was that the agreement was legally wholly ineffective and unenforceable. This view was generally supported by the Attorney-General of India who stated that the agreement must be treated as having become void."

1963ರಲ್ಲಿ ಕೇಂದ್ರ ಸರಕಾರದ ನೀರಾವರಿ ಸಚಿವರು ಈ ಮಾತು ಹೇಳಿದ್ದಾರೆ. ಬಹುಶಃ ಕೆ. ಎಲ್. ರಾವ್‌ರವರು ಆಗ ಇರಿಗೇಷನ್ ಮಂತ್ರಿಗಳಾಗಿರಲಿಲ್ಲ. ಅವರ ಬಾಯಲ್ಲಿ ಈ ಮಾತು ಬರುತ್ತಿರಲಿಲ್ಲ. ಇದು ರೆಕಾರ್ಡಿನ ಮಾತು. ಆಮೇಲೆ ಎರಡೂ ಒಂದೇ ಸಮಸ್ಯೆ ಅನ್ನುವುದು ಇದೆ.

"Expert committees might be set up to report on the availability of supplies in the Krishna and Godavari Rivers and examine the feasibility of diversion of supplies from the Godavari to the Krishna."

ಡೈವರ್ಷನ್ ಸ್ಕೀಂಗೆ ಒಂದು ಎಕ್ಸ್‌ಪರ್ಟ್ ಕಮಿಟಿ ಮಾಡಬೇಕೆಂದು ಹೇಳುತ್ತಾ, ನಾಗಾರ್ಜುನ ಸಾಗರದ ಎರಡನೆಯ ಸ್ಟೇಜ್‌ಗೆ ಹೀಗೆ ಹೇಳುತ್ತಾರೆ:

"Nagarjunasagar II Stage could be cleared after investigations and diversions of Godavari supplies are completed and the quantum and diversions are known. The project being a large irrigation project will have to be suitably dovetailed in the master plan."

ಗೋದಾವರಿ ಡೈವರ್ಷನ್ ಸ್ಕೀಂ, ಗೋದಾವರಿ ನೀರನ್ನು ಕೃಷ್ಣಾ ನದಿಗೆ ಡೈವರ್ಟ್ ಮಾಡುತ್ತೇವೆ, ನಾಗಾರ್ಜುನ ಸಾಗರದ ಎರಡನೆಯ ಸ್ಟೇಜ್ ಪ್ರಾರಂಭಿಸಬಾರದು ಎಂದು ಆ ದಿವಸ ಇರಿಗೇಷನ್ ಮಂತ್ರಿಗಳು ಒಪ್ಪಿದ್ದಾರೆ, ಲೋಕ ಸಭೆಯಲ್ಲಿ ಹೇಳಿರುವುದು ಇದು. ಇದೇನೂ ಹೊಸದಲ್ಲ; ಆವತ್ತು ಇದರ ಅವಶ್ಯಕತೆ ಇತ್ತೇ ? ಇಂದು ಆಂಧ್ರ 19 ಲಕ್ಷ ಡೆವಲಪ್ ಮಾಡುತ್ತಿದೆ, ತಾಪತ್ರಯ ವಾಗಬಹುದು, ಆಂಧ್ರಕ್ಕೆ ಅಪಚಾರವಾಗಬಹುದು, ಸ್ವಂತ ಶಾಯಿ ಪ್ರೇಮದಿಂದ ಅವಶ್ಯವಿದೆ ಎಂದು ಮಾಡಿರಬಹುದು. ಅದೇ ಸಭೆಯಲ್ಲಿ ಮುಂದೆ ಪಂಜಾಬಿನಲ್ಲಿ ಮಾಡಿರುವುದನ್ನು ಹೇಳಿದ್ದಾರೆ, ರಾವಿ, ಬಿಯಾಸ್, ಸಟ್ಲೇಜ್ ನದಿಗಳ ಉದಾಹರಣೆಯನ್ನು ತೆಗೆದುಕೊಂಡು ಗ್ರಿಡ್ ಮಾಡಿದ್ದೇವೆ, ಇದಕ್ಕೂ ಹಾಗೆಯೇ ಆಗಬೇಕು ಎಂದು ಹೇಳಿದ್ದಾರೆ. ಇದರಿಂದ ಅರ್ಥವಾಗುವುದು ನಮಗೆ ಅವರು ಹೇಳಿರುವುದು. ಆಂಧ್ರಕ್ಕೆ ಯಾವರೀತಿ ಅನುಕೂಲ ಮಾಡಬೇಕು ಎಂಬುದು ಮನಸ್ಸಿಗೆ ಬಂದಾಗ ಎಲ್ಲಾ ಅವರಿಗೆ ಬೇಕಾದ ಅನುಕೂಲವನ್ನು ಮಾಡುವುದಕ್ಕೆ ಆರ್ಗ್ಯುಮೆಂಟ್ ಮಾಡುವುದು ಕೇಂದ್ರದ ಪದ್ಧತಿಯಾಗಿದೆ. ಈ ದಿವಸ ಮುಖ್ಯವಾಗಿ ನಾವು ಅರ್ಥಮಾಡಿಕೊಂಡಿರುವ ರೀತಿಯಲ್ಲಿ ಗೋದಾವರಿ-ಕೃಷ್ಣನದಿ ನೀರು ವ್ಯವಹಾರದಲ್ಲಿ ಈಗ ಹಂಚಿಕೆಯಾಗಿರುವುದು ಕೃಷ್ಣ ನೀರು. ಇದನ್ನು ಮತ್ತೆ ಮತ್ತೆ ನೆನಪುಮಾಡಿಕೊಳ್ಳಬೇಕು, ಕೃಷ್ಣ ನೀರು ಮಾತ್ರ ಹಂಚಬೇಕೆಂದಿರುವುದು. ಗೋದಾವರಿ ಬಗ್ಗೆ ನಾವೇನೇ ಹೇಳಲಿ, 4 ಸಾವಿರ ಚಿಲ್ಲರೆ ಟಿ.ಎಂ.ಸಿ.ಎಫ್.ಟಿ. ನೀರು ಬೇರೆ ರಾಜ್ಯ ಸೇರುವುದು, ಈ ಪ್ರಶ್ನೆ ತೆಗೆದುಕೊಂಡಿಲ್ಲ. ಗೋದಾವರಿ ಬೇಸಿನ್ 5-6 ರಾಜ್ಯಗಳಿಗೆ ಸಂಬಂಧ ಪಟ್ಟಿರುವುದು. ಹಾಗಿರುವಾಗ ಮೂರು ರಾಜ್ಯಗಳೇಕೆ ತಲೆ ಕೆಡಿಸಿಕೊಳ್ಳಬೇಕು ? ಹೀಗೆ ರಾವ್‌ರವರು ಪಾರ್ಲಿಮೆಂಟಿನಲ್ಲಿ ಹೇಳಿದ್ದಾರೆ. ಗೋದಾವರಿ ನೀರು ಮೈಸೂರು, ಮಹಾರಾಷ್ಟ್ರ,

ಆಂಧ್ರಗಳಲ್ಲದೆ ಇತರ ರಾಜ್ಯಗಳಿಗೂ ಸಂಬಂಧಪಟ್ಟಿದೆ. ಆದುದರಿಂದ ಈ ಪ್ರಶ್ನೆ ಈಗ ಬೇಕಾಗಿಲ್ಲ. ಇದಕ್ಕೆ ಬೇರೆ ಟ್ರಿಬ್ಯೂನಲ್ ಆಗಬೇಕೆಂಬ ವಾದ ಇದೆ. ರಾಜ್ಯ ಸರಕಾರದವರು, ಕೇಂದ್ರ ಸರಕಾರದವರು ಮತ್ತು ರಾವ್ ಹೇಳುವುದು ಗೋದಾವರಿ ನೀರಿನ ಹಂಚಿಕೆಗೆ ಟ್ರಿಬ್ಯೂನಲ್ ಇಲ್ಲ, ಸಾರ್ವಜನಿಕರಲ್ಲಿ, ಅಧಿಕಾರವರ್ಗದಲ್ಲಿ, ರಾಜಕಾರಣದಲ್ಲಿ ಯಾವ ನಿರ್ಣಯಕ್ಕೂ ಅವಕಾಶವಿರಬಾರದು ಎಂದು ಹೇಳುತ್ತಾರೆ. ಟ್ರಿಬ್ಯೂನಲ್ ಪ್ರಶ್ನೆ ಬಂದಿರುವುದು ಕೃಷ್ಣ—ಗೋದಾವರಿ ಜಗಳವನ್ನು ಇತ್ಯರ್ಥಮಾಡುವುದಕ್ಕೆ · ಎಂದು ಹೇಳಿದರೂ ಹಂಚಿಕೆಯಾಗುವುದು ಗೋದಾವರಿ ನೀರಲ್ಲ. 2217 ಟಿ.ಎಂ.ಸಿ.ಎಫ್.ಟಿ. ಕೃಷ್ಣ ಜಲಾನಯನದಲ್ಲಿ ಇರುವ ನೀರಿನಲ್ಲಿ ನಾವು ಪಾಲು ಕೇಳುತ್ತಿದ್ದೇವೆ. ಗೋದಾವರಿ ನೀರನ್ನು ಕೇಳುವುದಕ್ಕೆ ಟ್ರಿಬ್ಯೂನಲ್ ಇಲ್ಲ. ಆದುದರಿಂದ ಇದಕ್ಕೆ ಸಂಬಂಧಪಟ್ಟ 5–6 ರಾಜ್ಯಗಳೇನಿವೆ ಅವು ನಮ್ಮ ಮೇಲೆ ಸವಾರಿ ಮಾಡಬೇಕೇ, 4 ಸಾವಿರ ಚಿಲ್ಲರೆ ಟಿ.ಎಂ.ಸಿ.ಎಫ್.ಟಿ. ಗೋದಾವರಿ ಬೇಸಿನ್ ನೀರು ಹಂಚುವಾಗ ಇದರ ಅವಶ್ಯಕತೆ ಇದೆಯೇ ? ಹಕ್ಕಿರುವವರು, ಕಾನೂನು ಪ್ರಕಾರ ಹಕ್ಕನ್ನು ಸ್ಥಾಪಿಸಿಕೊಂಡಿರುವವರು ಏನೇ ಹೇಳಿದರೂ ರಾವ್ ರವರು ಅವನ್ನು ಮುಂದೆ ಕಾನೂನು ಬಾಹಿರ ಎಂದು ಹೇಳಬಹುದು. ಹಾಗೆ ಹೇಳುವುದಕ್ಕೆ ಅವಕಾಶವಿಲ್ಲ. ಕೃಷ್ಣ ನದಿ ನೀರು 2217 ಟಿ.ಎಂ.ಸಿ.ಎಫ್.ಟಿ. ಇದರ ಬಗ್ಗೆ ಹಂಚಿಕೆಯಾಗಬೇಕು. 51 ರಿಂದ ಗಲಾಟೆಗಾಗಿ 63 ರಲ್ಲಿ ಕೇಂದ್ರ ಸರಕಾರ ಬರವಸೆ ಕೊಟ್ಟಿರುವುದು ಕೂಡ ಕೃಷ್ಣ ನೀರಿನ ಹಂಚಿಕೆ ಬಗ್ಗೇ ಹೊರತು ಗೋದಾವರಿ ಬಗ್ಗೆ ಅಲ್ಲ. ಇದನ್ನು ಅರ್ಥಮಾಡಿಕೊಳ್ಳಬೇಕು. ತದನಂತರ ಕೃಷ್ಣ ಗೋದಾವರಿ ಜಗಳವನ್ನು ಇತ್ಯರ್ಥಮಾಡಲು ಒಂದು ಟ್ರಿಬ್ಯೂನಲ್ ಬೇಕೇ ಅಥವ ಎರಡು ಬೇಕೇ ಎಂಬ ವಿಚಾರದಲ್ಲಿ ರಾಜ್ಯ ಸರಕಾರ ಕೂಡ ಅನುಮಾನ ಪಡುವಂತಿದೆ; ಕೇಂದ್ರ ಸರಕಾರ ಕೂಡ ಅನುಮಾನ ಪಡುವಹಾಗಿದೆ. ನನಗೊಂದು ಅನುಮಾನವಿದೆ, ಕೇಂದ್ರದವರು ಒತ್ತಾಯ ಮಾಡಿ ಘರ್ಜನೆಮಾಡಿದರೆ, ಎರಡು ಟ್ರಿಬ್ಯೂನಲ್ ಒಪ್ಪಿಕೊಳ್ಳಿ ಎಂದು ಹೇಳಿದರೆ, ಬೇರೆ ಆಲ್ಟರ್ನೇಟಿವ್ ಕೊಡುತ್ತೇವೆಂದು ಹೇಳಿದರೆ ರಾಜ್ಯ ಸರಕಾರ ಒಪ್ಪಿಕೊಳ್ಳಬಹುದು ಎಂಬ ಸಂಶಯ ನನಗಿದೆ. ಎರಡು ತಿಂಗಳಲ್ಲಿ ತೀರ್ಮಾನವಾಡದಿದ್ದರೆ ಟ್ರಿಬ್ಯೂನಲ್‌ಗೆ ಹಾಕುತ್ತೇವೆಂದು ಮುಖ್ಯಮಂತ್ರಿ 1967 ರಲ್ಲಿ ಹೇಳಿದ್ದರು, ಹೇಳಿ ಎರಡು ವರ್ಷವಾಯಿತು. ಹೀಗೆ ಅವರು ಹೇಳಿದ್ದರೂ ದೆಹಲಿಗೆ ಹೋದಾಗ ತಲೆ ಸವರಿ ಖಾಜಿನ್ಯಾಯ ಮಾಡಿದರೆ ಅಲ್ಲಿಗೆ ಅವರ ಉತ್ಸಾಹ ಕುಂದಿ ಹೋಗುವುದು. ಈಗಲೂ ಕೂಡ ಒಂದೇ ಟ್ರಿಬ್ಯೂನಲ್ ಆಗಬೇಕೆಂದು ಹೇಳುತ್ತಿದ್ದಾರೆ; ಸಂತೋಷ; ಆಗಲಿ, ಅದಕ್ಕಾಗಿ ಹೋರಾಡುತ್ತಿದ್ದಾರೆ. ಆದರೆ ಇವತ್ತು ಒಂದೇ ಆಗಬೇಕೆಂದು ಹೇಳಿ ನಾಳೆ ದೆಹಲಿಗೆ ಹೋದಾಗ ಎರಡಕ್ಕೆ ಒಪ್ಪಿಗೆ ಕೊಟ್ಟುಬಂದು, ಕೇಳಿದರೆ ಏನಪ್ಪ ಮಾಡೋಣ, ಲೀಗಲ್ ಅಡ್ವೈಸರ್ಸ್ ಹೇಳಿದ್ದಾರೆ ಎಂದು ಹಿಂದಿನಿಂದ ಹೇಳುವುದುಂಟು. ಈ ಭಯವಿಂದ ಇಷ್ಟೆಲ್ಲಾ ಹೇಳಬೇಕಾಗಿದೆ. ಕಷ್ಣ ನೀರನ್ನು ಹಂಚಿಕೊಳ್ಳುವಾಗ, ಕೃಷ್ಣ ಜಲಾನಯದಲ್ಲಿ ನೀರನ್ನು ಉಪಯೋಗಿಸಬೇಕಾದಾಗ ಆಂಧ್ರ ಆ ಬೇಸಿನ್ ಬಿಟ್ಟು ಔಟ್‌ಸೈಡ್ ದಿ ಬೇಸಿನ್ ಡೆವಲಪ್ ಮಾಡಿರುವುದರಿಂದ ಕೃಷ್ಣ—ಗೋದಾವರಿ ಎಂದು ಅವರು ಹೇಳುತ್ತಾರೆ.

5-30 P.M.

ಕೃಷ್ಣಾ ನದಿಯಲ್ಲಿ 2 ಸಾವಿರ ಚಿಲ್ಲರೆ ಟಿ.ಎಂ.ಸಿ.ಎಫ್.ಟಿ. ನೀರಿನ ಹಂಚಿಕೆಗಾಗಿ ಟ್ರಿಬ್ಯೂನಲ್ ಮಾಡಬೇಕೇ ಹೊರತು, ಎರಡು ಟ್ರಿಬ್ಯೂನಲ್‌ಗಳನ್ನು ಮಾಡಿ ಕೃಷ್ಣಾ ಹಂಚಿಕೆಗಾಗಿ ಒಂದು ಟ್ರಿಬ್ಯೂನಲ್ಲು, ಗೋದಾವರಿ ನೀರಿನ ಹಂಚಿಕೆಗಾಗಿ ಒಂದು ಟ್ರಿಬ್ಯೂನಲ್ಲು ಮಾಡಿ ಅಲ್ಲಿ ಚರ್ಚೆ ಮಾಡಬೇಕಾದ ಪ್ರಮೇಯವೇ ಇಲ್ಲ. ಒಂದುವೇಳೆ ಆ ರೀತಿ ಮಾಡುತ್ತೇವೆ ಎಂದು ಹೇಳಿದರೆ ಆಂಧ್ರದವರಿಗೆ ಔಟ್‌ಸೈಡ್ ದಿ ಬೇಸಿನ್ ನೀರು ತೆಗೆದುಕೊಳ್ಳಲು ಬಿಡುವುದಿಲ್ಲ ಎಂದರೆ ಆ ರೀತಿ ಮಾಡಿಕೊಳ್ಳಲಿ ನಮ್ಮ ತಕರಾರು ಇಲ್ಲ. ಆದರೆ ಇವತ್ತು ಅವರು ನೀರನ್ನು ಉಪಯೋಗಿಸಿಕೊಳ್ಳುತ್ತಾ ಇದ್ದಾರೆ ಅದಕ್ಕಾಗಿಯೆ ಈ ಪ್ರಶ್ನೆ—ಅವರು ಔಟ್‌ಸೈಡ್ ದಿ ಬೇಸಿನ್ ನೀರನ್ನು ಉಪಯೋಗಿಸಿರುವುದರಿಂದಲೇ ಈ ಪ್ರಶ್ನೆ ಬಂದಿರುವುದು. ಕೃಷ್ಣಾ ನದಿ ನೀರನ್ನು 3 ರಾಜ್ಯಗಳಿಗೆ ಹಂಚಬೇಕಾಗಿರುವುದರಿಂದ ಈ ಡೈವರ್‌ಷನ್ ಸ್ಕೀಂನ್ನು ಹೇಳಿದ್ದೇನೆ. ಅದೆಲ್ಲಾ ಈಗ ಅಪ್ರಕೃತ. ಇಲ್ಲಿಯವರೆಗೂ ನಡೆದುಬಂದಿರತಕ್ಕ ನಡವಳಿಕೆ ಒಂದೂ ಕೂಡ ಕಾನೂನು ಬದ್ಧವಾಗಿಲ್ಲ, ರಾಜಕೀಯ ಬದ್ಧವಾಗಿ ನಡೆದುಕೊಂಡು ಬಂದಿದೆ, ಸ್ವಜನ ಪಕ್ಷಪಾತದಿಂದ ಕೇಂದ್ರ ನಡೆಸಿಕೊಂಡು ಬಂದಿದೆ. ಕಾನೂನಿನ ಪರಿಮಿತಿಯಲ್ಲಿ ಅದು ನಡೆದು ಬಂದಿಲ್ಲ ಎಂಬುದನ್ನು ನಾವು ಅರ್ಥಮಾಡಿಕೊಂಡಿದ್ದೇವೆ. ಆದ್ದರಿಂದ ಈ ಸಂದರ್ಭದಲ್ಲಿ ನಾನು ಹೇಳುವುದು ಇಷ್ಟೆ. ಮಾನ್ಯ ಸಭಾಪತಿಗಳೇ, ಈ ಸಮಸ್ಯೆ ಕ್ಯಾಬಿನೆಟ್ ಅವರಿಗೆ ಅರ್ಥವಾಗಬೇಕಾದರೆ ಶ್ರೀಮಾನ್ ಚನ್ನಬಸಪ್ಪನವರು ಬಂದಿದ್ದಾರೆ ಅವರು ಮಾತನಾಡುವವರು ಇದ್ದಾರೆ, ಇತ್ತೀಚಿನ ಬದಲಾವಣೆಗಳು ಏನೇನು ಆಗಿವೆ ಎಂಬುದನ್ನು ನೋಡೋಣ,

(ಶ್ರೀ ಎಚ್. ಎನ್. ನಂಜೇಗೌಡ)

ಶ್ರೀಮಾನ್ ಕೆ. ಎಲ್. ರಾವ್‌ರವರು ಹೈದರಾಬಾದನ್ನು ಅಥವಾ ಆಂಧ್ರವನ್ನು ಇಂದ್ರ ಲೋಕಮಾಡಬೇಕೆಂದು ಹೊರಟಿದ್ದಾರೆ, ಮೈಸೂರು ಯಮಲೋಕವಾಗಲೀ ಅವರಿಗೇನೂ ದುಃಖ ಇಲ್ಲ. ಈ ವಿಷಯದಲ್ಲಿ ರಾಜ್ಯ ಸರ್ಕಾರ ತಪ್ಪು ದಾರಿ ಹಿಡಿದಿದೆ, ಅವರು ಇಷ್ಟು ದಿವ ಸುಮ್ಮನೆ ಇದ್ದುದು ಅಪ್ರಕೃತವಾಯಿತು. ಕೇಂದ್ರದವರಿಗೆ ಮೊದಲೇ ಹೇಳಬೇಕಾಗಿತ್ತು ಹೇಳದೆ ಈ ರೀತಿಯ ಪರಿಸ್ಥಿತಿ ಉಂಟಾಗಿದೆ ಎನ್ನುವುದಕ್ಕೆ ಒಂದೆರಡು ನಿದರ್ಶನಗಳನ್ನು ಕೊಡುತ್ತೇನೆ. 8-3-67ರಲ್ಲಿ "ಡೆಲ್ಲಿ ಫೌರೆನ್ಸ್ ಆಫ್ ಲೀಗಲ್ ಆಕ್ಷನ್" ಅಂತ ಹೇಳಿ ಒಂದು ಡೆಲ್ಲಿ ನ್ಯೂಸ್ ಬಂದಿದೆ. ನಮ್ಮ ರಾಜ್ಯದ ಮುಖ್ಯ ಮಂತ್ರಿಗಳು 20-8-67ರಲ್ಲಿ ಹೇಳಿದ ಮಾತು "ಈ ರಾಜ್ಯಕ್ಕೆ ಕೇಂದ್ರ ಸರ್ಕಾರದಿಂದ ಸರಿಯಾದ ಪ್ರಯತ್ನ ನಡೆದಿಲ್ಲ" ಎಂದು ಹೇಳಿದ್ದಾರೆ. ಕೇಂದ್ರದವರ ಬಗ್ಗೆ ಈ ರಾಜ್ಯ ಸರ್ಕಾರಕ್ಕೂ ಕೂಡ ಏನು ಅಭಿಪ್ರಾಯ ಇದೆ ಎಂಬುದು ಕೃಷ್ಣಾ ವಿವಾದ ಇನ್ನು ಎರಡು ತಿಂಗಳಿನಲ್ಲಿ ಬಗೆ ಹರಿಯುತ್ತದೆ ಅನ್ನುವಾಗ ಶ್ರೀಮಾನ್ ವೀರೇಂದ್ರ ಪಾಟೀಲ್‌ರವರು 2-9-67ರಲ್ಲಿ ನಾಗಾರ್ಜುನ ಸಾಗರ ಕ್ರೆಸ್ಟ್‌ಗೇಟ್ ಹಾಕುವುದನ್ನು ಮೈಸೂರು ಇಷ್ಟಪಡುವುದಿಲ್ಲ ಎಂಬುದನ್ನು ತಿಳಿಸಿದ್ದಾರೆ. 9-10-67ರಲ್ಲಿ—"ಸಿ. ಡಬ್ಲ್ಯೂ. ಅಂಡ್. ಪಿ. ಸಿ. ಚೀಫ್ ಸಪೋರ್ಟ್ಸ್ ಮೈಸೂರ್ ಆನ್ ಕ್ರೆಸ್ಟ್ ಗೇಟ್ಸ್" ಅಂತ ಹೇಳಿದ್ದಾರೆ. ಕಾನೂನು ತಜ್ಞರಾಗಲಿ, ತಾಂತಿಕ ತಜ್ಞರಾಗಲಿ ಮೈಸೂರು ಸ್ಟ್ಯಾಂಡ್‌ನ್ನು ಸಪೋರ್ಟ್ ಮಾಡಲೇಬೇಕು. ಏಕೆಂದರೆ ಕಾನೂನು ಇರುವುದು ಹಾಗೆ.

Sri C. K. RAJAIAH SHETTY.—Sir, this is an important subject in the interest of the country, but none of the P.W.D. Ministers are there in the House.

ಶ್ರೀ ಎಂ. ಎಸ್. ಕೃಷ್ಣನ್.—ಸುಮಾರು ಒಂದು ಗಂಟೆಯಿಂದ ನೋಡುತ್ತಾ ಇದ್ದೇನೆ ಒಬ್ಬರಿಗೊಬ್ಬರು ಸೇರಿಕೊಂಡು ಮಾತನಾಡುತ್ತಾ ಇದ್ದಾರೆ, ಇದರ ಕಡೆಗೆ ಯಾರೂ ಕೂಡ ಮಂತ್ರಿಗಳು ಗಮನ ಕೊಟ್ಟ ಹಾಗೆ ಕಾಣುತ್ತಾ ಇಲ್ಲ, ಇರಾಖೆಯ ಸೆಕ್ರೆಟರಿಯವರು ಮಾತ್ರ ಕೇಳುತ್ತಾ ಇದ್ದಾರೆ ಅವರು ಗುರುತು ಹಾಕಿಕೊಳ್ಳುತ್ತಾ ಇರಬಹುದು. ಆದರೆ ಇದಕ್ಕೆ ಸಂಬಂಧಪಟ್ಟ ಮಂತ್ರಿಗಳು ಯಾರೂ ಇಲ್ಲ.

I want to know whether it is the Minister for Parliamentary Affairs who is going to reply on this. ಯಾರು ರಿಪ್ಲೈ ಮಾಡುತ್ತಾರೆ ಅಂತ ಗೊತ್ತಿಲ್ಲ, ದಯವಿಟ್ಟು ವಿಚಾರ ಮಾಡಿದರೆ ಒಳ್ಳೆಯದು.

Sri MANIK RAO PATIL (Deputy Minister for Home).—Sir, it is not their concern as to who will reply. It is a collective responsibility. Any one of the Ministers will reply.

ಶ್ರೀ ಎಚ್. ಎನ್. ನಂಜೇಗೌಡ.—ನಮ್ಮ ಮಾನ್ಯ ಸದಸ್ಯರು ಹೇಳಿದ್ದು ನನ್ನ ಗಮನಕ್ಕೆ ಬರದೇ ಇಲ್ಲ, ಬಂದಿದೆ. ಈ ರಾಜ್ಯದ ಗ್ರಹಚಾರ ಚೆನ್ನಾಗಿಲ್ಲ, ಜವಾಬ್ದಾರಿ ಇಲ್ಲದಂತಹ ಮಂತ್ರಿಮಂಡಲ ಇಟ್ಟುಕೊಳ್ಳತಕ್ಕ ಪುಣ್ಯ ನಮ್ಮ ಈ ರಾಜ್ಯದ್ದು ಏನು ಮಾಡುವುದಕ್ಕೆ ಆಗುತ್ತದೆ? ಮುಖ್ಯ ಮಂತ್ರಿಗಳು ಇಂತಹ ಪ್ರಾಮುಖ್ಯವಾದ ವಿಚಾರ ಚರ್ಚೆಯಾಗುತ್ತಾ ಇರುವಾಗ ಇರಬೇಕಾಗಿತ್ತು.

ಶ್ರೀ ಕೆ. ಎಚ್. ಶ್ರೀನಿವಾಸ್.—ಅವರು ಡೆಲ್ಲಿಗೆ ಹೋಗಿದ್ದಾರೆ. ಇದು ತಮಗೆ ಗೊತ್ತಿದೆ.

ಶ್ರೀ ಎಚ್. ಎನ್. ನಂಜೇಗೌಡ.—ತಾಂತ್ರಿಕ ತಜ್ಞರು ಮೈಸೂರಿನ ಕಷ್ಟವನ್ನು ಅರ್ಥ ಮಾಡಿಕೊಂಡು ಮೈಸೂರನ್ನು ಸಪೋರ್ಟ್ ಮಾಡುತ್ತಾರೆ ಎನ್ನುವುದು ಇದಕ್ಕೆ ಒಂದು ಸಾಕ್ಷಿ. ಶ್ರೀಮಾನ್ ರಾವ್‌ರವರ ಪ್ರಯತ್ನ ಹೇಗಿದೆ ಎಂದರೆ ಶಕುನಿ ಕೌರವರನ್ನು ನಾಶ ಮಾಡುವುದಕ್ಕೆ ಹೇಗೆ ಪ್ರಯತ್ನ ಮಾಡಿದನೋ ಅದೇ ರೀತಿ ಮೈಸೂರಿನ ಹಿತ ರಕ್ಷಣೆ ಮಾಡುತ್ತೇನೆ ಎಂದು ಆ ದಿವಸ ಈ ರಾಜ್ಯಕ್ಕೆ ಬಂದದ್ದು ತೀರ ಮರುಳತನವಾಗುತ್ತದೆ ಎಂದು ಮಾತ್ರ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಕೃಷ್ಣಾ ವಿವಾದದ ಬಗ್ಗೆ ಮುಂದಿನ ಕ್ರಮ ಏನು ನ್ಯಾಯ ಯಾವಾಗ ಹೇಗೆ ಪಡೆಯುತ್ತೇವೆ ಎಂಬುದನ್ನು ವೀರೇಂದ್ರ ಪಾಟೀಲರವರು ಹೇಳಿದ್ದಾರೆ. ಇದಾದನಂತರ ಇತ್ತೀಚಿನ ವಿವರಗಳು ಏನು ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. 6-2-69ರಲ್ಲಿ ಬಂದಿರುವುದು ಕೃಷ್ಣಾ ಗೋದಾವರಿ ನದಿ ವಿವಾದದ ಬಗ್ಗೆ

"Two Tribunal plan mischievous-Delhi Pro-Andhra Stand-Set"

ಎಂದು ಹೇಳಿ ಬಂದಿದೆ. ಇದನ್ನು ಏನೂ ಇಲ್ಲದೇ ಸುಮ್ಮನೆ ಬರೆಯುವುದಿಲ್ಲ ವಿವರಗಳನ್ನು ನಾನು ಓದುವುದಕ್ಕೆ ಹೋಗುವುದಿಲ್ಲ, ಕೇಂದ್ರದವರ ಪ್ರೋ ಆಂಧ್ರ ಸ್ಟ್ಯಾಂಡ್ ಇಲ್ಲದೆ ಇಂಥಾದ್ದು ಬರೆಯುವುದಕ್ಕೆ ಆಗುವುದಿಲ್ಲ. ಸೂಕ್ತ ಆಧಾರ, ಕಾನೂನುಗಳನ್ನು ಕೊಟ್ಟು, ಕೃಷ್ಣಾ ಗೋದಾವರಿ ಡಿಸ್‌ಪ್ಯೂಟ್ ಒಂದೇ ಅಂಶ ಪ್ರಾಮಾಣಿಸಿ ಹೇಳುತ್ತಾ ಇರುವಾಗ ಈ ಡಿಸ್‌ಪ್ಯೂಟ್ ಇರುವುದು ಕೃಷ್ಣಾ ನದಿಯಲ್ಲಿರತಕ್ಕ ನೀರನ್ನು ಹಂಚುವುದಕ್ಕೇ ಹೊರತು ಗೋದಾವರಿ ನೀರನ್ನು ಹಂಚುವುದಕ್ಕಲ್ಲ ಎಂದು ಅರ್ಥವನ್ನು ಮಾಡಿರುವುದು ಪ್ರೋ ಆಂಧ್ರ ಸ್ಟ್ಯಾಂಡ್ ಅಲ್ಲದೇ ಹೋದರೆ ಈ ರೀತಿ ಬರೆಯುವುದಕ್ಕೆ ಕಾರಣವೇನಿತ್ತು. ಆಮೇಲೆ 8ನೇ ತಾರೀಖು 'ಎರಡು ಪಂಚಾಯ್ತಿಗಳ ರಚನೆಗೆ ರಾಜ್ಯದ ವಿರೋಧ'. ಉದ್ದಕ್ಕೂ 60–62ನೇ ಇಸವಿಯಿಂದಲೂ ಶ್ರೀಮಾನ್ ವೀರೇಂದ್ರ ಪಾಟೀಲ್‌ರವರು ಪಿ.ಡಬ್ಲ್ಯೂ.ಡಿ. ಇಲಾಖೆ ವಹಿಸಿ ಕೊಂಡಾಗಿನಿಂದಲೂ ಈ ನದಿ ನೀರಿನ ಪಂಚಾಯ್ತಿ ರಚನೆ ಮಾಡುವುದರ ಬಗ್ಗೆ ವಿರೋಧ ಮಾಡಿದ್ದಾರೆ ಅದು ಫಲಪ್ರದವಾಗಲಿಲ್ಲ. ಆಮೇಲೆ ಅದೇ ತಿಂಗಳ 9ನೆಯ ತಾರೀಖು ಪತ್ರಿಕೇಲಿ ಬಹು ಜಾಣತನದ ಎಡಿಟೋರಿಯಲ್ಲನ್ನು ಬರೆದಿದೆ. ತಾವು ದಯವಿಟ್ಟು ಅದನ್ನು ಓದುವಂತೆ ಮಾನ್ಯ ಮಂತ್ರಿಗಳಿಗೆ ಸೂಚನೆಮಾಡಬೇಕು. ಆ ಕೇಂದ್ರದ ನೀರಾವರಿ ಮಂತ್ರಿಗಳು ಇಷ್ಟೆಲ್ಲಾ ನಾಟಕ ಆಡುತ್ತಿರುವುದು ಆ ನಾಗಾರ್ಜುನಸಾಗರಕ್ಕೆ ಎಷ್ಟು ನೀರನ್ನು ಪಡೆಯಬಹುದೋ ಅದಕ್ಕೂ ಹೆಚ್ಚಿನ ನೀರನ್ನು ಪಡೆಯುವುದಕ್ಕಾಗಿ ಇಷ್ಟೆಲ್ಲಾ ಆಗುತ್ತಿದೆ ಎಂಬುದು ಯಾರಿಗಾದರೂ ಅರ್ಥವಾಗದೆ ಇರುವುದಿಲ್ಲ. 1962 ರಿಂದಲೂ ಆ ಕೆ. ಎಲ್. ರಾವ್ ಅವರು ಏನೇನೋ ಪ್ರಯತ್ನ ಗಳನ್ನು ಮಾಡಿ ನಮ್ಮ ಪಾಲಿನ ನೀರಿಗೆ ಕಲ್ಲು ಹಾಕುವುದಕ್ಕೆ ಪ್ರಯತ್ನಮಾಡುತ್ತಿದ್ದಾರೆ. ಅವರು ಲೋಕ ಸಭೆಯಲ್ಲಿ ಒಂದೊಂದು ಸಾರಿ ಒಂದೊಂದು ರೀತಿಯ ಹೇಳಿಕೆಯನ್ನು ಕೊಡುತ್ತಿದ್ದಾರೆ. ಅವರು ಈ ನದೀ ನೀರಿನ ಹಂಚಿಕೆ ವಿಚಾರದಲ್ಲಿ ತಜ್ಞರ ಸಲಹೆಯನ್ನು ಪಡೆದಿದ್ದರೂ ಅದನ್ನು ಹೇಳು ವುದರಲ್ಲೇ ಬಹಳ ನಿಧಾನ ಮಾಡಿದ್ದಾರೆ. ಅದೆಲ್ಲಾ ಅವರು ಮಾಡತಕ್ಕ ಒಂದು ಡಿಲೇಯಿಂಗ್ ಟ್ಯಾಕ್‌ಟಿಕ್ಸ್ ಅನ್ನುವುದು ಯಾರಿಗೆ ಗೊತ್ತಾಗುವುದಿಲ್ಲ? ಇನ್ನು ಅವರು ಆ ಬೆನಿಫಿಟ್ ಆಫ್ ಟ್ಯಾಕ್‌ಟಿಕ್ಸ್ ಸಿಕ್ಕುತ್ತೆ ಅನ್ನುವ ಭರವಸೆಯನ್ನು ಬಿಡಬೇಕು. ಅದರಿಂದ ಅವರಿಗೇನೂ ಪ್ರಯೋಜನ ವಾಗುವುದಿಲ್ಲ. ಮತ್ತೆ ನೆನ್ನೆ ಆರನೇ ತಾರೀಖಿನ ದಿನ ಮತ್ತೆ ಇದೇ ವಿಚಾರದಲ್ಲಿ ಒಂದು ಹೇಳಿಕೆ ಹೊರಡಿಸಿದ್ದಾರೆ—

"There will be another high-level bid for river water accord soon."

ಹೀಗೆ ಅವರು ಹೇಳಿರುವುದರಲ್ಲಿ ನಾವು ಎರಡು ರೀತಿಯಲ್ಲಿ ಅರ್ಥ ಮಾಡಿಕೊಳ್ಳಬಹುದು. ಅವರು ಏನು ಏನು ಹೇಳಿದ್ದಾರೆಂದರೆ ಕೃಷ್ಣಾ ಗೋದಾವರಿ ಮತ್ತು ನರ್ಮದಾ ನದಿಗಳ ನೀರಿನ ಹಂಚಿಕೆ ಬಗ್ಗೆ ಒಂದು ಇತ್ಯರ್ಥಕ್ಕೆ ಬರಲು ಮುಂದಿನ ಸಂಸತ್ ಅಧಿವೇಶನದ ಕಾಲದಲ್ಲಿ ಕೇಂದ್ರ ನೀರಾವರಿ ಮತ್ತು ವಿದ್ಯುತ್ ಸಚಿವ ಡಾ : ಕೆ. ಎಲ್. ರಾವ್ ಅವರು ಮತ್ತೊಮ್ಮೆ ಯತ್ನಿಸುವರು. ಇದರ ಒಳಾರ್ಥವೇನೆಂದರೆ ಮೈಸೂರಿನವರ ವಿವಾದವನ್ನು ಹೀಗೆ ಎಳೆಯುತ್ತಾ ನಿಧಾನ ಮಾಡುತ್ತಾ ಹೋದರೆ ಆಂಧ್ರಕ್ಕೆ ಅದು ಅನುಕೂಲವಾಗುತ್ತದೆ ಎಂಬ ಒಂದೇ ಒಂದು ಉದ್ದೇಶದಿಂದ ಕೇಂದ್ರ ಆಂಧ್ರಕ್ಕೆ ಸಹಾಯ ಮಾಡುತ್ತಿದೆ. ಇಂಥ ಸರ್ಪಾಸ್ತ್ರಗಳನ್ನು ರಾವ್ ಅವರು ಬಿಡುತ್ತಿರುವು ದನ್ನು ನಮ್ಮ ಮಂತ್ರಿಗಳು ಅರ್ಥಮಾಡಿಕೊಳ್ಳಬೇಕು. ಈ ಹಿಂದೆಯೇ ಆ ನಾಗಾರ್ಜುನ ಸಾಗರಕ್ಕೆ ಆ ಕ್ರೆಸ್‌ಗೇಟುಗಳನ್ನು ಇಡತಕ್ಕ ಸಂದರ್ಭದಲ್ಲಿ ತಜ್ಞರ ಸಮಿತಿ ಆ ಕೃಷ್ಣ ಗೋದಾವರಿ ನದಿ ನೀರಿನ ಹಂಚಿಕೆ ಬಗೆಹರಿಯದೆ ಅದನ್ನು ಇಡುವುದಕ್ಕಾಗುವುದಿಲ್ಲ ಎಂತಲೇ ಹೇಳಿರುತ್ತಾರೆಂದು ನಾನು ನಂಬುತ್ತೇನೆ. ಅಷ್ಟೇ ಅಲ್ಲದೆ ಯಾವ ತಜ್ಞರ ಸಮಿತಿಯಾಗಲಿ ನಾವು ಕೇಳುತ್ತಿರುವಂತೆ ಆ ಕೃಷ್ಣಾನದಿಯ ನೀರಿನಲ್ಲಿ ಮೈಸೂರಿನವರ ಪಾಲೆಷ್ಟಿದೆ ಎಂಬುದನ್ನು ಇತ್ಯರ್ಥ ಮಾಡುವುದಕ್ಕೆ ಎರಡು ಪಂಚಾಯಿತಿಗಳೇತಕ್ಕೆ ಬೇಕು ಎಂಬುದನ್ನು ಅದು ಆಲೋಚನೆ ಮಾಡುವುದಿಲ್ಲವೇ? ಆದ್ದರಿಂದ ಆ ತಜ್ಞರ ಸಮಿತಿಯಾದರೂ ಹಾಗೆ ಎರಡು ಪಂಚಾಯಿತಿಗಳನ್ನು ಮಾಡಬೇಕೆಂದು ಹೇಳಿರಲಾರದು. ಅದೇ ವಿಚಾರದಲ್ಲಿ ಡಾ॥ ರಾವ್ ಅವರು ರಾಜ್ಯ ಸಭೆಯಲ್ಲಿ ಒಂದು ಪ್ರಶ್ನೆಗೆ ಉತ್ತರಕೊಡುತ್ತಾ ಲೀಗಲ್ ಒಪೀನಿಯನ್ ಏನಿದೆ ಅನ್ನುವುದನ್ನು ಹೇಳುತ್ತಾ ಹೀಗೆ ಹೇಳಿದ್ದಾರೆ.

"The Krishna-Godavari water dispute also figured in the Rajya Sabha to-day. Dr. K. L. Rao, Irrigation and power Minister told Mr. Mulka Govinda Reddy that a very earnest effort is being made to solve the problem through a suitable

(ಶ್ರೀ ಎಚ್ ಎನ್. ನಂಜೇಗೌಡ)

method'. When asked whether one or two tribunals were being appointed to settle the dispute, Dr. K. L. Rao declined to elaborate his reply."

ಹಾಗೆ ಲೀಗಲ್ ಒಪೀನಿಯನ್ ಕೊಡತಕ್ಕ ಕಾಲದಲ್ಲಿ ಕೃಷ್ಣಾ ನದಿ ಒಂದರ ನೀರಿನ ಹಂಚಿಕೆಗಾಗಿ 2 ಟ್ರೈಬ್ಯುನಲ್‌ಗಳನ್ನು ರಚನೆ ಮಾಡಬೇಕೆಂದು ಸಲಹೆ ಮಾಡುವುದೂ ಕೂಡ ಬಹಳ ಕಷ್ಟ. ಅದು ಕಾನೂನು ಬಾಹಿರವಾಗುತ್ತದೆ. ಕೇಂದ್ರ ಸರ್ಕಾರದವರು ಇಲ್ಲಿಯವರೆಗೂ ಈ ನದೀ ನೀರಿನ ವಿಚಾರದಲ್ಲಿ ಅನೇಕ ಕಮಿಟಿಗಳನ್ನು ನೇಮಕ ಮಾಡಿದ್ದರೂ ಅದರ ಹಿನ್ನೆಲೆಯೆಲ್ಲಾ ಕುತಂತ್ರದಿಂದ ಕೂಡಿರುತ್ತದೆಯೇ ವಿನಾ ಅದರಲ್ಲಿ ತಾಂತ್ರಿಕವಾದಂಥ ವಿಷಯ ಬಹಳ ಕಡಮೆ ಇದೆ. ರಾಜಕೀಯದ ಹಿನ್ನೆಲೆಗಳೇ ಹೆಚ್ಚು. ಈ ದಿವಸ ಕೃಷ್ಣಾ ನದಿಯ ನೀರನ್ನು ಆಂಧ್ರದಲ್ಲಿ ಸುಮಾರು 20 ಲಕ್ಷ ಎಕರೆಗೆ ಬಳಸಲಾಗುತ್ತಿದೆ. ಇದು ಆ ಕೃಷ್ಣಾ ನದಿಯಲ್ಲಿ ಬರತಕ್ಕ ನೀರಿನ ಪ್ರಮಾಣಕ್ಕೂ ಹೆಚ್ಚಾಗಿದೆ ಅಂದರೆ ಕೃಷ್ಣಾ ನದಿಯ ನೀರನ್ನು ಕೃಷ್ಣಾ ಬಯಲಿನ ಹೊರಗೆ ತೆಗೆದುಕೊಂಡು ಹೋಗಿದ್ದಾರೆಂದು ಎದ್ದು ಕಾಣುತ್ತದೆ. ನಮಗೆ ಆ ಗೋದಾವರಿ ನೀರಲ್ಲಿ ಇರತಕ್ಕ ಆಸಕ್ತಿ ಏನೇನೂ ಇಲ್ಲ ಕೇಂದ್ರ ಸರ್ಕಾರದವರು ಅಂತರ್ ರಾಜ್ಯಗಳ ನದೀ ನೀರಿನ ಆಡಳಿತ ಹತೋಟಿಗೆ ಒಂದು ಮಂಡಳಿಯನ್ನು ರಚಿಸಬೇಕಾಗಿತ್ತು. ಅದನ್ನು ಮಾಡದೆ ಇರುವುದರಿಂದ ಆ ಕೇಂದ್ರ ಸರ್ಕಾರದವರು ಅವರು ಇಲ್ಲಿಯತನಕ ಯಾವುದೆ ಆ ಗುಲ್ಹಾಟಿ ಕಮಿಷನ್ ಅಥವಾ ಮತ್ತೊಂದು ಕಮಿಷನ್ ಹೀಗೆ ಏನೇ ನೇಮಕ ಮಾಡಿದ್ದರೂ ನಾವು ಕೋರ್ಟಿಗೇನಾದರೂ ಹೋದರೆ ಆ ಕೇಂದ್ರದವರ ಮತ್ತು ಆಂಧ್ರದವರ ನಡವಳಿಕೆಗಳು ಕಾನೂನು ಬಾಹಿರವಾದವುಗಳು ಎಂಬುದನ್ನು ಅವರು ಚೆನ್ನಾಗಿ ಮನಗಂಡಿದ್ದಾರೆ. ಅದಕ್ಕಾಗಿ ಅವರು ನಮಗೆ ಅವಕಾಶ ಕೊಡದೆ ಡಿಲೇ ಟ್ಯಾಕ್‌ಟಿಕ್ಸನ್ನು ಉಪಯೋಗಿಸುತ್ತಿದ್ದಾರೆ. ಕೃಷ್ಣಾ ನದಿಯ ನೀರನ್ನು ಗೋದಾವರಿ ಬಯಲಿಗೆ ಉಪಯೋಗ ಮಾಡುವುದು ಕಾನೂನಿಗೆ ವಿರೋಧವಾದದ್ದು ಬಾಹಿರವಾದದ್ದು ಅನ್ನುವುದು ಯಾರಿಗೆ ಗೊತ್ತಾಗುವುದಿಲ್ಲ? ಇಲ್ಲಿಯತನಕ ಮೈಸೂರಿನವರಿಗೆ ಆ ಕೃಷ್ಣಾ ನದಿಯಲ್ಲಿ ಎಷ್ಟು ನೀರಿನ ಪಾಲು ಸಿಕ್ಕಬೇಕಾಗಿತ್ತೋ ಅಷ್ಟು ಸಿಕ್ಕಿಲ್ಲ ಎಂಬುದು ಕೇಂದ್ರಕ್ಕೆ ಚೆನ್ನಾಗಿ ಗೊತ್ತಿದೆ. ಆದ್ದರಿಂದ ಇಲ್ಲಿ ಒಂದು ಟ್ರಿಬ್ಯುನಲ್ ಕಾನ್‌ಸ್ಟಿಟ್ಯೂಟ್ ಮಾಡುವುದಕ್ಕೆ ಅವಕಾಶ ಇದೆಯೇ ವಿನಾ ಎರಡಕ್ಕೆ ಖಂಡಿತ ಅವಕಾಶವಿಲ್ಲ. ಆ ಕೃಷ್ಣಾ ನದಿಯಲ್ಲಿ ಬರತಕ್ಕದ್ದು 2017 ಟಿ. ಎಂ. ಸಿ. ಎಫ್. ಟಿ. ನೀರು ಅದರಲ್ಲಿ ಯಾರ ಯಾರ ಷೇರ್ ಎಷ್ಟೆಷ್ಟಿದೆ ಎಂಬುದನ್ನು ನಿರ್ಧಾರ ಮಾಡುವುದಕ್ಕೆ ಎರಡು ಕಮಿಷನ್‌ಗಳೇತಕ್ಕೆ? ಆದರೆ ಈ ವಿಚಾರದಲ್ಲಿ ನಿಜವಾದ ಆ ತಜ್ಞರ ಸಮಿತಿಯ ಅಭಿಪ್ರಾಯ ಏನಿದೆಯೋ ಅದನ್ನು ರಾವ್ ಅವರು ಮುಚ್ಚಿಟ್ಟಿರಬೇಕೆಂದು ನನಗನಿಸುತ್ತಿದೆ. ಆ ಸತ್ತವರಿಗೆ ಕೆಲವಾಗ ಏನಾದರೂ ಒಂದು ಸರ್ಟಿಫಿಕೇಟ್ ಬೇಕು ಎಂದು ಕೇಳಿದಾಗ ಅದಕ್ಕೆ ಆಫೀಸುಗಳಲ್ಲಿ ಒಂದು ಸರ್ಟಿಫಿಕೇಟನ್ನು ಬರೆದು ಕೊಡುತ್ತಾರಲ್ಲಾ ಹಾಗೆ ಇಲ್ಲಿಯೂ ಆ ಡಾ: ರಾವ್ ಅವರು ಆ ಕೇಂದ್ರದ ರಾ ಸೆಕ್ರೆಟೇರಿಯಟ್ ನಿಂದ ಒಂದು ಆ. 2017 ಟಿ. ಎಂ. ಸಿ. ಎಫ್. ಟಿ. ನೀರನ್ನು ಹಂಚಿಕೆ ಮಾಡಲು ಎರಡು ಟ್ರಿಬ್ಯುನಲ್‌ಗಳನ್ನು ನೇಮಕ ಮಾಡಬೇಕು ಎಂದು ಆ ತಜ್ಞರ ಸಮಿತಿ ಸಲಹೆ ಮಾಡಿದೆ ಅವರು ಹೇಳುತ್ತಿರಬಹುದು. ಆದರೆ ನಾನು ಆ ತಜ್ಞರ ಸಮಿತಿ ಅಂಥ ಒಂದು ಸಲಹೆಯನ್ನು ಕೊಟ್ಟಿದೆ ಎಂಬುದನ್ನು ಕನಸ್ಸಿನಲ್ಲಿ ಕೂಡ ನಂಬುವುದಿಲ್ಲ. ಈ ದಿವಸ ನಮ್ಮ ರಾಜ್ಯ ಸರ್ಕಾರಕ್ಕೆ ಇನ್ನೊಂದು ತಲೆಕೆಡಿಸಿಕೊಳ್ಳುವ ಪ್ರಸಂಗ ಉದ್ಭವಿಸಿದೆ. ಅದೇನೆಂದರೆ ಆ ಅಪ್ಪರ್ ಕೃಷ್ಣಾ ಯೋಜನೆಯನ್ನು ನಾಲ್ಕನೆ ಪಂಚವಾರ್ಷಿಕಯೋಜನೆಯಲ್ಲಿ ಕೈ ಬಿಟ್ಟಿದ್ದಾರೆ ಎಂಬುದಾಗಿ ಪತ್ರಿಕೆಗಳಲ್ಲಿ ಮಾತ್ರ ಬಂದಿವೆ. ಇದೆಲ್ಲಾ ನಾನಾಗಲೇ ಹೇಳಿದಂತೆ ಡಿಲೇ ಟ್ಯಾಕ್‌ಟಿಕ್ಸ್; ಆಂಧ್ರದವರಿಗೆ ಹೆಚ್ಚು ನೀರನ್ನು ಒದಗಿಸತಕ್ಕ ನಾಟಕ. ಆಂಧ್ರದ ಒಬ್ಬ ಏಜಂಟರು ಆ ಕೇಂದ್ರ ಸರ್ಕಾರದಲ್ಲಿ ನೀರಾವರಿ ಮಂತ್ರಿಯಾಗಿರುವತನಕ ನಮ್ಮ ವಿಚಾರದಲ್ಲಿ ಈ ಡಿಲೇ ಟ್ಯಾಕ್‌ಟಿಕ್ಸ್‌ಗಳು ನಡೆಯುತ್ತಲೇ ಇರುತ್ತವೆ. ಅದನ್ನು ರುಜುವಾತು ಮಾಡಲು ನಾನು ಅನೇಕ ಉದಾಹರಣೆಗಳನ್ನು ಕೊಡಬಲ್ಲೆ; ನನಲ್ಲಿವೆ. ಇನ್ನಾದರೂ ಇಂಥ ಡಿಲೇ ಟ್ಯಾಕ್‌ಟಿಕ್ಸನ್ನು ನಡೆಸುವುದಕ್ಕೆ ಅವಕಾಶವಿಲ್ಲ, ಕೇಂದ್ರ ಕೂಡ ಅದಕ್ಕೆ ಅವಕಾಶ ನೀಡಬಾರದು ಎನ್ನುವುದನ್ನು ನಮ್ಮ ಸರ್ಕಾರ ಆ ಕೇಂದ್ರಕ್ಕೆ ಖಂಡತುಂಡವಾಗಿ ತಿಳಿಸಬೇಕು. ಇಲ್ಲಿಯತನಕ ಮೊದಲಿನಿಂದಲೂ ಆ ಕೃಷ್ಣಾ ಮತ್ತು ಗೋದಾವರಿ ಎರಡು ನದಿಗಳೂ ಬೇರೆ ಬೇರೆ ಅಲ್ಲ ಎಂಬುದನ್ನು ಅಂಗೀಕಾರ ಮಾಡಿದ್ದೇವೆ. ಹಾಗಿರುವಾಗ ಕೃಷ್ಣಾ ನದೀ ನೀರನ್ನು ಹಂಚಿಕೆ ಮಾಡಬೇಕು ಎನ್ನತಕ್ಕ ವಿಚಾರಕ್ಕೆ ಒಂದು ಟ್ರೈಬ್ಯುನಲ್ ನೇಮಕ ಮಾಡಿ ಗೋದಾವರಿ ನದಿಯ ನೀರಿನ ಹಂಚಿಕೆಗೆ ಬೇರೆ ಒಂದು ಟ್ರಿಬ್ಯುನಲ್ ನೇಮಕ ಮಾಡಬೇಕು ಎನ್ನುವುದರ ಔಚಿತ್ಯ ನನಗೆ ಅರ್ಥವಾಗದು ಕಾನೂನು ಪ್ರಕಾರ ಅದಕ್ಕೆ ಅವಕಾಶವಿಲ್ಲ.

ಕೇಂದ್ರ ಸರ್ಕಾರದಲ್ಲಿ ಪ್ರಧಾನ ಮಂತ್ರಿಗಳ ಹಾಗೂ ರಾಜ್ಯ ಮಂತ್ರಿಗಳ ಒಂದು ದಯಾ ದಾಕ್ಷಿಣ್ಯ ಮಾನ್ಯ ಮುಖ್ಯ ಮಂತ್ರಿಗಳಿಗೆ ಈ ವಿಷಯದ ಬಗ್ಗೆ ಬರುತ್ತದೆ. ಮಹಾರಾಷ್ಟ್ರದವರಾಗಲೀ, ಇಲ್ಲಿಯವರಾಗಲೀ ಅವರ ಪರವಾಗಿ ಮಾತನಾಡಬೇಕಾಗಿ ಬರುತ್ತದೆ. ಅಥವಾ ಸುಮ್ಮನೆ ಇರುವ ಪರಿಸ್ಥಿತಿಯೂ ಬರುತ್ತದೆ. ಮಾನ್ಯ ಮುಖ್ಯ ಮಂತ್ರಿಗಳು ಈ ಇಕ್ಕಟ್ಟನ್ನು ತಪ್ಪಿಸಿಕೊಳ್ಳುವುದಕ್ಕಾಗುವುದಿಲ್ಲ. ಕೇಂದ್ರ ಸರ್ಕಾರದ ಮುಂದೆ ಇದರ ಬಗ್ಗೆ ತಬ್ಬಿಬ್ಬಾಗಬಾರದು. ತೀಕ್ಷ್ಣವಾಗಿ ಮಾತನಾಡಬೇಕು. ಅಲ್ಲಿ ಅವರ ಹೇಳಿಕೆ ಈ ಸಭೆಯಲ್ಲಿ ಚರ್ಚೆಮಾಡಿ ತೀರ್ಮಾನ ತೆಗೆದುಕೊಂಡಿರುವುದಕ್ಕೆ ಅನುಗುಣವಾಗಿರಬೇಕು. ಕಾನೂನು ತಜ್ಞರಿಂದ ಪರಿಶೀಲನೆಯಾಗಿ ಈ ಸಭೆಯಲ್ಲಿಯೂ ಮತ್ತು ಪರಿಷತ್ತಿನಲ್ಲಿಯೂ ಇದರ ಬಗ್ಗೆ ಅಂತ್ಯ ತೀರ್ಮಾನ ತೆಗೆದುಕೊಂಡಿದ್ದೇವೆ. ದೆಹಲಿಯಲ್ಲಿ ಇದರ ಬಗ್ಗೆ ಮಾತುಕತೆಗಳು ಏನು ನಡೆದರೂ ಈ ವಿಧಾನಸಭೆಯಲ್ಲಿ ಏನು ತೀರ್ಮಾನ ತೆಗೆದುಕೊಳ್ಳುತ್ತೇವೋ ಆ ತೀರ್ಮಾನಕ್ಕೆ ಸರಕಾರ ಪುರಸ್ಕಾರ ಕೊಡುವಂತಿರಬೇಕು. ಈ ಅಸೆಂಬ್ಲಿ ಮತ್ತು ಪರಿಷತ್ತು ಹಾಗೂ ಈ ಸರ್ಕಾರದ ನಿಲುವು ಪ್ರಕಾರ ಆ ತೀರ್ಮಾನವಿಲ್ಲದಿದ್ದರೆ, ನಾವು ಬಹಳ ಇಕ್ಕಟ್ಟಿಗೆ ಸಿಗುವ ಪರಿಸ್ಥಿತಿ ಬರುತ್ತದೆಂದು ನಾವು ಎಷ್ಟೋ ಸಾರಿ ಹೇಳಿದ್ದೇವೆ. ಒಂದು ವೇಳೆ ಅವರು ನಮ್ಮ ಮುಖ್ಯ ಮಂತ್ರಿಗಳಿಗೆ ತರೆ ಸವರುವ ಪರಿಸ್ಥಿತಿ ಬರಬಹುದು. ಆದರೆ ಒಂದು ಸಾರಿ ಈ ಸಭೆಯಲ್ಲಿ ತೀರ್ಮಾನವಾದಮೇಲೆ ಮತ್ತೆ ಬೇರೆ ತೀರ್ಮಾನ ಮಾಡುವುದು ಸರಿಯಲ್ಲ. ಕಾನೂನು ತಜ್ಞರನ್ನೂ ಮತ್ತು ಇಂಜನಿಯರುಗಳನ್ನೂ, ನಿವೃತ್ತಿ ಹೊಂದಿರುವ ಅನುಭವಸ್ಥರಾದ ಚೀಫ್ ಇಂಜನಿಯರುಗಳನ್ನೂ, ಅಡ್ವೋಕೇಟ್ ಜನರಲ್ ಅವರನ್ನೂ, ಮತ್ತು ಹೆಸರಾದಂಥ ಕಾನೂನು ಪಂಡಿತರನ್ನೂ ವಿಚಾರಿಸಿ ಈ ವಿಷಯದಲ್ಲಿ ಒಂದು ತೀರ್ಮಾನವನ್ನು ನಾವು ಈ ಸಭೆಯಲ್ಲಿ ತೆಗೆದುಕೊಂಡಿರುವುದರಿಂದ, ಇದರಲ್ಲಿ ಅಂತಹ ಇಕ್ಕಟ್ಟೇನೂ ಇರುವುದಿಲ್ಲ. 10-12 ವರ್ಷಗಳಿಂದಲೂ ಈ ಸಭೆಯಲ್ಲಿ ಇದರ ಬಗ್ಗೆ ತೀರ್ಮಾನ ತೆಗೆದುಕೊಂಡು ಇಂತಹ ಸೂಚನೆಗಳನ್ನು ಕೊಡುತ್ತಲೇ ಇದ್ದೇವೆ. ಮುಖ್ಯವಾಗಿ ಇವರಿಗೆ ಕೃಷ್ಣಾ ನದಿಯ ವಿಷಯದಲ್ಲಿ ಆಸಕ್ತಿ ಇದ್ದರೆ, ಕೂಡಲೇ ಸರ್ಕಾರದವರು ಹೆಚ್ಚು ಗಮನ ಕೊಟ್ಟು, ಹೆಚ್ಚಿನ ಆಸಕ್ತಿಯನ್ನು ತೋರಿಸಿ ಈ ಸಮಸ್ಯೆಯನ್ನು ಇನ್ನೂ ಚೆನ್ನಾಗಿ ಅರ್ಥ ಮಾಡಿಕೊಂಡು, ನಾನು ಕೊಟ್ಟ ಸೂಚನೆಯನ್ನು ಮಾನ್ಯ ಮುಖ್ಯ ಮಂತ್ರಿಗಳಿಗೆ ತಿಳಿಸಿ ಅದರ ಬಗ್ಗೆ ಆಖೈರು ತೀರ್ಮಾನ ಮಾಡಬೇಕೆಂದು ಕೇಳಿಕೊಂಡು ನನ್ನ ಈ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಸ್. ಎಂ. ಗುರೆಡ್ಡಿ (ಮುದ್ದೇಬೀಹಾಳ್).—ಅಧ್ಯಕ್ಷರೇ, ಮಾನ್ಯ ಶ್ರೀ ನಂಜೇಗೌಡರು ತಂದಿರತಕ್ಕ ಈ ಸೂಚನೆ ಸರಿಯಾದುದೇನೋ ನಿಜ. ಈಗಾಗಲೇ ನೀರಿನ ವಿವಾದದ ಸಲುವಾಗಿ ಈ ಮನೆಯಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಪ್ರಸ್ತಾಪ ಮಾಡಿದ್ದಾರೆ ಮತ್ತು ಸರ್ಕಾರದ ಧೋರಣೆಯನ್ನೂ ಸಹ ವಿಶದಪಡಿಸಿದ್ದಾರೆ. ನಾನು ಮಾನ್ಯ ಸ್ನೇಹಿತರಾದ ಶ್ರೀ ನಂಜೇಗೌಡರಿಗೆ ಒಂದು ಮಾತನ್ನು ಹೇಳಬೇಕಾಗಿದೆ. ಎಲ್ಲಿ ರಾಜ್ಯದ ಹಿತಕ್ಕೆ ಧಕ್ಕೆ ಬರುತ್ತದೋ ಅಂಥಾದ್ದರಲ್ಲಿ ನಾವೂ, ನೀವೂ ಒಂದಾಗೋಣ. ಈಗಾಗಲೇ ಮಾನ್ಯ ಮುಖ್ಯ ಮಂತ್ರಿಗಳು ದೆಹಲಿಗೆ ಹೋಗಿದ್ದಾರೆ. ಅದರ ಸಲುವಾಗಿ ಅಲ್ಲಿ ಮಾತುಕತೆ ಆಗಬಹುದು. ಅಲ್ಲಿ ಮೈಸೂರಿಗೆ ಧಕ್ಕೆ ಬರುವ ರೀತಿಯಲ್ಲಿ ನಿರ್ಣಯವಾದರೆ ಈ ನೀರಿನ ಸಮಸ್ಯೆ ನ್ಯಾಯವಾಗಿ ಪರಿಹಾರವಾಗದೇ ಇದ್ದ ಪಕ್ಷದಲ್ಲಿ ನಾವೂ ನೀವೂ ಯಾವ ಕ್ರಮಕ್ಕೆ ಸಿದ್ಧರಾಗೋಣವೆಂಬ ವಿಚಾರ ಮಾಡೋಣ. ಕೃಷ್ಣಾ ಮತ್ತು ಗೋದಾವರಿ ವಿವಾದ ಇವತ್ತು ಹುಟ್ಟಿದ್ದಲ್ಲ. ನಾನು ಮೊದಲೇ ಹೇಳಿದ್ದೇನೆ, ಇದಕ್ಕೆ ಕೇಂದ್ರ ಸರ್ಕಾರವೇ ಸಂಪೂರ್ಣ ಜವಾಬ್ದಾರಿ, ನೀರಿನ ವಿವಾದ ಮತ್ತು ಗಡಿ ವಿವಾದಗಳಿಗೆ ಅವರೇ ಕಾರಣ ಭೂತರು. ರಾಜ್ಯ ರಾಜ್ಯಗಳಲ್ಲಿ ವೈಷಮ್ಯ ಬೆಳೆಸುವುದಕ್ಕೆ ಅವರೇ ಕಾರಣರು ಎಂಬುದಾಗಿ ನಾನು ಪದೇ ಪದೇ ಹೇಳುವುದಕ್ಕೆ ಹಿಂಜರಿಯುವುದಿಲ್ಲ. ಮಾನ್ಯ ಸ್ನೇಹಿತರಾದ ಶ್ರೀ ಸಾಣಿಕೊಪ್ಪ ಅವರು ಹೇಳುತ್ತಿದ್ದರು, ಕೃಷ್ಣಾ ನದಿಯಲ್ಲಿ ನೀರೇ ಇಲ್ಲವೆಂದು. ಒಮ್ಮೆ ಇದನ್ನು ಕೇಳಿ ನಮಗೆ ಗಾಬರಿಯುಂಟಾಗುತ್ತದೆ. ಇವತ್ತು ಕೃಷ್ಣಾ ನದಿಗೆ ಎರಡು ಕಡೆ ಡ್ಯಾಂ ಕಟ್ಟಬೇಕು. ಕೃಷ್ಣಾ ನದಿಯಲ್ಲಿ ಸಾಕಷ್ಟು ನೀರು ಇದೆ ಎಂಬ ಮಾತನ್ನು ನಾನು ಕೇಳಿದ್ದೇನೆ. ಇವತ್ತಿನದಿವಸ ನಾವು ಈ ನೀರಿನ ವಿವಾದವನ್ನು ಅಷ್ಟು ಲಘುವಾಗಿ ಕಾಣತಕ್ಕದ್ದಲ್ಲ. ಏಕೆಂದರೆ, ಇದು ನಮ್ಮ ಜೀವನದ ಪ್ರಶ್ನೆ ಇದೆ. ಇದಕ್ಕೆ ನಾವು ಈಗ ಅದನ್ನು ಹಗುರವಾಗಿ ಕಂಡು, ಏನೋ ಅವರು ತೀರ್ಪು ಕೊಟ್ಟಿದ್ದಾರೆಂದು ಅವರ ತೀರ್ಪನ್ನು ಗಣನೆಗೆ ತೆಗೆದುಕೊಂಡು ನೋಡದೇ ಇದ್ದರೆ ನಿಜವಾಗಿ ಮೈಸೂರು ರಾಜ್ಯಕ್ಕೆ ಅನ್ಯಾಯ ಮಾಡಿದಂತಾಗುತ್ತದೆ. ಆದಕಾರಣ ನಾವೂ ನೀವೂ ಕೂಡ ಇದರ ಬಗ್ಗೆ ಕೂಡಿ ವಿಚಾರ ಮಾಡೋಣ. ಇವತ್ತಿನದಿವಸ ಇದರ ಬಗ್ಗೆ ನಮ್ಮ ರಾಜ್ಯದ ನಿಲುವು ಏನೆಂಬುದನ್ನು ಸ್ಪಷ್ಟಪಡಿಸಿದ್ದೇವೆ. ನನಗೆ ಒಂದು ಶಂಕೆ ಬರುತ್ತಾ ಇದೆ. ಮೊನ್ನೆ ವರ್ತಮಾನ ಪತ್ರಿಕೆಯಲ್ಲಿಯೂ ನೋಡಿದ್ದೇನೆ. ಪುನಃ ಡೆಪ್ಯುಟಿ ಪ್ರೈಮ್ ಮಿನಿಸ್ಟರ್ ಮತ್ತು ಪ್ರೈಮ್ ಮಿನಿಸ್ಟರ್ ಕೂಡಿಕೊಂಡು ಈ ನೀರಿನ

(ಶ್ರೀ ಎಸ್. ಎಂ. ಗುರೆಡ್ಡಿ)

ವಿವಾದವನ್ನು ಅವರಲ್ಲಿಯೇ ತೀರ್ಮಾನ ಮಾಡಿ ಬಗೆಹರಿಸುವ ಧೋರಣೆಯನ್ನು ಇಟ್ಟು ಕೊಂಡಿದ್ದಾರೆಂಬುದಾಗಿ ನನಗೆ ತಿಳಿದುಬರುತ್ತಾ ಇದೆ. ನ್ಯಾಯಾಲಯಕ್ಕೆ ಕಳುಹಿಸೋಣವೆಂದು ಹೇಳಿದ ಜನ ಪುನಃ ಪರಿಶೀಲಿಸೋಣವೆಂದು ಹೇಳುವುದರಿಂದ ಇನ್ನೂ ಯಾವ ಒಂದು ನಿರ್ಧಾರವನ್ನೂ ಕೈಗೊಂಡಿಲ್ಲವೆಂಬುದು ವ್ಯಕ್ತವಾಗುತ್ತದೆ. ಮಾನ್ಯ ಮುಖ್ಯ ಮಂತ್ರಿಗಳು ಈ ವಿಚಾರವನ್ನು ನ್ಯಾಯಾಲಯಕ್ಕೆ ಒಪ್ಪಿಸುವ ತೀರ್ಮಾನ ಮಾಡಿದ್ದಾರೆಂದು ಹೇಳಿದರು. ಆದರೆ ಪುನಃ ಗೋದಾವರಿಗೇ ಒಂದು ಬೇರೆ ಕಮಿಷನ್, ಕೃಷ್ಣಾ ನದಿಗೇ ಒಂದು ಬೇರೆ ಕಮಿಷನ್ ನೇಮಿಸುವ ಧೋರಣೆ ಕೇಂದ್ರದಲ್ಲಿ ಏತಕ್ಕೆ ಉದ್ಭವಿಸಿತು ? ನಾವು ಯೋಚನೆಮಾಡಿ ಅದನ್ನು ಟ್ರಿಬ್ಯೂನಲ್‌ಗೆ ಕಳುಹಿಸಿರಿ ಎಂದು ಹೇಳಿದಾಗ ಪ್ರೈಮ್ ಮಿನಿಸ್ಟರ್ ಹೇಳಬೇಕಾಗಿತ್ತು, ಗೋದಾವರಿಗೆ ಒಂದು ಕಮಿಷನನ್ನು ನೇಮಿಸಿದ್ದೇವೆ, ಕೃಷ್ಣಾ ನದಿಗೆ ಒಂದು ಬೇರೆ ಕಮಿಷನ್ ನೇಮಿಸುತ್ತೇವೆಂದು. ಆಗ ನಾವು ಒಂದು ಟ್ರಿಬ್ಯೂನಲ್‌ಗೆ ಏರ್ಪಾಡು ಮಾಡಿ ಎಂದು ಹೇಳಬಹುದಾಗಿತ್ತು. ಕೇಂದ್ರ ಸರ್ಕಾರದಲ್ಲಿ ಪ್ರಭಾವ ಬೀರುವ ವ್ಯಕ್ತಿ ನಮ್ಮ ರಾಜ್ಯದ ಬಗ್ಗೆ ಇರಲಿಲ್ಲವಾದ್ದರಿಂದ, ಉಳಿದ ರಾಜ್ಯಗಳಿಗೆ ಸಂಬಂಧಪಟ್ಟ ಹಾಗೆ ಒಂದು ಧೋರಣೆಯನ್ನು ಇಟ್ಟುಕೊಂಡು ಕಮಿಷನ್ ನೇಮಿಸುತ್ತಾರೆಂಬ ಭಾವನೆ ಈ ಮೈಸೂರಿನ ಜನತೆಗೆ ಬಂದಿದೆ. ಇದು ನಿಜವಾಗಿ ದುಃಖರವಾದ ಸಂಗತಿ, ಏಕೆಂದರೆ ಮೈಸೂರು ಕೇಸು ಗುರುತರವಾದುದು ಮತ್ತು ಕಠಿಣವಾದುದು ಎಂದು ಯಾರೂ ಹೇಳಬೇಕಾದ ಅವಶ್ಯಕತೆ ಇಲ್ಲ. ಮೈಸೂರು ನೀರಾವರಿಯಲ್ಲಿ ಬಹಳ ಹಿಂದುಳಿದ ಪ್ರದೇಶ. ಈ ಪ್ರದೇಶಕ್ಕೆ ನಾವು ಹೆಚ್ಚು ಆದ್ಯತೆ ಕೊಡಬೇಕು. ಇದಕ್ಕೆ ಹೆಚ್ಚು ನೀರಿನ ಸವಲತ್ತನ್ನು ಕೊಡಬೇಕು. ಆ ಒಂದು ಧೋರಣೆಯನ್ನು ಕೇಂದ್ರ ಸರ್ಕಾರದವರು ವಹಿಸಿಕೊಳ್ಳಬೇಕು. 1960–61 ರ ಪೂರ್ವದಲ್ಲಿ ಗುಲ್ಹಾಟಿ ಆಯೋಗದವರು ಇದರ ಬಗ್ಗೆ ಚೆನ್ನಾಗಿ ಸ್ಪಷ್ಟಪಡಿಸಿದ್ದಾರೆ. ನಮ್ಮ ರಾಜ್ಯಕ್ಕೆ 600 ಟಿ.ಎಂ.ಸಿ.ಫೀಟ್ ನೀರು ಅಲಾಟ್ ಮಾಡಿದ್ದರೂ, ಅದನ್ನು ಇನ್ನೂ ಸರಿಯಾಗಿ ಸರ್ವೆ ಮಾಡಲಿಲ್ಲ. ಮತ್ತೆ 100 ಟಿ.ಎಂ.ಸಿ.ಫೀಟ್ ವಾಟರ್ ಸಿಗಬಹುದು ಎಂಬುದಾಗಿ ಅಡ್‌ಹಾಕ್ ಅಲಾಟ್‌ಮೆಂಟ್ ಮಾಡಿದರು. ಈಗಾಗಲೇ ನಂಜೇಗೌಡರು ಹೇಳಿದಹಾಗೆ ಕೇಂದ್ರ ಸರ್ಕಾರದಲ್ಲಿ ಇರುವಂಥ ಒಬ್ಬ ಮಂತ್ರಿಗಳು ಡಿಲೇಯಿಂಗ್ ಟ್ಯಾಕ್ಟಿಕ್ಸ್ ಮಾಡುತ್ತಿದ್ದಾರೆಂಬ ಭಾವನೆಯನ್ನು ವ್ಯಕ್ತಪಡಿಸಿದರು. ಏತಕ್ಕೆಂದರೆ, ಇವತ್ತು ನಾಗಾರ್ಜುನಸಾಗರಕ್ಕೆ ಕ್ರಸ್ಟ್‌ಗೇಟ್ ಹಾಕಲಿಕ್ಕೆ ಪರ್ಮಿಷನ್ ಕೊಡುತ್ತಾ ಇಲ್ಲ ಎಂದು ಹೇಳುತ್ತಾ ಇದ್ದರೂ ಇವತ್ತು ಅಲ್ಲಿ ಕ್ರಸ್ಟ್‌ಗೇಟ್ ಹಾಕಿದ್ದಾರೋ ಇಲ್ಲವೋ ಎಂಬುದನ್ನು ಎಲ್ಲಿಯೂ ವ್ಯಕ್ತಪಡಿಸಿಲ್ಲ. ನನಗೆ ತಿಳಿದಮಟ್ಟಿಗೆ ಈಗಾಗಲೇ ಆಂಧ್ರ ಸರ್ಕಾರದವರು ನಾಗಾರ್ಜುನ ಸಾಗರಕ್ಕೆ ಕ್ರಸ್ಟ್‌ಗೇಟನ್ನು ಹಾಕಿದ್ದಾರೆ. ಅಂದಮೇಲೆ ಮಾನ್ಯ ಶ್ರೀ ಚೆನ್ನಬಸಪ್ಪನವರು ಹೇಳಿದ ಹಾಗೆ ಅಲ್ಲಿ ಪ್ರೆಸ್ಕ್ರಿಪ್ಟಿವ್ ರೈಟ್ಸ್ ಬರಬಹುದು ಎಂಬ ಸಂಶಯ ಬರುತ್ತದೆ. ಈಗ ಕೃಷ್ಣಾ ಮತ್ತು ಗೋದಾವರಿ ನೀರಿನ ಬಗ್ಗೆ ಎರಡಕ್ಕೂ ಒಂದು ಕಮಿಷನ್ ನೇಮಿಸುವುದರಿಂದ, ಗೋದಾವರಿ ನೀರನ್ನು ಕೃಷ್ಣಾಕ್ಕೆ ತಿರುಗಿಸುವುದರಿಂದ, ಮುಂದೆ ಅದನ್ನು ಸರ್ವೆಮಾಡಿ ಆಂಧ್ರದವರಿಗೆ ಎಷ್ಟು ಬೇಕೋ ಅದನ್ನು ಅವರಿಗೆ ಕೊಡಿ, ಅನಂತರ ಮೈಸೂರಿಗೆ ಎಷ್ಟು ಬೇಕೋ ಅದನ್ನು ಮೈಸೂರಿನವರಿಗೆ ಕೊಡಿ ಎಂದು ನಾವು ಕೇಳುತ್ತಿದ್ದೇವೆ. ನಾವು ಈಗ ಅದನ್ನು ಆರ್ಬಿಟ್ರೇಷನ್ನಿಗೆ ನೇಮಿಸುವ ಬಗ್ಗೆ ನಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದೇವೆ. ನೀವು ಗೋದಾವರಿ ನೀರನ್ನು ಕೃಷ್ಣಾ ನದಿಗೆ ತಿರುಗಿಸಿದ ವಿನಾ ಅವರಿಗೆ ಹೆಚ್ಚಿಗೆ ಅಲಾಟ್‌ಮೆಂಟ್ ಕೊಡಬಾರದು ಎಂಬುದಾಗಿ ಹೇಳಿದ್ದೇವೆ. ಇದನ್ನು ಅವರು ತಿಳಿದುಕೊಳ್ಳದೆ ಗೋದಾವರಿಗೆ ಒಂದು ಕಮಿಷನ್, ಕೃಷ್ಣಾಕ್ಕೆ ಒಂದು ಕಮಿಶನ್ ಮಾಡುವುದರಿಂದ ನಮಗೆ ಬಹಳ ಅನ್ಯಾಯವಾಗುತ್ತದೆ. ಆದ ಕಾರಣ ನೀರಿನ ಪ್ರಶ್ನೆ ಏನಿದೆ, ಅದು ಆಗುಹೋಗುಗಳ ಪ್ರಶ್ನೆಯಾದುದರಿಂದ, ಇದು ಒಂದು ಮಹತ್ತರವಾದ ಪ್ರಶ್ನೆಯಾಗಿದೆ. ಇದರಲ್ಲಿ ಯಾರೂ ಪಾರ್ಟಿ, ಪಕ್ಷ ಎಂದು ಇಟ್ಟುಕೊಳ್ಳದೆ ನೀರಿನ ಹಕ್ಕಿನ ಸಲುವಾಗಿ ಎಲ್ಲರೂ ಒಂದಾಗಬೇಕು. ಆದ್ದರಿಂದ ಮಾನ್ಯ ನಂಜೇಗೌಡರು ಇದನ್ನು ವಾಪಸ್ಸು ತೆಗೆದುಕೊಳ್ಳಬೇಕು. ಮುಖ್ಯಮಂತ್ರಿಯವರು ಈಗ ಡೆಲ್ಲಿಗೆ ಹೋಗಿದ್ದಾರೆ, ಅವರು ಏನು ವಿಚಾರ ತಿಳಿದುಕೊಂಡು ಬರುತ್ತಾರೆ, ಅದನ್ನು ನೋಡಿಕೊಂಡು ಅನಂತರ ಈ ವಿಚಾರವನ್ನು ತೆಗೆದುಕೊಳ್ಳಬಹುದು ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

6-00 P.M.

ಶ್ರೀ ಕೆ. ಸಂಗನ ಗೌಡ (ಲಿಂಗಸುಗೂರು).—ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ನಂಜೇಗೌಡರು ತಂದಿರತಕ್ಕಂತಹ ಈ ವಿಚಾರವು ನಮ್ಮ ರಾಜ್ಯಕ್ಕೆ ಬಹಳ ಮಹತ್ವವಾದ ಪ್ರಶ್ನೆಯಾಗಿದೆ ಎಂದು

ಹೇಳಬೇಕಾಗಿದೆ. ಇದಕ್ಕೆ ಅನಿವಾರ್ಯವಾದ ಸಹಾನುಭೂತಿ ಮತ್ತು ಇದಕ್ಕೆ ತತ್ಕ್ಷಣ ಬೆಂಬಲ ಕೊಡಬೇಕೆಂದು ತಿಳಿದುಕೊಂಡಿದ್ದೇನೆ. ಕೇಂದ್ರ ಸರ್ಕಾರದವರು ಬಹಳ ವರ್ಷಗಳಿಂದ ನಮ್ಮ ರಾಜ್ಯದ ಹಿತವನ್ನು ಕಾಪಾಡುವುದಕ್ಕೆ ವಿರುದ್ಧವಾಗಿ ಧಕ್ಕೆಯನ್ನು ತರುತ್ತಿದ್ದಾರೆಂದು ವಿಷಾದದಿಂದ ಹೇಳಬೇಕಾಗಿದೆ. ಉದಾಹರಣೆಗೆ ಗಡಿ ಸಮಸ್ಯೆಗೆ ಕಮಿಶನ್ ನೇಮಕವನ್ನು ನಮ್ಮ ಮಾನ್ಯ ಮುಖ್ಯಮಂತ್ರಿಯವರು ವಿರೋಧ ಮಾಡಿದರೂ, ಮಹಾರಾಷ್ಟ್ರದವರ ಮಾತಿಗೆ ಒಲಿದು, ಕಮಿಶನ್ ನೇಮಕ ಮಾಡಿದರು. ಈಗ ಕಮಿಶನ್ ಅವಾರ್ಡ್ ಕೊಟ್ಟರೂ, ಅದನ್ನು ಒಪ್ಪಿಕೊಳ್ಳುವುದಕ್ಕೆ ಸಂಬಂಧಪಟ್ಟ ಮಹಾರಾಷ್ಟ್ರದವರು ಹಿಂದಕ್ಕೆ ಹೋಗುತ್ತಿದ್ದಾರೆ. ಕೇಂದ್ರ ಸರ್ಕಾರದವರು ಇದನ್ನು ಜಾರಿಗೆ ತರುವುದಕ್ಕೆ ಹಿಂಜರಿಯುತ್ತಿದ್ದಾರೆ. ಇನ್ನು ಎರಡನೆಯದಾಗಿ ಕೇಂದ್ರ ಸರ್ಕಾರದವರು ಮೂರು ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ 24 ನೂರು ಕೋಟಿ ರೂಪಾಯಿಗಳನ್ನು ಉದ್ದಿಮೆಗಳಲ್ಲಿ ತೊಡಗಿಸಿದ್ದರು. ಮೈಸೂರು ರಾಜ್ಯಕ್ಕೆ ಕೇವಲ 48 ಕೋಟಿ ರೂಪಾಯಿ ಮಾತ್ರ ಇಟ್ಟಿದ್ದಾರೆ. ಕೃಷ್ಣಾ ನದಿಯ ವಿಚಾರವನ್ನು ಮಾತನಾಡುವ ಕಾಲಕ್ಕೆ, ನಮ್ಮ ರಾಜ್ಯದ ಆಗುಹೋಗುಗಳನ್ನು, ಈ ಮೂಲಭೂತವಾದ ಪ್ರಶ್ನೆಯನ್ನು ಅವರು ನೋಡುತ್ತಾ ಇಲ್ಲ. ಕೃಷ್ಣ ನದಿ ಹತ್ತಿರವಿದ್ದಂತಹ ಪ್ರದೇಶ ನಮಗೆಲ್ಲರಿಗೂ ತಿಳಿದಿರುವಂತೆ, ಅಲ್ಲಿ ಅಭಾವ ಪರಿಸ್ಥಿತಿ ಮೇಲಿಂದ ಮೇಲೆ ಬರುತ್ತಿದೆ. 5 ವರ್ಷಗಳಲ್ಲಿ ಮೂರು ವರ್ಷ ಬೆಳೆ ಬಾರದೆ ಲ್ಯಾಂಡ್ ರೆವೆನ್ಯೂ ಸಸ್ಪೆಂಡ್ ಮಾಡುವಂತಹ ಪರಿಸ್ಥಿತಿಯೂ ಬರುತ್ತದೆ. ಅಲ್ಲಿ ಭೀಕರವಾದ ಪರಿಸ್ಥಿತಿಯನ್ನು ನಾನು ಅನುಭವಿಸಿದ್ದೇನೆ. 1958ನೇ ಇಸವಿಯಿಂದ ಈ ವರೆಗೂ ಆಂಧ್ರ ಸರ್ಕಾರದವರು, ಮತ್ತು ಕೇಂದ್ರ ಸರ್ಕಾರದವರು ನಮ್ಮ ರಾಜ್ಯದ ಹಿತಾಸಕ್ತಿಗಳ ಸಂಗಡ ಅವರು ಚೆಲ್ಲಾಟ ಆಡುತ್ತಿದ್ದಾರೆ. ನಮ್ಮ ರಾಜ್ಯದ ಆಗಿನ ಮುಖ್ಯ ಮಂತ್ರಿಗಳು ಹಾಗೂ ಈಗ ಇದ್ದವರೂ ಸಹಿತ ನಮ್ಮ ಹಿತಾಸಕ್ತಿಗಳನ್ನು ಕಾಪಾಡುವುದಕ್ಕೆ ಸಾಕಷ್ಟು ಪ್ರಯತ್ನ ಮಾಡುತ್ತಿದ್ದರೂ ಕೂಡ ಕೇಂದ್ರ ನಾಯಕರ ಮೇಲೆ ಪ್ರಭಾವ ಬೀರಲು ವಿಫಲರಾಗಿದ್ದಾರೆ ಎಂದು ವಿಷಾದದಿಂದ ಹೇಳುತ್ತೇನೆ. ನಾವು ಅನೇಕ ಸಲ ವಿರೋಧಮಾಡಿ ಇಲ್ಲ ನಾವು ಪ್ರೊಟೆಸ್ಟ್ ರೂಪದಲ್ಲಿ ಕಳಿಸಿದರೂ ಸಹಿತ ಕೇಂದ್ರ ಸರ್ಕಾರದವರು ಅದನ್ನು ಕಿವಿಯ ಮೇಲೆ ಹಾಕಲಿಲ್ಲ. ಈ ವಿಷಯ ಏಕೆ ಈ ರೀತಿಯಾಗುತ್ತದೆ ಅಂದರೆ, ಶ್ರೀಮಾನ್ ಕೆ. ಎಲ್. ರಾಯರು, ಕೇಂದ್ರದಲ್ಲಿ ನೀರಾವರಿ ಖಾತೆಯನ್ನು ಎಲ್ಲಿಯವರೆಗೆ ವಹಿಸಿಕೊಂಡಿರುತ್ತಾರೋ, ಅಲ್ಲಿಯವರೆಗೆ ಮೈಸೂರು ರಾಜ್ಯಕ್ಕೆ ಧಕ್ಕೆ ಬರುತ್ತದೆ. ನಮ್ಮ ರಾಜ್ಯದ ನಾಯಕರು ಯಾರೇ ಇರಲಿ, ಅವರು ಅಧಿಕಾರದಲ್ಲಿರಲಿ ಅಥವಾ ಇತರ ಪಕ್ಷದಲ್ಲಿರಲಿ, ಅವರು ಕೇಂದ್ರ ನಾಯಕರ ಮೇಲೆ ಒತ್ತಾಯ ಬೀರಿ ಎಲ್ಲಿಯವರೆಗೆ ಕೆ.ಎಲ್. ರಾವ್‌ರನ್ನು ಆ ಸ್ಥಾನದಿಂದ ಬೇರ್ಪಡಿಸುವುದಿಲ್ಲವೋ, ಅಲ್ಲಿಯವರೆಗೆ ನಮ್ಮ ರಾಜ್ಯದ ಹಿತಾಸಕ್ತಿಗಳನ್ನು ಕಾಪಾಡುವುದಕ್ಕೆ ಸಮರ್ಥರಾಗುವುದಿಲ್ಲ. ಆದ್ದರಿಂದ ಈಗ 1958ನೇ ಇಸವಿಯಿಂದ 11 ವರ್ಷದ ವರೆಗೆ ಕೃಷ್ಣಾ ನದಿಯ ಪ್ರಶ್ನೆಯನ್ನು ಬಗೆಹರಿಸುವುದರಲ್ಲಿ ನಾವು ಸಫಲರಾಗಲಿಲ್ಲ. ಶ್ರೀಮಾನ್ ಕೆ. ಎಲ್. ರಾಯರು ತಾವು ಆಂಧ್ರದವರಾಗಿರುವುದರಿಂದ, ತಮ್ಮ ರಾಜ್ಯದ ಹಿತದೃಷ್ಟಿಯಿಂದ ಅದನ್ನು ಎತ್ತಿ ಹಿಡಿಯುವುದಕ್ಕೆ ಅವರು ಪಕ್ಷಪಾತ ವಹಿಸಿ, ಒಂದು ಪ್ರಾಂತೀಯ ಮನೋಭಾವನೆಯನ್ನು ತೋರಿ, ತಮ್ಮ ರಾಜ್ಯಕ್ಕೆ ಎಷ್ಟು ಸಾಧ್ಯವೋ ಅಷ್ಟು ಮಾಡಿ, ಮೈಸೂರು ರಾಜ್ಯದ ವಾದವನ್ನು ತಳ್ಳಿಹಾಕಿ ಕಾಲಹರಣ ಮಾಡುತ್ತಾ, ವಿಳಂಬ ನೀತಿಯನ್ನು ಅನುಸರಿಸುವುದಕ್ಕೆ ಅಷ್ಟು ಪ್ರಸಂಗಗಳನ್ನು ಕಲ್ಪಿಸುತ್ತಿದ್ದಾರೆ. ಉದಾಹರಣೆಗೆ ಹೇಳುವುದಾದರೆ, ಗುಲಹಾಟಿ ಕಮಿಶನಿನವರು ಕೃಷ್ಣಾ ಗೋದಾವರಿಯ ನೀರಿನ ಹಂಚಿಕೆಯ ವಿಚಾರದಲ್ಲಿ, ಸಂಬಂಧಪಟ್ಟ ರಾಜ್ಯದ ತಜ್ಞರ ಅಭಿಪ್ರಾಯ ಸಂಗ್ರಹಣೆ ಮಾಡಿ, ಅಂಕಸಂಖ್ಯೆಗಳನ್ನು ಸಂಗ್ರಹಣೆ ಮಾಡಿ ಸ್ಪಷ್ಟವಾದ ಅಭಿಪ್ರಾಯವನ್ನು ಕೊಟ್ಟರೂ ಸಹಿತ ಆಂಧ್ರದವರು ಅದಕ್ಕೆ ತಲೆ ಬಾಗದೆ ಕೆ. ಎಲ್. ರಾಯರ ಮುಖಾಂತರ ನಮ್ಮ ರಾಜ್ಯಕ್ಕೆ ಧಕ್ಕೆ ತರುತ್ತಿದ್ದಾರೆ. ಇದಕ್ಕೆ ಎಷ್ಟು ವಿಷಾದ ವ್ಯಕ್ತಪಡಿಸಿದರೂ ಕಡಿಮೆ. ಇದೇ ರೀತಿ ಟ್ರಿಬ್ಯೂನಲ್ ನೇಮಕ ಮಾಡುವಾಗ ಸಹ ವಿಳಂಬ ನೀತಿ ಅನುಸರಿಸಲಾಯಿತು. ನಮ್ಮ ರಾಜ್ಯದಲ್ಲಿ, ಕೇಂದ್ರದಲ್ಲಿ, ಆಂಧ್ರದಲ್ಲ ಒಂದೇ ಪಕ್ಷದ ಸರ್ಕಾರ ಇರುವುದರಿಂದ ಈ ಪ್ರಶ್ನೆಯನ್ನು ಬಗೆಹರಿಸುವುದಕ್ಕೆ ಸಾಧ್ಯವಿಲ್ಲವೇ? ಪಂಚಾಯಿತಿ ಮಾಡಿ ನಿರ್ಣಯ ತೆಗೆದುಕೊಳ್ಳುವುದಕ್ಕೆ ಸಾಧ್ಯವೇ? ಹೀಗೆ ಎಷ್ಟು ವರ್ಷಗಳ ಕಾಲ ಹೋಯಿತು? ಈಗ ಎರಡು ವರ್ಷದಿಂದ ಮೂರು ರಾಜ್ಯ ಸರ್ಕಾರದವರು ಟ್ರಿಬ್ಯೂನಲಿಗೆ ಒಪ್ಪಿಕೊಂಡರೂ ಕೇಂದ್ರ ಸರ್ಕಾರದವರು ವಿಳಂಬ ಮಾಡಿ, ಒಂದು ಟ್ರಿಬ್ಯೂನಲ್ ನೇಮಕ ಮಾಡಲು ಪ್ರಕಟಣೆ ಮಾಡಿದರು. ನಂತರ ಇಂಟರ್ ಸ್ಟೇಟ್‌ವಾಟರ್ ಡಿಸ್ಪ್ಯೂಟ್ ಆಕ್ಟ್ ಪ್ರಕಾರ ಸೆಕ್ಷನ್ 4ರ ಪ್ರಕಾರ ಎಲ್ಲಾ ಟ್ರಿಬ್ಯೂನಲ್ ಮಾಡುವ ಕಾಲಕ್ಕೆ ಒಬ್ಬ

"Section 4 (2) of the Inter State water and River Dispute Act reads as follows :, "The Tribunal should consist only one Person drawn from among the Judges of the Supreme Court or among the Judges of the High Court,"

(ಶ್ರೀ ಕೆ. ಸಂಗನಗೌಡ)

ಸೆಕ್ಷನ್ 4 ಕ್ಲಾಸ್ 2 ಕೇವಲ ಒಬ್ಬನನ್ನೇ ನೇಮಕಮಾಡುವುದಕ್ಕೆ ಕಾನೂನಿನಲ್ಲಿದ್ದರೂ ಸಹ ಅವಕಾಶ ಇದ್ದರೂ ಸಹ, ಕೆ.ಎಲ್. ರಾಯರು, ಇದನ್ನು ತಿಳಿದುಕೊಂಡು ಅದಕ್ಕೆ ಅಮೆಂಡ್‌ಮಾಡಿ ಮೂರು ಜಡ್ಜಸ್ ನೇಮಕ ಮಾಡಲು ಪ್ರಯತ್ನ ಮಾಡಿದರು. ಕೇಂದ್ರ ಸರ್ಕಾರದವರು ಆಂಧ್ರ ಸರ್ಕಾರದ ಸಂಗಡ ಒಂದು ರೀತಿ ನಮ್ಮ ರಾಜ್ಯದ ಸಂಗಡ ಇನ್ನೊಂದುರೀತಿ ನಡೆದುಕೊಳ್ಳುತ್ತಿದ್ದಾರೆ ಕಾನೂನಿನ ಪ್ರಕಾರ ಒಬ್ಬ ಜಡ್ಜ್ ನೇಮಕಮಾಡಬೇಕು, ಆದರೆ ಮೂರು ಜಡ್ಜ್ ನೇಮಕ ಮಾಡಿಕೊಳ್ಳುವುದಕ್ಕೆ ತಿದ್ದುಪಡಿ ಮಾಡಿ ಅವಕಾಶ ಮಾಡಿಕೊಟ್ಟರು. ಇದು ಏನು ತೋರಿಸುತ್ತದೆ ಅಂದರೆ, ಆಂಧ್ರ ಸರ್ಕಾರಕ್ಕೂ ಕೇಂದ್ರ ಸರ್ಕಾರಕ್ಕೂ ಎಷ್ಟು ಹೊಂದಿಕೊಂಡು ಹೋಗುತ್ತದೆ, ನಮ್ಮ ರಾಜ್ಯದ ಹಿತಾಸಕ್ತಿಗೆ ಎಷ್ಟು ವಿರೋಧ ಮಾಡುತ್ತಾರೆ ಎಂಬುದನ್ನು ತಿಳಿದುಕೊಳ್ಳಬಹುದು. ಈಗಲಾದರೂ ಒಂದೇ ಟ್ರಿಬ್ಯೂನಲನ್ನು ನೇಮಕ ಮಾಡಿ ನಮ್ಮ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಾಧ್ಯವಿದ್ದರೂ ಅದಕ್ಕೆ ಕೂಡ ಎರಡು ಟ್ರಿಬ್ಯೂನಲ್ ಮಾಡಬೇಕೆಂದು ಪ್ರಯತ್ನ ಮಾಡುತ್ತಿದ್ದಾರೆ. ಇದಕ್ಕೆ ಎಷ್ಟು ಸಾಧ್ಯ ಅಷ್ಟು ವಿಳಂಬ ಮಾಡಿ, ನಾಗಾರ್ಜುನ ಸಾಗರವನ್ನು ಪೂರ್ಣಮಾಡಿ, ಟ್ರಿಬ್ಯೂನಲ್‌ಗೆ ಹೋಗುವುದಕ್ಕೆ ಅವಕಾಶ ಕೊಡುವ ರೀತಿಯಲ್ಲಿ ಇವರು ಕೇಂದ್ರ ಸರ್ಕಾರದಲ್ಲಿ ನೋಡಿಕೊಳ್ಳುತ್ತಿದ್ದಾರೆ. ಒಂದು ಮಾತು ಹೇಳುತ್ತೇನೆ ಮಾನ್ಯ ಮುಖ್ಯ ಮಂತ್ರಿಯವರು ಸಾಕಷ್ಟು ಈ ವಿಷಯದಲ್ಲಿ ಆಸಕ್ತಿ ವಹಿಸುತ್ತಿದ್ದಾರೆ. ಉದಾಹರಣೆ ಮೊನ್ನೆ ಅವರು ಮುಖ್ಯಮಂತ್ರಿಯಾಗಿ ಆಯ್ಕೆಯಾದ ಕೆಲವೇ ದಿವಸಗಳಲ್ಲಿ ಈ ವಿಷಯ ಟ್ರಿಬ್ಯೂನಲಿಗೆ ಹೋಗಬೇಕೆಂದು ಕೇಂದ್ರ ಸರ್ಕಾರಕ್ಕೆ ಒತ್ತಾಯಪಡಿಸಿ ಯಶಸ್ವಿಯಾಗಿದ್ದಾರೆ ಈ ದೃಷ್ಟಿಯಿಂದ ನಾವು ಅವರಲ್ಲಿ ಪೂರ್ಣ ವಿಶ್ವಾಸ ಇಡೋಣ.

ಈಗ ಅವರು ದೆಹಲಿಗೆ ಹೋಗಿದ್ದಾರೆ. ಅಲ್ಲಿ ಈ ವಿಷಯ ಚರ್ಚೆ ಬರಬಹುದು. ನಮ್ಮ ಸ್ನೇಹಿತರು ಹೇಳಿದ ಹಾಗೆ ಈ ಪ್ರಶ್ನೆಯ ಬಗ್ಗೆ ಸಂಬಂಧಪಟ್ಟ ಮುಖ್ಯಮಂತ್ರಿಗಳೆಲ್ಲರೂ ದೆಹಲಿಯಲ್ಲಿ ಕೂಡಿಕೊಂಡು ಚರ್ಚೆ ಮಾಡುತ್ತಾರೆ ಎನ್ನುವಂಥಹ ಕಲ್ಪನೆಯನ್ನು ಕೊಡುವಂತಹ ವಿಚಾರವನ್ನು ನಾನು ಪತ್ರಿಕೆಯಲ್ಲಿ ಓದಿದ್ದೇನೆ. ಈ ಬಗ್ಗೆ ಅವರು ನಿರ್ಣಯ ತೆಗೆದುಕೊಳ್ಳುತ್ತಾರೆ ಎನ್ನುವ ದೃಷ್ಟಿಯಿಂದ ಮುಖ್ಯ ಮಂತ್ರಿಗಳಲ್ಲಿ ನಾವು ವಿಶ್ವಾಸವನ್ನು ಇಡೋಣ, ಅವರು ದೆಹಲಿಯಿಂದ ಬಂದಮೇಲೆ ಆ ಬಗ್ಗೆ ಒಂದು ಸ್ಪಷ್ಟೀಕರಣ ಪಡೆದ ನಂತರ ಈ ಮನೆಯಲ್ಲಿ ಯಾವುದಾದರೂ ಒಂದು ರೆಸಲ್ಯೂಷನ್ ಮಾಡೋಣ, ಅಲ್ಲಿಯವರೆಗೂ ಶ್ರೀಮಾನ್ ನಂಜೇಗೌಡರು ಸ್ವಲ್ಪ ಕಾಯಬೇಕು. ಅವರು ಅಲ್ಲಿಂದ ಬಂದಮೇಲೆ ಅವರು ಯಾವರೀತಿ ಈ ಬಗ್ಗೆ ವಿವರಣೆಯನ್ನು ಕೊಡುತ್ತಾರೆಂಬುದನ್ನು ನೋಡಿಕೊಂಡು ಆ ಮೇಲೆ ನಾವು ಈ ಬಗ್ಗೆ ಒಂದು ನಿರ್ಣಯವನ್ನು ತೆಗೆದುಕೊಳ್ಳಬಹುದು ಎಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

[MR. DEPUTY SPEAKER in the Chair]

† SRI H. M. CHANNABASAPPA.—Sir, I had absolutely no intention of talking on this subject today. I am so sorry for the light way in which the Government of Mysore has been treating this vital issue. It has treated this vital issue lightly not today, but right from the beginning, from 1961–62 and I charge this Government for all the omissions and commissions in regard to the river water disputes. The Hon. Minister for Parliamentary Affairs who has to reply to this debate did not have the courtesy of sitting here and listening to what members have to say, is laughing.

SRI K. PUTTASWAMY.—I am not laughing. I am smiling.

SRI H. M. CHANNABASAPPA.—It only reminds me of the saying, "Nero was Fiddling when Rome was Burning." This Government is fiddling when the whole country is in a couldron and millions of the people of this country have to face misery for all time to come I am only sorry for the light way in which, not only Sri Puttaswamy, but the Government is treating this matter. If you were a farmer, if you had lost at any time a crop for want of water, then you would have

understood the difficulty. Unfortunately, you are a lawyer. That is why you do not understand the difficulty. You slept over it for 8 long years and here are our friends. I have great respect for Mr. Gureddy a poor man, what can he do? My friend Mr. Sangan Gowda said just now, let us keep trust in our leaders. We have kept trust in our leaders for eight long years. With what result? The result is, the interest of the country is endangered. Interest of the State is in danger. Millions of people are sentenced to poverty and misery for all time to come hereafter. Have you heard the roaring assurances from not only this Chief Minister, but the erstwhile Chief Minister? They said, 'I will not allow one drop of water to be taken by anybody'. Umpteen times assurances were given. Well I would like to remind my Hon'ble friend the Minister for Parliamentary Affairs—there was an occasion when the Chief Minister said, within four days I will settle Krishna Water dispute. This was in 1962-63. If only the Andhra Pradesh Chief Minister and Mysore and the Maharashtra Chief Ministers meet, it will be settled over a cup of tea. I remarked that their names are going to be written in dark letters in the history of Mysore. This is the very word I have used. Even today, I reiterate that if this is the attitude displaced by people in responsible positions, on this important issue, their names will be written in dark letters in the history of Karnataka. These are the people who have sentenced millions of people in Bijapur, Gulbarga and Chitradurga—people in all the 13 districts of this unfortunate district. It is not a matter to be laughed at. It is not a matter to be slighted. You went on assuring the House. You said sometime back on the floor of this House—well Krishna project has started, I have called for tenders—I have fixed contractors. That statement appeared in bold letters in print. It was in 1963 or 1964. What has happened? I will quote the Chief Minister and his words in 1963-64. Papers published in big letters—we have called for tenders, we have started the work, we will not allow one drop of water to go outside the State. Every time this question has come before this House, you have said that all the criticism that has been levelled against the Government has some propaganda value, Goebel's propaganda—what a great pity; it became something like Goebel's propaganda. What a prophetic gone it was—9 years ago. I was not a member of this House. My cry was a cry in the wilderness. I said you will neither get Krishna waters nor Krishna project, if you continue to talk in this strain and if you treat this subject lightly as this. You will not have a drop of Krishna waters. As I said, to day, Sri Gureddy is terribly afraid of naming the person who said it. I am saying the name of the person who said it. I repeat it today, you will have no Krishna waters and no Krishna project. If the Government have got material before them, let them say it is incorrect. Well Sir, I need not remind the Members of this House. There is not a single occasion when this Government have disputed even one full stop or comma of the statistics that I have furnished to this House and to the country. They cannot. 2 plus 2 can only be four, whoever gives it. Unfortunately, you are trying to

(SRI H. M. CHANNABASAPPA)

say it six and you are now running the country. After all this kind of a thing cannot go on for long. You will die and I will die—all of us are bound to die one day. But history will record these omissions and commissions of these people. Historians will not fail to write and they will write your names in dark letters and as people who have failed in their duty. I do not accuse of anything else.

SRI K. H. PATIL.—Is it they are purchased ?

SRI H. M. CHANNABASAPPA.—Whether they are purchased or whatever has taken place behind the curtain, I do not want to say anything. But facts remain that you have failed in your duty. Have you kept up one assurance so far? How many assurances were placed before us ? If you want I will keep the records before you. Our Chief Minister stated in 1963 that 2nd Stage of the Nagarjunasagar project has already been started. In 1968 he said, "no, no," they have not started. I will present the book to you to be passed on to the Chief Minister so that he can read his own statements. I want to ask why do you go on telling this falsehood ? Why do you trade on false assurances ? Let us be fair. If you want to be Minister or Chief Minister for ten years, I am here to support you. I would appeal to the rest of the country to support you to be the Chief Minister, provided you safeguard the interests of the country. You must safeguard the interests of millions of people who are groaning under poverty. For heaven's sake don't perpetuate that poverty for all time to come. It is in your hands to do it but it is my conviction that you are incapable of doing so. I reiterate it. Not that you are not capable ; you are capable of better arguments than mine ; you are capable of doing things in a better way. There are giants on the other side. I do concede that there are giants on the other side. I do concede that there are brilliant people. But all the brilliancy, strength and the love of the country are of second rate as they are subjected to subjective considerations. That is the whole pity. Instead of subjecting yourself to subjective consideration please tell us whether you are going to take this bold step ? If you do that, we will vote you to power. I said several years ago to the Chief Minister that I would love him to be the Chief Minister for all the time to come but he must be bold to stand to his conviction. That is my appeal. Never for a minute think even in your dreams that I would ever like to take your place. I have done according to my convictions, enough service and I do not like to do anything more. I will leave it to you to complete the rest of the service to the country. Please do not think that all these things which Channabasappa has been saying, is for the sake of politics. That you have been telling like that because you have always been thinking of it and you are never tired of it. What shall I do ? No body is opposed to you but you say it is all politics. My heart really bleeds whenever they come out with some sort of statement which will undermine the interests of the State. This

morning I had a talk with the Chief Minister and I told him, he has the last chance to save the State. Either choose this way or that way. Do you think that I have said for formality sake? Absolutely not. Here is the case—one tribunal or two tribunals. Do you think that you are capable of standing on your convictions? Unless there is a miracle, I prophesy that you are incapable of standing against the influence of the Government of India. You are incapable of rebutting them and standing before Sri K. L. Rao and argue your case effectively. Why? Not that you lack ability. I confess that I am inferior to you in ablity. You have all the qualifications necessry but the one disqualification is your approach is subjective. That is all. You know the consequence but still you are not capable of rising to the occasion because of other force and circumstances which practically limit your strength. That is my contention. I have all the admiration for the Parliamentary Affairs Minister who also hails from my District. Though he is very much younger than myself, he is more brilliant than me. Therefore one more appeal is that in this hour of trial, let him be bold, true and honest to his own conscience. Today you have said that you will stand by one tribunal. I have all appreciation for it. But my fear is how long are you going to stand by it. You have made so many statements but none of them you are capable of sticking to. If you want I can quote one after another in series.

When I speak on this subject, I speak with all authority. You were good enough to ask, what are the difficulties if we have two tribunals. That is the point I want you to understand. What are the legal, moral and technical implications of having two tribunals. If you please go on reading in between statements that flow from Delhi right from 1962, you will know it. You please open the records and see. This Government opposed the appointment of one man Committee when Mr. Gulhati was appointed. I ask, did you follow it up? At the Inter-State Ministers' Conference, this Government opposed the appointment of a Commission for the purpose of collecting statistics. What did they do? They treated your contention with all contempt and appointed Gulhati Commission. Gulhati Commission report is a very big report. I have respect for that. But what is contained in that report? If you go through that Report you will find that it is simply a combination of all statistics that were furnished by Mysore, Maharashtra and Andhra. This I had stated at the meeting itself. Do you require a big commission to be appointed for two long years only for collection and codifying? A clerk could hane done that. An ordinary officer with commonsense can do it. He can collect all statistics of irrigable area, irrigated area, etc. The Gulhati Commission has done nothing but codifying all the materials supplied by the three Governments. The Gulhati Commission has said that it is possible to divert water from Godavari. It is not a new thing. It was already contemplated by the erstwhile Madras and Mysore Governments. I do not want to go into the details. Of course it will take a long time. Nor do I feel it is necessary on this occasion. It is only to

(SRI H. M. CHANNABASAPPA)

impress that the Gulhati Commission report is nothing but a codification of all the materials supplied by three Governments, I say this. They have done nothing beyond that. They have wasted two to three long years. I foresaw that. I have said, if you are going to appoint a Commission for this purpose, it is with the specific objective of delaying and allowing one of the parties to have advantage over the other. Please take out the previous records; you will find my statement in them. What did the Government do when they came to power?

6-30 P.M.

Did they oppose that Commission? No, but they welcomed it; they said, very well, let the Gulhati Commission come. And the whole hierarchy of officers presented to the Commission what we had in our papers. So did Andhra Pradesh. Take it from me: Maharashtra has no interest here. That is the whole difficulty. Maharashtra is interested only in the diversion of Krishna Godavari waters westwards for power generation. What did the Gulhati Commission do? Our case is pending before the Government of India for the appointment of an arbitration tribunal. They have replied that within a very short time they are going to finalise the whole thing and see whether it is possible to come to a decision or not, and then they would appoint a Tribunal. How many months and how many years they want for that? I stated prophetically six or seven years ago that there is no good in waiting and that we should go to a Court of Law. I reiterate it. I went on telling every one of those friends who come from North Karnataka: "My dear baba, why are you getting yourself mummies?" They said, "We will wait. We will trust our leaders." I appreciate their loyalty. Unfortunately, their loyalty is to whom? To a man who lets you down. Not only he lets you down but the whole country. Still they are not tired of saying, "We will trust." Unto what time? Unto the time you go to grave?

ಶ್ರೀ ಕೆ. ಪುಟ್ಟಸ್ವಾಮಿ.—ನಂಬಿಕೆಟ್ಟವರಿಲ್ಲವೋ ಎಂದು ದಾಸರು ಹೇಳಿದ್ದಾರೆ.

SRI H. M. CHANNABASAPPA.—That is true. The Hon. Minister for Parliamentary Affairs would like to draw some consolation from that great writer Haridas? It is true we must trust. Of course, things can move only when we trust. But how long to trust? We must trust the Minister. Otherwise, we cannot pull on. We must trust once, twice, thrice, ten times. Now the whole body is in the grave; only one inch is out of the ground. Even now if you still say, "trust", the whole body will be buried. We must know, whom to trust and whom not to trust. If one does not know that, that is the whole difficulty.

Now let me come to the point about the appointment of two Tribunals and this question of Krishna Godavari waters. This dispute is there right from the very beginning. It is not today that this

Krishna-Godavari dispute has arisen. Nor did it arise when Mysore State was formed as many of you think. This Krishna Godavari waters dispute was started even when there was composite Madras Government. This Krishna Godavari issue is linked with each other. From that time itself, Andhra Pradesh was jealous of giving Krishna waters to Tamil Nadu and Godavari waters to Bombay. When Chakravarthi Rajagopalachari was the Chief Minister, he wanted to draw Godavari and Krishna waters right up to Madras and even Tanjore. Then all the Telugu friends joined and made a big row; and said, "we cannot allow Telugu waters to flow into Tamil Nadu; nor to Karnataka." That is the decision of Andhra Pradesh. Take it from me and believe me. If today Andhra Pradesh has been separated from Madars, it is on account of Krishna-Godavari waters. You take out the history of the creation of of Andhra Pradesh just on the death of Potti Sri Ramulu. I tell you the background is not so much on account of that. It is on account of the project that Andhra was created. Therefore, Krishna Godavari waters dispute is not a thing which I and you have created. Why is it Krishna and Godavari are linked? Krishna cannot be without Godavari and Godavari cannot be without Krishna. They are very much interlinked and integrated. Krishna is on the right side of Godavari and Godavari is on the left side of Krishna and Pennar is on the right side. In between Pennar and Godavari, Krishna river flows. I will tell you, I had forecast. Andhra Pradesh has made up its mind to reserve the entire Godavari waters for themselves; Andhras want to appropriate the water for its own development; they want to monopolise; and take as much of Krishna and Godavari waters as possible and store it in the Nagarjunasagar. That is the key point. That is why, they are sour about it.

Here I don't want to accuse Dr. K. L. Rao. He is a brilliant engineer. He is a good old friend of mine. Very often he feels that I should not speak on Krishna waters. That is a different matter. There are seven projects in Andhra Pradesh and he is the Janaka of all those projects. He is the man who has designed almost all the schemes of Andhra Pradesh. If he is very much attached to Andhra, I don't blame him. At least I congratulate him. While congratulating him, I deprecate people here who have, at least, no love of their State—these friends who are talking ill of Dr. K. L. Rao. At least I have a good word to tell about him. He is true to his Constituency; he is true to his voters; he is true to the men who are looking up to him for something. I have a good word for him. What are you before him? He fights like a tiger whenever Andhra interest comes in. To this extent, let me give his due. Once I had an occasion to talk to him at Tandinathpur over TEA. He had become Union Minister by then. I told him, "Dr. Rao, now you are a politician but you should not function as a politician whenever projects come before you. You must speak only as an engineer." But unfortunately this is so difficult in human nature. The two personalities cannot be separated. It is very difficult to separate Sri Puttaswamy from the Minister for Parliamentary Affairs.

(SRI H. M. CHANNABASAPPA)

He cannot have one opinion as Sri K. Puttaswamy and another opinion as Minister for Parliamentary Affairs; it is very difficult. So, when Dr. K. L. Rao became Union Minister, what were you doing? You friends, were laughing. You should have had the guts to say, "Look here, he is a party to all these things and here is a great dispute between two great States. Therefore, in all fairness, he himself must say, 'I don't wish to be a Minister for Irrigation and Power.'" When he himself did not decline to have those portfolios, you should have told the Prime Minister: "You should not appoint him as Minister for Irrigation and Power." What did you do? You were all fiddling all the while. There are reasons for it and I don't want to take this occasion to tell why you are unable to face him directly.

You did not lift your little finger when Dr. Rao was appointed Minister of State for Irrigation. But thank God. At least there was one man who had the sense of justice and that was the late Sri Mohammed Hafiz Ibrahim. I have spent several nights with him. My heart bleeds when I recall these things to my memory. I tried to convince him how our interests are being jeopardised. He was helpless because the Minister for State was there. The late Sri Mohammed Hafiz Ibrahim was a very good man but too much of goodness is also bad sometime in administration. He made a statement on the floor of the Parliament in 1963. He know that it was a statement which had no legal or moral or constitutional sanction. Even today if it goes to a court of law, it is not worth the paper on which it is written. I make this statement whith a sense of responsibility. What has the Government of India to do with the allocation of Krishna waters or Godavari waters or inter-State water? If only by chance there were two or three Governments in different parts of the country, probably they would not have had any value. But fortunately or unfortunately in all the three States there is Government of the same party and therefore party discipline came into the picture. Krishna and Godavari issues cannot be thought of separately. They are capable of being construed and understood technically, economically and separately but if the Government of India wants to do justice, if there is any force which wants to do justice, they cannot be considered in isolation. So far as my little understanding goes, we have no quarrels in Godavari waters and I am sure the Andhra Pradesh Government will concede it. Even if they concede 100 T. M. C. ft. What are you going to do with it? We have no land to irrigate it. If we had land, we would certainly have jumped at it. Then, why link this? Our bone of contention is only in Krishna. Even Sri Mohammed Hafiz Ibrahim—I would like to be fair to him—could not override certain powers which were operating on him. Therefore, he had to find a *via media*. So, he said, "Whatever has happened has happened; let us find a solution to make good the injustice that is going to be done to Mysore." That is why he said in

his statement in Parliament, "Let there be a master plan for both Krishna and Godavari. Let all the projects of Krishna and Godavari dovetailed into the master plan so that every drop of water in Krishna and Godavari might be economically and fruitfully utilised in all the areas where Krishna and Godavari flow." Then, he said, "We will appoint a River Board". What did you do? Later on, the Minister of State for Power and Irrigation made an announcement in Parliament that he had ruled out the prospect of appointing a River Board. Immediately I reacted and issued a statement on the floor of the House. Who heard me except the Pressmen who used to surround me and ask me about it? I said here is a case where Dr. K L. Rao has ruled out the possibility of appointing a River Board, an assurance which was held out in 1963 by the Government of India. I prophesied that this is the thin end of the wedge. If this Government were to fail in its duty, woe be to the millions of people living in the Krishna basin. Therefore, I am appealing to these friends at least at this late hour to be brave, bold and truthful. You were pleased to enquire whether Madhya Pradesh should be a party to this. I will leave legal juggleries to legal men. Let everybody who has got something to do with it be a party to it. The moment we have one tribunal for Godavari and another tribunal for Krishna, what will happen is this. While dealing with Krishna, anybody who is a judge will confine himself to the issues raised in Krishna and it would not be relevant for anybody to raise issues pertaining to Godavari; the same will hold in the case of Godavari. The scope of the tribunals will be limited. Therefore, if one tribunal is appointed for Krishna, it is only a question of allocation of Krishna waters among the parties based on all considerations that are relevant for judicial enquiry.

Then come what are called 'accrued rights' or the law of equity or the law of jurisprudeuce. Andhra Pradesh might plead rightly or wrongly that they have constructed the Nagarjunasagar costing Rs. 120 crores and whether they could allow this national project to go to waste. No man who has faith in plans would say 'let it go to waste! He will have to consider very seriously the question of utilising a national project which has already been constructed and see that it is brought to a safe stage.

If you were to say you have no case and agree for two or more Tribunals, then what case have you? You have no case in Godavari and you will have no case in Krishna. Then, why the devil you people trouble them for these eight years? Is this a clever move? Dr. K. L. Rao is not an ordinary man. He is a very intelligent man, more intelligent than I and you people put together. If we stick to the very letter of the law, we should have given notice nine years ago and said: "If you have constructed Nagarjunasagar, it will be your funeral; We are not responsible". On the other hand, this House has passed a Resolution in 1961 that construction of Nagarjunasagar should be stayed. We have given notice to the Central Government. All these

(SRI H. M. CHANNABASAPPA)

legal points are there. Therefore, we say that Krishna waters should be utilised only to that extent to which they are entitled. Some Judge may take the view as to why Krishna waters should come to Pennar. If such a view is taken, their case is gone. So, Dr. K. L. Rao is now trying to move very carefully. He tried all possibilites. Why should we go to the Prime Minister and others for these Tribunals? They would say, 'no'. Why put it to the Tribunal? Naturally, I get fettered. Let us say, 'well this is a thin end of the edge. Gulhati Commission was appointed and it was prolonged for 2 to 3 years. Therefore, it is not without reason that delicate move has come up and this is not going to stop at that, and I am sure they will take another 2-3 months, by which time all things that are necessary to be done in order to confirm their rights would be over and I and you, with folded hands be looking, blinking at what they do. It is our fate, and next time when you go to Elections, you say: 'what shall we do; it is our fate; fate has worked against us'. Our Chief Minister said 'One Tribunal and no more'. Even now I am very happy about his statement. But, how long and how far? Probably till he goes to Delhi. If the Prime Minister says that they have taken a decision and let there be two Tribunals, have you the guts and stature and moral courage to stand by what you say? I doubt very much—not because you have not got it, but because you cannot put into action for various considerations. This, I have said to the Chief Minister this morning. If the Prime Minister were to say that they have to take everybody into confidence and that is why they have appointed two Tribunals, have you got the capacity to override the Prime Minister's suggestion or the Congress Working Committee's suggestion? Just a few days ago. The A.I.C.C. President, Sri S. Nijalingappa said: "What does it matter, we will have two Tribunals". This is his weakness—what else shall I say? I do not blame him. It is his nature. He does understand the consequences of that. I do sympathise with him. Probably he is going to Australia tomorrow, and I do not know for what purpose. He is made up of that mettle, and I cannot change him today—he is already 67. At least you can change me—I am 62. He heads an organisation, which rules India, and can his word be treated lightly? Can the Chief Minister of Mysore go and say: 'I do not agree with Sri Nijalingappa?' He is a sincere follower of Sri Nijalingappa. Let us give him that credit that he follows somebody. Therefore, Sir, let us look at things from a practical point of view. You have your limitations, I have my limitations and Sri Nijalingappa has his limitations. In the interests of the State, let us pool all our resources, forget all our differences and try to evolve a way by which none of us could yield to any pressure whatsoever and see that at least a last attempt is made to safeguard the interests of Krishna—Godavari waters and thereby safeguard the interests of millions of people, who are going to be sentenced to perpetual poverty and misery, who are not before us, but who will come before us only at the time of Elections.

With these few words, I will take another opportunity when the Chief Minister comes. I want you to know the facts and then jump into the the sea. Sri S. Nijalingappa has many times told us: 'Leave it to me'. He is a good old friend of mine. Even when he was a student, if there used to be any differences between us, he used to say: 'Leave it to me'. We were class-mates and hostel-mates. When there was a quarrel amongst the hostel-mates, he said: 'Leave it to me'. (*Laughter*). It has come by habit and now that habit, if it had only ruined him, I would not have minded it. But, that 'Leave it to me' is going to ruin the whole nation. Therefore, I appeal to you, please give something for this State.

Sri K. H. PATIL.—As the time allotted for this is over, may I request the the Chair to extend the time?

Sri K. PUTTASWAMY.—Sir, the time may be extended up to 7-30 P.M.

Mr. DEPUTY SPEAKER.—Is it the pleasure of the House that the time be extended up to 7-30 P.M.?

HON. MEMBERS.—Yes.

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಚನ್ನಬಸಪ್ಪನವರು ಭಾವನಾ ಪರವಶರಾಗಿ ಮಾತನಾಡಿದ್ದಾರೆ. ಅದು ಹೊಸದೇನೂ ಅಲ್ಲ. ನಾನು ಇದೇ ಧಾಟಿಯ ಭಾಷಣ ವನ್ನು ಹತ್ತಾರು ಸಾರಿ ಈ ಮನೆಯಲ್ಲಿ ಕೇಳಿದ್ದೇನೆ. ಅವರಿಗೆ ಕೃಷ್ಣ ಕಾವೇರಿ ನದಿಯ ನಮ್ಮ ಭಾಗದ ನೀರನ್ನು ಸಂಪೂರ್ಣವಾಗಿ ಬಳಸಿಕೊಳ್ಳಬೇಕು. ಈ ದೇಶವಲ್ಲಿ ಪದೇ ಪದೇ ಬರುತ್ತಿರತಕ್ಕ ಕ್ಷಾಮಡಾಮರಗಳಿಂದ ಈ ದೇಶವನ್ನು ಮುಕ್ತವನ್ನಾಗಿ ಮಾಡಬೇಕು ಎನ್ನುವ ಕಳಕಳಿಯಿಂದ ಆ ವಿಚಾರ ಮಾತನಾಡುತ್ತಿದ್ದಾರೆ. ಅವರು ತುಂಬ ಸಹಾಯವನ್ನು ಮಾಡಿದ್ದಾರೆ, ಅದನ್ನು ಒಪ್ಪಿ ಕೊಳ್ಳುತ್ತೇನೆ. ಆದರೆ ನಾವೇನು ಕಾರ್ಯಕ್ರಮ ಕೈಕೊಂಡರೂ ಕೂಡ ಅವರು ಅದನ್ನು ಒಪ್ಪಿ ಕೊಳ್ಳದಿರುವುದು ನಮ್ಮ ದುರದೃಷ್ಟ. ಸರಕಾರದ ವತಿಯಿಂದ ಯಾವ ಯಾವ ಕಾರ್ಯ ಮಾಡ ಬೇಕೋ ಅದನ್ನು ನಾವು ಸಕಾಲದಲ್ಲಿ ಮಾಡಿಕೊಂಡು ಬಂದಿದ್ದೇವೆ. ಕೃಷ್ಣ ನದಿಯ ನೀರನ್ನು ಅವರಲ್ಲಿ ನ್ಯಾಯವಾಗಿ ನಮಗೆ ಸಲ್ಲಬೇಕಾದ ಭಾಗವನ್ನು ಪಡೆದುಕೊಂಡು ಬಳಸಿಕೊಳ್ಳ ಬೇಕು ಎಂಬ ವಿಚಾರದಲ್ಲಿ ಶ್ರೀ ಚನ್ನಬಸಪ್ಪನವರು ಎಷ್ಟು ಕಾತುರರಾಗಿದ್ದರೋ ಅಷ್ಟೇ ಕಾತುರವಾಗಿ ಸರಕಾರವೂ ಇದೆ ಎಂದು ಅವರಿಗೆ ನಾನು ಹೇಳಬಯಸುತ್ತೇನೆ. ಆದರೆ ಅವರನ್ನು ಒಪ್ಪಿಸುವುದು ಕಷ್ಟವಾಗಿದೆ. ಅವರು ಭಾಷಣ ಮಾಡುವಾಗ ನನಗೆ ಷೇಕ್ಸ್‌ಪಿಯರ್ ನಾಟಕ ಜ್ಞಾಪಕಕ್ಕೆ ಬಂತು. ಅವರು ಹೇಳುವಾಗ ತುಂಬಾ ಜಾಣರು, ಬುದ್ಧಿವಂತರು, ಏನು ಬೇಕಾದರೂ ಸಾಧಿಸಬಲ್ಲರು. ಆದರೆ ಮನಸ್ಸಿಲ್ಲ, ಧೈರ್ಯವಿಲ್ಲ, ಎಂದು ಹೇಳಿ ಎಷ್ಟುಮಟ್ಟಿಗೆ ತೆಗಳಲು ಸಾಧ್ಯವೋ ಅಷ್ಟುಮಟ್ಟಿಗೆ ತೆಗಳಿದ್ದಾರೆ.

7-00 P.M.

Sri H. M. CHANNABASAPPA.—As a matter of personal explanation everyone of you know, I am incapable of flattering?

Sri K. PUTTASWAMY—It is not an unfair comment, Sir. In fact, that is the way of a debate. I really appreciate it. ಯಾವುದೇ ಸ್ಥಾನಕ್ಕೆ ಒಂದು ಕುಷನ್ ಕೊಟ್ಟಾಗ ಮೆತ್ತಗಿರುತ್ತದೆ. ಹಾಗೆ ಹೇಳುವಾಗ ಕಠಿಣವಾಗಿ ಹೇಳುತ್ತಿದ್ದರೂ ಕುಷನ್ ಕೊಟ್ಟಂತೆ ಹೇಳುತ್ತಿದ್ದರು. ಅವರು ಹೇಳಿದ್ದನ್ನು ನಾನು ಅಪಾರ್ಥ ಮಾಡಿಕೊಂಡಿಲ್ಲ ಮತ್ತು ಅದನ್ನು ಟೀಕೆ ಮಾಡುವುದಕ್ಕೆ ಹೋಗುವುದಿಲ್ಲ. ಬೇರೆಯವರಿಗೂ ಕೂಡ ಅವರು ತುಂಬಾ ಅನು ಕರಣೀಯವಾಗಿದ್ದಾರೆ. ನಮ್ಮ ಹಳ್ಳಿಯಲ್ಲಿ ತಲೆ ಒಡೆದು ಮುಂದಿಟ್ಟರೂ ಕೂಡ ಅದನ್ನು ಸೋರೆ ಬುರುಡೆ ಎಂದು ಹೇಳುವುದುಂಟು ಎಂಬ ಗಾದೆ ಇದೆ. ನಾವು ಹಂತಹಂತವಾಗಿ ನಮ್ಮ ಹಕ್ಕನ್ನು

(SRI K. PUTTASWAMY)

ಕಾಪಾಡಿಕೊಳ್ಳುವುದಕ್ಕೆ ಸರ್ವಪ್ರಯತ್ನ ಮಾಡಿದ್ದೇವೆ ಎಂದು ಹೇಳಿದರೂ ಒಪ್ಪುವುದಿಲ್ಲ. ತಲೆ ಕೊಟ್ಟರೂ ಅದನ್ನು ಸೋರೆ ಬುರುಡೆ ಎಂದು ಹೇಳುತ್ತಿದ್ದಾರೆ. ಇದಕ್ಕೇನು ಮಾಡಬೇಕು ? ಈ ವಿಚಾರ ಈ ಸಭೆಯಲ್ಲಿ ಚರ್ಚೆಗೆ ಬರಬೇಕಾದ ಸಂದರ್ಭವೇನು ? ಒಂದು ಅಥವ ಎರಡು ಟ್ರಿಬ್ಯೂನಲ್ ಮಾಡುವ ವಿಚಾರವಿದೆ. ಗೋದಾವರಿಗೇ ಬೇರೆ ಬೇಕೆ ಅಥವ ಗೋದಾವರಿ–ಕೃಷ್ಣ ಎರಡಕ್ಕೂ ಒಂದೇ ಬೇಕೇ ಎಂಬ ಪ್ರಶ್ನೆ ಇದೆ. ಎರಡಕ್ಕೂ ಒಂದೇ ಇದ್ದರೆ ಅದು ಮೈಸೂರಿನ ಹಿತ ಕಾಯುವುದು, ಆದರಿಂದ ಅನುಕೂಲವಾಗುತ್ತದೆ ಎಂಬ ಭಾವನೆ ಇದೆ. ಅದನ್ನು ಒತ್ತಿ ಒತ್ತಿ ಹೇಳಿದ್ದಾರೆ. ಕಾರಣ ಗೋದಾವರಿಯಲ್ಲಿ ಹೆಚ್ಚು ನೀರಿದೆ. ಅದನ್ನು ಕೃಷ್ಣ ನದಿಗೆ ತರುವುದರಿಂದ ಆಂಧ್ರದ ಅವಶ್ಯಕತೆಯೂ ಪೂರ್ಣವಾಗುತ್ತದೆ. ಕೃಷ್ಣ ನದಿಯ ನೀರನ್ನು ನಮ್ಮ ಭಾಗಕ್ಕೆ ಕೊಡುವುದಕ್ಕೆ ತೊಂದರೆಯೂ ಆಗುವುದಿಲ್ಲ. ಗೋದಾವರಿ ನೀರನ್ನು ತರುವುದಾದರೆ ನಾಗಾರ್ಜುನ ಸಾಗರದ ಆಯಕಟ್ಟಿನಲ್ಲಿ ಬರುವ ಎಲ್ಲ ಭೂಮಿಗೂ ನೀರನ್ನು ಕೊಡಬಹುದು. ಮತ್ತು ಇಂದು ನಾವೇನು ನಮ್ಮ ಭಾಗ ಕೇಳುತ್ತಿದ್ದೇವೆ ಅದನ್ನು ಕೊಡಲು ಸಾಧ್ಯ, ಕೃಷ್ಣ ನದಿ ನೀರಿನಲ್ಲಿ ನಮ್ಮ ಭಾಗ ಕೊಡಲು ಸಾಧ್ಯ. ಗುಲಾಟಿ ಕಮಿಷನ್ ಇದರ ಸಾಧ್ಯತೆಯಿದೆ ಎಂದು ಹೇಳಿದ್ದಾರೆ. ಒಂದು ವಿಚಾರ ತಿಳಿಯಬೇಕು. ಕೆ. ಎಲ್. ರಾವ್ ಒಬ್ಬರೇ ಇಂಡಿಯಾ ಸರಕಾರದ ನೀತಿಯನ್ನು ತೀರ್ಮಾನ ಮಾಡುವುದಕ್ಕಾಗುವುದಿಲ್ಲ. ಬಹುಶಃ ಈಗಾಗಲೆ ಮೈಸೂರಿನ ಧೋರಣೆಯೇನಿದೆ ಎಂಬುದು ಕೇಂದ್ರ ಸರಕಾರಕ್ಕೆ ಗೊತ್ತಾಗಿದೆ. ಒಂದಲ್ಲ, ಹತ್ತಾರು ಬಾರಿ ಈ ಸಭೆಯಿಂದ ನಮ್ಮ ಅಭಿಪ್ರಾಯವನ್ನು ತಿಳಿಸಿದ್ದೇವೆ. ಕೆ. ಎಲ್. ರಾವ್‌ಗೆ ಈ ವಿಚಾರ ಬಿಟ್ಟರೆ ನಮಗೆ ಅವರಲ್ಲಿ ವಿಶ್ವಾಸವಿಲ್ಲ, ಮೈಸೂರಿಗೆ ನ್ಯಾಯ ದೊರೆಯುತ್ತದೆ ಎಂಬ ನಂಬಿಕೆ ಇಲ್ಲ ಎರದು ಸ್ಪಷ್ಟಪಡಿಸಿದ್ದೇವೆ. ಆ ಕಾರಣದಿಂದ ಈ ವಿಚಾರದಲ್ಲಿ ಕೃಷ್ಣ ಗೋದಾವರಿ ನೀರಿನ ವಿಚಾರದಲ್ಲಿ ಆಖೈರು ತೀರ್ಮಾನವನ್ನು ಇಂಡಿಯಾ ಸರಕಾರದವರು ಮಾಡುವರೇ ವಿನಾ ಕೆ. ಎಲ್. ರಾವ್ ಒಬ್ಬರೇ ತೀರ್ಮಾನ ಮಾಡುವುದಕ್ಕಾಗುವುದಿಲ್ಲ ಎಂದು ನಾನಾದರೂ ತಿಳಿಯುತ್ತೇನೆ.

Sri H. M. CHANNABASAPPA.—Sir, if it is a question of major policy of allocation of waters of Inter—State rivers and evolve a national policy, I could very well understand. In fact, it is one of our case that a national policy should be followed by the Government of India, which has not been done. These are all technical matters in which it is possible for engineers to make you understand this is correct and that is also correct and all that. After all, we are all laymen and there are certain matters on which these Engineers can convince. Many of our people in power are laymen and therefore we are to be guided by someone. Dr. K. L. Rao is an Engineer Statesman. For your information I may tell you that as an Engineer Statesman Mr. Rao has said that diversion is an impossible thing. It cannot be done now. But the Gulhati Commission says that it could be diverted. Let us not go into the private affairs of any person here. But one thing is certain that we must be guided by people who are experts in this country.

Sri K. PUTTASWAMY.—Sir, in my opinion, he is not the only person. There are several persons who are experts. Even our Government also is competent to advise.

ನಾನು ಈ ವಿಚಾರದಲ್ಲಿ ವಾದಿಸುವುದಕ್ಕೆ ಇಷ್ಟಪಡುವುದಿಲ್ಲ. ನಾನಾದರೂ ಹೇಳಿದ್ದು ಕೆ. ಎಲ್. ರಾವ್ ಒಬ್ಬರೇ ಇಂಡಿಯಾ ಸರಕಾರದ ನೀತಿಯನ್ನು ನಿರ್ಧಾರ ಮಾಡುವುದಕ್ಕಾಗುವುದಿಲ್ಲ ಎಂದು. ಅದೂ ಅಲ್ಲದೆ ಈ ವಿಚಾರ ಎಷ್ಟು ಮಹತ್ವದ್ದಾಗಿದೆ ಅಂದರೆ ಯಾರೋ ಒಬ್ಬ ಮಂತ್ರಿ ಇದನ್ನು ತೀರ್ಮಾನ ಮಾಡುವುದಕ್ಕಾಗುವುದಿಲ್ಲ. ಇದು ಅತ್ಯಂತ ಮಹತ್ವದ್ದಾಗಿದೆ. ಆ ಕಾರಣದಿಂದ ಇಂದು ನಮ್ಮ ದೇಶದ ನಾಯಕರು ಇಂಡಿಯಾ ಸರಕಾರಕ್ಕೆ ವಿಷಯವನ್ನು ತಿಳಿಸಿ ನ್ಯಾಯ ಪಡೆಯಲು ಸರ್ವ ಪ್ರಯತ್ನ ಮಾಡುತ್ತಿದ್ದಾರೆ. ಈ ಸಭೆಯ ಅಭಿಪ್ರಾಯವೇನಿದೆ ಎಂಬುದು

ಇಂಡಿಯಾ ಸರಕಾರಕ್ಕೆ ಸ್ಪಷ್ಟವಾಗಿ ಗೊತ್ತಾಗಿದೆ. ಅಲ್ಲದೆ ಪ್ರತಿಯೊಂದು ಸಾರಿಯೂ ಕೂಡ ನಮ್ಮ ಸರಕಾರ ಇಂಡಿಯಾ ಸರಕಾರಕ್ಕೆ ಯಾವ ಸಂಶಯಕ್ಕೂ ಆಸ್ಪದವಿಲ್ಲದಿರುವ ರೀತಿಯಲ್ಲಿ ನಮ್ಮ ನಿಲುವನ್ನು ತಿಳಿಸಿದ್ದಾರೆ.

ಈ ಟ್ರಿಬ್ಯೂನಲ್ ಒಂದೇ ಎರಡೇ ಅನ್ನುವುದು ಬಂದದ್ದು ಬಹಳ ಹಿಂದೆಯೇ, 1968ರ ಜುಲೈ ಸುಮಾರಿನಲ್ಲಿ. ಯೂನಿಯನ್ ಸರ್ಕಾರದಿಂದ ಬಂದಂತಹ ಕಾಗದದಲ್ಲಿ ಟ್ರಿಬ್ಯೂನಲ್ಸ್ ಅಂತ ಬಹುವಚನವನ್ನು ಉಪಯೋಗಿಸಿದ್ದರು—ಪ್ಲೂರಲ್ ನಂಬರ್—ಆಗಲೇ ನಮ್ಮ ಸರ್ಕಾರದವರಿಗೆ ಸಂಶಯ ಬಂತು. ಟ್ರಿಬ್ಯೂನಲ್ಸ್ ಅಂತ ಪದ ಉಪಯೋಗಿಸಿದ್ದೀರಿ, ಇದಕ್ಕೆ ಟ್ರಿಬ್ಯೂನಲ್ಸ್ ಬೇಕಾಗುವುದಿಲ್ಲ. ಕೃಷ್ಣಾ ಗೋದಾವರಿ ಒಂದೇ ವಿವಾದಾಸ್ಪದವಾಗಿರುವುದು ಇದನ್ನು ತೀರ್ಮಾನ ಮಾಡುವುದಕ್ಕೆ ಒಂದೇ ಒಂದು ಟ್ರಿಬ್ಯೂನಲ್‌ನ್ನು ವ್ಯವಸ್ಥೆ ಮಾಡಬೇಕು, ಅಸ್ತಿತ್ವಕ್ಕೆ ತರಬೇಕೆಂದು ಆಗಲೇ ಅವರಿಗೆ ತಿಳಿಸಿದೆವು. ಇದುವರೆಗೂ ಕೂಡ ಎರಡು ಟ್ರಿಬ್ಯೂನಲ್‌ಗಳನ್ನು ಮಾಡಬೇಕಾಗಿ ಬರುತ್ತದೆ ಎಂಬುದನ್ನು ತಿಳಿಸಿಲ್ಲ, ಪತ್ರಿಕೆಯಲ್ಲಿ ಬರತಕ್ಕ ವಿಚಾರ ಒಂದು ಬಿಟ್ಟರೆ ಇನ್ನಾವ ಕಾಗದ ಪತ್ರದಲ್ಲಾಗಲಿ ಅವರ ಅಧಿಕೃತ ಹೇಳಿಕೆಯಲ್ಲಾಗಲಿ ಎರಡು ಟ್ರಿಬ್ಯೂನಲ್‌ಗಳಾಗಬೇಕೆಂದು ಹೇಳಿಲ್ಲ. ಇವತ್ತು ಬಂದಂಥ ಸಮಾಚಾರದಲ್ಲೂ ಕೂಡ ಎರಡು ಟ್ರಿಬ್ಯೂನಲ್ ಮಾಡಬೇಕು ಅನ್ನುವ ಪ್ರಶ್ನೆ ಈಗ ಬರುವುದಿಲ್ಲ, ನೀವು ಎರಡು ಟ್ರಿಬ್ಯೂನಲ್‌ಗಳನ್ನು ಮಾಡಬೇಕೆಂದು ಆಲೋಚನೆ ಮಾಡುತ್ತಾ ಇದ್ದೀರಿ ಅದು ನಮ್ಮ ಹಿತಕ್ಕೆ ವಿರೋಧವಾಗುತ್ತದೆ, ಎರಡು ಟ್ರಿಬ್ಯೂನಲ್‌ಗಳನ್ನು ಮಾಡಕೂಡದು ಎಂಬುದನ್ನು ಸ್ಪಷ್ಟಪಡಿಸಿದ್ದೇವೆ. ಶ್ರೀಮಾನ್ ಚನ್ನಬಸಪ್ಪನವರು ಈ ಸಭೆಯ ಸದಸ್ಯರಾಗಿರತಕ್ಕ ಅಖಿಲಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಅಧ್ಯಕ್ಷರಾಗಿರತಕ್ಕ ಶ್ರೀಮಾನ್ ನಿಜಲಿಂಗಪ್ಪನವರು ಹೇಳಿರ ತಕ್ಕ ಒಂದು ಹೇಳಿಕೆಯನ್ನು ಪ್ರಸ್ತಾಪ ಮಾಡಿದರು. ಎರಡು ಟ್ರಿಬ್ಯೂನಲ್ ಮಾಡಿದರೆ ಎರಡು ಟ್ರಿಬ್ಯೂನಲ್‌ಗಳಲ್ಲೂ ಅದೇ ಸದಸ್ಯರನ್ನೇ ನೇಮಕ ಮಾಡಿದರೆ ಸಾಕು ಎಂಬ ಹೇಳಿಕೆಯನ್ನು ಅವರು ಕೊಟ್ಟಿದ್ದಾರೆ ಹಾಗೆ ಮಾಡುವುದಾದರೆ ನಮಗೆ ತುಂಬಾ ಅನ್ಯಾಯವಾಗುತ್ತದೆ ಈ ದೇಶದ ಹಿತಕ್ಕೆ ಧಕ್ಕೆ ಬರುತ್ತದೆ ಎಂದು ಹೇಳಿದರು. ಮತ್ತೆ ಅಷ್ಟಕ್ಕೇ ನಿಲ್ಲಿಸದೆ ಅವರು ಆ ರೀತಿ ಅಭಿಪ್ರಾಯ ಪಟ್ಟಿರುವಾಗ ಪಾಪ ನಮ್ಮ ಮುಖ್ಯಮಂತ್ರಿಗಳು ಏನು ಮಾಡಿಯಾರು ? ಅವರು ಏನು ಹೇಳಿದರೋ ಅದನ್ನೇ ಹೇಳಬೇಕಾಗುತ್ತದೆ, ಅವರು ನಡೆದಂತ ದಾರಿಯಲ್ಲೇ ನಡೆಯಬೇಕಾಗುತ್ತದೆ ಎಂದು ಹೇಳಿದರು. ಶ್ರೀಮಾನ್ ಚನ್ನಬಸಪ್ಪನವರು ಪತ್ರಿಕೆಗಳಲ್ಲಿ ನಮ್ಮ ಮುಖ್ಯಮಂತ್ರಿಗಳವರ ಹೇಳಿಕೆ ಬಂದದ್ದನ್ನು ನೋಡಿದ್ದಾರೆ ಎಂದು ನಾನು ಭಾವನೆ ಮಾಡಿಕೊಂಡಿದ್ದೇನೆ. ಶ್ರೀಮಾನ್ ನಿಜ ಲಿಂಗಪ್ಪನವರ ಪ್ರತಿಕ್ರಿಯೆ ಪತ್ರಿಕೆಯಲ್ಲಿ ವ್ಯಕ್ತವಾದಮೇಲೂ ಕೂಡ ಅವರು ಎರಡು ಟ್ರಿಬ್ಯೂನಲ್ ಆದ ಪಕ್ಷದಲ್ಲಿ ಎರಡು ಟ್ರಿಬ್ಯೂನಲ್‌ನಲ್ಲೂ ಕೂಡ ಅದೇ ಸದಸ್ಯರು ಇರಬೇಕೆಂದು ಹೇಳಿದರು ಎಂಬ ವರದಿ ಪತ್ರಿಕೆಯಲ್ಲಿ ಬಂದಮೇಲೂ ಕೂಡ ನಮ್ಮ ಮುಖ್ಯ ಮಂತ್ರಿಗಳು ಹೇಳಿದ್ದಾರೆ ಅದು ಆಗದು, ಒಂದೇ ಒಂದು ಟ್ರಿಬ್ಯೂನಲ್ ಆಗಬೇಕೆಂಬುದನ್ನು ಅವರಿಗೆ ಸ್ಪಷ್ಟಪಡಿಸಿದ್ದಾರೆ. ಮತ್ತು ಒಂದು ಪ್ರಶ್ನೆಯನ್ನು ಪದೇ ಪದೇ ಶ್ರೀಮಾನ್ ಚನ್ನಬಸಪ್ಪನವರು ಕೇಳುತ್ತಾರೆ. ಅವರು ಒಪ್ಪದಿದ್ದರೆ ಏನು ಮಾಡುತ್ತೀರಾ. ಈ ಪ್ರಶ್ನೆಯನ್ನು ಅವರು ಮೊದಲು ಹಾಕುತ್ತಾ ಇದ್ದರು. ಒಂದಲ್ಲ ನಾಲ್ಕು ಬಾರಿ ಈ ಪ್ರಶ್ನೆಯನ್ನು ಹಾಕಿದ್ದಾರೆ. ಒಂದು ಟ್ರಿಬ್ಯೂನಲ್‌ಗೆ ಬದಲಾಗಿ ಎರಡು ಟ್ರಿಬ್ಯೂನಲ್‌ನ್ನು ನೇಮಕ ಮಾಡಿದರೆ ಏನು ಮಾಡುತ್ತೀರಿ ಎಂದು ಪ್ರಶ್ನೆ ಮಾಡುತ್ತಾರೆಯೇ ವಿನಾ ಏನು ಮಾಡಬೇ ಕೆಂಬುದನ್ನು ಅವರು ಹೇಳುವುದಿಲ್ಲ. ಅದನ್ನು ಯಾವ ರೀತಿಯಲ್ಲಿ ತಪ್ಪಿಸಬಹುದು ಎಂಬುದನ್ನು ಹೇಳುವುದಿಲ್ಲ. ಇನ್ನೊಂದು ಮಾತು ಹೇಳಿದ್ದಾರೆ: ನಮಗೆ ಧೈರ್ಯ ಇಲ್ಲ—ನಮಗೆ ಅವರನ್ನು ಎದುರಿಸತಕ್ಕ ಶಕ್ತಿ ಇಲ್ಲ—ಅವರನ್ನು ಕಂಡರೆ ನೀವು ಏನೋ ಹೆದರಿಕೊಳ್ಳುತ್ತೀರಿ ಅಥವಾ ನಮ್ಮ ಪ್ರೆಷರ್ ಇದೆಯಲ್ಲಾ ಅದು ಸಾಕಾದಷ್ಟು ದೊಡ್ಡದಲ್ಲ—ಅವರಮೇಲೆ ನಿಮ್ಮ ಪ್ರಭಾವ ಇಲ್ಲ—ಯೂನಿಯನ್ ಸರ್ಕಾರದೊಡನೆ ಒಂದಾಗಿನಿಂದಲೂ ಕೂಡ ಎಂದರೆ ಬಹುಶಃ 1954–55 ರಲ್ಲಿ ಅಷ್ಟಿರಲಿಲ್ಲ ಎಂದು ಕಾಣುತ್ತದೆ 1956 ರಿಂದಲೂ ಕೂಡ ಇದೇ ಸವಾಲು. ನಮಗೆ ಕೇಂದ್ರ ಸರ್ಕಾರದಮೇಲೆ ಯಾವುದೇ ಪ್ರಭಾವ ಇಲ್ಲ—ಪ್ಲಾನಿಂಗ್ ಕಮಿಷನ್ ಮೇಲೆ—ಅಲೋ ಕೇಶನ್ ಕಡಿಮೆ ಆಯಿತು—ನಮಗೆ ಪ್ರಭಾವ ಇಲ್ಲ—ನಿಮ್ಮನ್ನು ಕಂಡರೆ ಅವರಿಗೆ ಯಾವ ಲಕ್ಷಕ್ಕೂ ಇಲ್ಲ-ಲೆಕ್ಕಕ್ಕೆ ಇಲ್ಲ ಜಮಕ್ಕೆ ಇಲ್ಲ. ಆಂಧ್ರ ಸರ್ಕಾರದವರ ಪ್ರಭಾವ ಇದೆ. ಮದ್ರಾಸ್ ಸರ್ಕಾರದವರ ಪ್ರಭಾವ ಇದೆ ನಿಮಗೆ ಏನೇನೂ ಇಲ್ಲ, ಇದನ್ನು ಅವರು ಪದೇ ಪದೇ ಹೇಳಿಕೊಂಡು ಬರುತ್ತಾ ಇದ್ದಾರೆ. ಶ್ರೀಮಾನ್ ಚನ್ನಬಸಪ್ಪನವರು ಸರ್ಕಾರ ನಡೆಸತಕ್ಕ ವ್ಯಕ್ತಿಗಳನ್ನು ಟೀಕೆ ಮಾಡುವುದಕ್ಕೆ ಈ ಪದಗಳನ್ನು ಬಳಸುವುದಾದರೆ ಅದರಮೇಲೆ ನನ್ನ ಆಕ್ಷೇಪಣೆ ಇಲ್ಲ. ಆದರೆ ಒಂದು ವಿಚಾರವನ್ನ ಅವರು ಗಮನದಲ್ಲಿಟ್ಟುಕೊಳ್ಳಬೇಕು. ನಮ್ಮದು ಒಂದು ಫೆಡ್ರಲ್ ಸ್ಟ್ರಕ್ಚರ್. ಇಂಡಿಯಾ ಸರ್ಕಾರ ಕೇಂದ್ರ ಸರ್ಕಾರ, ರಾಜ್ಯದಲ್ಲಿ ರಾಜ್ಯ ಸರ್ಕಾರಗಳು ಇವೆ. ರಾಜ್ಯ ಸರ್ಕಾರಕ್ಕೆ ಸೀಮಿತವಾಗಿರತಕ್ಕ ಹಕ್ಕುಗಳು ಕೆಲವು ಇದೆ. ಯೂನಿಯನ್ ಸರ್ಕಾರಕ್ಕೆ ಸೀಮಿತವಾಗಿರತಕ್ಕ

(SRI K. PUTTASWAMY)

ಹಕ್ಕುಗಳು ಕೆಲವು ಇವೆ. ಅವನ್ನು ಏನಿದ್ದರೂ ಕೂಡ ರಾಜ್ಯಾಂಗದ ಚೌಕಟ್ಟಿನಲ್ಲಿ ವ್ಯವಹರಿಸಬೇಕು ಇಂಡಿಯಾ ಸರ್ಕಾರದ ಅಧಿಕಾರದಲ್ಲಿ ಸೈನ್ಯ ಇದೆ ಎಂದು ಅದನ್ನು ನಮ್ಮ ಮೇಲೆ ಅವರು ಬಳಸುವುದಕ್ಕೆ ಆಗುವುದಿಲ್ಲ. ಆದ್ದರಿಂದ ರಾಜ್ಯಾಂಗದ ಚೌಕಟ್ಟಿನಲ್ಲಿ ಕೇಂದ್ರ ರಾಜ್ಯ ಸರ್ಕಾರದ ಮೇಲೆ ಆಗಲಿ, ರಾಜ್ಯ ಸರ್ಕಾರ ಕೇಂದ್ರ ಸರ್ಕಾರದ ಮೇಲೆ ಆಗಲಿ ಅವರ ಜೊತೆಯಲ್ಲಿ ವ್ಯವಹರಿಸಬೇಕಾದರೆ ಕೆಲವು ಸರ್ವ ಸೀಮಿತವಾದ ನಿಯಮಗಳು ಇವೆ. ವಿವಾದಾಸ್ಪದವಾದರೆ ಅದನ್ನು ಪರಿಹಾರ ಮಾಡಿಕೊಳ್ಳುವುದಕ್ಕೆ ಮಾರ್ಗಗಳು ಇವೆ. ಅದಕ್ಕೆ ನಮಗೆ ಧೈರ್ಯ ಇಲ್ಲ, ನಮಗೆ ಶಕ್ತಿ ಇಲ್ಲ ಎಂದು ಮೂದಲಿಸಿದರೆ ನಮಗೆ ಇಲ್ಲದೇ ಇರತಕ್ಕ ಶಕ್ತಿ ಬರುವುದಾಗಲಿ ಅಥವಾ ಶಕ್ತಿ ಕಳೆದು ಹೋಗುವುದಾಗಲಿ ಯಾವುದೂ ಇಲ್ಲ. ಶ್ರೀಮಾನ್ ಚನ್ನಬಸಪ್ಪನವರಲ್ಲಿ ವಿನಂತಿ ಮಾಡಿಕೊಳ್ಳುವುದು ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ ಈ ವ್ಯವಹಾರ ಧೈರ್ಯದಮೇಲೆ ನಡೆಯುವುದು ಅಲ್ಲ, ಧೈರ್ಯ ಪ್ರತಿಯೊಬ್ಬರಿಗೂ ಇದೆ. ಸರ್ಕಾರವನ್ನು ನಡೆಸುವಂತಹ ಕಾಲದಲ್ಲಿ ಈ ಮೈಸೂರು ರಾಜ್ಯದ ಆಡಳಿತವನ್ನು ನಡೆಸುತ್ತಾ ಇರುವಂತಹ ಕಾಲದಲ್ಲಿ ಮೈಸೂರು ಸರ್ಕಾರ ತನ್ನ ರಾಜ್ಯದ ಹಿತರಕ್ಷಣೆಯನ್ನು ಮಾಡತಕ್ಕ ಸರ್ವ ಶಕ್ತಿಯನ್ನೂ ಹೊಂದಿದೆ ಎಂಬ ವಿಚಾರವನ್ನು ಅವರಿಗೆ ಹೇಳ ಬಯಸುತ್ತೇನೆ.

ಶ್ರೀ ಎರ್. ಶ್ರೀಕಂಠಯ್ಯ.—ಈ ಪ್ರಶ್ನೆಯಲ್ಲಿ ಇಂಪ್ಲಿಕೇಷನ್ ಬರುತ್ತದೆ. ಏಕೆಂದರೆ ಈಗ ಬೆಂಗಳೂರು-ಸೇಲಂ ರೈಲ್ವೆ ಮಾರ್ಗ ತೆಗೆದುಕೊಳ್ಳಿ. ಸ್ಟೀಲ್ ಪ್ಲಾಂಟ್ ತೆಗೆದುಕೊಳ್ಳಿ, ಇರಿಗೇಷನ್ ಪ್ರಾಜೆಕ್ಟ್‌ಗಳನ್ನು ತೆಗೆದುಕೊಳ್ಳಿ ಮಿಕ್ಕ ಸ್ಟೇಟ್‌ಗಳಲ್ಲಿ ಆಗುವುದು ನಮ್ಮ ಸ್ಟೇಟ್‌ನಲ್ಲಿ ಕೇಳಿಕೊಂಡರೂ ಕೂಡ ಆಗದೇ ಇರುವುದು ನೋಡಿದರೆ ಇಂಪ್ಲಿಕೇಷನ್ ಏನಾಗುತ್ತದೆ? ಇತರ ರಾಜ್ಯಗಳಿಗೆ ಒತ್ತಾಯ ಮಾಡುವುದಕ್ಕೆ ಶಕ್ತಿ ಇದೆ, ನಮಗೆ ಇಲ್ಲ ಎಂಬ ವಿಷಯ ಪ್ರೂವ್ ಆಗುತ್ತದೆ.

ಶ್ರೀ ಕೆ. ಪುಟ್ಟಸ್ವಾಮಿ.—ನಮಗೆ ವಿರೋಧಪಕ್ಷದ ಕೆಲವು ಸದಸ್ಯರ ವಿಚಾರದಲ್ಲಿ ಸಂಪೂರ್ಣ ಸಹಾನುಭೂತಿ ಇದೆ. ಅವರಿಗೆ ಏನು ಹೇಳುವುದಕ್ಕೂ ಆಗುವುದಿಲ್ಲ. ಅವರು ಇಲ್ಲಿ ಯಾವ ಯಾವ ಕಾರ್ಯ ಆಗಿದೆ ಎಂಬುದನ್ನು ಹೇಳುವುದಿಲ್ಲ ಆಗದೇ ಇರುವುದನ್ನು ಎತ್ತಿ ಹೇಳಿ ಇದರ ಇಂಪ್ಲಿಕೇಷನ್ ಏನು ಎಂದು ಹೇಳುತ್ತಾರೆ. ಮಂಗಳೂರು ಹಾರ್ಬರ್ ನಿರ್ಮಾಣ ಆಗುವುದು ಅಲ್ಲ, ಹಾಸನ-ಮಂಗಳೂರು ರೈಲ್ವೆ ಆಗುವುದು ಅಲ್ಲ, ಯಾವ ಯಾವ ಕಾರ್ಯಗಳು ಆಗುತ್ತಿವೆ ಅವು ಯಾವುದೂ ಅಲ್ಲ, ಆದದ್ದನ್ನು ಎಲ್ಲಾ ಬಿಡುವುದು, ಆಗದೆ ಇರುವುದನ್ನು ಎತ್ತಿ ಹೇಳಿ ನಿಮಗೆ ಶಕ್ತಿ ಇಲ್ಲ ಅಂತ ಹೇಳುವುದರಿಂದ ಪ್ರಯೋಜನವಾಗುವುದಿಲ್ಲ. ನಾನು ಹೇಳುತ್ತೇನೆ ಇಂಡಿಯಾ ಸರ್ಕಾರದಿಂದ ನಮಗೆ ಇನ್ನೂ ಆಗಬೇಕಾದ್ದು ಅನೇಕ ಕೆಲಸಗಳು ಇವೆ. ಆ ಕಾರ್ಯಗಳು ಆಗಬೇಕೆಂದು ಒತ್ತಾಯ ಮಾಡುತ್ತಾ ಇದ್ದೇನೆ.

ನಮಗೆ ಎಲ್ಲವೂ ಅನುಕೂಲವಾಗಿದೆ, ಇನ್ನೇನೂ ಆಗಬೇಕಾದ್ದಿಲ್ಲ ಎಂದು ನಾವೆಂದೂ ಹೇಳಿಲ್ಲ. ಈಗ ಎಷ್ಟಾಗಿದೆಯೋ ಅಷ್ಟೇ ಸಾಕು ಎಂದು ಸರ್ಕಾರದವರು ಎಂದೂ ಹೇಳಲಿಲ್ಲ. ಅಷ್ಟಕ್ಕೆ ಯಾರೂ ತೃಪ್ತರಾಗಿದ್ದಾರೆಂದು ಭಾವಿಸಬಾರದು. ನಾವು ಸಮಯಕ್ಕೆ ತಕ್ಕ ಹಾಗೆ ಏನೇನು ಕ್ರಮಗಳನು ಕೈಗೊಳ್ಳಬೇಕೋ ಅವುಗಳನ್ನು ಕೈಗೊಂಡು ನಮ್ಮ ಹಕ್ಕನ್ನೂ ನಮ್ಮ ಹಿತರಕ್ಷಣೆಯನ್ನೂ ಕಾಯ್ದುಕೊಳ್ಳಲು ನಾವು ಎಲ್ಲ ಪ್ರಯತ್ನಗಳನ್ನೂ ಮಾಡುತ್ತಿದ್ದೇವೆ. ಯಾವುದನ್ನೂ ಕೈಬಿಟ್ಟಿಲ್ಲ. ಆದರೆ ಆಗಬೇಕಾದ ಕೆಲಸಕಾರ್ಯಗಳು ತ್ವರಿತದಿಂದ ಸಾಗದೆ ಬಹಳ ನಿಧಾನವಾಗಿ ನಡೆಯುತ್ತಿವೆ; ಅಷ್ಟಕ್ಕೇ ಸರ್ಕಾರಕ್ಕೆ ರಾಜ್ಯದ ಪ್ರತಿನಿಧಿಗಳಾಗಿ ಕೆಲಸಮಾಡತಕ್ಕ ಶಕ್ತಿಯಿಲ್ಲ, ಇವರ ಮಾತು ಡೆಲ್ಲಿಯಲ್ಲಿ ನಡೆಯುವುದಿಲ್ಲ ಇವರ ಬೇಳೆ ಅಲ್ಲಿ ಬೇಯುವುದಿಲ್ಲ ಎಂದು ಹೇಳುವುದು ಸರಿಯಲ್ಲ ಎಂದು ಹೇಳುತ್ತೇನೆ.

ಸ್ವಾಮಿ, ನಾನು ಇಲ್ಲಿ ನಡೆಯುತ್ತಿರುವ ಚರ್ಚೆಯನ್ನೆಲ್ಲಾ ಸಂಪೂರ್ಣವಾಗಿ ಕೇಳಿದೆ. ಈ ವಿಚಾರದಲ್ಲಿ ಮಾನ್ಯ ಸದಸ್ಯರು ಹೇಳುತ್ತಿರುವುದಕ್ಕೂ ಮತ್ತು ಸರ್ಕಾರ ತಾಳಿರತಕ್ಕ ಧೋರಣೆಗೂ ಏನೇನೂ ವ್ಯತ್ಯಾಸವಿಲ್ಲ. ಈ ದಿವಸ ಆ ಕೃಷ್ಣಾ—ಗೋದಾವರಿ ನದಿಗಳ ನೀರಿನ ವಿಚಾರದಲ್ಲಿ ಸರ್ಕಾರದವರ ಧೋರಣೆ ಏನಿದೆ ಎಂದರೆ ಆ ನದಿಗಳ ನೀರಿನಲ್ಲಿ ಮೈಸೂರು ರಾಜ್ಯಕ್ಕೆ ಏನುಪಾಲು ಸಿಕ್ಕಬೇಕೋ ಅದರಲ್ಲಿ ಚಾಚೂ ತಪ್ಪದಂತೆ, ಮತ್ತು ಯಾವ ರಾಜೀ ಸಂಧಾನಕ್ಕೂ ಮಣಿಯದಂತೆ ನಮ್ಮ ಹಕ್ಕನ್ನು ನಾವು ಪಡೆದುಕೊಳ್ಳಲು ಸರ್ವ ಪ್ರಯತ್ನಗಳನ್ನೂ ಮಾಡುತ್ತಿದ್ದೇವೆ. ಇದೇ ಮೈಸೂರು ಸರ್ಕಾರದವರ ನಿಲುವು. ಈ ನದಿಗಳ ನೀರಿನ ಹಂಚಿಕೆಯಲ್ಲಿ ಈ ಸಭೆಯ ಎಲ್ಲ ಮಾನ್ಯ ಸದಸ್ಯರುಗಳಿಗೂ ಏನೊಂದು ಕಳವಳ ಮತ್ತು ಕಾತುರಗಳು ಇವೆಯೋ ಅಷ್ಟೇ ಕಾತುರ—ಕಳವಳ

ಗಳು ಸರ್ಕಾರಕ್ಕೂ ಇವೆ. ಇಲ್ಲಿಯವರೆಗೂ ಮಾನ್ಯ ಸದಸ್ಯರಾದ ಶ್ರೀಮಾನ್ ನಂಜೇಗೌಡರು ಏನು ಹೇಳಿದರೋ ಆ ವಿಷಯದಲ್ಲಿ ಸರ್ಕಾರಕ್ಕೆ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಅವರಿಗೂ ಸರ್ಕಾರಕ್ಕೂ ಇರತಕ್ಕ ವ್ಯತ್ಯಾಸ ಎಂದರೆ ಮಾನ್ಯ ಸದಸ್ಯರು ವಿಚಾರವನ್ನು ಬಹಳ ಆಗ್ರಹವಾಗಿ ಹೇಳುತ್ತಾರೆ, ಸರ್ಕಾರದವರು ಅದನ್ನು ಶಾಂತರೀತಿಯಿಂದ ಹೇಳುತ್ತಿದ್ದಾರೆ, ಇಷ್ಟೇ ವ್ಯತ್ಯಾಸ. ಆದರೆ ನಾನು ಅಖೈರಾಗಿ ಈ ಮನೆಗೆ ತಿಳಿಸಲಿಚ್ಛಿಸುವುದೇನೆಂದರೆ ಮಾನ್ಯ ಸದಸ್ಯರಿಗೆ ಈ ಕೃಷ್ಣಾ—ಗೋದಾವರಿ ನದಿಗಳ ನೀರಿನ ಹಂಚಿಕೆಯಲ್ಲಿ ಎಷ್ಟು ಕಾತುರತೆ—ಕಳವಳಗಳಿವೆಯೋ ಅದಕ್ಕೆ ಈಶದಪಿ ಕಡಮೆ ಇಲ್ಲದ ಕಾತುರತೆ ಕಳವಳಗಳು ಸರ್ಕಾರಕ್ಕೂ ಇವೆ. ಆದಾಗ್ಯೂ ಈ ಸದನದ ಅನೇಕ ಸದಸ್ಯರೂ ಮತ್ತು ಶ್ರೀಮಾನ್ ಎಚ್. ಎಂ. ಚನ್ನಬಸಪ್ಪನವರೂ ಪದೇ ಪದೇ ಸರ್ಕಾರದವರು ತಮ್ಮ ನಿಲುವಿನ ಬಗ್ಗೆ ಆಗಿಂದಾಗ್ಗೆ ಏಕೆ ಒಂದು ಪತ್ರಿಕಾ ಪ್ರಕಟಣೆಯನ್ನು ಹೊರಡಿಸಬಾರದು ಎಂದು ಕೇಳುತ್ತಿದ್ದಾರೆ. ಆದರೆ ಹಾಗೆ ಎಲ್ಲಾ ವಿಚಾರಗಳಲ್ಲೂ ಮತ್ತು ಎಲ್ಲಾ ಸಂದರ್ಭಗಳಲ್ಲೂ ಹಾಗೆ ಪತ್ರಿಕೆಗಳಿಗೆ ಸರ್ಕಾರ ಒಂದು ಹೇಳಿಕೆಯನ್ನು ಕೊಡುವುದಕ್ಕಾಗುವುದಿಲ್ಲ. ಮಾನ್ಯ ಸದಸ್ಯರುಗಳಿಗೆ ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದಕ್ಕೆ ಅವಕಾಶವಿದ್ದ ಹಾಗೆ ಸರ್ಕಾರಕ್ಕೆ ಅವಕಾಶವಿಲ್ಲ. ಸರ್ಕಾರದವರು ಚರ್ಚೆ ಮಾಡತಕ್ಕ ಕಾಲದಲ್ಲಿ ಪ್ರತಿಯೊಂದು ಹಂತದಲ್ಲಿಯೂ ಪತ್ರಿಕೆಗಳಿಗೆ ಒಂದೊಂದು ಹೇಳಿಕೆಗಳನ್ನು ಕೊಟ್ಟುಕೊಂಡು ಇಂಥ ಒಂದು ಚಳವಳಿಯನ್ನು ನಡೆಸುವುದಕ್ಕಾಗುವುದಿಲ್ಲ. ಸರ್ಕಾರಕ್ಕೆ ತನ್ನ ಹಕ್ಕುಬಾಧ್ಯತೆಗಳೇನು ಎಂಬುದು ಚೆನ್ನಾಗಿ ಗೊತ್ತಿದೆ. ಕೃಷ್ಣಾ ಗೋದಾವರಿ ನದೀ ನೀರಿನ ವಿಚಾರದಲ್ಲಿ ಸರ್ಕಾರ ತನ್ನ ಸರ್ವಪ್ರಯತ್ನಗಳನ್ನೂ ತನ್ನ ಸರ್ವಸಾಮರ್ಥ್ಯಗಳನ್ನೂ ಒಟ್ಟುಗೂಡಿಸಿ ಮೈಸೂರು ರಾಜ್ಯಕ್ಕೆ ಸಿಕ್ಕಬೇಕಾದ ನೀರಿನ ಸಂಪೂರ್ಣಭಾಗವನ್ನು ತೆಗೆದುಕೊಳ್ಳುವುದಕ್ಕೆ ಅದು ಪ್ರಯತ್ನ ಮಾಡುತ್ತಿದೆ. ನಾವು ಈ ಪ್ರಯತ್ನದಲ್ಲಿ ಯಶಸ್ವಿಯಾಗುತ್ತೇವೆಂಬ ಭರವಸೆ ಕೂಡ ನನಗಿದೆ., ತಾವುಗಳು ಯಾರೂ ಹೆದರಬೇಕಾಗಿಲ್ಲ ಎಂಬ ಭರವಸೆಯನ್ನು ಕೊಟ್ಟು ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

Sri H. N. NANJE GOWDA.—I am the mover of the motion, I may be given some time to say something on this.

Sri K. PUTTASWAMY.—If you are the mover of the motion, you will have a right of reply.

† ಶ್ರೀ ಎಚ್. ಎನ್. ನಂಜೇಗೌಡ.—ಸ್ವಾಮಿ, ನಾನು ಅನೇಕ ವಿಚಾರಗಳನ್ನು ಇದರ ಬಗ್ಗೆ ಸಂಗ್ರಹಣೆ ಮಾಡಿದ್ದೇನೆ. ನಾನು ಹೇಳತಕ್ಕದ್ದನ್ನು ಸರ್ಕಾರದವರು ಒಪ್ಪಬೇಕು. ಮತ್ತು ನಾವು ಸದಸ್ಯರಾಗಿ ಇಲ್ಲಿ ಕುಳಿತು ಕೇಳತಕ್ಕ ಕೆಲವು ವಿಷಯಗಳ ಬಗ್ಗೆ ಸರ್ಕಾರದವರು ಸ್ಪಷ್ಟೀಕರಣ ಮಾಡಬೇಕು. ಆದರೆ ನಾನಿನ್ನು ಈ ವಿಚಾರದಲ್ಲಿ ಹೆಚ್ಚಿಗೆ ಹೇಳುವುದಕ್ಕೆ ಹೋಗದೆ ಇಷ್ಟಕ್ಕೆ ನಿಲ್ಲಿಸುತ್ತೇನೆ.

ಆಂಧ್ರದವರು ಈ ದಿವಸ ಆ ಕೃಷ್ಣಾ-ಗೋದಾವರಿ ನದಿಗಳ ನೀರನ್ನು ಔಟ್ ಸೈಡ್ ದಿ ಬೇಸಿನ್ ತೆಗೆದುಕೊಂಡು ಹೋಗಿ ಆ ಪ್ರದೇಶವನ್ನು ಡೆವಲಪ್‌ಮಾಡುವುದಕ್ಕೆ ಉಪಯೋಗ ಮಾಡುತ್ತಿದ್ದಾರೆ. ಇದು ನಮಗೆ ಬಹಳ ದಿವಸಗಳಿಂದಲೂ ಬೆಳೆದು ಬರುತ್ತಾ ಇರುವ ಒಂದು ದೊಡ್ಡ ಸಮಸ್ಯೆ. ನಾನು ಎಲ್ಲಾ ಇರಿಗೇಷನ್ ಆಕ್ಟ್‌ಗಳನ್ನೂ ಓದಿದ್ದೇನೆ. ಎಲ್ಲಾ ಕಮಿಟಿಗಳ ವರದಿಗಳನ್ನೂ ಪರಿಶೀಲನೆ ಮಾಡಿದ್ದೇನೆ. ಈ ಹಿಂದೆ ಕೇಂದ್ರದವರು ಆಂಧ್ರದವರ ಅನುಕೂಲಕ್ಕಾಗಿ ನೇಮಕ ಮಾಡಿದ್ದ ಆ ಗುಲಾಟಿ ಕಮಿಷನ್ನಿನವರೂ ಕೂಡ ಮೈಸೂರಿನವರು ಆ ಗೋದಾವರಿ ನೀರಿಗಾಗಿ ಒದ್ದಾಡುತ್ತಿಲ್ಲ, ಅವರು ಆ ಕೃಷ್ಣಾ ನದಿಯಲ್ಲಿರತಕ್ಕ 2017 ಟಿ. ಎಂ. ಸಿ. ಎಫ್. ಟಿ. ನೀರಿನ ಹಂಚಿಕೆಗಾಗಿ ಪ್ರಯತ್ನ ಮಾಡುತ್ತಿದ್ದಾರೆಂತಲೇ ಹೇಳಿದ್ದಾರೆ. ಅವರು ಅಷ್ಟು ವಿಶದವಾಗಿ ವಿವರವಾಗಿ ತಿಳಿಸಿದ್ದರೂ ಮತ್ತೆ ಈ ದಿವಸ ಕೇಂದ್ರದಲ್ಲಿ ಆ ನೀರಾವರಿ ಮಂತ್ರಿಗಳು ಎರಡು ಟ್ರೈಬ್ಯುನಲ್ ಎಂದು ಹೇಳುತ್ತಿರುವುದು ತೀರಾ ಶೋಚನೀಯ. ಆದರೆ ಈ ದಿವಸ ಅಲ್ಲಿ ಏನೇನು ಕುತಂತ್ರಗಳು ನಡೆಯುತ್ತಿವೆ ಅನ್ನುವುದರ ಕಡೆಗೆ ನಮ್ಮ ಸರ್ಕಾರದವರು ಸಾಕಷ್ಟು ಗಮನ ಕೊಟ್ಟ ಹಾಗೆ ಕಂಡುಬರುವುದಿಲ್ಲ. ಆದರೆ ಸರ್ಕಾರದವರು ನಾನು ಏನು ವಿಷಯವನ್ನು ಒತ್ತಾಯ ಮಾಡಿ ಹೇಳುತ್ತಿದ್ದೇನೆಂಬುದನ್ನು ಅರಿತುಕೊಂಡಿದ್ದರೆ ಬಹಳ ಸಂತೋಷ, ನನಗೆ ಅಷ್ಟೇ ಸಾಕು......

ಶ್ರೀ ಕೆ. ಪುಟ್ಟಸ್ವಾಮಿ.—ನಾನು ಯಾವಾಗ್ಲೂ ನಿಮ್ಮ ಅಭಿಪ್ರಾಯವನ್ನು ಒಪ್ಪುವುದಿಲ್ಲ ಎಂದು ಹೇಳಿಲ್ಲವಲ್ಲ ? ತಾವು ಹೇಳುವುದನ್ನು ನಾನೂ ಒಪ್ಪುತ್ತೇನೆ.

ಶ್ರೀ ಎಚ್. ಎನ್. ನಂಜೇಗೌಡ.—ಹಾಗಾದರೆ, ಸರಿ ನಾನು ಇದನ್ನು ಒತ್ತಾಯ ಮಾಡುವುದಿಲ್ಲ.

Private Members' Business

(i) Mysore Public Men Inquiries Bill, 1969

(Introduction)

Sri H. N. NANJE GOWDA.—I beg leave to introduce the Mysore Public Men Inquiries Bill, 1969.

Mr. DEPUTY SPEAKER.—Is it the pleasure of the House to grant leave to the hon. Member to introduce the Mysore Public Men Inquiries Bill, 1969 ?

HON. MEMBERS.—Yes.

Mr. DEPUTY SPEAKER.—The leave is granted.

Sri H. N. NANJE GOWDA.—I introduce the Mysore Public Men Inquiries Bill, 1969.

Mr. DEPUTY SPEAKER.—The Mysore Public Men Inquiries Bill, 1969 is introduced.

(ii) Mysore Agricultural Produce Market Committees (Amendment) Bill, 1969

(Introduction)

Sri K. H. PATIL.—I beg leave to introduce the Mysore Agricultural Produce Market Committees (Amendment) Bill, 1969.

Mr. DEPUTY SPEAKER.—Is it the pleasure of the House to grant leave to introduce the Mysore Agricultural Produce Market Committees (Amendment) Bill, 1969.

HON. MEMBERS.—Yes.

Mr. DEPUTY SPEAKER.—The leave is granted.

Sri K. H. PATIL.—I introduce the Mysore Agricultural Produce Market Committees (Amendment) Bill, 1969.

Mr. DEPUTY SPEAKER.—The Mysore Agricultural Produce Market Committees (Amendment) Bill, 1969, is introduced.

The House will now rise and meet again at One of the clock on Monday 10th March 1969.

The House adjourned at Thirty-minutes past Seven of the Clock to meet again at One of the Clock on Monday the 10th March 1969.

WD 12617—GPB—600—28-6-1969

ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Monday, 10th March 1969.

The House met in the Assembly Chamber, Vidhana Soudha, Bangalore, at One of the Clock.

Mr. SPEAKER (SRI S. D. KOTHAVALE) in the Chair.

STARRED QUESTIONS

(to which oral answers were given)

Property Tax Relief to Educational Institutions, etc., in Bangalore City

245. SRI T. R. SHAMANNA (Fort).—

Will the Minister of State for Municipal Administration be pleased to state.—

(*a*) whether many educational institutions, student hostels and other public welfare organizations in Bangalore City have been put to great hardships by the levy of property tax retrospectively from 1966 ;

(*b*) whether Government proposes to examine the cases and give necessary tax relief to the above institutions which enjoyed the benefit of tax relief from many years past ?

SRI B. M. PATIL (Minister of State for Municipal Administration).—

(*a*) Yes.

(*b*) The City of Bangalore Municipal Corporation (Amendment) Act, 1969 has since been passed which, *inter alia*, contains provisions to exempt with effect from 1st April 1966, payment of property tax on buildings or lands exclusively used for students' Hostels, not established for profit and those used for educational purposes by educational institutions receiving grant-in-aid from Government.

ಶ್ರೀ ಟಿ. ಆರ್. ಶಾಮಣ್ಣ.—ಕರ್ನಾಟಕ ಸಾಹಿತ್ಯಪರಿಷತ್ತು ಮತ್ತು ಗೋಖಲೆ ಇನ್‌ಸ್ಟಿಟ್ಯೂಟ್ ಆಫ್ ಪಬ್ಲಿಕ್ ಅಫೇರ್ಸ್ ಈ ಸಂಸ್ಥೆಗಳಿಗೂ ಅನೇಕ ವರ್ಷಗಳಿಂದ ಈ ಕಂದಾಯದ ರಿಯಾಯಿತಿ ಇತ್ತು. ಆದ್ದರಿಂದ ಮುಂದಕ್ಕೂ ಇವುಗಳಿಗೆ ಆ ಅನುಕೂಲವನ್ನು ಮುಂದುವರಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

† ಶ್ರೀ ಬಿ. ಎಂ. ಪಾಟೀಲ್.—ನನಗೆ ಗೊತ್ತಿರುವ ಮಟ್ಟಿಗೆ ಈ ಸಂಸ್ಥೆಗಳಿಗೆ ರಿಯಾಯಿತಿ ಕೊಡುವುದಕ್ಕೆ ಆಕ್ಟಿನಲ್ಲಿ ಅವಕಾಶವಿದ್ದ ಹಾಗೆ ಕಾಣುವುದಿಲ್ಲ. ಮಾನ್ಯಸದಸ್ಯರು ಹೇಳಿದ್ದನ್ನು ಸರ್ಕಾರ ಪರಿಶೀಲನೆ ಮಾಡಬಹುದು.

ಶ್ರೀ ಟಿ. ಆರ್. ಶಾಮಣ್ಣ.—ಅನೇಕ ವರ್ಷಗಳಿಂದ ಗ್ರ್ಯಾಂಟ್ ಪಡೆಯತಕ್ಕ ವಿದ್ಯಾಸಂಸ್ಥೆಗಳಿಗೆ ಈ ಕಂದಾಯದ ರಿಯಾಯಿತಿಯನ್ನು ಕೊಡಲಾಗುತ್ತಿದೆ. ಆದರೆ ಗ್ರ್ಯಾಂಟ್ ದೊರೆಯದೆ ಇರತಕ್ಕ ಅನೇಕ ಆಂಗ್ಲೋ ಇಂಡಿಯನ್ ಇನ್‌ಸ್ಟಿಟ್ಯೂಟ್‌ನವರು ಈ ವಿಚಾರದಲ್ಲಿ ಬಹಳ ಕಾತುರರಾಗಿದ್ದಾರೆ. ಅವರಿಗೂ ಈ ಅನುಕೂಲವನ್ನು ಒದಗಿಸುವುದಕ್ಕೆ ಪ್ರಯತ್ನಮಾಡುತ್ತೀರಾ ?

ಶ್ರೀ ಬಿ. ಎಂ. ಪಾಟೀಲ್.—ಸಹಾಯ ಧನ ಪಡೆಯದೆ ಯಾವ ಸಂಸ್ಥೆಗಳ ಆರ್ಥಿಕ ಪರಿಸ್ಥಿತಿ ಉತ್ತಮವಾಗಿರುತ್ತದೆಯೋ ಅಂಥ ಸಂಸ್ಥೆಗಳಿಗೆ ರಿಯಾಯಿತಿ ಕೊಡಬೇಕೆಂಬ ಉದ್ದೇಶ ಸರ್ಕಾರದವರಿಗಿಲ್ಲ.

Construction of Buildings of Fisheries College near Mangalore

336. Sri B. M. IDINABBA (Mangalore).—

Will the Minister of State for Fisheries and Ports be pleased to state:—

(*a*) when the buildings of the Fisheries College that would be inaugurated near Mangalore, South Kanara District will be completed and start functioning ;

(*b*) the total expenditure that will be incurred by the time all the buildings of the said college is completed and start functioning ;

(*c*) the number of students together with their qualifications who would come for studies every year in that college ?

Sri H. C. LINGA REDDY (Minister of State for Fisheries and Ports).—

(*a*) It is not possible to say exactly now.

(*b*) The total cost will be about Rs. 77.82 lakhs.

(*c*) the experts Committee has suggested to admit 20 students in the beginning and to raise this number gradually to 40.

The minimum qualification prescribed for the candidates is a pass in P. U. C. Examination getting at least 45 per cent of marks in Science Subject. The Agricultural University has to take decision in this behalf.

ಶ್ರೀ ಬಿ. ಎಂ. ಇದಿನಬ್ಬ.—ಮೀನುಗಾರಿಕೆ ಕಾಲೇಜನ್ನು ವಾಸ್ತವವಾಗಿ ಯಾವ ಜಾಗದಲ್ಲಿ ಶಂಖುಸ್ಥಾಪನೆ ಮಾಡಲಾಗಿದೆ ? ಆ ಸ್ಥಳದ ಹೇಸರೇನು, ಯಾರು ಅದರ ಶಂಖುಸ್ಥಾಪನೆ ಮಾಡಿದವರು ?

† ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಶಂಖುಸ್ಥಾಪನೆಮಾಡಲಿಲ್ಲ. ಸಾಂಕೇತಿಕವಾಗಿ ಅದನ್ನು ಓಪನ್ ಮಾಡಲಾಗಿದೆ ಎಂದು ಡಿಕ್ಲೇರ್ ಮಾಡಲಾಗಿದೆ.

ಶ್ರೀ ಬಿ. ಎಂ. ಇದಿನಬ್ಬ.—ಅದು ಆಗತಕ್ಕ ಸ್ಥಳವೆಲ್ಲಿ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಉಲ್ಲಾಳ್ ಎಂದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿದೆ.

† Indicates that the speeches or remarks have not been revised by the member concerned.

Contributions by Municipalities and Corporations towards Primary Education

369. SRI S. R. BOMMAI (Kundagol).—

Will the Minister of State for Municipal Administration be pleased to state:—

(*a*) the amount contributed by each Municipality in Bombay Karnatak area, and Hubli-Dharwar Municipal Corporation for each year towards primary education ;

(*b*) the extent of contributions from local bodies like Municipalities in other areas of the State ;

(*c*) whether it has come to the notice of the Government that because of this contribution most of the local bodies in Bombay Karnatak area are not able to fulfil their obligatory works ?

SRI K. V. SHANKARA GOWDA (Minister for Education) [On behalf of SRI B. M. PATIL (Minister of State for Municipal Administration)].—

(*a*) *Vide* statement appended.

(*b*) No contribution is paid by the Municipalities in the other areas of the State.

(*c*) No.

STATEMENT

Showing the Annual P. E. Contribution made by the Municipalities in Belgaum Division and the Hubli-Dharwar Municipal Corporation.

Sl. No.	Name of the Municipality	Annual Contribution
	Belgaum District	Rs.
1	Belgaum City Municipal Council ...	6,50,000
2	Athani T.M.C.	25,409
3	Nipani T.M.C.	65,023
4	Gokak T.M.C	32,043
5	Soundatti T.M.C.	9,531
6	Bailhongal T.M.C.	21,329
7	Ramdurg T.M.C.	16,769

(SRI K. V. SHANKARA GOWDA)

Sl. No.	Name of the Municipality		Annual Contribution
	Bijapur District		Rs.
1	Bijapur City Municipal Council	...	10,00,000 (Approx.)
2	Bagalkot City Municipal Council	...	85,000
3	Guledgud Town Municipal Council	...	23,000
4	Ilkal Town Municipal Council	...	17,000
5	Jamkhandi Town Municipal Council	...	39,000
6	Rabkavi-Banhatti Town Municipal Council		22,000
7	Mudhol Town Municipal Council	...	9,000
8	Mahalingapur Town Municipal Council	...	10,000
	Dharwar District		
1	Gadag-Betgeri City Municipal Council	...	2,90,030
2	Ranebennur Town Municipal Council	...	24,981
3	Byadgi Town Municipal Council	...	10,872
4	Haveri Town Municipal Council	...	18,462
5	Savanur Town Municipal Council	...	7,340
6	Kundagol Town Municipal Council	...	9,759
7	Shirhatti Town Municipal Council	...	12,114
8	Laxmeshwar Town Municipal Council	...	7,828
9	Navalgund Town Municipal Council	...	13,121
10	Nargund Town Municipal Council	...	12,512
	Karwar District		
1	Karwar Town Municipal Council	...	23,000
2	Kumta Town Municipal Council	...	12,000
3	Honavar Town Municipal Council	...	8,200
4	Bhatkal Town Municipal Council	...	12,000
5	Sirsi Town Municipal Council	...	27,000
6	Haliyal Town Municipal Council	...	10,000
7	Hubli-Dharwar Municipal Corporation	...	9,01,300

ಶ್ರೀ ಎಸ್. ಆರ್. ಬೊಮ್ಮಾಯಿ.—ತಮ್ಮ ಉತ್ತರದಲ್ಲಿ ಹೇಳಿರುವ ಪ್ರಕಾರ ಸುಮಾರು 1 ಕೋಟಿ ರೂಪಾಯಿಗಳಷ್ಟು ಮುಂಬೈ ಕರ್ಣಾಟಕ ಮುನಿಸಿಪಲ್ ಕಾರ್ಪೊರೇಷನ್ ಅವರು ಪ್ರೈಮರಿ ಎಜುಕೇಷನ್ನಿಗಾಗಿ ಕೊಟ್ಟು ಉಳಿದ ಕಡೆಗಳಲ್ಲಿನ ಪುರಸಭೆಗಳು ಆ ರೀತಿ ಕೊಡುತ್ತಿಲ್ಲ. ಈ ಡಿಸ್ಕ್ರಿಮಿನೇಷನ್ನನ್ನು ದೂರಮಾಡುತ್ತೀರಾ ?

†ಶ್ರೀ ಕೆ. ವಿ. ಶಂಕರಗೌಡ.—ಮುಂಬೈ ಕರ್ಣಾಟಕದಲ್ಲಿ ಏನು ಕಾಯಿದೆ ಜಾರಿಯಲ್ಲಿದೆಯೋ ಅದರಿಂದ ಅನ್ಯಾಯವಾಗಿದೆ. ಅಲ್ಲಿ ಅದು ಆಬ್ಲಿಗೇಟರಿ ಡ್ಯೂಟೀಸ್‌ನಲ್ಲಿ ಸೇರಿದೆ. ಆದರೆ ರಾಜ್ಯದ ಉಳಿದ ಭಾಗಗಳಲ್ಲಿ ಅದನ್ನು ಆಬ್ಲಿಗೇಟರಿ ಡ್ಯೂಟೀಸ್ ಎಂಬುದಾಗಿ ಪರಿಗಣಿಸುತ್ತಾ ಇರಲಿಲ್ಲ. 1964ನೇ ಆಕ್ಟ್ ಏನಿದೆ ಅದರಲ್ಲಿ ಆಬ್ಲಿಗೇಟರಿ ಡ್ಯೂಟೀಸ್ ಯುನಿಫಾರಂ ಆಗಿ ಇರುವುದರಿಂದ, ಇದನ್ನೂ ಕೂಡ ಒಂದು ಆಬ್ಲಿಗೇಟರಿ ಡ್ಯೂಟಿ ಎಂಬುದಾಗಿ ಪರಿಗಣಿಸಬೇಕಾಗುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅಲ್ಲಿ ಪ್ರೈಮರಿ ಎಜುಕೇಷನ್ನಿಗೆ ಎಂದು ಹಣವನ್ನು ವಸೂಲುಮಾಡುತ್ತಾ ಇಲ್ಲ. ಆದ್ದರಿಂದ ಎಲ್ಲಾ ಕಡೆಯೂ ಇದರ ಬಗ್ಗೆ ಒಂದು ಏಕರೂಪವಾದ ಕಾನೂನನ್ನು ಜಾರಿಗೆ ತರುತ್ತೀರಾ ?

ಶ್ರೀ ಕೆ. ವಿ. ಶಂಕರಗೌಡ.—ಅದು ಸರ್ಕಾರದ ಪರಿಶೀಲನೆಯಲ್ಲಿದೆ. ಅದರ ಬಗ್ಗೆ ಬೇಗನೆ ನಿರ್ಧಾರ ಕೈಗೊಳ್ಳಬಹುದು.

ಶ್ರೀ ಎಸ್. ವಿ. ಅಗ್ನಿಹೋತ್ರಿ.—ಹುಬ್ಬಳ್ಳಿ-ಧಾರವಾಡ ಕಾರ್ಪೊರೇಷನ್ನಿನವರು ಒಂದು ಠರಾವು ಮಾಡಿ ಸರ್ಕಾರದವರು ಪ್ರೈಮರಿ ಎಜುಕೇಷನ್ನಿಗೆ ಇಷ್ಟು ಹಣ ಕೊಡಬೇಕೆಂದು ಹೇಳಿದರೆ ಆಗ ತಾವೇನು ಮಾಡುತ್ತೀರಿ ?

ಶ್ರೀ ಕೆ. ವಿ. ಶಂಕರಗೌಡ.—ಅದನ್ನು ಸಂಬಂಧಪಟ್ಟ ಶಿಕ್ಷಣಖಾತೆಯವರು ಪರಿಶೀಲಿಸುತ್ತಾರೆ. ಈಗಿರತಕ್ಕದ್ದು ಸೇಕಡ 50ರಷ್ಟು ಸರ್ಕಾರದವರು ಕೊಡುತ್ತಾರೆ.

ಶ್ರೀ ಎಂ. ನಾಗಪ್ಪ.—ಅಲ್ಲಿನ ಮುನಿಸಿಪಾಲಿಟಿಯಾಗಲೀ ಅಥವಾ ಕಾರ್ಪೊರೇಷನ್ ಆಗಲಿ ಎಜುಕೇಷನ್ ಸೆಸ್ ಎಂಬುದಾಗಿ ಆ ಭಾಗದಲ್ಲಿ ಕಲೆಕ್ಟ್ ಮಾಡುತ್ತಾರೆಯೇ ?

ಶ್ರೀ ಕೆ. ವಿ. ಶಂಕರಗೌಡ.—ಕೆಲವು ಮುನಿಸಿಪಾಲಿಟಿಗಳಲ್ಲಿ ಅಲ್ಲಿನ ಬೈಲಾಪ್ರಕಾರ ಅದನ್ನು ವಸೂಲುಮಾಡುತ್ತಾರೆ. ಇನ್ನು ಕೆಲವು ಮುನಿಸಿಪಾಲಿಟಿಗಳಲ್ಲಿ ಆ ರೀತಿ ಇಲ್ಲ.

P. W. D. Roads in Kundgol Taluk

370. **Sri S. R. BOMMAI** (Kundagol).—

Will the Minister for Public Works be pleased to state :—

(*a*) the length of Public Works Department Roads and asphalted roads in Kundagol Taluk ;

(*b*) whether they are aware that the length of the same is the lowest in relation to the other taluks in the State ?

Sri K. LAKKAPPA (Minister for Public Works).—

(*a*) The length of P. W. D. Roads is 35 Miles and 3 furlongs and that of asphalted roads is 3 miles.

(*b*) No.

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ತಾಲ್ಲೂಕಿನಲ್ಲಿ 35 ಮೈಲಿ ರಸ್ತೆ ಪೈಕಿ ಕನಿಷ್ಠ ಪ್ರಮಾಣದ ರಸ್ತೆ ಮಾಡಿದೆ. ಕೇವಲ 3 ಮೈಲಿಗಳಷ್ಟು ಮಾತ್ರ ಅಸ್‌ಫಾಲ್ಟ್ ಮಾಡಿದ್ದೀರಿ. ಇದು ರಾಜ್ಯದ ಬೇರೆ ತಾಲ್ಲೂಕುಗಳಿಗಿಂತ ಕಡಿಮೆ ಇದೆ, ಇನ್ನು ಹೆಚ್ಚು ಮೈಲಿಗಳ ರಸ್ತೆಯನ್ನು ಅಸ್ಫಾಲ್ಟ್ ಮಾಡಲು ಸರ್ಕಾರದವರು ತಕ್ಕ ಕ್ರಮವನ್ನು ಕೈಗೊಳ್ಳುತ್ತಾರೆಯೇ ?

ಶ್ರೀ ಕೆ. ಲಕ್ಕಪ್ಪ.—ಮಾನ್ಯ ಸದಸ್ಯರು ಹೇಳತಕ್ಕ ಮಾತಿನಲ್ಲಿ ನಿಜಾಂಶವಿದೆ. ಬಹಳ ಕಡಿಮೆ ರಸ್ತೆಗಳು ಅವರ ಕ್ಷೇತ್ರದಲ್ಲಿ ಆಗಿದೆ. ಅಸ್ಫಾಲ್ಟ್ ಮಾಡಿರುವುದೂ ಸಹ ಬಹಳ ಕಡಿಮೆ ಇದೆ. ಆದರೆ ಇದೇ ಎಲ್ಲಾ ತಾಲ್ಲೂಕುಗಳಿಗಿಂತಲೂ ಕಡಿಮೆ ಎಂಬುದಾಗಿ ಮಾನ್ಯ ಸದಸ್ಯರು ಹೇಳಿದ್ದನ್ನು ನಾನು ಒಪ್ಪದಿದ್ದರೂ ಇಲ್ಲಿ ರಸ್ತೆಗಳು ಬಹಳ ಕಡಿಮೆ, ಅಸ್ಫಾಲ್ಟ್ ಆಗಿರುವುದೂ ಸಹ ಬಹಳ ಕಡಿಮೆ ಇದೆಯೆಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇದುವರೆಗೆ ಬೇರೆ ರಸ್ತೆಗಳು ಯಾವ್ಯಾವುದು ಆಗಬೇಕೆಂಬ ಬಗ್ಗೆ ಇನ್ನೂ ಪ್ಲಾನ್ ಮತ್ತು ಎಸ್ಟಿಮೇಟುಗಳು ಬಂದಿಲ್ಲ. ಎಲ್ಲಿ ರಸ್ತೆಗಳು ಆಗ ಬೇಕೆಂಬುದನ್ನು ಮಾನ್ಯಸದಸ್ಯರು ನಮೂದಿಸಿದರೆ, ಮುಂದೆ ಹಣದ ಸೌಲಭ್ಯತೆಯನ್ನು ನೋಡಿ ಕೊಂಡು ಸಾಧ್ಯವಿದ್ದರೆ ಅವನ್ನು ಮಾಡೋಣ.

ಶ್ರೀ ವಿ. ಎನ್. ಪಾಟೀಲ್.—ಹೈದರಾಬಾದ್ ಕರ್ಣಾಟಕದಲ್ಲಿ ಬಿದರ್ ಜಿಲ್ಲೆಯಲ್ಲಿರತಕ್ಕ ರಸ್ತೆಗಳು ಬಹಳ ಕಡಿಮೆ ಎಂಬುದಾಗಿ ಹೇಳಿದರೆ, ಅಲ್ಲಿ ಏನಾದರೂ ಕ್ರಮ ತೆಗೆದುಕೊಳ್ಳುತ್ತೀರಾ?

Mr. SPEAKER.—It does not arise out of the main Question.

ಶ್ರೀ ವಿ. ಎನ್. ಪಾಟೀಲ್.—ಇದೇ ತತ್ವವನ್ನು ಎಲ್ಲಾ ತಾಲೂಕುಗಳಿಗೂ ಅನ್ವಯಿಸುವಂತೆ ಮಾಡಿ, ಎಲ್ಲಿ ಕಡಿಮೆ ರಸ್ತೆಗಳಿವೆ ಅಲ್ಲಿ ತೀವ್ರ ರಸ್ತೆಗಳನ್ನು ಮಾಡಬೇಕಾದುದು ಸೂಕ್ತವೆಂದು ಒಪ್ಪಿಕೊಳ್ಳುತ್ತೀರಾ?

(ಉತ್ತರವಿಲ್ಲ)

Sri S. R. BOMMAI.—Has it not come to the notice of the Government that Kundgol is a taluk which pays highest revenue and has less roads? Is the Government prepared to apply any special scheme for this taluk?

ಶ್ರೀ ಕೆ. ಲಕ್ಕಪ್ಪ.—ನಿಮ್ಮದು ರೋಯಿಸ್ಟು ಎಂದು ಏನೂ ಇಲ್ಲ. ಕೋಲಾರ ಜಿಲ್ಲೆಯಲ್ಲಿ ಬಂಗಾರಪೇಟೆ ತಾಲೂಕಿನಲ್ಲಿ 136·50 ಮೈಲಿ ರಸ್ತೆ ಇದ್ದರೂ, ಅಲ್ಲಿ ಕೇವಲ ಮೂರು ಮೈಲಿ ಮಾತ್ರ ಆಸ್ಫಾಲ್ಟ್ ಆಗಿದೆ. ಅಂದರೆ ಜಾಗ್ರತೆ ಆಗಬೇಕೆಂಬುದನ್ನು ಒಪ್ಪಿಕೊಳ್ಳುತ್ತೇನೆ.

Sri D. B. KALMANKAR.—In reply to (*b*) the answer is 'No'. May I know whether there are any other taluks which have less roads than this?

Mr. SPEAKER.—How does it arise out of this question? It is disallowed.

Sri G. CHANDRAKANTH.—Has it come to the notice of the Government that in other parts of the State asphalting of roads is less than this taluk?

Mr. SPEAKER.—It is disallowed.

Mr. SPEAKER.—Sri Rathnakumar Kattemar may put question No. 461 on behalf of Sri P. V. Aithala.

Training to Fisherman

461. Sri RATNAKUMAR KATTEMAR (Mudabidri) [On behalf of SRI P. V. AITHALA (Surathkal)].—

Will the Minister of State for Fisheries and Ports be pleased to state :—

(*a*) whether it is a fact that as per the original condition under the Agricultural Refinance Corporation Scheme out of five applicants only four members were required to be trained in the Departmental institutions and the fifth member could be ordinary fisherman;

(*b*) whether recently the rule has been amended and all the five members are required to be trained fisherman;

(*c*) whether this would not affect the interests of uneducated and *bona fide* fishermen who for want of training would be denied the benefit of training under the Agricultural Refinance Corporation Scheme?

Sri H. C. LINGA REDDY (Minister of State for Fisheries and Ports).—

(a) There was no such condition.

(b) Since there was no such rule the question of amending the rule does not arise.

But condition No. 45 of the schemes states as follows.—The Federation will employ trained personnel to run its various activities. For operating the mechanised fishing boats, fishermen trained in the running and maintenance of marine diesel engines are required. The federation will depute the candidates to the Government Fisherman Training Centres before actually allotting them mechanised boats.

(c) Does not arise.

ಶ್ರೀ ರತ್ನಕುಮಾರ್ ಕಟ್ಟೀಮಾರ್.—ಟ್ರೈನಿಂಗಿನ ಕಡಿತವಾದ ನೀತಿಯ ಪ್ರಕಾರ, ನಾಲ್ಕು ಜನರನ್ನು ಟ್ರೈನಿಂಗಿಗೆ ಬಿಡುತ್ತೀರಾ, ಅಥವಾ 5 ಜನರನ್ನು ಬಿಡುತ್ತೀರಾ ?

† ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ನಾಲ್ಕು ಜನರನ್ನು ಟ್ರೈನಿಂಗಿಗೆ ತೆಗೆದುಕೊಳ್ಳಬೇಕು.

ಶ್ರೀ ರತ್ನಕುಮಾರ್ ಕಟ್ಟೀಮಾರ್.—ಟ್ರೈನಿಂಗ್ ಹೋಗುವವರಿಗೆ ಕಡಿಮೆ ಎಷ್ಟು ವಿದ್ಯಾ ಅರ್ಹತೆ ಇರಬೇಕು ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ವಿದ್ಯಾ ಅರ್ಹತೆ ಎಂದರೆ, ಅಕ್ಷರಾಭ್ಯಾಸ ಆಗಿದ್ದರೆ ಸಾಕು.

Sri B. P. KADAM.—In answer to (b), it is stated that the question of amending the rule does not arise. Will it not affect the interests of Marathi candidates, where no such training facility exists ?

Sri H. C. LINGA REDDY.—There is facility in North Kanara District. We have one training centre at Honnavar and another at Karwar. In both these Centres training is given. If they are literate training is given.

Sri B. P. KADAM.—How about Marathi candidates, who do not uuderstand Kannada is my question !

Sri H. C. LINGA REDDY.—I want notice. But, if they know a little bit of English, it is enough.

ಶ್ರೀ ಬಿ. ಎಂ. ಇದಿನಬ್ಬ.—(ಅ) ದ ಉತ್ತರದಲ್ಲಿ ಅಂಥ ಶರತ್ತು ಇರಲಿಲ್ಲವೆಂದು ಹೇಳಿದ್ದೀರಿ. ಈ 5 ಜನರಲ್ಲಿ ಎರಡು ಅಥವಾ ಮೂರು ಜನರು ತರಬೇತಿ ಆದವರು ಇದ್ದರೆ ಅಂತಹವರಿಗೆ ದೋಣಿಗಳನ್ನು ಕೊಡುವುದಕ್ಕೆ ತೊಂದರೆ ಇದೆಯೇ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಎ. ಆರ್. ಸಿ. ಶರತ್ತುಗಳು ಪ್ರಕಾರ ಬೋಟ್ ಕೊಡಬೇಕಾದರೆ, ಎಷ್ಟು ಜನರಿಗೆ ದೋಣಿಗಳನ್ನು ಕೊಡಬೇಕೋ, ಅಷ್ಟು ಜನರಿಗೆ ಶಿಕ್ಷಣ ಆಗಬೇಕು. ಶಿಕ್ಷಣ ಆದವರಿಗೆ ಮಾತ್ರ ಕೊಡುವುದಕ್ಕೆ ಸಾಧ್ಯ.

Smt. WINNIFRED F. FERNANDES:—There is no rule or condition at all for giving mechanised boats to the fishermen. Which is the rule or condition which applies to a Federation or Government training centre, where these mechanised boats are allotted ?

Sri H. C. LINGA REDDY.—Even there, it is necessary that those to whom boats are given should have been trained. It is only trained people who are given boats.

Forcible Collection of funds for laying Foundation Stone for D. C. C. Bank Building at Raichur

529. Sri M. NAGAPPA (Raichur).—

Will the Minister for Development be pleased to state:—

(*a*) whether the Chief Minister has laid the foundation stone for building of the District Co-operative Central Bank, Raichur on 23rd December 1968;

(*b*) if so, the amount spent by the District Co-operative Central Bank, Raichur for the said function;

(*c*) whether all the Co-operative Societies in Raichur District were forced to contribute Rs. 100 and Rs. 50 by the District Co-operative Central Bank, Raichur;

(*d*) the action taken by them to stop such forcible contribution from the societies;

(*e*) whether they are aware that on previous occasion such a function has been arranged and the foundation stone was laid by anothere Minister;

(*f*) if so, whether there is a proposal to fix the responsibility on the Directors for unnecessary expenditure incurred?

Sri P. M. NADGOUDA (Minister for Development).—

(*a*) Yes.

(*b*) Rs, 3,985-88.

(*c*) No.

(*d*) Does not arise.

(*e*) No.

(*f*) Does not arise.

ಶ್ರೀ ಎಂ. ನಾಗಪ್ಪ.—ಸ್ವಾಮಿ, ನಮ್ಮ ಮುಖ್ಯ ಮಂತ್ರಿಗಳು ರಾಯಚೂರಿನ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕಿನ ಕಟ್ಟಡದ ಅಸ್ತಿಭಾರವನ್ನು ಹಾಕುವುದಕ್ಕಿಂತ ಮುಂಚೆ ಅಲ್ಲಿ ಬೇರೆ ಮಂತ್ರಿಗಳು ಅಸ್ತಿಭಾರವನ್ನು ಹಾಕಿಲ್ಲ ಎಂದು ಹೇಳಿದ್ದೀರಿ, ಆದರೆ ರಾಯಚೂರು ಜಿಲ್ಲೆ ಹೈದರಾಬಾದ್ ಪ್ರಾಂತ್ಯದಲ್ಲಿರುವಾಗ ದೇವಿಸಿಂಗ್ ಚವಾನ್ ಎನ್ನುವರ ಹಸ್ತದಿಂದ ಫೌಂಡೇಷನ್ ಸ್ಟೋನ್ ಹಾಕಿದ್ದಾರೆ ಎನ್ನುವ ವಿಷಯವನ್ನು ತಮ್ಮ ಗಮನಕ್ಕೆ ನಾನು ತರುತ್ತೇನೆ. ಇದಕ್ಕೆ ರೆಕಾರ್ಡು ಇರುವುದಿಲ್ಲ. ಅಸಿಸ್ಟೆಂಟ್ ರಿಜಸ್ಟ್ರಾರರ ಆಫೀಸಿನಲ್ಲಿ ಒಂದು ಫೋಟೋ ಇದೆ. ಅದರಲ್ಲಿ ಫೌಂಡೇಷನ್ ಸ್ಟೋನು ಇದೆ. ಅದರ ಪಕ್ಕದಲ್ಲಿ ಅಧಿಕಾರಿಗಳು ಇದ್ದಾರೆ. ಆದ್ದರಿಂದ ಆ ಬ್ಯಾಂಕಿನ ಫೌಂಡೇಷನ್ ಸ್ಟೋನ್ ಹಾಕಿದೆ ಎನ್ನತಕ್ಕಂಥಾದ್ದನ್ನು ತಮ್ಮ ಗಮನಕ್ಕೆ ತಂದರೆ ಏನು ಕ್ರಮ ತೆಗೆದು ಕೊಳ್ಳುತ್ತೀರಿ?

ಶ್ರೀ ಪಿ. ಎಂ. ನಾಡಗೌಡ.—ಈಗ ಮಾನ್ಯ ಸದಸ್ಯರು ಹೇಳಿದ ಪ್ರಕಾರ ಅಂಥಾ ಮಾಹಿತಿ ಸರ್ಕಾರಕ್ಕೆ ಗೊತ್ತಿಲ್ಲ.

Sri B. P. GANGADHAR.—Nearly Rs. 4,000 has been spent for laying the foundation-stone. Don't you think that by spending so much money extravagantly, the moneys of the share-holders, and if Government has investsd money by means of shares, all this is unnecessrily wasted ?

ಶ್ರೀ ಪಿ. ಎಂ. ನಾಡಗೌಡ.—ಈ ಒಂದು ಸಹಕಾರಿ ಬ್ಯಾಂಕ್ ಏನಿದೆ ಇದರಲ್ಲಿ ಎರಡೂವರೆ ಕೋಟಿ ರೂಪಾಯಿಗಳ ವ್ಯವಹಾರ ಮಾಡುತ್ತಿದ್ದಾರೆ. ಇದು ಒಂದು ಅಭೂತಪೂರ್ವ ಅವಕಾಶ. ಫೌಂಡೇಷನ್ ಸ್ಟೋನ್ ಹಾಕುವಂತಹ ಕೆಲಸಕ್ಕೆ 4 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದು ಹೆಚ್ಚೇನೂ ಅಲ್ಲ. ಎಷ್ಟೋ ಬ್ಯಾಂಕುಗಳು ಇಂಥಾ ಒಂದು ಸಮಾರಂಭಕ್ಕೆ 25 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ.

ಶ್ರೀ ಎಂ. ನಾಗಪ್ಪ.—ಸ್ವಾಮಿ ಸೆಂಟ್ರಲ್ ಬ್ಯಾಂಕಿನಲ್ಲಿ ಖರ್ಚು ಆದಂಥಾದ್ದನ್ನು ಇಲ್ಲಿ ಕೊಟ್ಟಿದ್ದೀರಾ ಅಥವಾ ಎಲ್ಲಾ ಸಣ್ಣ ಸಣ್ಣ ಬ್ಯಾಂಕುಗಳಿಂದ ಬಂದಂಥ ಕಾಂಟ್ರಿಬ್ಯೂಷನ್ ಸಹಿತ ಲೆಕ್ಕಕ್ಕೆ ತೆಗೆದುಕೊಂಡು ಖರ್ಚನ್ನು ಕೊಟ್ಟಿದ್ದೀರಾ, ಕಾಂಟ್ರಿಬ್ಯೂಷನ್ ಬಂದದ್ದು ಎಷ್ಟು ?

ಶ್ರೀ ಪಿ. ಎಂ. ನಾಡಗೌಡ,—ಈಗ 3,985-88 ರೂಪಾಯಿಗಳನ್ನೇನು ಖರ್ಚು ಮಾಡಿದ್ದಾರೆ ಅದನ್ನು ಪೂರ್ತಿ ಸೆಂಟ್ರಲ್ ಬ್ಯಾಂಕಿನ ಫೌಂಡೇಷನ್ ಸ್ಟೋನ್ಸ್ ಹಾಕುವ ಸಲುವಾಗಿ ಅದರ ಫಂಡಿನಿಂದ ಖರ್ಚು ಮಾಡಿದ್ದಾರೆ. ಅಲ್ಲಿ ಎರಡು ಸಮಾರಂಭಗಳು ನಡೆದಿವೆ. ಒಂದು ಜಿಲ್ಲಾ ಸಹಕಾರಿ ಬ್ಯಾಂಕಿನ ಕಟ್ಟಡದ ಅಸ್ತಿಭಾರವನ್ನು ಹಾಕುವುದು, ಇದಕ್ಕೆ 3,985-88 ರೂಪಾಯಿಗಳು ಖರ್ಚಾಗಿದೆ. ಇನ್ನೊಂದು ಫೀಲ್ಡ್ ವರ್ಕರ್ಸ್ ಕಾನ್‌ಫರೆನ್ಸ್, ಇದಕ್ಕೆ ಪ್ರೈಮರಿ ಸೊಸೈಟಿಗಳಿಂದ 10,770-00 ರೂಪಾಯಿಗಳನ್ನು ಕೂಡಿಸಿತ್ತು. ಈ ಕಾನ್‌ಫರೆನ್ಸಿಗೆ 6,081-82 ರೂಪಾಯಿಗಳನ್ನು ಖರ್ಚು ಮಾಡಿದ್ದಾರೆಂದು ವರದಿಯಲ್ಲಿ ಇದೆ.

ಶ್ರೀ ಎಂ. ನಾಗಪ್ಪ.—ಈ ಪ್ರೈಮರಿ ಬ್ಯಾಂಕಿನ ವರ್ಕರ್ಸ್ ಕಾನ್‌ಫರೆನ್ಸ್ ಸಭೆ ಪ್ರತಿವರ್ಷ ನಡೆಯುತ್ತದೆ. ರಾಯಚೂರಿನ ಇತಿಹಾಸದಲ್ಲೇ 2 ಸಾವಿರ ರೂಪಾಯಿಗಳಿಗಿಂತ ಹೆಚ್ಚಿಗೆ ಆ ಕಾನ್‌ಫರೆನ್ಸಿಗೆ ಖರ್ಚು ಮಾಡಿಲ್ಲ. ಅದಕ್ಕೆ 10 ಸಾವಿರ ರೂಪಾಯಿಗಳನ್ನು ಕಲೆಕ್ಷನ್ ಮಾಡುವುದಕ್ಕೆ ಕಾರಣವೇನು ?

ಶ್ರೀ ಪಿ. ಎಂ. ನಾಡಗೌಡ.—ಕಾರಣ ಏನು ಎಂಬುದು ಗೊತ್ತಾಗುವುದಿಲ್ಲ. ಈ ವ್ಯವಹಾರ ಮಧ್ಯವರ್ತಿ ಬ್ಯಾಂಕುಗಳ ವ್ಯವಹಾರ. ಈ ಸಹಕಾರಿ ಸಂಸ್ಥೆಗಳು ಹೆಚ್ಚು ಖರ್ಚುಮಾಡಿ ಪ್ರಾಪಗ್ಯಾಂಡಾ ಮಾಡುವುದು ಅವಶ್ಯ ಇದೆ ಎಂದು ರಿಸರ್ವ್ ಬ್ಯಾಂಕಿನವರೇ ಹೇಳುತ್ತಾರೆ. ಇದು ರಿಜರ್ವ್ ಬ್ಯಾಂಕಿನ ಸ್ಟ್ಯಾಟ್ಯೂಟರಿ ಕನ್‌ವೆನ್‌ಷನ್ ಇದೆ.

Sri G. CHANDRAKANTH.—With reference to answer (c), may I know whether they have not induced the societies to pay Rs. 150 ?

ಶ್ರೀ ಪಿ. ಎಂ. ನಾಡಗೌಡ.—ಫೋರ್ಸ್ ಮಾಡಿಲ್ಲ. ಎಲ್ಲರೂ ಕೂಡಿ ತೀರ್ಮಾನ ಮಾಡಿದ ಪ್ರಕಾರ ಕೊಟ್ಟಿದ್ದಾರೆ. ಈ ಕೆಲಸದೊಳಗೆ ಸರ್ಕಾರದ ಸಂಬಂಧವಿಲ್ಲ. ಸೆಂಟ್ರಲ್ ಬ್ಯಾಂಕಿನ ಸದಸ್ಯರುಗಳು ತೀರ್ಮಾನ ಮಾಡಿದ್ದಾರೆ. ಇದರೊಳಗೆ ಫೋರ್ಸ್ ಬರುವುದಿಲ್ಲ.

Sri J. P. SARWESH.—If it is proved that Sri Devi Sen, Ex. Hyderabad Minister also laid the foundation to this building to which recently our Chief Minister laid the foundation, will you allow the true stone to exist over the building ?

Sri P. M. NADGOUDA.—It is a hypothetical question. As far as the Government is concerned, there is no information at all about that fact.

Sri D. B. KALMANKAR.—May I know whether the old records of old Hyderabad Government are not available with the Government ?

Sri P. M. NADGOUDA.—I am not aware which records are available.

ಶ್ರೀ ಎಸ್. ಎಂ. ಗುರೆಡ್ಡಿ.—ರಾಯಚೂರು ಕೋಆಪರೇಟಿವ್ ಬ್ಯಾಂಕ್‌ನವರು ಮೊದಲು ಮೈನ್ ಬಿಲ್ಡಿಂಗ್‌ಗಾಗಿ ಅಡಿಗಲ್ಲಿನ ಸಮಾರಂಭ ಏರ್ಪಡಿಸಿದ್ದರು, ಈಗ ಅಡ್ಮಿನಿಸ್ಟ್ರೇಟಿವ್ ಬಿಲ್ಡಿಂಗ್‌ನ ಸಲುವಾಗಿ ರಾಯಚೂರಿನ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕಿನ ಕಟ್ಟಡದ ಅಸ್ತಿಭಾರವನ್ನು ಹಾಕಿರಬಹುದು ಅಲ್ಲವೆ ?

ಶ್ರೀ ಪಿ. ಎಂ. ನಾಡಗೌಡ.—ಇರಬಹುದು.

Sri V. N. PATIL.—In view of the discussion during this question, does the Government think it necessary to do away with this inaugural function which is a criminal and national waste of funds ?

Sri P. M. NADGOUDA.—The Government is not prepared to accept the opinion. It is the opinion of the hon. Member.

ಶ್ರೀ ಎಂ. ನಾಗಪ್ಪ.—ರಾಯಚೂರು ಡಿಸ್ಟ್ರಿಕ್ಟ್‌ನಲ್ಲಿ 100ಕ್ಕೆ 50ರಷ್ಟು ಕೋಆಪರೇಟಿವ್ ಸೊಸೈಟಿಗಳು ಲಿಕ್ವಿಡೇಟ್ ಆಗುವ ಸ್ಥಿತಿಗೆ ಬಂದಿವೆ. ಇಂತಹ ಸೊಸೈಟಿಗಳಿಂದ ಬಲಾತ್ಕಾರವಾಗಿ ಹಣ ವಸೂಲು ಮಾಡುತ್ತಿರುವುದರಿಂದ ಲಿಕ್ವಿಡೇಟ್ ಆಗುವ ಸ್ಥಿತಿಗೆ ಬಂದಿರುವುದರಿಂದ, ಈಗ ವಸೂಲಿ ಮಾಡಿರುವ ಹಣವನ್ನು ವಾಪಸ್ ಕೊಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಪಿ. ಎಂ. ನಾಡಗೌಡ.—ಲಿಕ್ವಿಡೇಟ್ ಆಗುವ ಪರಿಸ್ಥಿತಿಗೆ ಬಂದಿರುವಂತಹ ಸೊಸೈಟಿಗಳಿಗೆ ಉತ್ತೇಜನ ಕೊಡಬೇಕಾದರೆ ಇಂತಹ ಸಮಾರಂಭಗಳು ನಡೆಯಬೇಕಾಗುತ್ತದೆ. ಆದಕಾರಣ ಕಾಂಟ್ರಿಬ್ಯೂಷನ್ ಹಣವನ್ನು ವಾಪಸ್ ಕೊಡುವುದಕ್ಕಾಗುವುದಿಲ್ಲ.

Damage to crops by wild elephants in Alur Taluk

543. **Sri K. P. CHIKKEGOWDA** (Sakleshpur).—

Will the Minister of State for Forests be pleased to state :—

(*a*) whether it is a fact that much damage is being caused to the standing crops in Kundur, Kenchammana Hoskote Hoblies of Alur (Hassan) taluk by wild elephants from the last five to ten years ;

(*b*) the action taken by the Government to prevent such damages ?

Sri ALUR HANUMANTHAPPA (Minister of State for Forests).—

(*a*) No.

(*b*) During 1966–67 game staff from Chickmagalur and Mysore have attended to the scaring of wild elephants with local staff.

ಶ್ರೀ ಕೆ. ಪಿ. ಚಿಕ್ಕೇಗೌಡ.—(ಅ) ಪ್ರಶ್ನೆಗೆ ಉತ್ತರವಾಗಿ ನಿಜವಲ್ಲ ಎಂದು ಉತ್ತರ ಕೊಟ್ಟಿರುವುದು ನೋಡಿ ನನಗೆ ಆಶ್ಚರ್ಯವಾಗಿದೆ. ಲಕ್ಷಾಂತರ ರೂಪಾಯಿಗಳ ಬೆಳೆ ಆನೆಗಳ ಹಾವಳಿಯಿಂದ ನಷ್ಟವಾಗಿಲ್ಲವೇ ಎಂದು ಕೇಳಿದ್ದಕ್ಕೆ ನಿಜವಲ್ಲವೆಂದು ಹೇಳಿದ್ದೀರಿ. ಇನ್ನು ಎಷ್ಟು ಲಕ್ಷ ರೂಪಾಯಿಗಳ ಬೆಳೆ ನಷ್ಟವಾದ ಮೇಲೆ ಒಪ್ಪಿಕೊಳ್ಳುತ್ತೀರಾ ?

†ಶ್ರೀ ಆಲೂರು ಹನುಮಂತಪ್ಪ.–1966ನೇ ಇಸವಿಯಿಂದ ಆನೆಗಳಿಂದ ನಷ್ಟವಾಗುತ್ತಿರುವುದು ವರದಿಯಾಗಿದೆ. 5–10 ವರ್ಷಗಳಿಂದ ನಷ್ಟವಾಗುತ್ತಿದೆ ಎಂಬ ವರದಿ ನನ್ನ ಹತ್ತಿರ ಇಲ್ಲ.

ಶ್ರೀ ಕೆ. ಪಿ. ಚಿಕ್ಕೇಗೌಡ.—1948ನೇ ಇಸವಿಯಿಂದ 4 ಜನ ಸತ್ತಿರುವುದು ಗೊತ್ತಿದೆಯೇ ?

ಶ್ರೀ ಆಲೂರು ಹನುಮಂತಪ್ಪ.—ಆ ವಿಷಯ ಗೊತ್ತಿಲ್ಲ.

ಶ್ರೀ ಕೆ. ಪಿ. ಚಿಕ್ಕೇಗೌಡ.—ನಾಲ್ಕು ಜನ ಸತ್ತಿದ್ದಾರೆ. ನಾನು ಈ ಮನೆಗೆ ಸದಸ್ಯನಾಗಿ ಬಂದ ಮೇಲೆ ಈ ಪ್ರಶ್ನೆಯನ್ನು ಕಳಿಸಿದ್ದು. ಈಗ ಉತ್ತರ ಕೊಡುತ್ತಿದ್ದಾರೆ. ಅದೂ ಸಹ ಸರಿಯಾದ ಉತ್ತರ ಬಂದಿಲ್ಲ. ಲಕ್ಷಾಂತರ ರೂಪಾಯಿಗಳ ನಷ್ಟವಾಗಿದೆ. ನಾಲ್ಕು ಜನ ಸತ್ತಿದ್ದಾರೆ. ಇವರಿಗೆ ಪರಿಹಾರ ಕೊಟ್ಟಿಲ್ಲ. ಪರಿಹಾರ ಕೊಡುವ ಬಗ್ಗೆ ಕ್ರಮ ಕೈಗೊಳ್ಳುತ್ತೀರಾ ?

ಶ್ರೀ ಆಲೂರು ಹನುಮಂತಪ್ಪ.—ಮಾನ್ಯ ಸದಸ್ಯರು ನಾಲ್ಕು ಜನ ಸತ್ತಿದ್ದಾರೆಂದು ಹೇಳುತ್ತಿದ್ದಾರೆ. ಆ ಬಗ್ಗೆ ನನ್ನಲ್ಲಿ ವಿವರಗಳು ಇಲ್ಲ. ಮತ್ತೊಂದು ಪ್ರಶ್ನೆ ಕೇಳಿದರೆ ಮಾನ್ಯ ಸದಸ್ಯರಿಗೆ ಮಾಹಿತಿಗಳು ಹೆಚ್ಚು ಬೇಕಾದರೆ ತರಿಸಿಕೊಡುತ್ತೇನೆ.

Sri B. P. KADAM.—Has the Government received any representation from the public about the menace of the wild elephants ?

ಶ್ರೀ ಆಲೂರು ಹನುಮಂತಪ್ಪ.—66-67ನೇ ಸಾಲಿಗೆ ಹಿಂದೆ ಆಗಿರುವ ವಿಚಾರಗಳು ನಮಗೆ ಗೊತ್ತಿಲ್ಲ. ಆದರೆ 66–67 ರಿಂದೀಚೆಗೆ ಸ್ವಲ್ಪಮಟ್ಟಿಗೆ ಆನೆಗಳಿಂದ ತೊಂದರೆಗಳಾಗಿದೆ ಎಂದು ತಿಳಿದು ಬಂದಿದೆ ಮತ್ತು ಇಲ್ಲಿ ಆ ಆನೆಗಳನ್ನು ಓಡಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ.

Sri D. B. KALMANKAR.—In view of the suggestion that lakhs of rupees worth damage is caused and some persons have also died, may I know whether the Government will consider the question of estimating the loss and taking needful action ?

Sri ALUR HANUMANTHAPPA.—There is no such information that damage has been caused.

ಶ್ರೀ ಕೆ. ಪಿ. ಚಿಕ್ಕೇಗೌಡ.—ಇಲ್ಲಿರುವ ಸಿಬ್ಬಂದಿ ವರ್ಗದವರಿಗೆ ಕೊಟ್ಟಿದ್ದ ತೋಟಗಳನ್ನು ಕೂಡ ಮಾರಿಕೊಂಡಿರುವುದು ಸರಕಾರಕ್ಕೆ ಗೊತ್ತಿದೆಯೇ ?

ಶ್ರೀ ಆಲೂರು ಹನುಮಂತಪ್ಪ.—ಗೊತ್ತಿಲ್ಲ.

Development of Melkote and Pandavapura Taluks

552. Sri N. A. CHANNE GOWDA (Pandavapura).—

Will the Minister for Revenue be pleased to state :—

(*a*) whether they had constituted a high power Committee to develop Melukote, Pandavapura Taluks ;

(*b*) whether the said Committee has submitted its report ;

(*c*) whether they have accepted the said report ;

(*d*) the amount required for the implementation of the said developmental scheme ;

(*e*) whether they would provide the said amount and when the said work will be started ?

Sri H. V. KOUJALGI (Minister for Revenue).—

(*a*) Yes.

(*b*) Yes.

(*c*) No

(SRI H. V. KOUJALGI)

(*d*) 44 lakhs.

(*e*) No. After the collection of the public contribution the quantum of Government's aid will be decided as suggested by the Committee.

ಶ್ರೀ ಎನ್. ಎ. ಚನ್ನೇಗೌಡ.—ಸರ್ಕಾರಕ್ಕೆ ವಂತಿಗೆಯನ್ನು ಎಷ್ಟು ಭಾಗ ಕೊಡುತ್ತೇವೆ ಎಂದು ಹೇಳಿದ್ದಾರೆ ?

†ಶ್ರೀ ಎಚ್. ವಿ. ಕೌಜಲಗಿ.—ಇದರಲ್ಲಿರುವ ಮುಖ್ಯಾಂಶಗಳು ಎಂದರೆ ಕಾಟೇಜು ಟೈಪ್ ಬಿಲ್ಡಿಂಗ್ಸ್, ವಾಟರ್ ವರ್ಕ್ಸ್, ಡಿಸ್ಪೆನ್ಸರಿ, ಪೋಲೀಸು ಸ್ಟೇಷನ್, ಪೋಸ್ಟ್ ಆಫೀಸು ಮತ್ತು ಹಾಸ್ಪಲ್ ಎಲಕ್ಟ್ರಿಫಿಕೇಷನ್ ಇತ್ಯಾದಿ ಎಂದಿವೆ.

ಶ್ರೀ ಎನ್. ಎ. ಚನ್ನೇಗೌಡ.—ಸಾರ್ವಜನಿಕರ ವಂತಿಕೆ ಎಷ್ಟು ಕೊಡುತ್ತಾರೆ ?

ಶ್ರೀ ಹೆಚ್. ವಿ. ಕೌಜಲಗಿ.—ಸರಾಸರಿ ವಂತಿಕೆಯನ್ನು ಆಮೇಲೆ ಅವರೇ ಸಲಹೆ ಕೊಡುತ್ತಾರೆ.

ಶ್ರೀ ಎನ್. ಎ. ಚನ್ನೇಗೌಡ.—ಇಲ್ಲಿನ ಅಭಿವೃದ್ಧಿ ಕಾರ್ಯಗಳಲ್ಲಿ ಈ ದೇವಸ್ಥಾನದ ಜೀರ್ಣೋದ್ಧಾರ ಕಾರ್ಯಗಳನ್ನು ಸೇರಿಸಿಲ್ಲ. ಜೀರ್ಣೋದ್ಧಾರ ಕಾರ್ಯವನ್ನು ಮಾಡಿಸುತ್ತೇವೆ ಎಂದು ಯಾರಾದರೂ ದಾನಿಗಳು ಮುಂದೆ ಬಂದಿದ್ದಾರೆಯೇ ? ಮತ್ತು ಅದನ್ನೇನಾದರೂ ಅಂಗೀಕರಿಸಿದ್ದೀರಾ ?

ಶ್ರೀ ಹೆಚ್. ವಿ. ಕೌಜಲಗಿ.—ಇದರಲ್ಲಿ ಕಲ್ಯಾಣ ಮಂಟಪ ಕಟ್ಟಲಿಕ್ಕೆ ಮತ್ತು ಛೌಲ್ಟ್ರಿ ಕಟ್ಟಲಿಕ್ಕೆ ಬಂದಿದ್ದಾರೆ ಮತ್ತೆ ಬೇರಾವುದಕ್ಕೂ ಇದರಲ್ಲಿ ಪ್ರಾವಿಷನ್ ಮಾಡಿಲ್ಲ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಮೇಲುಕೋಟೆಯಲ್ಲಿ ನಡೆಯತಕ್ಕ ವೈರಮುಡಿ ಉತ್ಸವ ಪುರಾಣ ಪ್ರಸಿದ್ಧವಾದುದು ಮತ್ತು ಇದನ್ನು ಪ್ರವಾಸೀ ಕೇಂದ್ರವಾಗಿಯೂ ಮಾಡಿರುವುದರಿಂದ ಇಲ್ಲಿರುವ ದೇವಾಲಯದ ಜೀರ್ಣೋದ್ಧಾರ ಕಾರ್ಯವನ್ನು ಸರಕಾರದವರೇ ಹಣ ಖರ್ಚು ಮಾಡಿ ಅಭಿವೃದ್ಧಿ ಮಾಡಲು ಸಾಧ್ಯವಿದೆಯೇ ?

ಶ್ರೀ ಹೆಚ್. ವಿ. ಕೌಜಲಗಿ.—ಇದರೊಳಗೆ ಅದು ಬರುವುದಿಲ್ಲ. ಬೇರೆ ಪ್ರಶ್ನೆ ಹಾಕಿದರೆ ಆಗ ಹೇಳಬಹುದು.

Sri AZEEZ SAIT.—With reference to answer (*c*), it is stated that the Government have not accepted the report of the High Power Committee. But with reference to answer (*e*), you have stated that after the collection of the public contribution the quantum of Government aid will be decided as suggested by the Committee. Will the Government place a copy of the recommendations which have been accepted by the Government on the Table of the House ?

Sri H. V. KOUJALGI.—Recommendations will be accepted provided the public contributes its share. Till then, it is not accepted.

ಶ್ರೀ ಕೆ. ಎಂ. ತಮ್ಮಯ್ಯ.—ಇಂತಹ ದೇವಸ್ಥಾನಗಳಲ್ಲಿ ಕೆಲಸ ಮಾಡುವವರಿಗೆ ಸರಿಯಾದ ಸಂಬಳ ಸಾರಿಗೆಗಳು ಬರುತ್ತಿಲ್ಲ ಇದನ್ನು ಹೆಚ್ಚು ಮಾಡಬೇಕು ಎಂದು ತಮ್ಮ ಗಮನಕ್ಕೆ ಶಿಫಾರಸುಗಳನ್ನು ಮಾಡಿದ್ದಾರೆ ಎಂದು ಕೇಳುತ್ತೇವೆ. ಇದರ ಬಗ್ಗೆ ಸರಕಾರ ಪರಿಶೀಲನೆ ಮಾಡಿ ಒದಗಿಸಿ ಕೊಡಲು ಪ್ರಯತ್ನ ಮಾಡುತ್ತೀರಾ ?

ಶ್ರೀ ಹೆಚ್. ವಿ. ಕೌಜಲಗಿ.—ಅದು ಬೇರೆ ಪ್ರಶ್ನೆ. ಅದು ಇದರಲ್ಲಿ ಬರುವುದಿಲ್ಲ.

ಶ್ರೀ ಎಂ. ಕೆ. ಬೊಮ್ಮೇಗೌಡ.—44 ಲಕ್ಷ ರೂಪಾಯಿಗಳ ಮಾಸ್ಟರು ಪ್ಲಾನು ಮಾಡಿದ್ದೀರಿ. ಸಾರ್ವಜನಿಕರಿಂದ ಹಣ ವಸೂಲು ಮಾಡಿಕೊಂಡು ಇದನ್ನೂ ಮಾಡಲು ಪ್ರಯತ್ನ ಮಾಡುತ್ತಿದ್ದೀರಾ ?

ಶ್ರೀ ಹೆಚ್. ವಿ. ಕೌಜಲಗಿ.—ಕಮಿಟಿಯವರು ಏನು ಸಲಹೆಗಳನ್ನು ಕೊಡುತ್ತಾರೋ ಅದು ನಮಗೆ ಇನ್ನೂ ಗೊತ್ತಿಲ್ಲ. ಶಿಫಾರಸ್ಸುಗಳು ಬಂದ ಮೇಲೆ ಇದನ್ನು ಕೇಳಬಹುದು.

ಶ್ರೀ ಎಂ. ನಾಗಪ್ಪ.—ಇಲ್ಲಿ ಕಮಿಷನ್ ನೇಮಿಸಿ ಎಷ್ಟು ವರ್ಷಗಳಾದವು ಮತ್ತು ಅವರು ರಿಪೋರ್ಟ್ ಕೊಟ್ಟು ಎಷ್ಟು ವರ್ಷಗಳಾದವು. ಸರಕಾರ ಇಷ್ಟು ವರ್ಷಗಳಲ್ಲಿ ಇವರ ರಿಪೋರ್ಟನ್ನು ಒಪ್ಪಿಕೊಂಡು ಕಾರ್ಯಗತ ಮಾಡಬೇಕು ಎನ್ನುವ ಉದ್ದೇಶ ಸರಕಾರಕ್ಕೇನಾದರೂ ಇದೆಯೇ?

Sri H. V. KOUJALGI.—The Committee was appointed on 12th January 1965. I do not known the date on which the report was received. However, a meeting has been called about the end of this month to discuss about the recommendations of this Committee.

1-30 P.M.

ಶ್ರೀ ಎಂ. ಬಸವರಾಜು.—ದೇವಸ್ಥಾನಗಳ ರಿಪೇರಿ-ಹಾಗೂ ಕೆರೆಕಟ್ಟೆಗಳ ರಿಪೇರಿ ಇವೆರಡರಲ್ಲಿ ಯಾವುದಕ್ಕೆ ಸರಕಾರ ಆದ್ಯತೆಯನ್ನು ಕೊಡುತ್ತದೆ, ಸ್ವಾಮಿ?

Sri H. V. KOUJALGI.—That has nothing to do with this question.

ಶ್ರೀ ಟಿ. ಆರ್. ಶಾಮಣ್ಣ.—ಮೇಲುಕೋಟೆ ಬಹಳ ಮುಖ್ಯವಾದ ಯಾತ್ರಾಸ್ಥಳ. ಆದ್ದರಿಂದ ಆದಷ್ಟು ಜಾಗ್ರತೆ ಈ ಸಿಫಾರಸನ್ನು ಜಾರಿಗೆ ತರುವುದಕ್ಕೆ ಏರ್ಪಾಡು ಮಾಡುತ್ತೀರಾ, ಸ್ವಾಮಿ?

Sri H. V. KOUJALGI.—I have already answered this question. I know that this is a very well-known temple and the Endowment Department is taking action to renovate the temple. I think that is a separate matter.

Khanapur-Sastapur Road

575. Sri G. CHANDRAKANTH (Bidar).—

Will the Minister for Public Works be pleased to state:—

(a) whether a road from Khanapur in Gulbarga District to Sastapur in Bidar District has been sanctioned;

(b) if so, when the Government proposes to take it up?

Sri K. LAKKAPPA (Minister for Public Works).—

(a) There is no such road under Public Works Department.

(b) Does not arise in view of reply to clause (a) above.

Sri G. CHANDRAKANTH.—In the original question I had written as Kamalapur and not Khanapur. This may be corrected. May I know whether this road is sanctioned?

Sri K. LAKKAPPA.—The entire length of this road is 19 miles and this has been bifurcated into two parts. One in the area of Gulbarga District is about 4 miles 5 furlongs. This bit has been sanctioned and money has been provided. About Rs. 90,000 estimate has been prepared and it has been administratively and technically sanctioned and work has been taken up. We have spent Rs. 87,240 over this road and the road is almost reaching completion. Regarding the other

(SRI K. LAKKAPPA)

bit remaining, it is 15 miles one furlong. This also has been administratively and technically sanctioned. On this road, we have already spent Rs. 1,25,646 and still this covers only about 10 miles. Something is left over and that also we are going to do shortly.

Sri G. CHANDRAKANTH.—Has it come to the notice of the Government that this is an important road connecting Gulbarga District and Bidar District and the road work is not satisfactory ?

Sri K. LAKKAPPA.—We have understood the importance of the road and that is why we have taken up that work.

ಶ್ರೀ ಎಸ್. ಭೀಮಣ್ಣ.—ಈಗ ಉಳಿದಿರುವ ರಸ್ತೆಯನ್ನು ಪೂರ್ತಿ ಮಾಡುವ ಸಲುವಾಗಿ ಈ ವರ್ಷ ಎಷ್ಟು ಹಣವನ್ನು ಕೊಡಲಾಗಿದೆ ಎಂದು ಹೇಳುತ್ತೀರಾ ?

ಶ್ರೀ ಕೆ. ಲಕ್ಕಪ್ಪ.—10 ಮೈಲಿ ರಸ್ತೆ ಮಾಡುವುದಕ್ಕೋಸ್ಕರವಾಗಿ 1,21,646 ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಇನ್ನೂ ಸ್ವಲ್ಪ ಭಾಗ ಉಳಿದಿದೆ. ಅದನ್ನು ಈ ವರ್ಷ ತೆಗೆದುಕೊಂಡು ಮುಂದುವರಿಸಿ ಪೂರ್ತಿ ಮಾಡುತ್ತೇವೆ.

Sri D. B. KALMANKAR.—May I konw what was the original estimate of this road and by how much has it increased and what is the amount spent already ?

Sri K. LAKKAPPA.—I have already said that the work has been divided into two parts. For one portion of the road an amount of Rs. 90,000 has been sanctioned and almost the entire amount has been spent. Regarding the other portion, we have spent about Rs. 1,21,000 Something is left over. We are going to spend that also.

Sri G. CHANDRAKANTH.—Has it come to the notice of the Government that the work executed on this road is very inferior and it is not up to the mark and the road is not even jeepable ?

Sri K. LAKKAPPA.—I have already said that we have not contemplated making it a pucca road. We have just formed the road. Now we will take up metalling the same and after sometime we may even think of asphalting it.

ಶ್ರೀ ಎಸ್. ಭೀಮಣ್ಣ—ಈ ರಸ್ತೆಗೆ ಬಜೆಟ್ಟಿನಲ್ಲಿ ಎಷ್ಟು ಹಣವಿದೆ ? ಇದಕ್ಕೆ ಸ್ವಲ್ಪ ಖರ್ಚು ಮಾಡಬಹುದೇ ?

ಶ್ರೀ ಕೆ. ಲಕ್ಕಪ್ಪ.—ಆ ಫಿಗರ್ ತಿಳಿಯದು, ಬೇಕಾದರೆ ಒದಗಿಸಬಹುದು.

Summer Vacation for School Teachers

579. Sri GANGA BOVI (Gulur).—

Will the Minister for Education be pleased to state :—

(*a*) whether arrangement has been made for the school teachers, who are undergoing training in teachers' training institutions to appear for their examinations after Summer vacation ;

(*b*) instead of this, whether they will consider the proposal that they should have the summer vacation after completion of their examinations ?

Sri N. M. KOTRABASAIAH SOGI (Deputy Minister for Education).—

(*a*) Yes.
(*b*) No.

ಶ್ರೀ ಗಂಗಾಬೋವಿ.—ಶಿಕ್ಷಣ ಸಂಸ್ಥೆಗಳಲ್ಲಿ ತರಬೇತಿ ಪಡೆಯುತ್ತಿರುವ ಉಪಾಧ್ಯಾಯರಿಗೆ ಬೇಸಿಗೆ ರಜ ಮುಗಿದನಂತರ ಪರೀಕ್ಷೆಗೆ ಕುಳಿತುಕೊಳ್ಳುವಂತೆ ಏರ್ಪಾಡು ಮಾಡಿದೆಯೇ ?

† ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಹೌದು.

ಶ್ರೀ ಗಂಗಾಬೋವಿ.—ಹಾಗಾದರೆ ಅವರಿಗೆ ಪರೀಕ್ಷೆ ಮುಗಿದಮೇಲೆ ರಜ ಕೊಡುತ್ತೀರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ರಜ ಕೊಟ್ಟೇಕೊಡಬೇಕೆಂದು ಹೇಳುವುದಕ್ಕೆ ಅವರಿಗೆ ಹಕ್ಕಿಲ್ಲ. ಸಾಮಾನ್ಯವಾಗಿ ಅವರು ಶಾಲೆಗೆ ಹೋಗಿರುವುದಿಲ್ಲ. ಆದುದರಿಂದ ಪರೀಕ್ಷೆಗೆ ಮುಂಚೆ ರಜ ಕೊಡುವುದರಿಂದ ಅವರು ಪರೀಕ್ಷೆಗೆ ತಯಾರಾಗಲು ಅನುಕೂಲವಾಗುವುದು. ಆದುದರಿಂದ ರಜ ಮುಗಿದನಂತರ ಪರೀಕ್ಷೆ ನಡೆಸುತ್ತಿವೆ. ಪರೀಕ್ಷೆ ಮುಗಿದಮೇಲೆ ರಜ ಕೊಡುವ ವಿಚಾರವಿಲ್ಲ.

ಶ್ರೀ ಎನ್. ಎ. ಚನ್ನೇಗೌಡ.—ಬೇಸಿಗೆ ರಜ ಮುಗಿದನಂತರ ಪರೀಕ್ಷೆ ಏರ್ಪಾಡು ಮಾಡಿರುವುದಕ್ಕೆ ಮುಖ್ಯ ಕಾರಣವೇನು ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಸಾಮಾನ್ಯವಾಗಿ ಎಲ್ಲಾ ಪರೀಕ್ಷೆಗಳೂ ಏಪ್ರಿಲಿನಲ್ಲಿ ಬೀಳುವುದರಿಂದ, ಎಸ್. ಎಸ್.ಎಲ್. ಸಿ. ಪರೀಕ್ಷೆಗೆ ಕೂಡುವವರ ಸಂಖ್ಯೆ ವಿಸ್ತಾರವಾಗಿರುವುದರಿಂದ ಅದಕ್ಕೆ ಬೇಕಾದ ಎಗ್ಸಾಮಿನರ್ಸ್, ಸೂಪರ್‌ವೈಜರುಗಳು ಒದಗಬೇಕು, ಅವರು ಹೆಚ್ಚಾಗಿ ಬೇಕು. ಅದಕ್ಕೆ ಬೇಕಾದವರು ವಿದ್ಯಾ ಇಲಾಖೆಯಲ್ಲಿರುವುದರಿಂದ ಬೇರೆ ಸಮಯದಲ್ಲಿ ಅವರಿಗೆ ಪರೀಕ್ಷೆ ನಡೆಸುವುದು ಕಷ್ಟ. ಆದುದರಿಂದ ಮತ್ತು ಅದಕ್ಕಿಂತ ಹೆಚ್ಚಾಗಿ ಟಿ.ಟಿ.ಐ. ಟ್ರೈನಿಂಗ್‌ನಲ್ಲಿರುವವರಿಗೆ ರಜ ಕೊಟ್ಟರೆ ನಂತರ ಪರೀಕ್ಷೆಗೆ ಅನುಕೂಲ ಎಂದು ಭಾವಿಸಲಾಗಿದೆ.

Sri J. P. SARVESH.—Has the Government any proposal to reduce the training period from 2 years to 1 year for primary teachers ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಅಂಥ ಪ್ರಪೋಸಲ್ ಇಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಬೇಸಿಗೆ ರಜ ಉಪಯೋಗಿಸಿಕೊಳ್ಳದೆ ಅವರು ಪರೀಕ್ಷೆಗೆ ತಯಾರಿ ಮಾಡಿಕೊಳ್ಳಬೇಕಾಗಿರುವುದರಿಂದ ಅವರಿಗೆ ಹೆಚ್ಚಿಗೆ ಅನುಕೂಲಮಾಡಲು ಸಾಧ್ಯವೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಅಗತ್ಯವಾದ ಅನುಕೂಲವನ್ನೆಲ್ಲಾ ಮಾಡಲಾಗಿದೆ.

Dealings of K. R. Pet Co-operative Rice Mills

729. **Sri M. K. BOMME GOWDA** (Krishnarajpet).—

Will the Minister of State for Food and Civil Supplies be pleased to state :—

(*a*) whether the Krishnarajpet Co-operative Rice Mills are allowed to collect and store the levy paddy only ;

(*b*) whether the Management of Co-operative Mills have dealings with private individuals and selling rice to them ;

(SRI M. K. BOMME GOWDA)

(*c*) whether Government has given any permission to the management of the above mills to have private transactions of the Levy Paddy;

(*d*) if so, when such a permission was given (year and date)?

SRI B. VITHALDAS SHETTY (Minister of State for Food and Civil Supplies).—

(*a*) No. The Taluk Agriculture Produce Marketing Society, Krishnarajpet, in its capacity as Procurement Agent of Government collects and stores levy paddy until it is delivered to Government.

(*b*) Since the clause is generally worded, it may be clarified that there is no prohibition on Co-operative Mills to deal with private individuals.

(*c*) No.

(*d*) Does not arise.

ಶ್ರೀ ಎಂ. ಕೆ. ಬೊಮ್ಮೇಗೌಡ.—ಅಕ್ಕಿ ಗಿರಣಿಗಳವರು ಸರಕಾರಿ ಲೆವಿ ವಸೂಲುಮಾಡುವುದಲ್ಲದೆ ಬೇರೆ ಬತ್ತವನ್ನೂ ವಸೂಲುಮಾಡಿ ಇಂಡಿವಿಜುಯಲ್ಸಾಗಿ ಮಾರುವುದಕ್ಕೆ ಅವರಿಗೆ ಅವಕಾಶ ವಿದೆಯೇ ?

†ಶ್ರೀ ಬಿ. ವಿಟ್ಠಲದಾಸಶೆಟ್ಟಿ.—ಸರ್ಕಾರಕ್ಕೆ ಕೊಡಬೇಕಾದ್ದನ್ನು ಕೊಡಬೇಕು, ಹಾಗೆ ಕೊಟ್ಟು ಬೇರೆ ಮಾರ್ಕೆಟ್ ವ್ಯವಹಾರ ಅವರು ಮಾಡಬಹುದು. ಸೇಕಡ 70 ಭಾಗ ಲೆವಿ ನಿಗದಿ ಮಾಡಿರುವುದನ್ನು ವಸೂಲುಮಾಡಿ ಬಾಕಿ ಖಾಸಗಿ ವ್ಯವಹಾರಮಾಡಬೇಕು.

ಶ್ರೀ ಎಂ. ಕೆ. ಬೊಮ್ಮೇಗೌಡ.—ಬತ್ತ ಇಳುವರಿ ಉಳಿಯುವುದನ್ನು ಖಾಸಗಿಯಾಗಿ ಅವರು ಮಾರಾಟಮಾಡಬಹುದೇ ?

ಶ್ರೀ ಬಿ. ವಿಟ್ಠಲದಾಸಶೆಟ್ಟಿ.—ಅವರು ಹೇಳುವುದು ಅರ್ಥವಾಗುವುದಿಲ್ಲ. ನಾವೆಷ್ಟು ಬತ್ತ ಕೊಟ್ಟಿರುತ್ತೇವೆ ಅದನ್ನು ನಮ್ಮ ಇಳುವರಿ ಲೆಕ್ಕದ ಪ್ರಕಾರ ತೆಗೆದುಕೊಳ್ಳುತ್ತೇವೆ.

ಶ್ರೀ ಎಂ. ಕೆ. ಬೊಮ್ಮೇಗೌಡ.—250 ಮೂಟೆಯನ್ನು ಖಾಸಗೀ ವರ್ತಕರಿಗೆ ಮಾರಿದರೆ ಅದಕ್ಕೆ ಲೆಕ್ಕ ಹೇಗೆ ಸಿಕ್ಕುತ್ತದೆ ?

ಶ್ರೀ ಬಿ. ವಿಟ್ಠಲದಾಸಶೆಟ್ಟಿ.—ಸರಕಾರದ ಬತ್ತ ಲೆವಿ ಪ್ರಕಾರ ಸರಕಾರ ಹಿಡಿದುಕೊಂಡ ನಂತರ ಉಳಿದಿರುವುದನ್ನು ಕಾನೂನು ಪ್ರಕಾರ ಲೆಕ್ಕಹಾಕುತ್ತೇವೆ. ಅದಕ್ಕೆ ಪ್ರತ್ಯೇಕ ಪ್ರಶ್ನೆಹಾಕಿದರೆ ಹೇಳಬಹುದು.

ಶ್ರೀ ಐ. ಸೋಮಶೇಖರಪ್ಪ.—70 ಪರ್ಸೆಂಟ್ ಟಾರ್ಗೆಟ್ ನಿಗದಿ ಮಾಡಿರುವುದು ಏನಿವೆ ಈ ಲೆವಿ ರೀಚ್ ಮಾಡಿದವರಿಗೆ ಪ್ರೈವೇಟ್ ಬಿಸಿನೆಸ್ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಾ? ಕೊಟ್ಟಿದ್ದರೆ ಯಾವ ರೇಟ್‌ನಲ್ಲಿ ಖರೀದಿ ಮಾಡಬೇಕೆಂದು ನಿಗದಿ ಮಾಡಿದ್ದೀರಿ ? ಅವರು ಮಾರ್ಕೆಟ್ ರೇಟ್‌ನಂತೆ ಖರೀದಿ ಮಾಡಬಹುದೇ ?

ಶ್ರೀ ಬಿ. ವಿಟ್ಠಲದಾಸ ಶೆಟ್ಟಿ.—ಆ ತರಹ ನಿರ್ಬಂಧ ಏನೂ ಇಲ್ಲ, ಮಾರ್ಕೆಟ್‌ನಲ್ಲಿ ಅವರಿಗೆ ಖುಷಿ ಬಂದ ಹಾಗೆ ಖರೀದಿ ಮಾಡಿಕೊಳ್ಳಬಹುದು.

ಶ್ರೀ ಎನ್. ಎ. ಚನ್ನೇಗೌಡ.—ತಾಲ್ಲೂಕು ವ್ಯವಸಾಯ ಮಾರ್ಕೆಟಿಂಗ್ ಸೊಸೈಟಿಯವರು ಲೆವಿ ಬತ್ತವನ್ನು ಕೊಳ್ಳುವಾಗ ಡ್ರೈಯೇಜ್‌ಗಾಗಿ ಎರಡು ಕೆ. ಜಿ. ಬತ್ತವನ್ನು ವಸೂಲು ಮಾಡುತ್ತಾ ಇರುವುದು ಗೊತ್ತೇ ? ರೈತರಿಗೆ ಅದರಿಂದ ತೊಂದರೆಯಾಗುತ್ತಾ ಇರುವುದನ್ನು ಕೇಳುವವರೇ ಇಲ್ಲ.

ಶ್ರೀ ಬಿ. ವಿಟ್ಠಲದಾಸ ಶೆಟ್ಟಿ.—ಈ ತರಹ ಬರಹ ಮೂಲಕ ಯಾವ ದೂರೂ ಬಂದಿಲ್ಲ.

ಶ್ರೀ ಎಂ. ಬಸವರಾಜ್.—ತಾವು ನಿಗದಿ ಮಾಡಿರುವ ಬತ್ತಕ್ಕಿಂತ ಜಾಸ್ತಿಯಾಗಿ ಬತ್ತ ಬಂದರೆ ಅದನ್ನು ತೆಗೆದುಕೊಳ್ಳಲಿಕ್ಕೆ ಪ್ರೈವೇಟ್ ಮಿಲ್‌ನವರಿಗೆ ಅವಕಾಶ ಕೊಡುತ್ತೀರಾ ?

ಶ್ರೀ ಬಿ. ವಿಟ್ಠಲದಾಸ ಶೆಟ್ಟಿ.—ಈ ತನಕ ಆ ಧೋರಣೆ ಇಲ್ಲ, ಅದನ್ನು ಬೇಕಾದರೆ ಪರಿಶೀಲನೆ ಮಾಡೋಣ. ಈ ತನಕ ಸರ್ಕಾರದ ಧೋರಣೆ ಕೋ ಆಪರೇಟೀವ್ ಸೊಸೈಟಿಗಳಿಗೆ ಬೆಂಬಲ ಕೊಡಬೇಕು ಮತ್ತು ಅದರ ಮುಖಾಂತರ ಈ ಕೆಲಸ ಮಾಡಿಸಿಕೊಳ್ಳಬೇಕೆಂಬ ಧೋರಣೆ ಇದೆ.

ಶ್ರೀ ಗಂಗಾಬೋವಿ.—ತಾವು ನಿಗದಿ ಮಾಡಿರುವ ಲೆವಿಯನ್ನು ಸಂಪೂರ್ಣವಾಗಿ ವಸೂಲು ಮಾಡಲು ತಮಗೆ ಹಕ್ಕು ಇದೆ. ಲೆವಿ ಕೊಟ್ಟಮೇಲೆ ಸಾಧಾರಣವಾಗಿ ಒಂದು ಕೆ.ಜಿ. ಅಕ್ಕಿಯನ್ನೂ ಕೂಡ ಹಳ್ಳಿಗಳಿಗೆ ಕೊಡುವುದಿಲ್ಲ ಇದಕ್ಕೆ ಕಾರಣವೇನು ?

ಶ್ರೀ ಬಿ. ವಿಟ್ಠಲದಾಸ ಶೆಟ್ಟಿ.—ಹಳ್ಳಿಗೆ ಕೊಡುವುದಿಲ್ಲ ಅಂತ ಅನ್ನುವುದನ್ನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ಸರ್ಕಾರದ ಪ್ರಕೃತ ಧೋರಣೆಯ ಪ್ರಕಾರ ಹಳ್ಳಿಗೂ ಕೊಡಬೇಕಾಗುತ್ತದೆ.

Visit of Food Squad to Krishnarajpet

730. SRI M. K. BOMME GOWDA (Krishnarajpet).—

Will the Minister of State for Food and Civil Supplies be pleased to state :—

(a) the number of times, the Food Squad visited Krishnarajpet during the month of January, 1969 ;

(b) the number of villages they have visited and the number of houses they have sealed;

(c) whether the Food Squad visited Singanahalli, Krishnarajpet ;

(d) if so, the quantity of paddy and ragi seized ?

SRI B. VITHALDAS SHETTY (Minister of State for Food and Civil Supplies).—

(a) Twice.

(b)	Villages visited	...	4
	Houses sealed	...	Nil
(c)	Yes.		
(d)	Paddy	...	267-80 qtls.
	Ragi	...	Nil.

ಶ್ರೀ ಎಂ. ಕೆ. ಬೊಮ್ಮೇಗೌಡ.—ಯಾವ ಊರಿನಲ್ಲೂ ಯಾವ ಮನೆಯನ್ನೂ ಮೊಹರು ಮಾಡಿಲ್ಲ ಎಂದು ಹೇಳಿದ್ದೀರಿ, ಸಂಗನಹಳ್ಳಿ ಗ್ರಾಮದಲ್ಲಿ 2 ಮನೆಗಳನ್ನು ಮೊಹರು ಮಾಡಿರುವುದು ತಮ್ಮ ಗಮನಕ್ಕೆ ಬಂದಿಲ್ಲವೇ ?

† ಶ್ರೀ ಬಿ. ವಿಟ್ಠಲದಾಸ ಶೆಟ್ಟಿ.—ಅದು ನಮ್ಮ ಅವಗಾಹನೆಗೆ ಬಂದಿಲ್ಲ, ತಾವು ಹೇಳುವುದು ಸರಿಯಲ್ಲ. ಅಲ್ಲಿ ಪೋಲೀಸ್‌ನವರು ಹೋಗಿದ್ದಾಗ ಕೇಸುಗಳನ್ನು ಹಾಕಿದ್ದಾರೆ, ಎರಡು ಮನೆಗಳನ್ನು ಸರ್ಚ್ ಮಾಡಿದ್ದಾರೆ.

ಶ್ರೀ ಎಂ. ಕೆ. ಬೊಮ್ಮೇಗೌಡ.—ಆ ಊರುಗಳಲ್ಲಿ ತಮಗೆ ಕೊಡಬೇಕಾದ ಇಳುವರಿ ಬತ್ತವನ್ನು ಕೊಟ್ಟಾದ ಮೇಲೆ ಅವರು ಹೋಗಿ ಇವತ್ತೋ ಅಥವಾ ನಾಳೆಯೋ ಡಿಕ್ಲರೇಷನ್ ಕೊಡುವ ಸಂದರ್ಭದಲ್ಲಿ ಅವರ ಮೇಲೆ ಕೇಸು ಮಾಡುವುದಕ್ಕೆ ಏನು ಅಗತ್ಯ ಇತ್ತು ?

ಶ್ರೀ ಬಿ. ವಿಟ್ಠಲದಾಸ ಶೆಟ್ಟಿ.—ಅವರು ಕೊಡುವಂತಹ ಬತ್ತವನ್ನು ಸರ್ಕಾರಕ್ಕೆ ಕೊಟ್ಟಿದ್ದರು. ಆದರೆ ಅವರಲ್ಲಿ ಎಷ್ಟು ಬತ್ತ ಸಂಗ್ರಹ ಇದೆ ಎಂಬುದನ್ನು ಡಿಕ್ಲರೇಷನ್ ಮಾಡಬೇಕೆಂದು ಕಾಯಿದೆ ಇದೆ ಆ ಪ್ರಕಾರ ಅವರು ನಡೆದುಕೊಳ್ಳಲಿಲ್ಲ ಎಂದು ಹೇಳಿ ಪೋಲೀಸ್‌ನವರು ಅವರ ಮನೆಗಳನ್ನು ಸರ್ಚ್ ಮಾಡಿದ್ದಾರೆ.

ಶ್ರೀ ಎಸ್. ಎಂ. ಗುರೆಡ್ಡಿ.—ತಾವು ಈ ಲೆವಿ ಪದ್ಧತಿಯನ್ನು ರಾಜ್ಯದಲ್ಲಿ ಅನುಸರಿಸಿದ ನೀತಿ ಏನು ? ತಾವು ನಿಯಮಿಸಿರುವ ಸ್ಕ್ವಾಡ್‌ಗೆ ಹಳ್ಳಿಗಾಡಿನಲ್ಲಿ ಮನೆಗಳನ್ನು ರೇಡ್ ಮಾಡುವುದು ಅಟ್ಯಾಚ್ ಮಾಡುವುದು ಈ ಕಾರ್ಯಾಚರಣೆ ಏನಿದೆ ಇದನ್ನು ತಡೆಗಟ್ಟುವುದಕ್ಕೆ ಕ್ರಮ ತೆಗೆದು ಕೊಳ್ಳುತ್ತೀರಾ ? ಈ ಪೋಲೀಸ್ ಸ್ಕ್ವಾಡ್ ಇಟ್ಟಿರುವ ಉದ್ದೇಶವೇನು ?

ಶ್ರೀ ಬಿ. ವಿಟ್ಠಲದಾಸ ಶೆಟ್ಟಿ.—ಪೋಲೀಸ್ ಸ್ಕ್ವಾಡ್ ಇಟ್ಟಂಥದ್ದು ಬರೀ ರೈತರ ಮೇಲೆ ಉಪದ್ರ ಮಾಡಲಿಕ್ಕೆ ಅಂತ ಹೇಳುವುದನ್ನು ಒಪ್ಪಿಕೊಳ್ಳುವುದಿಲ್ಲ. ಪೋಲೀಸ್‌ನವರು ಅಥವಾ ಇನ್ನಾರಾದರೂ ಅಧಿಕಾರಿಗಳಿಂದ ತೊಂದರೆಯಾಗಿದ್ದರೆ ಅದನ್ನು ತಾವು ದಯವಿಟ್ಟು ಬರೆದು ಸರ್ಕಾರದವರಿಗೆ ತಿಳಿಸಿದರೆ ಸೂಕ್ತವಾಗಿ ಪರಿಶೀಲನೆ ಮಾಡಿ ತಕ್ಕ ಕಾರ್ಯಕ್ರಮ ಕೈಕೊಳ್ಳುತ್ತೇವೆ.

ಶ್ರೀ ಬಿ. ಪಿ. ಗಂಗಾಧರ್.—ಆಹಾರ ನಿಬಂಧನೆಗಳನ್ನು ಸರಿಯಾಗಿ ಕಾರ್ಯಗತ ಮಾಡದೇ ಇರುವುದರಿಂದ ರೈತರಿಗೆ ಬಹಳ ತೊಂದರೆ ಆಗುತ್ತಿದೆ. ಆದ್ದರಿಂದ ಈ ಆಹಾರ ನಿಬಂಧನೆಗಳನ್ನು ಸಂಪೂರ್ಣವಾಗಿ ತೊಡೆದು ಹಾಕುವುದಕ್ಕೆ ಪರಿಶೀಲನೆ ಮಾಡುತ್ತೀರಾ ?

ಶ್ರೀ ಬಿ. ವಿಟ್ಠಲದಾಸ ಶೆಟ್ಟಿ.—ತಮ್ಮ ಅಭಿಪ್ರಾಯ ಗಮನದಲ್ಲಿಟ್ಟುಕೊಳ್ಳಲಾಗುತ್ತದೆ. ಆದರೆ ತಾವು ಕೂಡ ಇದಕ್ಕೆ ಸಹಕಾರ ನೀಡಿದರೆ ಎಲ್ಲಾ ಸರಿಹೋಗುತ್ತದೆ. ಸುಮ್ಮನೆ ಸರ್ಕಾರವನ್ನು ದೂಷಣೆ ಮಾಡಿದರೆ ಪ್ರಯೋಜನವಿಲ್ಲ. ಆದರೆ ಈಗ ಇರತಕ್ಕ ನಿಬಂಧನೆಗಳನ್ನು ತೆಗೆಯುವುದಕ್ಕೆ ಆಗುವುದಿಲ್ಲ.

ಶ್ರೀ ಬಾಪೂಗೌಡ.—ತಾವು ಇಲ್ಲಿ ಉತ್ತರದಲ್ಲಿ ತಿಳಿಸಿರತಕ್ಕ ಬತ್ತವನ್ನು ಅವರು ಮಾರಾಟ ಕ್ಕಾಗಿ ಕೊಂಡಿದ್ದ ಬತ್ತ ಎಂಬುದು ಆ ರೈಡ್ ಮಾಡಿದ ಕಾಲಕ್ಕೆ ಗೊತ್ತಾಗಲಿಲ್ಲವೇ ?

ಶ್ರೀ ಬಿ. ವಿಟ್ಠಲದಾಸ ಶೆಟ್ಟಿ.—ಅವರ ಮನೆಯಲ್ಲಿ ಅಷ್ಟು ಬತ್ತ ಇತ್ತು ಎಂದು ಗೊತ್ತಾಗಿದೆ. ಅವರು ಮಾರಾಟಕ್ಕೆ ಕೊಂಡಿದ್ದ ಬತ್ತ ಅನ್ನುವುದು ಇಲ್ಲಿ ದಾಖಲೆಯಲ್ಲಿ ಇರುವುದಿಲ್ಲ.

ಶ್ರೀ ಲೋಕಯ್ಯ ನಾಯಕ್.—ಸರ್ಕಾರದವರು ರೈತರಿಂದ ಬತ್ತವನ್ನು ಅಂದರೆ ಲೆವಿ ಬತ್ತವನ್ನು ತೆಗೆದುಕೊಂಡ ಮೇಲೂ ಅವರಿಗೆ ಕ್ಲಿಯರಾಗಿ ಸರ್ಟಿಫಿಕೇಟನ್ನು ಕೊಡುವುದಿಲ್ಲ. ಅಂಥವರ ಬಗ್ಗೆ ಸರ್ಕಾರದವರು ಏನು ಕಾರ್ಯಕ್ರಮ ಕೈಗೊಳ್ಳುತ್ತಾರೆ ?

ಶ್ರೀ ಬಿ. ವಿಟ್ಠಲದಾಸ ಶೆಟ್ಟಿ.—ಅಂಥ ನಿದರ್ಶನಗಳು ನಮ್ಮ ಗಮನಕ್ಕೆ ಇನ್ನೂ ಬಂದಿಲ್ಲ. ಬಂದರೆ ಅಗತ್ಯವಾದ ಕಾರ್ಯಕ್ರಮ ಕೈಗೊಳ್ಳುತ್ತೇವೆ.

ಶ್ರೀ ಎಸ್. ವಿ. ಅಗ್ನಿಹೋತ್ರಿ.—ಮಂತ್ರಿಗಳು ಈಗತಾನೆ ಹಳ್ಳಿಗಳಲ್ಲಿರತಕ್ಕವರಿಗೆ ತ್ರಾಸ್ ಕೊಡುವುದಕ್ಕೆ ಕಾನೂನುಗಳನ್ನು ಮಾಡಲಿಲ್ಲ ಎಂದು ಹೇಳಿದರು. ಹಾಗಾದರೆ ಏತಕ್ಕೆ ಈ ಫುಡ್ ಸ್ಕ್ವಾಡುಗಳನ್ನು ನೇಮಕ ಮಾಡಿದ್ದಾರೆ ?

(ಉತ್ತರವಿಲ್ಲ)

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಈ ಲೆವಿ ಶಾಸನ ಇರತಕ್ಕದ್ದು ಸಣ್ಣ ಜಮೀನ್ದಾರರಿಗೆ ಮಾತ್ರವೋ ಅಥವಾ ದೊಡ್ಡ ಜಮೀನ್ದಾರರಿಗೂ ಅದನ್ನು ಅನ್ವಯಿಸುತ್ತೀರಾ ?

Mr. SPEAKER.—This question is about K. R. Pet only.

ಶ್ರೀ ಬಿ. ವಿಟ್ಠಲದಾಸ ಶೆಟ್ಟಿ.—ಇಬ್ಬರಿಂದಲೂ ವಸೂಲ್ಮಾಡಿದ್ದೇವೆ. ಕಾನೂನು ದೃಷ್ಟಿಯಲ್ಲಿ ಎಲ್ಲರೂ ಒಂದೇ. ನಾವು ಯಾವ ವ್ಯತ್ಯಾಸವನ್ನೂ ಮಾಡಿಲ್ಲ.

ಶ್ರೀ ಬಿ. ಎಂ. ಇದಿನಬ್ಬ.—ದೊಡ್ಡ ಜಮೀನ್ದಾರರು ಯಾರೂ ಲೆವಿ ಕೊಡುತ್ತಿಲ್ಲ. ಅವರ ಬಗ್ಗೆ ಇಲ್ಲಿಯವರೆಗೆ ಯಾರೂ ಕ್ರಮ ಕೈಗೊಂಡಿಲ್ಲ ಅದನ್ನು ಸರ್ಕಾರದವರು ಇಲ್ಲಿವರೆಗೇನಾದರೂ ವಿಚಾರಣೆ ಮಾಡಿದ್ದಾರೆಯೇ ?

(No answer)

ಶ್ರೀ ಎಸ್. ಎ. ಚನ್ನೇಗೌಡ.—ಈ ವಿಶಿಷ್ಟದಳದವರು ಆ 4 ಹಳ್ಳಿಗಳಲ್ಲಿ ಸಣ್ಣಸಣ್ಣ ಜಮೀನ್ದಾರರ ಹತ್ತಿರ ಲೆವಿ ವಸೂಲ್ಮಾಡಿ ದೊಡ್ಡ ಜಮೀನ್ದಾರರ ಹತ್ತಿರ ಕೇಳುವುದಕ್ಕೆ ಹೋಗಲೇ ಇಲ್ಲ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಬಿ. ವಿಟ್ಠಲದಾಸ ಶೆಟ್ಟಿ.—ಇಲ್ಲ.

Sri B. B. SAYANAK.—There are so many levy cases against the Agriculturists. I want to know whether the Government is going to withdraw all the cases.

Mr. SPEAKER.—This question pertains to K. R. Pet Taluk.

ಶ್ರೀ ಎಂ. ನಾಗಪ್ಪ.—ಮಾನ್ಯ ಶ್ರೀ ಗುರಡ್ಡಿಯವರು ಹೇಳಿದ ಹಾಗೆ ಇವರು ರೈತರ ಸಲುವಾಗಿ ಅಲ್ಲಿಗೆ ಹೋಗುತ್ತಾರೆಂಬುದನ್ನು ನಾನು ಒಪ್ಪುವುದಿಲ್ಲ. ಫುಡ್ ಸ್ಕ್ವ್ಯಾಡ್ ಮಾಡಿದಂಥ ಸಂದರ್ಭ ಎಲ್ಲಾ ರಾಜ್ಯಗಳಲ್ಲಿಯೂ ತುಂಬಾ ಅನ್ಯಾಯವಾಗಿದೆ. ರೈತರಿಗೆ ಸಂಕಷ್ಟ ಹೆಚ್ಚಾಗಿಥ ಅಂದರೆ, ಈ ಸ್ಕ್ವ್ಯಾಡ್‌ನವರು ರೈತರ ಮೇಲೆಯೇ ಕೇಸು ಹಾಕುತ್ತಾರೆ. ಹೊರಗೆ ಹೋಗತಕ್ಕದ್ದನ್ನು ಸರಿಯಾಗಿ ನೋಡಿಕೊಳ್ಳುತ್ತಾ ಇಲ್ಲವೆಂದು ಹೇಳಿದರೆ, ಅದಕ್ಕೇನು ಉತ್ತರ ಕೊಡುತ್ತಾರೆ ?

ಶ್ರೀ ಬಿ. ವಿಟ್ಠಲದಾಸ ಶೆಟ್ಟಿ.—ಮಾನ್ಯ ಶ್ರೀ ನಾಗಪ್ಪನವರು ಹೇಳುವಂಥಾದ್ದು ಸರಿಯಲ್ಲ. ಏಕೆಂದರೆ, ನಾನು ಬೇಕಾದರೆ ಅಂಕಿ ಅಂಶಗಳನ್ನು ಪ್ರತ್ಯೇಕವಾಗಿ ಪ್ರಶ್ನೆ ಕೇಳಿದರೆ ಕೊಡುತ್ತೇನೆ. ಅವರು ಸಾಕಷ್ಟು ಕಡೆ ಭೇಟಿ ಮಾಡಿದ್ದಾರೆ. ಬೆಂಗಳೂರು ಸಿಟಿಯಲ್ಲಿಯೂ ಭೇಟಿ ಮಾಡಿದ್ದಾರೆ. ಆದರೆ ಬರೀ ರೈತರ ಮೇಲೆ ಕೇಸು ಮಾಡಿಲ್ಲವೆಂದು ನಾನು ಪುನಃ ಸ್ಪಷ್ಟಪಡಿಸುತ್ತೇನೆ.

ಶ್ರೀ ಐ. ಸೋಮಶೇಖರಪ್ಪ.—ಈ ಸ್ಪೆಷಲ್ ಸ್ಕ್ವ್ಯಾಡ್ ಡ್ಯೂಟೀಸ್ ಏನು ?

ಶ್ರೀ ಬಿ. ವಿಟ್ಠಲದಾಸ ಶೆಟ್ಟಿ.—ತಪ್ಪಿತಸ್ಥರನ್ನು ಹಿಡಿಯುವುದು ಮತ್ತು ಬಡಿಯುವುದು.

Sri AZEEZ SAIT.—Will the Hon'ble Minister be pleased to say how many quintals of rice, paddy was seized in Krishnarajapet Taluk and what happened to the stock seized paddy ? What is the total quantity of paddy seized ?

Sri B. VITHALDAS SHETTY.—I would request the hon'ble Member to ask a separate question.

Increase of Annual Income Limit for Educational Concession

738. Sri S. R. SHANMUGAM (K.G.F.).—

Will the Minister for Education be pleased to state :—

whether there is any proposal to enhance the annual income of parents from Rs. 2,400 to Rs. 4,000 for purposes of Educational Concession ?

Sri K. V SHANKARA GOWDA (Minister for Education).—No.

ಶ್ರೀ ಎಸ್. ಆರ್. ಷಣ್ಮುಗಂ.—ಪಾಲಕರ ವಾರ್ಷಿಕ ಆದಾಯವನ್ನು 2400 ರೂಪಾಯಿಗಳಿಂದ 4 ಸಾವಿರ ರೂಪಾಯಿಗಳವರೆಗೆ ಇನ್‌ಕ್ರೀಸ್ ಮಾಡುವ ಯೋಚನೆ ಸರ್ಕಾರಕ್ಕೆ ಇದೆಯೇ ?

ಶ್ರೀ ಕೆ. ವಿ. ಶಂಕರಗೌಡ.—ಆ ವಿಚಾರ ಸರ್ಕಾರಕ್ಕೆ ಇಲ್ಲ.

ಶ್ರೀ ಎಸ್. ಆರ್. ಷಣ್ಮುಗಂ.—10 ವರ್ಷಗಳಿಂದ ಇದೇ ಆದಾಯ ಪರಿಮಿತಿಯನ್ನು ಹಾಕಿದ್ದೀರಿ. ಮುಂದೇನಾದರೂ ಈ ಪರಿಮಿತಿಯನ್ನು ಹೆಚ್ಚು ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ ?

ಶ್ರೀ ಕೆ. ವಿ. ಶಂಕರಗೌಡ.—ಈಗ 2400ಕ ರೂಪಾಯಿಗಳ ಲಿಮಿಟ್ ಮಾಡಿರುವುದರಿಂದ ಈಗಾಗಲೇ ಸಾಕಷ್ಟು ಅರ್ಜಿಗಳು ಇವೆ. ಆದರೆ ಎಲ್ಲಾ ಬಡ ವಿದ್ಯಾರ್ಥಿಗಳಿಗೂ ಈ ಸೌಕರ್ಯ ಕೊಡುವುದಕ್ಕೆ ಸಾಧ್ಯವಿಲ್ಲ. ಮತ್ತೆ ಈ ಲಿಮಿಟ್ಟನ್ನು ಹೆಚ್ಚುಮಾಡುವ ಅವಶ್ಯಕತೆ ಸರ್ಕಾರಕ್ಕೆ ಕಂಡುಬರುತ್ತಾ ಇಲ್ಲ.

ಶ್ರೀ ಎಸ್. ಎಸ್. ಅರಕೇರಿ.—2400 ರೂಪಾಯಿಗಳ ಲಿಮಿಟ್ 1966ಕ್ಕೆ ಮೊದಲೇ ಇತ್ತು. 2400 ರಿಂದ 4000 ವರೆಗೆ ಲಿಮಿಟ್ಟನ್ನು ಹೆಚ್ಚುಮಾಡದಿದ್ದರೆ ಶಿಕ್ಷಣ ರಿಯಾಯಿತಿ ಬಗ್ಗೆ ಏನು ಕನ್‌ಸಿಡರೇಷನ್ ಕೊಟ್ಟಿರಿ ?

ಶ್ರೀ ಕೆ. ವಿ. ಶಂಕರಗೌಡ.—ಕಡುಬಡವರಿಗೆ ಸಹಾಯಮಾಡಬೇಕೆಂದು ಸರ್ಕಾರದ ಉದ್ದೇಶ ಇದೆ. ಸಣ್ಣ ಶ್ರೀಮಂತರಿಗೆ ಸಹಾಯ ಮಾಡಬೇಕೆಂಬ ಉದ್ದೇಶ ಸರ್ಕಾರಕ್ಕೆ ಇಲ್ಲ.

ಶ್ರೀ ಎಂ. ಬಸವರಾಜು.—ಈಗ 2400ರೂಪಾಯಿಗಳ ಮಿತಿ ಇಟ್ಟಿದ್ದೀರಿ. ಈಗಿನ ಜೀವನ ವೆಚ್ಚದ ಅಂಕಿ ಅಂಶಗಳ ಪ್ರಕಾರ ಆ ಲಿಮಿಟ್ಟನ್ನು 4ಸಾವಿರ, 5ಸಾವಿರ ಮಾಡುವುದಕ್ಕೆ ಸರ್ಕಾರದ ಅಡ್ಡಿ ಏನಿದೆ ?

ಶ್ರೀ ಕೆ. ವಿ. ಶಂಕರಗೌಡ.—2400 ರೂಪಾಯಿಗಳವರೆಗೆ ವರಮಾನವಿರುವವರಿಂದ ಸಾಕಷ್ಟು ಅರ್ಜಿಗಳು ಬರುತ್ತಾ ಇದೆ. ಅಂತಹವರೆಲ್ಲರ ಬೇಡಿಕೆಗಳನ್ನು ಪೂರೈಸಲು ಸರ್ಕಾರಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಈ ಲಿಮಿಟ್ಟನ್ನು ಹೆಚ್ಚುಮಾಡುವ ಅವಶ್ಯಕತೆ ಇಲ್ಲ.

ಶ್ರೀ ಕೆ. ಎಂ. ತಮ್ಮಯ್ಯ.—ವಾರ್ಷಿಕ ವರಮಾನ 2400 ರೂಪಾಯಿಗಳೆಂದು ಲಿಮಿಟ್ ಮಾಡಿರುವುದರಿಂದ ಕೇವಲ ಸಣ್ಣ ಶ್ರೀಮಂತರಿಗೆ ಅನುಕೂಲವಾಗಬಹುದು. ಆದರೆ ಸರ್ಕಾರದ ನೌಕರರ ಮಕ್ಕಳಿಗೆ ಇದರಿಂದ ತೊಂದರೆಯಾಗುತ್ತದೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ವಿ. ಶಂಕರಗೌಡ.—ಅಂಥಾದ್ದು ಯಾವುದೂ ಸರ್ಕಾರದ ಗಮನಕ್ಕೆ ಬಂದಿಲ್ಲ; ಬೇರೆ ಪ್ರಶ್ನೆ ಕೇಳಿದರೆ ವಿಚಾರಮಾಡಬಹುದು.

ಶ್ರೀ ಎಸ್. ಎಂ. ಗುರೆಡ್ಡಿ.—ತಮ್ಮ ನಿಯಮದ ಪ್ರಕಾರ ಎಷ್ಟೋ ಜನ ಶ್ರೀಮಂತರು ಅರ್ಜಿಗಳನ್ನು ಹಾಕಿದರೂ ಅವರ ಆಶಾಕಾಂಕ್ಷೆ ಈಡೇರುತ್ತಾ ಇಲ್ಲ, ನೌಕರದಾರರ ಬಗ್ಗೆ ಮಂತ್ರಿಗಳಿಗೆ ಎಷ್ಟೋಸಾರಿ ಅರ್ಜಿಗಳನ್ನು ಹಾಕಿದ್ದರೂ ಅವು ಇನ್ನೂ ಇತ್ಯರ್ಥವಾಗದೆ ಇರುವುದಕ್ಕೆ ಕಾರಣ ವೇನು ?

ಶ್ರೀ ಕೆ. ವಿ. ಶಂಕರಗೌಡ.—ಈಗಾಗಲೇ ಉತ್ತರ ಹೇಳಿದ್ದೇನೆ. ಅಂತಹ ಕೇಸು ಯಾವುದೂ ಸರ್ಕಾರಕ್ಕೆ ಬಂದಿಲ್ಲ. ತಹಸೀಲ್ದಾರರಿಂದ ಅವರ ವರಮಾನದ ಬಗ್ಗೆ ಒಂದು ಸರ್ಟಿಫಿಕೇಟ್ ಕೊಡಬೇಕು ಅದರ ಪ್ರಕಾರ ವಿದ್ಯಾರ್ಥಿವೇತನ ಕೊಡಬೇಕಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ಕಳೆದ ವರ್ಷ ಈ 2400 ರೂಪಾಯಿಯೊಳಗಿನವರ ಅರ್ಜಿಗಳು ಎಷ್ಟು ಬಂದಿವೆ, ಮತ್ತು ಎಷ್ಟು ಕೊಟ್ಟಿದ್ದೀರೆಂದು ಹೇಳುತ್ತೀರಾ ?

ಶ್ರೀ ಕೆ. ವಿ. ಶಂಕರಗೌಡ.—ಅದಕ್ಕೆ ನೋಟೀಸ್ ಬೇಕು.

ಶ್ರೀ ಬಿ. ಪಿ. ಗಂಗಾಧರ್.—ಈಗ ತಾವು ತಾಹಸೀಲ್ದಾರವರಿಂದ ಡಿಕ್ಲೇರೇಶನ್ ಒದಗಿಸುತ್ತಾರೆಂದು ಹೇಳಿದ್ದೀರಿ. ಆದರೆ ಅದನ್ನು ಈಗ ಕೈಬಿಟ್ಟಿದ್ದಾರೆ. ಈಗ ಅಪ್ಲಿಕೆಂಟೇ ಡಿಕ್ಲೇರೇಶನ್ ಕೊಡಬೇಕಾಗುತ್ತದೆ. ಈಗ ಬರತಕ್ಕಂತಹ ಅರ್ಜಿಗಳು ಬಹಳ ಜನ ಶ್ರೀಮಂತರದ್ದಾಗಿವೆ ; ಮತ್ತು ವೈಶ್ಯರದ್ದು ಇದೆ. ಅವರು ಕೇವಲ 200–300 ಎಂದು ರೂಪಾಯಿ ಹಾಕಿ ಕೊಟ್ಟು ಬಿಡುತ್ತಾರೆ. ಅದನ್ನೆಲ್ಲಾ ಪರಿಶೀಲನೆ ಮಾಡಬೇಕಾಗುತ್ತದೆ ಕನ್‌ಸೆಶನ್ ಕೊಡಬೇಕಾಗುತ್ತದೆ. ಇವತ್ತು ಪ್ರೈಮರಿ ಸ್ಕೂಲ್ ಟೀಚರ್ಸಿಗೆ 150 ರೂಪಾಯಿ ಬರುತ್ತದೆ, ಅಂಥವರಿಗೆ, ಪ್ಯೂನ್ಸಿಗೆ ಮುಂತಾದವರಿಗೆ ಕೊಡುವುದಕ್ಕಾಗುವುದಿಲ್ಲ. ಇದರಿಂದ ಇದು ಶ್ರೀಮಂತರಿಗೆ ತಲಪುತ್ತದಲ್ಲದೆ, ಬಡವರಿಗೆ ತಲಪುತ್ತಾ ಇಲ್ಲ. ಆದ್ದರಿಂದ ಇದನ್ನು ಕೊನೆಯ ಪಕ್ಷ 4000 ಮಾಡಿ, ಅವರು ಕಡ್ಡಾಯವಾಗಿ ರೆವೆನ್ಯೂ ಅಥಾರಿಟಿಯಿಂದ ಆದಾಯದ ಮಾಹಿತಿ ತರುವುದಕ್ಕೆ ಕಡ್ಡಾಯವಾದ ಒಂದು ಪದ್ಧತಿ ಮಾಡುತ್ತೀರಾ ?

ಶ್ರೀ ಕೆ. ವಿ. ಶಂಕರಗೌಡ.—ಈಗ ರೆವೆನ್ಯೂ ತಾಹಸೀಲ್ದಾರವರಿಂದ ತರತಕ್ಕಂತದ್ದು ಇದೆ. ಕೆಲವು ಪ್ರಸಂಗಗಳಲ್ಲಿ ಅಫಿಡಾವಿಟ್ ಡಿಕ್ಲಾರೇಶನ್ ಮಾಡುವ ಪದ್ಧತಿ ಸಹಾ ಇದೆ. ಆದರೆ ಡಿಕ್ಲಾರೇಶನ್ ಮಾಡಿದಾಗ, ಅಕಸ್ಮಾತ್ ತಪ್ಪು ಏನಾದರೂ ಮಾಡಿದರೆ, ಅಂಥವರಿಗೆ ಶಿಕ್ಷೆ ಮಾಡುವುದಕ್ಕೆ ಕಾಯಿದೆ ಇದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅನೇಕ ಶ್ರೀಮಂತರು, ತಹಸೀಲ್ದಾರವರ ಮೇಲೆ ಪರ್ಚಸ್ಸು ಬೇರಿ, ತಪ್ಪು ಸರ್ಟಿಫಿಕೇಟ್ ತೆಗೆದುಕೊಂಡು ಲಾಭ ಇದರಿಂದ ಪಡೆಯುತ್ತಿದ್ದಾರೆ. ಇದರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಕೆ. ವಿ. ಶಂಕರಗೌಡ.—ಅಂಥ ಯಾವ ವರದಿಯೂ ಸರ್ಕಾರಕ್ಕೆ ಬಂದಿಲ್ಲ.

Damage due to Feeder Halla of Kallambella Tank

786. Sri B. GANGANNA (Kallambella).—

Will the Minister of State for Minor Irrigation be pleased to state:—

(*a*) whether the feeder halla of Kallambella Tank is causing heavy damage to the lands on both sides during rainy season every year ;

(*b*) whether the atchkatdars on both sides of the halla have represented to Government to provide immediate flood damage relief to them and also provide for permanent protective measures ?

Sri D. PARAMESHWRAPPA (Deputy Minister for Major Irrigation and Electricity) [On behalf of Sri A. J. DODDAMETI (Minister of State for Minor Irrigation)].—

(*a*) The matter is under investigation.

(*b*) Yes.

ಶ್ರೀ ಬಿ. ಗಂಗಣ್ಣ.- ಉತ್ತರದಲ್ಲಿ ತನಿಖೆ ನಡೆಸಲಾಗುತ್ತಿದೆ ಎಂದು ಹೇಳಿದ್ದೀರಿ. ಆದ್ದರಿಂದ ಇದನ್ನು ಆದಷ್ಟು ಜಾಗ್ರತೆಮಾಡಲು, ತನಿಖೆ ರಿಪೋರ್ಟು ಆದಷ್ಟು ಜಾಗ್ರತೆ ತರಿಸಿಕೊಂಡು, ಖಾಯಂ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಈ ವರ್ಷ ಮನಸ್ಸು ಮಾಡುತ್ತೀರಾ ?

† ಶ್ರೀ ಡಿ. ಪರಮೇಶ್ವರಪ್ಪ.—ಈ ಬಗ್ಗೆ ಎಕ್ಸಿಕ್ಯೂಟಿವ್ ಇಂಜಿನಿಯರಿಂದ ವರದಿ ತರಿಸಿ ಕೊಂಡು, ಹಾಗೆ ಏನಾದರೂ ಡ್ಯಾಮೇಜ್ ಆಗುತ್ತಿದ್ದರೆ, ಅದಕ್ಕೆ ಸರಿಯಾದ ಪ್ರೊಟೆಕ್ಟಿವ್ ಕೆಲಸ ಮಾಡುವುದಕ್ಕೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ಗಂಗಣ್ಣ.—ರೈತರು ತಮಗೆ, ತಕ್ಷಣ ಪರಿಹಾರವದ್ನು ಒದಗಿಸಬೇಕು, ಜಮೀನು ಗಳಿಗೆ ಉಂಟಾಗಿರತಕ್ಕ ನಷ್ಟಗಳನ್ನು ಸರಿದೂಗಿಸಬೇಕೆಂದು ಮನವಿ ಮಾಡಿಕೊಂಡಿರುವರೇ ಎಂದು ಕೇಳಿದ್ದಕ್ಕೆ, ಹೌದು ಎಂದು ಹೇಳಿದ್ದೀರಿ. ಅಲ್ಲಿ ನೆರೆಹಾವಳಿಯಿಂದ ಮೂರು ನಾಲ್ಕು ಅಡಿ ಮಣ್ಣು ತೋಟದಲ್ಲೆಲ್ಲಾ ತುಂಬಿ ತೊಂದರೆಯಾಗಿದೆ. ಈಗಾಗಲೇ ಮಳೆಗಾಲ ಪ್ರಾರಂಭವಾಗುವುದರಲ್ಲಿದೆ. ಆದ್ದರಿಂದ ಅದನ್ನು ತೀವ್ರವಾಗಿ ಮಾಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಡಿ. ಪರಮೇಶ್ವರಪ್ಪ.—ಇದರಲ್ಲಿ ಅನೇಕ ಪ್ರಶ್ನೆಗಳು ಉದ್ಭವಿಸಿವೆ. ಎಲ್ಲೆಲ್ಲಾ ಹೂಳು ಹೆಚ್ಚಾಗಿದೆ, ಅದನ್ನು ತೆಗೆಯುವ ಅವಶ್ಯಕತೆ ಇದೆ. ಅದನ್ನು ಪರೀಕ್ಷೆ ಮಾಡಿ, ಮಾಡಬೇಕಾಗುತ್ತದೆ. ಮತ್ತು ಮಾರ್ಜಿನಲ್ಲಿರತಕ್ಕಂತಹ ಜಮೀನುಗಳನ್ನು ಎನ್‌ಕ್ರೋಚ್ ಮಾಡಿದ್ದಾರೆ. ಅದನ್ನು ಖುದ್ದಾಗಿ ಪರಿಶೀಲನೆ ಮಾಡಿ ರಿಪೋರ್ಟು ಕಳುಹಿಸುವುದಕ್ಕೆ ಎಕ್ಸಿಕ್ಯೂಟಿವ್ ಇಂಜಿನಿಯರಿಗೆ ಬರೆದಿದ್ದೇವೆ. ಅದು ಸಧ್ಯದಲ್ಲಿಯೇ ಬರುವುದರಲ್ಲಿದೆ.

Establishment of Forest College at Jog Falls

814. Sri K. H. SRINIVAS (Sagar).—

Will the Minister of State for Forests be pleased to state:—

(*a*) whether it is under consideration of the Government to establish a Forest College inthe State of Mysore;

(*b*) if so, whether the Government proposes to establish the same at Jog Falls, where buildings and all other facilities are available?

Sri ALUR HANUMANTHAPPA (Minister of State for Forests).—

(*a*) No.

(*b*) Does not arise.

2-00 P. M.

ಶ್ರೀ ಕೆ. ಎಚ್. ಶ್ರೀನಿವಾಸ್.—ನಾನು ಕೇಳಿದ (ಅ) ಪ್ರಶ್ನೆಗೆ, ಇಲ್ಲವೆಂದು ಉತ್ತರ ಕೊಟ್ಟಿದ್ದೀರಿ. ಹಿಂದೆ ಶಿವಮೊಗ್ಗದ ಸದಸ್ಯರು ಎಲ್ಲಾ ಅಲ್ಲಿಗೆ ಒಂದು ಮೆಡಿಕಲ್ ಕಾಲೇಜು ಮತ್ತು ಫಾರೆಸ್ಟ್ ಕಾಲೇಜು ಕೊಡಬೇಕೆಂದು ಕೇಳಿದಾಗ, ಮಾನ್ಯ ನಿಜಲಿಂಗಪ್ಪನವರು ಕೊಡುತ್ತೇವೆಂದು ಒಂದು ಭರವಸೆಯನ್ನು ಕೊಟ್ಟಿದ್ದಾರೆ. ಈ ಪ್ರೊಪೋಸಲ್ ಯಾವುದೂ ಇರಲಿಲ್ಲವೇ? ಅಥವಾ ಇದನ್ನು ಶಿವಮೊಗ್ಗಕ್ಕೆ ಕೊಡಬೇಕೆಂದು ಏನಾದರೂ ಕೈಬಿಟ್ಟಿದ್ದಾರೆಯೇ? ಇದನ್ನು ಇನ್ನಾದರೂ ಕನ್‌ಸಿಡರ್ ಮಾಡಬೇಕು. ಮೈಸೂರು ರಾಜ್ಯದಲ್ಲಿ ಫಾರೆಸ್ಟ್ ಕಾಲೇಜು ಮಾಡುವ ಪ್ರಸಂಗ ಬಂದರೆ ಅದನ್ನು ಶಿವಮೊಗ್ಗದ ಜೋಗ್‌ಫಾಲ್ಸಿನಲ್ಲಿ ಆರಂಭಿಸುವಂತೆ ಇದನ್ನು ಪರಿಶೀಲನೆ ಮಾಡುತ್ತೀರಾ?

†ಶ್ರೀ ಆಲೂರು ಹನುಮಂತಪ್ಪ.—ಮಾನ್ಯ ಸದಸ್ಯರು ಹಿಂದಿನ ಮುಖ್ಯಮಂತ್ರಿಗಳು ಭರವಸೆಯನ್ನು ಕೊಟ್ಟ ವಿಷಯದಲ್ಲಿ ಕೇಳುತ್ತಿದ್ದಾರೆ. ಆ ವಿವರ ನನ್ನಲ್ಲಿ ಇಲ್ಲ. ಅದರ ಬಗ್ಗೆ ಪರಿಶೀಲನೆ ಮಾಡುತ್ತೇನೆ. ನಮ್ಮ ರಾಜ್ಯದಲ್ಲಿ ಅರಣ್ಯ ಕಾಲೇಜನ್ನು ಪ್ರಾರಂಭಿಸುವ ವಿಚಾರ ಸದ್ಯಕ್ಕೆ ಇಲ್ಲ. ಕೊಯಮತ್ತೂರು ಮತ್ತು ಡೆಹರಾಡೂನಿನಲ್ಲಿರುವ ಫಾರೆಸ್ಟ್ ಕಾಲೇಜುಗಳಿಗೆ ನಮ್ಮ ರಾಜ್ಯದ ಅಧಿಕಾರಿಗಳನ್ನು ಟ್ರೇನಿಂಗಿಗೆ ನಾವು ಕಳುಹಿಸುತ್ತಿದ್ದೇವೆ. ಆದ್ದರಿಂದ ಈಗ ನಮ್ಮ ರಾಜ್ಯದಲ್ಲಿ ಫಾರೆಸ್ಟ್ ಕಾಲೇಜನ್ನು ಪ್ರಾರಂಭಿಸುವ ವಿಚಾರವನ್ನು ಸರ್ಕಾರದವರು ಯೋಚನೆ ಮಾಡುತ್ತಿಲ್ಲ.

ಶ್ರೀ ಎಸ್. ಎಸ್. ಅರಕೇರಿ.—ಕೊಯಮತ್ತೂರು ಮತ್ತು ಡೆಹರಾಡೂನಿಗೆ ನಮ್ಮ ರಾಜ್ಯದಿಂದ ಎಷ್ಟು ಜನ ವಿದ್ಯಾರ್ಥಿಗಳನ್ನು ಒಂದು ವರ್ಷಕ್ಕೆ ಕಳುಹಿಸುತ್ತಿದ್ದೀರಿ, ಮತ್ತು ಅವರಿಗೆ ಎಷ್ಟು ವಿದ್ಯಾರ್ಥಿ ವೇತನವನ್ನು ಕೊಡುತ್ತಿದ್ದೀರಿ?

ಶ್ರೀ ಆಲೂರು ಹನುಮಂತಪ್ಪ.—ಆ ಪ್ರಶ್ನೆಗೂ ಇದಕ್ಕೂ ಸಂಬಂಧವಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಮೈಸೂರು ರಾಜ್ಯದಲ್ಲಿ ಅರಣ್ಯ ಸಂಪತ್ತು ಜಾಸ್ತಿ ಇದೆ ಆದರಲ್ಲಿಯೂ ಮುಖ್ಯವಾಗಿ ಮಲೆನಾಡಿನಲ್ಲಿ, ಶಿವಮೊಗ್ಗ, ದಕ್ಷಿಣಕನ್ನಡ ಜಿಲ್ಲೆ, ಕೂರ್ಗ್, ಉತ್ತರ ಕನ್ನಡ ಜಿಲ್ಲೆ ಈ ಪ್ರದೇಶಗಳಲ್ಲಿ ಅರಣ್ಯ ಸಂಪತ್ತು ವಿಶೇಷವಾಗಿ ಇದೆ. ಆದ್ದರಿಂದ ಈ ಪ್ರದೇಶಗಳಲ್ಲಿ ಎಲ್ಲಾದರೂ ಒಂದು ಕಡೆ ಒಂದು ಫಾರೆಸ್ಟ್ ಕಾಲೇಜನ್ನು ಸ್ಥಾಪನೆ ಮಾಡುವ ಬಗ್ಗೆ ಯೋಚನೆ ಮಾಡುತ್ತೀರಾ?

ಶ್ರೀ ಆಲೂರು ಹನುಮಂತಪ್ಪ.—ಈ ಬಗ್ಗೆ ನಾನು ಈಗತಾನೆ ಹೇಳಿದ್ದೇನೆ. ಹಿಂದಿನ ಮುಖ್ಯಮಂತ್ರಿಗಳು ಈ ಬಗ್ಗೆ ಆಶ್ವಾಸನೆಯನ್ನು ಕೊಟ್ಟಿದ್ದಾರೆ ಎಂದು ಹೇಳುತ್ತಿದ್ದಾರೆ, ಆದ್ದರಿಂದ ಅದನ್ನೆಲ್ಲಾ ಪರಿಶೀಲನೆ ಮಾಡಿದ ನಂತರ ಇದಕ್ಕೆ ಉತ್ತರ ಕೊಡುತ್ತೇನೆ.

ಅಧ್ಯಕ್ಷರು.—ಪ್ರಶ್ನೋತ್ತರ ವೇಳೆ ಮುಗಿಯಿತು.

Notice of adjournment motion *re*: Communal disturbances in Hubli

ಶ್ರೀ ವಾಟಾಳ್ ನಾಗರಾಜ್ (ಚಿಕ್ಕಪೇಟೆ).—ಸ್ವಾಮಿ, ನಾನು ಹುಬ್ಬಳ್ಳಿಯಲ್ಲಿ ನಡೆದ ಗಲಭೆಯ ಬಗ್ಗೆ ಒಂದು ನೋಟೀಸ್ ಕಳುಹಿಸಿದ್ದೇನೆ. ಇದರ ಬಗ್ಗೆ ಮುಖ್ಯ ಮಂತ್ರಿಗಳು ಸರಿಯಾದ ಒಂದು ಹೇಳಿಕೆ ಕೊಡಬೇಕು.

Mr. SPEAKER.—In this connection I have received a number of Call Attention Notices from Hon'ble Members Sri K. H. Patil, Sri Bhola Raghurama Setty. Sri S. R. Bommai, Sri S. S. Arakere, Sri K. H. Srinivas, Sri D. B. Kalmankar, Sri Chandrakant, and Sri Vatal Nagaraj. I have also received notice of adjournment motion from Sri Nagappa. I would like to hear the Chief Minister.

Sri M. S. KRISHNAN (Malleswaram).—Myself and Sri Patil have also sent adjournment motion regarding the Hubli incident.

Mr. SPEAKER.—I shall find out. I am just considering all these notices. The Chiet Minister is going to make a statement.

† Sri VEERENDRA PATIL.—Sir, with your permission I would like to make a statement on the communal disturbance in Hubli City.

I am forced to the painful necessity of drawing the attention of the Hon'ble Memters to a regrettable clash that occurred in Hubli City on the afternoon of Saturday the 8th March 1969 between the two communities. The House may remember that Hubli was free from any communal trouble for the last 9 to 10 years. In connection with the Holy Festival usual Police Bundobust had been made by deploying the local civil and D. A. R. Police at several strategic points in the city.

On 8-3-1969, as usual, the Holy Festival was observed in the City. It is reported that at about 1 p. m. when the Kamanna procession was passing Gavigalli, Siddaveerapeth, Divategalli cross, a section of the public near Gavigalli objected to the carrying of the said procession. This led to a confrontation of the members of the two communities and brick-bats were freely thrown by both the sections at each other. A few of them who were armed with lathis also clashed with each other. The trouble gradually spread to Kamaripeth, Aralikattioni, Kavalpeth and Channapeth areas in Old Hubli, which is a mixed locality. Huge crowds started collecting and indulging in arson and looting. The Police had to resort to lathi charge and use of tear gas shells to disperse the violent and unruly mob at various places. At Kavalipeth seven residential houses including a small restaurant were set on fire. The P.S.I. on duty at great personal risk went inside the restaurant to rescue 3 persons who were trapped inside the burning restaurant. He was able to rescue two persons, but, one person could not be brought out and was burnt to death in the restaurant. When the P. S. I. was thus rescuing the persons in the restaurant an angry mob surrounded him and tried to assault him. In sheer self defence as well as to prevent further incidents of arson and looting, he fired six rounds with his service revolver. As a result of the firing, one person died on the spot and another succumbed

(SRI VEERENDRA PATIL)

to the injuries in the hospital on 9-3-69. Three more persons are undergoing treatment in the K. M. C. Hospital for bullet injuries. The abovesaid P. S. I. who is reported to have received injuries became unconscious and is now undergoing treatment in the hospital.

All roads in Kamaripeth, Chanpeth, Divategalli, Aralikattioni and Kavalpeth were littered with stones. As a result of throwing of stones and brick-bats 36 persons are reported to have been injured of whom 21 are admitted to the K. M. C. hospital and 15 treated as out-door patients. Besides the abovesaid P. S. I., nine P. Cs. have also sustained injuries and one of them has been admitted to the hospital as an in-patient. Some shops have been looted in the various places in the City.

As tension mounted and as it was considered necessary to strengthen the police force in Hubli, the S. P., Dharwar indented for reinforcement. Two platoons of M.S.R.P. and one platoon of D.A.R. from Belgaum and 3 platoons of M.S.R.P. from Bangalore arrived in Hubli. The Distric Magistrate promulgated a prohibitory order u/s 144 Cr. P.C. for 3 days from 8-3-1969 in the limits of Hubli-Dharwar Municipal Corporation. Later, Curfew was clamped in Hubli City from 10 p.m. to 6 a.m. on 8th and 9th March 1969. During the night of 8/9-3-69 the situation was fairly under control except for one incident when a house was set on fire and the fire was extinguished by the Fire Brigade. A preliminary investigation disclosed that properties worth about Rs. 80,000 have been destroyed. About 125 unsocial elements have been rounded up. Fifty cases have been registered for unlawful assembly, rioting, arson and looting.

The bundobust arrangements are being personally supervised by the D.I.G., Northern Range.

On 9-3-69, the Home Secretary, the Inspector General of Police and the D. I. G. (Intelligence) also visited Hubli and went round the affected areas. They also attended a meeting called by the Mayor and discussed the matter with the citizens including the local legislators, who are reported to have expressed appreciation for the prompt action taken by the police. The Peace Committee Members have also been going round the affected areas, in order to reassure the people and help to bring about normalcy.

The situation is now reported to be peaceful and well under control.

SRI G. CHANDRAKANTH (Bidar).–The Hon'ble Chief Minister stated that when the procession was taken out, one section of the people started pelting stones and he said that the pelting of stones started from the people who were in the procession. I would like to know whether the processionists were carrying stones with them.

SRI S. R. BOMMAI (Kundgol).—The Peace Committee has requested for a judicial enquiry and also to give compensation for the losses in the rioting. Will the Government assure about compensation and judicial enquiry?

† ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಸ್ವಾಮಿ, ನಮಗೆ ತಿಳಿದು ಬಂದಿರುವ ಪ್ರಕಾರ ಹುಬ್ಬಳ್ಳಿಯಲ್ಲಿ ಈ ತರಹ ಗಲಾಟೆಗಳು ಮೊಹರಂ ಆದಾಗ ಮತ್ತು ಹೋಳಿ ಹಬ್ಬದ ಕಾಲದಲ್ಲಿ ಹಿಂದೆಯೂ ಕೆಲವು ಸಂದರ್ಭಗಳಲ್ಲಿ ನಡೆದಿವೆ. ಆಗಲೂ ಕೂಡ ಪೋಲೀಸಿನವರಿಗೆ ಇದರ ವಿಚಾರವನ್ನು ತಿಳಿಸಿದಾಗ ಏನೂ ಮಾಡಲಿಲ್ಲ ಎಂದು ಗೊತ್ತಾಗುತ್ತದೆ ಮತ್ತು ಇಲ್ಲಿ ಇಂತಹ ಗಲಾಟೆಗಳು ಆಗುತ್ತವೆ ಎನ್ನುವ ಸೂಚನೆಗಳು ಪೂರ್ವಭಾವಿಯಾಗಿಯೇ ಪೋಲಿಸಿನವರಿಗೆ ತಿಳಿದಿತ್ತು ಎಂದು ನಮಗೆ ಗೊತ್ತಾಗಿದೆ. ಇದನ್ನು ಪೋಲೀಸಿನವರು ತಿಳಿದುಕೊಂಡಿದ್ದರೂ ಏಕೆ ಇಲ್ಲಿ ಮುನ್ನೆಚ್ಚರಿಕೆ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲಿಲ್ಲ? ಮತ್ತು ಇಲ್ಲಿ ಆಗುವ ಗಲಭೆಗಳನ್ನು ತಪ್ಪಿಸಲು ಗಲಭೆಯಾದ ಮೇಲೆ ಪೋಲೀಸಿನವರು ಬಂದರು ಎಂದು ನಮಗೆ ಗೊತ್ತಾಗಿದೆ. ಪೋಲೀಸು ಇಲಾಖೆಯಲ್ಲಿರುವ ಅಧಿಕಾರಿಗಳಿಗೆ ಹಾಗೂ ಸಿ.ಐ.ಡಿ. ಅಧಿಕಾರಿಗಳಿಗೆ ಮೊದಲೇ ಇದರ ಬಗ್ಗೆ ಗಲಭೆಗಳಾಗುತ್ತವೆ ಎನ್ನುವುದು ಗೊತ್ತಿರಲಿಲ್ಲವೇ? ಎರಡನೆಯದು ಪರಿಹಾರವನ್ನು ಇಲ್ಲಿ ನೊಂದವರಿಗೆ ಕೊಡಬೇಕೆಂದು ಇದ್ದಾರೆ ಎಂದು ಕೇಳಿದೆವು. ಇದನ್ನು ಕೊಡುವುದು ನ್ಯಾಯವಾದುದು. ಮೂರನೇದು ಜುಡಿಷಿಯಲ್ ಎನ್‌ಕ್ವೈರಿ ಮಾಡಬೇಕೆಂದು ಕೇಳಿದ್ದಾರೆ. ಇದರ ಬಗ್ಗೆ ಸರಕಾರದ ನಿಲುವೇನು ಅದನ್ನು ತಿಳಿಸಬೇಕೆಂದು ಕೇಳುತ್ತೇನೆ.

Sri B. B. SAYANAK (Belgaum).—May I know whether this communal rioting was pre-planned?

ಶ್ರೀ ಎಂ. ನಾಗಪ್ಪ (ರಾಯಚೂರು).—ಈಗಾಗಲೇ ಈ ಜಿಲ್ಲೆಯಲ್ಲಿ ನಷ್ಟಕ್ಕೆ ಒಳಗಾದವರಿಗೆ ಪರಿಹಾರ ಕೊಡಬೇಕು ಎಂದು ಸರಕಾರದ ಉದ್ದೇಶ ಇದೆ ಎಂದು ಪತ್ರಿಗಳಲ್ಲಿ ಓದಿದೆವು. ಇದು ನಿಜವೇ? ಎರಡನೆಯದು, ಈಗಾಗಲೇ ಜುಡಿಷಿಯಲ್ ಎನ್‌ಕ್ವೈರಿ ಮಾಡಬೇಕು ಎಂದು ಕೇಳಿದ್ದಾರೆ ಮತ್ತು ಇಲ್ಲಿನ ಸಭೆಯ ಸದಸ್ಯರುಗಳೂ ಇದರ ಬಗ್ಗೆ ಒತ್ತಾಯಪಡಿಸುತ್ತಿದ್ದಾರೆ. ಇದರ ಬಗ್ಗೆ ಸರಕಾರದ ನಿಲುವೇನು?

† ಶ್ರೀ ವಾಟಾಳ್ ನಾಗರಾಜ್.—ಸ್ವಾಮಿ, ಇನ್ನು ಮುಂದಾದರೂ ಇಂತಹ ಕಡೆಗಳಲ್ಲಿ ಶಾಂತಿ ಪಾಲನೆ ಬಗ್ಗೆ ಸರಿಯಾದ ಮುನ್ನೆಚ್ಚರಿಕೆ ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ. ಪರಿಹಾರಗಳನ್ನು ಕೊಡುವುದರ ಬಗ್ಗೆ ಇನ್ನೂ ತೀರ್ಮಾನವಾಗಿಲ್ಲ ಎನ್ನುತ್ತಾರೆ. ಅದರ ಬಗ್ಗೆ ಮುಂದೆ ತೀರ್ಮಾನ ತೆಗೆದುಕೊಳ್ಳಬಹುದು. ಆದರೆ ನಾನು ಸಲಹೆ ಮಾಡುವುದು ಪರಿಹಾರಗಳನ್ನು ಕೊಡುವುದಾಗಿದ್ದರೆ ಅದು ಅವರಿಗೆ ಶೀಘ್ರದಲ್ಲೇ ತಲುಪುವ ವ್ಯವಸ್ಥೆ ಮಾಡಬೇಕು ಎಂದು ಕೇಳುತ್ತೇವೆ.

† ಶ್ರೀ ಬೋಳಾ ರಘುರಾಮಶೆಟ್ಟಿ (ಕಾರ್ಕಳ).—ಮಾನ್ಯ ಸದಸ್ಯರಾದ ಶ್ರೀಕೃಷ್ಣನ್‌ರವರು ಹೇಳಿದ ಹಾಗೆ ಇಲ್ಲಿ ಹಿಂದೆ ಹೋಳಿ ಹಬ್ಬ ನಡೆದಾಗ ಇಂತಹ ಗಲಾಟೆಗಳು ಆಗಿದ್ದವು ಎಂದು ಸರಕಾರಕ್ಕೆ ಗೊತ್ತಿದ್ದರಿಂದ ಪೋಲೀಸು ಅಧಿಕಾರಿಗಳು ಸೂಕ್ತವಾದ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಬಹುದಾಗಿತ್ತು. ಆದರೆ ಹಾಗೆ ಮಾಡದೆ ಇದ್ದುದರಿಂದ ಇಂತಹ ಗಲಾಟೆಗಳಿಗೆ ಅವಕಾಶವಾಯಿತು. ಮೊದಲೇ ತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಂಡು ಇದ್ದಿದ್ದರೆ ಇಷ್ಟು ನಷ್ಟಗಳು ಆಗುತ್ತಿರಲಿಲ್ಲ. ಇಲ್ಲಿ ಬಹಳ ಜನರ ಪ್ರಾಣ ಹಾನಿ ಹಾಗೂ ಆಸ್ತಿಪಾಸ್ತಿಗಳ ಹಾನಿಯಾಗಿರುವುದರಿಂದ ಇವನ್ನೆಲ್ಲಾ ವಿಚಾರ ಮಾಡಲು ನ್ಯಾಯಾಂಗ ವಿಚಾರಣೆ ನಡೆಸಬೇಕು ಮತ್ತು ಇಲ್ಲಿರುವ ಶಾಂತಿ ಸಮಿತಿಯವರೂ ಸಹಾ ಇಲ್ಲಿ ನ್ಯಾಯಾಂಗ ವಿಚಾರಣೆ ನಡೆಸಬೇಕು ಎಂದೂ ಹೇಳುತ್ತಿದ್ದಾರೆ. ಹಾಗೆ ಮಾಡಿ ಇದರಲ್ಲಿ ಯಾರು ತಪ್ಪು ಮಾಡಿದವರು ಎಂದು ಸರಕಾರಕ್ಕೆ ಗೊತ್ತಾಗುತ್ತೋ ಅಂತಹವರಿಗೆ ಕಠಿಣ ಶಿಕ್ಷೆ ಮಾಡಿದರೆ ಮುಂದೆ ಇಂತಹ ಪ್ರಶ್ನೆಗಳು ಬಾರದಂತೆ ತಕ್ಕ ಕಾರ್ಯಕ್ರಮಗಳನ್ನೂ ತೆಗೆದುಕೊಳ್ಳಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಸ್ವಾಮಿ, ಈ ಗಲಭೆಯು ಹಿಂದೆ ಯಾವುದಾದರೂ ರಾಜಕೀಯ ಪಕ್ಷ ಅಥವಾ ಶಕ್ತಿ ಇತ್ತೇ ಮತ್ತು ಇಲ್ಲಿನ ಗಲಭೆ ಪೂರ್ವಭಾವಿಯಾಗಿ ನಿಯೋಜಿತವಾದುದು ಎಂದು ನಮಗೆ ತಿಳಿದುಬಂದಿದೆ. ಮತ್ತು ಇವಕ್ಕೆಲ್ಲಾ ಪೂರ್ವಭಾವಿಯಾಗಿ ಸಿದ್ಧತೆಗಳನ್ನು ಮಾಡಿಕೊಂಡಿದ್ದರು ಎಂದೂ ತಿಳಿದಿದೆ. ಇದರಲ್ಲಿ ಯಾವುದಾದರೂ ರಾಜಕೀಯ ಪಕ್ಷಗಳ ಹೆಸರು ಇದೆ ಎನ್ನುವಂತಿದ್ದರೆ ಅದನ್ನು ಮಾನ್ಯ ಮುಖ್ಯ ಮಂತ್ರಿಗಳು ಇಲ್ಲಿ ಹೇಳಬಹುದು.

† ಶ್ರೀ ಬಿ. ಪಿ. ಗಂಗಾಧರ್ (ತುಮಕೂರು).—ಇದೇ ತರಹ ಮಂಗಳೂರಿನಲ್ಲಿ ಗಲಭೆ ಆಯಿತು, ಚಿಕ್ಕಮಗಳೂರಿನಲ್ಲಿ ನಡೆಯಿತು. ಈಗ ಹುಬ್ಬಳ್ಳಿಯಲ್ಲಿ ಆಗಿದೆ. ಗಲಭೆ ಸಮಯದಲ್ಲಿ ನಡೆದಂಥ ಅಮಾನುಷ ಕೃತ್ಯಗಳಲ್ಲಿ ಜನ ಮಡಿದಿದ್ದಾರೆ. ಈ ರೀತಿಯ ಮತೀಯ ಗಲಭೆಗಳು ಅಲ್ಲಲ್ಲಿ ಆಗುತ್ತಿವೆ. ಇದನ್ನು ಮೊದಲನಲ್ಲಿಯೇ ನಿಪ್ ಆಫ್ ಮಾಡದೆ ಇದ್ದರೆ ಮುಂದೆ ಇಡೀ

(ಶ್ರೀ ಬಿ. ಪಿ. ಗಂಗಾಧರ್)

ರಾಜ್ಯದಲ್ಲಿ ಮತೀಯ ಗಲಭೆಗಳು ವೃದ್ಧಿಯಾಗುವುದಕ್ಕೆ ಅವಕಾಶವಾಗುತ್ತದೆ. ಇಷ್ಟು ವರ್ಷಗಳಿಂದ ಏನೂ ಗಲಭೆಗಳಿಲ್ಲದೆ ಈಗ ಮತೀಯ ಗಲಭೆಗಳು ಪ್ರಾರಂಭವಾಗಬೇಕಾಗಿದ್ದರೆ ಅದು ಪೋಲೀಸ್ ಇಲಾಖೆಯಲ್ಲಿನ ಅದಕ್ಷತೆಯಿಂದ ಇರಬಹುದು ಅಥವಾ ಶ್ರೀಮಾನ್ ಗೋಪಾಲಗೌಡರು ಹೇಳಿದ ಹಾಗೆ ಬೇರೆ ರೀತಿಯ ಪ್ರಚೋದನೆಗೆ ಅವಕಾಶ ಕೊಡತಕ್ಕ ರಾಜಕೀಯ ಪಕ್ಷಗಳ ಅಥವಾ ಬೇರೆ ಯಾರದಾದರೂ ಕೈವಾಡವಿರಬಹುದು. ಆದುದರಿಂದ ಇಂಥ ಪ್ರಚೋದನೆಯನ್ನು ಮಾಡತಕ್ಕ ವ್ಯಕ್ತಿಯಾಗಲೀ ಅಥವಾ ಇನ್ನು ಯಾರೇ ಆಗಲೀ ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳಬೇಕೆಂದು ಏರ್ಪಾಡು ಮಾಡಿದ್ದಾರೆ? ಮತ್ತು ಈ ತರಹ ಮತೀಯ ಗಲಭೆಗಳು ಬೇರೆ ಕಡೆ ಆಗದ ಹಾಗೆ, ದೊಡ್ಡ ದೊಡ್ಡ ಸಾರ್ವಜನಿಕ ಸಮಾರಂಭಗಳು, ಉತ್ಸವಗಳು ನಡೆಯುವಾಗ ಪೋಲೀಸರು ಮುಂಜಾಗ್ರತೆಯನ್ನು ವಹಿಸಿ ಸಿ.ಐ.ಡಿ. ಮುಖಾಂತರ ಸಮಾಚಾರವನ್ನು ತಿಳಿದುಕೊಂಡು ತಕ್ಕ ಬಂದೋಬಸ್ತು ಮಾಡುವುದಕ್ಕೆ ಏನು ವ್ಯವಸ್ಥೆ ಮಾಡಿದ್ದಾರೆ! ಈ ಗಲಭೆಗಳಲ್ಲಿ ಏನು ನಷ್ಟವಾಗಿದೆ, ಅದನ್ನೆಲ್ಲ ಸರ್ಕಾರದವರು ತುಂಬಿಕೊಡಬೇಕಾಗಿದೆ. ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುವುದರಲ್ಲಿ 15 ದಿನ, ಒಂದು ತಿಂಗಳು ಎರಡು ತಿಂಗಳು ನಿಧಾನ ಮಾಡದೆ ಶೀಘ್ರವಾಗಿ ತೀರ್ಮಾನ ತೆಗೆದುಕೊಂಡು ತೊಂದರೆಗೆ ಮತ್ತು ನಷ್ಟಕ್ಕೆ ಈಡಾಗಿರುವವರಿಗೆ ಪರಿಹಾರ ಕೊಡಬೇಕು. ಈ ಹೊತ್ತು ಜನ ಬೀದಿಯಲ್ಲಿದ್ದು ಸತ್ತು ಹೋಗತಕ್ಕ ಸಂದರ್ಭವಿದೆ. ಆದ್ದರಿಂದ ಸರ್ಕಾರವರು ಪರಿಹಾರವನ್ನು ತಕ್ಷಣ ಯಾರಿಗೆ ತೊಂದರೆಯಾಗಿದೆಯೋ ಅವರಿಗೇ ತಲುಪುವಂತೆ ಮಾಡಬೇಕೆಂದು ಹೇಳುತ್ತೇನೆ.

† ಶ್ರೀ ಅಜೀಜ್ ಸೇಟ್ (ನರಸಿಂಹರಾಜ).—ನಮ್ಮ ರಾಜ್ಯದಲ್ಲಿ ಸುಮಾರು 19 ಜಿಲ್ಲೆಗಳ ಪೈಕಿ ಇಂಥ ಗಲಭೆಗಳು 1965ರಿಂದ ಇಲ್ಲಿಯವರೆಗೂ 9 ಜಿಲ್ಲೆಗಳಲ್ಲಿ ನಡೆದಿದೆ; ಕಮ್ಯೂನಲ್ ಕ್ಲಾಷಸ್ ಆಗಿವೆ. ಪ್ರತಿಯೊಂದು ಸಾರಿಯೂ ಅದನ್ನು ಹತೋಟಿಗೆ ತರಲು ಪೋಲೀಸ್ ಅಧಿಕಾರಿಗಳು ಹೋಗುವುದು ಹೀಗೆ ಆರ್ಡರ್ ಆಫ್ ದಿ ಡೇ ಮಾಡಿಕೊಂಡು ಬಂದಿದ್ದಾರೆ ನಮ್ಮ ರಾಜ್ಯದಲ್ಲಿ 'ಪುಂಡು ಗಂಡಾಯ' ಹಾಕಲು ಒಂದು ಕಾನೂನು ಇದೆ. ಇದನ್ನು ಏಕೆ ಜಾರಿಗೆ ಕೊಡುವುದಿಲ್ಲ? ಯಾರು ಉಪ್ಪು ತಿನ್ನುತ್ತಾರೆ ಅವರು ನೀರು ಕುಡಿಯಲಿ. ಲಕ್ಷಾಂತರ ರೂಪಾಯಿ ನಷ್ಟವಾಗಿರುವವರಿಗೆ ಸರ್ಕಾರದವರು ನೂರಿನ್ನೂರು ರೂಪಾಯಿ ಕೊಟ್ಟರೆ ಏನೂ ಒಳ್ಳೆಯದಾಗುವುದಿಲ್ಲ, ಜನತೆಗೂ ಒಳ್ಳೆಯದಾಗುವುದಿಲ್ಲ. ಗಲಭೆಗಳು ಮಾಡುವವರು ಹಿಂಸೆ ಮಾಡಿಯೇ ಮಾಡುತ್ತಾರೆ. ಗಲಭೆಗಳು ನಡೆದು, ಲೂಟಿ ಮುಂತಾದುವು ನಡೆಯುತ್ತಲೇ ಇರುತ್ತದೆ. ಈಚೆಗೆ ಸಿರ್ಸಿ, ಚನ್ನಪಟ್ಟಣ ಮುಂತಾದ ಕಡೆಯೂ ಗಲಭೆಗಳಾಗಿವೆ. ಇದನ್ನೆಲ್ಲ ನೋಡಿದರೆ ಇದಕ್ಕೆ ಒಂದು ರಾಜಕೀಯ ಹಿನ್ನೆಲೆ ಇದೆ ಎಂದು ಕಂಡುಬರುತ್ತದೆ. ಎಲ್ಲೆಲ್ಲಿ ಗಲಭೆಗಳು ನಡೆದು ಜನರ ಆಸ್ತಿಪಾಸ್ತಿ ನಷ್ಟವಾಗಿದೆಯೋ ಪ್ರಾಣಕ್ಕೆ ಅಪಾಯವಾಗಿದೆಯೋ ಅಂಥ ಕಡೆಗಳಲ್ಲಿ ಪುಂಡು ಗಂಡಾಯವನ್ನು ಹಾಕಲೇ ಬೇಕು. ಮತ್ತು ಇಂಥ ಕೃತ್ಯಗಳು ನಡೆಯದಂತೆ ಶಾಶ್ವತವಾದ ಕ್ರಮಗಳನ್ನು ತೆಗೆದುಕೊಳ್ಳಬೇಕು. ಈ ಸಭೆಯ ಸದಸ್ಯರನ್ನೊಳಗೊಂಡಂತೆ ಒಂದು ಸಮಿತಿಯನ್ನು ಮಾಡಿ ಇಂಥ ಗಲಭೆಗಳು ನಡೆಯದಂತೆ ಮಾಡಲು ಶಾಶ್ವತವಾದ ಕ್ರಮಗಳನ್ನು ತೆಗೆದುಕೊಂಡು ಜನತೆಗೆ ರಕ್ಷಣೆ ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕು. ಹಾಗೆ ಮಾಡುವುದಕ್ಕಾಗುವುದಿಲ್ಲವೆಂದು ಹೇಳಿದರೆ ಅಂಥ ಆಫೀಸರು ಭೂಮಿಯಮೇಲೆ ಇರುವುದಕ್ಕೆ ಲಾಯಕ್ಕಿಲ್ಲ, ಅವರನ್ನು ಕಳಿಸಿಬಿಡಬೇಕು.

ಶ್ರೀ ಎಸ್. ಎಂ. ಗುರೆಡ್ಡಿ.—ಹುಬ್ಬಳ್ಳಿ ಗಲಭೆ ಸಮಯದಲ್ಲಿ ಸಬ್-ಇನ್‌ಸ್ಪೆಕ್ಟರು ತಮ್ಮ ರಿವಾಲ್ವರಿನಿಂದ ಗುಂಡುಹಾರಿಸಲೇಬೇಕಾದ ಆವಶ್ಯಕತೆ ಇತ್ತೇ? ಅವರ ಕೈಲಿ ಸಿಬ್ಬಂದಿ ಇತ್ತು, ಲಾಠಿಚಾರ್ಜು ಮಾಡಬಹುದಾಗಿತ್ತು. ಗುಂಡು ಹಾರಿಸಬೇಕಾದ ಆವಶ್ಯಕತೆ ಇತ್ತೇ ಎಂಬುದನ್ನು ತಿಳಿಸಬೇಕು.

† **Sri V. N. PATIL** (Humnabad).—Sir, it is clear from what has happened at Hubli that extreme communalism has come in one form or another in some part of our State. Whichever political party is behind this communalism must be exposed thread-bare. I have got full reports about it. I therefore suggest that we must take early steps to put a ban on such political parties which are playing with the lives and properties of the people. It is a shameful affair that even after 20 years of partition of the country Hindus and Muslims are quarrelling

with each other and as a result innocent people are falling a prey to this extreme communalism. In this connection, we cannot but express our gratitude to the exemplary manner in which some officials have conducted themselves. Here is a typical case of what real secularism means. If we fail in our duty and simply allow some honest officials to sacrifice their lives, it is not sufficient. There is definitely a political force behind it and this force has been organising for more than a month or so for the coming elections and by elections. Once we have suffered partition on account of the communal quarrel created by the British Government. I have the strongest reasons to believe that the C. I. A's hand is there behind these Hindu-Muslim quarrels and for that a judicial enquiry must be there. A judicial enquiry is the only remedy for that. As the hon. member Sri Azeez Sait said, giving relief to one section or the other cannot put an end to the matter. Whenever Hindu or Muslim religious festivals come, maximum police arrangement must be made in future in such of the vulnerable parts where extreme type of communalism is playing havoc.

ಶ್ರೀ ಎಸ್. ಎಸ್. ಅರಕೇರಿ (ಬಳ್ಳೊಳ್ಳಿ). —ಮುಖ್ಯ ಮಂತ್ರಿಗಳು ಕಾಲ್ ಅಟೆನ್‌ಷನ್ ನೋಟೀಸ್ ಬಗ್ಗೆ ವಿವರಣೆ ಕೊಟ್ಟಿರುವುದು ಸ್ಪಷ್ಟವಾಗಿಲ್ಲ. ಗಲಭೆಗೆ ಕಾರಣ ಸ್ಪಷ್ಟವಾಗಿ ಗೊತ್ತಾಗಿಲ್ಲ. ಅದನ್ನು ಸ್ಪಷ್ಟಪಡಿಸಬೇಕು. ಅಲ್ಲದೆ ಜ್ಯುಡಿಷಿಯಲ್ ಎನ್‌ಕ್ವೈರಿ ಮಾಡಿ ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಹಾಗೆ ಮಾಡಿದರೆ ಮುಂದೆ ಗಲಾಟೆಯಾಗುವುದು ತಪ್ಪುವುದು. ಇದಕ್ಕೆ ಮುಖ್ಯಮಂತ್ರಿಗಳು ಏನು ಹೇಳುತ್ತಾರೆ.

ಶ್ರೀ ಪಿ. ವೆಂಕಟಗಿರಿಯಪ್ಪ (ಕೋಲಾರ). —ಹೋಳಿ ಮತ್ತು ಮೊಹರಂ ಹಬ್ಬಗಳಲ್ಲಿ ಹೆಚ್ಚು ಗಲಭೆಯಾಗುವುದಕ್ಕೆ ಅವಕಾಶವಿರುವುದರಿಂದ ಆಗ ಪೋಲೀಸು ಬಂದೋಬಸ್ತು ಸರಿಯಾಗಿ ಮಾಡಬಹುದಾಗಿತ್ತು. ಹಿಂದೆ ಕೂಡ ಹುಬ್ಬಳ್ಳಿಯಲ್ಲಿ ಹೋಳಿ ಸಂದರ್ಭದಲ್ಲಿ ಗಲಾಟೆಯಾಗಿತ್ತು. ಇದು ಗೊತ್ತಿರುವಾಗ ಸರಿಯಾದ ಬಂದೋಬಸ್ತು ಮಾಡದೆ ಪೋಲೀಸರು ತಮ್ಮ ಕಾರ್ಯದಲ್ಲಿ ವಿಫಲರಾಗಿದ್ದಾರೆ. ಆದುದರಿಂದ ಸಂಬಂಧಪಟ್ಟ ಪೋಲೀಸು ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೀರಾ ?

Sri D. B. KALMANKAR (Aland).—Sir, the first question is whether communal disturbances of such magnitude have taken place at Hubli in recent years and secondly in view of the demand made by the Peace Committee consisting of different political parties, it is imperative that there is necessity of a judicial enquiry to be made in the matter. Because such things are happening not only at Hubli but also in other places. Recently. at Basava Kalyan some disturbances took place. The question is whether the Government will consider the question of ordering a judicial enquiry in the matter and find out the root causes of such disturbances and whether the details which are not given by the Hon. Chief Minister today as to which of the communities were responsible to start the disturbances and how it developed will be given.

† ಶ್ರೀ ಬಿ. ಎಂ. ಇದಿನಬ್ಬ (ಮಂಗಳೂರು).—ಅಧ್ಯಕ್ಷರೇ, ಈ ಹೊತ್ತು ಹುಬ್ಬಳ್ಳಿಯಲ್ಲಿ ಆಗಿರತಕ್ಕ ವಿಚಾರ ಅತ್ಯಂತ ದುಃಖದ ಮತ್ತು ದುರ್ದೈವದ ವಿಚಾರ. ಮಂಗಳೂರು ಮತ್ತು ಚಿಕ್ಕಮಗಳೂರಿನವರಾದ್ದನ್ನು ಕೇಳಿದ್ದೇವೆ. ಹುಬ್ಬಳ್ಳಿಯ ಗಲಭೆಯಲ್ಲಿ ನೊಂದವರಿಗೆ, ಕಷ್ಟಕ್ಕೊಳಗಾದವರಿಗೆ, ಹಾನಿಯಾದವರಿಗೆ ಕೂಡಲೇ ಪರಿಹಾರ ಸಿಕ್ಕುವ ಹಾಗೆ ಬಹಳ ಪ್ರಾಮಾಣಿಕರಾಗಿರುವ ಆಫೀಸರನ್ನು ನೇಮಕ ಮಾಡಬೇಕು ಮತ್ತು ಅವರಿಗೆ ಪರಿಹಾರವನ್ನು ಕೂಡಲೇ ಒದಗಿಸಿ ಕೊಡಬೇಕು ಇದು ಒಂದನೆಯ ಅಂಶ. ಮತ್ತು ವ್ಯಾಪಾರದಲ್ಲಿ ನಿರತರಾಗಿರತಕ್ಕವರು ಮತ್ತು ಇನ್ನಿತರ ಉದ್ಯೋಗಗಳಲ್ಲಿದ್ದವರು ಬಹಳವಾಗಿ ನಷ್ಟಕ್ಕೊಳಗಾಗಿರತಕ್ಕವರಿಗೆ ಬಡ್ಡಿ ಇಲ್ಲದೇ ಸಾಲ ಕೊಟ್ಟು ಅವರು

(ಶ್ರೀ ಬಿ. ಎಂ. ಇದಿನಬ್ಬ)

ಇನ್ನು ಮುಂದೆ ವ್ಯಾಪಾರ ಮಾಡುಂತೆ ಅಥವಾ ಹೋಟೇಲುಗಳನ್ನು ಇಡುವುದು ಈ ರೀತಿ ಯಾವುದಾದರೂ ಉದ್ಯಮದಲ್ಲಿ ನಿರತರಾಗುವುದಕ್ಕೆ ಅವಕಾಶವಾಗಲು ತಕ್ಕ ವ್ಯವಸ್ಥೆ ಮಾಡಬೇಕು. ಅದೇ ರೀತಿ ಎರಡು ಕಡೆಯಲ್ಲೂ ದೇವಾಲಯಗಳು, ಪ್ರಾರ್ಥನಾ ಮಂದಿರಗಳು ನಾಶವಾಗಿವೆ ಎಂದು ಕೇಳುತ್ತಾ ಇದ್ದೇವೆ. ಇದನ್ನೂ ಕೂಡ ಸರಿಯಾದ ರೀತಿಯಲ್ಲಿ ಕಟ್ಟಿಸಿಕೊಡುವುದಕ್ಕೆ ವ್ಯವಸ್ಥೆ ಮಾಡುವಂತಹದು ಮಾತ್ರವಲ್ಲ ಇನ್ನು ಮುಂದೆ ಈ ರೀತಿ ಆಗದಂತೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುವುದರ ಜೊತೆಗೆ ಆಯಾ ಪ್ರದೇಶದಲ್ಲಿ ಪುಂಡುಗಂದಾಯ ಹಾಕಿ ಇದನ್ನು ತಡೆಗಟ್ಟುವುದು ಒಳ್ಳೆಯದು ಎಂದು ಹೇಳುತ್ತಾ ಇದ್ದೇನೆ.

† ಶ್ರೀ ಸಿ. ಎಂ. ಎಸ್. ಶಾಸ್ತ್ರಿ (ಚಿಕ್ಕಮಗಳೂರು).- ಮೈಸೂರು ರಾಜ್ಯದಲ್ಲಿ ಈ ಮತೀಯ ಗಲಭೆ ಪರ್ಮನೆಂಟ್ ಫೀಚರ್ ಆಗಿದೆ. 1968ನೇ ಇಸವಿಯಲ್ಲಿ ಚಿಕ್ಕಮಗಳೂರಿನಲ್ಲೂ ಕೂಡ ನಡೆದಿದೆ. ಆಗಲೂ ಕೂಡ ಇದೇ ರೀತಿಯಲ್ಲಿ ಸರ್ಕಾರದವರು ತಿಳಿಸಿದ್ದಾರೆ. ಚಿಕ್ಕಮಗಳೂರಿನಲ್ಲಿ ನಡೆದಾಗಲೂ ಅದರ ಅಕ್ಕಪಕ್ಕದ ಎಲ್ಲಾ ಕಡೆಯಲ್ಲೂ ಕೂಡ ಇಂತಹ ಗಲಭೆಯಾಗಬಹುದು ಎಂದು ಹೇಳಿ ಸರ್ಕಾರದವರು ಎಚ್ಚರಿಕೆಯಿಂದ ಇರಬೇಕೆಂದು ಹೇಳಿದ್ದೆ. 1968ರಲ್ಲಿ ಮಂಗಳೂರಿನಲ್ಲಿ ಚಿಕ್ಕಮಗಳೂರಿನಲ್ಲಿ ನಡೆದಂತಹ ಗಲಭೆಗಿಂತ ಹೆಚ್ಚಾದ ರೀತಿಯಲ್ಲಿ ಮತೀಯ ಗಲಭೆ ನಡೆಯಿತು. ಮತೀಯ ಗಲಭೆ ಎಲ್ಲಿ ನಡೆಯುತ್ತದೆ ಅಲ್ಲಿ ಸರ್ಕಾರದವರು ಒಂದು ಕಮಿಟಿಯನ್ನು ಅಂತಹ ಸಂದರ್ಭದಲ್ಲಿ ನೇಮಕ ಮಾಡುತ್ತಾರೆ, ನೇಮಕ ಮಾಡಿ ಶಾಂತ ವಾತಾವರಣ ನೆಲಸಿದ ಕೂಡಲೇ ಆ ಕಮಿಟಿ ಏನಾಯಿತು ಎಂಬುದು ಕೂಡ ಗೊತ್ತಾಗುವುದಿಲ್ಲ. ಚಿಕ್ಕಮಗಳೂರಿನಲ್ಲಿ ಮತೀಯ ಗಲಭೆ ನಡೆಯಿತು. ಅದಕ್ಕೆ ಕಾರಣವೇನು ಎಂಬುದನ್ನು ಇನ್ನೂ ಕೂಡ ವಿಚಾರ ಮಾಡಿಲ್ಲ. ಯಾರು ತಪ್ಪಿತಸ್ಥರೋ ಅವರಿಗೆ ಇನ್ನೂ ಕೂಡ ಶಿಕ್ಷೆಯಾಗಿಲ್ಲ. ಅದೇ ಕಾರಣ ಇವತ್ತು ಪದೇ ಪದೇ ಮತೀಯ ಗಲಭೆಗಳು ನಡೆಯುವುದಕ್ಕೆ ಎಂದು ನಾನು ತಿಳಿದುಕೊಂಡಿದ್ದೇನೆ. ಇದರ ಜೊತೆಗೆ ಮತೀಯ ಗಲಭೆಯಲ್ಲಿ ನೊಂದಿರತಕ್ಕವರಿಗೆ ಸರಿಯಾದ ಪರಿಹಾರ ದೊರಕುವುದಿಲ್ಲ. ಯಾರು ನೊಂದಿರುತ್ತಾರೆ ಅವರಿಗೆ ಪರಿಹಾರ ದೊರಕದೆ ನೊಂದಿಲ್ಲದೇ ಇರತಕ್ಕವರಿಗೆ ದೊರಕಿರತಕ್ಕ ನಿದರ್ಶನಗಳು ಬೇಕಾದಷ್ಟು ಇವೆ. ಈಗಲಾದರೂ ಕೂಡ ಹುಬ್ಬಳ್ಳಿಯಲ್ಲಿ ಯಾರು ನೊಂದಿದ್ದಾರೆ ಅಂತಹವರಿಗೆ ಮೊದಲು ಪರಿಹಾರ ದೊರಕಬೇಕು ಅದರ ಜೊತೆಗೆ ಈ ಮತೀಯ ಗಲಭೆಗಳಿಗೆ ಯಾರು ಕಾರಣಕರ್ತರಾಗಿದ್ದಾರೆ ಅವರಿಗೆ ಶಿಕ್ಷೆಯಾಗಬೇಕು. ಶಿಕ್ಷೆಯಾಗಿ ಇನ್ನು ಮುಂದಾದರೂ ಈ ರಾಜ್ಯದಲ್ಲಿ ಇಂತಹ ಗಲಭೆಗಳು ವರ್ಷೇ ವರ್ಷೇ ನಡೆಯದಂತೆ ಸರ್ಕಾರದವರು ನೋಡಿಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

† ಶ್ರೀ ಎಸ್. ಶಿವಪ್ಪ.—ಅಧ್ಯಕ್ಷರೇ, ಈಹೊತ್ತು ನಮ್ಮ ರಾಜ್ಯದಲ್ಲಿ ಮತ್ತು ರಾಷ್ಟ್ರದಲ್ಲಿ ಅನೇಕ ಕಡೆಗಳಲ್ಲಿ ಮತೀಯ ಗಲಭೆಗಳು ಅನೇಕ ರೀತಿಯಲ್ಲಿ ನಡೆಯುತ್ತಾ ಇವೆ. ಮೈಸೂರು ರಾಜ್ಯದಲ್ಲಿ ಹುಬ್ಬಳ್ಳಿಯಲ್ಲಿ ನಡೆದಂತಹ ಗಲಭೆ ಹೊಸದೇನೂ ಅಲ್ಲ ಹಿಂದೆ ಅನೇಕ ಕಡೆಗಳಲ್ಲಿ ನಡೆದದ್ದನ್ನು ನೋಡಿದ್ದೇವೆ. ಹಿಂದೆ ಮಂಗಳೂರಿನಲ್ಲಿ ಅಂತಹ ಗಲಭೆಯಾದಾಗ ಮಂಗಳೂರು ನಗರಕ್ಕೆ ನಾನು ಖುದ್ದಾಗಿ ಹೋಗಿ ನೋಡಿ ಕೆಲವು ವಿಷಯಗಳನ್ನು ತಿಳಿದುಕೊಂಡು ಬಂದೆ. ಈ ಗಲಭೆಗಳಲ್ಲಿ ತುತ್ತಾದವರು, ಬಡವರು, ಗತಿ ಇಲ್ಲದೇ ಇರತಕ್ಕ ನಿರ್ಗತಿಕರಾಗಿರುತ್ತಾರೆ. ಮತ್ತು ಅನೇಕ ಮತೀಯ ದೇವಸ್ಥಾನಗಳು, ದೇವರ ಮಂದಿರಗಳು, ಅವು ಹಿಂದೂಗಳ ದೇವರ ಮಂದಿರಗಳಾಗಿರಬಹುದು, ಅಥವಾ ಮುಸ್ಲಿಮರ ಮಂದಿರಗಳಾಗಿರಬಹುದು-ಅವುಗಳನ್ನು ನಾಶ ಮಾಡಿರುವುದನ್ನು ನಾವು ನೋಡಿದ್ದೇವೆ. ಇಂತಹ ಗಲಭೆಗಳು ಆದಾಗ ಎಲ್ಲಾ ಕಡೆಯಲ್ಲೂ ಇದು ಒಂದು ಪ್ಲಾನ್ಡ್ ಬೇಸಿಸ್ ಮೇಲೆ ನಡೆಯುತ್ತಾ ಇವೆ. ಈಗ ನಾವು ಜಾತ್ಯಾತೀತ ರಾಷ್ಟ್ರಕ್ಕೆ ಬದ್ಧರಾಗಿ ರಾಜ್ಯಾಂಗಕ್ಕೆ ಪ್ರಮಾಣ ವಚನ ಸ್ವೀಕಾರ ಮಾಡಿ ಈ ರಾಜ್ಯವನ್ನು ಆಳುತ್ತಾ ಇದ್ದೇವೆ.

ಹೀಗೆ ತೊಂದರೆ ಮಾಡಿ ಅವಹೇಳನ ಮಾಡತಕ್ಕ ಶಕ್ತಿಯ ಹಿಂದೆ ಯಾರೇ ಇರಲಿ ಸರ್ಕಾರದವರು ಅವರನ್ನು ಹತ್ತಿಕ್ಕಲೇ ಬೇಕು. ಇನ್ನು ಮುಂದೆ ಸಾಧ್ಯವಾದ ಮಟ್ಟಿಗೂ ಈ ಮತೀಯ ಗಲಭೆಗಳಾಗುವುದಕ್ಕೆ ಅವಕಾಶಕೊಡದಂತೆ ಕೆಲಸಮಾಡಬೇಕು. ಈ ದಿವಸ ನಾವು ರಾಜ್ಯದಾದ್ಯಂತ ಭಾವೈಕ್ಯಸಾಧನೆಗೆ ಕೆಲಸಮಾಡಬೇಕೆಂಬ ಮಾತು ಕೇವಲ ಕಾಗದದ ಮೇಲೆ ಉಳಿದಿದೆ ಅನ್ನುವಂತಾಗಬಾರದು. ಈ ಗಲಭೆಗೆ ಕಾರಣರು ಯಾರು ಎಂಬುದನ್ನು ಕಂಡುಹಿಡಿಯಲು ಒಂದು ನ್ಯಾಯಾಂಗವಿಚಾರಣೆ ನಡೆಸಲೇಬೇಕೆಂದು ಹೇಳುತ್ತೇನೆ. ಇಂಥ ಗೊಂದಲಕ್ಕೆ ಯಾರು ಮೂಲ ಕಾರಣರು ಎಂಬುದನ್ನು ಕಂಡುಹಿಡಿದು ಅವರನ್ನು ಹತ್ತಿಕ್ಕಿ ದೇಶಕ್ಕೆ ನೆಮ್ಮದಿಯನ್ನು ಉಂಟುಮಾಡಬೇಕೆಂದು ಕೇಳಿಕೊಳ್ಳುತ್ತೇನೆ

2-30 P. M.

ಶ್ರೀ ಎನ್. ಲೋಕಯ್ಯ ನಾಯಕ (ವಿರಾಜಪೇಟೆ).—ಮೆರವಣಿಗೆ ಹೋಗುವಾಗ ಇಂಥ ರಸ್ತೆಯಲ್ಲಿ ಅದು ಹೋಗಬಾರದು ಎಂಬುದಕ್ಕೆ ಅಡ್ಡಿಯೇನಾದರೂ ಇರುತ್ತವೆಯೋ? ಆ ಮೆರವಣಿಗೆಯು ಎಲ್ಲೆಲ್ಲಿ ಹೋಗುತ್ತದೋ ಅಲ್ಲಿ ಅದರ ಜೊತೆಯಲ್ಲೇ ಪೋಲಿಸರು ಹೋಗಬೇಕಾಗಿತ್ತಲ್ಲವೇ? ಹಾಗಿದ್ದರೆ ಅಲ್ಲಿ ಕ್ಲ್ಯಾಷ್ ಉಂಟಾದ ಕಾಲಕ್ಕೆ ಎಷ್ಟು ಜನ ಪೋಲೀಸರಿದ್ದರು?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅಲ್ಲಿ ಆ ಗಲಭೆ ಏನು ನಡೆದಿದೆ ಅದಕ್ಕೆ ಪೂರ್ವಭಾವಿಯಾಗಿ ಇಲ್ಲಿ ಇಂಥ ಒಂದು ಗಲಭೆ ನಡೆಯುತಕ್ಕ ಸಂಭವವಿದೆ ಎಂಬ ಮುಂದಾಲೋಚನೆಯಿಂದ ಏನಾದರೂ ವರದಿ ಬಂದಿತ್ತೇ? ಹಾಗೆ ಬಂದಿದ್ದರೆ ಅಲ್ಲಿ ಕೈಗೊಳ್ಳಲಾದ ಮುಂಜಾಗ್ರತೆ ಕಾರ್ಯಕ್ರಮಗಳಾವುವು?

ಶ್ರೀ ಕೆ. ಎಚ್. ಪಾಟೀಲ (ಹುಬ್ಬಳ್ಳಿ).—ಸ್ವಾಮಿ, ನಾನು ಸ್ಥಳಕ್ಕೆ ಹೋಗಿ ಜನರಿಂದ ನೇರವಾಗಿ ಎಷ್ಟು ವಿಷಯ ತಿಳಿಯುವುದಕ್ಕೆ ಸಾಧ್ಯವಿದೆಯೋ ಅಷ್ಟನ್ನೂ ತಿಳಿದುಕೊಂಡು ಬಂದಿದ್ದೇನೆ. ಅಲ್ಲಿ ಜನರು ಒಂದು ಪಕ್ಷದವರು ಇನ್ನೊಂದು ಪಕ್ಷದವರ ಮೇಲೆ ಒಂದು ಕೆಟ್ಟ ಕೆಲಸಮಾಡಬೇಕೆಂಬ ಮುಂಜಾಗ್ರತೆಯ ಏರ್ಪಾಡನ್ನು ಇಟ್ಟುಕೊಂಡಿದ್ದರು ಎಂದು ಒಂದು ಪಕ್ಷದವರು ಇನ್ನೊಂದು ಪಕ್ಷದವರ ಮೇಲೆ ಆರೋಪಗಳನ್ನು ಮಾಡುತ್ತಿದ್ದಾರೆ. ಅದರಲ್ಲಿ ಒಂದು ಮಾತು ನಿಜವಾದದ್ದು ಏನೆಂದರೆ ಅಲ್ಲಿ ಒಂದು ಮುಸಲ್ಮಾನರ ಮನೆಗೆ ಬೆಂಕಿ ಬಿದ್ದಿದ್ದಾಗ ಅದನ್ನು ಆರಿಸತಕ್ಕ ಕಾರ್ಯದಲ್ಲಿ ಅಲ್ಲಿದ್ದ ಒಬ್ಬ ಸಬ್‌ಇನ್‌ಸ್ಪೆಕ್ಟರ್ ತನಗೆ ಪರಿವೆಯೇ ಇಲ್ಲದಮಟ್ಟಿಗೆ ಆ ಬೆಂಕಿಬಿದ್ದ ಮನೆಯಲ್ಲಿದ್ದ ಜನರನ್ನು ಪಾರುಮಾಡಲು ಪ್ರಯತ್ನ ಮಾಡುತ್ತಿದ್ದುದನ್ನು ಕಂಡ ಜನರು ಆತ ಸಾಮಾನ್ಯವಾಗಿ ಇತರರಮೇಲೆ ಏನೇ ದಬ್ಬಾಳಿಕೆ ನಡೆಯುತ್ತಿದ್ದರೂ ನೋಡಿಕೊಂಡು ಸುಮ್ಮನೆ ಇರುತ್ತಿದ್ದವನು ಈ ಸಂದರ್ಭದಲ್ಲಿ ಇಷ್ಟು ಮುತುವರ್ಜಿವಹಿಸಿ ಕೆಲಸಮಾಡುತ್ತಿದ್ದಾನೇಕೆ ಎಂದು ಜನರು ಕೂಗಾಡುವುದಕ್ಕೆ ಹತ್ತಿದಾಗ ಆತ ತನ್ನಲ್ಲಿದ್ದ ರಿವಾಲ್ವರನ್ನು ತಾನು ಉಪಯೋಗ ಮಾಡದಿದ್ದರೆ ಇನ್ನು ತನ್ನ ಪ್ರಾಣವುಳಿಯುವುದಿಲ್ಲ ಎಂದು ಆತ ರಿವಾಲ್ವರನ್ನು ಹಾರಿಸಿದನಂತೆ. ಅದರಿಂದ ಜನ ಇನ್ನೂ ರೊಚ್ಚಿಗೆದ್ದು ಇಷ್ಟಕ್ಕೆ ಕಾರಣವಾಗಿದೆ. ಆದರೆ ಇಲ್ಲಿಯತನಕ ಆ ಹುಬ್ಬಳ್ಳಿಯಲ್ಲಿ ಯಾವ ತರಹ ಮತೀಯ ಗಲಭೆಗಳೂ ನಡೆದಿರಲಿಲ್ಲ. ಆದರೆ ಅಲ್ಲಿ ಆ ಗಲಭೆ ಆ ಮಟ್ಟಕ್ಕೆ ಮುಟ್ಟಬೇಕಾಗಿದ್ದರೆ ಅಲ್ಲಿ ಆ ಸಬ್‌ಇನ್‌ಸ್ಪೆಕ್ಟರ್ ಗುಂಡುಹಾರಿಸಿದ್ದೇ ಮೂಲಕಾರಣವಾಗಿದೆ. ಆದ್ದರಿಂದ ಆ ದಿವಸ ಆತ ಗುಂಡು ಹಾರಿಸಿದ್ದು ನ್ಯಾಯವಾದುದೇ ಅಲ್ಲವೇ ಎಂಬುದನ್ನು ವಿಚಾರ ಮಾಡಬೇಕಾಗಿದೆ. ನನಗೆ ತಿಳಿದುದ್ದರಲ್ಲಿ ಆತನು ಗುಂಡುಹಾರಿಸದಿದ್ದರೆ ಆತನಿಗೆ ಉಳಿಗಾಲವಿರಲಿಲ್ಲ ಅದರಿಂದ ಗುಂಡು ಹಾರಿಸಿರಬಹುದು ಎಂದೆನಿಸುತ್ತಿದೆ. ಆದರೆ ಹುಬ್ಬಳ್ಳಿ ಇಡೀ ಕರ್ಣಾಟಕಕ್ಕೆ ಹೆಸರಾದ ಸ್ಥಳ. ಆದ್ದರಿಂದ ಮುಖ್ಯಮಂತ್ರಿಗಳು ಇದನ್ನು ತಮ್ಮ ಗಮನಕ್ಕೆ ತೆಗೆದುಕೊಂಡು ಆತ ಗುಂಡು ಹಾರಿಸಿದ್ದು ಸರಿಯೇ, ಅದಕ್ಕೆ ಯಾರು ಮೂಲ ಕಾರಣರು, ಎಂಬುದನ್ನು ಕಂಡುಹಿಡಿದು ಆ ಘಾತಕರು ಯಾರೇ ಇರಲಿ, ಯಾವ ಕಡೆಯವರೇ ಆಗಿರಲಿ ಅವರಿಗೆ ಉಗ್ರ ಶಿಕ್ಷೆ ಆಗಲೇಬೇಕು. ಒಂದುವೇಳೆ ಅಧಿಕಾರಿಗಳೇ ತಪ್ಪಿತಸ್ಥರಾಗಿದ್ದರೂ ಅವರಿಗೆ ತಕ್ಕ ಶಿಕ್ಷೆ ಆಗಲೇಬೇಕು, ಇಂಥ ಪ್ರಸಂಗಗಳನ್ನು ಹತ್ತಿಕ್ಕಲು ಮುಖ್ಯಮಂತ್ರಿಗಳು ತಮ್ಮ ವಜ್ರಮುಷ್ಟಿಯನ್ನು ಪ್ರಯೋಗ ಮಾಡಲೇಬೇಕೆಂದು ಹೇಳುತ್ತೇನೆ.

ಶ್ರೀ ಕೆ. ಎಚ್. ರಂಗನಾಥ್ (ಮೂಡಿಗೆರೆ).—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಒಂದು ಹೇಳಿಕೆಯನ್ನು ಕೊಡುವಾಗ ಒಂದು ಪ್ರಸಂಗ ಹೇಳಿದ್ದಾರೆ. ಯಾವುದೋ ಒಂದು ರಸ್ತೆಯಲ್ಲಿ ಮೆರವಣಿಗೆ ಹೋಗುತ್ತಿರುವಾಗ, ಅಲ್ಲಿ ಬಂದಾಗ ಗಲಭೆಯಾಯಿತು ಎಂದು. ನಾನು ಹೇಳುವುದು ಇವರಿಗೆ ಮೊದಲೇ ಆ ರಸ್ತೆಯಲ್ಲಿ ಗಲಭೆಯಾಗುತ್ತದೆಂಬ ಪರಿಸ್ಥಿತಿ ಕಂಡುಬಂದಿರಲಿಲ್ಲವೇ? ಆ ಜಾಗಕ್ಕೆ ಬಂದಾಗ ಗಲಭೆಯಾಗಬೇಕಾದರೆ ಅಲ್ಲಿ ಯಾವುದಾದರೂ ಹಿಂದೂ ಮತ್ತು ಮುಸಲ್ಮಾನ್ ಪಂಗಡಗಳ ಗುಂಪು ಇರಲಿಕ್ಕೆ ಬೇಕು. ಅದು ಪೋಲೀಸರಿಗೆ ತಿಳಿದಿರಲಿಲ್ಲವೇ? ಅಂತಹ ಪರಿಸ್ಥಿತಿಯನ್ನು ದೂರ ಮಾಡುವುದಕ್ಕೆ ಏನಾದರೂ ಕ್ರಮ ತೆಗೆದುಕೊಂಡಿದ್ದಾರೆಯೋ, ಇಲ್ಲವೇ ಎಂಬುವನ್ನು ವಿಚಾರಮಾಡಬೇಕು. ಅಲ್ಲಿಗೆ ಬಂದಾಗ ಗಲಭೆಯಾಗುತ್ತದೆಂಬ ಅಂಶ ಸರ್ಕಾರಕ್ಕೆ ಗೊತ್ತಿತ್ತು ಎಂಬುದಾಗಿ ನನಗೆ ತಿಳಿದು ಬಂದಿದೆ. ಇದರಲ್ಲಿ ಯಾವುದಾದರೊಂದು ಹಿತಾಸಕ್ತಿಗಳ ಪ್ರಚೋದಕ್ಕೆ ಕಾರಣವಾಗಿತ್ತು ಎಂಬುದಾಗಿ ಕಂಡು ಬಂದರೆ ತೀವ್ರವಾದ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಸರ್ಕಾರ ಕೂಡಲೇ ಪ್ರಯತ್ನಪಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

Sri M. MALLIKARJUNASWAMY (Malavalli).—Sir, of late, we have been witnessing recurrence of these communal disturbances not only in our State but also throughout the length and breadth of the Indian

(SRI M. MALLIKARJUNASWAMY)

Union. As Vice-President of the branch of National Federation of Minorities and Weaker Sections, I would like to say that after Independence and after the establishment of Panchayat Raj—let me make it clear—let alone the benefits of law, but even the protection of law is denied to minorities. Perhaps, our Leaders expect minorities to be only shock-absorbers. I wish to place my view before this august House that today the minorities are steeped in depression. That is the position of minorities today. We are a secular State and we speak of secularism and national integration. In turn, it should be social national integration. Therefore, I would say that the interests of the minorities must be protected and the Government must make it a point to go into the causes of these things. Before independence and before partition, what was the relationship that existed between the Hindus and Muslims? They were made to dread murder. Even after independence, the situation is going from bad to worse. Therefore, I plead for the proper protection of the minorities in the State.

† ಶ್ರೀ ವೀರೇಂದ್ರ ಪಾಟೀಲ್.—ಅಧ್ಯಕ್ಷರೇ, ಈ ಗಲಭೆಯಾದಾಗ ನಾನು ದೆಹಲಿಯಲ್ಲಿದ್ದೆ. ಈ ವರ್ತಮಾನ ಬಂದ ತಕ್ಷಣ ನಾನು ಹೋಂ ಸೆಕ್ರೆಟರಿಯವರಿಗೆ ಕಾಂಟ್ಯಾಕ್ಟ್ ಮಾಡಿ ಅವರು ಮತ್ತು ಐ. ಜಿ. ಪಿ. ಯವರು ತುರ್ತಾಗಿ ಹುಬ್ಬಳ್ಳಿಗೆ ಹೋಗಬೇಕೆಂದು ಹೇಳಿದೆ. ಆ ಪ್ರಕಾರ ಅವರು ಹುಬ್ಬಳ್ಳಿಗೆ ಹೋಗಿದ್ದಾರೆ. ಇನ್ನೂ ಹುಬ್ಬಳ್ಳಿಯಲ್ಲಿದ್ದಾರೆ. ನಿನ್ನೆ ನಾನು ಬಂದಮೇಲೆ ಅವರಿಗೆ ಕಾಂಟ್ಯಾಕ್ಟ್ ಮಾಡಿದೆ. ಟೆಲಿಫೋನ್ ಮುಖಾಂತರ ಮತ್ತು ವೈರ್‌ಲೆಸ್ ಮುಖಾಂತರ ಎಲ್ಲಾ ಸುದ್ದಿ ವಿವರಗಳನ್ನು ತರಿಸುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ತಿಳಿದುಕೊಂಡು ಒಬ್ಬ ಸ್ಪೆಷಲ್ ಮೆಸಂಜರ್‌ನಿಂದ ಈ ಘಟನೆಯ ಬಗ್ಗೆ ಏನೇನಾಗಿದೆಯೆಂಬುದನ್ನು ನನಗೆ ತಿಳಿಸಬೇಕೆಂದು ಹೇಳಿದೆ. ಆ ರೀತಿ ಒಬ್ಬ ಸ್ಪೆಷಲ್ ಮೆಸೆಂಜರ್ ಅಲ್ಲಿಂದ ವರದಿಯನ್ನು ತೆಗೆದುಕೊಂಡು ಬಂದಿದ್ದಾರೆ. ಅಲ್ಲಿಂದ ಬಂದಂಥ ವರದಿಯ ಆಧಾರದ ಮೇಲೆ ನಾನು ಸ್ಟೇಟ್‌ಮೆಂಟ್ ಮಾಡಿದ್ದೇನೆ. ಇನ್ನೂ ಹೆಚ್ಚು ವಿವರಗಳು ಬೇಕಾಗಿದ್ದರೆ ನಮ್ಮ ಹೋಂ ಸೆಕ್ರೆಟರಿಗಳು ಮತ್ತು ಐ. ಜಿ. ಪಿ. ಅವರು ಅಲ್ಲಿಯೇ ಇದ್ದಾರೆ ಅವರು ಬಂದಮೇಲೆ ಅವರಿಂದ ಎಲ್ಲಾ ವಿಷಯಗಳನ್ನು ತಿಳಿದುಕೊಂಡು ಅವನ್ನು ಇಲ್ಲಿ ಇಡುವುದಕ್ಕೆ ನಾನು ತಯಾರು ಇದ್ದೇನೆ.

ಆದರೆ ಈ ವಿಚಾರದಲ್ಲಿ ಒಂದು ವಿಷಯ ಪ್ರಸ್ತಾಪ ಮಾಡಬೇಕಾಗಿದೆ. ಅನೇಕ ಮಾನ್ಯ ಸದಸ್ಯರು ಹೇಳಿದ್ದಾರೆ. ನಮ್ಮ ರಾಜ್ಯದಲ್ಲಿ ಇತ್ತೀಚೆಗೆ ದುರ್ದೈವದಿಂದ ಈ ತರದ ಜಾತೀಯ ಗಲಭೆಗಳು ಆಗುವಂತಹ ಕೆಲವು ಪ್ಯಾಂಟ್ಸ್ ಇವೆ. ಇವು ವಲ್ನರೇಬಲ್ ಪ್ಯಾಂಟ್ಸ್. ಅಲ್ಲೆಲ್ಲಾ ನಾವು ಸಾಕಷ್ಟು ಜಾಗ್ರತೆ ವಹಿಸುತ್ತಿದ್ದೇವೆ. ಹುಬ್ಬಳ್ಳಿಯಲ್ಲಿ ಏನೋ ಒಂದು ದುರ್ದೈವದಿಂದ ಘಟನೆಯಾಗಿದೆ. ಅದರ ಬಗ್ಗೆ ಕಡಿಮೆ ಇಲ್ಲಿ ಚರ್ಚೆ ಮಾಡಿ, ಹೊರಗಡೆ ಪಬ್ಲಿಸಿಟಿ ಕಡಿಮೆಯಾಗುವಂತೆ ಮಾಡುವುದು ಒಳಿತು ಎಂದು ನಾನು ತಿಳಿದುಕೊಂಡಿದ್ದೇನೆ. ಆ ದೃಷ್ಟಿಯಲ್ಲಿ ನನಗೆ ಎಷ್ಟು ವಿವರ ಬಂದಿದೆ, ಆ ಆಧಾರದ ಮೇಲೆ ನಾನು ಒಂದು ಸ್ಟೇಟ್‌ಮೆಂಟ್ ಮಾಡಿದ್ದೇನೆ. ಅಲ್ಲಿಂದ, ಒಂದು ಗಲಭೆ ಮಾಡುವುದರಲ್ಲಿ ಯಾವುದಾದರೂ ಪಕ್ಷಗಳ ಕೈವಾಡ ಇದೆಯೇ ಮತ್ತು ಪೂರ್ವಭಾವಿಯಾಗಿ ಏನಾದರೂ ಸಿದ್ಧತೆಗಳು ಆಗಿದ್ದವೋ ಮತ್ತು ಆ ತರಹ ವರ್ತಮಾನ ಸರ್ಕಾರಕ್ಕೆ ಇದ್ದರೆ, ಸಂಬಂಧಪಟ್ಟ ಅಧಿಕಾರಿಗಳು ಏಕೆ ಯೋಗ್ಯವಾದ ಕಾರ್ಯಕ್ರಮವನ್ನು ತೆಗೆದುಕೊಂಡಿಲ್ಲವೆಂದು ಕೆಲವು ಮಾನ್ಯ ಸದಸ್ಯರು ಕೇಳಿದ್ದಾರೆ. ಇದರ ಹಿಂದೆ ಯಾವ ಪಕ್ಷಗಳು ಇದ್ದವು ಮತ್ತು ಪೂರ್ವಭಾವಿಯಾಗಿ ಸಿದ್ಧತೆಗಳನ್ನು ಮಾಡಿದ್ದರೋ ಎನ್ನುವುದನ್ನು ಈಗ ಹೇಳುವುದು ಕಷ್ಟ. ಇದಕ್ಕಾಗಿ ನಮ್ಮ ಅಧಿಕಾರಿಗಳು ಇನ್ನೂ ಅಲ್ಲಿಯೇ ಇದ್ದಾರೆ. ಅವರು ಬಂದ ಮೇಲೆ, ಅವರ ಜೊತೆಯಲ್ಲಿ ಚರ್ಚೆ ಮಾಡಿದ ಮೇಲೆ ನಮಗೆ ಹೆಚ್ಚಿನ ವಿವರ ಗೊತ್ತಾಗಬಹುದು. ಆಗ ಈ ಮಾನ್ಯ ಸಭೆಯ ಮುಂದೆ ಅದನ್ನು ಇಡಬೇಕಾದ ಅವಶ್ಯಕತೆ ಇದ್ದರೆ, ಅದನ್ನು ಇಡುವುದಕ್ಕೆ ನಾನು ಹಿಂದು ಮುಂದು ನೋಡುವುದಿಲ್ಲ. ನಾನು ಇಷ್ಟು ಮಾತ್ರ ಹೇಳುತ್ತೇನೆ. ಪೋಲೀಸಿನವರಿಗೆ ಈ ರೀತಿ ಪೂರ್ವಭಾವಿಯಾಗಿ ಸಿದ್ಧತೆಯಾಗಿದೆ ಎನ್ನುವುದು ಗೊತ್ತಿಲ್ಲ. ಏಕೆಂದರೆ, ಈಗ ಎಲ್ಲಿ ಘಟನೆಗಳು ನಡೆದಿವೆ, ಅಲ್ಲಿ ಮಾನ್ಯ ಸದಸ್ಯರಿಗೆಲ್ಲಾ ಗೊತ್ತಿದೆ, ಪ್ರತಿವರ್ಷ ಅದೇ ಸ್ಥಳದಲ್ಲಿ ಗಲಾಟೆಯಾಗುತ್ತಿದೆ.

ಆ ಓಣಿಯಲ್ಲಿ ಒಂದು ಕಡೆ ಬಾಜುನಲ್ಲಿ ಒಂದು ಜಾತಿ ಜನ, ಇನ್ನೊಂದು ಬಾಜುನಲ್ಲಿ ಇನ್ನೊಂದು ಜಾತಿ ಜನ ಇದ್ದಾರೆ. ಅದಕ್ಕಾಗಿ ಮೊದಲೇ ಏನಾದರೂ ತಯಾರಿ ಬೇಕೆಂದು ಹೇಳುವ ಅವಶ್ಯಕತೆ ಇಲ್ಲ. ನಾನು ಹೇಳುವುದು ಮೆರವಣಿಗೆ ಹೊರಟಿತು, ಅದನ್ನು ನಿಲ್ಲಿಸಿದ ಕೂಡಲೇ ಜಗಳ ಪ್ರಾರಂಭ ವಾಗಿ ಅವರ ಮೇಲೆ ಇವರು ಕಲ್ಲು ತೂರಿದರು, ಇವರ ಮೇಲೆ ಅವರು ಕಲ್ಲು ತೂರಿದರು. ಆ ರೀತಿ ಒಂದು ಗಲಾಟೆಯಾಯಿತು. ಆ ರೀತಿ ಗಲಾಟೆಯಾದಾಗ ಅದರ ಲಾಭ ಪಡೆದುಕೊಳ್ಳುವುದಕ್ಕೆ ಕೆಲವು ಸಮಾಜ ದ್ರೋಹಿಗಳು ತಯಾರಾಗಿರುತ್ತಾರೆ. ಎಲ್ಲಿ ಗಲಾಟೆಯಾಯಿತು, ಅಲ್ಲಿ ತಮ್ಮ ಕಾರ್ಯಕ್ರಮವನ್ನು ಪ್ರಾರಂಭ ಮಾಡುತ್ತಾರೆ. ಆ ರೀತಿ ಒಂದು ಸಮಾಜದ್ರೋಹಿಗಳ ಕೈವಾಡ ದಿಂದ ಇಂಥ ದುರ್ದೈವಕರವಾದ ಘಟನೆಗಳು ನಡೆಯುತ್ತಿವೆ. ಈಗಾಗಲೇ ಪೋಲೀಸರು 50 ಕೇಸ್ ರಿಜಿಸ್ಟರ್ ಮಾಡಿದ್ದಾರೆ. ಸುಮಾರು 125 ಜನಗಳನ್ನು, ಸಮಾಜಘಾತುಕ ಕಾರ್ಯಗಳಲ್ಲಿ ತೊಡಗಿದ್ದವರನ್ನು ಅರೆಸ್ಟ್ ಮಾಡಿದ್ದಾರೆ. ಅದರೊಂದಿಗೆ ಅಲ್ಲಿನ ಪೀಸ್ ಕಮಿಟಿಯವರು ಪೋಲೀಸರಿಗೆ ಸಾಕಷ್ಟು ಸಹಕಾರ ನೀಡುತ್ತಿದ್ದಾರೆ. ಇದಾದ ಮೇಲೆ ಮನೆಯನ್ನು ಸುಡುವಂತಹ ಒಂದು ಸಣ್ಣ ಘಟನೆಯಾದ ಮೇಲೆ ಮತ್ತೆ ಏನೂ ಆಗಿಲ್ಲ. ಅವರಿಗೆ ಪರಿಹಾರ ಕೊಡುವುದರ ಬಗ್ಗೆ ನನಗೆ ಏನೂ ಗೊತ್ತಿಲ್ಲ. ಎಷ್ಟೋ ಸಾವಿರ ಹಾನಿಯಾಗಿದೆ ಎಂದು ಹೇಳಿದ್ದಾರೆ. ಅದನ್ನು ನನ್ನ ಸ್ಟೇಟ್‌ಮೆಂಟಿನಲ್ಲಿ ಹೇಳಿದ್ದೇನೆ. ನಮ್ಮ ಅಧಿಕಾರಿಗಳು ಅಲ್ಲಿಂದ ಬಂದ ಮೇಲೆ ಎಷ್ಟು ಮಟ್ಟಿಗೆ ಪರಿಹಾರ ಸಾಧ್ಯವಾಗುತ್ತದೆಂಬುದನ್ನು ವಿಚಾರ ಮಾಡಿ, ಅಷ್ಟು ಮಟ್ಟಿಗೆ ಪರಿಹಾರವನ್ನು ಒದಗಿಸು ವುದಕ್ಕೆ ಪ್ರಯತ್ನ ಮಾಡುತ್ತೇನೆ ಎಂದು ಹೇಳುತ್ತೇನೆ.

ಮೂರನೆಯದಾಗಿ, ನ್ಯಾಯಾಂಗ ವಿಚಾರಣೆ ಆಗಬೇಕೆಂದು ಹೇಳಿದ್ದಾರೆ. ಆ ರೀತಿ ಮಾಡು ವುದು ಅವಶ್ಯವಿಲ್ಲವೆಂದು ಕಾಣುತ್ತದೆ. ಗಲಾಟೆಗಳು ಆಗತಕ್ಕದ್ದು ಲೂಟಿ ಆಗತಕ್ಕದ್ದು ಆರ್ಸನ್ ಮಾಡುವುದು ಇಂಥದ್ದಕ್ಕೆಲ್ಲ ಈಗ ಕೇಸುಗಳನ್ನು ರಿಜಿಸ್ಟರ್ ಮಾಡಿದ್ದಾರೆ. ಮುಂದೆ ಇವು ಇನ್‌ವೆಸ್ಟಿ ಗೇಷನ್ ಆದ ಮೇಲೆ ಚಾರ್ಜ್‌ಷೀಟು ವಗೈರೆ ಮಾಡಿದ ನಂತರ ಅದು ಕೋರ್ಟಿಗೆ ಹೋಗುತ್ತದೆ. ಕೋರ್ಟಿನಲ್ಲಿ ಪೂರ್ತಿ ಎಲ್ಲಾ ವಿಚಾರಗಳೂ ಬರುತ್ತವೆ ಎಂದು ನಾನು ತಿಳಿದುಕೊಂಡಿದ್ದೇನೆ. ಆದರೆ ಇದಕ್ಕೆ ಜುಡಿಷಿಯಲ್ ಎನ್‌ಕ್ವೈರಿ ಮಾಡುವ ಅವಶ್ಯಕತೆ ಇಲ್ಲ ಎಂದು ನಾನು ತಿಳಿದುಕೊಂಡಿ ದ್ದೇನೆ. ಹುಬ್ಬಳ್ಳಿಯಲ್ಲಿ ಪ್ಯೂನಿಟೀವ್ ಟ್ಯಾಕ್ಸ್ ಹಾಕಬೇಕೆಂದು ಮಾನ್ಯ ಸದಸ್ಯರು ಹೇಳಿದರು. ಪ್ಯೂನಿಟೀವ್ ಟ್ಯಾಕ್ಸ್ ಹಾಕಬೇಕಾದರೆ ಕೆಲವೊಂದು ಕಾನೂನುಗಳು ಇರುತ್ತವೆ. ಎಲ್ಲೋ ಗಲಭೆಗಳು ಆದರೆ ಎಲ್ಲಾ ಕಡೆಗಳಲ್ಲಿಯೂ ಪ್ಯೂನಿಟೀವ್ ಟ್ಯಾಕ್ಸ ಹಾಕುವುದಕ್ಕಾಗುವುದಿಲ್ಲ. ಕೆಲವು ಜನ ಮೊಹಲ್ಲಾದಲ್ಲಿ ಆ ರೀತಿ ಗಲಭೆಗಳನ್ನು ಮಾಡುತ್ತಿದ್ದಾರೆಂದು ಗೊತ್ತಾಗಿದೆ. ಬಹುಶಃ ಇದರ ಬಗ್ಗೆ ವಿಚಾರ ಮಾಡುವುದಕ್ಕೆ ಏನೂ ಅಡ್ಡಿ ಇಲ್ಲ. ಇವೊತ್ತಿನ ದಿವಸ ಅಲ್ಲಿ ಪ್ಯೂನಿಟೀವ್ ಟ್ಯಾಕ್ಸ್ ಹಾಕುವ ಪರಿಸ್ಥಿತಿ ಇಲ್ಲ. ಕೊನೆಯದಾಗಿ ನಾನು ಎಲ್ಲಾ ಮಾನ್ಯ ಸದಸ್ಯರಲ್ಲಿಯೂ ನಮ್ರತೆಯಿಂದ ಅರಿಕೆ ಮಾಡಿಕೊಳ್ಳುತ್ತೇನೆ, ಈ ತರಹ ಗಲಭೆಗಳು ಒಂದೊಂದು ಸಲ ಬೆಂಕಿ ಯಾವ ರೀತಿ ಹರಡುತ್ತ ದೆಯೋ ಆ ರೀತಿ ಹರಡುವುದಕ್ಕೆ ಸಾಧ್ಯವಾಗುತ್ತದೆ. ಈ ದೃಷ್ಟಿಯಿಂದ ಇಂಥಾ ಗಲಭೆಗಳು ವಿಸ್ತರಿಸದಿರಲು ಎಲ್ಲಾ ರೀತಿಯ ಕ್ರಮವನ್ನು ನಾವು ಮಾಡುತ್ತೇವೆ. ಈ ಮನೆಯ ಎಲ್ಲಾ ಸದಸ್ಯರೂ ಇದಕ್ಕೆ ಸಹಕಾರವನ್ನು ನೀಡಬೇಕೆಂದು ನಾನು ಕಳಕಳಿಯಿಂದ ಕೇಳುತ್ತೇನೆ.

MR. SPEAKER.—In view of the statement and clarifications given by the Hon. Chief Minister I want to know whether the Hon. Members will press their calling attention notices and adjournment motions?

SRI K. H. PATIL.—The Chief Minister has stated that he has asked the office to get full particulars. I think it is better for us to wait for those particulars and take this up after it comes.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಮುಖ್ಯ ಮಂತ್ರಿಗಳು ಹೆಚ್ಚಿನ ವಿವರಗಳನ್ನು ತರಿಸಿ ಕೊಡುತ್ತೇವೆಂದು ಹೇಳಿದ್ದಾರೆ. ಆ ಪಟ್ಟಿಯನ್ನು ತಮ್ಮ ಮುಂದಿಡುತ್ತೇವೆಂದು ಹೇಳಿದ್ದಾರೆ. ಅದು ಬಂದನಂತರ ಅವಕಾಶವನ್ನು ಕೊಡಬೇಕು. ಆ ವಿವರಗಳು ಬಂದನಂತರ ಅದನ್ನು ಮಾನ್ಯ ಮುಖ್ಯ ಮಂತ್ರಿಗಳು ಸಭೆಯ ಮುಂದೆ ಇಟ್ಟರೆ ಆಗ ಅಡ್ಜರ್ನ್‌ಮೆಂಟ್ ಮೋಷನ್ ಪ್ರೆಸ್ ಮಾಡುವ ಅವಶ್ಯಕತೆ ಇಲ್ಲ.

MR. SPEAKER.—On the 12th instant when the Police Demand comes, before the House Hon. Members will have ample opportunities to discuss this matter. But as suggested by the Hon. Chief Minister, it is better to act with a sense of restraint and to see that nothing is added to the tension already existing.

ಶ್ರೀ ಎಂ. ನಾಗಪ್ಪ.—ಅಂಥ ಪರಿಸ್ಥಿತಿ ಬಂದರೆ ಈ ಸಭೆಯನ್ನು ಶೀಘ್ರವಾಗಿ ಕರೆದು ನಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವುದಕ್ಕೆ ಸಾಧ್ಯವಿರುತ್ತದೆ. ಆದ್ದರಿಂದ ಈ ಮಾನ್ಯ ಸಭೆಯ ಸದಸ್ಯರಿಗೆ ವಾಸ್ತವಿಕವಾದ ಅಂಶಗಳನ್ನು ಒದಗಿಸಬೇಕು ಎಂದು ನಾನು ತಮ್ಮ ಮೂಲಕ ಮಾನ್ಯ ಮುಖ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಬೋಳಾ ರಘುರಾಮಶೆಟ್ಟಿ.—ಜುಡಿಷಿಯಲ್ ಎನ್‌ಕ್ವೈರಿ ಮಾಡುವುದಿಲ್ಲ. ಕೋರ್ಟಿನಲ್ಲಿ ಮ್ಯಾಜಿಸ್ಟ್ರೇಟರು ಎನ್‌ಕ್ವೈರಿ ಮಾಡುತ್ತಾರೆ ಎಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು. ಯಾವ ಎನ್‌ಕ್ವೈರಿ ಮಾಡುವುದಾದರೂ ಕೂಡಲೇ ಅದನ್ನು ಮಾಡಬೇಕೆಂದು ಸರ್ಕಾರದವರು ಒಂದು ಆರ್ಡರ್ ಮಾಡಬೇಕು.

ಶ್ರೀ ಎಂ. ಎಸ್. ಕೃಷ್ಣನ್.—ಸ್ವಾಮಿ ಪೋಲೀಸ್ ಡಿಮ್ಯಾಂಡು ಬಂದಾಗ ಈ ವಿಷಯವನ್ನು ಮಾತನಾಡಬಹುದು ಎಂದು ತಾವು ಹೇಳಿದಿರಿ, ಪೋಲೀಸ್ ಡಿಮ್ಯಾಂಡು ಬಂದಾಗ ಹಲವಾರು ವಿಷಯಗಳನ್ನು ಮಾತನಾಡಬೇಕಾಗುತ್ತದೆ. ಆಗ ಈ ಪಾಯಿಂಟ್ಸ್ ಹೇಳುವುದಕ್ಕಾಗುವುದಿಲ್ಲ. ಈಗ ಬಂದಿರತಕ್ಕ ಅಡ್ಜರ್ನ್‌ಮೆಂಟ್ ಮೋಷನ್ ಅನ್ನು ಪೆಂಡಿಂಗ್ ಇಟ್ಟರೆ ಚೀಫ್ ಮಿನಿಸ್ಟರ್ ಹೇಳುವ ಒಪೀನಿಯನ್ ತೆಗೆದುಕೊಳ್ಳಬೇಕೇ ಬೇಡವೇ ಎಂಬುದನ್ನು ನೋಡೋಣ.

Mr. SPEAKER.—In view of the fact that plenty of opportunity is available and in view of the clarification and the statement made by the Chief Minister, I withhold my consent to the adjournment motions.

Statement of the Chief Minister *re* : the Mahajan Commission Report on Border Issues

†ಶ್ರೀ ಎಸ್. ಶಿವಪ್ಪ.—ಅಧ್ಯಕ್ಷರೇ, ನಾವು ಒಂದು ವಿಷಯವನ್ನು ಮುಖ್ಯವಾಗಿ ಪ್ರಸ್ತಾಪ ಮಾಡಬೇಕಾಗಿದೆ. ಮಾನ್ಯ ಮುಖ್ಯ ಮಂತ್ರಿಗಳು ಈ ರಾಜ್ಯದ ಬಹಳ ಪ್ರಾಮುಖ್ಯವಾದಂತಹ ವಿಷಯಗಳನ್ನು ಚರ್ಚೆ ಮಾಡಲು ದೆಹಲಿಗೆ ಹೋಗಿದ್ದರು. ಇವರು ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸದಸ್ಯರಾಗಿ ಹೋಗಿದ್ದರೋ ಅಥವಾ ರಾಜ್ಯದ ಮುಖ್ಯ ಮಂತ್ರಿಗಳಾಗಿ ಹೋಗಿದ್ದರೋ ಎಂಬುದು ಗೊತ್ತಿಲ್ಲ. ಮಹಾಜನ್ ವರದಿಯನ್ನು ಚರ್ಚೆ ಮಾಡಿದರೋ ಅಥವಾ ಮುಂದಕ್ಕೆ ಹಾಕಿದರೋ ಎಂಬುದು ಸರಿಯಾಗಿ ನಮಗೆ ಗೊತ್ತಿಲ್ಲ. ಕಾಂಗ್ರೆಸ್ ಅಧ್ಯಕ್ಷರು ಕರೆದರು ಎಂಬುದಾಗಿ ಇವರು ಹೋದರು. ಅಲ್ಲಿ ಮಹಾರಾಷ್ಟ್ರದ ಮುಖ್ಯಮಂತ್ರಿಗಳು ಮತ್ತು ಇವರು ಒಂದು ಕಡೆ ಸೇರಿ ಯಾವುದನ್ನು ಚರ್ಚೆ ಮಾಡದೆ ಪುನಃ ವಾಪಸ್ ಬಂದಿರುವುದು ನೋಡಿದರೆ ಜನರ ಮನಸ್ಸನ್ನು ಬೇರೆ ಕಡೆಗೆ ತಿರುಗಿಸುವುದಕ್ಕೆ ಇರಬಹುದೆಂದು ಕಾಣುತ್ತದೆ. ಮಹಾಜನ್ ವರದಿಯ ಬಗ್ಗೆ ನಿಜವಾಗಿಯೂ ಒಂದು ಧೃಡವಾದ ನಿರ್ಧಾರವನ್ನು ಕಾಂಗ್ರೆಸ್ ಅಧ್ಯಕ್ಷರು ಮತ್ತು ಸಂಬಂಧಪಟ್ಟ ರಾಜ್ಯಗಳ ಮುಖ್ಯಮಂತ್ರಿಗಳು ಕೈಗೊಂಡಿದ್ದರೆ ನಾನು ಸಂತೋಷ ಪಡುತ್ತಿದ್ದೆ. ಪತ್ರಿಕೆಗಳಲ್ಲಿ ಸರಿಯಾದ ವಿಚಾರಗಳು ಈ ಬಗ್ಗೆ ಬಂದಿಲ್ಲ. ಆದ್ದರಿಂದ ಮಾನ್ಯ ಮುಖ್ಯ ಮಂತ್ರಿಗಳು ದೆಹಲಿಗೆ ಹೋಗಿದ್ದು ಏನಾಯಿತು, ಏನು ಮಾಡಿಕೊಂಡು ಬಂದರು ಮತ್ತು ಅವರು ಮಾಡಿಕೊಂಡು ಬಂದ ಕಾರ್ಯವನ್ನು ಹೇಳಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಮಹಾಜನ್ ವರದಿಯ ಬಗ್ಗೆ ತೀರ್ಮಾನ ಕೈಗೊಳ್ಳುವ ಬಗ್ಗೆ ಅನಿರ್ದಿಷ್ಟ ಕಾಲ ಮುಂದಕ್ಕೆ ಹಾಕಲಾಗಿದೆ ಎಂದು ಪತ್ರಿಕೆಗಳಲ್ಲಿ ಬಂದಿದೆ, ಅದನ್ನು ನಾವು ಓದಿದ್ದೇವೆ. ಆದರೆ ಮುಖ್ಯಮಂತ್ರಿಗಳು ಈ ವಿಷಯವನ್ನು ಏಪ್ರಿಲ್ ತಿಂಗಳಲ್ಲಿ ಮತ್ತೆ ತೆಗೆದುಕೊಳ್ಳಬಹುದು ಎಂದು ಹೇಳಿದ್ದಾರೆ. ಮಹಾಜನ್ ವರದಿಯನ್ನು ಲಘುವಾಗಿ ಕಾಣುವ ಪರಿಸ್ಥಿತಿಗೆ ಬಂದಿದೆ. ಈ ಬಗ್ಗೆ ನಮ್ಮ ಸ್ಪಷ್ಟ ನಿಲುವು ಇದ್ದೇ ಇದೆ ಎಂದು ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಇದು ಯಾವಾಗ ಕಾರ್ಯರೂಪಕ್ಕೆ ಬರುತ್ತದೆ? ಈಗ ಮುಖ್ಯ ಮಂತ್ರಿಗಳು ದೆಹಲಿಗೆ ಹೋಗಿ ಕಾಂಗ್ರೆಸ್ ಅಧ್ಯಕ್ಷರ ಮುಖವನ್ನು ನೋಡಿಕೊಂಡು ಬಂದರೆಂದು ಕಾಣುತ್ತದೆ. ಮಾನ್ಯ ಮುಖ್ಯ ಮಂತ್ರಿಗಳು ಈ ವರದಿಯ ಬಗ್ಗೆ ಸ್ಪಷ್ಟವಾದ ಹೇಳಿಕೆ ಕೊಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಮುಖ್ಯಮಂತ್ರಿಗಳು ಮತ್ತು ವಿ. ಪಿ. ನಾಯಕರು ಒಟ್ಟಿಗೆ ಕಾರಿನಲ್ಲಿ ಹೋದರು ಮತ್ತು ಇಬ್ಬರು ಮುಖ್ಯಮಂತ್ರಿಗಳೂ ಮಾತನಾಡಿದರು ಎಂಬುದಾಗಿ

ಪತ್ರಿಕೆಗಳಲ್ಲಿ ಬಂದಿದೆ. ಕಾಂಗ್ರೆಸ್ ವರ್ಕಿಂಗ್ ಕಮಿಟಿಯಲ್ಲಿ ಏನು ನಡೆಯಿತು ಎಂಬುದು ನಮಗೆ ಗೊತ್ತಿಲ್ಲ. ಇಬ್ಬರು ಮುಖ್ಯಮಂತ್ರಿಗಳು 'ಕಾರಿನಲ್ಲಿ ಹೋಗಿ ಚಾ ಕುಡಿದು ಈ ವಿಷಯವನ್ನು ಕೈಬಿಟ್ಟಿರಬಹುದೆಂದು ನಮಗೆ ಸಂಶಯ ಬಂದಿದೆ. ಮತ್ತು ಆ ಸಭೆಗೆ ಇಂದಿರಾಗಾಂಧಿಯವರು ಬಂದಿರಲಿಲ್ಲವೆಂಬ ಬಗ್ಗೆಯೂ ಕೂಡ ಸಂಶಯಕ್ಕೆ ಅಸ್ಪದವಾಗಿದೆ ಆದಕಾರಣ ಮಾನ್ಯ ಮುಖ್ಯ ಮಂತ್ರಿಗಳು ಈ ಬಗ್ಗೆ ಸ್ಪಷ್ಟವಾದ ನಿಲುವು ಏನು ಎಂಬುದನ್ನು ಹೇಳಬೇಕು.

Sri B. P. GANGADHAR.—It is stated that the Chief Minister had a talk with the Prime Minister apart from the Congress President and others. He knows that this House has passed a Resolution and he also knows the sentiments of this House. We would like to know whether he had a talk with the Prime Minister in this matter and if so, what is the result of it.

Sri B. B. SAYANAK.—May I know whether the Chief Minister was late in attending the Working Committee meeting ?

ಶ್ರೀ ವೀರೇಂದ್ರ ಪಾಟೀಲ್.—ಅಧ್ಯಕ್ಷರೇ, ಮಾನ್ಯ ಸದಸ್ಯರಿಗೆ ಗೊತ್ತಿದೆ; ಯಾವ ಉದ್ದೇಶಕ್ಕಾಗಿ ನಾನು ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಮೀಟಿಂಗ್ ಅಟೆಂಡ್ ಮಾಡುವುದಕ್ಕೆ ಹೋಗಿದ್ದೆ ಎಂಬುದು. ಕಾಂಗ್ರೆಸ್ ವರ್ಕಿಂಟ್ ಕಮಿಟಿಯಲ್ಲಿ ಪ್ರಧಾನ ಮಂತ್ರಿಗಳು ಸಹ ಸದಸ್ಯರಾಗಿದ್ದಾರೆ. ಅವರು ಅಟೆಂಡ್. ಮಾಡುತ್ತಾರೆ. ಮಹಾಜನ್ ಕಮಿಷನ್ನನ್ನು ಅಪಾಯಿಂಟ್ ಮಾಡುವುದಕ್ಕೆ ಮೊದಲು ಅದೇ ವರ್ಕಿಂಗ್ ಕಮಿಟಿಯಲ್ಲಿರುವವರೇ ಈ ಗಡಿ ಜಗಳವನ್ನು ತೀರ್ಮಾನ ಮಾಡಲು ಒಂದು ಆಯೋಗಕ್ಕೆ ಒಪ್ಪಿಸಬೇಕೆಂದು ನಿರ್ಣಯ ಮಾಡಿದರು. ಬಹುಶಃ ಆ ನಿರ್ಣಯ ಮಾಡಿಲ್ಲದೇ ಹೋಗಿದ್ದರೆ ಕೇಂದ್ರ ಸರಕಾರದವರು ಆ ಆಯೋಗವನ್ನು ಮಾಡುತ್ತಿರಲಿಲ್ಲವೇನೋ ಎಂದು ನನಗನಿಸುತ್ತದೆ. ಇದಕ್ಕಾಗಿ ಇದು ಮತ್ತೆ ವರ್ಕಿಂಗ್ ಕಮಿಟಿ ಮುಂದೆ ಚರ್ಚೆಗೆ ಬಂದಿರತಕ್ಕದ್ದು ಸ್ವಾಭಾವಿಕ. ವರ್ಕಿಂಗ್ ಕಮಿಟಿ ಮುಂದೆ ಚರ್ಚೆಗೆ ಬಂದಾಗ ಇದಕ್ಕೆ ಕಾರಣವೇನು ಮತ್ತು ಯಾವ ರೀತಿಯಾದ ಕಾರ್ಯಕ್ರಮ ತೆಗೆದುಕೊಳ್ಳಬೇಕು ಎನ್ನುವುದನ್ನು ಅಲ್ಲಿ ಕೂಲಂಕಷವಾಗಿ ವಿಚಾರ ಮಾಡುತ್ತಾರೆ ಎಂದಿತ್ತು. ಆ ವೇಳೆಗೆ ನಮ್ಮ ರಾಜ್ಯದ ಹಿತದೃಷ್ಟಿಯಿಂದ ಮಹಜನ್ ಕಮಿಷನ್ ರಿಪೋರ್ಟಿನ ಬಗ್ಗೆ ಯಾವ ರೀತಿಯ ಕಾರ್ಯಕ್ರಮ ತೆಗೆದುಕೊಳ್ಳಬೇಕು ಎಂದು ಹೇಳುವುದು ನನ್ನ ಕರ್ತವ್ಯವಾಗಿದೆ. ಇದಕ್ಕಾಗಿ ನಾನು ವರ್ಕಿಂಗ್ ಕಮಿಟಿ ಕೆಲಸಕ್ಕಾಗಿ ಹೋಗಿದ್ದೆ ಎಂದು ತಿಳಿಯಬಾರದು. ವರ್ಕಿಂಗು ಕಮಿಟಿಯಲ್ಲಿ ನಾನು ಒಬ್ಬ ಸದಸ್ಯನಾಗಿರಬಹುದು, ಇದರಂತೆ ನಮ್ಮ ಪ್ರೈಂ ಮಿನಿಸ್ಟರೂ ಸದಸ್ಯರಾಗಿದ್ದಾರೆ, ಡೆಪ್ಯುಟಿ ಪ್ರೈಂ ಮಿನಿಸ್ಟರೂ ಇದ್ದಾರೆ, ವೈ. ಬಿ. ಚವಾಣರೂ ಇದ್ದಾರೆ, ಇವರೆಲ್ಲರೂ ಇರುವಾಗಲೇ ಇದರ ಚರ್ಚೆಯಾಗಬೇಕು ಎಂದು ಕಾರ್ಯಕ್ರಮ ಏರ್ಪಾಟಾಗಿತ್ತು. ನಾವು ಕೂಡ ಹೋಗಿ ಹೇಳುವುದು ನಮ್ಮ ಜವಾಬುದಾರಿಯೂ ಆಗಿದೆ.

ಶ್ರೀ ಎಂ. ನಾಗಪ್ಪ.—ಶ್ರೀ ನಂಬೂದರಿಪಾದ್‌ರು ಅಲ್ಲಿಗೇಕೆ ಬರಲಿಲ್ಲ. ಅವರ ರಾಜ್ಯದ ಬಗ್ಗೆ ಕೂಡ ಇದರಲ್ಲಿತ್ತು ?

ಶ್ರೀ ವೀರೇಂದ್ರ ಪಾಟೀಲ್.—ನಂಬೂದರಿ ಪಾದ್‌ರವರು ವರ್ಕಿಂಗ್ ಕಮಿಟಿ ಸದಸ್ಯರಲ್ಲ. ಅವರನ್ನು ಕರೆಯುವ ಅವಶ್ಯಕತೆಯೂ ಇಲ್ಲ. ಮುಂದೆ ಏನಾದರೂ ಸಿ.ಪಿ.ಎಂ. ಸರಕಾರ ಬಹುಶಃ ಬಂದರೆ ಆಗ ಆ ಸರಕಾರದವರು ಶ್ರೀ ನಂಬೂದರಿಪಾದ್‌ರವರನ್ನು ಕರೆಯಬಹುದು ಮತ್ತು ವರ್ಕಿಂಗ್ ಕಮಿಟಿ ಎಂದು ಅವರು ಕರೆದಾಗ ಬರಬಹುದು. ಅದುದರಿಂದ ಅವರನ್ನು ಕರೆಯದೇ ಇರುವುದು ತಪ್ಪು ಎಂದು ನನಗೆ ಕಾಣುವುದಿಲ್ಲ. ಹೀಗೆ ಅಂದು ವರ್ಕಿಂಗು ಕಮಿಟಿ ಸೇರಿದಾಗ ಅಲ್ಲಿಗೆ ಪ್ರಧಾನ ಮಂತ್ರಿಗಳಾದ ಶ್ರೀಮತಿ ಇಂಧಿರಾ ಗಾಂಧಿಯವರು ಅವರ ದೇಹ ಸ್ವಾಸ್ತ್ಯ ಸರಿಯಾಗಿರಲಿಲ್ಲ ಎಂದು ಸಭೆಗೆ ಬರಲಿಲ್ಲ. ಇದರಿಂದ ಅಲ್ಲಿದ್ದ ಅನೇಕ ಜನ ಮಾನ್ಯ ಸದಸ್ಯರುಗಳು ಪ್ರಧಾನ ಮಂತ್ರಿಗಳು ಇಲ್ಲದೆ ಇಂತಹ ಮುಖ್ಯ ವಿಷಯಗಳನ್ನು ಚರ್ಚೆ ಮಾಡುವುದು ಸಮಂಜಸವಲ್ಲ ಎಂದು ಇದರ ವಿಚಾರವನ್ನು ಮುಂದೂಡಬೇಕೆಂದೂ ಕೇಳಿದರು. ಇದರಿಂದಾಗಿ ಇದರ ಮೇಲೆ ಯಾವ ಚರ್ಚೆಯೂ ಆಗಲಿಲ್ಲ. ಮತ್ತು ಇಲ್ಲಿ ಕೆಲವು ಮಾನ್ಯ ಸದಸ್ಯರು ನಾನೂ ಹಾಗೂ ಮಹಾರಾಷ್ಟ್ರದ ಮುಖ್ಯ ಮಂತ್ರಿಗಳಾದ ಶ್ರೀ ವಿ. ಪಿ. ನಾಯಕ್ ಅವರೂ ಕೂಡಿಕೊಂಡು ಒಟ್ಟಿಗೆ ಕಾರಿನಲ್ಲಿ ಹೋದೆವು ಎನ್ನುವುದರ ಬಗ್ಗೆ ಕೇಳಿದರು. ನಾನೂ ಶ್ರೀಮಾನ್ ನಾಯಕ್‌ರವರೂ ಒಟ್ಟಿಗೆ ಕೂಡಿ ಏನೋ ಹೋದೆವು. ಆದರೆ ಇದರ ವಿಚಾರ ಬಿಟ್ಟು ಅವರಲ್ಲಿ ಇನ್ನು ಬೇರೆ ನಮ್ಮ ರಾಜ್ಯಗಳ ಹಾಗೂ ಅವರ ರಾಜ್ಯಗಳ ಬಗ್ಗೆ ಪ್ರಸ್ತಾಪ ಮಾಡಿದೆವು. ಇದರ ಬಗ್ಗೆ ಅವರೂ ಪ್ರಸ್ತಾಪ ಮಾಡಲಿಲ್ಲ ನಾನೂ ಕೂಡ ಪ್ರಸ್ತಾಪ

(ಶ್ರೀ ವೀರೇಂದ್ರ ಪಾಟೀಲ್)

ಮಾಡಲಿಲ್ಲ. ಅಲ್ಲದೆ ನಾನು ಇಂದು ಇಲ್ಲಿಗೆ ಬರಬೇಕೆಂದಿದ್ದೆ. ಆದರೆ ನಿನ್ನೆಯೇ ಬರುವ ಮನಸ್ಸಾಯಿತು. ಏಕೆಂದರೆ ಹುಬ್ಬಳ್ಳಿಯಲ್ಲಿ ಆದ ಗಲಭೆಗಳ ವಿಚಾರ ತಿಳಿಯಿತು. ಮತ್ತು ನಮ್ಮ ಹೋಂ ಸೆಕ್ರೆಟರಿಯವರು ಅಲ್ಲಿಗೆ ಹೋದ ಮೇಲೆ ಅಲ್ಲಿ ನಡೆದ ಗಲಭೆಗಳ ಬಗ್ಗೆ ಬೇಕಾದಷ್ಟು ವಿಚಾರಗಳನ್ನು ಚರ್ಚೆ ಮಾಡುವುದು ಅವಶ್ಯ ಎಂದು ನನಗೂ ತಿಳಿದು ಬಂತು. ಇದರಿಂದ ನಿನ್ನೆಯೇ ಪ್ರವಾಸದಿಂದ ಹಿಂದಿರುಗಿ ಬಂದಾಗ ಅವರು ನನಗೆ ಎಲ್ಲ ವಿಚಾರಗಳನ್ನು ತಕ್ಷಣ ತಿಳಿಸಿದರು. ಮತ್ತು ನಾನು ಮಹಾರಾಷ್ಟ್ರದ ಮುಖ್ಯ ಮಂತ್ರಿಗಳೊಡನೆ ಇದ್ದಾಗ ಮೊನ್ನೆ ಬೊಂಬಾಯಿನಲ್ಲಿ ನಡೆದ ಗಲಭೆಗಳ ಬಗ್ಗೆ ಅಲ್ಲಿ ನೊಂದವರಿಗೆ ಪರಿಹಾರಗಳನ್ನು ಕೊಡಬೇಕು ಎಂದು ಅವರೊಡನೆ ಪ್ರಸ್ತಾಪ ಮಾಡಿ ಬಂದೆ, ಆದರೆ ಮಹಾಜನ್ ವರದಿ ಬಗ್ಗೆ ಯಾವುದೂ ಸ್ಪಷ್ಟವಾಗಿ ಮಾತಾಡಿಲ್ಲ ಎನ್ನುವುದು ಈಗಾಗಲೇ ತಮಗೆಲ್ಲಾ ಗೊತ್ತಾಗಿದೆ ಮತ್ತು ಮಹಾಜನ್ ಆಯೋಗದ ವರದಿಯನ್ನು ಪೂರ್ತಿಯಾಗಿ ಒಪ್ಪುವುದೆಂದು ನಮ್ಮ ಸ್ಪಷ್ಟ ನಿಲುವು ಎಂದು ಆಗಲೇ ಹೇಳಿದ್ದೇನೆ. ಮಹಾರಾಷ್ಟ್ರದವರು ಕಮಿಷನ್ ವರದಿ ಒಪ್ಪುವುದಿಲ್ಲ ಎನ್ನುವುದು ಅವರ ವಾದ. ಮಹಾಜನ ಕಮಿಷನ್ ವರದಿ ಪೂರ್ತಿ ಒಪ್ಪದೇ ಇದ್ದರೆ ಸರಿಯಿಲ್ಲ ಇದನ್ನು ಪೂರ್ತಿ ಒಪ್ಪಬೇಕು ಎಂದು ನಮ್ಮ ವಾದ ಇದೆ ಮತ್ತು ಇದರ ಬಗ್ಗೆ ಇಲ್ಲಿ ಕೂಡ ನಿರ್ಣಯಗಳನ್ನು ಮಾಡಲಾಗಿದೆ. ಇದರ ಬಗ್ಗೆ ಮತ್ತೆ ಮತ್ತೆ ಇಲ್ಲಿ ಪ್ರಸ್ತಾಪ ಏಕೆ ಮಾಡಬೇಕೋ ನನಗೊಂದೂ ಗೊತ್ತಾಗುತ್ತಿಲ್ಲ. ಬಹುಶಃ ಏಪ್ರಿಲ್ ನಾಲ್ಕನೇ ತಾರೀಖು ವರ್ಕಿಂಗು ಕಮಿಟಿ ಸಭೆ ಸೇರುವಾಗ ಇದು ಚರ್ಚೆಗೆ ಬರಬಹುದು. ಆದರೆ ಖಚಿತವಾಗಿ ಯಾವಾಗ ಬರುತ್ತದೆ ಎಂದೂ ಅವರು ಅಲ್ಲಿ ಹೇಳಲಿಲ್ಲ. ಇದನ್ನು ಇಂಡೆಫಿನೆಟ್ ಆಗಿ ಪೋಸ್ಟ್‌ಪೋನು ಮಾಡಿದರು ಎನ್ನುವುದು ನಾವು ಒಪ್ಪತಕ್ಕ ಮಾತಲ್ಲ.

ಶ್ರೀ ಎಂ. ನಾಗಪ್ಪ.—ಸ್ವಾಮಿ, ನಾನು ರಾಯಚೂರಿನಲ್ಲಿ ಗುಡಿಸಲುಗಳನ್ನು ಸುಟ್ಟಿರುವ ಬಗ್ಗೆ ಒಂದು ನಿಲುವಳಿ ಸೂಚನೆ ಕಳುಹಿಸಿದ್ದೆ. ಮತ್ತು ಒಂದು ಕಾಲ್ ಅಟೆನ್‌ಷನ್ ಸೂಚನೆಯನ್ನೂ ಕಳುಹಿಸಿದ್ದೆ. ಅದನ್ನು ತಾವು ಅಡ್ಮಿಟ್ ಮಾಡಲಿಲ್ಲ. ಅಡ್‌ಜರ್ನ್‌ಮೆಂಟು ಮೋಷನ್ ತರಲು ಕಾರಣ ಇಷ್ಟೆ; ಇದರಲ್ಲಿ 34 ಗುಡಿಸಲುಗಳು ಸುಟ್ಟು ಹೋದವು. ಇದಕ್ಕೆ ಸುಮಾರು 200 ಗಜಗಳ ದೂರದಲ್ಲಿ ಫೈರ್ ಬ್ರಿಗೇಡು ಯೂನಿಟ್ ಇದ್ದರೂ ನನಗೆ ಬಂದಿರುವ ವರದಿ ಪ್ರಕಾರ ಅವರಿಗೆ ಸರಿಯಾದ ಸಹಾಯ ಕೊಟ್ಟರು ಎಂದು ಕಾಣಲಿಲ್ಲ. ಮೂರು ಗುಡಿಸಲು ಸುಡುವಾಗಲೇ ಇವರನ್ನು ಸಹಾಯಕ್ಕೆ ಕರೆದಾಗ ಬರಲಿಲ್ಲ. ಆಗ ಬಂದಿದ್ದರೆ 38 ಗುಡಿಸಲುಗಳು ಉಳಿಯುತ್ತಿದ್ದವು. ಅವರಿಗೆ ಪೆಟ್ರೋಲು ಕೊಡಲಿಲ್ಲ ಎಂದು ಈ ರೀತಿ ಮಾಡಿದರು ಎಂದು ನನಗೆ ತಿಳಿದು ಬಂದಿದೆ. ಅಗ್ನಿಶಾಮಕ ದಳದವರು ಅಲ್ಲಿಗೆ ಬಂದ ನಂತರ ನೀರಿಲ್ಲ ಎನ್ನುವ ಕಾರಣದಿಂದ 34 ಗುಡಿಸಲುಗಳು ಸುಡುವವರೆಗೂ ಅವರು ಅಲ್ಲಿಯೇ ನಿಂತು ನೋಡುತ್ತಿದ್ದರು. ಯಾವ ತರಹ ಕ್ರಮವನ್ನೂ ಅವರು ತೆಗೆದುಕೊಳ್ಳಲಿಲ್ಲ ಎನ್ನುವ ವಿಷಯವನ್ನು ನಾನು ಮುಖ್ಯ ಮಂತ್ರಿಯವರ ಗಮನಕ್ಕೆ ತರಬಯಸುತ್ತೇನೆ.

3-00 P. M.

ಈವೊತ್ತು ಅಲ್ಲಿ ಆಗಿರತಕ್ಕ ಪರಿಸ್ಥಿತಿಯನ್ನು ನೋಡಿದರೆ, ಒಬ್ಬ ಮುದುಕಿ ಸ್ಥಳದಲ್ಲಿಯೇ ಪ್ರಾಣ ಬಿಟ್ಟಿದ್ದಾಳೆ. ಅಗ್ನಿಶಾಮಕ ದಳಕ್ಕೆ ಸಮಾಚಾರ ಕೊಡಬೇಕು ಎಂದು ಹೋಗುತ್ತಿದ್ದ ಯುವಕನೊಬ್ಬನು ಹಾದಿಯಲ್ಲಿಯೇ ಪ್ರಾಣ ನೀಗಿದ್ದಾನೆ. ಅಂಥ ಪರಿಸ್ಥಿತಿಯನ್ನು ನೋಡುವಾಗ ಇಲ್ಲಿರತಕ್ಕ ಮಂತ್ರಿಗಳು ಯಾರೇ ಆಗಲಿ ತೀವ್ರವಾಗಿ ಅಲ್ಲಿಗೆ ಹೋಗಿ ನೋಡಿಕೊಂಡು ಬರಬೇಕು ಎನ್ನುವ ವಿಷಯವನ್ನು ಮಾನ್ಯ ಸಭೆಯ ಗಮನಕ್ಕೆ ತರುತ್ತೇನೆ.

ಹುಬ್ಬಳ್ಳಿಯ ಮುನಿಸಿಪಾಲಿಟಿಯವರು ತೆಗೆದುಕೊಂಡಂಥ ಕ್ರಮ ಬಹಳ ಯೋಗ್ಯವಾದುದು. ಅವರು ಜನರಿಗೆ ಏನೇನು ಸವಲತ್ತುಗಳನ್ನು ಕೊಡಬೇಕೆಂದು ವ್ಯವಸ್ಥೆ ಮಾಡಿದ್ದಾರೋ ಅದು ಬಹಳ ಶ್ಲಾಘನೀಯವೆಂದು ಹೇಳುತ್ತೇನೆ. ನಾನು ಸರ್ಕಾರವನ್ನು ಕೇಳುವುದಿಷ್ಟೆ; ದಯವಿಟ್ಟು ಇರಲು ನೆರೆಯಿಲ್ಲದೆ ಭಯದಿಂದ ಇರುವಂಥ ಜನಗಳಿಗೆ ನೂರಿನ್ನೂರು ರೂಪಾಯಿ ಕೊಡುವುದಕ್ಕೆ ಬದಲಾಗಿ ಸರ್ಕಾರದವರೇ ಅವರು ವಾಸ ಮಾಡುವುದಕ್ಕೆ ಗುಡಿಸಲುಗಳನ್ನು ಕಟ್ಟಿಸಿಕೊಡಬೇಕು ಎಂದು ಹೇಳುತ್ತೇನೆ.

ರೂಲ್ 54 ರ ಪ್ರಕಾರ ನಾನು ಒಂದು ನೋಟೀಸ್ ಕೊಟ್ಟಿದ್ದೇನೆ. ತಾವು ಅದನ್ನು ನೋಡಿ ಅದನ್ನು ತಾವು ತಳ್ಳಿ ಹಾಕದೆ ನನಗೆ ಅವಕಾಶ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ತಾವು ನೋಟೀಸ್ ಕೊಟ್ಟಿರುವುದು ಗೊತ್ತಾಗಿದೆ. ಅದನ್ನು ನಾನು ನೋಡುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರಾದ ನಾಗಪ್ಪನವರು ತಮ್ಮ ಹತ್ತಿರ ಕಾಲ್ ಅಟೆನ್‌ಷನ್ ಮೋಷನ್ ಕೊಟ್ಟಿರಬಹುದು. ಗುಡಿಸಲುಗಳು ಸುಟ್ಟು ಹೋದ ವಿಚಾರ ನನಗೆ ಈವೊತ್ತು ಬೆಳಿಗ್ಗೆ ಗೊತ್ತಾಗಿದೆ. ಆದರ ಬಗ್ಗೆ ನಾನು ಇನ್‌ಫರ್ಮೇಷನ್ ಸಂಗ್ರಹ ಮಾಡುತ್ತಿದ್ದೇನೆ. ಬಹುಶಃ ನಾಳೆ ಒಂದು ಹೇಳಿಕೆಯನ್ನು ಕೊಡುವಂಥ ಪರಿಸ್ಥಿತಿಗೆ ನಾನು ಬರಬಹುದು ಎಂದು ಅನ್ನಿಸುತ್ತದೆ.

ನಮಗೆ ಇನ್‌ಫರ್ಮೇಷನ್ ಬಂದಾಗ ಎಷ್ಟರಮಟ್ಟಿಗೆ ಪರಿಹಾರ ಕೊಡುವುದಕ್ಕೆ ಸಾಧ್ಯವಾಗುತ್ತದೆ ಎನ್ನುವುದನ್ನು ನಾನು ಹೇಳಬಹುದು. ಈವೊತ್ತು ಏನೂ ಗೊತ್ತಿಲ್ಲದೆ ಹೇಳಿಕೆಯನ್ನು ನೀಡುವುದು ಬಹಳ ಕಷ್ಟವಾಗುತ್ತದೆ. ಅದಕ್ಕಾಗಿ ನಾಳೆ ಈ ಸಮಯದ ಒಳಗಾಗಿ ಹೇಳಿಕೆ ಕೊಡಲು ಸಾಧ್ಯವಾಗುತ್ತದೆ.

Sri B. B. SAYANAK.—I have sent a Call Attention Notice about Sirsi incident. May I know what has happened ?

Mr. SPEAKER.—I do not know what has happened to it. I shall find out.

ಶ್ರೀ ಎಸ್. ಶಿವಪ್ಪ.—ಸ್ವಾಮಿ, ರಿಜಿಸ್ಟರ್ಡ್ ಪೋಸ್ಟಿನಲ್ಲಿ ಈಗತಾನೇ ನನಗೆ ಒಂದು ಪ್ಯಾಕೆಟ್ ಬಂದಿದೆ. ಮಾನ್ಯ ಎಸ್. ಪಿ. ದೇಸಾಯಿ, ಅಕ್ಕಿ ಆಲೂರು, ಧಾರವಾಡ ಇವರು ಹುಳುಕಲು ಗೋಧಿಯನ್ನು ಕಳಿಸಿಕೊಟ್ಟಿದ್ದಾರೆ. ಅದನ್ನು ನಾನು ಇಟ್ಟುಕೊಳ್ಳುವುದು ಕಷ್ಟವಾಗುತ್ತದೆ. ತಮಗೆ ಕಳಿಸಿಕೊಡುತ್ತೇನೆ. ತಾವು ದಯವಿಟ್ಟು ಆದನ್ನು ಆಹಾರ ಮಂತ್ರಿಗಳಿಗೆ ಕಳಿಸಿ, ಅದನ್ನು ಜೋಪಾನವಾಗಿಟ್ಟು, ಆಹಾರದ ವಿಚಾರದಲ್ಲಿ ಚರ್ಚೆಯಾಗುವಾಗ ನನಗೆ ವಾಪಸು ಕೊಡಬೇಕೆಂದು ಹೇಳಿ ತಮಗೆ ಕಳಿಸಿಕೊಡುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್.—ಬೆಂಗಳೂರು ನಗರದಲ್ಲಿ ಕೂಡ ಹುಳುಕಲು ಗೋಧಿ ಅಕ್ಕಿ ಸರಬರಾಜು ಮಾಡುತ್ತಿದ್ದಾರೆ.........

ಅಧ್ಯಕ್ಷರು.—ತಮ್ಮ ಹತ್ತಿರ ಸ್ಯಾಂಪಲ್ ಇದ್ದರೆ ಕಳಿಸಿಕೊಡಿ.

ಶ್ರೀ ಬಿ. ಪಿ. ಗಂಗಾಧರ್.—ತುಮಕೂರು ಜಿಲ್ಲೆಯಲ್ಲಿ ಭೂ ಕಂದಾಯವನ್ನು ವಸೂಲ್ಮಾಡುತ್ತಿರುವುದರ ವಿಚಾರವಾಗಿ ನಾನು ಒಂದು ವಿಷಯವನ್ನು ತಮ್ಮ ಗಮನಕ್ಕೆ ತರಬೇಕಾಗಿದೆ.

ಅಧ್ಯಕ್ಷರು.—ಮೊನ್ನೆ ಆದರ ಬಗ್ಗೆ ಚರ್ಚೆಯಾಗಿದೆ. ಬರುವ ಶನಿವಾರ ರೆವೆನ್ಯೂ ಡಿಮಾಂಡ್ ಸಭೆಯ ಮುಂದೆ ಬರುತ್ತದೆ. ಮಾನ್ಯ ಸದಸ್ಯರು ಪ್ರಸ್ತಾಪ ಮಾಡಬಹುದು.

ಶ್ರೀ ಬಿ. ಪಿ. ಗಂಗಾಧರ್.—ನಾಲ್ಕುವರ್ಷದ ಕಂದಾಯವನ್ನು ಒಂದೇ ಸಲ ಕೊಡಬೇಕೆಂದು ಒತ್ತಾಯ ಮಾಡಿ ರೈತರು ಕಷ್ಟಪಟ್ಟು ಸಾಕಿರುವ ಜಾನುವಾರುಗಳನ್ನು ಹಿಡಿದುಕೊಂಡು ಹೋಗುತ್ತಿದ್ದಾರೆ. ಗ್ರಾಮಗಳಲ್ಲಿ ಇರೋಣವೋ ಅಥವಾ ಊರು ಬಿಟ್ಟು ಹೋಗೋಣವೋ ಎಂದು ನಮಗೆ ಬರೆಯುತ್ತಿದ್ದಾರೆ. ಜನರು ಊರಿನಲ್ಲಿ ಇರುವುದಕ್ಕೆ ಸಾಧ್ಯವಿಲ್ಲದ ಪರಿಸ್ಥಿತಿಯುಂಟಾಗಿದೆ. ನಾಲ್ಕು ವರ್ಷದ ಕಂದಾಯವನ್ನು ಒಂದೇ ಸಲ ಕೊಡಿ ಎಂದರೆ ಯಾರೂ ಊರುಗಳಲ್ಲಿ ಇರುವುದಕ್ಕೇ ಆಗುವುದಿಲ್ಲ. ಶಾಸನ ಸಭಾ ಸದಸ್ಯರಾಗಿ ಏನು ಮಾಡುತ್ತಿದ್ದೀರಿ ಎಂದು ನಮ್ಮನ್ನು ಜನ ಕೇಳುತ್ತಿದ್ದಾರೆ.

ಅಧ್ಯಕ್ಷರು.—ಈಗೇನು ಮಾಡಬೇಕೆಂದು ತಾವು ಹೇಳುವುದು ?

ಶ್ರೀ ಬಿ. ಪಿ. ಗಂಗಾಧರ್.—ತೀರ್ಮಾನಮಾಡುವವರೆಗೆ ಕಂದಾಯವನ್ನು ಸಸ್ಪೆಂಡ್ ಆದರೂ ಮಾಡಬೇಕು. ನಮ್ಮದು ಕ್ಷಾಮ ಪ್ರವೇಶವಾದ್ದರಿಂದ ಈಗ ಕಂದಾಯ ವಸೂಲುಮಾಡುವುದನ್ನು ತಡೆಗಟ್ಟಬೇಕು, ಮುಂದೆ ಸರಿಯಾದ ಏರ್ಪಾಡು ಮಾಡಬಹುದು. ಕೆಲವರು ನೂರು ಇನ್ನೂರು ರೂಪಾಯಿಗಳಿಗೆ ತಮ್ಮ ಜಮೀನನ್ನು ಕೊಟ್ಟುಬಿಡುತ್ತಿದ್ದಾರೆ.

Calling Attention to a Matter of Urgent Public Importance *re:* Pay Bills of Teachers of Aided and TDB Schools by DTO, Raichur.

Sri M. NAGAPPA.—I call the attention of the Minister for Education to the return of pay Bills of the teachers of the aided schools and Taluk Development Board Schools by the District Treasury Officer, Raichur.

Sri K. V. SHANKARA GOWDA.—The Hon'ble Member has called attention to the action of the District Treasury Officer, Raichur in returning the salary grant bills of Teachers of aided Schools for the month of January 1969. The Director of Treasuries had suggested that before a Grant-in-aid Bill could be paid, there should be an order of sanction of Grant-in-aid to the School concerned. He stated that it may be difficult for the Treasury Officers to admit bills for payment without a copy of the order of sanction. This was examined by Government and the Director was informed that the monthly bills presented by Schools through the District Educational Officers were only advance salary bills and the actual Grant-in-Aid Bills will be passed for payment after audit, etc. Since the monthly payments are provisional, they do not require sanction of the Director of Public Instruction or Government. However, the Director stated that for the final bill, a copy of the order sanctioning the grant may be enclosed. Accordingly, a Government order was issued on 1st February 1969 adding a note below Rule 61 of the Grant-in-aid Code for Secondary Schools that the Director of Public Instruction should issue an order giving the list of High Schools in each District which are eligible to receive Maintenance Grant. It is understood that on receipt of this order, some Treasury Officers had refused to pay the grants for the salary bills of January 1969. The Director of Public Instruction has taken action to send a list of Schools eligible for advance salary grant and the District Educational Officers have been instructed to give necessary certificates. It was not foreseen that the Treasury Officers would enforce the new Rule even for the pay bill of January 1969. In view of the instructions issued now, the difficulty felt by the teachers will not arise in future.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ರೂಲ್ 79ರ ಪ್ರಕಾರ ನಾನೊಂದು ನೋಟೀಸ್ ಕಳಿಸಿದ್ದೆ. 500 ಜನ ಹೆಣ್ಣುಮಕ್ಕಳು ಓದುತ್ತಿರುವ ಹೈಸ್ಕೂಲಿಗೆ ಅದು ಸಂಬಂಧಪಟ್ಟಿದೆ.

Mr. SPEAKER.—I shall look into it.

Papers laid on the Table

Sri MOHAMED ALI (Minister for Transport and Tourism).— I beg to lay :

(*a*) (i) Notification No. HD 9 TMT 66, dated 20th December 1968.

The Mysore Motor Vehicles Taxation (Second Amendment) Rules, 1968.

(ii) Notification No. HD 151 TMT 67 dated 5th July 1968—Grant of tax concession Katchavoni—Malki to Sidhnoor.

Under sub-section (2) of Section 16 of the Mysore Motor Vehicles Taxation Act, 1957.

SRI H. C. LINGA REDDY (Minister for Fisheries and Ports).—On behalf of the Minister for Revenue, I beg to lay:

(b) Notification No. HD 225 TMT 65 dated 16th September 1968, The Mysore Motor Vehicles (XVII Amendment) Rules, 1968.

Issued under Sub-section 3 of Section 133 of the Motor Vehicles Act, 1939.

(i) Notification No. RD 91 GRT 68 dated 2nd February 1969.

The Mysore Land Revenue (Amendment) Rules, 1969;

(ii) Notification No. RD 57 EWR 65 dated 5th March 1969;

The Mysore Land Revenue (First Amendment) Rules, 1968.

Under Section 198 of the Mysore Land Revenue Act, 1964.

MR. SPEAKER.—The Notifications are laid on the Table of the House.

Budget Estimates for 1969-70—Demands for Grants

DEMAND NO. 17 AND 27

28—Education

SRI K. V. SHANKARA GOWDA (Minister for Education).— Sir, on the recommendation of the Governor, I beg to move:

"That a sum not exceeding Rs. 46,17,90,000 be granted to the Government to defray the charges which will come in course of payment during the financial year for the period ending 31st day of March 1970, in respect of 'Education'."

68—Stationery and Printing

Sir, on the recommendation of the Governor, I beg to move:

"That a sum not exceeding Rs. 1,17,60,000 be granted to the Government to defray the charges which will come in course of payment during the financial year for the period ending 31st day of March 1970, in respect of "Stationery and Printing'."

Mr. SPEAKER.—Motion moved :

"That a sum not exceeding Rs. 46,17,90,000 be granted to the Government to defray the charges which will come in course of payment during the financial year for the period ending 31st day of March 1970, in respect of 'Education'."

"That a sum not exceeding Rs. 1,17,60,000 be granted to the Government to defray the charges which will come in course of payment during the financial year for the period ending 31st day of March 1970, in respect of 'Stationery and Printing'."

Now the Debate will commence.

†ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಸಭಾಪತಿಯವರೇ, ನಮ್ಮ ದೇಶದಲ್ಲಿ ಅತಿ ಹೆಚ್ಚಿನ ಹಣವನ್ನು ಖರ್ಚುಮಾಡತಕ್ಕ ಏಕೈಕ ಇಲಾಖೆ—ಪಿ.ಡಬ್ಲ್ಯೂ.ಡಿ. ಇಲಾಖೆಯನ್ನು ಬಿಟ್ಟರೆ ವಿದ್ಯಾಭ್ಯಾಸ ಇಲಾಖೆ. ಈ ಇಲಾಖೆಗೆ ಎಷ್ಟು ಹಣ ಬೇಕಾದರೂ ಖರ್ಚುಮಾಡಲು—ಈ ಕಡೆ ಆಗಲಿ ಆ ಕಡೆ ಆಗಲಿ—ಯಾರೂ ಕೂಡ ವಿರೋಧ ಮಾಡತಕ್ಕ ಪರಿಸ್ಥಿತಿ ಇಲ್ಲ. ವಿದ್ಯಾಭ್ಯಾಸಕ್ಕೆ ಖರ್ಚು ಮಾಡತಕ್ಕ ಈ 46 ಕೋಟಿ ರೂಪಾಯಿಗಳ ಹಣದಿಂದ ವಿದ್ಯಾ ಕ್ಷೇತ್ರದಲ್ಲಿ ಏನು ಬೆಳವಣಿಗೆ ಯಾಗಬೇಕು, ಇದರಿಂದ ಎಂತಹ ವಿದ್ಯಾವಂತರನ್ನು ತಯಾರು ಮಾಡುತ್ತಾರೆ ಎಂಬ ವಿಚಾರವನ್ನು ನಾವು ಇವತ್ತು ಯೋಚನೆ ಮಾಡಬೇಕಾಗಿದೆ. ಇವತ್ತು ನಮ್ಮ ರಾಜ್ಯದಲ್ಲಿ 46 ಕೋಟಿ ರೂಪಾಯಿ ಗಳನ್ನು ಖರ್ಚು ಮಾಡಬೇಕಾದ ಒಂದು ಹಂತಕ್ಕೆ ನಾವು ಬಂದಿದ್ದೇವೆ. ಇಷ್ಟೊಂದು ಹಣವನ್ನು ಖರ್ಚು ಮಾಡಿದರೂ ಕೂಡ ನಿಜವಾದ ವಿದ್ಯಾಭ್ಯಾಸ, ವಿದ್ಯಾಭ್ಯಾಸದ ಪ್ರಗತಿ ಇವತ್ತು ದೇಶದಲ್ಲಿ ಎಷ್ಟು ಮಟ್ಟಿಗೆ ಆಗಿದೆ ಎಂಬುದನ್ನು ಯೋಚನೆ ಮಾಡಬೇಕಾಗಿದೆ. ಇವತ್ತು ಒಂದು ಕಡೆ ವಿದ್ಯಾರ್ಥಿಗಳ ಸಂಖ್ಯೆ ದಿನೇ ದಿನೇ ಜಾಸ್ತಿಯಾಗುತ್ತಾ ಇದೆ. ಇಂಜಿನಿಯರಿಂಗ್ ವಿದ್ಯಾರ್ಥಿಗಳ ನಿರುದ್ಯೋಗ ಒಂದು ಕಡೆ ಜಾಸ್ತಿಯಾಗುತ್ತಾ ಇದೆ. ಕಾಲೇಜಿನಲ್ಲಿ ಪದವೀಧರರ ನಿರುದ್ಯೋಗ ಜಾಸ್ತಿಯಾಗುತ್ತಾ ಇದೆ ಎಂಬ ಕೂಗೂ ಕೂಡ ಒಂದು ಕಡೆ ಇದೆ. ಇನ್ನು ವಿದ್ಯಾಭ್ಯಾಸ ಯಾವ ಮಟ್ಟದಲ್ಲಿ ನಡೆಯುತ್ತಾ ಇದೆ ಎಂದರೆ ಹಳ್ಳಿಗಳಲ್ಲಿ ವಿದ್ಯಾರ್ಥಿಗಳು ಓದುವುದಕ್ಕೆ ಸ್ಕೂಲು ಇಲ್ಲ. ಸ್ಕೂಲುಗಳು ಇದ್ದರೆ ಉಪಾಧ್ಯಾಯರು ಇಲ್ಲ. ಉಪಾಧ್ಯಾಯರು ಇದ್ದರೆ ಅವರಿಗೆ ಪಾಠ ಹೇಳುವುದಕ್ಕೆ ಬರುವುದಿಲ್ಲ. ಇಂತಹ ಪಾಠಶಾಲೆಗಳು ನಮ್ಮ ರಾಜ್ಯದಲ್ಲಿ ಅದರಲ್ಲೂ ಹಳ್ಳಿ ಗಾಡಿನಲ್ಲಿ—ಎಲ್ಲಿ ವಿದ್ಯಾಭ್ಯಾಸದ ಅವಶ್ಯಕತೆ ಇದೆಯೋ ಅಂತಹ ಕಡೆ ಇವತ್ತಿನ ದಿವಸ ನಮ್ಮ ಉಪಾಧ್ಯಾಯರ ಸ್ಥಿತಿಗತಿಯನ್ನು ನೋಡಿದರೆ ಅಲ್ಲಿ ಹೇಳಿಕೊಡತಕ್ಕ ಪಾಠಪ್ರವಚನವನ್ನು, ವಿದ್ಯಾಭ್ಯಾಸದ ಪ್ರಗತಿಯನ್ನು ನೋಡಿದರೆ, ಅದನ್ನು ನಮ್ಮ ಮಕ್ಕಳ ವಿದ್ಯಾಭ್ಯಾಸ ಎಂದು ಕರೆಯುವ ಹಾಗೆ ಇಲ್ಲ. ಏನೋ ಕಾಟಾಚಾರಕ್ಕೆ ಮಕ್ಕಳು ಹುಟ್ಟಿದ್ದಾರೆ, ಹುಟ್ಟಿದ್ದಕ್ಕಾಗಿ ಅವರ ಕಾಟವನ್ನು ತಪ್ಪಿಸಿಕೊಳ್ಳಲು ಸ್ಕೂಲಿಗೆ ಕರೆದುಕೊಂಡು ಹೋಗಲಿ ಕರೆದುಕೊಂಡು ಬರಲಿ ಎಂದು ಹೇಳಿ ಕಾಟವನ್ನು ತಪ್ಪಿಸಿಕೊಳ್ಳುವ ಭಾವನೆಯಿಂದ ಮಕ್ಕಳನ್ನು ಶಾಲೆಗೆ ಕಳುಹಿಸು ತ್ತಾರೆಯೇ ಹೊರತು ವಿದ್ಯೆಯನ್ನು ಕಲಿತುಕೊಳ್ಳುತ್ತಾರೆ ಎಂದು ಅಲ್ಲ. ಬೆಂಗಳೂರು ಮತ್ತು ಮೈಸೂರು ನಗರದಲ್ಲಿರತಕ್ಕ ಒಳ್ಳೆಯ ಶಾಲೆಗಳಿಗೂ ನಮ್ಮ ಹಳ್ಳಿಗಳಲ್ಲಿರತಕ್ಕ ಶಾಲೆಗಳಿಗೂ ಹೋಲಿಸಿದರೆ ಅದಕ್ಕೂ ಇದಕ್ಕೂ ಇರತಕ್ಕ ಮಟ್ಟ ನೋಡಿದರೆ, ಹಳ್ಳಿಗಳ ಶಾಲೆಗಳು ದನದಕೊಟ್ಟಿಗೆ ಇದ್ದಹಾಗೆ ಇವೆ. ಪಟ್ಟಣಗಳಲ್ಲಿರತಕ್ಕ ನರ್ಸರಿ ಶಾಲೆಗಳಿಗೂ, ಪಬ್ಲಿಕ್ ಸ್ಕೂಲುಗಳಿಗೂ ಹೋಲಿಸಿದರೆ ಹಳ್ಳಿಯವರ ವಿದ್ಯಾಭ್ಯಾಸ ವಿದ್ಯಾಭ್ಯಾಸವೇ ಅಲ್ಲ, ಅವು ವಿದ್ಯಾಶಾಲೆಗಳೇ ಅಲ್ಲ. ಅಲ್ಲಿ 4 ತರಗತಿಗಳಿದ್ದರೆ ಪಾಠ ಹೇಳುವುದಕ್ಕೆ ನಾಲ್ಕೂ ತರಗತಿಗಳಿಗೆ ಇರತಕ್ಕ ಉಪಾಧ್ಯಾಯರು ಒಬ್ಬರೇ. ಇದೆಷ್ಟು ಹಾಸ್ಯಾಸ್ಪದವಾದುದು ? ಬೇರೆ ದೊಡ್ಡ ದೊಡ್ಡ ಊರುಗಳಲ್ಲಿ ಎಷ್ಟು ಹುಡುಗರಿದ್ದರೆ ಅಲ್ಲಿ ಎಷ್ಟು ಜನ ಉಪಾಧ್ಯಾಯರು ಇರಬೇಕು ಎಂಬ ಲೆಕ್ಕಾಚಾರಮಾಡಿ ಅಲ್ಲಿಗೆ ಉಪಾಧ್ಯಾಯರನ್ನು ನೇಮಕ ಮಾಡುತ್ತಿದ್ದರೆ ಇಲ್ಲಿ ಹಳ್ಳಿಯಕಡೆ ಯಾರೂ ಅದನ್ನು ಕೇಳುವುದಿಲ್ಲ ಎಂದು ನೂರಾರು ವಿದ್ಯಾರ್ಥಿಗಳಿಗೂ ಒಬ್ಬರೇ ಉಪಾಧ್ಯಾಯರನ್ನು ಇಟ್ಟಿರುವಾಗ ಅವರಿಗೆ ಎಷ್ಟರ ಮಟ್ಟಿಗೆ ವಿದ್ಯಾಭ್ಯಾಸ ನಡೆಯುತ್ತದೆ ? ಅಂತೂ ಹಳ್ಳಿಯವರ ಗ್ರಹಚಾರ ಚೆನ್ನಾಗಿಲ್ಲ. ಮುಖ್ಯವಾಗಿ ವಿದ್ಯಾಭ್ಯಾಸದಲ್ಲಿ ತಳಪಾಯ ಚೆನ್ನಾಗಿ ಬೆಳೆಬೇಕು. ಅದಕ್ಕೆ ಮುಖ್ಯವಾಗಿ

ಪ್ರಾಥಮಿಕ ಹಾಗೂ ನರ್ಸರಿ ವಿದ್ಯಾಭ್ಯಾಸವು ಚೆನ್ನಾಗಿ ನಡೆದರೆ ಅವರ ಮುಂದಿನ ವಿದ್ಯಾಭ್ಯಾಸಕ್ಕೆ ಅದು ಅನುಕೂಲವಾಗುತ್ತದೆ. ಯಾವಾಗ ಹಳ್ಳಿಯ ಹುಡುಗರಿಗೆ ಪ್ರಾರಂಭದಲ್ಲಿ ಚೆನ್ನಾಗಿ ಬೀಳಬೇಕಾದ ತಳಪಾಯ ಬೀಳುವುದಿಲ್ಲವೋ ಆಗ ಅವರು ಮುಂದಿನ ವಿದ್ಯಾಭ್ಯಾಸಕ್ರಮದಲ್ಲಿ ಬಹಳ ಕಷ್ಟಕ್ಕೀಡಾಗಬೇಕಾಗುವುದು. ಏಕೆಂದರೆ ಅವರ ಮುಂದಿನ ವಿದ್ಯಾಭ್ಯಾಸವೆಲ್ಲಾ ಆ ಅಭದ್ರವಾದ ತಳಹದಿಯಮೇಲೆ ಸಾಗುತ್ತಿರುವುದು. ಇನ್ನು ಇಲಾಖೆಯ ಅಧಿಕಾರಿಗಳ ವಿಚಾರಕ್ಕೆ ಬಂದರೆ ಟೆಕ್ನಿಕಲ್ ವಿದ್ಯಾಭ್ಯಾಸಕ್ಕೇ ಒಬ್ಬ ಡೈರೆಕ್ಟರು, ಕೊಲಿಜಿಯೆಟ್ ವಿದ್ಯಾಭ್ಯಾಸಕ್ಕೆ ಒಬ್ಬ ಡೈರೆಕ್ಟರು, ಹೀಗೆ ನಾಲ್ಕಾರು ಡೈರೆಕ್ಟರುಗಳಿದ್ದಾರೆ. ಆದರೆ ಈ ದಿವಸ ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಸರ್ಕಾರದವರು 46 ಕೋಟಿ ರೂಪಾಯಿಗಳನ್ನು ಖರ್ಚುಮಾಡುತ್ತಿದ್ದರೂ ಇದಕ್ಕೆ ಒಬ್ಬರು ಪ್ರತ್ಯೇಕ ಡೈರೆಕ್ಟರಿಲ್ಲ. ಇನ್ನಾದರೂ ಇದಕ್ಕೆ ಒಬ್ಬ ಪ್ರತ್ಯೇಕ ಡೈರೆಕ್ಟರನ್ನು ಹಾಕಿ ಅಂದರೆ ಅವರು ಪುಲ್‌ಟೈಂ ಇದೇ ಕೆಲಸದಲ್ಲಿರುವಂತೆ ಮಾಡಿ ಇದಕ್ಕೆ ಒದಗಿಸಿರತಕ್ಕ ಹಣ ಸಮರ್ಪಕವಾದ ರೀತಿಯಲ್ಲಿ ಸದ್ವಿನಿಯೋಗವಾಗುವಂತೆ ಮಾಡಿದರೆ ಆಗೇನಾದರೂ ಹಳ್ಳಿ ಜನರಿಗೆ ಸ್ವಲ್ಪ ಅನುಕೂಲ ವಾಗಬಹುದು. ಆದ್ದರಿಂದ ಸರ್ಕಾರದವರು ಇತ್ತ ಕಡೆಗೆ ಹೆಚ್ಚಿನ ಗಮನ ಕೊಡಬೇಕೆಂದು ನಾನು ಸಲಹೆಮಾಡುತ್ತೇನೆ.

ಇನ್ನು ಈ ದಿವಸ ನಮ್ಮ ವಿದ್ಯಾಭ್ಯಾಸದ ಮಟ್ಟ ಒಂದು ಕಡೆಯಿಂದ ಇಳಿಮುಖವಾಗುತ್ತಿದ್ದರೆ ಇನ್ನೊಂದು ಕಡೆಯಿಂದ ವಿದ್ಯಾರ್ಥಿಗಳಲ್ಲಿ ಎಲ್ಲಿನೋಡಿದರೂ ತೀರಾ ಅಶಾಂತಿ ಅಸಮಾಧಾನಗಳು ಮೂಡುತ್ತಿವೆ. ಇದಕ್ಕೆ ಕಾರಣವೇನು ಎಂಬುದನ್ನು ನಾವು ಈಗ ಕೂಲಂಕಷವಾಗಿ ಪರಿಶೀಲನೆ ಮಾಡಬೇಕಾಗಿದೆ. ಈ ಅಶಾಂತಿ ಕೇವಲ ಒಂದು ರಾಜ್ಯದಲ್ಲಿಲ್ಲ, ಇದು ಇಡೀ ರಾಷ್ಟ್ರದಾದ್ಯಂತವೂ ಹರಡಿದೆ. ಇಂದಿನ ವಿದ್ಯಾಭ್ಯಾಸದ ಕ್ರಮದಲ್ಲಿ ತನ್ನ ಜೀವನವನ್ನು ತಾನು ರೂಪಿಸಿಕೊಳ್ಳತಕ್ಕ ಅವಕಾಶ ಇಲ್ಲ ಎಂಬುದನ್ನು ವಿದ್ಯಾರ್ಥಿಗಳು ಮನಗಂಡಿದ್ದಾರೆ. ಅವರಿಗೆ ಇಂದಿನ ವಿದ್ಯಾಭ್ಯಾಸ ದಲ್ಲಿ ಜಿಗುಪ್ಸೆ ತಲೆದೋರಿದೆ. ಅವರು ತಮ್ಮ ಮುಂದಿನ ಭವಿಷ್ಯದ ಬಗ್ಗೆ ಯಾವ ಒಂದು ಆಶೋತ್ತರವನ್ನೂ ಕಾಣದಿರುವುದರಿಂದ ಆ ಯುವಕರಲ್ಲೇ ಅಶಾಂತಿ ಮೂಡಿದೆ ಅವರಲ್ಲಿ ಈ ಸರ್ಕಾರ ನಡೆಸತಕ್ಕ ನಾಯಕನ ಬಗ್ಗೆ ಅವರಿಗೆ ಇರಬೇಕಾದ ವಿಶ್ವಾಸ ಇಂದು ಮಾಯವಾಗುವುದಕ್ಕೂ ಇದೇ ಮೂಲ ಕಾರಣ. ಆದ್ದರಿಂದ ರಾಷ್ಟ್ರಾದ್ಯಂತ ಎಲ್ಲಿ ನೋಡಲಿ ವಿದ್ಯಾರ್ಥಿಗಳ ಚಳುವಳಿ. ಆ ಚಳು ವಳಿಗೆ ಏನು ಮೂಲಕಾರಣ ಎಂಬುದನ್ನು ಕಂಡುಕೊಳ್ಳದೆ ಅದು ಒಂದು ವಿದ್ಯಾರ್ಥಿಗಳ ದಂಗೆ. ಚಳುವಳಿ ಎಂದು ಹೇಳಿ ಅವರ ತಲೆಯಮೇಲೆ ಹೊಡೆದು ಅವರನ್ನು ಮೂಲೆಗೆ ಕೂಡಿಸಿ ಬಿಟ್ಟರೆ ಅದಕ್ಕೆ ಒಂದು ಒಳ್ಳೆಯ ಔಷಧಿಯನ್ನು ಹಾಕಿದಹಾಗೆ ಆಯಿತೆಂದು ಅವರು ಭಾವಿಸಿದ್ದರೆ ಅದಕ್ಕಿಂತ ಮೌಢ್ಯ ಬೇರೆ ಇಲ್ಲ. ನಮ್ಮ ವಿದ್ಯಾಭ್ಯಾಸದಲ್ಲಿ ಹಳೇ ಕಂದಾಚಾರದ ಪದ್ಧತಿಯನ್ನೇ ಇನ್ನೂ ಮುಂದುವರಿಸಿಕೊಂಡು ಬರುತ್ತಿರುವುದು ಇಂಥ ವಿದ್ಯಾಭ್ಯಾಸದಿಂದ ಜನರು ಮುಂದೆ ತಮ್ಮ ಒಂದು ಜೀವನವನ್ನು ರೂಪಿಸಿಕೊಳ್ಳುವುದಕ್ಕೆ ಸಾಧ್ಯವೇ ಎಂಬುದಾಗಿ ವಿದ್ಯಾರ್ಥಿಗಳು ಇಂದು ಪ್ರಶ್ನೆ ಮಾಡುತ್ತಿದ್ದಾರೆ. ಆದರೆ ಸರ್ಕಾರದವರು ಆ ಪ್ರಶ್ನೆಗೆ ಸರಿಯಾದ ಉತ್ತರವನ್ನು ಕೊಡದೆ ತಪ್ಪಿಸಿಕೊಂಡು ಓಡುತ್ತಿದ್ದರೆ ಅದಕ್ಕೆ ತಾವು ಒಂದು ಸಮಾಧಾನ ಮಾಡಿದಂತಾಗಲಿಲ್ಲ, ಆ ಸಮಸ್ಯೆ ಯನ್ನು ಎದುರಿಸಿದಂತೆ ಆಗುವುದಿಲ್ಲ. ಅನೇಕ ಕಡೆಗಳಲ್ಲಿ ವಿದ್ಯಾರ್ಥಿಗಳು ಇಂದಿನ ಕಾಲೇಜ್ ವಿದ್ಯಾಭ್ಯಾಸದಲ್ಲಿ ತಿರುಳಿಲ್ಲ ಎಂದು ದೊಡ್ಡ ಚಳವಳಿಯನ್ನು ಹೂಡಿದ್ದರಿಂದ ಅನೇಕ ಕಡೆಗಳಲ್ಲಿ ಕಾಲೇಜುಗಳನ್ನು ಮುಚ್ಚಲಾಗಿದೆ. ಹಾಗೆ ಕಾಲೇಜುಗಳನ್ನು ಮುಚ್ಚಿದರೂ ಅದೇನೂ ಒಂದು ಸಲ್ಯೂಷನ್ ಆಗಲಾರದು. ಅದು ಅಷ್ಟು ಉಗ್ರ ಸ್ವರೂಪ ತಾಳುವುದಕ್ಕೇನು ಕಾರಣ ಎಂಬುದನ್ನು ನಾವು ಕಂಡುಹಿಡಿಯುವುದಕ್ಕೆ ಈಗ ಪ್ರಯತ್ನ ಮಾಡಬೇಕಾಗಿದೆ, ಅದರ ಹಿನ್ನೆಲೆಯೇನು ಎಂಬುದನ್ನು ಕಾಣಬೇಕಾಗಿದೆ. ಅಷ್ಟು ದೊಡ್ಡ ಪ್ರಮಾಣದಲ್ಲಿ ಅದರ ಪ್ರಚಾರ ನಡೆಯುವುದಕ್ಕೆ ಮೂಲ ಕಾರಣವನ್ನು ನಾವು ಪರಿಶೀಲನೆ ಮಾಡಿ ಕಂಡುಹಿಡಿಯಬೇಕಾಗಿದೆ.

ಇನ್ನು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ದಂಗೆಕೋರರು, ಚಳುವಳಿ ಮಾಡುತ್ತಾರೆ, ಹೋರಾಟ ಮಾಡುತ್ತಾರೆ, ಅದಕ್ಕೋಸ್ಕರ ವಿಶ್ವವಿದ್ಯಾನಿಲಯಗಳು ಏಕೆ ಬೇಕು ಎಂದು ಕೆಲವರು ಹೇಳುತ್ತಾರೆ. ಈ ಚಳುವಳಿ ಮೈಸೂರು ರಾಜ್ಯದಲ್ಲಿ ಒಂದರಲ್ಲೇ ಅಲ್ಲ. ಸ್ವಾತಂತ್ರ್ಯದ ನಂತರ ದೇಶದ ಎಲ್ಲಾ ಮೂಲೆ ಮೂಲೆಗಳಲ್ಲಿಯೂ ನಡೆಯುತ್ತಿದೆ. ಪಾಶ್ಚಿಮಾತ್ಯ ದೇಶಗಳಿಗೆ ನಾನು ಹೋಗಿ ದ್ದಾಗ ಅಲ್ಲಿ ದೊಡ್ಡ ವಿದ್ವಾಂಸರ ಜೊತೆಯಲ್ಲಿ ಈ ವಿಚಾರ ಚರ್ಚೆ ಮಾಡಿದ್ದೇನೆ. ಇಂತಹ ಸಂದರ್ಭ ಗಳಲ್ಲಿ ವಿದ್ಯಾರ್ಥಿಗಳ ಚಳುವಳಿ ಇಂದು ಸಿದ್ಧೌಷದಿ ಎಂಬುದಾಗಿ ಹೇಳಿದ್ದಾರೆ. ಈ ವಿಚಾರವಲ್ಲಿ ಕ್ರಾಂತಿ ಅಲ್ಲಿಯೇ ಎದ್ದಿರುವಾಗ, ನಮ್ಮ ವಿದ್ಯಾರ್ಥಿಗಳ ಹಾದಿ ಸರಿಯೆಂದು ಅವರು ಒಪ್ಪಿಕೊಂಡರು. ಈ ವಿದ್ಯಾರ್ಥಿಗಳ ಚಳುವಳಿ ನಮ್ಮ ರಾಷ್ಟ್ರದಲ್ಲಿಯೇ ಅಲ್ಲ, ಎಲ್ಲಾ ಕಡೆಗಳಲ್ಲಿಯೂ ಕೂಡ ಈಗ ಒಂದು ಚಳುವಳಿ ರೂಪಕ್ಕೆ ಬಂದಿದೆ. ವಿದ್ಯಾರ್ಥಿಗಳಲ್ಲಿ ಈ ವಿಚಾರ ಕ್ರಾಂತಿ ಎದ್ದಿದೆ. ಅವರು ನವ ಸಮಾಜವನ್ನು ಕಟ್ಟುವುದಕ್ಕೆ ಈಗಿನ ವಿದ್ಯಾಭ್ಯಾಸ ಕ್ರಮದಲ್ಲಿ ಒಂದು ಕ್ರಾಂತಿಯಾಗಬೇಕೆಂಬ ಹೊಸ

(ಶ್ರೀ ಎಸ್. ಶಿವಪ್ಪ)

ವಿಚಾರ ವಿದ್ಯಾರ್ಥಿಗಳಲ್ಲಿ ಮೂಡಿದೆ. ವಿದ್ಯಾರ್ಥಿಗಳ ಚಳುವಳಿಯನ್ನು ಖಂಡತುಂಡವಾಗಿ ಖಂಡಿಸಿ ಅವರನ್ನು ಶಾಲೆಗಳಿಗೆ ಹೊರಟುಹೋಗಿ ಎಂದು ಹೇಳಬಾರದು. ಇದನ್ನು ಯಾವರೀತಿಯಾದರೂ ಸರಿಮಾಡಿ ಅವರಿಗೂ ಸ್ಥಾನಮಾನ ಕೊಡುವುದು ಒಳ್ಳೆಯದು. ಈಗಿನ ವಿದ್ಯಾಭ್ಯಾಸ ಕ್ರಮದಲ್ಲಿ ವಿದ್ಯಾರ್ಥಿಗೆ ಮುಂದೆ ತನ್ನ ಜೀವನವನ್ನು ನಡೆಸತಕ್ಕ ಒಂದು ಅವಕಾಶವನ್ನು ಕೊಡಲಿಲ್ಲವೆಂಬ ಮನಸ್ಸು ಮೂಡಿದೆ. ಅವನ ವಿಚಾರಕ್ರಾಂತಿ ಅಲ್ಲಿ ಮೊದಲನೆಯದಾಗಿ ಮೂಡಿದೆ. ಅದಕ್ಕೆ ತಕ್ಕ ಸಿದ್ಧೌಷಧಿಯನ್ನು ಕಂಡುಹಿಡಿದು ವಿದ್ಯಾರ್ಥಿಗಳನ್ನು ಕೂಡಿಸಿಕೊಂಡು ಅವರಲ್ಲಿ ನಂಬಿಕೆ ಹುಟ್ಟಿಸಿ ಅವರಿಗೆ ಸೆಕೆಂಡರಿ ಬೋರ್ಡ್‌ನಲ್ಲಿ ಒಂದು ಸ್ಥಾನವನ್ನು ಕೊಟ್ಟು ಅವರ ಸಲಹೆ ಪಡೆಯುವುದು ಸೂಕ್ತವೆಂದು ನಾನು ಸಲಹೆ ಮಾಡುತ್ತೇನೆ.

ಟೆಕ್ನಿಕಲ್ ಎಜುಕೇಷನ್ ವಿಷಯ. ನಾವು ಅವನಿಗೆ ಕೊಡುವ ವಿದ್ಯಾಭ್ಯಾಸದಿಂದ ಅವನು ತನ್ನ ಜೀವನದಲ್ಲಿ ಮುಂದೆ ಯಾವುದಾದರೂ ಒಂದು ಉದ್ಯೋಗವನ್ನು ಕಲ್ಪನೆ ಮಾಡಿಕೊಳ್ಳಬೇಕು ಎನ್ನುವ ಉದ್ದೇಶವನ್ನು ಇದರಲ್ಲಿ ಇವತ್ತು ನಾವು ನೋಡುತ್ತಿದ್ದೇವೆ. ಈ ಟೆಕ್ನಿಕಲ್ ಎಜುಕೇಷನ್ನಿಗೆ ಅನೇಕ ಕೋಟ್ಯಾಂತರ ರೂಪಾಯಿಗಳನ್ನು ನಾವು ಖರ್ಚುಮಾಡುತ್ತಿದ್ದೇವೆ. ನಮ್ಮ ಇಂಜಿನಿಯರಿಂಗ್ ಕಾಲೇಜಿನಲ್ಲಿ ಓದತಕ್ಕ ವಿದ್ಯಾರ್ಥಿಗಳಿಗೆ ಮತ್ತು ಔದ್ಯೋಗಿಕ ಶಾಲೆಗಳಲ್ಲಿ ಉತ್ತೀರ್ಣರಾದಂಥ ವಿದ್ಯಾರ್ಥಿಗಳಿಗೆ ಏನೂ ಕೆಲಸವಿಲ್ಲ. ನನಗೆ ಕೆಲಸವಿಲ್ಲ, ನಾನು ನಿರುದ್ಯೋಗಿಯಾಗಿದ್ದೇನೆ ಎಂಬುದಾಗಿ ಅನೇಕರು ಬೀದಿಯಲ್ಲಿ ಅಲೆದಾಡುತ್ತಿದ್ದಾರೆ. ಈಗ ಪರೀಕ್ಷೆಗಳಲ್ಲಿ ಪಾಸ್ ಮಾಡಿದವನ ಗತಿ ಏನಾಗುತ್ತಿದೆಯೆನ್ನುವುದನ್ನು ನಾವೆಲ್ಲರೂ ಇವತ್ತು ಆಳವಾಗಿ ಯೋಚನೆ ಮಾಡಬೇಕಾಗಿದೆ. ಇಂತಹ ಬುದ್ಧಿವಂತರ ಶಕ್ತಿಯನ್ನು ಉಪಯೋಗಿಸುವ ಸ್ಥಿತಿಯಲ್ಲಿ ನಾವಿಲ್ಲ. ಇದು ಒಂದು ದೇಶದ ದೌರ್ಭಾಗ್ಯ. ಅನೇಕ ಸಂಘ ಸಂಸ್ಥೆಗಳು ಬೇಕಾದಷ್ಟು ಹಣವನ್ನು ಖರ್ಚುಮಾಡಿ ಸಿದ್ಧಮಾಡಿರತಕ್ಕ ಈ ವಿದ್ಯಾರ್ಥಿಗಳ ಸಂಖ್ಯೆ ದಿನೇ ದಿನೇ ಜಾಸ್ತಿಯಾಗುತ್ತಿದೆ. ಈಗ ನಿರುದ್ಯೋಗ ಸಮಸ್ಯೆ ಅವರಲ್ಲಿ ಬೆಳೆಯುತ್ತಿದೆ. ಈ ವಿಷಯವಾಗಿ ಇವತ್ತು ಎಲ್ಲರೂ ಕೂಡ ಯೋಚನೆ ಮಾಡುತ್ತಿದ್ದಾರೆ. ಕಾಲೇಜುಗಳನ್ನು ಇಟ್ಟುಕೊಳ್ಳಬೇಕೋ ಬೇಡವೋ ಎಂದು. ವರ್ಷೇ ವರ್ಷೇ ಇಂಜನಿಯರಿಂಗ್ ಗ್ರಾಜುಯೇಟ್ಸ್ ಸಾವಿರಾರು ಜನರು ಪಾಸಾಗಿ ಬರುತ್ತಿದ್ದಾರೆ. ಔದ್ಯೋಗಿಕ ಕಾಲೇಜುಗಳಿಂದಲೂ ಪಾಸಾಗಿ ಬರುತ್ತಾರೆ. ಆದರೆ ಅವರಿಗೆ ಕೆಲಸಗಳಿಲ್ಲ. ಸರ್ಕಾರದವರು ಕೆಲಸವಿದ್ದರೆ ತಾನೇ ಅವರಿಗೆ ಕೊಡುವುದು ಎಂದು ಹೇಳುತ್ತಾರೆ. ಅಂದಮೇಲೆ ಈ ಪ್ರಶ್ನೆಯನ್ನು ಯಾರು ಸರಿಮಾಡಬೇಕು. ಇದು ವಿದ್ಯಾಭ್ಯಾಸ ಇಲಾಖೆಯವರು ಅಥವಾ ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟಿನವರು ಅಥವಾ ಡೆವಲಪ್‌ಮೆಂಟ್ ಇಲಾಖೆಯವರು ಎಲ್ಲರೂ ಕಲೆತು ಚರ್ಚೆಮಾಡತಕ್ಕ ಮಹತ್ವವಾದಂಥ ವಿಚಾರ. ಒಟ್ಟಿನಲ್ಲಿ ಇದಕ್ಕೆ ವಿದ್ಯಾಭ್ಯಾಸ ಇಲಾಖೆಯವರು ಮಾರ್ಗದರ್ಶಕರು ಆಗಬೇಕು.

ಇವತ್ತು ಯಾವ್ಯಾವ ಕಾಲೇಜುಗಳಿವೆ, ಸೈಯನ್ಸ್ ಕಾಲೇಜು ಇವೆ, ಆರ್ಟ್ಸ್ ಕಾಲೇಜು ಇವೆ, ಅವುಗಳಲ್ಲಿ ಎಷ್ಟು ವಿದ್ಯಾರ್ಥಿಗಳಿದ್ದಾರೆ, ಇವರಿಗೆ ಮುಂದೆ ಯಾವ ದಾರಿಯನ್ನು ತೋರಿಸಬೇಕು, ವಿದ್ಯಾರ್ಥಿಗಳು ಪದವೀಧರರಾದ ಮೇಲೆ ಅವರಿಗೆ ಸ್ವಂತವಾಗಿ ಜೀವನ ಮಾಡತಕ್ಕ ಒಂದು ಮಾರ್ಗವನ್ನು ನಮ್ಮ ವಿದ್ಯಾಭ್ಯಾಸ ಮಾಡಿಕೊಡುತ್ತಾ ಇಲ್ಲ. ಇವತ್ತು ಇಂಜಿನಿಯರಿಂಗ್ ಗ್ರಾಜುಯೇಟ್ಸ್ ಪಾಸಾದ ಕೂಡಲೇ ಸರ್ಕಾರದ ಕಡೆಗೆ ನೋಡುತ್ತಿದ್ದಾರೆ. ಎಲ್ಲಿ ನಮಗೆ ಕೆಲಸ ಕೊಡುತ್ತಾರೆ? ಎಂದು. ತನ್ನ ಕಾಲಮೇಲೆ ನಿಲ್ಲತಕ್ಕ ಅಂಶ ಅವನ ತಲೆಯಲ್ಲಿ ಇಲ್ಲ. ಇಲ್ಲಿ ವಿದ್ಯಾರ್ಥಿಯು ತನ್ನ ಕಾಲಮೇಲೆ ನಿಂತುಕೊಂಡು ವಿದ್ಯಾಭ್ಯಾಸ ಮಾಡುವ ಪದ್ಧತಿಯೂ ಇಲ್ಲ. ಹೊರದೇಶಗಳಲ್ಲಿ ಆ ಒಂದು ಪದ್ಧತಿ ಇದೆ. ಅಲ್ಲಿ "Earn while you learn" ಎಂಬ ಒಂದು ಪದ್ಧತಿ ಇದೆ. ವಿದ್ಯಾರ್ಥಿಯು ಕೆಲಸಮಾಡಿ, ವಿದ್ಯೆಯನ್ನು ಕಲಿಯುತ್ತಿದ್ದಾನೆ. ಅಲ್ಲಿ ವಿದ್ಯಾರ್ಥಿಯು ಕೂಲಿ ಮಾಡಿ, ಹೋಟೇಲುಗಳಲ್ಲಿ ಪಾತ್ರೆ ತೊಳೆಯುತ್ತಾನೆ, ಕಾರ್ಖಾನೆಗಳಲ್ಲಿ ಕಸ ಗುಡಿಸುತ್ತಾನೆ, ಮತ್ತು ಹೀಗೆ ಒಂದು ದಿನಕ್ಕೆ 10-12 ಡಾಲರು ಸಂಪಾದನೆ ಮಾಡುತ್ತಿದ್ದಾನೆ. ಅವರು ಕಾಯಕವೇ ಕೈಲಾಸ ಎಂಬಂತೆ, ಯಾವ ಕೆಲಸವೇ ಆಗಲಿ, ಅದನ್ನು ಮಾಡುತ್ತಾರೆ. ಅಲ್ಲಿ ಏನೇ ಕೆಲಸ ಮಾಡಲಿ, ಅದಕ್ಕೆ ಮರ್ಯಾದೆ ಇದೆ. ಅದು ಅವರಿಗೆ ಅಲ್ಲಿ ರಕ್ತಗತವಾಗಿ ಬಂದುಬಿಟ್ಟಿದೆ. ಅವನು ಪದವೀಧರನಾದ ಮೇಲೆ ಯಾವ ಕೆಲಸವೇ ಆಗಲಿ, ನಾನು ಮಾಡುತ್ತೇನೆ, ನನ್ನ ಜೀವನವನ್ನು ನಡೆಸುತ್ತೇನೆ ಎಂಬ ಒಂದು ಮನೋಕ್ರಾಂತಿಯನ್ನು ವಿದ್ಯಾರ್ಥಿದೆಸೆಯಲ್ಲೇ ಮಾಡತಕ್ಕ ಒಂದು ಧೋರಣೆಯನ್ನು ಇಟ್ಟುಕೊಂಡಿದ್ದಾನೆ. ಆದರೆ ನಮ್ಮ ದೇಶದಲ್ಲಿ ಅದು ಇಲ್ಲ. ಅದನ್ನು ಪ್ರಾಯೋಗಿಕವಾಗಿ ನಮ್ಮ ವಿಶ್ವವಿದ್ಯಾನಿಲಯದಲ್ಲಿ ಮಾಡಬೇಕೆಂಬ ಸಲಹೆಯನ್ನು ನಾನು ಮಾಡಿದ್ದೆ. ಅದರಂತೆ ನಮ್ಮ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಅದನ್ನು ಪ್ರಾಯೋಗಿಕವಾಗಿ ಮಾಡುತ್ತಿದ್ದಾರೆ. ಅಲ್ಲಿ ವಿದ್ಯಾರ್ಥಿಗಳಿಗೆ ತೋಟದಲ್ಲಿ ಕೆಲಸಮಾಡಿಸುತ್ತಿದ್ದಾರೆ, ಅಲ್ಲಿರತಕ್ಕ ಪ್ರಿಂಟಿಂಗ್, ಬುಕ್

ಬೈಂಡಿಂಗ್ ಕೆಲಸಗಳನ್ನು ಮಾಡಿಸುತ್ತಿದ್ದಾರೆ. ಈ ರೀತಿ 20-30 ಸಾವಿರ ರೂಪಾಯಿ ಕೂಲಿಯ ಕೆಲಸಗಳನ್ನು ಮಾಡಿಸುತ್ತಿದ್ದಾರೆ. ಪ್ರಥಮ ಬಾರಿಗೆ ಇದನ್ನು ಮೈಸೂರು ವಿಶ್ವ ವಿದ್ಯಾನಿಲಯದವರು ಮಾಡುತ್ತಿದ್ದಾರೆ. ಇದರಿಂದ ವಿದ್ಯಾರ್ಥಿಗಳಿಗೆ ಎರಡು ಮೂರು ರೂಪಾಯಿ ಸಂಪಾದನೆ ಮಾಡತಕ್ಕ ಅವಕಾಶವನ್ನು ಒದಗಿಸಿಕೊಟ್ಟಿದ್ದಾರೆ. ತಾವು ಕೂಡ ಈ ಕೆಲಸವನ್ನು ಇಲ್ಲಿಯೂ ಮಾಡಬೇಕು ಮತ್ತು ಕೊಡತಕ್ಕ ಬ್ಲಾಕ್ ಗ್ರಾಂಟನ್ನು ಇನ್ನೂ ಸ್ವಲ್ಪ ಹೆಚ್ಚಾಗಿ ಕೊಟ್ಟರೆ, ಅಲ್ಲಿ ಇನ್ನೂ ಹೆಚ್ಚಿನ ವಿದ್ಯಾರ್ಥಿಗಳ ಮನಸ್ಸಿನಲ್ಲಿ ಕ್ರಾಂತಿ ಮಾಡತಕ್ಕ ಕೆಲಸವನ್ನು ಮಾಡುವುದಕ್ಕೆ ಅನುಕೂಲವಾಗುತ್ತದೆ ಎಂದು ಹೇಳುತ್ತೇನೆ. ಮತ್ತು ಇನ್ನೂ ಅನೇಕ ವಿಚಾರಗಳನ್ನು ಹೇಳುವುದಾದರೆ, ಇವತ್ತಿನ ದಿವಸ ವಿದ್ಯಾಭ್ಯಾಸದಲ್ಲಿ ಅನೇಕ ಬದಲಾವಣೆಗಳನ್ನು ಮಾಡುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಇವತ್ತಿನ ದಿವಸ ಬದಲಾವಣೆ ಅವಶ್ಯ ಇದೆ. ಮೊದಲನೆಯದಾಗಿ, ಪಿ.ಯು.ಸಿ. ಕೋರ್ಸನ್ನು ಒಂದು ವರ್ಷ ಕಾಲ ಇದ್ದುದನ್ನು ಎರಡು ವರ್ಷ ಮಾಡತಕ್ಕದ್ದು. ಈ ನಿಲುವು ಬಹಳ ಒಳ್ಳೆಯ ನಿಲುವು; ಶ್ಲಾಘನೀಯವಾದುದು. ಎಸ್.ಎಸ್.ಎಲ್.ಸಿ. ಆದಮೇಲೆ ಅವನು ಕಾಲೇಜು ಶಿಕ್ಷಣಕ್ಕೆ ಹೊಂದಿಕೊಳ್ಳುವುದಕ್ಕೆ ಒಂದು ವರ್ಷವಾಗುತ್ತದೆ. ಒಂದು ವರ್ಷದ ಕೊನೆಯಲ್ಲಿ ಪರೀಕ್ಷೆಯಲ್ಲಿ ತೇರ್ಗಡೆಯಾಗುವುದಕ್ಕೆ ಬಹಳ ಕಷ್ಟ. ಇದನ್ನು ಎರಡು ವರ್ಷ ಮಾಡಿದರೆ, ಹಿಂದೆ ಇದ್ದ ಇಂಟರ್‌ಮೀಡಿಯೇಟ್ ರೀತಿಯಾಗಿರುತ್ತದೆ. ಇನ್ನೊಂದು ವಿಚಾರ ಇದನ್ನು ಯಾರು ಮಾಡಬೇಕು? ಎಂಬುದು. ಒಂದು ಕಡೆ ಹೈಯರ್ ಸೆಕಂಡರಿ ಸ್ಕೂಲಿಗೆ ಕೊಟ್ಟು, ಅವರ ಕೈಕೆಳಗೆ ಕೊಡಬೇಕೇ? ಅಥವಾ ಜೂನಿಯರ್ ಕಾಲೇಜ್ ಮಾಡಿ, ಎರಡು ವರ್ಷದ ಶಿಕ್ಷಣವನ್ನು ಅವರಿಗೆ ಬಿಡಬೇಕೇ ಎಂಬುದು.

3-30 P.M.

ಈ ರೀತಿಯಾಗಿ ಎಸ್.ಎಸ್.ಎಲ್.ಸಿ. ಪಾಸಾದ ಮೇಲೆ ವಿದ್ಯಾರ್ಥಿಗೆ ವಿಶ್ವವಿದ್ಯಾನಿಲಯದ ಒಂದು ಗಾಳಿ ದೊರಕಿಸುವ ಹಾಗೆ ಮಾಡಬೇಕು. ಎಸ್.ಎಸ್.ಎಲ್.ಸಿ. ಪಾಸಾದ ಮೇಲೆ ಎರಡು ವರ್ಷಗಳ ಪಿ.ಯು.ಸಿ. ಮಾಡಿದರೂ ಸರಿ. ಆದರೆ ಎಸ್.ಎಸ್.ಎಲ್.ಸಿ. ಯಲ್ಲಿ ಉತ್ತೀರ್ಣನಾದ ನಂತರ ವಿದ್ಯಾರ್ಥಿಗೆ ವಿಶ್ವವಿದ್ಯಾನಿಲಯದ ಗಾಳಿ ದೊರಕಿಸುವ ಉದ್ದೇಶದಿಂದ ಬೇರೆ ಬೇರೆ ಜೂನಿಯರ್ ಕಾಲೇಜುಗಳನ್ನು ಮಾಡಿ ಎರಡು ವರ್ಷಗಳ ಶಿಕ್ಷಣವನ್ನು ಕೊಟ್ಟರೆ ಬಹುಶಃ ವಿದ್ಯಾರ್ಥಿಗಳಿಗೆ ಯೂನಿವರ್ಸಿಟಿಯ ವಾತಾವರಣದಿಂದ ಅವರ ಮನಸ್ಸಿನಲ್ಲಿ ಒಳ್ಳೆಯ ಪರಿಣಾಮ ಆಗತಕ್ಕಂಥ ಅವಕಾಶ ಇರುವುದರಿಂದ ಜೂನಿಯರ್ ಕಾಲೇಜುಗಳನ್ನು ಮಾಡುವುದಕ್ಕೆ ಏರ್ಪಾಡು ಮಾಡುವುದು ಒಳ್ಳೆಯದು ಎಂದು ನಾನು ಸಲಹೆ ಮಾಡುತ್ತೇನೆ. ಶಿಕ್ಷಣ ಮಾಧ್ಯಮ ರಾಜ್ಯಭಾಷೆಯಾಗಬೇಕು, ಕನ್ನಡವೇ ಆಗಬೇಕು ಎನ್ನುವ ವಿಚಾರದಲ್ಲಿ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಎಲ್ಲರೂ ಇದನ್ನು ಒಪ್ಪಿಕೊಂಡಿದ್ದಾರೆ. ಪ್ರಜಾಪ್ರಭುತ್ವದಲ್ಲಿ, ಜನಸಾಮಾನ್ಯರ ಭಾಷೆಯಲ್ಲಿ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸವನ್ನು ಕೊಡಬೇಕು, ಜನಸಾಮಾನ್ಯರು ಕಲಿತುಕೊಳ್ಳುವ ಭಾಷೆಯಲ್ಲಿ ವಿದ್ಯಾಭ್ಯಾಸ ಆಗಬೇಕು ಎನ್ನುವುದರಲ್ಲಿ ಯಾರದೂ ಭಿನ್ನಾಭಿಪ್ರಾಯವಿಲ್ಲ. ಆ ಒಂದು ಭಾಷೆ ಯಾವುದು ಎಂದರೆ ಕನ್ನಡ ಭಾಷೆ. ಕನ್ನಡ ಭಾಷೆಯಲ್ಲಿ ವಿದ್ಯಾಭ್ಯಾಸ ಆಗಬೇಕು. ಕನ್ನಡ ರಾಜ್ಯದಲ್ಲಿ ಕನ್ನಡ ಭಾಷೆ ಚೆನ್ನಾಗಿ ಬೆಳೆಯಬೇಕು. ಈಹೊತ್ತು ಭಾಷೆಯ ವಿಚಾರದಲ್ಲಿ ಒಂದು ದೊಡ್ಡ ಗೊಂದಲ ಎದ್ದಿದೆ. ಕನ್ನಡ ಭಾಷೆ ಬೆಳೆಯಬೇಕು, ಕನ್ನಡ ಭಾಷೆ ರಾಜ್ಯಭಾಷೆಯಾಗಬೇಕು ಎನ್ನುವುದರಲ್ಲಿ ಯಾವ ಅಭ್ಯಂತರವೂ ಇಲ್ಲ. ಇಂಗ್ಲೀಷ್ ಭಾಷೆಯ ಸ್ಥಾನಮಾನ ಎಷ್ಟು, ಹಿಂದಿ ಭಾಷೆಯ ಸ್ಥಾನಮಾನ ಎಷ್ಟು ಎಲ್ಲೆಲ್ಲಿ ಇರಬೇಕು ಎನ್ನುವ ಒಂದು ವಿಚಾರ ಬಹಳ ಮುಖ್ಯವಾದದ್ದು. ಟೆಕ್ನಿಕಲ್ ಎಜುಕೇಷನ್, ಇಂಜಿನಿಯರಿಂಗ್, ಮೆಡಿಕಲ್ ಹೈಯ್ಯರ್ ಪೋಸ್ಟ್ ಗ್ರ್ಯಾಜುಯೇಟ್ ಸ್ಟಡಿಗೆ ಇಂಗ್ಲೀಷಿನ ಪರಿಜ್ಞಾನ ಬೇಕು ಎಂದು ಅನೇಕ ಜನ ಹೇಳುತ್ತಾರೆ. ಇಂಗ್ಲೀಷಿನಲ್ಲಿ ವಿಶೇಷವಾದ ತರಪೇತಿಯನ್ನು ಹೊಂದಬೇಕು ಎನ್ನುವವರು ಇಂಗ್ಲೀಷ್ ಸ್ಪೆಷಲ್ ಸಬ್ಜೆಕ್ಟ್ ಆಗಿ ತೆಗೆದುಕೊಂಡು ಅಭ್ಯಾಸ ಮಾಡಬಹುದು. ಪೋಸ್ಟ್‌ಗ್ರ್ಯಾಜುಯೇಟ್ ಕೋರ್ಸ್, ರೀಸರ್ಚ್ ಮತ್ತು ಟೆಕ್ನಿಕಲ್ ಎಜುಕೇಷನ್ ಇಂಥಾಕಡೆ ಹೋಗತಕ್ಕಂಥವರು ಇಂಗ್ಲೀಷ್ ತೆಗೆದುಕೊಳ್ಳುವುದಕ್ಕೆ ಅಭ್ಯಂತರವಿಲ್ಲ. ಇಂಗ್ಲೀಷ್ ಹೊರಟು ಹೋಗಬೇಕು, ಅದರ ಬದಲು ಹಿಂದೀ ಬರಬೇಕು, ಎಂದು ಹೇಳುವುದರ ಮೇಲೂ ದೊಡ್ಡ ಒಂದು ಪ್ರಬಲವಾದ ವಿರೋಧ ಇದೆ. ಡಾ॥ ಕೆ. ವಿ. ಪುಟ್ಟಪ್ಪನವರು ಹೇಳಿದ್ದಾರೆ ಕನ್ನಡ ಭಾಷೆ ಬೆಳೆಯಬೇಕು ಮತ್ತು ಕನ್ನಡ ಭಾಷೆ ರಾಜ್ಯ ಭಾಷೆ ಆಗಬೇಕೆಂದು. ಅದರೆ ಈಗಲೇ ಇಂಗ್ಲೀಷ್ ಹೋಗಬೇಕು ಎಂದು ಹೇಳಿ ‘‘ಇಂಗ್ಲೀಷ್ ನೊಗ’ ತಪ್ಪಿಸಿ ‘‘ಹಿಂದಿ ನೊಗ’’ ಹೇರುವುದಾದರೆ ಕಷ್ಟವಾಗುತ್ತದೆ. ಚೆನ್ನಾಗಿ ಕನ್ನಡ ಭಾಷೆಯನ್ನು ಕಲಿಸಿ ‘ಕನ್ನಡ ನೊಗ’’ ಹೇರಬೇಕು. ಕನ್ನಡವನ್ನು ಹೆಚ್ಚು ಹೆಚ್ಚು ಪ್ರಯೋಗಮಾಡುವುದರ ಮುಖಾಂತರ ಆ ಕೆಲಸವನ್ನು ಸಾಧನೆಮಾಡಬೇಕು. ಇನ್ಸ್ಟಿಟ್ಯೂಟ್ ಆಫ್ ಕನ್ನಡ ಸ್ಟಡೀಸ್‌ಗೆ

(ಶ್ರೀ ಎಸ್. ಶಿವಪ್ಪ)

ಪಠ್ಯ ಪುಸ್ತಕಗಳ ಅಭಾವ ಇದೆಯೆಂದರೆ ಇದು ಬಹಳ ಹೀನಾಯವಾದ ವಿಷಯ. ಇನ್‌ಸ್ಟಿಟ್ಯೂಟ್ ಆಫ್ ಕನ್ನಡ ಸ್ಟಡೀಸ್‌ಗೆ ಕನ್ನಡ ಪಠ್ಯ ಪುಸ್ತಕಗಳನ್ನು ತಾಂತ್ರಿಕ ಜ್ಞಾನದಲ್ಲಿ, ವಿಜ್ಞಾನದಲ್ಲಿ ಎಲ್ಲಾ ಫ್ಯಾಕಲ್ಟೀಸ್‌ನಲ್ಲಿಯೂ ಭಾಷಾಂತರ ಮಾಡಿ ಒಳ್ಳೊಳ್ಳೆಯ ಪಠ್ಯಪುಸ್ತಕಗಳನ್ನು ಇಡುವುದಕ್ಕೆ ವ್ಯವಸ್ಥೆಮಾಡಬೇಕು. ಡಾ|| ಕೆ. ವಿ. ಪುಟ್ಟಪ್ಪನವರ ನೇತೃತ್ವದಲ್ಲಿ ಈ ಒಂದು ಕಾರ್ಯವನ್ನು ಮಾಡುವುದಕ್ಕೆ ವ್ಯವಸ್ಥೆಮಾಡಬೇಕು. ಹೆಚ್ಚಿನ ರೀತಿಯಲ್ಲಿ ಅವರ ಒಂದು ಸಹಾಯವನ್ನು ಪಡೆದು, ಆ ಒಂದು ಕಾರ್ಯಕ್ಕೆ ಇನ್ನೂ ಹೆಚ್ಚಿನ ಹಣವನ್ನು ಒದಗಿಸಿ ಒಳ್ಳೊಳ್ಳೆಯ ಪಠ್ಯ .ಪು ್ತಕಗಳನ್ನು ತಯಾರು ಮಾಡತಕ್ಕ ಹೆಚ್ಚಿನ ರೀತಿಯಲ್ಲಿ ಪ್ರಯತ್ನ ಮಾಡಿದರೆ ಅದರಿಂದ ಒಳ್ಳೆಯ ಪ್ರಯೋಜನ ವಾಗುತ್ತದೆ. ತಾಂತ್ರಿಕ ಮತ್ತು ವಿಜ್ಞಾನ ಶಾಖೆಯಲ್ಲಿ ಸರಿಯಾದಂತಹ ಪಠ್ಯ ಪುಸ್ತಕಗಳು ಇಲ್ಲದೇ ಇದ್ದರೆ ವಿದ್ಯಾಭ್ಯಾಸ ಮಾಡುವುದು ಕಷ್ಟ. ಆದ್ದರಿಂದ ಇಂಗ್ಲೀಷ್ ಭಾಷೆಯಲ್ಲಿ ಇರುವಂತಹ ಈ ಪಠ್ಯ ಪುಸ್ತಕಗಳನ್ನು ಕನ್ನಡ ಭಾಷೆಯಲ್ಲಿ ಭಾಷಾಂತರ ಮಾಡುವುದಕ್ಕೆ ವ್ಯವಸ್ಥೆಮಾಡಬೇಕು. ಈ ರೀತಿಯಾಗಿ ಎಲ್ಲಾ ಸಬ್ಜೆಕ್ಟುಗಳಲ್ಲಿಯೂ ಇರತಕ್ಕಂಥ ಪಠ್ಯ ಪುಸ್ತಕಗಳನ್ನು ಭಾಷಾಂತರ ಮಾಡಿ ವಿದ್ಯಾರ್ಥಿಗಳಿಗೆ ಸಾಕಷ್ಟು ಸಂಖ್ಯೆಯಲ್ಲಿ ಪಠ್ಯ ಪುಸ್ತಕಗಳನ್ನು ಒದಗಿಸತಕ್ಕದ್ದು ಸರ್ಕಾರದ ಕರ್ತವ್ಯ ಎಂದು ನಾನು ಹೇಳುತ್ತೇನೆ.

ಹಿಂದೆ ನಾವು ವಿಶ್ವವಿದ್ಯಾನಿಲಯದಲ್ಲಿ ಅಭ್ಯಾಸ ಮಾಡುವ ಕಾಲದಲ್ಲಿ ಹೆಚ್ಚಿನ ರೀತಿಯಲ್ಲಿ ಹಾಸ್ಟಲುಗಳ ಸೌಕರ್ಯ, ಹೆಚ್ಚಿನ ರೀತಿಯ ಆಟದ ಮೈದಾನಗಳು ಇದ್ದುವು. ಈ ಹೊತ್ತು ಎಲ್ಲೆಲ್ಲಿ ನೋಡಿದರೂ ಕಾಲೇಜುಗಳಾಗಿವೆ, ಸ್ಕೂಲು ಕಾಲೇಜುಗಳ ಅಭಿವೃದ್ಧಿ ಆಗಿದೆ ಆದರೆ ವಿದ್ಯಾರ್ಥಿ ಗಳಿಗೆ ಸಾಯಂಕಾಲದ ವೇಳೆಯಲ್ಲಿ ಆಟವಾಡಲು ಮೈದಾನಗಳಿಲ್ಲ. ಹಳ್ಳಿಗಳಿಂದ ಪಟ್ಟಣಕ್ಕೆ ವಿದ್ಯಾಭ್ಯಾಸಕ್ಕೆ ಬರತಕ್ಕ ವಿದ್ಯಾರ್ಥಿಗಳಿಗೆ ಹಾಸ್ಟಲುಗಳ ಸೌಕರ್ಯ ಇಲ್ಲ. ಇದರಿಂದ ಇಹೊತ್ತು ವಿದ್ಯಾರ್ಥಿಗಳ ಮನಸ್ಸಿನ ಮೇಲೆ ಕೆಟ್ಟ ಪರಿಣಾಮವನ್ನುಂಟುಮಾಡತಕ್ಕ ಸಂದರ್ಭ ಇದೆ. ವಿದ್ಯಾರ್ಥಿಗಳಿಗೆ ಒಳ್ಳೆಯ ಸೌಕರ್ಯಗಳನ್ನು ಒದಗಿಸಬೇಕು, ಒಳ್ಳೆಯ ಗಾಳಿ ಒಳ್ಳೆಯ ವಾತಾ ವರಣ ಇರಬೇಕು ಅವರು ಆಟವಾಡುವುದಕ್ಕೆ ಒಳ್ಳೆಯ ಆಟದ ಮೈದಾನಗಳು ಇರಬೇಕು ಅವರು ವಾಸಮಾಡುವುದಕ್ಕೆ ಒಳ್ಳೆಯ ಹಾಸ್ಟಲ್ ಸೌಕರ್ಯ ಇರಬೇಕು. ಅವರಿಗೆ ಆ ಸೌಕರ್ಯಗಳು ಸರಿಯಾಗಿ ಇಲ್ಲದೆ ಇರುವುದರಿಂದ ಪೇಟೆಯಲ್ಲಿರತಕ್ಕ ವಿದ್ಯಾರ್ಥಿಗಳ ಮನಸ್ಸಿನ ಮೇಲೆ ಕೆಟ್ಟ ಪರಿಣಾಮವನ್ನುಂಟುಮಾಡಿದೆ. ವಿದ್ಯಾರ್ಥಿಗಳು ಸಿನಿಮಾಮಂದಿರಗಳಲ್ಲಿ ಪೇಟೆಗಳಲ್ಲಿ ಅಲೆದಾಡು ತ್ತಿದ್ದಾರೆ ಅವರ ದೈಹಿಕ ಆರೋಗ್ಯದ ಮೇಲೆ ಕೆಟ್ಟ ಪರಿಣಾಮವನ್ನುಂಟುಮಾಡಿದೆ. ಅದು ವಿದ್ಯಾರ್ಥಿಗಳಲ್ಲಿ ಮಾಯವಾಗಬೇಕಾದರೆ ಸರ್ಕಾರದವರು ಎಲ್ಲಾ ಸ್ಕೂಲು ಕಾಲೇಜುಗಳಿಗೂ ಎಲ್ಲಾ ಕಡೆಗಳಲ್ಲಿಯೂ ಒಳ್ಳೆಯ ಆಟದ ಮೈದಾನಗಳನ್ನು ಒದಗಿಸಿಕೊಡಬೇಕು. ಹಾಸ್ಟಲುಗಳ ಸೌಕರ್ಯವನ್ನು ಹೆಚ್ಚಿಸುವುದರ ಮುಖಾಂತ ಅವರಿಗೆ ಒಂದು ಒಳ್ಳೆಯ ವಾತಾವರಣವನ್ನು ಸರ್ಕಾರದವರು ಕಲ್ಪಿಸಿಕೊಡಬೇಕು ಎಂದು ನಾನು ಹೇಳುತ್ತೇನೆ.

ಇನ್ನು ಕೊನೆಯದಾಗಿ ವಿದ್ಯಾಭ್ಯಾಸ ಕ್ರಮದಲ್ಲಿ ಅನೇಕ ಬದಲಾವಣೆಗಳನ್ನು ಮಾಡುವುದರ ಜೊತೆಗೆ ವಿದ್ಯಾರ್ಥಿಗಳಲ್ಲಿ ವಿಚಾರ ಕ್ರಾಂತಿಮೂಡುವುದು ಅವಶ್ಯಕ. ವಿದ್ಯಾರ್ಥಿಗಳಲ್ಲಿ ವಿಚಾರ ಧಾರೆಯನ್ನು ಹರಿಸುವಂತಹ ಒಂದು ವಿದ್ಯಾಭ್ಯಾಸವನ್ನು ಅವರಿಗೆ ಕೊಡುವುದು ಸರ್ಕಾರದ ಪ್ರಾಮುಖ್ಯ ಕರ್ತವ್ಯವಾಗಿದೆ. ಇಂಥಾ ಕೆಲಸವನ್ನು ಮಾಡುವುದಕ್ಕೆ ನಾನು ಕೆಲವು ಸಲಹೆಗಳನ್ನು ಕೊಟ್ಟಿದ್ದೇನೆ. ಅದನ್ನು ಆಚರಣೆಗೆ ತರಬೇಕೆಂದು ನಾನು ಮಾನ್ಯ ವಿದ್ಯಾಸಚಿವರಿಗೆ ಸಲಹೆ ಮಾಡು ತ್ತೇನೆ. ನಾನು ಮೊದಲೇ ಹೇಳಿದ ಹಾಗೆ ಪ್ರಾಥಮಿಕ ಶಿಕ್ಷಣಕ್ಕೇ ಪ್ರತ್ಯೇಕ ಡೈರೆಕ್ಟರ್ ನೇಮಕ ಮಾಡುವುದು ಆಗಬೇಕು. ಮುಖ್ಯವಾಗಿ ಪ್ರಾಥಮಿಕ ವಿದ್ಯಾಭ್ಯಾಸಕ್ಕಾಗಿ ಹೆಚ್ಚು ಆದ್ಯತೆಯನ್ನು ಕೊಡುವುದನ್ನು ಶೀಘ್ರವಾಗಿ ಮಾಡಬೇಕೆಂದು ಹೇಳಿ ನಾನು ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

†ಶ್ರೀ ಎಂ. ಶ್ರೀನಿವಾಸನಾಯಕ್ (ಮಂಗಳೂರು-೧).—ಮಾನ್ಯ ಸಭಾಧ್ಯಕ್ಷರೇ, ಮಾನ್ಯ ವಿದ್ಯಾ ಮಂತ್ರಿಗಳು ಈ ಸಭೆಯ ಮುಂದೆ ಮಂಡಿಸಿರತಕ್ಕ ವಿದ್ಯಾಭ್ಯಾಸ ಇಲಾಖೆಗೆ ಸಂಬಂಧಪಟ್ಟ ಬೇಡಿಕೆ ಗಳನ್ನು ನಾನು ಸ್ವಾಗತಿಸುತ್ತಾ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಈಗ 10 ವರ್ಷಗಳ ಅವಧಿಯಲ್ಲಿ ಮೈಸೂರು ಸಂಸ್ಥಾನದಲ್ಲಿ ವಿದ್ಯಾಭ್ಯಾಸ ತುಂಬಾ ಪ್ರಗತಿಯನ್ನು ಪಡೆದಿದೆ, ಅಭಿವೃದ್ಧಿಯನ್ನು ಹೊಂದಿದೆ, ಎಂದು ಹೇಳಬಹುದು. ಪ್ರೈಮರಿ ಶಾಲೆಗಳು, ಎಲಿಮೆಂಟರಿ ಶಾಲೆ ಗಳು ಸೆಕೆಂಡರಿ ಶಾಲೆಗಳು, ಕಾಲೇಜುಗಳು, ಟೆಕ್ನಿಕಲ್ ಕಾಲೇಜುಗಳು ಸಾಕಷ್ಟು ಸಂಖ್ಯೆಯಲ್ಲಿ ಸ್ಥಾಪಿಸಲ್ಪಟ್ಟಿವೆ. ಈ ದೇಶದಲ್ಲಿ ಹುಟ್ಟಿದ ಪ್ರತಿಯೊಂದು ಮಗುವಿಗೂ ವಿದ್ಯಾಭ್ಯಾಸವನ್ನು ಒದಗಿಸ

ಬೇಕು ಎನ್ನುವ ದೃಷ್ಟಿಯಿಂದ ಸರ್ಕಾರದವರು ಆಸಕ್ತಿಯನ್ನು ವಹಿಸಿ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಪ್ರೋತ್ಸಾಹವನ್ನು ಕೊಡುತ್ತಿದ್ದಾರೆ. ಮತ್ತು ಅದಕ್ಕೆ ಬೇಕಾದಂತಹ ಸೌಲಭ್ಯಗಳನ್ನು ಒದಗಿಸಿ ಕೊಡುತ್ತಿದ್ದಾರೆ. ಈ ವಿದ್ಯಾಭ್ಯಾಸದಲ್ಲಿ, ಮಕ್ಕಳಿಗೆ ವಿದ್ಯೆಯನ್ನು ಹೇಳಿಕೊಡತಕ್ಕ ಕೆಲಸದಲ್ಲಿ ತೊಡಗಿರುವಂತಹ ಉಪಾಧ್ಯಾಯರ ಸ್ಥಿತಿಯನ್ನೂ ಕ. ಡ ಉತ್ತಮಗೊಳಿಸುವ ಬಗ್ಗೆ ಎಲ್ಲಾ ರೀತಿಯ ಕಾರ್ಯಕ್ರಮವನ್ನೂ ಸರ್ಕಾರದವರು ಕೈಗೊಂಡಿದ್ದಾರೆ ಅದು ಫಲಕಾರಿಯಾಗಿದೆ. ಅದೇರೀತಿ ವಿದ್ಯಾಭ್ಯಾಸ ಹೆಚ್ಚು ಪ್ರಗತಿಯನ್ನು ಹೊಂದುವುದಕ್ಕಾಗಿ ಸರ್ಕಾರದವರು ಈ ವಿದ್ಯಾ ಖಾತೆಗೆ ವರ್ಷೇ ವರ್ಷೇ ಹೆಚ್ಚು ಹೆಚ್ಚು ಹಣವನ್ನು ಒದಗಿಸುತ್ತಿದ್ದಾರೆ. ಮೂರು ವರ್ಷಗಳ ಹಿಂದೆ ವಿದ್ಯಾಭ್ಯಾಸಕ್ಕಾಗಿ 25 ಕೋಟಿ ರೂಪಾಯಿಗಳನ್ನು ಒದಗಿಸಿದ್ದರು. ಈ ವರ್ಷ ಅದನ್ನು ನೋಡಿದರೆ ಈ ವಿದ್ಯಾಭ್ಯಾಸದ ಬಾಬಿಗೆ 46 ಕೋಟಿ ರೂಪಾಯಿಗಳನ್ನು ಒದಗಿಸಿದ್ದಾರೆ. ಇದರಿಂದಾಗಿ ವಿದ್ಯಾಭ್ಯಾಸ ಎಷ್ಟರ ಮಟ್ಟಿಗೆ ಪ್ರಸರಿಸಿದೆ ಸರ್ಕಾರ ಎಷ್ಟರಮಟ್ಟಿಗೆ ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ಯೋಜನೆಗಳನ್ನು ಕಾರ್ಯಗತಗೊಳಿಸಿದೆ ಎಂಬುದು ಗೋಚರವಾಗುತ್ತದೆ. ದೇಶದಲ್ಲಿ ಜನತೆಗೆ ವಿದ್ಯಾಭ್ಯಾಸ ಸರಿಯಾಗಿ ದೊರೆಯುತ್ತಿದೆ ಎಂಬುದು ಇದರಿಂದ ವ್ಯಕ್ತವಾಗುತ್ತದೆ. ವಿದ್ಯಾಭ್ಯಾಸದ ಬೇಡಿಕೆ ವರ್ಷೇ ವರ್ಷೇ ಹೆಚ್ಚು ಹೆಚ್ಚಾಗಿ ಬೆಳೆದು ಬರುತ್ತದೆ ಎಂಬುದು ಗಮನಕ್ಕೆ ಬರುತ್ತಿದೆ. ನಮ್ಮ ದೇಶದಲ್ಲಿ ಪ್ರತಿಯೊಬ್ಬರಿಗೂ ಕೂಡ ವಿದ್ಯಾಭ್ಯಾಸವನ್ನು ಕೊಡಬೇಕೆಂಬ ದೃಷ್ಟಿಯಿಂದ ಸರ್ಕಾರದವರು ಯೋಜನೆಯನ್ನು ಕೈಗೊಂಡನಂತರ ಅದಕ್ಕೆ ವರ್ಷೇ ವರ್ಷೇ ಹೆಚ್ಚು ಹೆಚ್ಚು ಹಣವನ್ನು ಒದಗಿಸಿ ಸರ್ಕಾರದವರು ಅದನ್ನು ಕಾರ್ಯಗತ ಮಾಡುತ್ತಿದ್ದಾರೆ. ಎಲ್ಲಾ ಮಕ್ಕಳಿಗೂ ವಿದ್ಯಾಭ್ಯಾಸವನ್ನು ಕೊಡುವಂತಹ ಒಂದು ಕಾರ್ಯವನ್ನು ಸರ್ಕಾರದವರು ಮಾಡುತ್ತಿದ್ದಾರೆ. ಆದರೆ ನಮ್ಮ ದೇಶದ ಆರ್ಥಿಕ ಪರಿಸ್ಥಿತಿಯನ್ನು ಗಮನಕ್ಕೆ ತೆಗೆದುಕೊಳ್ಳುವುದು ನಮ್ಮ ಕರ್ತವ್ಯವಾಗಿದೆ. ಅದೇ ರೀತಿಯಲ್ಲಿ ವಿದ್ಯಾಭ್ಯಾಸಕ್ಕಾಗಿ ಆಗುವ ಖರ್ಚನ್ನು ಮಿತಿಗೊಳಿಸಬಹುದೇ ಮತ್ತು ನಮ್ಮ ಮಕ್ಕಳಿಗೆ ಯಾವ ರೀತಿಯ ವಿದ್ಯಾಭ್ಯಾಸವನ್ನು ಕೊಡಬಹುದು ಎಂಬ ಬಗ್ಗೆ ವಿಚಾರ ವಿನಿಮಯ ಮಾಡುವುದು ಈ ಸಂದರ್ಭದಲ್ಲಿ ಅಗತ್ಯವಾಗಿದೆ. ನಮ್ಮ ಮಕ್ಕಳನ್ನು ಪ್ರೈಮರಿ ಶಾಲೆಗಳಿಗೆ ಸೇರಿಸಬೇಕಾದರೆ 6 ವರ್ಷವಾಗಿರಬೇಕೆಂಬ ಮಿತಿಯನ್ನು ಹಾಕಿದ್ದೇವೆ. 6 ವರ್ಷದ ವರೆಗೆ ಮಕ್ಕಳು ಯಾವ ರೀತಿ ವಿದ್ಯಾರ್ಜನೆ ಮಾಡಬೇಕು ಎಂಬ ಬಗ್ಗೆ ಸರ್ಕಾರ ಹೆಚ್ಚಾಗಿ ಆಸಕ್ತಿ ವಹಿಸಿಲ್ಲವೆಂದು ಹೇಳಬಹುದು. ನಮ್ಮ ರಾಜ್ಯದಲ್ಲಿ ಪ್ರೀ ಪ್ರೈಮರಿ ಶಾಲೆಗಳು ಎಷ್ಟು ಆಗಬೇಕೋ ಅಷ್ಟು ಆಗಿಲ್ಲವೆಂದು ಹೇಳಬಹುದು. ಪ್ರೀ ಪ್ರೈಮರಿ ಶಾಲೆಗಳನ್ನು ನಿರ್ಮಿಸುವ ಬಗ್ಗೆ ಅದಷ್ಟು ಉತ್ತೇಜನವನ್ನು ನಮ್ಮ ಸರ್ಕಾರದವರು ಕೊಡಲಿಲ್ಲವೆಂದು ಈ ಸಂದರ್ಭದಲ್ಲಿ ಸ್ಮರಿಸಿಕೊಳ್ಳಬಹುದಾಗಿದೆ. ಒಂದು ಮಗು ಶಾಲೆಗೆ ಸೇರುವ ವಯಸ್ಸನ್ನು 6 ವರ್ಷಕ್ಕೆ ಏರಿಸುವುದರಿಂದ, 3 ರಿಂದ 6 ವರ್ಷದವರೆಗಿನ ಮಕ್ಕಳಿಗೆ ತೊಂದರೆಯಾಗುತ್ತಿದೆ. ಏಕೆಂದರೆ ಈ ವಯಸ್ಸಿನಲ್ಲಿ ಮಕ್ಕಳು ಗುಣವನ್ನು ಹೆಚ್ಚಾಗಿ ರೂಪಿಸಿಕೊಳ್ಳುತ್ತವೆಯಾದ್ದರಿಂದ ಪ್ರೀ ಪ್ರೈಮರಿ ಶಾಲೆಗಳಿಗೆ ಹೆಚ್ಚಿನ ಆದ್ಯತೆಯನ್ನು ಸರ್ಕಾರದವರು ಕೊಡಬೇಕೆಂದೂ ಮತ್ತು ಪ್ರೀ ಪ್ರೈಮರಿ ಶಾಲೆಗಳಿಗೆ ಆರ್ಥಿಕ ಸಹಾಯ ಕೊಡುವುದು ಸರ್ಕಾರದ ಕರ್ತವ್ಯವೆಂದೂ ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ಸೆಕೆಂಡರಿ ಶಿಕ್ಷಣದ ಬಗ್ಗೆ ಶ್ರೀಮಾನ್ ಶಿವಪ್ಪನವರು ಹೇಳಿದರು. ಎರಡು ವರ್ಷದ ಪಿ.ಯು.ಸಿ. ಯನ್ನು ಇಡಬೇಕೇ ಅಥವಾ ಇನ್ನೊಂದು ಜೂನಿಯರ್ ಕಾಲೇಜನ್ನು ಮಾಡಬೇಕೇ ಎಂಬ ವಿಚಾರದಲ್ಲಿ ತುಂಬ ರೀತಿಯಿಂದ ಅವರು ಹಲವು ವಿಷಯಗಳನ್ನು ಹೇಳಿದರು. ಈ ಬಗ್ಗೆ ಸರ್ಕಾರದ ಧೋರಣೆ ಸಮರ್ಥನೀಯವಾಗಿದೆ. 11ನೇ ಸ್ಟ್ಯಾಂಡರ್ಡ್‌ನ್ನು ಹೈಸ್ಕೂಲಿನಲ್ಲಿ ಸೇರಿಸಿದಂತೆ 12ನೇ ಸ್ಟ್ಯಾಂಡರ್ಡ್‌ನ್ನು ಸಹ ಸೇರಿಸುವುದು ಅಗತ್ಯವಾಗಿದೆ. ಪಾಶ್ಚಾತ್ಯದೇಶಗಳಲ್ಲಿ ಕೂಡ 12ನೇ ಸ್ಟ್ಯಾಂಡರ್ಡ್‌ನ್ನು ಸೆಕೆಂಡರಿ ಶಾಲೆಯಲ್ಲಿ ಸೇರಿಸಿದ್ದಾರೆ. ಕಾಲೇಜಿಗೆ ಸೇರಿಸಿಲ್ಲ. ಒಂದು ಮಗು ಪ್ರೈಮರಿ ಶಾಲೆಗೆ ಸೇರಿದಾಗ 12ನೇ ಸ್ಟ್ಯಾಂಡರ್ಡ್‌ವರೆಗೆ ಅಲ್ಲಿ ಕಲಿತು ಮುಂದೆ ಕಾಲೇಜಿಗೆ ಹೋಗುವುದು ಅಗತ್ಯವಾಗಿದೆ. 12 ನೇ ಸ್ಟ್ಯಾಂಡರ್ಡ್‌ನಂತರ ಕಾಲೇಜುಗಳು ಮತ್ತು ಟೆಕ್ನಿಕಲ್ ಕಾಲೇಜುಗಳನ್ನು ಪ್ರಾರಂಭ ಮಾಡುವುದು ಅಗತ್ಯವಾಗಿದೆ.

ಇನ್ನು ಪರೀಕ್ಷೆಯ ವಿಷಯ. ನಾವು ಇವೊತ್ತಿನ ದಿವಸ ಪರೀಕ್ಷೆಗಾಗಿ ಎಷ್ಟೋ ಹಣವನ್ನು ವಿನಿಯೋಗಿಸುತ್ತಿದ್ದೇವೆ. 7ನೇ ಸ್ಟ್ಯಾಂಡರ್ಡ್‌ನಲ್ಲಿ ಪಬ್ಲಿಕ್ ಪರೀಕ್ಷೆಯನ್ನು ನಡೆಸುತ್ತಿದ್ದೇವೆ. 10ನೇ ಸ್ಟ್ಯಾಂಡರ್ಡ್‌ನಲ್ಲಿ ಪಬ್ಲಿಕ್ ಪರೀಕ್ಷೆಯನ್ನು ನಡೆಯುಸುತ್ತಿದ್ದೇವೆ. 11ನೇ ಸ್ಟ್ಯಾಂಡರ್ಡ್‌ನಲ್ಲಿ ಪಬ್ಲಿಕ್ ಪರೀಕ್ಷೆಯನ್ನು ನಡೆಸುತ್ತಿದ್ದೇವೆ. ಇಷ್ಟು ಚಿಕ್ಕ ಪ್ರಾಯದ ಮಕ್ಕಳು ಈ ಮೂರು ಸ್ಟ್ಯಾಂಡರ್ಡ್‌ಗಳಲ್ಲಿ ಪಬ್ಲಿಕ್ ಪರೀಕ್ಷೆಗಳಿಗೆ ಕುಳಿತುಕೊಳ್ಳುವುದು ಎಷ್ಟು ತ್ರಾಸು ಬೀಳುತ್ತದೆ ಎಂಬುದನ್ನು ನಾವು ನೋಡಬೇಕಾಗಿದೆ. ಇದನ್ನು ಪುನರ್‌ಪರಿಶೀಲಿಸಲು ಸಾಧ್ಯವೇ ಎಂಬುದನ್ನು ಸರ್ಕಾರದವರು ನೋಡಬೇಕಾಗಿದೆ. 10ನೇ ಸ್ಟ್ಯಾಂಡರ್ಡ್‌ಗೆ ಪಬ್ಲಿಕ್ ಪರೀಕ್ಷೆ ಮಾಡಿದಮೇಲೆ ಮತ್ತೆ 11ನೇ ಸ್ಟ್ಯಾಂಡರ್ಡ್‌ಗೆ ಪಬ್ಲಿಕ್ ಪರೀಕ್ಷೆಯನ್ನು ಮಾಡುವುದು ಸರಿಯೇ ಮತ್ತು ಎಷ್ಟು

(ಶ್ರೀ ಎಂ. ಶ್ರೀನಿವಾಸ ನಾಯಕ್)

ಹೆಚ್ಚಿನ ವೆಚ್ಚ ವಾಗುತ್ತದೆ ಎಂಬುದನ್ನು ನೋಡಬೇಕಾಗಿದೆ. ಬೊಂಬಾಯಿ, ಡೆಲ್ಲಿ ಮುಂತಾದ ಇತರ ರಾಜ್ಯಗಳಲ್ಲಿ 10ನೇ ಸ್ಟ್ಯಾಂಡರ್ಡ್‌ಗೆ ಪಬ್ಲಿಕ್ ಪರೀಕ್ಷೆ ಇಲ್ಲ. ಆದ್ದರಿಂದ 10ನೇ ಸ್ಟ್ಯಾಂಡರ್ಡ್‌ಗೆ ಪಬ್ಲಿಕ್ ಪರೀಕ್ಷೆಯನ್ನು ಮಾಡದೆ ನಿಲ್ಲಿಸಿದರೆ ಸರ್ಕಾರಕ್ಕೆ 2 ಕೋಟಿ ರೂಪಾಯಿಗಳು ಉಳಿತಾಯವಾಗುತ್ತದೆ.

ಇನ್ನು ಪಠ್ಯಪುಸ್ತಕಗಳ ವಿಷಯ. ಒಂದು ವರ್ಷದಲ್ಲಿ ಇದ್ದ ಪುಸ್ತಕಗಳನ್ನು ಮುಂದಿನ ವರ್ಷ ಬದಲಾಯಿಸಬೇಕೇ ಅಥವಾ 3-4 ವರ್ಷಗಳವರೆಗೆ ಅವೇ ಪಠ್ಯಪುಸ್ತಕಗಳೇ ಇರಬೇಕೇ ಎಂಬುದನ್ನು ಆಲೋಚಿಸುವುದು ಸರ್ಕಾರದ ಆದ್ಯಕರ್ತವ್ಯವಾಗಿದೆ. ಈ ಹೊತ್ತಿನದಿವಸ ಸರ್ಕಾರದವರಿಗೆ ಪಠ್ಯಪುಸ್ತಕಗಳನ್ನು ಡಿಸೆಂಬರ್-ಜನವರಿ ಬಂದರೂ ಕೂಡ ಮಕ್ಕಳಿಗೆ ಕೊಡುವುದಕ್ಕೆ ಸಾಧ್ಯವಾಗಿಲ್ಲ. ಮೈಸೂರು ಸಂಸ್ಥಾನಕ್ಕೆ ಬೇಕಾಗುವ ಪುಸ್ತಕಗಳನ್ನು ಪ್ರಿಂಟ್ ಮಾಡಿಸಿ ಕೊಡುವುದರಲ್ಲಿ ವಿಳಂಬವಾಗುತ್ತಿದೆ. ಇದಕ್ಕೆ ನಮ್ಮ ಪ್ರೆಸ್‌ಗಳಲ್ಲಿ ತುಂಬ ಕೆಲಸವಿರುವುದು ಒಂದು ಕಾರಣ. ಡಿಸೆಂಬರ್-ಜನವರಿ ತಿಂಗಳು ಬಂದರೂ ಕೂಡ ಹೈಸ್ಕೂಲ್ ಮತ್ತು ಕಾಲೇಜಿನ ಹುಡುಗರಿಗೆ ಪಠ್ಯಪುಸ್ತಕಗಳು ಸಿಗುವುದು ಕಷ್ಟವಾಗಿರುವುದರಿಂದ, ಮೂರು ವರ್ಷದವರೆಗೆ ಒಂದೇ ರೀತಿಯ ಪಠ್ಯಪುಸ್ತಕಗಳನ್ನು ಇಡುವುದು ಒಳ್ಳೆಯದು, ಇದನ್ನು ಸರ್ಕಾರದವರು ಪರಿಶೀಲಿಸಬೇಕೆಂದು ಹೇಳುತ್ತಿದ್ದೇನೆ.

ಇನ್ನು ಪ್ರೈಮರಿ ಶಾಲೆಗಳಲ್ಲಿ ಪಾಠ ಹೇಳಿಕೊಡಲು ಗ್ರ್ಯಾಜ್ಯುಯೇಟ್ ಆದವರನ್ನು ನೇಮಕ ಮಾಡುತ್ತೇವೆಂದು ಸರ್ಕಾರದವರು ಹೇಳಿರುವುದು ಸ್ವಾಗತಾರ್ಹ. ಇದರಿಂದ ಈ ಹೊತ್ತು ವಿದ್ಯಾಭ್ಯಾಸದಲ್ಲಿ ಏನು ಒಂದು ಕೊರತೆ ಇದೆ ಅದನ್ನು ನೀಗಿಸುವುದಕ್ಕೆ ಸಾಧ್ಯವಾಗುತ್ತದೆ ಮತ್ತು ವಿದ್ಯೆಯ ಗಂಧವನ್ನು ಮಕ್ಕಳಿಗೆ ತೋರಿಸುವುದಕ್ಕೆ ಸಾಧ್ಯವಾಗುತ್ತದೆ. ಅಲ್ಲದೆ ಎಲಿಮೆಂಟರಿ ಶಾಲೆಗಳಲ್ಲಿ ವಿದ್ಯಾಮಟ್ಟವನ್ನು ಹೆಚ್ಚಿಸುವುದಕ್ಕೆ ಸಾಧ್ಯವಾಗುತ್ತದೆ. ಸೆಕೆಂಡರಿ ಶಾಲೆಯ ಉಪಾಧ್ಯಾಯರು ಪ್ರೈಮರಿ ಶಾಲೆಗಳಲ್ಲಿ ಹೆಡ್‌ಮಾಸ್ಟರ್‌ಗಳಾಗಿ ಕೆಲಸ ಮಾಡುತ್ತಿದ್ದರೆ ಇನ್‌ಚಾರ್ಜ್ ಅಲೋಯನ್ಸ್ ಕೊಡಬೇಕು. ಆದರೆ ಇವತ್ತಿನದಿವಸ ಕೊಡುತ್ತಿಲ್ಲ. ಹೆಚ್ಚು ಆಸಕ್ತಿಯಿಂದ ಇವರು ಕೆಲಸ ಮಾಡಬೇಕಾದರೆ ಇನ್‌ಚಾರ್ಜ್ ಅಲೋಯನ್ಸ್ ಕೊಡುವ ಅಗತ್ಯಇದೆ. ಇವತ್ತಿನದಿವಸ ಇನ್‌ಚಾರ್ಜ್ ಅಲೋಯನ್ಸ್ ಕೊಡದಿರುವುದರಿಂದ ಯಾರೂ ಮುಂದೆ ಬಂದು ಈ ಕೆಲಸವನ್ನು ಮಾಡುತ್ತಿಲ್ಲ. ಇನ್‌ಚಾರ್ಜ್ ಅಲೋಯನ್ಸ್ ಕೊಡುವುದರಿಂದ ಶಾಲೆಗಳಲ್ಲಿ ವಿದ್ಯಾಮಟ್ಟವನ್ನು ಹೆಚ್ಚಿಸಲಿಕ್ಕೆ ಸಾಧ್ಯವಾಗುತ್ತದೆಂದು ಹೇಳಬಯಸುತ್ತೇನೆ.

ಇದೇ ರೀತಿ ಏಡೆಡ್ ಶಾಲೆಗಳು ಇವೆ. ಈ ಶಾಲೆಗಳಲ್ಲಿರುವ ಉಪಾಧ್ಯಾಯರು ತಮ್ಮ 58ನೇ ವರ್ಷಕ್ಕೆ ನಿವೃತ್ತಿಯಾಗಬೇಕಾಗಿದ್ದರೆ ಸರ್ಕಾರದ ಶಾಲೆಗಳಲ್ಲಿರುವ ಉಪಾಧ್ಯಾಯರು ತಮ್ಮ 55ನೇ ವರ್ಷಕ್ಕೆ ನಿವೃತ್ತಿಯಾಗಬೇಕಾಗಿದೆ. ವಿದ್ಯಾಭ್ಯಾಸದ ವೃತ್ತಿಯಲ್ಲಿ ಯಾರು ತೊಡಗಿರುತ್ತಾರೋ ಅಂತಹವರಲ್ಲಿ ಭೇದಭಾವನೆ ತೋರಿಸಿದರೆ ವಿದ್ಯಾಭ್ಯಾಸದ ಮಟ್ಟ ಹೆಚ್ಚುವುದಿಲ್ಲ. ಆದಕಾರಣ ಪ್ರತಿಯೊಬ್ಬ ಉಪಾಧ್ಯಾಯರೂ ಸಹ ತಮ್ಮ 58ನೇ ವರ್ಷದಲ್ಲಿ ನಿವೃತ್ತಿಯಾಗುವಂತೆ ಕಾನೂನನ್ನು ಕಡ್ಡಾಯವಾಗಿ ಕಾರ್ಯರೂಪಕ್ಕೆ ತರುವುದು ಅಗತ್ಯವಿದೆ. ಇದೇ ರೀತಿಯಲ್ಲಿ ಕಾಲೇಜುಗಳಲ್ಲಿರುವ ನೌಕರರಿಗೆ ಯು. ಜಿ. ಸಿ. ಸ್ಕೇಲನ್ನು ಕೊಡುತ್ತೇವೆಂದು ಸರ್ಕಾರದವರು ಹೇಳಿದ್ದಾರೆ. ಆದರೆ ಈ ಸ್ಕೇಲನ್ನು ಜಾರಿಗೆ ತರದಿದ್ದರೆ ಕಾಲೇಜುಗಳಲ್ಲಿ ವಿದ್ಯಾಭ್ಯಾಸದ ಮಟ್ಟ ಕಡಿಮೆಯಾಗುತ್ತದೆ. ಈ ವೃತ್ತಿಯಲ್ಲಿ ತೊಡಗಿರುವವರ ಮನಸ್ಸಿನಲ್ಲಿ ಬೇಸರಾತು ಇರಬಾರದು. ಸಂಬಳದ ವಿಚಾರದಲ್ಲಿ ಹೆಚ್ಚಿನ ಬೆಂಬಲ ಕೊಡುವುದು ಸರ್ಕಾರದವರ ಆದ್ಯಕರ್ತವ್ಯವಾಗಿದೆಯೆಂದು ಹೇಳುತ್ತೇನೆ. ಯಾವ ಕಾಲೇಜುಗಳೇ ಆಗಲಿ, ಅಲ್ಲಿ ಕೆಲಸ ಮಾಡುವ ಪ್ರೊಫೆಸರ್‌ಗಳು ಮತ್ತು ಅಸಿಸ್ಟೆಂಟ್ ಪ್ರೊಫೆಸರ್‌ಗಳಿಗೆ ಯು. ಜಿ. ಸಿ. ಸ್ಕೇಲನ್ನು ಕೊಟ್ಟು ಅವರನ್ನು ತೃಪ್ತಿಪಡಿಸಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ಆಟದ ಬಯಲಿನ ಬಗ್ಗೆ ಹೇಳುವುದಾದರೆ, ಶ್ರೀಮಾನ್ ಶಿವಪ್ಪನವರು ಹೇಳಿದಂತೆ ಆಟದ ಬಯಲು ಕಡಿಮೆಯಾಗುತ್ತಿವೆ. ಆಟದ ಬಯಲಿನ ಅಗತ್ಯವಿದೆ. ಈಗ ಸ್ಟೇಟ್ ಸ್ಪೋರ್ಟ್ಸ್ ಕೌನ್ಸಿಲ್ ಮತ್ತು ಡಿಸ್ಟ್ರಿಕ್ಟ್ ಸ್ಪೋರ್ಟ್ಸ್ ಕೌನ್ಸಿಲ್‌ಗಳು ಇವೆ. ಮಕ್ಕಳಿಗೆ ಆಟವಾಡಲು ಬ್ಯಾಟು, ಚೆಂಡು ಮುಂತಾದವುಗಳನ್ನು ಒದಗಿಸಬೇಕು. ಮತ್ತು ಆಟವನ್ನು ಹೇಳಿಕೊಡುವುದಕ್ಕೆ ಟ್ಯೂಟರನ್ನು ನೇಮಕ ಮಾಡಬೇಕು. ಈ ಸ್ಟೇಟ್ ಸ್ಪೋರ್ಟ್ಸ್ ಕೌನ್ಸಿಲ್‌ನಿಂದ ಮತ್ತು ಡಿಸ್ಟ್ರಿಕ್ಟ್ ಸ್ಪೋರ್ಟ್ಸ್ ಕೌನ್ಸಿಲ್‌ಗಳಿಂದ ಎಷ್ಟರಮಟ್ಟಿಗೆ ಫಲಕಾರಿಯಾಗಿದೆ, ಯಾವ ರೀತಿಯಿಂದ ಕೆಲಸ ಮಾಡುತ್ತಿವೆ, ಎಷ್ಟುಮಟ್ಟಿಗೆ ಮಕ್ಕಳಿಗೆ ಪ್ರಯೋಜನ ಸಿಗುತ್ತಿದೆ ಎಂಬುದನ್ನು ಸಮೀಕ್ಷೆ ಮಾಡುವುದು ಸರ್ಕಾರದವರ ಆದ್ಯಕರ್ತವ್ಯ. ಸರ್ಕಾರದವರು ಹಣವನ್ನು ಈ ಬಾಬಿಗೆ ಮಂಜೂರುಮಾಡುತ್ತಿದ್ದಾರೆ. ಆ

ಹಣ ಸರಿಯಾಗಿ ಉಪಯೋಗವಾಗುತ್ತಿದೆಯೇ, ಮಕ್ಕಳಿಗೆ ಪ್ರಯೋಜನ ಸಿಕ್ಕಿದೆಯೇ ಎಂಬುದನ್ನು ವಿಚಾರ ಮಾಡುವುದು ಸರ್ಕಾರದ ಆದ್ಯಕರ್ತವ್ಯವೆಂದು ಹೇಳಬಯಸುತ್ತೇನೆ. ಮಕ್ಕಳಿಗೆ ಆಟದ ಬಗ್ಗೆ ಸೂಕ್ತ ಅನುಕೂಲಗಳನ್ನು ಮಾಡಿಕೊಟ್ಟರೆ ಅವರಲ್ಲಿ ಅಶಿಸ್ತು ಮತ್ತು ಗೊಂದಲವುಂಟಾಗುವುದನ್ನು ಹೋಗಲಾಡಿಸುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ಆಟದ ಉಪಕರಣಗಳನ್ನು ಸರ್ಕಾರದವರು ಹೆಚ್ಚು ಹೆಚ್ಚು ಒದಗಿಸಿ ಕೊಡಬೇಕು. ಇದರಿಂದ extra energy dissipate ಆಗಿ ಯೋಗ್ಯ ವ್ಯಕ್ತಿಗಳಾಗಿ ತಮ್ಮ ಮುಂದಿನ ಜೀವನವನ್ನು ನಡೆಸುವುದಕ್ಕೆ ಸಾಧ್ಯವಾಗುತ್ತದೆ. ಸರ್ಕಾರದವರು ಎಷ್ಟರಮಟ್ಟಿಗೆ ಆಟಕ್ಕೆ ಹಣವನ್ನು ಒದಗಿಸುತ್ತಿದ್ದಾರೋ ಅದೇರೀತಿ ಪಟ್ಟಣಗಳಲ್ಲಿ ಸ್ಟೇಡಿಯಂ ಕಟ್ಟಿಸುವುದು ಒಳ್ಳೆಯದು. ಸರ್ಕಾರದವರು ಈ ಬಗ್ಗೆ ವಿಚಾರ ವಿನಿಮಯ ಮಾಡಬೇಕೆಂದು ಹೇಳಬಯಸುತ್ತೇನೆ. ಕೆಲವು ಶಾಲೆಗಳಲ್ಲಿ ಕ್ರಾಫ್ಟ್ ಟೀಚರುಗಳು ಎಂದು ಇದ್ದಾರೆ. ಇಲ್ಲಿರುವ ಟೀಚರುಗಳು ಸರಕಾರ ತಮ್ಮ ಬಗ್ಗೆ ಸರಿಯಾದ ಕಾರ್ಯಕ್ರಮ ಕೈಗೊಳ್ಳುತ್ತಿಲ್ಲ ಮತ್ತು ಅವರಿಗೆ ಸಿಗಬೇಕಾದ ಸಂಬಳ ಸಿಗುತ್ತಿಲ್ಲ. ಎಂದು ಹೇಳುತ್ತಿದ್ದಾರೆ. ಇದರಿಂದ ಕೆಲವು ಶಾಲೆಗಳಲ್ಲಿರುವ ಅಧ್ಯಾಪಕರು ಅತೃಪ್ತಿಯಿಂದ ಕೆಲಸ ಮಾಡಬೇಕಾಗಿದೆ. ಕ್ರಾಫ್ಟ್ ಟೀಚರುಗಳು ಎಂದು ನೇಮಕ ಮಾಡಿದ ಮೇಲೆ ಇವರಿಗೆ ಏನೇನು ಸೌಲಭ್ಯಗಳನ್ನು ಕೊಡಬೇಕೆಂದು ಸರಕಾರದವರು ಮಾಡಿದ್ದಾರೋ ಅವನ್ನೆಲ್ಲಾ ಆದಷ್ಟು ಬೇಗ ಕಾರ್ಯಗತವಾಗುವಂತೆ ಸೂಕ್ತವಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು.

ಇನ್ನೊಂದು ವಿದ್ಯಾಭ್ಯಾಸದ ಇಲಾಖೆಯಲ್ಲಿ ಏನಾಗಿದೆ ಎಂದರೆ ವಿದ್ಯಾ ಕ್ಷೇತ್ರಗಳ ಕೆಲಸ ದಿನೇ ದಿನೇ ಹೆಚ್ಚಾಗುತ್ತಿರುವುದರಿಂದ ಬೆಂಗಳೂರಿನಲ್ಲಿರುವ ಡಿ. ಪಿ. ಐ. ರವರೇ ಎಲ್ಲ ಕೆಲಸಗಳನ್ನು ಮಾಡಬೇಕೆಂದು ಹೇಳಿದರೆ ಅದರಿಂದ ಕಾರ್ಯವಿಳಂಬವಾಗುತ್ತದೆ. ವೈಯಕ್ತಿಕವಾಗಿ ಒಂದು ಉದಾಹರಣೆ ಹೇಳಬೇಕಾದರೆ ನಾನು ಒಂದು ಜಿಲ್ಲೆಯ ಕೆಲಸದ ಬಗ್ಗೆ ಒಂದು ಕಾಗದ ಪತ್ರವನ್ನು ಡಿ. ಪಿ. ಐ. ಕಡೆಗೆ ಬರೆದದ್ದು ಅದಕ್ಕೆ ಸುಮಾರು ಮೂರು, ಮೂರೂವರೆ ವರ್ಷಗಳು ಆದರೂ ಉತ್ತರ ಬಾರದೆ ಇದ್ದಂತಹ ಒಂದು ಪರಿಸ್ಥಿತಿ ಉದ್ಭವಿಸಿತು. ಇದಕ್ಕಾಗಿ ನಾನು ಸಲಹೆ ಸರಕಾರಕ್ಕೆ ಮಾಡುವುದು ಆಯಾ ಜಿಲ್ಲೆಯ ಕೆಲಸಗಳನ್ನು ನೋಡಿಕೊಳ್ಳಲು ಒಂದೊಂದು ಜಿಲ್ಲೆಯಲ್ಲಿಯೂ ಒಬ್ಬೊಬ್ಬರು ಜಾಯಿಂಟು ಡೈರಕ್ಟರನ್ನು ನೇಮಕ ಮಾಡಿದರೆ ಅಲ್ಲಿನ ಅಡ್ಮಿನಿಸ್ಟ್ರೇಷನ್ ಚೆನ್ನಾಗಿ ನಡೆಯಲು ಅನುಕೂಲವಾಗುತ್ತದೆ ಮತ್ತು ಆಯಾ ಜಿಲ್ಲೆಯಿಂದ ಬರುವ ಕಾಗದ ಪತ್ರಗಳಿಗೆ ಡಿಸ್‌ಪೋಸಲ್ ಮಾಡಲು ಅವಕಾಶ ಸಿಗುತ್ತದೆ ಮತ್ತು ಹೀಗೆ ಮಾಡುವುದೂ ಅಗತ್ಯ. ಎಲ್ಲ ಕೆಲಸಗಳನ್ನೂ ಬೆಂಗಳೂರಿನಲ್ಲಿ ಒಂದೇ ಕೇಂದ್ರದಲ್ಲಿ ಮಾಡಬೇಕು ಎಂದರೆ ಡಿಸ್ಟ್ರಿಕ್ಟ್ ಎಜುಕೇಷನಲ್ ಆಫೀಸರ ಕಡೆಯಿಂದ ಪತ್ರಗಳು ಡಿ. ಪಿ. ಐ. ಗೆ ಬರುತ್ತವೆ ಮತ್ತು ಎಲ್ಲ ಜಿಲ್ಲೆಗಳಿಂದಲೂ ಲಕ್ಷಗಟ್ಟಲೆ ಕಾಗದಪತ್ರಗಳು ಡಿ. ಪಿ. ಐ. ಗೆ ಬರುತ್ತವೆ. ಇಲ್ಲೇನೋ ಇವರಿಗೆ ಅಗಾಧವಾದ ಸಹಾಯ ಇರಬೇಕು ಎಂದು ಬೇಕಾದಷ್ಟು ಜಾಯಿಂಟು ಡೈರೆಕ್ಟರುಗಳು ಡಿ. ಡಿ. ಪಿ. ಐಗಳು ಇರಬೇಕೆಂದು ಮಾಡಿದ್ದಾರೆ. ದಿನ ದಿನವೂ ವಿದ್ಯಾಕ್ಷೇತ್ರ ಬೆಳೆಯುತ್ತಿದೆ ಆದ್ದರಿಂದ. ವಿದ್ಯಾಭ್ಯಾಸದ ಕ್ಷೇತ್ರದಲ್ಲಿ ಡೀಸೆಂಟ್ರಲೈಸೇಷನ್ ಮಾಡಿದರೆ ಸ್ವಲ್ಪಮಟ್ಟಿನ ಅನುಕೂಲಗಳನ್ನು ಆಯಾ ಜಿಲ್ಲೆಗಳಲ್ಲಿ ಮಾಡಲು ಸಾಧ್ಯವಾದೀತು. ಮಂಗಳೂರಿನಲ್ಲಿ ಒಂದು ಪ್ರಶ್ನೆ ಬೇಗ ಇತ್ಯರ್ಥವಾಗಬೇಕು ಎಂದು ಡಿ. ಪಿ. ಐ. ಕಡೆಗೆ ಬರೆದ ಕಾಗದಕ್ಕೆ ಉತ್ತರ ಸಿಗಬೇಕಾದರೆ ಸುಮಾರು ಮೂರು ಮೂರುವರೆ ವರ್ಷಗಳ ಕಾಲ ಆಯಿತು ಮತ್ತು ಇಲ್ಲಿರುವ ಏಡೆಡ್ ಶಾಲೆಗಳಿಗೆ 50 ಸಾವಿರ ಕಾಂಪೆನ್‌ಸೇಷನ್ ಮೊದಲು ಕೊಡಬೇಕು ಎಂದು ಆರ್ಡರಾಗಿತ್ತು ಮತ್ತು ಇದನ್ನು ಒತ್ತಾಯ ಮಾಡಿ ಪಡೆಯಲು ಬರೆದ ಕಾಗದಕ್ಕೆ ಉತ್ತರ ಗ್ರ್ಯಾಂಟ್ ಇನ್‌ಏಡ್ ಕೋಡು ಈಗಿರುವುದು ಸರಿಯಲ್ಲ ಇದನ್ನು ತಿದ್ದುಪಡಿ ಮಾಡಿದ ಮೇಲೆ ಕಾಂಪನ್‌ಸೇಷನ್ ಪ್ರಮಾಣ ಗೊತ್ತು ಮಾಡಬೇಕಾಗುತ್ತದೆ ಎನ್ನುವ ಉತ್ತರ ಬರಲು ಮೂರೂವರೆ ವರ್ಷ ಕಾಲ ಬೇಕಾಯಿತು. ಇದರಿಂದ ಏಡೆಡ್ ಶಾಲೆಗಳಿಗೆ ಮತ್ತು ಅಲ್ಲಿನ ಉಪಾಧ್ಯಾಯರುಗಳಿಗೆ ಎಷ್ಟುಮಟ್ಟಿನ ಸಹಾಯ ದೊರಕಬೇಕಾಗಿತ್ತೋ ಅಷ್ಟು ಮಟ್ಟಿನ ಸಹಾಯ ದೊರಕಿಲ್ಲ. ಇದನ್ನು ಮಾನ್ಯ ಮಂತ್ರಿಗಳು ವಿಚಾರ ಮಾಡುವುದು ಅಗತ್ಯ ಎನ್ನುವುದನ್ನು ಸರಕಾರ ಕೂಡ ಗಮನದಲ್ಲಿಟ್ಟುಕೊಳ್ಳಬೇಕು. ಇದೇ ರೀತಿ ಕೆಲವು ಶಾಲೆಗಳಿಗೆ ಸರಕಾರ ಕೊಟ್ಟ ಗ್ರ್ಯಾಂಟನ್ನು ಹಿಂವಕ್ಕೆ ಕೊಡಬೇಕೆಂದು ಕೇಳುತ್ತಿದ್ದಾರೆ ಮತ್ತು ಇದರ ಬಗ್ಗೆ ಸರಕಾರದ ಆಜ್ಞೆಗಳೇನಾದರೂ ಹೊರಟಿದೆ ಎಂದು ಕೇಳುತ್ತೇನೆ. ಮಾನ್ಯ ವಿದ್ಯಾ ಖಾತೆ ಮಂತ್ರಿಗಳು ಇದರ ಕಡೆಗೆ ಗಮನ ಕೊಡಬೇಕೆಂದು ಹೇಳುತ್ತೇನೆ. ಒಂದು ಸಲ ಗ್ರ್ಯಾಂಟು ಕೊಟ್ಟಮೇಲೆ ಮತ್ತೆ ಅದನ್ನು ವಾಪಸು ಕೊಡಬೇಕೆಂದು ಹೇಳುವುದು ಸರಿಯೇ ? ಇದರ ಬಗೆಗೆ ಡಿ. ಪಿ. ಐ. ಕಡೆಗೂ ಬರೆದು ಇದನ್ನು ಯಾವ ಆಧಾರದ ಮೇಲೆ ಕೇಳುತ್ತಿದ್ದೀರಿ ಎಂದು ತಿಳಿದ ಕೊಳ್ಳಬೇಕು. ಇದಲ್ಲದೆ ಏಡೆಡ್ ಶಾಲೆಗಳಿಗೆ ಕೊಡುವ ಗ್ರ್ಯಾಂಟುಗಳನ್ನು ಸಕಾಲದಲ್ಲಿ ಕೊಡದೇ ಹೋದರೆ ಅವರು

(ಶ್ರೀ ಎಂ. ಶ್ರೀನಿವಾಸ ನಾಯಕ್)

ಯಾವ ರೀತಿ ಶಾಲೆಗಳನ್ನು ನಡೆಸಲು ಸಾಧ್ಯ ಎನ್ನುವುದನ್ನು ವಿಚಾರ ಮಾಡಬೇಕು. ಸರಕಾರ ಇಂತಹ ಏಡೆಡ್ ಶಾಲೆಗಳೊಡನೆ ಸಹಕರಿಸಬೇಕು ಮತ್ತು ಅವಕ್ಕೆ ಬೇಕಾದ ಸಹಾಯಗಳನ್ನು ಕೂಡ ಗಮನಿಸಿ ಕೊಡುವುದು ಅವಶ್ಯಕ.

ಇನ್ನು ಕೆಲವು ಕಡೆ ಇರುವ ಶಾಲೆಗಳಲ್ಲಿ ಫಲಿತಾಂಶಗಳು ಸರಿಯಾಗಿ ಬರುತ್ತಿಲ್ಲ ಎಂದು ಹೇಳುತ್ತೇವೆ. ಕೆಲವು ಶಾಲೆಗಳಲ್ಲಿ ಜೀರೋ ಪರ್ಸೆಂಟಿನಿಂದ ಹತ್ತು ಪರ್ಸೆಂಟುವರೆಗೆ ರಿಸಲ್ಟ್ ಬಂದಿರುವುದನ್ನೂ ನಾವು ಕೆಲವು ಕಡೆ ನೋಡಿದ್ದೇವೆ. ಇದು ಬಹಳ ದುಃಖದಾಯಕವಾದುದು. ಇದನ್ನು ನೋಡಿದರೆ ನಮ್ಮ ಮುಂದಿನ ಪೀಳಿಗೆಯ ಜನರ ಜೀವನ ಬಹಳ ನಿರಾಶಾದಾಯಕವಾಗಿದೆ. ಆದುದರಿಂದ ಸರಕಾರದವರು ಶಿಕ್ಷಣಮಟ್ಟವನ್ನು ಏರಿಸುವುದರ ಬಗ್ಗೆ ಪರಿಶೀಲನೆ ಮಾಡಿ ಸರಿಪಡಿಸಿ ಎಲ್ಲಾ ಶಾಲೆಗಳಲ್ಲಿಯೂ ಒಳ್ಳೆಯ ಹಾಗೂ ಉತ್ತಮವಾದ ಫಲಿತಾಂಶ ಬರುವಂತೆ ಪ್ರಯತ್ನ ಮಾಡಬೇಕು ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಮಾನ್ಯ ಮಂತ್ರಿಗಳು ಇಲ್ಲಿ ಒಂಬತ್ತನೇ ಸ್ಟ್ಯಾಂಡರ್ಡ್‌ನ್ನು ಎಲಿಮೆಂಟರಿ ಶಾಲೆಗಳಲ್ಲಿ ಚೇಂಜ್ ಮಾಡಿ ಏಕರೂಪವಾದ ವಿದ್ಯಾಭ್ಯಾಸವನ್ನು ಜಾರಿಗೆ ತರಬೇಕು ಎಂದು ಒಂದು ರೀತಿಯಾದ ಅನುಕಂಪ ತೋರಿಸಿ ಇದನ್ನು ಜಾರಿಗೆ ತಂದರು. ಆದರೆ ಇದರಿಂದಾಗಿ ಹೆಚ್ಚು ಸಂಖ್ಯೆಯ ವಿದ್ಯಾರ್ಥಿಗಳು ಫೇಲ್ ಆಗುತ್ತಿದ್ದಾರೆ. ಇದಕ್ಕೆ ಕಾರಣ ಹೊಸ ರೀತಿಯ ಪದ್ಧತಿಯನ್ನು ಜಾರಿ ಮಾಡಿರುವುದು ಅಲ್ಲದೆ ಹೊಸ ರೀತಿಯಾದ ಪಠ್ಯ ಪುಸ್ತಕಗಳು ಬಂದಿರುವುದು ಆಗಿದೆ. ಆದುದರಿಂದ ಇದನ್ನು ಉತ್ತಮ ಪಡಿಸಿ ಇಲ್ಲಿಂದ ಪ್ರತಿಯೊಬ್ಬ ವಿದ್ಯಾರ್ಥಿಯೂ ಮುಂದಿನ ವರ್ಗಕ್ಕೆ ಪಾಸಾಗುವಂತೆ ಸ್ವಲ್ಪ ಹೆಚ್ಚು ಗಮನ ವಹಿಸಿ ಉತ್ತಮ ಮಟ್ಟಕ್ಕೆ ತರುವುದು ಅವಶ್ಯಕ. ಇದೇ ರೀತಿ ಕಾಲೇಜುಗಳು ವಿದ್ಯಾಭ್ಯಾಸ ಮಟ್ಟವನ್ನೂ ಉತ್ತಮ ಪಡಿಸಬೇಕು. ಈ ಹೊತ್ತು ಕಾಲೇಜುಗಳಿಗೆ ಹುಡುಗರು ಹೋಗಬೇಕಾದರೆ ಹತ್ತನೇ ಸ್ಟ್ಯಾಂಡರ್ಡ್ ಆದ ಮೇಲೆ ಹೋಗಬೇಕೆಂದು ಮಾಡಿದ್ದಾರೆ. ಏಳನೇ ಸ್ಟ್ಯಾಂಡರ್ಡ್‌ನಿಂದ ಹತ್ತನೇ ಸ್ಟ್ಯಾಂಡರ್ಡ್ ವರೆಗೆ ಓದಿ ಅನಂತರ 11ನೇ ಸ್ಟ್ಯಾಂಡರ್ಡ್‌ನಲ್ಲಿ ಪಬ್ಲಿಕ್ ಪರೀಕ್ಷೆಗೆ ಕೂಡಬೇಕು ಎಂದು ಇದೆ. ಅಲ್ಲದೆ ಶಾಲೆಗೆ ಹೋಗುವ ಮಕ್ಕಳಿಗೆ ಅಲ್ಲಿರುವ ಉಪಾಧ್ಯಾಯರುಗಳು ಯಾವ ಯಾವ ಹುಡುಗರಿಗೆ ಯಾವ ರೀತಿ ಅಭ್ಯಾಸಗಳನ್ನು ಮುಂದುವರಿಸಿದರೆ ಅವರಿಗೆ ಅನುಕೂಲವಾಗುತ್ತದೆ ಎನ್ನುವುದರಲ್ಲಿ ಸರಿಯಾದ ಮಾರ್ಗದರ್ಶನ ಕೊಡುವಂತಹ ಉಪಾಧ್ಯಾಯರು ನಮಗೆ ಬೇಕು. ಈಗ ಎಷ್ಟೋ ಕಡೆಗಳಲ್ಲಿ ಪಾಲಿಟೆಕ್ನಿಕ್‌ಗಳಾಗಿವೆ ಹಾಗೂ ಟೆಕ್ನಿಕಲ್ ಕಾಲೇಜುಗಳು ಆಗಿವೆ. ಆದುದರಿಂದ ಶಾಲೆಗಳಿಗೆ ಬರುವ ವಿದ್ಯಾರ್ಥಿಗಳಿಗೆ ಅಲ್ಲಿನ ಉಪಾಧ್ಯಾಯರು ತಮ್ಮ ಕರ್ತವ್ಯ ಎಂದು ಭಾವಿಸಿ ಹುಡುಗರಿಗೆ ಮಾರ್ಗದರ್ಶನ ಮಾಡಿ ಸೂಕ್ತವಾದ ನಿರ್ದೇಶನ ಮಾಡುವುದು ಅಗತ್ಯ ಮತ್ತು ಇದರಿಂದ ಪ್ರತಿಯೊಬ್ಬ ವಿದ್ಯಾರ್ಥಿಯೂ ಲಾಭ ಪಡೆದು ಮುಂದೆ ಅವನು ಯಾವ ವೃತ್ತಿಗೆ ಹೋಗಬಹುದು ಎನ್ನುವುದನ್ನು ನಿರ್ಧಾರ ಮಾಡಿಕೊಳ್ಳಲು ಅನುಕೂಲವಾಗುತ್ತದೆ. ಉಪಾಧ್ಯಾಯರೂ ಕೂಡ ಇದು ತಮ್ಮ ಕರ್ತವ್ಯ ಎಂದು ಭಾವಿಸಿ 10, 11 ಮತ್ತು 12 ನೇ ಸ್ಟ್ಯಾಂಡರ್ಡ್‌ಗಳಲ್ಲಿ ಓದುವಾಗ ಮುಂದಿನ ವಿದ್ಯಾಭ್ಯಾಸವನ್ನು ಕಾಲೇಜುಗಳಲ್ಲಿ ಮಾಡುವಾಗ ಅವರಿಗೆ ಸೂಕ್ತವಾದ ಮಾರ್ಗದರ್ಶನ ಕೊಟ್ಟರೆ ಅದರ ಮಾಹಿತಿಗಳನ್ನು ತಿಳಿದುಕೊಂಡು; ಅವರು ಸರಿಯಾದ ರೀತಿಯಲ್ಲಿ ತಮ್ಮ ಜೀವನವನ್ನು ಮೌಲ್ಯ ಮಾಡಲು ಅನುಕೂಲವಾಗುತ್ತದೆ. ಮತ್ತು ಮುಂದೆ ಯಾವ ವೃತ್ತಿಗೆ ಅನುಸರಿಸಿಕೊಳ್ಳಬಹುದು ಎನ್ನುವುದನ್ನೂ ನಿರ್ಧರಿಸಲು ಸಹಾಯವಾಗುತ್ತದೆ.

ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

Sri B. P. KADAM (Karwar).—Mr. Chairman, the Demand on Education is under discussion and a few members have participated in the discussion. Sir, the importance of education has been stressed from the most primitive times, not only by people who are educationists, but also by people who know nothing of education. Yet another feature of this subject in democracy is that nothing is more important than education, because great stress is laid upon the sense of responsibility, rights and duties of citizen. In all the Education Commission Reports and Planning Commission Reports and almost by everybody,

great stress has been laid that a child must be brought up in a particular manner so that he would be a patriot and nationalised not only to serve himself, but to serve the country also, and if I am permitted to say, he will also serve mankind. The State of Mysore has been a pioneer in education, and prior to reorganisation the *per capita* expenditure on education of Mysore State was the maximum in the entire country, a position of pride, which was admitted by even other States. Whether in the light of this, the present policy is heading or whether it is going out of gear has to be judged. Before coming to details, I wish to touch a few salient points of greater importance.

As we skip over the pages of the Budget, we will certainly see that due importance for the spread of Hindi is not given. Hindi has been declared as a national language. But, are the policies of Government in consonance with that? I have often insisted that Hindi must be given greater priority so that the cause of national integrity may be helped, and people who are opposed to Hindi on account of some factors, like cheap local popularity, can be persuaded to teach Hindi, so that national integrity is accomplished. National oneness should be an accomplised fact as early as possible. Sometime back, the Hon. Minister for Education himself stated that in certain standards, a pass in Hindi subject is not material. A pupil can get promotion to the next higher standared even with his failure in Hindi subject, not only that–even if he were to fail with a 'zero'. Sir, if such is the importance given to Hindi, I am afraid, it is only a negative approach. The approach should be jubilant and energetic so that the cause of nationalism is served.

4-00 P.M.

Then, I am coming to teachers, at all levels College level, University level, Secondary School level and even primary school level. It must be an admitted fact that by and large, the stature and ability of the teachers must be great. The teachers selected for appointment are those who cannot find jobs elsewhere, or who are tired of seeking other jobs. Not only that, the teaching staff at the Collegiate level is not at all of a high calibre. Those people who could not get jobs elsewhere get themselves appointed as lecturers or teachers and they call themselves professors. Sir, in Russia what they do is they have competitive examinations for selection of teachers. First ten per cent is reserved only for appointment as teachers or lecturers. In India, it is quite the opposite. There is no competitive examination here. People who cannot find jobs elswhere only holding some degrees of B.A or B.Sc. etc, are appointed as lecturers. This has been the cause for discontent in the colleges. In my opinion, this discontent in the colleges is on account of the neglect of merit while recruiting the teaching staff. It must be an admitted fact that teachers should know the minds of the pupils who are taught. I remember with reverence my professors and even today I look to them with great reverence and respect because they have been learned people. Whenever I go to those places I make it

(SRI B. P. KADAM)

a point to pay respect to my professors. In the good old days the selection was better. But now it has become a cheap selection. The teachers are not efficient, they themselves have lack scholarship and are incapable of inspiring confidence among the pupils. Besides other things, this has been one of the causes for the students' unrest. There must be a competitive examination at the all-India level, at the State level to select teachers. Unless that is done, I am sure that these processions, satyagrahas, etc., by students will go on as it has been all along among the students. Sir, the Leader of Opposition has stated that the students' unrest is not only a national feature but also international feature. What are the causes for this? Unemployment, it is there. What are the difficulties students have to encounter? Fees, accommodation and other things which are to be attended to by the college and other authorities. This is a very important matter in my opinion. Government must give all importance to see that the students unrest is sympathetically treated and not curbed forcibly because it is bound to create violence. In this connection, Sir, I think there should be some committees of students and regular discussions with those committee members and their requirements, etc., must be studied and sympatheticalley fulfilled by the Government. Otherwise, the students unrest will go on and it cannot be controlled or done away with by people who are in authority and who speak so much about this students' unrest.

I would like to say something about the indiscriminate publication of the "Guides" for helping the students appearing for various examinations. I had an occasion to skip over some such guides and I find that they are full of horrible mistakes spelling and grammatical. Those who are responsible for publication of such guides must be severely dealt with by the Government, if necessary, by a legislation. When I was in Matric Standard there was a sanskrit guide published by some author which was full of mistakes. The Director of Public Instruction in the then Bombay State took action against that author and the author was debarred from publication of guides thereafter. Can the Government of Mysore not do something in the matter?

Then Sir, I would go into certain details. In the former grant-in-aid code of April 1962 there was certain protection for the minority languages. Under Schedule II (1) the required strength for the minority languages was 15 in each class. Now this grant-in-aid code has been amended in 1967. In the amended code, what exactly the required strength for these minority languages in the secondary schools is not clear. Whether it is 25 or whether it is 15 as was required under the previous code is not clear. I would urge upon the hon. Minister for Education to clarify this? If the Government insists that it should be 25, whether it has been brought to the notice of the approved authroity *viz.*, the Minority Linguistic Commission of the Government of India is not known. If it is 25 will it not be a great

hardship to the minorities? The Government, again and again, through press notes and speeches is singing in a most melodious voice that it is giving protection to minorities in all matters. The former Chief Minister of the State with whom I had some discussion on this issue, again and again, promised that he would do everything to give protection to the minorities. Now of course, he is the President of the All-India Congress and there we all know his activities. But what his followers here are doing we do not know. In this connection I am to state, that in the North Kanara district *i.e.*, in the three villages of in Anshi Nuji and Kundal in Supa taluk, the facility to learn Marathi language has not been given since past 10 years in spite of the recommendations of the Tahsildar. I want to know, why this discrimination? Is it the policy of the Government to liquidate the minorities? While Mr. Nijalingappa as Congress President is engaged in speedy liquidation of the All-India Congress his followers here are very keen in the liquidation of the minorities. While we would welcome the former, the latter we would certainly resist with all the mite at our command.

In 1963 the tenure of the School Board of North Kanara District ended because its term of 10 years was over and in its place a District School Committee was constituted. At that time, I had requested some Ministers that provision be made to have Marathi representatives on that Committee from the 3 taluks, but nothing was done and the tenure of that Committee is also now over and I am told that now fresh recommendations have been sought from the Deputy Commissioner. I urge upon the Minister for Education to look into this matter because a vengeant attitude towards minorities will not help the cause of national integration.

SRI K. V. SHANKARA GOWDA.—Mysore State has always been proud of giving protection to minorities. In the whole of India, Mysore State is noted for that.

SRI B. P. KADAM.—Then why don't you give representation to minorities on this Committee?

SRI K. V. SHANKARA GOWDA.—I am going to abolish all those Committees.

SRI B. P. KADAM.—Then why have you asked for recommendations from the Deputy Commissioner for reconstituting them?

SRI K. V. SHANKARA GOWDA.—That is usual routine only.

SRI B. P. KADAM.—This is something wonderful. It this routine not waste of money?

SRI K. V. SHANKARA GOWDA.—What is the waste of money in this?

SRI B. P. KADAM.—The Deputy Commissioner will have to spend some of his valuable time which is required for other public purpose and he will have to spend some money to find out the names.

(SRI B. P. KADAM)

Sir, the problems of North Kanara District are peculiar. On 16th April 1968 I had given a note to the Minister for Education, copy of which was sent to the then Chief Minister Sri Nijalingappa and the Finance Minister Sri Ramakrishna Hegde. The letter was signed by 5 M.L.A.s and 1 senior M.L.C. of North Kanara District. We had requested therein that the strength of pupils for primary schools as well as secondary schools in North Kanara District in the forest tract should be brought down. The minimum strength now required is 15 in primary schools and 25 in secondary schools. As the population is very thin and as the distance from village to village is considerable we had suggested that in these forest tracts the strength may be reduced to 10 in primary schools and 15 in secondary schools. The then Chief Minister Sri Nijalingappa had said that this was very genuine case and he would certainly forward it to the Education Minister. The same was the reply from the Finance Minister also, but unfortunately none of the 5 M.L.A.s and 1 M.L.C. has received any acknowledgment from the Education Minister. This is a very genuine case and so I urge upon the Education Minister to see that the minimum strength in these forest tracts is reduced so that the spread of education may be speedy here, as otherwise the benefit of primary and secondary education will be denied to them and illiteracy cannot be wiped out.

Then, Sir, about 9 schools in North Kanara District are sought to be closed down by the D.P.I. under the plea that the strength in each class is less than 25. There was a heated debate on this in the last D.D.C. meeting held on 20th of last month and my friend Sri Nadkarni, M.L.A. from Ankola, North Kanara District, had also sent a call attention notice on this question. These schools were registered and recognised prior to 1967 when a minimum strength of 15 was allowed for the purpose of recognition. I cannot understand why such a harsh notice should be sent to such schools. One school with which I was connected and am still connected and for which recognition was granted is at the headquarters of Supa taluk covering an area of about 800 sq. miles. That school is now run by the Taluka Development Board. In such a school the strength is bound to be less, but that school also is sought to be closed down. I cannot understand why it should be so. The policy change took place only subsequent to 1967 and so this change should affect only such schools which were started after that and schools recognised earlier should be allowed to continue. In the other case the school is for girls lying in the border area and so provision was required to be made both for Marathi and Kannada and two divisions were required to be made. I am sure that if some little time is allowed, the strength will exceed 25 and may go up to 30. In such a case I do not understand why such a harsh notice should be given to it. I hope Government would be pleased to get all details about this and see that no harsh decision is taken.

There are certain schools which have their own school building. I am myself connected with so many secondary schools ; Our policy was

not to run schools in sheds, tents or under trees but to have gorgeous and beautiful buildings with fine roof and give good education to the pupils. Now the Government have decided to stop the grants to managements who have their own school buildings. If the building is constructed on borrowed money, then it will give some grant for rent and if the building is rented to the school by somebody it will give some grant. I cannot understand all this. Does this mean corruption or does Government want that there should be some tampering with the records so that certain people can be brought into the picture to say that they have leased building to the particular school? Does it mean that the management should not have their own buildings for Schools and Colleges? This is a very pertinent question the Government should answer. This is a very harsh attitude the Government is adopting. The strength of teachers in certain Marathi Schools, especially in 3 Taluks of North Kanara District, is very little. Sometimes the School having a strength of 200 students will not have sufficient number of teachers and there are some schools which have no teachers at all. There are certain teachers in the North Kanara District who have been retired prior to 1-4-1967 but their pension has not been given. This may be looked into. The Government is unnecessarily enforcing severe cuts in grants to so many schools. The authorities of the Schools are finding it difficult to manage the Schools. The genuine cases will have to suffer. Undesirable elements are taking advantage of the Government Order and they are getting on well. This will give scope for suspicion and consequential action on the part of the Management. Some of them are taking this matter to the Court of law.

It seems the Directorate of collegiate education is too much parochial and too much technical. Some authorities are bitterly complaining they have to approach the Directorate several times for grants and they are experiencing hardships at the hands of the Directorate. There fore, in the fitness of things, the entire College education should be entrusted to University itself. With these words, I thank the Chair for having given me an opportunity to speak.

ಶ್ರೀ ಎಸ್. ರುದ್ರಪ್ಪ (ಚಿತಾಪುರ).—ಮಾನ್ಯ ಅಧ್ಯಕ್ಷರೇ, ಇಂದು ಶಿಕ್ಷಣ ಮಂತ್ರಿಗಳು ತಂದಿರತಕ್ಕ ಬೇಡಿಕೆಗಳನ್ನು ಅನುಮೋದಿಸುತ್ತಾ ಕೆಲವು ವಿಷಯಗಳನ್ನು ಪ್ರಸ್ತಾಪಿಸಬೇಕೆಂದು ಇಚ್ಛಿಸುತ್ತೇನೆ. ಸರ್ಕಾರದವರು ಈ 5 ವರ್ಷಗಳಲ್ಲಿ ಶಿಕ್ಷಣ ರಂಗದಲ್ಲಿ ಸಾಕಾದಷ್ಟು ಪ್ರಗತಿಯನ್ನು ಮಾಡಿದ್ದಾರೆ. ವರ್ಷೇ ವರ್ಷೇ ಖರ್ಚು ಹೆಚ್ಚಾಗುತ್ತಲಿದೆ. ಹೋದ ವರ್ಷ ಸುಮಾರು 35 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ, ಮುಂದಿನ ವರ್ಷ ಸುಮಾರು 46 ಕೋಟಿ ರೂಪಾಯಿಗಳನ್ನು ಖರ್ಚು ಮಾಡುವವರು ಇದ್ದಾರೆ. ಅದೇ ರೀತಿ ಕಾಲೇಜು ಹೈಸ್ಕೂಲುಗಳು ಮತ್ತು ಮಿಡ್ಲ್ ಸ್ಕೂಲುಗಳು ಹೆಚ್ಚಾಗುತ್ತಾ ಇವೆ. ಆದರೆ ಗುಣಮಟ್ಟದಲ್ಲಿ ಮಾತ್ರ ಸಾಕಾದಷ್ಟು ನಿರೀಕ್ಷಿಸಿದಷ್ಟು ಪ್ರಗತಿಯಾಗಿಲ್ಲ. ಪಟ್ಟಣದಲ್ಲಿ ಓದತಕ್ಕ ವಿದ್ಯಾರ್ಥಿಗಳ ಗುಣಮಟ್ಟವನ್ನು ನಾವು ಗ್ರಾಮಾಂತರಗಳಲ್ಲಿ ಓದತಕ್ಕ ವಿದ್ಯಾರ್ಥಿಗಳ ಗುಣಮಟ್ಟಕ್ಕೆ ಹೋಲಿಸಿ ನೋಡಿದರೆ ಅಜಗಜಾಂತರ ವ್ಯತ್ಯಾಸ ಇದೆ. ಗ್ರಾಮಾಂತರಗಳಲ್ಲಿ ಇರತಕ್ಕ ವಿದ್ಯಾರ್ಥಿಗಳಲ್ಲಿ ಎಜ್ಯುಕೇಷನಲ್ ಎನ್‌ವೈರನಮೆಂಟ್ ಅಥವಾ ಕಲ್ಚರಲ್ ಎನ್‌ವೈರನ್‌ಮೆಂಟ್ ಇಲ್ಲದೇ ಇರುವುದರಿಂದ ಅವರಲ್ಲಿ ಸಾಕಾದಷ್ಟು ಗುಣ ಮಟ್ಟ ಇಲ್ಲ. ಪ್ರಜಾತಂತ್ರದಲ್ಲಿ ಎಲ್ಲರಿಗೂ ಅವಕಾಶ ಇದೆ. ಪಟ್ಟಣದಲ್ಲಿ ಯಾವ ರೀತಿ ಉತ್ತಮವಾದ ಉಪಾಧ್ಯಾಯರನ್ನು, ಎಕ್ವಿಪ್‌ಮೆಂಟನ್ನು, ಮತ್ತು ಲೈಬ್ರರಿಯನ್ನು ಒದಗಿಸುತ್ತೇವೆಯೋ ಅದೇ ರೀತಿ ಗ್ರಾಮಾಂತರದಲ್ಲಿರತಕ್ಕ ಹೈಸ್ಕೂಲುಗಳು, ಮಿಡ್ಲ್ ಸ್ಕೂಲುಗಳಿಗೂ ಕೂಡ ಸಾಕಾದಷ್ಟು ಪ್ರಮಾಣದಲ್ಲಿ ಒಳ್ಳೆಯ

(ಶ್ರೀ ಎಸ್. ರುದ್ರಪ್ಪ)

ಉಪಾಧ್ಯಾಯರು, ಎಕ್ವಿಪ್‌ಮೆಂಟು ಮತ್ತು ಲೈಬ್ರೆರಿಗಳನ್ನು ಮತ್ತು ಪ್ಲೇ ಗ್ರೌಂಡನ್ನು ಕೊಟ್ಟಿದ್ದೇ ಆದರೆ ಅವರ ಗುಣ ಮಟ್ಟ ಹೆಚ್ಚಾಗುತ್ತದೆ ಎಂದು ನನಗೆ ಅನಿಸುತ್ತದೆ. ನಮ್ಮ ಹೈದ್ರಾಬಾದು ಕರ್ನಾಟಕದ ವಿಷಯ ತೆಗೆದುಕೊಂಡರೆ ವಿದ್ಯಾರ್ಥಿಗಳ ವಿದ್ಯೆಯ ಗುಣ ಮಟ್ಟ ಮತ್ತು ವಿದ್ಯಾರ್ಥಿಗಳ ಸಂಖ್ಯೆ ಪ್ರತಿ ವರ್ಷ ಕಡಿಮೆಯಾಗುತ್ತಾ ಇದೆ. ಅದಕ್ಕೆ ಕಾರಣವೇನೆಂದರೆ ಅಲ್ಲಿ ಸಾಕಾದಷ್ಟು ಸಿಬ್ಬಂದಿ ಇಲ್ಲ ಸಾಕಾದಷ್ಟು ಪ್ಲೇಗ್ರೌಂಡ್ ಇಲ್ಲ, ಲೈಬ್ರೆರಿ ಇಲ್ಲ. ಹೀಗಾಗಿ ಗ್ರಾಮದಲ್ಲಿ ಓದುತ್ತಾ ಇರತಕ್ಕ ವಿದ್ಯಾರ್ಥಿಗಳು ಗ್ರಾಮವನ್ನು ಬಿಟ್ಟು ಪಟ್ಟಣಗಳಲ್ಲಿರತಕ್ಕ ಹೈಸ್ಕೂಲುಗಳಿಗೆ ಹೋಗುತ್ತಾ ಇದ್ದಾರೆ. ಇದನ್ನು ಕಡಿಮೆ ಮಾಡಲು ಇರತಕ್ಕ ಒಂದೇ ಒಂದು ಹಾದಿ ಎಂದರೆ ಗ್ರಾಮಾಂತರದಲ್ಲಿರತಕ್ಕ ಹೈಸ್ಕೂಲುಗಳಿಗೆ ಕಡ್ಡಾಯವಾಗಿ ಪಟ್ಟಣದಲ್ಲಿರತಕ್ಕ ಉಪಾಧ್ಯಾಯರು ಹೋಗಲೇಬೇಕೆಂದು ನಿಗದಿ ಮಾಡಬೇಕು. ಒಂದು ಸಲ ಅಲ್ಲಿಗೆ ವರ್ಗ ಮಾಡಿದರೆ ಯಾವ ಕಾರಣದಿಂದಲೂ ಅದನ್ನು ಕ್ಯಾನ್ಸಲ್ ಮಾಡಬಾರದು ಎಂದು ಈ ಸಂದರ್ಭದಲ್ಲಿ ಸೂಚನೆ ಮಾಡುತ್ತೇನೆ. ಎರಡನೆಯದಾಗಿ ಗ್ರಾಮಾಂತರ ದಲ್ಲಿರತಕ್ಕ ಉಪಾಧ್ಯಾಯರು ಯಾರು ಅದೇ ತಾಲ್ಲೂಕಿನಲ್ಲಿ ಹುಟ್ಟಿ, ಅಲ್ಲೇ ಬೆಳೆದು ಶಿಕ್ಷಕರಾಗಿ ದ್ದಾರೋ–ಸುಮಾರು 10–15 ವರ್ಷ ಅದೇ ತಾಲ್ಲೂಕಿನಲ್ಲಿದ್ದಾರೋ ಅವರನ್ನು ಬೇರೆ ತಾಲ್ಲೂಕು ಗಳಿಗೆ ವರ್ಗ ಮಾಡಿದರೆ ಈ ಶಿಕ್ಷಣ ರಂಗದಲ್ಲಿ ಪ್ರಗತಿಯಾಗಬಹುದು, ಸುಧಾರಣೆಯಾಗಬಹುದು ಎಂದು ನನಗೆ ಅನಿಸುತ್ತದೆ. ಇದುವರೆಗೂ ಯಾವ ಶಿಕ್ಷಣ ಮಂತ್ರಿಯೂ ಕೂಡ ಈ ದಿಶೆಯಲ್ಲಿ ಲಕ್ಷ್ಯ ಕೊಟ್ಟಿಲ್ಲ. ನಮ್ಮ ಈಗಿನ ಶಿಕ್ಷಣ ಮಂತ್ರಿಯಾಗಿರತಕ್ಕ ಮಾನ್ಯ ಶಂಕರೇಗೌಡರು ದಿಟ್ಟತನದಿಂದ, ಧೈರ್ಯವಾಗಿ ಈ ಕ್ರಮವನ್ನು ಕೈಕೊಳ್ಳಬೇಕು. ಗುಲಬರ್ಗಾದ ಮಟ್ಟಿಗೆ ಹೇಳುವುದಾದರೆ ನಾವು ಯಾರೂ ಇಂಟರ್‌ಫಿಯರ್ ಆಗುವುದಿಲ್ಲ. ಆಯಾ ತಾಲ್ಲೂಕಿನಲ್ಲೇ ಹುಟ್ಟಿ ಅಲ್ಲೇ ಬೆಳೆದು ಅಲ್ಲೇ ಉಪಾಧ್ಯಾಯರು ಆಗಿರತಕ್ಕವರು ಯಾರು ಇದ್ದಾರೋ ಅವರನ್ನು ಬೇರೆ ತಾಲ್ಲೂಕುಗಳಿಗೆ ಹಾಕಲು ತಾವು ಪ್ರಯತ್ನ ಮಾಡಬೇಕು, ಕ್ರಮ ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳ ಬಯಸುತ್ತೇನೆ.

ಬಡ್ಜೆಟ್‌ನಲ್ಲಿ ಹೇಳಿರುವಂತೆ ಇನ್‌ಸ್ಪೆಕ್ಷನ್ ಸಿಬ್ಬಂದಿಯನ್ನು ಹೆಚ್ಚು ಮಾಡಬೇಕು. ಶಿಕ್ಷಣ ರಂಗ ದಲ್ಲಿ ಶಿಕ್ಷಣ ಮಟ್ಟ ಹೆಚ್ಚಾಗಬೇಕಾಗಿದ್ದರೆ ಇದೂ ಒಂದು ಸಾಧನೆ, ಮಾರ್ಗ ಅಂಥ ತಿಳಿದುಕೊಂಡು ಇದಕ್ಕೆ 3–4 ಕೋಟಿ ರೂಪಾಯಿಗಳನ್ನು ಇಟ್ಟಿದ್ದೀರಿ. ಈಗ ಪ್ರತಿಯೊಂದು ಡಿವಿಜನ್‌ನಲ್ಲೂ ಡೆಪ್ಯೂಟಿ ಡೈರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್ ಅವರು ಇದ್ದಾರೆ. ಪ್ರತಿ ಜಿಲ್ಲೆಗೂ ಒಬ್ಬರನ್ನು ಮಾಡುತ್ತೇವೆ ಎಂದು ಹೇಳುತ್ತಾರೆ. ಮತ್ತು ಡಿಸ್ಟ್ರಿಕ್ಟ್ ಎಜ್ಯುಕೇಷನಲ್ ಆಫೀಸರ್‌ರವರು ಸ್ಟಾಫ್ ಕೂಡ ಹೆಚ್ಚು ಮಾಡುತ್ತೇವೆ ಎಂದು ಹೇಳಿದ್ದಾರೆ, ಆ ರೀತಿ ಮಾಡುವ ಕಾಲದಲ್ಲಿ ಯಾರಿಗೆ ಶಿಕ್ಷಣದಲ್ಲಿ ಅಭಿರುಚಿ ಇದೆ, ಅವರನ್ನು ಮಾತ್ರ ತಾವು ಡಿ. ಇ. ಓ ಆಗಿ ಆಗಲಿ ಅಥವಾ ಇನ್‌ಸ್ಪೆಕ್ಟರ್ ಆಫ್ ಸ್ಕೂಲ್ಸ್ ಆಗಿ ಆಗಲಿ ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ. ಏಕೆಂದರೆ ಸೀನಿಯಾರ್ಟಿ ಮತ್ತು ಮೆರಿಟ್ ಪ್ರಕಾರ ಅವರಿಗೂ ಪ್ರಮೋಷನ್ ಕೊಡಬೇಕು. ಹಾಗಿಲ್ಲದೆ ಹೋದರೆ ಶಿಕ್ಷಣರಂಗದಲ್ಲಿ ಅವರು ಕಳಕಳಿಯಿಂದ ಕೆಲಸಮಾಡುವುದಕ್ಕಾಗುವುದಿಲ್ಲ. ಅವರಲ್ಲಿ ಯಾರು ಎಫಿಷೆಂಟಾಗಿರುತ್ತಾರೋ ಯಾರು ಹಾರ್ಡ್‌ವರ್ಕಿಂಗಾಗಿ ಕೆಲಸಮಾಡುತ್ತಾರೋ ಅಂಥವರಿಗೆ ಜಿಲ್ಲಾ ಇನ್‌ಸ್ಪೆಕ್ಟರುಗಳಾಗಿ ಭಡ್ತಿ ಸಿಗಬಹುದು.

4-30 P. M.

ಇನ್ನು ಟೆಕ್ನಿಕಲ್ ವಿದ್ಯಾಭ್ಯಾಸದ ವಿಚಾರಕ್ಕೆ ಬಂದರೆ ಈ ಟೆಕ್ನಿಕಲ್ ವಿದ್ಯಾಭ್ಯಾಸದ ಸಿಲಬಸ್ಸನ್ನು ಕೂಡಲೆ ಬದಲಾಯಿಸಬೇಕೆಂದು ಹೇಳುತ್ತೇನೆ. ನಮ್ಮಲ್ಲಿ ಅಂಥ ಒಂದು ಪರಿಸ್ಥಿತಿಯುಂಟಾಗಿದೆ. ಈ ದಿವಸ ಹೈದ್ರಾಬಾದ್ ಕರ್ನಾಟಕದಲ್ಲಿ ಸಿವಿಲ್ ಮತ್ತು ಮೆಕ್ಯಾನಿಕಲ್ ಇಂಜನಿಯರಿಂಗ್ ಬಾಬುಗಳಲ್ಲಿ ಉತ್ತೀರ್ಣರಾಗಿರತಕ್ಕ ನೂರಾರು ತರುಣರು ಉದ್ಯೋಗವಿಲ್ಲದೆ ಬೀದಿ ಬೀದಿಗಳಲ್ಲಿ ಅಲೆದಾಡುತ್ತಿದ್ದಾರೆ. ಆದ್ದರಿಂದ ಕೂಡಲೆ ಆ ಸಿಲಬಸ್ಸನ್ನು ಬದಲಾಯಿಸಬೇಕು. ನಮ್ಮಲ್ಲಿ ಆಟೋಮೊಬೈಲ್ ಮತ್ತು ರೇಡಿಯೋ ಇಂಜನಿಯರಿಂಗ್ ಬಾಬಿನಲ್ಲಿ ಉತ್ತೀರ್ಣರಾದ ಜನರು ಬಹಳ ಅಗತ್ಯವಾಗಿ ಬೇಕಾಗಿದ್ದಾರೆ. ಆದ್ದರಿಂದ ರಾಯಚೂರು–ಬಿಹಾರ್ ಮತ್ತು ಗುಲ್ಬರ್ಗ ಪಾಲಿಟೆಕ್ನಿಕ್ ಶಾಲೆಗಳಲ್ಲಿ ಈ ಸಿಲಬಸ್ಸನ್ನು ಕೂಡಲೆ ತೆಗೆಯ ಬೇಕೆಂದು ಒತ್ತಾಯ ಮಾಡುತ್ತೇನೆ. ಇನ್ನು ನಮ್ಮ ಮಾನ್ಯ ವಿದ್ಯಾ ಮಂತ್ರಿಗಳು ಗಲ್ಬರ್ಗಕ್ಕೆ ಬಂದಿದ್ದಾಗ್ಗೆ ಅಲ್ಲಿಯ ಸಾರ್ವಜನಿಕರು ಮತ್ತು ವಿಧಾನಸಭೆಯ ಸದಸ್ಯರೂ ಅವರ ಗಮನಕ್ಕೆ ಅಲ್ಲಿಯ ಅಗತ್ಯವಾದ ಬೇಡಿಕೆಗಳೇನಿದ್ದವು ಅವುಗಳನ್ನು ಆವರ ಮುಂದಿಟ್ಟರು. ಅವರಿಗೆ ಅಲ್ಲಿನ

ಪರಿಸ್ಥಿತಿ ಚೆನ್ನಾಗಿ ಮನವರಿಕೆಯಾಗಿದೆ. ಅಲ್ಲಿ ಈಗಾಗಲೆ ಮೆಡಿಕಲ್ ಕಾಲೇಜು, ಇಂಜನಿಯರಿಂಗ್ ಕಾಲೇಜು ಮತ್ತು ಸೈನ್ಸ್ ಅಂಡ್ ಆರ್ಟ್ಸ್ ಕಾಲೇಜು ಇಷ್ಟೆಲ್ಲಾ ಕೆಲಸ ಮಾಡುತ್ತಿವೆ. ಇನ್ನು ಸದ್ಯದಲ್ಲೇ ಅಲ್ಲಿಗೆ ಒಂದು ವ್ಯವಸಾಯದ ಕಾಲೇಜ್ ಕೂಡ ಬರುವುದಿದೆ. ಇಂಥ ಸನ್ನಿವೇಶ ಅಲ್ಲಿರುವುದರಿಂದ ಅಲ್ಲಿ ಒಂದು ಯೂನಿವರ್ಸಿಟಿಯನ್ನು ತೆರೆಯುವುದಕ್ಕೆ ಸರ್ಕಾರದವರು ಕೂಡಲೆ ಕ್ರಮ ಕೈಗೊಳ್ಳಬೇಕೆಂದು ಜನರು ಆ ದಿವಸ ಮಂತ್ರಿಗಳಲ್ಲಿ ಒತ್ತಾಯ ಹಾಕಿದರು. ಆಗ ಮಾನ್ಯ ಸಚಿವರು ಆ ಬಗ್ಗೆ ಒಂದು ವಾಗ್ದಾನ ಕೂಡ ಮಾಡಿದ್ದಾರೆ. ಆ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳು ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ ಆ ಯೂನಿವರ್ಸಿಟಿಯನ್ನು ಗುಲ್ಬರ್ಗದಲ್ಲಿ ಪ್ರಾರಂಭಮಾಡುವುದಾಗಿ ವಾಗ್ದಾನ ಮಾಡಿದ್ದರು. ಆದರೆ ಆ ಯೂನಿವರ್ಸಿಟಿಯನ್ನು ಪ್ರಾರಂಭ ಮಾಡುವುದಕ್ಕೆ ಮುನ್ನ ಅಲ್ಲಿಗೆ ಇನ್ನೊಂದು ಅಗತ್ಯವಾದ ಕೆಲಸವಾಗಬೇಕಾಗಿದೆ. ಅದೇನೆಂದರೆ- ಅಲ್ಲಿ ಒಂದು ಪೋಸ್ಟ್ ಗ್ರಾಜುಯೇಟ್ ಕೋರ್ಸ್ ಸೆಂಟರ್ ಪ್ರಾರಂಭಮಾಡಬೇಕಾಗಿದೆ, ಇದಕ್ಕಾಗಿ ಮಂಗಳೂರಿಗೆ ಹಣವನ್ನು ಈಗಿನ ಬಡ್ಜೆಟ್ಟಿನಲ್ಲಿ ತೆಗೆದಿಟ್ಟು ನಮ್ಮ ಹೈದ್ರಾಬಾದ್ ಕರ್ಣಾಟಕಕ್ಕೆ ಹಣವನ್ನು ತೆಗೆದಿಟ್ಟಿಲ್ಲ. ಗಲ್ಬರ್ಗಾದಲ್ಲಿ ಒಂದು ಸ್ನಾತಕೋತ್ತರ ತರಗತಿಯನ್ನು ಪ್ರಾರಂಭ ಮಾಡಲು ಒತ್ತಾಯ ಬಹಳ ದಿನದಿಂದಲೂ ಇದೆ. ಮಾನ್ಯ ಮಂತ್ರಿಗಳಿಗೂ ಇದು ಚೆನ್ನಾಗಿ ಮನವರಿಕೆಯಾಗಿದೆ. ಆದ್ದರಿಂದ ಮಾನ್ಯ ಮಂತ್ರಿಗಳು ಅದಕ್ಕೆ ಸೂಕ್ತ ಗಮನ ಕೊಟ್ಟು ಅದನ್ನು ಕೂಡಲೆ ಅಲ್ಲಿ ಸ್ಥಾಪನೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಪ್ರಾರ್ಥನೆ ಮಾಡಿಕೊಂಡು ನನಗೆ ಇಷ್ಟು ಮಾತನಾಡಲಿಕ್ಕೆ ಅವಕಾಶ ಕಲ್ಪಿಸಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಮಾನ್ಯ ಸಭಾಪತಿಗಳೇ, ವಿದ್ಯಾಮಂತ್ರಿಗಳು ಈ ದಿವಸ ಸಭೆಯ ಮುಂದೆ ಮಂಡಿಸಿರತಕ್ಕ ವಿದ್ಯಾ ಬೇಡಿಕೆಗಳೇನಿವೆ ಅದನ್ನು ನಾನು ವಿರೋಧಿಸುತ್ತಾ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ.

ನಾನು ಈ ಕೇಳಿಕೆಯನ್ನು ವಿರೋಧಿಸಬೇಕಾಗಿದ್ದರೆ ಇರತಕ್ಕ ಒಂದು ಮುಖ್ಯ ಕಾರಣ ಅಂದರೆ ಹೋದವರ್ಷಕ್ಕಿಂತ ಈ ವರ್ಷ ವಿದ್ಯಾ ಇಲಾಖೆಯ ಹಲವಾರು ಬಾಬುಗಳಲ್ಲಿ ಏನೇನು ಸುಧಾರಣೆಯಾಗಿದೆ, ವಿದ್ಯಾ ಇಲಾಖೆಯಲ್ಲಿ ನಡೆಯಬೇಕಾದ ಕೆಲಸಕಾರ್ಯಗಳೆಲ್ಲಾ ಸರಿಯಾಗಿ ನಿರ್ವಹಿಸಲ್ಪಡುತ್ತಿವೆಯೇ, ಮತ್ತು ಇಂದಿನ ವಿದ್ಯಾಭ್ಯಾಸ ಪದ್ಧತಿಯಿಂದ ದೇಶಕ್ಕಾಗಲಿ ಅಥವಾ ಸಮಾಜಕ್ಕಾಗಲೀ ಏನಾದರೂ ಒಂದು ಉಪಕಾರವಾಗುತ್ತದೆಯೇ, ಅನಕೂಲ ಆಗುತ್ತಿದೆಯೇ ಎಂಬುದನ್ನೆಲ್ಲಾ ಅವಲೋಕನ ಮಾಡಿ ನೋಡಿದೆ. ಆದರೆ ಇದರಲ್ಲಿ ಅಂಥಾ ಪ್ರಗತಿಪರವಾದ ಬದಲಾವಣೆಗಳೇನಾದರೂ ಆಗಿದ್ದಿದ್ದರೆ ನಾನು ಖಂಡಿತ ಬೇಡಿಕೆಗಳನ್ನು ವಿರೋಧಿಸುತ್ತಿರಲಿಲ್ಲ. ಆದರೆ ನನಗೆ ಗೊತ್ತಿರುವಂತೆ ಶ್ರೀಮಾನ್ ಶಂಕರೇಗೌಡರೂ ಮತ್ತು ಮಾನ್ಯ ಸೋಗಿ ಅವರು ಬಹಳ ಮುತುವರ್ಜಿವಹಿಸಿ ಕೆಲಸ ಮಾಡುತ್ತಿದ್ದಾರೆಂದು ನನಗೆ ಗೊತ್ತಾಗಿದೆ. ಆದರೆ ಇಷ್ಟು ಹದಗೆಟ್ಟಿರತಕ್ಕ ವಿದ್ಯಾಭ್ಯಾಸದ ಪದ್ಧತಿಯ ಬಗ್ಗೆ ಒಂದು ಹೊಸ ಸುಧಾರಣೆಯನ್ನು ಅಷ್ಟು ಸುಲಭವಾಗಿ ತರುವುದಕ್ಕೆ ಸಾಧ್ಯವಿದೆಯೇ ಅನ್ನುವುದನ್ನು ನಾವೀಗ ವಿಚಾರ ಮಾಡಬೇಕಾಗಿದೆ. ನಾನು ಇದರ ಹಿಂದಿನ ಚರಿತ್ರೆಯನ್ನೆಲ್ಲಾ ಹೇಳುವುದಕ್ಕೆ ಹೋಗುವುದಿಲ್ಲ. ಈ ದಿವಸ ನಮ್ಮ ಕಣ್ಣು ಮುಂದೇನು ನಡೆಯುತ್ತಿದೆ ಅದಷ್ಟನ್ನು ಮಾತ್ರ ಹೇಳುವುದಕ್ಕೆ ಇಷ್ಟಪಡುತ್ತೇ. ಮೊದಲು ಪಿ. ಯು. ಸಿ. ಕೋರ್ಸು ಒಂದು ವರ್ಷ ಮಾತ್ರ ಇತ್ತು. ಈಗಲೂ ಒಂದು ವರ್ಷವೇ ಇದೆ. ಇದನ್ನು ಮುಂದಕ್ಕೆ 2 ವರ್ಷಗಳಿಗೆ ಬದಲಾವಣೆ ಮಾಡಬೇಕೆಂದು ನಿರ್ಧಾರ ಮಾಡಿದ್ದಾರಂತೆ. ನಾನು ಕಳೆದಸಾರಿ ಬಡ್ಜೆಟ್ ಅಧಿವೇಶನದಲ್ಲಿ ಇದೇ ಡಿಮ್ಯಾಂಡಿನ ಮೇಲೆ ಮಾತನಾಡುತ್ತ ನಮ್ಮ ಇಂದಿನ ವಿದ್ಯಾಭ್ಯಾಸದ ಪದ್ಧತಿಯನ್ನು ಟೀಕಿಸಿದ್ದೆ. ಗಿನಿಪಿಗ್ಸನ್ನು ಇಲಿಗಳು ಲ್ಯಾಬೊರೇಟ್ರಿಗಳಲ್ಲಿ ಕೊಯ್ದು ಹರಿದು ಕಿತ್ತು ಕಿತ್ತು ನೋಡುವಂತೆ ಇಲ್ಲಿ ನಮ್ಮ ವಿದ್ಯಾರ್ಥಿಗಳ ಮೇಲೆ ಸರ್ಕಾರದವರು ತಮ್ಮ ಒಂದು ಎಕ್ಸ್ಪರಿಮೆಂಟನ್ನು ನಡೆಸುವುದಕ್ಕೆ ಪ್ರಯೋಗ ಮಾಡುತ್ತಿದ್ದಾರೆ ಎಂಬುದಾಗಿ ಏನು ಹೇಳಿದ್ದೆನೋ ಅದನ್ನೇ ಪುನಃ ಈ ದಿವಸ ಹೇಳಬೇಕಾಗಿದೆ ಅದಕ್ಕಾಗಿ ನಾನು ನನ್ನ ವ್ಯಸನವನ್ನು ಸೂಚಿಸಲಿಚ್ಛಿಸುತ್ತೇನೆ. ನಾನು ಹಿಂದೆ ಓದುತ್ತಿದ್ದಾಗ ಇಂಟರ್‌ಮಿಡಿಯೆಟ್ ಕೋರ್ಸ್ ಎಂದು ಎರಡು ವರ್ಷಗಳಿತ್ತು. ಅದನ್ನು ಇತ್ತೀಚೆಗೆ ಒಂದು ವರ್ಷ ಅಂತ ಮಾಡಿದರು. ಈಗ ಮತ್ತೆ ಅದನ್ನು 2 ವರ್ಷಕ್ಕೇರಿಸಬೇಕೆಂದು ಹೇಳುತ್ತಿದ್ದಾರೆ. ಅಂದರೆ ಇಲವೆಂತ್ ಸ್ಟ್ಯಾಂಡರ್ಡ್ ಇನ್ನು ಮುಂದಕ್ಕೆ ಹನ್ನೆರಡನೆ ಸ್ಟ್ಯಾಂಡರ್ಡ್ ಆಗಿ ಆಗುತ್ತದೆ. ಅದಾದ ಮೇಲೆ ಯೂನಿವರ್ಸಿಟಿ ಕೋರ್ಸು 2 ವರ್ಷಗಳಿಗಿಳಿಯುತ್ತದೆ. ಹನ್ನೊಂದನೇ ಸ್ಟ್ಯಾಂಡರ್ಡ್‌ನ ಉಪಾಧ್ಯಾಯರೇ ಹನ್ನೆರಡನೇ ಸ್ಟ್ಯಾಂಡರ್ಡಿಗೂ ಪಾಠಹೇಳಬೇಕಾಗುತ್ತದೆ. ಇನ್ನು ಮುಂದಕ್ಕೆ ಹನ್ನೊಂದನೆ ಸ್ಟ್ಯಾಂಡರ್ಡನ್ನು ಮುಂದುವರಿಸುವುದಿಲ್ಲ ಎಂದೇನೂ ಅವರು ಹೇಳಿಲ್ಲ. ಇಂಥಾ ಒಂದು

(ಶ್ರೀ ಎಂ. ಎಸ್. ಕೃಷ್ಣನ್)

ಅಸ್ಪಷ್ಟತೆ ಇದೆ. ಇಂಥ ಸಂದರ್ಭದಲ್ಲಿ ಸರ್ಕಾರದವರು ವಿದ್ಯಾರ್ಥಿಗಳ ಮೇಲೆ ಎಕ್ಸ್‌ಪೆರಿಮೆಂಟ್ ಮಾಡುತ್ತಿದ್ದಾರೆಂದು ಹೇಳದೆ ವಿಧಿಯಿಲ್ಲ. 1968ರಲ್ಲಿ ಎಸ್. ಎಸ್. ಎಲ್. ಸಿ. ಯ ಪರೀಕ್ಷೆಯಲ್ಲಿ ಉತ್ತೀರ್ಣರಾದವರ ಸಂಖ್ಯೆ ಸೇಕಡ 34 ಇತ್ತು. ಅದು ಏತಕ್ಕೆ ಅಷ್ಟು ಕಡಮೆ ಆಯಿತು ಎಂಬುದನ್ನು ಕಂಡುಹಿಡಿದು ಅದನ್ನು ಇನ್ನೂ ಉತ್ತಮ ಪಡಿಸುವುದಕ್ಕಾಗಿ ವಿದ್ಯಾ ಮಂತ್ರಿಗಳು ವಿದ್ಯಾ ಇಲಾಖೆಯ ಕಾರ್ಯದರ್ಶಿ ಜಯರಾಂ ಅವರನ್ನೂ ವಿದ್ಯಾ ಇಲಾಖೆಯ ಡೈರೆಕ್ಟರು ಶ್ರೀ ಜೇವೂರರನ್ನೂ ಕರೆದು ಮೀಟಿಂಗನ್ನು ಮಾಡಿದರು. ಆದರೆ ಈ ದಿವಸ ಆ ರಿಜಲ್ಟ್ ಉತ್ತಮವಾಗುವುದಕ್ಕೆ ಏನು ಪರಿಣಾಮಕಾರಿ ಕಾರ್ಯ ಕ್ರಮಗಳನ್ನು ಕೈಗೊಂಡಿದ್ದಾರೆ? ತೇರ್ಗಡೆಯಾಗತಕ್ಕವರ ಸಂಖ್ಯೆ ಹೋದ ಸಲ ಶೇ 34 ಇದ್ದರೆ ಅದು ಮುಂದಿನ ಸಲ ಶೇ 32 ಆದರೆ ಅದರಲ್ಲಿ ನನಗೇನೂ ಆಶ್ಚರ್ಯ ಕಾಣುವುದಿಲ್ಲ. ಅದಕ್ಕೆ ಕಾರಣ ಅದನ್ನು ರೆಮಿಡಿ ಮಾಡ ತಕ್ಕ ಬಗ್ಗೆ ಮೂಲಭೂತ ವಿಷಯಗಳನ್ನು ಗಮನಕ್ಕೆ ತೆಗೆದುಕೊಂಡಿಲ್ಲ. ಅದ್ದರಿಂದ ಎಲ್ಲೆಲ್ಲೂ ವಿದ್ಯಾರ್ಥಿಗಳಲ್ಲಿ ಅಶಾಂತಿ ಅಸಮಾಧಾನಗಳು ಮೂಡಿವೆ. ವಿದ್ಯಾರ್ಥಿಗಳು ನಮಗೆ ನಿಮ್ಮ ಡಿಗ್ರಿ ಬೇಡ ನಮಗೆ ಅನ್ನ ಕೊಡಿ ಕೆಲಸ ಮಾಡಿ ಎಂದು ಕಾನ್‌ವೊಕೇಷನ್‌ಗಳಲ್ಲೇ ಕೇಳುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಇದಕ್ಕೆ ಮೂಲ ಕಾರಣವೇನು ಎಂಬುದನ್ನು ಇಲ್ಲಿಯವರೆಗೂ ಯಾರೂ ಕಂಡುಹಿಡಿದಿಲ್ಲ. ನಮ್ಮ ಇಂದಿನ ವಿದ್ಯಾಭ್ಯಾಸ ಕ್ರಮದಲ್ಲಿ ಮೂಲಭೂತವಾದ ಬದಲಾವಣೆಗಳನ್ನು ತರದೇ ಹೋದರೆ ವಿದ್ಯಾರ್ಥಿಗಳಲ್ಲಿರತಕ್ಕ ಅಶಿಸ್ತು ಖಂಡಿತಾ ಹೋಗುವುದಿಲ್ಲ. ಅದನ್ನು ಸರ್ಕಾರದವರು ಸೆಮಿನಾರ್-ಸಮ್ಮೇಳನಗಳ ಮೂಲಕ ಸರಿಪಡಿಸುವುದಕ್ಕಾಗುವುದಿಲ್ಲ. ಸರಿಯಾದ ಕ್ರಮದಲ್ಲಿ ಪಾಠಪ್ರವಚನಗಳು ನಡೆಯುತ್ತಿಲ್ಲ, ದಿನ ದಿನಕ್ಕೂ ಅಶಿಸ್ತು ಜಾಸ್ತಿಯಾಗಿ ಬೆಳೆಯುತ್ತಿದೆ. ಆದ್ದರಿಂದ ಈಗಿನ ವಿದ್ಯಾಭ್ಯಾಸ ಕ್ರಮದಲ್ಲೇ ಏನೋ ಒಂದು ದೊಡ್ಡ ದೋಷ ಇರಬೇಕು. ಅದನ್ನಿನ್ನೂ ಬಗೆಹರಿಸುವುದಕ್ಕೆ ಸಾಧ್ಯವಾಗಿಲ್ಲ. ಕಳೆದ ಸಾಲಿನಲ್ಲಿ ಸರ್ಕಾರದವರು ಬಿ. ಇ. ಡಿ. ಟ್ರೈನಿಂಗನ್ನು ಮಾಡಿದವರಿಗೆ 2 ಅಡ್ವಾನ್ಸ್ ಇಂಕ್ರಿಮೆಂಟುಗಳನ್ನು ಕೊಡುವುದಾಗಿ ಒಂದು ಆರ್ಡರನ್ನು ಹೊರಡಿಸಿದ್ದರು. ಈ ದಿವಸ ಅದನ್ನು ಅಂದರೆ ಹಿಂದೆ ಅವರಿಗೆ ಕೊಟ್ಟಿದ್ದನ್ನು ಮತ್ತೆ ವಾಪಸ್ಸು ತೆಗೆದುಕೊಳ್ಳುವುದಕ್ಕೆ ಇನ್ನೊಂದು ಆರ್ಡರನ್ನು ಹೊರಡಿಸುವುದರಲ್ಲಿದ್ದಾರೆ ಎಂದು ಹೇಳಲಾಗುತ್ತಿದೆ. ಹೀಗಾದರೆ ಇನ್ನು ಆ ಉಪಾಧ್ಯಾಯರಲ್ಲೂ ಶಾಂತಿ ಇರುವುದಕ್ಕೆ ಅವಕಾಶವಿಲ್ಲ. ಅವರಿಗೆ ಸರಿಯಾದ ಕ್ರಮದಲ್ಲಿ ಪಾಠಪ್ರವಚನ ನಡೆಸುವುದಕ್ಕೇನು ಇನ್‌ಸೆಂಟೀವ್ ಇರುತ್ತದೆ? ಅತ್ತ ವಿದ್ಯಾರ್ಥಿಗಳಲ್ಲೂ ಅಶಾಂತಿ-ಇತ್ತ ಉಪಾಧ್ಯಾಯರುಗಳಲ್ಲೂ ಅತೃಪ್ತಿ ಇದಕ್ಕೆಲ್ಲಾ ಮೂಲಕಾರಣ ಏನೆಂಬುದನ್ನು ನಾವೀಗ ವಿಚಾರ ಮಾಡಬೇಕಾಗಿದೆ. ಈ ಮಧ್ಯೆ ಒಂದು ಪ್ರಶ್ನೆ ಬರುತ್ತದೆ. ಅದರ ಬಗ್ಗೆ ಸರ್ಕಾರದವರು ಗಮನ ಕೊಡಬೇಕು. ದೇಶಾದ್ಯಂತ ವಿದ್ಯಾಭ್ಯಾಸದ ಬಗ್ಗೆ ಏನು ಮಾತನಾಡಿದ್ದಾರೆಂಬುದು ನನಗೆ ಗೊತ್ತಿದೆ. ಒಂದೊಂದು ರಾಜ್ಯದಲ್ಲಿ ಒಂದೊಂದು ರೀತಿಯ ವಿದ್ಯಾಭ್ಯಾಸ ಕ್ರಮವಿದೆ. ಈ ಪ್ರಶ್ನೆ ಈಗ ಬೃಹದಾಕಾರವಾಗಿ ಬಂದಿದೆ. ವಿದ್ಯಾಭ್ಯಾಸದ ಕ್ರಮ ಮೈಸೂರು ರಾಜ್ಯಕ್ಕೆಲ್ಲಾ ಒಂದೇ ಇರಬೇಕು. ಅಂತೆಯೇ ಮಹಾರಾಷ್ಟ್ರದಲ್ಲೂ ಮೈಸೂರಿನಂತೆಯೇ ಇರಬೇಕು, ಅಂತೆಯೇ ತಮಿಳನಾಡಿಗೆಲ್ಲಾ ಅಥವಾ ಕೇರಳಕ್ಕೆಲ್ಲಾ ಒಂದೇ ಇರಬೇಕು. ಪ್ರತಿಯೊಂದು ಕಡೆಯೂ ಏಕರೂಪವಾದ ಧೋರಣೆ ಇರಬೇಕು. ನನ್ನ ಅಭಿಪ್ರಾಯದಲ್ಲಿ ಇವತ್ತಿದಿವಸ ನಡೆಯುತ್ತಿರುವ ರೀತಿನೀತಿ ನೋಡಿದರೆ, ಮಹಾರಾಷ್ಟ್ರದಲ್ಲಿಯೇ ಒಂದು ನೀತಿ ಬಂಗಾಳದಲ್ಲಿಯೇ ಒಂದು ನೀತಿ, ಕೇರಳದಲ್ಲಿಯೇ ಒಂದು ನೀತಿ ಇದೆ. ಇದರ ಬಗ್ಗೆ ಒಂದು ಸಮಗ್ರವಾದ ಧೋರಣೆ ಇರಬೇಕು. ರಾಷ್ಟ್ರಮಟ್ಟದಲ್ಲಿ ವಿದ್ಯಾಭ್ಯಾಸದ ಪದ್ಧತಿಯ ಬಗ್ಗೆ ಸ್ಪಷ್ಟ ಧೋರಣೆ ನೀತಿ ಇರಬೇಕು ಆಗ ಮಾತ್ರ ಒಂದು ರೀತಿ ಏಕರೂಪವಾದ ವಿದ್ಯಾಭ್ಯಾಸ ಕೊಡುವುದಕ್ಕೆ ಸಾಧ್ಯ. ಒಂದೊಂದು ರಾಜ್ಯದಲ್ಲಿ ಒಂದೊಂದು ರೀತಿಯ ಟೆಕ್ಸ್ಟ್ ಬುಕ್ ಇದೆ. ಒಂದು ಕಡೆ ಮಹಾರಾಷ್ಟ್ರದವರನ್ನು ಹೊಗಳುವಂಥ ಟೆಕ್ಸ್ಟ್ ಬುಕ್ ಬರುತ್ತದೆ, ಇನ್ನೊಂದು ಕಡೆ ಪಂಜಾಬ್‌ನವರನ್ನು ಹೊಗಳುವಂಥ ಟೆಕ್ಸ್ಟ್ ಬುಕ್ ಬರುತ್ತದೆ, ಇದರಿಂದ ಅವರಲ್ಲಿ ರಾಷ್ಟ್ರೀಯ ಮನೋಭಾವನೆ ಬೆಳೆಸಲು ಸಾಧ್ಯವಿಲ್ಲ. ಕನ್ನಡಿಗರಿಗೆ ಕನ್ನಡವೇ ಇರಬೇಕು, ತಮಿಳರಿಗೆ ತಮಿಳೇ ಇರಬೇಕು ಎಂಬ ಸಂಕುಚಿತ ಅಭಿಪ್ರಾಯ ಬಂದು, ಇದರ ಬಗ್ಗೆ ಯಾವ ಧೋರಣೆ ತಾಳಬೇಕೆಂಬುದನ್ನು ಯೋಚನೆಮಾಡಬೇಕು. ಆಯಾ ರಾಜ್ಯಗಳಲ್ಲಿ ಆಯಾ ಭಾಷೆಗಳು ಬೆಳೆಯಬೇಕೆಂಬುದು ಪ್ರಗತಿಪರವಾದ. ನ್ಯಾಯವಾದ ಧೋರಣೆಯಾದರೂ ಸಹ, ಭಾಷಾಭಿಮಾನವನ್ನು ದುರುಪಯೋಗಪಡಿಸಿ. ಜನತೆಯ ಐಕ್ಯತೆಯನ್ನು ಛಿದ್ರ ಮಾಡಲಾಗುತ್ತಿದೆ.

ಇನ್ನು ಪಠ್ಯ ಪುಸ್ತಕಗಳ ವಿಚಾರ ಹೇಳುವುದಾದರೆ, ಕೆಲವರಿಗೆ ಪಠ್ಯಪುಸ್ತಕಗಳನ್ನು ಬರೆಯಲು ಅನುಕೂಲಮಾಡಿಕೊಡುತ್ತಾರೆ. ಪಠ್ಯ ಪುಸ್ತಕಗಳನ್ನು ಅವರಿಗೆ ಬೇಕಾದವರಿಗೆ ಬರೆಯುವುದಕ್ಕೆ

ಕೊಡುವುದು, ಅವರಿಗೆ ಬಹುಮಾನಗಳನ್ನು ಕೊಡುವುದು, ಯಾರಿಗೆ ಮಾನ್ಯತೆ ಕೊಡುವುದು, ಯಾರಿಗೆ ಮಾನ್ಯತೆ ಕೊಡಬೇಕೋ ಅವರಿಗೆ ಕೊಡದೇ ಇರುವುದು—ಇಂಥಾದ್ದು ನಡೆದಿದೆ. ಇದರಲ್ಲಿ ಸಮಗ್ರದೃಷ್ಟಿ ರಾಷ್ಟ್ರಕ್ಕೆಲ್ಲಾ ಒಂದು ನೀತಿ ಇಟ್ಟುಕೊಂಡಿರಬೇಕು. ಯಾರು ಅದನ್ನು ಮಾಡುವುದಕ್ಕೆ ಅಡ್ಡಿ ಬರುತ್ತಾರೆ? ಮಾನ್ಯ ಶ್ರೀ ತ್ರಿಗುಣಸೇನ್ ಅವರು ಇದಕ್ಕೆ ಅಡ್ಡಿ ಬರುತ್ತಾ ಇರುವುದು ಎಂದು ರಾಜ್ಯ ಸರ್ಕಾರದವರು ಹೇಳಬಹುದು ರಾಜ್ಯಸರ್ಕಾರದವರು ಕನ್‌ಕರೆಂಟ್ ಲಿಸ್ಟ್‌ನಲ್ಲಿ ತರಬೇಡಿ, ಸ್ಟೇಟ್‌ನಲ್ಲಿರಲಿ ಎಂದು ಹೇಳಿದ್ದಾರೆ. ಹಲವಾರು ಪತ್ರಿಕೆಗಳಲ್ಲಿ ಅದರಲ್ಲಿಯೂ ಡೆಕನ್‌ಹೆರಾಲ್ಡ್ ಮತ್ತು ಇಂಡಿಯನ್ ಎಕ್ಸ್‌ಪ್ರೆಸ್‌ಗಳಲ್ಲಿ ಏನು ಬರೆದಿದೆಯೆಂದರೆ, ಮಾನ್ಯ ಶ್ರೀ ತ್ರಿಗುಣಸೇನ್ ಅವರು ರಾಜ್ಯ ಸಭೆಯಲ್ಲಿ ಇದರ ಬಗ್ಗೆ ನನ್ನ ಕೈಯಿಂದ ಕನ್‌ಕರೆಂಟ್ ಲಿಸ್ಟಿನಲ್ಲಿ ತರುವುದಕ್ಕಾಗುವುದಿಲ್ಲವೆಂದು ಉತ್ತರ ಕೊಟ್ಟಿದ್ದಾರೆ. ರಾಜ್ಯದ ಮಂತ್ರಿಗಳು ಒಪ್ಪಿಕೊಳ್ಳುತ್ತಿಲ್ಲವೆಂದು ಹೇಳಿದ್ದಾರೆ. ಇಂಥಾ ಅನ್ಯಾಯ ಪರಿಸ್ಥಿತಿಯಿದೆ. ಇದು ಕಾಂಗ್ರೆಸ್ಸಿನವರಿಗೆ ಜಹಗೀರಾಗಿದೆಯೆಂದು ಕಾಣುತ್ತದೆ. ಕಾಂಗ್ರೆಸ್ಸಿನವರು ತಮ್ಮ ಹಿತಾಸಕ್ತಿಗಳನ್ನು ಬೆಳೆಸುವುದಕ್ಕೆ ಒಂದು ಕಡೆ ಅಡ್ಮಿನಿಸ್ಟ್ರೇಷನ್ ನಡೆಸುವುದು, ಮತ್ತೊಂದು ಕಡೆ ಅಧಿಕಾರಿಗಳನ್ನು ತಮಗೆ ಬೇಕಾದವರನ್ನು ಮೇಲೆ ಕಳಿಸುವುದು. ಟೆಕ್ಸ್ ಬುಕ್ ಬರೆಯುವುದಕ್ಕೆ ಅವರಿಗೆ ಬೇಕಾದವರಿಗೆ ಕೊಡುವುದು, ಕರಿಕ್ಯುಲಂ ತಮ್ಮ ಇಷ್ಟಬಂದಹಾಗೆ ಮಾಡುವುದು—ಇದೆಲ್ಲಾ ಆಗುತ್ತಿವೆ. ಕರ್ಣಾಟಕದ ಚರಿತ್ರೆ ಬರೆಯುವುದಕ್ಕೆ ಬೇರೆ ದುಡ್ಡನ್ನು ಇಟ್ಟಿದ್ದಾರೆ. ಅದರಲ್ಲಿ ಕಾಂಗ್ರೆಸ್ಸಿನವರದೇ ಒಂದು ಕರ್ಣಾಟಕ, ಅವರದೇ ಚರಿತ್ರೆ, ಅವರ ಚರಿತ್ರೆಯನ್ನು ಎಲ್ಲರೂ ಪಾಠ ಓದಬೇಕೆಂದು ಹೇಳಿದರೆ ಇದು ಜಹಗೀರು ಆಗುವುದಿಲ್ಲವೇ?

ಶ್ರೀ ಪಿ. ಆಂಜನಪ್ಪ (ಪಾವಗಡ).—ಈಗಾಗಲೇ ಆ ಜಹಗೀರುಗಳನ್ನು ಕಸಿದುಕೊಂಡಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಅವರಿಗೇನೂ ಜಹಗೀರುಗಳಿಲ್ಲ. ಈಗಿರತಕ್ಕ ಪರಿಸ್ಥಿತಿ ಇರುವುದರಿಂದ ನಾನು ಹೇಳುವುದಿಷ್ಟೇ. ದೇಶಾದ್ಯಂತ ಸಮಗ್ರವಾಗಿರುವ ಧೋರಣೆ ಮಾಡಬೇಕು. ಆ ರೀತಿ ಮಾಡಿದರೆ ಮಾತ್ರ ಕೊಠಾರಿ ಕಮಿಷನ್ನಿನವರು ಏನು ಗುರಿಯನ್ನು ಮುಟ್ಟಬೇಕೆಂದು ಹೇಳಿದ್ದಾರೋ ಅದನ್ನು ಮುಟ್ಟಬಹುದು. ಕೊಠಾರಿ ಕಮಿಷನ್ನಿನಲ್ಲಿ ಮಾಡಿರುವ ಶಿಫಾರ್ಸುಗಳಲ್ಲಿ ಒಂದು ಮಾತನು ಹೇಳಿದ್ದಾರೆ. ಅದು ಈ ರೀತಿ ಇದೆ.

> "The most important and urgent reform needed in education is to transform it, to endeavour to relate it to the life needs and aspirations of the people and thereby make it a powerful instrument of social, economic and cultural transformation necessary for the realization of the national goals. For this purpose, education should be developed so as to increase productivity, achieve social and national integration, accelerate the process of modernisation and cultivate social, moral and spiritual values."

ಹೀಗೆ ಬಹಳ ಚೆನ್ನಾಗಿ ಹೇಳಿದ್ದಾರೆ. ಆದರೆ ಆ ರೀತಿ ಒಂದೂ ಕೂಡ ನಡೆಯುತ್ತಾ ಇಲ್ಲ ಇಕನಾಮಿಕ್ ಸೋಷಿಯಲ್ ಟ್ರಾನ್ಸ್‌ಫರ್‌ಮೇಷನ್ ಎಂದೇನು ಹೇಳುತ್ತಾರೆಯೋ ಇದು ಯಾವರೀತಿಯಾಗುತ್ತಿದೆಯೋ ಗೊತ್ತಿಲ್ಲ. ಬದಲು ಹರಿಜನರನ್ನು ಸುಟ್ಟುಹಾಕಲಾಗುತ್ತಿದೆ. ತಾರತಮ್ಯ ಲಂಚ ಇತ್ಯಾದಿ ಹೆಚ್ಚಾಗುತ್ತದೆ. ಇಂಥಾದ್ದು ನಡೆದರೆ ವಿದ್ಯಾರ್ಥಿಗಳ ಆಂದೋಳನ ಹಾಗೂ ಚಳುವಳಿ ಆಗದೆ ಮತ್ತಿನ್ನೇನು ಆಗುತ್ತದೆ.

ಶ್ರೀ ಎಂ. ನಾಗಪ್ಪ.—ಈಗ ಮೆಡಿಕಲ್ ಕಾಲೇಜಿನಲ್ಲಿ ದುಡ್ಡು ಇದ್ದವರಿಗೆ ಸಹಾಯ. ಬಾಕಿಯವರಿಗೆ ಇಲ್ಲ. ಅದೇ ಇವರು ಟ್ರಾನ್ಸ್‌ಫರ್‌ಮೇಷನ್ ಎಂದು ಹೇಳುವುದು.

ಶ್ರೀ ಎಂ. ಎಸ್. ಕೃಷ್ಣನ್.—ನಾನು ಆ ಮಾತನ್ನು ಪದೇ ಪದೇ ಹೇಳಿದ್ದೇನೆ. ಇವರು ಒಂದು ಗುರಿ ಮುಟ್ಟಬೇಕಾದರೆ ದೇಶದಲ್ಲಿ ಸಮಗ್ರವಾದ ಧೋರಣೆ ನೀತಿ, ಎಜುಕೇಷನ್ ಪಾಲಿಸಿಯಲ್ಲಿ ಇರಬೇಕು. ಏಕೆಂದರೆ "ಅಶಿಸ್ತು" ಇತ್ತೀಚೆಗೆ ವಿದ್ಯಾರ್ಥಿಗಳಲ್ಲಿ ಹೆಚ್ಚುತ್ತಿದೆ ಎನ್ನುತ್ತಿದ್ದಾರೆ. ವಿದ್ಯಾರ್ಥಿಗಳಿಗೆ ಪಾಠ ಹೇಳುವುದು, ಲೆಕ್ಚರ ಬೋಧನೆ ಮಾಡುವುದು—ಇವುಗಳಿಂದ ಮಾತ್ರ ಶಿಸ್ತು ಅವರಲ್ಲಿ ಬರಲು ಸಾಧ್ಯವಿಲ್ಲ. ಅದಕ್ಕೆ ಮೂಲಭೂತ ಬದಲಾವಣೆಗಳಾಗಬೇಕು ಒಂದು ವೇಳೆ

(ಶ್ರೀ ಎಂ. ಎಸ್. ಕೃಷ್ಣನ್)

ಅವರು ಅಶಿಸ್ತಿನಿಂದ ವರ್ತಿಸುತ್ತಿದ್ದರೆ, ಅವನ್ನು ಹೋಗಲಾಡಿಸುವುದಕ್ಕೆ ದೇಶದ ಪ್ರಮುಖರು ಮುಂದೆ ಬಂದು ವಿಮರ್ಶೆ ಮಾಡಬೇಕು. ಮೂಲಭೂತವಾಗಿ ಏತಕ್ಕೋಸ್ಕರ ಹೀಗೆ ಆಗುತ್ತಿದೆ ಎನ್ನುವುದನ್ನು ಕಂಡುಹಿಡಿಯುವುದಕ್ಕೆ ಪ್ರಯತ್ನ ಪಟ್ಟಿದ್ದೀರಾ ? ಇವತ್ತು ವಿದ್ಯಾಭ್ಯಾಸಕ್ಕೆ ಇರುವ ಅನುಕೂಲಗಳು ಏನು ? ಎಷ್ಟೋ ಕಾಲೇಜುಗಳಲ್ಲಿ, ಎಷ್ಟೋ ಹೈಸ್ಕೂಲುಗಳಲ್ಲಿ. ಮತ್ತು ಎಷ್ಟೋ ಮಿಡಲ್ ಮತ್ತು ಪ್ರಾಥಮಿಕ ಶಾಲೆಗಳಲ್ಲಿ ಅದರಲ್ಲಿಯೂ ಹಳ್ಳಿಗಳ ಶಾಲೆಗಳಲ್ಲಿಯೂ ಅಧಿಕವಾಗಿ ಬೇಕಾದ ಸೌಲಭ್ಯಗಳು ಸಿಗುತ್ತಾ ಇಲ್ಲ. ನನ್ನ ಕ್ಷೇತ್ರದ ನಿದರ್ಶನಗಳನ್ನು ಬೇಕಾದಷ್ಟು ಕೊಡಬಲ್ಲೆ. ಕಟ್ಟಡದಲ್ಲಿ ಸರಿಯಾದ ಕೊಠಡಿಗಳಿಲ್ಲ, 60 ವಿದ್ಯಾರ್ಥಿಗಳನ್ನು ಒಂದೇ ಕೊಠಡಿಯಲ್ಲಿ ಕುರಿ ಮಂದೆಯ ಹಾಗೆ ತುಂಬಿದ್ದಾರೆ. ಇನ್ನು ಕೆಲವು ಕಡೆಗಳಲ್ಲಿ ಬರೀ ಕಟ್ಟಡ, ಉಪಾಧ್ಯಾಯರುಗಳು ಇರುವುದಿಲ್ಲ. ಉಪಾಧ್ಯಾಯರುಗಳು ಇದ್ದರೆ ಅವರಿಗೆ ಆಸಕ್ತಿ ಇರುವುದಿಲ್ಲ. ಅಧಿಕಾರವೂ ಇರುವುದಿಲ್ಲ. ಹೀಗೆ ನ್ಯೂನತೆಗಳು ನೂರಾರು ಇವೆ. ಹೊರಗಡೆಯೂ ಸಹ ಸರಿಯಾದ ವಾತಾವರಣವಿಲ್ಲ. ವಿದ್ಯಾರ್ಥಿಗಳಿಗೆ ಸರಿಯಾದ ಲ್ಯಾಬೋರೇಟರಿ, ಆಟದ ಮೈದಾನಗಳು ಇತ್ಯಾದಿ ಸಕಲ ಅವಶ್ಯಕತೆಗಳಿದ್ದರೆ ವಿದ್ಯಾರ್ಥಿಗಳು ಇನ್ನೂ ಹೆಚ್ಚು ಹುಮ್ಮಸ್ಸು, ಆಸಕ್ತಿಯಿಂದ ಕಲಿತುಕೊಳ್ಳುತ್ತಾರೆ. ಆ ತರಹ ಇವರು ಮಾಡಲಿಲ್ಲ. ಇದು ಒಂದು ಕಾರಣ. ಉಪಾಧ್ಯಾಯರುಗಳಿಗೆ ಏನಾಗಿದೆ ಎಂದರೆ ಈಗ ಮಾಸ್ ಎಜುಕೇಷನ್ ಬಂದು ಕೆಲವರನ್ನು ಪಾಸ್ ಮಾಡಿಸುವುದು, ಮತ್ತೆ ಕೆಲವರನ್ನು ಫೇಲ್ ಮಾಡಿಸುವುದು ಜಾಸ್ತಿಯಾಗಿದೆ ಏಕೆಂದರೆ ಇದರಲ್ಲಿ ಇಂಡಿವಿಜ್ಯುಯಲ್ ಅಟೆನ್‌ಷನ್ ಕೊಡುವುದಕ್ಕೆ ಸಾಧ್ಯವಾಗಿಲ್ಲ. ಆ ರೀತಿ ಹೇಳಬೇಕಾದರೆ ಒಬ್ಬರಿಗೆ 40 ಪೀರಿಯಡ್ಸ್‌ಗಳು ಇದೆ. ಅದನ್ನು ಕಡಿಮೆ ಮಾಡಬೇಕಾಗುತ್ತದೆ. ಅದರ ಬಗ್ಗೆ ಮನವಿಗಳೂ ಸಹ ಬಂದಿವೆ. ಅದರ ಬಗ್ಗೆ ತಜ್ಞರೂ ಸಹ ಹೇಳಿದ್ದಾರೆ. ಇತ್ತೀಚೆಗೆ ಬಿಹಾರ್‌ನಲ್ಲಿ ಒಂದು ಸೆಮಿನಾರ್ ನಡೆದಿದೆ. 26 ಪೀರಿಯಡ್ಸನ್ನು ಉಪಾಧ್ಯಾಯರುಗಳಿಗೆ ನಿಗದಿ ಮಾಡಬೇಕೆಂದು ಅಭಿಪ್ರಾಯ ಪಟ್ಟಿದ್ದಾರೆ. 26 ಪೀರಿಯಡ್ ಅನುಸರಿಸಿಕೊಂಡು ಬರುತ್ತಿದ್ದಾರೆ. ಮೈಸೂರು ರಾಜ್ಯದಲ್ಲಿ ಈ ಪರಿಸ್ಥಿತಿ ಇಲ್ಲ. ಉಪಾಧ್ಯಾಯ ವಿದ್ಯಾರ್ಥಿಗಳ ದಾಮಾಷಾ 1 : 40 ಮೈಸೂರಿನಲ್ಲಿದೆ. ಇದು ಹೆಚ್ಚೆಂದು ಎಲ್ಲರ ಅಭಿಪ್ರಾಯ. ಅಷ್ಟೇ ಅಲ್ಲ, ತುಕೋಳ್ ಕಮಿಶನ್ ಕೂಡ ಇದನ್ನು ಒಪ್ಪಿಕೊಂಡಿದ್ದಾರೆ. ಈ ಪರಿಸ್ಥಿತಿಯಿಂದಲೇ ಇಂಡಿವಿಜ್ಯುಯಲ್ ಅಟೆನ್‌ಶನ್ ಕೊಡುವುದಕ್ಕೆ ಸಾಧ್ಯವಿಲ್ಲ. ಈ ಪರಿಸ್ಥಿತಿ ಉತ್ತಮಗೊಳ್ಳದೆ ಅಶಿಸ್ತನ್ನು ಕಡಿಮೆ ಮಾಡುವುದಕ್ಕೆ ಸಾಧ್ಯವಿದೆಯೇ ?

ಮೂರನೆಯದಾಗಿ ಪಠ್ಯ ಪುಸ್ತಕಗಳು. ಇವತ್ತು ನಮ್ಮ ಧ್ಯೇಯ ಧೋರಣೆಗಳನ್ನು ಏನು ಹೇಳುತ್ತಿದ್ದೇವೆ, ಇವತ್ತು ಯಾವ ಮಟ್ಟದಲ್ಲಿ ಇದೆ ಎಂದು ನೋಡಿದರೆ ಪರಿಸ್ಥಿತಿ ತೀರಾ ಕೆಟ್ಟಿದೆ. ಪತ್ರಿಕೆಗಳಲ್ಲಿ ಓದಿದ್ದೇನೆ, ಏನೆಂದರೆ ಪಠ್ಯ ಪುಸ್ತಕಗಳಲ್ಲಿ ತಪ್ಪನ್ನು ತೋರಿಸಿಕೊಟ್ಟವರಿಗೆ ಬಹುಮಾನ ಕೊಡುತ್ತೇವೆ ಎಂದು ವಿದ್ಯಾ ಇಲಾಖೆ ಪ್ರಕಟಪಡಿಸಿದೆ. ತಪ್ಪುಗಳು ಇಲ್ಲ, ಪಠ್ಯ ಪುಸ್ತಕಗಳನ್ನು ನ್ಯಾಶನಲೈಸ್ ಮಾಡಿದ್ದೇವೆ, ಹಾಗಿರುವುದರಿಂದ ತಪ್ಪುಗಳು ಬರುವುದಕ್ಕೆ ಸಾಧ್ಯವಿಲ್ಲವೆಂದು ಹೇಳುತ್ತಿದ್ದಾರೆ. ಅದಕ್ಕೆ ಒಂದು ಕಮಿಟಿಯನ್ನೂ ಮಾಡಿದ್ದಾರೆ. ಅದರಲ್ಲಿ ಡೈರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್ ಇದ್ದಾರೆ. ಅವರು ರಿವ್ಯೂ ಮಾಡುತ್ತಾರೆಂದು ಹೇಳುತ್ತಾರೆ. ಯಾರು ರಿವ್ಯೂ ಮಾಡುತ್ತಾರೋ ಅವರೇ ತಪ್ಪು ಮಾಡಿದರೆ, ಏನು ಮಾಡಬೇಕು ? ಇದಕ್ಕೆ ಒಂದು ಉದಾಹರಣೆಯನ್ನು ಕೊಡುತ್ತೇನೆ. 10ನೇ ಸ್ಟ್ಯಾಂಡರ್ಡಿನ ಒಂದು ಪುಸ್ತಕದಲ್ಲಿ ಒಂದು ಪಾಠ ಇದೆ ಅದನ್ನು ಹೇಳುತ್ತೇನೆ.

> "Look, Ammayya, you must be careful. Wear pretty saree at the time your husband comes home. Men are inconstant. You must snare them with a pretty saree or blouse. Buy flowers and perfume and make yourself attractive."

This is in an essay, which is in the form of a story.

10ನೇ ಸ್ಟ್ಯಾಂಡರ್ಡಿನ ಹುಡುಗ ಹುಡುಗಿಯರಿಗೆ ಹೇಗೆ ಆಕರ್ಷಣೆ ಮಾಡಬೇಕು ಎನ್ನುವುದನ್ನು ಹೇಳಿ ಕೊಡುವ ಪುಸ್ತಕವನ್ನು ನಮ್ಮ ರಾಜ್ಯದಲ್ಲಿ ಇಟ್ಟಿದ್ದಾರೆ. ಹೀಗಿರುವಲ್ಲಿ ಹುಡುಗರಿಗೆ ಯಾವ ತರಹ ಅಶಿಸ್ತು ಇರಕೂಡದು ಎಂದು ಹೇಗೆ ಹೇಳುತ್ತೀರಿ ? ಈ ಪುಸ್ತಕದಲ್ಲಿ ಇನ್ನೂ ಮುಂದೆ ಇದರಲ್ಲಿ ಈ ರೀತಿ ಇದೆ.

> "Get all the grocery you want once every month and don't worry him about marketing ; lay by a little money, and give him a rupee or two when he asks for it. This is all the herb

and root needed. Let a women do this, and her husband will follow her like a dog."

It this the stuff the youngsters should be taught through nationalised text-books ?
ಯಾರು ತಪ್ಪು ಹುಡುಕಿದರೆ, ಬಹುಮಾನ ಕೊಡುತ್ತೇವೆಂದು ಹೇಳುತ್ತಾರೋ, ಅವರೇ ಇಂಥ ಮಹಾ ತಪ್ಪು ಮಾಡಿದ್ದಾರೆ. ಅವರಿಗೇನು ಶಿಕ್ಷೆ ?

These are extracts from the non-detailed text-book entitled "Pages for Pleasure", prescribed for the X Standard Public Examination. The Editorial Committee consists of :

(1) Sri S. V. Jevoor, Director of Public Instruction, Chairman

(2) Professor B. S. Ganachari, Prinicipal, Sanganabasaveswar. Arts College, Bijapur.

(3) Rev. Father S. Coelho, Principal, St. Aloysius Collegiate High School, Mangalore.

I don't know how the Father agreed to such a thing being included.

SRI B. P. GANGADHAR.—When a Text-book Committee is formed, is it not its duty to scrutinse and prescribe books which are to the standard of the students ? But I find that all non-sense is included.

SRI K. V. SHANKARA GOWDA.—The Member should not utter that word, I protest against its use.

MR. DEPUTY SPEAKER.—Sri Gangadhar will get his chance to speak. Then he can offer his remarks and not now.

SRI B. P. GANGADHAR.—The Hon. Minister is trying to justify. What is the fate of the students who read those passages ? He must realise that.

SRI M. S. KRISHNAN.—It is a pity that the Director of Public Instruction who announced a reward for those who picked up mistakes in the nationalised text-books, is himself a member of the Committee which is responsible for the preparation of this book. Such Passages for youngsters will breed indiscipline and inclulcate immorality.

There is a passage in an essay in the same book in which the strained relationship between a mother-in-law and daughter-in-law and their quarrels are described. Could such passages be prescribed for teen-aged girls ?

SRI S. V. AGNIHOTRI (Dharwar-Rural) —This is not exclusivey meant for girls......

SRI K. PUTTASWAMY (Minister for Law, Labour and Parliamentary Affairs).—Anything can be said here.

SRI M. S. KRISHNAN.—There is another statement here, which is not a statement of fact. I don't know whether these people are speaking for this country or any other country. There is yet another passage in the same book which says that the first landing on the Moon was

(SRI M. S. KRISHNAN)

made by a spaceship, launched under the auspices of the U.S. Space Administration. This book is guilty of even historical inaccuracies. The real fact is that it is "Luna IV" of the Soviet Union that first landed on the Moon. It is known to all people. Even my son tells it. ನನ್ನ ಮಗನೂ ಕೇಳಿದರೆ ಹೇಳುತ್ತಾನೆ. ಆದ್ದರಿಂದ ಈ ಚರಿತ್ರೆಯನ್ನು ಸುಳ್ಳು ಮಾಡುವ ರೀತಿಯಲ್ಲಿ ಈ ಪುಸ್ತಕವನ್ನು ಬರೆದಿದ್ದಾರೆ.

5-00 P.M.

ಇದರಲ್ಲಿ ಅಮೇರಿಕಾದವರ ಕೈವಾಡ, ಪ್ರಭಾವ ಏನಾದರೂ ಇದೆಯೋ ಏನೋ ನನಗೆ ಗೊತ್ತಿಲ್ಲ. ಅದು ಇದ್ದರೂ ಇರಬಹುದು ಅವರು ಬೇಕಾದಷ್ಟು ಕೈವಾಡ ಮಾಡುತ್ತಾರೆ. ಪುಸ್ತಕವನ್ನು ಬರೆದಿರುವವರು ವಿಷಯ ತಿಳಿಯದೇ ಈ ರೀತಿ ಪುಸ್ತಕಗಳಲ್ಲಿ ಬರೆದಿದ್ದಾರೆ ಎಂದು ಸ್ಪಷ್ಟವಾಗಿದೆ. ಈ ರೀತಿಯಾದ ಪುಸ್ತಕಗಳನ್ನು ಪ್ರಕಟಿಸುವುದು ಒಳ್ಳೆಯದಲ್ಲ. ನಮ್ಮ ದೇಶದ ವಿದ್ಯಾಭ್ಯಾಸದ ಕ್ರಮ ಇವೊತ್ತು ಯಾವ ರೀತಿ ಇದೆಯೆಂದರೆ ಹುಡುಗರು ಟೈಟ್‌ಪ್ಯಾಂಟ್ ಮತ್ತು ಟೈಟ್ ಷರ್ಟ್‌ಅನ್ನು ಹಾಕುವಂತಹ ಹವ್ಯಾಸಗಳಿಗೆ ಬಿದ್ದಿದ್ದಾರೆ. ನಾನೂ ಕೂಡ ಅನೇಕ ದೇಶಗಳನ್ನು ಸುತ್ತಾಡಿ ನೋಡಿಕೊಂಡು ಬಂದಿದ್ದೇನೆ. ಅಲ್ಲಿನ ಪರಿಸ್ಥಿತಿ ಏನಿದೆ ಎಂಬುದನ್ನು ನಾನು ಅರಿತುಕೊಂಡಿದ್ದೇನೆ. ವಿದ್ಯಾಭ್ಯಾಸ ಸಮತಾವಾದಿ ರಾಷ್ಟ್ರಗಳಲ್ಲಿ ಆ ದೇಶದ ಸಂಸ್ಕೃತಿಗೆ ಹೊಂದಿಕೊಂಡಿದೆ. ಇಲ್ಲಿ ವಿದೇಶೀಯರನ್ನು ಅನುಕರಿಸುವಂತಿದೆ.

ಇನ್ನೊಂದು ವಿಷಯ ಯೂನಿವರ್ಸಿಟಿ ವಿದ್ಯಾಭ್ಯಾಸದ ಬಗ್ಗೆ ಒಂದು ಮಾತು ಹೇಳಬೇಕಾಗಿದೆ. ಯೂನಿವರ್ಸಿಟಿಯಲ್ಲಿ ಏನಾಗಿದೆ ಎಂದರೆ ನಮ್ಮಲ್ಲಿ ಕೆಲವು ಪ್ರೈವೇಟ್ ಕಾಲೇಜುಗಳು ಇವೆ. ಕೆಲವು ಸರ್ಕಾರಿ ಕಾಲೇಜುಗಳು ಇವೆ. ಕೆಲವು ಪ್ರೈವೇಟ್ ಕಾಲೇಜುಗಳು ಹಿತಾಸಕ್ತಿಗಳಿಂದ ಕೂಡಿವೆ. ಕೆಲವು ಟ್ರಸ್ಟೀಸ್ ಮೂಲಕ ಕಾಲೇಜುಗಳು ನಡೆಯುತ್ತಿವೆ ಎಜುಕೇಷನ್ ಸೊಸೈಟಿಗಳ ಮೂಲಕ ನಡೆಸತಕ್ಕಂಥ ಕೆಲವು ಕಾಲೇಜುಗಳು ಮತಿಯ ಆಧಾರದ ಮೇಲೆ ಇವೆ. ಬ್ರಿಟಿಷರು ಹೋರಾಟ ನಡೆಸಿದಾಗ ವಿದ್ಯಾಭ್ಯಾಸವನ್ನು ರಾಷ್ಟ್ರೀಯತೆಯ ಆಧಾರದ ಮೇಲೆ ಬೆಳೆಸಿ ನಡೆಸಿದಂತಹ ನಾಯಕರು ನಮ್ಮಲ್ಲಿ ಅನೇಕರು ಇದ್ದಾರೆ. ಆದರೆ ಈ ದಿನ ರಾಷ್ಟ್ರೀಯ ಮನೋಭಾವನೆಗೆ ತಿಲಾಂಜಲಿ ಕೊಡಲಾಗುತ್ತಿದೆ ಮತೀಯ ಆಧಾರದ ಮೇಲೆ ವಿದ್ಯಾಭ್ಯಾಸ ಕ್ರಮ, ಜಾತಿಯ ಭಾವನೆ ಬೆಳೆಸುವಂತೆ ಹಾಸ್ಟಲುಗಳು ಮತ್ತು ಕಾಲೇಜುಗಳನ್ನು ತೆರೆಯುವುದು ಹೆಚ್ಚಾಗುತ್ತಿದೆ. ಇದು ಸರಿಯಾದ್ದಲ್ಲ. ಈ ರೀತಿಯ ವಿದ್ಯಾಭ್ಯಾಸ ಪದ್ಧತಿಯನ್ನು ಈಗ ಬದಲಾವಣೆ ಮಾಡುವುದಕ್ಕೆ ಸುಲಭ ಸಾಧ್ಯವಿಲ್ಲ. ಇದಕ್ಕೆ ಮೂಲಭೂತ ಬದಲಾವಣೆಗಳು ಸರ್ಕಾರದಲ್ಲಾಗಬೇಕು. ಇನ್ನೊಂದು ವಿಷಯ. ಈಗ ಪ್ರೈವೇಟ್ ಕಾಲೇಜುಗಳಿಗೆ ಸಂಬಂಧಪಟ್ಟ. ಯೂನಿವರ್ಸಿಟಿಯವರು ಅವರ ಆಡಳಿತದ ಬಗ್ಗೆ ಅಡ್ವೈಜ್ ಮಾಡಬಹುದು. ಆದರೆ ಯೂನಿವರ್ಸಿಟಿಯವರು ಆ ಪ್ರೈವೇಟ್ ಕಾಲೇಜುಗಳ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಮ್ಯಾನೇಜ್‌ಮೆಂಟಿನವರ ಮೇಲೆ ಯೂನಿವರ್ಸಿಟಿಯವರ ಹಿಡಿತವಿಲ್ಲ. ಸರ್ವೀಸ್ ಕಂಡೀಷನ್‌ಗಳ ಬಗ್ಗೆ ಹಿಡಿತವಿಲ್ಲ. ಕಾಲೇಜುಗಳನ್ನು ಪ್ರಜಾಪ್ರಭುತ್ವ ರೀತಿಯಲ್ಲಿ ನಡೆಸುವುದಕ್ಕೆ ಅಧಿಕಾರ ಇದೆ. ಆರೀತಿ ನಡೆಸಬೇಕಾಗಿದೆ ಆಗ ಮಾತ್ರ ವಿದ್ಯಾರ್ಥಿಗಳ ಸಹಕಾರವನ್ನು ಪಡೆಯಲು ಸಾಧ್ಯ. ಕಾಲೇಜುಗಳನ್ನು ಸರಿಯಾಗಿ ನಡೆಸಲು ಸಾಧ್ಯ ಆದ್ದರಿಂದಲೇ ಈ ಪ್ರೈವೇಟ್ ಕಾಲೇಜುಗಳನ್ನು ಸರ್ಕಾರದ ಹಿಡಿತದಲ್ಲಿ ಇಟ್ಟುಕೊಳ್ಳುವ ದೃಷ್ಟಿಯಿಂದ ಒಂದು ಯೂನಿವರ್ಸಿಟಿ ಬಿಲ್ಲನ್ನು ಏತಕ್ಕೆ ತೆಗೆದುಕೊಂಡು ಬರಬಾರದು ? ಅನೇಕ ಪ್ರೈವೇಟ್ ಕಾಲೇಜುಗಳು ಕೋಮುವಾರು ಮನೋಭಾವನೆಯಿಂದ ತಮ್ಮ ಗುತ್ತಿಗೆಯನ್ನು ಜಮೀನುದಾರಿಯನ್ನು ಬೆಳೆಸುವ ರೀತಿಯಲ್ಲಿ ಕೆಲಸ ಮಾಡುತ್ತಿವೆ. ಇದನ್ನು ತಡೆಗಟ್ಟುವುದಕ್ಕೆ ಸರ್ಕಾರದವರು ಏತಕ್ಕೆ ಕಾನೂನು ಮಾಡುವುದಿಲ್ಲ. ಅಲ್ಲಿ ಸರ್ವೀಸ್ ಕಂಡೀಷನ್ಸ್ ಸರಿಯಾದ ರೀತಿಯಲ್ಲಿ ಇಲ್ಲ. ಅಲ್ಲಿ ಯು.ಜಿ.ಸಿ. ಸ್ಕೇಲನ್ನು ಉಪಾಧ್ಯಾಯರುಗಳ ವಿಷಯದಲ್ಲಿ ಕಾರ್ಯಗತ ಮಾಡುತ್ತಿಲ್ಲ. ಆದ್ದರಿಂದ ಸರ್ಕಾರದವರು ಒಂದು ಯೂನಿವರ್ಸಿಟಿ ಆಕ್ಟನ್ನು ತೆಗೆದುಕೊಂಡು ಬಂದರೆ ಎಲ್ಲಾ ದೃಷ್ಟಿಯಿಂದಲೂ ಆ ಕಾಲೇಜುಗಳು ಸರಿಯಾದ ರೀತಿಯಲ್ಲಿ ಕೆಲಸ ಮಾಡುವುದಕ್ಕೆ ಅನುಕೂಲವಾಗುತ್ತದೆ. ಅದಕ್ಕಾಗಿ ಆ ರೀತಿಯ ಒಂದು ಬಿಲ್ಲನ್ನು ಸರ್ಕಾರದವರು ತೆಗೆದುಕೊಂಡು ಬರಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಪ್ರೈವೇಟ್ ಸ್ಕೂಲುಗಳ ಬಗ್ಗೆ ಈಗಾಗಲೇ ಅನೇಕ ಮಾನ್ಯ ಸದಸ್ಯರು ಹೇಳಿದ್ದಾರೆ ಇವುಗಳನ್ನು ನೋಡಿದರೆ ಬಹಳ ದುಃಖವಾಗುತ್ತದೆ. ಮಕ್ಕಳಿಗೆ ವಿದ್ಯೆಯನ್ನು ಕೊಡುವ ಪ್ರೈವೇಟ್ ಸ್ಕೂಲು

ಗಳ ಉಪಾಧ್ಯಾಯರಿಗೆ ತಿಂಗಳಿಗೆ 40 ರೂಪಾಯಿ ಸಂಬಳವನ್ನು ಕೊಟ್ಟು 140 ರೂಪಾಯಿಗೆ ರುಜುಹಾಕಿಸಿಕೊಳ್ಳುತ್ತಾರೆ. ಮಿಕ್ಕ ಹಣವನ್ನು ಆಡಳಿತವರ್ಗದವರು ಉಪಯೋಗ ಮಾಡಿಕೊಳ್ಳುತ್ತಾರೆ. ಸೆಕೆಂಡರಿ ಎಜುಕೇಷನ್‌ನಲ್ಲಿ, ಸೆಕೆಂಡರಿ ಶಾಲೆಗಳಲ್ಲಿ ಉಪಾಧ್ಯಾಯರಿಗೆ ಸಂಬಳವನ್ನು ಕೊಡುವಾಗ ಚೆಕ್‌ನಲ್ಲಿಯೇ ಮುರಿದುಕೊಳ್ಳುತ್ತಾರೆ. ಮೊನ್ನೆ ಮಾನ್ಯ ವಿದ್ಯಾಮಂತ್ರಿಗಳಾದ ಶ್ರೀಮಾನ್ ಶಂಕರೇಗೌಡರೂ ಕೂಡ ಈ ವಿಷಯ ಹೇಳಿದರು. ಈ ವಿಚಾರದಲ್ಲಿ ಅನ್ಯಾಯ, ಮೋಸ ನಡೆಯುತ್ತಿದೆ ಎಂದು ನಾನು ಘಂಟಾಘೋಷವಾಗಿ ಹೇಳಬಲ್ಲೆ. ನನ್ನ ಏರಿಯಾದಲ್ಲಿ ಪ್ರೈವೇಟ್ ಸ್ಕೂಲುಗಳು ಬೇಕಾದಷ್ಟು ಇವೆ. ಅರುಣೋದಯ ವಿದ್ಯಾ ಸಂಸ್ಥೆಯವರು ಹತ್ತಾರು ಸ್ಕೂಲುಗಳನ್ನು ನಡೆಸುತ್ತಿದ್ದಾರೆ ಆದರೆ ಅವರು ಉಪಾಧ್ಯಾಯರಿಗೆ ಸರಿಯಾಗಿ ಸಂಬಳವನ್ನು ಕೊಡುವುದಿಲ್ಲ. ಮೊನ್ನೆ ಕೆಲವು ಉಪಾಧ್ಯಾಯರು ಆ ಸ್ಕೂಲಿನ ಮ್ಯಾನೇಜ್‌ಮೆಂಟಿನವರನ್ನೂ ಹಿಂದಿನ ಬಾಕಿ ಸಂಬಳವನ್ನು ಕೇಳಿದ್ದಕ್ಕೆ ವೆಕೇಶನ್ ಆದಮೇಲೆ ಆ ಉಪಾಧ್ಯಾಯರಿಗೆ ಕೆಲಸವಿಲ್ಲ ಎಂದು ಹೇಳಿ ಅಟ್ಟಿದರು. ಡಿಪಾರ್ಟ್‌ಮೆಂಟಿನವರು ಈ ಬಗ್ಗೆ ಎನ್‌ಕ್ವೈರಿಮಾಡಿ ಅವರನ್ನು ಕೆಲಸದಲ್ಲಿ ಇಟ್ಟುಕೊಳ್ಳಬೇಕೆಂದು ಹೇಳಿದರೂ ಕೂಡ ಆ ಉಪಾಧ್ಯಾಯರನ್ನು ಕೆಲಸದ ಮೇಲೆ ಇಟ್ಟುಕೊಳ್ಳುವುದಕ್ಕೆ ಆಡಳಿತ ತಯಾರಿಲ್ಲ. ರೂಲ್ಸ್ ಪ್ರಕಾರ ಅವರು ಆ ಉಪಾಧ್ಯಾಯರನ್ನು ಕೆಲಸದಲ್ಲಿ ಇಟ್ಟುಕೊಳ್ಳಬೇಕು. ಅವರು ಆ ರೀತಿ ಆ ಉಪಾಧ್ಯಾಯರನ್ನು ಕೆಲಸದಲ್ಲಿ ಇಟ್ಟುಕೊಳ್ಳುವುದಿಲ್ಲ ಎಂದು ಹೇಳುವಾಗ ಆ ಸ್ಕೂಲಿಗೆ ಗ್ರಾಂಟನ್ನು ನಿಲಿಸಿದ್ದಾರೆಯೇ ಎಂದರೆ ಅದೂ ಇಲ್ಲ. ಅಂಥಾ ಸ್ಕೂಲುಗಳಿಗೂ ಗ್ರಾಂಟು ಕೊಟ್ಟು ಅವುಗಳನ್ನು ನಡೆಸಿಕೊಂಡು ಹೋಗುವುದಕ್ಕೆ ಮೇಲ್ಮಟ್ಟದ ಅಧಿಕಾರಿಗಳ ಇನ್‌ಫ್ಲುಯೆನ್ಸ್ ಇದೆ. ಇದು ಎಜುಕೇಷನ್ ಸೊಸೈಟಿಯ ತಪ್ಪು ಅಲ್ಲ. ಇದು ಸರ್ಕಾರದಲ್ಲಿರತಕ್ಕ ಯಾರೋ ಕೆಲವು ಅಧಿಕಾರಿಗಳು ಮಾಡತಕ್ಕಂಥ ತಪ್ಪು. ಈ ರೀತಿಯಾಗಿ ಆ ಸ್ಕೂಲುಗಳನ್ನು ಅವರು ನಡೆಸಿಕೊಂಡು ಹೋಗುತ್ತಿದ್ದಾರೆ. ಅರುಣೋಧಯ ಸಂಸ್ಥೆ ಮತ್ತು ಜೀವಿತೇಶ್ವರ ಸಂಸ್ಥೆ ಇತ್ಯಾಧಿ ಸಂಸ್ಥೆಗಳು ಈ ರೀತಿಯಾಗಿ ಅನೇಕ ಪ್ರೈವೇಟ್ ಸ್ಕೂಲುಗಳನ್ನು ನಡೆಸುತ್ತಿದ್ದಾರೆ. ಜೀವಿತೇಶ್ವರ ಸ್ಕೂಲುಗಳ ಬಗ್ಗೆ ಫೋಟೊಗಳು ಇಲ್ಲ ನನ್ನಲ್ಲಿವೆ. ತಾವೇ ನೋಡಿರಿ ಅವುಗಳು ಶಾಲೆಗಳೊ ಅಥವಾ ದೊಡ್ಡಿಗಳೊ ? ಅಂತೂ ಒಟ್ಟಿನಲ್ಲಿ ಪ್ರೈವೇಟ್ ಸ್ಕೂಲುಗಳು ಮುಕ್ಕಾಲುಪಾಲು ಸರಿಯಾಗಿ ನಡೆಯುತ್ತಿಲ್ಲ. ಅವುಗಳಲ್ಲಿ ಮೋಸ ನಡೆಯುತ್ತಿದೆ ಇವುಗಳ ಮೇಲೆ ಸರ್ಕಾರದ ಹತೋಟಿ ಇರಬೇಕು. ಯಾರು ಪ್ರೈವೇಟ್ ವಿದ್ಯಾ ಸಂಸ್ಥೆಗಳಿಗೆ ಸಂಬಂಧಪಟ್ಟವರು ವಿದ್ಯಾಭ್ಯಾಸ ಇಲಾಖೆಯಲ್ಲಿ ಇದ್ದಾರೆ ಅವರು ಪ್ರೈವೇಟ್ ವಿದ್ಯಾ ಸಂಸ್ಥೆಗಳನ್ನು, ಸ್ಕೂಲುಗಳನ್ನು ನಡೆಸುವುದಕ್ಕೆ ಅನುಕೂಲಮಾಡಿಕೊಟ್ಟಿದ್ದಾರೆ ಇದು ನ್ಯಾಯವೇ, ಸರಿಯಾದ ಧೋರಣೆಯೇ? ಆದ್ದರಿಂದರೇ ಈ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತದೆ. ಅನ್ಯಾಯವಾಗುತ್ತಿದೆ ಆ ರೀತಿ ಆಗಬಾರದು. ಉಪಾಧ್ಯಾಯರ ವಿಷಯದಲ್ಲಿ ಸೆಕೆಂಡರಿ ಸ್ಕೂಲುಗಳಲ್ಲಿ ಚೆಕ್ ಸಿಸ್ಟಂ ತೆಗೆದುಕೊಂಡು ಬಂದಿದ್ದಾರೆ: ಅದೇ ರೀತಿ ಪ್ರೈಮರಿ ವಿದ್ಯಾಭ್ಯಾಸದ ವಿಷಯದಲ್ಲಿಯೂ ಚೆಕ್ ಸಿಸ್ಟಂ ತೆಗೆದುಕೊಂಡು ಬರಬೇಕು. ಇಲ್ಲದೆ ಹೋದರೆ ಆ ಉಪಾಧ್ಯಾಯರು ಬದುಕುವಂತಿಲ್ಲ. ಮಧ್ಯದ "ದಳ್ಳಾಳಿ" ತನಗೆ ಅನುಕೂ‍ ಮಾಡಿಕೊಂಡು ಹೋಗುತ್ತಾನೆ ಈ ಪದ್ಧತಿ ಕೂಡಲೇ ತಪ್ಪಬೇಕು.

ಮಲ್ಲೇಶ್ವರದಲ್ಲಿ ಒಂದು ಮಿಡಲ್ ಸ್ಕೂಲ್ ಇದೆ. ಆ ಸ್ಕೂಲಿನ ಮೈದಾನದಲ್ಲಿ ದೊಡ್ಡದಾ ಎಕ್ಸಾಮಿನೇಷನ್ ಕಟ್ಟಡವನ್ನು ಕಟ್ಟುವುದಕ್ಕಾಗಿ ಮೊನ್ನೆ ಶಂಕುಸ್ಥಾಪನೆ ಮಾಡಿದರು. ಇಲ್ಲಿ ಈ ಕಟ್ಟಡವನ್ನು ಕಟ್ಟುವ ಬಗ್ಗೆ ಜನರು ಆಕ್ಷೇಪಣೆ ಮಾಡಿದ್ದಾರೆ. ಈ ಜಾಗ ಅಲ್ಲಿಯ ಸ್ಕೂಲ್‌ಗೇ ಸಾಕಾಗುತ್ತಿಲ್ಲ. ಇರುವ ಸ್ಕೂಲನ್ನು ದೊಡ್ಡದು ಮಾಡಬಹುದೇ ಹೊರತು, ಈ ಕಟ್ಟಡವನ್ನು ಸಹ ಕಟ್ಟಿಸಿದರೆ ಆ ಹುಡುಗರು ಆಟಕ್ಕೆ ಎಲ್ಲಿಗೆ ಹೋಗಬೇಕು. ಇವತ್ತಿನ ದಿವಸ ವಿದ್ಯಾರ್ಥಿಗಳನ್ನು ಸತ್ಪ್ರಜೆಗಳನ್ನಾಗಿ ಮಾಡಬೇಕಾದರೆ ಆಟದ ಮೈದಾನಗಳು ಸಹ ಅಗತ್ಯವಾಗಿದೆ. ಇಂತಹ ಜಾಗದಲ್ಲಿ ಈ ಕಟ್ಟಡವನ್ನು ಕಟ್ಟಿ ಅಲ್ಲಿಗೆ ಕಂಪ್ಯೂಟರ್ ಮೆಷಿನ್ ಬೇರೆ ತರುತ್ತಾರೆ. ಈ ಮೆಷಿನ್ ಉಪಯೋಗ ಮಾಡುವುದರಿಂದ ನಿರುದ್ಯೋಗ ಜಾಸ್ತಿಯಾಗುತ್ತದೆ. ಇದು ನಮ್ಮ ವಾದವಾದರೆ, ಅದನ್ನು ಸರಕಾರದವರು ಒಪ್ಪಿಕೊಳ್ಳುವುದಿಲ್ಲ. ಶ್ರೀ ಜೈಶುಕ್ಲಾಲ್ ಹಾಥಿಯವರು ಹೇಳುತ್ತಿದ್ದಾರೆ. "In an under-developed economy it can never be increased." ಎಂಬುದಾಗಿ. ಆದರೆ ಇಲ್ಲಿ ಬೆಂಗಳೂರಿನಲ್ಲಿ ಏನಾಗುತ್ತಿದೆಯೆಂದರೆ ಮೊದಲು ಎಕ್ಸಾಮಿನೇಷನ್ ಪೇಪರ್‌ಗಳನ್ನು ವ್ಯಾಲ್ಯುಯೇಷನ್ ಮಾಡಿಸುವುದಕ್ಕೆ ಉಪಾಧ್ಯಾಯರುಗಳನ್ನು ರಾಜ್ಯದ ಎಲ್ಲಾ ಭಾಗಗಳಿಂದ ಕರೆಸುತ್ತಿದ್ದರು. ಅವರಿಗೆ ಪ್ರಯಾಣ ಭತ್ಯ, ಟಿ.ಎ., ಡಿ.ಎ., ಮುಂತಾದವುಗಳು ಸಿಗುತ್ತಿದ್ದವು. ಇದರಿಂದ ಅವರಿಗೆ ಸಂತೋಷವಾಗುತ್ತಿತ್ತು. ಕೆಲವು ಸುಸೂತ್ರವಾಗಿ ನಡೆಯುತ್ತಿತ್ತು. ಆದರೆ ಈಗ ಎಚ್.ಎಂ.ಟಿ.ಯ ಕಂಪ್ಯೂಟರ್‌ನಿಂದ ಕೆಲಸ ಮಾಡಿಸುತ್ತಿದ್ದಾರೆ. ಇದನ್ನು ಉಪಯೋಗಿಸುವುದರಿಂದ ಹಣ ಸ್ವಲ್ಪ ಉಳಿತಾಯವಾದರೂ ಕೂಡ ಇದನ್ನು ಉಪಯೋಗ ಮಾಡಬೇಕೇ ಎಂಬುದು ಇವತ್ತಿನ ಪ್ರಶ್ನೆಯಾಗಿದೆ. ವಿದ್ಯಾಭ್ಯಾಸ ಕ್ಷೇತ್ರದಲ್ಲಿ ಈ ತರಹದ ಕಂಪ್ಯೂಟರ್

(SRI M. S. KRISHNAN)

ಮಿಷಿನನ್ನು ಉಪಯೋಗ ಮಾಡುವುದರಿಂದ ಉಪಾಧ್ಯಾಯರುಗಳನ್ನು ಬೀದಿ ಬಿಕಾರಿಗಳನ್ನಾಗಿ ಮಾಡಿದಂತಾಗುತ್ತದೆ. ಇದರಿಂದ ದೊಡ್ಡ ಆಂದೋಳನ ನಡೆದೀತು ಎಂದು ಎಚ್ಚರಿಕೆ ಕೊಟ್ಟು ನನಗೆ ಇಷ್ಟು ಕಾಲ ಮಾತನಾಡುವುದಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ಎಂ. ಇದಿನಬ್ಬ (ಮಂಗಳೂರು-2).—ಸನ್ಮಾನ್ಯ ಸಭಾಪತಿಗಳೇ, ಈ ದಿವಸ ನಮ್ಮ ಶಿಕ್ಷಣ ಮಂತ್ರಿಗಳು ತಂದಿರತಕ್ಕ ಡಿಮ್ಯಾಂಡನ್ನು ಸ್ವಾಗತಿಸಿ ನಾಲ್ಕು ಮಾತುಗಳನ್ನು ಹೇಳುವುದಕ್ಕೆ ಅಪೇಕ್ಷೆ ಪಡುತ್ತೇನೆ. ಹಿಂದಿನ ಕಾಲದಲ್ಲಿ "ವಿದ್ಯಾವಿಹೀನಃ ಪಶುಸದೃಶಃ" ಎಂದು ಹೇಳುತ್ತಿದ್ದರು. ಯಾರಿಗೆ ವಿದ್ಯೆ ಇಲ್ಲವೋ ಅಂತಹವರನ್ನು ಪಶುವಿಗೆ ಹೋಲಿಕೆ ಮಾಡುತ್ತಿದ್ದರು. ಸಾಮಾನ್ಯವಾಗಿ ವಿದ್ಯೆ ಎಂಬುದು ಎಲ್ಲರಿಗೂ ಗೊತ್ತಿರಬೇಕು. ನಮ್ಮ ದೇಶ ಸ್ವಾತಂತ್ರ್ಯವಾದಾಗ ವಿದ್ಯೆಯ ಮಟ್ಟಿಗೆ ಬಹಳ ಹಿಂದುಳಿದಿತ್ತು. ಆಗಿನ ದಾಖಲೆಯನ್ನು ತೆಗೆದುಕೊಂಡು ನೋಡುವುದಾದರೆ, ಇಂಗ್ಲೆಂಡ್‌ನಲ್ಲಿ 1000 ಜನಕ್ಕೆ 850 ಜನರು ವಿದ್ಯಾವಂತರಾಗಿದ್ದರು, ಅಮೇರಿಕಾದಲ್ಲಿ 1000ಕ್ಕೆ 700-800 ಜನ ವಿದ್ಯಾವಂತರಾಗಿದ್ದರು. ಅದೇ ನಮ್ಮ ದೇಶದಲ್ಲಿ 100ಕ್ಕೆ 3-4 ಜನ ಮಾತ್ರ ವಿದ್ಯಾವಂತರಿದ್ದರು. ನಮ್ಮ ದೇಶ ಸ್ವತಂತ್ರವಾಗಿದ್ದರೂ ಸಹ ನಾವು ಶಿಕ್ಷಣದಲ್ಲಿ ಮುಂದುವರಿಯದೆ ಪಾಶ್ಚಾತ್ಯ ದೇಶಗಳ ಸಮಾನಕ್ಕೆ ಬರದೇ ಹೋದರೆ ನಮ್ಮ ದೇಶ ಬಹಳ ದೊಡ್ಡ ಪ್ರಜಾಪ್ರಭುತ್ವವಾಗಿ ಬೆಳೆಯುವುದಕ್ಕಾಗುವುದಿಲ್ಲವೆಂದು ಪಂಡಿತ್ ಜವಹರ್‌ಲಾಲ್ ನೆಹರೂ ಅವರು ಹೇಳುತ್ತಿದ್ದರು. ಕೇಂದ್ರ ಸರ್ಕಾರದವರು ಮತ್ತು ರಾಜ್ಯ ಸರ್ಕಾರದವರು ವಿದ್ಯಾಭ್ಯಾಸಕ್ಕಾಗಿ ಬೇಕಾದಷ್ಟು ಹಣವನ್ನು ಖರ್ಚು ಮಾಡುತ್ತಿದ್ದಾರೆ. ನಮ್ಮ ಮೈಸೂರು ಸರ್ಕಾರದವರು ಸಹ ಪ್ರತಿವರ್ಷ ಹೆಚ್ಚು ಹೆಚ್ಚು ಹಣವನ್ನು ಈ ಶಿಕ್ಷಣ ಇಲಾಖೆಗೆ ಖರ್ಚುಮಾಡುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ನಮ್ಮ ಸರ್ಕಾರದವರು ಕಡ್ಡಾಯ ಶಿಕ್ಷಣವನ್ನು ಜಾರಿಗೆ ತಂದಿದ್ದಾರೆ. ಕಡ್ಡಾಯ ಶಿಕ್ಷಣವೆಂದರೆ ನಮ್ಮ ದೇಶದಲ್ಲಿರುವ ಬಡವರ ಮಕ್ಕಳು, ಮಜ್‌ದೂರರ ಮಕ್ಕಳು, ರೈತರ ಮಕ್ಕಳು ಶಿಕ್ಷಣ ಕಲಿತು ಅಕ್ಷರಜ್ಞಾನ ಉಳ್ಳವರಾಗಬೇಕು ಎಂಬುದೇ ಕಡ್ಡಾಯ ಶಿಕ್ಷಣದ ಉದ್ದೇಶವಾಗಿದೆ. ಇವತ್ತಿನ ದಿವಸ ಶೇಕಡ 80ರಷ್ಟು ಅವಿದ್ಯಾವಂತರಿದ್ದಾರೆ. ಇವರಿಗೆ ಅಕ್ಷರಜ್ಞಾನವನ್ನು ಕಲಿಸಬೇಕೆಂಬುದೇ ಕಡ್ಡಾಯ ಶಿಕ್ಷಣದ ಉದ್ದೇಶವಾಗಿದೆ. ಸ್ವಾತಂತ್ರ್ಯಪೂರ್ವದಲ್ಲಿ ಶ್ರೀಮಂತರು ಮಾತ್ರ ಜರ್ಮನಿ ಅಮೇರಿಕಾ ಮುಂತಾದ ವಿದೇಶಗಳಿಗೆ ಹೋಗಿ ವಿದ್ಯಾಭ್ಯಾಸ ಪಡೆಯುವುದಕ್ಕೆ ಸಾಮರ್ಥ್ಯರಾಗಿದ್ದರು. ಈಗಲೂ ಕೂಡ ಶ್ರೀಮಂತರು ಮಾತ್ರ ವಿದೇಶಕ್ಕೆ ಹೋಗಿ ವಿದ್ಯಾಭ್ಯಾಸ ಪಡೆಯಲು ಸಾಧ್ಯವಿದೆ. ಇವತ್ತಿನ ದಿವಸ 5 ವರ್ಷ 8 ತಿಂಗಳು ಆದಮೇಲೆ ಎಲ್ಲಾ ಮಕ್ಕಳೂ ಸಹ ಶಾಲೆಗೆ ಹೋಗಬೇಕೆಂದು ಕಡ್ಡಾಯವಾಗಿದೆ. ಈ ಒಂದು ಮಹತ್ತರವಾದ ಕೆಲಸ ಸರಿಯಾಗಿ ನಮ್ಮ ರಾಜ್ಯದಲ್ಲಿ ನಡೆಯುತ್ತಿದೆಯೇ ಎನ್ನುವುದನ್ನು ಸರ್ಕಾರದವರು ಪರೀಕ್ಷೆಮಾಡಿ ನೋಡಬೇಕಾಗಿದೆ. ಯಾವುದೇ ಒಂದು ಕಾನೂನು ಜಾರಿಗೆ ಬಂದಮೇಲೆ ಅದು ಒಳ್ಳೆಯ ರೀತಿಯಲ್ಲಿ ಜಾರಿಯಾಗಬೇಕು. ಇನ್ನೂ ಅನೇಕ ಮಕ್ಕಳು ಈ ಕಾನೂನು ಬಂದ ಮೇಲೂ ಸಹ ಶಾಲೆಗೆ ಬರದೆ ಮನೆಯಲ್ಲಿಯೇ ಉಳಿಯುತ್ತಿರುವ ಪರಿಸ್ಥಿತಿ ಇದೆ. ಬಡವರ ಮಕ್ಕಳು, ರೈತರ ಮಕ್ಕಳು, ಮಜ್‌ದೂರರ ಮಕ್ಕಳು ಶಾಲೆಗೆ ಬರುತ್ತಿಲ್ಲ. ಯಾರು ತಮ್ಮ ಮಕ್ಕಳನ್ನು ಶಾಲೆಗೆ ಕಳಿಸುವುದಿಲ್ಲವೋ ಅಂತಹವರ ಮೇಲೆ ಉಗ್ರವಾದ ಕ್ರಮ ಕೈಗೊಳ್ಳಬೇಕೆಂದು ಹೇಳುತ್ತೇನೆ. ಈ ವಿಚಾರದಲ್ಲಿ ಶಾಲಾಭಿವೃದ್ಧಿ ಸಮಿತಿಗಳು ಸರಿಯಾದ ಕಾರ್ಯಕ್ರಮ ಕೈಗೊಳ್ಳುತ್ತಿಲ್ಲವೆಂದು ತಿಳಿದಿದ್ದೇನೆ. ತಿಂಗಳಿಗೊಮ್ಮೆ ಈ ಶಾಲಾಭಿವೃದ್ಧಿ ಸಮಿತಿಗಳು ಕಡ್ಡಾಯವಾಗಿ ಈ ಬಗ್ಗೆ ಕ್ರಮ ಕೈಗೊಳ್ಳಲು ಸಭೆ ಸೇರಬೇಕೆಂದು ನಮ್ಮ ಸರ್ಕಾರದವರು ಹೇಳಿದರೆ ಸ್ವಲ್ಪ ಒಳ್ಳೆಯದಾಗುತ್ತದೆ. ಶಾಲಾಭಿವೃದ್ಧಿ ಸಮಿತಿಯವರು ಯಾರ ಮಕ್ಕಳು ಶಾಲೆಗೆ ಬರುತ್ತಿಲ್ಲ, ಯಾರ ಯಾರ ಮಕ್ಕಳು ತಮ್ಮ ತಮ್ಮ ವೃತ್ತಿಯಲ್ಲೇ ತೊಡಗಿದ್ದಾರೆಂಬುದನ್ನು ಸರ್ವೆ ಮಾಡಿಸಬೇಕು. ಈ ಗಾಂಧಿ ಶತಾಬ್ಧಿಯ ವರ್ಷದಲ್ಲಿ ಬಡವರ ಮಕ್ಕಳು, ರೈತರ ಮಕ್ಕಳು ಕಡ್ಡಾಯವಾಗಿ ಶಾಲೆಗೆ ಸೇರುವಂತೆ ಮಾಡಿ ಎಲ್ಲರೂ ವಿದ್ಯಾವಂತರಾಗುವುದಕ್ಕೆ ಏರ್ಪಾಡು ಮಾಡಬೇಕು. ಈಗ ಕಡ್ಡಾಯ ಶಿಕ್ಷಣ ಒಳ್ಳೆಯ ರೀತಿಯಲ್ಲಿ ನಡೆಯುತ್ತಿದ್ದರೂ ಕೂಡ ಇನ್ನೂ ಒಳ್ಳೆಯ ರೀತಿಯಲ್ಲಿ ನಡೆಯುವಂತೆ ಏರ್ಪಾಡು ಮಾಡಬೇಕು. ಪ್ರತಿಯೊಂದು ಮಗುವೂ ಕೂಡ ಈ ಗಾಂಧಿ ಶತಾಬ್ಧಿ ವರ್ಷದಲ್ಲಿ ಕಡ್ಡಾಯ ಶಿಕ್ಷಣದ ಪ್ರಯೋಜನ ಪಡೆಯಬೇಕು. ಇದರಿಂದ ನಮ್ಮ ಸರ್ಕಾರದವರು ಮಾಡಿರತಕ್ಕಂಥ ಕೆಲಸ ಒಳ್ಳೆಯದಾಗುತ್ತದೆ. ಇಡೀ ರಾಜ್ಯದಲ್ಲಿ ಎಲ್ಲಾ ಪ್ರಾಥಮಿಕ ಶಾಲೆಗಳಲ್ಲಿ ಏಕರೂಪವಾದ ಪಾಠ ಪ್ರವಚನಗಳು ಇರಬೇಕೆಂದು ನಾನು ಹೇಳುತ್ತೇನೆ. 1-2-3ನೇ ಶಾಲೆಗಳಲ್ಲಿ ಇಟ್ಟಿರತಕ್ಕ ಪಠ್ಯಪುಸ್ತಕಗಳಲ್ಲಿ 60ರಿಂದ 2,000 ಪುಟಗಳು ಸಣ್ಣ ಸಣ್ಣ ಅಕ್ಷರಗಳಲ್ಲಿ ವಾಕ್ಯಗಳು ಇರುತ್ತವೆ. ಈ ರೀತಿ ಇದ್ದರೆ ಸಣ್ಣ ಸಣ್ಣ ಮಕ್ಕಳು ಕಲಿಯುವುದಕ್ಕೆ ಸಾಧ್ಯವಾಗುತ್ತದೆಯೇ ಎಂಬುದನ್ನು ನೋಡ

ಬೇಕು. ಮೊದಲು ದೊಡ್ಡ ದೊಡ್ಡ ಅಕ್ಷರಗಳಲ್ಲಿ ವಾಕ್ಯಗಳು ಇರುತ್ತಿದ್ದವು ಮತ್ತು ಚಿತ್ರಗಳು ಇರುತ್ತಿದ್ದವು. ಇದರಿಂದ ಉಪಾಧ್ಯಾಯರು ಒಳ್ಳೆಯ ರೀತಿಯಲ್ಲಿ ಬೋಧನೆ ಮಾಡುವುದಕ್ಕೂ ಮತ್ತು ಮಕ್ಕಳು ಕಲಿಯುವುದಕ್ಕೂ ಸಹಾಯವಾಗುತ್ತಿತ್ತು ಮತ್ತು ಮಕ್ಕಳ ಮೇಲೆ ಒಳ್ಳೆಯ ಪರಿಣಾಮ ಉಂಟಾಗುತ್ತಿತ್ತು. ಆದಕಾರಣ ಈ ಬಗ್ಗೆ ಸರ್ಕಾರದವರು ವಿಚಾರ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಶ್ರೀ ಶ್ರೀನಿವಾಸನಾಯಕರು ಹೇಳಿದಂತೆ 6 ವರ್ಷದ ಕೆಳಗಿನ ಮಕ್ಕಳ ವಿದ್ಯಾಭ್ಯಾಸದ ವ್ಯವಸ್ಥೆಗೆ ಸರ್ಕಾರದವರು ಗಮನ ಕೊಡಬೇಕು. ಇದಕ್ಕಾಗಿ ಮೂರರಿಂದ 6 ವರ್ಷದವರೆಗಿನ ಮಕ್ಕಳಿಗಾಗಿ ಪ್ರೀಪ್ರೈಮರಿ ಶಾಲೆಗಳನ್ನು ನಡೆಸಬೇಕು. ಮಕ್ಕಳ 3—4—5 ನೇ ವರ್ಷಗಳು ಬಹಳ ಪ್ರಾಮುಖ್ಯವಾದುವುಗಳು. ಇವತ್ತಿನದಿವಸ ಪ್ರಾಥಮಿಕ ವಿದ್ಯಾಭ್ಯಾಸಕ್ಕಾಗಿ 23 ಕೋಟಿ ರೂಪಾಯಿಗಳನ್ನು ಒದಗಿಸಿದ್ದೇವೆ. ಲೋಕೋಪಯೋಗಿ ಇಲಾಖೆ ಒಂದು ಬಿಟ್ಟರೆ ಉಳಿದ ಎಲ್ಲಾ ಇಲಾಖೆಗಳಿಗಿಂತಲೂ ಈ ವಿದ್ಯಾಇಲಾಖೆ ಬಡ್ಜೆಟ್‌ನಲ್ಲಿ ಸಿಂಹ ಪಾಲನ್ನು ಪಡೆದಿದೆ. ಪ್ರಾಥಮಿಕ ಶಾಲೆಗಳ ಮಟ್ಟ ಹೆಚ್ಚಬೇಕಾಗಿದೆ. ಶ್ರೀ ಶ್ರೀನಿವಾಸನಾಯಕರು ಹೇಳಿದಂತೆ ಈ ಅಧಿಕಾರಿಗಳು ಬೆಂಗಳೂರಿನಲ್ಲಿಯೇ ಇದ್ದು ಕೆಲಸ ಮಾಡದೆ ಪ್ರತಿಯೊಂದು ಜಿಲ್ಲೆ, ತಾಲ್ಲೂಕ್ ಮತ್ತು ಗ್ರಾಮಗಳಿಗೆ ಅನಿರಿಕ್ಷಿತವಾಗಿ ಭೇಟಿ ಕೊಟ್ಟು ಅಲ್ಲಿ ಉಪಾಧ್ಯಾಯರು ಇದ್ದಾರೆಯೇ, ಹುಡುಗರು ಇದ್ದಾರೆಯೇ ಶಾಲೆಗೆ ಬೀಗ ಹಾಕಲಾಗಿದೆಯೇ, ಉಪಾಧ್ಯಾಯರು ಬೇರೆ ಏನಾದರೂ ಕಸುಬು ಮಾಡುತ್ತಿದ್ದಾರೆಯೇ, ರಾಜಕೀಯ ನಡೆಸುತ್ತಿದ್ದಾರೆಯೇ ಎಂಬುದನ್ನೆಲ್ಲಾ ಪರೀಕ್ಷೆ ಮಾಡಬೇಕು. ಪ್ರಾಥಮಿಕ ಶಾಲೆಗಳಲ್ಲಿ ಒಂದು ರೀತಿಯ ಅಚ್ಚುಕಟ್ಟುತನ ಇಲ್ಲವೆಂದು ನಾನು ಕೇಳಿದ್ದೇನೆ. ಇದರಲ್ಲಿ ಸತ್ಯಾಂಶ ವಿದೆ. ಆದಕಾರಣ ಅಧಿಕಾರಿಗಳು ಹೋಗಿ ಪರೀಕ್ಷೆ ಮಾಡಬೇಕೆಂದು ಸರ್ಕಾರದಲ್ಲಿ ವಿನಿಮಯ ಪೂರ್ವಕವಾಗಿ ವಿಂನತಿ ಮಾಡಿಕೊಳ್ಳುತ್ತೇನೆ,

ಇನ್ನು ಪಠ್ಯಪುಸ್ತಕಗಳ ರಾಷ್ಟ್ರೀಕರಣದ ಬಗ್ಗೆ ಹೇಳುವುದಾದರೆ, ಪಠಪುಸ್ತಕಗಳು ಒಳ್ಳೆಯದಿದ್ದರೆ ಮಕ್ಕಳು ಚೆನ್ನಾಗಿ ಓದಿ ವಿದ್ಯಾವಂತರಾಗುತ್ತಾರೆ. ಪಠ್ಯಪುಸ್ತಕಗಳನ್ನು ರಾಷ್ಟ್ರೀಕರಣ ಮಾಡುವ ಸ್ಥಿತಿಗೆ ನಾವು ಹೋಗಿದ್ದೇವೆ. ಈ ರಾಷ್ಟ್ರೀಕರಣದಿಂದ ಒಳ್ಳೆಯದಾಗಿದೆಯೇ ಎಂಬುದನ್ನು ನಾವು ಆಲೋಚನೆ ಮಾಡಬೇಕಾಗಿದೆ. ಸರ್ಕಾರದವರಿಗೆ ಧರ್ಮಾರ್ಥವಾಗಿ ಕಾಗದ ಬರುತ್ತದೆ. ಸರ್ಕಾರದವರು ಮುದ್ರಿಸಿ ಮಾರಾಟಮಾಡುತ್ತಿರುವ ಪುಸ್ತಕಗಳ ಬೆಲೆ ಖಾಸಗಿಯವರು ಮುದ್ರಿಸಿ ಮಾರಾಟ ಮಾಡುವುದಕ್ಕಿಂತ ಒಂದೂವರೆ ಪಟ್ಟು ಬೆಲೆಯಲ್ಲಿ ಜಾಸ್ತಿ ಇರುವುದನ್ನು ನಾವು ಕಾಣುತ್ತಿದ್ದೇವೆ. ಏಕೆ ಹೀಗೆ ಮಾಡಬೇಕು, ಬೆಲೆಯನ್ನು ಕಡಿಮೆ ಮಾಡಿ ಎಲ್ಲ ಮಕ್ಕಳಿಗೆ ಚೆನ್ನಾಗಿ ತಿಳಿಯುವಂತಹ ಪಾಠಗಳು ಅದರಲ್ಲಿರುವಂತೆ ಮಾಡಬೇಕು. ಈಗ ಮಕ್ಕಳಿಗಾಗಿ ಹಂಚುವ ಪುಸ್ತಕಗಳನ್ನು ರಾಷ್ಟ್ರೀಕರಣ ಮಾಡಿದ್ದೇವೆ ಎಂದು ಇಂತಹ ಪಠ್ಯ ಪುಸ್ತಕಗಳನ್ನು ಮಾಡಿದರೆ ಇದರಿಂದ ರಾಷ್ಟ್ರೀಕರಣ ಮಾಡಿದ ಉದ್ದೇಶ ಸಫಲವಾಗುವುದಿಲ್ಲ. ಖಾಸಗಿಯವರು ಭ್ರಷ್ಟಾಚಾರ ಮಾಡುತ್ತಾರೆ ಇದನ್ನು ತಪ್ಪಿಸಲು ರಾಷ್ಟ್ರೀಕರಣ ಮಾಡಬೇಕು ಎಂದು ಮಾಡುವುದೇನೋ ಸರಿ. ಆದರೆ ಇಂದು ರಾಷ್ಟ್ರೀಕರಣ ಮಾಡಿದಮೇಲೆ ಇಂತಹ ಲೋಪಗಳನ್ನು ಮಾಡಬಾರದು. ಇವೊತ್ತು ರಾಷ್ಟ್ರೀಕರಣ ಮಾಡಿದ ಪುಸ್ತಕಗಳ ಬೆಲೆ ಬಹಳ ಜಾಸ್ತಿಯಾಗಿದೆ. ಕೆಲವು ಕಡೆಗಳಲ್ಲಿ ಅಚ್ಚು ಮಾಡಿರುವ ಪುಸ್ತಕಗಳನ್ನು ನೋಡಿದರೆ ಅದಕ್ಕೆ ಯಾರಿಗೂ ಬೇಡದ ಕಾಗದ ಉಪಯೋಗಿಸಿದ್ದಾರೆ. ಇಂತಹ ಪುಸ್ತಕಗಳಿಗೆ ಒಂದೂವರೆ ಹಾಗೂ ಎರಡು ರೂಪಾಯಿಗಳ ಬೆಲೆ ಎಂದು ಇಡುವುದು ಸರಿಯಲ್ಲ ಎಂದು ಈ ಸಂದರ್ಭದಲ್ಲಿ ಹೇಳಲು ಅಪೇಕ್ಷೆ ಮಾಡುತ್ತೇನೆ.

ಇದೇ ಸಂದರ್ಭದಲ್ಲಿ ಉಪಾಧ್ಯಾಯರ ವಿಚಾರವನ್ನು ಸ್ವಲ್ಪ ಇಲ್ಲಿ ಹೇಳಬೇಕಾಗಿದೆ. ಇಂದು ರಾಜ್ಯದಲ್ಲಿರುವ ಮಕ್ಕಳ ಶಿಲ್ಪಿಗಳು ಎಂದು ಉಪಾಧ್ಯಾಯರನ್ನು ಕರೆಯಬೇಕು. ಒಳ್ಳೆಯ ವಿದ್ಯಾಭ್ಯಾಸ ಕೊಟ್ಟು ಮಕ್ಕಳನ್ನು ತಯಾರು ಮಾಡುವವರು ಉಪಾಧ್ಯಾಯರು. ಇಂತಹ ಮಹಾನುಭಾವರು ಉಪಾಧ್ಯಾಯರು ಎನ್ನುವುದನ್ನು ಯಾರೂ ಮರೆಯಬಾರದು. ಎಳೆಯ ಮಕ್ಕಳನ್ನು ಒಳ್ಳೆಯ ವ್ಯಕ್ತಿಗಳನ್ನಾಗಿ ಮಾಡುವ ಹೊಣೆ ಉಪಾಧ್ಯಾಯರದಾಗಿರುತ್ತದೆ. ಇದಕ್ಕೆ ಸರ್ ಎಂ. ವಿಶ್ವೇಶ್ವರಯ್ಯನವರ ಕಾಲದಲ್ಲಿ ನಡೆದ ಒಂದು ಸಂಗತಿ ನೆನಪಿಗೆ ಬರುತ್ತದೆ. ಶ್ರೀಮಾನ್ ವಿಶ್ವೇಶ್ವರಯ್ಯನವರು ಹಿಂದೆ ಇಲ್ಲಿ ದಿವಾನರಾಗಿದ್ದಾಗ ಒಂದು ದಿನ ಬೆಳಗಿನ ವೇಳೆ ಕುದುರೆಯ ಮೇಲೆ ಸಂಚಾರ ಹೋಗಿ ಬರುತ್ತಿದ್ದಾಗ ದಾರಿಯಲ್ಲಿ ಎಷ್ಟೋ ಜನರು ಇವರಿಗೆ ನಮಸ್ಕಾರ ಮಾಡಿ ಹೋಗುತ್ತಿದ್ದರು. ಹೀಗೆ ಬರುವಾಗ ದಾರಿಯಲ್ಲಿ ಒಬ್ಬರು ಉಪಾಧ್ಯಾಯರು ಬರುತ್ತಿರುವುದನ್ನು ನೋಡಿದರು. ಅವರನ್ನು ನೋಡಿದ ಕೂಡಲೇ ಶ್ರೀಮಾನ್ ವಿಶ್ವೇಶ್ವರಯ್ಯನವರು ಕುದುರೆಯಿಂದ ಕೆಳಕ್ಕೆ ಇಳಿದು ಆ ಉಪಾಧ್ಯಾಯರನ್ನು ಕಂಡು ನಮಸ್ಕಾರಮಾಡಿ ತಮ್ಮ ವಂದನೆಗಳನ್ನು ಸಲ್ಲಿಸಿದರು. ಇದರಿಂದ ಉಪಾಧ್ಯಾಯರಿಗೆ ಎಷ್ಟು ವಿಧೇಯರಾಗಿದ್ದರು ಎನ್ನುವುದು ನಮಗೆ ಗೊತ್ತಾಗುತ್ತದೆ. ಆ ಉಪಾಧ್ಯಾಯರೇ ತಾವು ಈ ದೇಶದ ದಿವಾನರು ಹೀಗೆ ಮಾಡ

(ಶ್ರೀ ಬಿ. ಎಂ. ಇದಿನಬ್ಬ)

ಬಹುದೇ ಎಂದು ಕೇಳಿದುದಕ್ಕೆ ಉತ್ತರವಾಗಿ ಅವರು ತಾವೇ ಹಿಂದೆ ನನಗೆ ವಿದ್ಯಾ ದಾನ ಮಾಡಿದಂತಹ ಮಹಾನುಭಾವರು ಮತ್ತು ನನ್ನನ್ನು ಇಂತಹ ಗುರುತರವಾದ ಸ್ಥಾನಕ್ಕೆ ತರಲು ತಾವೇ ಕಾರಣರು ಅಲ್ಲದೆ ಗುರುಗಳಾದವರು ಎಲ್ಲರಿಗಿಂತಲೂ ಶ್ರೇಷ್ಠರಾದ ವ್ಯಕ್ತಿಗಳು ಎಂದು ಅವರಿಗೆ ವಂದನೆಗಳನ್ನು ಸಲ್ಲಿಸಬೇಕು ಎಂದು ಹಿಂದೆ ಸರ್ ಎಂ. ವಿಶ್ವೇಶ್ವರಯ್ಯನಂತಹವರೇ ಮಾಡಿದ್ದಾರೆ. ಆದುದರಿಂದ ನಾನು ಹೇಳುತ್ತಿರುವುದು ಉಪಾಧ್ಯಾಯರ ಸ್ಥಾನ ಮಾನಗಳು ಎಷ್ಟು ದೊಡ್ಡದು ಎನ್ನುವುದನ್ನು ನಾವು ಇದರಿಂದ ಅಳತೆ ಮಾಡಬಹುದು. ಉಪಾಧ್ಯಾಯರಿಗೆ ಸಂಬಳವನ್ನು ಹೆಚ್ಚಾಗಿ ಕೊಡದೇ ಇರಬಹುದು. ಆದರೂ ಮುಂದಿನ ವಿದ್ಯಾರ್ಥಿಗಳನ್ನು ತಯಾರು ಮಾಡತಕ್ಕವರು ಇಂದಿನ ಉಪಾಧ್ಯಾಯರು ಎನ್ನುವ ಧ್ಯೇಯವನ್ನು ಅವರು ಮುಂದಿಟ್ಟುಕೊಂಡು ದೇಶದಲ್ಲಿರುವ ಎಲ್ಲ ವಿದ್ಯಾರ್ಥಿ ವಿದ್ಯಾರ್ಥಿನಿಯರನ್ನು ನಿಷ್ಕಳಂಕವಾಗಿ ತಯಾರು ಮಾಡುವ ಜವಾಬುದಾರಿ ಅವರ ಮೇಲಿದೆ. ಇವರ ಜವಾಬುದಾರಿ ಬಹಳ ದೊಡ್ಡದು. ಇಂದು ನಮ್ಮ ರಾಜ್ಯದಲ್ಲಿ ಉಪಾಧ್ಯಾಯರು ತಲಬು ಕಡಿಮೆ ಇದ್ದರೂ ಸರಕಾರ ಇವರಿಗೆ ಬೇಕಾದಷ್ಟು ಸವಲತ್ತುಗಳನ್ನು ಕೊಡಬೇಕೆಂದಿದ್ದಾರೆ. ಆದರೆ ಈಚೆಗೆ ಉಪಾಧ್ಯಾಯರಲ್ಲಿ ಶ್ರೀಮಾನ್ ರುದ್ರಪ್ಪನವರು ಹೇಳಿದಂತೆ ಒಂದು ರೀತಿಯಾದ ಜಾತೀಯತೆಯ ವಾದ ಅಲ್ಲಲ್ಲಿ ಎದ್ದು ಕಾಣುತ್ತಿರುವುದು ನಮ್ಮ ಗಮನಕ್ಕೆ ಬರುತ್ತಿದೆ. ವಿದ್ಯಾ ಕ್ಷೇತ್ರದಲ್ಲಿ ಯಾವ ವಿಧವಾದ ರಾಜಕೀಯಗಳಿಗೂ ಅವಕಾಶವಿರಬಾರದು ಇಷ್ಟು ಮಾತ್ರವಲ್ಲ ಉಪಾಧ್ಯಾಯರ ಬಗ್ಗೆ ಕೆಲವು ಕಡೆಗಳಲ್ಲಿ ದೂರುಗಳು ಬರುತ್ತಿವೆ. ಇದು ಸರಿಯಲ್ಲ ಎಂದು ಮಾನ್ಯ ಮಂತ್ರಿಗಳು ಇಲ್ಲಿ ಖಂಡ ತುಂಡವಾಗಿ ಹೇಳುತ್ತಿರುವುದನ್ನು ಕೇಳುತ್ತಿದ್ದೇವೆ. ಜಾತ್ಯಾತೀತವಾದ ರಾಷ್ಟ್ರದಲ್ಲಿ ಇಂದು ಪುನಃ ಜಾತೀಯ ವಾದವನ್ನು ತರಬೇಕು ಎನ್ನುವ ಮಾನೋಭಾವನೆ ಶಾಲೆಗಳಲ್ಲಿರುವ ಮಕ್ಕಳ ಮೇಲೆ ಬರಬಾರದು ಮತ್ತು ಮಕ್ಕಳಿಗೆ ಇದರ ಬಗ್ಗೆ ಹೇಳಲೂಬಾರದು. ಶಾಲೆಗೆ ಬರುವ ಮಕ್ಕಳು ಬಹಳ ಚಿಕ್ಕ ವಯಸ್ಸಿನವರು ಎಂದರೆ 5-10 ವರ್ಷಗಳವರೆಗೆ ಇರುತ್ತವೆ. ಹಿಂದಿನ ಕಾಲದ ಚರಿತ್ರೆಗಳನ್ನು ನಾವು ಓದಿ ನೋಡಿದರೆ ಜಾತ್ಯಾತೀತವಾದ ಮನೋಭಾವನೆ ಹೇಗಿತ್ತು ಎನ್ನುವುದು ಗೊತ್ತಾಗುತ್ತದೆ. ಅದೇರೀತಿ ಇಂದು ಶಾಲೆಗಳಲ್ಲಿರುವ ಮಕ್ಕಳಿಗೆ ಜಾತ್ಯತೀತವಾದ ಮನೋಭಾವನೆಯಿಂದ ಶಿಕ್ಷಣವನ್ನು ಕೊಡುವುದು ಅಗತ್ಯ. ಸಣ್ಣ ವಯಸ್ಸಿನಲ್ಲಿ ಮಕ್ಕಳಿಗೆ ಉಪಾಧ್ಯಾಯರು ಕಲಿಸಿಕೊಡುವಾಗ ಅದು ಚೆನ್ನಾಗಿ ಅವರಿಗೆ ಮನದಟ್ಟಾಗುತ್ತದೆ. ಮಕ್ಕಳ ಮನಸ್ಸು ಬಹಳ ಕೋಮಲವಾದ ಮನಸ್ಸು. ಹಸೀ ಗೋಡೆಗೆ ಕಲ್ಲು ಹೊಡೆದರೆ ಅದು ಚೆನ್ನಾಗಿ ಅಂಟಿಕೊಳ್ಳುತ್ತದೆ. ಆದರೆ ಅದೇ ಒಣಗಿದ ಗೋಡೆಗೆ ಕಲ್ಲು ಹೊಡೆದರೆ ಅದು ತಿರುಗಿ ಬಂದು ನಮ್ಮ ಮುಖಕ್ಕೆ ಹೊಡೆಯುತ್ತದೆ. ಸಣ್ಣ ಮಕ್ಕಳ ಮನಸ್ಸು ಬಹಳ ಕೋಮಲವಾದ ಮೃದುವಾದ ಮನಸ್ಸುಳ್ಳದ್ದು ಮತ್ತು ಮಕ್ಕಳ ಬುದ್ಧಿ ಕೂಡ ಚುರುಕಾಗಿರುತ್ತದೆ. ನಮ್ಮಲ್ಲಿ ಒಂದು ಗಾದೆ ಇದೆ, 'ಗಿಡವಾಗಿ ಬಗ್ಗದುದು ಮರವಾಗಿ ಬಗ್ಗೀತೇ' ಎನ್ನುವಂತೆ ಹಸೀ ಗೋಡೆಗೆ ಕಲ್ಲು ಹೊಡೆದರೆ ಅಂಟಿಕೊಳ್ಳುತ್ತೆ. ಅದರೆ ಅದೇ ಕಲ್ಲನ್ನು ಒಣ ಗೋಡೆಗೆ ಹೊಡದರೆ ಅದು ಪುನಃ ನಮಗೇ ತಿರುಗಿ ಬಂದು ಹೊಡೆಯುತ್ತದೆ. ಆದುದರಿಂದ ಉಪಾಧ್ಯಾಯರುಗಳು ಮಕ್ಕಳಿಗೆ ವಿದ್ಯಾಭ್ಯಾಸ ಕೊಡುವಾಗ ಒಂದು ರೀತಿಯ ನೈತಿಕ ಮಟ್ಟದಲ್ಲಿ ಕೊಡಬೇಕು, ದೇಶ ಪ್ರೇಮದಿಂದ ಕೊಡುವ ಶಿಕ್ಷಣ ಇರಬೇಕು. ನಮ್ಮ ಮಿತ್ರರು ಹೇಳಿದಹಾಗೆ ಶಿಕ್ಷಣವನ್ನು ಬೇಕಾದರೆ ಇಡೀ ರಾಜ್ಯಕ್ಕೆಲ್ಲಾ ಒಂದೇ ರೀತಿಯಾದ ಪದ್ಧತಿಯಿಂದ ತರುವುದು ಒಳ್ಳೆಯದು. ನಮ್ಮ ಭಾರತ ದೇಶದಲ್ಲಿರುವ ಸುಮಾರು 54 ಕೋಟಿ ಜನರು ಐಕಮತ್ಯದಿಂದ ಬಾಳಬೇಕಾದರೆ, ದೇಶದ ಒಗ್ಗಟ್ಟನ್ನು ಕಾಪಾಡಬೇಕಾದರೆ ಶಿಕ್ಷಣ ಮಟ್ಟದಲ್ಲಿ ಸೂಕ್ತವಾದ ಬದಲಾವಣೆಗಳನ್ನು ಮಾಡಲೇಬೇಕು. ಎಂದು ನಮ್ಮ ಮಾನ್ಯ ಶಿಕ್ಷಣ ಮಂತ್ರಿಗಳು ಹಾಗೂ ಉಪಮಂತ್ರಿಗಳು ಒಂದು ರೀತಿಯಾಗಿ ದಿಟ್ಟತನದಿಂದ ಹೇಳಿರುವುದು ನಮ್ಮ ರಾಜ್ಯಕ್ಕೆ ಅನುಕೂಲವಾಗಬಹುದು. ಇದು ಬಹಳ ಸಂತೋಷದ ವಿಚಾರ. ಆದರೆ ಇಂದು ದೇಶದಲ್ಲಿರುವ ಕೆಲವು ಶಾಲೆಗಳಲ್ಲಿ ಹಾಗೂ ಕಾಲೇಜುಗಳಲ್ಲಿ ಒಂದು ರೀತಿಯಾದ ಅಧಿಕಾರಷಾಹಿ ವರ್ತನೆ ಕಾಣಬರುತ್ತಿದೆ. ಅನೇಕ ಕಡೆಗಳಲ್ಲಿ ಪ್ರೊಫೆಸರುಗಳನ್ನೇ ಮುತ್ತಿಕೊಂಡು ಹುಡುಗರು ತಿರುಗಿ ಬಿದ್ದಿರುವ ವಿಚಾರಗಳನ್ನು ಪೇಪರುಗಳಲ್ಲಿ ನೋಡುತ್ತಿದ್ದೇವೆ. ಒಂದು ರೀತಿಯಾದ ಅಶಿಸ್ತನ್ನು ಬಹಳ ಮೇಧಾವಿಗಳಾದ ವಿದ್ಯಾರ್ಥಿಗಳಲ್ಲೇ ಕಾಣುತ್ತಿದ್ದೇವೆ. ಒಬ್ಬರ ಮೇಲೆ ಇನ್ನೊಬ್ಬರು ದೂಷಣೆ ಮಾಡುವುದು ಇವೆಲ್ಲ ಹೆಚ್ಚಾಗಿ ಬೆಳೆಯುತ್ತಿವೆ. ಇದಕ್ಕೆಲ್ಲಾ ಕಾರಣವೇನು ಎನ್ನುವುದನ್ನು ಯೋಚನೆ ಮಾಡಬೇಕು. ಇಂತಹ ಅಶಿಸ್ತನ್ನು ಮಾಡಲು ಇದರ ಹಿಂದೆ ಯಾರೋ ಇದ್ದಾರೆ ಎನ್ನುವ ಮನೋಭಾವನೆ ಕಾಣುತ್ತಿದೆ. ಇಲ್ಲದಿದ್ದರೆ ಇಷ್ಟೊಂದು ಉದ್ರೇಕವಾಗಿ ಇಂತಹ ಪರಮಾವಧಿಯನ್ನು ಮುಟ್ಟುತ್ತಿರಲಿಲ್ಲ. ಮಕ್ಕಳಿಗೆ ವಿದ್ಯಾಭ್ಯಾಸ ಕೊಡುವಾಗ

ಒಂದು ರೀತಿಯ ಪ್ರೇಮದಿಂದ ವಿಶ್ವಾಸದಿಂದ ಹೇಳಿಕೊಡಬೇಕು. ಇಂದಿನ ಮಕ್ಕಳೇ ಮುಂದಿನ ಪೀಳಿಗೆಯಲ್ಲಿ ರಾಜ್ಯವನ್ನು ಆಳುವವರು ಆಗುತ್ತಾರೆ. ಆದುದರಿಂದ ಇಂತಹ ಮಕ್ಕಳಿಗೆ ಒಳ್ಳೆಯ ಪಠ್ಯ ಪುಸ್ತಕಗಳನ್ನು ನೀತಿ ಬೋಧಕವಾಗಿರುವುದನ್ನು ಇಟ್ಟು ಶಿಕ್ಷಣ ಕೊಡುವುದು ಒಳ್ಳೆಯದು ಎಂದು ಈ ಸಂದರ್ಭದಲ್ಲಿ ಹೇಳಲು ಅಪೇಕ್ಷೆ ಮಾಡುತ್ತೇನೆ.

ಇನ್ನು ನಮ್ಮ ರಾಜ್ಯದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಎನ್ನುವ ಒಂದು ಸಂಸ್ಥೆ ಇದೆ. ಇದಕ್ಕೆ ಸರಕಾರದವರು ಸುಮಾರು 20-25 ಸಾವಿರದಷ್ಟು ದುಡ್ಡನ್ನೂ ಕೊಡುತ್ತಿದ್ದಾರೆ. ಇವರೇನು ಮಾಡುತ್ತಿದ್ದಾರೆ ಎನ್ನುವುದು ಸರಿಯಾಗಿ ತಿಳಿಯುತ್ತಿಲ್ಲ. ಕನ್ನಡ ಸಾಹಿತ್ಯ ಪರಿಷತ್ತು ಕನ್ನಡ ರಾಜ್ಯದ ಜನರ ಆಗುಹೋಗುಗಳನ್ನು ತಿಳಿದುಕೊಂಡು ಕನ್ನಡಿಗರಿಗೆ ಅನುಕೂಲವಾಗುವಂತಹ ಕೆಲಸ ಕಾರ್ಯಗಳನ್ನು ಮಾಡಬೇಕು. ಕನ್ನಡದ ರಾಷ್ಟ್ರಕವಿ ಕುವೆಂಪುರವರಿಗೆ ಜ್ಞಾನ ಪೀಠ ಪ್ರಶಸ್ತಿ ಬಹುಮಾನ ಪಡೆದಿರುವಂತಹವರಿಗೆ ಇನ್ನೂ ಈ ಪರಿಷತ್ತಿನವರು ಕರೆದು ಏಕೆ ಸನ್ಮಾನ ಮಾಡಲಿಲ್ಲ? ಇದನ್ನು ಅವರು ಈ ವೇಳೆಗೆ ಮಾಡಬೇಕಾಗಿತ್ತು. ನಮ್ಮ ರಾಜ್ಯದ ಕವಿಗಳಾಗಿರುವ ಶ್ರೀಮಾನ್ ಬಸವರಾಜ ಕಟ್ಟೀಮನಿಯಂತಹವರಿಗೆ ಸೋವಿಯಟ್ ರಷ್ಯಾದಿಂದ ನೆಹರೂ ಪ್ರಶಸ್ತಿ ದೊರೆತಿದೆ. ಇಂತಹವರನ್ನು ಕನ್ನಡ ಸಾಹಿತ್ಯ ಪರಿಷತ್ತಿನವರು ಕರೆದು ಇನ್ನೂ ಸತ್ಕಾರ ಮಾಡಲಿಲ್ಲ. ಇಂತಹ ಉನ್ನತ ಬಹುಮಾನಗಳನ್ನು ಪಡೆದಂತಹ ಮಹಾನ್ ವ್ಯಕ್ತಿಗಳನು ಕರೆದು ಸತ್ಕಾರ ಮಾಡುವುದು ಅವರ ಕರ್ತವ್ಯ. ಇದನ್ನೇಕೆ ಅವರು ಮಾಡಲಿಲ್ಲ ಎನ್ನುವುದು ನಮಗೆ ತಿಳಿಯಲಿಲ್ಲ. ಸರಕಾರ ಕೂಡ ಸುಮಾರು 25 ಸಾವಿರ ರೂಪಾಯಿಗಳಷ್ಟು ಹಣವನ್ನು ಕೊಡುತ್ತಿರುವಾಗ ಇಲ್ಲಿ ಕೆಲಸಕಾರ್ಯಗಳು ಹೇಗೆ ನಡೆಯುತ್ತಿರುತ್ತವೆ ಎನ್ನುವುದನ್ನು ಪರಿಶೀಲನೆ ಮಾಡಿ ಇಲ್ಲಿ ನಮಗೆ ಒಂದು ಹೇಳಿಕೆ ಕೊಡಬೇಕೆಂದು ಕೇಳುತ್ತೇನೆ.

ಇನ್ನು ಸರಕಾರದವರೇ ಸಂಗೀತ ನಾಟಕ ಅಕ್ಯಾಡಮಿ ಮತ್ತು ಲಲಿತ ಕಲಾ ಅಕ್ಯಾಡಮಿ ಎಂದು ಎರಡು ಸಂಸ್ಥೆಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ಇವು ಕೂಡ ಒಳ್ಳೆಯ ಕೆಲಸಗಳನ್ನು ಮಾಡಿಕೊಂಡು ಬರುತ್ತಿರಬಹುದು. ಇಲ್ಲದಿದ್ದರೆ ನಮ್ಮ ಈಗಿನ ಮಂತ್ರಿಗಳಾದ ಶ್ರೀಮಾನ್ ಶಂಕರೆ ಗೌಡರು ಇವರಿಗೆ ಇನ್ನೂ ಹೆಚ್ಚು ಧನ ಸಹಾಯ ಮಾಡುತ್ತಿರಲಿಲ್ಲ. ನಮ್ಮ ಮಾನ್ಯ ಮಂತ್ರಿಗಳಿಗೂ ಕರೆಯಲ್ಲಿ ಅಭಿರುಚಿ ಹೆಚ್ಚಾಗಿರುವುದರಿಂದ ಅವರು ಹಿಂದೆ ಇಲ್ಲದ್ದ ಸಂಗೀತ ನಾಟಕ ಅಕ್ಯಾಡಮಿ ಹಾಗೂ ಲಲಿತ ಕಲಾ ಅಕ್ಯಾಡಮಿ ಇವುಗಳಿಗೆ ಸ್ವಲ್ಪ ಹಣವನ್ನು ಜಾಸ್ತಿ ಕೊಟ್ಟು ಇನ್ನೂ ಚೆನ್ನಾಗಿ ಕೆಲಸಗಳನ್ನು ಮಾಡಲು ಅವಕಾಶ ಕಲ್ಪಿಸಿಕೊಟ್ಟಿದ್ದಾರೆ. ಇದರಿಂದ ಕನ್ನಡ ನಾಡಿನಲ್ಲಿರುವ ಕಲಾವಿದರಿಗೆ ಅವರು ಸಂಭಾವನೆ ಕೊಡಬೇಕೆಂದು ಈಗೇನೋ ಕೆಲವರಿಗೆ ಬಹುಮಾನವಾಗಿ 600-700 ರೂಪಾಯಿಗಳನ್ನು ಕೊಡುತ್ತಿದ್ದಾರೆ ಮತ್ತು ಇದೇ ಮಕ್ಕಳ ಸಾಹಿತ್ಯ ಬರೆಯುವ ಲೇಖಕರಿಗೆ ಹಾಗೂ ಇನ್ನಿತರ ಬೇರೆ ಬೇರೆ ಉದ್ಯಮಗಳಲ್ಲಿದ್ದು ಬರೆಯುವಂತಹ ಕವಿಗಳಿಗೆ ಬಹುಮಾನ ಕೊಡುತ್ತಿಲ್ಲ. ಇಂತಹವರಿಗೂ ಕೊಡುವುದು ಉತ್ತಮ. ಈಗ ಇರುವ ಬಹುಮಾನವನ್ನು ಇನ್ನೂ ಜಾಸ್ತಿ ಮಾಡಬೇಕು. 800ರಿಂದ ಸಾವಿರ ರೂಪಾಯಿಗಳವರೆಗೆ ಕೊಡಬೇಕು ಮತ್ತು ಕೆಲವು ಕಡೆ ಕಲಾವಿದರ ಕುಟುಂಬಗಳಿಗೆ ನೆರವನ್ನು ಕೊಡಬೇಕೆಂದು ಮಾಡಿದ್ದಾರೆ. ಆದರೆ ಈಗ ಕೊಡುತ್ತಿರುವ ಮಾಸಾಶನ ಕಡಮೆ. ಇದನ್ನು ಇನ್ನೂ ಜಾಸ್ತಿ ಮಾಡಿ ಕೊಡಬೇಕು. ಇಂತಹ ಅಕ್ಯಾಡಮಿಗಳಿಂದ ಏನೇನು ಕೆಲಸಗಳನ್ನು ಮಾಡಬೇಕು ಎನ್ನುವುದರ ಒಂದು ಕಾರ್ಯಕ್ರಮವನ್ನು ಆರು ತಿಂಗಳಿಗೊಮ್ಮೆ ಹಾಕಿಕೊಂಡು ಅದರಂತೆ ಕೆಲಸ ಮಾಡಿದರೆ ನಮ್ಮ ವಿದ್ಯಾ ಇಲಾಖೆಗೆ ಬಹಳ ಸಹಾಯವಾಗುತ್ತದೆ.

ಇನ್ನೊಂದು ವಿಚಾರ ಇಲ್ಲಿ ಹೇಳಲು ಅಪೇಕ್ಷೆ ಮಾಡುತ್ತೇನೆ. ಇದು ಬಹಳ ಪ್ರಾಮುಖ್ಯವಾದುದು. ತಮಗೆಲ್ಲಾ ತಿಳಿದಿರುವಂತೆ ಹಿಂದೆ ಮಾನ್ಯ ಶ್ರೀ ಹನುಮಂತಯ್ಯನವರು ಅಧಿಕಾರದಲ್ಲಿದ್ದಾಗ ಸಾಹಿತ್ಯ ಹಾಗೂ ಸಂಸ್ಕೃತಿ ಪ್ರಚಾರ ಇಲಾಖೆಯ ಮೂಲಕ ಕುಮಾರ ವ್ಯಾಸ ಭಾರತ ಎಂಬ ಪುಸ್ತಕವನ್ನು ಅಗ್ಗದ ಬೆಲೆಯಲ್ಲಿ ಎಂದರೆ ಎರಡು ರೂಪಾಯಿ ಬೆಲೆ ಇಟ್ಟು ಎಲ್ಲರಿಗೂ ಸಿಗುವಂತೆ ಏರ್ಪಾಡು ಮಾಡಿದ್ದರು. ಅದೇ ರೀತಿ ಇಂದು ನಮ್ಮ ಸರಕಾರದವರು—ಮುದ್ದಣನ ಕವಿತೆಗಳು ಇವೆ—ಇವನ್ನು ಅಗ್ಗದ ಬೆಲೆಯಲ್ಲಿ ಸಿಗುವಂತೆ ಮಾಡಬೇಕು. ಹಾಗೇ ನಮ್ಮ ರಾಷ್ಟ್ರ ಕವಿಗಳಾದ ಶ್ರೀ ಕುವೆಂಪು ಬರೆದಿರುವ ರಾಮಾಯಣ ದರ್ಶನ ಎನ್ನುವುದು ಇಂದು ನಮ್ಮ ದೇಶದಲ್ಲಿ ಒಂದು ಮೇರು ಕೃತಿ ಎಂದು ಹೇಳುತ್ತಾರೆ. ಇಂತಹ ಪುಸ್ತಕವನ್ನು 25-30 ರೂಪಾಯಿ ಬೆಲೆ ಕೊಟ್ಟು ಎಲ್ಲರೂ ತೆಗೆದುಕೊಳ್ಳಲು ಆಗುವುದಿಲ್ಲ. ಇದನ್ನು ಅಗ್ಗದ ಬೆಲೆಯಲ್ಲಿ ಸಿಗುವ ಹಾಗೆ, ಎಲ್ಲ ಕನ್ನಡಿಗರಿಗೂ ಓದಲು ಅವಕಾಶ ಮಾಡಿಕೊಡಬೇಕು. ನಾನಾಗಲೇ ಹೇಳಿದಂತೆ ಸರಕಾರದವರು ಮುದ್ದಣನ ಗ್ರಂಥಗಳು ಹಾಗೂ ಕುವೆಂಪು ರವರ ರಾಮಾಯಣ ದರ್ಶನದಂತಹ ಕೃತಿಯನ್ನು ಅಚ್ಚು ಮಾಡಿಸಿ ಅವು ಸುಲಭ ದರದಲ್ಲಿ ಎಲ್ಲ ಕನ್ನಡಿಗರಿಗೂ ಸಿಗುವ ವ್ಯವಸ್ಥೆ ಮಾಡಬೇಕೆಂದು ಸರಕಾರದಲ್ಲಿ ವಿನಯದಿಂದ ಪ್ರಾರ್ಥನೆ ಮಾಡಿಕೊಳುತ್ತೇನೆ.

(ಶ್ರೀ ಬಿ. ಎಂ. ಇದಿನಬ್ಬ)

ಇನ್ನು ಕನ್ನಡ ಮಾಧ್ಯಮದ ಬಗ್ಗೆ ಸ್ವಲ್ಪ ಹೇಳಬೇಕಾಗಿದೆ. ಭಾಷಾವಾರು ಪ್ರಾಂತಗಳು ಎಂದು ಮಾಡಿದುದರಿಂದ ಕನ್ನಡ ರಾಜ್ಯವಾಯಿತು. ಕನ್ನಡ ಮಾಧ್ಯಮವಾಗದೇ ಹೋದರೆ ಭಾಷಾವಾರು ರಾಜ್ಯ ಮಾಡಿದುದಕ್ಕೆ ಬೆಲೆ ಬರುವುದಿಲ್ಲ. ಯಾವ ರಾಜ್ಯದಲ್ಲಿ ಜನರು ಆಡುವ ಭಾಷೆ ಕನ್ನಡ ಎಂದು ಆಗಿದೆಯೋ ಅಲ್ಲಿ ಎಲ್ಲ ಆಡಳಿತ ವ್ಯವಹಾರಗಳನ್ನು ಕನ್ನಡದಲ್ಲೇ ಮಾಡಬೇಕು ಹಾಗೆ ಮಾಡಿದರೆ ಕನ್ನಡ ರಾಜ್ಯ ಆದುದಕ್ಕೂ ಸಾರ್ಥಕವಾಗುತ್ತದೆ. ಇದೇ ದೃಷ್ಟಿಯಿಂದ ಇಂದು ಕನ್ನಡ ರಾಜ್ಯವಾಯಿತು. ಸುಮಾರು ಎರಡೂವರೆ ಕೋಟಿ ಕನ್ನಡಿಗರ ಕನಸು ನನಸಾಯಿತು. ಕನ್ನಡ ಮಾಧ್ಯಮ ಕೇವಲ ಮಾತಿನಲ್ಲಿ ಆಗಿದೆಯೇ ಹೊರತು ಇನ್ನೂ ಕೃತಿಗೆ ಇಳಿಯಲಿಲ್ಲ. ಆದರೆ ಕೇರಳದಲ್ಲಿ ನಾವು ನೋಡಿದರೆ ಯಾವ ವಿದ್ಯಾರ್ಥಿಯೇ ಆಗಲಿ ಬಿ.ಎ. ವರೆಗೆ ಓದಿರಲಿ ಅವರು ಒಂದು ದಿನ ಕೂಡ ಅಲ್ಲಿ ಬರುವ ಮಲೆಯಾಳದ ಪತ್ರಿಕೆಯನ್ನು ಓದದೇ ಇರುವುದಿಲ್ಲ ಮತ್ತು ಬೇರೆ ಭಾಷೆಯಲ್ಲಿ ಮಾತಾಡುವುದಿಲ್ಲ. ಕೇರಳದ ಅಸೆಂಬ್ಲಿಯಲ್ಲಿರುವ 144 ಸದಸ್ಯರಲ್ಲಿ ಶ್ರೀ ಮಹಾಬಲ ಭಂಡಾರಿ ಮತ್ತು ಶ್ರೀ ಕುಂಜಿಕುಳ್ಳಾಯಿ, ಇವರಿಬ್ಬರನ್ನು ಬಿಟ್ಟರೆ ಉಳಿದವರೆಲ್ಲರೂ ಮಲೆಯಾಳದಲ್ಲಿ ಭಾಷಣ ಮಾಡುತ್ತಾರೆ. ಆಂಧ್ರ, ಮಹಾರಾಷ್ಟ್ರ, ಗುಜರಾತ್, ಇಲ್ಲಿ ಕೂಡ ಆಯಾ ಪ್ರದೇಶ ಭಾಷೆಯಲ್ಲಿಯೇ ಕಾರ್ಯಕಲಾಪಗಳು ನಡೆಯುತ್ತವೆ ಎಂದು ಕೇಳಿದ್ದೇನೆ. ತಮಿಳು ನಾಡಿನಲ್ಲಿಯೂ ಅದೇ ರೀತಿಯಾಗಿ ತಮಿಳಿನಲ್ಲಿ ನಡೆಯುತ್ತದೆ. ಕನ್ನಡ ನಾಡಿನಲ್ಲಿ ಇನ್ನೂ ಸ್ವಲ್ಪ ಸ್ವಲ್ಪವಾಗಿ ಬರುತ್ತಿದೆ. ವಿದ್ಯಾ ಮಂತ್ರಿಗಳಾದ ಶಂಕರಗೌಡರು ಇಡೀ ಹಿಂದೂಸ್ಥಾನದಲ್ಲಿ ಮೈಸೂರು ರಾಜ್ಯದಷ್ಟು ವಿಶಾಲ ಭಾವನೆಯಿಂದ ನೋಡಿರತಕ್ಕ ಸಂಸ್ಥಾನವಿಲ್ಲ ಎಂದು ಹೇಳಿದರು. ಅದು ಸತ್ಯವಾದುದು. ನಮ್ಮ ಸೌಜನ್ಯ, ಔದಾರ್ಯ, ಹೆಚ್ಚಿನ ಮಟ್ಟಕ್ಕೆ ಏರಿದೆ. ಕನ್ನಡ ಮಾಧ್ಯಮ ಆದಷ್ಟು ಬೇಗ ಇಡೀ ರಾಜ್ಯದಲ್ಲಿ ಬರುವ ಹಾಗೆ ಆಗಬೇಕು, ಕನ್ನಡ ಆಡಳಿತ ಭಾಷೆ ಆಗುವ ಹಾಗೆ ಕ್ರಮ ತೆಗೆದುಕೊಳ್ಳಬೇಕು. ಕನ್ನಡ ಆಡಳಿತ ಭಾಷೆಯಾಗಬೇಕು ಎಂದು ಭಾಷಾವಾರುರಾಜ್ಯವಾದದ್ದು ; ಆ ಅಭಿಪ್ರಾಯದಲ್ಲಿ ಭಾಷಾವಾರು ರಾಜ್ಯವಾದದ್ದು. ತಾಲ್ಲೂಕು ಮಟ್ಟದಲ್ಲಿ ಕನ್ನಡವನ್ನು ಆಡಳಿತ ಭಾಷೆಯಾಗಿ ಮಾಡಿದ್ದಾರೆ ಅದು ಸಾಲದು. ಎಲ್ಲ ಮಟ್ಟಗಳಲ್ಲಿಯೂ, ರಾಜ್ಯಮಟ್ಟದಲ್ಲಿ ಕೂಡ ಕನ್ನಡ ಆಡಳಿತ ಭಾಷೆಯಾಗಬೇಕು. ಮಾನ್ಯ ಶಂಕರ ಗೌಡರೂ, ಮಾನ್ಯ ಸೋಗಿ ಅವರೂ ಅವರ ಭಾಷಣದಲ್ಲಿ ಹೇಳಿದ್ದಾರೆ. ಅವರಿಗೆ ಬಹಳ ಹುಮ್ಮಸ್ಸು ಇದೆ ಕನ್ನಡ ಮಾಧ್ಯಮವಾಗಿ ಎಲ್ಲ ಹಂತಗಳಲ್ಲಿಯೂ ಬಂದು ಅದರ ಪ್ರತಿಫಲ ನಮ್ಮ ಜನತೆಗೆ ಸಿಗಲಿ, ಅದನ್ನು ಕಾರ್ಯರೂಪಕ್ಕೆ ಆದಷ್ಟು ಶೀಘ್ರದಲ್ಲಿ ತರಲಿ ಎಂದು ನಮ್ರಪೂರ್ವಕವಾಗಿ ಹೇಳುವುದಕ್ಕೆ ಅಪೇಕ್ಷೆ ಪಡುತ್ತೇನೆ.

5-30 P.M.

ಕರ್ಣಾಟಕದಲ್ಲಿ ಸರ್ವಜ್ಞ ಕವಿ ಒಂದು ಮಾತು ಹೇಳಿದ್ದಾನೆ. ಉಣ್ಣಿ ಕೆಚ್ಚಲಿನಲ್ಲಿಯೇ ಇರುತ್ತದೆ. ನೊರೆ ಹಾಲು ಸಿಕ್ಕತಕ್ಕ ಕೆಚ್ಚಲಿನಲ್ಲಿ ಅದು ಇದ್ದರೂ ಕೂಡ ಅದಕ್ಕೆ ಮಾತ್ರ ನೊರೆ ಹಾಲು ಸಿಕ್ಕುವುದಿಲ್ಲ ಎಂದು ಹೇಳಿದ್ದಾನೆ. ಕನ್ನಡ ಜನ ಆ ರೀತಿ ಉಣ್ಣಿಗಳಂತೆ ಆಗಬಾರದು ಎಂದು ಹೇಳುವುದಕ್ಕೆ ಅಪೇಕ್ಷೆ ಪಡುತ್ತೇನೆ.

ಒಂಬತ್ತನೇ ಕ್ಲಾಸಿಗೆ ಮಾಡಿರತಕ್ಕ ಪಠ್ಯಪುಸ್ತಕಗಳನ್ನು ಯಾರು ಬರೆದರು, ಯಾರು ಸ್ಕ್ರೂಟಿನಿ ಮಾಡಿದರು ಎನ್ನುವುದನ್ನು ಆಲೋಚನೆ ಮಾಡಬೇಕಾಗಿದೆ. ಕೆಲವು ಪುಸ್ತಕಗಳು ಅಷ್ಟು ಚೆನ್ನಾಗಿಲ್ಲ. ಪಠ್ಯ ಪುಸ್ತಕ ಸಮಿತಿಯನ್ನು ಮಾಡುವಾಗ ಅಥವಾ ಇನ್ನೂ ಇತರ ಸಮಿತಿಗಳನ್ನು ಮಾಡುವಾಗ ಒಳ್ಳೆಯ, ತಿಳಿದಿರತಕ್ಕ, ಮೇಧಾವಿಗಳಾಗಿರತಕ್ಕ, ವಿಶಾಲ ಭಾವನೆ ಇರತಕ್ಕ, ಒಳ್ಳೆಯ ವಿಚಾರಗಳನ್ನು ತಿಳಿದಿರತಕ್ಕ, ಜನರಿಂದ ಕೂಡಿರತಕ್ಕ ಸಮಿತಿಗಳನ್ನು ರಚಿಸಬೇಕು.

ಗ್ರಾಮಗಳಲ್ಲಿ ಶಾಲಾ ಕಟ್ಟಡಗಳ ವಿಚಾರದಲ್ಲಿ ಹೇಳುವುದಾದರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವರ್ಷಕ್ಕೆ 150 ಇಂಚು ಮಳೆ ಬೀಳುತ್ತದೆ. ಅಲ್ಲಿ ಒಳ್ಳೆಯ ಕಟ್ಟಡಗಳು ಬೇಕು. ಅಲ್ಲಿ ಕಟ್ಟಡಗಳನ್ನು ಕಟ್ಟಬೇಕಾದರೆ ಹೆಚ್ಚು ಹಣ ಮಂಜೂರು ಮಾಡಬೇಕು ನಾಲ್ಕೈದು ತಿಂಗಳು ಎಡೆಬಿಡದೆ ಧಾರಾಕಾರವಾಗಿ ಮಳೆ ಬರುವುದರಿಂದ, ತೂಫಾನ್ ಬರುವುದರಿಂದ ಅಲ್ಲಿ ಯೋಗ್ಯವಾದ ಕಟ್ಟಡಗಳನ್ನು ಕಟ್ಟಿಸಲು ಹೆಚ್ಚಿನ ಹಣ ಮಂಜೂರು ಮಾಡಬೇಕು ಎಂದು ಹೇಳುತ್ತೇನೆ.

ಕನ್ನಡ ನಾಡಿನಲ್ಲಿ ಕನ್ನಡ ಭಾಷೆ ಶಿಕ್ಷಣ ಮಾಧ್ಯಮವಾಗಬೇಕು, ಕನ್ನಡ ಆಡಳಿತ ಭಾಷೆಯಾಗಬೇಕು. ಒಳ್ಳೊಳ್ಳೆಯ ಪಠ್ಯ ಪುಸ್ತಕಗಳು ಬರಬೇಕು, ಅದರಿಂದ ಮುಂದಿನ ಪೀಳಿಗೆ ಬಹಳವಾಗಿ

ಬೆಳೆದಂತಾಗುತ್ತದೆ ಎಂದು ಹೇಳಿ ಈ ಬೇಡಿಕೆಗಳನ್ನು ಸ್ವಾಗತಿಸಿ ನನ್ನ ಭಾಷಣವನ್ನು ಮುಗಿಸು ತ್ತೇನೆ.

† ಶ್ರೀ ಬಿ. ಪರಮೇಶ್ವರಪ್ಪ (ಹೊಳಲ್ಕೆರೆ).—ಸನ್ಮಾನ್ಯ ಅಧ್ಯಕ್ಷರೇ, ಇಂದು ವಿದ್ಯಾ ಇಲಾಖೆಯ ಹಣಕಾಸಿನ ಬೇಡಿಕೆಯನ್ನು ಇಟ್ಟಿರತಕ್ಕ ವಿಚಾರದಲ್ಲಿ ವಿರೋಧ ಮಾಡುತ್ತ ಅನೇಕ ವಿಚಾರಗಳನ್ನು ನಾನು ಹೇಳಬೇಕಾಗಿದೆ. ಇಂದಿನ ದಿವಸ, ಸ್ವಾತಂತ್ರ್ಯ ಬರುವುದಕ್ಕೆ ಮುಂಚೆ ನಮ್ಮ ಹಳ್ಳಿಗಾಡಿನ ಜನತೆಗೆ ಅಭಯವನ್ನು ಕೊಟ್ಟಂತಹ ಕಾಂಗ್ರೆಸ್ಸಿನವರು ಆಡಳಿತ ನಡೆಸತಕ್ಕ ಕಾಲದಲ್ಲಿ ಪ್ರತಿಯೊಂದು ಊರಿಗೂ ಕೂಡ ಒಂದು ಪ್ರಾಥಮಿಕ ವಿದ್ಯಾಭ್ಯಾಸದ ಶಾಲೆಯನ್ನು ಮತ್ತು ಕುಡಿಯುವ ನೀರಿನ ಬಾವಿಯನ್ನು ಮತ್ತು ಒಂದು ರಸ್ತೆಯನ್ನು ಪ್ರಥಮತಃ ಮಾಡಿಕೊಡುತ್ತೇವೆ ಎಂದು ಹೇಳಿ ಇಂದು ಇವರು ಆಡಳಿತ ತಾವೇ ಸ್ವತಃ ವಹಿಸಿಕೊಂಡು 20 ವರ್ಷ ರಾಜ್ಯಭಾರ ಮಾಡಿದರೂ ಕೂಡ ಹಳ್ಳಿಗಾಡಿನ ಜನತೆಗೆ ಎಷ್ಟರಮಟ್ಟಿಗೆ ಪ್ರಾಥಮಿಕ ವಿದ್ಯಾಭ್ಯಾಸ, ಮಾಧ್ಯಮಿಕ ವಿದ್ಯಾಭ್ಯಾಸ ಮತ್ತು ಪ್ರೌಢ ವಿದ್ಯಾಭ್ಯಾಸವನ್ನು ಕೊಡುವ ವಿಚಾರದಲ್ಲಿ ವಿಫಲರಾಗಿದ್ದಾರೆ ಎನ್ನುವ ವಿಚಾರವನ್ನು ಒಂದೆರಡು ಮಾತುಗಳ ಮೂಲಕ ನಾನು ಹೇಳಬೇಕಾಗಿದೆ.

ಪ್ರಾಥಮಿಕ ಶಾಲಾ ಕಟ್ಟಡಗಳು ಇಲ್ಲದೆ ಇರುವ ಅನೇಕ ಗ್ರಾಮಗಳಿರುತ್ತವೆ. ಅಂಥ ಕಡೆಗಳಲ್ಲಿ ಸ್ವತಃ ಹಳ್ಳಿಗಾಡಿನ ಜನತೆ ಈ ಶಾಲೆಗಳನ್ನು ಕಟ್ಟಿಕೊಳ್ಳಬೇಕು, ಅವರ ಸ್ವಂತ ಹಣದಿಂದ ಕಟ್ಟಿ ಕೊಳ್ಳಬೇಕು. ಸರ್ಕಾರ ಅದಕ್ಕೆ ಹಣ ಕೊಡಲು ಪರಿಪೂರ್ಣವಾಗಿ ಸಾಧ್ಯವಿಲ್ಲ ಎನ್ನುವ ಮಾತನ್ನು ಹೇಳುತ್ತಿದ್ದಾರೆ. ಇನ್ನೊಂದು ಕಡೆ ನಮ್ಮ ದೇಶ ಹಳ್ಳಿಗಾಡಿನಿಂದ ತುಂಬಿದ ದೇಶ, ಹಳ್ಳಿಯ ರೈತ ಬಾಂಧವರು ನಮ್ಮ ದೇಶದ ಬೆನ್ನೆಲುಬು, ಅವರಿಗೆ ಸರ್ವ ವಿಚಾರದಲ್ಲಿಯೂ ಸರ್ವ ಸೌಲಭ್ಯ ವನ್ನು ಒದಗಿಸಿಕೊಡುತ್ತಿದ್ದೇವೆಂದು ಹೇಳುತ್ತಾರೆ. ಈವೊತ್ತು ಪ್ರಾಥಮಿಕ ಶಾಲಾ ಕಟ್ಟಡಗಳಿಗೆ ಹಣವನ್ನು ಒದಗಿಸದೆ ಇರುವ ಈ ಸರ್ಕಾರ ಇನ್ನು ಯಾವ ರೂಪದಿಂದ ಹಳ್ಳಿಗಾಡಿನ ಜನತೆಗೆ ಅನುಕೂಲವನ್ನು ಒದಗಿಸುವುದಕ್ಕೆ ಸಾಧ್ಯ ಎನ್ನುವುದು ಮೊದಲನೆಯ ಮಾತು. ಇವರು ಮಾಡತಕ್ಕ ತಾರತಮ್ಯ ಯಾವರೀತಿಯಿಂದ ಇದೆ ಎಂದರೆ ಹಳ್ಳಿಗಾಡಿನ ಜನತೆಗೆ ಶಾಲೆಗಳನ್ನು ಕಟ್ಟಿಕೊಡುವ ವಿಚಾರದಲ್ಲಿ ಕಂಟ್ರಿಬ್ಯೂಷನ್ ಕೊಡಬೇಕು ಎಂದು ನಿರ್ಬಂಧಗಳನ್ನು ಹಾಕುತ್ತಿರುವಾಗ ಪಟ್ಟಣ ಗಳಲ್ಲಿ ಸಿರಿಸುಖವನ್ನು ಅನುಭವಿಸಿ, ಹಳ್ಳಿಗಾಡಿನ ಸುಖವನ್ನು ತೊರೆದು ಪಟ್ಟಣಗಳಲ್ಲಿ ಬಂದು ನೆರೆಸಿರುವ ಸಿರಿವಂತರು, ಕೈಗಾರಿಕೋದ್ಯಮಿಗಳು, ಅಧಿಕಾರಿಗಳು ಎಲ್ಲರೂ ಬಂದು ವಾಸ ಮಾಡತಕ್ಕ ಪಟ್ಟಣಗಳಲ್ಲಿ ಅಂಥ ಶಾಲೆಗಳನ್ನು ಕಟ್ಟತಕ್ಕ ಸಂದರ್ಭದಲ್ಲಿ ಏಕೆ ಕಾಂಟ್ರಿಬೂಷನ್ ಕೊಡಬೇಕು ಎನ್ನುವ ನಿಬಂಧನೆಯನ್ನು ಹಾಕಿಲ್ಲ ? ಇಂಥ ತಾರತಮ್ಯ ಏಕೆ ಎಂದು ನನ್ನ ಪ್ರಶ್ನೆ.

ಪ್ರೌಢ ವಿದ್ಯಾಭ್ಯಾಸ ಪ್ರತಿಯೊಬ್ಬ ಪ್ರಜೆಗೂ ಕೂಡ ಸಿಕ್ಕಬೇಕು, ಪ್ರತಿಯೊಬ್ಬ ಭಾರತದ ಪ್ರಜೆಯೂ ವಿದ್ಯಾವಂತನಾಗಬೇಕು ಎನ್ನುವ ಕಾಲದಲ್ಲಿ ವಿದ್ಯಾ ಇಲಾಖೆಯ ಸಚಿವರಾದ ಶ್ರೀಮಾನ್ ಶಂಕರ ಗೌಡರು ಒಂದು ಅಭಿಪ್ರಾಯಕ್ಕೆ ಬಂದಿದ್ದಾರೆ, ಪ್ರೌಢ ವಿದ್ಯಾಭ್ಯಾಸ ಹಳ್ಳಿಗಾಡಿನಲ್ಲಿ ಎಲ್ಲರಿಗೂ ದೊರೆಯಬೇಕು, ಆ ಶಾಲೆಗಳನ್ನು ಪ್ರತಿಯೊಂದು ಊರಿನಲ್ಲಿಯೂ ತೆರೆಯಬೇಕು ಎನ್ನುವ ಬೇಡಿಕೆ ಇರುವಾಗ ಅವರು ಪ್ರಥಮತಃ ಹೈಸ್ಕೂಲುಗಳನ್ನು ಪ್ರಾರಂಭ ಮಾಡಿದರೆ ಐದು ವರ್ಷಗಳವರೆಗೆ ಗ್ರಾಂಟ್ ಕೊಡುವುದಿಲ್ಲ ಎನ್ನುವ ಒಂದು ಆರ್ಡರ್ ಮಾಡಿದ್ದಾರೆ. ಹೊಸದಾಗಿ ಸ್ಥಾಪನೆಯಾಗುವ ಪ್ರೌಢ ಶಾಲೆಗಳಿಗೆ ಮೊದಲ ಮೂರು ವರ್ಷ ಗ್ರಾಂಟ್ ಕೊಡುವುದಿಲ್ಲ ಎಂದು ಮಾಡಿದ್ದರು. ಈಗ ಅದನ್ನು ಐದು ವರ್ಷ ಕಾಲಕ್ಕೆ ಹೆಚ್ಚಿಸಿದ್ದಾರೆ. ಹೀಗಾದರೆ ಆ ಶಾಲೆಗಳಲ್ಲಿ ಕೆಲಸ ಮಾಡುವವರಿಗೆ ಐದು ವರ್ಷ ಕಾಲ ಸಂಬಳವನ್ನು ಕೊಡಲಿಕ್ಕೆ ಸಾಧ್ಯವೇ ? ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕೆ ಕೂಡ ಅಷ್ಟೇ. ಗಂಡು ಮಕ್ಕಳ ವಿಚಾರದಲ್ಲಿ ಐದು ವರ್ಷಗಳ ನಿರ್ಬಂದ ಹಾಕಿ ರುವಂತೆ ಹೆಣ್ಣು ಮಕ್ಕಳ ವಿದ್ಯಾಭ್ಯಾಸದ ಸಂಬಂಧದಲ್ಲಿಯೂ ಐದು ವರ್ಷ ಗ್ರಾಂಟ್ ಕೊಡುವುದಿಲ್ಲ ಎಂದು ಸರ್ಕಾರದವರು ಆರ್ಡರ್ ಮಾಡಿದ್ದಾರೆ. ಹೆಣ್ಣು ಮಕ್ಕಳ ಶಾಲೆಗಾಗಲೀ, ಗಂಡು ಮಕ್ಕಳ ಶಾಲೆಗಾಗಲೀ ಸರ್ಕಾರದವರು ಗ್ರಾಂಟ್ ಕೊಡಬೇಕು. ಈವೊತ್ತು ಹೈಸ್ಕೂಲುಗಳಿಗೆ ಬೇಡಿಕೆ ಇರುವ ಕಾಲದಲ್ಲಿ ಸರ್ಕಾರ ತಾವೇ ಹೈಸ್ಕೂಲುಗಳನ್ನು ತೆರೆಯಲಿಕ್ಕೆ ಸಾಧ್ಯವಿಲ್ಲ. ಹೀಗಿ ರುವಾಗ ಹಳ್ಳಿಗಾಡಿನ ಜನ, ಸ್ಥಳೀಯ ಸಂಸ್ಥೆಗಳ ಜನ ಇತರ ವಿದ್ಯಾಭ್ಯಾಸವನ್ನು ಅಭಿವೃದ್ಧಿ ಮಾಡಬೇಕು ಎನ್ನುವ ಜನ ಸಂಘ ಸಂಸ್ಥೆಗಳನ್ನು ಕಟ್ಟಿ ಹೈಸ್ಕೂಲುಗಳನ್ನು ಪ್ರಾರಂಭ ಮಾಡಬೇ ಕೆಂದು ಹೇಳಿದಾಗ ಐದು ವರ್ಷಗಳವರೆಗೆ ಹಣ ಕೊಡುವುದಿಲ್ಲ ಎನ್ನುವ ಮಾತು ಹೇಗಾಗುತ್ತದೆಂದರೆ ಹುಟ್ಟಿದ ಮಗುವಿಗೆ 18 ವರ್ಷದ ತನಕ ನಿನ್ನ ಕಾಲಮೇಲೆ ನಿಂತುಕೋ, ಅಲ್ಲಿಯವರೆಗೂ ಹಾಲು ಹಾಕುವುದಿಲ್ಲ, ಅನ್ನ ಕೊಡುವುದಿಲ್ಲ, ಅನಂತರ ಎದೆಹಾಲು ಕೊಡುತ್ತೇನೆ ಎಂದು ಹೇಳಿದ ಹಾಗೆ ಆಗುತ್ತದೆ. ಹಳ್ಳಿಗಾಡಿನಲ್ಲಿ ಹುಟ್ಟಿ, ಹಳ್ಳಿಯ ಜನರೊಡನೆ ನಿಕಟ ಸಂಪರ್ಕವನ್ನು ಇಟ್ಟುಕೊಂಡು

(ಶ್ರೀ ಬಿ. ಪರಮೇಶ್ವರಪ್ಪ)

ಜನತೆಯ ಉದ್ಧಾರಕ್ಕೋಸ್ಕರ ಇರುತ್ತೇವೆ ಎನ್ನುವವರು ರಿವರ್ಸ್ ಗೇರ್‌ನಲ್ಲಿ ಹೋಗುತ್ತಾರೆ ಎಂದರೆ ಅದಕ್ಕೆ ನಾನು ಏನು ಹೇಳಲಿ ?

ಒಲೆ ಹತ್ತಿ ಉರಿದೊಡೆ ನಿಲ್ಲಬಹುದಲ್ಲವೇ
ಧರೆ ಹತ್ತಿ ಉರಿದೊಡೆ ನಿಲ್ಲಬಹುದೇ
ಏರಿ ನೀರುಂಬೊಡೆ ಬೇಲಿ ಎದ್ದು ಹೊಲವ ಮೇದೊಡೆ
ನಾರಿತಾ ಮನೆಯಲ್ಲಿ ಕಳವೊಡೆ
ತಾಯಿಯಾ ಮೊಲೆ ನಂಜಾಗಿ ಕೊಲುವೊಡೆ
ಇನ್ನಾರಿಗೆ ದೂರಲಿ ಕೂಡಲ ಸಂಗಮದೇವ

ಶ್ರೀಮಾನ್ ಶಂಕರ ಗೌಡರು ಇಲ್ಲಿಗೆ ಬಂದು ಅಧಿಕಾರ ಸ್ವೀಕಾರ ಮಾಡಿಕೊಂಡಮೇಲೆ ಇಂಥ ಆಜ್ಞೆಗಳನ್ನು ಹೊರಡಿಸುವುದಕ್ಕೆ ಪ್ರಾರಂಭ ಮಾಡಿದಮೇಲೆ ಇನ್ನು ಯಾರ ಮುಂದೆ ನಾವು ನಮ್ಮ ಕಷ್ಟಗಳನ್ನು ಹೇಳಿಕೊಳ್ಳೋಣ ? ಜನರಿಗೆ ಸರಿಯಾದ ರೀತಿಯ ವಿದ್ಯಾಭ್ಯಾಸ ಒದಗಿಸುವುದಕ್ಕೆ ಶಕ್ಯವಿಲ್ಲ, ಬೆಂಗಳೂರು ನಗರವನ್ನು ಸೇರಿದಮೇಲೆ ಇಲ್ಲಿಯ ಲೋಲುಪ್ತಿಯಲ್ಲಿದ್ದು ಹಳ್ಳಿಗಾಡಿನ ಜನತೆಯನ್ನು ಮರೆತಿದ್ದಾರೆಯೋ ಏನೋ ಎಂದು ಹೇಳಬೇಕಾಗುತ್ತದೆ. ಅವರು ಮಾಡಿರುವ ಆಜ್ಞೆಯನ್ನು ಪುನರ್ವಿಮರ್ಶೆ ಮಾಡಬೇಕು.

ಶ್ರೀ ಕೆ. ವಿ. ಶಂಕರ ಗೌಡ.—ರಾಜ್ಯದಲ್ಲಿ ಎರಡು ಸಾವಿರ ಹೈಸ್ಕೂಲುಗಳಿವೆ.

ಶ್ರೀ ಬಿ. ಪರಮೇಶ್ವರಪ್ಪ.—50 ಸಾವಿರವಾದರೂ ಕೊಡಬೇಕು. ನಾವು ಶೆರಿಗೆ ಕೊಡುವುಕ್ಕೆ ಸಿದ್ಧರಾಗಿದ್ದೇವೆ. ಪ್ರತಿಯೊಬ್ಬನಿಗೂ ವಿದ್ಯಾಭ್ಯಾಸ ಮಾಡಿಸುತ್ತೇವೆಂದು ಹೇಳುತ್ತಾರೆ, ಪ್ರತಿಯೊಂದು ಪತ್ರಿಕೆಗಳಲ್ಲೂ ಬರುತ್ತದೆ. ಇವರು ಹೇಳುತ್ತಿರುವುದೊಂದು ಮಾಡುತ್ತಿರುವುದೊಂದು. ಹೀಗಾದರೆ ರೈತರ ಪರಿಸ್ಥಿತಿ ಏನಾದೀತು ! ನಾನು ವಿದ್ಯಾ ಇಲಾಖೆಗೆ ಈ ಮೂಲಕ ಒಂದು ಎಚ್ಚರಿಕೆಯನ್ನು ಕೊಡುತ್ತಿದ್ದೇನೆ. ಇದು ನನ್ನ ಒಬ್ಬನ ವೈಯಕ್ತಿಕವಾದ ಅಭಿಪ್ರಾಯವಲ್ಲ. ಇದು ಇಡೀ ಜನತೆಯ ಅಭಿಪ್ರಾಯ. ಇದನ್ನು ಮಾನ್ಯ ಮಂತ್ರಿಗಳು ಪುನರ್ವಿಮರ್ಶೆ ಮಾಡಬೇಕು. ಇದರ ಜೊತೆಗೆ ಸ್ವಂತ ಕಟ್ಟಡ ಇದ್ದರೆ ಊರಿನವರೇ ಕಟ್ಟಿದ್ದರೆ ಬಾಡಿಗೆ ಏಕೆ ಕೊಡಬಾರದು ? ಕೊಡುವುದಿಲ್ಲವೆಂದು ಹೇಳುತ್ತಾರೆ. ಊರಿನವರೇ ಕಟ್ಟಬೇಕು ಸರಕಾರ ಕಟ್ಟಿಕೊಡುವುದಿಲ್ಲ ಎಂದು ಹೇಳುವಾಗ ಕಟ್ಟಿದರೆ ಬಾಡಿಗೆ ಏಕೆ ಕೊಡಬಾರದು ?

ಶ್ರೀ ಕೆ. ವಿ. ಶಂಕರಗೌಡ.—ಸ್ವಂತ ಮನೆಗೆ ಬಾಡಿಗೆ ಕೊಡುವುದುಂಟೇ !

ಶ್ರೀ ಬಿ. ಪರಮೇಶ್ವರಪ್ಪ.—ಹಾಗಲ್ಲ, ನಿಮಗೆ ಹೇಳುವುದು ವ್ಯರ್ಥವಾಗಿದೆ. ಇದನ್ನು ನೋಡಿ ಪಶ್ಚಾತ್ತಾಪವಾಗಿದೆ. ಈ ವಿಚಾರವನ್ನು ಪುನರ್ವಿಮರ್ಶೆ ಮಾಡಬೇಕು. ಇದರ ಜೊತೆಗೆ ಸ್ಟೆಬಿಲಿಟಿ ಫಂಡನ್ನು ಗ್ರಾಂಟ್ ಇನ್ ಏಡ್ ರೂಲ್ಸ್ ಪ್ರಕಾರ ಕೊಡುತ್ತಿದ್ದರು, 5 ಸಾವಿರ ರೂಪಾಯಿ ಕೊಟ್ಟರೆ ಸಾಕಾಗಿತ್ತು ಹತ್ತಾರು ಎಕರೆ ಜಮೀನು ಇದ್ದರೆ ಅದು ಸೆಕ್ಯೂರಿಟಿಯಾಗುತ್ತಿತ್ತು. ಹೊಸ ರೂಲ್ಸ್ ಜಾರಿಗೆ ಬಂದಮೇಲೆ ಹತ್ತಾರು ವರ್ಷಗಳಿಂದ ಸ್ಕೂಲುಗಳಿಗಿದ್ದ ಸೌಲಭ್ಯವನ್ನು ತಪ್ಪಿಸಿದ್ದಾರೆ. ಈಗ 10 ಸಾವಿರ ರೂಪಾಯಿ ಕಟ್ಟಬೇಕು, ಹಿಂದೆ 5 ಸಾವಿರ ಕೊಟ್ಟಿದ್ದರೆ ಮತ್ತೆ 5 ಸಾವಿರ ಜೊತೆಮಾಡಬೇಕು. ಇದು ಸರಿಯಲ್ಲ. ಹಿಂದೆ 5 ಸಾವಿರ ಕೊಟ್ಟಿದ್ದವರಿಗೆ ಹಿಂದಿನ ರೂಲ್ಸ್ ಅನ್ವಯಿಸಿದ್ದವರಿಗೆ ಅದರಂತೆಯೇ ಮುಂದುವರಿಸಬೇಕು, ಹೊಸದಾಗಿ ರೂಲ್ಸ್ ಜಾರಿಗೆ ಬಂದಮೇಲೆ ಹೊಸದಾಗಿ ತೆರೆಯುವ ಶಾಲೆಗಳಿಗೆ 10 ಸಾವಿರ ರೂಪಾಯಿ ಕೇಳಿ, ಆ ಪ್ರಕಾರ ಅವರು ಕೊಡಲಿ. ಹತ್ತು ವರ್ಷಗಳ ಹಿಂದೆ 5 ಸಾವಿರ ಕೊಟ್ಟಿರುವವರಿಗೆ ಪುನಃ 5 ಸಾವಿರ ಕೊಡಿ ಎಂದು ಹೇಳುವುದು ನ್ಯಾಯವಲ್ಲ. ಇದನ್ನು ಪುನರ್ವಿಮರ್ಶೆಮಾಡಬೇಕು. ಏಕರೂಪತೆಗೆ ತರುವ ವಿಧಾನ ಇದಲ್ಲ ಎಂದು ಹೇಳಬೇಕಾಗಿದೆ.

ಟೆಕ್ನಿಕಲ್ ವಿದ್ಯಾಭ್ಯಾಸವಿದೆ, ಮಕ್ಕಳಿಗೆ ಇದಿರಬೇಕು ಎಂದು ತಜ್ಞರು ಹೇಳುತ್ತಿದ್ದಾರೆ. ಇಂದು ಡಿಪ್ಲೊಮಾ ಆದವರು; ಹತ್ತಾರು ಪರೀಕ್ಷೆಗಳಲ್ಲಿ ಪಾಸಾದವರು ಅನೇಕರಿದ್ದಾರೆ, ಓದಿದವರಿಗೆಲ್ಲಾ ನೌಕರಿ ಕೊಡಲು ಸರಕಾರಕ್ಕೆ ಸಾಧ್ಯವಿಲ್ಲ. ಇನ್ನೊಂದು ರೀತಿಯಲ್ಲಿ ಅವರಿಗೆ ಪ್ರೋತ್ಸಾಹ ಕೊಡಬೇಕು. ಆ ಬಗ್ಗೆ ಮಾಡಿರುವುದೇನು ! ಪ್ರೋತ್ಸಾಹ ಕೊಡದಿದ್ದರೆ ಮಕ್ಕಳ ಗತಿಯೇನು ?

ಹೀಗೆಯೇ ವಿದ್ಯಾಭ್ಯಾಸ ಮುಂದುವರೆದರೆ ನಿರುದ್ಯೋಗ ಸಮಸ್ಯೆ ಹೆಚ್ಚಾಗುತ್ತದೆ. ಆದುದರಿಂದ ವಿದ್ಯಾವಂತರಿಗೆ ಹಂತಹಂತವಾಗಿ ಒಂದು ರೀತಿಯ ಸೌಲತ್ತು ಕೊಡಲು ಏರ್ಪಾಡುಮಾಡಬೇಕು.

ಈಗ ಮಕ್ಕಳಿಗೆ 5 ವರ್ಷ 8 ತಿಂಗಳುಗಳಾದ ಮೇಲೆ ಪ್ರೈಮರಿಶಾಲೆಗೆ ಅವರನ್ನು ಸೇರಿಸಿಕೊಳ್ಳುತ್ತಿದ್ದಾರೆ. ಅದಕ್ಕಿಂತ ಮುಂಚೆ ಮಕ್ಕಳು 3 ವರ್ಷವಾದ ಕೂಡಲೆ ಶಾಲೆಗೆ ಹೋಗಲು ಎಲ್ಲಾ ಕಡೆ ಅವಕಾಶವಿಲ್ಲ. ಹಳ್ಳಿಗಳಲ್ಲಿ ನರ್ಸರಿ ಶಾಲೆಗಳಿಲ್ಲ. ಆದರೆ ಅವನ್ನು ತೆರೆಯಲು ಹಣ ಎಲ್ಲಿಂದ ತರಬೇಕು ಎಂಬ ಪ್ರಶ್ನೆ ಬರುತ್ತದೆ. ಹಳ್ಳಿಯವರು ಬಡವರಾದ್ದರಿಂದ ಹಣ ಒದಗಿಸುವಾಗ ಸ್ವಲ್ಪ ಹೆಚ್ಚಾಗಿ ಒದಗಿಸಿದರೂ ಚಿಂತೆಯಿಲ್ಲ, ಅವರಿಗೆ ಸರಿಯಾದ ಜ್ಞಾನವುಂಟಾಗುವಂತೆ ಮಾಡಲು ಅವರನ್ನು ಸತ್ಪ್ರಜೆಗಳನ್ನಾಗಿಮಾಡಲು ತಕ್ಕ ವ್ಯವಸ್ಥೆಮಾಡಬೇಕು. ಅವರಿಂದ ಮುಂದೆ ದೇಶೋದ್ಧಾರವಾಗಬೇಕು ಎಂದು ಹೇಳುವಾಗ ಇಂದು ವಿದ್ಯಾಭ್ಯಾಸಕ್ಕೆ ಹೆಚ್ಚು ಖರ್ಚುಮಾಡಿದರೆ ಅದು ತಪ್ಪಲ್ಲ. ಆದಕಾರಣ ಇಂದು ನರ್ಸರಿ ಶಾಲೆಗಳನ್ನು ತೆರೆದಿರುವವರಿಗೆ ಸೇಕಡ 75 ರಷ್ಟು ಗ್ರಾಂಟನ್ನು ಕೊಟ್ಟು ಹಂತಹಂತವಾಗಿಯಾದರೂ ನರ್ಸರಿ ಶಿಕ್ಷಣವನ್ನು ಮುಂದುವರೆಸಿ ಎಲ್ಲಾ ಕಡೆಯೂ ಅದು ದೊರೆಯುವಂತೆ ಮಾಡಲೇಬೇಕು. ಹಾಗೆ ಮಾಡಿದಾಗ 2 ವರ್ಷ 8 ತಿಂಗಳು ನರ್ಸರಿ ವಿದ್ಯಾಭ್ಯಾಸ ಮಾಡುವುದರಿಂದ ಪ್ರೈಮರಿ ಶಾಲೆಗೆ ಬರುವ ವೇಳೆಗೆ ಮಕ್ಕಳಿಗೆ ಪೂರ್ಣ ಜ್ಞಾನ ಬಂದು ಅವರು ಉತ್ತಮ ರೀತಿಯಲ್ಲಿ ವಿದ್ಯಾಭ್ಯಾಸ ಮಾಡುವುದಕ್ಕೆ ಅವಕಾಶವಾಗುತ್ತದೆ. ಆದುದರಿಂದ ಇದಕ್ಕೆ ಮನಸ್ಸು ಮಾಡಬೇಕೆಂದು ಹೇಳುತ್ತೇನೆ.

ಹಳ್ಳಿಗಾಡುಗಳಲ್ಲಿ ಉಪಾಧ್ಯಾಯರು ಸರಿಯಾದ ರೀತಿಯಲ್ಲಿ ಕೆಲಸ ಮಾಡುತ್ತಿಲ್ಲ ಎಂಬ ಕೂಗು ಎಲ್ಲಾ ಕಡೆಯೂ ಇದೆ. ಮಾನ್ಯ ಮಂತ್ರಿಗಳಿಗೆ ಅವರು ದೇಶದಲ್ಲಿ ಪ್ರವಾಸಮಾಡುವಾಗ ಇದು ಮನವರಿಕೆಯಾಗಿದೆ. ಇದಕ್ಕೆ ಬಹುಮಟ್ಟಿಗೆ ಆಡಳಿತ ನಡೆಸುವವರು ಹೊಣೆಗಾರರು. ಆದುದರಿಂದ ಇಂದು ಸ್ಥಳವಂದಿಗರು ಅಲ್ಲಿನ ಶಾಲೆಗಳಲ್ಲಿ ಇರದಂತೆ ಮಾಡಬೇಕು. ಸ್ವಂತ ಗ್ರಾಮದಲ್ಲಿರುವವರನ್ನು ಬೇರೆ ಕಡೆಗೆ ಹಾಕಬೇಕು. ಅದಕ್ಕೆ ತಕ್ಕ ನಿಯಮವನ್ನು ಜಾರಿಗೆ ತರಬೇಕು. ಬೇರೆ ತಾಲ್ಲೂಕಿಗೆ ಹಾಕುವುದಕ್ಕಾಗದಿದ್ದರೆ ಬೇರೆ ಹಳ್ಳಿಗಾದರೂ ಹಾಕಬೇಕು ಸ್ವಂತ ಊರಿನಲ್ಲೇ ಇದ್ದರೆ ಉಪಾಧ್ಯಾಯರು ಬೇರೆ ಉದ್ಯಮವನ್ನಿಟ್ಟುಕೊಂಡು ನೆಪಮಾತ್ರಕ್ಕೆ ಸಂಬಳ ಪಡೆಯಲು ಶಾಲೆಯಲ್ಲಿ ಕೆಲಸಮಾಡುತ್ತಾರೆ. ನಿಜವಾಗಿಯೂ ಉಪಾಧ್ಯಾಯರು ಒಳ್ಳೆಯ ರೀತಿಯಲ್ಲಿ ಕೆಲಸ ಮಾಡುತ್ತಿಲ್ಲ. ಇದನ್ನು ತಿಳಿದು ಬೇರೆ ಊರುಗಳಿಗೆ ಹಾಕಿದರೆ ಅಲ್ಲಿ ಬೇರೆ ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲದೆ ಉಪಾಧ್ಯಾಯರು ಸರಿಯಾಗಿ ಅವರ ಕೆಲಸ ಮಾಡಬಹುದು ಎಂದು ಕಾಣುತ್ತದೆ. ಆದುದರಿಂದ ಈ ರೀತಿ ಮಾಡುತ್ತಾರೆಂದು ಆಶಿಸುತ್ತೇನೆ. ವಿದ್ಯಾಭ್ಯಾಸದ ಬಗ್ಗೆ ಸರಕಾರಕ್ಕೆ ಹೆಚ್ಚು ಹೊಣೆ ಇದೆ. ಮುಖ್ಯವಾಗಿ ಈ ಕೆಲಸ ಮಾಡಬೇಕು ಎಂದು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

† ಶ್ರೀ ಬಿ. ಎಂ. ಸ್ಥಾಣಿಕೊಪ್ಪ (ಕಿತ್ತೂರು).—ಮಾನ್ಯ ಸಭಾಪತಿಗಳೇ, ವಿದ್ಯಾ ಖಾತೆ ಬೇಡಿಕೆ 46 ಕೋಟಿ 17 ಲಕ್ಷ 96 ಸಾವಿರ ರೂಪಾಯಿ ಇರುವುದನ್ನು ನಾನು ಸ್ವಾಗತಿಸುತ್ತೇನೆ. ನಿಜವಾಗಿಯೂ ವಿದ್ಯಾ ಇಲಾಖೆಗೆ 63ನೆಯ ಇಸವಿಯಲ್ಲಿ 18 ಕೋಟಿ ಕೊಟ್ಟಿದ್ದರು, 69-70ಕ್ಕೆ 46 ಕೋಟಿ ಕೊಟ್ಟಿರುವುದು, ಹೆಚ್ಚಾಗಿ ಕೊಟ್ಟಿರುವುದು ಸ್ವಾಗತಾರ್ಹ. ಇಂದು ನಮ್ಮ ರಾಜ್ಯದಲ್ಲಿ ಪ್ರೈಮರಿ ಶಾಲೆಗಳು 32 ಸಾವಿರ ಇದ್ದರೂ ಇನ್ನೂ ಕೆಲವು ಕಡೆ ಪ್ರೈಮರಿ ಶಾಲೆಗಳ ಅವಶ್ಯಕತೆ ಹೆಚ್ಚಾಗಿದೆ. ಈ ಶಾಲೆಗಳು ಹೆಚ್ಚಾಗಿದ್ದರೂ ಶಾಲಾ ಕಟ್ಟಡಗಳು ಹಳ್ಳಿಗಳಲ್ಲಿಲ್ಲ. ಸ್ವಾತಂತ್ರ್ಯ ಬಂದು 20 ವರ್ಷವಾದರೂ ಮಕ್ಕಳಿಗೆ ಕೂಡಲು ಹಳ್ಳಿಯಲ್ಲಿ ರೂಮಿಲ್ಲದಿರುವುದನ್ನು ನೋಡಿ ದುಃಖವಾಗುತ್ತಿದೆ. ಇದಕ್ಕಾಗಿ ಸರಕಾರ ಒಂದು ರೂಮಿಗೆ ಒಂದು ಸಾವಿರ ರೂಪಾಯಿ ಕೊಡುವುದಾಗಿ ತಿಳಿಸಿದೆ. ಆದರೆ ಅದು ಸಾಲದು. ಬೇಕಾದ ಯೋಜನೆಗಳಿಗೆ ಪೂರ್ಣವಾಗಿ ಹಣ ಖರ್ಚು ಮಾಡುತ್ತೀರಿ. ಪ್ರಾಥಮಿಕ ಶಾಲೆಗಳಿಗೆ ಕಟ್ಟಡವಾಗುವಂತೆ ಮಾಡಬೇಕಾದರೆ ಪ್ರತಿ ರೂಮಿಗೆ ಕನಿಷ್ಟ 3 ಸಾವಿರ ರೂಪಾಯಿಗಳನ್ನಾದರೂ ಕೊಡುವುದು ಸರ್ಕಾರದ ಕರ್ತವ್ಯ. ಸರಕಾರ ಇದರ ಬಗ್ಗೆ ಜವಾಬು ಹೇಳಬೇಕು.

ಉತ್ತರ ಕರ್ಣಾಟಕದಲ್ಲಿ ಸಾದಿಲ್ವಾರು 5-6 ರೂಪಾಯಿ ಒಂದೊಂದು ಶಾಲೆಗೆ ಕೊಡುತ್ತಾರೆ ಅಲ್ಲಿ ಉಪಾಧ್ಯಾಯರು ಹುಡುಗರಿಂದ ಶಾಲೆ ಕಸ ಗುಡಿಸಿಸುತ್ತಾರೆ. ಇದು ಸರಿಯಲ್ಲ, ಇದನ್ನು ಹುಡುಗರು ಮನಸ್ಸಿಗೆ ಹಚ್ಚಿಕೊಳ್ಳುತ್ತಾರೆ. ಇದಕ್ಕಾಗಿ ಒಂದುವೇಳೆ ಬೇಕಾದರೆ ಸಾದಿಲ್ವಾರನ್ನು ಹೆಚ್ಚಾಗಿ ಕೊಡಬೇಕು, ಕಸ ಗುಡಿಸಲು ಒಬ್ಬರನ್ನು ನೇಮಕ ಮಾಡಬೇಕು.

ಈ ವರ್ಷ ಬಜೆಟ್ಟಿನಲ್ಲಿ ದೊಡ್ಡ ಪ್ರಾಥಮಿಕ ಶಾಲೆಗಳಿಗೆ 325 ಪದವೀಧರರನ್ನು ನೇಮಕಮಾಡಲು ಅವಕಾಶ ಮಾಡಲಾಗಿದೆ. ಇದು ಸ್ವಾಗತಾರ್ಹವಾದುದು. ಆದರೆ ದೊಡ್ಡ ದೊಡ್ಡಶಾಲೆಗಳಲ್ಲಿ

(ಶ್ರೀ ಬಿ. ಎಂ. ಸಾಣಿಕೊಪ್ಪ)

ಇಂಗ್ಲೀಷನ್ನು ಕಲಿಸುವ ಅವಕಾಶವಿರುವುದರಿಂದ ಅದನ್ನು ಕಲಿಸುವ ಶಿಕ್ಷಕರ ಸಂಖ್ಯೆ ಹೆಚ್ಚಾಗಬೇಕು. ಬಹಳ ದುಃಖದಿಂದ ಹೇಳುವುದು ಎಂದರೆ ಉತ್ತರ ಕರ್ನಾಟಕದ ಭಾಗದಲ್ಲಿ ನೂಲು ಉದ್ಯೋಗದ ಶಾಲೆಗಳು ಅಂತ ಇವೆ. ಪ್ರತಿವರ್ಷ ಅವರು ಏನು ನೂಲು ತೆಗೆಯುತ್ತಾರೆ ಅದರಿಂದ ರಗಟಾಗುವಂತಹ ಅರವಿ ತಯಾರು ಮಾಡುತ್ತಾರೆ ಅದನ್ನು ಪಾಲಕರು ತೆಗೆದುಕೊಳ್ಳಿರಿ ಅಂತ ಹೇಳುತ್ತಾರೆ, ಇವತ್ತಿನ ದಿವಸ ಈ ಮೂಲ ಉದ್ಯೋಗ ನೂಲು ತೆಗೆಯುವುದು ಏನಿದೆ ಇದು ಬಿದ್ದು ಹೋಗಿದೆ ಆ ಕಾರಣ ಇದನ್ನು ಪೂರ್ಣ ತೆಗೆದುಹಾಕಬೇಕು ಇಲ್ಲದೇ ಇದ್ದರೆ ಇದರಿಂದ ಜನರಿಗೆ ಬಹಳ ತೊಂದರೆಯಾಗುತ್ತದೆ ಅಲ್ಲದೆ ಜನರಿಗೆ ಬಹಳ ವ್ಯಥೆಯಾಗುತ್ತದೆ. ಅದಕ್ಕೆ ಬದಲಾಗಿ ಬೇರೆ ಶಾಲೆಗಳನ್ನು ಅಲ್ಲಿ ಪ್ರಾರಂಭ ಮಾಡಬೇಕು. ನಮ್ಮ ಪ್ರಾಂತ್ಯದಲ್ಲಿ ಹೈಸ್ಕೂಲು ಸಾಕಾದಷ್ಟು ಇದೆ, ಆದರೆ ಶಿಕ್ಷಣದ ಮಟ್ಟ ಬೆಳೆಯಬೇಕಾಗಿದೆ. ಅದರ ಬಗ್ಗೆ ಸರ್ಕಾರದವರು ಲಕ್ಷ್ಯ ತೆಗೆದುಕೊಳ್ಳಬೇಕು. ಎಲ್ಲಿ ಹೈಸ್ಕೂಲುಗಳು ಇವೆ ಅಲ್ಲಿಗೆ ಬಡವರ ಮಕ್ಕಳು, ಹರಿಜನ, ಗಿರಿಜನರ ಮಕ್ಕಳು, ಬೇಡರ ಜಾತಿಯ ಮಕ್ಕಳು ಬರುತ್ತಾರೆ ಅವರಿಗೆ ವಿದ್ಯಾಭ್ಯಾಸ ಮಾಡಲಿಕ್ಕೆ ಅನುಕೂಲ ಮಾಡಿ ಕೊಡಬೇಕಾದರೆ ಹಾಸ್ಟೆಲುಗಳನ್ನು ತೆಗೆಯಬೇಕು. ಉತ್ತರ ಕರ್ನಾಟಕದಲ್ಲಿ ಸರ್ಕಾರಿ ಹೈಸ್ಕೂಲುಗಳು ಬಹಳ ಕಡಿಮೆ ಇವೆ. 4 ಜಿಲ್ಲೆಯಲ್ಲಿ 7–8 ಹೈಸ್ಕೂಲುಗಳು ಇರಬಹುದು. ಉಳಿದಿದ್ದೆನ್ನಲ್ಲಾ ಪ್ರೈವೇಟ್ ಸಂಸ್ಥೆಯವರೇ ನಡೆಸುತ್ತಾರೆ. ಅವರು ಕಟ್ಟಡಗಳನ್ನು ಕಟ್ಟಿಸಿದ್ದಾರೆ ಎಕ್ವಿಪ್‌ಮೆಂಟು, ಫರ್ನೀಚರ್ ಸಲುವಾಗಿ ಎರಡು ಲಕ್ಷ ರೂಪಾಯಿಗಳವರೆಗೂ ಕೂಡ ಖರ್ಚು ಮಾಡಿದ್ದಾರೆ. ಇಂತಹ ಕಟ್ಟಡಗಳಿಗೆ ರೆಂಟ್ ಕೊಡುತ್ತಾ ಇದ್ದರು ಈಗ ಎರಡು ವರ್ಷಗಳಿಂದ ಬಂದ್ ಮಾಡಿದ್ದಾರೆ. ಸರ್ಕಾರದವರು ನಿಜವಾಗಿಯೂ ಈ ರೀತಿ ಮಾಡಬಾರದಾಗಿತ್ತು. ಈಗೇನೋ ಸ್ವಲ್ಪ ಬದಲಾವಣೆ ಮಾಡಿದ್ದಾರೆ. ಅವರು ಸಾಲ ತೆಗೆದುಕೊಂಡು ಕಟ್ಟಡ ಕಟ್ಟಿಸಿದ್ದರೆ ರೆಂಟ್ ಕೊಡಬೇಕೆಂದು ಮಾಡಿದ್ದಾರೆ. ಮತ್ತು ಯಾರು ರೆಂಟೆಡ್ ಬಿಲ್ಡಿಂಗ್‌ನಲ್ಲಿ ಶಾಲೆ ನಡೆಸುತ್ತ ಇದ್ದರು ಅಂತಹ ಕಟ್ಟಡಗಳಿಗೆ ರೆಂಟ್ ಕೊಡಬಹುದು ಎಂಬ ಅರ್ಥದಲ್ಲಿ ಮಾಡಿರುವುದು ಸರಿಯಲ್ಲ. ಯಾರು ಮುಂದೆ ಬಂದು ಕಟ್ಟಡ ಕಟ್ಟಿಸಿದ್ದಾರೆ ಅವರಿಗೂ ಕೂಡ ಸರ್ಕಾರದ ನಿಯಮದ ಪ್ರಕಾರ ರೆಂಟ್ ಸಿಕ್ಕಬೇಕೆಂದು ಹೇಳುತ್ತೇನೆ. ಸರ್ಕಾರಿ ಶಾಲೆಗಳಲ್ಲಿ ಓದತಕ್ಕ ಹುಡುಗರ ಪರ್ಸೆಂಟೇಜನ್ನೂ ಖಾಸಗಿ ಶಾಲೆಗಳಲ್ಲಿ ಓದತಕ್ಕ ಹುಡುಗರ ಪರ್ಸೆಂಟೇಜನ್ನೂ ತೆಗೆದುಕೊಂಡು ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾದವರ ಸಂಖ್ಯೆಯನ್ನು ನೋಡಿದರೆ ಖಾಸಗಿ ಶಾಲೆಗಳ ರಿಸಲ್ಟ್ ಹೆಚ್ಚಿನ ಪ್ರಮಾಣದ್ದು ಎಂದು ಹೇಳಿ ಕಂಡುಬರುತ್ತದೆ; ಸರ್ಕಾರದವರು ಇಷ್ಟು ಹಣ ಖರ್ಚು ಮಾಡುತ್ತಾ ಇರುವಾಗ ಇದರ ಕಡೆಗೆ ಹೆಚ್ಚು ಲಕ್ಷ್ಯ ಕೊಡಬೇಕು. ಎಲ್ಲವನ್ನೂ ತಾವೇ ಮಾಡಬೇಕು ಎಂಬುದನ್ನು ಇಟ್ಟುಕೊಂಡು ಮಾಡಿ ಬೇಡ ಎನ್ನುವುದಿಲ್ಲ. ಈ ರೀತಿ ವಿದ್ಯಾಭ್ಯಾಸದ ಗುಣವನ್ನು ಕಡಿಮೆ ಮಾಡತಕ್ಕದ್ದು ಸರಿಯಲ್ಲ. ನೀವೇ ಎಲ್ಲವನ್ನೂ ನಡೆಸಬೇಕೆಂಬ ವಿಚಾರ ಇದ್ದರೆ ಆ ಕಟ್ಟಡಗಳ ಕಿಮ್ಮತ್ತು ಎಷ್ಟಾಗುತ್ತದೆ ಎಂಬುದನ್ನು ಕಿಮ್ಮತ್ತು ಮಾಡಿಸಿ ಅವರಿಗೆ ಹಣ ಕೊಟ್ಟುಬಿಡಿರಿ ಖಾಸಗಿ ಶಾಲೆಗಳನ್ನು ನಿಮಗೆ ಕೊಡಲಿಕ್ಕೆ ತಯಾರಾಗಿದ್ದಾರೆ. ದಯವಿಟ್ಟು ಇದನ್ನು ವಿಚಾರಮಾಡಬೇಕೆಂದು ಹೇಳುತ್ತೇನೆ.

ಮೂರನೆ ಪ್ಲಾನ್‌ದಲ್ಲಿ ಯಾರು ಹೈಸ್ಕೂಲು ನಡೆಸುತ್ತಾ ಇದ್ದರೆ ಅವರಿಗೆ ಶಕ್ತಿ ಇದೆ ಅಂತ ತಿಳಿದು ಇವತ್ತು ಹತ್ತು ಸಾವಿರ ರೂಪಾಯಿ ಸ್ಟೆಬಿಲಿಟಿ ಫಂಡ್ ಕಟ್ಟಬೇಕೆಂದು ಮಾಡಿದ್ದಾರೆ. ಇದು ಖಾಸಗಿ ಶಾಲೆಗಳನ್ನು ನಡೆಸುವವರಿಗೆ ಬಹಳ ಭಾರವಾಗಿದೆ. ಈ ರೀತಿ ಮಾಡಬಾರದು. ಒಂದುವೇಳೆ ಅವರಿಗೆ ಕಟ್ಟಡ ಇದ್ದರೆ, ಭೂಮಿ ಇದ್ದರೇ, ಅದನ್ನೇ ಸ್ಟೆಬಿಲಿಟಿ ಫಂಡ್ ಅಂತ ಪರಿಗಣಿಸಲಿಕ್ಕೆ ಸರ್ಕಾರದವರು ಏಕೆ ಯೋಚನೆ ಮಾಡಬಾರದು? ನನಗೆ ತಿಳಿದಮಟ್ಟಿಗೆ ಇವತ್ತು ಎಷ್ಟೋ ಖಾಸಗಿ ಶಾಲೆಗಳವರು ಸ್ಟೆಬಿಲಿಟಿ ಫಂಡ್ ತುಂಬಲಾರದೆ ಹೋಗಿದ್ದಾರೆ. ಅಂತಹವರಿಗೆ ಸರ್ಕಾರದವರು ಕೊಡಬೇಕಾದಂಥ ಹಣ ಕೊಡದೆ, ಅವರು ಶಿಕ್ಷಕರಿಗೆ ಪಗಾರ ಕೊಡುವುದಕ್ಕೆ ಆಗುತ್ತಾ ಇಲ್ಲ ಎಂದು ಹೇಳುತ್ತಾ ಇದ್ದಾರೆ. ಮೊದಲಿನಂತೆ ಕೊಡುವುದು ನೆಟ್ಟಗೆ ಎಂದು ಹೇಳುತ್ತಾ ಇದ್ದೇನೆ ಈ ವಿಷಯವಾಗಿ ಉತ್ತರ ಕರ್ನಾಟಕದ ಭಾಗದಿಂದ ಒಂದು ಡೆಪ್ಯೂಟೇಷನ್ ಬಂದಿತ್ತು, ಅವರೂ ಕೂಡ ಇದರ ವಿಷಯವಾಗಿ ಹೇಳಿದ್ದಾರೆ. ಅದನ್ನು ವಿಚಾರ ಮಾಡಬೇಕೆಂದು ಹೇಳುತ್ತೇನೆ.

ಪಾಲಿಟೆಕ್ನಿಕ್‌ಗಳನ್ನು ಮಾಡಿದ್ದಾರೆ. ಪಾಲಿಟೆಕ್ನಿಕ್‌ನಲ್ಲಿ ಕಲಿತಂತಹ ವಿದ್ಯಾರ್ಥಿಗಳಿಗೆ ನೌಕರಿ ಸಿಕ್ಕುವುದಾಗಲಿ, ಉದ್ಯೋಗ ಮಾಡುವಂತಹ ಅವಕಾಶವಾಗಲಿ ಬಹಳ ಕಡಿಮೆಯಾಗಿದೆ. ಆದ್ದರಿಂದ ಹೆಚ್ಚಿನ ಪಾಲಿಟೆಕ್ನಿಕ್‌ಗಳನ್ನು ತೆಗೆಯಬೇಡಿರಿ ಎಂದು ಹೇಳುತ್ತೇನೆ ಮತ್ತು ಹುಡುಗರಿಗೆ ಉದ್ಯೋಗ ಸಿಕ್ಕುವಂತಹ ಆಟೋಮೊಬೈಲ್ ಇಂಜನಿಯರಿಂಗ್ ಶಾಲೆಗಳನ್ನು ತೆಗೆಯಿರಿ. ಇಷ್ಟು

ಹೇಳಿ ಖಾಸಗಿ ಶಾಲಾ ಸಂಸ್ಥೆಗಳನ್ನು ಯಾರು ನಡೆಸುತ್ತಾ ಇದ್ದರೋ ಅವರಿಗೆ ಮೊದಲನಂತೆ ಬಿಲ್ಡಿಂಗ್ ರೆಂಟ್ ಸಿಕ್ಕಬೇಕು, ಸ್ಟೆಬಲಿಟಿ ಫಂಡ್ ಒಂದು ಸಾವಿರ ರೂಪಾಯಿ ಆಗಲಿ, 5 ಸಾವಿರ ರೂಪಾಯಿ ಆಗಲಿ ಯಾವುದನ್ನೂ ವಸೂಲು ಮಾಡಬಾರದು ಈ ಬಗ್ಗೆ ಕೂಡಲೇ ಒಂದು ಆರ್ಡರ್‌ನ್ನು ಹೊರಡಿಸಬೇಕು ಅವರಿಗೆ ಪಗಾರ ಕೊಡುವುದಕ್ಕೆ ಹಿಂದು ಮುಂದು ಆಗಿದೆ ಎಲ್ಲರಿಗೂ ಪಗಾರ ಕೊಡುವಂತಹ ಅನುಕೂಲತೆ ಮಾಡಿಕೊಡಬೇಕು ಎಂದು ಹೇಳಿ ಎರಡು ಮಾತುಗಳನ್ನು ಆಡಲು ಅವಕಾಶ ಕೊಟ್ಟದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Discussion on a matter of urgent Public Importance for short Direction *re*: Postponement of Elections of President and Vice-President of Harihara Town Municipality.

Mr. DEPUTY SPEAKER.—Under Rule 59 of the Rules of Procedure the date on this item of business bill the initiated by Sri G. Duggappa although others have given notices on the same matter.

6–00 P.M.

ಶ್ರೀ ಜಿ. ದುಗ್ಗಪ್ಪ (ಭರಮಸಾಗರ).—ಸ್ವಾಮಿ, ಈಗ ಸಭೆಯ ಮುಂದಿರುವ ವಿಷಯವನ್ನು ಸುಮಾರು ಎರಡೂವರೆ ಗಂಟೆಗಳ ಕಾಲ ಚರ್ಚೆ ಮಾಡುವುದಕ್ಕೆ ಅಧ್ಯಕ್ಷರು ಅವಕಾಶವನ್ನು ಕೊಟ್ಟಿರುತ್ತಾರೆ. ಈ ಚರ್ಚೆಯ ಕಾಲದಲ್ಲಿ ಬಹಳ ಕುತೂಹಲಕಾರಿಯಾದ ಅನೇಕ ವಿಷಯಗಳು ಹೊರಬರಲಿದೆ. ಅಷ್ಟೇ ಅಲ್ಲದೆ ಬಹಳ ಮಹತ್ವಪೂರಿತವಾದ ವಿಷಯಗಳೂ ಮತ್ತು ಅವುಗಳಿಗೆ ಲಗತ್ತಾದ ಇಮ್ಮೀಡಿಯೆಟ್ ಕಾಜಸ್ ಇತ್ಯಾದಿಗಳನ್ನೆಲ್ಲಾ ನಾನೀಗ ಈ ಹರಿಹರ ಪುರಸಭೆಗೆ ಸಂಬಂಧಪಟ್ಟ ಹಾಗೆ ಚರ್ಚೆ ಮಾಡಬೇಕಾಗಿದೆ. ಈಗ ಸಭಾಧ್ಯಕ್ಷತೆ ವಹಿಸಿರತಕ್ಕ ಮಾನ್ಯ ಉಪಸಭಾಧ್ಯಕ್ಷರಿಗೆ ಇದರ ಪೂರ್ಣ ವಿವರಗಳು ಗೊತ್ತಿದ್ದರೂ ಇದು ಇಡೀ ದೇಶದ ಜನತೆಗೆ ಗೊತ್ತಾಗಬೇಕೆಂಬ ಉದ್ದೇಶದಿಂದ ಇದನ್ನು ಮತ್ತು ಇದರ ಹಿನ್ನೆಲೆ ಸಹಿತ ಹೇಳಬೇಕಾಗಿದೆ. ಆದ್ದರಿಂದ ನಾನು ಮೊಟ್ಟ ಮೊದಲನೆಯದಾಗಿ ಪ್ರಾಸ್ತಾವಿಕವಾಗಿ ಒಂದೆರಡು ಮಾತುಗಳನ್ನು ಹೇಳಿ ಅನಂತರ ಮುಖ್ಯ ವಿಷಯಕ್ಕೆ ಬರುತ್ತೇನೆ. ಹಿಂದೆ ಈ ರಾಜ್ಯದಲ್ಲಿ ಶ್ರೀಮಾನ್ ಎಸ್. ನಿಜಲಿಂಗಪ್ಪನವರು ಮುಖ್ಯ ಮಂತ್ರಿಗಳಾಗಿದ್ದರು. ಅವರು ತಮ್ಮ ಅಧಿಕಾರವನ್ನು ಶ್ರೀಮಾನ್ ವೀರೇಂದ್ರ ಪಾಟೀಲರಿಗೆ ವಹಿಸಿ ಕೊಟ್ಟರು. ಈ ದಿವಸ ಅವರು ಅಧಿಕಾರದಲ್ಲಿ ಇಲ್ಲದಿದ್ದರೂ ಅವರು ಬೆಂಗಳೂರಲ್ಲಿ ಇಲ್ಲದಿದ್ದರೂ ಅವರ ಛಾಯೆಯೇ ಈ ದಿವಸ ಈ ಮೈಸೂರು ರಾಜ್ಯದ ಆಡಳಿತವನ್ನು ನಡೆಸುತ್ತಿದೆ. ಅವರ ಛಾಯೆಯೇ ಇಲ್ಲಿ ಕೈ ಆಡಿಸುತ್ತಿದೆ. ಹಾಗೆ ಆ ಕಾಲದ ಕೈ ಇಲ್ಲಿ ಅಧಿಕಾರ ನಡೆಸುತ್ತಿದೆ ಎಂಬುದಕ್ಕೆ ಅನೇಕಾನೇಕ ನಿದರ್ಶನಗಳಿವೆ. ಅದರಲ್ಲೂ ಬಹಳ ಮುಖ್ಯವಾಗಿ ಎಲ್ಲೆಲ್ಲಿ ಕಾಂಗ್ರೆಸ್ಸಿಗೆ ವಿರೋಧವಾಗಿರತಕ್ಕ ನಗರ ಸಭೆಗಳೂ ಮತ್ತು ಮುನಿಸಿಪಾಲಿಟಿಗಳೂ ಇರುತ್ತವೆಯೋ ಅಂಥ ಕಡೆಗಳಲ್ಲೆಲ್ಲಾ ಅಂದರೆ ಮೈಸೂರು, ಹಾಸನ ಮತ್ತು ಮಂಡ್ಯ ಈ ಜಿಲ್ಲೆಗಳಲ್ಲಿ ಆ ಕಾಣದ ಕೈ ಚಳಕ ಒಂದು ರೀತಿಯಾಗಿದ್ದರೆ ನಮ್ಮ ಚಿತ್ರದುರ್ಗ ಜಿಲ್ಲೆಯ ವ್ಯವಹಾರ ಇನ್ನೂ ಬಹಳ ವಿಚಿತ್ರವಾಗಿದೆ. ಚಿತ್ರದುರ್ಗ ನಗರ ಸಭೆ ಈ ದಿವಸ ಕಾಂಗ್ರೆಸ್ಸಿಗೆ ವಿರೋಧವಾಗಿದೆ. ಹಾಗೆ ಎಲ್ಲಿ ವಿರೋಧ ಇರುತ್ತದೆಯೋ ಅಂಥ ಕಡೆಯಲ್ಲಿ ಕಾರಣ ಇರಲಿ ಇಲ್ಲದಿರಲಿ ಅಂತೂ ತಮಗೆ ಬೇಡವಾದವರು ಎಂದೂ ಅಧಿಕಾರದಲ್ಲಿರಬಾರದು ಎಂಬುದು ಕಾಂಗ್ರೆಸ್‌ನವರ ಉದ್ದೇಶ. ಉದಾಹರಣೆಗೆ: ಚಿತ್ರದುರ್ಗ ಮುನಿಸಿಪಾಲಿಟಿಯಲ್ಲಿ ಇರತಕ್ಕ 20 ಜನ ಸದಸ್ಯರಲ್ಲಿ 12 ಜನರು ಮಂತ್ರಿಗಳಿಗೆ 1968ನೇ ಡಿಶೆಂಬರ್ 28ರಲ್ಲಿ ಒಂದು ಅರ್ಜಿಯನ್ನು ಕೊಟ್ಟರು. ಅಲ್ಲಿ ಕಳೆದ 10 ತಿಂಗಳವರೆಗೂ ಒಂದು ಮೀಟಿಂಗ್ ನಡೆದಿರಲಿಲ್ಲ. ಆಡಳಿತದಲ್ಲಿ ಯಾವುದೂ ಕ್ರಮವಿಲ್ಲ. ಆದರೆ ತಮ್ಮ ಕೈಲಿ ಅಧಿಕಾರವಿದೆ ಎಂದು ಕಾಂಗ್ರೆಸ್ಸಿನ ಮುನಿಸಿಪಲ್ ಪ್ರೆಸಿಡೆಂಟ್ ಅವರು ಸೀನಿಯರ್ ಡಿವಿಜನಲ್ ಕಮಿಷನರನ್ನೂ ಕೂಡ ಹೆದರಿಸಿದ್ದಾರೆ. ಹಾಗೆ ಒಂದು ಅರ್ಜಿಯನ್ನು ಕೊಟ್ಟಮೇಲೆ 1968ನೇ ಡಿಸೆಂಬರ್ 28ರಲ್ಲಿ ಒಂದು ಆರ್ಡರಾಯಿತು. ಅದೇನೆಂದರೆ ಚಿತ್ರದುರ್ಗದಲ್ಲಿ ಹಿಂದೆ ಕೆಲಸಮಾಡುತ್ತಿದ್ದ ಆಡಳಿತ ಮಂಡಳಿಯನ್ನು ಇನ್ನೂ ಆರು ತಿಂಗಳು ಕಾಲ ಮುಂದುವರಿಸಲಾಗಿದೆ ಎಂದು ಆರ್ಡರಾಯಿತು. ಸರ್ಕಾರಕ್ಕೆ ಅಧಿಕಾರವಿದೆ ಅವರು ಯಾವ ಕಾಲದಲ್ಲಿ ಯಾವ ಕೆಲಸ ಬೇಕಾದರೂ ಮಾಡಬಹುದು,

(ಶ್ರೀ ಜಿ ದುಗ್ಗಪ್ಪ)

ಅಧಿಕಾರ ಇದೆ ಎಂದು ಮನಸ್ಸಿಗೆ ಬಂದಹಾಗೆ ಕೆಲಸ ಮಾಡುವುದಕ್ಕೆ ಹೊರಟಿದ್ದಾರೆ. ಅಧಿಕಾರಕ್ಕೆ ಎರಡು ಕಡೆಯೂ ಅಲುಗುಗಳಿವೆ. ತಮಗೆ ಆಗದವರು ಅಧಿಕಾರದಲ್ಲಿದ್ದರೆ ಅದನ್ನು ಮೊಟಕು ಮಾಡಬೇಕೆಂದು ಆ ಅಲುಗನ್ನು ಉಪಯೋಗಿಸಿದರೆ ಮುಂದೆ ಅದೇ ಅಲುಗು ಅದರ ತಲೆಯನ್ನೂ ಕೂಡ ಕತ್ತರಿಸೀತು ಎಂಬುದನ್ನು ಅವರು ಮರೆಯಬಾರದು. ಅದೇ ಅಲುಗು ಅದೇ ಶಸ್ತ್ರ ಅದೇ ಕಾನೂನು ಅವರ ತಲೆಗೂ ಕೊಡಲಿ ಪೆಟ್ಟನ್ನು ಹಾಕೀತೆಂಬುದನ್ನು ಅವರು ಚೆನ್ನಾಗಿ ನೆನಪಿನಲ್ಲಿ ಇಟ್ಟುಕೊಳ್ಳಬೇಕು. ವಿರೋಧ ಪಕ್ಷಗಳವರು ನ್ಯಾಯವಾಗಿ ಅಧಿಕಾರ ನಡೆಸಿದರೂ ಅವರು ಎರಡೂ + ಎರಡು ನಾಲ್ಕಾಗುತೆಂದರೆ ಅದು ಹೇಗೆ ಎಂದು ಕಾಂಗ್ರೆಸ್ಸಿನವರು ಪ್ರಶ್ನೆ ಮಾಡುತ್ತಾರೆ. ಆದರೆ ಅವರಿಗೆ ಪ್ರಿಯವಾಗಿರತಕ್ಕ ಜನರು ಅಧಿಕಾರದಲ್ಲಿರತಕ್ಕ ಕಡೆ ಅವರು ಎರಡೂ + ಎರಡು ಸೇರಿದರೆ ಐದಾಗುತ್ತದೆಂದರೂ ಹೌದೇನಪ್ಪಾ ಮಗೂ ಎನ್ನುವ ನೀತಿ ಸರಿಯಲ್ಲ. ಇವರು ಒಂದು ಕಣ್ಣಿಗೆ ಸುಣ್ಣ ಒಂದು ಕಣ್ಣಿಗೆ ಬೆಣ್ಣೆ ಹಚ್ಚತಕ್ಕ ನೀತಿಯನ್ನು ಅನುಸರಿಸುತ್ತಿದ್ದಾರೆ.

ನಾನಿನ್ನು ಹರಿಹರದ ವಿಚಾರಕ್ಕೆ ಬರುತ್ತೇನೆ: 1968ನೇ ಫೆಬ್ರವರಿ 28ನೇ ತಾರೀಖು ಹರಿಹರ ತಾಲ್ಲೂಕಿನಲ್ಲಿ ಪುರಸಭೆಯ ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಚುನಾವಣೆ ನಡೆಯುತ್ತದೆಂದು ಎಲ್ಲಾ ಸದಸ್ಯರಿಗೂ ಚುನಾವಣೆಯ ನೋಟೀಸನ್ನು ಕೊಡಲಾಯಿತು. ಆ ಚುನಾವಣೆಗಳು ಮಾರ್ಚಿ 5 ನೆಯ ತಾರೀಖಿನ ದಿನ ನಡೆಯುತ್ತದೆಂದು ತಿಳಿಸಲಾಗಿತ್ತು. ಯಾರೋ ಒಬ್ಬ ಮಹನೀಯರು ಮೂರನೆಯ ತಾರೀಖಿನ ದಿನ ಆ ಚುನಾವಣೆಯ ಅಧಿಕಾರಿಗಳಿಗೆ ಒಂದು ನೋಟೀಸನ್ನು ಕೊಟ್ಟು ನೀವು ಆ ಕ್ಯಾಲೆಂಡರ್ ಆಫ್ ಇವೆಂಟ್ಸ್‌ನ್ನು ವಿತ್‌ಡ್ರಾಮಾಡಬೇಕೆಂದು ಹೇಳಿದರು. ಅದರಂತೆ ಅವರು ಆ ಕ್ಯಾಲೆಂಡರ್ ಆಫ್ ಇವೆಂಟ್ಸ್‌ನ್ನು ವಿತ್‌ಡ್ರಾ ಮಾಡಲಾಗಿದೆ ಎಂದು ತಿಳಿಸಿದರು. ಹಾಲಿ ಜಾರಿಯಲ್ಲಿರತಕ್ಕ ಪೌರ ಸಭೆಯ ಸದಸ್ಯರಾದ ಶ್ರೀಮಾನ್ ಬೀರಪ್ಪನವರು 4ನೆಯ ತಾರೀಖು ಒಂದು ಕಾಗದವನ್ನು ಬರೆದರು. ಆ ಕಾಗದವನ್ನು ಓದುವುದಕ್ಕೆ ನನಗೆ ಕಳುಹಿಸಿದ್ದಾರೆ. ಆದರೆ ಅವರೇ, ಆ ಪತ್ರವನ್ನು ಓದಿದರೆ ಚೆನ್ನಾಗಿರುತ್ತೆಂದು ನಾನು ಅದನ್ನು ಹಾಗೆ ಕೈಬಿಟ್ಟಿದ್ದೇನೆ. ಆದರೆ ಆ ದಿವಸ ಮಾನ್ಯ ಸಿದ್ಧವೀರಪ್ಪನವರು ನನಗೆ ಒಂದು ಕಿವಿಮಾತನ್ನು ಹೇಳಿದ್ದರು–ಅದೇನು ಎಂದರೆ ತರುಣರಾದ ವೀರೇಂದ್ರ ಪಾಟೀಲರು ಇನ್ನು ಮುಂದೆ ಮುಖ್ಯ ಮಂತ್ರಿಗಳಾಗುತ್ತಾರೆ ದೇಶದ ಆಡಳಿತ ಸ್ವಲ್ಪ ಸುಗಮವಾಗಿ ನಡೆಯಬಹುದೆಂದು ಅವರು ನನಗೆ ಒಂದು ಕಿವಿಮಾತನ್ನು ಆ ಅಧಿಕಾರ ಬದಲಾವಣೆಯಾಗತಕ್ಕ ಕಾಲದಲ್ಲಿ ಹೇಳಿದ್ದರು. ಆದರೆ ಈ ದಿವಸ ಏನು ನಡೆಯುತ್ತಿದೆ ಎಂಬುದನ್ನು ಅವರೇ ನೋಡಲಿ ಎಂದು ನಾನು ಆ ವಿಷಯವನ್ನು ಈಗ ಬಹಿರಂಗ ಪಡಿಸುತ್ತಿದ್ದೇನೆ. ಆದರೆ ಶ್ರೀ ಬಿ. ಎಂ. ಪಾಟೀಲರು ನನಗೆ ಈ ವಿಷಯಗಳೊಂದೂ ಗೊತ್ತಿಲ್ಲವೆಂದು ಹೇಳಬಹುದು. ಆದರೆ ಅವರಿಗೂ ಈ ವಿಷಯಗಳೆಲ್ಲಾ ಗೊತ್ತಿದ್ದವೆಂದು ನಾನು ಊಹಿಸಬಲ್ಲೆ. ಹೀಗೆ ರಾಜ್ಯದಲ್ಲಿ ಆಡಳಿತ ನಡೆಯುವುದಕ್ಕೆ ಪ್ರಾರಂಭವಾದರೆ ಬಹಳ ಕಷ್ಟವಾಗುತ್ತದೆ. ಇದು ನುಂಗಲಾರದ ಮತ್ತು ಬಹಳ ವಿಷಪೂರಿತವಾದ ತುತ್ತು ಎಂಬುದು ಅವರಿಗೆ ಗೊತ್ತಿದ್ದರೂ ಮೇಲಿನವರು ಒತ್ತಾಯಕ್ಕೆ ಮಣಿದು ಇದರಲ್ಲಿ ಅವರು ಕೈಹಾಕಲೇಬೇಕಾಯಿತೆಂದು ನನಗೆ ಅನಿಸುತ್ತಿದೆ. ಈ ದಿನಸ ಈ ಮೈಸೂರು ರಾಜ್ಯದ ಆಡಳಿತವನ್ನು ಶ್ರೀಮಾನ್ ನಿಜಲಿಂಗಪ್ಪನವರ ಕಾಣದ ಕೈ ಅಧಿಕಾರ ನಡೆಸುತ್ತಿದೆ. ಅವರು ಬೆಂಗಳೂರಲ್ಲಿರದೆ ಡೆಲ್ಲಿಯಲ್ಲಿದ್ದರೂ ಅಲ್ಲಿ ಅವರು ಕೈ ಎತ್ತಿದರೆ ಬೆಂಗಳೂರಿನಲ್ಲಿರತಕ್ಕ ಮಂತ್ರಿಮಂಡಲವೂ ಕೈ ಎತ್ತುವುದು. ಅವರು ಕೈ ಆಡಿಸಿದರೆ ಇಲ್ಲಿಯು ಕ್ಯಾಬಿನೆಟ್ ಕೈ ಆಡಿಸುತ್ತದೆ. ಅಲ್ಲಿ ಅವರು ಕಾಲಾಡಿಸಿದರೆ ಇಲ್ಲಿ ಇದೂ ಕಾಲಾಡಿಸುತ್ತದೆ. ಸೂತ್ರಧಾರಿ ಅಲ್ಲಿ ಇದ್ದಾರೆ. ಬಿಹಾರದಲ್ಲಿ ಕೈಹಾಕಿ ಆ ಸೂತ್ರಧಾರಿಗೆ ಸೂತ್ರ ಕಿತ್ತುಕೊಂಡು ಹೋಗಿದೆ. ಇಲ್ಲಿ ನೀವು ಬೊಂಬೆಗಳಾಗಿದ್ದೀರಿ. ನೀವು ಬೊಂಬೆಗಳಂತೆ ಆಗಬೇಡಿ. ಮೂಕ ಗೊಂಬೆಗಳು ಕೈ, ಕಾಲು, ತಲೆ ಆಡಿಸುವಂತೆ ನೀವು ಆಗಬೇಡಿ. ಇದು ನಮ್ಮ ಜಿಲ್ಲೆಗೆ ಮಾತ್ರ ಸೀಮಿತವಾಗಿದೆಯೆಂದು ಹೇಳಿದರೆ, ಮಾನ್ಯ ಶ್ರೀ ಶಿವಪ್ಪನವರು ಹೇಳಿದರು, ನಮ್ಮ ಜಿಲ್ಲೆಯಲ್ಲಿಯೂ ಅದೇ ಹಣೆಯಬರಹವೆಂದು. ಈಗ ಮಂಡ್ಯಾದವರೂ ಅದೇ ಹೇಳಿದ್ದಾರೆ. ಮಾನ್ಯ ಶ್ರೀ ಸಿದ್ಧವೀರಪ್ಪನವರು ಹರಿಹರ ಮುನಿಸಿಪಲ್ ಕೌನ್ಸಿಲ್ ಪ್ರಸ್ತಾಪ ಮಾಡಿರುವ ಬಗ್ಗೆ ಸಂತೆಯಲ್ಲಿ ಮೊಂತ ಕದ್ದಹಾಗೆ ಮಾಡಬೇಡಿ. ಅದರ ಬಗ್ಗೆ ಕೂಡಲೇ ತಕ್ಕ ಕ್ರಮವನ್ನು ತೆಗೆದುಕೊಳ್ಳಬೇಕು. ನಾನು ಇನ್ನು ಹೆಚ್ಚಿಗೆ ಈ ಸಭೆಯ ಕಾಲವನ್ನು ತೆಗೆದುಕೊಳ್ಳುವುದಿಲ್ಲ.

ಕೊನೆಯದಾಗಿ ನನಗೆ ಸರ್ಕಾರದವರು ಸಮಾಧಾನಕರವಾದ ಉತ್ತರವನ್ನು ಕೊಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Sri K. H. PATIL (Gadag).—We have raised the discussion because it is a vital point. Let it not be understood that we have raised the

discussion for nothing. This debate is specially raised because there is an attempt on the part of the Government to kill democracy. As the Ministry has tried to misuse its power, it cannot be tolerated. Therefore, it is very necessary that every one of the Members who desire to participate in the debate, should be permitted to do so. I have a right to speak. I am not sitting here merely as a listener.

MR. DEPUTY SPEAKER.—Please refer to Rule 59. If the hon. member was keen on participating, then he could have sought previous permission.

SRI B. B. SAYANAK (Belgaum).—On similar occasions previously the Chair has allowed all persons who desired to participate and has not insisted on names of speakers being furnished in advance. Please take out the records relating to the debate on the Shiv Sena Activities. So many Members participated then. Why not in to-day's debate?

MR. DEPUTY SPEAKER.—I am strictly following the rules. The hon. Member Sri Patil could have asked for permission. Now I call upon Sri Siddaveerappa to commence his speech.

SRI K. H. PATIL.—Rule 59 does not come in the way of my Speaking now.

SRI H. SIDDAVEERAPPA (Harihara).—He may be permitted, Sir.

SRI S. SIVAPPA.—Sri K. H. Patil has made a request and he may be permitted.

MR. DEPUTY SPEAKER.—Sri Patil may send a requisition. I will consider.

SRI B. P. GANGADHAR.—The action of Government relating to Harihar Town Municipality has created a stir and therefore hon. Member Sri Patil may be permitted to speak.

MR. DEPUTY SPEAKER.—Under what Rule? Now, Sri Sidda-veerppa may commence his speech.

SRI H. SIDDVEERAPPA (Harihar).—Mr Deputy Speaker I thank you for having permitted me to speak a few words sitting on account of my indisposition.

I am indeed grateful to my friends who have given notice of this Motion, which primarily refers to the Harihar Town Municipal Council. Sir, I shall brefly narrate the facts of the case. I do not want to take much time of the House because I see a number of hon. Members wishing to contribute towards the discussion of this subject.

The elections to the Harihar Municipal Council took place in the month of December; if I remember correctly, it took place on the 9th December 1968. Thereafter, in accordance with the rules, the Deputy Commissioner issued a Notification dated 19th December 1968 giving intimation about the number of candidates that were declared as duly elected and that Notification dated 19th December 1968 appeared in the Mysore Gazette dated 26th December 1968. Thereafter, in pursuance of that Notification, the Deputy Commissioner issued an official D. O. letter

(SRI H. SIDDAVEERAPPA)

and asked the Tahsildar, in virtue of the power vested in him under the Act, to assume charge of the Municipal Council and then take further steps to elect the President and the Vice-President.

The Municipal Council, thus elected in the month of December, was duly reconstituted somewhere from 26th December 1968. Afterwards, curiously enough, as put by my learned friend Sri Duggappa, things are moving in a queer way. Once I remember my friend Sri Channabasappa telling that in our State there is no rule of law but it is a rule of whims and fancies to cater to the needs of the ruling class; more particularly, it is the rule of the coteries of the present A. I. C. C. President. The virtual ruler of Chitradurga District is his nephew, who is now the D. C. C. President. What did they do there? Somehow a Notification was issued after the Council was reconstituted on 26th December 1968. An Official Notification is issued from the Secretariat somewhere on 30th December 1968, wherein it is stated that the old Council is continued up to the end of February 1969. Curiously enough, it will be seen that only one Council is left out; that is, Jagalur, because they expected the Congress to get elected there. So far as Chitradurga is concerned, they summarily extended the term of the Council by six months. That is a different matter, to which I do not want to refer.

What happened after that? There was a conspiracy. Even though a Notification was issued, even though the Tahsildar was kept in charge from 1st January 1969, even though the Tahsildar was asked to proceed and take further steps to elect the President and the Vice-President of the newly constituted Council as required under the Act; elections were postponed. According to the Act, they shall have to be elected within a month after the Council is constituted. Afterwards, the old Council President, who belonged to the Congress and who was not elected, stated that the Government has extended the term of the Council up to February 1969 and, therefore, charge must be given back to him. The Tahsildar refused saying, I am already in charge and I have taken steps for the election of the President and the Vice-President, and I have put calendar of events. Then that man went to the High Court. The High Court refused to issue him a stay order. I do not wish to refer to it. A case of contempt of court has been filed against those that defied the court. There are as many as 5 to 6 writ petitions pending. So I do not want to enter into all that. When the elections of the President and the Vice-President have to take place in the month of February 1969, by some figment of imagination, the Government thinks that the High Court has issued a stay order and by a notification they say, the elections shall be stayed. I categorically state that the High Court has refused to issue a stay order. The High Court stated that they do not want to interfere at this stage. Once an agitation started, this Government extended the period up to 28th February 1969. They then again changed it to 15th January 1969. It looked as though they are a privy to create material to the opposite party so that they may find lacuna

and go to a court of law as and when they desired. Subsequently, when all these things were going on, that notification was withdrawn. The election did not take place and subsequently the Amildar issued another notification. I do not want to refer to all that in detail. This notification issued by the Amildar is the relevant notification. It is dated 15th February 1969. It says that the election to the offices of the President and Vice-President of the Town Municipal Council, Harihar will be held on 5th March and also sets forth the calendar of events. The nomination papers are to be delivered between 11 A.M. and 3 P.M. on 22nd February 1969 and scrutiny will be taken up at 3 P.M. on 23rd February 1969 and so on and so forth. Also on 25th February 1969 he gave a meeting notice to all the newly constituted members wherein he stated :

> "Please take note that the election of President and Vice-President will take place on 5-3-1969."

At this stage when the election had to take place on the 5th, one Municipal Councillor belonging to the opposite party gives a petition dated 4th March 1969 wherein he states as though he is a legal pundit. What he says is that this new Council is not constituted at all. When there is no new Council, how can you hold the election ? You will have to give fresh notice. Based on this, peremptorily he issues an order. You will be surprised whether a Tahsildar would embolden himself to issue an order like this unless it be that he is instructed from above or wherever it is. Now at every stage the High Court is approached and at every stage the matter goes to a court. Here, what does the other man do ? He takes an application on 4th. It is all a make-believe, a sham, a deliberate thing, a thing which has been done according to their whims and fancies and the way in which those people wanted to be acted upon. On 3rd March this man says :

> "Under the Mysore Municipalities (President and Vice-President) Election Rules, 1965, a notice in Form I should be issued only after the constitution or re-constitution of a Municipal Council".

Had the returning officer no brains when he first issued that notice ? There are gazette notifications to show that this was reconstituted in December 1968. There is not one order but there are umpteen orders to suit the needs of the times and the main purpose appears to be to see that somehow or other the election of the office-bearers does not take place. To give a reason for that, out of 19 members one party has 11 members and the Congress Party has 8 members. They want to see that somehow or other the group that is in majority is weaned away and that it is made to feel that in spite of their being in larger number they cannot get elected because the Government dance to their tune. The Government pass any order the congress likes. That is how these things have taken place. The same Tahsildar was coerced and forced to see that the notification he issued was withdrawn. Now, where do

(SRI H. SIDDAVEERAPPA)

we stand at this rate and do you know the kind of feeling you find in Harihar? Is it because of the sin of having a non-Congress man as a member there that they have to suffer? Is it because your party wants somehow or the other to penalise those who voted against the Congress? Even the ordinary rule of law does not seem to exist there. I had received a letter from a friend of mine but unfortunately I was ill and so I could not come and present it on that day. That is why I said that I am grateful to my friends. He writes on the 4th *i.e.*, on the day on which the Tahsildar serves the notice. I told them that when this matter comes up at the appropriate time during the general discussion of the budget I would expose it in all its nakedness, but unfortunately I was disabled.

ಹರಿಹರ

ತಾ. 4-3-69

ರಾ. ರಾ. ಶ್ರೀ ಎಚ್. ಸಿದ್ಧವೀರಪ್ಪನವರು, ಎಂ.ಎಲ್.ಎ. ಯವರಿಗೆ, ಸಪ್ರೇಮ ವಂದನೆಗಳು. ನಾವು ಈ ದಿವ್ಸ ನಿಮಗೆ ಟ್ರಂಕ್ ಕಾಲ್ ಮಾಡಿದ್ವೆವು. ನೀವು ಕಾಯಿಲೆಯಿರುವುದರಿಂದ ಮಾತನಾಡುವುದಕ್ಕೆ ಆಗಲಿಲ್ಲದ್ದಕ್ಕೆ ಈ ಕಾಗದವನ್ನು ಬರೆಯುತ್ತಿದ್ದೇನೆ. ಈ ಹಿಂದೆ ನೀವು ಅಸೆಂಬ್ಲಿಯಲ್ಲಿ ಮಾತನಾಡುತ್ತೇನೆಂದು ಹೇಳಿದಾಗ ಹಿಂದಿನ ವಿಷಯವೆಲ್ಲಾ ತಿಳಿಸಿದ್ದೆನು. ಈಗ ತಾ. 15-2-69ರಲ್ಲಿ ತಹಶೀಲ್ದಾರ್‌ರವರು ಹರಿಹರ ಪುರಸಭೆಯ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಚುನಾವಣೆಯ ಬಗ್ಗೆ ಕ್ಯಾಲೆಂಡರ್ ಹಾಕಿದ್ದರು. ಚುನಾವಣೆಯು ತಾ. 5-3-69ಕ್ಕೆ ನಿಗದಿ ಮಾಡಿ ನೋಟೀಸು ಕೊಟ್ಟಿದ್ದರು. ನಾವುಗಳು ಎಲ್ಲಾ ಸೇರಿಕೊಂಡು ಚುನಾವಣೆಗೆ ಸಿದ್ಧರಾಗಿದ್ದೆವು. ಏತನ್ಮಧ್ಯೆ, ನಿನ್ನೆ ದಿವಸ ತಾವು ಹಾಕಿದ್ದ ಚುನಾವಣೆಯ ವೇಳಾಪಟ್ಟಿಯನ್ನು ವಾಪಸ್ಸು ಪಡೆದಿರುವುದಾಗಿ ಆರ್ಡರ್ ಮಾಡಿ ಈ ದಿವಸ ನಮ್ಮ ಹಳ್ಳಿಗೆ ಜಾರಿ ಮಾಡಿದ್ದಾರೆ. ಟಿ. ಜಯದೇವಪ್ಪನಿಂದ ಅರ್ಜಿ ದಾಖಲು ಮಾಡಿಸಿ ಈ ರೀತಿ ಆರ್ಡರ್ ಮಾಡಿರುತ್ತಾರೆ. ಪ್ರಜಾಪ್ರಭುತ್ವದ ಕಗ್ಗೊಲೆ ಇಲ್ಲಿ ಕಾಂಗ್ರೆಸ್‌ನವರಿಂದ ಮತ್ತು ಅಧಿಕಾರಿಗಳಿಂದ ನಡೆಯುತ್ತಾ ಇದೆ. ನಾವುಗಳು ಊರಿನಲ್ಲಿ ಮುಖ ಎತ್ತಿಕೊಂಡು ಓಡಾಡುವುದು ಬಹಳ ಕಷ್ಟವಾಗಿರುತ್ತದೆ. ಜನರೆಲ್ಲಾ ನಾವುಗಳು ಮತ್ತು ನಮ್ಮ ಪಾರ್ಟಿಯನ್ನು ಹೇಡಿಗಳೆಂದು ಮೂದಲಿಸುತ್ತಿದ್ದಾರೆ. ನಮ್ಮಗಳ ಕಷ್ಟಸುಖಗಳನ್ನು ಯಾರು ಕೇಳುವವರಿಲ್ಲ. ಒಟ್ಟಿನಲ್ಲಿ ಪಾರ್ಟಿ ಕಟ್ಟಿಕೊಂಡು ಇಲ್ಲಿಯವರೆಗೂ ಹೆಣಗುತ್ತಾ ಬಂದಿರುತ್ತೇವೆ. ಇದೇ ರೀತಿ ಮುಂದುವರೆದರೆ ಊರಿನಲ್ಲಿ ನಮಗಾಗಲಿ, ನಮ್ಮ ಪಾರ್ಟಿಗಾಗಲಿ ಮರ್ಯಾದೆ ಸಿಗುವಂತಿಲ್ಲ. ದುರದೃಷ್ಟವಶಾತ್ ಈ ಸಮಯದಲ್ಲಿ ನೀವು ಕಾಯಿಲೆ ಬಿದ್ದಿರುವುದು ನಮ್ಮ ದುರ್ದೈವ. ನಾವು ಮುಂದುವರಿಯುವ ಬಗೆಯೇ ತಿಳಿಯದಾಗಿದೆ. ಸಣ್ಣ ವಿಷಯವಿದ್ದರೂ ಕಾಂಗ್ರೆಸ್‌ನವರು ಸೇರಿಕೊಂಡು ಕಿರುಕುಳ ಕೊಡುತ್ತಿದ್ದಾರೆ. ನೀವು ಈ ವಿಷಯದಲ್ಲಿ ಮುಂದೆ ಕ್ರಮ ತೆಗೆದುಕೊಳ್ಳಬೇಕೆಂದು ಕೋರುತ್ತೇವೆ.

ಈ ಕಾಗದದ ಜೊತೆಗೆ ತಹಶೀಲ್ದಾರರವರು ಹಾಕಿದ್ದ ಚುನಾವಣೆಯ ವೇಳಾಪಟ್ಟಿ ಮತ್ತು ಮೀಟಿಂಗ್ ನೋಟೀಸ್ ಕಾಪಿಯನ್ನು ಮತ್ತು ಸದರಿ ಚುನಾವಣೆಯ ವೇಳಾ ಪಟ್ಟಿಯನ್ನೂ ತಹಶೀಲ್ದಾರರವರು ವಾಪಸ್ಸು ಪಡೆದ ಆರ್ಡರ್ ಮಾಡಿದ ಕಾಪಿಯನ್ನೂ ಲಗತ್ತಿಸಿರುತ್ತೇನೆ. ತಾವು ಈ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರೆಂಬುದನ್ನು ಈ ಕಾಗದ ಮುಟ್ಟಿದ ಕೂಡಲೇ ನನಗೆ ಪತ್ರ ಬರೆಯಿರಿ ಮತ್ತು ಈ ವಿಷಯವನ್ನು ನಮ್ಮ ವಕೀಲರಾದ ಶ್ರೀ ಆರ್. ಎಂ. ಪಾಟೀಲರವರಿಗೂ ತಿಳಿಸಿ ಮುಂದೆ ಏನು ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸಬೇಕಾಗಿ ಕೋರುತ್ತೇನೆ. ಅವಶ್ಯಕತೆಯಿದ್ದು ನಾವು ಅಲ್ಲಿಗೆ ಬರುವುದಾದರೆ ನಮಗೆ ಕಾಗದ ಬರೆಯಿರಿ. ನಿಮ್ಮ ಕಾಯಿಲೆ ಬೇಗ ಗುಣವಾಗಲೆಂದು ದೇವರಲ್ಲಿ ಪ್ರಾರ್ಥಿಸುತ್ತೇನೆ. ಬಹಳ ಖೇದ ಮನಸ್ಸಿನಿಂದ ಈ ಕಾಗದ ಬರೆದಿರುತ್ತೇನೆ. ದಯವಿಟ್ಟು ಕ್ಷಮಿಸಿರಿ. ಇದರ ಜೊತೆಗೆ ಕಳುಹಿಸಿದ ದಾಖಲೆ ಪತ್ರಗಳನ್ನು ಜೋಪಾನವಾಗಿಡಬೇಕೆಂದು ಕೋರುತ್ತೇನೆ. ಅವುಗಳು ಮುಂದೆ ಕೋರ್ಟಿಗೆ ಬೇಕಾಗಬಹುದು.

ಇಂತೀ ಸಪ್ರೇಮ ವಂದನೆಗಳು

ನಿಮ್ಮ ಬಂಧು

ರಾಜು.

This was our candiate to the presidentship and they did not want him to come up because he behongs to the backward community. He has mentioned the name of Sri Nijalingappa as one of those whom these people have requested and he, according to them, has put in a word to the Tahsildar. Personally, I have no doubt that a Tahsildar, a petty officer, cannot embolden himself to say that. According to the Municipal Law, once the calendar of events is put up, nobody has a right to interfere. Even the High Court has given a decision to that effect.

6-30 P.M.

When such is the position, is that the way the Government should behave towards us and act in that manner? I would like to know what sin Harihar people have committed? It is an industrial complex town and there the people are agitated. What would happen if they had taken law into their hands and entered into the Municipal Council Office? Do you want us to take the law in our hands or do you want the rule of law to prevail? So, may we understand whether this trickery has been played on any one of the Municipal Councils? You have disabled the elected people to have their council although the act is amended. Is that the way administration should run? Of course, my friend Sri B. M. Patil, Minister for Municipal Administration, came there and had discussion. He is a new man, and I hope by this time he must have acclimatised with the thing. Trouble started in the Secretariat, because there are hand-maids of these Congress people. If they want some order to be issued, they issue the order. You have no control over your Secretariat. When once they issue an order, how can you change it? When once the Municipal Council has been reconstituted on 26th December 1968, how dare you pass another order on 30th December 1968, reviving the old Municipal Council? Is that the way you should act? Have you acted like this where your congressmen are in a majority? You have acted like this only where congressmen are not in a majority. I feel so much about it. I thought the era of Sri S. Nijalingappa's groupism has gone as soon as he went out. Now, he may be even paving his way to come back. That is a different matter; I do not want to say anything about it now. The present Chief Minister, when he came to power said: "give me 6 months' time and I will give a new turn: there will be change of rule of law". But what do we find today? I do not want to say anything except stating that he is simply caught in the arms of his adopted father. So far as Chitradurga is concerned, he is not allowed to act independently. You please go and see the administration here of these things. I do not want to go into details; I will take an opportunity and speak about it at the appropriate time. I am only sorry and so sad that my expectations have been belied and we do not see any change in the trend of administration in Chitradurga District. If at all, we see it is for the worse. The only man that rules Chitradurga is the gentleman, the D. C. C. President. We have made that point abundantly clear. What

(SRI H. SIDDAVEERAPPA)

shall we do and where shall we ask when the Government dances to their tunes? I remember to have read that the T.C.C. President of Tamil Nadu having said at Madras that people must now have their own police force to get things done by their own method of safeguarding themselves. Macaulay also anticipated that Government of this type would come. In the I. P. C. there is ample provision, wherein we are entitled to have our own self-defence so far as self-defence of person and property is concerned, we have to do it. I never expected this. My heart weaps when I say that these things are repeated. I owe a duty to my constituency. Already, my image has suffered. I expected that these people would give a better Government. But, I confess that I do not see any change at all. Wherever congressmen are in a majority they have one standard and in other places they have another standard. The Hon. Chief Minister once stated that he has been treating everybody alike. But, I have got a number of instances that what he said is not true to facts. If you want to supersede the Harihar Municipal Council, do it by one stroke of the pen. Do not kill us inch by inch. We have already suffered quite a lot. Going to a Court of Law is no joke. In fact, Sri K. Puttaswamy, Hon. Minister for Labour, had the grace to accept his defeat and to allow the opposite party to come to power in Mysore City. By this method, you want to erase the impression of this discredited leader and tell the people, 'the Minister is all powerful, you cannot have your way'. You do not want to allow other parties to come to power. Please say whether that is your rule or you apologize to this House for the way in which you have acted in this manner. Twice you have postponed the elections with any reason or rhyme. I owe a duty to my constituency. My people will spit on me if I go there and show my face to them and tell me: 'Is it for this purpose that we elected you'? I am prepared first to go to jail. Please take any action that is necessary to safeguard our interests, because it is important to accept the rule of law. I want a categorical answer from the Hon'ble Minister, and I would like to know why he did it, why so many times the notices were set aside although the election took place on the 5th. The Tahsildar could have said: 'Go to a Court of Law'. Already, there are four or five writ petitions pending. When such is the case, why did you do it? When did that blooming man realise that he committed a mistake? Therefore, I want to know whether there is rule of law in Mysore State or not. If you have one rule for yourselves and another rule for the opposite party, say so. You want to show that you are all-powerful; never mind what happens! I feel hurt beyond measure, and the way in which this Government have done it clearly shows–many people may say: 'Go to a Court of Law' going to a Court is no joke your partiality towards opposite parties. It is much better to use our own power and see that a knock is given on the head. I personally feel that this Government is not even worth to be called a civilised Government. The Hon'ble Minister for Municipal

Administration must be graceful enough to admit his mistake. He must be careful enough to tender an apology, otherwise, I throw a challenge, 'You better supersede the entire Municipal Council'. It does not lie in your power to do so.

With these words, I strongly condemn the action of this Government and the way in which they have dealt with this matter, and conclude.

†SRI K. H. PATIL.—Sir, to-day we are hearing a story which is really a heart-rending one. I am glad that our leader Sri Siddaveerappa has learnt what the present Government is. Unfortunately due to his illness he was away from this House for a number of days and I think that is the reason for his not knowing the other illegal and undemocratic acts that are being done by this Government. Sir, I am of the opinion, that this Government is misusing their powers to put down others in every possible way. I ask Hon. Minister Sri B. M. Patil whose history so far has been a good one, not to become a victimised person by acts of these types.

Sir, the devil power that exists at Harihar is an instance to alarm hon. Sri B. M. Patil. Here is a chance for him to shine or otherwise. Rules are there before him. He is a learned man. Let him make use of the rules and Act to the best advantage of the people. If he acts in the right way, we are here to openly support him. If rules are violated and power is misused we are here to oppose. If one is to abuse the power and position he is holding, then where is democracy ? Suppose a police constable says, look here, I have a weapon and I am utilising it for my self-defence, can I not call upon my constituents to use the same weapon to suppress the other. I would like to know from the Hon. Minister for Parliamentary Affairs Sri Puttaswamy, why is he silent when illegal acts are being committed ? Is there any provision in the rules for the officers to set aside the election programme ? I remember one of the judgements of the High Court which stated that 'no power on earth can cancel the election programme' and at best only an Appellate authority could cancel the elections provided it is void etc. Even in cases of many regulated market committees, so many notifications have been issued and cancelled. The authorities are dare enough to cancel the notifications in many cases. I would rather appeal to hon. Sri B. M. Patil to examine the matter thoroughly. I invite his kind attention to rule 19 wherein it is clearly stated that the power exercisable by the Election Officer shall be subject to the superintendence and directions of the State Government. When once the election officer has notified the programme of elections, this Government cannot cancel it. The only remedy the Government has, is to go to the Court of Law, in case the election is invalid or viod for any reasons best known to the people. I think Sir, the Government could have as well gone to the Appellate authority *i,e.*, the District Judge. If this very Government is going to exercise the powers of the District Judges, then where is the law, where is justice and where is democracy ? Therefore, I am asking Hon, Minister

(SRI K. H. PATIL)

Sri B. M. Patil and Hon. Chief Minister to examine these matters thoroughly. The Tahsildar might be knowing that Mr. Siddaveerappa may be sitting in the opposition bench to-day, but to-morrow he may take the place of Mr. B. M. Patil and therefore he would say before me that what can we do; these Ministers come and interfere and we have to do these things. This kind of interferences would damage their own dignity. When we hold a post of responsibility, we must also act respectably as long as we hold that post. Whenever they say so, the officers will get a low image and Mr. Siddeveerappa is to be put down, his constituency will suffer. There are many other ways by which Government can get things done. I would appeal to Hon. Sri B. M. Patil not to yield to the Ministry. Let him be dare enough to say to his colleagues, if you are to interfere in my administration, here is my resignation. Sir, now that the election programme has been cancelled will it be enough if a new election schedule is permitted to be prepared and issued? In my humble opinion, I would say if the Government wants to be free from criticisms, let them hold an enquiry and suspend the officers who have abused their powers, and tell hon. Sri Siddaveerappa that if he is pained very much at this incident, look here, we are issuing instructions to hold elections immediately in your constituency. Here is an officer who can be hauled-up black and white, if he really acted contrary to the powers vested in him. I hope Sri B. M. Patil will follow this tradition and I take this opportunity to say that this is not the solitary instance where this Government is killing democracy. In Gadag also the Government is indirectly postponing the elections by putting telephone and trunk-calls with the intention to see that the Opposition do not come to power. I take this opportunity to warn this Government that the time has come when people will rise against this Government and, therefore, let the Government mend things in time.

†SRI D. B. KALMANKAR (Aland).—Mr. Speaker, Sir, it is really sad that such a thing should have taken place in the constituency of Sri Siddaveerappa. It was very unusual for Sri Siddaveerappa to use such very strong words as he has done now. From the facts narrated it is very clear that the poor Tahsildar could not have done what he did in the present case unless there were some persons who dictated terms to him. It is really strange that when the election was scheduled to take place on 5th March 1969 some Councillor of the Congress Party puts in a petition on the 4th and thereupon the Tahsildar acts. That means there is no rule of law and whatever is happening is at the dictates of the Congress bosses in the district places as they are powerful because the present Government headed by the present Chief Minister is giving them a very long rope to act as per their whims and fancies and so these officers have become tools in their hands. It is all right to say that we expect rule of law, but when we look round this is what we find everywhere not only in Harihar but in other places also. In my taluk

there is a Marketing Society. The election to that Society is being postponed beca se they are afraid that if election takes place the President who will be elected will belong to the Opposition. If such things go unchecked, then my submission is that people will have no faith in democracy. I request the Minister for Municipal Affairs who is a young man with a promising future to take very stern action in this case and see that the Tahsildar concerned is brought to book. Not only that, if there is any interference by any Minister or Chief Minister in this matter, he should not submit to it, but he should see that the rule of law succeeds. He should see that things are set right without giving any scope to anybody to tamper with it.

† SRI B. B. SAYANAK.—Sir, I strongly condemn the policy of the Mysore Government in respect of the Harihar Mucicipality and I strongly support our great leader Sri Siddaveerappa in this respect. We are in democracy and in democracy there must be two parties. In Harihar Municipality out of 19 councillors, 11 are from the non-congress parties. I cannot understand why the Government is not allowing the non-congress party people to rule. They seem to think that the nation belongs to the Congress and the Congress alone should rule the nation. It is this attitude which has brought the country to this ruinous position. I strongly warn the Government that if the nation is not ruled according to the law of the Constitution, a day will come when the Congress Party will lose all their seats in the Parliament and in the States. Therefore, I strongly support Sri Siddaveerappa and request the Minister for Municipal Affairs to conduct the elections in the Harihar Municipality.

† SRI B. P. GANGADHAR.—Sir, I know Mr. Patil. I had some conversation with him in some context. He is a very nice man. He looks to be a very impartial person, but in the present context I think there must be somebody else's hand in this more than his, and that hand must have been very long. Even though the person is somewhere, his hand is too long to interfere with every department. Rule of law and democracy and democratic principles must go hand in hand. The Congress have been declaring time and again that they are the pioneers of democracy and that it is on account of them that democracy is being maintained in India. They have been unequivocally declaring that Communists are un-democratic, that other parties are undemocratic and that the Congress alone can maintain democracy in this country and no other party can do it. I submit that the democracy run by these people is no democracy at all. It is only by the grace of God that they are more in number in this House and that has given them the right to form the Ministry. But that does not mean that rule of law should not be respected by them and that everything should be done according to their whims and fancies. I submit that what they are doing is cold-blooded murder and massacre of democracy in our State. It may be a municipality here or some society as pointed out by my friend Sri Digambar Rao. We have been seeing this everywhere be it a municipality, a village panchayat or a society or a bank. This interference

(SRI B. P. GANGADHAR)

of the Minister and the Congress bosses is everywhere and so democracy in our country has suffered a cold-blooded murder. I submit that if this is not stopped, there will not be any democracy in our State.

† ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಸ್ವಾಮಿ, ಹರಿಹರ ಪೌರಸಭಾ ಕ್ಷೇತ್ರದಲ್ಲಿ ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಚುನಾವಣೆಯಾಗದಂತೆ ಮಾಡಲು ಕೆಲವು ಮಂತ್ರಿಗಳು ಪ್ರಯತ್ನ ಪಟ್ಟು ಅದನ್ನು ಮುಂದಕ್ಕೆ ಹೋಗುವಂತೆ ಮಾಡಿದ್ದಾರೆ ಎನ್ನುವ ಒಂದು ಸೂಚನೆಯನ್ನೂ ಕಳುಹಿಸಿದ್ದೆ. ಅಧ್ಯಕ್ಷರು ಇದಕ್ಕೆ ಒಪ್ಪಿಗೆ ಕೊಡಲಿಲ್ಲ. ಈಗ ಇದರ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ. ಆಳುವ ಪಕ್ಷದ ಸದಸ್ಯರಾದ ಶ್ರೀಮಾನ್ ಅಗ್ನಿಹೋತ್ರಿಯವರು ಹರಿಹರ ಮುನಿಸಿಪಾಲಿಟಿಯ ಚುನಾವಣೆಯನ್ನು ಮುಂದೂಡಲು ಅಲ್ಲಿ ಅಂತಹ ಕಷ್ಟಪರಿಸ್ಥಿತಿಗಳು ಬಂದಿರಬಹುದು. ಇದಕ್ಕಾಗಿ ಈ ಹೌಸ್‌ನಲ್ಲಿ ಇಷ್ಟು ಕಾಲ ಚರ್ಚೆ ಮಾಡುವುದು ಸರಿಯಲ್ಲವೇ ಎಂದು ಹೇಳಿದರು. ಇದರಲ್ಲಿ ಭಿನ್ನಾಭಿಪ್ರಾಯಗಳಿರಬಹುದು. ಈ ವಿಷಯದಲ್ಲಿ ರಾಜ್ಯಾಂಗದಲ್ಲಿ ರಕ್ಷಣೆ ಕೊಟ್ಟು ಈಗ ಇಲ್ಲಿ ಮಾತನಾಡಲು ಒಂದು ಅವಕಾಶ ಸಿಕ್ಕಿದೆ. ಇದೇ ಮಾನ್ಯ ಸಭೆಯಲ್ಲಿ ಹರಿಹರದ ಪ್ರತಿನಿಧಿಗಳಾಗಿರತಕ್ಕ ಮಾನ್ಯ ಸದಸ್ಯರಾದ ಶ್ರೀಮಾನ್ ಸಿದ್ಧವೀರಪ್ಪನವರು ಅವರಿಗೆ ಆಡಳಿತದ ಅನುಭವವೂ ಇದೆ. ತಮ್ಮ ಗದ್ಗದ ಕಂಠದಿಂದ ಅವರ ಆರೋಗ್ಯ ಇಲ್ಲದಿದ್ದರೂ ಜೀವದ ಹಂಗು ತೊರೆದು ಇಂದು ಇಲ್ಲಿಗೆ ಬಂದಿದ್ದಾರೆ.

7-00 P.M.

ನಾವು ಮಾತನಾಡುವಾಗ ಮಾನ್ಯ ಮುಖ್ಯಮಂತ್ರಿಗಳು ಡೆಲ್ಲಿಯಿಂದ 5-30 ಕ್ಕೆ ವಿಮಾನದಲ್ಲಿ ಬರುತ್ತಾರೆ, ಅವರಿಗೆ ಅರ್ಧ ಗಂಟೆ ಸಮಯ ಕೊಡಬೇಕು, ಈ ದಿವಸ 6 ಗಂಟೆಗೆ ಈ ಚರ್ಚೆಯನ್ನು ಆರಂಭ ಮಾಡಬೇಕು ಇತ್ಯಾದಿ ಇತ್ಯಾದಿ ಒಳಗಡೆ ನಡೆದ ಚರ್ಚೆಯನ್ನು ನಾನು ಇಲ್ಲಿ ಹೇಳಬೇಕಾದುದಿಲ್ಲ. ಆದರೆ ಮಾನ್ಯ ಮುಖ್ಯಮಂತ್ರಿಗಳು ಎಲ್ಲಿದ್ದಾರೋ, ಯಾವ ಉದ್ದೇಶವನ್ನಿಟ್ಟುಕೊಂಡು ಯಾವ ಕೆಲಸದಲ್ಲಿದ್ದಾರೋ ಗೊತ್ತಿಲ್ಲ. ಬಹುಶಃ ಅವರಿಗೂ ಕೂಡ ಇದು ಒಂದು ಸಣ್ಣ ವಿಷಯ ಎನ್ನಿಸಿರಬಹುದು. ಆದರೂ ಸಿದ್ಧವೀರಪ್ಪನವರ ಬಾಯಿಂದ ಕೇಳಿದ್ದೇವೆ, ಅಲ್ಲಿ ಅಧ್ಯಕ್ಷರಾಗಲು ಸಿದ್ಧನಾಗಿದ್ದ ಮನುಷ್ಯನ ಭಾವನೆ, ಹರಿಹರ ಜನತೆಯ, ಮಾನ್ಯ ಸಿದ್ಧವೀರಪ್ಪನವರಿಗೆ ಬೆಂಬಲ ಕೊಟ್ಟಿರತಕ್ಕ ಜನರ ಒಳಗುದಿ, ನೋವು, ವ್ಯಥೆ ಎಷ್ಟರಮಟ್ಟಿಗೆ ಇದೆ ಎಂದು. ಇಂಥವು ನೂರಾರು ಇವೆ. ಮಾನ್ಯ ಅಗ್ನಿಹೋತ್ರಿಯವರು ಗಮನಿಸಬೇಕು. ಧಾರವಾಡ ಹುಬ್ಬಳ್ಳಿ ಗತಿ ಏನಾಯಿತು, ಅಲ್ಲಿ ಸೇರಿಸಿರುವ ಹಳ್ಳಿಗಳ ಗತಿ ಏನಾಯಿತು, ಏನಾಗಿದೆ ? ಅದೇ ರೀತಿಯಲ್ಲಿ ಪಂಚಾಯಿತಿಗಳಿಗೆ ಚುನಾವಣೆಯಾಗಿ ತಿಂಗಳಾನುಗಟ್ಟಲೆ ಅವರಿಗೆ ಚಾರ್ಜೇ ಕೊಟ್ಟಿಲ್ಲ. ಅನೇಕ ಕಡೆ ಎಕ್ಸ್‌ಟೆಂಡ್ ಮಾಡಿದ್ದಾರೆ, ಸೂಪರ್‌ಸೀಡ್ ಮಾಡಿದ್ದಾರೆ, ಬೇಕಾದಷ್ಟು ಮಾಡಿದ್ದಾರೆ. ಒಂದೊಂದು ಸಲ ಸರ್ಕಾರ ಬಹಳ ಅನಿವಾರ್ಯ ಪರಿಸ್ಥಿತಿಯಲ್ಲಿ ಅಂಥ ಕೆಲವು ಅಧಿಕಾರಗಳನ್ನು ಇಟ್ಟುಕೊಳ್ಳಬೇಕು ಎಂದು ನಾವು ಕಾನೂನು ಬಂದಾಗ ಅನ್ನುತ್ತ ಎಂದು ಹೇಳಿದ್ದೇವೆ. ಕೆಲವು ಅನಿವಾರ್ಯ ಪ್ರಸಂಗಗಳು ಬರಬಹುದು, ಸರ್ಕಾರ ಅಂದಮೇಲೆ ಸ್ವಲ್ಪ ಹೆಚ್ಚು ಅಧಿಕಾರ ಅವರ ಕೈಯಲ್ಲಿರಬೇಕು, ಇಲ್ಲದೆ ಇದ್ದರೆ ಅರಾಜಕತೆ ಉಂಟಾಗಬಹುದು, ಅಪಾಯಗಳುಂಟಾಗಬಹುದು, ಜೀವಕ್ಕೆ, ಆಸ್ತಿಪಾಸ್ತಿಗೆ ಹಾನಿಯುಂಟಾಗಬಹುದು ಎಂದು ಕೆಲವು ಅಧಿಕಾರಗಳನ್ನು ಕೊಡಲಾಗಿದೆ. ಇಲ್ಲದೆ ಇದ್ದರೆ ಪೋಲೀಸರು ಷೂಟ್ ಮಾಡುವ ಅಧಿಕಾರವನ್ನು ಯಾರು ಕೊಡುತ್ತಿದ್ದರು ? ಸಬ್ ಇನ್‌ಸ್ಪೆಕ್ಟರಿಗೆ ಷೂಟ್ ಮಾಡುವ ಅಧಿಕಾರ ಯಾರು ಕೊಡುತ್ತಿದ್ದರು ? ಅವನೇನು ಬದುಕಿಸಬಲ್ಲನೇ, ಷೂಟ್ ಮಾಡಿ ಮನೆಗೆ ಹೋಗುವುದಕ್ಕೆ ? ಇವನ್ನು ತಾವೆಲ್ಲರೂ ವಿಚಾರ ಮಾಡಬೇಕು.

15 ಜನರಲ್ಲಿ 11 ಜನ ಗೆದ್ದರು, ಬಹಳ ಕಷ್ಟಪಟ್ಟು ಗೆದ್ದರು. ಅವರಿಗೆ ಕುರ್ಚಿಯಲ್ಲಿ ಕುಳಿತು ಕೊಳ್ಳುವುದಕ್ಕೆ ಬಿಡುವುದಿಲ್ಲ ಎಂದರೆ ಎಲ್ಲಿಗೆ ಹೋಗಬೇಕು ? ಮತ ಕೊಡಿ ಎಂದು ಕೇಳುವುದು ಪ್ರಜಾಪ್ರಭುತ್ವದ ಬುನಾದಿ. 15 ರಲ್ಲಿ 8 ಇದ್ದವನು ಗೆದ್ದ, 7 ಇದ್ದವನು ಸೋತ ಎಂದು ತಾನೇ. ಮರ್ಯಾದೆಯಿಂದ 8 ಇದ್ದವನಿಗೆ ಕುರ್ಚಿ ಬಿಡಬೇಕು. ಸಹಕಾರವನ್ನು ಕೊಡಿ ಎಂದು ಕೇಳಿದರೆ ಯಾವುದಕ್ಕೆ ಸಹಕಾರ ಕೊಡಬೇಕು ? ಲೂಟಿ ಮಾಡುವುದಕ್ಕೆ ಸಹಕಾರವೇ, ಕೊಲೆ ಮಾಡುವುದಕ್ಕೆ ಸಹಕಾರವೇ, ಪ್ರಾಣ ಹಾನಿ ಮಾಡುವುದಕ್ಕೆ ಸಹಕಾರವೇ ! ಸಹಕಾರ ಎಂದರೆ ಯಾವುದಕ್ಕೆ ? ಮೂಲಭೂತವಾಗಿ ವಿಚಾರ ಮಾಡಬೇಕಾಗುತ್ತದೆ. ಸಹಕಾರ ಎಲ್ಲದಕ್ಕೂ ಕೊಡುವುದಕ್ಕಾಗುತ್ತ

ದೆಯೇ? ಕೊಲೆ, ಸುಲಿಗೆ ಮತ್ತು ಇತರ ಕೆಲಸಗಳಿಗೆ ಸಹಕಾರ ಕೊಡುವುದಕಾಗುತ್ತದೆಯೇ? ಯಾವ ವಿರೋಧ ಪಕ್ಷದವರೂ ಕೊಡುವುದಕ್ಕೆ ಆಗುವುದಿಲ್ಲ, ಯಾವ ವಿರೋಧ ಪಕ್ಷದ ಸದಸ್ಯರೂ ಕೊಡುವುದಕ್ಕೆ ಆಗುವುದಿಲ್ಲ. ಒಳ್ಳೆಯ ಕೆಲಸವನ್ನು ಇಲ್ಲಿ ಮಾಡುತ್ತೇವೆ, ಹತ್ತು ಜನರ ಕಲ್ಯಾಣ ಯಾವ ಕೆಲಸದಿಂದ ಆಗುತ್ತದೆ ಅದಕ್ಕೆ ನಾವು ಅಡ್ಡಿ ಬಂದಾಗ ನೀವು ಪ್ರಶ್ನೆ ಮಾಡುವುದಕ್ಕೆ ಎಲ್ಲ ಹಕ್ಕು ಇರುತ್ತದೆ; ಒಳ್ಳೆಯ ಕೆಲಸಕ್ಕೆ ನೀವು ಅಡ್ಡಿ ಬರುತ್ತೀರಿ ಎಂದು. ಅದಕ್ಕೆ ನಾವು ಒಪ್ಪಿಕೊಳ್ಳುತ್ತೇವೆ. ಆದರೆ, ಇದು ಮೈಸೂರು ಗೆಜೆಟ್, ಸರ್ಕಾರದ ಪತ್ರ. ಇದರಲ್ಲಿ ಏನು ಬರೆದಿದೆ? ಓದಿದರೆ ಸ್ವಲ್ಪಮಟ್ಟಿಗೆ ಬೇಜರಾು ಆಗಬಹುದು. ಇದರಲ್ಲಿ ಏನೂ ಇಲ್ಲ.

> "The term of office of Councillors of Harihar Municipality in Chitradurg District...........the elections to the said Municipal Councillors have not been completed and whereas...........
> By Order and in the name of the Governor of Mysore."

ನಿಮ್ಮ ಹೆಸರೂ ಇಲ್ಲ, ಮಂತ್ರಿಗಳ ಹೆಸರೂ ಇಲ್ಲ. ರಾಜ್ಯಾಂಗದಲ್ಲಿ ಬರೆದು ಇಟ್ಟಿದ್ದಾರಲ್ಲ, ಅವರು, ಅವರ ಸರ್ಕಾರಕ್ಕೆ ನಾನು ಹೇಳಿದ್ದು. ನಾವು ರಾಜ್ಯಾಂಗ ರಚನಾ ಸಮಿತಿಯನ್ನು ಬಹಿಷ್ಕರಿಸಿದ್ದೆವು, ಅದು ನೆನಪಿರಲಿ. ಇದು ಎಷ್ಟು ಪರಿಹಾಸ್ಯದ ಆಡಳಿತ, ರೂಲ್ ಆಫ್ ಲಾ, ಕಾನೂನು ಆಡಳಿತ! ಆದಕ್ಕೆ ನನಗನ್ನಿಸುತ್ತದೆ, ಈ ಸಭೆಯಲ್ಲಿ ನನಗನ್ನಿಸುತ್ತದೆ ಇವೊತ್ತು ಈ ದೇಶವನ್ನು ಯಾವ ಅಧಿಕಾರಿಗಳು ಇಷ್ಟು ಅವನತಿಗೆ ತಂದರೋ ಅದೇ ಅಧಿಕಾರಿಗಳು ಕೆಲವು ಕಾಲ ಈ ದೇಶವನ್ನು ರಕ್ಷಿಸಬಲ್ಲರು, ಬೇರೆಯಾರಿಂದಲೂ ಸಾಧ್ಯವಿಲ್ಲ.

ಈ ತರಹ ಆರ್ಡರ್ ಇಷ್ಯೂ ಮಾಡುವುದು ಸರ್ಕಾರದ ಲಕ್ಷಣವಲ್ಲ, ಜವಾಬ್ದಾರಿ ಸರ್ಕಾರದ ಲಕ್ಷಣವಲ್ಲ, ಮಂತ್ರಿಯವರಿಗೆ ಮರ್ಯಾದೆ ತರುವುದಿಲ್ಲ. ಜನ ಆಡಿಕೊಳ್ಳುತ್ತಾರೆ, ತೀರ ಆಡಿಕೊಳ್ಳುತ್ತಾರೆ. ಶ್ರೀಮಾನ್ ಸಿದ್ಧವೀರಪ್ಪನವರು ಬಹಳ ಕಟುವಾಗಿ ಹೇಳಿದ್ದಾರೆ. ನನಗೆ ಆಸೆ ಇತ್ತು ಮಾನ್ಯ ಶ್ರೀ ವೀರೇಂದ್ರ ಪಾಟೀಲರು ಅವರ ಭಾಷಣವನ್ನು ಕೇಳುತ್ತಾರೆ ಎಂದು. ಮಾನ್ಯ ಸಿದ್ಧವೀರಪ್ಪನವರಿಗೆ ಆರೋಗ್ಯವಿಲ್ಲದೆ ಇದ್ದಾಗ ಶ್ರೀಮಾನ್ ಸಿದ್ಧವೀರಪ್ಪನವರನ್ನು ಭೇಟಿ ಮಾಡಿದಾಗ, ಅವರೇ ಆ ಕನ್ನಡ ಪತ್ರವನ್ನು ಓದಿದರಲ್ಲ, ಅದನ್ನು ಓದಿದಾಗ ಅವರ ಉದ್ವೇಗವನ್ನು ನೋಡಿ ನನಗೆ ಸ್ವಲ್ಪ ಗಾಬರಿಯಾಯಿತು. ಆಮೇಲೆ, ನೀವು ಯೋಚನೆ ಮಾಡಬೇಡಿ, ನಾವು ಈ ಕೆಲಸವನ್ನು, ಮಾಡುತ್ತೇವೆಂದು ಮಾನ್ಯ ಎಸ್. ಚನ್ನಯ್ಯನವರೂ, ನಾನೂ ಅವರಿಗೆ ಆಶ್ವಾಸನೆ ಕೊಟ್ಟು ಅವರಿಗೆ ವಿಶ್ರಾಂತಿ ತೆಗೆದುಕೊಳ್ಳುವುದಕ್ಕೆ ಹೇಳಿದೆವು. ಅದಕ್ಕೇ ಈ ಚರ್ಚೆಗೆ ನಾವು ಅವಕಾಶ ಮಾಡಿಕೊಂಡದ್ದು. ನಾನು ಹೆಚ್ಚು ಹೇಳಬೇಕಾದ್ದಿಲ್ಲ. ಈವೊತ್ತು ಸಂಸ್ಥೆ ಹೆಸರು ಮತ್ತು ನಿಮ್ಮ ಆಡಳಿತ ತೀರ ಹೊಲಸಾಗಿದೆ. ಅದಕ್ಕಿಂತ ಕಟುವಾದ ಶಬ್ದವನ್ನು ಬಳಸುವುದಕ್ಕೆ ನಾನು ಸಿದ್ಧನಿಲ್ಲ. ಮೇಲಿನಿಂದ ಕೆಳಗಿನವರೆಗೂ ಪಂಚಾಯಿತಿ ಮಟ್ಟದಿಂದ ಸರ್ಕಾರದ ಮಟ್ಟದವರೆಗೂ ಹೊಲಸಾಗಿದೆ. ಶ್ರೀ ವೀರೇಂದ್ರ ಪಾಟೀಲರು ಒಳ್ಳೆಯ ಮಾದರಿಯಲ್ಲಿ ಹೋದ್ದುಂಟು. ಈಗ ಕಾಂಗ್ರೆಸ್ ನವನಾದುದರಿಂದ ಎ. ಐ. ಸಿ. ಸಿ. ಗೆ ಹೋಗಿದ್ದೆ, ಕ್ಯಾಬಿನೆಟ್‌ಗೆ ಹೋಗಿದ್ದೆ ಇತ್ಯಾದಿ ಅವರು ಒಂದು ರೀತಿಯಿಂದ ಕಲ್ಪನೆಯ ರಾಜ್ಯದಲ್ಲಿದ್ದಾರೆ. ಶ್ರೀ ಸಿ. ಸುಬ್ರಹ್ಮಣ್ಯಂ ಅವರು ರಾಜಿನಾಮೆ ಕೊಟ್ಟಿದ್ದಾರಲ್ಲ ಅದರ ವಿಷಯ ಚರ್ಚೆ ಮಾಡಿದರೇ ಎಂದು ಕೇಳಿದರೆ ಅದು ಮನೆವಾರ್ತೆ. ಕಾಂಗ್ರೆಸ್‌ಗೆ ಸಂಬಂಧಪಟ್ಟ ವಿಷಯ, ನಿಮಗೆ ಏಕೆ ಎನ್ನಬಹುದು. ವಿರೋಧ ಪಕ್ಷವನ್ನು ಬಿಟ್ಟು ನಿಮ್ಮ ಪಕ್ಷಕ್ಕೆ ಸೇರುವವರಿಗೆ ಸಂಸ್ಥೆಯ ಹಿತದೃಷ್ಟಿಯಿಂದ ಅನುಕೂಲ ಮಾಡಿಕೊಳ್ಳುತ್ತೇವೆ ಎನ್ನುವಾಗ, ನಿಮ್ಮ ಪಕ್ಷದಿಂದ ವಿರೋಧ ಪಕ್ಷಕ್ಕೆ ಹೋಗುವವರನ್ನು ತಡೆಗಟ್ಟಲು ಮಾತ್ರ ಒಂದು ನಿರ್ಬಂಧವಿರಬೇಕು ಎಂದರೆ ಎಷ್ಟರಮಟ್ಟಿಗೆ ಸರಿಹೋಗುತ್ತದೆ? ನಿಮ್ಮ ಪಕ್ಷಕ್ಕೆ ಶ್ರೀ ಜಿ ಬಸವಣ್ಣಪ್ಪನವರು ಬಂದರು, ಅದು ಪ್ರಜಾಪ್ರಭುತ್ವವೋ! ಕಾಂಗ್ರೆಸ್ ಅಧಿಕೃತ ಅಭ್ಯರ್ಥಿಯನ್ನು ಸೋಲಿಸಿ ಬಂದವ ಐದು ವರ್ಷವಾದರೂ ಅವ ವಿರೋಧ ಪಕ್ಷದಲ್ಲಿ ಇದ್ದು ಕೆಲಸ ಮಾಡಬೇಕು ಎನ್ನುವ ಸಾಮಾನ್ಯ ನಿಯಮ ಕೂಡ ಈ ಪ್ರಜಾಪ್ರಭುತ್ವದಲ್ಲಿ ಇಲ್ಲದೆ ಇದ್ದರೆ ವೋಟು ಏಕೆ ಕೇಳಬೇಕು, ಮೈ ಏಕೆ ನೋಯಿಸಿಕೊಳ್ಳಬೇಕು, ಕೈಕಾಲು ಏಕೆ ಹಿಡಿಯಬೇಕು, ಜನತೆಗೆ ಏಕೆ ಆಶ್ವಾಸನೆಯನ್ನು ಕೊಡಬೇಕು? ಈ ದೊಡ್ಡ ನಾಟಕವನ್ನು ಏಕೆ ನಡೆಸಬೇಕು? ಸಿದ್ಧವೀರಪ್ಪನವರು ಹೇಳಿದರು, ಹಾಗಾದರೆ ನಾವು ಕಾನೂನನ್ನು ಕೈಗೆ ತೆಗೆದುಕೊಳ್ಳೋಣವೇ ಎಂದು. ಇದನ್ನು ಸ್ಪಷ್ಟವಾಗಿ ಹೇಳಿಬಿಡಿ. ಕ್ರಿಮಿನಲ್ ಪ್ರೊಸೀಜರ್ ಕೋಡಿನಲ್ಲಿ ರಕ್ಷಣೆ ದೃಷ್ಟಿಯಿಂದ ಯಾರು ಯಾರಿಗೆ ಬೇಕಾದರೂ ಗುಂಡು ಹಾರಿಸಬಹುದು ಎಂದಿದೆ. ಇದನ್ನು ಡಿಕ್ಲೇರ್ ಮಾಡಿಬಿಡಿ, ನಮ್ಮ ಪಾಡಿಗೆ ನಾವು ಎಲ್ಲಿ ಬೇಕಾದರೂ ಇರುತ್ತೇವೆ; ಈ ಸಭೆ ಬೇಡ, ಇವೆಲ್ಲಾ ನೋಡುವವರಿಗೂ ಚೆನ್ನಾಗಿರುವುದಿಲ್ಲ,

(ಶ್ರೀ ಎಸ್. ಗೋಪಾಲಗೌಡ)

ಕೇಳುವವರಿಗೂ ಚೆನ್ನಾಗಿರುವುದಿಲ್ಲ. ಸಾಲದ್ದಕ್ಕೆ ಪ್ರಚಾರ ಬೇರೆ ಆಗುತ್ತದೆ. ಈ ನೋವನ್ನು ಸಭೆಯು ಮುಂದೆ ತೋಡಿಕೊಳ್ಳಬೇಕೆಂಬ ದೃಷ್ಟಿಯಿಂದಲೇ ಈ ಚರ್ಚೆ ತಂದಿರುವುದು. ಇದರಿಂದ ಕಿರೀಟ ಬರುವುದಿಲ್ಲ, ಅಥವ ಹೋಗುವುದಿಲ್ಲ. ಇದು ತಿರುಗುಬಾಣವಾಗುತ್ತದೆ, ನೆನಪಿಡಿ. ಇಂದು ಬಿಡುತ್ತಿರುವುದು ಸರ್ಪಾಸ್ತ್ರ. ಅದು ವಿರೋಧಿ ಪಕ್ಷದ ಬತ್ತಳಿಕೆಗೆ ಸೇರಿಕೊಂಡು ಮತ್ತೆ ಅದು ನಿಮಗೇ ಕೆಡಕುಮಾಡುತ್ತದೆ. ಆದುದರಿಂದ ಖಂಡಿತ ಇದಕ್ಕೆ ಎಡೆ ಕೊಡ ಬಾರದು. ಗ್ರಾಮಪಂಚಾಯಿತಿಯಿಂದ ಹಿಡಿದು ಸರಕಾರದವರೆಗೆ, ಚೀಫ್ ಸೆಕ್ರೆಟರಿ ಗಳವರೆಗೆ ಅಧಿಕಾರಿಗಳನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ, ಎಲ್ಲರನ್ನೂ ದುರುಪ ಯೋಗ ಪಡಿಸಿಕೊಳ್ಳುವುದು ನಿಮ್ಮ ಅನುಕೂಲಕ್ಕೆ ಎಂದು ಜನ ಬಹಳವಾಗಿ ಹೇಳುತ್ತಾರೆ. ಇಲ್ಲಿಂದ ಎಲ್ಲ ಕಡೆಗೂ ಹೊಸ ಆರ್ಡರನ್ನು ಹೊರಡಿಸುವುದಾದರೆ ಮುನಿಸಿಪಾಲಿಟಿ ಏಕೆ? ಚುನಾವಣೆ ಏಕೆ? ನೋಟಿಫಿಕೇಷನ್ ಏಕೆ? ಡಂಗುರ ಹೊಡೆದು ಈ ರೀತಿ ಮಾಡಿದರೆ ಸಾರ್ಥಕವಾಗುವುದಿಲ್ಲ. ಇದರಿಂದ ಇದು ಪ್ರಜಾಪ್ರಭುತ್ವ ಎನಿಸಿಕೊಳ್ಳುವುದಿಲ್ಲ, ಯಾರಿಗೂ ಇದರಿಂದ ಮಾನ ಮರ್ಯಾದೆ ಬರುವುದಿಲ್ಲ. ಈ ದಿವಸ ದೇಶದ ಪರಿಸ್ಥಿತಿಯನ್ನು ನೋಡಿದರೆ ಎದೆ ಒಡೆದುಹೋಗುತ್ತದೆ. ಹೇಳುವುದು ಮಾತ್ರ ರಾಷ್ಟ್ರೀಯ ಐಕ್ಯತೆ ಮುಖ್ಯವಾದುದು ಎಂದು. ಆದಕ್ಕೆ ಸರಿಯಾದ ಹೆಜ್ಜೆ ಯನ್ನಿಡದೆ ತಪ್ಪು ಹೆಜ್ಜೆ ಇಟ್ಟು ಸುಮ್ಮನೆ ಬಾಯಲ್ಲಿ ಹೇಳುವುದಾದರೆ ಪ್ರಯೋಜನವೇನು? ಪುಣ್ಯ ಮಾಡದೆ ಪುಣ್ಯದ ಫಲಕ್ಕೆ ಆಸೆ ಪಡುವುದು, ನಿರೀಕ್ಷೆ ಮಾಡುವುದು ತಪ್ಪು. ನಿಮ್ಮ ಆಡಳಿತ ರೀತಿ ನೀತಿಯೆಲ್ಲಾ ಇದೇ ರೀತಿ ಇದೆ. ದೇಶಕ್ಕೆ ಬೆಂಕಿ ಹಚ್ಚಿ ಬಾಯಲ್ಲಿ ಮಾತ್ರ ಏನೋ ಮಾಡುತ್ತಿರು ವುದಾಗಿ ಹೇಳಿಕೊಳ್ಳುತ್ತಿದ್ದಾರೆ. ತಾವು ಮಾಡಿದ್ದೇ ಸರಿ, ಒಳ್ಳೆಯದು ಎಂದು ಆಗ್ರಹಮಾಡು ತ್ತಿದ್ದಾರೆ. ಪರಿಣಾಮ ನೋಡಿಕೊಳ್ಳಬೇಕು. ಹರಿಹರ ಮುನಿಸಿಪಾಲಿಟಿಯ ಉದಾಹರಣೆ ಇದೆ, ಚಿತ್ರದುರ್ಗ ಮುನಿಸಿಪಾಲಿಟಿಯ ಉದಾಹರಣೆ ಇದೆ. ಆಡಳಿತ ಪಕ್ಷ ನಿಮ್ಮದು, ನಿಮ್ಮ ಹಿತದೃಷ್ಟಿ ಯಿಂದ ಆದರೂ ನೀವು ತಿದ್ದಿಕೊಳ್ಳಬೇಕು. ಮಾನ್ಯ ಸಿದ್ದವೀರಪ್ಪನವರು ಸ್ವಲ್ಪ ವಯಸ್ಸಿನಲ್ಲಿ ನನಗಿಂತ ಹಿರಿಯರು ಅವರು ಹೇಳಿದ್ದಾರೆ. ಮುಖ್ಯ ಮಂತ್ರಿಗಳು ಒಳ್ಳೆಯ ಕೆಲಸ ಮಾಡಬಹುದೆಂಬ ನಿರೀಕ್ಷೆ ಅವರ ಹೇಳಿಕೆ ಪ್ರಕಾರ ಇತ್ತು. ಆದರೆ ಅದು ನಿಜವಾಗಿಲ್ಲ. ಹೀಗೆಯೇ ಮುಂದುವರೆದರೆ ಅವರು ಆಡಳಿತದಲ್ಲಿ ಬಹಳ ದಿವಸ ಮುಂದುವರೆಯುವುದಿಲ್ಲ. ನಿಜಲಿಂಗಪ್ಪನವರಿಗೆ ಈಗಾಗಲೆ ಅನುಭವವಾಗಿದೆ, ಕಾಮರಾಜರ ಮಟ್ಟಕ್ಕೆ ಬರುವುದೆಷ್ಟು ಕಷ್ಟ ಎಂಬುದು ಅವರ ಅವರ ಅನುಭವಕ್ಕೆ ಬಂದಿದೆ. ಜನರನ್ನು ಒಪ್ಪಿಸುವುದಕ್ಕೆ ಸಾಧ್ಯವಾಗದಿರಬಹುದು. ಆದರೆ ನಿಮ್ಮ ಆತ್ಮಕ್ಕೆ ತೃಪ್ತಿ ಯಾಗುವಂತೆ ಕೆಲಸಮಾಡಬೇಕು. ಈ ರೀತಿ ಆಡಳಿತ ನಡೆದರೆ ಪ್ರಗತಿಯಾಗಲು ಸಾಧ್ಯವಿಲ್ಲ. ಆತ್ಮವನ್ನು ಮರದಲ್ಲಿ ತೂಗುಹಾಕಿ ಆಡಳಿತ ನಡೆಸಿರುವುದರಿಂದ ಹೀಗಾಗಿದೆ. ರಿಟ್ ಪಿಟಿಷನ್ಸ್ ಎಷ್ಟಿವೆ ಎಂದು ನಾನು ಹೇಳುವುದಕ್ಕೆ ಇಷ್ಟಪಡುವುದಿಲ್ಲ, ಬಹಳ ಇವೆ. ನಿಮ್ಮ ಕೈಯಲ್ಲಿರುವ ಅಲ್ಪ ಕಾಲೀನ ಅಧಿಕಾರವನ್ನು ಕೊನೆಯ ಕಾಲದಲ್ಲಿ ದುರುಪಯೋಗಪಡಿಸಿಕೊಂಡು ದೇಶವನ್ನು ದುರ್ಗತಿಗೆ ಈಡುಮಾಡಿ ನೀವು ದುಸ್ಥಿಗೆ ಇಳಿಯಬಾರದು, ತಿದ್ದಿಕೊಳ್ಳಿ, ತಿದ್ದಿಕೊಳ್ಳಿ, ತಿದ್ದುಕೊಳ್ಳಿ, ಎಂದು ಮೂರು ಸಾರಿ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ವಾಟಾಳ್ ನಾಗರಾಜ್.—ಸ್ವಾಮಿ, ಇವತ್ತಿನ ದಿವಸ ಹರಿಹರದ ಚುನಾವಣೆ ಬಗ್ಗೆ ಅನೇಕರು ಮಾತನಾಡಿದ್ದಾರೆ, ಇಲ್ಲಿ ಪ್ರಜಾಪ್ರಭುತ್ವ ಇದೆಯೇ, ಇಲ್ಲವೇ ಎಂದು ಪ್ರಶ್ನೆ ಮಾಡಿ ದ್ದಾರೆ. ಪ್ರಜಾಪ್ರಭುತ್ವದ ಕೊಲೆಯಾಗುತ್ತಿದೆ; ಬೆಂಗಳೂರು ನಗರದ ನಗರಸಭೆ ಎಷ್ಟೋ ಚೆನ್ನಾಗಿ ನಡೆಯುತ್ತಿತ್ತು. ತ್ಯಾಗಮಾಡಿ ಜನರ ಸೇವೆ ಮಾಡುತ್ತಿದ್ದಾಗ ಅಲ್ಲಿ ವಿರೋಧ ಪಕ್ಷದವರಿ ದ್ದಾರೆ ಎಂದು ಅವರ ಮೇಲೆ ಗೂಬೆ ಕೂಡಿಸಿ ನಗರದ 17 ಲಕ್ಷ ಜನರ ಪ್ರತಿನಿಧಿಗಳು ಇರುವ ಸಂಸ್ಥೆಯನ್ನು ಸರಕಾರ ಮುಟ್ಟುಗೋಲು ಹಾಕಿದೆ. ಇದೇ ರೀತಿಯಲ್ಲಿ ಸರಕಾರದವರು ಅನೇಕ ಅನ್ಯಾಯಗಳನ್ನು ಮಾಡುತ್ತಿದ್ದಾರೆ. ಪ್ರಜಾಪ್ರಭುತ್ವ ಉಳಿದು ಬೆಳೆಯಬೇಕು ಎಂದು ಬಾಯಲ್ಲಿ ಮಾತ್ರ ಹೇಳುತ್ತಿದ್ದಾರೆ. ಆದರೆ ಇದಕ್ಕೆ ವಿರೋಧವಾಗಿ ನಡೆದಿರುವುದಕ್ಕೆ ಉದಾಹರಣೆಗಳಿವೆ. ಚಿತ್ರದುರ್ಗ ನಗರಸಭೆಯಲ್ಲಿ ನಿಮ್ಮವರೇ ಅಧ್ಯಕ್ಷರಾಗಿದ್ದಾಗ ಆಡಳಿತ ಸರಿಯಾಗಿಲ್ಲವೆಂದು ಟೀಕಿಸಿ ದಾಗ 6 ತಿಂಗಳ ಕಾಲ ಚುನಾವಣೆ ಮಾಡುವುದಿಲ್ಲವೆಂದು ಹೇಳಿದರು. ಇದು ಮೊಗಲ್ ದರ್ಬಾ ರಾಗಿದೆ. ನಿಜಲಿಂಗಪ್ಪನವರು ಹೇಳಿದಂತೆ ನಡೆಯುತ್ತಿದ್ದಾರೆ. ಆ ಜಿಲ್ಲೆಯಲ್ಲಿ ನಿಜಲಿಂಗಪ್ಪನವರಿಗೂ ಮತ್ತು ಸಿದ್ದವೀರಪ್ಪನವರಿಗೂ ಜಗಳವಿದೆ, ಇವರ ರಾಜಕೀಯದಿಂದ ಪ್ರಜಾಪ್ರಭುತ್ವದ ಕೊಲೆ ಯಾಗಿದೆ. ಇಂದು ಹರಿಹರದಲ್ಲಿ ಚುನಾವಣೆಯಲ್ಲಿ ಗೆದ್ದು ಬಂದಿರುವವರು ಯಾರು? ಬಹುಮತ ದಿಂದ ಆರಿಸಿ ಬಂದವರಿಗೆ ಅಧಿಕಾರ ಕೊಡಬೇಕೆಂಬುದು ಪ್ರಜಾಪ್ರಭುತ್ವದ ತತ್ವವಾಗಿರುವಾಗ

ಅದರಂತೆ ಏಕೆ ಮಾಡಲಿಲ್ಲ? ಒಂದು ವೇಳೆ ಯಾರಾದರೂ ಕರ್ತವ್ಯ ಲೋಪ ಮಾಡಿದರೆ ಏನು ಬೇಕಾದರೂ ಮಾಡಬಹುದು. ಸರಕಾರಕ್ಕೆ ಒಳ್ಳೆಯ ಬುದ್ಧಿಯಿರಬೇಕು.

ಇವತ್ತಿನ ದಿವಸ ತಮ್ಮ ಕಡೆಯಲ್ಲಿ ಅನೇಕರು ಆಯ್ಕೆಯಾಗುವುದಿಲ್ಲ ಎಂಬ ಉದ್ದೇಶದಿಂದ ಯಾವುದಾದರೂ ರೀತಿಯಲ್ಲಿ ಮುಂದೂಡಬೇಕೆಂಬ ದೃಷ್ಟಿಯಿಂದ ಒಂದೇ ರಾತ್ರಿ, ಒಂದೇ ಹಗಲಿನಲ್ಲಿ ಒಂದು ಆಜ್ಞೆಯನ್ನು ಹೊರಡಿಸಿ ಚುನಾವಣೆಯನ್ನು ಮುಂದೂಡುತ್ತಾ ಇದ್ದೀರಿ. ಮೈಸೂರಿನಲ್ಲಿ ಚುನಾವಣೆ ನಡೆಯಿತು. ಅಲ್ಲಿ ವಿರೋಧ ಪಕ್ಷದವರು ಪ್ರಚಂಡವಾಗಿ ಗೆದ್ದರು. ಅವರನ್ನು ಸೋಲಿಸಬೇಕೆಂದು ಶ್ರೀಮಾನ್ ಪುಟ್ಟಸ್ವಾಮಿಯವರು ಮನೆ ಮನೆಗೆ, ಹೋಗಲು ಗಲ್ಲಿ ಗಲ್ಲಿಯಲ್ಲಿ, ರಸ್ತೆ ರಸ್ತೆಗಳಲ್ಲಿ ಕಾರನ್ನು ಉಪಯೋಗಿಸಿ ಪ್ರಚಾರ ಮಾಡಿದರು. ಆದರೂ ಅಲ್ಲಿ ತಮ್ಮ ಪ್ರಭಾವ ಏನೂ ನಡೆಯಲಿಲ್ಲ.

ಶ್ರೀ ಕೆ. ಪುಟ್ಟಸ್ವಾಮಿ.—ಯಾವ ಸಂದರ್ಭದಲ್ಲಿ ಯಾವುದೇ ವಿಷಯ ಬೇಕಾದರೂ ಮಾತನಾಡಬಹುದೇ ಸ್ವಾಮಿ ?

ಉತ್ತರ ಕೊಡುವುದಕ್ಕೆ ನಾನು ಸಿದ್ಧವಾಗಿದ್ದೇನೆ. ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕು, ರಾಜಕೀಯದಲ್ಲಿ ನಮಗೂ ಸಾಕಷ್ಟು ಅನುಭವ ಇದೆ. ಯಾವ ಸಂದರ್ಭದಲ್ಲಿ ಯಾವ ವಾಹನ ಉಪಯೋಗಿಸಬೇಕು,, ಚುನಾವಣೆ ಬಂದಾಗ ಯಾವ ರೀತಿ ನಡೆದುಕೊಳ್ಳಬೇಕೆಂಬುದನ್ನು ಶ್ರೀ ವಾಟಾಳ್ ನಾಗರಾಜ್‌ರವರಿಂದ ಕಲಿತುಕೊಳ್ಳಬೇಕಾದ ದುಸ್ಥಿತಿಯಲ್ಲಿ ನಾವು ಇಲ್ಲ.

ಶ್ರೀ ವಾಟಾಳ್ ನಾಗರಾಜ್.—ನಾನು ಅವರ ಕಾರನ್ನು ನೋಡಿದ್ದೇನೆ. ಮೈಸೂರಿನ ಒಂದು ಮೊಹಲ್ಲಾದಲ್ಲೇ ಅವರ ಕಾರು ನಿಂತಿದ್ದುದನ್ನು ನಾನು ಕಣ್ಣಾರೆ ಕಂಡಿದ್ದೇನೆ, ಬೆಳಿಗ್ಗೆ ಮತ್ತು ಸಂಜೆ ನಡೆದ ಸಭೆಗಳಲ್ಲಿ ಪುಟ್ಟಸ್ವಾಮಿಯವರ ನೀತಿಯನ್ನು ಕೇಳಿದ್ದೇನೆ, ಪ್ರಜಾಪ್ರಭುತ್ವದ ಪದ್ಧತಿಯನ್ನೇ ಕೊಲೆ ಮಾಡಿದ್ದಾರೆ. ಬೆಂಗಳೂರು ನಗರ ಕಾರ್ಪೊರೇಷನ್ ಚುನಾವಣೆ ನಡೆದರೂ ಸಹ ಅದನ್ನು ರದ್ದುಪಡಿಸಿದರು.

Sri K. PUTTASWAMY.—If discussion is permitted on this matter I am prepared to reply. Does it mean that anything can be discussed on any occasion ?

ಶ್ರೀ ವಾಟಾಳ್ ನಾಗರಾಜ್.—ಹರಿಹರ ಮುನಿಸಿಪಾಲಿಟಿ ಹೇಗೆ ಇದೆ, ಬೆಂಗಳೂರು ಕಾರ್ಪೊರೇಷನ್‌ನ ಪರಿಸ್ಥಿತಿ ಹೇಗಿದೆ, ಮೈಸೂರಿನ ಪರಿಸ್ಥಿತಿ ಹೇಗೆ ಇತ್ತು ಎಂಬುದನ್ನು ಹೇಳುತ್ತಾ ಇದ್ದೆ.

ಶ್ರೀ ಕೆ. ಪುಟ್ಟಸ್ವಾಮಿ.—ಬೆಂಗಳೂರು ಕಾರ್ಪೊರೇಷನ್ ವಿಷಯ ಹೈಕೋರ್ಟಿಗೆ ಹೋಗಿ ನಾವು ಮಾಡಿದ್ದು ಸರಿ ಅಂತ ಆಗಿದೆ.

ಶ್ರೀ ವಾಟಾಳ್ ನಾಗರಾಜ್.—ಎಲ್ಲೆಲ್ಲಿ ಯಾವ್ಯಾವ ರೀತಿಯಾಗಿದೆ ಎಂಬುದನ್ನು ತಮಗೆ ತಿಳಿಸಬೇಕಾಗಿದೆ.

ಶ್ರೀ ಕೆ. ಪುಟ್ಟಸ್ವಾಮಿ.—ಚರ್ಚೆ ನಡೆಯುವಾಗ ಯಾವುದು ಸಂಬಂಧಪಟ್ಟದ್ದು ಇರುತ್ತದೆಯೋ ಆ ವಿಷಯ ಮಾತನಾಡಬೇಕು ಎಂದರೆ ಸಂಬಂಧಪಟ್ಟ ಮಂತ್ರಿಗಳು ಉತ್ತರ ಕೊಡುವುದಕ್ಕೆ ಸಾಧ್ಯವಾಗುತ್ತದೆ, ಈಗ ಅವರು ಬೆಂಗಳೂರಿನ ವಿಷಯ ಪ್ರಸ್ತಾಪ ಮಾಡಿದರು ಆ ವಿಷಯದಲ್ಲಿ ಸರ್ಕಾರ ಮಾಡಿದ ಆರ್ಡರ್ ಹೈಕೋರ್ಟಿನಲ್ಲಿ ಸರಿ ಅಂತ ಆಗಿದೆ. ಸುಮ್ಮನೆ ಈ ರೀತಿ ಮಾತನಾಡಿದರೆ ಹೇಗೆ? ಅಧ್ಯಕ್ಷರು ಇದಕ್ಕೆಲ್ಲಾ ಅವಕಾಶ ಕೊಟ್ಟರೆ ನಾವು ಉತ್ತರ ಕೊಡುವುದಾದರೂ ಹೇಗೆ ?

ಶ್ರೀ ವಾಟಾಳ್ ನಾಗರಾಜ್.—ಈಗ ಹರಿಹರದ ಚುನಾವಣೆಯ ಬಗ್ಗೆ ಮಾತನಾಡುತ್ತಾ ಇದ್ದೇವೆ. ಇದರಲ್ಲಿ ಎಷ್ಟು ಅನ್ಯಾಯ ನಡೆದಿದೆ ಎಂದರೆ ಅಲ್ಲಿ ನಡೆದಿರುವುದು ಒಂದಲ್ಲ ಹೇಳುವುದಕ್ಕೇ ಅಸಾಧ್ಯ. ಈ ರಾಜ್ಯದಲ್ಲಿ ಪುರಸಭೆಗಳಲ್ಲಿ, ಕಾರ್ಪೊರೇಷನ್‌ಗಳಲ್ಲಿ ಯಾವ ಯಾವ ರೀತಿಯಲ್ಲಿ ಪ್ರವೇಶ ಮಾಡಿದ್ದಾರೆ, ಯಾವ ಯಾವ ರೀತಿಯಲ್ಲಿ ಕಾಲು ಹಾಕಿದ್ದಾರೆ, ಮೋಸ ಮಾಡಿದ್ದಾರೆ, ಯಾವ ರೀತಿ ಪ್ರಜಾಪ್ರಭುತ್ವವನ್ನು ಕೊಲೆ ಮಾಡಿದ್ದಾರೆ ಎಂಬುದನ್ನು ಹೇಳತಕ್ಕದ್ದು ಬೇಕಾದಷ್ಟು ಇದೆ, ಅದನ್ನು ಹೇಳಬೇಕಾಗಿದೆ. ಹರಿಹರ ಪುರಸಭೆಯ ಅಧ್ಯಕ್ಷ ಉಪಾಧ್ಯಕ್ಷ ಚುನಾವಣೆಯಲ್ಲಿ ಅದರ ಹಿಂದೆ ಬಹಳ ರಾಜಕೀಯ ಇದೆ. ಅದನ್ನು ಕೂಡಲೇ ನಡೆಸದೇ ಇದ್ದರೆ ಅದು ಗ್ರಾಮಪಂಚಾಯ್ತಿ ಆದಂತೆ ಆಗುತ್ತದೆ ಎಂದು ಎಚ್ಚರಿಕೆ ಕೊಡುತ್ತಾ ಇದ್ದೇನೆ.

† ಶ್ರೀ ಬಿ. ಎಂ. ಪಾಟೀಲ್ (ನಗರಾಡಳಿತ ಶಾಖೆಯ ರಾಜ್ಯ ಮಂತ್ರಿಗಳು).—ಸನ್‌ಮಾನ್ಯ ಸಭಾಪತಿಗಳೇ, ಇಲ್ಲಿಯವರೆಗೂ ಹಿರಿಯರೂ ಸನ್‌ಮಾನ್ಯ ಸದಸ್ಯರೂ ಆದ ಶ್ರೀಮಾನ್ ಸಿದ್ದವೀರಪ್ಪ ನವರು ಮಾತನಾಡಿದ್ದಾರೆ. ನನ್ನ ಮಿತ್ರರಾದ ದುಗ್ಗಪ್ಪನವರು ಮಾತನಾಡಿದ್ದಾರೆ, ಶ್ರೀಮಾನ್ ಕೆ. ಎಚ್. ಪಾಟೀಲ್‌ರವರು ತಮ್ಮ ಒಂದು ವಾದ ಸಮರ್ಥನೆ ಮಾಡಿದ್ದಾರೆ. ವಾಟಾಳ್ ನಾಗರಾಜ್‌ರವರು ಸಹ ಪ್ರಜಾಸತ್ತೆಯ ಮೇಲೆ ಬಹಳಷ್ಟು ಮಾತಡಿದ್ದಾರೆ. ಸನ್‌ಮಾನ್ಯ ಗೋಪಾಲಗೌಡರೂ ಸಹ ಕೆಲವೊಂದು ಸಲಹೆಗಳನ್ನು ಕೊಟ್ಟಿದ್ದಾರೆ. ಇವೆಲ್ಲನ್ನೂ ನೋಡಿದಾಗ ನನಗೆ ಒಂದು ಭಾವನೆ ಬರುತ್ತಾ ಇದೆ. ಮೊದಲನೆಯದು ಶ್ರೀಮಾನ್ ದುಗ್ಗಪ್ಪನವರು ಮತ್ತು ಸನ್‌ಮಾನ್ಯ ಸಿದ್ದವೀರಪ್ಪನವರು ವಾದ ಮಂಡನೆ ಮಾಡುವಾಗ ಅವರ ವಿಚಾರ ಸರಣಿ ನಡೆದಾಗ ಒಂದುಆಸ್ಥೆಯಿಂದ, ಕುತೂಹಲದಿಂದ ನಾನು ಕೇಳತ್ತಾ ಇದ್ದೆ—ಆಗ ನನಗೆ ಅನಿಸುತ್ತಾ ಇತ್ತು, ಒಂದು ಮಹತ್ತರವಾದ ಅನ್ಯಾಯ ಸರ್ಕಾರ ಹರಿಹರ ನಗರಸಭೆಯ ಅಧ್ಯಕ್ಷರ, ಉಪಾಧ್ಯಕ್ಷರ ಚುನಾವಣೆಯಲ್ಲಿ ಎಸಗಿದೆ ಎಂದು. ಆದರೆ ಅವರೆಲ್ಲರ ವಾದಗಳನ್ನೂ ಕೇಳಿದ ನಂತರ ನನಗೆ ಅನಿಸುತ್ತಾ ಇದೆ ಅವರ ಆ ವಾದ ಮಂಡನೆ ಏನಿತ್ತು, ವಿಚಾರ ಸರಣಿ ಏನು ಇತ್ತು, ಈ ವಿಷಯದಲ್ಲಿ ತೀವ್ರತೆ ಏನು ಇಲ್ಲಿಯವರೆಗೂ ಇತ್ತು, ಮೊದಲನೆಯ ನೋಟಿಫಿಕೇಷನ್ ಅದನಂತರ ಇಲ್ಲಿಯವರೆಗೂ ಏನು ಘಟನೆಗಳು ನಡೆಯುತ್ತಾ ಇದೆ, ಇದೆಲ್ಲವನ್ನೂ ಅವಲೋಕನ ಮಾಡಿದಾಗ ಆ ತೀವ್ರತೆಯನ್ನು ಬಹಳಷ್ಟು ಅವರ ವಾದದಿಂದ ಕಳೆದುಕೊಳ್ಳುತ್ತಾ ಇವೆ ಎಂದು ಸ್ಪಷ್ಟವಾಗಿ ಹೇಳುತ್ತಾ ಇದ್ದೇನೆ. ಏಕೆಂದರೆ ಅವರು ಮೊದಲು ಮಾತನಾಡುವಾಗ ಮೊದಲನೆ ನೋಟಿಫಿಕೇಷನ್ 26-12-1968 ರಂದು ಆಯಿತು, ಆಮೇಲೆ 30ರಂದು ಸರ್ಕಾರ ಹರಿಹರ ನಗರಸಭೆಯ ಅಧಿಕಾರವನ್ನು ಬೆಳೆಸಿತು ಎಂದು ಹೇಳಿ ನಂತರ 26ರಂದು ಹಳೇ ಕೌನ್ಸಿಲ್ ಹೋಗಿ ಹೊಸ ಕೌನ್ಸಿಲ್ ಅಸ್ತಿತ್ವಕ್ಕೆ ಬಂದಿತ್ತು ಎಂದು ಹೇಳಿದರು. ಮುನಿಸಿಪಲ್ ಆಕ್ಟ್ ನೋಡಿದಾಗ, ಅದರಲ್ಲಿ ಏನಿದೆ ಎಂದರೆ ಒಂದು ಕೌನ್ಸಿಲ್ ಅವಧಿಯನ್ನು ನಿರ್ದಿಷ್ಟ ಅವಧಿಯವರೆಗೆ ವಿಸ್ತರಿಸುವಾಗ ಚುನಾವಣೆ ನಡೆದರೂ ಸಹ ಹೊಸ ಕೌನ್ಸಿಲ್ ಯಾವಾಗಬರುತ್ತದೆ ಎಂದರೆ 'ಯಾವುದು ಕೊನೆಯವರೆಗೆ ಇವರುತ್ತದೋ ಅದು 'ವಿಚ್ ಎವರ್ ಈಸ್ ಲ್ಯಾಟರ್'' ಎಂದು ಇದೆ. ನೋಟಿಫಿಕೇಷನ್ ಎಂದು ಆಗುತ್ತದೆ ಅಂದಿನ ಅಥವಾ ಬೆಳೆಸಿದ ಅಧಿಕಾರ ಅವಧಿಯ ಕೊನೆ ದಿನ ಎಲ್ಲಿಯವರೆಗೆ ಇರುತ್ತದೆ ಅದರಲ್ಲಿ ಯಾವುದು ಲ್ಯಾಟರ್ ಎಂದರೆ ಒಂದನೇ ಜನವರಿವರೆಗೂ ಅಧಿಕಾರ ಮೊದಲು ವಿಸ್ತರಿಸಿತ್ತು. ಇದೇ 26 ರಂದು ಹೊಸ ಕೌನ್ಸಿಲ್ ಅಸ್ತಿತ್ವದಲ್ಲಿ ಬಂದಿಲ್ಲ ಎಂಬುದು ತೋರಿಸಿ ಕೊಡುತ್ತಾ ಇದೆ. ಆಮೇಲೆ ಒಂದನೇ ತಾರೀಖಿನ ಒಳಗೆ ಚುನಾವಣೆ ನಡೆದದ್ದು ನಿಜ. ಆದರೆ ಚುನಾವಣೆ ನಡೆದ ನಂತರ ಅಧ್ಯಕ್ಷ, ಉಪಾಧ್ಯಕ್ಷರ ಚುನಾವಣೆ ನಡೆಯಬೇಕಾದಾಗ ನಾವು ಮೈಸೂರು ಮುನಿಸಿಪಲ್ ಆಕ್ಟ್ ಕೆಳಗೆ ಕೆಲವು ನಿಯಮಗಳನ್ನು ಮಾಡಿದ್ದೇವೆ. ಆ ನಿಯಮಗಳಂತೆ ನಡೆಯಬೇಕಾದರೆ ಕೆಲವು ಅವಧಿ ಸುಮಾರು 15 ದಿವಸವಾದರೂ ಬೇಕೆ ಬೇಕು. ಅದಕ್ಕೇ ಆ ಕೌನ್ಸಿಲ್‌ನ್ನು, ಅದರ ಅಧಿಕಾರ ಅವಧಿ ಯನ್ನು ವಿಸ್ತರಿಸಬೇಕೆನ್ನುವ ಸಲಹೆ ಬಂದಾಗ ಅಧ್ಯಕ್ಷರ ಚುನಾವಣೆ ನಡೆಯಬೇಕಾದರೆ ಸುಮಾರು ಎಷ್ಟು ವೇಳೆಬೇಕು ಎನ್ನುವುದನ್ನು ಅಲ್ಲಿಯ ಅಧಿಕಾರಿಗಳ ಒಂದು ಸಲಹೆ ಮೇರೆಗೆ ಸರ್ಕಾರ ಫೆಬ್ರುವರಿ ಕೊನೆಯವರೆಗೂ ಅದರ ಅಧಿಕಾರ ವಿಸ್ತರಣೆ ಮಾಡಿತು. ಅನಂತರ ಮಾನ್ಯ ಸಿದ್ದವೀರಪ್ಪ ನವರಿಗೆ ಅಲ್ಲಿ ಏನು ನಡೆಯಿತು ಎಂಬುದು ಚೆನ್ನಾಗಿ ಗೊತ್ತಿದೆ. ಅವರೂ ನಾವೂ ಅದನ್ನು ಚೆನ್ನಾಗಿ ಚರ್ಚಿಸಿದ ಮೇಲೆ ಒಂದು ಅಭಿಪ್ರಾಯ ಏನು ಬಂತು ಎಂದರೆ—ಪ್ರೆಸಿಡೆಂಟರು ಮತ್ತು ವೈಸ್ ಪ್ರೆಸಿಡೆಂಟರ ಚುನಾವಣೆ ಮಾಡಬೇಕಾದರೆ ಇಷ್ಟೊಂದು ವೇಳೆ ಅನಗತ್ಯ, ಇಷ್ಟೊಂದು ವೇಳೆ ಕೊಟ್ಟದು ಸೂಕ್ತವಲ್ಲ ಎಂದು ಮಾನ್ಯ ಸದಸ್ಯರು ಒಂದು ಅಭಿಪ್ರಾಯ ವ್ಯಕ್ತಪಡಿಸಿದರು. ಅದನ್ನು ಯೋಗ್ಯವಾಗಿ ಪರಿಶೀಲಿಸಿ, ವಿಚಾರ ಮಾಡಿ, ಸರ್ಕಾರ ಅದು ನಿಜ, ಇಷ್ಟೊಂದು ವೇಳೆ ಅಧ್ಯಕ್ಷರ, ಉಪಾಧ್ಯಕ್ಷರ ಚುನಾವಣೆ ನಡೆಯಲಿಕ್ಕೆ ಕೊಟ್ಟದ್ದು ಸರಿಯಲ್ಲ ಎಂದು ಹೇಳಿ ಫೆಬ್ರುವರಿ ಕೊನೆವರಗೂ ಏನು ವಿಸ್ತರಣೆ ಮಾಡಿತ್ತೊ ಅದನ್ನು ಮೊಟಕುಗೊಳಿಸಿ ಅವರ ಅಭಿಪ್ರಾಯದ ಮೇಲೆಗೆ 15ನೇ ಜನವರಿಗೆ ತರಲಾಯಿತು ಎಂದು ಹೇಳಬಯಸುತ್ತಾ ಇದ್ದೇನೆ. ಆ ಮೇಲೆ 15 ರ ನಂತರ ಏನೊಂದು ಘಟನೆ ಆಯಿತು ಎಂದರೆ ಮೊದಲು ಚುನಾವಣೆ ನೋಟಿ ಸನ್ನು ಕೊಟ್ಟ ಆ ಅಧಿಕಾರಿ ಮತ್ತೆ ಹೊಸದಾಗಿ ಚುನಾವಣೆ ನೋಟೀಸನ್ನು ಕೊಟ್ಟು ಆ ಮೊದಲು ನೋಟೀಸನ್ನು ಕೊಟ್ಟಿದ್ದ ಚುನಾವಣೆಯ ಅವಧಿಯನ್ನು ಮೊಟಕು ಮಾಡಿ ಫೆಬ್ರುವರಿಯಲ್ಲಿ ಚುನಾವಣೆ ನಡೆಯಬೇಕೆಂದು ಏನು ಒಂದು ನೋಟೀಸನ್ನು ಕೊಟ್ಟ ಅದು ಸೂಕ್ತವಲ್ಲ, ಅದು ನ್ಯಾಯ ಬಾಹಿರವಾದದ್ದು, ಕಾನೂನು ಬಾಹಿರವಾದದ್ದು ಎಂದು ಹೇಳಿ ಕೆಲವರು ಹೈಕೋರ್ಟಿಗೆ ಹೋದರು ಮಾನ್ಯ ದುಗ್ಗಪ್ಪನವರಿಗೆ ಈ ವಿಚಾರಗಳೆಲ್ಲಾ ಗೊತ್ತಿಲ್ಲ. ಆದರೆ ಅವರು ತಮ್ಮ ಅಭಿಪ್ರಾಯವೇನು ಎಂಬುದನ್ನು ನನಗೂ ಹೇಳಿದ್ದಾರೆ. ಆದರೆ ಆಗ ಆ ಹೈಕೋರ್ಟಿಗೆ ಹೋದವರು ತರತಕ್ಕ ತೀರ್ಮಾನವೇ ಆಖೈರು ತೀರ್ಮಾನವಾಗಿತ್ತು. ಆದರೆ ಅದಕ್ಕೂ ಮೊದಲೇ ಆ ಚುನಾವಣೆಗಳನ್ನು ಜನವರಿ

15ಕ್ಕೆ ನಡೆಯುವಂತೆ ನಿಗದಿ ಮಾಡಿದ್ದರು. ಅದಕ್ಕೆ ಜನವರಿ 16ರಲ್ಲಿ ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಹೈಕೋರ್ಟಿನಿಂದ ಸ್ಟೇ ಬರುವ ಮುನ್ನ ತಹಶೀಲ್ದಾರರು ಆರೀತಿ ಕ್ಯಾಲೆಂಡರ್ ಆಫ್ ಇವೆಂಟ್ಸನ್ನು ಬದಲಾವಣೆ ಮಾಡುವುದಕ್ಕೆ ಅವರಿಗೆ ನ್ಯಾಯವಾಗಿ ಅಧಿಕಾರವಿತ್ತೇ ಎಂಬ ಪ್ರಶ್ನೆ ಆಗ ಬಂತು. ಆದರೆ ರಿಟರ್ನಿಂಗ್ ಆಫೀಸರಿಗೆ ತಹಶೀಲ್ದಾರನಿಂದ ಒಂದು ಆದೇಶ ಬಂದಿದ್ದಾಗ್ಯೂ ಆತ ಆ ಆದೇಶದಿಂದರೇ ನಡೆಯಲೇಬೇಕು ಎಂಬ ಬಲವಂತವೇನೂ ಇಲ್ಲ. ಕಾರಣ ಆ ರಿಟರ್ನಿಂಗ್ ಆಫೀಸರನು ತಹಶೀಲ್ದಾರನಿಗೆ ಅಧೀನನಲ್ಲ. ಇಷ್ಟೆಲ್ಲಾ ಆದ ಮೇಲೆ ಆ ತಹಶೀಲ್ದಾರರು ತಾರೀಕು 15 ರಂದು ಒಂದು ಕ್ಯಾಲೆಂಡರ್ ಆಫ್ ಇವೆಂಟ್ಸನ್ನು ಹೊರಡಿಸಿ ಅದರಂತೆ ಚುನಾವಣಾ ತಾರೀಖನ್ನು ಫಿಕ್ಸ್ ಮಾಡಿದರು. ಅದರ ಪ್ರಕಾರ ಚುನಾವಣೆಗಳು ಮಾರ್ಚಿ 5ಕ್ಕೆ ನಡೆಯಬೇಕಾಗಿತ್ತು. ಆದರೆ ಅದೇ ತಿಂಗಳು 3ಕ್ಕೆ ಹೈಕೋರ್ಟಿನವರು ಒಂದು ಸ್ಟೇ ಕೊಟ್ಟರು.

7-30 P.M.

ಶ್ರೀ ಎಚ್. ಸಿದ್ದವೀರಪ್ಪ.—ತಾವು ದಯವಿಟ್ಟು ಆ ಸ್ಟೇ ಆರ್ಡರಿನಲ್ಲಿರತಕ್ಕ ಪ್ರೀ-ಅಂಬಲನ್ನು ಓದಿ. ತಮಗೆಲ್ಲಾ ಗೊತ್ತಾಗುತ್ತದೆ. ತಾರೀಕು 15 ಅನ್ನುವುದು ನಿಮ್ಮ ಡೇಟು ಅದು. ಅಲ್ಲಿ ಇರತಕ್ಕದು ತಾ. 29-1-69 ರಲ್ಲಿ ತಾ. 5-2-1969ಕ್ಕೇ ಒಂದು ಸ್ಟೇ ಕೊಡಬೇಕೆಂದು ಕೇಳಿದ್ದಾರೆ....

ಶ್ರೀ ಬಿ. ಎಂ. ಪಾಟೀಲ್.—ಅನಂತರ ಒಬ್ಬ ಮಾನ್ಯ ಸದಸ್ಯರು ಒಂದು ಮನವಿ ಅರ್ಜಿಯನ್ನು ಸಲ್ಲಿಸಿದರು. ಕ್ಯಾಲೆಂಡರ್ ಆಫ್ ಇವೆಂಟ್ಸ್ ಪ್ರಕಾರ ಚುನಾವಣೆಗಳನ್ನು ನಡೆಸಬೇಕಾಗಿದ್ದರೆ, ಅದು ಕ್ರಮಬದ್ಧವಲ್ಲ, ಅದು ನಮ್ಮ ಖಾಯಿದೇ ಪ್ರಕಾರ ಕೂಡ ಸರಿಯಾದ್ದಲ್ಲ. ನಮ್ಮ ಮುನಿಸಿಪಲ್ ಆಕ್ಟಿನ ಸೆಕ್ಷನ್ 3(2) ಪ್ರಕಾರ ಆ ಹೊಸ ಆ ಕೌನ್ಸಿಲ್ ಇನ್ನೂ ಅಸ್ತಿತ್ವದಲ್ಲಿ ಬಂದಿಲ್ಲ. ಅದು ಅಸ್ತಿತ್ವಕ್ಕೆ ಬಂದ ನಂತರ ಚುನಾವಣಾ ಅಧಿಕಾರಿ ಆ ಕ್ಯಾಲೆಂಡರ್ ಆಫ್ ಇವೆಂಟ್ಸನ್ನು ಹಾಕಬಹುದು. ಅಂದಾಗ ಆ ಹೊಸ ಕೌನ್ಸಿಲ್ ತಾ. 15 ಕ್ಕೆ ಅಸ್ತಿತ್ವದಲ್ಲಿ ಬಂದಿತ್ತೇ ಅನ್ನುವ ಪ್ರಶ್ನೆ ಮತ್ತೆ ಉದ್ಭವ ಆಯಿತು.

ಶ್ರೀ ಎಚ್. ಸಿದ್ದವೀರಪ್ಪ.—ತಾವು ತಾ. 26ನೇ ಡಿಸೆಂಬರ್ ಮತ್ತು ಒಂದನೇ ಜನವರಿ ಕಾಗದಗಳನ್ನು ನೋಡಿದ್ದೀರಾ?

ಶ್ರೀ ಬಿ. ಎಂ. ಪಾಟೀಲ್.—ಆಗ ತಾವೂ ನಾನೂ ಇಬ್ಬರೂ ಸೇರಿ ಒಂದು ತೀರ್ಮಾನಕ್ಕೆ ಬಂದೆವು. ಆ ದಿವಸವೇ ನಾವು ಹಾಗೆ 15ಕ್ಕೆ ಚುನಾವಣೆಗಳನ್ನು ಫಿಕ್ಸ್ ಮಾಡಿದ್ದು ಸರಿಯಲ್ಲ ಎಂಬ ತೀರ್ಮಾನಕ್ಕೆ ಬಂದಿದ್ದೆವು. ಕಾರಣ ಆಗಿನ್ನೂ ಆ ಹೊಸ ಕೌನ್ಸಿಲ್ ಅಸ್ತಿತ್ವದಲ್ಲಿ ಬಂದಿರಲಿಲ್ಲ. ಹಾಗೂ ಅದನ್ನು ನಾವು ಆಗ ಪರಿಶೀಲನೆ ಕೂಡ ಮಾಡಿರಲಿಲ್ಲ. ಅಂದಾಗ ಆಗಿನ್ನೂ ಹಳೆಯ ಕೌನ್ಸಿಲ್ಲೇ ಕಾರ್ಯಾಚರಣೆ ನಡೆಸುತ್ತಿತ್ತು ಎಂದಾಯಿತು. ಅಷ್ಟರಲ್ಲಿ ಅಂದರೆ ತಾ. 16 ಕ್ಕೆ ಹೈಕೋರ್ಟು ಒಂದು ಸ್ಟೇ ಆರ್ಡರನ್ನು ಕೊಟ್ಟಿತು. ಆದರೆ ಹಾಗೆ ಹೈಕೋರ್ಟಿನವರು ಸ್ಟೇ ಕೊಟ್ಟಾಗ ಆಫೀಸಿನಲ್ಲಿ ಇನ್ನೂ ಹಳೆಯ ಕೌನ್ಸಿಲ್ಲೇ ಕೆಲಸ ಮಾಡುತ್ತಿತ್ತು ಎಂದು ಅರ್ಥವಾಗುತ್ತದೆ.

ಶ್ರೀ ಕೆ. ಎಚ್. ಪಾಟೀಲ್.—ಸ್ಟೇ ಬರುವುದಕ್ಕೆ ಮೊದಲೇ 2ನೇ ತಾರೀಖೇ ತಾವೇಕೆ ಆ ಚುನಾವಣೆಗಳನ್ನು ಮುಗಿಸಲಿಲ್ಲಾ!

ಶ್ರೀ ಬಿ. ಎಂ. ಪಾಟೀಲ್.—ಹಾಗೆ ಆ ಚುನಾವಣೆಗಳನ್ನು 2ನೇ ತಾರೀಖಿಗೆ ಫಿಕ್ಸ್ ಮಾಡಿರಲಿಲ್ಲ. ಆಗ ಚುನಾವಣೆಗಳನ್ನು ತಾ. 5-3-1969 ಕ್ಕೆ ನಡೆಸುವಂತೆ ನಿಗದಿ ಮಾಡಲಾಗಿತ್ತು. ಆದರೆ ಹೊಸ ಕೌನ್ಸಿಲ್ 15 ರವರೆಗೂ ಅಸ್ತಿತ್ವದಲ್ಲಿ ಬಂದಿರಲಿಲ್ಲ. ಹೊಸ ಕೌನ್ಸಿಲ್ ಅಸ್ತಿತ್ವಕ್ಕೆ ಬಂದ ಮೇಲೆ ಚುನಾವಣಾಧಿಕಾರಿ ಕ್ಯಾಲೆಂಡರ್ ಆಫ್ ಇವೆಂಟ್ಸನ್ನು ಹಾಕಬೇಕೆಂದಿದೆ. ಒಮ್ಮೆ ಚುನಾವಣಾಧಿಕಾರಿ ಚುನಾವಣೆಯ ಕಾರ್ಯಕ್ರಮದ ಪಟ್ಟಿಯನ್ನು ಸಿದ್ಧಗೊಳಿಸಿದ ಮೇಲೆ ಅವನು ಅದನ್ನು ಹಿಂದಕ್ಕೆ ತೆಗೆದುಕೊಳ್ಳುವಂತಿಲ್ಲ. ಆತನಿಗೆ ಆ ಅಧಿಕಾರವಿಲ್ಲ. ಆ ವಿಚಾರದಲ್ಲಿ ಹೈಕೋರ್ಟಿನವರು ಒಂದು ತೀರ್ಪನ್ನು ಕೊಟ್ಟಿದ್ದಾರೆ. 1968ರಲ್ಲಿ ಹಾವೇರಿಯ ಒಂದು ಕೇಸಿನಲ್ಲಿ ಒಂದು ತೀರ್ಪಾಗಿದೆ. ಈ ವಿಚಾರವನ್ನು ಆ ಚುನಾವಣಾಧಿಕಾರಿಯು ಗಮನಕ್ಕೆ ತಂದಾಗ ನಮ್ಮ ಮುನಿಸಿಪಾಲಿಟಿಯ ಆಕ್ಟ್ ಮತ್ತು ರೂಲ್ಸ್‌ಗಳ ಪ್ರಕಾರ ನಮ್ಮ ಹಿಂದಿನ ಚುನಾವಣಾ ಪಟ್ಟಿಯು ನ್ಯಾಯ ಬಾಹಿರವಾದ್ದು, ಅಕ್ರಮವಾದ್ದು ಅಂತ ಸ್ಪಷ್ಟವಾಗಿ ತಿಳಿಸಿ ಹೊಸ ಕೌನ್ಸಿಲ್ ಅಸ್ತಿತ್ವಕ್ಕೆ ಬಂದ ನಂತರ ಚುನಾವಣೆಗೆ ಕ್ಯಾಲೆಂಡರ್ ಆಫ್ ಇವೆಂಟ್ಸನ್ನು ಹಾಕಬೇಕೆಂದು ಹೈಕೋರ್ಟಿನಲ್ಲಿ ಇದು ತೀರ್ಮಾನವಾಗಿದೆ. ಈ ರೀತಿ 5ನೇ ಮಾರ್ಚನಂದು ಚುನಾವಣೆ ಮಾಡದೆ ಜನವರಿಯಲ್ಲಿ ಚುನಾವಣೆ ಮಾಡಿದ್ದರೆ ನಿಯಮ ಬಾಹಿರವಾಗುವುದರಿಂದ ಎಲೆಕ್ಷನ್ ರದ್ದಾಗುತ್ತಿತ್ತು ಎಂದು ಅಲ್ಲಿ ಸಂಬಂಧಪಟ್ಟ

(ಶ್ರೀ ಬಿ. ಎಂ. ಪಾಟೀಲ್)

ಚುನಾವಣೆಯ ಅಧಿಕಾರಿ ಒಂದು ಅಭಿಪ್ರಾಯಕ್ಕೆ ಬಂದಕೂಡಲೇ ಈಗ ಚುನಾವಣೆಯನ್ನು ಅಲ್ಲ ಮಾಡಬೇಕೆಂಬ ಅಭಿಪ್ರಾಯ ಇಟ್ಟುಕೊಂಡರು. ಪ್ರಜಾಸತ್ತೆಯಲ್ಲಿ ಪರಪಕ್ಷದ ಅಭಿಪ್ರಾಯವೇನಿದೆ ಅದನ್ನು ನಾವು ಬಹಳ ತೂಕ ಮಾಡಿ ಅದಕ್ಕೆ ಮನ್ನಣೆ ಕೊಡುತ್ತಿದ್ದೇವೆ. ಪ್ರಜಾಸತ್ತೆಯಲ್ಲಿ ಅಲ್ಪ ಮತ ಪಕ್ಷದವರು ಯಾವಾಗಲೂ ಬಹುಮತ ಪಕ್ಷದವರ ಅಭಿಪ್ರಾಯವನ್ನು ಸತತವಾಗಿ ಒಪ್ಪಿಕೊಳ್ಳ ಬೇಕು ವಿರೋಧಪಕ್ಷದ ಮಾನ್ಯ ಸದಸ್ಯರು ಒಂದು ಅಭಿಪ್ರಾಯ ಕೊಡುವಾಗ, ಅದನ್ನು ಆಡಳಿತದಲ್ಲಿ ನಿರ್ವಹಣೆ ಮಾಡಬೇಕಾದರೆ ಕೇವಲ ಸರ್ಕಾರದ ಪಕ್ಷದವರಿಗೆ ಎಷ್ಟು ಜವಾಬ್ದಾರಿ ಇದೆಯೋ ಅಷ್ಟೇ ಜವಾಬ್ದಾರಿಯು ವಿರೋಧಪಕ್ಷದವರಿಗೂ ಇದೆಯೆಂದು ತಿಳಿದುಕೊಳ್ಳಬೇಕು. ಅವರೂ ಸಹ ಆಡಳಿತ ದಲ್ಲಿ ಅಷ್ಟೇ ಜವಾಬ್ದಾರಿಯನ್ನು ಇಟ್ಟುಕೊಂಡಿದ್ದರೆ ನಮಗೆ ಹೆಚ್ಚು ಆಡಳಿತದ ಬಗ್ಗೆ ಸಹಕಾರ ವಾಗುತ್ತದೆಂದು ನಾನು ಭಾವಿಸಿದ್ದೇನೆ. 5-3-69ರಲ್ಲಿ ಚುನಾವಣೆ ನಡೆಯುವುದರಿಂದ ಮತ್ತಷ್ಟು ಕಾಂಪ್ಲಿಕೇಷನ್ಸ್ ಆಗುತ್ತದೆಯೆಂಬ ಕಾರಣದಿಂದ, ಈ ಚುನಾವಣೆಯನ್ನು ನಡೆಸಬಾರದೆಂಬ ದುರುದ್ದೇಶ ಮತ್ತು ಯಾವುದೋ ಶಕ್ತಿಯ ಒಂದು ಹಿನ್ನೆಲೆಯಲ್ಲಿ ಈ ಕಾರ್ಯ ಮಾಡುತ್ತಿದ್ದಾರೆಂದು ಮಾನ್ಯ ಸದಸ್ಯರು ಒಂದು ಆಪಾದನೆ ಮಾಡಿದರು. ಸನ್ಮಾನ್ಯ ಶ್ರೀ ಸಿದ್ಧವೀರಪ್ಪನವರಿಗೆ ಹೇಳಬಯಸುತ್ತೇನೆ. ಮೊದಲಿನಿಂದಲೂ ಸಹ ಏನಾದರೂ ಮಾಡಿ ಈಗ ಇರುವವರ ಈ ಅಧಿಕಾರ ಅವಧಿಯನ್ನು ಬೆಳಸಿ ಫೆಬ್ರುವರಿವರೆಗೆ ಒಯ್ಯಬೇಕು, ಎಂದು ಇದ್ದಿದ್ದರೆ, ನೋಟಿಫಿಕೇಷನ್ ಬದಲು ಮಾಡಿ ಜನವರಿ 15 ಎಂದು ಮಾಡುತ್ತಿರಲಿಲ್ಲ.

ಶ್ರೀ ಎಚ್. ಸಿದ್ಧವೀರಪ್ಪ.—ಅದು ನಿಮ್ಮ ಸ್ವತಃ ಬುದ್ಧಿ ಮಾತು.

ಶ್ರೀ ಬಿ. ಎಂ. ಪಾಟೀಲ್.—ಇದರಲ್ಲಿ ಯಾವುದೂ ದುರುದ್ದೇಶದ ಹಿನ್ನೆಲೆ ಇರಲಿಲ್ಲವೆಂದು ಹೇಳುತ್ತೇನೆ. ಅಲ್ಲಿನ ತಹಸೀಲ್ದಾರರಿಗೆ ಯಾರೇ ಆಗಲೀ, ಹೀಗೆಯೇ ಮಾಡಬೇಕು, ಈ ಚುನಾವಣೆ ರದ್ದುಪಡಿಸಬೇಕು ಎಂಬುದಾಗಿ ಇಲ್ಲಿಂದ ಯಾರೇ ಸಂಪರ್ಕ ಮಾಡಿಕೊಂಡು ಯಾವ ಒಂದು ಆದೇಶ ವನ್ನೂ ಕೊಟ್ಟಿಲ್ಲವೆಂದು ನಾನು ಸನ್ಮಾನ್ಯ ಸದಸ್ಯರಿಗೆ ಹೇಳುತ್ತೇನೆ.

ಶ್ರೀ ಎಸ್. ಶಿವಪ್ಪ.—ಪ್ರಮಾಣ ಪೂರ್ವಕವಾಗಿ ಹೇಳುತ್ತೀರಾ !

ಶ್ರೀ ಬಿ. ಎಂ. ಪಾಟೀಲ್.—ಮನಃ ಸಾಕ್ಷಿಯಾಗಿ ಹೇಳುತ್ತೇನೆ, ಆ ರೀತಿ ಆದೇಶ ಸರ್ಕಾರ ದಿಂದ ಏನೂ ಹೋಗಿಲ್ಲ.

ಶ್ರೀ ಎಸ್. ಶಿವಪ್ಪ.—ತಮ್ಮಿಂದ ಆದೇಶ ಹೋಗದೆ ಇರಬಹುದು. ಆದರೆ ಸರ್ಕಾರದಿಂದ ಹೋಗಿದ್ದರೆ !

ಶ್ರೀ ಬಿ. ಎಂ. ಪಾಟೀಲ್.—ಅಲ್ಲಿ ಯಾರೋ ಅವರಿಗೆ ಆ ರೀತಿ ಒಂದು ಸಲಹೆ ಇತ್ತಿದ್ದಾರೆಂದು ಕೆಲವು ಮಾನ್ಯ ಸದಸ್ಯರು ಅಭಿಪ್ರಾಯ ಇಟ್ಟುಕೊಂಡಿರಬಹುದು. ಆದರೆ ಅದರ ಹಿನ್ನಲೆ ಏನಿದೆಯೋ ಗೊತ್ತಿಲ್ಲ. ಅದು ಸತ್ಯಕ್ಕೆ ದೂರವಾದ ಮಾತು ಎಂಬುದಾಗಿ ನನಗನ್ನಿಸುತ್ತದೆ.

ಶ್ರೀ ಕೆ. ಎಚ್. ಪಾಟೀಲ್.—ರಿಟರ್ನಿಂಗ್ ಆಫೀಸರ್ ಕ್ಯಾನ್ಸಲ್ ಮಾಡುವಾಗ ಒಂದುವೇಳೆ ಅಲ್ಲ ಲೀಗಲ್ ಒಪೀನಿಯನ್ನಿಗಾಗಿ ಯಾರೂ ಅಲ್ಲಿ ಇಲ್ಲದಿದ್ದರೆ ಆಗ ಲೀಗಲ್ ಇಲಾಖೆಗೆ ಬರೆದು ಒಂದು ಅಭಿಪ್ರಾಯವನ್ನು ತರಿಸಿಕೊಂಡಿದ್ದಾರೆಯೇ !

ಶ್ರೀ ಬಿ. ಎಂ. ಪಾಟೀಲ್ —5ನೇ ತಾರೀಖು ಚುನಾವಣೆ ಇತ್ತು. 4ನೇ ತಾರೀಖು ಒಬ್ಬ ಸದಸ್ಯರು ಆಕ್ಷೇಪಣೆ ತಂದರೆ ಲಾ ಡಿಪಾರ್ಟ್‌ಮೆಂಟಿಗೆ ಬರೆದು ಕಳುಹಿಸುವುದಕ್ಕೆ ಎಲ್ಲಿ ಸಾಧ್ಯ ! ಮಾನ್ಯ ಶ್ರೀ ಕೆ. ಎಚ್. ಪಾಟೀಲ್ ಅವರ ಕೂಡ ಚರ್ಚೆ ಮಾಡುವುದಕ್ಕೆ ಬದ್ಧನಿದ್ದೇನೆ. ಅವರು ನನಗೆ ಇದು ತಪ್ಪು ಎಂದು ಮನವರಿಕೆ ಮಾಡಿಕೊಟ್ಟರೆ ನಾನು ಒಪ್ಪಿಕೊಳ್ಳುವುದಕ್ಕೆ ತಯಾರಿದ್ದೇನೆ. ಪ್ರಜಾ ಸತ್ತೆ ಬೆಳೆಯಬೇಕಾದರೆ ಯಾವಾಗಲೂ ಪರಸ್ಪರ ಚರ್ಚೆ ಇರಬೇಕು. ಭಿನ್ನಾಭಿಪ್ರಾಯ ಇರ ಬಹುದು. ಆದರೆ ಅಭಿಪ್ರಾಯ ವ್ಯಕ್ತ ಆಗಬೇಕು. ಅದನ್ನು ಅವರು ಮನವರಿಕೆ ಮಾಡಿಕೊಡಬೇಕು. ಇವತ್ತು ಆದಷ್ಟು ಜಾಗ್ರತೆ ಚುನಾವಣೆ ಮಾಡುತ್ತೇವೆ. 6ನೇ ತಾರೀಖಿನ ದಿವಸ ಚುನಾವಣೆಯ ಅಧಿಕಾರಿ ಮತ್ತೊಂದು ಕಾರ್ಯಕ್ರಮ ಪಟ್ಟಿಯನ್ನು ತಯಾರು ಮಾಡಿ, ಅದನ್ನು ಈಗಾಗಲೇ ನೋಟಿಫೈ ಮಾಡಿದ್ದಾರೆ. ಪ್ರೆಸಿಡೆಂಟ್ ಮತ್ತು ವೈಸ್‌ಪ್ರೆಸಿಡೆಂಟ್ ಚುನಾವಣೆಯ ತಾರೀಖನ್ನೂ ಸಹ ನಿಗದಿಮಾಡಿದ್ದಾರೆ. ಚುನಾವಣೆಯ ತಾರೀಖನ್ನೂ ಸಹ ಕೊಡುವುದಕ್ಕೆ ಸಿದ್ಧನಾಗಿದ್ದೇನೆ. ಅದರ ಪ್ರಕಾರ ಡೇಟ್ ಆಫ್ ಫೈಲಿಂಗ — 14-3-1969, ಡೇಟ್ ಆಫ್ ಸ್ಕ್ರೂಟಿನಿ—17-3-1969, ಡೇಟ್ ಆಫ್ ವಿತ್‌ಡ್ರಾಯಲ್ — 25-3-1969, ಡೇಟ್ ಆಫ್ ಎಲೆಕ್ಷನ್ — 26-3-1969 — ಈ

ರೀತಿಯಾಗಿ ಚುನಾವಣೆಯ ಕಾರ್ಯಕ್ರಮ ಪಟ್ಟಿಯನ್ನು ಸಂಬಂಧಪಟ್ಟ ಅಧಿಕಾರಿಗಳು ಮಾಡಿದ್ದಾರೆ. ಅವರು ಅದನ್ನು ಮಾಡಿರುವುದರಿಂದ ಚುನಾವಣೆಯ ಪಟ್ಟಿ ಏನಿದೆ ಅದನ್ನು ತಡಮಾಡಬೇಕಾಗಿತ್ತು ಎನ್ನುವ ದುರುದ್ದೇಶ ಇರಲಿಲ್ಲ ಎಂಬುದು ಗೊತ್ತಾಗುತ್ತದೆ.

ಶ್ರೀ ಎಚ್. ಸಿದ್ದವೀರಪ್ಪ.—ಇದು 4ನೇ ವೇಳಾಪಟ್ಟಿ. ಇದು ಯಾವಾಗ ಮುಕ್ತಾಯವಾಗುತ್ತದೆಂಬುದು ದೇವರೇ ಬಲ್ಲ.

ಶ್ರೀ ಬಿ. ಎಂ. ಪಾಟೀಲ್.—ಚುನಾವಣೆಯ ಕಾರ್ಯಕ್ರಮವನ್ನು 6ನೇ ತಾರೀಖಿನಂದು ನಿಗದಿ ಮಾಡಿದ್ದಾರೆ. ಇದರಲ್ಲಿ ಯಾವ ಒಂದು ದುರುದ್ದೇಶವೂ ಇಲ್ಲ. ಬೇರೆಯವರಿಗೂ ಇರಲಿಲ್ಲ, ಅಧಿಕಾರಿಗಳಿಗೂ ಇರಲಿಲ್ಲವೆಂಬುದು ಸ್ಪಷ್ಟಪಡಿಸುತ್ತದೆ.

ಶ್ರೀ ಜಿ. ದುಗ್ಗಪ್ಪ.—ಚುನಾವಣೆ ನಡೆದಾಗ್ಗೆ ಹೇಳಿ.

ಶ್ರೀ ಬಿ. ಎಂ. ಪಾಟೀಲ್.—ಹೈಕೋರ್ಟಿನಲ್ಲಿ ಸ್ಟೇ ಆಗಿದ್ದುದೇ ಕಾರಣ. ಈಗಿನ ಮುನಿಸಿಪಲ್ ಆಕ್ಟ್‌ನಲ್ಲಿ ಇರುವ ಕೆಲವು ಕ್ಲಾಜಸ್‌ನ್ನು ಸ್ಪಷ್ಟವಾಗಿ ಈ ಸಭೆಯ ಮುಂದೆ ಇಟ್ಟಿದ್ದೇನೆ. ಅದರ ಹಿನ್ನಲೆಯನ್ನು ಅವಲೋಕನ ಮಾಡಿದ್ದೇನೆ. ಇದರ ಬಗ್ಗೆ ಮಾನ್ಯ ಸದಸ್ಯರು ಅನೇಕ ಸಲಹೆಗಳನ್ನು ಮಾಡಿದ್ದಾರೆ. ಅವರು ರಚನಾತ್ಮಕವಾದ ಮತ್ತು ಕ್ರಿಯಾತ್ಮಕವಾದ ಸಲಹೆಗಳನ್ನು ಮಾಡಿದರೆ ಅದನ್ನು ನಾವು ಒಪ್ಪಿಕೊಳ್ಳಬಹುದು. ವಿರೋಧಪಕ್ಷದವರಿಗೆ ಬಹುಮತವಿದೆಯೆಂದರೆ, ಮಾನ್ಯ ಶ್ರೀ ಗೋಪಾಲಗೌಡರು ಅಧಿಕಾರದಲ್ಲಿ ಬರಬಾರದೆಂಬ ಮನೋಭಾವನೆ ನಮಗೆ ಯಾರಿಗೂ ಇಲ್ಲ. ನಾವೂ ಆ ಕಡೆ ಇರಬೇಕೆಂದು ತತ್ವಕ್ಕೆ ಮನ್ನಣೆ ಕೊಡುವುದನ್ನು ಒಪ್ಪಿಕೊಳ್ಳುತ್ತೇನೆ. ಈ ದೇಶದಲ್ಲಿ ಅವರೂ ನಾವೂ ರಾಜ್ಯದ ಹಿತದೃಷ್ಟಿಯಿಂದ ಮುಂದುವರಿಯಬೇಕೆಂಬ ಭಾವನೆಯ ಒಟ್ಟು ಅಭಿಪ್ರಾಯವನ್ನು ವ್ಯಕ್ತಮಾಡಿದ್ದಾರೆ, ಅದನ್ನು ಒಪ್ಪಿಕೊಳ್ಳುತ್ತೇನೆ. ಆ ರೀತಿ ಮುಂದುವರಿದರೆ ನಮ್ಮ ಪ್ರಜಾಸತ್ತಗೆ ಒಂದು ತಳಪಾಯವಾಗಬಹುದು. ಅದನ್ನು ಎಲ್ಲ ಮಾನ್ಯ ಸದಸ್ಯರೂ ಒಪ್ಪುತ್ತಾರೆಂದು ನಾನು ಭಾವಿಸುತ್ತೇನೆ. ಈ ವಿವರಗಳನ್ನು ಕೊಡುವಾಗ ಮತ್ತು ನಮ್ಮ ರೂಲ್ಸ್ ಪ್ರಕಾರ ನಿಜ ಸ್ಥಿತಿ ಏನಿದೆಯೋ ಅದನ್ನು ಮಾನ್ಯ ಹಿರಿಯ ಸದಸ್ಯರಾದಂಥ ಶ್ರೀ ಸಿದ್ದವೀರಪ್ಪನವರು ಮತ್ತು ಮಾನ್ಯ ಮಿತ್ರರಾದಂಥ ಶ್ರೀ ದುಗ್ಗಪ್ಪನವರು ಮತ್ತು ತಾವೆಲ್ಲರೂ ಒಪ್ಪಿಕೊಳ್ಳುತ್ತಾರೆಂದು ನಾನು ಭಾವಿಸುತ್ತೇನೆ. ಇಲ್ಲಿಯವರೆಗೂ ನಾವು ಭಾವನಾಪರವಶರಾಗಿ, ಮಾತನಾಡದೆ ಸುಮ್ಮನೆ ಕಾಲ ಕಳೆಯದೆ ನಿಜಸ್ಥಿತಿ ಏನಿದೆಯೆಂಬುದನ್ನು ವಿಮರ್ಶೆಮಾಡುವಾಗ ನಮಗೆ ಸ್ಪಷ್ಟ ಅನ್ನಿಸುತ್ತದೆ, ಇದರಲ್ಲಿ ಸರ್ಕಾರ ಯಾವದೊಂದು ದುರುದ್ದೇಶ ಇಟ್ಟುಕೊಂಡು ಒಂದು ಅಭಿಪ್ರಾಯಕ್ಕೆ, ನಿರ್ಣಯಕ್ಕೆ ಬಂದಿಲ್ಲ, ಯಾವ ರೀತಿಯಿಂದಲೂ ಆದೇಶ ನೀಡಲಿಲ್ಲ ಎಂಬದು. ಕಾಯಿದೆ ರೀತಿ ಇದು ಏನೇ ಇರಲಿ, ಇದು ನೈತಿಕವಾಗಿ ಸರಿಯೆಂದು ಒಂದು ಅಭಿಪ್ರಾಯ ಅನ್ನಿಸುತ್ತದೆ. ಇದನ್ನೂ ಸಹ ಕಾರ್ಯರೂಪಕ್ಕೆ ತರುವುದಕ್ಕೆ ನಾನು ಪ್ರಯತ್ನಮಾಡಿದನೆಂದು ಇನ್ನೊಂದು ದಿವಸ ತಾವು ಹೇಳುತ್ತೀರಿ. ಇಷ್ಟೆಲ್ಲಾ ಹೇಳುವಾಗ ಸರ್ಕಾರ ಯಾವದೊಂದು ದುರುದ್ದೇಶ ಇಟ್ಟುಕೊಂಡಿಲ್ಲ. ಕಾಯಿದೆ ಪ್ರಕಾರ ಹೈಕೋರ್ಟ್ ಡಿಸಿಷನ್ ಏನಿದೆಯೋ ಅದು ಪ್ರಾಮುಖ್ಯವಾದುದು. ಇಷ್ಟೆಲ್ಲಾ ಹೇಳಿದರೂ, ಸರ್ಕಾರ ಇನ್ನೂ ಅನ್ಯಾಯಮಾಡಿದೆ, ನಮಗೆ ನ್ಯಾಯ ದೊರಕಿಸಿ ಕೊಡಬೇಕು ಎನ್ನುವ ಅಭಿಪ್ರಾಯ ಸನ್ಮಾನ್ಯ ಸದಸ್ಯರಿಗೆ ಇದ್ದರೆ, ಅಂತಹವರು ಇನ್ನು ನ್ಯಾಯಾಲಯಗಳಲ್ಲಿಯೇ ನ್ಯಾಯ ಪಡೆಯಬಹುದು. ಅನೇಕ ರಿಟ್ ಪಿಟಿಶನುಗಳು ಪೆಂಡಿಂಗ್ ಇವೆ. ಆದ್ದರಿಂದ ಇಲ್ಲಿಯವರೆಗೆ ಏನು ಉತ್ತರ ಒದಗಿಸಿದ್ದೇನೆ, ಅದನ್ನೆಲ್ಲಾ ಮಾನ್ಯ ಸದಸ್ಯರು ಒಪ್ಪಿಕೊಂಡು, ಅವರು ಕೂಡ ನನ್ನ ಅಭಿಪ್ರಾಯಕ್ಕೆ ಬರುತ್ತಾರೆ, ಎಂದು ತಿಳಿದುಕೊಂಡಿದ್ದೇನೆ. ಮತ್ತು ಸರ್ಕಾರ ನ್ಯಾಯ ಪರಿಪಾಲನೆಯಲ್ಲಿ ನಿಯಮ ಅನುಸರಿಸುವಲ್ಲಿ ಒಂದು ಆಳತೆ ಇರಬೇಕು ಎಂದು ಹೇಳಬೇಕಾಗಿದೆ. ಇದರಿಂದ ಸರ್ಕಾರ ನ್ಯಾಯವಾದ ನಿರ್ಧಾರಕ್ಕೆ ಬಂದಿದೆ. ಮಾನ್ಯ ಸದಸ್ಯರು ಇದನ್ನು ಒಪ್ಪಿಕೊಳ್ಳುತ್ತಾರೆಂದು ನಾನು ಭಾವಿಸುತ್ತೇನೆ.

ಶ್ರೀ ಕೆ. ಎಚ್. ರಂಗನಾಥ (ಮೂಡಿಗೆರೆ).—ಈಗ ಮಂತ್ರಿಯವರು ಹೇಳುವಾಗ ಒಂದು ಸ್ಪಷ್ಟವಾದ ಅಭಿಪ್ರಾಯವನ್ನು ಹೇಳಲಿಲ್ಲ. 10ನೇ ತಾರೀಕು ಡಿಸೆಂಬರ್ 68ಕ್ಕೆ ಹರಿಹರ ಮುನ್ಸಿಪಲ್ ಎಲೆಕ್ಷನ್ ಆಗಿದೆ. 26ನೇ ಡಿಸೆಂಬರ್ ಯಾರ್‍ಯಾರು ಇಲೆಕ್ಟ್ ಆಗಿದ್ದಾರೆಂದು ಗಜೆಟ್ ನೋಟಿಫಿಕೇಶನ್ ಆಗಿದೆ. ಅಂದ ಮೇಲೆ 31-12-1968ರಿಂದ ಹರಿಹರ ಮುನಿಸಿಪಾಲಿಟಿ ಟರ್ಮ್ ಮುಗಿಯಿತು. ಆ ದಿವಸ 28-2-1969ರ ಇದನ್ನು ಮುಂದುವರಿಸುವುದಕ್ಕೆ ಏನು ಕಾರಣವಿತ್ತು? ಇಲ್ಲಿ ಏನು ಹೇಳಿದೆ ? Did not the Government know that the elections were completed in respect of Harihar Municipal Council on 10th December 1968 ? Did not the Government know that there was a Notification dated 26th

(ಶ್ರೀ ಕೆ. ಎಚ್. ರಂಗನಾಥ್)

December 1968 notifying the names of the elected members? Was not this information in the hands of the Government? It is here the supposed mistake has been committed. ನೋಟಿಫಿಕೇಶನ್ನಿನಲ್ಲಿ ಹೇಳಬಹುದಿತ್ತು. ಮಂತ್ರಿಗಳು ಹೇಳುವಾಗ ಎಲ್ಲಾ ವಿಚಾರ ಇಡಬೇಕು. 31-12-1968ರಂದು ಏನು ನೋಟಿಫಿಕೇಶನ್ ಮಾಡಿದ್ದಾರೆ, ಆಗ ಮುನಿಸಿಪಲ್ ಕೌನ್ಸಿಲ್ ಇಲೆಕ್ಷನ್ ಆಗಿದೆಯೋ ಇಲ್ಲವೇ? ಅದರ ಟರ್ಮ್ 28-2-1969ರ ವರೆಗೆ ಮುಂದುವರಿಸಿದ್ದು ಏಕೆ? ಇದರಿಂದ ರಿಟ್ ಪಿಟಿಶನ್ ಹಾಕುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ಈ ತಪ್ಪನ್ನು ಮಾಡಿದಂತಹ ಸೆಕ್ರೆಟರಿಯವರ ಮೇಲೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ? This is a serious omission on the part of the officers who have advised Government—issuing the Notification on 31st December 1968 extending the term of the old Municipal Council, Harihar, up to 28-2-1969. You have to punish those officers; even if it is the Secretary to Government, you have to punish him, because he was aware of the Notification of 26th December 1968 notifying the names of the successful candidates. ಇವನ್ನು ಈ ಸಭೆಗೆ ಹೇಳಬೇಕು.

You should assure this House that prompt action would be taken against those responsible for the Gazette Notification of 31st December 1968 extending the period of Harihar Municipal Council up to 28th February 1969. That is the most important thing. ತಮಗೆ ಎಷ್ಟು ಕಳಕಳಿ ಇದೆಯೋ ಅಷ್ಟು ಕಳಕಳಿ ನಮಗೂ ಇದೆ ಎಂದು ಹೇಳಿದ್ದೀರಿ. ಹಾಗೆ ಇರುವುದಾದರೆ, ಯಾವ ಆಫೀಸರ್ ಆ ರೀತಿ ಅಡ್ವೈಸ್ ಮಾಡಿದರು, ಯಾರು 31-12-1968ರ ನೋಟಿಫಿಕೇಶನ್ ಇಶ್ಯೂ ಮಾಡಿದರು, ಅವರಿಗೆ ಶಿಕ್ಷೆ ಮಾಡಬೇಕೆಂದು ನಾನು ಮಂತ್ರಿಯವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಎಂ. ಪಾಟೀಲ್.—ಈಗಾಗಲೇ ನಾನು ಸಾಕಷ್ಟು ಉತ್ತರ ಹೇಳಿದ್ದೇನೆ. ಹೊಸ ಕೌನ್ಸಿಲ್ ಒಂದರಿಂದ ಅಸ್ತಿತ್ವದಲ್ಲಿ ಬರಬೇಕಾಗಿತ್ತು. ಬಂದ ನಂತರ ಅಧ್ಯಕ್ಷರ, ಉಪಾಧ್ಯಕ್ಷರ ಚುನಾವಣೆಯಾಗಬೇಕಾದರೆ ಎಷ್ಟೋ ವೇಳೆ ಬೇಕಾಗುತ್ತದೆ. ಅದನ್ನು ಕಾನೂನಿನ ರೀತಿಯಲ್ಲಿ ಮಾಡಬೇಕಾಗುತ್ತದೆ.

Sri K. PUTTASWAMY.—Sir, it was very clear that the newly elected Municipal Council should have come into existence from 1st January 1969. The Hon. Minister for Municipal Administration was correct when he pointed out that by virtue of the notification publishing the names of elected members on 26th December 1968 the Municipal Council was not constituted. It should come into existence from 1st January 1969. If only the Notification curtailing the period of extension from 28th February 1969 to 15th January 1969 is read, there is an admission on the part of the Governmnet that it was an error; the extension of time was an error. I think, that should satisfy the hon. Members. Though the new Municipal Council had been elected, there was absolutely no justification for extending the life of the old Municipal Council by two months. But, that error crept in. When it was brought to the notice of the Government, Government promptly curtailed the period by $1\frac{1}{2}$ months and reduced it to 15th January 1969. Unfortunately, in any Municipal Council, one or the other Party takes advantage of the Government Order. As has been stated, there have been writ petitions challenging the power of the Government to extend its life by two months when election had already taken place.

There was a writ petition challenging the right of the Government in curtailing the period of 1½ months. Ultimately, the High Court has issued a stay order, staying the operation of the order of curtailment, *i.e.*, the Notification curtailing the extension. What was left open to Government ?

8-00 P.M.

The old Council had to continue and it should be deemed to have been continued up to 28th February 1969 when ultimately the High Court decided it might be otherwise. When the notification curtailing the period of extension was stayed, the other notification issued earlier extending the period by 2 months was automatically revived. My friend Sri B. M. Patil, Minister for Municipal Administration, has appointed out that the calendar of events for the election of President and Vice-President had been issued earlier than 2 th February 1969, *i e.*, earlier than the coming into existance of the new Council according to the notification issued by the Government extending the life of the old Municipal Council by 2 months. Therefore, the duty of the Returning Officer was clear, when was pointed out, that the notification and the calendar of events has been issued earlier than the coming into existence of the New Council. This is all the matter in dispute. Therefore, the Returning Officer was justified in declaring the notification void *abinito* and so a fresh calendar of events was issued. The High Court has revised its order and they found that the rule was clear and that the calendar of events should be issued after the Council came into existance. Therefore there is no *mala fide* intention and what the Returning Officer has done is justified according to rules.

Mr. DEPUTY SPEAKER.—The House stands adjourned to meet tomorrow at 1 P.M.

The House adjourned at Five Minutes past Eight of the Clock to meet again at One of the Clock on Tuesday the 11th March 1969.

WD 12618—GPB—600—1-7-1969